ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಧೀಚಿ, ವ್ಯಾಸ, ಸಾನಂಸ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪರೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಸದ್ಭಕ್ತ ಪೀಠಾರೋಹಣಾನಾವಿರತಕ್ಕೆ ಇವರು ಉಚ್ಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರವ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರವ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ೦—೦—೯

ಶ್ರೀ ರೇಣು ಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಪ್ರತಿಷ್ಠಿಸಿದ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ .. ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಿ ಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದ್ರಂಭಾಪುರೀ ಸಿಂಹಾಸನಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಸಿಂಹಾಸನಾಧೀಶ್ವರ ಮಹಾವಿಭವದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಸಿಂಹಾಸನಾಧೀಶ್ವರರ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೦—೯

ಶ್ರೀ ಜಗದ್ಗುರು ಕೇದಾರ ರಂಭಾಪುರಿ ಧರ್ಮಪೀಠದ ಸುಂದರ ಫೋಟೋ ೦—೦—೯

ಹಿಮವತ್ಕೇದಾರದ ಮುಖ್ಯದ್ವಾರ ಶೈಲಾಭಿಷೇಕ ಶ್ರೀ ಕೇದಾರನಾಥಸ್ವಾಮಿಯ ಮುಂದಿರುವ ಸುಂದರ ಫೋಟೋ ೦—೦—೮

ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಶ್ವಪಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವವಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಸ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯ, ಕಂಡುಹಿಡಿಯಲ್ಪಟ್ಟು, ಸಾವಿರಾರುನಮಂದಿಗಳು ಇವನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವ ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ.—ಪೀನಸ, ಒಂಟಿ ತಲೆನೋವು. ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಸರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತವೆ ಮೂರುಬೆಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇವನ್ನು ಅನೇಕ ಪ್ರಬುಗಳು ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋಗಿಸುತ್ತಾರೆ ನಾವಾ ಸೀಸ ಪ್ರಾಗಸಟ್ಟೆ ಕಳುಹಿಸಲಾದೀತು ಬುದ್ಧಿ ಒಂದಕ್ಕೆ ಕ್ರಯ ರೂ ೦೪-೦. ೩ ಪಿ ೦-೪-೦ ಡಜ ಒಂದಕ್ಕೆ ಕ್ರಯ ರೂ. ೩೮ ೦ ೩ ಪಿ ೪ ಆಣೆ.

ನಿಮ್ಮ ಆಜ್ಞೆಪ್ರಸ್ತಾವನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[೫] ಪೋ. ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾನೂರಳಿ .... ೩ ಆಣೆ

ಗೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ

ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ

ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ

ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ

ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಲಿ (೮ನೆಯ ಆವೃತ್ತಿ) .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .... ೧ ಆಣೆ

ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯರತಕ(೨ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ .... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯತತಕ .... ೨ ಆಣೆ

ವೀರಶೈವಮತನಿರ್ಣಯಮಾಂಸಾ .... ೩ ಆಣೆ

ವೀರಶೈವಾಚಾರವಿಧಿ (೩ ನೆಯ ಆವೃತ್ತಿ) .... .. ೩ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ

ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) .... ೪ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಕ್ಕಸೈಜು) .... ೬ ಆಣೆ

ವೀರಶೈವಪುರೋಹಿತರು .... ೮ ಆಣೆ

ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) .... ೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ೮ ಆಣೆ

Speeches by Pandit Shri Kashinatha Shastri (*English*) 12 As.

ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) .... ೧೨ ಆಣೆ

ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪ್ರಬ) .. ೮ ರೂ

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ

ವೀರಶೈವಸಿದ್ಧಾಂತಸುಧಾಕರ .... ೨ ರೂ

ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .... ೧ ರೂ

ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ

ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ

ರೇಣುಕನಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಆಕೃತಿ ಸುಂದರಮುದ್ರಣ) ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) .... ೧೨ ಆಣೆ

ಶಿಖಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ

ವೀರಶೈವರತ್ನ (ಮರಾಠಿ) .. .. ೧ ರೂ

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ೧ ರೂ

ವೀರಶೈವೇಂದ್ರಶೇಖರ (ಸಂಸ್ಕೃತ) ... .. ೧ ರೂ

ನಂದಿಕೇಶ್ವರಕಾರಿಕಾ (ಸಂಸ್ಕೃತ) .. .. ೨ ಆಣೆ

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) .. .. ೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಮಹಾವಿದ್ವಾನ್ ವೇ|| ಶಿರಸಿ ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಸೀರಾಧಿಪರ್ । ಪಂಚಕ್ಲೇಶವಿನಾಶಕರ್ ಸರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಪಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾನ್ ವೇ॥ ತಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ನೇ ಜೂನ್ ೧೯೩೯ [ಸಂಚಿಕೆ ೬

ವೀರಶೈವಮಹಾತ್ಮರು.

ಶ್ರೀಜಗದ್ಗುರುರೇಣುಕಾದಿಪಂಚಾಚಾರ್ಯರಿಂದ ಯುಗಯುಗಾಂತರಗಳಲ್ಲಿ ಸ್ಥಾಪಿತವಾಗಿರುವ ವೀರಶೈವ ಮತದೊಳಗೆ ಪ್ರಾಚೀನಕಾಲದಲ್ಲಿ ಅನೇಕಜನ ಮಹಾತ್ಮರು ಅವತರಿಸಿ, ಅನೇಕಾನೇಕಾಮ್ಯತಲೀಲೆಗಳನ್ನಾಚರಿಸಿ ಜಗದ್ವಂದ್ಯರಾಗಿ ಹೋಗಿದ್ದಾರೆ. ಆ ಮಹಾತ್ಮರ ಲೀಲೆಗಳೇ ವೀರಶೈವರಿಗೆ ತಿಳಿಯದಾಗಿವೆ. ಈ ವಿಷಯವನ್ನು ಸರ್ವರೂ ತಿಳಿದುಕೊಂಡು ಧನ್ಯರಾಗಲೆಂಬ ಉದ್ದೇಶದಿಂದ **ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು** ಮೇಲ್ಕಂಡ ಗ್ರಂಥವನ್ನು ನೂತನವಾಗಿ ರಚಿಸಿದ್ದಾರೆ. ಈ ಗ್ರಂಥವು ಚಾರಿತ್ರಿಕದೃಷ್ಟಿಯಿಂದ ಬರೆಯಲ್ಪಟ್ಟಿರುವುದರಿಂದ ಇದರ ಮಹತ್ತ್ವವು ವರ್ಣನಾತೀತವಾಗಿದೆ. ಈ ಗ್ರಂಥದಲ್ಲಿ— **ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರ** ಸಂಕ್ಷಿಪ್ತಚರಿತ್ರವು ಬರೆಯಲ್ಪಟ್ಟಿರುವುದಲ್ಲದೆ, **ದೂರ್ವಾಸಮಹರ್ಷಿ, ಸದಾನಂದಶಿವಯೋಗಿ, ಅನಂದಲಿಂಗ ಶಿವಾಚಾರ್ಯ, ಭೂಕುಂದಲಿಂಗಶಿವಾಚಾರ್ಯ, ಶಿವಯೋಗಿಶಿವಾಚಾರ್ಯ, ಬೆದ್ಮನಶಿವಾಚಾರ್ಯ, ಮಲ್ಲಿಕಾರ್ಜುನಶಿವಾಚಾರ್ಯ, ಜಲಾಯುಧ, ಮಂಚನಪಂಡಿತಾರಾಧ್ಯ, ಶ್ರೀಪತಿಪಂಡಿತಾರಾಧ್ಯ, ಉದ್ಭಟಾರಾಧ್ಯ, ಓಹಿಲಾರಾಧ್ಯ, ಕರೆಯಪದ್ಮರಸ, ನಿಜಗುಣಶಿವಯೋಗಿ, ಮಲ್ಲಿಕಾರ್ಜುನಶಿವಯೋಗಿ,** ಇವರೇ ಮೊದಲಾದ ಮಹಾತ್ಮರ ಚರಿತ್ರಗಳು ಬರೆಯಲ್ಪಟ್ಟಿವೆ. ಆದುದರಿಂದ ಗುರುಭಕ್ತಿಶೀಲರಾದ ಸಮಸ್ತ ವೀರಶೈವರೂ ಈ ಗ್ರಂಥವನ್ನು ತರಿಸಿಕೊಂಡು, ಓದಿನೋಡಿ ವೀರಶೈವಮತದ ಪ್ರಾಚೀನವೈಭವವನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ.

ಬೆಲೆ ೮ ಆಣೆ. ವಿ. ಪಿ. ಛಾರ್ಜು ಪ್ರತ್ಯೇಕ.

ವೀರಶೈವರತ್ನ.

ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತನಾಗಿರುವ ಈ ವೇಲ್ಕಂಡ ಗ್ರಂಥವು ಮಹಾರಾಷ್ಟ್ರದೇಶದ ವೀರಶೈವರ ಉಪಾಸ್ಯದೈವ್ಯೋಸ್ಯರ **ಮಹಾರಾಷ್ಟ್ರಭಾಷೆ**ಯಲ್ಲಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥವ ಯೋಗ್ಯತೆಯು ಅಸಾಧಾರಣವಾಗಿರುವದು. ಆದುದರಿಂದಲೇ ಈ ಗ್ರಂಥವು ಸ್ವಲ್ಪದಿವಸಗಳಲ್ಲಿಯೇ ಕನ್ನಡಭಾಷೆಯಲ್ಲಿ ೫ ಸಾರೆ ಮುದ್ರಿಸಲ್ಪಟ್ಟಿರುವದು. ಈ ಗ್ರಂಥದ ಸಮಗ್ರಸ್ವರೂಪವನ್ನು ಮಹಾರಾಷ್ಟ್ರದೇಶದವರಿಗೆ ತಿಳಿಯುವಂತೆ ಮಾಡಬೇಕೆಂದು ಅನೇಕಜನ ಮಹಾರಾಷ್ಟ್ರವೀರಶೈವರು ಪ್ರಾರ್ಥಿಸಿಕೊಂಡಪ್ರಕಾರ, ವಿಶೇಷ ಪ್ರಯತ್ನವನ್ನು ವ್ಯಯಮಾಡಿ ಇದನ್ನು ಈಗ ಮರಾಠಿಭಾಷೆಯಲ್ಲಿ ಬಹುಸುಂದರವಾಗಿ ಮುದ್ರಿಸಿದ್ದಾಗಿದೆ. ಈ ಗ್ರಂಥದಲ್ಲಿ ಅತ್ಯಂತಮಹತ್ತ್ವದ ೩೦ ಫೋಟೋಗಳು ಸೇರಿಸಲ್ಪಟ್ಟಿರುವುವೆ. ಇವುಗಳಲ್ಲಿ ಅನೇಕ ಪ್ರಾಚೀನಶಾಸನಗಳ ಫೋಟೋಗಳವೆ. ಮಹಾರಾಷ್ಟ್ರದೇಶದ ವೀರಶೈವರ ಉದ್ಧಾರಕ್ಕಾಗಿ ಆವಿರ್ಭವಿಸಿರುವ ಈ ಗ್ರಂಥರತ್ನವನ್ನು ಮಹಾರಾಷ್ಟ್ರಭಾಷೆಯನ್ನು ಬಲ್ಲವನೆಲ್ಲರೂ ಅವಶ್ಯವಾಗಿ ತರಿಸಿಕೊಂಡು ಸಂಪೂರ್ಣವಾಗಿ ಓದಿನೋಡಿ ಈ ಗ್ರಂಥದಲ್ಲುಕ್ತವಾಗಿರುವ ಅನೇಕಾನೇಕಮಹತ್ತ್ವವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ.

ಬೆಲೆ ೧ ರೂ. ವಿ.ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್—
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶ್ರೀಜಗದ್ಗುರು ಉಜ್ಜಯಿನೀ ಮಹಾಸಂಸ್ಥಾನದ ಖಾಸಾಸರ್ಕೀಟಿನ ಸಬ್ ಏಜಂಟರ ಆಫೀಸಿನಿಂದ

ಕರ್ನಾಟಕ ಆಂಧ್ರ ಮಹಾರಾಷ್ಟ್ರ ದೇಶಗಳಲ್ಲಿರ ಕಶ್ಯ ಸಮಸ್ತವೀರಶೈವ ಮಹಾಜನಗಳಿಗೆ ಸೂಚಿಸುವ ವಿನಂದರೆ—

ಲಿಂಗೈಕ್ಯರಾದ ಉಜ್ಜಯಿನೀ ಜಗದ್ಗುರು ಖಿದ್ಧ ಲಿಂಗಶಿವಾಚಾರ್ಯ-ಮಹಾಸ್ವಾಮಿಗಳವರ ಗದ್ದುಗೆ ಕಟ್ಟಡದ ವಿಷಯದಲ್ಲಿ ಸರ್ವರಿಗೂ ಫಲವ್ಯಾಪ್ತವಾಗ ಬೇಕೆಂಬ ಉದ್ದೇಶದಿಂದ ಹಾಲಿ ಸಂಸ್ಥಾನ ಅಧಿಪತ್ಯ ವನ್ನು ವಹಿಸಿರುವ ಜಗದ್ಗುರುಗಳು ಪ್ರತಿಯೊಬ್ಬರಿಂದ ರೂ 1-2-0 ಯಂತೆ ಭಕ್ತಿ ಸ್ವೀಕರಿಸಿ ಖಾಸ ಮೊಹರು ಗಳಿಂದ ಯುಕ್ತಗಳಾದ ರಶೀದಿಪುಸ್ತಕಗಳನ್ನು ಪ್ರಚಾರದಲ್ಲಿ ತಂದಿರುತ್ತಾರೆ ಸದರಿ ಪುಸ್ತಕಗಳಲ್ಲಿ ಸ್ವೆಹಸ್ತ ಪರಹಸ್ತಗಳಿಂದ ಪ್ರತಿಗ್ರಾಮದ ಭಕ್ತರು ಹಣ ತುಂಬಿಸಿ ಸಂದಾಯಮಾಡಿ ಗುರುಕೃಪೆಗೆ ಪಾತ್ರರಾಗ ತಕ್ಕದ್ದು. ಬಳ್ಳಾರಿ ತಾಲ್ಲೂಕು ಕುಲೆತಿನಿಗ್ರಾಮದ ನಯನಸ್ವಾಮಿಮಠದ ಪಟ್ಟದ ನಯನಸ್ವಾಮಿಗಳು ಈ ಕಾರ್ಯದಲ್ಲಿ ತುಂಬಾ ಶ್ರದ್ಧೆವಹಿಸಿ ಮುಂದುವರಿದು 112-8-0 ಯನ್ನು ಕೂಡಿಸಿ ಹಿರೇಹಡಗಲಿ ಮುಕ್ತಿಮಿ ನಲ್ಲಿ ಸನ್ನಿಧಿಗೆ ಪಾವತಿಮಾಡಿರುತ್ತಾರೆ ಇದರಂತೆ ಸಕಲ ದೇಶೀಯರು ತಮ್ಮ ತಮ್ಮ ಯೋಗ್ಯತಾನುಸಾರ ಪುಸ್ತಕಗಳನ್ನು ತರಿಸಿಕೊಂಡು ಹಣವನ್ನು ಲೇಖರಿಸಿ ಸಂಸ್ಥಾನಕ್ಕೆ ಕಳುಹಿಸಿ ಗುರುಕೃಪೆಗೆ ಪಾತ್ರರಾಗ ಬೇಕೆಂದು ಕೋರಿದೆ

ಮುಕ್ಕಾಂ—ಹಿರೇಹಡಗಲಿ, ಎಚ್-ಎಂ ಕೊಟ್ರಾರಾಧ್ಯ,
ತಾ॥ 10-6-39 ಸಬ್ ಏಜಂಟ್.

ದೀಕ್ಷಾ ಮತ್ತು ವಿವಾಹಮಹೋತ್ಸವ

ದೇವದುರ್ಗ ತಾ॥ ಅರಿಕೆರೆ ನಾಗೋಲಿಮಠದ ಬಸವ ಯ್ಯನವರು ಇದೇ ಬಹುಧಾನ್ಯ ಸಂ॥ ನೈಶಾಖ ಬ॥ ೧೨ ಗುರುವಾರ ತಮ್ಮ ಮಗನಾದ ಗುರುಲಿಂಗಯ್ಯನನ್ನು ಅಣ್ಣನಾದ ಕರಿಬಸವಯ್ಯನವರಿಗೆ ದತ್ತಪುತ್ರನನ್ನಾಗಿ ಮಾಡಿ, ವಿಧಿವತ್ತಾಗಿ ದೀಕ್ಷೆಯನ್ನು ಪಂಡಿಸಿದರು. ಹಾಗೂ ಅಣ್ಣನಾದ ಬಸವಲಿಂಗಯ್ಯನವರ ಮಗನಾದ ಮುಪ್ಪಿನಯ್ಯ ಉರ್ಫ ಮೃತ್ಯುಂಜಯನ ಲಗ್ನವು ಬ॥ ೧೩ ಶುಕ್ರವಾರ ಉದಯ ಮಿಥುನಲಗ್ನದಲ್ಲಿ ವಿಜೃಂ ಭಣೆಯಿಂದ ನೆರವೇರಿತು ಈ ಸಂತೋಷಕ್ಕಾಗಿ ಪ್ರಭಾಪೋಷಣೆಗಾಗಿ ೧ ರೂ. ಯು ಸಮರ್ಪಿ ಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶ್ರೀ ರೇಣುಕಗೀತೆ ಅರ್ಥಾತ್, ಸಿದ್ಧಾಂತಶಿಖಾಮಣಿ.

ಲೇ॥ಕಾವ್ಯತೀರ್ಥ,ಸಾಹಿತ್ಯ-ವೇದಾಂತಾಚಾರ್ಯ(ರಜತಪದಕಪ್ರಾಪ್ತ)
ಶ್ರೀ ನಾಗೇಶಶಿವಾಚಾರ್ಯರು, ಬ್ಯಹನ್ನಳ ಮುದೇಸೂರು.
ಪ್ರೋ. ರಾಣೇಬೆನ್ನೂರು, ಜಿ. ಧಾರವಾಡ.

(ಲೇಖಾಂಕ ೧೨)

ಭಾಸ್ಕರಾಚಾರ್ಯರು ತಮ್ಮ ಗ್ರಂಥದಲ್ಲಿ ಈ ವಿಷಯವನ್ನು ಸಂಕ್ಷೇಪವಾಗಿ ವಿವರಿಸಿದ್ದಾರೆ. ಇವರು ನಿವೃತ್ತಿಮಾರ್ಗ ಪ್ರಮುಖನ್ನು ಸೂಚಿಸುವಾಗ ಪಾಕ್ಕು, ಅದರಿಂದ ಮನಸ್ಸು ಅದರಿಂದ ಬುದ್ಧಿ, ಅದರಿಂದ ಆತ್ಮಸಾಧನೆಯಿಂದು ಒಂದು ವಿಧಿಯನ್ನು ಹೇಳಿರುವರು. ಇವರ ಅಭಿಪ್ರಾಯದಂತೆ ಪೊಟ್ಟ ಪೊದಲು ಬಾಹ್ಯೇಂದ್ರಿಯವ್ಯಾಪಾರದಿನ್ನು ಮನಸ್ಸಿನಲ್ಲಿ ಸಂಯಮನಗೊಳಿಸಿ ಕೊಳ್ಳಬೇಕಾಗುವುದು. ಇಲ್ಲಿ ಸಂಕಲ್ಪ, ಕಾಮ, ಸೃಷ್ಟಿ ಮೊದಲಾದ ವರ್ತನೆಗಳಿಗೆ ಅಶ್ರಯವಾಗಿರುವುದೇ ಮನಸ್ಸು. ಇಂದ್ರಿಯ ವ್ಯಾಪಾರಗಳು ಸ್ವಾಧೀನವಾದಮೇಲೆ ಎಂದರೆ ಜಾಂಚಿಲ್ಯರಹಿತ ಗಳೆಂದಮೇಲೆ ಮನಸ್ಸನ್ನು ಜ್ಞಾನಾತ್ಮಕವಾದ ಬುದ್ಧಿಯಲ್ಲಿ ನಿಲ್ಲಿಸಿ ೩ ಬುದ್ಧಿ (ಜ್ಞಾನ) ಯನ್ನು ಆತ್ಮಾನುಸಂಧಾನದಲ್ಲಿ ತೊಡಗಿಸ ಬೇಕು. ಈ ವಿಧಾನಿ ಜೀವಾತ್ಮನನ್ನು ಪರಮಾತ್ಮನೊಡನೆ ಸಮರಸಗೊಳಿಸುತ್ತ "ಸ ಏವಾಹಮಸ್ಮಿ" (ಅವನೇ ನಾನಾಗಿರುವೆನು) ಎಂಬಂಬ ಭಾವನೆಯನ್ನು ಬಲಿಸಬೇಕು. ಇದಕ್ಕೇನೇ ಯೋಗ ನಿಂತಲೂ ಉಚಾಸನೆ ಎಂತಲೂ ಅಥವಾ ಆಧ್ಯಾತ್ಮಿಕಸಾಧನೆಯೆಂತ ಲೂ ಕರೆಯಬಹುದು. ಇವುನೇ ಪರಮಪದವನ್ನು ಪೊರಕಿಸುವ ಸಾಧನೆಯು. ಯೋಗಶಾಸ್ತ್ರಾನಾದರೂ ಕೇವಲ ಕರ್ಮವಾದರಿತ ವಾದುವೆಂದು ಹೇಳಲು ಅವಕಾಶವಿಲ್ಲ. ಆ ಶಾಸ್ತ್ರಕರ್ತರು ಯೋಗ (ಜೀವ ಶಿವರ ಏಕೀಕರಣ)ಕ್ಕೆ ಆಷ್ಟಾಂಗಗಳನ್ನು ರಚಿಸಿ ದ್ದಾರೆ. ಈ ಆಷ್ಟಾಂಗಗಳು ಕೂಡ ಜ್ಞಾನಕರ್ಮ ಆಥವಾ ಭೇದಾ ಭೇದ ನಿಷ್ಠೆಗಳಿಗಿರುವವೆಂಬುದು ಪ್ರತ್ಯಕ್ಷವಾಗಿದೆ. ಇವುಗಳಲ್ಲಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರಗಳು ಕರ್ಮಾಂಗಗಳಾಗಿಯೂ, ಧಾರಣ-ಧ್ಯಾನ-ಸಮಾಧಿಗಳು ಜ್ಞಾನಾಂಗ ಗಳಾಗಿಯೂ ಇರುವುದು. ಇವುಗಳಲ್ಲಿ ಪರಮಾತ್ಮಪ್ರಾಪ್ತಿಗಾಗಿ ಚಿತ್ತ ವನ್ನು ಏಕಾಗ್ರಗೊಳಿಸುವುದೇ ಧ್ಯಾನವು. ಧ್ಯಾನ-ಇಂದ್ರಿಯ-ಬುದ್ಧಿ ಮನಸ್ಸುಗಳನ್ನು ಏಕಕಾಲದಲ್ಲಿಯೇ ಸಂಧಾನಗೊಳಿಸುವುದೇ ಧಾರಣವು. ಶ್ರದ್ಧಾಪೂರ್ವಕವಾಗಿ ನಿತ್ಯವಸ್ತುವಿನಲ್ಲಿ ಆನಂದವಿಮಗ್ನವೇ ಸಮಾಧಿಯು. ಈ ವಿಧವಾಗಿಯೇ ಕಾಸ್ಯವೂ ಜ್ಞಾನ ಕರ್ಮಸಮ್ಮಿಶ್ರಯವಾಗಿದೇ ಇರುವುದು.

ಭಾಸ್ಕರರು ಬ್ರಹ್ಮ-ವಿಷ್ಣು-ಮಹೇಶ್ವರರನ್ನು ಪರಮಾತ್ಮರನ್ನಾಗಿ ಯಾಗಲಿ ಆಥವಾ ಆ ಸ್ವರೂಪಗಳನ್ನಾಗಿಯಾಗಲಿ ಒಪ್ಪದೆ ಪರ ಮಾತ್ಮನ ಕೇವಲ ಅವಯವವಿಧಾನರನ್ನಾಗಿ ಹೇಳುವರೆಂದು ಜಯ ತೀರ್ಥರೆಂಬವರು ಗೀತಾಟೀಕೆ (೨—೩೪) ಯಲ್ಲಿ ಬರೆದಿದ್ದಾರೆ. ಹೀಗಿರುವಾಗ ಇವರ ದೃಷ್ಟಿಯಿಂದ ರಾಮಕೃಷ್ಣರು ಪರಮಾತ್ಮ ರೆಂದು ಹೇಳುವುದಂತೂ ಬಹಳ ದೂರವೇ ಉಳಿಯಿತು. ಈ ಭಾಸ್ಕರಾಚಾರ್ಯರು ಹೇಳುವ ಸೃಷ್ಟಿಯ ನಿಯಾಮರವು ಈತೆರನಾಗಿದೆ-ಮೊಟ್ಟ ಮೊದಲು ಅವ್ಯಾಕೃತವಾದ ಅಕಾರವು ಮಾತ್ರವಿರುವುದು. ಸರ್ವಜ್ಞವೂ ಸರ್ವಶಕ್ತಿಸಮನ್ವಿತವೂ ಆದ ಪರಮಾತ್ಮನು ಪ್ರಾಣಿ ಗಳ ಭೋಗಕಾಲವಲ್ಲ ಸಮಾಪಿಸಿಕೊಂಬನೆನಿತು, ಹಿರಣ್ಯ ಗರ್ಭ ನನ್ನು ಸೃಜಿಸುವನು ಆ ಹಿರಣ್ಯಗರ್ಭವು ಅಕಾರಾದಿ ಕ್ರಮದಿಂದ ಬ್ರಾಹ್ಮಂಡವನ್ನೂ ಅನಂತರ ಸ್ಥಾವರವೇ ಕೊನೆಯಾಗಿ ಅಖಿಲ ಜಗತ್ತನ್ನೂ ಸೃಷ್ಟಿಸುವನು. ಈ ಸೃಷ್ಟಿಯು ಪ್ರಾಣಿಪರ್ಯಾಪ ವಿಲಿಕ ಜೀವಪದ ಕರ್ಮಾನುಗುಣವಾಗಿ ಸ್ವಭಾವಿತವಾಗಿಯೇ ಸಾಗುತ್ತಿರುವುದು. ಮೊದಲಿನ ಸೃಷ್ಟಿಗೆ ಆರಂಭಕಾಲದಲ್ಲಿ ಪರ ಬ್ರಹ್ಮದ ಅನಿರ್ದ್ರುಪಿತವಾದ ಚೇವಪ್ರತಿಬಿಂಬವೇ ಹಿರಣ್ಯ ಗರ್ಭ (ಚತುರಾನನ)ನ ಮನಸ್ಸಿನಲ್ಲಿ ಅವಿರ್ಭೂತವಾಗಿರುವುದು. ಸೃಷ್ಟಿಯೊಡನೆಯೇ ವೇದದ ಉತ್ಪತ್ತಿಯೂ ಆಗುವುದು. ಇತರ ಮತಾಚಾರ್ಯರ ಅಭಿಪ್ರಾಯವು ಈ ವೇದೋತ್ಪತ್ತಿಯ ವಿಷಯದಲ್ಲಿ ಭಿನ್ನ ಭಿನ್ನವಾಗಿರುವುದಾದರೂ ಸೃಷ್ಟಿಯ ಆರಂಭದಲ್ಲಿ ವೇದವು ಉತ್ಪನ್ನವಾಗುವುದೆಂಬ ವಿಷಯದಲ್ಲಿ ಮಾತ್ರ ಸರ್ವಾಭಿಪ್ರಾಯ ಗಳೂ ಒಂದಾಗೂಡುವವು.

ಇನ್ನು ಇವರ ಅಭಿಪ್ರಾಯದಂತೆ ಮುಕ್ತಿಯು ಎಂದು ತೆರನಾ ಗಿರುವುದು. ಸಮ್ಯಗ್ಜ್ಞಾನೋತ್ಪತ್ತಿಯಿಂದಲೂ, ಕ್ರಮ ಮುಕ್ತಿಯಿಂದಲೂ ಸರಣಿಯು ವಿಧ, ಈ ಎರಡೂ ಉಪಾಸನೆಯಿಂ ಫಲರೂಪವಾಗಿರುವವು. ಯಾರು ಕಾರಣಬ್ರಹ್ಮದ ಉಪಾಸಕರೋ ಅವರು ಸಮ್ಯಗ್ಜ್ಞಾನೋತ್ಪತ್ತಿಗೆ ಸೇರಿದವರು ಇನ್ನಾರು ಪರಂಪರೆಯಿಂದ ಬ್ರಹ್ಮೋಪಾಸನೆಯನ್ನು ಮಾಡುವರೋ ಆರ್ಷಾತ್ ಕಾರ್ಯ ಬ್ರಹ್ಮೋಪಾಸಕರೋ ಅವರು ಎಲ್ಲವಕ್ಕೂ ಮೊದಲು ದೇವಯೋನ ಸನಮಾರ್ಗದಿಂದ ಹಿರಣ್ಯಗರ್ಭನಲ್ಲಿ ಪ್ರವೇಶ ಮಾಡುವರು. ಇವರಮೇಲೆ ಅಂತಃಕರಣಪೂರ್ವಕವಾದ ಜ್ಞಾನ ಶ್ರುತಿಸರ್ವನ್ನು ಹೊರಿ ಆ ಮನುಜರೇ ಆ ಹಿರಣ್ಯಗರ್ಭನೊಡನೆ ಕೂಡಿ ಮುಕ್ತಿಯನ್ನು ಹೊಂದುವರು ಇದಕ್ಕೇನೇ ಕ್ರಮ ಮುಕ್ತಿಯೆಂದು ಹೇಳುವರು. ಹಿರಣ್ಯಗರ್ಭನೇ ಕಾರ್ಯಬ್ರಹ್ಮನಾಗಿರುವನು. ಮಹಾ ಪ್ರಳಯದಲ್ಲಿ ಕಾರ್ಯಬ್ರಹ್ಮವು ನಷ್ಟವಾದಮೇಲೆ ಹಿರಣ್ಯಗರ್ಭನು ಪರಮಾಪದವನ್ನು ಹೊಂದುವನು ಅದೇ ಸಮಯದಲ್ಲಿಯೇ ಹಿರ ಣ್ಯಗರ್ಭನ ಅಂಗೀಜೂತವಾದ ಜೀವಪ್ರಪಂಚವೂ ಪರಮ ಪದವನ್ನು ಹೊಂದುವುದು.

ಯಾವು ಸಮ್ಮೋಮುಕ್ತಿಯನ್ನು ದೊರಕಿಸಿಕೊಂಡಿರುವರೋ ಅಲ್ಲಿ ಅವರಿಗೆ ಯಾವವಿಧವಾದ ಕಲ್ಪನೆಗಳೂ ಉಂಟಾಗುವುದಿಲ್ಲ ವಾಗಿ ನಿತ್ಯಾನಂದಕ್ಕೆ ಪಾರವೇ ಇರುವುದಿಲ್ಲ. ಆವರೆ ಯಾರು ಕರ್ಮ ಮುಕ್ತಿಯನ್ನು ಹೊಂದಿ ಕಾರ್ಯಬ್ರಹ್ಮವಲ್ಲಿ ಆನಂದಿಸುತ್ತಿರುವರೋ ಅವರ ನಿತ್ಯಾನಂದಕ್ಕೆ ಮಾತ್ರ ಒಂದು ಅವಧಿಯಿರುವದು. ಕಾರ್ಯ ಬ್ರಹ್ಮಲೋಕದಲ್ಲಿ ಮುಕ್ತಪುರುಷನು ತನ್ನ ಇಚ್ಛಾನುಸಾರವಾಗಿ ಶರೀರಧಾರಣವನ್ನು ಮಾಡಿಕೊಳ್ಳಲೂ ಬರುವುದು ಬಿಡಲೂ ಬರು ವುದು. ಈ ನಿಧಾನದ ಎರಡು ಅವಸ್ಥೆಗಳಲ್ಲಿಯೂ ಕಾಮ (ವಿಷ ಯಗಳ) ಭೋಗವು ಮನವ ಮೂಲಕವಾಗಿಯೇ ಸಾಗುವುದು. ಎಂದರೆ ಮಾನಸಿಕಭೋಗವೆ ನಡೆಯುತ್ತಿರುವುದು. ಶರೀರ ಅವ ಸ್ಥೆಯಲ್ಲಿ ಜಾಗ್ರದವಸ್ಥೆಯಲ್ಲಿ ನಡೆಯುವಂತೆಯೇ ಸೂಕ್ಷ್ಮಲೋಕದ ಯಿಂದ ಉಸಭೋಗವು ಸಾಗುವುದು ವಿದೇಹಾವಸ್ಥೆಯಲ್ಲಿ ಸ್ವಪ್ನಾ ವಸ್ಥೆಯಲ್ಲಿಯಂತೆ ಉಸಭೋಗವು ಸಾಗುತ್ತಿರುವುದು. ಪರಮಕಾ ರಣ ಪರಬ್ರಹ್ಮದಲ್ಲಿ ಲೀನವಾಗಿರುವ ವುರುಷನು (ಜೀವಿಯು) ಜಗದ್ವ್ಯಾಪಾರದಲ್ಲಿ ತೊಡಗಲು ಅಸಾಧ್ಯವಾಗಿರುವುದು. ಪರಮಾ ತ್ಮನು ಮಾತ್ರ ಸಕಲ ಪ್ರಪಾರಗಳಲ್ಲಿಯೂ ಸ್ವತಂತ್ರನಾಗಿರುವನು. ಅಣಿಮಾದಿಸಿದ್ಧಿಗಳೇ ಆ ಪರಮಾತ್ಮನ ಆಪ್ಟೈಶ್ವರ್ಯಗಳಾಗಿವೆ. ಈ ಅಷ್ಟಸಿದ್ಧಿಗಳನ್ನು ನರಪಡಿಸಿಕೊಂಡ ಶಿವಯೋಗಿಯು ಸಂಕಲ್ಪ ತ್ ಪರಶಿವಸ್ವರೂಪನಾಗುವನು. ಅಷ್ಟಸಿದ್ಧಿಗಳನ್ನು ಪಡೆದ ಯೋಗಿಯು ಕಾರ್ಯಬ್ರಹ್ಮ (ಸ್ವರ್ಗಾದಿ ಸೂರ್ಯಮಂಡಲ ಪರ್ಯಂತ) ಲೋಕವನ್ನು ಸುಲಭವಾಗಿ ಹೊಂದಿ ಪಿಂಡಿರುಗಬಹುದು ವಾಗಿದೆ. ಸನಕ ಸಾನಂದಾದಿ ಮಹರ್ಷಿಗಳೂ, ನಾರದಾದಿ ಯೋಗಿ ಗಳೂ, ಪುರೂರವ-ಮಹೃತ-ಅರ್ಜುನ ಮೊದಲಾದ ರಾಜರುಗಳೂ ದಿಲೀಪಾದಿ ಚಕ್ರವರ್ತಿಗಳೂ ಸ್ವರ್ಗಕ್ಕೂ ಭೂಮಿಗೂ ಒಂದೇ ದಾರಿಯನ್ನು ಮಾಡಿ ಓಡಾಡುತ್ತಿದ್ದರು. ಸಾಕ್ಷಾತ್ ಪರಶಿವನೂ ತತ್ತತ್ಸ್ವರೂಪಿಗಳೂ ಆದ ದೇವಾಸುರ-ವಾಸುಕಿ-ಶುಂಭಾಸುರ-ಗೋ ಕರ್ಣ-ನಿಶ್ಯಕರ್ಣರೆಂಬ ಪಂಚಗಣಾಧಿ ಸರ್ವತಂತ್ರಸ್ವತಂತ್ರರಾಗಿ ಶಿವಲಿಂಗಗಳಿಂದ ತೋರಿ ಆ ಶಿವಲಿಂಗಗಳಲ್ಲಿಯೇ ಅಡಗಿಪುಹೊ, ವಿಕಕಾಲದಲ್ಲಿ ಅನೇಕಾನೇಕ ರೂಪಗಳನ್ನು ಧರಿಸಿಪುಮೂ, ಆಕಾಶ ಮಾರ್ಗದಲ್ಲಿ ವಿಮಾನದಿಂತೆ ಸಂಚರಿಸಿಪುದೂ ಇನೇ ಮೊದಲಾದ ಅತ್ಯದ್ಭುತ ಲೀಲೆಗಳನ್ನು ತೋರಿಸಿದುದೂ ಇವೆಲ್ಲಾ ಅಷವಾದ್ಯ ಸ್ವಸಿದ್ಧಿಗಳನ್ನು ನರಪಡಿಸಿಕೊಂಡುದರ ನಿದರ್ಶನವಾಗಿದೆ ಈ ಅದ್ಭುತ ಶಿವಯೋಗಸಾಮರ್ಥ್ಯವನ್ನರಿಯದ ಕೋತಿಗಳು ಈ ಲೀಲೆಗಳೆಲ್ಲಾ ಅವರನ್ನು ಮುಂದಕ್ಕೆ ತರಬೇಕೆಂಬು ಕಲ್ಪಿಸಿಕೊಂಡ ಕಥೆಗಳೆಂದು ಟೀಕಾದುಪವು ಇವರಿಂತಹ ಟೀಕಾಟಿಪ್ಪಣಿ ತತ್ತ್ವಾ ಧ್ಯಯನದ ಅಭಾವದಿಂದ ಮೂಲಕಾರಣನೆಂದು ನಾವಿಲ್ಲಿ ಸುಸ್ಪಷ್ಟ ವಾಗಿ ಹೇಳುವೆವು. ಇರಲಿ, ಇಮ ಪ್ರಸ್ತುತವಲ್ಲ. ಜ್ಞಾನಕರ್ಮ ಸಮುಚ್ಚಯಕ್ಕೆ ರುವ ಪ್ರಾಧಾನ್ಯತೆಯನ್ನು ಒಂದಲ್ಲ, ಎರಡೆಲ್ಲ ಆನಂದ್ಯಾಕ ಗ್ರಂಥಗಳಿಂದ ತಿಳಿದುಕೊಳ್ಳಬಹುದಾಗಿದೆ ಎಂಬ ವಿಷ ಯವನ್ನು ಪ್ರಾಚೀನಕಾಲದ ವೇದಾಂತದಿಂದ ಆಧುನಿಕ ವೇದಾಂ ತವನರೆಗೆ ಸಂಕ್ಷೇಪವಾಗಿ ಹೇಳಬೇಕೆಂಬುದೇ ಉದ್ದೇಶವಾಗಿದ್ದು ತು. ಇಮವರೆಗೆ ಬರೆಯುತ್ತ ಬಂದಿರುವ ಆಸಂತಪ್ರಮಾಣಗಳಿಂದ ಭೇದಾಭೇದಕ್ಕೆ ಇನೇ ವೇದವು ಸಮ್ಮತಿಯನ್ನಿಯುವುದೇ ಯೊರತು ಒಂದನ್ನು ಎಂಂಂ ಪ್ರಂಶಿಸುವುದಿಲ್ಲವೆಂಬುದು ಸುಸ್ಪಷ್ಟ ಗೊಳಿಸ ಲ್ಪಟ್ಟ ತಷ್ಟೆ.

ಶ್ರೀ ರೇಣುಕಗೀತೆಯಿಂತೂ ಈ ಭೇದಾಭೇದಸಿದ್ಧಾಂತವನ್ನು ಸಾರುವಲ್ಲಿ ಸುಸ್ಪಷ್ಟವಾಗಿದೆ. ಇದಕ್ಕೆ ಸಾನಾನ್ಯವಾದ ಸಳ ವನ್ನು ಕೊಟ್ಟರೆ ಸಾಕೆಂದು ಅಧುನಿಕರು ಸಾದಿಸುವರು. ಯಾವು ಮೋ ಒಂದು ಕಾಲ್ಪನಿಕ ಕವಿಯೂಹಿಸಿದ ಮಾತ್ರ ಇವರ ಸಾದಕ್ಕೆ ಒಳ್ಪಬಹುದಾಗಿದ್ದು ತು. ಶ್ರೀರೇಣುಕಗೀತೆಗೆ ಇರತಕ್ಕ ವರ್ಚಸ್ಸು ವೇದ ಮತ್ತು ಆಗಮಗಳ ವರ್ಗಕ್ಕೆ ಸೇರತಕ್ಕದ್ದಾಗಿರುವುದೆಂದು ಇವರ ಸಾಪವು ಪುಷ್ಟಪೇತವಾಗಿರುವುದೆಂಬ ಸಕ್ಷವಾಗಿ ಹೇಳಬೇಕಾಗುವುದು ತತ್ತ್ವಸಿದ್ಧಾಂತಪ್ರಭುವರವಾದ ಈ ದಿವ್ಯ ಗೀತೆಯನ್ನು ಪ್ರಮಾಣತ್ಕೇನ ಸರ್ವರೂ ವಿಕಂಭಿಸ್ಯಾಯದಿಂದ ಗ್ರಹಿಸುವರು ಹಿಂದಿನ ಪಂಡಿತರನೇಕರು ತಮ್ಮ ಮಾನ್ಯಗ್ರಂಥ ಗಳಲ್ಲಿ ಇವನ್ನು ಕೊಂಡಾಡಿರುವರು. ಈ ಕಾರಣಗಳಿಂದ ಈ ಗ್ರಂಥವ ವ್ಯಾಪಕತೆ ಸರ್ವಾದರಣೀಯತೆಗಳು ಒಡೆದು ಕಾಣು ವವು. ಆದರೆ ಈ ಗ್ರಂಥದ ಕಾಲನಿರ್ಣಯವಿಚಾರದಲ್ಲಿ ಮಾತ್ರ ಈಗಿನವರಿಗೆ ಶಂಕೆಯುಂಟಾಗಿರುವುದೆಂದು ತಿಳಿಯುವುದು. ಆನೇಕರು ಈ ಗ್ರಂಥವು ಜಗನ್ಮಾನ್ಯ ವಾದೆಂದು ಒಪ್ಪಿಕೊಳ್ಳುವುದಂತೂ ಸರಿಯೇ ಆದರೆ ಆ ಒಪ್ಪಿಗೆಯ ಜೊತೆಗೆ ಕಾಲಮಾನದ ನಿರ್ಣಯವೂ ಪಾಡಿತರಿಗಿರಲಿ. ಇತಿಹಾಸವಿದರಿಗಾದರೆ ಎಂಬ ಒಂದು ಸಣ್ಣ ರಾಗವನ್ನು ತೆಗೆದು ಸಂದೇಹಗೊಳ್ಳುತ್ತಲೂ ಗೊಳಿಸುತ್ತಲೂ ಇವ್ವಾರೆ. ಈ ಗ್ರಂಥವು ಬಹು ಪೂರ್ವಕಾಲದ್ದೆಂಬ ವಿಚಾರವು ಬಾಧಿಸಿದಿನಗಳಿಂದ ಸಿದ್ಧವಾಗಿಯೇ ಇದ್ದಿತಾದರೆ ಅದೇನೋ ಈಚೆಗೆ ಶಕ್ತಿಶಿಷ್ಟಾದ್ವೈತಸಾಮರಸನಿಯು ಆಚಾರ್ಯರಿಂದ ಅಗಿಲ್ಲವೆಂಬ ವಾದವನ್ನು ಬಲಪಡಿಸುವ ಯತ್ನಗಳು ಜನಗಳಲ್ಲಿ ಹೆಚ್ಚಿ ಈ ವಿಧ ವಾದ ವ್ಯಂಗ್ಯೋತ್ಪತ್ತಿಯನ್ನು ಪ್ರಚಾರಪಡಿಸುವಲ್ಲಿ ಆರಂಭಪಾಗಿದೆ ಇದು ಒಂದು ವಿಧವಾದ ಅಸಂಬ! ನಿಚಾರಕ್ಯಾಂತಿ!! ಶಾಂತಿ ಯೂನನ ಸಮಯವೆಂದು ನಾವು ತಿಂಂಯಬೇಕೇ ಹೊರತು ಅವ ರಂತೆ ನಿರಾಧಾರವಾಗಿ ಹಾರಾಡುವುದು ವೈದಿಕರ ಕರ್ತವ್ಯವಲ್ಲವೆಂ ಬುದನ್ನು ಇನ್ನು ಹೇಳಲೇ ಬೇಕಾಗುವುದು. ಮೈಸೂರಿನ ಕೈ॥ ಎಣ್ ಆರ್. ಕರಿಬಸವಶಾಸ್ತ್ರಿಗಳನು ಈ ದಿವ್ಯ ತತ್ತ್ವಗ್ರಂ ಥವಾದ ರೇಣುಕಗೀತೆ (ಸಿದ್ಧಾಂತಶಿಖಾಮಣಿ)ಗೆ ವ್ಯಾಖ್ಯಾನವನ್ನು ಬರೆದಿದುವರಷ್ಟೆ! ಅವರು ಆ ತನ್ನು ಗ್ರಂಥದ ಮುನ್ನುಡಿಯಲ್ಲಿ ಈ ಸಿದ್ಧಾಂತಶಿಖಾಮಣಿಯ ರಚನಾಕಾಲವು ೧೨ ನೆಯ ಶತಮಾನದ ಪೂರ್ವಕಾಲಕ್ಕೆ ಸೇರಿದ್ದಾಗಿದೆ ಎಂದು ಅಧಶ್ರಾಯಪಟ್ಟಿರುವರು. ಆ ಕಾಲದಲ್ಲಿ ಮಹಾ ಮಹಾ ವಿದ್ವಾಂಸರೆಲ್ಲರೂ ಈ ವಿಷಯದಲ್ಲಿ ನಾವಿಸದೆ ಆದೇಕೆ ಮೌನವ್ರತನವರಾಗಿದ್ದರೋ ತಿಳಿಯದಾಗಿದೆ. ಈಗೀಗ ಈ ವಿಷಯದಲ್ಲಿ ದಿರ್ವಾದವು ಹೆಚ್ಚಾಗಿದೆ. ಆದೇಕೆ? ಆಚಾರ್ಯಸಿದ್ಧಾಂತದ ಸ್ವಾಚೀನತೆಯ ವಿಷಯದಲ್ಲಿ ಮಾತ್ರವೆ ವುಟ್ಟಾಗಿರುವುದೆಕ್ಕೆ. ಸರಿ, ಇವರ ವಾದವನ್ನೂ ನಾವು ಒಪ್ಪಿಕೊಂ ಡರೆ ತಪ್ಪೇನು? ಪ್ರಾಚೀನನೇನೋ, ಆರ್ವಾಚೀನೇನೋ ವಿಷಯಪ್ರತಿ ಪಾದನೆ ಮಾತ್ರ ಸರ್ವರಿಗೂ ಸರಿಹೋಗುವುದೆಂದು ಸಮಾಧಾನ ಮಾಡಿಕೊಳ್ಳಬಾರದೇಕೆ? ಎಂಬ ಪ್ರಶ್ನೆ ತಲೆಮೇರೆಬಹುದಾದರೆ ಅದಕ್ಕೆಷ್ಟೇ ಉತ್ತರ—ಏನೂ ಚಿಂತೆಯಿಲ್ಲ. ಆ ದಿವ್ಯಗ್ರಂಥದಲ್ಲು ಕ್ತವಾಗಿರುವ ಎಲ್ಲಾ ವಿಷಯಗಳನ್ನೂ ವಿಶೇಷವಾಗಿ ವರ್ಣಾಶ್ರಮ ವಿಚಾರಗಳಿಗೆ ಒಪ್ಪಿಕೊಳ್ಳುವುದಾದರೆ ಆದರಂತೆ ನಡೆಯಲು ಸಿದ್ಧರಾಗುವುದಾದರೆ ಈ ಗ್ರಂಥದ ಕಾಲಮಾನದ ವಿಚಾರವೇ ಬೇಡವೆಂದು ಹೇಳಬಯಸುವೆ. ಈ ವಿಚಾರದಲ್ಲಿ ಆರ್ವಾಚೀನವಾದಿ ಗಳ ಸಮ್ಮತಿಯಿರುವುದೇನು? ಇಲ್ಲ, ಇವರಿಗೆ ಈ ದಿವ್ಯಗೀತೆಯ ಪ್ರುತಿಪಾದಿಸಿರುವ ವರ್ಣಾಶ್ರಮ ವಿಚಾರವೂ ಕೃಷ್ಣಗೀತೆ ಶಿವಗೀತೆ ಗಳಲ್ಲುಕ್ತವಾಗಿರುವ ವರ್ಣಾಶ್ರಮ ವಿಚಾರವೂ ಹೃದಯಕೂಲವಾಗಿ ಪರಿಣಮಿಸಿರುವಲ್ಲಿ ಈ ಗೀತೆಗೆ ಆರ್ವಾಚೀನತೆ ಸಿದ್ಧಿಸುವುದಾದರೂ ಹೇಗೆ? ಸಿದ್ಧಿಸುವುದೇ ಸತ್ಯವಾಗಿರುವಲ್ಲಿ ಆರ್ವಾಚೀನವೆಂತಲೇ ಆ ಗೀತೆಯಲ್ಲಿರುವ ವರ್ಣಾಶ್ರಮ ವಿಚಾರಗಳನ್ನು ಆಚರಿಸುವಲ್ಲಿ ಹಿಂಜರಿಯಬೇಕೆ? ಕೆಲವಿನಗಳ ಹಿಂದೆ ಶ್ರೀಕರಭಾಷ್ಯದ ವಿಚಾ ರವಾಗಿಯೂ ಇದೇ ಆರ್ವಾಚೀನವಾದವೇ ಹಬ್ಬಲಸುವಾಗಿದ್ದಿತು, ೧೨ ನೆಯ ಶತಮಾನದ ವಿಚಾರಗಳೇ ಈ ಭಾಷ್ಯದಲ್ಲಿ ತುಂಬಿ ತುಳುಕುತ್ತಿವೆ ಎಂದು ಪ್ರಕಟಿಪಾಗಿದ್ದಿತು, ಈ ತೆರನಾದ ಬರೆಹ ದಿಂದ ಸುತೋಷವೇ ಹೊರತು ಅಸಂತೋಷವುಂಟಾಗಲು ಅನು ವಿಲ್ಲ. ಆದರೆ ಆ ಶತಮಾನದ ವಿಚಾರಗಳೇ ಈ ಭಾಷ್ಯದಲ್ಲಿ ತುಂಬಿ ದಮೇಲೆ ಆದರಲ್ಲಿ ಬರೆದಿರುವಂತೆ ಆಚರಿಸಲು ಹಾಗೆ ಬರೆದವರಾ ದರೂ ನಿತ್ಯರಾಗಬೇಕಲ್ಲವೆ? ಆಗುವಂತಿಲ್ಲ ಏಕೆ? ಆದರಲ್ಲಿಯೂ ಹೆಜ್ಜೆ ಹೆಜ್ಜೆಗೂ ವರ್ಣಾಶ್ರಮ ವಿಚಾರಗಳೇ ತುಂಬಿಕೊಂಡಿವೆ. ಶ್ರೀಕರಭಾಷ್ಯದಲ್ಲಿ ಚತುರ್ವರ್ಣದ ವೀರಶೈವವಷ್ಟೇ ಇಲ್ಲ. ಈ ವೀರಶೈವದಲ್ಲಿ ಚಾಂಡಾಲ ಪರ್ಯಂತವಾದ ಭೇದವಿರುವುದೆಂದು ಉಕ್ತವಾಗಿದೆ. ಈ ಆರ್ವಾಚೀನವಾದಗಳನ್ನು ಸರ್ವರೂ ಒಪ್ಪಲೇ ಬೇಕಲ್ಲವೆ? ಅಮ ಮಾತ್ರ ಜೇಡನೆಂದರೆ ಪ್ರಾಚೀನಕಾಲದ ಗ್ರಂ ಥಗಳನ್ನು ಆರ್ವಾಚೀನಕಾಲದವುಗಳೆಂದು ಸಾಧಿಸುವ ಈ ಮರ್ಮ ವನ್ನು ಬೇಡನೆಂದು ಇತಿಹಾಸತತ್ವವಿದರು ಆದೇಕೆ ಹೇಳವೆ ಸುಮ್ಮ ನಿದ್ದಾರು? ಹಾಗಿರಲು ಸಾಧ್ಯವೇ ಇಲ್ಲ. ಇರಲಿ.

ಈಗ ಸಿದ್ಧಾಂತಶಿಖಾಮಣಿಯ ಕಾಲನಿರ್ಣಯದ ಕಡೆಗಷ್ಟು ಲಕ್ಷ್ಯಕೊಡೋಣ! ಸಿದ್ಧಾಂತಶಿಖಾಮಣಿಯ ಸಂಸ್ಕೃತ ವ್ಯಾಖ್ಯಾ ನಕಾರರೆಂದ ಯತಿವರ ಶ್ರೀ ಮರಿತೋಂಟದಾರ್ಯರು—

ರೇಣುಕಾಗಸ್ತ್ಯಸಂವಾದಂ ನಿಗಮಾಗಮವಿಶ್ರುತಂ ।
ಪ್ರುದೀಪಯತಿಕಿಗುಪ್ತಾರ್ಥಮುದ್ಧೃತ್ಯ ಶಿವಯೋಗಿರಾಟ್ ॥

ಶಿವಯೋಗಿವಾಚಾರ್ಯನು ನಿಗಮಾಗಮಪ್ರಸಿದ್ಧವಾದುದಾಗಿಯೂ, ಗೂಢಾರ್ಥವುಳ್ಳುದಾಗಿಯೂ, ಇರುವ "ರೇಣುಕಾಗಸ್ತ್ಯಸಂವಾದ" ವೆಂಬ ದಿವ್ಯಗ್ರಂಥವನ್ನು ಉದ್ಧರಿಸಿ ಸಿದ್ಧಾಂತಶಿಖಾಮಣಿಯೆಂಬ ಹೆಸರಿಂದ ಪ್ರಕಾಶಪಡಿಸಿರುವನು ಎಂಬ ವಿಷಯವನ್ನು ಅಪ್ಪಣೆ ಕೊಡಿಸುವರು. ಎಂದಮೇಲೆ ಈ ಸಿದ್ಧಾಂತಶಿಖಾಮಣಿಗೆ ಪೂರ್ವ ದಲ್ಲಿ ಇವಕ್ಕೆ ಆಧಾರವಾಗಿ "ರೇಣುಕಾಗಸ್ತ್ಯಸಂವಾದ" ವೆಂಬ ಗ್ರಂಥವು ಪ್ರಸಿದ್ಧಿಯಲ್ಲಿದ್ದಿತೆಂದು ಸ್ಪಷ್ಟವಾಯಿತಷ್ಟೆ! ಸಿದ್ಧಾಂತ ಕಾಮುದೀಕಾರರಾದ ಮಹಾನುಭೋಭಾಗ್ಯನು, ಸಂ॥ ಭೆಟ್ಟೋ ಜೀ ದೀಕ್ಷಿತರುಃ" ಸಾಮಪಾಗಣೋಪಸಬ್ಧಯರ್ಗೇನ ಹಿ ಕಂಚಿದ್ವಾ ಜಕ್ಷತೇ" ಎಂದು ಅರಿಭಸಿ—

ಬ್ರಮ್ಹೇತಿ ಲಿಂಗಮಾಮ್ಯಾತಂ ಬ್ರಹ್ಮಣಾ ಪತಿರೇಶ್ವರಃ ।
ಪವಿತ್ರ

ನರ ಮಸ್ಕೃಪ್ತಿಗಾಗಿ ಪುಣ್ಯಬಸ್ವಾಮಿಯವರು ಅಪ್ಪಣೆ ಯಿತಿಸಿದ—

ತಸ್ಕಚ್ಚ ಪ್ರುಣಾ! ವಿಪ್ರೇಂದ್ರ!! ಧನಿಷ್ಠೇ ದ್ವಾದಶೇ ಭಘಾನ್ ।
ಏಕೋನತ್ರಿಂಶಕೇ ಬ್ರಹ್ಮನ್ ಸತ್ಕಂ ಪ್ಯಾಸೋ ಧನಿಷ್ಠಕಿ ॥

(ಕಾಶೀಖಂಡ. ಭಾ-೧-ಅ-೬-ಪುಟ ೪೮)

ಬಿಂಜೆ ಬರುವ ದ್ವಾದಶರಯುಗದ ೨೯ನೆಯ ವರ್ಷದಲ್ಲಿ ನೀನು ಜನ್ಮವಾಗಿಯೂ ವ್ಯಾಸನಾಗಿ ಜನಿಸುನೆ) ಈ ಪದ್ಯದಿಂದಲೂ ಪುಣ್ಯ ಸ್ವಾಮಿ—ಅಗಸ್ತ್ಯರಿಗೆ ಸಂಬಾದ ನಡೆದುದು ತ್ರೇತಾಯುಗದಲ್ಲಿ ೇ ಎಂಬುದು ಸಿಶ್ಚಯವಾಗುವುದು ಅಗಸ್ತ್ಯಮಹರ್ಷಿಗಳು ನೆಲೆಸಿ ವಕ್ಷೀ (ಮಲಯಪರ್ವತ) ಪ್ರಶ್ಲಿಯೇ ವಾಸಮಾಡಿದರೆಂ ದು ಪುರಾಣ-ಕಾವ್ಯ-ನಾಟಕ-ಇತಿಹಾಸ ಪ್ರಸಿದ್ಧವಾದ ಸಂಗತಿ ಯಾಗಿದೆ. ಶ್ರೀ ರೇಣುಕರ ಪುಣ್ಯಾಶ್ರಮವಾದರೂ ಸುಲಯದಲ್ಲಿ ೇ ಇದೆ. ಸುಲಯದಲ್ಲಿ ಇವರ ಆಶ್ರಮವು ಆಗಸ್ಕ್ಯೇಶ್ವರೇಶ ದೇವಸ್ಥಾನವೆಂಬುದು ಸ್ಥಾಸಿತವಾಯಿತು. ಸಿದ್ಧಾಂತಶಿಖಾಮಣಿಕಾರರು ರೇಣುಕಾಗಸ್ತ್ಯ ಸಂವಾದ ನಡೆದುದು ಸುಲಯಾದ್ರಿಯಲ್ಲಿಯೇ ಎಂದು ಸ್ಪಷ್ಟವಾಗಿ ಅಪ್ಪಣೆಕೊಡಿಸಿರುವರು. ಈ ಕಾರಣಗಳಿಂದ ಕಾಯುನವಲ್ಲಿಯೇ ರೇಣುಕಾಗಸ್ತ್ಯ ಸಂವಾದವು ಆಗಿ ಆ ಂದೆ ಆದೇ ವಿಷಯವನ್ನು ಗ್ರಂಥರೂಪವಾಗಿ ಸ್ರಕಾಶಪಡಿಸಿದ್ದಾ ತೂ ಕೆಲವು ಕಠಿಣಹೆಯರ್ತಿಯು ದರಿಂದ ಜನಸಾಮಾನ್ಯಕ್ಕೆ ಆರ್ಷ ಾಷೆಯು ಕಷ್ಟವಾಗಿದ್ದು ತಿಂತಹುಗಳ ಆ ಕಾಠಿನ್ಯವನ್ನು ಮೂರೆಮಾಡ ೀಸುಗ ವಿವಿಧೋಗಿವಿಪಾಚಾರ್ಯರು ಸಿದ್ಧಾಂತಶಿಖಾಮಣಿ ಯ ಹೆಸರಿನಿಂದ ಜ ಗ್ರಂಥವನ್ನೇ ಸುಲಭಶೈಲಿಗೆ ಇಳಿಸಿದೆಂ ಾ ತಿಳಿಯಬಹುದಾಗಿದೆ

(ಸಚೇಷ)

॥ ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು ॥

ಶ್ರೀ ಪಟ್ಟಾಧಿಕಾರ ದ್ವಾದಶವಾರ್ಷಿಕೋತ್ಸವ

ಶ್ರೀಮದ್ರಂಭಾಪುರೀ ವೀರಸಿಂಹಾಸನ, ಶಾಖಾಸೂತ್ರಾನುಸಾರ್ತಿ ಾದ ತೀರ್ಥಹಳ್ಳಿ ತಾಲ್ಲೂಕು ಮಳಲಿ ಬೃಹನ್ಮಾಠಾಧ್ಯಕ್ಷಶ್ರೀಗುರು ಗಾರ್ಜುನಪಿಠಾಚಾರ್ಯಸ್ವಾಮಿಗಳವರ ಪಟ್ಟಾಧಿಕಾರ ದ್ವಾದಶ ರ್ಷಿಕೋತ್ಸವವು ಶ್ರೀಮಠದಲ್ಲಿ ಇದೇ ಕಾಲಿಪಾಪೊದಕ ೧೪೩೧ ರ ಬಹುಧಾನ್ಯನಾಮ ಸಂ॥ ಜ್ಯೇಷ್ಠ ಶು॥ ೩ (ತಾ|| ೧-೬-೨೪) ಧವಾರ ಶ್ರೀಸುವ್ರಹ್ಮಪುರೀ ಜಗದ್ಗುರುಮಹಾಸ್ವಾಧಿಯಲ್ಲಿ ೃಂತ ವಿಜೃಂಭಣೆಯಿಂದ ನೆರವೇರಿತು. ಪ್ರಾತಃಕಾಲ ಶ್ರೀ ಗೋದ್ಭವ ವರೇಣುಕಮೂರ್ತಿಗೂ ಮಠದ ಪೂರ್ವಾಸನ ಶ್ರೀನಾಗಾ ರ್ಜನಮೂರ್ತಿಗೂ ಪೋದಶಪೂಜೆಯೂ ಶ್ರೀರುದ್ರಾಭಿಷೇಕಾದಿ ೂ ಸಹ ವಿಧ್ಯುಕ್ತವಾಗಿ ನಡೆದು, ಮಧ್ಯಾಹ್ನ ಭಕ್ತಮಾಹೇಶ್ವ ಸಂತರ್ಪಣೆಯಾಯಿತು ಸಾಯಂಕಾಲ ೫ ಘಂಟೆಯಿಂದ ರಿಷತ್ತೋವೇಶಾದಿಗಳಿಂದಲಂಕೃತವಾಗಿದ್ದ ಶ್ರೀಮಠದ ದ್ವಾರದಿಂದ ಹಾನವಮಂಟಪದವರೆಗೂ ಶ್ರೀಮಜ್ಜಗದ್ಗುರು ಶಿವಾಗಮ ಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಸುವರ್ಣರಜ ಂಡೋಲಿಕೋತ್ಸವವು ಉಭಯಪಾರ್ಶ್ವಗಳಲ್ಲಿಯೂ ದಿವ್ಯ ಹಾಯಾಂಬರಭೂಷಿತರಾಗಿ ಅರ್ಪ್ಪಿತೋಪಕರವಾದ ಶ್ರೀ ಮಳಲೀ ರವ ಹಾಗೂ ಶ್ರೀ ಕವಲೇದುರ್ಗದ ಜುನುಂತಿನಿಸುರವರ ಸ್ಥಿರ. ೆ ಪಟ್ಟಾಧಿಕಾರಿಗಳೊಂದಿಗೆ ಬಹುನೈಭವದಿಂದ ನೆರವೇರಿ ಯಿಂಕಾಲ ೬ ಘಂಟೆಗೆ ಸರಿಯಾಗಿ ಶ್ರೀಮಠಕ್ಕೆ ಆಗಮಿಸಿತು. ರವ ಮುಂಭಾಗದ ಆನವಣದಲ್ಲಿ ರಚಿತವಾಗಿದ್ದ, ಧ್ವಜಮಂಟ ಪದಲ್ಲಿ ವಿರಾಜಿಸುತ್ತಿದ್ದ ಧ್ವಜಾಸನದಲ್ಲಿ ಶ್ರೀಜಗದ್ಗುರುವರ್ಯರು ಂಡಿಸಿದೊಡನೆಯೇ ಜಯಜಯಕಾರವಾಯಿತು ತರುವಾಯ, 'ಮಾಸ್ಥಿ ಧಿಯವರು ತಮ್ಮ ಸ್ವಹಾವನಾಯಿಂದ ಈ ಮಠದ ಾಲಗುರುಗಳಾದ ಶ್ರೀನಾಗಾರ್ಜುನಸ್ವಾಮಿಗಳವರ ಮಹತ್ವದ ತಿಹಾಸವನ್ನು ಅಪ್ಪಣೆಕೊಡಿಸಿಮೆದಲ್ಲದೆ ಸನಾತನಧರ್ಮ ಸಂಂ ಾಗಿ ಮೇಜುಗನೆಹಸಿಸುತ್ತಿಗಳಾಧಾರದಿಂದಲೂ, ಅಕಿಕೋ ಹರೆಗಳಿಂದಲೂ, ಉಪದೇಶಮಾಡಿ ಸಮಸ್ತ ಜನರನ್ನೂ ಪೂರ್ಣ ನ್ನಾಗಿ ಮಾಡಿದರು. ಬಳಿಕ ಕೀರ್ತಿಕೇಸರಿ ಕವಿಭೂಷಣೇತ್ಯಾದಿ ವಿದಾಂಕಿತವಾದ ನೆಳಿ ಗುರು ತಿನರುದ್ರಶಾಸ್ತ್ರಿಗಳವರು ಸಮ ಾಚಿತ ಭಾಷಣನುಡಿ, ಈ ಮಠದ ಈಗಿನ ಸ್ವಾಮಿಗಳವರ ಸ್ವಾಧಿಕಾರ ಸಮಯದಲ್ಲಿ ಬಂದು ಕೀರ್ತಿಸಿದ್ದಾರಾ ಸೇವೆ ನ್ನು ಸಲ್ಲಿಸಿ ನನಗೆ ಪಟ್ಟಾಧಿಕಾರದ ಸಪ್ತಿರದನೆವರ್ಷದ ಉತ್ಸ ವ್ಕೆ ಹ್ವಾನಿಯಾಗುವ ಯೋಗವು ಲಭಿಸಿತೆಂದು ಅನಂತೋತ್ಸಾಹ ನ್ನು ನೂಸಿ ತಮ್ಮಿಂದ ನೂತನವಾಗಿ ರಚಿಸಲ್ಪಟ್ಟ ಶ್ರೀಜಗದ್ಗುರು ೃತ್ರಿರೂಪಸಾಮ ಕವಿತೆಯನ್ನು ಸುಪ್ರಾನ್ಯವಾಗಿ ವಿಯೋಗಿ ಮಯಾಶಸ್ತಿ ಧಿಗೆ ಸಮರ್ಪಿಸಿದರು. ತದನಂತರ ತಮ್ಮ ಪಟ್ಟಾಧಿ ರಿದ ದ್ವಾದಶವರ್ಷಿಕೋತ್ಸವದ ಜ್ಞಾಪಕಾರ್ಥವಾಗಿ ಶ್ರೀಗುರು ಾರ್ಜನಸ್ವಾಮಿಗಳವರು ಶ್ರೀಜಗದ್ಗುರು ಮಹಾಸನ್ನಿಧಿಗೆ ಚಿಕಾರೂಪಮಾಗಿ ರಜತಕುಂಭವನ್ನು ಸಮರ್ಪಿಸಿದರು. ಆನಂ ಶ್ರೀಮಠದ ಶಿಷ್ಯರಾಧಿಯಾಗಿ ಸಮಸ್ತಜನರೂ ಉತ್ಸವದ ತೋಷಸೂಜನಾರ್ಥವಾಗಿ ಮಂಥಿಸಿತಿಗಳಾದ ಶ್ರೀಶ್ವಾಮಿಗ ಗೆ ಕಾಣಿಕಾರೂಪವಾಗಿ ಅಮೂಲ್ಯವಸ್ತ್ರಗಳನ್ನೂ ರಜತ ್ಣಗಳನ್ನೂ ಅರ್ಪಿಸಿದರು.

ಇದೇ ದಿನ ರಾತ್ರಿ ೧೦ ಘಂಟೆಯಿಂದ ಪುಸರಾತ್ರಿ ಮಳಲೀ ಲೇದುರ್ಗದ ಉಪಾಚಾರ್ಯಗದ್ದಿಯದ ಅಧ್ಯಕ್ಷತೆಯಲ್ಲಿ ನೆರೆದ ಮಹಾಸಭೆಯಲ್ಲಿ ಸೇ॥ ಗುಬ್ಬಿ ಶಿವಪ್ರಕಾಶಾಸ್ತ್ರಿಗಳವರಿಂದ ಗುರು ಮಹಿಮಾದರ್ಶನವೆಂಬ ಸಂಕೀರ್ತನೆಯು ಸರಸವಾಗಿ ನಡೆದು, ಧರ್ಮಭೋಧಪ್ರದವಾದ ಕಥಾಶ್ರವಣದಿಂದ ಸರ್ವರೂ ಅನಂದ ಪರವಶರಾದರು. ಈ ಮಹಾಧಿಷ್ಠಿತಗಳಾಗಿರುವ ಗುರುಸಾರ್ವಜನಿಕ ಸ್ವಾಮಿಗಳವರು ಯಾವ ಮಹಾಗುರುಸ್ಥಾನಾಧಿಯಲ್ಲಿ ಪಟ್ಟಾಧಿಕಾರ ಸೂತ್ರವನ್ನು ನಹಿಸಿಕೊಂಡಿರೋ ಆ ಪರಮಜಗದ್ಗುರು ಮಹಾಸ್ಥಾನಾಧಿ ಯಲ್ಲಿಯೇ ತಮ್ಮ ಪಟ್ಟಾಧಿಕಾರವನ್ನು ಈ ಹತ್ತೊರಡನೇ ವರ್ಷದ ಉತ್ಸವದ ಯೋಗಭಾಗ್ಯವನ್ನೂ ಪಡೆದುದು ಪೂರ್ವಾಭಾವಿಯೇ ಯೇಳಬೇಕಾಗಿದೆ.

ಈ ಸಮಾರಂಭಕ್ಕೆ ಈ ಮಠದ ಮುಖ್ಯಶಿಷ್ಯರಾದ ಶ್ರೀಮಾ ನ್ ಸರ್ದಾರ್ ಬುಳ್ಳಸ್ವ. ಬಸವಂತರಾವ್ ಮಾಮಲೆ ಬಂಕಾಪುರ ಸಂಸ್ಥಾನದ ಮಂದಿಗಳೂರು, ಇವರ ಜ್ಯೇಷ್ಠಪುತ್ರರೂ ಮತ್ತು ಶಿವ ಮೊಗ್ಗ, ತೀರ್ಥಕೆರೆ, ಬೀರೂರು, ಗುಬ್ಬಿ, ಹಾದಿಕೆರೆ-ಹಾರನಹಳ್ಳಿ ಕ್ಕಾರಂದೂರು, ಕೋಟೆಗದ್ದೆ, ಕೋಣಂದೂರು, ಹುಮಚ, ಬೈಸ ವಳ್ಳಿ, ಹೊದಲ, ಉದ್ದೇವೀಪರಮನೆ, ಬೀಸ್ ಮುಂತಾದ ಅನೇಕ ಗ್ರಾಮಗಳಿಂದ ಲೌಕಿಕ ವೈದಿಕ ಮಹೋದಯರೂ ಆಜುಬಾಜು ಗ್ರಾಮಗಳ ಮಹಾಜನರೂ ಸೇರಿ ಸುಮಾರು ಸಾವಿ ರದವರೆಗೆ ಆಗಿಮಿಸಿದ್ದರು. ಈ ಮಠದ ಏಜೆಂಟರನರವಾದ ಸೇ॥ ಸಂಜುಂಡಶಾಸ್ತ್ರಿಗಳವರ ವಿಚಕ್ಷಣತೆಯಿಂದಲೂ, ವಕ್ತೃತೆಯಿಂದಲೂ, ಕಾರ್ಯಕರ್ತರುಗಳು ಸಕ್ರಿಯವಾಗಿ ನಡೆದನ್ನ.

ಓರ್ವ ಉತ್ಸವಭಾಗಿ.

ಗೆಜ್ಜಲಗಟ್ಟೆ ಜಹಾಗೀರದಾರರ ಆರಮನೆಯಲ್ಲಿ ನೆರವೇರಿದ ವಿವಾಹಮಹೋತ್ಸವವು

ರಾಯಚೂರ ಡಿ॥ ಗುಡಗಂಟಿಸಂಸ್ಥಾನದಲ್ಲಿ ವಿರಾಜಿಸುತ್ತಿರುವ ಜಹಾಗೀರ ಗೆಜ್ಜಲಗಟ್ಟೆ ಬಿಲ್ ಮುತ್ತೇದಾರ ಶ್ರೀಮಾನ್ ರಾಜಾ ವೆಂಕಟರಾವ ಬಹದ್ದೂರವರು ತಮ್ಮ ಜ್ಯೇಷ್ಠ ಪುತ್ರರಾದ ಶ್ರೀಮಾನ್ ಚಿ॥ ಸ॥ ರಾಜಾ **ಕರಣಬಸವರಾಜರಿಗೆ** ಬಳ್ಳಾರಿ ಡಿ॥ ರಾಯದುರ್ಗ ತಾ॥ ಹಸುಮಾವುರಗ್ರಾಮದ ಶ್ರೀಮಾನ್ ಡಿ. ವೀರಾರೆಡ್ಡಿ ಯವರ ಸುಪುತ್ರಿ ಸೌ॥ ಕು॥ ಕೊ॥ ಚಿ॥ ಸಾ॥ **ಲಿಂ॥ ಶೆನರಾಜೀ ಕ್ಕಮ್ಮ** ಎಂಬ ಕನ್ಯಾಮಣಿಯೊಡನೆ, ನೈಶಾಖ ಬ॥ ೧೨ ಗುರುವಾರ ಪ್ರಾತಃಕಾಲ ೯ ಘಂಟೆಗೆ ವಿವಾಹಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ವಿವಾಹವಿಧಿಯು ವೇದೋಕ್ತವಾಗಿ ಶಿರೋಳ ಬ್ರಹ್ಮಶ್ರೀ ವೇ॥ ಶ್ರೀ ಪಂಚಾಕ್ಷರಶಾಸ್ತ್ರಿಗಳವರಿಂದ ಸಕ್ರಮವಾಗಿ ನಡೆಯಿತು. ಆರಮನೆಯ ಮಧ್ಯಭಾಗದಲ್ಲಿ ಕೃಂಗರಿಸಿದ ಕಲ್ಯಾಣಮಂಟಪದಲ್ಲಿ ಶ್ರೀ ಪಂಚಕಲಶಸ್ಥಾಪನಪೂರ್ವಕ ಕಂಕಣಧಾರಣ, ಗುದಜೀರಿಕಾವ ಕೀರ್ಣನ, ಕನ್ಯಾದಾನ, ಮಾಂಗಲ್ಯಧಾರಣ, ಪಾಣಿಗ್ರಹಣ, ಅಕ್ಷ ತಾರೋಪಣ, ಸಪ್ತಪದಿ ಅರುಂಧತೀದರ್ಶನಾದಿ ಸಕಲವಿಧಿಗಳು ವಿಶೇಷ ಸಂಭ್ರಮದಿಂದ ಜರುಗಿದವು. ಈ ಕಲ್ಯಾಣಮಹೋತ್ಸ ವಕ್ಕೆ ಧಣೇಸೂರ, ಅಲ್ಲಿ, ಅಮರೇಶ್ವರ ಮುದಗಲ್ಲು ಗ್ರಾಮಗಳ ಶ್ರೀ॥ ಸಾ॥ ಬ್ರು॥ ಪಟ್ಟ ಚರಾಧಿಕಾರಿ ದೇಶಿಕಸ್ವಾಮಿಗಳವರೂ ಸುಪ್ರ ಸಿದ್ಧ ಪಂಡಿತರೂ, ಶಾಸ್ತ್ರಿಗಳೂ, ನೈದಿಕರೂ ಆಗಮಿಸಿದ್ದರು. ಗುಡಗುಂಟಿ ಸಂಸ್ಥಾನಾಧಿಕಾರಿಗಳಾದ ರಾಜಾ ಜಡಿಕೋಮನಾಯಕ ಸರ್ಜಾಬಹದ್ದೂರವರು ತಮ್ಮ ರಾಜಸಿಬ್ಬಂದಿಯೊಡನೆ ಆಗಮಿಸಿ ಮಂಟಪರೋಧಿಯನ್ನುಂಟುಮಾಡಿದ್ದರು. ದಿವಿಜಾ ಆಫೀಸರರೂ, ಮುನ್ಸಿಫರೂ, ತಹಸೀಲದಾರರೂ, ಪೋಲೀಸ ಅಧಿಕಾರಿಗಳೂ, ಸಿಕೀಲರೂ, ವಕೀಲರಾದಿಯಾಗಿ ಶ್ರೀಮಂತರೇ ಮೊದಲಾದ ಪ್ರತಿ ಷ್ಠಿತ ಮಹಾಜನಗಳೂ ಕಾರ್ಯೋತ್ಸವಭಾಗಿಗಳಾಗಿದ್ದರು. ಈ ಮಂಗಲಮಹೋತ್ಸವದಲ್ಲಿ ೩೦ ಸಾವಿರ ಜನರಿಗೆ ಮೃಷ್ಟಾನ್ನ ಭೋಜನ ಸಂತರ್ಪಣೆಯು ಬಹು ಸಂಭ್ರಮದಿಂದ ನೆರವೇರಿತು. ವೀರಕೈವ ನರಪಾಲರಡ್ಡಿ ಕುಲದೀಪಕರೂ, ರಾಜಮಂಶೋತ್ತನ್ನ ರೂ, ಸಜ್ಜನ ೧೩ ಗ್ರಾಮಗಳ ಧೊರೆಗಳೂ ಆಗಿರುವ ಶ್ರೀಮಾ ರಾಜಾ ವೆಂಕಟರಾವ ಬಹದ್ದೂರವರು ತಮ್ಮ ಜ್ಯೇಷ್ಠಪುತ್ರರತ್ನರ ವಿವಾಹಸುಮಹೋತ್ಸವದಲ್ಲಿ ಆಸ್ಥರಿಸಾದ ಆಸ್ಥಸಂತರ್ಪಣೆ, ಗುರು ಜನಗಳನ್ನೂ ವೈದಿಕರನ್ನೂ, ಮಾಜೀಶ್ವರರನ್ನೂ ಮಾನಿವಪ್ರಜೆ ಗಳಿಂದಲೂ ವಸ್ತ್ರಾಭರಣಗಳಿಂದಲೂ ತೃಪ್ತಪಡಿಸಿದರು. ವಿವಾಹ ದಿವಸ (ತಾ|| ೨೬—೫—೩೮ ಗುರುವಾರ) ಸಾಯಂಕಾಲ ಅತ್ಯಂತ ಸುಂದರವಾಗಿ ರಚಿಸಿದ ರಾಜಪರಬಾರ ಪೆಂಡಾಲಿನಲ್ಲಿ ಸಭೆಯು ಕೀರ್ತು. ೪ ಸಜೆಗೆ ಗುವೆಗುಂಟೆ ಸಂಸ್ಥಾನಿಕರು, ದಿವಿಜ ಆಫೀಸರರೂ, ಜಡ್ಜ್‌ರೂ, ಪೋಲೀಸ ಅಧಿಕಾರಿಗಳೂ, ಸಿಕೀಲರೇ ಮೊದಲಾದ ಸರಕಾರಿ ಅಧಿಕಾರಿಗಳೂ, ಸೂತನಜೀಗ ರಾಜ ಶ್ರೀಮಾನ್ ಡಿ. ವೀರಾರೆಡ್ಡಿ, ಡಿ. ಕುಮಾರರೆಡ್ಡಿ ಬಿ ಎ, ಎಲ್‌ಎಲ್.ಬಿ., ಸಿಕೀಲರೂ ತಮ್ಮ ಕುಹಾಜನಗಳೊಡನೆ ಆಗಮಿ ಸಿದ್ದರು. ವಿದ್ಯುದ್ದೀಪಾವಳಿಗಳಿಂದ ವಿರಾಜಿಸುತ್ತಿದ್ದ ಮಂಟಪ ದೆಲ್ಲಿ ಊಡಿಸಿದ ಸಭೆಯ ವರ್ಣನೆಯನ್ನು ಬಣ್ಣಿಸಲಶಕ್ಯವಾಗಿತ್ತು. ಸುಪ್ರಸಿದ್ಧ ನರ್ತಕಿಯರ ಗಾನಕಲಾಪಗಳೂ, ವೇಶ-ವಿವೇಶಿಯ ವಾದ್ಯಗಾರರ ವಾದನಗಳೂ, ಪರಮಾನಂದಗೊಳಿಸಿದವು. ಶಿರೋಳ ಬ್ರಹ್ಮಶ್ರೀ ವೇ॥ ಶ್ರೀಪಂಚಾಕ್ಷರಶಾಸ್ತ್ರಿಗಳವರು ನೂತನ ದೆಂಪತಿಗಳಿಗೆ ಮಂಗಳಾಶೀರ್ವಾದವನ್ನು ಕೋರಿ ಭಾಷಣಮಾಡಿ ದರು. ರಾಯಚೂರ್ ಬೋರ್ಡ್ ಹಾಯಸ್ಕೂಲ್ ಕನ್ನಡ ಅಂಧ್ರ ಪ್ರಧಾನಸಂಡಿತರಾದ ವಿದ್ವಾ ಕೆ. ಯಂ ಕರಿಬಸವಶಾಸ್ತ್ರಿಗಳವರು ಮತ್ತು ಬಳ್ಳಾರಿ ವೀರಶೈವ ಸ್ಕೂಲ್ ಹೆಡ್‌ಮಾಸ್ಟರ್ ಎಂ. ರಾಜಯ್ಯನವರು ನೂತನದಂಪತಿಗಳಿಗೆ ಯಶೋಭಿವೃದ್ಧಿ ಪರವಾದ 'ನವರತ್ನಮಾಲಾ' 'ಪಂಚರತ್ನ' 'ಪದ್ಯಾವಳಿ' ಗಳನ್ನು ಕನ್ನಡ-ತೆಲಗು-ಇಂಗ್ಲೀಷ ಭಾಷೆಗಳಲ್ಲಿ ಮನೋಹರವಾಗಿ ಮುದ್ರಿಸಿ ತಂದು ಸಭೆಯಲ್ಲಿ ಓದಿ ಅರ್ಪಿಸಿದರು. ಬಳಿಕ ಸಭೆಯು ವಿಸರ್ಜಿಸಲ್ಪ ಟ್ಟಿತು. ಮರುದಿವಸ ತಾ॥ ೨೭—೫—೩೮ ಶುಕ್ರವಾರ ರಾತ್ರಿ ನೂತನದಂಪತಿಗಳ ಮಹೋತ್ಸವವು ಸುವರ್ಣರಜತಾಭರಣಗಳಿಂದ ಶೋಭಿಸುತ್ತಿದ್ದ ಪಲ್ಲಕ್ಕಿಯಲ್ಲಿ ವಿಶೇಷ ವೈಭವದಿಂದ ನೆರವೇರಿತು. ನಾನಾವಿಧವಾದ ಮದ್ದು-ಬಾಣ-ಬಿರುಸು ತಾರಾಮಂಡಲಗಳ ಚಮ ತ್ಕೃತಿಯು ಜನಸಾಗರವನ್ನು ಚಕಿತಗೊಳಿಸುತ್ತಿತ್ತು. ಆರಮನೆಯ ಪರಿವಾರವು ಮೋಟಾರಕಾರುಗಳಲ್ಲಿ ಸಿಸ್ತಿನಿಂದ ಸಾಗಿತ್ತು. ಈ ಕಲ್ಯಾಣಮಹೋತ್ಸವವು ಅತಿ ರಮಣೀಯವಾಗಿ ಪರಿಸಮಾಪ್ತ ಯಾಯಿತು. ಧರ್ಮಾಭಿಮಾನಿಗಳಾದ ಶ್ರೀಮಾ ರಾಜಾ ವೆಂಕಟೆ ರಾವ ಬಹದ್ದೂರವರು ತಮ್ಮ ಪಂಚೀಯರಾಜಪದ್ಧತಿಯಂತೆ ಈ ಮಹೋತ್ಸವವನ್ನು ನೆರವೇರಿಸಿದರು, ಈ ಸಮುಯದಲ್ಲಿ ಪಂಡಾ ಡಾರ್ಯ ಪ್ರಭಾಪತ್ರಿಕೆಗೆ ಸ್ವೀಕಾರ ಧನವನ್ನು ಅರ್ಪಿಸಿದರು, ಶ್ರೀಮಾ ರಾಜಾ ವೆಂಕಟರಾವಬಹದ್ದೂರವರಿಗೂ, ಇವರ ಕುಟುಂಬವರ್ಗಕ್ಕೂ, ನೂತನದಂಪತಿಗಳಿಗೂ ಶ್ರೀಜಗದಾಚಾರ್ಯ ಧನವತ್ಪಾದವರದು ದೀರ್ಘಾಯುಷ್ಯವನ್ನೂ, ಸಕಲ ಸಾಭಾಗ್ಯ ಸಮೃದ್ಧಿಯನ್ನೂ ಉಂಟುಮಾಡಲೆಂದು ಪ್ರಾರ್ಥಿಸುವ,

ಪ್ರತ್ಯಕ್ಷದರ್ಶಿ.

ವಿವಾಹಸಮಾರಂಭ ಬೆಂಗಳೂರು ಸಿಟಿ

ಬೆಂಗಳೂರು ಅರಕೇಪೇಟೆ ವೀಶವಸಲೆಪ್ಪು ಶ್ರೀರುದ್ರಪ್ಪಶೆಟ್ಟಿರ ಜರ ದಿರಸಪುತ್ರಿಯಾದ ಚಿ॥ ಸಾ॥ ಕುಮಾರಿ ಸರೋಜದೇವಿಯನ್ನು ಸೀನಿಯರ್ ಅಸಿಸ್ಟೆಂಟ್ ಕಮಿಶನರ್ ಶ್ರೀ ಜಿ. ಮಲ್ಲಿಕಾರ್ಜುನಯ್ಯನವರ ಜ್ಯೇಷ್ಠಪುತ್ರರಾದ ಚಿ॥ ಸ॥ ಸಾಂಬಶಿವಯ್ಯ, ಬಿ.ಎ., ಬಿ.ಎಸ್.ಸಿ., ಇವರಿಗೆ ಕೊಟ್ಟು ವಿವಾಹವು 1938ನೆಯ ಮೇ 26 ನೇ ತಾ॥ ಗುರುವಾರ ಬೆಂಗಳೂರು ಮಲ್ಲೇಶ್ವರದ ಶೆಟ್ಟಿರ ಮನೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗಿತು.

ಈ ಸಮಾರಂಭಕ್ಕೆ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿರವರು, ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಪಿ. ಮಹದೇವಯ್ಯನವರು, (ರಿಟೈರ್ಡ್ ಚೀಫ್ ಜಸ್ಟೀಸ್), ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಶಂಕರನಾರಾಯಣರಾಯರು, ಬೆಂಗಳೂರು ಅಡಿಷನಲ್ ಡಿಸ್ಟ್ರಿಕ್ಟ್ ಜಡ್ಜರಾದ ಶ್ರೀ ಜಿ. ಪರಮಶಿವಯ್ಯನವರು, ದಿವಾನರ ಸೈನೆಟ್ ಸೆಕ್ರೆಟರಿಯವರಾದ ಸರೋನವರುಗಳು, ಧರ್ಮಪ್ರಕಾಶ ಶ್ರೀ ಬಿ. ವಿ. ಕೃಷ್ಣಯ್ಯಂಗಾರ್ರವರು, ಲೋಕಶೇವಾಸಕ್ತ ರಾವ್‌ಬಹದ್ದೂರ್ ಬಿ. ಕೆ. ಗೆಂಪಾವಾರ್ರವರು, ದರ್ಮಪ್ರಕಾಶ ಶ್ರೀ ಸಜ್ಜನರಾಯರು, ಸಾಹುಕಾರ್ ಪಿರಿಯಣ್ಣನವರು, ಮುನಿಸಿಪಲ್ ಕಮಿಶನರ್ ಶ್ರೀ ನಾರಾಯಣರಾಯರು, ಮುನಿಸಿಪಲ್ ಪ್ರೆಸಿಡೆಂಟ್ ಶ್ರೀ ಎಸ್. ಜಾಲಪ್ಪಶೆಟ್ಟಿಯವರು, ಮೊದಲಾದ ಪ್ರಮುಖರೂ, ದೇಶವಶಟ್ಟರು ಯಜಮಾನರೂ ವಕೀಲರೂ, ನರ್ತಕಮಂಡಲಿ ಯನರೂ, ಸ್ವಮತ ಪರಮತದ ಅನೇಕ ಮಹಿಳೆಯರೂ ನೆರೆದು, ಕಲ್ಯಾಣಮಂಟಪವು ಅತ್ಯಂತ ಶೋಭಾಯಮಾನವಾಗಿದ್ದು ತು.

ಕಲ್ಯಾಣಗೃಹವು ಸಿಯೋಜ್ ಲೈಟ್ ಎಂಬ ನೂತನವಾದ ನಾನಾಬಣ್ಣಗಳಿಂದಕೂಡಿದ ಉದ್ದನಾದ ವಿದ್ಯುಚ್ಛಕ್ತಿಯ ದೀಪ ಗಳಿಂದ ಅಲಂಕರಿಸಲ್ಪಟ್ಟು ಮುಖ್ಯಭಾಗವು ನಭೂತರೆ ನಾನಾಂಕಿತ ಅಕ್ಷರಗಳಿಂದ ಕಂಗೊಳಿಸುತ್ತಿತ್ತು.

ಅರಕೇಪೇಟೆ ವೀಗುರುಲಿಂಗಶಾಸ್ತ್ರಿಗಳವರ ಪೌರೋಹಿತ್ಯದಿಂದ ಪಂಚಕಲಶ ಸ್ಥಾಪನಪೂರ್ವಕ ವಿವಾಹವು ವಿಘ್ನರಹಿತವಾಗಿ ಜರುಗಿದ ಬಳಿಕ ರಂಭಾಪುರೀ ಶ್ರೀಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಯಿಂದ ಆಸುಗ್ರಹೀತ ನಾವ ನೂತನಾಂಬರಗಳನ್ನೂ, ಫಲಮಂತ್ರಾಕ್ಷತೆಗಳನ್ನೂ ನಧೂವರಿಗೆ ಅರೀರ್ವದಿಸಲ್ಪಟ್ಟವು. ಆನಂತರ ಅಭಾಚಾರ್ಯರಾದ ಹುಣಸಮಾ ರನಹಳ್ಳಿ ಸಂಸ್ಥಾನವಿದ್ವಾ ಪಟ್ಟದ ಶ್ರೀ ಸಂಜೇಸ್ವಾಮಿಗಳವರು ವಧೂವರರಿಗೆ ರಜತಪಾತ್ರೆಯಲ್ಲಿ ಆಶೀರ್ವದಿಸಿ ಏಜೆಂಟರಮೂ ಲಕ ಕಳುಹಿಸಿದ್ದರು. ಬೆಂಗಳೂರು ಮುಪಂತಿನ ಮುನಿ ಪಟ್ಟು ಧ್ಯಕ್ಷರಾದ ಷ॥ ಬ್ರ॥ ಶ್ರೀ ಗಂಗಾವರ ಶಿವಾಚಾರ್ಯ ಸ್ವಾಮಿಗಳ ಪರಿವಾರ ಬಂದಿದ್ದ ಫಲಮಂತ್ರಾಕ್ಷತೆಗಳಿಂದ ವಧೂವರರು ಆಶೀರ್ವ ದಿಸಲ್ಪಟ್ಟರು. ಆನಂತರ ಸ್ಥಳೀಯ ಪರಸ್ಥಳೀಯ ಅವಸ್ಥಮತ ಪರಮಾಪೀಯರು ರತ್ನಾಭರಣಗಳನ್ನೂ ರಜತಪಾತ್ರೆಗಳನ್ನೂ, ದಿವ್ಯಾಂಬರಗಳನ್ನೂ ಒಸಿಸಿದರು. ತರುವಾಯ ಮೈಸೂರು ನೀರಶೈವ ವಿದ್ಯಾಭಿವೃದ್ಧಿ ಫಂಡಿಗಾಗಿ ರೂ. 10, ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ

ಶ್ರೀಮನ್ಮಹಾರಾಜರವರ

೫೫ ನೆಯ ವರ್ಧಂತೀಮಹೋತ್ಸವ

ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್
ಮಹಾಪ್ರಭುಗಳವರು

ಪಂಚಾಚಾರ್ಯಪ್ರಭಾ.

೧೯೩೮ ನೆಯ ಜೂನ್ ತಾ|| ೧೩ ನೇ ಸೋಮವಾರ

ಶ್ರೀಮನ್ಮಹಾರಾಜರವರ ೫೫ನೆಯ ವರ್ಧಂತೀಮಹೋತ್ಸವ.

ಶ್ರೀಮತ್ಕರ್ಣಾಟಕ ರತ್ನಸಿಂಹಾಸನಾಧೀಶ್ವರ ನಾಲ್ವಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುವರ್ಯರ ೫೫ನೆಯ ವರ್ಷ ವರ್ಧಂತೀ ಮಹೋತ್ಸವವು ಕಳೆದ ಬುಧವಾರ (ತಾ|| ೯-೬-೧೯೩೮) ದಿವಸ ಅಸಾಧಾರಣವೈಭವದಿಂದ ನಡೆಯಿತು. ಮಹಾಪ್ರಭುಗಳು ಪ್ರಾತಃಕಾಲ ಮಂಗಲಸ್ನಾನವನ್ನಾಚರಿಸಿದ ಮೇಲೆ ನಿತ್ಯಕರ್ಮಾನುಷ್ಠಾನವನ್ನೊಕುಲಗುರುಗಳ ಪೂಜೆಯನ್ನೊನೆರವೇರಿಸಿ, ಶ್ರೀಮದ್ಯುವರಾಜ, ಜಯಚಾಮರಾಜೇಂದ್ರ ಒಡೆಯರವರಿಂದೊಡಗೂಡಿ ದಿವ್ಯವಾದ ಉಡುಪುಗಳಿಂದಲಂಕೃತರಾಗಿ ೧೦॥ ಘಂಟೆ ಸಮಯದಲ್ಲಿ ಸಜ್ಜೆಗೆದಯಮಾಡಿಸಿದರು. ಪ್ರಭುವರ್ಯರು ರತ್ನಖಚಿತವಾದ ಭದ್ರಸಿಂಹಾಸನಾಲಂಕರಿಸಿದೊಡನೆ ಆಯುರ್ವೇದ ಸೂಚಕಗಳಾದ ೫೫ ಕುಶಲ ತೋಪುಗಳು ಹಾರಿಸಲ್ಪಟ್ಟವು. ಶ್ರೀಮದ್ಯುವರಾಜರವರು, ಶ್ರೀ ಜಯಚಾಮರಾಜೇಂದ್ರ ಒಡೆಯರವರು ಬಲಪಾರ್ಶ್ವದಲ್ಲಿ ಸುವರ್ಣರಜತಮಯವಾದ ಪೀಠಗಳನ್ನಲಂಕರಿಸಿದರು. ರಾಜಕುಮಾರರು, ಅಖಿಲರಾಜಬಂಧುಗಳು, ಸಚಿವೋತ್ತಮಸಚಿವರು, ಸರ್ಕಾರಿ ಉದ್ಯೋಗಿಗಳು, ಪ್ರಜಾಪ್ರಮುಖರು, ರಾಜಭಕ್ತಿದ್ಯೋತಕವಾದ ಮುದ್ರೆಗಳಂದೊಡಗೂಡಿ ಮುಜರೆಯನ್ನೊಮಾಡಿ ಅವರವರ ನಿಯಮಿತಸ್ಥಳಗಳಲ್ಲಿ ಕುಳಿತುಕೊಂಡರು. ಸುವರ್ಣವೇತ್ರಧಾರಿಗಳಾದ ವಂದಿಮಾಗಧರು ಉಚ್ಚಧ್ವನಿಯಿಂದ ಸ್ತುತಿಪಾಠಗಳನ್ನೊಪಠಿಸುತ್ತಿದ್ದರು. ವಾದ್ಯಧ್ವನಿಗಳೂ, ಗಾಯಕರ ಗಾನತರಂಗಗಳೂ, ವೇಶ್ಯಾಂಗನೆಯರ ನರ್ತನಗಳೂ ಸಭಿಕರ ಮನಸ್ಸಿಗೆ ಅನಂದವನ್ನುಂಟುಮಾಡಿದವು. ರಾಜಪುರೋಹಿತರು ಫಲಪೂಜೆಯನ್ನು ಮಾಡಿದರು. ಬ್ರಾಹ್ಮಣಸುವಾಸಿನಿಯರು ಫಲಾಕ್ಷತೆಗಳನ್ನೊಪ್ಪಿಸಿದ ಬಳಿಕ ಕ್ರಮದಿಂದ ಮಂತ್ರಾಕ್ಷತೆಗಳಿಂದಲೂ ವೈದಿಕವಿಧ್ಯುಕ್ತಮಂತ್ರಗಳಿಂದಲೂ ಫಲಮಂತ್ರಾಕ್ಷತೆಗಳು ಒಪ್ಪಿಸಲ್ಪಟ್ಟವು. ಶ್ರೀಮದ್ಯುವರಾಜರವರು ಮಹಾಪ್ರಭುಗಳಿಗೆ ಗಂಧಪುಷ್ಪಾಹಾರಾದಿಗಳನ್ನೊಪ್ಪಿಸಿದರು. ಸೈನ್ಯವು ರಾಜಭಕ್ತಿಯನ್ನು ತೋರ್ಪಡಿಸಿತು. ಸಭಿಕರಿಗೆ ಪುಷ್ಪಹಾರತಾಂಬೂಲಗಳು ಹಂಚಲ್ಪಟ್ಟವು. ಪ್ರಾತಃಕಾಲದ ಕಾರ್ಯಕಲಾಪಗಳೆಲ್ಲವೂ ಮುಗಿಯುವುದರೊಳಗಾಗಿ ಸುಮಾರು ಹನ್ನೆರಡು ಘಂಟೆಯಾಯಿತು. ವಾದ್ಯಗಳು ದಿಙ್ಮಂಡಲವನ್ನು ವ್ಯಾಪಿಸಿರಲು ಮಹಾಪ್ರಭುಗಳ ಸ್ವಾರಿಯು ಸೀಕದಿಂದಿಳಿದು ಸ್ವಸ್ಥಾನಕ್ಕೆ ವಿಜಯಂಗೈಸಿತು. ಸಾಯಂಕಾಲ ೫ಗಂಟೆ ಸಮಯದಲ್ಲಿ ಶ್ರೀಮನ್ಮಹಾರಾಜರವರು, ಶ್ರೀಮದ್ಯುವರಾಜರವರು, ರಾಜಕುಮಾರ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಅಲಂಕೃತವಾದ ಅಶ್ವಗಳನ್ನಾರೋಹಿಸಿದರು. ಚತುರಂಗಸೈನ್ಯವು ಶಿಸ್ತಿನಿಂದ ಮುಂದುವರಿಯಿತು. ನಡುವೆ ಶ್ರೀ ಜಯಚಾಮರಾಜೇಂದ್ರ ಒಡೆಯರು, ಬಲಪಾರ್ಶ್ವದಲ್ಲಿ ಶ್ರೀಮಹಾಪ್ರಭುಗಳು, ವಾಮಪಾರ್ಶ್ವದಲ್ಲಿ ಶ್ರೀ ಯುವರಾಜರವರು ವಿಜಯಯಾತ್ರಾರ್ಥಿಗಳಾಗಿ ಹೊರಟರುವ ಜಯಂತನಿಂದೊಡಗೂಡಿದ ಇಂದ್ರೋಪೇಂದ್ರರಂತೆ ಅಶ್ವಗಳ ಮೇಲೆ ಕಂಗೊಳಿಸುತ್ತಿದ್ದರು. 21 ಕುಶಲತೋಪುಗಳು ಹಾರಿಸಲ್ಪಟ್ಟವು. ಜನಸ್ತೋಮವು ಅರಮನೆಯಿಂದ ದಾರಿಯುದ್ದಕ್ಕೂ ಮೇರೆದಪ್ಪಿ ನಿಂತಿತ್ತು. ಪ್ರಭುವರ ಮಹಾವೈಭವವನ್ನು ನೋಡುವುದಕ್ಕಾಗಿ ವಿಮಾನಾರೂಢರಾಗಿ ಸಿತಕೋಲೋಕದಿಂದವರಿಸಿರುವರೋ ಎಂಬಂತೆ ಶೋಭಿಸುತ್ತಿರುವ ಶ್ರೀ|| ಶ್ರೀ ಚಾಮರಾಜೇಂದ್ರ ಭೂಪತಿಗಳ ಪ್ರತಿಕೃತಿಯ ಸಮಾಪಕ್ಕೆ ಉತ್ಸವವು ಬಂದು ಪದ್ಧತಿಪ್ರಕಾರ ದೊಡ್ಡಪೇಟೆ ಮಾರ್ಗದಿಂದ ಹೊಂಡದೆ ಪಶ್ಚಿಮಭಾಗಕ್ಕೆ ತಿರುಗಿ ಸಯ್ಯಾಜಿರಾವ್ ರೋಡಿನಲ್ಲಿ ಹಾಯ್ದು ಇರ್ವಿನ್‌ರೋಡಿನಿಂದ ಗೌರ್ನಮೆಂಟ್‌ಹೌಸಿಗೆ ತಲ್ಪಿತು. ದಾರಿಯುದ್ದಕ್ಕೂ ನಾಗರಕರು ತಮ್ಮ ತಮ್ಮ ಆಂಗಡಿಗಳನ್ನು ರಂಭಾಸ್ತಂಭಾದಿಗಳಿಂದ ಮನೋಹರವಾಗಿತ್ಕಂಗರಿಸಿ ನಿರೀಕ್ಷಿಸಿಕೊಂಡಿದ್ದು ಕಟಿಬದ್ಧರಾಗಿ ರಾಜಭಕ್ತಿಯುತವಾದ ಹರ್ಷಮುದ್ರೆಯಿಂದೊಡಗೂಡಿ ಮಹಾರಾಜ, ಯುವರಾಜ, ರಾಜಕುಮಾರರಿಗೆ ಪುಷ್ಪವೃಷ್ಟಿಗಳನ್ನೊಸ್ಪಿಸುತ್ತಿದ್ದರು. ತ್ರಿಮೂರ್ತಿಗಳಂತೆ ರಾರಾಜಿಸುತ್ತಿದ್ದ ರಾಜತ್ರಯವನ್ನು ಪ್ರಜೆಗಳು ನೋಡಿ ನೋಡಿ ರಾಜಭಕ್ತ್ಯುದ್ರೇಕದಿಂದ ಆನಂದಬಾಷ್ಪವನ್ನು ಸುರಿಸುತ್ತ ಜಯಜಯಕಾರವನ್ನು ಮಾಡುತ್ತಿದ್ದರು. ಗೌರ್ನಮೆಂಟ್‌ಹೌಸಿನಲ್ಲಿ ಸೈನ್ಯಮರ್ಯಾದೆಯು ನಡೆದಬಳಿಕ ಅಶ್ವಗಳಿಂದಿಳಿದು ವಿಶ್ರಾಂತಿಸೌಖ್ಯವನ್ನು ಪಡೆದರು. ಬಂದ ಅತಿಥಿಗಳು ಅಲ್ಪಾಹಾರದಿಂದ ತೃಪ್ತಿಗೊಂಡರು. ೧॥ ಘಂಟೆಗೆ ಸೈನ್ಯವು ಹಿಂದಿರುಗಿತು. ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ಭವ್ಯವಾದ ರಜತಮಯ ರಥದಲ್ಲಿಕುಳಿತುಕೊಳ್ಳಲು, ಶ್ರೀಜಯಚಾಮರಾಜೇಂದ್ರ ಒಡೆಯರವರು ಕುದುರೆಯಮೇಲೆ ಕುಳಿತುಕೊಂಡು ರಥದಮುಂದೆ ಪ್ರಯಾಣಬೆಳಸಿದರು.

ದೊಡ್ಡಪೇಟೆಯಲ್ಲಿ ಸಾಲುಸಾಲಾಗಿ ಅಲಂಕರಿಸಲ್ಪಟ್ಟಿರುವ ವಿದ್ಯುದ್ದೀಪಮಾಲಿಕೆಗಳು ರಾಜನೇವೆಗಾಗಿ ಬಂದ ನಕ್ಷತ್ರಮಾಲಿಕೆಗಳಂತೆ ಝಗಝಗಿಸುತ್ತಿದ್ದುವು. ಮುಂದುಮುಂದು ಬರುತ್ತಿರುವ ಅಶ್ವವನ್ನಾರೋಹಿಸಿದ ರಾಜಕುಮಾರರನ್ನೂ ರಜತರಥವನ್ನೇರಿ ಹಿಂದೆ ಬರುತ್ತಿರುವ ಉಭಯಪ್ರಭುಗಳನ್ನೂ ನೋಡಿ ಪ್ರಜೆಗಳು ನಲಿಯುತ್ತಿದ್ದರು. ರಾತ್ರಿ ೧೦॥ ಘಂಟೆ ಸಮಯಕ್ಕೆ ಉತ್ಸವವು ಅರಮನೆಯನ್ನು ತಲ್ಪಿತು. ಧರ್ಮರಾಜನಂತೆ ಧರ್ಮಬುದ್ಧಿಯಿಂದ ರಾಜ್ಯವನ್ನು ಪರಿಪಾಲಿಸುತ್ತ ಸಮಸ್ತ ಪ್ರಪಂಚಮಾನ್ಯರಾಗಿರುವ ಮಹಾಪ್ರಭುಗಳವರ ಇಂತಹ ವರ್ಧಂತೀಮಹೋತ್ಸವಗಳು ಇನ್ನೂ ಅನೇಕಾನೇಕವಾಗಿ ನೆರವೇರಲೆಂದು ಜಗನ್ನಿಯಾಮಕರಾದ ಪಾರ್ವತೀಪರಮೇಶ್ವರರನ್ನು ಪ್ರಾರ್ಥಿಸುತ್ತೇವೆ

ಮೈಸೂರು ಸಿಟಿ ಫರ್ಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರುವ ನೇ|| ಜೆ ಬಿ ವಲ್ಲಾರಾಧ್ಯರವರು ತಮ್ಮ ಜ್ಯೇಷ್ಠಪುತ್ರಿ ಚಿ|| ನೌ|| ರತ್ನಮ್ಮನನ್ನು ನಂಜನಗೂಡಿನ ಲೇಟ್ ಫರ್ಸ್ಟ್‌ಗ್ರೇಡ್ ಸ್ಟೀಡರ್ ವೇ|| ನಂಜುಂಡಾರಾಧ್ಯರವರ ಪುತ್ರರಾದ ವೇ|| ನಾಗಭೂಷಣಾರಾಧ್ಯರಿಗೆ ಕೊಟ್ಟು ರಾಜಧಾನಿಯಲ್ಲಿರುವ ತಮ್ಮ ಭವ್ಯವಾದ ಭವನದಲ್ಲಿ ಇದೇ ತಿಂಗಳು ೬ನೆಯ ತಾರೀಖಿನ ದಿವಸ ವಿವಾಹಮಹೋತ್ಸವವನ್ನು ಅಭೂತಪೂರ್ವ ವೈಭವದಿಂದ ನೆರವೇರಿಸಿದರು. ವಿವಾಹಸಮಯದಲ್ಲಿ ಅನೇಕ ಜನ ಸ್ಥಳಸರಸ್ಥಳಗಳ ಪ್ರಮುಖಜನರು ಆಗಮಿಸಿದ್ದರು. ಶ್ರೀ ರಂಭಾಪುರೀಪೀಠದ ಜಗದ್ಗುರುಗಳವರು ವಧೂವರರಿಗೆ ಸೀತಾಂಬರಾದಿ ನೂತನವಾಂಬರಗಳನ್ನು ಆಶೀರ್ವದಿಸಿ ಕಳುಹಿಸಿದ್ದರು. ೧೦ನೆಯ ತಾರೀಖಿನ ದಿವಸ ಆರತ್ಯಕ್ಷತಮಹೋತ್ಸವವು ಬಹು ಆಡ್ಡಹಾಸದಿಂದ ನೆರವೇರಿತು. ಆ ಸಮಯದಲ್ಲಿ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರೇ ಮೊದಲಾದ ಅನೇಕ ಸರಕಾರಿ ಅಧಿಕಾರಿಗಳೂ, ಡಾ|| ಸರ್ ಕೆ ಪಿ ಪುಟ್ಟಣ್ಣಶೆಟ್ಟರು ದಿ|| ಬ|| ರಾಜಧರ್ಮಪ್ರವೀಣ ಮಿ|| ಪಿ ಮಹದೇವಯ್ಯನವರು ಇವರೇ ನೊದಲಾದ ಸುಪ್ರಸಿದ್ಧರುಸಹ ಆಗಮಿಸಿದ್ದರು. ಆರಾಧ್ಯರವರು ಮಾಡಿದ ಸಕಲ ಏರ್ಪಾಡುಗಳು ವರ್ಣನಾತೀತವಾಗಿದ್ದವು. ಒಟ್ಟಿಗೆ ಈ ವಿವಾಹಮಹೋತ್ಸವವು ರಾಜಧಾನಿಯಲ್ಲಿ ಮಾದರಿಯಾಗಿ ಪರಿಣಮಿಸಿತು. ನೂತನವಧೂವರರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಭಾಗ್ಯಾದಿ ಸಕಲಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಹಾರೈಸುತ್ತೇವೆ

ಸ್ವೀಕಾರ.

ಮೈಸೂರು ಸಿಟಿ ಫರ್ಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ವೇ॥ ಜೆ ಬಿ. ಮಲ್ಲಾರಾಧ್ಯರವರು ತಮ್ಮ ಜ್ಯೇಷ್ಠ ಪುತ್ರ ಹ॥ ಕುಂ॥ ಶೋ॥ ಚಿ॥ [ಸೌ॥ ರತ್ನಮ್ಮನನ್ನು ನಂಜನಗೂಡಿನ ವೇ॥ ನಾಗಭೂಷಣಾರಾಧ್ಯರಿಗೆ ಕೊಟ್ಟು ಇದೇ ತಿಂಗಳು ೬ ನೆಯ ತಾರೀಖು ಸೋಮವಾರ ದಿವಸ ರಾಜಧಾನಿಯಲ್ಲಿರುವ "ಪಾರ್ವತೀ ವಿಲಾಸ" ವೆಂಬ ತಮ್ಮ ನೂತನಭವನದಲ್ಲಿ ವಿವಾಹ ಮಹೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 5 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ರಾಯಚೂರು ಡಿ॥ ಗುಡಿಗುಂಟೆ ಸಂಸ್ಥಾನಕ್ಕೆ ಸೇರಿದ ಜಹಾಗೀರ ಗೆಜ್ಜಲಗಟ್ಟ ಶ್ರೀಮಾನ್ ರಾಜಾ ವೆಂಕಟ ರಾವ ಬಹದ್ದೂರವರು ತಮ್ಮ ಜ್ಯೇಷ್ಠ ಪುತ್ರರತ್ನ ಚಿ॥ ಸ॥ ಶರಣಬಸವರಾಜರಿಗೆ ಬಳ್ಳಾರಿ ಡಿ॥ ರಾಯದುರ್ಗ ತಾಲೂಕು ಹನಮಾಪುರಗ್ರಾಮದ ಶ್ರೀಮಾನ್ ಡಿ. ವೀರಾರೆಡ್ಡಿಯವರ ಸುಪುತ್ರಿ ಚಿ॥ ಸೌ॥ ಬಸವರಾಜೇಶ್ವರಿ ಎಂಬ ಕನ್ಯಾಮಣಿಯೊಡನೆ ವೈಶಾಖ ಬ॥ ೧೨ ಗುರುವಾರ ದಿವಸ ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 3 ರೂಪಾಯಿಗಳು ಲಕ್ಷ್ಮೀಪುರ ಜಹಾಗೀರದಾರರ ಶ್ರೀಮಾನ್ ರಂಗನಗೌಡರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ಅರಳೆಪೇಟೆ ದೇಶದಕೆಟ್ಟರು ಮ॥ರಾ॥ ರುದ್ರಪ್ಪಶೆಟ್ಟರ ಪುತ್ರಿ ಹ॥ ಕುಂ॥ ಶೋ॥ ಚಿ॥ ಸಾ॥ ಕುಮಾರಿ ಸರೋಜದೇವಿಯನ್ನು ಸಿ'ನಿಯರ್ ಅಸಿಸ್ಟಾಂಟರ್ ಮ॥ರಾ॥ ಜಿ ಮಲ್ಲಿಕಾರ್ಜುನಯ್ಯನವರ ಪುತ್ರ ಚಿ॥ಸ॥ ಸಾಂಬಶಿವಯ್ಯ, ಬಿ ಎ., ಬಿ ಎಸ್‌ಸಿ, ಎಂಬವರಿಗೆ ಕೊಟ್ಟು ವಿಶೇಷ ವೈಭವದಿಂದ ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 3 ರೂ ಗಳು ವೇ॥ ಎನ್. ರುದ್ರಯ್ಯನವರ ದ್ವಾರಾ ತಲ್ಪಿರುತ್ತವೆ

ಹೊನ್ನಾಳಿ ತಾಲೂಕು ನೇಮತಿಯಲ್ಲಿರುವ ಮ॥ರಾ॥ ಹಳ್ಳೂರು ಬನ್ನಬಸವಪ್ಪನವರ ಪುತ್ರ ಹ॥ಕುಂ॥ಶೋ॥ ಚಿ॥ ಸೌ॥ ವಾಕ್ಸಾಯಣಮ್ಮನನ್ನು ಆರಸೀಕೆರೆ ತಾ॥ ಜಯಚಾಮರಾಜಪುರದ ಸಾ॥ ಮ॥ ರಾ॥ ವೀರಪ್ಪಶೆಟ್ಟರ ಪುತ್ರ ಚಿ॥ ಸ॥ ಸಾ॥ ವಿ॥ ರುದ್ರಪ್ಪಶೆಟ್ಟಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ ಕಾರ್ಯದರ್ಶಿಗಳಾದ ಮ॥ ರಾ॥ ಕುಡುಪಲಿ ಬಸವಲಿಂಗಪ್ಪನವರು ತೆಗೆಯಿಸಿದ 2 ರೂ ಗಳು ವೇ॥ ಶಿವಕಥಾಪಂಡಿತ ಗುಬ್ಬಿ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ

ತೀರ್ಥಹಳ್ಳಿ ತಾ॥ ಶ್ರೀಮಳಲಿಮಠದಲ್ಲಿ ಇದೇ ಜ್ಯೇಷ್ಠ॥ ಶು॥ ೩ ಬುಧವಾರದಿವಸ ನೆರವೇರಿದ ಪಟ್ಟಾಧಿಕಾರ ದ್ವಾದಶ ವಾರ್ಷಿಕೋತ್ಸವದಲ್ಲಿ ಪ್ರಭಾಪೋಷಣಾರ್ಥವಾಗಿ ಮಠದ ವಿಚಿಂಟರಾದ ವೇ॥ ನಂಜುಂಡಶಾಸ್ತ್ರಿಗಳು ತೆಗೆಯಿಸಿದ 2 ರೂ ಗಳು ವೇ॥ ಗುಬ್ಬಿ ಶಿವಕಥಾ ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ದೇವದುರ್ಗ ತಾ॥ ಅರಿಕೇರಿ ನಾಗೋಲಿಮಠದ ವೇ॥ ಕರಬಸವಯ್ಯನವರು ತಮ್ಮ ಸಹೋದರ ಬಸವಯ್ಯನವರ ಪುತ್ರ ಚಿ॥ ಗುರುಲಿಂಗಯ್ಯನನ್ನು ದತ್ತಪುತ್ರನನ್ನಾಗಿ ಸ್ವೀಕರಿಸಿ ದೀಕ್ಷೆಯನ್ನು ಮಾಡಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 1 ರೂ ಯು ವೇ॥ ವಿಜಾಪುರಜಿಲ್ಲೆಯ ಬಸವರಾಜಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಸುಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾಗಿರುವ ಶ್ರೀ ನಾಗೇಶ್ವರಅಯ್ಯರವರು ವಿದುರಾಶ್ವತ್ಥ ವಿಚಾರಣ ಸಮಿತಿಯಲ್ಲಿ ಭಾಗವಹಿಸಿರುವದರಿಂದ ಅವರ ಸ್ಥಾನಕ್ಕೆ ಮೈಸೂರು ಡಿ॥ ಜಡ್ಜರಾದ ಶ್ರೀ ಸಿಂಗಾರವೇಲು ಮೊದಲಿಯಾರ್‌ರವರು ನಿಯಮಿಸಲ್ಪಟ್ಟಿರುವರು. ಶ್ರೀ॥ ಎಚ್. ಕೆ ವೀರಬಸವಯ್ಯನವರು ಮೈಸೂರು ಡಿ॥ ಜಡ್ಜರವರಾಗಿ ನಿಯಮಿಸಲ್ಪಟ್ಟಿರುವರು.

ಜರ್ಮನ್ ಚಕ್ರಾಧಿಪತ್ಯ

ಹಿಟ್ಲರನ ಆಶಯ

ಸಂಡೇ ಎಕ್ಸ್‌ಪ್ರೆಸ್ಸಿನ ಪ್ರತಿನಿಧಿಗಳೊಬ್ಬರು ಬಹಳ ವರ್ಷಗಳ ಕೆಳಗೆ ಹಿಟ್ಲರನನ್ನು ನೋಡಿದ್ದರು. ಆಗಲೇ ಹಿಟ್ಲರನು ತನ್ನ ಆಶೋತ್ತರಗಳನ್ನು ಹೊರಗೆಡಹಿದ್ದನು. ಆಗ ಆತನು ಹೇಳಿದ ಘಟನೆಗಳೆಲ್ಲವೂ ಇಂದು ನಡೆದಿವೆ.

(೧) ಜರ್ಮನಿಯು ಲೀಗನ್ನು ಬಿಟ್ಟಿದೆ.

(೨) ರೈನ್‌ಲ್ಯಾಂಡ್ ಪ್ರದೇಶವನ್ನು ಜರ್ಮನಿಯು ಆಕ್ರಮಿಸಿದೆ

(೩) ಪೋಲೆಂಡ್ ತೀರದಲ್ಲಿ ಜರ್ಮನಿಯ ಕೈವಾಡ ವಿರುವಂತೆ ಒಂದು ಒಪ್ಪಂದವಾಗಿದೆ

(೪) ಜರ್ಮನ್ ರಾಷ್ಟ್ರ ಸೇನಾಪಕ್ಷದಲ್ಲಿ ಆಸ್ಟ್ರಿಯಾವು ಸೇರಿಕೊಂಡಿದೆ

ಹಿಟ್ಲರನು ಹಿಂದಕ್ಕೆ ಹೋಗುವವನಲ್ಲ ಎಡಕ್ಕೂ ಬಲಕ್ಕೂ ಅಲಗಾಡುವವನಲ್ಲ ನೇರವಾಗಿ ಗುರಿಯಿಟ್ಟ ಮಾರ್ಗದಲ್ಲೇ ಹೆಜ್ಜೆ ಇಡುವ ಮೂರ್ತಿಯಿದು

ಸರ್ವಭಕ್ಷಕ ಸ್ವಭಾವ

ಹಿಟ್ಲರನ ಆಶೋತ್ತರಗಳು ಒಬ್ಬ ಸರ್ವಭಕ್ಷಕನ ಸ್ವಭಾವದಂತೆ ಎಲ್ಲಾ ರಾಜ್ಯಗಳನ್ನು ಅಂದರೆ ಯೂರೋಪು ಯೂರೋಷನ್ನೇ ತನ್ನ ಅಧೀನಪಡಿಸಿಕೊಳ್ಳಬೇಕೆಂದು ಈತನ ಹೃದಯಪೂರಿತ ಆಶಯ. ಅಂದು ಆತನು ಪತ್ರಿಕಾಪ್ರತಿನಿಧಿಗೆ ಹೇಳಿದ ಎಸ್ಟೋ ಅಂಶಗಳು ಹಿಟ್ಲರನಿಂದ ಇನ್ನು ಕಾರ್ಯಗತವಾಗಿಲ್ಲ ಅವುಗಳು ಇವು ಸರ್ವಭಕ್ಷಕ ಸ್ವಭಾವದ ಈ ಹಿಂದವು ಜರ್ಮನಿಯನ್ನು ಒಂದು ದೊಡ್ಡ ಚಕ್ರಾಧಿಪತ್ಯವನ್ನಾಗಿ ಮಾಡಲು ಹಠತೊಟ್ಟಿದೆ ಬಾಲ್ಟಿಕ್ ಸಮುದ್ರದಿಂದ ಹಿಡಿದು ಕಪ್ಪುಸಮುದ್ರದವರೆಗೂ ಈತನು ಜರ್ಮನ್ ಚಕ್ರಾಧಿಪತ್ಯದ ಪೂರ್ವೋತ್ತರ ಎಲ್ಲೆಗಳನ್ನು ನಿರ್ಮಿಸಿರುವನು. ಜರ್ಮನಿಯಲ್ಲಿ ಎನು ಕೇಳಿದರೆ ಅದು ಸಿಕ್ಕುವ ಹಾಗೆ ಎಲ್ಲಾ ಕೈಗಾರಿಕೆಗಳಿಗೆ ಸಾಮಗ್ರಿಗಳನ್ನು ಹವಣಿಸಿಕೊಳ್ಳುವ ಉದ್ದೇಶದಿಂದ ಈತನು ಇಷ್ಟು ದೊಡ್ಡ ಸಾಮ್ರಾಜ್ಯ ಪಾಹದಲ್ಲಿ ಸಿಕ್ಕಿ ಬಿದ್ದಿರುವನು.

ಸೇನಾನಾಯಕತ್ವ

ಈತನ ಸೇನಾನಾಯಕತ್ವವು ಅಸದೃಶವಾದುದು. ಬಹಳ ದಕ್ಷತೆಯಿಂದ ಸೈನ್ಯವನ್ನು ಕೇಳಿರಿಸುವ ಬುದ್ಧಿಶಕ್ತಿ ಈತನದು! ಯೂರೋಪಿನಲ್ಲಿ ಈತನು ಜಿಕೋಸ್ಲೋವಿಕಿಯಾವನ್ನು ಆಕ್ರಮಿಸುವನೆಂದು ಹೇಳಲಾಗಿದೆ ಆದರೆ ಇದು ಆತನ ಸದ್ಯದ ಗುರಿಯಲ್ಲ. ಹಂಗೇರಿಯಾವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಈತನು ಹೊಂಚುಹಾಕುತ್ತಿರುವನು. ಮಧ್ಯಯೂರೋಪನ್ನು ಸಂಪೂರ್ಣ ಸ್ವಾಧೀನಮಾಡಿಕೊಳ್ಳಬೇಕೆಂದು ಈತನು ಹಗಲಿರುಳು ದುಡಿಯುತ್ತಿರುವನು.

ಜರ್ಮನಿಯ ಸರಹದ್ದು

ಈಗಾಗಲೇ ಈತನು ಜರ್ಮನಿಯ ಸರಹದ್ದನ್ನು ಬ್ರೆನ್ನರ್ ಕಣಿವೆವರೆಗೆ ತಂದಿರುವನು ಇಟಲಿವರೆಗೆ ಈಗಿನ ಸೇನಾನಾಯಕತ್ವವಿರುವುದು. ಆಗಲೇ ಮೆಡಿಟರೇನಿಯರ್ ಸಮುದ್ರಕ್ಕೆ ದಾರಿಮಾಡಿಕೊಂಡು ಹೋಗಬೇಕೆಂದು ಈತನು ವ್ಯೆಷ್ಟಿಯಿಟ್ಟಿರುವನು. ಟ್ರೀಸ್ಟಿಯನ್ನು ಎರಡನೇ ಹ್ಯಾಂಬರ್ಗ್ ಮಾಡಿಬಿಡಬೇಕೆಂಬುದೇ ಈತನ ಆಶಯ. ಕೀಲ್‌ನಲ್ಲಿ ಒಂದು ನೌಕಾ ತಿಬಿರವನ್ನು ಸ್ಥಾಪಿಸಿಬಿಡಬೇಕೆಂದು ಈತನು ಗಟ್ಟಿಮನಸ್ಸು ಮಾಡಿರುವನು

ಮುಂದಿನ ಯುದ್ಧ

ಶ್ರಪಂಚದ ಮುಂದಿನ ಯುದ್ಧವು ಸಮುದ್ರದೊಳಗೆ ಬಹಳವಾಗಿ ನಡೆದು ಹೋಗುತ್ತದೆಂಬುದು ಈತನಿಗೆ ಮುಂಚಿತವೇ ಗೊತ್ತಾಗಿ ಬಹಳ ವರ್ಷಗಳಿಂದಲೂ ಸಬ್‌ಮೆರೀನುಗಳನ್ನು ಅಧಿಕ ಸಂಖ್ಯೆಯಲ್ಲಿ ಈತನು ಹವಣಿಸಿಕೊಂಡಿರುವನು. ಸಮುದ್ರದೊಳಗೆ ಹೋಗುವ ಈ ಸಬ್‌ಮೆರೀನುಗಳ ಅಸಾಧ್ಯಬಲ ಶಕ್ತಿ-ಸಾಹಸಗಳು ಇಡೀ ಪ್ರಪಂಚದಲ್ಲೇ ಇದುವರಿಗೂ ಪ್ರದರ್ಶಿಸಲ್ಪಟ್ಟಿಲ್ಲ ಜರ್ಮನಿಯ ನೌಕಾ ಸೈನ್ಯವು ಅದ್ವಿತೀಯ ಶಕ್ತಿಯನ್ನು ಪಡೆದಿದೆಯೆಂದು ಆಗಲೇ ಎಲ್ಲೆಲ್ಲೂ ಖ್ಯಾತಿಯಾಗಿದೆ.

ಫ್ರಾಂಕೊ ನಾಯಕನ ಸ್ನೇಹ

ಸ್ಪೇನ್ ತೀರದಲ್ಲಿ ಇಂದು ಜರ್ಮನಿಯು ಫ್ರಾಂಕೋವಿಗೆ ಸಹಾಯ ಮಾಡುತ್ತಿರುವುದು ಏತಕ್ಕಾಗಿ. ಈ ಜನರಲ್ ಫ್ರಾಂಕೋವು ಜರ್ಮನಿಯ ಹಿಟ್ಲರನಿಗೆ ಹೇಗೆ ಎದುರು ಹೇಳಿಯಾನು? ಹಿಟ್ಲರಿನಿಂದ ಎಲ್ಲಾ ಸಹಾಯವನ್ನು ಪಡೆದ ಈ ಫ್ರಾಂಕೋವಿಗೆ ಹಿಟ್ಲರನ ಅಪ್ಪಣೆಯಂತೆ ಮುಂದೆ ನಡೆಯುವ ಕಾಲ ಬರುವುದು.

ಜರ್ಮನಿಯು ಸ್ಪೇನಿನ ಎಲ್ಲಾ ಬಂದರುಗಳನ್ನು ಉಪಯೋಗಿಸಿಕೊಳ್ಳಬಹುದು ಸ್ಪೇನಿನ ಎಲ್ಲಾ ಭೂಗರ್ಭ ಐಶ್ವರ್ಯವೂ ಇನ್ನು ಮುಂದೆ ಜರ್ಮನಿಯ ಸ್ವಾಧೀನವೇ! ಫ್ರೆಂಚ್ ಮೊರಾಕೊ ಮಾರ್ಗಗಳು (ಉತ್ತರ ಆಫ್ರಿಕಕ್ಕೆ) ಅಷ್ಟು ಸುರಕ್ಷಿತವಾಗಿರಲಾರದು ಇನ್ನು ಮುಂದೆ ಏಕೆಂದರೆ ಜಿಬ್ರಾಲ್ಟಾ ಜರ್ಮನಿಯ ಕೈವಾಡವು ಬರುವುದು ಈಜಿಪ್ಟಿಗೂ ಇಂಡಿಯಾಕ್ಕೂ ಬ್ರಿಟಿಷರು ಇನ್ನು ಮುಂದೆ ಬರಬೇಕಾದರೆ ಜರ್ಮನಿಯ ಅಧೀನದಲ್ಲಿ ಬರುವಂತೆ ಆಗುವುದು. ಏಕೆಂದರೆ ಮಧ್ಯಮಾರ್ಗಗಳನ್ನು ಹಿಟ್ಲರನು ಆಕ್ರಮಿಸುವನು.

ಭಾರತದ ಆಕ್ರಮಣ

ಹಿಟ್ಲರನು ಹಿಂದೆಯೇ ತಿಳಿಸಿದಂತೆ ಸರ್ವಭಕ್ಷಕ ಮೂರ್ತಿ, ಮಧ್ಯ ಯೂರೋಪನ್ನು ಆಕ್ರಮಿಸಿದ ನಂತರ ಬಾಲ್ಟಿಕ್ ಸಮುದ್ರದಿಂದ ಹಿಡಿದು ಕಪ್ಪುಸಮುದ್ರದ ವರೆಗಿನ ಪ್ರದೇಶವನ್ನು ಆತನು ನುಂಗಿದನಂತರ ಭಾರತವನ್ನು ಆಕ್ರಮಿಸಲು ಅಂದರೆ ಜರ್ಮನಿಯ ಕೈವಾಡವು ಭಾರತದಲ್ಲಿಯೂ ಇರುವಂತೆ ಮಾಡಿಯೇ ಮಾಡುವನು ಜರ್ಮನಿಯ ಮಿಲಿಟರಿ ಪ್ಲಾನುಗಳಲ್ಲಿ ಭಾರತವೂ ಸೇರಿಕಲ್ಪಟ್ಟಿದೆ ಏಷ್ಯಾಟಿಕ್ ತೀರದಲ್ಲಿ ಆಕಾಶವಿಮಾನಗಳ ಕೋಟೆಯನ್ನು ಜಪ್ಪುಜುಗಳ ಸುರಕ್ಷಿತ ರಾಜೆಯನ್ನು ಹಿಟ್ಲರನು ಕಟ್ಟಿದನಂತರ ಭಾರತದಲ್ಲಿ ಜರ್ಮನ್ ಪ್ರಭುವವು ಬೇಳುವಂತೆ ಆತನು ಮಾಡುವನು.

ಹಿಟ್ಲರನು ಗೆಲ್ಲುವನೇ?

ಮೇಲಿನ ಕಾರ್ಯಕ್ರಮಗಳಲ್ಲಿ ಹಿಟ್ಲರನು ಗೆಲ್ಲುವನೇ? ಅಷ್ಟು ರಾಜಕೀಯ ನಿಪುಣತೆಯು ಅವನಲ್ಲಿದೆಯೇ ಎಂಬುದು ವಾದದ ಮಾತು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಹಿಟ್ಲರನೇ ಮುಂದೆ ಬರಲು ಅವಕಾಶವಿದೆ. ಅವನ ಆಶಯಕ್ಕೆ ತಕ್ಕ ಹಾಗೆ ಈ ಕೆಳಗಿನ ಪರಿಸ್ಥಿತಿಗಳು ಒಂದುಗೂಡಿರುವುವು.

(೧) ಜರ್ಮನಿಯ ವ್ಯವಸ್ಥೆಯು ಒಳಗೂ ಹೊರಗೂ ಬಹಳ ಅಚ್ಚುಕಟ್ಟಾಗಿದೆ ನಾಜೀ ಮುಖಂಡರು ಎಲ್ಲರೂ ಅತಚಿಣೆಯಾಗಿದುರುವ ಕಾರ್ಯಕ್ರಮವನ್ನು ಮುಂದೆ ಮುಂದೆ ಭರದಿಂದ ಸಾಗಿಸುತ್ತಿದ್ದಾರೆ.

(೨) ಯೂರೋಪಿನಲ್ಲಿ ಘೋರಯುದ್ಧವಾದೀತೆಂಬ ಭೀತಿಯಿಂದ ಪ್ರಜಾಸ್ರ ಭುತ್ವ ಸರ್ಕಾರದವರು ಎಲ್ಲಾ ವಿಷಯಗಳಲ್ಲಿಯೂ ಸೋತು ಸೋತು ಹಿಂದೆ ಹಿಂದೆ ಸರಿಯುತ್ತಿದ್ದಾರೆ.

(೩) ಅಬಿಸಿನಿಯಾ ಯುದ್ಧದ ಪರಿಣಾಮದಿಂದ ಬಳಲಿ ಬೆಂಡಾಗಿರುವ ಇಟಲೀ ಪರಿಸ್ಥಿತಿ.

(೪) ಕಳೆದ ಘೋರಯುದ್ಧದಿಂದ ಜರ್ಮನಿಯ ಸೇನಾನಾಯಕರು ಎನ್ನೋದಕ್ಷರಾಗಿದ್ದರಪ್ಪೆ! ಆದ ಕ್ಕಿಂತಲೂ ಹೆಚ್ಚಾಗಿ ದಕ್ಷತೆಯನ್ನು ಇಂದಿನ ಜರ್ಮನ್ ಸೇನಾನಾಯಕರು ಪಡೆದಿರುವುರು.

ಬುದ್ಧಿಶಕ್ತಿಯನ್ನು ಉಪಯೋಗಿಸಿದ್ದಾರೆ.

ಹಿಟ್ಲರನು ಜರ್ಮನಿಯ ಭೂಗರ್ಭನಿಧಿಗಳನ್ನು, ಜನರನ್ನು ರಾಷ್ಟ್ರಹಿತಕ್ಕಾಗಿ ಉಪಯೋಗಿಸಿದ್ದು ದೊಡ್ಡದಲ್ಲ. ಜನರ ಮೇಧಾಶಕ್ತಿಯನ್ನು ಪರಿಶೋಧನ ಕಾರ್ಯದಲ್ಲಿ ಉಪಯೋಗಿಸಿ, ಮುಂದಿನ ಯುದ್ಧದಲ್ಲಿ ಹೊಸತರಹದ ವಸ್ತುಗಳು ಬರುವಂತೆ ಮಾಡಿಕೊಂಡಿರುವುದೇಗ ಹಿಟ್ಲರನ ಅಸಾಧ್ಯ ಮೇಧಾಶಕ್ತಿಯು ಕೆಲಸ

ಪ್ರೊಫೇಸರುಗಳೂ ವಿಜ್ಞಾನಶಾಸ್ತ್ರಪಂಡಿತರೂ, ರಸಾಯನ ಶಾಸ್ತ್ರಜ್ಞರೂ, ನಾಜೀಗಳು ಅಧಿಕಾರದಲ್ಲಿ ಇನ್ನು ಮುಂದೆ ಹೋಗುವಂತೆ ಸಹಾಯಮಾಡುತ್ತಾ ಬಂದಿದ್ದಾರೆ.

೨೪ ಘಂಟೆಗಳಲ್ಲಿ ಸಿದ್ಧತೆ

ಕಳೆದ ೫ ವರ್ಷಗಳಿಂದ ಜರ್ಮನಿಯು ಯುದ್ಧಕ್ಕೆ ಸನ್ನಾಹ ಮಾಡಿಕೊಳ್ಳುತ್ತಿದೆ ಸೇನಾಶಕ್ತಿಗೆ ಸದಾ ಸಹಾಯವಾಗಿರುವಂತೆ ಹಿಟ್ಲರನು ಆಸಾಧ್ಯ ವಿಮಾನ ಪಡೆಯನ್ನು ಕಟ್ಟುತ್ತಿರುವನು.

ಈ ಪ್ರಪಂಚದಲ್ಲಿ ಜರ್ಮನಿಯಷ್ಟು ಬಲಯುತ ವಿಮಾನಪಡೆಯು ಇನ್ನೆಲ್ಲಿಯೂ ಇಲ್ಲ. ರಷ್ಯಾದಲ್ಲಿಯೂ ಇಲ್ಲ. ಜರ್ಮನಿಯಲ್ಲಿ ಇಂದು ಹಾರಾಡುತ್ತಿರುವ ಎಲ್ಲಾ ಆಕಾಶವಿಮಾನಗಳನ್ನು ಯುದ್ಧದ ವಿಮಾನಗಳನ್ನಾಗಿ ೨೪ ಘಂಟೆಗಳಲ್ಲಿ ಮಾಡಿಬಿಡಬಹುದಾಗಿದೆ

ವೈಮಾನಿಕರು, ವೈಮಾನಿಕ ಶಾಲೆಗಳೂ ಜರ್ಮನಿಯಲ್ಲಿ ಇಂದು ಅಧಿಕಸಂಖ್ಯೆಯಿಲ್ಲದೆ ಕೇವಲ ಕಮ್ಮಿ ಖರ್ಚಿನಿಂದ ವೈಮಾನಿಕರಿಗೆ ಜರ್ಮನಿಯಲ್ಲಿ ಇಂದು ಶಿಕ್ಷಣ ಕೊಡುವ ಏರ್ಪಾಡಿದೆ ಇವರೆಲ್ಲರೂ ಅತ್ಯಂತ ದಕ್ಷಮೂರ್ತಿಗಳಾಗಿಯೇ ಪರಿಣಮಿಸುವರು. ಜರ್ಮನಿಯ ಒಂದು ವಿಮಾನಶಾಲೆಯಲ್ಲಿ ೧೬೦ ಜನ ನೈಮಾನಿಕರು ಶಿಕ್ಷಣವನ್ನು ಪಡೆಯುತ್ತಾರೆ ಇಂಥಾ ಶಾಲೆಗಳು ನೂರಾರು ಇವೆ

ಜರ್ಮನ್ ಯುವಕರು

ಜರ್ಮನಿಯ ಯುವಕರು ಅಸಾಧಾರಣ ವ್ಯಕ್ತಿಗಳು ಎಂತಹ ಸಾಹಸವನ್ನು ಬೇಕಾದರೂ ಮಾಡಬಲ್ಲರು. ಇವರೆಲ್ಲರನ್ನು ಹಿಟ್ಲರನು ಒಂದಗೂಡಿಸಿದ್ದಾನೆ ನಾಜಿ ವಿಮಾನ ಪಡೆಯಲ್ಲಿ ಅತ್ಯಂತ ವೇಗವಾಗಿ ಹೋಗುವ ವಿಮಾನಗಳೂ ಮನೋಜ್ಞೇನುಗಳೂ ಬಹಳ ಎತ್ತರದಲ್ಲಿ ಆತಿವೇಗದಲ್ಲಿ ಹಾರಾಡಬಲ್ಲ ಯಂತ್ರಗಳೂ ಇವೆ

ಆಕಾಶ ವಿಮಾನಗಳನ್ನು ಇನ್ನು ಇತರ ಯುದ್ಧ ಸಲಕರಣೆಗಳನ್ನು ತಯಾರು ಮಾಡುವ ಕಾರ್ಖಾನೆಗಳಂತೂ ಜರ್ಮನಿಯಲ್ಲಿ ಹೇರಳವಾಗಿವೆ ಅವೆ ಇತರ ದೇಶಗಳಂತೆ ಮುಖ್ಯ ಮುಖ್ಯ ನಗರಗಳಲ್ಲಿ ಪಾತ್ರವೇ ಸ್ಥಾಪಿಸಲ್ಪಟ್ಟಿಲ್ಲ ಇಡೀ ಜರ್ಮನ್ ರಾಷ್ಟ್ರದಲ್ಲೆಲ್ಲಾ ಅವು ಪ್ರಸರಿಸಿವೆ

ನೆಲಮಾಳಿಗೆಯಲ್ಲಿ ವಿಮಾನಗಳು

ಜರ್ಮನಿಯಲ್ಲಿ ನೆಲಮಾಳಿಗೆಗಳಲ್ಲಿ ವಿಮಾನಗಳು ಬಹಳ ಸುರಕ್ಷಿತವಾಗಿ ಹಾರಾಡುವಂತೆ ಆಕಾಶ ವಿಮಾನಗಳ ಮೈದಾನಗಳು ಏರ್ಪಡಿಸಲ್ಪಟ್ಟಿವೆ ಒಂದು ಕಡೆ ನೆಲಮಾಳಿಗೆಯಲ್ಲಿ ೨೫೦ ವಿಮಾನಗಳು ಹಾರಾಡಲು ಜಾಗವು ಏರ್ಪಡಿಸಲ್ಪಟ್ಟಿದೆ. ಅವ್ಯೇ ಅಲ್ಲ ಈ ವಿಮಾನಗಳು ಕೆಟ್ಟುಹೋದರೆ ಅವುಗಳನ್ನು ಬಹಳ ಬೇಗನೆ ಹೊಸ ಯಂತ್ರಗಳಿಂದ ಕೂಡಿಸಲು ಬೇಕಾದ ಏರ್ಪಾಡೆಲ್ಲಾ ಈ ನೆಲಮಾಳಿಗೆಯೊಳಗೇ ಇದೆ

ಮಿಷ್ಣ ಗನ್‌ಗಳು

ದೊಡ್ಡ ದೊಡ್ಡ ಬಹಳ ಬರುಸಿನಿಂದ ಗುಂಡು ಹಾರಿಸಲ್ಪಡಬಹುದಾದ ಮಿಷಿನ್ ಗನ್‌ಗಳು ಇಂದು ಜರ್ಮನಿಯಲ್ಲಿ ಅಧಿಕ ಸಂಖ್ಯೆಯಲ್ಲಿನೆ ಈ ಮಿಷಿನ್ ಗನ್ನು ಸ್ಥಿರವೇ ವಿಚಿತ್ರವಾಗಿದೆ. ಬಹಳ ಎತ್ತರದ ಮೇಲೆ ಹಾರಾಡುವ ವಿಮಾನಗಳನ್ನು ಗುಂಡಿನಿಂದ ಹೊಡೆದು ಉರುಳಿಸುವ ಶಕ್ತಿಯನ್ನು ಇವುಗಳಿಕೆದಿವೆ ಅಷ್ಟೇ ಅಲ್ಲ ಈ ಮಿಷಿನ್‌ಗನ್ನುಗಳು ಗರಗರನೆ ತಿರುಗಿ ಕೊಂಡು ಗುಂಡು ಹಾರಿಸಬಲ್ಲವು.

ಮದ್ದುಗುಂಡುಗಳ ಹೇರಳ ಸರಬರಾಯಿ

ಹಿಟ್ಲರನು ಮದ್ದು ಗುಂಡುಗಳ ಹೇರಳ ಸರಬರಾಯಿಯನ್ನು ಮಾಡಿಟ್ಟಿದ್ದಾನೆ. ಜರ್ಮನಿಯಲ್ಲಿ ಎಲ್ಲೆಲ್ಲೂ ಈ ಡಿಪೋಗಳೇ ಇವೆ ಇಡೀ ಜರ್ಮನಿಯನ್ನು ಮಿಲಿಟರಿ ಭಾಗಗಳನ್ನಾಗಿ ಮಾಡಿಕೊಂಡು, ಇದುವರಿಗೆ ೫೦ ಲಕ್ಷಕ್ಕೆ ಮೇಲ್ಪಟ್ಟ ಜರ್ಮನರ ಯುದ್ಧ ಶಿಕ್ಷಣದಲ್ಲಿ ತರಬಯತ್ತಾಗುವಂತೆ ಹಿಟ್ಲರನು ಮಾಡಿದ್ದಾನೆ. ಇವರೆಲ್ಲರೂ ವಿಮಾನದಿಂದ ಯುದ್ಧ ಮಾಡಬಲ್ಲವರೂ ಆಗಿದ್ದಾರೆ ಯಾರಾದರೂ ಜರ್ಮನಿಯ ಮೇಲೆ ಆಕಾಶ ವಿಮಾನಗಳ ಮೂಲಕ ಯುದ್ಧಕ್ಕೆ ಬಂದರೆ ಅವರನ್ನು ಪ್ರತಿಭಟಿಸಿ ಯುದ್ಧಮಾಡಲು ಈ ಯುವಕರುಗಳೆಲ್ಲಾ ಸಹಾಯವಾಗುವಂತೆ ಹಿಟ್ಲರನು ಏರ್ಪಡಿಸಿದ್ದಾನೆ. ಶತ್ರುಪಕ್ಷದ ಆಕಾಶವಿಮಾನಗಳು ಮೇಲೆ ಹಾರಾಡದಂತೆಯೂ, ಅವುಗಳ ಯಂತ್ರಗಳು ಕೆಲಸಕ್ಕೆ ಬಾರದಂತೆ ಎದುರು ಯಂತ್ರಸಾಮಗ್ರಿಗಳನ್ನು ಹಿಟ್ಲರನು ಹವಣಿಸಿಕೊಂಡು ಅದನ್ನು ಉಪಯೋಗಿಸುವ ವಿಧಾನಗಳನ್ನು ಜರ್ಮನಿಯ ಯುವಕರಿಗೆ ಕಲಿಸಿದ್ದಾನೆ. ಜರ್ಮನಿಯವರಿಗೆ ಯಾವಾಗಲೂ ಮೆಷಿನ್‌ಗನ್ನುಗಳನ್ನು ಕಂಡರೆ ಇಷ್ಟ, ಅವು ಇನ್ನು ಹೆಚ್ಚಿನ ಕೆಲಸಮಾಡಲು ಆಗುವಂತೆ ಹೊಸ ಹೊಸ ಶೋಧನೆಗಳನ್ನು ಈ ಗನ್ನುಗಳಿಗೆ ಸೇರಿಸಿ ಅವುಗಳ ಉಪಯೋಗ ವಿಧಾನವನ್ನು ಜರ್ಮನ್ ಯುವಕರು ಕಲಿಯುತ್ತಿದ್ದಾರೆ.

ವಿಷವಾಯುವಿನ ಪ್ರಯೋಗ

ಜರ್ಮನೀ ಚಕ್ರಾಧಿಪತ್ಯವೊಂದನ್ನು ಕಟ್ಟಲೇ ಬಿಡಬೇಕೆಂದು ಹಿಟ್ಲರನು ದೃಢಮನಸ್ಸು ಮಾಡಿದ್ದಾನೆ ಬಹಳ ತೀಕ್ಷ್ಣಗಳಿವರಿಗೂ ಯುದ್ಧದ ಸಾಮಗ್ರಿಗಳು ಮೆದ್ದು ಗುಂಡು ಸರಬರಾಯಿಗಳೂ ಆಗುವಂತೆ ಹಿಟ್ಲರನು ಈಗಿನಿಂದಲೇ ಹವಣಿಸಿದ್ದಾನೆ. ಶತ್ರುಪಕ್ಷದವರು ಎಷ್ಟೋ ಆಡಚಣೆ ಉಂಟುಮಾಡಿದಾಗ್ಯೂ, ಏಳು ತಿಂಗಳವರಿಗೂ ಹೊರಗಿನ ಸರಬರಾಯಿ ಇಲ್ಲದಂತೆ ಯುದ್ಧಮಾಡಲು ಜರ್ಮನಿಯಲ್ಲಿ ಸಿದ್ಧತೆಯಾಗಿದೆ.

ವಿಷವಾಯುವಿನಿಂದ ಪಾರಾಗುವುದು, ಶತ್ರುಪಕ್ಷದವರ ಮೇಲೆ ವಿಷವಾಯುವನ್ನು ಕಾರುವುದು ಇತ್ಯಾದಿಗಳಲ್ಲೆಲ್ಲ ಜರ್ಮನ್ ಯುವಕರು ಇಂದು ತಯಾರಾಗಿದ್ದಾರೆ.

ಪಕ್ಕಾದಾಗಿ ಹೇಳಬೇಕೆಂದರೆ ಇಡೀ ಜರ್ಮನ್ ರಾಷ್ಟ್ರವೇ ಜರ್ಮನಿಯನ್ನು ಒಂದು ಭಾರೀ ಚಕ್ರಾಧಿಪತ್ಯವನ್ನಾಗಿ ಮಾಡಿಬಿಡಲು ಬೇಕಾಗುವ ಪೈನ್ಯಸಹಾಯ ಸಂಪತ್ತುಗಳೆಲ್ಲವನ್ನು ಹವಣಿಸಿಕೊಂಡಿದ್ದಾರೆ.

ಯೂರೋಪಿನವರ ಮುಖದ ಮೇಲೆ ಹೊಡಿಯುವ ರೀತಿಯಲ್ಲಿ ಜರ್ಮನರು ಇರಬೇಕೆಂಬುದೇ ಇವರ ಆಶಯ

ಜರ್ಮನಿಯ ಸೇನಾನಾಯಕನ ಅಪ್ಪಣೆಯನ್ನು ಪ್ರತಿಭಟಿಸುವ ಒಂದು ಸಿಳ್ಳೆ ಕೂಡ ಜರ್ಮನಿಯಲ್ಲಿ ಇಲ್ಲ. ಈ ಸೇನಾನಾಯಕನೇ ಹಿಟ್ಲರನು ಈಗಾಗಲೇ ಯುದ್ಧಕ್ಕೆ ಎಲ್ಲಾ ಸಿದ್ಧತೆಗಳು ಆಗಿಲ್ಲ. ಮುಂದೆ ಕಾಲವು ಮಿಂಚುತ್ತಾ ಬಂದ ಹಾಗೆಲ್ಲಾ ಒಂದು ಘೋರ ಸಂಗ್ರಾಮಕ್ಕೆ ಎಲ್ಲಾ ರಾಷ್ಟ್ರಗಳನ್ನು ಬೇಕಾದರೂ ಎದುರಿಸಬಲ್ಲ, ಸೇನಾ ಸಿದ್ಧತೆಗಳೆಲ್ಲಾ ಜರ್ಮನಿಯಲ್ಲಿ ಆಗಿ, ಎಂದು‖ಯಾರೂ ಕೇಳದಂಥ ಭಾರೀ ಜರ್ಮನ್ ಚಕ್ರಾಧಿಪತ್ಯದ ಅಂಕುರಾರ್ಪಣೆ ಆಗುವುದರಲ್ಲಿ ಸಂದೇಹವಿಲ್ಲವೆಂದು ಹೇಳಲಾಗಿದೆ

ವಿವಾಹಮಹೋತ್ಸವ

ಬಹುಧಾನ್ಯ ಸಂವತ್ಸರದ ಜ್ಯೇಷ್ಠ ಶು|| ೪ ಗುರುವಾರ ತರಿಕೆರೆ ತಾ|| ಆಜ್ಞಂಪ್ಪರವರ ಸಮ್ಮತಿ ಅಪ್ಪನಹೊಳಲ್ ಗ್ರಾಮದಲ್ಲಿ ಶ್ರೀಜಗದ್ಗುರು ಶ್ರೀರೇಣುಕಾದರ್ಶನ ಸಂಸ್ಥಾ ವಿಚಿಂಟ್ಸ್, ವೇ|| ಆಜ್ಞಂಪ್ಪರವ ಹಿರೇಮನೆಯ ಅರ್ ಸಿ. ಆರಾಧ್ಯಸ್ವಾಮಿಯವರ ಕ್ಯಾಂಪಿನಲ್ಲಿ ಕಂಸಾಗರವ ಎಸ್ಟೇಟ್ ಶಿವಾಸಂಧಾಶ್ರಮದ ಪೂ|| ಬ್ರಹ್ಮಸಮುಗ್ರಮರವ ಪಟ್ಟಾಧ್ಯಕ್ಷ ಚನ್ನಬಸವ ಶಿವಾಚಾರ್ಯ ಸ್ವಾಮಿಯವರ ಆಧ್ಯಕ್ಷತೆಯಲ್ಲಿ ನೂಮನ ಪಾಪೇಶ್ವರ ಪಟಿಗೆಗೂ ಆರಾಧ್ಯಸ್ವಾಮಿಯವರ ಅನೆ ಪುತ್ರಿ ಚಿ|| ಕಮಲಾಕ್ಷಮ್ಮನವರಿಗೂ ಸಹ ಶಿವದೀಕ್ಷಾಸಂಸ್ಕಾರ ನಡೆದು ವಿಜೃಂಭಣೆಯಿಂದ ಚಿ|| ೨-೩-೨೪ ನೇ ಗುರುವಾರ ಸಾ|| ಕಮಲಾಕ್ಷಮ್ಮನವರಿಗೂ, ಕ್ಯಾನುಭೋಗನ ಹಳ್ಳಿಯ ೧ ಮನೆಯ ರುದ್ರಾರಾಧ್ಯರ ಪುತ್ರ ನುರುಬಾರಾಧ್ಯನಿಗೂ ವಿವಾಹ ಮಹೋತ್ಸವ ವೈಭವದಿಂದ ನೆರವೇರಿತು.

ಅಧ್ಯಕ್ಷರಾದ ಶ್ರೀ ಶಿವಾನಂದಾಶ್ರಮದ ಪೂ|| ಶಿವಾಚಾರ್ಯ ಸ್ವಾಮಿಜಿಯವರು ನೀರಕ್ಕೆನಧರ್ಮದ ಸಿಜತತ್ವವನ್ನು ಕುರಿತು ಸಭಾಸದರ ಶಿಡಿಕಂಹನವಾಗುವಂತೆ ಧರ್ಮೋಪದೇಶಮಾಡಿದರು. ಎ. ಎಂ ಪಿ. ಮರುಳಸಿದ್ದಪ್ಪನವರು ಗ್ರಾಮ ಪಕಮಾತ್ಯಾದಿ ಧರ್ಮ ಸುಧಾರಕತ್ವದಮೇಲೆ ಭಾಷಣಮಾಡಿದರು. ನೂತನ ವಧೂವರರಿಗೆ ಆರತ್ಯಕ್ಷತೆಯು ಸುಮಂಗಲೆಯರಿಂದ ನಡೆಯಿತು. ಜಗದ್ಗುರುಪೀಠಗಳಿಗೆ ಫಲತಾಂಬೂಲಾದಿ ಕಾಣಿಕೆಯು ತೆಗಿಸಲ್ಪಟ್ಟು ಸಭಿಕರಿಗೆ ಸುಗಂಧ ಕ್ಷೀರು ಪುಷ್ಪಹಾರ ಫಲತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟವು. ವರನಕಡೆಯಿಂದ ೩-೧-೦ ವಧುವಿನಕಡೆಯಿಂದ ೩-೦-೦ ಹಾಮ್ಲು ೪-೩-೦ ಯನ್ನು ಲೋಕಮಾನ್ಯ ಮೈಸೂರು ಪಂಚಾಚಾರ್ಯಪ್ರಭಾಪತ್ರಿಕೆಯ ಸೇವನಿಧಿಗಾಗಿ ಅಧ್ಯಕ್ಷರ ಅಪ್ಪಣೆಯ ಮೇರೆ ತೆಗಿಸಲ್ಪಟ್ಟವು. ಮತಸ್ಥಾಪಕರಾದ ಜಗದ್ಗುರು ಪಂಚಾಚಾರ್ಯರ ಮಹತ್ವವನ್ನು ಜಗದ್ವಿಖ್ಯಾತಪಡಿಸಿ ಶುತಾಚಾರ್ಯರ ಧರ್ಮಶಾಸ್ತ್ರಗಳನ್ನು ಅನೇಕವಾಗಿ ಮುದ್ರಣಮಾಡಿಸಿ ಪ್ರಚಾರಪಡಿಸಲು ಕಾರಣಭೂತರಾದ ಮಹಾತ್ಮ ನೇ|| ಪಂಡಿತ ಕಾಶೀನಾಥಶಾಸ್ತ್ರಿಗಳ ಸಮುದ್ದೇಶವನ್ನು ಸರ್ವರೂ ಮಾನ್ಯಮಾಡಿ ಆ ಪಂಡಿತ ಮಹಾಶಯರಿಗೆ ಜಗದೀಶನು ಆಯುರಾರೋಗ್ಯಭಾಗ್ಯವನ್ನು ಅನುಗ್ರಹಿಸಲೆಂದು ವಿಜೆಟರು ಸೂಚಿಸಿದ್ದನ್ನು ಸಭಿಕರು ಕರತಾಡನ ಜಯ ಧ್ವನಿಯಿಂದ ಶಿರಸಾನಾನ್ಯಮಾಡಿ ಅನುಮೋದಿಸಿದರು. ಸ್ಥಳ ಪರಸ್ಥಳದ ಮಹಾಧಿಕಾರಿಗಳು, ಪಟೇಲರು, ಶೆಟ್ಟರು, ಯಜಮಾನರು ಮನೆಗೆ ಬಂಧು ಬಾಂಧವಾದಿ ದೈವಾಕಾರದ ಸ್ತ್ರೀ ಪುರುಷರು ಸುಮಾರು ೫೦೦ ಜನರವರೆಗೂ ಸಭೆಯನ್ನ ಲಂಕರಿಸಿದ್ದರು. ವಧೂವರರಿಗೆ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಕೋರುವ—

ಏರ್ಪ ಪ್ರತ್ಯಕ್ಷದರ್ಶಿ.

ಕರ್ನಾಟಕ ರತ್ನ ಸಿಂಹಾಸನಾಧೀಶ್ವರ
ಶ್ರೀಮದ್ರಾಜಾಧಿರಾಜ ಶ್ರೀಮನ್ಮಹಾರಾಜ
ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ

೫೫ ನೆಯ ವರ್ಧಂತ್ಯುತ್ಸವ.

ಸಮಯದಲ್ಲಿ ರಾಜಧಾನಿಯಲ್ಲಿ ರಚಿಸಿದ

" ವರ್ಧಂತೀ ನವರತ್ನಮಾಲೆ "

(ವರಕವಿ- ಶ್ರೀವಾಗೀಶ)

ಕಂ|| ಯಮುನಾಂಶೋದ್ಭವನೃಪನುಜೆ |
ಬುಧಜನಸಂಗೀತಚರಿತಪಾದೊ ! ಮೆರೆವನಯೋ !! ||
ಉದಿಸಿಪಲ್ಕೈವತ್ತೈದನೆ. |
ಯದು ಭುಧವರ್ಧಂತಿದಿನಮಿದಾನಂದಕರಂ ||೧||

ಜಯಯೇ ಧರ್ಮದ ಮೂಲವು |
ಭಯವಿಲ್ಲದೆ ಬಾಳುತಿರ್ಪುದು ಧರ್ಮಫಲಂ ||
ಜಯಮಾಧರ್ಮದೆ ಸಿದ್ಧಿಪ್ಪ |
ದಯ ಭೋ ! ಕೃಷ್ಣೇಂದ್ರ !! ಧರ್ಮಮೂರ್ತಿಯು ನೀನೈ ||

ಮಿತವಚನಂ ಹಿತವಚನಂ |
ಕ್ಷಿತಿಪತಿಕೃಷ್ಣೇಂದ್ರ ! ತತ್ತ್ವವಿದ್ಭಾಸ್ಕರಾ !! ||
ಮಿತಿವಂತಾಗ್ಗೇಸರ | ನೀಂ |
ಸುತಸಮವೀ ಪ್ರಜೆಯ ಪಾಲಿಸುತ್ತಿಹೆಯನಿಶಂ ||೨||

ಶಿವನಂದದೆ ಸಂಸಾರಿಯು |
ಶಿವನಂದದೆ ಭಾವಿಸಲ್ಕೆ ವೈರಾಗ್ಯಯುತಂ ||
ಅವನಿಪಜನಕಾದಿಗಳಿಗೆ |
ಸವನಾಗಿಹೆ ಕೃಷ್ಣರಾಜ ! ರಾಜರ್ಷಿಯೆ ನೀಂ ||೪||

ಕನ್ನಡನಾಡಿನ ವೃದ್ಧಿಗೆ |
ಕನ್ನಡನುಡಿಯೊಲ್ಲಕತೆಗುಪಸರಿಸುವುದಕಂ ||
ಕನ್ನಡದೇಕೀಕರಣಕೆ |
ನಿನ್ನ ರಸೊತ್ತುಗೆಯೆ ಮೂಲ ಕೃಷ್ಣ ಸೃಪಾಲಾ ||೫||

ಚಿಂತಾಮಣಿಸನುರಾಜ್ಯನ |
ನೆಂತ್ಕೆ ಪಲಿಯುವುದು ? ಪಲಿದು ಬಾಳುವುದೆಂತ್ಕೆ ? ||
ಸಂತೋಷವ ಪೊಂದಿರ್ದರ್ |
ಸಂತೋಷನ ತೋರ್ಪ ಜಪಕೆ ರಾಜಿಯು ನೀನೈ ||೬||

ಕನ್ನಡವಾಡಿನ ಭಾಗ್ಯ |
ನಿನ್ನ ದಿಯೊಳು ರವಿಯೆಯಾಗಿ ರಾರಾಜಿಪುದೈ ||
ಸನ್ನುತಕೃಷ್ಣ ರೇಂದ್ರನೆ ? ನೀ |
ನುನ್ನತಿಸಿದೆ ಕನ್ನಡಮ್ಮನುನ್ನತಿಸಿರುವ್ ||೭||

ಅಭಯವ ದೆಯಸಾಲಿನಿ ನಿನ |
ನಭಿನವವರ್ಧಂತಿಶತನನೀಯುಶತಿರಲ್ ನೀಂ ||
ಅಭುವರ್ಧಿಸುತಿರು ಯುಮಕುಲ- |
ಶುಭಕರ ! ಜಯಚಾಮರಾಜಸಂತತಿಸಹಿತಂ ||೮||

ಈ ಕರ್ನಾಟಕರಾಜ್ಯಂ |
ಶ್ರೀಕಂಠನ ದಯದೆ ಚೆಲಿಯಲಾಚಂದ್ರಾರ್ಕಂ ||
ಭೂಕಾಂತಂ ಶ್ರೀಕೃಷ್ಣಂ |
ರಾಕೇಂದುಮುಖನಿಂತೆ ಬೆಳಗಲೀಶನ ಕೃಪೆಯಿಂ ||೯||

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುಪರ್ಗವು ಮರಕ್ಕೆ ತಮ್ಮ ವಿಧಾನ ಶಿಷ್ಯರ ಮನೆಗಳಿಗೆಯತ್ತಿದ್ದು, ಆ ನುಕಾಧಿಕಾರಿಗಳು ಧರ್ಮಪರ್ಗಕ್ಕೋ ಸತ್ತುಸರ್ಗಕ್ಕೋ ಒಂದು ಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯೋಗಕ್ಷೇಮ ವಿಷಯಗಳ ಬರೆಸಿಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮರೆದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಪರಿಹರಿಸುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ಕ್ರಮವನ್ನು ಸ್ವಷ್ಟವಾಗಿ ಕೂರಿಸಲಾಗಿದೆ ಅದುದರಿಂದ ಸದರಿ ಪುಸ್ತಕವನ್ನು ಪ್ರತಿಯೊಬ್ಬ ಗುರುವರ್ಯರು ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ತಮ್ಮ ತಮ್ಮ ವಿಶ್ಯರನ್ನು ಕಾಣಾಡಿಕೊಳ್ಳಬೇಕು ಇದಕ್ಕಾಗಿ ಯಾರೂ ಕೆಪಿಪಂಥ ಕಾಗದಗಳನ್ನು ಪಯೋಗಿಸಿರುವಪಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭ್ಯದಲ್ಲಿ ದೊರೆಯುವವು.

ಔಷಧಿ ಹೆಸರು	ಕೂಪಿ	ಮುಖ್ಯ
ಸ್ವರ್ಣಸುಧಾರಸ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
ತ್ರಿನೇ ಸಂಬರ್	೧	೮—೦—೦
ರಸಸಿಂದೂರ	೧	೩—೦—೦
ಮಲ್ಲಸಿಂದೂರ	೧	೪—೦—೦
ತಾಲಸಿಂದೂರ	೧	೪—೦—೦
ಶಿಲಾಸಿಂದೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರೌಪ್ಯಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦ ೧೫—೦
ಕಂಗುಭಸ್ಮ	೧	೦—೮—೦
ನಾಗಭಸ್ಮ	೧	೦ —೮—೦
ಪತ್ರಾಜಭಸ್ಮ	೧	೦—೮—೦
ಕಂಚಿಭಸ್ಮ	೧	೦—೮—೦
ಸ್ವಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಭಸ್ಮ	೧	೦—೧೫—೦
ಪದ್ಮಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಸ್ಫಟಿಕಭಸ್ಮ	೧	೦—೮—೦
ತಾರಾಗದ ಶೋಡಿತ ಭಸ್ಮ	೧	೦—೮—೦
ಲೋಹಾದಿತಿಹರತಾಲಭಸ್ಮ	೧	೦—೮—೦
ಸ್ಪೂಪಿ (೧ನೇ ನಂಬರ್)	೧	೫೦—೦—೦
ಲಾಜಿತ ಸೂರ್ಯಪುಟಿ	೧	೧—೦—೦
ಲಾಜಿತ ಅಗ್ನಿಪುಟಿ	೧	೦—೮—೦

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ್ಯ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ ಓಮಿಮತಿ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾ. ದೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಸಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಕುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳೆರಡನ್ನೂ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೫ ಆಣೆ** ವಿ. ಪಿ. ಚಾರ್ಜ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿವಾದ್ವೈತವೆಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥನನ್ನು ಕಾತ್ಮೀರದೇಶದ ಸ್ವಪ್ರಭಾತನಂದ ಶಿವತಾತಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗನವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇವರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅನಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲಗ್ರಂಥವು ಕೇವಲ ೩೮ ಪುಟಗಳಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೫ ಪುಟಗಳಷ್ಟಾಗಿದೆ ಈ ಮಹಾಗ್ರಂಥವನ್ನು ಮುದ್ರಣಕ್ಕಾಗಿ ಸುಮತಿರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಪಂಡಿತಾಭೋಷವಾಗಿ ಹೇಳಬಹುದಾಗಿದೆ ಸಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಹೆಡಿತೇವನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿರೂಪಿಸಿರುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೨೫ ಪುಟಗಳಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ಧಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪರೀಕ್ಷಿಸುವ ಫೋಟೋ ಸೈಜು ೧೦ × ೧೪ ಬೆಲೆ ೦—೧—೬

ಸದ್ಯ: ಲಿಂಗಾರ್ಚನಪೂಜಾಮಾಡಿರತಕ್ಕ ನಿವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೪ ಬೆಲೆ ೧ಕ್ಕೆ ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಘ್ನೇಷ್ವರನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರನಿರಾಜಮಾನ ಶ್ರೀ ಜಗದ್ಗುರು ನಿಜ್ಞಾದಾಳ್ಯರ ಮೂಲಧರ್ಮಪೀಠದ ಫೋಟೋ ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ೦—೦—೯

ಶ್ರೀಮಸಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಸುಪ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೦—೯

ಶ್ರೀ ಜಗದ್ಗುರು ಕೇದಾರಸುಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ ೦—೦—೯

ಹಿಮವತ್ಪರ್ವತದ ಮಧ್ಯದಲ್ಲಿ ತೋರುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ೦—೦—೯

ಸೋಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯವ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂರಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತವೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗದ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋಗಿಸುತ್ತಾರೆ ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು ಬುದ್ಧಿ ಒಂದಕ್ಕೆ ಕ್ರಯ ರೂ ೦೪೦ ವಿ ಪಿ ೦-೪೦ ಡಜನ್ ಒಂದಕ್ಕೆ ಕ್ರಯ ರೂ ೩೮-೦ ವಿ ಪಿ ೬ ಆಣೆ

ನಿಮ್ಮ ಅಪ್ರೈಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[8] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	...	೨	ಆಣೆ
ಗೋತ್ರಸೂತ್ರಸಟ (ಇನೆಯ ಆವೃತ್ತಿ)	...	೧	ಆಣೆ
ಮರುಲಸಿದ್ಧೇಶ್ವರಸ್ತೋತ್ರ	....	೧	ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	....	೧	ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	....	೧	ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	...	೧	ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	....	೧	ಆಣೆ
ಬಸವಾದಿನಿಜತತ್ತ್ವಾರ್ಪಣ (೪ನೆಯ ಆವೃತ್ತಿ)	....	೨	ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	....	೩	ಆಣೆ
ಪಂಚಾಚಾರ್ಯಪ್ರಭಾಕರ	....	೩	ಆಣೆ
ಶ್ರೀಗುರುತತ್ತ್ವಪದಿಗಳು	....	೩	ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	....	೩	ಆಣೆ
ವೀರಶೈವಮತವಿಮಾಮಾಂಸಾ	.	೩	ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)		೩	ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	೪	ಆಣೆ
ಶ್ರೀಪತಿಪಂಡಿತ ರಾಮ್ಯರ ಕಾಲನಿರ್ಣಯ		೪	ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	..	೬	ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಕ್ಕಸೈಜು)	....	೬	ಆಣೆ
ವೀರಶೈವಮಹಾತ್ಮರು	...	೮	ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	....	೮	ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)		೮	ಆಣೆ
Speeches by Pandit Shri Kashinatha Shastri (*English*)		12	As

ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	...	೧೩	ಆಣೆ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	..	೮	ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	...	....	೨ ರೂ
ವೀರಶೈವಸಿದ್ಧಾಂತಸುಧಾಕರ	...	..	೨ ೮ಗ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	....		೧ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)		.	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	..	.	೧ ರೂ
ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ)	.		೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)		...	೧ ರೂ
ವೈದಿಕಶಿವಪೂಜಾವಿಧಿ (ವೈದಿಕತ್ರಯೋಕ್ತವಾದ ಅತ್ಯಂತ ಸುಂದರಮುದ್ರಣ)			೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸೂತ್ರರತ್ನಾಕರ		.	೧೩ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	...	...	೧೩ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	....	...	೧೩ ಆಣೆ
ವೀರಶೈವರತ್ನ (ಮರಾಠಿ)	.	..	೧ ಕ
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	.	..	೩ ಕ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ–ಸಂಸ್ಕೃತ)			೧ ಕ
ವೀರಶೈವೇಂದ್ರಶೇಖರ (ಸಂಸ್ಕೃತ)	..		೧ ಕ
ನಂದಿಕೇಶ್ವರಕಾರಿಕಾ (ಸಂಸ್ಕೃತ)			೨ ಆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ)			೨ ಆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಷ್ಟಾನ ಮಹಾನಿಧ್ಯಾ ವೇ|| ಶಿವಸಿ ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜಸಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾ ವೇ॥ ತರಸಿ ಗುರುಶಾಂತಶಾಸ್ತ್ರಿಗಳು.

ಸ್ವಲವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಸೈ. ದರಸ್ಥಳದವರಿಗೆ ೨ ರೂ. ೪ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ. ಸೋಮವಾರ ತಾ॥ ೨೦ನೇ ಜೂರ್ ೧೯೩೮ [ಸಂಚಿಕೆ ೭

ವೀರಶೈವ ಸಮಾಜದ ದುಃಸ್ಥಿತಿ.

(ಲೇಖಕ—ಗುರುಸೇವಾಕಿಂಕರ, ಹೂವಿನಹಡಗಲಿ)

ನಮ್ಮ ಭರತಖಂಡದಲ್ಲಿ ಅನೇಕ ಮತಗಳಿರುವುವು. ಆಯಾ ಮತಧರ್ಮಗಳ ಪ್ರಕಾರ ಆಯಾ ಪೂರ್ವಾಚಾರ್ಯರು ಅನೇಕವಿಧವಾದ ಆಚಾರಗಳನ್ನೂ ಅನೇಕವಿಧವಾದ ಧರ್ಮಕಟ್ಟುಗೆಗಳನ್ನೂ ಹಾಕಿಕೊಟ್ಟಿರುತ್ತಾರೆ. ಇತರ ಮತದವರು ತಮ್ಮ ತಮ್ಮ ಪೂರ್ವಾಚಾರ್ಯರ ಆಚಾರ ವಿಚಾರಗಳನ್ನು ಅನುಸರಿಸಿ ಸ್ವಲ್ಪಾದರೂ ಚ್ಯುತಿ ಬಾರದಂತೆ ವರ್ತಿಸುತ್ತ ದಿನದಿನಕ್ಕೂ ಮುಂದುವರಿಯುತ್ತಿರುವುದನ್ನು ನೋಡಿ ಸಂತೋಷಪಡಬೇಕಾಗಿದೆ. ಆದರೆ ನಮ್ಮ ವೀರಶೈವ ಸಮಾಜದವರು ಮಾತ್ರ ಆಚಾರ ವಿಚಾರಗಳಲ್ಲಿ ಸುಧಾರಿಸುವ ಬದಲು ಅನಾಚಾರಸಂಪನ್ನರಾಗಲು ಮುಂದುವರಿಯುತ್ತಿರುವುದನ್ನು ನೋಡಿ ದುಃಖ ಪಡಬೇಕಾಗಿದೆ. ಈಗಿನ ನವೀನ ವೀರಶೈವ ಸಮಾಜದ ಬಾಲಕರ ಧರ್ಮಕಟ್ಟಳೆಗಳನ್ನಂತೂ ಹೇಳಲಸದಳ! ಪೂರ್ವಾಚಾರ್ಯರು ಬೆಳಗಿನಜಾವದಲ್ಲಿದ್ದು ಶೌಚ, ದಂತಧಾವನ, ಮುಖಪ್ರಕ್ಷಾಲನ, ಸ್ನಾನ ಸಂಧ್ಯಾವಂದನ ಲಿಂಗಾರ್ಚನ ಮೊದಲಾದ ನಿತ್ಯಕರ್ಮಗಳನ್ನು ತೀರಿಸಿಕೊಂಡು ತಮ್ಮತಮ್ಮ ಕೆಲಸಗಳಲ್ಲಿ ಎಡೆಬಿಡದೆ ನಿಗ್ನರಾಗಿರುವಂತೆ ಕಟ್ಟುಳೆಗಳನ್ನು ಮಾಡಿಟ್ಟಿರೆ, ಈಗಿನವರು ಪ್ರಾತಃಕಾಲ ೯ ಘಂಟೆಗೆ ಏಳುವರು. ಹೊತ್ತಾಗಿದೆಯೆಂದು ಹಾಗೆಯೇ ಬಚ್ಚಲು ಕೋಣೆಗೆ ಬರುವರು. ಒಂದು ಜೊಗಸಿ ನೀರಿನಿಂದ ಮುಖದ ಮೇಲೆ ಕೈ ಎಳೆದುಕೊಂಡು ಬಿಳಿ ಕರವಸ್ತ್ರದಿಂದ ಕಣ್ಣೊಳಗಿನ ಪಿಚ್ಚನ್ನೂ ಕಟಿಮಾಯಿ ಜೊಲ್ಲನ್ನೂ ಒರಸಿಕೊಳ್ಳುವರು. ಹಲ್ಲುಗಳನ್ನು ಉಜ್ಜಿ ತೊಳೆಯುವುದಂತೂ ಇನರಿಗೆ ಬೇಜಾರು. ಇನ್ನು ವಿಭೂತಿಧಾರಣವು ತಲೆಯ ಮೇಲಿನ ಕ್ಯಾಪಿಗೆ ಕೇವಲ ಅಸಹ್ಯವಾದುದೆಂದು ಭಾವಿಸಿ ಹಾಗೆಯೇ ಹೋಗುವರು. ಇನ್ನು ಅವಸರವೇತಕ್ಕೆ? ಕೂಡಲೇ ಚಹಾಪೇವಿಯ ಆಲಯವನ್ನು ಹೊಕ್ಕು ದರ್ಶನವನ್ನು ಮಾಡಿಕೊಳ್ಳುವ ಮನೋಲವಲವಿಕೆಗೆ.

ವೀರಶೈವ ಧರ್ಮಾಭಿಮಾನಿಗಳೇ! ನೀವು ಚಹಾ ಹೋಟಲಿನಲ್ಲಿ ನಮ್ಮ ವೀರಶೈವ ತರುಣ ಬಾಂಧವರು ಎಷ್ಟೋಸಲ ಕುಳಿತಿರುವುದನ್ನು ನೋಡಿರಬಹುದಲ್ಲವೇ? ಆಲ್ಲೇನು ಮಾಡುವರು? ನಾನಾಜಾತಿಯವರು ಕುಡಿದು ಬಿಸ್ಟಿದ್ದ ಕಪ್ಪುಗಳನ್ನು ಒಂದು ಕಡೆ ತೊಳೆದರೂ ಇನ್ನೊಂದು ಕಡೆ ಹಾಗೆಯೇ ಎಂಜಲು ಉಳಿದಿರುವ ೪ ಕಪ್ಪುಗಳಲ್ಲೇ ನಮ್ಮ ನವೀನ ತರುಣರಿಗೆ ಚಹವನ್ನು ಕೊಡುವರು. ಆ ಎಂಜಲು ಉಳಿದಿರುವ ಕಪ್ಪಿನ ಮಗ್ಗುರಿಗೇನೇ ಬಾಯಿ ಹಚ್ಚಿ ಕುಡಿಯುವರು ನೋಡಿದಿರಾ! ಈ ಆಚ್ಛಾನತನವನ್ನು? ಇದಂತೂ ಜಂಟಲ್‌ಮೇನರ್‌ಗಳು ಸಂಭವಿಸುವಂಬಂತರವನ್ನು ನುಡಿತಿಲ್ಲದು. ಹಿತಾವ ಕಂಗಡಿಗೆ ಒಬ್ಬ ಕುಷ್ಠರೋಗಿಯೂ ಬರುವನು, ಒಬ್ಬ ಕ್ಷಿನ್ನರೋಗಿಯೂ ಬರುವನು, ಒಬ್ಬ ಕ್ಷಯರೋಗಿಯೂ ಬರುವನು, ಇವರೆಲ್ಲರೂ ಕುಡಿದಿಟ್ಟಿದ್ದ ಕಪ್ಪುಗಳನ್ನು ಹೋಟಲಿನವರು ಅರ್ಧ ತೊಳ್ದರೂ ಅರ್ಧ ತೊಳ್ದೆ ಹಾಗೆ ತೊಳೆದು ಇಡುವರು. ಅವೇ ಕಪ್ಪುಗಳನ್ನೇ ಚಹಾಪೇವಿಯ ದರ್ಶನಾರ್ಥವಾಗಿ ಬಂದ ಉಳಿದ ಬಾಂಧವರಿಗೆ ಚಹವನ್ನು ಹಾಕಿ ಕೊಡುವರು. ಕುಡಿಯಲೋಸುಗ ಕಪ್ಪನ್ನು ಕಚ್ಚುವಾಗ ಆ ರೋಗಿಗಳ ಎಂಜಲು ಇವರ ಎಂಜಲಿನಲ್ಲಿ ಬೆರೆತು ಅವರಿಗೂ ಕೂಡ ಈ ರೋಗಗಳು ಅಂಟುವುವು. ಆದಕಾರಣ ಚಹಾಭಕ್ತರು ಇನ್ನಾದರೂ ಎಚ್ಚೆತ್ತುಕೊಳ್ಳುವುದುತ್ತಮ.

ಹೀಗೆಯೇ ಹರಟೆಗಳನ್ನು ಕೊಚ್ಚುತ್ತಾ ಅನಾರೋಗ್ಯಕ್ಕೆ ಕೇವಲ ಸಮೂಹದ ಬಂಧುಗಳಾದ ಜುಟ್ಟು, ಸಿಗರೇಟು ಮೊದಲಾದುವುಗಳನ್ನು ಸೇವಿಸುತ್ತ ಚಹಾಪೇವಿಯ ಆಲಯವನ್ನು ಬಿಟ್ಟು ಬರುವುದರೊಳಗೆ ೧೫ ಘಂಟೆಯಾಗಿರುವುದು. ಹೊತ್ತು ಮಿಾರಿದುದರಿಂದ ಸ್ನಾನ ಮಾಡಲು ಮನಸ್ಸಾಗುವುದಿಲ್ಲ. ಹಾಗೆಯೇ ಜೋದವಪ್ಪ ಬಂದಷ್ಟನ್ನು ಊಟ ಮಾಡಿ ಹೊರಡುವರು. ಸ್ನಾನ ಮಾಡುವುದನ್ನೇ ಬಿಟ್ಟವರೆಲೆ ಶಿವಪೂಜೆಯಂತೂ ದೂರವುಳಿಯಿತಲ್ಲವೇ? ಶಿವಪೂಜೆಯನ್ನು ಮಾಡಬೇಕೆನ್ನುವುದು ಕನಸುಮನಸಿನಲ್ಲಿಯೂ ಇರುವುದಿಲ್ಲ. ಆದಿರಲಿ, ಹೀಗೆಯೇ ಸ್ನಾನಮಾಡುವುದನ್ನು ಕೆಲವು ದಿವಸಗಳವರೆಗೆ ಬಿಟ್ಟರೆ ಕೊಳೆಯಾಗಿ ಮೈ ರಂಧ್ರಗಳಲ್ಲಿ ಇಮಿಕಿ ಕಜ್ಜಿ, ತುರಿ ಮೊದಲಾದ ಚರ್ಮರೋಗಗಳಿಗೆ ಕಾರಣವಾಗುವುದು. ಇನ್ನು ಸುಖ ಶಾಂತಿಯನ್ನೀಯುವ ಇಷ್ಟಲಿಂಗವನ್ನು ದೇಹದಲ್ಲಿ ಎಡೆಬಿಡದೆ ಧರಿಸಬೇಕೆಂದು ಧರ್ಮಶಾಸ್ತ್ರವಿದ್ದರೆ, ಈಗಿನ ನವೀನ ತರುಣರು ತಮಗೆ ಆಟಪಾಟಾದಿಗಳಿಗೆ ಅತಂಕವಾಗುವುದೆಂದೂ ಹೃದಯದ ಮುಂದೆ ಕರಡಿಗೆಯನ್ನು ಧರಿಸಲು ಉಬ್ಬಿಕೊಂಡು ತಮ್ಮ ವಿಜಾತೀಯ ಮಿತ್ರರೊಂದಿಗೆ ಸ್ವೇಚ್ಛಾಪ್ರಕಾರ ತಿರುಗಾಡಲು ಒಂದು ವಿಧವಾದ ಅಸಹ್ಯವೆಂದೂ ಭಾವಿಸಿ ಆ ಕರಡಿಗೆಯನ್ನು ತೆಗೆದು ಟ್ರಂಕಿನಲ್ಲಿಟ್ಟು ಬೀಗಹಾಕಿಕೊಂಡು ತಿರುಗಾಡುವರು. ಎಷ್ಟೋಜನ ನಮ್ಮ ವೀರಶೈವರು, ಎಲ್ಲಿಯ ಧರ್ಮ? ನಿಬಂಧನೆಗಳು? ಎಲ್ಲಿಯ ಗುರು? ಲಿಂಗ? ಜಂಗಮ? ಎಂದು ಅಮಂಗಲವಾಗಿ ನುಡಿಯುತ್ತ ಮನಬಂದಂತೆ ವರ್ತಿಸುತ್ತಿರುವರು. ವೀರಶೈವ ಸಮಾಜಬಂಧುಗಳೇ! ಯಾವುದಕ್ಕಾದರೂ ನಿತವಿದೆ ಊಟಮಾಡುವುದಕ್ಕೂ ನಿತಿಯುಂಟು. ನಿತಿದಪ್ಪಿ ಊಟಮಾಡಿದರೆ ಅನಾರೋಗ್ಯಕ್ಕೆ ಕಾರಣವಾಗಿ ದುಃಖಪಡಬೇಕಾಗುತ್ತದೆ. ಅದರಂತೆಯೇ ನಮ್ಮ ವೀರಶೈವ ಸಮಾಜಬಾಂಧವರು ನಿತವಾಗಿದ್ದರೇನೇ ಸರಿ, ನಿತದಪ್ಪಿ ನಡೆದರೆ ದುಃಖಕ್ಕೆ ಗುರಿಯಾಗುವುದರಲ್ಲಿ ಸಂಶೇಹವಿಲ್ಲ. ಆದಕಾರಣ ಇನ್ನಾದರೂ ಉಳಿದ ಮತಧರ್ಮವರ ನಡವಳಿಕೆಗಳನ್ನು ನೋಡಿ ಈಗಿನ ವೀರಶೈವ ಸಮಾಜದ ದುಃಸ್ಥಿತಿಯನ್ನು ನೀಗಿ ವೀರಶೈವ ಮತಧರ್ಮದ ನಡೆನುಡಿಗಳನ್ನು ತಿದ್ದಿಕೊಂಡು ವೀರಶೈವ ಸಮಾಜವು ಪರಮಪವಿತ್ರವಾದುದೆಂಬ ಅನ್ವರ್ಥಕನಾಮವನ್ನು ಸಂಪಾದಿಸಿ ಮೂಲಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಈ ಕಿಂಕರನು ಕಿಂಕರಭಾವದಿಂದ ಬೇಡಿಕೊಳ್ಳುತ್ತಾನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ, ಬೆಂಗಳೂರು

ಪ್ರಕಟಣೆ

ವೀರಶೈವಸಮಾಜಾನರಲ್ಲಿ ವಿಜ್ಞಾಪನೆ—

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘವು ಸ್ಥಾಪಿತವಾಗಿ ಇಂದಿಗೆ ಸುಮಾರು 32 ವರ್ಷಗಳಾದವು. ಸ್ಥಾಪಿತ ಕಾಲದಿಂದಲೂ ನಮ್ಮ ಸಮಾಜಕ್ಕೆ ಶಿಕ್ಷಣಪ್ರಾಯರಾದ ರಾಜಸಭಾಭೂಷಣ ವಿದ್ಯಾ ಬಹದ್ದೂರ್ ಡಾಕ್ಟರ್ ಸರ್ ಕೆ ಪಿ. ಪುಟ್ಟಣ್ಣ ಶೆಟ್ಟಿ, ಕೆಬಿ, ಸಿ.ಇ.ಇ., ಇವರು ಸಂಘದ ಅಧ್ಯಕ್ಷರಾಗಿರುವುದು ನಮ್ಮ ಸಮಾಜದ ಭಾಗ್ಯವೆಂದೇ ಹೇಳಬೇಕು.

ಸಂಘವು ತನ್ನ ಧ್ಯೇಯಕ್ಕನುಸಾರವಾಗಿ ಅನೇಕ ವೀರಶೈವ ವಿದ್ಯಾರ್ಥಿಗಳಿಗೆ ಧನಸಹಾಯವನ್ನು ನೀಡುತ್ತಾ ನಮ್ಮ ಸಮಾಜದಲ್ಲಿ ವಿದ್ಯಾಪ್ರಚಾರಕ್ಕೆ ಉತ್ತೇಜನ ಕೊಡುತ್ತಿರುವುದಲ್ಲದೆ, ಅನೇಕರು ಫಂಡಿನ ಸಹಾಯಯೊಂದಿ, ವಿದ್ಯಾಭ್ಯಾಸ ಮಾಡಿ, ಸರ್ಕಾರದ ದೊಡ್ಡ ಪದವಿಗಳಲ್ಲಿಯೂ, ವ್ಯಾಪಾರ ಮುಂತಾದ ಕಸುಬುಗಳಲ್ಲಿಯೂ ಪ್ರವರ್ತಿಸುವುದು ನರ್ವರಿಗೂ ತಿಳಿದುಬರುವ ಅಗಿದೆ. ವಿದ್ಯಾರ್ಜನೆ ಮಾಡುವವರ ಸಂಖ್ಯೆಯು ದಿನೇದಿನೇ ಹೆಚ್ಚುತ್ತಾ ಬರುತ್ತಲಿರುವುದು ಸಂತೋಷಕರವಾದ ವಿಷಯವೇ ಸರಿ. ಹೀಗೆ ಸಂಘದಿಂದ ಸಹಾಯವನ್ನು ಬಯಸುವ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಾ, ಪ್ರಾಥಮಿಕವಿದ್ಯಾಭ್ಯಾಸ ಮಾಡುವ ಪ್ರತಿಯೊಬ್ಬ ಬಡವಿದ್ಯಾರ್ಥಿಗೂ ಸಂಘವು ತನ್ನ ಈಗಿನ ವರಮಾನದಿಂದ ಸಹಾಯ ಮಾಡುವುದು ಬಹಳ ದುಸ್ತರವಾಗುತ್ತಲಿದೆ. ಕಾರಣ ಕಿಮು ಹೀಗಿದ್ದರೂ, ವಿವಾಹ ಮುಂತಾದ ಶುಭಕಾರ್ಯಗಳಲ್ಲಿ ಫಂಡಿಗೆ ತೆಗೆಯುತ್ತಿದ್ದ ಅಲ್ಪಸ್ವಲ್ಪ ಧನಸಹಾಯವೂ ಬಹಳ ಶೋಚನೀಯವಾದ ಸ್ಥಿತಿಯಲ್ಲಿ ಕಡಿಮೆಯಾಗುತ್ತಲಿದೆಯೆಂದು ತಿಳಿಸಲು ನಿಷಾದವೆನಿಸುತ್ತದೆ.

ಸಂಘದ ನವೀನವಾಗಿ ಯಾವ ರೀತಿಯಲ್ಲಿ ಪ್ರತಿಯೊಂದು ವಿದ್ಯಾಸ್ಥಿತಿಗೆ ಅರ್ಹರಾಗಿ ಕಂಡುಬಂದ ಎಲ್ಲಾ ವಿದ್ಯಾರ್ಥಿಗಳಿಗೂ ನೇತನರೂಪದಲ್ಲಿ ವಿನಿಯೋಗಿಸಲ್ಪಡುತ್ತಲಿದೆಯೆಂಬುದೆನ್ನು ಆಯಾ ಸಾಲುಗಳಲ್ಲಿ ಪ್ರಕಟವಾಗುತ್ತಿರುವ ವರದಿಗಳಿಂದ ಪರಿಶೀಲಿಸಬಹುದು.

ಆದುದರಿಂದ ಸ್ಥಳೀಯ ವೀರಶೈವಸಮಾಜದವರು ಅಯಾ ಡಿಸ್ಟ್ರಿಕ್ಟ್ ಪ್ರಾಂತದ ವೀರಶೈವಸಮಾಜದವರು ಅಗ್ರ, ದೀಕ್ಷೆ ಮುಂತಾದ ಶುಭಕಾರ್ಯಗಳಲ್ಲಿ ಕೈದಾಪ್ಪು ಪ್ರೋತ್ಸಹಯ ಮಾಡುವಂತೆ ಪ್ರೋತ್ಸಾಹಿಸಿ, ಹಾಗೆ ತೆಗೆದಿರಿಸಿದ ಹಣವನ್ನು ಸಂಘದ ಪ್ರತಿನಿಧಿಯಿಂದ ಅಥವಾ ಸೆಕ್ರೆಟರಿಯವರ ಹೆಸರಿಗೆ ಕಳುಹಿಸಿಕೊಡಬೇಕಾಗಿ ಕೋರಿದೆ. ಇದರಿಂದ ಫಂಡಿನ ಮೂಲಧನವು ಇನ್ನೂ ವೃದ್ಧಿಯಾಗಿ ತನ್ಮೂಲಕ ಬಹುಜನ ವೀರಶೈವ ವಿದ್ಯಾರ್ಥಿಗಳಿಗೆ ಸಹಾಯಮಾಡಲು ಅನುಕೂಲವಾಗುತ್ತೆಂದು ಮತ್ತೆ ಹೇಳಬೇಕಾಗಿಲ್ಲ.

ಬೆಂಗಳೂರು, **ಸರಾಫ್ ಬಿ. ಬಸಪ್ಪ,**
ತಾ॥ 12-6-1938. ಆಕ್ಟಿಂಗ್ ಸೆಕ್ರೆಟರಿ.

ಕರ್ನಾಟಕದಲ್ಲಿ ಕಾಲುವೆಯ ವಿಚಾರ

ಕರ್ನಾಟಕದೇಸದಲ್ಲಿ ಕಾಲುವೆಗಳನ್ನು ತೆಗೆಯಿಸಿ ರೈತರಿಗೆ ನೀರನ್ನು ಒದಗಿಸಬೇಕೆಂಬ ವಿಷಯವು ಬೊಂಬಾಯಿ ಸರಕಾರದವರ ದೃಷ್ಟಿಯಲ್ಲಿದೆ. ಯಾವಾಗಲೂ ಮಳೆಯಿಲ್ಲದೆ ಕೊರಗುತ್ತಿರುವ ವಿಜಾಪುರ ಡಿಸ್ಟ್ರಿಕ್ಟನ್ನು ಇದಕ್ಕಾಗಿ ಮುಖ್ಯಸ್ಥಾನವನ್ನಾಗಿ ಮಾಡುತ್ತಾರೆಂದು ತಿಳಿದುಬರುತ್ತದೆ.

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಶುಭಾಗಮನ ಹೂವಿನ ಹಡಗಲಿ

ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರು ಭಕ್ತೋದ್ಧಾರ ನಿಮಿತ್ತವಾಗಿ ಸದ್ಯಃ ಹಿರೇಹಡಗಲಿಯಲ್ಲಿ ಮುಕ್ಕಾಂ ಮಾಡಿರುವ ವಿಷಯವು ಸಕಲರಿಗೂ ತಿಳಿದುದಾಗಿದೆ. ಇದೇ ತಿಂಗಳು ಕಳೆದ ೧೦ ನೇ ತಾರೀಖು ಶುಕ್ರವಾರ ಬಳ್ಳಾರಿ ಜಿಲ್ಲಾ ಹುವಿನ ಹಡಗಲಿ ಗ್ರಾಮದ ಶಿವಯೋಗಿ ಸೇವಾಸಕ್ತರಾದ ಮ॥ ರಾ॥ ವಾಟೇಲ್ ಲಿಂಗನಗೌಡರು ಶ್ರೀ ಮಹಾಸನ್ನಿಧಿಗೆ ವಿನ್ನಹಮಾಡಿಕೊಂಡರು. ಆದೇ ಪ್ರಕಾರ ಶ್ರೀ ಮಹಾಸನ್ನಿಧಿಯವರು ತಮ್ಮ ಪಾಸ ಸರ್ಕೀಟನ್ನು ಅಲ್ಲಿಯೇ ಬಿಟ್ಟು ಮಿತಪರಿವಾರದೊಡನೆ ಹುವಿನಹಡಗಲಿಗೆ ದಯಮಾಡಿಸಿದರು ಜಗದ್ಗುರುಗಳನ್ನು ವಿಶೇಷಸಂಭ್ರಮದಿಂದ ಎದುರ್ಗೊಂಡು, ಪಾದಪೂಜೆಯನ್ನು ನೆರವೇರಿಸಿ, ಕಾಣಿಕೆಯನ್ನರ್ಪಿಸಿ ಧನ್ಯರಾದರು. ಮರುದಿವಸ ಶನಿವಾರ ಗುರುಸೇವಾಧುರೀಣರಾದ ಶ್ರೀಮಂತ ಸೊಪ್ಪಿನ ಮಲ್ಲಪ್ಪನವರು ಮಹಾಸನ್ನಿಧಿಯವರನ್ನು ಸಕಲಮರ್ಯಾದಾಪೂರ್ವಕ ತಮ್ಮ ಮನೆಗೆ ಬಿಜಯಂಗೈಸಿಕೊಂಡು, ಪಾದಪೂಜೆಯನ್ನೂ ಮಹಾಗಣಾರಾಧನೆಯನ್ನೂ ಮಾಡಿ, ಕುಟುಂಬಯುಕ್ತರಾಗಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ, ಕಾಣಿಕಾದಿ ಸೇವೆಯನ್ನೊಪ್ಪಿಸಿ ಪುನೀತರಾದರು. ಪ್ರತಿದಿನವೂ ಶ್ರೀ ಮಹಾಸ್ವಾಮಿಗಳ ದರ್ಶನಾಕಾಂಕ್ಷೆಗಳಾಗಿ ಭಕ್ತಾದಿಗಳು ತಂಡೋಪತಂಡವಾಗಿ ಆಗಮಿಸಿ ತಾವು ಮೊದಲಿನ ಲಿಂಗೈಕ್ಯ ಜಗದ್ಗುರುಗಳವರಿಗೆ "ವಿದ್ಯಾಭಂಡಿ" ಗಾಗಿ ವಾಗ್ದಾನ ಮಾಡಿದ ನಿಧಿಯನ್ನು ಅರ್ಪಿಸುತ್ತ ಫಲಾಪೇಕ್ಷಾದಿವನ್ನು ಪಡೆಯುತ್ತಿರುವರು ಮಹಾಸ್ವಾಮಿಗಳವರ ಸಮ್ಮುಖದಲ್ಲಿ ಮಲ್ಲನಕೇರಿ ಮಠದೊಳಗೆ ಪ್ರತಿದಿನ ಸಂಧ್ಯಾಕಾಲಕ್ಕೆ ಅಸಗೋಡು ಪಟ್ಟಾಧ್ಯಕ್ಷ ಸ್ವಾಮಿಗಳವರಿಂದಲೂ ಹಿರೇಹಡಗಲಿ ಪುರಾಣಿಕ ಮಠದ ವೇ॥ ವಿರೂಪಾಕ್ಷ ಶಾಸ್ತ್ರಿಗಳವರಿಂದಲೂ ಪ್ರವಚನಗಳೂ ವ್ಯಾಖ್ಯಾನಗಳೂ ಜರುಗುತ್ತಲಿದ್ದುವು.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ತಿಳಿಹಿಸಲು ಅತ್ಯಂತ ಸಂತೋಷವಾಗುತ್ತದೆ. ಅದೇನೆಂದರೆ ಈ ಗ್ರಾಮದಲ್ಲಿ ಈಗೆ ೧೫, ೨೦ ವರ್ಷಗಳಿಂದಲೂ ಬದ್ಧಪಾರ್ಟಿಯಿದ್ದು, ಸದ್ಯಃ ಯೂನಿಯನ್ ಬೋರ್ಡ್ ಎಲೆಕ್ಷನ್ ಬಂದಿದ್ದು, ತತ್ಸಂಬಂಧ ದ್ವೇಷಾಸೂಯೆಗಳು ಬೆಳೆದಿದ್ದುವು. ಮಹಾತ್ಮರ ದರ್ಶನದಿಂದ ಮುಮುಕ್ಷುಗಳ ಪಾಪವು ದೂರಾಗಿ ನಿತ್ಯಸುಖಹೇತುವಾದ ಮೋಕ್ಷಮಾರ್ಗವು ಲಭಿಸುವುದೆಂಬುದ್ಕೆಯು ಎಂದೂ ಸುಳ್ಳಾಗಲಾರದು. ಅದೇಪ್ರಕಾರ ಪರಮತಪೋನಿಧಿಗಳೂ, ಭಕ್ತೋದ್ಧಾರ ದೀಕ್ಷಿತರೂ, ಆದ ಶ್ರೀಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ದರ್ಶನಮಾತ್ರದಿಂದಲೇ ಉಭಯಪಕ್ಷದವರೂ ಆ ಸ್ಥಾನಕ್ಕೆ ಆಗಮಿಸಿ ತಮ್ಮ ತಮ್ಮ ದ್ವೇಷಾಸೂಯೆಗಳನ್ನು ಬಿಟ್ಟು ನಿರ್ಮಲ ಹೃದಯರಾಗಿ ಏಕೀಭವಿಸಿದರು. ಮಹಾಸನ್ನಿಧಿಯವರು ಸಕಲರೂ ಏಕೀಭವಿಸಿದುದನ್ನು ನೋಡಿ ಪರಮಾನಂದಭರಿತರಾದರು ಉಭಯಪಕ್ಷದವರೂ ಮಹಾಸನ್ನಿಧಿಯಲ್ಲಿ ತಮ್ಮ ತಮ್ಮ ಕಲ್ಮಷಗಳನ್ನು ಬಿಟ್ಟು ಶರಣಹೃದಯರಾಗಿ ಏಕೀಭವಿಸಿದ್ದನ್ನು ನೋಡಿದರೆ ಇದಕ್ಕೆಲ್ಲಾ ಶ್ರೀಜಗದ್ಗುರುಗಳವರ ತಪಃಪ್ರಭಾವವೇ ಮುಖ್ಯಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ ಪುರವಾಸಿಗಳು ಈ ಪ್ರಕಾರವಾದ ಐಕ್ಯವನ್ನುಂಟುಮಾಡಿದುದಕ್ಕೆ ಗುಂಪುಗುಂಪಾಗಿ ಕಲೆತು ಶ್ರೀಮಹಾಸ್ವಾಮಿಗಳವರ ಪ್ರಭಾವವನ್ನು ಕೊಂಡಾಡಹತ್ತಿದರು ಹೂವಿನಹಡಗಲಿ ದೈವದವರು ತಾವು ಜಗದ್ಗುರುವಿನ ಸಮ್ಮುಖದಲ್ಲಿ ಏಕೀಭವಿಸಿದ ವಿಷಯಕ್ಕೆ ಸ್ವಲ್ಪಾದರೂ ಚ್ಯುತಿಬಾರದಂತೆ ಎಚ್ಚೆತ್ತುಕೊಂಡು, ಗುರುಕಾರ್ಯದಲ್ಲಿ ಕಟಿಬದ್ಧರಾಗಿದ್ದು ಏಕ್ಯದಿಂದ ತಮ್ಮ ವಂಶವನ್ನೂ ಊರನ್ನೂ ದೇಶವನ್ನೂ ಉದ್ಧಾರಮಾಡಿಕೊಳ್ಳಲು ಮುಂದುವರೆಯಲೆಂದು ಜಗದ್ಗುರು ಪಂಚಾಚಾರ್ಯರನ್ನು ನಿತ್ಯದಲ್ಲೂ ಸ್ಮರಿಸುತ್ತೇನೆ. ಶ್ರೀ ಮಹಾಸನ್ನಿಧಿಯವರು ಇನ್ನೂ ೧, ೨ ದಿವಸಗಳು ಇಲ್ಲಿಯೇ ಇದ್ದು ಪುನಃ ಹಿರೇಹಡಗಲಿಗೆ ದಯಮಾಡಿಸುವವರಾಗಿರುತ್ತಾರೆ.

ಗುರುಸೇವಾಕಿಂಕರ,
ಹೂವಿನಹಡಗಲಿ.

ಧಾರ್ಮಿಕಸಭಾ ಹೋಟಗಿ

ತಾ॥ ೫-೬-೩೮ ಲ್ಕೆ ಹೋಟಗೀ ಬೃಹನ್ಮಠದಲ್ಲಿ ಶ್ರೀಶಂಕರಾನಂದಶರ್ಮಾ-ನೀರಲಗಿ (ಕಾಶೀ) ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ವೇ॥ ಶ್ರೀವಿರೂಪಾಕ್ಷಶಾಸ್ತ್ರಿಗಳವರು ವೆಂದಲಿ ದಾಸೋಹಮಠ ಇವರ ಮಹತ್ವಪೂರ್ಣ ಭಾಷಣವಾಯಿತು. ಅದರ ಸಾರಾಂಶ—

ಸಭಿಕಮಹನೀಯರೇ! ಬ್ರಹ್ಮ-ವಿಷ್ಣು-ರುದ್ರರಿಗೂ ಯಾವ ಕಾರ್ಯವು ಅಶಕ್ಯವೋ ಆ ಕಾರ್ಯವನ್ನು ಲೀಲಾಮಾತ್ರದಿಂದ ಪೂರೈಸುವ ಶಕ್ತಿಯು ಯಾವ ಪರಮ ಪೂಜ್ಯ ನಿಭೂತಿಯಲ್ಲುಂಟೋ, ಆ ಪೂಜ್ಯಮೂರ್ತಿಗಳೇ ನಮ್ಮ ಮತಸ್ಥಾಪಕರಾದ ಶ್ರೀಪಂಚಾಚಾರ್ಯರು. ತಾಯಿಯ ಹಾಲನ್ನೇ ಉಂಡು, ತಾಯಿಯಿಂದಲೇ ಸಂರಕ್ಷಣವಾಗಿ ಪುನಃ ಆ ತಾಯಿಯನ್ನೇ ತಿರಸ್ಕರಿಸುವ ದುಷ್ಟಪುತ್ರರಿದ್ದರೂ, ಆ ಮೆಕ್ಕಳಿಗೆ ಕೆಡಕನ್ನು ಬಯಸದಿರುವ ತಾಯಿಯಂತೆಯೇ—ಶ್ರೀಸಂಚಾಚಾರ್ಯರ ಪುತ್ರರಾಗಿಯೇ ಜನಿಸಿ-ಅವರ ಸೂತ್ರ-ಗೋತ್ರಗಳನ್ನೇ ಹೇಳುತ್ತ, ಆ ಪೂಜ್ಯರನ್ನೇ ಅಲ್ಲಗಳೆಯುವ ಕೆಲ ತುಂಟರ ತಂಡವು ತಯಾರಾಗುತ್ತಿರುವದು. ಅದರೂ ಆ ಪೂಜ್ಯಪಾದರು ನಮ್ಮ ಮಕ್ಕಳೇ ಇದ್ದಾರೆ ಎಂದು ಮೌನವನ್ನು ಧರಿಸಿದ್ದಾರೆ. ಆದರೆ 'ಮಾನಿಯು ಮಾನಕ್ಕಂಜಿಗರೆ ಮಾನಗೇಡಿಯು ನನಗೇ ಅಂಜಿದ' ನೆಂದಹಾಗೆ ಆ ನಿಂದಕಕುಹಕರು ನಾವು ಹಾಗೆ ಮಾಡಿದೆವು-ಹೀಗೆ ಮಾಡಿದೆವು-ಆದಕ್ಕೆ ಉತ್ತರ ಕೊಡದೆ ನಮ್ಮನ್ನೇ ಹೋದರು ಎಂದು ಜಲ್ಪಿಸಹತ್ತಿರುವರು. ಅಯ್ಯೋ! ಎಂಥ ಹುಚ್ಚತನವಿದು? ನಮ್ಮ ಮತಸ್ಥಾಪನಾಚಾರ್ಯರಲ್ಲಿ ನಾವು ಶಂಕೆಯುಳ್ಳವರಾದರೆ, ಅವರ ಮಕ್ಕಳಾದ ನಮಗೆ ಆ ಶಂಕೆಯು ಸಂಬಂಧಿಸುವದಿಲ್ಲವೇ? ತಂದೆಯೊಡನೆ ಕಲಹವಾಡಿದರೂ ಕಾಗದ ಪತ್ರಗಳಲ್ಲಿ ಸಹಿ ಮಾಡಬೇಕಾದರೆ, ಆ ತಂದೆಯ ಹೆಸರನ್ನು ಬರೆಯಲೇ ಬೇಕಾಗುತ್ತದೆ. ಇದನ್ನರಿಯದ ಕೆಲ ಸಂಕರರು ಎಂಟುನೂರು ವರ್ಷದವನೆ ಬೆನ್ನುಹತ್ತಿ ತಮ್ಮ ಉತ್ಪತ್ತಿಯಲ್ಲಿಯ ವ್ಯತ್ಯಾಸವನ್ನು ಪ್ರಕಟಿಸಲು ಹಾತೊರೆಯುವರು. ಅಸ್ತು! ಈ ನಮ್ಮ ಮತದಲ್ಲಿ ವರ್ಣಾಶ್ರಮಗಳಿಲ್ಲವೆಂದೂ, ಶಿವಯು ಇರಕೂಡದೆಂದೂ, ಸೂತಕಗಳಿಲ್ಲವೆಂದೂ, ಯಾರುಬೇಕಾದವರಿಗೆ ಲಿಂಗವನ್ನು ಬಿಗಿದು ಬಳಕೆ ಮಾಡಬಹುದೆಂದೂ, ಯಾರುಬೇಕಾವವರು ಲಿಂಗವನ್ನು ಧರಿಸಬಹುದೆಂದೂ ಮುಂತ್ರೋಪದೇಶವನ್ನೀಯಬಹುದೆಂದೂ ಬೊಗಳುವ ಬಾಯಿಬಡುಕರಿಗೆ ಪಂಡಿತರು ಚೆನ್ನಾಗಿ ಪೆಟ್ಟುಬೀಳಹಾಕಿದರು ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಗಳ ಸ್ವರೂಪವನ್ನು ಚೆನ್ನಾಗಿ ಪ್ರತಿಪಾದಿಸಿ, ಶಕ್ತಿವಿಶಿಷ್ಟಾದ್ವೈತದ ರಹಸ್ಯವನ್ನು ಹಳ್ಳಿಯವರಿಗೂ ತಿಳಿಯುವಂತೆ ೧॥ ಘಂಟೆಯವರೆಗೆ ಉಪನ್ಯಸಿಸಿದರು ಆ ಮೇಲೆ ಅಧ್ಯಕ್ಷರು ಸೂತ್ರರೂಪದಿಂದ ಬಹು ಹೃದಯಂಗಮವಾಗಿ ಉಪಸಂಹಾರಗೊಳಿಸಿದರು ಹೋಟಗೀ ಶ್ರೀಗಳು—ವಂದಲಿಶಾಸ್ತ್ರಿಗಳವರ ಕಾರ್ಯಕರ್ತೃತ್ವವನ್ನೂ ಅವರ ಭಾಷಣದಪರಳತ್ವವನ್ನೂ ವರ್ಣಿಸಿ, ಅವರ ಅಧಾರಪ್ರದರ್ಶನಮಾಡಿದರು.

ಆಕಸ್ಮಾತ್ತಾಗಿ ದಯಮಾಡಿಸಿದ ವಂದಲಿಶಾಸ್ತ್ರಿಗಳು ನಮ್ಮ ಪ್ರಾರ್ಥನೆಗೆ ಒಪ್ಪಿ ಭಾಷಣಮಾಡಿದುದಕ್ಕೆ ನಮ್ಮ ಸಂಘವು ಋಣಿಯಾಗಿದೆ.

ವೀರಶೈವ ಶುಭಚಿಂತಕಸಂಘದ ಸೆಕ್ರೆಟರಿ. ಹೋಟಗಿ.

ವೀರಶೈವ ಧರ್ಮೋನ್ನತಿಯ ಕಾರ್ಯಗಳು

ಸೊಲಾಪುರತಾಲೂಕ ಸೈಕಿ ಗಂಗಾಧರ ಕಣಮಸ, ಎಂಬ ಗ್ರಾಮದಲ್ಲಿ ವೀರಶೈವರು ಭಕ್ತಿವಂತರೂ, ಸದಾಚಾರಿಗಳೂ ಆಗಿದ್ದಾರೆ. ಅಲ್ಲಿ ಪ್ರಭಪ್ಪ ಜಮ್ಮಾ ಎಂಬ ಸದ್ಭಕ್ತರು ಗುರುಪುತ್ರರಾಗಿರುವದರಿಂದ ಬಂಗಾರಕ್ಕೆ ಸುಗಂಧಪ್ರಾಪ್ತವಾದಂತಾಗಿರುತ್ತದೆ. ಪ್ರಭಪ್ಪನವರು ಶ್ರೀಮಂತರಿದ್ದಾರೆ. ಅದರೂ ಶಿವಭಜನೆಯಲ್ಲಿಯೂ ಗುರುಸೇವೆಯಲ್ಲಿಯೂ ಸಮಯವನ್ನು ಕಳೆಯುತ್ತಿದ್ದಾರೆ.

ಅಲ್ಲಿಯ ಸರ್ವ ವೀರಶೈವರು ತಾವೂ ಪ್ರಭಪ್ಪನವರಂತೆ ಸದಾಚಾರಿಗಳಾಗಬೇಕೆಂಬ ಹಂಬಲದಿಂದ ತಾ॥ ೬-೬-೩೮ ಲ್ಕೆ ಹೋಟಗಿ ಶ್ರೀಗಳನ್ನು ಕರೆಯಿಸಿಕೊಂಡು, ವೀರಶೈವ ಧರ್ಮಾಚರಣೆಯ ಬಗ್ಗೆ ತಾ॥ ೨ ರಿಂದ ೯ ರವರೆಗೆ ಪ್ರವಚನಮಾಡಿಸಿದರು. ೧೦ ನೆಯ ತಾರೀಖಿನ ದಿವಸ ಸರ್ವ ವೀರಶೈವರೂ (೧೬೯) ಶಿವದೀಕ್ಷೆಯನ್ನು ಹೊಂದಿ ಪುನೀತರಾದರು.

ಶ್ರೀ ಸಂಗಮೇಶ್ವರಶರ್ಮಾ ಕಟಗೇರಿ (ಪಡ್ರಿಡಿ) ಶ್ರೀ॥ ಷ॥ ಬ್ರ॥ ಸಿದ್ಧಲಿಂಗಶಿವಾಚಾರ್ಯ ನಿಂಬರಗೀ (ವೈಷ್ಣವ) ಸಿದ್ಧವೀರಶರ್ಮಾ ಜೈನಾಪೂರ ಬಟು (ಒಂಬತ್ತು) ಹೋಟಗೀ ಶ್ರೀಗಳು (ಮುಕ್ತಾಗುಚ್ಛ) ಶ್ರೀ ಷ॥ ಬ್ರ॥ ಗಂಗಾಧರಶಿವಾಚಾರ್ಯ ಮರಬ (ಪಂಚವರ್ಣ) ಹೀಗೆ ಪಂಚಸೂತ್ರದ ಸ್ವಾಮಿತ್ವದಲ್ಲಿ ಅವರವರ ಸೂತ್ರಾನುಸಾರ ಯಥಾಶಾಸ್ತ್ರವಾಗಿ ವಿಭೂಸಹಿತ ಶಿವದೀಕ್ಷೆಯು ನೆರವೇರಿಸಲ್ಪಟ್ಟಿತು

ತಾ॥ ೧೩-೬-೩೮ ಲ್ಕೆ ಪುನಃ ಸಭೆಸೇರಿ, ಸಾಮಾಜಿಕ ಜರ್ಜೆರಿಗಳಾದಮೇಲೆ ಧರ್ಮೋನ್ನತಿಗಾಗಿ ಶ್ರೀಜಗದ್ಗುರು ಸಂಚಾಚಾರ್ಯ ಭಜನಾಸಂಘವು, ಹೋಟಗೀ ಶ್ರೀಗಳಿಂದ ಸ್ಥಾಪಿಸಲ್ಪಟ್ಟಿತು.

ಕಾರ್ಯಕಾರಿ ಜನರು

ವೆ॥ ಸಿದ್ಧಯ್ಯ ಮಲ್ಲಯ್ಯಸ್ವಾಮಿ ಹಿರೇಮಠ:— ಅಧ್ಯಕ್ಷರಾಗಿಯೂ, ಮ॥ ರಾ॥ ಗುರುಲಿಂಗಪ್ಪ ಪೋಲೀಸ ಮತ್ತು ಮುಲ್ಕೀಪಾಟೇಲ ಉಪಾಧ್ಯಕ್ಷರಾಗಿಯೂ ಮ॥ ರಾ॥ ರೇವಣಸಿದ್ಧಪ್ಪ ಜಮ್ಮಾ ಮ॥ ರಾ॥ ಬಸಲಿಂಗಪ್ಪ ಜಮ್ಮಾ, ಸೆಕ್ರೆಟರಿಗಳಾಗಿಯೂ ನಿಯಮಿಸಲ್ಪಟ್ಟರು. ಈ ಧರ್ಮೋನ್ನತಿಯ ಕಾರ್ಯಕ್ಕೆ ಶ್ರೀ ಸಿದ್ಧಯ್ಯ ಸ್ವಾಮಿ ರಾ॥ ಗುರುಲಿಂಗಪ್ಪ ಪಾಟೇಲ, ರಾ॥ ಲಿಂಗಪ್ಪ ಚಿಟ್ಟೆ, ರಾ॥ ರೇವಣಸಿದ್ಧಪ್ಪ ಜಮ್ಮಾ, ಬಸಲಿಂಗಪ್ಪ ಜಮ್ಮಾ, ಭೀಮಾಶಂಕರ ದುಲಂಗೆ, ಗುರಪ್ಪ ಕಿರಣಳ್ಳಿ, ನಿಲಕಂಠಪ್ಪ ತೊಡಲಗಿ, ಮಲಶಪ್ಪ ಕುತಾಟಿ, ಯವರು ಬಹು ಪರಿಶ್ರಮಪಟ್ಟರು. ರಾ॥ ಭೀಮಾಶಂಕರಪ್ಪ ದುಲಂಗೆಯವರು ಸರ್ವವೀರಶೈವರ ಅಭಿಪ್ರಾಯದಂತೆ, ದೀಕ್ಷೆಗೆ ಆಗುವ ಎಲ್ಲಾ ಖರ್ಚನ್ನು ಸ್ವತಃಮಾಡಿ ಗುರುಕೃಪೆಗೆ ಪಾತ್ರರಾದರು. ಈ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ೧ ರೂಪಾಯಿಯು ಸಮರ್ಪಿಸಲ್ಪಟ್ಟಿತು. ಶ್ರೀಜಗದ್ಗುರು ಪಂಚಾಚಾರ್ಯರು ಈ ಜನರಿಗೆ ಇದಕ್ಕೂ ಹೆಚ್ಚಾದ ಸದ್ಬುದ್ಧಿಯನ್ನಿತ್ತು ಸೇವೆಯನ್ನು ಕೈಕೊಳ್ಳಬೇಕೆಂದು ವ್ಯಾರ್ಥಿಸುವೆನು

ಓರ್ವ ಗುರುಭಕ್ತ.

ಸನ್ಯಾಸಿವರ್ಗಕ್ಕೆ ಸನ್ಮೋಹೆ

(ಬರಪನ—ದೈವಜ್ಞವಿನೋದ)

ಜಾಂಬುವಂತ ಸನ್ಯಾಸಿಗೆ "ಜಯಂತಿ" ಎಂಬ ಮಾಸಪತ್ರಿಕೆಯು ಚೆನ್ನಾಗಿ ಕಿವಿಹಿಂಡಿ ಒದ್ದಿಗಲಿಸಿರುತ್ತದೆ. ಸನ್ಯಾಸಾಶ್ರಮಧರ್ಮದ ಮರ್ಮವನ್ನರಿಯದೆ ಭೌತಿಕ ಸುಖಾಭಿವೃದ್ಧಿಗೆ ಟೊಂಕಕಟ್ಟಿದ ಈ ಸನ್ಯಾಸಿಗೆ ಹೋದ ಹೋದೆಡೆಗೆ ಮಹಾಮಂಗಳಾರತಿಗಳಾಗುತ್ತಲಿವೆ. ಒಮ್ಮೆ ಅಸ್ಪೃಶ್ಯರೊಡನೆ ಬೆರೆತು "ಅಸ್ಪೃಶ್ಯತಾನಿವಾರಣೆ" ಕಾರ್ಯಧುರೀಣತೆಯಲ್ಲಾದರೂ ಪ್ರತಿಷ್ಠೆಪಡೆಯಬೇಕೆಂದು ಧುಮುಕಿದ ಸನ್ಯಾಸಿಯು ಈತನೇ ಅಲ್ಲವೇ? ಮತ್ತೊಮ್ಮೆ ಸನಾತನ ಚಕ್ರವರ್ತಿಯಿಂದ ಪೂಜೆಗೊಳ್ಳಬೇಕೆಂಬ ಹಂಬಲಕ್ಕಾಗಿ ಸಹಸ್ರಗಟ್ಟಲೆ ದುಡ್ಡನ್ನು ಹಾಳುಮಾಡಿಕೊಂಡು ಮಾನವನ್ನು ಕಳೆದುಕೊಂಡು ತುಂಡಿರುಗಿದ ಸನ್ಯಾಸಿಯು ಈತನೇ ಅಲ್ಲವೇ? ಈತನ್ಯಾಸಿಯು ಅಸ್ಪೃಶ್ಯರಕೇರಿಯನ್ನು ಹೊಕ್ಕು ಅವರ ಅಸ್ಪೃಶ್ಯತೆಯನ್ನು ಹಾಗಮಾಡಲಿಲ್ಲ; ಸನಾತಧರ್ಮಯಾಗಿ ಸಜ್ಜನವಂದ್ಯನಾಗಲಿಲ್ಲ. ಇಂಥ ಸನ್ಯಾಸಿಯನ್ನು ಕುರಿತು "ಜಯಂತಿ" ಯು "ಕಲಿಯುಗದ

ವ ಹಿಮೆಯು ಕಾಣಲಂತೀಗ" ಎಂದು ಉದ್ಗಾರವನ್ನು ತೆಗೆದದ್ದು ಸಹಜವದೆ

ವೀರಶೈವಮತದಲ್ಲಿ ವಿರಾಜಿಸುವ ಸನ್ಯಾಸಾಶ್ರಮವು "ಧರ್ಮವು ಭೌತಿಕ ಸುಖಕಾಂಕ್ಷೆಗಾಗಿರುವದಲ್ಲ ಆಧ್ಯಾತ್ಮಿಕ ಸುಖಸಾಧನೆಯೆ" ಸನ್ಯಾಸಾಶ್ರಮದ ಗುಟ್ಟಾಗಿರುವದು ಈ ಅನೋಘವಾದ ಆತ್ಮಾನಂದಸಾಧನೆಯನ್ನು ತೊರೆದು ಭೌತಿಕಸುಖದ ಬೆನ್ನುಹತ್ತುವ ಸನ್ಯಾಸಿಗಳು ನಿಜವಾದ ಸನ್ಯಾಸಿಗಳಲ್ಲ ಈಗಿನ ಕಷಟ ಸನ್ಯಾಸಿಗಳ ಬಹಿರಂಗದಲ್ಲಿ ತೋರಿಸುತ್ತಿರುವ ಕೃತಿಗಳಾದರೂ ಪರಿಶುದ್ಧವಾದವುಗಳಲ್ಲ ಗುರುನಾವ್ ಭೌಮರಂತೆ ತಾವೂ ಮೆರೆಯಬೇಕೆಂಬ ಹುಚ್ಚು ಈ ಸನ್ಯಾಸಿಗಳಿಗೆ ಬಹುದಿವಸದಿಂದಲೂ ಹಿಡಿದುಕೊಂಡಿರುತ್ತದೆ ಮತಾಚಾರ್ಯರಿಗೆ ಸಲ್ಲುತಕ್ಕ ಗೌರವಾತಿಶಯಗಳು ಕೋಟಿಜನ್ಮವೆತ್ತಿ ಒಂದರೂ ಇವರಿಗೆ ದೊರೆಯಲಾರವು ಗುರುಭಕ್ತಿಪರಾಯಣರಾಗಿ, ಗುರುಸೇವಾಧುರೀಣರಾಗಿ, ಗುರುಕೃಪೆಗೆ ಪಾತ್ರರಾಗಿ ಮೋಕ್ಷನಂದ ಸಾಮ್ರಾಜ್ಯಕ್ಕೆ ಸಾಗುವದೇ ಸನ್ಯಾಸಿಗಳ ಅದ್ಯಕರ್ತವ್ಯವು ಗುರುನಿಂದಾತ್ಮಿಯು ಸಾಮಾನ್ಯವಾದುದಲ್ಲ ಈ ಗುರುದ್ವೇಷವೆಂಬ ಪಾಪಾತ್ಮಿಯು ಸಾಕ್ಷಾತ್ ಪರಶಿವನಿಂದಲೂ ಶಮನಗೊಳಿಸುವದಾಗುವದಿಲ್ಲವೆಂದು ಶಿವಾಗಮಗಳೇ ಉದ್ಘೋಷಿಸುತ್ತವೆ ಶಿವನಿಂದೆಯ ಪಾಪವನ್ನು ಗುರುಭಕ್ತಿಮೂಲಕ ನಿವಾರಿಸಿಕೊಳ್ಳಲಿಕ್ಕೆ ಬರುತ್ತದೆ ಆದರೆ ಗುರುನಿಂದೆಯ ಪಾಪವು ವಜ್ರಲೇಪವಾಗಿ ಗುರುನಿಂದಕನನ್ನು ನರಕಯಾತನೆಯಲ್ಲಿ ಕೋಟಿ ಕಲ್ಪಪರ್ಯಂತವಾಗಿ ಬಳಲಿಸುವದು ಇದರಿಂದ ಬಿಡುಗಡೆ ಹೊಂದಬೇಕಾದರೂ ಗುರುಕೃಪೆಯು ಮುಖ್ಯವಾಗಿ ಬೇಕು

ಈ ವಿಚಿತ್ರ ಸನ್ಯಾಸಿಯ ಅಂತರಂಗದ ವ್ಯವಹಾರಕ್ಕೂ ಬಾಹ್ಯಾಡಂಬರದ ಮೋಸಿನ ವ್ಯವಹಾರಕ್ಕೂ ಭೂಮ್ಯಾಕಾಶದಷ್ಟು ಅಂತರವದೆ ಇವೆರಡು ವಿಕಟ ವ್ಯವಹಾರಗಳಿಂದ ಪ್ರಾದುರ್ಭವಿಸುತ್ತಿರುವ ಕೃತಿಯಂತೂ ಅತಿ ವಿಚಿತ್ರರೂಪವನ್ನು ತಾಳುತ್ತಲಿರುವದು ಅಂತರಂಗ ಭೂಮಿಕೆಯಲ್ಲಿ ಜಗದ್ಗುರು ಪಂಚಪೀಠದ ಪ್ರಬಲವಾದ ದ್ವೇಷಾಸೂಯೆಯು ಮೂರ್ತಿಗೊಂಡಿರುವದು ಬಾಹ್ಯಭೂಮಿಕೆಯಲ್ಲಿ ಅಸ್ಪೃಶ್ಯರಾದಿಯಾಗಿ ಸಕಲ ಮಾನವ ಜನಂಗವು ಸಮಾನಾಧಿಕಾರವುಳ್ಳದೆಂದು ಹೇಳುತ್ತ ತಾನೂ ಇದೇ ಮಾಲಿಕೆಯೊಳಗಿನ ಮಣಿಯೆಂಬುದನ್ನು ಪರಸ್ಪಣದಲ್ಲಿ ಮರೆತು ಒಳಗಿದ್ದದ್ದು ಹೊರಚಿಮ್ಮಿಬಂದಂತೆ ಮೆರವಣಿಗೆಯನ್ನು ಮಾಡಿಸಿದರೆ ದುಡ್ಡಿನ ಸುರಿಮಳೆಗರೆಯುವೆನೆಂದು ಕೈನುರಿಗಳಿಗೆ ಗುಪ್ತಪತ್ರವ್ಯವಹಾರಗಳು ನಡೆಯುತ್ತಲಿವೆ ಹೆಣ-ಗುಣಗಳೆರಡೂ ಹಾಳಾಗಿ ಹೊದರೂ ಹೆಣವಂತಾದರೂ ಮೆರೆಯಬೇಕೆಂದು ಬೆರೆ ಜೆಲ್ಲೆಗಳಲ್ಲಿ ತಿರುಗುತ್ತಿರುವನು ಎಲ್ಲಿ ಹೋದರೂ ಈ ದಶಾಹೀನನಿಗೆ ಅಪಮಾನವೇ ಹೊರತು ಬೇರೆಂದಿಲ್ಲ ಅಸ್ತು!

ವೀರಶೈವಸಮಾಜದಲ್ಲಿ ಸನ್ಯಾಸಿಗಳಿಗಿರುವ ಸ್ಥಾನಮಾನವೇ ವಿಪರೀತವಾಗಿದೆ ಸ್ವಾತ್ಮಮಧರ್ಮಘಾತುಕರಾದ ಈ ಮುಂಡಿಗಳು ವಿರಕ್ತ ನಿರಾಭಾರಿ ನಿರಂಜನ ಎಂಬ ವಿಶೇಷಣಗಳನ್ನು ತಮ್ಮ ಹೆಸರಿನ ಹಿಂದೆ ಜೋಡಿಸಿಕೊಳ್ಳುವದಲ್ಲದೆ, ಇದಕ್ಕೆಂತಲೂ ಅಪ್ರಸಕ್ತವಾದ ಮಹಾರಾಜ "ಜಗದ್ಗುರು" "ಶೂನ್ಯಸಿಂಹಾಸನಾಧೀಶ "ಮೊದಲಾದವುಗಳನ್ನು ಉಪಯೋಗಿಸುತ್ತಿರುವದು ಅತ್ಯಂತ ಹೇಯಕಾರ್ಯವಾಗಿದೆ ಇವರ ವಿಧಿಗಳಲ್ಲ ಮಹಮ್ಮದೀಯ ಧಾರ್ಮಿಕವಿಧಿಗಳ ಪ್ರವೇಶ ಮೊದಲಾದವುಗಳನ್ನು ನಿರೀಕ್ಷಿಸಿದರೆ ಈ ಸನ್ಯಾಸಿಗಳ ಚರಿತ್ರೆಯು ಜತಿ ವಿಚಿತ್ರವಾಗಿರುವದು ಅನುಚಿತ ಪದವಿಗಳನ್ನು ಅನ್ಯಾಯವಾಗಿ ಸೇರಿಸಿಕೊಂಡು ಸಮಾಜದಲ್ಲಿ ಮೆರೆಯಬೇಕೆಂಬ ಸನ್ಯಾಸಿಗಳು ಒಬ್ಬಿಬ್ಬರಲ್ಲ ಸಾವಿರಾರು ರೂಪಾಯಿಗಳನ್ನು ಸಂಗ್ರಹಿಸಿದ ಸರ್ವ ಸನ್ಯಾಸಿಗಳೂ 'ಮಹಾರಾಜ' 'ಜಗದ್ಗುರು' ಶೂನ್ಯಸಿಂಹಾಸನಾಧೀಶ ಇತ್ಯಾದಿಗಳಿಗೆ ಅಧಿಕಾರಿಗಳಾಗಿರುವರು ದುಡ್ಡಿಲ್ಲದ ಸನ್ಯಾಸಿಗಳು ಮಾತ್ರ ಈ ಗೊಂದಲಕ್ಕೆ ಹೋಗುವದಿಲ್ಲ

ಈ ಧರ್ಮದ್ರೋಹಿಗಳಾದ ಸನ್ಯಾಸಿಗಳಿಗೆ ಸಶಾಸ್ತ್ರೀಯವಾದ ಧರ್ಮಬೋಧೆಯನ್ನು ಧಾರ್ಮಿಕಖಂಡಿತರು ಧಾರ್ಮಿಕವಾಗಿ ಬೋಧಿಸಿದರು ಸಂಸಾರಿಕರಲ್ಲಿ ಸುಳಿದಾಡಿ ಸವಿದುಂಡು ಮೆರೆದಾಡಿದ ಸನ್ಯಾಸಿಗಳಿಗೆ ಸ್ವಾಶ್ರಮದರ್ಮದ ಕಡೆಗೆ ಹೊರಳಲು ಸಾಧ್ಯವಾಗದಂತಾಗಿದೆ ನವನಾಗರಿಕತೆಯ ಪ್ರಪಂಚಿದಲ್ಲಿ ನಲಿದಾಡುತ್ತಲಿದ್ದ ವೀರಶೈವ ಸಮಾಜವು ಇದೀಗ ಎಷ್ಟೋ ಜಾಗ್ರತವಾಗಿದೆ ಈಗ ದುರ್ವಿರಕ್ತರ ಹಾವಳಿಯು ನಾಮಾವಶೇಷವನ್ನೆಗೆ ಬಂದಿದೆ ಬಾಲಸುಟ್ಟಬೆಕ್ಕಿನಂತೆ ದಿಕ್ಕು ದಿಕ್ಕಿಗೆ ಜಿಗಿದಾಡಿ ಮೆಂವು ಎಂದು ಸೆರೆಯುತ್ತಿರುವ ಸನ್ಯಾಸಿಯ ಸೊಬಗಿಗೆ ಆ ಸನ್ಯಾಸಿಯು ಡುದ್ದಿನ ಪ್ರಭಾವವಲ್ಲದೆ ಬೇರಿಲ್ಲ. ಈ ಮೆರವಣಿಗೆಯಿಂದ ಆದರ ಜಾಲಕರಿಗೆ ಸಹ ದುಡ್ಡಿನ ಹೊಳೆಯು ಹರಿದು ಬರುತ್ತಿರುವದು ಲೋಕಪ್ರಸಿದ್ಧವಾದ ವಿಷಯವಾಗಿದೆ. ಹೀಗೆ ಮನಸ್ಸಿಗೆ ಬಂದಂತೆ ಹಣವನ್ನು ಹಾಳುಮಾಡಿಕೊಂಡು ಗುಣಗೇಡಿಯಾಗಿ ಮೆರೆಯುವದಕ್ಕಿಂತ ವೀರಶೈವ ಸಮಾಜೋದ್ಧಾರದ ಪವಿತ್ರಕಾರ್ಯಗಳಿಗೆ ಆ ಹಣವನ್ನು ವಿನಿಯೋಗಿಸಿದರೆ ಘನತರವಾದ ಪುಣ್ಯವಾದರೂ ಪ್ರಾಪ್ತವಾಗುವದು ಸನ್ಯಾಸಿಯು ಗುರುದ್ರೋಹದಕಾರ್ಯಗಳಿಗಾಗಿ ಹಣವನ್ನೆಲ್ಲ ಕಳೆದುಕೊಂಡು ಈಗ ಹೆಣದಂತಾಗಿರುವನು ಇನ್ನಾದರೂ ಗುರುಪೀಠಗಳ ನಿಂದೆಯನ್ನು ಖಂಡಿತವಾಗಿ ಬಿಟ್ಟು ಗುರುಭಕ್ತಿಧ್ವಜವನ್ನು ಎತ್ತಿ ಹಿಡಿದರೆ ಮಹತ್ತರವಾದ ಕೀರ್ತಿಯು ಇಹಿಗಂಟಾಗಿ ತಾನೇ ಬರುವದು

ಈಗಿನ ವಿಕಟಸನ್ಯಾಸಿಗಳು ತಮ್ಮ ವಿಚಾರಹೀನತೆಯನ್ನು ತೀವ್ರವಾಗಿ ನಾಶಮಾಡಿಕೊಳ್ಳಬೇಕು ನಿಜವಾದ ವೀರತ್ವೈಷಮಾರ್ಗವನ್ನು ವಿರೂಪಗೊಳಿಸಬಾರದು ಪರಮನೈರಾಗ್ಯನೆ ತಮ್ಮ ಸ್ಥಿರಧನವೆಂದು ವೈರಾಗ್ಯವನ್ನು ಕಾಪಾಡಿಕೊಳ್ಳಬೇಕು. ಧನ-ಕನಕಾದಿ ಲೌಕಿಕ ಸಂಪತ್ತಿನ ಬೆನ್ನು ಹತ್ತುವದು ಸನ್ಯಾಸಿಗಳ ಲಕ್ಷಣ ವಲ್ಲವೆಂಬುದನ್ನು ಲಕ್ಷ್ಯದಲ್ಲಿಡಬೇಕು ಸನ್ಯಾಸಿಗಳ ಅದ್ಯಕರ್ತವ್ಯವನ್ನು ಬೋಧಿಸುತ್ತಿರುವ 'ಸನ್ಯಾಸಾಶ್ರಮವಿಮರ್ಶ' 'ಸನ್ಯಾಸಾಶ್ರಮವಿಮರ್ಶತತ್ವಸ್ಫೋರಣ' ಇವೇ ಮೊದಲಾದ ಸಂಸ್ಕೃತ ಕನ್ನಡ ಗ್ರಂಥರತ್ನಗಳನ್ನು ಯಾವಾಗಲೂ ಅಧ್ಯಯಿಸಿ ಆಚರಣೆಯಲ್ಲಿಟ್ಟುಕೊಳ್ಳಬೇಕು ಜೀವನಾಯುಷ್ಯವು ಕ್ಷಣಭಂಗುರವಾದುದು. ವೀರಶೈವೇತಿಹಾಸದಲ್ಲಿ ಅಕ್ರಮಮಾರ್ಗಗಾಮಿಗಳಾದ ಸನ್ಯಾಸಿಗಳ ಹೆಸರುಗಳಲ್ಲಿ ಗಣಿಸಲ್ಪಡದಂತೆ ಪ್ರತಿಯೊಬ್ಬ ಸನ್ಯಾಸಿಗಳು ಜಾಗರೂಕರಾಗಿರಬೇಕು ಭುವನಪ್ರಸಿದ್ಧರಾದ **ಶ್ರೀಜಗದ್ಗುರು ಪಂಚಾಚಾರ್ಯಭಗವತ್ಪಾದರವರಲ್ಲಿ** ನಿಸ್ಸೀಮವಾದ ಭಕ್ತಿಯನ್ನು ವ್ಯಕ್ತಗೊಳಿಸಿ ಲೋಕವಿಖ್ಯಾತರಾಗಿ ಹೋದ **"ತೋಂಟದಸಿದ್ಧಲಿಂಗ" "ಮರಿತೋಂಟದಾರ್ಯ"** ಮೊದಲಾದ ವಿರಕ್ತಪುಂಗವರ ಮಾಲಿಕೆಯಲ್ಲಿ ಸೇರಲು ಈಗಿನ ವಿರಕ್ತರು ಪ್ರಬಲವಾಗಿ ಪ್ರಯತ್ನಿಸಬೇಕೆಂದು ವಿನೋದನು ಎಚ್ಚರಗೊಳಿಸುತ್ತಾನೆ

ನಮಃ ಪಂಚಜಗದ್ಗುರುಭ್ಯಃ

ಮಹಿಳಾಮಣಿ

'ಬಹುರತ್ನವಸುಂಧರಾ' ಎಂಬಂತೆ ಈ ಭೂವಲಯದಲ್ಲಿ ರತ್ನಗಳದ್ದರೂ ಅವು ತಮ್ಮ ದೃಷ್ಟಿಗೆ ಬೀಳದೆ ಇರುವದರಿಂದ ಅವುಗಳ ಬೆಲೆ ನವುಗೆ ತಿಳಿಯದಂತಾಗಿದೆ ಅದರೆ ವೀರಶೈವ ಸಮುದ್ರವನ್ನು ಮಂಥಿಸುತ್ತಿರುವ ಸು॥ ಶ್ರೀಕಾಶೀನಾಥಶಾಸ್ತ್ರಿಗಳವರ ಪ್ರಯತ್ನದಿಂದ ಈಗೀಗ ಒಂದೊಂದು ರತ್ನಗಳು ನಮ್ಮ ದೃಷ್ಟಿಗೆ ಬೀದ್ದು ನಮ್ಮದೃಷ್ಟಿಯನ್ನು ಪವಿತ್ರಗೊಳಿಸುತ್ತಿರುವವು ಇಂತಹ ರತ್ನಗಳನ್ನು ನೋಡದಿರುವ ದೃಷ್ಟಿಯೆದ್ದೇನು? ಕೇಳದಿರುವ ಕರ್ಣಗಳದ್ದೇನು? ಅಂಥ ಮಣಿಗಳ ಚರಿತ್ರ ಬರೆಯದಿರುವ ಹಸ್ತಗಳದ್ದೇನು? ವರ್ಣಿಸದಿರುವ ಬುದ್ಧಿಯೆದ್ದೇನು? ಅದ್ದರಿಂದ ನಾನು ಈಗ ಒಂದು ರತ್ನದ ಗುಣಾವಳಿಯನ್ನು ಬರೆದು ಪವಿತ್ರಾತ್ಮನಾಗಬೇಕೆಂದು ಪ್ರಯತ್ನಿಸಿರುವೆನು

ಒಳ್ಳೆ ಬೆಲೆಯುಳ್ಳ ಮಣಿಯು ಸೊಲ್ಲಾಪುರದಲ್ಲಿರುತ್ತದೆ ಅದು ಸ್ತ್ರೀಸ್ವರೂಪವನ್ನು ತಾಳಿ ಶಾಸ್ತ್ರಸಿದ್ಧ ಸದ್ಗುಣಗಳಿಂದ ಪ್ರಜ್ವಲಿಸುತ್ತಿರುವದು ಈ ಮಹಿಳಾಮಣಿಯ ಸಮಯವು ಸದಾ ಗುರುಸೇವೆಯಲ್ಲಿಯೇ ವ್ಯಯವಾಗುತ್ತಿರುವದು ಈ ರತ್ನವು **"ಭಾಗೀರಥೀ ಬಾಯಿ"** ಎಂಬ ನಾಮದಿಂದ ಪ್ರಕಾಶಿಸುತ್ತಿರುವದು. ಭಾಗೀರಥೀ ನದಿಯು ಸ್ವತಃ ಪವಿತ್ರವಿದ್ದು ತನ್ನನ್ನಾಶ್ರಯಿಸಿದವರನ್ನು ಪವಿತ್ರಗೊಳಿಸುವಂತೆ ನಮ್ಮ ಸೌ॥ ಭಾಗೀರಥೀಬಾಯಿಯವರು ಸ್ವತಃ ಸದ್ವೃತ್ತಿಯವರಿದ್ದು, ತಮ್ಮ ಕಡೆಗೆ ಬಂದವರನ್ನೂ ಸದ್ವೃತ್ತಿಯಿಂದ ಪುನೀತರನ್ನಾಗಿ ಮಾಡುವರು

ಸೌ॥ ಭಾಗೀರಥೀಬಾಯಿ ಕಟಾಪ, ಇವರು ಅತ್ಯಂತ ಶಾಂತಸ್ವಭಾವದವರು ಗುರುನಿಂದೆಯನ್ನು ಕೇಳಿದರೆ ಇವರಿಗೆ ಎಷ್ಟೂ ಸಹನವಾಗುವದಿಲ್ಲ. ಇವರು ವಿದ್ಯಾವತಿಯರಾಗಿದ್ದು "ವಿದ್ಯಾ ದದಾತಿ ವಿನಯಂ" ಎಂಬ ಉಕ್ತಿಯಂತೆ ಬಹು ವಿನಯಶೀಲರಿದ್ದಾರೆ ಇವರಲ್ಲಿ ವಾಕ್ಚಾತುರ್ಯಶೈಲಿಯು ಚೆನ್ನಾಗಿದೆ ಲೇಖನಿಯೆರೂ ಆಗಿದ್ದಾರೆ ಕವಿತೆಗಳನ್ನು ರಚಿಸುವರು 'ತುಂಬಿದ ಕೊಡವು ತುಳುಕುವದಿಲ್ಲ' ವೆಂಬುದು ನಿಜವಾದದ್ದು ಅಕ್ಷರಜ್ಞಾನವನ್ನಷ್ಟೆ" ಮಾಡಿಕೊಂಡು ಎರಡನೆಯವರು ಬರೆದ ಲೇಖನಗಳಿಗೆ ತನ್ನ ಹೆಸರನ್ನು ಕೊಟ್ಟು "ಯೇನ ಕೇನ ಪ್ರಕಾರೇಣ ಪ್ರಸಿದ್ಧಃಪುರುಷೋ ಭವೇತ್" ಎಂಬಂತೆ ಪ್ರಸಿದ್ಧಿಯ ಹಂಬಲಕ್ಕೆ ಬಿದ್ದವರಲ್ಲ ಸ್ತ್ರೀಯರ ಶಾಸ್ತ್ರೋಕ್ತವಾದ ಸ್ವಾತಂತ್ರ್ಯವನ್ನು ಪೇಕ್ಷಿಸುವವರೇ ಹೊರತು, ಪತಿಯ ಅಜ್ಞೋಲ್ಲಂಘನೆಕ್ಕೆ ಹೇಸದಿರುವ ಹೆಂಗಳೆಯರನ್ನು ಕಂಗಳಿಂದಲೂ ನೋಡದಿರುವ ಪವಿತ್ರಾತ್ಮರಾಗಿದ್ದಾರೆ ಇವರ ವಿನಯ ಸೌಜನ್ಯಗಳು ಪ್ರತಿಯೊಬ್ಬ ಸ್ತ್ರೀಯರಿಗೂ ಆದರ್ಶವಾಗಿರುವದು ಇವರ ಪುರಾಣಪ್ರವಚನವನ್ನು ಕೇಳಿ ಕೈ॥ ಶ್ರೀಜಗದ್ಗುರು ಸಿದ್ಧಲಿಂಗಶಿವಯೋಗಿ ಸಾರ್ವಭೌಮರು ಆತ್ಮಾನಂದದಿಂದ-"ವಿನಮ್ಮಾ ನೀನು ಪ್ರತ್ಯಕ್ಷ ಶಾರದೆ ಯೆಂತಿರುವೆ "ಎಂದು ಉದ್ಗಾರವನ್ನು ತೆಗೆದರು. ನೋಡಿದಿರಾ? ಅಂತಹ ಶಿವಯೋಗಿ ಸಾರ್ವಭೌಮರಮುಖದಿಂದ ಈಪ್ರಕಾರ ಉದ್ಗಾರವು ಹೊರಡಬೇಕಾದರೆ ಈ ಮಾತೃವಿನ ವಿದ್ವತ್ತೆಯೂ ಗುರುಭಕ್ತಿಯೂ ಎಂತಹುದೆಂಬುದನ್ನು ವಾಚಕರೇ ಊಹಿಸಲಿ

ಬೆಂಗಳೂರು, ಮೈಸೂರುಗಳೆಂದರೆ ವಿದ್ವಾಂಸರ ಮುಖ್ಯಸ್ಥಳಗಳು ಅಲ್ಲಿಯೂ ಕೂಡ ಇವರು ಭಾಷಣಗಳನ್ನು ಮಾಡಿ ಮಾನ್ಯರಾಗಿರುವರು ಹಾವೇರಿ, ಹುಬ್ಬಳ್ಳಿಗಳಂತಹ ಬಿಕ್ಕಟ್ಟಿನ ಸ್ಥಳಗಳಲ್ಲಿಯೂ ಇವರ ಭಾಷಣಗಳಾಗಿವೆ ಮಹಾರಾಷ್ಟ್ರ, ಕರ್ನಾಟಕಗಳಲ್ಲಿ ಈ ಮಾತೃವಿನ ಹೆಸರನ್ನರಿಯವ ವೀರಶೈವರೇ ಬಹಳ ವಿರಳ

ಈ ಪವಿತ್ರಾತ್ಮ ಮಹಿಳಾಮಣಿಯ ಬೆಲೆಯನ್ನರಿಯದ ಕೆಲವು ಕೊಳಿಗಳೂ, ಕೋಳಿಯ ಮರಿಗಳೂ ವೃತ್ತಪತ್ರದ್ವಾರಾ, ಸಭೆಗಳಲ್ಲಿಯೂ, ನಿಂದಾವ್ಯಂಜಕ ಸ್ವರದಿಂದ ಕ-ಕೂ ಕೂ.....ಎಂದು ಕೂಗುವವು ಆದರೇನಾಗುವದು? ತಿಪ್ಪೆಯನ್ನು ಕೆದರಿ ಜೋಳದಕಾಳನ್ನು ನುಂಗುವ ಕೋಳಿಗಳಲ್ಲವೆ? ನಿಜ ಅವುಗಳ ಸ್ವಭಾವವದು ಪಾಪ' ಮರಿಗಿ (ಕೋಳಿ) ಗಳೇನು ಮಾಡಿಯಾವು? ಅಸ್ತು!

ವಾಚಕಮಹಾಶಯರೇ! ಈ ಮಾತೃಶ್ರೀಯವರ ಗುಣಗೌರವವನ್ನು ಮಾಡುವದು ನನ್ನ ಶಕ್ತಿಯಲ್ಲ ಆದರೂ ಸ್ವಲ್ಪದರಲ್ಲಿಯೇ ತಿಳಿಸಿರುವೆನು ವರ್ತಮದಲ್ಲಿಯಾಗಲೆ, ನಡೆಯಲ್ಲಿಯಾಗಲಿ, ನುಡಿಯಲ್ಲಿಯಾಗಲಿ, ಎನೆನೂ ಹುರುಳಿಲ್ಲದ ಹೆಂಗಸರುಗಳನ್ನು ಉದ್ದಂಡ ವರ್ಣಿಸಿ ಪ್ರಸಿದ್ಧಿಸುವ ಎಷ್ಟೋ ಪತ್ರಗಳನ್ನು ನಾನು ಕಂಡಿರುವೆನು? ಆದರೆ ನಮ್ಮ ಪಂಚಾಚಾರ್ಯ ಪ್ರಭಾದೇವಿಯು ಹಾಗಲ್ಲ ತನ್ನಂತಹ ಪವಿತ್ರಾತ್ಮರಾದ ತನ್ನ ಪುಕ್ಕಳನ್ನು ಹಾಡಿ ಹರಿಸಿ ಮುದ್ದಿಡುವಳು ಅದ್ದರಿಂದ ಇಂತಹ ಮಹಿಳಾಮಣಿಗಳು ಅನಂತಾಗಿ ಹುಟ್ಟಿ ಪ್ರಭಾದೇವಿಯ ಕಂಠಾಭರಣಗಳಾಗುವಂತಾಗಲೆಂದು ಜಗದಾಚಾರ್ಯರನ್ನು ಪ್ರಾರ್ಥಿಸೆನು

ಜಿ ಜಿ ಪಾಟೀಲ, ಧೋತ್ರಿ.

ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಕಾಲೇಜ್ ಫಂಡ್, ಸ್ವೀಕಾರ.

೧ ಹಿರೆಹರಕುಡಿಗದಿಪ್ಪನವರು ಬೋರ್ಡಿಂಗಿನ ಚಂದಾಕ್ಕಾಗಿ ಒಂದು ರೂಪಾಯಿಯನ್ನು 7-6-38 ರಲ್ಲಿ ಕೊಟ್ಟಿರುತ್ತಾರೆ

೨ ಬೆಂಗಳೂರುದೇಶದಪೇಟೆ ಶೆಟ್ಟರು ಅರಳಿಪೇಟೆ ರುದ್ರಪ್ಪಶೆಟ್ಟರವರ ಔರಸಪುತ್ರಿ ಸೌ॥ ಹ॥ ಕುಂ॥ಸರೋಜ ದೇವಿಯನ್ನು ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮೆ॥ ರಾ॥ ಗುರುಸಾರ್ ಮಲ್ಲಿಕಾರ್ಜುನಯ್ಯನವರ ಜ್ಯೇಷ್ಠಪುತ್ರರಾದ ಚಿ॥ ರಾ॥ ಸಾಂಬಶಿವಯ್ಯನವರು, ಬಿ ಎ, ಬಿ ಎಸ್. ಇ ಯವರಿಗೆ ಕೊಟ್ಟ ಬೆಂಗಳೂರು ಸಿಟಿ ಮಲ್ಲೇಶ್ವರದಲ್ಲಿ ತಾ॥ 26-5-1938 ರಲ್ಲಿ ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್ ಫಂಡಿಗಾಗಿ ಐದುರೂಪಾಯಿಗಳೂ, ಇದೇ ಬೋರ್ಡಿಂಗಿಗಾಗಿ ಐದುರೂಪಾಯಿಗಳೂ ವಧೂವರರ ಕಡೆಯಿಂದ ತೆಗೆಯಲ್ಪಟ್ಟು, ಬೆಂಗಳೂರು ಎಸ್ ಜಿ ಎನ್ ಪ್ರೆಸ್. ಪ್ರೊಪ್ರೈಟರ್ ಶಿವಣ್ಣನವರ ಮೂಲಕ ಹತ್ತುರೂಪಾಯಿಗಳು ಬಂದಿರುತ್ತವೆ.

೩ ವೇದಮೂರ್ತಿಗಳಾದ ಜಂತಗಹಳ್ಳಿ ಮೆರದ ಜೆ ಬಿ.ಮಲ್ಲಾರಾಧ್ಯರು ಮೈಸೂರುಸಿಟಿ ಮ್ಯಾಜಿಸ್ಟ್ರೇಟರು ಇವರ ಜ್ಯೇಷ್ಠಪುತ್ರಿ ಸೌ॥ ಹ॥ ಕುಂ॥ ರತ್ನಮ್ಮನನ್ನು ನಂಜನಗೂಡು ಮೆ ॥ ನಾಗಭೂಷಣ ಆರಾಧ್ಯ ಬಿ ಎ. ಬಿ ಎಲ್ ಎಂಬವರಿಗೆ ಕೊಟ್ಟು ಮೈಸೂರಿನಲ್ಲಿ ಇದೇ ತಿಂಗಳು 6 ನೇ ತಾರೀಖಿನಲ್ಲಿ ನಡೆಸಿದ ವಿವಾಹ ಸಮಯದಲ್ಲಿ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್ ಫಂಡಿಗಾಗಿ ಕೊಟ್ಟ ಐದುರೂಪಾಯಿಗಳು ಬಂದಿರುತ್ತವೆ.

೪ ತರಗುಮೆಂಡಿ ಮ॥ ರಾ॥ ಟಿ ಮೆ.ದ್ದವೀರಪ್ಪನವರ ದ್ವಿತೀಯ ಪುತ್ರಿ ಚಿ॥ ಸೌ॥ ಹ॥ ಕುಂ॥ ಪುಟ್ಟತಾಯಮ್ಮನೆಂಬ ವಧುವಿಗೂ, ಹುಲ್ಲುಕುಂಟೆ ಚಿ॥ ರಾ॥ ಡಾಕ್ಟರ್, ಹೆಚ್ ಬಿ. ಬೈಲಪ್ಪ, ಎಲ್. ಎಂ. ಪಿ, ಎಂಬ ವರನಿಗೂ ಬೆಂಗಳೂರು ಸಿಟಿ ಮಾಮೂಲುಪೇಟೆಯಲ್ಲಿ 19-5-38 ರಲ್ಲಿ ನಡೆದ ವಿವಾಹ ಸಮಯದಲ್ಲಿ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತಕಾಲೇಜ್ ಫಂಡಿಗಾಗಿ ತೆಗೆದಿರುವ ಎರಡು ರೂಪಾಯಿಗಳು ಬಂದಿರುತ್ತವೆ

೫ ತುಮ್ಕೂರು ಮಂಡಿ ಮ॥ ರಾ॥ ಡಿ ಚಾಮರಾಜಪ್ಪ ಅಂಡ್ ಸನ್ಸ್‌ರವರು ತಮ್ಮ ಮಿಲ್ಲನ್ನು ಮಂಡಿ ಎನ್ ರುದ್ರಯ್ಯನವರಿಗೆ ಕ್ರಯಕ್ಕೆ ಕೊಟ್ಟಕಾಲದಲ್ಲಿ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಫ್ರೀ ಬೋರ್ಡಿಂಗಿಗಾಗಿ ಕೊಟ್ಟರುವ ಐದುರೂಪಾಯಿಗಳು ಬಂದಿರುತ್ತವೆ

೬. ಬೆಂಗಳೂರು ಕಂಟೋನ್ಮೆಂಟ್ ಮ॥ ರಾ॥ ಯಂ ಜಿ ನಾಗಪ್ಪನವರ ಸಹೋದರರು, ಚಿ॥ ರಾ॥ ಯಂ ಗಂಗಪ್ಪನವರ ವಿವಾಹ ಸಮಯದಲ್ಲಿ ಶ್ರೀ ಜ ರೇ ಪಂ ಸಂ ಕಾಲೇಜು ಫಂಡಿಗಾಗಿ ಕೊಟ್ಟ ಒಂದು ರೂಪಾಯಿಯು ಯಂ ಎಲ್ ಇ ಫಂಡು ಸೆಕ್ರೆಟರಿಗಳಾದ ಸರಾಫ್ ಬಿ ಬಸಪ್ಪನವರಿಂದ ಬಂದಿರುತ್ತದೆ.

ಶ್ರೀಜಗದ್ಗುರು ಪಂಚಾಚಾರ್ಯರು ಮೇಲೆ ಕಂಡ ಮಹನೀಯರಿಗೆಲ್ಲಾ ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ಎಚ್. ರುದ್ರಯ್ಯ, ಸೆಕ್ರೆಟರಿ
ಶ್ರೀ ಜ ರೇ. ಪಂ. ಸಂ. ಕಾ. ಫಂಡ್ ಸಂಸ್ಥೆ.

ಪ್ರಶ್ನೋತ್ತರ ರತ್ನಮಾಲಿಕಾ

ಲೇಖಕರು —ಮಲ್ಲಿಕಾರ್ಜುನಾರಾಧ್ಯ, ರಾಣಿಬೆನ್ನೂರು
ಮಳೆಮಠ, ಮುದೇನೂರು, ಮು॥ ತಿಪಟೂರು

ಪ್ರ—ಪ್ರಜ್ಞೆಯೆಂದರೇನು?

ಉ—ತಿಳಿವಳಿಕೆಯು, ಸ್ವರ್ಣಕಾರನಿಗೆ ಇದು ಚಿನ್ನ ಇದು ಬೂದಿಯೆಂದು ತಿಳಿಯುವಂತೆ ಪ್ರಜ್ಞಾವಂತನಿಗೆ ಸತ್ಯಾಸತ್ಯವಸ್ತುಗಳು ತಿಳಿಯುವವು ಜಗತ್ತಿನಲ್ಲಿ ಯಾವಯಾವ ಶುಭಫಲವುಂಟಾಗುವದೋ ಅದೆಲ್ಲಕ್ಕೂ ಈ ಪ್ರಜ್ಞೆಯೇ ಕಾರಣವಾದ್ದರಿಂದ ಇದು ಚಿಂತಾಮಣಿಯೆಂದು ಹೇಳಲ್ಪಡುವದು. ಏಕಕರ್ಮ ಮೊದಲಾದ ವಿಹಿತ ಸುಖವು ಸಾಧಾರಣ ಜನರಿಂದ ಲೂ ಸಾಧಿಸಲ್ಪಡುವದು. ಸ್ವರ್ಗಮೋಕ್ಷಗಳು ಸಮರ್ಥರಿಗೆ ಸಿದ್ಧವಾಗುವವಲ್ಲದೆ ಇತರರಿಗೆ ಆಗಲಾರವು. ಪ್ರಜ್ಞಾವಂತನು ಆಬಲಶಾಗಿದ್ದರೂ ಸಬಲನಂ ಜಯಿಸುವನು. ಪ್ರಜ್ಞಾಹೀನನು ದೋಣಿ ಸಿಕ್ಕಿದರೂ ನದಿಯಂ ದಾಟಲಾರನು ವಜ್ರಕವಚಧಾರಿಯಂ ಬಾಣಾಸ್ತ್ರಗಳು ಭೇದಿಸಲಾರದಂತೆ ಪ್ರಜ್ಞಾಶಾಲಿಯನ್ನು ಆಶಾದೋಷಗಳು ಭೇದಿಸಲಾರವು ಮೂಢನಿಗೆ ಅಶಕ್ತಿ ನಂತೆ ಪ್ರಾಜ್ಞನಿಗೆ ಸಂಪತ್ತೇ ಬರುವದು ಆದರೆ ಅಖಂಡಜ್ಞಾನಿಗೆ ಅಹಂಕಾರವರಣವಿಲ್ಲದ್ದರಿಂದ ಇವೆರಡೂ ಬರಲಾರವು. ಆದ್ದರಿಂದ ಪ್ರಜ್ಞೆಯುಳ್ಳವನು ಭೂಮಿಯಿದ್ದವನಂತೆ ಸಮಸ್ತಫಲವನ್ನೂ ಪಡೆಯುವನು ಪ್ರಿಯವಾಚಕರೇ! ಫಲಾಪೇಕ್ಷೆಯುಳ್ಳವನು ನೀರುಹಾಕುವದೇ ಮೊದಲಾದ ಕಾರ್ಯಗಳಿಂದ ವೃಕ್ಷಲತೆಗಳನ್ನು ಬೆಳೆಸುವಂತೆ ಸತ್ಸಂಗ ಶಾಸ್ತ್ರಾಧ್ಯಾಸಾದಿಗಳಿಂದ ಮೊದಲು ಪ್ರಜ್ಞೆಯನ್ನು ಬೆಳೆಯಿಸಬೇಕು ಯಾವ ಯಾವದು ಸಿದ್ಧವಾಗುವದೋ ಅದೆಲ್ಲವೂ ಕೊನೆಗಾಣುವ ಪರ್ಯಂತವಾಗಿ ವಿಚಾರಿಸುವವನಿಗೆ ಸರ್ವವೂ ಬ್ರಹ್ಮವೆಂಬ ಸಿದ್ಧಾಂತವು ವೇದ್ಯವಾಗುವದು ಈ ಜ್ಞಾನವು ಸತ್ಸಂಗದಿಂದಲೂ ಶಾಸ್ತ್ರಾಧ್ಯಾಸದಿಂದಲೂ ಸ್ನಾನದಾನ ವ್ರತ ಜಪ ತಪ - ಯಜ್ಞಾದಿ ಪುಣ್ಯಕರ್ಮಗಳಿಂದಲೂ ಆಗತಕ್ಕದ್ದಲ್ಲವು. ಆದಾಗ್ಯೂ ಗುರೂಪದೇಶವು ನೊದಲನೆಯದಾಗಿ ಮಾರ್ಗವಂ ತೋರಿಸುವದಾದ್ದರಿಂದ ಅದಕ್ಕೆ ಪ್ರತಿಸ್ಪೆಯುಂಟಾಗಿರ್ಪುದು

ಪ್ರ—ಜನರ ಆಚಾರಕ್ಕೆ (ನಡವಳಿಕೆಗೆ) ಕಾರಣರಾರು?

ಉ—'ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ' ಎಂಬಂತೆ ರಾಜನೇ ಕಾರಣನು ಜಗತ್ತಿನಲ್ಲಿ ದೊಡ್ಡವರು ಸಮ್ಮತಿಸಿದ ವಿಷಯವೆನ್ನು ಇತರರು ನಂಬುವರಾದ್ದರಿಂದ ರಾಜಪುಂಗವರೂ, ಗುರುಶ್ರೀಷ್ಠರೂ, ಪಂಡಿತೋತ್ತಮರೂ, ವಿದ್ಯಾವಿಶಾರದರೂ, ಸಮಾಜದ ಮುಂದಾಳುಗಳೂ ತ್ರಿಕರಣಶುದ್ಧರಾಗಿ ಲೋಕಕ್ಕೆ (ಜನರಿಗೆ) ಸನ್ಮಾರ್ಗದರ್ಶಕರಾಗಿರಬೇಕು ಮನುಷ್ಯಾಧಿಪತಿಯು ಮರವನ್ನು ರಕ್ಷಿಸುವಂತೆ ರಾಜರುಗಳು ಸದಾಚಾರಗಳುಳ್ಳವರಾಗಿ ತನ್ಮೂಲಕ ರಾಜ್ಯವನ್ನೂ ಪ್ರಜೆಗಳನ್ನೂ ರಕ್ಷಿಸಬೇಕು

ಪ್ರ—ಮುಕ್ತೆರಾಜ್ಯದ ರಾಜಮಂತ್ರಿಗಳಾರು?

ಉ—ಆತ್ಮನೇ ರಾಜನು ಮನಸ್ಸೇ ಮಂತ್ರಿಯು. ಇದರಲ್ಲಿ ಮಂತ್ರಿಯನ್ನು ಜಯಿಸದೆ ರಾಜನ ದರ್ಶನವಾಗುವದಿಲ್ಲ ರಾಜನ ದರ್ಶನವಾಗದೆ ಮಂತ್ರಿಯು ಜಿತನಾಗನು. ರಾಜದರ್ಶನವಿಲ್ಲದೆ ಮಂತ್ರಿ ಜಯದಿಂದ ರಾಗದ್ವೇಷಾದಿ ದುಷ್ಪಲಗಳೇ ಉಂಟಾಗುವವು ಮಂತ್ರಿ ಜಯವಿಲ್ಲದೆ ರಾಜದರ್ಶನಾಪೇಕ್ಷೆಯು ದರಿದ್ರನ ಮನೋರಥದಂತೆ ನಿಷ್ಪಲವಾಗುವದು ಆದ್ದರಿಂದ ಇವರಿರ್ವರನ್ನು ಏಕಕಾಲದಲ್ಲಿ ಜಯಿಸಲು ಪ್ರಯತ್ನಿಸಬೇಕು ಆತ್ಮನ ಜಯಾ (ದರ್ಶನಾ) ಪೇಕ್ಷೆಯಿಂದಲೇ ಮನಸ್ಸು ಜಿತವಾಗುವುದರಿಂದ ಬಾಲಕನಂ ಲಾಲಿಸುವಂತೆ ಯುಕ್ತಿಯಿಂದಲೇ ಮೊದಲು ಈ ಮಂತ್ರಿಯಂ ಜಯಿಸಬೇಕು ಈ ಮಂತ್ರಿಯ ಜಯಕ್ಕೆ ನಿಷಯ ವೈರಾಗ್ಯವಲ್ಲದೆ ಮತ್ತೊಂದುಪಾಯವಿಲ್ಲವು ಈ ಸಾಧನೆಯಿಂದ ಮುಕ್ತಿರಾಜ್ಯವನ್ನು ಪಡೆಯಬಹುದು

ಪ್ರ—ಸ್ವಸ್ವರೂಪ ಜ್ಞಾನವೆಂದರೇನು?

ಉ—ತಾನು ಸಂಸಾರಿಯಲ್ಲ, ನಿತ್ಯನಾಗಿಯೂ, ಜ್ಞಾನೈಕರೂಪನಾಗಿಯೂ ಇರುವ ಪರಾತ್ಪರ ವಸ್ತು ಎಂದು ಸಾಕ್ಷಾತ್ಕರಿಸುವದು. ಹೀಗೆ ಈ ಜ್ಞಾನೋದಯವಾದೊಡನೆಯೇ ಮಾನಾಭಿಮಾನಿಯಾದ ಮಾನಿನಿಯಂತೆ ಲಜ್ಜೆಯಿಂದ ಸರ್ವಾನರ್ಥಕ್ಕೂ ಕಾರಣವಾದ ಅವಿದ್ಯೆಯು ಮಾಯವಾಗುವದು

ಪ್ರ—ಪುತ್ರ, ಮಿತ್ರ, ಧಾತ್ರ, ಕಳತ್ರ, ಮಾತ್ರ, ಪಿತ್ರ ಇವುಗಳ ವಿಯೋಗದಿಂದ ಕಳವಳಿಸುತ್ತಿರುವವರು ತಿಳಿಯಬೇಕಾದದ್ದೇನು?

ಉ—ಹರಿಯುವ ಪ್ರವಾಹಕ್ಕೆ ಹಳ್ಳಗಳಂತೆ ಮೇಲ್ಕಂಡ ಎಷ್ಟೋ ಬಂಧುಗಳು ಇದುವರೆಗೆ ಸಂಭವಿಸಿರುವರು ಮುಂದೆಯೂ ಸಂಭವಿಸುವರು ಕಾಡುಮರಕ್ಕೆ ಎಲೆಗಳಂತೆ ಸಂಸಾರಿಗೆ ಬಂಧುಗಳು ಎಲ್ಲೆಲ್ಲಿಯೂ ಸಿದ್ಧರಾಗಿರುವರು. ಮರಬಳ್ಳಗಳಿಗೆ ಪತ್ರ ಪುಷ್ಪಫಲಗಳಂತೆ ಅವರಿಗೂ ನಮ್ಮಂಥ ಬಂಧುಗಳು ಎಡೆಕೆಯಿಲ್ಲದೆ ಆಗಿರುವರು. ಮರಗಳಿಗೆ ಪ್ರತಿವರ್ಷದಲ್ಲಿಯೂ ಫಲಗಳಾಗುವಂತೆ ಪ್ರಾಣಿಗಳಿಗೆ ಪ್ರತಿ ಜನ್ಮದಲ್ಲಿಯೂ ಹೊಸ ಹೊಸದಾಗಿ ಬಂಧುಗಳು ಸಂಭವಿಸುವರು ಸಂಸಾರಮಾರ್ಗದಲ್ಲಿ ಜನ್ಮಗಳಿಗೂ ಸಮುದ್ರದಲ್ಲಿ ತೆರೆಗಳಿಗೂ ಎಂದಿಗೂ ಎಣಿಕೆಯಾಗಲಾರದು. ಇನ್ನು ಪರಮಾರ್ಥವಾಗಿ ವಿಚಾರಿಸಲು ಈ ಪ್ರಪಂಚವು ಬಿಸಿಲ್ದು ದುರೆಯಂತೆ ಭ್ರಾಂತಿ ಸಿದ್ಧವೆನಿಸುವುದಾದ್ದರಿಂದ ಮಿತ್ರರೂ ಬಂಧುಗಳೂ ಯಾರೂ ಇಲ್ಲವೆಂತಲೂ ತಿಳಿಯತಕ್ಕದ್ದು. ಮತ್ತು ಮರುಭೂಮಿಯಲ್ಲಿ ಜಲಕಣಗಳಂತಿವರು ಭ್ರಾಂತಿಯಿಂ ದೃಶ್ಯರಾಗಿರುವರಾದ್ದರಿಂದ ಇವರಿಗಾಗಿ ದುಃಖಪಡುವುದಕ್ಕೆ ಕಾರಣವಿಲ್ಲ ಪುತ್ರ ಮಿತ್ರ ಬಂಧು ಸ್ನೇಹಾತ್ಮಕವಾದ ಮೋಹದಿಂದುಂಟಾದ ಈ ಪ್ರಪಂಚದಲ್ಲಿ ತಂದೆ ತಾಯಿಗಳು ಬಂಧುಗಳು ಸಹ ಯಾರೆಂದು ತಿಳಿಯಬೇಕು ಬಗೆಬಗೆಯಾದ ಸಂಸಾರಗಳೂ ಪರಿಪರಿಯಾದ ವ್ಯಾಪಾರಗಳೂ ಸಹ ಅಜ್ಞಾನದ ವಿಲಾಸವಲ್ಲದೆ ಮತ್ತೊಂದಲ್ಲ ಹೀಗಿರುವಲ್ಲಿ ಯಾವ ಜನ್ಮದ ಬಂಧುಗಳಂ ಸ್ಮರಿಸಿಕೊಂಡು ಅಳಬೇಕು? ಮುಖ್ಯವಾಗಿ ಬಂಧು ಬಾಂಧವರೆಲ್ಲರೂ ಸಂತೆಯ ಜನರೆಂದು ತಿಳಿದುಕೊಂಡು ಮಡಿದು ಹೋದವರಿಗಾಗಿ ಕಣ್ಣೀರು ಬಿಡುವುದರಲ್ಲಿ ಒಂದು ಕುರುಡುಕವಡೆಯಷ್ಟೂ ಫಲವಿಲ್ಲವು. ಮತ್ತು ನಿತ್ಯಮರಣ ನಿತ್ಯಜನ್ಮವಾದ ಈ ಸಂಸಾರ ಸಂಭ್ರಮದಲ್ಲಿ ಹರ್ಷಶೋಕಗಳಿಂದ ಉಪಯೋಗವೇನು?

ಪ್ರ—ದೃಶ್ಯಪ್ರಪಂಚವೆಂದರೇನು?

ಉ—ನಾವು ನೋಡುವ ಈ ಜಗತ್ತು ಸುಖ-ದುಃಖ, ಪಾಪ-ಪುಣ್ಯ, ಧರ್ಮಾ-ಧರ್ಮ, ಶೀತೋಷ್ಣ ಇತ್ಯಾದಿ ದ್ವಂದ್ವಧರ್ಮಗಳಿಂದ ಕೂಡಿದ್ದಾಗಿರುವದೆಂಬ ತಿಳಿವಳಿಕೆಯು.

ಪ್ರ—ಜ್ಞಾತೃ, ಜ್ಞಾನ, ಜ್ಞೇಯವೆಂದರೇನು?

ಉ—ಜ್ಞಾತೃವೆಂದರೆ ತಿಳಿಯತಕ್ಕವನು (ಜೀವ) ಜ್ಞಾನವೆಂದರೆ ತಿಳಿವಳಿಕೆಯು, ಜ್ಞೇಯವೆಂದರೆ ತಿಳಿಯಲ್ಪಡತಕ್ಕ ವಸ್ತು (ಬ್ರಹ್ಮ) ಈ ಮೂರಕ್ಕೆ ತ್ರಿಪುಟಿ ಎಂದು ಹೆಸರು.

ಪ್ರ—ದೇಹ ಮತ್ತು ಮನಸ್ಸುಗಳ ಸಂಬಂಧವು ಹೇಗಿರುವದು?

ಉ—ದೇಹ ಮನಸ್ಸುಗಳು ಪರಸ್ಪರ ಶತ್ರುಭಾವದಿಂದಿರುವವು ದೇಹವು ತನ್ನ ಸಂಕಟಗಳಂ ಮನವಂದಂಡಿಸುವದು. ಮನವು ತನ್ನ ದುಃಖವನ್ನನುಭವಿಸುವುದಕ್ಕಾಗಿ ದೇಹವಂ ಕಲ್ಪಿಸುವದು ಹೀಗೆ ಜನ್ಮಶತ್ರುಗಳಾದ ಈ ದೇಹ ಮನಸ್ಸುಗಳ ಸಂಬಂಧದಲ್ಲಿ ಯಾವ ಸುಖವುಂಟಾದೀತು? ಇವುಗಳಲ್ಲಿ ಈ ಕೆಟ್ಟ ಶರೀರವು ಮನವಳಿದರೆ ತಾನು ನೆಮ್ಮದಿಯಾಗಿದ್ದೇನೆಂದು ಮನದ ನಾಶಕ್ಕಾಗಿ ಸತ್ಸಂಗಾದಿ ವ್ಯಾಪಾರಗಳಲ್ಲಿ ಮುಂದುವರೆಯುವದು ಮನವಾದರೋ ವಿವೇಕ ಬಂದಲ್ಲಿ ತನಗೆ ಉಳಿಗಾಲವಿಲ್ಲೆಂದು ವಿವೇಕಬರುವುದಕ್ಕವಕಾಶವಂ ಕೊಡದೆ ತನ್ನ ಅವಿವೇಕ ದುಃಖಗಳ ಭೋಗಕ್ಕೋಸ್ಕರ ದೇಹದ ಸ್ಥಿತಿಯನ್ನಪೇಕ್ಷಿಸುವದು ಹೀಗೆ ತಮ್ಮ ಸುಖರಸನಂ ಕೊಡುವುದರಿಂದ ಮೇಳೈತಟಾಳಗಳಂತೆ ಪರಸ್ಪರವಾಗಿ ವೃದ್ಧಿಹೊಂದಿದ ಈ ಮನೋದೇಹಗಳು ವಾದ್ಯುಗ್ಗಿಗಳಂತೆ ಶತ್ರುಮಿತ್ರಭಾವಗಳಂ ನಡೆಯಿಸುತ್ತಾ ಕಟ್ಟಕಡೆಯಲ್ಲಿ ಶತ್ರುಭಾವದಿಂದಲೇ ನಿಲ್ಲುವವು ಪ್ರಿಯ ವಾಚಕರೇ ಇಂತಹ ವಿಷಮಸ್ಥಿತಿಯಲ್ಲಿ ಬುದ್ಧಿಕುಶಲನಾದವನು ಕಾಗೆ ಗೂಗೆಗಳ ಬಡಿದಾಟದಲ್ಲಿ ಕೋಗಿಲೆಯು ಓಡಿಹೋಗುವಂತೆ ಈ ದೇಹ ಮನವೆರಡನ್ನೂ ಬಿಟ್ಟು ಮುಕ್ತನಾಗುವನು ಪ್ರಾಗಲ್ಲದೆ ಯಾವನು ಭೋಗಾಸೆಯಲ್ಲಿಯೇ ಮಗ್ನನಾಗುವನೋ ಅವನನ್ನು ಮಹಾನ್ಮದೀ ಪ್ರವಾಹಾದಿಗಳಿಂದಣಗದ ಬಡಬಾಗ್ನಿಯಲ್ಲಿ ಭದ್ರವಾಗಿ ಮಡಗಿರಬೇಕೆಂದು ಜ್ಞಾನಿಗಳ ಅಭಿಮತವು ಆದರೆ, ದೇಹ ಮನ ಇವೆರಡರಲ್ಲಿ ಮನವಿರುವವರೆಗೆ ಮನದ ಸಂಕಲ್ಪವಿದ್ದಂತೆ ದೇಹವು ಅನೇಕ ಪ್ರಕಾರವಾಗಿ ಬೆಳೆಯುವದು ಮನವಳಿಯಲು ದೇಹವು ವಾಸನೆಯೊಡನೆ ನಿಶ್ಚೇಷ್ಟವಾಗಿ ಸ್ಥೂಲವದು. ಒಂದು ವೇಳೆ ಇದ್ದರೂ ಹಂಡಇನಂತೆ ಮತ್ತೊಂದನ್ನು ಪುಟ್ಟಿಸಲಾರದಾದ್ದರಿಂದ ನಶ್ವನೆಂತಲೇ ತಿಳಿಯತಕ್ಕದ್ದು

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುವರ್ಗದ ಮಠಕ್ಕೆ ನಾವಿರಾರು ಶಿಷ್ಯರ ಮನೆಗಳಿರುತ್ತದ್ದು, ಆ ಮಹಾಧಿಕಾರಿಗಳು ಹದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರಮಾಡಿಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ಹೊಕಸುಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ರೀತಿಯಾಗಿ ಮುದ್ರಣಗೊಳಿಸಿದ್ದೇನೆ ಇದರಲ್ಲಿ ಬರಯುವ ವಿಷಯಗಳ ವಿವರವು ಜನ್ಮಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಆದರಲ್ಲಿರುವಂತೆ ವಿವರವನ್ನೆಲ್ಲಾ ಬರುವ ಪಂಚಾಕಾರಪರ್ಯಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಏಂಟು ಪೆಜಸಂಖ್ಯ ಕಾಗದಗಳನ್ನು ಹಯೋಗಿಸಿರುವುದಲ್ಲದೆ ಸುಂದರವಾದ ಸುಕ್ಷ್ಮ ಭದ್ರವಾದ ಬೈಂಡಿನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೋಲ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
ತ ನೇ ನಂಬರ್	೧	೬—೦—೦
ರಸಸಿಂದೂರ	೧	೨—೦—೦
ಮಿಲ್ಲಸಿಂದೂರ	೧	೪—೦—೦
ತಾಲಸಿಂದೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿರ್ತಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೮—೦
ಜಸ್ತುಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುತ್ತಿಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಪಿಷ್ಟಿಪಿನ ಭಸ್ಮ	೧	೦—೮—೦
ತಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರಿತಾಲಭಸ್ಮ	೧	೦—೮—೦
ಶುಸ್ಕಾರಿ (೧೫ ನೇ ನಂಬರ್)	೧	೫೦—೦—೦
ಶಿಲಾಜೆತ ಸೂರ್ಯಪುಟ	೧	೧—೦—೦
ಶಿಲಾಜೆತ ಅಗ್ನಿಪುಟ	೧	೦—೮—೦

ಸೂಚ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಪ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲು ಮೊದಲಾದ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್, ಒಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಆನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ ' ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವಿನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವೆಪ್ರಭಾಸಂದ ಶಿವಾಚಾರ್ಯ-ರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ಸಮ್ಮನ್ನಾನ್ಯರಾಜಾಧಿರಾಜ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡಿಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾಹ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಆದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ಪಡೆದು ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಆಯುತಲಿಂಗಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ		೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಾರ್ಥವಾಗಿ ಅಗಸ್ತ್ಯ, ಧರೀಚಿ, ವ್ಯಾಸ, ಸಾಸಂವ, ಪೂರ್ವಾಪರ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ		೦—೧—೬
ಸದ್ಯಃ ಪೀತಾಪೋಹನಾಮಾಧಿರಶಕ್ಕೆ ನಿವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ		೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ		೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೨೦ × ೪ ಬೆಲೆ ೧ಕ್ಕೆ		೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಆವತರಿಸಿರುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ವಿಧಿಪೂರ್ವಕ ಸ್ವಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ನೂರುಕೋಟಿ ಗುರುರೂಪವನ್ನು ಧಾರಣಮಾಡಿ ನೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ		೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ		೦—೦—೯
ಶ್ರೀಕಾಶೀಕ್ಷೇತ್ರವಿವಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ		೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಡಾಕ್ಷರ ಶಿವಾಚಾರ್ಯರ ಫೋಟೋ		೦—೦—೯
ಶ್ರೀಮದ್ಜಗದ್ಗುರೂ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ		೦—೦—೯
ಶ್ರೀಮದ್ರಂಭಾಪುರೀ ಸೀಂಹಾಧೀಶ್ವರ ಜಗದ್ಗುರು ಶಿವಾನಂದಪಟ್ಟಾಚಾರ್ಯ ಮಹಾಸ್ವಾಮಿಗಳವರ ಫೋಟೋ		೦—೦—೯
ಶ್ರೀಮದ್ಜಗದ್ಗುರೂ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ		೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	....	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	....	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	....	೦—೦—೯
ಶ್ರೀ ಇಸವನ್ನೂರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	....	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನಾಧೀಶ್ವರ ಧರ್ಮಪೀಠದ ಸುಂದರ ಫೋಟೋ	....	೦—೦—೯
ಹಿಮವತ್ಕೇದಾರ ಪರ್ವತದ ನಮ್ಯದಲ್ಲಿ ಕೋಡಿಮಠವಿರುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರುವ ಸುಂದರ ಫೋಟೋ	....	೦—೦—೯
ಸೊಲ್ಲಾಪುರದಲ್ಲಿ ಸಿದ್ಧೇಶ್ವರ ಜಾತ್ರೆಯಲ್ಲಿ ಸೇರಿರುವ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	....	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಗಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕಾಟುಂಬಿಕೌಷಧವಾಗಿ ಉಪಯೋಗಿಸುತ್ತಾರೆ. ಮಾವರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸನ ಅಂಡ್ ಕಂಪೆನಿ ಲಿಮಿಟೆಡ್,

[9] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	....	೨ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	....	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	....	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	....	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	....	೧ ಆಣೆ
ಬಸವಾದಿಶಿಜತತ್ತ್ವದರ್ಪಣ (೪ನೆಯ ಆವೃತ್ತಿ)	....	೨ ಆಣೆ
ಶ್ರೀರೇಣುಕಾಚಾರ್ಯರತಕೆ (೨ನೆಯ ಆವೃತ್ತಿ)	....	೨ ಆಣೆ
ಪಂಚಾಚಾರ್ಯಪ್ರಭಾಕರ	....	೨ ಆಣೆ
ಶ್ರೀಗುರುತತ್ತ್ವರವಗಳು	....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯರತಕ ..	....	೨ ಆಣೆ
ವೀರಶೈವಮತಿಮಾಮಾಂಸಾ	....	೩ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	....	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	....	೬ ಆಣೆ
ವೀರಶೈವಮಹಾತ್ಮರು	....	೮ ಆಣೆ
ಬಸವಧ್ವಾಂತವಿವಾಕರ (೩ನೆಯ ಆವೃತ್ತಿ)	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)		೮ ಆಣೆ
Speeches by Pandit Shri Kashinatha Shastri (*English*)		12 As.

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)		೧೨ ಆಣೆ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೫೩ ಪುಟ)		೮ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	೨ ರೂ.
ವೀರಶೈವಸಿದ್ಧಾಂತಸುಧಾಕರ	....	೨ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	....	೧ ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	....	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	೧ ರೂ
ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ)	..	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)		೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾಪ ಅತ್ಯಂತ ಸುಂದರಮುದ್ರಣ)		೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ		೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	....	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	....	೧೨ ಆಣೆ
ವೀರಶೈವರತ್ನ (ಮರಾಠಿ)	...	೧ ರೂ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ...	...	೩ ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	...	೧ ರೂ.
ವೀರಶೈವೇತಿಹಾಸ (ಸಂಸ್ಕೃತ) ...	...	೧ ರೂ.
ನಂದಿಕೇಶ್ವರಕಾರಿಕಾ (ಸಂಸ್ಕೃತ) ...	...	೨ ಆಣೆ.
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ...	...	೨ ಆಣೆ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು, ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಮಹಾವಿದ್ವಾನ್ ಪೀಠಿ ಶಿರಸಿ ಗುರುಪಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು— ಆಸ್ಥಾನ ಮಹಾವಿದ್ವಾನ್ ವೇ॥ ತಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೆವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೭ನೇ ಜೂನ್ ೧೯೩೮ [ಸಂಚಿಕೆ ೮

ವೀರಶೈವಮಹಾತ್ಮರು.

ಶ್ರೀಜಗದ್ಗುರುರೇಣುಕಾದಿಪಂಚಾಚಾರ್ಯರಿಂದ ಯುಗಯುಗಾಂತರಗಳಲ್ಲಿ ಸ್ಥಾಪಿತವಾಗಿರುವ ವೀರಶೈವ ಮತದೊಳಗೆ ಪ್ರಾಚೀನಕಾಲದಲ್ಲಿ ಅನೇಕಜನ ಮಹಾತ್ಮರು ಅವತರಿಸಿ, ಅನೇಕಾನೇಕಾದ್ಭುತಲೀಲೆಗಳನ್ನಾಚರಿಸಿ ಜಗದ್ವ್ಯಾಪ್ತರಾಗಿ ಹೋಗಿದ್ದಾರೆ. ಆ ಮಹಾತ್ಮರ ಲೀಲೆಗಳೇ ವೀರಶೈವರಿಗೆ ತಿಳಿಯದಾಗಿವೆ. ಈ ವಿಷಯವನ್ನು ಸರ್ವರೂ ತಿಳಿದುಕೊಂಡು ಧನ್ಯರಾಗಲೆಂಬ ಉದ್ದೇಶದಿಂದ **ವೇ॥ ಸಂ॥ ಶ್ರೀಕಾಶೀನಾಥಶಾಸ್ತ್ರಿಗಳವರು** ಮೇಲ್ಕಂಡ ಗ್ರಂಥವನ್ನು ನೂತನವಾಗಿ ರಚಿಸಿದ್ದಾರೆ. ಈ ಗ್ರಂಥವು ಚಾರಿತ್ರಿಕದೃಷ್ಟಿಯಿಂದ ಬರೆಯಲ್ಪಟ್ಟಿರುವುದರಿಂದ ಇದರ ಮಹತ್ತ್ವವು ವರ್ಣನಾತೀತವಾಗಿದೆ. ಈ ಗ್ರಂಥದಲ್ಲಿ— **ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರ** ಸಂಕ್ಷಿಪ್ತಚರಿತ್ರವು ಬರೆಯಲ್ಪಟ್ಟಿರುವುದಲ್ಲದೆ, **ದೂರ್ವಾಸಮಹರ್ಷಿ, ಸದಾಸಂದಶಿವಯೋಗಿ, ಅನಂದಲಿಂಗ ಶಿವಾಚಾರ್ಯ, ಭೂಕುಂಡಲಿಂಗಶಿವಾಚಾರ್ಯ, ಶಿವಯೋಗಿಶಿವಾಚಾರ್ಯ, ಚಿದ್ಘನಶಿವಾಚಾರ್ಯ, ಮಲ್ಲಿಕಾರ್ಜುನಶಿವಾಚಾರ್ಯರು, ಹಲಾಯುಧ, ಮಂಜನಪಂಡಿತಾರಾಧ್ಯ, ಶ್ರೀಪತಿಪಂಡಿತಾರಾಧ್ಯ, ಉದ್ಭಟಾರಾಧ್ಯ, ಓಹಿಲಾರಾಧ್ಯ, ಕೆರೆಯಪದ್ಮರಸ, ನಿಜಗುಣಶಿವಯೋಗಿ, ಮಲ್ಲಿಕಾರ್ಜುನಶಿವಯೋಗಿ,** ಇವರೇ ಮೊದಲಾದ ಮಹಾತ್ಮರ ಚರಿತ್ರೆಗಳು ಬರೆಯಲ್ಪಟ್ಟಿವೆ. ಆದುದರಿಂದ ಗುರುಭಕ್ತಿಶೀಲರಾದ ಸಮಸ್ತ ವೀರಶೈವರೂ ಈ ಗ್ರಂಥವನ್ನು ತರಿಸಿಕೊಂಡು, ಓದಿನೋಡಿ ವೀರಶೈವಮತದ ಪ್ರಾಚೀನವೈಭವವನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ.

ಬೆಲೆ ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ವೀರಶೈವರತ್ನ.

ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾಗಿರುವ ಈ ಮೇಲ್ಕಂಡ ಗ್ರಂಥವು ಮಹಾರಾಷ್ಟ್ರದೇಶದ ವೀರಶೈವರ ಉದ್ಧಾರಕ್ಕೋಸ್ಕರ **ಮಹಾರಾಷ್ಟ್ರಭಾಷೆ**ಯಲ್ಲಿ ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದ ಯೋಗ್ಯತೆಯು ಅಸಾಧಾರಣವಾಗಿರುವದು. ಆದುದರಿಂದಲೇ ಈ ಗ್ರಂಥವು ಸ್ವಲ್ಪದಿವಸಗಳಲ್ಲಿಯೇ ಕನ್ನಡಭಾಷೆಯಲ್ಲಿ ೫ ಸಾರೆ ಮುದ್ರಿಸಲ್ಪಟ್ಟಿರುವದು. ಈ ಗ್ರಂಥದ ಸನುಗ್ರಸ್ವರೂಪವನ್ನು ಮಹಾರಾಷ್ಟ್ರದೇಶದವರಿಗೆ ತಿಳಿಯುವಂತೆ ಮಾಡಬೇಕೆಂದು ಅನೇಕಜನ ಮಹಾರಾಷ್ಟ್ರದೇಶದ ವೀರಶೈವರು ಪ್ರಾರ್ಥಿಸಿಕೊಂಡಪ್ರಕಾರ, ವಿಶೇಷ ದ್ರವ್ಯವನ್ನು ವ್ಯಯಮಾಡಿ ಇದನ್ನು ಈಗ ಮರಾಠಿಭಾಷೆಯಲ್ಲಿ ಬಹುಸುಂದರವಾಗಿ ಮುದ್ರಿಸಿದ್ದಾಗಿದೆ. ಈ ಗ್ರಂಥದಲ್ಲಿ ಅತ್ಯಂತಮಹತ್ತ್ವದ ೩೦ ಫೋಟೋಗಳು ಸೇರಿಸಲ್ಪಟ್ಟಿರುವುವು. ಇವುಗಳಲ್ಲಿ ಅನೇಕ ಪ್ರಾಚೀನಶಾಸನಗಳ ಫೋಟೋಗಳಿವೆ. ಮಹಾರಾಷ್ಟ್ರದೇಶದ ವೀರಶೈವರ ಉದ್ಧಾರಕ್ಕಾಗಿ ಅವಿರ್ಭವಿಸಿರುವ ಈ ಗ್ರಂಥರತ್ನವನ್ನು ಮಹಾರಾಷ್ಟ್ರಭಾಷೆಯನ್ನುಬಲ್ಲವರೆಲ್ಲರೂ ಅವಶ್ಯವಾಗಿ ತರಿಸಿಕೊಂಡು ಸಂಪೂರ್ಣವಾಗಿ ಓದಿನೋಡಿ ಈ ಗ್ರಂಥದಲ್ಲುಕ್ತವಾಗಿರುವ ಅನೇಕಾನೇಕಮಹತ್ತ್ವವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ.

ಬೆಲೆ ೧ ರೂ. ವಿ.ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್—
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸ್ವೀಕಾರ.

ಬೆಳಗಾಂ ಡಿ॥ ತೇರದಾಳ ಗ್ರಾಮದಲ್ಲಿರುವ ಮ॥ ರಾ॥ ಗೂಳಪ್ಪ ಸೂಟ್ಪ ಇವರ ಪುತ್ರ ಚಿ॥ ಶಂಕರಪ್ಪನ ಲಗ್ನದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರಿಂದ ತೆಗೆಯಿಸಿದ **4** ರೂಪಾಯಿಗಳು ಮತ್ತು ಮ॥ ರಾ॥ ಅಲ್ಲಪ್ಪಾ ಯಾದವಾಡ ಇವರ ಪುತ್ರನ ಲಗ್ನದಲ್ಲಿ ತೆಗೆಯಿಸಿದ **1** ರೂಪಾಯಿ, ಮ॥ ರಾ॥ ವೀರಪ್ಪಾ ವಾಲಿ ಇವರ ಪುತ್ರ ಚಿ॥ ಬಸಪ್ಪನ ಲಗ್ನದಲ್ಲಿ ತೆಗೆಯಿಸಿದ **1** ರೂಪಾಯಿ, ಮ॥ರಾ॥ ಮಲ್ಲಪ್ಪಾ ಬಿಜ್ಜರಗಿ ಇವರ ಅಳಿಯ ಚಿ॥ ಗುರುಪಾದಪ್ಪನ ಲಗ್ನಸಮಯದಲ್ಲಿ ತೆಗೆಯಿಸಿದ **1** ರೂಪಾಯಿ ಮತ್ತು ನಾವಲಗಿ ಗ್ರಾಮದ ವೇ॥ ಪರಯ್ಯ ಹಿರೇಮಠ ಇವರ ಪುತ್ರ ಚಿ॥ ಗುರುಬಸವಯ್ಯನ ವಿವಾಹಸಮಯದಲ್ಲಿ ತೆಗೆಯಿಸಿದ **1** ರೂಪಾಯಿ ಒಟ್ಟು **8** ರೂಪಾಯಿಗಳು ಶ್ರೀ॥ ಷ॥ ಬ್ರ॥ ತೇರದಾಳ ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಚನ್ನರಾಯಪಟ್ಟಣದ ತಾ॥ ಹಿರೇಸಾವೆ ಗ್ರಾಮದಲ್ಲಿರುವ ಮ॥ ರಾ॥ ರಂಭಾಪುರೀ ಇಲಾಖಾ ಮೆಂಬರ್ ಸಿದ್ಧಲಿಂಗಪ್ಪನವರ ಪುತ್ರಿ ಚಿ॥ ಸೌ॥ ಗುರುಸಿದ್ಧಮ್ಮನನ್ನು ತುರುವೇಕೆರೆ ತಾ॥ ಸಂಪಿಗೆಗ್ರಾಮದ ಮ॥ ರಾ॥ ರೇವಣ್ಣನವರ ಪುತ್ರ ಚಿ॥ ಸಿದ್ಧಪ್ಪನಿಗೆ ಕೊಟ್ಟು ವಧುವನ ಗೃಹದಲ್ಲಿ ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ ವಧೂವರರಿಂದ ತೆಗೆಯಿಸಿದ **2** ರೂಪಾಯಿ ಚಲ್ಲದಲ್ಲಿರುವ ಬಲ್ಲೇನಹಳ್ಳಿಮಠದ ಮಡಿವಾಳಪ್ಪದೇವರ ಪುತ್ರ ಚಿ॥ ವೀರಾರಾಧ್ಯನಿಗೆ ಕೋಡಹಳ್ಳಿ ಮರಿದೇವರ ಪುತ್ರಿ ಚಿ॥ ಸೌ॥ ಚನ್ನವೀರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ತೆಗೆಯಿಸಿದ **1** ರೂಪಾಯಿ ಒಟ್ಟು **3** ರೂಪಾಯಿಗಳು ಮ॥ ರಾ॥ ಹಿರೇಸಾವೆ ಸಿದ್ಧಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ನಾರವಾಡ ಡಿ॥ ಗದಗ ಸಿಟಿಯಲ್ಲಿರುವ ಮ॥ ರಾ॥ ಹಂಚಿನಾಳ ಮುರಿಗಪ್ಪನವರ ಪುತ್ರ ಚಿ॥ ಗುರುಸಿದ್ದಪ್ಪನಿಗೆ ಹಾವೇರಿ ಟೌನ್ನಿನಲ್ಲಿರುವ ಮ॥ ರಾ॥ ಪುರದ ಶಿವಪ್ಪನವರ ಪುತ್ರಿ ಚಿ॥ ಸೌ॥ ಗೌರಮ್ಮನನ್ನು ಕೊಟ್ಟು ಶ್ಯೇಸ್ಯ ಬಿ॥ ೨ ದಿವಸ ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ತೆಗೆಯಿಸಿದ **2** ರೂಪಾಯಿಗಳು ಶ್ರೀ॥ ಷ॥ ಬ್ರ॥ ಹಾವೇರಿ ಬಣ್ಣದಮಠದ ಜರ ಮೂರ್ತಿಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ರಾಜಧಾನಿಯಲ್ಲಿರುವ ಮ॥ ರಾ॥ ಜವಳಿ ಅಂಗಡಿ ಚಿ॥ ಸಂಗಪ್ಪನವರು ತಮ್ಮ ಪುತ್ರ ಚಿ॥ ಗುರುಬಸವಪ್ಪನಿಗೆ ರಾಯಚೂರು ಡಿ॥ ಗಣೇಕಲ್ಲು ನಾಡಗೌಡರಾದ ಮ॥ರಾ॥ ಸಂಗಪ್ಪನವರ ಪುತ್ರಿ ಚಿ॥ ಸೌ॥ ಶಿವಕಾಮಸುಂದರಮ್ಮನನ್ನು ತಂದು ನೆರವೇರಿಸಿದ ವಿವಾಹಸಮಯದಲ್ಲಿ **2** ರೂ. ಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ, ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಪತ್ರಿಕೆಯವಹಾರ.

ಚಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

॥ ಜಯ ಜಗದ್ಗುರು ಪಂಚಕ ॥

ರಾವಣ ಸನ್ಯಾಸಿ

ನಾನೊಬ್ಬ ಸನ್ಯಾಸಿಯಾಗಿದ್ದು ನನಗೆ ಇವರು ಕುಕ್ಕುಟಸನ್ಯಾಸಿ ಅಥವಾ ರಾವಣಸನ್ಯಾಸಿಯೆಂದು ಕರೆಯುವರು ~~ನನ್ನ ವಯಸ್ಸು ಸಾಧಾರಣ ೬೦ ಕ್ಕೆ ಬಂದಿರಬಹುದು~~ ನಾನು ಮಹಾಕಪಟಿ ನಿಜವಾದ ಸನ್ಯಾಸತ್ವವು ನನ್ನಲ್ಲಿಲ್ಲ ಏಕೆಂದರೆ ಸನ್ಯಾಸಿಗಳು ದುಡ್ಡನ್ನು ದೂಡಿದರೆ, ನಾನು ದುಡ್ಡನ್ನು ಬಲಾತ್ಕಾರದಿಂದ ಸೆಳೆಯುವೆನು. ಸನ್ಯಾಸಿಗಳು ವೈರಾಗ್ಯಶೀಲರಿದ್ದರೆ ನಾನು ವೈರಾಗ್ಯಕ್ಕೆ ವೈರಾಗ್ಯವನ್ನು ಬೋಧಿಸುವೆನು ಅವರು ಧರ್ಮಾತ್ಮರಿದ್ದರೆ ನಾನು ಧರ್ಮಭ್ರಷ್ಟನಾಗಿದ್ದೇನೆ. ಅವರು ಒಂದೇ ಮಾರ್ಗದಿಂದ ನಡೆಯುತ್ತಿದ್ದರೆ ನಾನು ಪ್ರಸಂಗಬಂದಹಾಗೆ ನಡೆಯುವೆನು ಅವರು ಸನಾತನಿಗಳಿದ್ದರೆ ನಾನು ಸುಧಾರಕನಾಗಿರುವೆನು ಅವರು ಗುರುವಿನಲ್ಲಿ ಭಕ್ತಿಯಿಟ್ಟಿರೆ ನಾನು ಗುರುವಿರೋಧಿಯಾಗಿರುವೆನೆ ನನ್ನ ಹಿಂದಿನ ನನ್ನ ಮುರದ ಸನ್ಯಾಸಿಯು ಓರ್ವ ಮಹಾಗುರುವನ್ನು ಕೆಣಕಿ ದಂಡಮಾಡಿಸಿಕೊಂಡಿದ್ದರಿ ನಾನೂ ಅದೇ ವಂಶದವನಾದ್ದರಿಂದ, ಅದೇ ಮಹಾಗುರುವಿನ ವಂಶದವರನ್ನು ತಡವಿ ನೆನ್ನ ಕಟವಾಯಿಯನ್ನ ಹರಿದುಕೊಂಡೆನು ನಾನೇನು ಸಾಮಾನ್ಯನೇ? ನನ್ನ ವಂಶದ ಅಭಿಮಾನವು ನನಗೆ ಬೇಡವೇ? ನನ್ನನ್ನು ಯಾರೂ ಕೇಳುವವರಿದ್ದಿಲ್ಲ ನಾನೇ ನಾನು, ಎಲ್ಲಿ ನೋಡಿದಲ್ಲಿ ನನ್ನ ಮೆರವಣಿಗೆಯೇ, ನನ್ನ ಉರುವಣಿಗೆಯೇ, ಹಿಂಗಾಗಿ ನಾನು ವೀರಶೈವಸಮಾಜದ ಲಕ್ಷ್ಮಿಯನ್ನು ನನ್ನ ವಶಮಾಡಿಕೊಂಡೆನು ನನಗಾಗಿ ವೀರಶೈವರೆಷ್ಟೋ ಜನರು ಪರಮತದವರೊಡನೆ ಕಾದಾಡಿದರು ಇದೆಲ್ಲವನ್ನೂ ನೋಡಿ ನಾನು ಆನಂದಪಡುತ್ತಿದ್ದೆ ಅಲ್ಲಲ್ಲಿ ನನ್ನ ಹೆಸರಿನಿಂದ ಬೋರ್ಡಿಂಗ್, ಸಾರಶಾಲೆಯದಿಗಳನ್ನು ಸ್ಥಾಪನೆಮಾಡಿಸಿದೆ ಅವುಗಳಿಗೆ ೫೫ ಸಾವಿರ-೧೦ ಸಾವಿರ ರೂಪಾಯಿ ವಾಗ್ದಾನವನ್ನಾಡಿರುವೆನು (ಹೆಚ್ಚಿನೇ ಕಾದರ್ದ್ರತಾ) ಇನ್ನೂ ಬಂದು ಕಾಸನ್ನೂ ಕೊಟ್ಟಿಲ್ಲ ಆಯಾ ಜನರು ನನಗೆ ದುಡ್ಡಿನ ವಿಷಯಕ್ಕೆ ಪತ್ರಗಳನ್ನು ಬರದೇ ಬರೆಯುತ್ತಿರುವರು ಅವುಗಳಿಗಾವಕ್ಕೂ ನಾನು ಗಮನವನ್ನೇ ಕೊಟ್ಟಿಲ್ಲ ಆ ಜನರು ತಮ್ಮ ತಪ್ಪನ್ನೆಲ್ಲಿಯೇ ಪುನಃ ಪಟ್ಟುವಾಡಿ ಆಯಾ ಸಂಸ್ಥೆಗಳನ್ನು ನಡೆಯಿಸುತ್ತಿರುವರು ಇದೆಲ್ಲವನ್ನೂ ಕಂಡು ಜಗರ. ನನಗೆ "ರಾವಣಸನ್ಯಾಸಿ" ಯೆಂದು ನಾಮಕರಣ ನಾಮವನ್ನಿಟ್ಟರು

ನಿಜ ನಾನು ರಾವಣಸನ್ಯಾಸಿಯೇ ನಿಜ! ಯಾಕೆಂದರೆ-ರಾವಣನು ಪರಮ ಪತಿವ್ರತೆಯಾದ ಸೀತೆಯನ್ನು ಅಪಹರಿಸುವದಕ್ಕೆ ಮಾರೀಚನೆಂಬ ರಾಕ್ಷಸನನ್ನು ಕೃತ್ರಿಮ ಜಿಂಕೆಯನ್ನಾಗಿ ಮಾಡಿದ್ದನು ನಾನೂ ಕೂಡ ಈ ವೀರಶೈವ ಧರ್ಮವೆಂಬ ಸೀತೆಯನ್ನು ಅಪಹರಿಸುವದಕ್ಕೆ 'ಬಸವ' ನೆಂಬ ಕೃತ್ರಿಮ ಜಿಂಕೆಯನ್ನು ಮುಂದೆಮಾಡಿದೆನು. ಸೀತೆಯ ಇಚ್ಛಾನುಸಾರ ರಾವಣನು ನಡೆದಂತೆ, ನಾನೂ ಕೂಡ ಈ ಮತದ ಇಚ್ಛಾನುಸಾರ ಬೋರ್ಡಿಂಗಾದಿಗಳನ್ನಿಟ್ಟೆನು ಇಷ್ಟಾದರೂ ಸೀತೆಯು ರಾಮನನ್ನೇ ಸ್ಮರಿಸುತ್ತಿದ್ದಂತೆ, ಜನರು ಪಂಚಾಚಾರ್ಯರ ಸೂತ್ರಗೋತ್ರಗಳನ್ನೇ ಹೇಳುತ್ತಿರುವರು ಸೀತೆಯನ್ನು ಹುಡುಕುವದಕ್ಕೆ ಕಿಷ್ಕಿಂಧೆಯಲ್ಲಿ ರಾಮನು ತನ್ನ ಪರಿವಾರವನ್ನು ನೆರೆಯಿಸಿದ್ದಂತೆ—ಕಾಶೀಕ್ಷೇತ್ರದಲ್ಲಿ ಪಂಚಾಚಾರ್ಯರ ಸಮ್ಮೇಳನವಾಯಿತು ಸಮುದ್ರವನ್ನು ನೆಗೆದು ಬರುವದಕ್ಕೆ ಬಹು ದುರ್ಧರವಾದ ಪ್ರಯುಕ್ತ ಯಾರನ್ನು ಕಳುಹಿಸಬೇಕೆಂದು ರಾಮನು ಯೋಚಿಸುತ್ತಿರಲು ಶೂರನೂ, ಬಲಾಢ್ಯನೂ, ಶುದ್ಧ ಬ್ರಹ್ಮಚಾರಿಯೂ, ಧೈರ್ಯಶಾಲಿಯೂ, ನಿರ್ಮಲಮನಸ್ಸಿನ ಸ್ವಾಮಿಭಕ್ತನೂ ಆದ ಆಂಜನೇಯನು ಸ್ವತಃಸಿದ್ಧನಾಗಿ ರಾಮನನ್ನು ಸಮಾಧಾನಗೊಳಿಸಿದಂತೆ, ಶುದ್ಧಬ್ರಹ್ಮತೇಜಸ್ಸಿನವೊಪ್ಪುವ, ಪಂಡಿತಾಗ್ರಗಣ್ಯ ಧೈರ್ಯಶಾಲಿ ಶ್ರೀ ರೇಣುಕರ ದ್ವಿತೀಯಾವತಾರದಂತೆ ತೊಪ್ಪುತ್ತಿರುವ "ನಾಗಸೂರು ಬ್ರಹ್ಮಶ್ರೀ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು" ಸ್ವಶಕ್ತಿಯಿಂದಲೇ "ವೀರಶೈವಮತದ ಮೂಲತತ್ವವನ್ನು ಹುಡುಕಲು ನಾನು ಸಿದ್ಧನಿದ್ದೇನೆಂದು ಎದೆತಟ್ಟಿ ಹೇಳಿ ಆ ಪಂಚಾಚಾರ್ಯರನ್ನು ಸಮಾಧಾನಗೊಳಿಸಿದರಂತೆ! ರಾವಣನ ಪಟ್ಟಣಕ್ಕೆ ಸಮುದ್ರದಿಂದ ಹಾರಿಬಂದ ಆಂಜನೇಯನನ್ನು ಅನಂತ ರಾಕ್ಷಸರು ಪೀಡಿಸಿದಂತೆ, ಕಾಶೀಕ್ಷೇತ್ರದಿಂದ ದೇಶಕ್ಕೆ ಬಂದಾಗ್ಗೆ ಶ್ರೀ ಕಾಶೀನಾಥ ಶಾಸ್ತ್ರಿಗಳವರನ್ನು ರಾಕ್ಷಸ ಸ್ವರೂಪಿಗಳಾದ ನನ್ನ ಪಕ್ಷದವರು ವಿಶೇಷವಾಗಿ ಪೀಡಿಸಿದರು. ಆದರೂ ರಾವಣನ ಸಮ್ಮುಖದಲ್ಲಿ ತನ್ನ ಶಕ್ತಿಯಿಂದ ರಾವಣನಿಗಿಂತಲೂ ಉನ್ನತಾಸನದಲ್ಲಿ ಕುಳಿತ ಆಂಜನೇಯನಂತೆ ಶ್ರೀ ಶಾಸ್ತ್ರಿಗಳು ತಮ್ಮ ವಿದ್ವತ್ತೆಯಿಂದ ನನಗಿಂತಲೂ ಹೆಚ್ಚಾದ ಅಧಿಕಾರವು ತಮ್ಮಲ್ಲಿರುವದೆಂದು ತೋರಿಸಿದರು ರಾಮಭಕ್ತನು ಲಂಕೆಯನ್ನೇ ಸುಟ್ಟಂತೆ, ಪಂಚಾಚಾರ್ಯಭಕ್ತನು ನನ್ನ ಪಕ್ಷವನ್ನೇ ಹುರಿದು ಬಿಟ್ಟನು. ಆಮೇಲೆ ರಾಮನು ರಾವಣನ ವಧೆಯು ಹೇಗಾಯಿತೆಂದು ಜ್ಯೋತಿಷ್ಯರನ್ನು ವಿಚಾರಿಸಲಾಗಿ ಅವರು ಇಂತಹ ಮೂಹೂರ್ತದಲ್ಲಿ ನಿಮ್ಮ ಹೆಸರಿನಿಂದ ಲಿಂಗವನ್ನು ಸ್ಥಾಪಿಸಿದರೆ ರಾವಣನ ವಧೆಯಾಗುವದೆಂದು ಹೇಳಲು ಆ ಮುಹೂರ್ತಕ್ಕೆ ಸರಿಯಾಗಿ ರಾಮನು ರಾಮೇಶ್ವರಲಿಂಗವನ್ನು ಸ್ಥಾಪಿಸಿದಂತೆ, ಇವರು ನನ್ನ ವಧೆಯಾಗುವುದಕ್ಕೆ "ಪಂಚಾಚಾರ್ಯಪ್ರಭಾ" ಪತ್ರಿಕೆಯನ್ನು ಹೊರಡಿಸಿದರು ಆಗಾಧವಾದ ನೀರಿನಿಂದ ಕೂಡಿದ ಸಮುದ್ರದಿಂದ ವಾರಾಗುವದು ಅಶಕ್ಯವೆಂದರಿತು ಆ ಸಮುದ್ರಕ್ಕೆ ಸೇತುವನ್ನು ಬಂದಿಸಿದಂತೆ, ವೀರಶೈವ ಸಮುದ್ರದಿಂದ ಅನಾಯಾಸವಾಗಿ ಪಾರಾಗುವದಕ್ಕೆ ಗ್ರಂಥಮಾಲೆಯನ್ನು ನಿರ್ಮಿಸಿದರು. ರಾಮನು ಲಂಕೆಗೆ ಸೇರಿ ಅನಂತ ರಾಕ್ಷಸರನ್ನು ಸಂಹರಿಸಿದಂತೆ, ನನ್ನ ಪಕ್ಷದ ಅನಂತ ಜನರ ರಾಕ್ಷಸೀ ಬುದ್ಧಿಯನ್ನು ಇಲ್ಲದಂತೆ ಮಾಡಿದರು ಲಕ್ಷ್ಮಣನು ಮೂರ್ಛೆಯನ್ನು ಹೊಂದಿದಂತೆ ರಂಜಾಪುರೀ ಪೀಠವು ಅನಾಯಕವಾಗಿತ್ತು. ಆಂಜನೇಯನು ಸಂಜೀವನ ಕಡ್ಡಿಯಿಂದ ಲಕ್ಷ್ಮಣನನ್ನು ಎಚ್ಚರಗೊಳಿಸಿದಂತೆ, ಶ್ರೀ ಪಂಡಿತರು ~~ಈಗಿರುವ~~ ಮಹಾಗುರುಗಳನ್ನು ತಂದು ಆ ಪೀಠವನ್ನು ಸನಾಯಕವನ್ನಾಗಿ ಮಾಡಿದರು. ರಾವಣನ ವಂಶದ ವಿಭೀಷಣನು ರಾಮನ ಭಕ್ತನಾದಂತೆ ನನ್ನ ವಂಶದ ಕೊಂಡಕುಂದಿಸ್ವಾಮಿಯು ಪಂಚಾಚಾರ್ಯರ ಭಕ್ತನಾದನು ಕುಂಭಕರ್ಣನು ಸತ್ತುಹೋದಂತೆ ನನ್ನ ತಮ್ಮ ಜಿನ್‌ಘಾಕ್ಟರಿ, ಮಂದಿರಾದಿಗಳಿಂದ ಒಳ್ಳೇ ಬಲಿಷ್ಠನು ಸತ್ತನು ನನಗೆ ಇನ್ನಾರೂ ಸಹಾಯವಿಲ್ಲ ರಾವಣನ ಹೆಂತಿಯ ಮಾನಭಂಗವನ್ನು ಸುಗ್ರೀವಾದಿಗಳು ಮಾಡಿದಂತೆ ನನ್ನ ಅಭಿಮಾನದ ಭಂಗವನ್ನು ಮರಾಂಡೆಶದ ಸೊಲ್ಲಾಪುರದವರು ಕಪ್ಪುಸಿತಾನೆಯಿಂದ ಮಾಡಿದರು. ಸೊಲ್ಲಾಪುರದ ಅಪಮಾನವನ್ನು ನೆನೆಸಿದರೆ ಹೆದರಿಕೆ ಬರುವದು ಮುಂದೆ ನಾನು ಸತ್ತಮೇಲೂ ಕೂಡ ಮುಂದಿನ ನನ್ನ ಮುರಿಗೆ ಸೊಲ್ಲಾಪುರಕ್ಕೆ ಹೋಗಬೇಡವೆಂದೇ ಹೇಳುವೆನು. ನನ್ನ ಸಹಾಯಕ್ಕೆ ತನ್ನ ವರ್ಗದ್ದೇ ಒಂದು ಹಳೇಹದ್ದು ಸೊಲ್ಲಾಪುರದಲ್ಲಿರುವದು ಆದರೂ ಈಗ ನನ್ನ ಬಲವು ಕುಗ್ಗಿತು ಮುಂದೆ ಏನು ಮಾಡಬೇಕು ಈ ಗುರುವರ್ಗದವರು ಹೇಗೆ ಹಾಳಾದಾರು? ಛೇ! ಛೇ! ಶಕ್ಯವಿಲ್ಲ ಈಗ ಎತ್ತನೋಡಿದ ಹತ್ತ ಅವರ ರಾಜ್ಯವೇ ಆಗಿರುತ್ತದೆ ರಾಮನು ರಾವಣನನ್ನು ಸಂಹರಿಸಿ ಸೀತೆಯನ್ನು ತೆಗೆದುಕೊಂಡು ಹೋದಂತೆ, ನನ್ನನ್ನು ಸಂಹರಿಸಿ ನನ್ನಿಂದ ವೀರಶೈವಮತವನ್ನು ತೆಗೆದುಕೊಂಡರೂ ನೀನು ಇನ್ನೂ ಸತ್ತಿಲ್ಲ ನೆಂದು ನೀವು ಹೇಳುವದಾದರೆ—ಸತ್ತಂತೆಯೇ ಸರಿ ಈಗೇನು ಉಳಿದಿದೆ? ನನ್ನನ್ನು ಈಗ ಯಾರೂ ಕೇಳುವದಿಲ್ಲ ಪ್ರತಿಯೊಂದುಗ್ರಾಮಕ್ಕೂ ಆಂಜನೇಯಬ್ರಹ್ಮಚಾರಿಯ ದೇವಾಲಯಗಳಿರುವಂತೆ ಪ್ರತಿಯೊಬ್ಬರ ಮನೆಗಳಲ್ಲಿಯೂ ಶ್ರೀಪಂಡಿತರ ಫೋಟೋ ನೇತಾಡುತ್ತಿರುವವು ರಾಮನವಮಿ ನಡೆದಂತೆ ಸರ್ವತ್ರ ಪಂಚಾಚಾರ್ಯ ಜಯಂತಿಗಳು ನಡೆಯುತ್ತಿರುವವು. ಇನ್ನಪಕ್ಷ ಸಾಧಿಸುವದಕ್ಕೆ ಅನಂತಜನರಿಗೆ ಸಾಲುಪಸವಾಗಿ ಕೊಟ್ಟು ಹಣವು ತಿರುಗಿ ಬಾರದಾಗಿದೆ ಕೇಳಿದರೆ ಇಂದು ನಾಳೆ ಕೊಡುತ್ತೇವೆನ್ನುವರು. ರಾವಣಮಾಡುತ್ತೇನೆಂದು ಬೆದರಿಕೆ ಹಾಕಿದರೆ ನಾವು ಗುರುವರ್ಗ ಪಕ್ಷಕ್ಕೆ ಸೇರುತ್ತೇನೆನ್ನುವರು ಏನುಮಾಡಲಿ ಹಣವೂ ಹೋಯಿತು, ಗುಣವಂತೂ ಮೊದಲೇ ಹೋಗಿದೆ. ~~ಈಗ ಜೀವಮಾತ್ರ ಉಳಿದಿದೆ.~~

ನಿಜವಾಗಿಯೂ ಪಂಚಾಚಾರ್ಯರ ಸೊತ್ತನ್ನು ಅವರಿಗೆ ಈಗ ಒಪ್ಪಿಸುವೆನು. ಒಪ್ಪಿಸುವೆನೆನ್ನಲಿಕ್ಕೆ ನನ್ನಲ್ಲೇನು ಉಳಿದಿದೆ ಅದರೂ ಮುರಭಿಮಾನವು ಮಾತ್ರ ಇನ್ನೂ ನನ್ನನ್ನು ಬಿಡಲೊಲ್ಲದು. ಈಗ ಯಾರೂ ನನ್ನನ್ನು ಮೆರೆಯಿಸುವವರಿಲ್ಲ. ಕರೆಯಿಸುವವರಿಲ್ಲ ಓ ಜನವೇ ನಿಮಗೆ ಸಾವಿರಗಟ್ಟಲೆ ರೂಪಾಯಿ ಕೊಡುತ್ತೇನೆ—ನಿಮ್ಮೂರಿಗೆ ಕರೆದುಕೊಂಡು ಹೋಗಿರಿ. ನನ್ನನ್ನು ಭಾದ್ರಪದಮಾಸದ ಕಾಮಣ್ಣ (ಜೋಳು ಮೂರ) ನಂತೆ ಮೆರೆಯಿಸಿರಿ. ನಿಮಗೆ ಪುಣ್ಯಬರುತ್ತದೆ ಎಲ್ಲಾ ಕಡೆಯಿಂದಲೂ ಬರುಹೋಗುವವರಿಗೆ ರೈಲು ಖರ್ಚು ನಾನೇ ಕೊಡುತ್ತೇನೆ ದಯಮಾಡಿ ನನ್ನ ಮಾತನ್ನು ಕೇಳಿರಿ ಯಾರೂ ಕೇಳುವದಿಲ್ಲವೇ? ಏನು ಹೊತ್ತು ಬಂತಪ್ಪಾ? ಆಗಲಿ ಇನ್ನೆಂದೂ ನಾನು ಹೀಗೆ ನಡೆಯಲಾರೆ ಓ ನನ್ನವರ್ಗದ ಸನ್ಯಾಸಿಗಳಿರಾ! ನಾಕು ಇನ್ನು ನಮ್ಮ ಪಟವು ಸಾಕು. ನನ್ನ ಇತಿಹಾಸದ ಮೇಲಿಂದ ನೋಡಲಾಗಿ ರಾವಣನೂ ಕೂಡ ನನ್ನಂತಹ ಕ್ರೂರನಿರಲಿಕ್ಕಿಲ್ಲೆಂದು ತಿಳಿಯುತ್ತದೆ. ಅಂತೂ ಜನರು ನನಗೆ ರಾವಣಸನ್ಯಾಸಿಯೆಂದು ಯೋಗ್ಯನಾಮಧೇಯವನ್ನೇ ಇಟ್ಟದ್ದಾರೆ ~~ಅಸ್ತು~~ ~~ಈಗ ನನ್ನ ಇತಿಹಾಸವು ಇಷ್ಟಕ್ಕೇ ಸಾಕು. ಇನ್ನೊಂದು ಬಾರಿ ತಿಳಿಸುವೆನು~~

ಹತಭಾಗ್ಯನಾದ,

ರಾವಣಸನ್ಯಾಸಿ.

ಸಂಕೇರರಿಗೆ ಸದುಪದೇಶ

ಕೃಷ್ಣರಾಜನಕಾಲದಲ್ಲಿ ತೆನ್ನಾಲರಾಮಕೃಷ್ಣನೆಂಬ ಬಹುಚತುರ ವಿದೂಷಕನಿದ್ದನು. ಆ ರಾಜನು ಯಾವಾಗಲೂ ತೆನ್ನಾಲರಾಮಕೃಷ್ಣನ ಹೊರತು ಬೇರೆಯವರೊಡನೆ ವಿಶೇಷ ಸಹವಾಸಮಾಡುತ್ತಿದ್ದಿಲ್ಲ. ರಾಜನ ಮನಸ್ಸನ್ನು ಯಾವಾಗಲೂ ಆನಂದದಿಂದಿರುವಂತೆ ಮಾಡುವುದೇ ಅವನ ಕಾರ್ಯವಾಗಿತ್ತು ಹೀಗಿರುವದರಿಂದ ರಾಜನು ಯಾವಾಗಲೂ ಅವನ ಹೇಳಿಕೆಯಂತೆಯೇ ನಡೆಯುತ್ತಿದ್ದನು. ರಾಜನು ಸದಾಚಾರಿಯೂ, ಸನಾತನಿಯೂ ಆಗಿದ್ದುದರಿಂದ, ಹರ, ಗುರುಗಳಲ್ಲಿ ಒಳ್ಳೇ ಭಕ್ತಿಯುಳ್ಳವನಾಗಿದ್ದನು. ರಾಜಗುರುಗಳು ಶೈವಬ್ರಾಹ್ಮಣರಿದ್ದು, ಅವರು ನಿತ್ಯದಲ್ಲಿಯೂ, ಸಂಧ್ಯಾವಂದನಾದಿಗಳನ್ನು ರಾಜನಿಂದ ಮಾಡಿಸಿ, ಮನ್ನನೆಯನ್ನು ಪಡೆದು ತಮ್ಮ ಸ್ಥಳಕ್ಕೆ ಹೋಗುತ್ತಿದ್ದರು ಈಪ್ರಕಾರ ಕೃಷ್ಣರಾಜನ ದಿನಚರ್ಯೆಯು ಯಥಾಪ್ರಕಾರ ಸಾಗಿತ್ತು.

ನಾಲ್ಕು-ಐದು ದಿನಗಳಗೊಮ್ಮೆ ರಾಜನು ಕ್ಷೌರವನ್ನು ಮಾಡಿಸಿಕೊಳ್ಳುತ್ತಿದ್ದನು. ಒಮ್ಮೆ ಕ್ಷೌರಿಕನು ಒಳ್ಳೇ ಉತ್ತಮರೀತಿಯಿಂದ ಕ್ಷೌರವನ್ನು ಮಾಡಿದನು. ಅಂದರೆ ತಲೆಯಮೇಲೆ ಕತ್ತಿಯನ್ನು ಆಡಿಸಿದ್ದೂ ರಾಜನಿಗೆ ಗೊತ್ತಾಗಲಿಲ್ಲ. ರಾಜನು ಸಂತುಷ್ಟನಾಗಿ ನಿನಗೇನುಬೇಕೆಂದು ಕೇಳಲು—ಆಗ ನಾಸಿತನು, ತನ್ನ ತಲೆಬೋಳಿಸುವ ಕಾರ್ಯವನ್ನು ಬಿಟ್ಟು ಬ್ರಾಹ್ಮಣನಾದರೆ ನನಗೂ ರಾಜನು ಮಾನಮರ್ಯಾದೆ ಮಾಡುವನು ಎಂದು ತಿಳಿದು ನಾನು ಬ್ರಾಹ್ಮಣನಾಗಬೇಕೆಂದಿರುವೆನು ಎಂದನು ಅದಕ್ಕೆ ರಾಜನು ಅಗಲಿ ಎಂದು ಸಮ್ಮತಿಸಿದನಂತೆ! ಆಗ ಅಲ್ಲಿಯೇ ಇರುವ ತೆನ್ನಾಲರಾಮಕೃಷ್ಣನು ಇದು ಅನುಚಿತವೆಂದು ನುಡಿದರೂ, ಆ ಹಜಾಮನ ಇಚ್ಛೆಯಂತೆ ರಾಜನು ಕೆಲವು ಹಾದುವರನ್ನು ಕರೆಯಿಸಿ ಹಣವನ್ನು ಕೊಟ್ಟು ಬ್ರಾಹ್ಮಣನನ್ನಾಗಿ ಮಾಡಿರೆಂದು ಆಜ್ಞಾಪಿಸಿದನು ರಾಜಾಜ್ಞೆಯಂತೆ ದುಡ್ಡಿನಾಶೆಯ ಹಾರುವರು ನದಿಗೆ ಕರೆದೊಯ್ದು ವಿಧಿಯನ್ನು ನಡೆಯಿಸಿದರು. ಆ ಮೇಲೆ ರಾಜನು ಸಾಯಂಕಾಲಕ್ಕೆ ಆ ವಿಧಿಯನ್ನು ನೋಡಲಿಕ್ಕೆಂದು ಹೋದನು. ಆಗ ಹಾರುವರು ಆ ಹಜಾಮನನ್ನು ನೀರಿನೆಲ್ಲಿ ಮುಳಗಿಸುವದು, ಪುನಃ ಮೇಲಕ್ಕೆತ್ತಿ ಸಂಕಲ್ಪವನ್ನು ಬಿಡಿಸುವದು. ಹೀಗೆಯೇ ನಡೆಯಿಸಿದ್ದರಂತೆ! ಇದನ್ನು ನೋಡಿ

ರಾಜನು ನಾಲ್ಕು ಹೆಜ್ಜೆ ಮುಂದೆಹೋಗಲು, ಅಲ್ಲಿ ತೆನ್ನಾಲರಾಮಕೃಷ್ಣನು ಒಂದು ಕರಿ ನಾಯಿಯನ್ನು ತೆಗೆದುಕೊಂಡು ಸಾಲೂನು ಕಟ್ಟಾವುದು. ನಿರಿನಲ್ಲಿ ಮುಳುಗಿಸುವದು ಹೀಗೆ ನಡೆಯುತಿತ್ತಿದನು ಅದನ್ನು ನೋಡಿ ರಾಜನು ಎಲೋ ತೆನ್ನಾಲರಾಮಕೃಷ್ಣನೇ! ಇದೇನು ನಡೆಯಿಸಿರುವಿ? ಎಂದು ಪ್ರಶ್ನೆಮಾಡಲು, ತೆನ್ನಾಲ ರಾಮಕೃಷ್ಣನು–ಧೊರೆಗಳೇ! ಈ ಕಪ್ಪು ನಾಯಿಯನ್ನು ಬಿಳಿನಾಯಿಯನ್ನಾಗಿ ಮಾಡಬೇಕೆಂದು ಪ್ರಯತ್ನ ನಡೆಯಿಸಿರುವೆನು.

ರಾಜ–ಎಲೋ ಮೂರ್ಖ! ಕಪ್ಪು ನಾಯಿಯು ಸಬ್ಬು ಹಚ್ಚಿ ತೊಳೆದಾಕ್ಷಣವೇ ಎಂದಾದರೂ ಬಿಳಿ ನಾಯಿಯಾದೀತೇ? ಎಂದನು

ತೆನ್ನಾಲರಾಮ–ಸ್ವಭುಗಳೇ! ಹಜಾಮನು ಎಂದಾದರೂ ಬ್ರಾಹ್ಮಣನಾಗಬಲ್ಲನೇ? ಎಂಬುದನ್ನು ಕೇಳಿ ದಾಕ್ಷಣವೇ ರಾಜನು ವಿಚಾರವಂತನಾಗಿ ಹಜಾಮನನ್ನು ಬ್ರಾಹ್ಮಣನನ್ನಾಗಿ ಮಾಡಿಸುವ ತನ್ನ ಮೂರ್ಖ ತನವನ್ನು ಹೇಯಾಳಿಸಿ ಆ ಕಾರ್ಯವನ್ನು ಬಿಡಿಸಿದ ನಂತೆ! ಹೀಗೆಯೇ ಈಗಿನಕಾಲದಲ್ಲಿ ಕಂಡಕಂಡಜಾತಿ ಯವರಿಗೆ ಲಿಂಗವನ್ನು ಬಿಗಿದು ದೀಕ್ಷೆಯನ್ನು ಮಾಡು ವದರಿಂದ ಅವರೆಲ್ಲರೂ ಶುದ್ಧವೀರಶೈವರಾಗಬಲ್ಲರೇ? ಇದನ್ನರಿಯದೆ ಕುಲಭ್ರಷ್ಟರಿಗೆಲ್ಲ ಲಿಂಗವನ್ನು ಬಿಗಿಯುವ ಸಂಕರಪಂಥನ್ನೊಂದು ಹೊಸದಾಗಿ ತಲೆಯತ್ತ ಹತ್ತಿರುವದು ಎಲೈ ಸಂಕರರೇ? ನೀನೆಷ್ಟುಪ್ರಯತ್ನ ಪಟ್ಟರೂ ನಿಮ್ಮ ಕಾರ್ಯವು ಸಿದ್ಧವಾಗುವದಿಲ್ಲವೆಂಬು ದನ್ನು ಸ್ಥಿರವಾಗಿ ನಂಬಿರಿ ನಿಮ್ಮ ಸಂಕರತ್ವವನ್ನು ಬಿಟ್ಟುಬಿಡಿರಿ ಶಂಕರನಲ್ಲಿ ಶಂಕರತ್ವದಿಂದ ನಡೆದರೆ ಶಂಕರತ್ವವೆ ಲಭಿಸುವದು ಸಂಕರತ್ವದಿಂದ ಅಹಂಕಾರವು ಬೆಳೆದು ಭಯಂಕರ ವೈತರಣಿಯು ತಪ್ಪಿದ್ದಲ್ಲ ಮೇಲುದಾಹರಿಸಿದ ಕಥೆಯಿಂದಾದರೂ ಬುದ್ಧಿಗಲಿಯರಿ

ಜೆ ಜಿ ಪಾಟೀಲ, ಧೂಪ್ತಿ

ಅಖಿಲ ಪಟ್ಟಚಾರಾಧಿಕಾರಿಗಳು ಹೋಟಿಗಿ ಶ್ರೀಗಳವರ ಅನುಕರಣಮಾಡಲಿ

(ಬರೆದವ–ದೈವಜ್ಞ ವಿಸೋ)

ಮಹಾರಾಷ್ಟ್ರಪ್ರಾಂತದಲ್ಲಿ ವೀರಶೈವ ಧರ್ಮೋನ್ನತಿಯ ಕಾರ್ಯಗಳು ಅತ್ಯಂತ ಭರದಿಂದ ಸಾಗಿರುವದನ್ನು ನೋಡಿ ಪರಮಸಂತೋಷವಾಗುತ್ತದೆ ಈ ಮತೋನ್ನತಿಯ ಮಹತ್ಕಾರ್ಯದ ಸಂಪೂರ್ಣಯಶಸ್ಸು ಬಾಲ ತಪಸ್ವಿಗಳಾದ ಸುಪ್ರಸಿದ್ಧ **ಹೋಟಿಗಿ ಬೃಹನ್ಮಠಾಧೃಕ್ಷರಾದ ಶ್ರೀ॥ಷ॥ಬ್ರ॥ ಚೆನ್ನವೀರಶಿವಾಚಾರ್ಯ** ಸ್ವಾಮಿಗಳವರಿಗೆ ಸಲ್ಲತಕ್ಕದ್ದಾಗಿದೆ ಶ್ರೀಜಗದ್ಗುರು ಪಂಚಾಚಾರ್ಯಭಗವತ್ಪಾದರವರ ಆಮೋಘವಾದ ಸಿದ್ಧಾಂತ ಪ್ರಚಾರಕಾರ್ಯವು ಉಪಾಚಾರ್ಯರಾದ ಪಟ್ಟ-ಚಾರಾಧಿಕಾರಿಗಳ ಮೂಲಕವಾಗಿಯೇ ಸಾಗಿ ಮತೋನ್ನತಿಯಾಗಬೇಕಷ್ಟೆ? ಶ್ರೀಜಗದಾಚಾರ್ಯರ ಸಂಚಾರವು ಅಖಿಲ ವೀರಶೈವಪ್ರಪಂಚದಲ್ಲೆಲ್ಲ ಯಾವಾಗಲೂ ಜರಗುವದು ಅತಿ ವಿರಳವಾದುದರಿಂದ ಸಮಸ್ತಭಾಗಗಳಲ್ಲಿ ವಿರಾಜಿಸುತ್ತಿರುವ ಪಟ್ಟಚಾರಾಧಿಕಾರಿಗಳು ತಮ್ಮ ಕರ್ತವ್ಯವಾದ ಧರ್ಮೋನ್ನತಿಕಾರ್ಯದಲ್ಲಿ ದಕ್ಷರಾಗಬೇಕು ಪಟ್ಟಚಾರಾಧಿಕಾರಿಗಳು ಜಾಗೃತರಾದ ಹೊರತು ವೀರಶೈವಮತವು ತನ್ನ ಸ್ವಾಚೀನಗತವೈಭವವನ್ನು ಪಡೆಯಲಾರದು ಮತೋದ್ಧಾರಕ್ಕಾಗಿ ಕಂಕಣಕಟ್ಟಿದ ಹೋಟಿಗಿ ಶಿವಾಚಾರ್ಯರ ಧರ್ಮಕಾರ್ಯಗಳ ಕಡೆಗೆ ಪ್ರತಿಯೊಬ್ಬ ಪಟ್ಟಚಾರಾಧಿಕಾರಿಗಳೂ ಲಕ್ಷ್ಯಕೊಡಬೇಕು

ಮತಧರ್ಮಸಂಸ್ಕಾರಗಳ ಲೋಪವಾಕ್ಷಿಯಿಂದಲೆ ಮತಾವನತಿಯಾಗತೊಡಗಿರುವದಷ್ಟೆ? ಅಧಾರ್ಮಿಕ ಸಂಸ್ಕಾರಗಳನ್ನು ಬಳಕೆಯಲ್ಲಿ ತರುವದರಿಂದ ವೀರಶೈವನು ವೀರಶೈವತ್ವದಿಂದ ವಿರಾಜಿಸುವನು ಧರ್ಮ ಗುರುಗಳ ಆಜಾಗರೂಕತೆಯಿಂದ ಧರ್ಮಸಂಸ್ಕಾರಗಳು ಕ್ಷೀಣದಶೆಗೆ ಬಂದಿರುತ್ತವೆ ಸಂಸ್ಕಾರಹೀನರಾದ ನಾಮಧಾರಿ ವೀರಶೈವರಿಗೆ ಧರ್ಮಾಭಿಮಾನವು ಸ್ಪಟವಿಗುವದೆಂತು? ಸಂಸ್ಕಾರಗಳ ಪ್ರಭಾವವು ಸಾಮಾನ್ಯವಾದುದಲ್ಲ ಶಿಲಾಸಂಜನಿತರತ್ನವು ತನ್ನಲ್ಲಿ ಅಡಕವಾಗಿದ್ದ ಶಿಲಾಂಶವನ್ನೆಲ್ಲ 'ಸಾಣೆ' ಎಂಬ ಸಂಸ್ಕಾರ ಕ್ರಿಯೆಯಿಂದ ಕಳೆದುಕೊಂಡು ಪರಿಶುದ್ಧವಾದರೆ ಅದರ ಪ್ರಕಾಶವು ದೀಪ್ತವಾಗುವದು ಸಾಣೆಯಿಲ್ಲದ ರತ್ನವು ಹೇಗೆ ಪ್ರಕಾಶವನ್ನು ಕಾಣಲಾರದೋ ಹಾಗೆ ವೀರಶೈವನು ವೀರಶೈವಧರ್ಮಸಂಸ್ಕಾರಗಳನ್ನು ಹೊಂದಿದಿದ್ದರೆ ಕೇವಲ ನಾಮಧಾರಿಯಾಗಿ ಜೀವಿಸಿದರೂ ಸಾರ್ಥಕತೆಯನ್ನು ಸಂಪಾದಿಸಲಾರನು ಇದನ್ನರಿತ ಹೋಟಿಗಿ ಶ್ರೀಗಳವರು ತಮ್ಮ ಪ್ರಾಂತದಲ್ಲಿ ದೀಕ್ಷಾದಿ ಸಂಸ್ಕಾರಗಳನ್ನು ವಿಶೇಷವಾಗಿ ಪ್ರಚಾರಗೊಳ್ಳಿಸಿ ತರುತ್ತಲಿದ್ದಾರೆ ವೀರಶೈವಧರ್ಮದಲ್ಲಿ ದೀಕ್ಷಾಸಂಸ್ಕಾರವು ಪ್ರಧಾನವಾಗಿರುವದು ಈ 'ದೀಕ್ಷಾ' ಸಂಸ್ಕಾರವನ್ನು ಹೊಂದದಿದ್ದರೆ ವೀರಶೈವನು ಲಿಂಗಾರ್ಚನಾಧಿಕಾರಿಯಾಗುವದಿಲ್ಲ ಲಿಂಗಾರ್ಚನೆರತನೇ ಲಿಂಗಾಂಗಿಯೋಗ ಸಾಮರಸ್ಯಾನಂದವನ್ನು ಪಡಯುತ್ತಾನೆ. ಹುಟ್ಟಿದಾಗ ಲಿಂಗ ಕಟ್ಟಿದ ಬಳಿಕ ಪುನಃ 'ದೀಕ್ಷೆ' ಏಕೆ? ಎಂಬ ಅಜ್ಞಾನಿಗಳ ವಾದವನ್ನು ಧರ್ಮೋಪದೇಶದಿಂದ ನಿವಾರಿಸಿ ದೀಕ್ಷೆಯ ಮಹತ್ವವನ್ನು ಅತ್ಯಂತ ಸುಲಭವಾಗಿ ಬೋಧಿಸುವ ಸಾಮರ್ಥ್ಯವು ನಮ್ಮ ಪೂಜ್ಯ ಹೋಟಿಗಿ ಶ್ರೀಗಳವರಲ್ಲಿದೆ

ಮಹಾರಾಷ್ಟ್ರ ಪ್ರಾಂತದಲ್ಲಿದ್ದ ಎನ್ಟೋಜನ ಪಟ್ಟ ಚಾರಾಧಿಕಾರಿಗಳು ಹೋಟಿಗಿ ಶ್ರೀಗಳವರ ಅನುಕರಣ ಶೀಲಮಾರ್ಗಾವಲಂಬಿಗಳಾಗಿದ್ದಾರೆ ಹೋಟಿಗಿಸ್ವಾಮಿಗಳವರ ವಯಸ್ಸು ಚಿಕ್ಕದಾಗಿದ್ದರೂ ಅವರ ಜ್ಞಾನ ಪ್ರಭೆಯು ಹಿರಿದಾಗಿರುವದು ಕೇವಲ ಬಾಲ್ಯದಲ್ಲಿಯೆ ವಿದ್ಯಾರ್ಜನೆಯೊಡನೆ ಅಮೋಘವಾದ ತಪೋನಿಧಿಯನ್ನು ಬೆಳಿಸಿದರು ಆ ತಪೋನಿಧಿಯ ಫಲಿತಾಂಶವನ್ನೇ ವೀರಶೈವಪ್ರಪಂಚಕ್ಕೆ ಸ್ವಾರ್ಥತ್ಯಾಗಿಗಳಾಗಿ ಹಂಚಿಕೊಟ್ಟಿರುವರು ಈ ಪೂಜ್ಯಶ್ರೀಗಳವರ ಕೃಪಾಶೀರ್ವಾದವನ್ನು ಹೊಂದಿದವರೇ ಧನ್ಯರು! ಪರಮ ಧನ್ಯರು॥ ವೀರಶೈವಭಕ್ತಮಾಹೇಶ್ವರರನ್ನು ಮತೋಪದೇಶ ಪ್ರಭಾವದಿಂದ ಯಾವಾಗಲೂ ಜಾಗೃತಿಗೊಳಿಸುತ್ತ ಮತಾಚಾರ್ಯರ ಕೀರ್ತಿಲತೆಯನ್ನು ಬೆಳಸುತ್ತಿರುವ ಹೋಟಿಗಿ ಶ್ರೀಗಳವರ ಪುಣ್ಯಾಭಿದಾನವನ್ನು ಪ್ರತಿಯೊಬ್ಬ ವೀರಶೈವನೂ ಸ್ಮರಿಸಬೇಕಾಗಿದೆ

ಪರಮ. ತಪೋನಿಧಿಗಳಾದ ಕೈ॥ ವಾ॥ ಶ್ರೀ ಮೆದು ಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಭಗವತ್ಪಾದರವರ ಸೊಲ್ಲಾಪೂರ, ಬಾರ್ಶಿ ಘಂಡರಪೂರ, ಮಂಗಳವೇಡೆ ಮೊದಲಾದ ನಗರಗಳಲ್ಲಿ ಅಭೂತಪೂರ್ವವಾದ ಅಡ್ಡಪಲ್ಲಕ್ಕಿವ ಹೂತ್ಸವಗಳು ನೆರವೇರಿದ್ದು ಸುಪ್ರಸಿದ್ಧವಷ್ಟೇ! ಈ ಗುರುಸಾರ್ವಭೌಮರ ಮಹೋತ್ಸವನೆರೂಪ ಭಾಸ್ಕರೋದಯಕ್ಕೆ ನಮ್ಮ ಹೋಟಿಗಿ ಶ್ರೀಗಳೆ ಕಾರಣರೆಂದು ಹೇಳದರೆ ಅತಿಶಯೋಕ್ತಿಯಾಗಲಾರದು ಈ ಬಾಲತಪಸ್ವಿಗಳಮೇಲೆ ಶ್ರೀಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರಿಗೆ ಘನತರವಾದ ವ್ಯೇಮೋನ್ಮಗ್ರಹವಿತ್ತು ಶ್ರೀಜಗದಾಚಾರ್ಯರ ಪ್ರತಿಬಿಂಬವೇ ಮೂರ್ತಿಯಾಗಿ ಮಹಾರಾಷ್ಟ್ರಪ್ರಾಂತವನ್ನು ಬೆಳಗುತ್ತಲಿರುವದು ಶ್ರೀಜಗದ್ಗುರು ಪಂಚಾಚಾರ್ಯರ ಜಯಂತ್ಯುತ್ಸವಗಳು ಆ ಪ್ರಾಂತದ ಸಮಸ್ತ ಶಹರ-ಹಳ್ಳಿಗಳಲ್ಲಿ ಆಯಾಯ ಕಾಲದಲ್ಲಿ ವಿಶೇಷ ವೈಭವದಿಂದ ನೆರವೇರಲು ಈ ತ್ಯಾಗಿಗಳವರ ಉಪದೇಶಿಪ್ರಭಾವವೇ ಮುಖ್ಯವಾಗಿದೆ ವೀರಶೈವಗರ್ಜನಾ ಎಂಬ ಮಂಥಾರಿ ವಾರಪತ್ರಿಕೆಯು ಶ್ರೀಜಗದಾಚಾರ್ಯರ ತತ್ವಪ್ರಚಾರಕವಾಗಿ ಅಖಿಲ ಮಹಾರಾಷ್ಟ್ರ ಪ್ರಾಂತದಲ್ಲಿ ಪ್ರಚಾರವಾಗಿರುವದಲ್ಲದೆ ಕರ್ನಾಟಕದಲ್ಲಿ ಸಹ ವಿಶೇಷ ವಾಚಕವರ್ಗವನ್ನು ಹೊಂದಿರುವದಷ್ಟೇ? ಈ ಪತ್ರಿಕೆಯ ಪ್ರಚಾರಕಾರ್ಯದಲ್ಲಿಯೂ ಹೋಟಿಗಿ ಶ್ರೀಗಳವರು ಮುಂದಾಳುಗಳಾಗಿ ನ್ಯಾರೆ ಧರ್ಮೋದ್ಧಾರವೇ ತಮ್ಮ ಜೀವನದ ಗುರಿಯೆಂದು ಸದಾ ಮತೋನ್ನತಿಯಕಾರ್ಯದಲ್ಲಿ ತತ್ಪರರಾದ ಈ ಪೂಜ್ಯಪಾದರ ಅನುಕರಣವನ್ನು ಸಮಸ್ತ ಪಟ್ಟಚಾರಾಧಿಕಾರಿಗಳೂ ಮಾಡಲೆಂದು ವಿನೋದನು ವಿನೀತನಾಗಿ ವ್ಯಾಧಿಸುತ್ತಾನೆ

ಮಿಶ್ರಸಂಜನಿತರ ಲಗ್ನಗಳು

"ಅದೂ ಹಾಗಂತೆ-ಇದೂ ಹೀಗಂತೆ ಅಂತಿಗಂತು ಕೂಡಿತು"

(ಬರೆದವ-ವೈಷಜ್ಞವಿನೋದ)

ಪ್ರತಿಯೊಂದು ರೆದ್ದ ಜಾತಿಗಳು ತಮ್ಮ ಪವಿತ್ರವಾದ ವೈಶಿಷ್ಟ್ಯವನ್ನು ಚೆನ್ನಾಗಿ ಕಾಪಾಡಿಕೊಂಡಿರುತ್ತವೆ. ಇದೀಗ ಕಲಿಕಲ್ಮಷದಿಂದ ಅವತರಿಸಿದ ಸಾಂಕರ್ಯವೆಂಬ ನೂತನಜಾತಿಯು ತನಗಿರುವ ಮಿಶ್ರಸಂಜನಿತ ವೈಶಿಷ್ಟ್ಯವನ್ನು ರಕ್ಷಿಸಿಕೊಳ್ಳುವದರಲ್ಲಿ ದಕ್ಷವಾಗಿ ತೊಡಗಿದೆ ಈಗಿನ ೨೦ ನೇ ಶತಮಾನಾರಂಭದಿಂದ ಇದಕ್ಕೊಂದು ವಿಕ್ರಸ್ವರೂಪವು ಬಂದಿರುವದೆಂದು ಬಹುಜನರು ಆಕ್ಷೇಪಿಸುತ್ತಿರುವರು ಹೇಗೆ ಬಂದಿರುವದೋ ಹಾಗೆಯೆ ಹೋಗುವದು ಸಹಜ ಧರ್ಮವಾದ್ದರಿಂದ ಧರ್ಮವಿಘಾತುಕ ಮಾರ್ಗದಿಂದ ಧಾವಿಸಿಬಂದ ಸಾಂಕರ್ಯವು ಅಲ್ಪಕಾಲಾವಧಿಯಲ್ಲಿಯೇ ನಾಶವಾಗುವದು ಇದೀಗ ಲಿಂಗಧರಿಸಿದವರಲ್ಲಿ ಕೆಲವರು ಹೊಲೆಹದಿನೆಂಟುಜಾತಿಯವರ ಭೇದವನ್ನೆಣಿಸದೆ ಶರೀರಸಂಬಂಧಮಾತ್ರವದರಲ್ಲಿ ತಾವು ಸಿದ್ಧರಿರುವೆವೆಂದು ಜಾತ್ಯಭಿಮಾನಶೂನ್ಯರಾಗಿ ವೃತ್ತಪತ್ರಿಕೆಗಳ ಮೂಲಕ ಬೊಬ್ಬೆಹಾಕುತ್ತಲಿದ್ದಾರೆ ಧರ್ಮಜ್ಞಾನರಹಿತ ವೃತ್ತಪತ್ರಿಕೆಗಳು ಇಂಥ ಸಾಂಕರ್ಯದ ಹೊಲಸನ್ನು ವಿಸ್ತರಿಸಿ ಒರೆಯುತ್ತಲಿವೆ ಪತ್ರಿಕೆಗಳ ಕರ್ತವ್ಯವನ್ನು ಅರಿಯದ ಸಂಪಾದಕರು ಸನಾತನ ಧರ್ಮವಿರೋಧಾಗ್ನಿಯನ್ನು ಬೆಳಿಸಿ ಮತ ಹಾಗೂ ಜಾತಿಧರ್ಮಘಾತುಕ ಕ್ರೋತ್ಪೆಜಕರಾಗುತ್ತಲಿರುವರು ರಾಷ್ಟ್ರೋದ್ಧಾರವಿರಲು ಜನಿಸಬೇಕಾದರೆ ಸ್ವರಾಷ್ಟ್ರೀಯ ಸ್ತ್ರೀಪುರುಷರೇ ಅಧಿಕಾರಿಗಳೆಂದು ಹೇಳುವ ಜಗದ್ವಿಖ್ಯಾತನಾದ ಜರ್ಮನ್ ಹಿಟ್ಲರನ ಶಾಸನದ ಕಡೆಗೆ ಹೊರಳಿನೋಡಿರಿ ಈ ಕಾನೂನಿನಲ್ಲಿ ಅರ್ಧವು ಗರ್ಭೀಕರಾಶಲ್ಯವಿರುವದು ಜಾತಿವಿಜಾತಿಗಳ ಸಂಬಂಧವುಂಟಾಗುವದರಿಂದ ಈ ಸಂಕರ ಸಂಬಂಧಿಗಳಿಂದ ಸಂಜನಿಸಿದ ಸಂತತಿಯು ಯಾವ ಜಾತ್ಯಭಿಮಾನವನ್ನು ವಹಿಸಬೇಕು? ತಂದೆಯ ಜಾತಿಯನ್ನೋ? ತಾಯಿಯ ಜಾತಿಯನ್ನೋ? ಅಥವಾ ಇವೆರಡನ್ನು ಬಿಟ್ಟು ೩ನೇ ಜಾತಿಯನ್ನೋ? ಜಾತ್ಯಭಿಮಾನವೇ ಘಾತುಕವಾದುದೆಂದು ಸಂಕರರು ಕೊಳುತ್ತಲಿದ್ದಾರೆ ಈ ಜಾತ್ಯಭಿಮಾನ ಸಿದ್ಧಾಂತವನ್ನು ವಿನೋದನು ಈ ಮೊದಲು ಸಾವಿರಾರು ಲೇಖನಗಳಿಂದ ಮಂಡಿಸಿದ್ದಾನೆ ಮಾನವನು ಮಾನವತ್ವವನ್ನು ಮೊದಲು ಸಾರ್ಥಕಮಾಡಿಕೊಂಡ ಬಳಿಕಲ್ಲವೇ ದೇವತ್ವವನ್ನು ಹೊಂದುವ ಅಧಿಕಾರವು ದೊರೆಯುವದು? ಮನುಷ್ಯತ್ವಕ್ಕೆ ತಿಲಾಂಜಲಿಯನ್ನಿತ್ತು ಪಶು ಕೀಲ್ಯಾಚರಣೆಯಿಂದ ನಡೆದವನಿಗೆ ಸದ್ಗತಿಯಾಗುವದೆಂತು? ಜನ್ಮಕ್ಕೆ ಕಾರಣವಾದ ಜಾತಿಯೂ ಜಾತಿಗಾಶ್ರಯವಾದ ಮತವೂ ನಿಶ್ಚಿದರ್ಮದಲ್ಲಿ ಬೆರೆತು ನಿಜ ಶಾಂತಿಸಾಗರದ ಕಡೆಗೆ ಪ್ರವಹಿಸುತ್ತವೆ

ಜಾತಿವಂತರ ಬಗ್ಗೆ ಜಾತ್ಯಭಿಮಾನಿಗಳಾಗಿರೆಂದು ಬರೆಯುವದೆ ಬೇಡ ಅವರು ತಮ್ಮ ಜಾತಿತ್ವದಿಂದ ಮುಕ್ತರಾಗಲು ಸಾಧ್ಯನಿಲ್ಲ ಜಾತಿಯು ಕೆಡಲಾರದು ಸಂಕರಜಾತಿಯ ಉತ್ಪತ್ತಿಗೆ ಅನ್ಯಾಯತೆಯೆ ಕಾರಣವಾಗಿದೆ ದುರಾಚಾರ ಪರಾಯಣರಾದವರಿಂದ ಯಾವಾದರೊಂದು ಜಾತಿಯ ಸ್ತ್ರೀಯಳಿಂದ ಹುಟ್ಟಿದ ಸಂತತಿಯು ಜಾತ್ಯಭಿಮಾನವನ್ನು ಹೇಗೆ ವಹಿಸಿಕೊಂಡೀತು? ಹೀಗೆಯೇ ಸಂಜನಿಸಿದ ಮತ್ತೊಂದು ಸಂತತಿಯು ಶನ್ನಂತೆ ಹುಟ್ಟಿದ ಸಂತತಿಯನ್ನು ಹುಡುಕಿಕೊಂಡು ಕೂಡುತ್ತದೆ ಹೀಗೆ ಕೂಡಿದೊಡನೆ ಜನಗಳು ಸುಮ್ಮನಿರುವರೇ? "ಅಂತಿಗಂತು ಕೂಡಿತು" ಎಂದು ಅನ್ನುವದು ಲೋಕಪ್ರಸಿದ್ಧವಾದ ವಾಡಿಕೆಯಾಗಿದೆ ಜಾತಿಗೀತಲೂ ನೀತಿಗೆ ವಿಶೇಷ ಬೆಲೆಯಿರುವದಷ್ಟೆ! ನೀತಿವಂತನು ಜಾತಿವಂತನಾಗುವನು ನೀತಿಗೇಡಿಯು ತಾನೇ ಕೆಡುವನಲ್ಲದೆ, ತನ್ನ ಹುಟ್ಟಿನ ಶುದ್ಧಜಾತಿಯನ್ನು ಕೆಡಿಸಲಾರನು. ವೀರಶೈವಮತಸಾಮ್ರಾಜ್ಯದ ಛಿದ್ರಿರುವ ಸಮಸ್ತ ಜಾತಿಗಳಲ್ಲಿ ನೀತಿಹೀನರೂಹಿಯಾದ ಯಾವನಾದರೊಬ್ಬನು ಜಾತಿಗೇಡಿಯಾದ ಮಾತ್ರದಿಂದ

[೬ ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೩೮ ನೆಯ ಜೂ॥ ತಾ॥ ೨೭ ನೇ ಸೋಮವಾರ

ವೀರಶೈವ ನಿರಾಭಾರಿಪರ್ವತ: ಗಳಲ್ಲಿ

ವೀರಶೈವಮತದ ಉತ್ತಮಕುಲದಲ್ಲಿ ಯಾವನು ಜನ್ಮವನ್ನು ಧರಿಸುತ್ತಾನೆಯೋ ಅವನು ಲಿಂಗಾಂಗಸಾಮರಸ್ಯವೆಂಬ ಮುಕ್ತಿಸಾಧಕವಾದ ನಿರಾಭಾರಿಯಾಗಲರ್ಹನಾಗಿರುತ್ತಾನೆ. ಆದರೆ "ಅಸ್ಪವರ್ಷಂ ಬ್ರಾಹ್ಮಣಮುಪನಯೀತ" "ತಮಧ್ಯಾಪಯೇತ್" ಎಂಬ ನಿಯಮಾನುಸಾರವಾಗಿ ಹುಟ್ಟಿದ ಎಂಟನೆಯ ವರ್ಷದಿಂದ ಶಿವದೀಕ್ಷೋಪನಯನವೆಂಬ ಮಹಾಸಂಸ್ಕಾರವನ್ನು ಪಡೆದು ಆಚಾರ್ಯಸನ್ನಿಧಿಯಲ್ಲಿ ಶಾಸ್ತ್ರಾಧ್ಯಯನ ಮಾಡಬೇಕು. ಲಿಂಗರೂಪಿಯಾದ ಬ್ರಹ್ಮನನ್ನು ಭಕ್ತಿಯಿಂದ ಉಪಾಸಿಸುವ ರಹಸ್ಯವನ್ನೆಲ್ಲ ಆಚಾರ್ಯನಿಂದ ತಿಳಿಯಬೇಕು. ಲಿಂಗನೆಂದರೇನು? ಅದರ ಸ್ವರೂಪನೆಂತಹದು? ಅದ ನ್ನೆಲ್ಲಿಯುವನೆಂತು? ಲಿಂಗವೆಂದರೇನು? ಅದರ ಸ್ವರೂಪನೆಂತಹದು? ಅಲ್ಲಿ ಲೀನವಾಗುವ ಪರಿಯೆಂತು? ಎಂದು ತನಗೆ ತೋರಿದ ಸಂಶಯಗಳನ್ನೆಲ್ಲ ಗುರುವಿನಲ್ಲಿ ಪ್ರಶ್ನಿಸಲು, ಇವನ ಪ್ರಶ್ನೆಗೆ ಸಂತುಷ್ಟನಾದ ಗುರುವು "ತತ್ತ್ವಮಸ್ಯಾದಿ" ಮಹಾವಾಕ್ಯಗಳನ್ನುಪದೇರಂಗೈದು ಅನೇಕ ಲೌಕಿಕೋದಾಹರಣಗಳಿಂದ ಶಿಷ್ಯನ ಮನಃಕಮಲವನ್ನು ವಿಕಸನಗೊಳಿಸುವನು. ಇಲ್ಲಿಂದ ಮುಕ್ತಿಯೆಂಬ ಮಹಾಮಂದಿರವನ್ನು ಪಡೆಯಲು ಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ರಚಿಸಿರುವ ಭಕ್ತ್ಯಮಹೇರ-ಶ್ರದ್ಧಾವಿ-ಪ್ರಾಣಲಿಂಗಿ-ಶರಣ-ಏಕ್ಯ ಎಂಬ ಆರು ಸೋಪಾನಗಳನ್ನೇರುವುದಕ್ಕೆ ಪ್ರಯತ್ನಪಟ್ಟು ಪ್ರಥಮದ ಭಕ್ತಿಸ್ಥಾನವೆಂಬ ಸೋಪಾನದ ಮೇಲೆ ಕಾಲಿಟ್ಟನು ಕ್ರಮದಿಂದ ಇದನೆಯ ಸ್ಥಲವೆನಿಸಿದ ಶರಣಸ್ಥಲವನ್ನು ಪ್ರವೇಶಿಸಿದ ಮೇಲೆ—

ಸತೀ ಜ್ಞಾನಂ ಪತಿರ್ಲಿಂಗಂ ಸ್ಯಾದಿ ಯುಕ್ತಸ್ಸ್ವಯಂ ಪ್ರಭುಃ ।
ಸ್ವಾಪಂಚಕಮಿದಂ ನಾಸ್ತಿ ಶರಣಸ್ಥಲಮುತ್ತಮಂ ॥

ಎಂಬ ಆಜಾರೋಕ್ತಿಯ ಪ್ರಕಾರ ಸ್ವಾಪಂಚಿಕ ಪ್ರಪಂಚವೆಲ್ಲ ಬಿಡುಗಡೆಯಾಗಿ ಜೀವನೇ ಪತಿಯು ಶಿವನೇ ಪತಿಯು ಎಂಬ ದೃಢವಾದ ಭಾವನೆಯು ಅಂಕುರಿಸುವ ಮ.. ಗುರುವಿನ ಉಪದೇಶಬಲದಿಂದ ಜೀವ ಶಿಷ್ಯನ ಅಂತಃಕರಣವು ಪರಿಶುದ್ಧವಸ್ಥೆಯನ್ನು ಹೊಂದಿ ವಿಷಯವೈರಾಗ್ಯವೆಂಬ ವಿರಜಾನದಿಯಲ್ಲಿ ಸ್ನಾನಮಾಡಿ ಅಪ್ರಾಕೃತ ಶರೀರಿಯಾಗಿ ಐಕ್ಯಸ್ಥಲವನ್ನು ಸ್ವವೇತಿಸುವನೋ ಅವನೇ ನಿರಾಭಾರಿಯು. ಇಂಥ ಮಹಾಪದವಿಯನ್ನು ಪಡೆವವನ ಬಳಗವಾದರೂ ಲೌಕಿಕ ಬಳಗದಂತಲ್ಲ.

ಸ್ಥೂಲ ಭೋಗ್ಯಾ ಸ್ಮರಾಕ್ಷೋಭೋ ವೈರಾಗ್ಯಜಾಂಭವಸ್ಸ್ಖಲತಃ ।
ಕ್ಷೀಯತೆ ಪುನಾಸ್ತಿ ಸದಾಮೃತಂ ಪಿತಾ ಶಾಶ್ವತೀರಿತಃ ॥
ಭಕ್ತಿರ್ಮಾತಾ ಸದಾಮೃತಂ ಪಿತಾ ನತ್ಯಂ ಸುತಾ ಮತಾ ।
ಸ್ಥಾನಾ ಶ್ರದ್ಧೈವ ಸಂಪ್ರೋಕ್ತಾ ಕೌಶಲ್ಯೈತ್ಪಾ ದಿ ಸನ್ಮತಾ ॥
ಪ್ರಸನ್ನೇವ ಶರೀರಂ ಸ್ಯಾದ್ಭಿಕ್ಷಾಭಕ್ಷೇತ್ರಮೇವ ಚ ।
ಧಾಸೀತ್ಪಿಂಡಾ ಸಂಪ್ರೋಕ್ತಾ ವಾಸಸ್ಥಾನಸ್ಯ ತಪ್ಪೆವ ಚ ॥
ಭವೋಽಪಹಸನಾಮುಕ್ತಂ ತತ್ಪಾಪೋ ಭವ ಏವ ಚ ।
ಸ್ವತ್ಪೀಸ ಪರೋ ದೇಶ ಇತಿ ಸಿದ್ಧಿಥೀಸ್ಸವಾ ॥

ವೇದಾಂತನಿಷ್ಠೆಯೇ ಹೆಂಡತಿಯು. ಸಂತೋಷನೇ ಮಗನು. ವೈರಾಗ್ಯನೇ ಬಂಧುವು. ಕ್ಷಮಾಗುಣವೇ ಪರಿವಾರವು. ಶಾಂತಿಯೇ ಮಿತ್ರನು. ಧರ್ಮಿಯೇ ತಾಯಿಯು ಸದಾಚಾರವೇ ತಂದೆಯು. ಸತ್ಯವೇ ಮಗಳು. ಶ್ರದ್ಧೆಯೇ ಸೊಸೆಯು. ಮೈತ್ರಿ ಮುದಿತಾದಿಗಳೇ ಮೊಮ್ಮಕ್ಕಳು ಜ್ಞಾನವೇ ಶರೀರವು. ಸದ್ವಿಚಾರವೇ ಭೂಮಿಯು ಅಹಿಂಸೆಯೇ ದಾಸಿಯು. ಸ್ವಾಸ್ಥ್ಯವೇ ದಾಸನು. ಧರ್ಮವೇ ವಾಹನವು. ಆಚಾರವೇ ಧರ್ಮವು. ಮುಕ್ತಿಯೇ ಸ್ಥಾನವು.

ಈ ರೀತಿ ವಾರಮಾರ್ಥಿಕವಾದ ಬಳಗದಿಂದೊಡಗೂಡಿ ದುಃಖಸ್ಪರ್ಶವಿಲ್ಲದೆ ಬ್ರಹ್ಮಾನಂದವನ್ನನುಭವಿಸುತ್ತ ಕಂಥಾ-ಕಮಂಡಲು-ದಂಡ-ಭಿಕ್ಷಾಪಾತ್ರೆ-ಭಸ್ಮ ಘಂಟೆಕೆ ಇವುಗಳನ್ನು ಗುರೂಪದಿಷ್ಟಗಳಾದ ಆಯಾಯ ಮಂತ್ರಪೂರ್ವಕವಾಗಿ ಧರಿಸುವುದಲ್ಲದೆ ಅಂತರಂಗದಲ್ಲಿ ಸಮತೆಯೆಂಬ ಕಂಥೆಯನ್ನೂ ಜ್ಞಾನವೆಂಬ ದಂಡವನ್ನೂ, ದಯೆಯೆಂಬಕ ಮಂಡಲವನ್ನೂ, ವೈರಾಗ್ಯವೆಂಬ ಭಿಕ್ಷಾಪಾತ್ರೆಯನ್ನೂ ಕ್ಷಮೆಯೆಂಬ ಭಸ್ಮಘಟಿಕೆಯನ್ನೂ ಹೊಂದಿರಬೇಕು. ಆತ್ಮನಲ್ಲಿ ಈ ಗುಣಗಳಿಲ್ಲದಿದ್ದರೆ ಹೊರಗಣ ಸ್ಥೂಲವಾದ ಮುದ್ರೆಗಳು ನಾಟಕದಲ್ಲಿ ವೇಷವನ್ನು ಧರಿಸಿದವನಂತೆ ವ್ಯರ್ಥವಾಗಿ ಪರಿಣಮಿಸುವುವು. ಶಿವಾರ್ಚನ-ತ್ರಿಪುಂಡ್ರಧಾರಣ-ಭಸ್ಮೋದ್ಧೂಳನ-ಶಿವಮಂತ್ರ ಜಪ-ಶಿವಧ್ಯಾನಗಳಲ್ಲಿ ಯಾವಾಗಲೂ ನಿರತನಾಗಿರಬೇಕು. ವೈದ್ಯ, ಜ್ಯೋತಿಷಾದಿ ಲೋಕವ್ಯವಹಾರಗಳನ್ನೆಲ್ಲಾ ಬಿಟ್ಟಿರಬೇಕು. ಮೇಲೆ ಬೀಳುತ್ತಿರುವ ಇಂದ್ರಿಯಗಳೆಂಬ ಶತ್ರುಗಳನ್ನೂ ಮೋಹವೆಂಬ ಪಿಶಾಚಿಯನ್ನೂ ಕೋಪವೆಂಬ ಹುಲಿಯನ್ನೂ ಮಮತೆಯೆಂಬ ಸರ್ಪವನ್ನೂ ಕಾಮನೆಂಬ ಜೋಕನನ್ನೂ ಹೊಡೆದೋಡಿಸಿರಬೇಕು. ಲೌಕಿಕವುರುಪನಂತೆ ತಾಪತ್ರಯವೆಂಬ ಹಳ್ಳದಲ್ಲಿ ಬೀಳಲಾಗದು. ವಿಷಯವೆಂಬ ಮುಳ್ಳಿನ ಮೇಲೆ ಕಾಲಿಡಕೂಡದು. ಅಹಂಕಾರವೆಂಬ ಮಡುವಿನಲ್ಲಿ ನುಗ್ಗಬಾರದು. ಇಂಥ ನಿರಭಾರಿಸ್ಥಲವನ್ನೇರಿದವನು—

ಸೃಷ್ಟಿಶ್ಚೇತ್ಸಾ ಸಾನಾ-ಯಾಜಮೂನೋ ಭವೇತ್ಸ ಸಃ ।
ದತ್ತಂ ಜೀವನ ಭುಂಜೀತ ನೋಚೇತ್ಕ್ಲೇಶಂ ಸ ಕಾರಯೇತ್ ॥
ನಾವಮೋಳಿಕಾಂ ನಮಾವೋಷ್ಠೇನಶ್ಚಾಲೋಷಣವರ್ಜಿತಃ ।
ಪಾಪೆಜಾರೀ ಚ ಸಂಭೂಯ ಚರೇದ್ಭೂವಲಯೇ ಶವಾ ॥
ಆಭಕ್ತಾನಾಂ ಭಕ್ತಾನಾಂ ಶಿಕ್ಷಾ ಶಾಸನಪರ್ಯಂತಃ
ಏಕಶ್ಚಾಕ್ಕೋ ಭವೇತ್ಸೋಪಿ ಸ್ವಾ ಸೈರಾಗ್ಯಪಾಸ್ ನಿಸ್ಪೃಹ ॥

ಮೂರು ಮನೆಗಳಿಗೆ ಹೋಗಿ ಯಾಚಿಸಬೇಕು. ಅತನು ಭಿಕ್ಷೆಯನ್ನು ನೀಡಿದರೆ ಊಟಮಾಡಬೇಕು ನೀಡದಿದ್ದರೆ ನೀಡಲಿಲ್ಲವೆಂದು ಕ್ಲೇಶಗೊಳ್ಳಬಾರದು. ಸಜ್ಜಿಸ್ಪೆ, ಮ್ಯಾನಾ, ಕುದುರೆಥ ಮುಂತಾದ ವಾಹನಗಳನ್ನೇರಿ ಬಾರದು. ಭೂಮಿಯನ್ನೇಲೆ ಕಾಲುನದಗೆಯಿಂದಲೇ ನಡೆಯಬೇಕು. ತನ್ನ ಭಕ್ತರನ್ನಾಗಲಿ, ಭಕ್ತರಲ್ಲದವರನ್ನಾಗಲಿ ಶಿಕ್ಷಿಸಲಾಗದು. ಶಪಿಸಲಾಗದು. ಒಪ್ಪತ್ತು ಮಾತ್ರ ಊಟಮಾಡುತ್ತ ವೈರಾಗ್ಯಸಂಪತ್ತಿಯಿಂದೊಡಗೂಡಿರಬೇಕು.

ಇಂಥ ಪರಿಶುದ್ಧವಾದ ನಿರಾಭಾರಿಸ್ಥಲವನ್ನು ಹೊಂದುವುದೇ ವೀರಶೈವಮತದ ಅಂತಿಮಧ್ಯೇಯವಾಗಿದೆ. ಪ್ರತಿಯೊಬ್ಬ ಲಿಂಗಧಾರಿಯಾದ ಮುಮುಕ್ಷುಪುರುಷನು ತನ್ನ ಗೋತ್ರಸೂತ್ರಾನುಸಾರವಾಗಿ ಆಚಾರ್ಯಭಗವತ್ಪಾದರಿಂದ ಶಿವದೀಕ್ಷೆಯನ್ನು ಪಡೆದಮೇಲೆ ಕ್ರಮದಿಂದ ಭಕ್ತಾದಿಮುಸ್ಥಿಸೋಪಾನಗಳನ್ನೇರಿ ವಪಿಪಕ್ವಾಂತಃಕರಣನಾಗಿ ನಿರಾಭಾರಿಸ್ಥಲದಲ್ಲಿ ನಿಶ್ರಮಿಸಿಕೊಳ್ಳುವನು. ಲಿಂಗರೂಪಿಯಾದ ಸರಮಾತ್ಮನು ಇಂಥ ಮಹಾತ್ಮನನ್ನು ನೋಡಿ ನಿರತಿಶಯಪ್ರೀತಿಯಿಂದ ಹಸ್ತಲಾಘವವನ್ನು ಕೊಟ್ಟು ಕರೆದೊಯ್ದು ಮುಕ್ತಿಪಟ್ಟವನ್ನು ಕಟ್ಟುವನು. ಹೀಗೆ ಮತಸ್ಥಾಪಕರಾದ ಪಂಚಾಚಾರ್ಯರು ಪ್ರತಿಯೊಬ್ಬ ವೀರಶೈವನಿಗೂ ಈ ನಿರಾಭಾರಿಸ್ಥಲವನ್ನು ಹೊಂದುವ ಅಧಿಕಾರವನ್ನು ಅನುಗ್ರಹಿಸಿರುವಲ್ಲಿ ಒಬ್ಬರೇ ಅಂಥ ನಿರಾಭಾರಿಸ್ಥಲವನ್ನು ಗುತ್ತಿಗೆ ಹಿಡಿದಿರುವನೆಂದು ವಿಜೃಂಭಿಸುತ್ತ ಅಪಕ್ವಮತಿಗಳಾದ ಒಬ್ಬೊಬ್ಬ ಬಾಲಕರನ್ನು ಒಯ್ದು ಬಲಾತ್ಕಾರದಿಂದ ಜುಟ್ಟನ್ನು ಬೋಳಿಸಿ ಸೂತ್ರಗೋತ್ರಗಳನ್ನು ಬಿಡಿಸಿ ಸ್ಥಲಗೂಡಿಸಿದೆವೆಂದೆನೆ ಏನೊಂದೂ ತಿಳಿಯದೆ ಆ ಬಾಲಕನು ನಿರಾಭಾರಿಯಾಗ ಬಲ್ಲನೇ? ಅಂಥವನಿಗೆ ಆಶಾವಾರಗಳು ತೊಲಗಬಲ್ಲವೇ? ವೀರಶೈವಸಿದ್ಧಾಂತವ ತಿರುಳೆನಿಸಿದ ಈ ನಿರಾಭಾರಿಸ್ಥಲವೆಂಬುದು ಕಲಿಕಾಲದ ವೈಚಿತ್ರ್ಯದಿಂದ ಅಂತಸ್ಸಾರ ಶೂನ್ಯವಾದ ಸೋರೆಬುರುಡೆಯಾಗಿ ಪರಿಣಮಿಸಿದೆ. ವೀರಶೈವಸಿದ್ಧಾಂತವೆಂಬ ಕ್ಷೀರಾಬ್ಧಿಯ ಮಥನದಿಂದ ಹುಟ್ಟಿದ ನಿರಾಭಾರಿಯೆಂಬ ದಿವ್ಯಾಮೃತಾಸ್ವಾದವು ಮರುಮರೀಚಿಕೆಯಾಗಿ ತೋರುವಂತಾಗಿದೆ. ಈ ಭ್ರಾಂತಿಯು ಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರಿಂದಲೇ ಪರಿಹಾರವಾಗಬೇಕಾಗಿದೆ.

ಶ್ರೀ ಜಯಚಾಮರಾಜ ಒಡೆಯರವರ "ಮ್ಯೂಟರ್ ಮತ್ತು ಕಂಪ್ಯಾನಿಯನ್" ಆಗಿ ನಿಯಮಿಸಲ್ಪಟ್ಟಿರುವ ಶ್ರೀ ಎಲ್ವಿನವರು ಕಳೆದ 23 ನೆಯ ತಾರೀಖಿನ ದಿವಸ ಉದಕಮಂಡಲದಿಂದ ರಾಜಧಾನಿಗೆ ಆಗಮಿಸಿದರು. ಪಾರ್ಕ್‌ಹೌಸಿನಲ್ಲಿ ಅವರಿಗೆ ಬಿಡಾರವನ್ನು ಕಲ್ಪಿಸಲಾಗಿದೆ.

ಒಳದೇಶದ ವೃತ್ತಾಂತಗಳು.

ಶೃಂಗೇರಿ ಪೀಠಾಧಿಪತಿಗಳಾದ ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳವರು ಕಳೆದ 23ನೆಯ ತಾರೀಖಿನ ದಿವಸ ಚಿಕ್ಕಮಗಳೂರಿಗೆ ಆಗಮಿಸಿದರು. ಅಲ್ಲಿಂದ ಪ್ರಯಾಣ ಬೆಳೆಯಿಸಿ 29ನೆಯ ತಾರೀಖಿನ ದಿವಸ ಬೆಂಗಳೂರಿಗೆ ಆಗಮಿಸುವರೆಂದು ವರ್ತಮಾನವಿದೆ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಮಜ್ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಶಿವಮೊಗ್ಗಾ ಡಿ॥ ಚನ್ನಗಿರಿಗೆ ಅಲ್ಲಿಯ ಭಕ್ತಾದಿಗಳ ಪ್ರಾರ್ಥನೆಯ ಮೇರೆಗೆ ದಯಮಾಡಿಸುವರಾಗಿದ್ದಾರೆ. ಶ್ರೀ ಜಗದ್ಗುರುಗಳವರ ಸ್ವಾಗತಕ್ಕಾಗಿ ಎಲ್ಲ ವಿಧಾಟುಗಳೂ ಭರದಿಂದ ಸಾಗುತ್ತಿವೆ. ಶ್ರೀಗಳವರು ಜುಲೈತಿಂಗಳು 2 ನೆಯ ವಾರದಲ್ಲಿ ಆಗಮಿಸಬಹುದೆಂದು ತಿಳಿದುಬರುತ್ತದೆ.

ಮೈಸೂರು ಪ್ರಜಾಪ್ರತಿನಿಧಿಸಭೆಯ ಕಾಂಗ್ರೆಸ್ ಸದಸ್ಯರಾದ ಮಾ॥ ರಾ॥ ಕೆ. ಟಿ. ಭಾಷ್ಯಂ, ಪಿ. ಸೀತಾರಾಮಯ್ಯ, ಭೂಪಾಲಂ ಚಂದ್ರಶೇಖರಪಿಟ್ಟಿ, ಎಂ. ಭೀವಪ್ಪನಾಯಕ್ ಇವರು ಹಿಂದೂಸ್ಥಾನದಲ್ಲೆಲ್ಲ ಸಂಚರಿಸಿ ನ್ಯಾಯವಿಧಾಯಕಸಭೆಗಳಲ್ಲಿ ಕಾಂಗ್ರೆಸ್‌ಪಕ್ಷನವರು ಯಾವರೀತಿ ಕಾರ್ಯಗಳನ್ನು ಮಾಡುತ್ತಿದ್ದಾರೆಂಬುದನ್ನು ತಿಳಿದುಕೊಂಡು ಬರುವವರಾಗಿದ್ದಾರೆಂದು ಕೇಳುತ್ತೇವೆ.

ಕಳೆದ 16 ನೆಯ ತಾರೀಖಿನ ದಿವಸ ಚಿನ್ನಪಟ್ಟಣದ ವೈಲ್ಡ್‌ಫ್ಲವರ್ ಷೋ ಬಳಿಯಿರುವ ಲಕ್ಷ್ಮೀವಿಲಾಸಮಂದಿರದಲ್ಲಿ ಚಿತ್ರಪ್ರದರ್ಶನದ 2ನೆಯ ಪ್ರದರ್ಶನವು ಪಡೆಯುತ್ತಿದ್ದಾಗ ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿದ್ದ ಆ ಮಂದಿರದ ಕೂನೆಯ ತರಗತಿಯಲ್ಲಿ ಕೇವಲ ಸ್ಥಳದ ನಿಮಿತ್ತ ಒಬ್ಬ ಮುಸ್ಲಿಮನುನಿಗೂ ಮತ್ತು ಹಿಂದುವಿಗೂ ಮಾತು ಬೆಳೆದು ಹೊಡೆದಾಟದಲ್ಲಿ ಪರಿಣಮಿಸಿತೆಂದೂ, ಆದರೆ ಅಷ್ಟಕ್ಕೆ ತೃಪ್ತರಾಗದ ಮುಸ್ಲಿಂಕಡೆಯವರು ಥಿಯೇಟರಿನಿಂದ ಹೊರಗೆ ಹೋಗಿ ಅನೇಕರನ್ನು ಗುಂಪುಕಟ್ಟಿಕೊಂಡು ಬಂದು ಒಳಕ್ಕೆ ನುಗ್ಗಿ ಕೈಗೆ ಶಿಕ್ಕಿದವರನ್ನೆಲ್ಲಾ ವಿಪರೀತ ಹೊಡೆದು ಅವರ ವೈನೋಲಿನ ವಸ್ತ್ರಾಭರಣಗಳನ್ನು ಕಿತ್ತುಕೊಂಡು ಬಹಳ ಘಾಸಿಪಡಿಸಿದರೆಂದೂ, ಕೆಲವರಿಗೆ ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯುತ್ತಿದ್ದಾರೆಂದೂ, ಪೋಲೀಸರಿಗೂ, ದಫೇದಾರರಿಗೂ ತೀವ್ರ ಗಾಯಗಳಾಗಿವೆಯೆಂದೂ, ಬೆಂಗಳೂರಿನಿಂದ ರಿಜರ್ವ್ ಪೋಲೀಸರನ್ನು ಕರೆಸಿಕೊಂಡಮೇಲೆ ಪರಿಸ್ಥಿತಿಯು ಸ್ವಲ್ಪ ತಹಬಂದಿಗೆ ಬಂದಿದೆಯೆಂದು, ಮುಸ್ಲಿಂಮುಖಂಡರಾಗಲಿ, ಹಿಂದೂ ಮುಖಂಡರಾಗಲಿ ಶಾಂತಿಸ್ಥಾಪನೆ ಪ್ರಯತ್ನಕ್ಕೆ ಮುಂದೆ ಬಂದಿಲ್ಲವೆಂದೂ ಚಿನ್ನಪಟ್ಟಣಕ್ಕೆ ಸುತ್ತು ಮುತ್ತಿನ ಹಳ್ಳಿಗಳಿಂದ ಬರುತ್ತಿದ್ದ ಪಾಲು, ಮೊಸರು, ಸೌದೆ ಇತ್ಯಾದಿ ಯಾವುದೂ ಬರುತ್ತಿಲ್ಲವೆಂದೂ ತಿಳಿದು ಬರುತ್ತದೆ.

ವರ್ತಮಾನಸಂಗ್ರಹ.

ಹಂಗಾಮಿ ವೈಸರಾಯರು

ವೈಸರಾಯರಾದ ಲಾರ್ಡ್ ಲೀಲಿಥ್‌ಗೋರವರು ರಜಾ ಪಡೆದು ಕೆಲವು ತಿಂಗಳಕಾಲ ಇಂಗ್ಲೆಂಡಿಗೆ ಹೋಗುವುದರಿಂದ ಅವರ ಪ್ರವಾಸಕಾಲದಲ್ಲಿ ಹಂಗಾಮಿಯಾಗಿ ಗೌರ್ನರ್ ಜನರಲ್ ಪದವಿಯನ್ನು ಬಂಗಾಳಾಗೌರ್ನರಾದ ಲಾರ್ಡ್ ಬ್ರಬೋರ್ನರವರು ಕಳೆದ 23ನೆಯ ತಾರೀಖಿನ ದಿವಸ ಸಾಯಂಕಾಲ ಸಿಮ್ಲಾದಲ್ಲಿ ವಹಿಸಿಕೊಂಡರು.

ಬರ್ಲಿನ್‌ನಗರದ ರಚನೆ

ಜರ್ಮನಿಯು ಪ್ರಪಂಚದಲ್ಲಿ ಅತ್ಯುತ್ಕೃಷ್ಟ ಸಂಸ್ಥಿತಿಯ ತವರುಮನೆಯೆನಿಸಬೇಕೆಂಬ ಬಯಕೆಯಿಂದಲೂ, ಪ್ರಪಂಚದ ಎಲ್ಲ ಕಡೆಯಿಂದಲೂ ವಿಜ್ಞಾನಾರ್ಥವಾಗಿ ಜನರು ಹೆಚ್ಚು ಸಂಖ್ಯೆಯಲ್ಲಿ ಅಲ್ಲಿ ಬಂದು ತಂಗಲು ಅನುಕೂಲಿಸುವಂತೆ ಮಾಡಬೇಕೆಂಬ ಆಶಯದಿಂದಲೂ ಹೆರ್ ಹಿಟ್ಲರನು, ರಾಜಧಾನಿಯಾದ ಬರ್ಲಿನ್‌ನಗರದ ನೂತನ ರಚನಾಕಾರ್ಯವನ್ನಾರಂಭಿಸಿರುತ್ತಾನೆ.

ವಿವಾಹಗಳಮೇಲೆ ಸುಂಕ!

ಮದ್ರಾಸ್ ಸರಕಾರದವರು ವರಮಾನವನ್ನು ಹೆಚ್ಚಿಸುವ ಉದ್ದೇಶದಿಂದ ಪ್ರತಿವರ್ಷ ನಡೆಯುವ ವಿವಾಹಗಳ ಮೇಲೆ ತೆರಿಗೆಯನ್ನು ಹಾಕಲು ಯೋಚನೆ ಮಾಡುತ್ತಿರುವರೆಂದು ತಿಳಿದುಬರತ್ತದೆ.

ಜರ್ಮನ್ ಮೋಟಾರುಗಳಿಗೆ ಹೆಚ್ಚಿನ ಸುಂಕ

ಇಂಗ್ಲೆಂಡಿನಲ್ಲಿ ಜರ್ಮನ್ ಮೋಟಾರುಗಳ ಸಂಖ್ಯೆಯು ಬಹಳ ಹೆಚ್ಚುತ್ತಿರುವುದರಿಂದ ಅವುಗಳ ಮೇಲಿನ ಸುಂಕವನ್ನು ಹೆಚ್ಚಿಸಬೇಕೆಂದು ಸರ್ ಜಾನ್ ಸೈಮನ್‌ರವರು ಪಾರ್ಲಿಮೆಂಟಿನಲ್ಲಿ ಸೂಚನೆಯನ್ನು ಮಂಡಿಸಲಿರುವರು.

ಸಿಲೋನಿನಲ್ಲಿ ಭಾರತೀಯರಸ್ಥಿತಿ

ಸಿಲೋನ್ ಕೈಗಾರಿಕೆ ಕೂಲಿಸಮಿತಿಯವರು ಅಲ್ಲಿಯ ಔದ್ಯೋಗ ನಿವಾರಣೋದ್ದೇಶದಿಂದ ಇನ್ನುಮುಂದೆ ಯಾರನ್ನೂ ಸಿಲೋನಿನಲ್ಲಿ ನೆಲಸಲು ಅವಕಾಶಕೊಡಕೂಡದೆಂದು ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ಈಗ ಅಲ್ಲಿ ವಾಸವಾಗಿರುವ ಭಾರತೀಯರಿಗೆ ವಿಶೇಷ ಭಯವುಂಟಾಗಿದೆ.

ಬಂಗಾಳದ ಹೊಸಮಂತ್ರಿಮಂಡಲ!

ಕಳೆದ 22ನೆಯ ತಾರೀಖಿನ ರಾತ್ರಿ ರಚಿತವಾದ ಹೊಸ ಮಂತ್ರಿಮಂಡಲದ ಪ್ರಧಾನ ಸಚಿವರಾದ ಶ್ರೀ ಫಜಲುಲ್ ಹಕ್ಕರೂ ಮತ್ತು 9 ಜನ ಸಚಿವರೂ 23 ನೆಯ ತಾರೀಖಿನ ದಿನ ಬೆಳಿಗ್ಗೆ ಸರಕಾರಭವನದ ಸಿಂಹಾಸನದ ಕೆಳಗಿಡಿಯಲ್ಲಿ ತಮ್ಮ ಅಧಿಕಾರದ ಪ್ರಮಾಣ ವಚನವನ್ನು ಸ್ವೀಕರಿಸಿದರು ಲಾರ್ಡ್ ಬ್ರಬೋರ್ನ್‌ರವರು ಪ್ರಮಾಣ ವಚನವನ್ನೋದಿದರು.

ಹೊಸಪತ್ರಿಕೆ

ವಾರ್ಧಾಶಿಕ್ಷಣ ಸಮಿತಿಯವರು ಶಿಕ್ಷಣ ಪ್ರಚಾರಾರ್ಥವಾಗಿ ಒಂದು ಹೊಸ ಮಾಸಿಕಪತ್ರಿಕೆಯನ್ನು ಹೊರಡಿಸುವರಂತೆ. ಆ ಪತ್ರಿಕೆಗೆ "ನಯಿತಾಲಿಮ್" ಅಂದರೆ ನವಶಿಕ್ಷಣ ಎಂಬದಾಗಿ ಹೆಸರು. ಈ ಪತ್ರಿಕೆಗೆ ಹಿಂದೀ ಮತ್ತು ಉರ್ದು ಈ ಎರಡು ಸಂಸ್ಕರಣಗಳಿರುತ್ತವೆ. ಹಿಂದೂಸ್ಥಾನದ ಶಿಕ್ಷಣ ಶಾಸ್ತ್ರಿಗಳನೇಕರು ಈ ಪತ್ರಿಕೆಗೆ ಲೇಖನಗಳನ್ನು ಬರೆಯುವರು.

ಸ್ತ್ರೀ ಸೈನ್ಯಾಧಿಪತಿ

ಚೀನಾಸೈನ್ಯದಲ್ಲಿ 600 ಮಂದಿಯನ್ನೊಳಗೊಂಡ ಸ್ತ್ರೀಸೈನ್ಯವಿದೆ. ಇದಕ್ಕೆ ಲಿಯೆಚೇಯ್ ಎಂಬ ಮಹಿಳೆಯು ಸೇನಾಪತಿಯಾಗಿದ್ದಾಳೆ. ಈ ಸಣ್ಣ ದಳವನ್ನು 90 ಸಾವಿರ ಸಿಪಾಯಿಗಳ ಮಹಾಸೈನ್ಯವೊಂದು ಹಿಂಬಾಲಿಸುತ್ತಿದೆ. ಜಪಾನ್ ಸೈನ್ಯಗಳ ಒಂದುಭಾಗವು ಚೀನೀ ಪ್ರದೇಶದಲ್ಲಿರುವ ಇನ್ನೊಂದು ಭಾಗದೊಡನೆ ಯಾವ ವ್ಯವಹಾರವನ್ನೂ ನಡೆಯಿಸದಂತೆ ತಡೆಕಟ್ಟುವುದೇ ಈ ಸೈನ್ಯದ ಮುಖ್ಯೋದ್ದೇಶವಾಗಿದೆ.

ಹೊಸಬಗೆಯ ಹುಳುವನ್ನು ಹುಡುಕುತ್ತಿರುವರು

ಆಸ್ಟ್ರೇಲಿಯದ ವಿಜ್ಞಾನಪಂಡಿತನಾದ ಮಿ॥ ಆರ್. ಜೆ. ಮಂಡಲ್ ಎಂಬವನು ಉಣ್ಣೆಯ ಕೈಗಾರಿಕೆಗೆ ತೊಂದರೆಕೊಡುತ್ತಿರುವ ಒಂದು ಜಾತಿಯ ಗಿಡವನ್ನು ನಾಶಮಾಡಬಲ್ಲ ಒಂದು ಜಾತಿಯ ಹುಳುವಿದೆಯೆಂದು ಆವನ್ನು ಹುಡುಕಿಕೊಂಡು ಹಿಂದೂಸ್ಥಾನಕ್ಕೆ ಬಂದಿರುವನು. 1924 ನೇ ಇಸವಿಯಲ್ಲಿ ಆಸ್ಟ್ರೇಲಿಯಾದೇಶದ ಹುಲ್ಲುಗಾವಲೆಲ್ಲವನ್ನೂ ಆಕ್ರಮಿಸಿ ನಾಶಮಾಡುತ್ತಿದ್ದ ಪಾಪಾಸ್ ಕಳ್ಳಿಯನ್ನು ನಾಶಮಾಡಲು ಇದೇ ಮಿ॥ ಮಂಡಲ್ ರವರು ಪ್ರಪಂಚವನ್ನೆಲ್ಲಾ ಸುತ್ತಿ ಅರ್ಜಂಟೈನದಲ್ಲಿ ಒಂದುಹುಳುವನ್ನು ಪತ್ತೆಮಾಡಿ ತಮ್ಮ ದೇಶಕ್ಕೆ ತೆಗೆದುಕೊಂಡುಹೋದರು. ಹುಳುಗಳು 2 ವರ್ಷಗಳಲ್ಲಿ ಕೋಟಿ ಎಕರೆ ಜಮೀನಿನಲ್ಲಿ ಬೆಳೆದಿದ್ದ ಪಾಪಾಸ್‌ಕಳ್ಳಿಯನ್ನೆಲ್ಲಾ ಧ್ವಂಸಮಾಡಿ ಭೂಮಿಯನ್ನು ಸಾಗುವಳಿಗೆ ಸಿದ್ಧಮಾಡಿದವು. ಅಂಥ ಹುಳುವಿಗಾಗಿ ಅವರು ಈಗ ಅನೇಕ ದೇಶಗಳನ್ನು ಸಂಚರಿಸಿ ಹಿಂದೂದೇಶಕ್ಕೆ ಬಂದಿರುತ್ತಾರೆ. ದೈವಸೃಷ್ಟಿಯಲ್ಲಿ ಎಂತಹ ಪ್ರಾಣಿಗಳವೆಯೋ!

ಗಡಿನಾಡಿನಲ್ಲಿ ಕೊಲೆ

ಕಳೆದ 16ನೆಯ ತಾರೀಖಿನ ದಿವಸ ಮರಾಣಾ ಕಾಲಾಳುಪಡೆಯ ಲೆಫ್ಟಿನೆಂಟ್ ಶ್ರೀ ಪಿ. ಜೆ. ಎ. ಕೆಲ್ಲಿಕ್ ರವರು ಉತ್ತರ ವಜೀರಸ್ತಾನದಲ್ಲಿ ತಮ್ಮ ದಳವನ್ನು ನಡೆಸಿಕೊಂಡು ಹೋಗುತ್ತಿದ್ದಾಗ ದಾರಿಯ ಸಮೀಪದ ಪೊದೆಯೊಂದರ ಹಿಂದೆ ಅಡಗಿದ್ದ ಯಾವನೋ ಶತ್ರುವು ಹಾರಿಸಿದ ಗುಂಡಿಗೆ ಶಿಕ್ಕು ಮೃತರಾದರೆಂದು ತಿಳಿದು ಬರುತ್ತದೆ.

ಅನ್ನಸಂತರ್ಪಣೆ ನಡೆಸಬೇಕೆಂಬುದಕ್ಕಾಗಿ ಉಪವಾಸ

ಒಬ್ಬ ಮಹಾರಾಷ್ಟ್ರ ಬ್ರಾಹ್ಮಣನು ಗ್ವಾಲಿಯರ್ ಮಹಾರಾಜರವರ ದೇವಸ್ಥಾನದಲ್ಲಿ ಪ್ರತಿದಿವಸ 150 ಜನ ಬಡವರಿಗೆ ಅನ್ನಸಂತರ್ಪಣೆ ನಡೆಯುವಂತೆ ಗ್ವಾಲಿಯರ್ ಮಹಾರಾಜರನ್ನು ಕೇಳಿ ಒಡಂಬಡಿಸಬೇಕೆಂಬುದಕ್ಕಾಗಿ ಅಲ್ಲಿ ಉಪವಾಸವನ್ನು ಆರಂಭಿಸಿ ಆಗಲೆ ಎರಡು ವಾರಗಳಾದವು. ಈತನ ಉಪವಾಸವ್ರತದ ವಿಷಯವು ಆಗಲೇ ಅಧಿಕಾರಿಗಳ ಗಮನಕ್ಕೆ ತರಲ್ಪಟ್ಟಿದೆ.

7 ಆನೆ ಸಾಲಕ್ಕೆ ಪ್ರಾಣನಾಶ!

ಸಾತಾರದ ಒಬ್ಬ ಮೋಟರ್ ಡ್ರೈವರನು ಒಬ್ಬ ಚಹಾ ಅಂಗಡಿಯವನಿಗೆ 7 ಆನೆ ಸಾಲಕೊಡಬೇಕಾಗಿತ್ತು. ಅಂಗಡಿಯವನ ಆಳು ಡ್ರೈವರನನ್ನು ಸಾಲಕೇಳಿದನು. ಡ್ರೈವರನು ಸಮಾಧಾನಕರವಾದ ಉತ್ತರಕೊಡದೆ ಆಪ್ತಾಪಿಷ್ಟಾ ಜವಾಬುಕೊಟ್ಟನು. ಇದರಿಂದ ಕೋಪೋದ್ರಿಕ್ತನಾದ ಆಳು ಕೈಲಿದ್ದ ಕುಡುಗೋಲಿನಿಂದ ಡ್ರೈವರನ ಹೊಟ್ಟೆಯನ್ನು ಶೀಳಿದನು. ಡ್ರೈವರ್ ಸತ್ತನು. ಚಹಾ ಅಂಗಡಿಯವನನ್ನೂ ಆಳನ್ನೂ ವಸ್ತಗಿರಿಮಾಡಿರುತ್ತಾರೆ.

ನುಳಿಗರೆಯುವ ಯಂತ್ರ

ರತ್ನದಲ್ಲಿ ನುಳಿಸುರಿಸುವ ಯಂತ್ರವನ್ನು ತಯಾರಿಟರುತ್ತಾರೆ. ಟ್ರಾನ್ಸ್ ಸೈಬೀರಿಯಾ ರೈಲ್ವಾಸ್ತಾದೇರಿದ ಒಂದು ಸ್ಥಳದಲ್ಲಿ ಯಂತ್ರವನ್ನಿಟ್ಟು ಏಲ್ಗಾನದಿಯಿಂದ ನೀರನ್ನು ಮೇಲಕ್ಕೆತ್ತಿ ಪಂಪು ಮತ್ತು ಕೊಳವೆಗಳು ಮೊದಲಾದ ಸಾಧನಗಳಿಂದ ಆ ನೀರನ್ನು ಎಲ್ಲಕಡೆಗೂ ಸುರಿಸುವರಂತೆ! ಒಂದು ಯಂತ್ರವು ಸುಮಾರು 225 ಎಕರೆ ಭೂಮಿಯ ನೀರಿಲೆ ಜಲವರ್ಷಣಮಾಡಬಲ್ಲುದು. ಈ ಯಂತ್ರವನ್ನು ಒಂದು ಕಡೆಯಿಂದ ಮತ್ತೊಂದೆಡೆಗೆ ಸುಲಭವಾಗಿ ಸಾಗಿಸಬಹುದಾಗಿದೆ.

ಸ್ಪಾನಿಷ್‌ದಂಗೆಖೋರರ ಅಕೃತ್ಯಗಳು

ದಂಗೆಕೋರರು ಬ್ರಿಟಿಷ್‌ನೌಕೆಯಾದ 'ಥಾರ್ ಪೆನೆಸ್' ಎಂಬುದರ ಮೇಲೆ ಬಾಂಬನ್ನು ಹಾಕಿ ಅದನ್ನು ಮುಳುಗಿಸಿದರು. ಅದರಲ್ಲಿದ್ದ ಚೀನಾದವನೊಬ್ಬನನ್ನು ಬಿಟ್ಟು ಉಳಿದವರೆಲ್ಲರೂ ಸುರಕ್ಷಿತವಾಗಿ ದಡದನ್ನು ಸೇರಿದರು. 'ಗ್ಲಾಸ್ಗೋನಿಯಾ' ಎಂಬ ಬ್ರಿಟಿಷ್ ನೌಕೆಯ ಮೇಲೂ ಬಾಂಬುಹಾಕಿ ಮುಳಿಗಿಸಿದರೆಂಬ ಸುದ್ದಿಯಿದೆ. ಆಫ್ರಿಕಾ ಮತ್ತು ಕಾಂಟಿನೆಂಟಿನ ನೌಕೆಯಾದ 'ಸುಸಿಯಾನ್' ಎಂಬುದೂ 'ಥಾರ್‌ಪೆನೆಸ್' ಹಡಗಿನೊಡನೆ ಮುಳುಗಿಸಲ್ಪಟ್ಟಿತು. ಅದರಲ್ಲಿದ್ದ ಅಧಿಕಾರಿಗಳನ್ನೂ, ನೌಕಾದಳದವರನ್ನೂ ಸಂರಕ್ಷಿಸಲಾಯಿತು.

ಆಯುರ್ವೇದಕಾಲೇಜಿಗೆ ನಿಧಿ!

ಈಗ ಕಲ್ಕತ್ತೆಯಲ್ಲಿ ಆಯುರ್ವೇದಕಾಲೇಜನ್ನು ಸ್ಥಾಪಿಸುವ ವಿಚಾರವು ನಡೆಯುತ್ತದೆ. ಈ ಕಾಲೇಜಿನಲ್ಲಿ 3 ತರಗತಿಗಳಿದ್ದು ಪ್ರತಿಯೊಬ್ಬ ವಿದ್ಯಾರ್ಥಿಯೂ 3 ಪರೀಕ್ಷೆಗಳಲ್ಲಿ ತೇರ್ಗಡೆಹೊಂದತಕ್ಕದ್ದು. ಶಿಕ್ಷಣದ ಅವಧಿಯು 4 ವರ್ಷವಿರುತ್ತದೆ. ಸಾತ್ಯಭಾಷೆಯಲ್ಲೇ ಶಿಕ್ಷಣಕೊಡಲ್ಪಡುವುದು. ವಿದ್ಯಾರ್ಥಿಗಳು ಕಲ್ಕತ್ತಾ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಯನ್ನು ಸಂಸ್ಕೃತ ತೆಗೆದುಕೊಂಡು ಪಾಸಾಗಿರಬೇಕು. ಈ ಕಾಲೇಜನ್ನು ಸ್ಥಾಪಿಸಲು ಒಂದುಲಕ್ಷರೂಪಾಯಿಗಳ ನಿಧಿಯನ್ನು ಕೂಡಿಸುವರಾಗಿದ್ದಾರೆ.

ಹೈದರಾಬಾದ್ ಸರ್ಕಾರದಲ್ಲಿ ಪ್ರಜೆಗಳ ಬೇಡಿಕೆ

ನಿಜಾಂಸಂಸ್ಥಾನದ ವಿವಿಧ ಪಂಗಡಗಳ ಮುಖಂಡರು ಸಭೆಸೇರಿ ಚರ್ಚಿಸಿ "ಗಷ್ತಿ 53" (ಹೈದರಾಬಾದ್ ಸರ್ಕಾರದ ಅನುಮತಿಯಿಲ್ಲದೆ ಯಾರೂ ಸಭೆಗಳನ್ನು ನಡೆಸಕೂಡದು ಭಾಷಣಗಳನ್ನು ಮಾಡಕೂಡದು ಎಂಬ ಆಜ್ಞೆ) ಯನ್ನು ತೆಗೆಯಹಾಕಬೇಕೆಂಬ ಬಗ್ಗೆ ಎಲ್ಲ ಪ್ರತಿನಿಧಿಗಳ ಸಹಿಗಳನ್ನೊಳಗೊಂಡ ಪ್ರಾರ್ಥನಾ ಪತ್ರವನ್ನು ಮಹಾಪ್ರಧಾನರಲ್ಲಿಗೆ ಕಳುಹಿಸಲಿರುವರೆಂದೂ, ಪೂರ್ಣವಾಗಿ ಇಲ್ಲದಿದ್ದರೂ ಸ್ವಲ್ಪಮಟ್ಟಿಗಾದರೂ ಈ ಪ್ರತಿಬಂಧಕಾಜ್ಞೆಯಲ್ಲಿ ವ್ಯತ್ಯಾಸವನ್ನು ಸರ್ಕಾರದವರೇ ಮಾಡಲಿರುವರೆಂದೂ ತಿಳಿದುಬರುತ್ತದೆ.

ಪೊರೆಬಿಡುವ ಮನುಷ್ಯ!

ಹೆಲವು ಜಾತಿಯ ಪ್ರಾಣಿಗಳು ಕ್ಲುಪ್ತಕಾಲಗಳಲ್ಲಿ ತಮ್ಮ ದೇಹದ ಮೇಲಿನ ಹಳೆಯ ಚರ್ಮವನ್ನು ಕಳೆದು ಹೊಸ ಚರ್ಮವನ್ನು ಹೊಂದುತ್ತವೆ. ಇದಕ್ಕೆ ಪೊರೆ ಬಿಡುವದೆನ್ನುವರು ಆದರೆ ಮನುಷ್ಯನು ಈರೀತಿ ಹಳೆಯ ಚರ್ಮವನ್ನು ಕಳೆದು ಹೊಸ ಚರ್ಮವನ್ನು ಹೊಂದುವುದನ್ನು ಯಾರೂ ಕಂಡಿರಲಿಲ್ಲ. ಈಗ ಇಂಥ ಒಬ್ಬ ಮನುಷ್ಯನು ಇಂಗಲೆಂಡು ಬಂದಿದೆ. ಅವನು ಟೆನ್ನೆಸ್ಸಿ ಚಾಟ್ಟನೂಗದಿರುವ ಒಬ್ಬ ತರುಣ. ಅವನು 10 ವರ್ಷದ ಹುಡುಗನಾಗಿದ್ದಾಗಿನಿಂದ ಪ್ರತಿವರ್ಷ ಆತನ ದೇಹಾದ್ಯಂತವಲ್ಲಿ ಚರ್ಮವು ತಾನಾಗಿ ಸುಲಿದು ಬೀಳುತ್ತಿದೆ. ಹೀಗೆ ಕಳೆದ ಪೊರೆಯು ಬೂದುಬಣ್ಣಕ್ಕಿರುವುದು. ಆದರೆ ಸ್ಥಾನದಲ್ಲಿ ಕಂಡುಬರುವ ನೂತನಚರ್ಮವು ಸೂಕ್ಷ್ಮವಾಗಿಯೂ ಕೆಂಪಗೂ ಮಿಂಚುತ್ತಲೂ ಇದ್ದು ಅಲ್ಪಕಾಲದಲ್ಲೇ ಒರಟಾಗುವುದು. ಈ ವಿಚಿತ್ರಮನುಷ್ಯನನ್ನು ವೈದ್ಯಪರೀಕ್ಷೆಗೆ ಸರಿಮಾಡಿದರು. ಇವನು ಯಾವ ರೋಗದಿಂದಲೂ ನರಳುತ್ತಿಲ್ಲವೆಂದೂ ಪೂರ್ಣಾರೋಗ್ಯದಿಂದಿರುವನೆಂದೂ ತಿಳಿದುಬಂದಿತು.

ಟ್ರಾವಂಕೂರ್ ನ್ಯಾಷನಲ್ ಮತ್ತು ಕ್ವಿಲಾ ಬ್ಯಾಂಕ್ ಮುಚ್ಚಲ್ಪಟ್ಟಿತು

ದಕ್ಷಿಣಭಾರತದ ಅನೇಕ ಮುಖ್ಯಸ್ಥಳಗಳಲ್ಲಿ ತನ್ನ ಶಾಖೆಗಳನ್ನು ಸ್ಥಾಪಿಸಿ ಕೆಲಸಮಾಡುತ್ತಿದ್ದ ಟ್ರಾವೆಂಕೂರ್ ನ್ಯಾಷನಲ್ ಮತ್ತು ಕ್ವಿಲಾನ್ ಬ್ಯಾಂಕ್ ಸಂಸ್ಥೆಯು ಕಳೆದವಾರ ಇದ್ದಕ್ಕಿದ್ದಂತೆ ಕೆಲಸನಿಲ್ಲಿಸಿ ಲಿಕ್ವಿಡೇಷನ್ನಿಗೆ ಹೋಗುವುದೆಂದು ಪ್ರಕಟಿಸಿದ್ದರಿಂದ ಜನರು ಗಾಬರಿಯಾಗಿ ತಮ್ಮ ಹಣವಿಟ್ಟಿರುವ ಲಕ್ಷಾಂತರ ಪ್ರಜೆಗಳು ಭಯಭೀತರಾಗಿದ್ದಾರೆ. ಇವಕ್ಕೆ ಈ ಗತಿಯೊದಗಲು ತಿರುವಾಂಕೂರಿನ ದಿವಾನರೇ ಕಾರಣರೆಂದು ಅವರಮೇಲೆ ಬ್ಯಾಂಕಿನವರು ವೈಸರಾಯರಲ್ಲಿ ದೂರು ತೆಗೆದುಕೊಂಡು ಹೋಗುವುದಾಗಿ ಬ್ಯಾಂಕಿನವರು ಪ್ರಕಟಿಸಿದ್ದಾರೆ. ಈ ಬ್ಯಾಂಕಿನ ಕ್ವಿಲಾಶಾಖೆಗೆ ಒಬ್ಬ ಲಿಕ್ವಿಡೇಟರನ್ನು ಹೆಂಗಾನಿಯಂಗಿ ಅಲ್ಲಿಯ ಡಿಸ್ಟ್ರಿಕ್ಟ್ ಜಡ್ಜರಿಂದ ಶ್ರೀ ಮಹದೇವಪಿಳ್ಳೈಯವರು ನಿಯಮಿಸಲ್ಪಟ್ಟಿದ್ದಾರೆ. ಸದ್ಯಕ್ಕೆ ಬ್ಯಾಂಕಿಗೆ ತನ್ನ ಸಾಲವನ್ನು ತೀರಿಸುವುದು ಸಾಧ್ಯವೇ ಆಥವಾ ಸಾಧ್ಯವಿಲ್ಲವೇ ಎಂಬುದು ಹೇಳುವುದಕ್ಕಾಗುವುದಿಲ್ಲವಾದುದರಿಂದ ಹೀಗೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ವಿಚಾರವಾಗಿ ಬೆಂಗಳೂರು ಟ್ರೇಡ್ಸ್ ಅಸೋಸಿಯೇಷನ್ನಿನವರು ವಿಶೇಷ ಸಭೆಸೇರಿ ಲಿಸಿದೆಂಟರ ಬಳಿ ನಿಯೋಗಗೋಸ್ಕಿಯೊಂದು ಹೋಗಬೇಕೆಂದು ತೀರ್ಮಾನಿಸಿ ಅದರಂತೆ ಶ್ರೀ ಎಲಿಯಟ್ ನಿಲ್ಲರ್, ಶ್ರೀ ಜೆ. ಎಂ. ಚಾರಲ್ಸ್ ಮತ್ತು ಶ್ರೀ ಮೆಕ್ ಇವ್ರ ಇವರು ಮೂವರೂ ರೆಸಿಡೆಂಟರನ್ನು ಕಂಡು 'ಬೆಂಗಳೂರು ಮತ್ತು ದಂಡಿನ ಪ್ರಜೆಗಳು ಈ ಬ್ಯಾಂಕಿನಲ್ಲಿ ಸುಮಾರು 30 ಲಕ್ಷ ರೂಪಾಯಿಗಳನ್ನಿಟ್ಟಿರುವುದರಿಂದ ರಿಜರ್ವ್ ಬ್ಯಾಂಕಿನ ಸಹಾಯದಿಂದ ಈ ಬ್ಯಾಂಕನ್ನು ಉಳಿಸುವಂತೆ ಮಾಡಬೇಕು. ಲಿಕ್ವಿಡೇಷನ್ನಿಗೆ ಬ್ಯಾಂಕನ್ನು ತಾರದಂತೆ ನಮ್ಮೆಲ್ಲರನ್ನೂ ಕಾಪಾಡಬೇಕು ಎಂದು ಬೇಡಿಕೊಂಡರು. ಅನಂತರ ವೈಸರಾಯರಿಗೆ ಕ್ವಿಲಾನ್‌ಬ್ಯಾಂಕನ್ನು ಲಿಕ್ವಿಡೇಷನ್ನಿನಿಂದ ಉಳಿಸಬೇಕೆಂಬರ್ಥದ ತಂತಿಯು ಕಳುಹಿಸಲ್ಪಟ್ಟಿತು.

[೫ನೆಯ ಪುಟದಿಂದ ಮುಂದುವರಿದುದು]

ಆ ಕಲಂಕವು ಪವಿತ್ರವಾದ ಮತಕ್ಕೆ ಖಂಡಿತವಾಗಿ ಬರಲಾರದು.

ವೃತ್ತಪತ್ರಿಕೆಗಳಲ್ಲಿ ನವೀನಸುಧಾರಕರು ಸುರೂಪ ಸುಶಿಕ್ಷಿತರಾದ ವಧೂವರರು ಬೇಕಾಗಿರುವರೆಂದು ಜಾಹೀರ ನೋಟೀಸುಗಳನ್ನು ಕೊಡುತ್ತಿರುವರು. "ವೀರಶೈವರಲ್ಲಿ ಯಾವಜಾತಿಯ ಕನ್ಯೆಯಿದ್ದರೂ ಮಾಡಿಕೊಳ್ಳುತ್ತೇನೆ" ಎಂದು ವೀರಶೈವ ವರನು ಪ್ರಕಟಿಸುತ್ತಾನೆ ಆದರೆ ತಾನಾವಜಾತಿಯವನೆಂಬುದನ್ನು ಮಾತ್ರ ಬರೆಯುವದಿಲ್ಲ. ಆ ಮೇಧಾವಿಗೆ ಜಾತಿಯು ಪರಿಶುದ್ಧವಾಗಿದ್ದರೆ ಅದನ್ನು ಪ್ರಕಟಿಸಿದಾನು. ಇಂಥ ಜಾತಿಯವನು, ನನ್ನ ವಂಶದಲ್ಲಿ ಸಾಂಕರ್ಯವಿಲ್ಲ, ಈಗ ನಾನು ಸುಧಾರಿಸಿದ್ದೇನೆ. ಆ ಜಾತಿಯ ತೊಡಕನ್ನು ಬಿಟ್ಟು ನನ್ನಂತೆ ಅದವರೊಡನೆ ನಾನು ಲಗ್ನವಾಗುವೆನೆಂದು ಬರೆದರೆ ಅದಕ್ಕೆ ಬೆಲೆಯು ದೊರೆಯಬಹುದು? ಇಂಥ ಅನುಮಂಗಲ ಜಾಹೀರಾತುಗಳನ್ನೂ ಸಾಂಕರ್ಯದ ಲಗ್ನಗಳನ್ನೂ ನೋಡಿ "ವೀರಶೈವರಲ್ಲೂ ಜಾತಿಸಾಂಕರ್ಯ" ವಿರುತ್ತದೆಂದು ಪರಮತೀಯರಲ್ಲಿ ಭಾವವಾಗಬಹುದು ಆದ್ದರಿಂದ ವೀರಶೈವ ಮತದೊಳಗಿನ ಜಾತಿಬೇಧಗಳ ಘಸನೆಯನ್ನು ವೈದಿಕ ಪತ್ರಿಕೆಗಳು ಪ್ರಬಲವಾಗಿ ಪ್ರಕಟಿಸುತ್ತಿರಬೇಕಾಗಿದೆ

ವೀರಶೈವಮತದ ಎಸ್ಟೋ ಪರಿವಿದ್ದವಂತೆಯರು ಸಹ ಜಾತಿಸಂಕರದ ನಾವಿಗೆ ಬೀಳತೊಡಗಿದ್ದರು ಪರಮ ವಿಜ್ಞಾನದ ಸಂಗತಿಯಾಗಿದೆ ಪಾಶ್ಚಿಮಾತ್ಯ ಸುಧಾರಣೆಗೆ ನುನಸೋತ ಆರ್ಯಧರ್ಮಕ್ಕೆ ಕಲಂಕವುಂಟಾಯಿತು ಸ್ಮೃತಿಯಹತ್ತಿದ್ದಾರೆ. ಇದರಲ್ಲಿ ಅಂಗ್ಲಭಾಷೆಯಲ್ಲಿ ಉಚ್ಚ ಶಿಕ್ಷಣಪಡೆದವರಂತೂ ವೀರಶೈವಧಾರ್ಮಿಕ ಚಿಹ್ನಗಳಾದ ಲಿಂಗ-ಭಸ್ಮಾದಿಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಿದ್ದಾರೆ ಹೀಗೆ ಧರ್ಮಬಾಹಿರರಾಗಿ ಏರುಗುತ್ತಿರುವ ಈ ಅಭಿನವ ಪಾಶ್ಚಿಮಾತ್ಯರಿಗೆ ಯಾವ ಧರ್ಮಾಯರೆಂದು ಕರೆಯಬೇಕೋ ತಿಳಿಯದಾಗಿದೆ ಇದು ಇಂಗ್ಲೀಷ್ ಭಾಷೆಯ ಶಿಕ್ಷಣದೋಷವೆಂದು ನಸ್ಸ ಅಫಿಪ್ರಾಯವಲ್ಲ, ಯಾವ ಭಾಷೆಯನ್ನೇ ಕಲಿತಿರಲಿ, ಸ್ವಧರ್ಮ-ಶಿಕ್ಷಣವು ಅವಕ್ಕೆ ಜೊಡಾಗಿರಬೇಕು ಆಂಗ್ಲ ಭಾಷೆಯನ್ನೇ ಅವಾರವಾಗಿ ಕಲಿತ ಎನ್ಟ್ಯೋಜನ ವೀರಶೈವರು ಸ್ವಧರ್ಮಾಭಿಮಾನಿಗಳಾಗಿರುವದಕ್ಕೆ ಇವರು ತಪ್ಪಿ ಜ್ಞಾನಸ್ಥಗತಿಯೊದನೆ ಮತಧರ್ಮಶಿಕ್ಷಣವನ್ನು ವಿಕಾಸಗೊಳಿಸಿಕೊಂಡಿದ್ದೇ ಕಾರಣವಾಗಿದೆ. ಆದ್ದರಿಂದ ವೀರಶೈವಧರ್ಮಶಿಕ್ಷಣವೂ ಸರ್ವತ್ರ ಪ್ರಚಾರವಾಗಿ ಜಾತಿಸಾಂಕರ್ಯಾದಿಗಳು ಮುಸಿಪೆತ್ತದಂತಾಗಬೇಕು. ಈಗ ಆ ಶಿಕ್ಷಣಲೋಪವಷ್ಟಯಿಂದಲೇ ಹಂಡಬಂಡವಿವಾಹಗಳು ಸುಗ್ಗಿಯಾಗಿದೆ ಇಂಥ ವಿಸ್ತಾಕುಲಗಳನ್ನು ತಡೆಯುವದು ಈಗ ಸಾಧ್ಯವಿಲ್ಲ ಈ ಲಗ್ನಗಳಿಗೆ ವೀರಶೈವಜನತೆ ಸೀಳಿಗೆಯೇ ಕಾರಣವಾಗಿದೆ. ವಿಶ್ರವಂಶದ ಅಳಿಗಾಲವೆಂದು ಬರುವುದೋ ನಿರೀಕ್ಷಿಸೋಣ

ಪ್ರಶ್ನೋತ್ತರ ರತ್ನಮಾಲಿಕಾ

ಲೇಖಕರು—ಮಲ್ಲಿಕಾರ್ಜುನಾರಾಧ್ಯ, ರಾಜಜಿನ್ನೂರು
ಮಳೆಮರ, ಮುಡೇನೂರು, ಪೋ॥ ತಿಪಟೂರು.

ಪ್ರ—ಮನಸ್ಸಿನ ಬಂಧಕತ್ವಕ್ಕೆ ಕಾರಣವಾವುದು?

ಉ—ತನ್ನ ಜೊಲ್ಲನಲ್ಲಿರುವ ರೇಷ್ಮೆಯೇ ಹುಳುವಿಗೆ ಬಂಧಕವಾಗುವಂತೆ ಅದರ (ಮನಸ್ಸಿನ) ವಾಸನಾ ಸಮೂಹವೇ ಕಾರಣವಾಗುವದು ಆದರೆ ಈ ವಾಸನಾ ಕಲ್ಪನೆಯನ್ನು ತೃಜಿಸಿ ಶರತ್ಕಾಲದ ನೇಘದಂತೆ ನಿರ್ಮಲವಾದರೆ ಕಬ್ಬಿಣದಂಗಡಿಯಲ್ಲಿ ನೊಣಗಳಂತೆ ವಾಸನಾದಿಗಳು ನಿಲ್ಲಲಾರವು ಆಗ ಈ ಮನವು ಗಾಳಿಯಿಲ್ಲದ ದೀಪದಂತೆ ನಿಶ್ಚಂಚಲವಾಗುವದು

ಪ್ರ—ನೀರ್ಜೋತ್ತಮ ಸ್ವರೂಪಗಳಂ ಪರಾಪರನೆಂದು ಪ್ರಸಿದ್ಧನಾಗಿ ದೇವತೆಗಳಿಗೂ ದೇವನಾಗಿರುವ ಆತ್ಮನು ಪ್ರಸನ್ನನಾಗಿ ಅನುಭವೈಕದೃಷ್ಟಿಗೆ ಗೋಚರವಾಗಲೇನಾಗುವದು?

ಉ—ಮೋಹಬೀಜದ ವೃಷ್ಟಿಗಳೆಂತಲೂ, ಆಪತ್ತುಗಳ ವೃಷ್ಟಿಗಳೆಂಬಲೂ, ದುಃಖದ ಸೃಷ್ಟಿಗಳೆಂತಲೂ, ವ್ಯಸನಗಳ ಸಮಷ್ಟಿಗಳೆಂತಲೂ ಪ್ರಖ್ಯಾತವಾದ ದುರ್ದೃಷ್ಟಿಗಳು ಕಾಲಾಗ್ನಿಯಿಂ ಶಲಭದಂತೆ ನಷ್ಟವಾಗುವವು.

ಪ್ರ—ಈ ಪ್ರಪಂಚವು ಭ್ರಾಂತಿಮಾತ್ರವೆಂದು ತಿಳಿಯುವ ಬಗೆ ಎಂತು?

ಉ—ಮೆರುಧೂಮಿಯಲ್ಲಿ ಬಿದ್ದ ಬಿಸಿಲು ಜಲರೂಪದಿಂ ಕಾಣಿಸಿಕೊಂಡು ಜಲವೆಂಬ ಭ್ರಾಂತಿಯನ್ನುಂಟುಮಾಡುವಂತೆ ಸದ್ರೂಪವಾದ ಬ್ರಹ್ಮದ ಪ್ರಕಾಶನೇ ಪ್ರಪಂಚರೂಪದಿಂದ ಕಾಣಿಸಿಕೊಳ್ಳುವದಾದ್ದರಿಂದ ಭ್ರಾಂತಿಮಾತ್ರವಾಗಿರ್ಪುದು.

ಪ್ರ—ಯಾವದು ಬಂದರೂ ಸಾಲದೆ ಇದಾಗಬೇಕು, ಅದಾಗಬೇಕು, ಇದಂ ಮಾಡಿ ಅದಂ ಮಾಡಬೇಕೆಂಬ ತಿರಿಗಳಿಂದುನ್ಮಾದಿಯಾಗಿರುವ ಆಸೆಯೆಂಬ ನದಿಯಂ ಯಾವಾಗ ದಾಟಬಹುದು?

ಉ—ಮನನೆಂಬ ವಿಷವೈಕ್ಷವನ್ನು ವಿಚಾರನೆಂಬ ಗರಗಸದಿಂದ ಕತ್ತರಿಸಿಹಾಕಿದಾಗ ಸಾರಾಂಶ—ಅಧಾರಾಧೇಯದಂತಿರುವ ಇವೆರಡರಲ್ಲೊಂದು ಹೋದರೂ ಎರಡೂ ಹೋಗುವವು. ಒಂದು ನಿಂತರೂ ಎರಡೂ ನಿಲ್ಲುವವು. ಇವುಗಳಿಂದ ಮುಕ್ತತೆಯು ವಸಂತೋದಯದಿಂ ಉದ್ಯಾನದಂತೆ ವಿವೇಕವಿಚಾರದಿಂ ಪೋಷಿಸುವದು ಹೀಗೆ ವಿಚಾರಿಯಾದ ಮನುಷ್ಯನು ಕಮಲವನವಂ ಪೊಕ್ಕ ಭ್ರಮರದಂತೆಯೂ, ಕ್ರೀಡಾಗೃಹಕ್ಕೆ ಬಂದ ಭೋಗರಸಿಕನಂತೆಯೂ, ನಿದ್ರೆಗೈಯಲಿಚ್ಛಿಸಿದವನಿಗೆ ಹಂಸತೂಲಿಕಾತಲ್ಪದಂತೆಯೂ ಸಂತುಷ್ಟನಾಗುವನು.

ಪ್ರ—ಸೋಮಾರಿತನವೆಂದರೇನು?

ಉ—ಅದೊಂದು ದುರ್ವ್ಯಾಧಿಯು. ನೀರು ಹರಿಯದೆ ನಿಂತಿರುವ ಕುಟಿಗೆಯಲ್ಲಿ ಹುಳುಗಳು ಹೆಚ್ಚುವಂತೆ ನಿರುದ್ಯೋಗಿಯಾದಮನಲ್ಲಿ ಕೆಡಕಿನ ಮತ್ತು ನೀಚವಾದ ಆಲೋಚನೆಗಳು ಉದ್ಭವಿಸುವವು ಅವನ ಆತ್ಮವಾದರೋ ಕಲುಷಿತವಾಗುವದಲ್ಲದೆ ಅವನ ಬಾಳು ಜನರಿಂಗಕ್ಕೊಂದು ಸೆಗ್ಗಿಲು ಮುಳ್ಳಿನ ಬಳ್ಳಿಯಂತೆ ನೋವನ್ನುಂಟುಮಾಡುವದು ಮತ್ತು ಇವನು ಕಾಮ ನಿರಹತನಾಗ್ನಿ ಜ್ವರದಿಂ ತಪ್ತನಾದ ಕಾಮಿನಿಗೆ ನಪುಂಸಕನಂತೆ ಧನಲಿಪ್ಸೆಗೆ ತಿರಸ್ಕರಣೀಯನಾಗಿ ದರಿದ್ರಲಿಪ್ಸೆಗೆ ಮಾನ್ಯನಾಗುವನು

ಪ್ರ—ನೇತ್ರದ ಸ್ವರೂಪವೇನು?

ಉ—ಇದು ಜಡದೇಹದಲ್ಲಿರುವ ಪಂಚಜ್ಞಾನೇಂದ್ರಿಯಗಳಲ್ಲಿ ರೂಪ ವಿಷಯಂ ಗ್ರಹಿಸುವ ಮಾಂಸಪಿಂಡದ ಒಂದು ಇಂದ್ರಿಯವಾಗಿರುವುದು. ಇದು ವಾಯುವಿನಂತೆ ಒಂದು ಕಡೆಗೆ ನಿಲ್ಲದೆ ಸ್ಪಷ್ಟಣಕ್ಕೊಂದು ವಸ್ತುವಿನ ಮೇಲೆ ಹೋಗಿ ಅವುಗಳ ಜ್ಞಾನವನ್ನೇ ವನಿತಾದಿ ಭೋಗನೇ ಮುಖ್ಯವೆಂಬ ಒಂಟಿಗಣ್ಣಿನ ಮನವೆಂಬ ಕಾಗೆಯ ಹೃದಯದೊಳಗೆ ತುಂಬಿ ಆತ್ಮವಿಚಾರಕ್ಕೆ ಪ್ರತಿಬಂಧಕಮಾಡುವಂಧದಾಗಿರ್ಪುದು ಅದರೆ ಇದು ಅಂತರ್ಮುಖವಾಗಲು ಬಹುಕಾಲ ವಿರಹಿತಳಾದ ಕಾಮಿನಿಯಿಂದ ವ್ಯಾಜಕಾಂತನಂತೆ ಆತ್ಮನ ದರ್ಶನವಾಗಿ ನಿತ್ಯಾನಂದವನ್ನುಂಟುಮಾಡುವದು. ಈ ಸ್ಥಿತಿಯು ಮನುಷ್ಯನಿಗಳವಡಲು ಮೊದಲು ಮಧುವಿನಂತಿದ್ದ ಭೋಗವಸ್ತುಗಳು ಬೇವಿನ ರಸದಂತೆ ಜುಗುಸ್ಸಿತವಾಗುವವು ಮತ್ತು ನಿರಾಲಂಬ ನಿರ್ವಿಕಲ್ಪಚಿನ್ಮಾತ್ರ ಸ್ವರೂಪನಾದ ಆತ್ಮನು ಈ ನೇತ್ರವೆಂಬ ಗವಾಕ್ಷದಲ್ಲಿ ರುವ ತನ್ನ ಶಕ್ತಿಯಿಂದ ದೃಷ್ಟಿಗಳೆಂಬ ಜೇನುನೊಣಗಳಿಂದ ತರಲ್ಪಟ್ಟ ವನಿತಾದಿ ವಿಷಯಗಳೆಂಬ ಮಧುವನ್ನು ಗ್ರಹಿಸುವನು

ಪ್ರ—ಸಂಕಲ್ಪವೆಂದರೇನು?

ಉ—ದೃಶ್ಯಪದಾರ್ಥಗಳಲ್ಲಿ ಬ್ರಹ್ಮೇತರವೆಂಬ ಭಾವನೆಯುಂಟಾಗುವಿಕೆಯು. ಇದರ ಕಲ್ಪನೆಯೆಂಬ ಮೇಘವಿರುವವರೆಗೆ ಮನೋವಿಲಾಸವೆಂಬ ಮಳೆಯು ಜಡಿಯುತಪ್ಪಲಾರದು. ಮತ್ತು ಸಂಕಲ್ಪರೂಪವಾದ ಮನವೆಲ್ಲಿರುವದೋ ಅಲ್ಲಿ ಸ್ಮಶಾನದಲ್ಲಿ ಕಾಗೆಗಳಂತೆ ಅಕಾರಾದಿ ಗಳೆಲ್ಲವೂ ಸಿದ್ಧವಾಗುವವು ಆದರೆ ರತ್ನದ ಹೊಳಪನ್ನು ನೋಡಿಯೇ ರತ್ನವಂ ತಿಳಿಯಬೇಕಾದ್ದರಿಂದ ಆತ್ಮ ಜ್ಞಾನಕ್ಕೆ ಆತ್ಮನೇ ಮುಖ್ಯಕಾರಣನಾಗಿರುವನು. ಇತರ ಸಹಾಯವೆಷ್ಟಿದ್ದರೂ ತನ್ನ ಸಂಕಟವನ್ನು ಪರಿಹರಿಸಿಕೊಳ್ಳಲಿಕ್ಕೆ ತಾನೇ ನಿಲ್ಲಬೇಕಾದ್ದರಿಂದ, ತ್ವಾಸ ನಿಶ್ವಾಸ ನಿಮೇಷೋನ್ಮೇಷ ಮೊದಲಾದ ಸಮಸ್ತ ವ್ಯಾಪಾರಗಳಲ್ಲೂ ಪರಮಾತ್ಮನ ಮಹಿಮೆಯನ್ನೇ ಪರಿಭಾವಿಸುತ್ತ ಸರ್ವತ್ರ ಚಿದ್ವಸ್ತುವಿನ ಸತ್ತಾಮಾತ್ರವೆಂಬ ಭಾವವಳವಟ್ಟರೆ ಮನವು ಶಾಂತವಾಗಿ ಅಖಂಡಜ್ಞಾನವು ತಾನಾಗಿಯೇ ಸಂಭವಿಸುವದು. ಆಗ ದುಃಖಾತ್ಮಕವಾದ ಸಂಸಾರವೂ ಸಹ ನಿತ್ಯಸುಖಸ್ವರೂಪವಾಗುವದು ಈ ರೀತಿಯಲ್ಲಿ ಪರಮಾತ್ಮನನ್ನು ತಿಳಿದವನು. ಮಹಾಕಾಶವೂ ಹೊಂದಿದ ಘಟಾಕಾಶದಂತೆ ಸರ್ವತ್ರ ವ್ಯಾಪಕನಾಗಿ ಆ ಪರಮಾತ್ಮನಂತೆಯೇ ಪ್ರಕಾಶಿಸುವನು.

ಪ್ರ—ಆತ್ಮನ ಕರ್ತವ್ಯವೇನು?

ಉ—ತ್ರಿಕಾಲಾತೀತನೂ, ಸರ್ವವ್ಯಾಪಿಯೂ, ಚಿನ್ಮಾತ್ರೈಕಸ್ವರೂಪನೂ ಆದ ಆತ್ಮನು ಸಮಸ್ತ ಪ್ರಾಣಿಗಳ ಹೃದಯಕ್ಷೇತ್ರದಲ್ಲಿದ್ದು ಕರ್ಮಸಾಕ್ಷಿಕನಾಗಿ ಎಲ್ಲ ಕರ್ಮಗಳನ್ನೂ ಪ್ರೇರಕಭಾವದಿಂದ ನೆರವೇರಿಸುವನು ರಾಜನು ಪ್ರಜೆಗಳಿಗೆ ಅಧಿಕಾರವನ್ನು ಕೊಡುವಂತೆ ಬೆಂಕಿಗೆ ಉಷ್ಣಭಾವವನ್ನೂ ರಸದ್ರವ್ಯಕ್ಕೆ ರುಚಿಯನ್ನೂ ಇದೇ ಪ್ರಕಾರ ಸಕಲ ದ್ರವ್ಯಗಳಿಗೂ ಅಯಾಯ ಗುಣಗಳನ್ನು ಕೊಡುವನು.. ಮತ್ತು ಪ್ರಜೆಗಳಿಂದ ರಾಜನು ಕಂದಾಯವನ್ನು ತಕ್ಕೊಳ್ಳುವಂತೆ ಇಂದ್ರಿಯಗಳ ಭೋಗವಂ ಸ್ವೀಕರಿಸುವನು ಮತ್ತು ಅತಿದರಿದ್ರನು ಗೃಹಕೃತ್ಯವಂ ನೋಡಿಕೊಂಡಿರುವಂತೆ ದೇಹವ್ಯಾಪಾರಗಳನ್ನು ನೋಡಿಕೊಳ್ಳುತ್ತ ಸಾರ್ವಭೌಮನಂತೆ ಭೋಗಗಳನ್ನನುಭವಿಸುತ್ತ ಸ್ವಪ್ನಾನಾಗಿರುವನು ವಾಯುವಿಗಿಂತಲೂ ಗತಿಶಾಲಿಯಾಗಿ ಸರ್ವಶಕ್ತಿಕಂತಲೂ ಸ್ಥಿರಸ್ವಭಾವದವನಾಗಿ ಆಕಾಶಕ್ಕಿಂತಲೂ ನಿರ್ಲೇಪನಾಗಿ ಚಿಗುರುಗಳನ್ನು ಗಾಳಿಯಂತೆ ಪ್ರಾಣಿಗಳ ಮನವನ್ನು ಅಲ್ಲಾಡಿಸುವನು ರಥದ ಕುದುರೆಗಳನ್ನು ಸಾರಥಿಯಂತೆ ಇಂದ್ರಿಯಗಳನ್ನು ನಡೆಯಿಸುವನು. ವಿಚಾರಮಾರ್ಗದಿಂದ ಸ್ತುತಿಧ್ಯಾನಕ್ಕೆ ಇವನೇ ಯೋಗ್ಯನೆಂದು ಅಚಲಭಾವದಿಂದ ನಂಬಿದವರಿಗೆ ಜನನ-ಮರಣಭಯವನ್ನಿವನೇ ತಪ್ಪಿಸುವನು ಭೋದೋವಾಸನೆಯನ್ನು ಮಾಡುವವರಿಗೆ ದುಃಖವನ್ನು ಕೊಡುವನು. ಹೀಗೆ ದಿನಚರಿ ವ್ಯವಹಾರವನ್ನು ನಡೆಯಿಸುವ ದಿನಮಣಿಯಂತೆ ಸ್ವಲ್ಪವೂ ಭೇದವಿಲ್ಲದೆ ಅವರವರ ಗುಣಕರ್ಮಗಳಿಗನುಗುಣವಾಗಿ ಶುಭಾರುಭ ಫಲಗಳನ್ನು ಕೊಡುತ್ತ ನಿಗ್ರಹಾನುಗ್ರಹಶಕ್ತಿಯುಳ್ಳವನಾಗಿರುವನು ಇವನು ಪುಷ್ಪಗಳಲ್ಲಿ ಪರಿಮಳದಂತೆಯೂ, ಮರದಲ್ಲಿ ಅಗ್ನಿಯಂತೆಯೂ, ರಸವಸ್ತುವಿನಲ್ಲಿ ರುಚಿಯಂತೆಯೂ, ತಿಲದಲ್ಲಿ ತೈಲದಂತೆಯೂ, ಮೆಣಸಿನಲ್ಲಿ ಕಾರದಂತೆಯೂ, ಉಪ್ಪಿನಲ್ಲಿ ಕ್ಷಾರದಂತೆಯೂ, ಸಕ್ಕರೆಯಲ್ಲಿ ಸಿಹಿಯಂತೆಯೂ ದೇಹದಲ್ಲಡಗಿಯೇ ಇದ್ದಾಗ್ಯೂ ಬಹುಕಾಲಕ್ಕೆ ಕಂಡ ಬಂಧುವಿನಂತೆ ವಿಚಾರದಿಂದ ಗೋಚರನಾಗಿ ಆಕ್ಷಣನೇ ಸಂತೋಷವನ್ನುಂಟುಮಾಡುವನು ವಾಚಕರೇ! ನೇತ್ರವಿಲ್ಲದೇಯಿದ್ದಲ್ಲಿ ಅಂಗನೆಯ ಸೌಂದರ್ಯಾದಿಗುಣವು ವ್ಯರ್ಥವಾಗುವಂತೆ ಆತ್ಮನನ್ನು ಪಡೆಯದಿದ್ದಲ್ಲಿ ಧನ, ಕ್ಷೇತ್ರ, ಗೃಹ, ವನಿತಾದಿ ಸಮಸ್ತ ಸಂಪದವು ವ್ಯರ್ಥವು ಮತ್ತು ಆತ್ಮನಿಂದನು ಗ್ರಹಿಸಲ್ಪಡದ ವಸ್ತುವು ಗೋಚರವಾದಾಗ್ಯೂ ಕನ್ನಡಿಯಲ್ಲಿ ಪ್ರತಿಬಿಂಬಿಸಿದ ಕಾಮಿನಿಯ ರೂಪದಂತೆ ಸಾಧಕವಾಗುವದಿಲ್ಲವು. ಮತ್ತು "ಕುಂಡಲಿಯಕಂಡಾಪಮಿಂಡೆಯರಿಗೊಲಿವನೆ" ಎಂಬಂತೆ ಆತ್ಮನ ದರ್ಶನವನ್ನು ಪಡೆದವರು ಪುನಃ ಭೋಗ್ಯವಸ್ತುಗಳಲ್ಲಿ ಮೊದಲಿನೆಯದಾದ ರಕ್ತ-ಮಾಂಸ-ಮೂಳೆ ಗಳಿಂದ ಕೂಡಿದ ಚರ್ಮದ ಬೊಂಬೆ (ಸ್ತ್ರೀ) ಮೊದಲಾದ ಭೋಗ್ಯವಸ್ತುಗಳಲ್ಲಿ ಮನವಿಡನು.

ಪ್ರ—ಆಸೆಗೆ ಮೂಲವಾದ ವಾಸನೆಯೆಂಬ ತೃಣರಾಶಿಗೆ ಕಾಡುಗಿಚ್ಚು ಯಾವುದು?

ಉ—ಕತ್ಯಜ್ಞಾನವು ಖಡ್ಗದ ಹರಿತದಂತೆ ತೀಕ್ಷ್ಣವಾದ ಚಿತ್ತದ ವೃತ್ತಿಗೆ ಸಿಕ್ಕದೆ ಬಹುಕಾಲಕ್ಕೆ ಹೃದಯದೊಳಂಕುರಿಸಿದ ಬುದ್ಧಿಯೆಂಬ ಬಳ್ಳಿಯಂ ವಿವೇಕ ಜಲದಿಂದ ಬೆಳೆಸುತ್ತ ಬಂದು ಜ್ಞಾನಿಗಳ ವಾಕ್ಯದಂತೆ ನಡೆದರೆ (ಶಕ್ತ್ಯಜ್ಞಾನಿಯಾದರೆ) ಮೇಘಧ್ವನಿಯಿಂದ ನವಿಲಿನಂತೆ ಪರಮಾನಂದವಾಗುವದು. ಮತ್ತು ಈ ವಾಸನೆಗೆ ಆಧಾರಾಧೇಯದಂತಿರುವ ವಿಶ್ರಾಂತಿ ಗಂಧವು ಲೇಶಮಾತ್ರವೂ ಇಲ್ಲದೆ ಅಖಂಡಯಂಕರವಾಗಿ ತಾನೇ ತಾನಾಗಿ ಮೆರೆಯುವ ಮನವೆಂಬ ಮದ್ದಾನೆಯನ್ನು ತೀಕ್ಷ್ಣವಾದ ಪ್ರಜ್ಞೆಯೆಂಬ ನಖಪಂಕ್ತಿಯಿಂ ಶೀಳುವವನು ರಾಜಸಿಂಹನೆನಿಸುವನು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರಣಿಮಂಡಪದಲ್ಲಿರುವ ಪತ್ರಿಯೊಂದು ಗುರುವರ್ಗದ ಮತಕ್ಕೆ ಸೇರಿದವರು. ಶಿಷ್ಯರ ಮನೆಗಳಿರುತ್ತಿದ್ದು, ಆ ಮತಾಧಿಕಾರಿಗಳು ಹದಿನಲ್ಕರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯುಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಪುರವಣಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಪೋಗಿದೆ. ಇದನ್ನು ತಪ್ಪಿಸುವಾಹುದಕ್ಕೋಸ್ಕರ ನೇಲ್ಕಂಡ ಪ್ರಸ್ತಕವನ್ನು ಹೊಸ ರೀತಿಯಾಗಿ ಮುದ್ರಿಸಲಾಗಿರುತ್ತದೆ. ಇದರಲ್ಲಿ ಬರಬೇಕಾದ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯನಲ್ಲಿ ಕ್ರಮಪ್ರಕಾರ ಗುರುವರ್ಗದವರೂ ತರಿಸಿಕೊಂಡು ಆದರಲ್ಲಿರುವಂತೆ ವಿವರವನ್ನೆಲ್ಲಾ ಬರೆಪು- ವಂಶಪಾರಂಪರ್ಯವಾಗಿ ಬರುವ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಯಾವುದೂ ಕೆಪಸಂಭ ಕಾಗದಗಳನ್ನು ಪಯೋಗಿಸಿರುವಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಡಿಂಗನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ಕನುದಲ್ಲಿ ದೊರೆಯುವವು.

ಔಷಧಿ ಹೆಸರು	ಕೋಲ	ಮತ್ತು
ಸ್ವರ್ಣಸುಂಕರಧ್ವಜ	೧	೫೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೩ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂದೂರ	೧	೪—೦—೦
ತಾಲಸಿಂದೂರ	೧	೪—೦—೦
ತಿಲಸಿಂದೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೬—೦
ವಂಗಭಸ್ಮ	೧	೨—೮—೦
ನಾಗಭಸ್ಮ	೧	೦—೮—೦
ಮಿತ್ರಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಸತ್ಯಭಸ್ಮ	೧	೨—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೬—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೨
ಪ್ರವಾಲಭಸ್ಮ	೧	೦—೮—೦
ಕಪ್ಪಿಜಿಪ್ಪಿಭಸ್ಮ	೧	೦—೮—೦
ಸಾರಂಗದ ಕೊಡಿಸ ಭಸ್ಮ	೧	೦—೮—೦
ಗೋದಂತಿಹರಕಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಲಾಜಿತ ಸೂರ್ಯವುಟ	೧	೧—೦—೦
ಲಾಜಿತ ಅಗ್ನಿವುಟ	೧	೦—೮—೦

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲಾದಿ ಔಷಧಿಗಳು ಸರ್ವಕೋಗಗಳಿಗೆ ದೊರೆಯುವುವು.

ನಿಳಾಸ—ಮ್ಯಾನೇಜರು.

ಆಯುರ್ವೇದರಸಾಯನಶಾಲಾ,

ಪೋನ್ ಒಮಿಮರ, ಜಿಲ್ಲಾ ಗಢವಾಲ್ ಯು. ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಸವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರ ನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ವಿದ್ಯುಕ್ತವಾಗಿ ಸೇರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೫೨ ಆಣೆ.** ವಿ ಪಿ. ಚಾರ್ಜ ಸ್ವಯ್ಕೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗನುವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸಂಜ್ಞೆಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರವಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಪಂಟಾಘೋಷವಾಗಿ ಹೇಳಬಹುದಾಗಿದೆ. ಸಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಾಡು ಹೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರವಾಗಿ ಭವ್ಯವಾದ ಬಾನಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ನುದ್ದಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮೀಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅಪ್ಪ ತಲೀಟೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಆಗಸ್ತ್ಯ, ವಧೀಚಿ, ವ್ಯಾಸ, ಸಾನಂವ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ .... ೦—೧—೬

ಸದ್ಯ: ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದೆಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾನವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ .. ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೨೦×೮ ಬೆಲೆ ೧ಕ್ಕೆ .. ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಳಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .. ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮನುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ... ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .... .. ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ .. ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ನೋಪುರದ ಫೋಟೋ .... ೦—೦—೯

ಶ್ರೀ ಜಗದ್ಗುರು ಕೇದಾರನುಷ್ಠಾನ ಧರ್ಮಪೀಠದ ಸುಂದರ ಫೋಟೋ .... ೦—೦—೯

ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೯

ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ .... ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೆ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಶ್ರಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಸರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಶ್ರೇಷಧವಾಗಿ ಉಪಯೋಗಿಸುತ್ತಾರೆ. ಮಾವರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ.

ನಿಮ್ಮ ಆಜ್ಞೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[10] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೨ ಆಣೆ

ಗೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ

ಮರುಲಸಿದ್ಧೇಶ್ವರಸ್ತೋತ್ರ .... ೧ ಆಣೆ

ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ

ಪಂಚವಿಂಶತಿ ಪ್ರಶ್ನೆಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ

ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .... ೧ ಆಣೆ

ಬಸವಾದಿಪ್ರಿಜತತ್ತ್ವಸಮರ್ಪಣ (೪ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯಶತಕ(೨ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ .... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯಶತಕ .... ೨ ಆಣೆ

ವೀರಶೈವಮತಮಿಮಾಂಸಾ .... ೩ ಆಣೆ

ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ

ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಿರೀಕರಣ (೩ನೆಯ ಆವೃತ್ತಿ) .... ೬ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) .... ೬ ಆಣೆ

ವೀರಶೈವಮಹಾತ್ಮರು .... ೪ ಆಣೆ

ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) .... ೪ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ೪ ಆಣೆ

Speeches by Pandit Shri Kashinatha Shastri (*English*) 12 As.

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) .... ೧೨ ಆಣೆ

ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ಪುಟ) .... ೪ ರೂ

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ.

ವೀರಶೈವಸಿದ್ಧಾಂತಸುಧಾಕರ .... ೨ ರೂ.

ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .... ೧ ರೂ.

ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ರೇಣುಕವಿಜಯ ಮಹಾಪುರಾಣ (ಕನ್ನಡ ಛಾಮಿನೀಷಟ್ಪದಿ) .... ೧ ರೂ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) .... ೧೨ ಆಣೆ

ಶಿವಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ

ವೀರಶೈವರಜ (ಮರಾಠಿ) ... ... ೧ ರೂ.

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ.

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ–ಸಂಸ್ಕೃತ) ... ೧ ರೂ.

ವೀರಶೈವೇತಿಹಾಸ (ಸಂಸ್ಕೃತ) ... ... ೧ ರೂ.

ನಂದಿಕೇಶ್ವರಕಾರಿಕಾ (ಸಂಸ್ಕೃತ) ... ... ೨ ಆಣೆ.

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ... ... ೨ ಆಣೆ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಂಯುಕ್ತಪ್ರೆಸ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನ ಮಹಾವಿದ್ವಾನ್ ನೇದಿ ಶಿರಸಿ ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಕಜಾತಜನಿತರ ಪಂಚಾಸ್ಯಸೀರಾದಿಸರ್ । ಪಂಚಕ್ಲೇಶವಿನಾಶಕರ ಪರತರಶ್ರೀಪಂಚಲಿಂಗೋದ್ಭವರ ।
ಪಂಚಾಚಾರನಿಯಾಮಕರ ಸಲಿಲಸ್ಪಂಚಾಕ್ಷರೀಬೋಧಕರ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು

ಒಬ್ಬರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧೫ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ. ಸೋಮವಾರ ತಾ॥ ೪ನೇ ಜುಲೈ ೧೯೩೮ [ಸಂಚಿಕೆ ೯

ಶ್ರೀಮದ್ರಂಭಾಪುರೀ ಜಗದ್ಗುರುಗಳ ಸನ್ನುಖದಲ್ಲಿ ಮಲನಾಡು ವೀರಶೈವ ಸಮ್ಮೇಳನ ಹಾಸ್ಟಲ್ ಸ್ಥಾಪನೆಯ ಬಗ್ಗೆ ಶ್ರೀಜಗದ್ಗುರುಗಳವರ ಉದಾರ ದಾನ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ವಿಶ್ವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಸನ್ನುಖದಲ್ಲಿ ತಾ॥ ೨೨ ೬ ೩೮ ನೇ ಬುಧವಾರ ತೀರ್ಥಹಳ್ಳಿ ಎಂಬ ನಗರ ದಲ್ಲಾದ ವೀರಶೈವರಲ್ಲಿ ಶ್ರೀಮದ್ರಂಭಾಪುರೀ ಸೀರೆಕ್ಕೆ ಪರಂಪರಾಗತ ಆಜ್ಞಾನವರ್ತಿಗಳಾದ ಪಿ ಸಿ ಶಾಖೆ ಮರವಾಡೆ ಮಳಲಿ ಶ್ರೀಗುರು ನಾರಾಜ್ಯನಶಿರಾಚಾರ್ಯ ಸ್ವಾಮಿಗಳವರ ಮುಖಾಂತರ್ವದಲ್ಲಿ ಸವರಿ ಮೇಲಿ ಮುರಕ್ಕೆ ೀರಿದ ಹೊಚ್ಚಪಕಟ್ಟೆಯಲ್ಲಿರುವ 'ಶ್ರೀಜಗದ್ಗುರು ವಿಶ್ವಾನಂದಾಶ್ರಮ' ದಲ್ಲಿ ಸಭೆ ೨೦೦ ಸಮಾಜೋನ್ನತಿಯ ವಿಚಾರಗಳನ್ನು ಕುರಿತು ಅನೇಕಾನೇಕ ವಿಷಯಗಳನ್ನು ಚರ್ಚಿಯಿಸಿದರು

ಈ ಸಮ್ಮೇಳನಕ್ಕೆ ಸ್ಥಾನಿಕ ಪರಮತಕ್ಷೇತ್ರಾದಿಯಾಗಿ ಅನೇಕಜನರು ಸ್ಥಳಪರಸ್ಥಳಗಳಿಂದ ಬಂದಿದ್ದರು

ಶ್ರೀಜಗದ್ಗುರುಗಳವರು ಸಿಂಹಾಸನಾರೂಢರಾದನಂತರ ಸಭೆಯ ಕಾರ್ಯಕಲಾಪಗಳ ಪ್ರಾರಂಭವಾಯಿತು ಪ್ರಥಮವಲ್ಲಿ ನಗರ ಮತ್ತು ತೀರ್ಥಹಳ್ಳಿ ತಾಲೂಕಿನ ವೀರಶೈವರಿಗೆ ಕೇಂದ್ರಸ್ಥಳವಾದ ಹುಚ್ಚದಕಟ್ಟೆಯಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸುವ ಆವಶ್ಯಕತೆಯನ್ನು ಸಭೆಯ ಪರವಾಗಿ ಶಿವಮೊಗ್ಗ ಶ್ರೀ॥ ರ್ಯ ಪುಟ್ಟವೀರಯ್ಯನವರು ಸವಿಸ್ತಾರವಾಗಿ ವಿವರಿಸಿದರು ಶ್ರೀಜಗದ್ಗುರುಗಳವರು ಇಲ್ಲಿಯ ಜನರಲ್ಲಿ ಧಾರ್ಮಿಕಕಾರ್ಯಗಳಲ್ಲಿರುವ ಆಸಕ್ತಿಯನ್ನೂ, ಸಧಾರಣೆಯಲ್ಲಿ ಜಾಗೃತರಾಗುವ ಬಯಕೆಯನ್ನೂ ಕಂಡು ಧರ್ಮಸ್ವರೂಪ ಸಾಂಸಿಕರಕ್ಕೆ ಸುಧಾರಣೆಯಲ್ಲಿ ಅನುರಿಸಬೇಕಾದ ರೀತಿನೀತಿಗಳನ್ನು ಕುರಿತು ಸಮಯೋಚಿತ ಭಾಷಣವನ್ನು ಅಪ್ಪಣೆಕೊಡಿಸಿದ್ದಲ್ಲದೆ ವಿದ್ಯಾರ್ಥಿಗಳಿಗೆ ಅಶನ, ವಸನಗಳು ಸಾರೋದ್ಧಾರವಾಗಿ ನಡೆಯಲು ಸದರಿ ಗ್ರಾಮದ ಸಮಾಸಪದಲ್ಲಿ ಶ್ರೀಗುರುವರಿಗೆ ಸೇರಿರುವ ಸುಮಾರು ೨೦ ರೂ ಕಂದಾಯ ವಿದ್ದ ವರ್ಷಾವದಿ ನಿವ್ವಳ ಸೂರಾರುರೂಪಾಯಿಗಳ ಮೇಲ್ಪಟ್ಟು ಉತ್ಪತ್ತಿಯಿರುವ ತರೀ ಜಮೀನನ್ನೂ, ಸುಮಾರು ಆಸ್ತೀ ಉತ್ಪತ್ತಿಯಿರುವ ಬಾಗಾಯಿತು ಜಮೀನನ್ನೂ ಸಹ ಆಶೀರ್ವದಿಸಿದ್ದಲ್ಲದೆ ಪೂಸಾ ರಾಜಾನುಸರ್ತಿಗಳಾದ ನಳಿಲ ಮುರವ ಶ್ರೀಗುರು ನಾರಾಜ್ಯನಶಿವ ಚಾರ್ಯಸ್ವಾಮಿಗಳವರಿಗೆ ಸದರಿ ವರಕ್ಷೆಗೆ ಸೇರಿರುವ ಹುಚ್ಚದಕಟ್ಟೆಯಲ್ಲಿರುವ ಸುಮಾರು ೧೫ ಸಾವಿರ ರೂಪಾಯಿ ಬೆಲೆಬಾಳುವ "ಶ್ರೀಜಗದ್ಗುರು ಶಿವಾನಂದಾಶ್ರಮ" ವೆಂಬ ಬಾರಿ ಕಟ್ಟಡವನ್ನೂ ಹಾಗು ಇದೇ ಗ್ರಾಮದಲ್ಲಿರುವ ಸುಮಾರು ರೂ 45 ಗಳ ಕಂದಾಯವಿದ್ದು ನರ್ಷಾವಧಿ ನೂರಾರು ರೂಪಾಯಿ ಮೇಲ್ಪಟ್ಟು ನಿವ್ವಳ ಸನೆಯಿರತಕ್ಕ ತರೀಜಮೀನಿನ ಉತ್ಪತ್ತಿಯನ್ನೂ ಸಹ ವಿದ್ಯಾರ್ಥಿಗಳ ಉಪಯೋಗಕ್ಕೆ ಬಿಟ್ಟುಕೊಡಬೇಕಾಗಿ ಅಪ್ಪಣೆಕೊಡಿಸಿದ್ದಕ್ಕೆ ಮಳಲಿ ಮುರವ ಶ್ರೀಗಳವರು ಬಿಟ್ಟುಕೊಟ್ಟರು

ಅನಂತರ ಜಿಲ್ಲಿ ನೆರದಿದ್ದ ಮಹನೀಯರುಗಳು ಇದಕ್ಕಾಗಿ ಒಂದು ನಿಧಿಯನ್ನು ಸಂಗ್ರಹಿಸಲು ಸಲಹೆಗಳನ್ನು ಹೊಂದಿ ತತ್ಕಾಲಕ್ಕೆ ಸುಮಾರು ರೂ 400 ಗಳ ವಾಗ್ದಾನವನ್ನು ಸ್ವಮತಪರಮತಸ್ಥರಾದಿಯಾಗಿ ಮಾಡಿರುತ್ತಿರಲ್ಲವ ತತ್ಸಂಬಂಧವಾದ ಪ್ರಚಾರಕಾರ್ಯಗಳನ್ನು ಮುಂದುವರಿಸಲು ಶ್ರೀಜಗದ್ಗುರು ಪಂಚಾಚಾರ್ಯ ಕೃಪಾಪೋಷಿತ ಮಲನಾಡು ವೀರಶೈವಸಂಘ' ವೆಂಬ ಸಂಸ್ಥೆಯನ್ನು ಸ್ಥಾಪಿಸಿ ಆ ಒಗ್ಗೆ ಕಲಜ್ ಮಹನೀಯರುಗಳನ್ನೊಳಗೊಂಡ ಕಾರ್ಯಕಾರಿ ಮಂಡಳಿಯನ್ನು ನಿಯಮಿಸಲಾಯಿತ

ಸ್ವತಕ್ಷರ್ಪಿ

ಕೊಟ್ಟೂರು ಕಾಂಗ್ರೆಸ್ಸಿನ ಅಪಜಯ! ಕಳ್ಳಶಾಸ್ತ್ರಿಗಳ ಪೊಳ್ಳಭಾಷಣದ ದುಷ್ಪರಿಣಾಮ'

ಕೊಟ್ಟೂರು ಕಾಂಗ್ರೆಸ್ಸು ಕಳೆದ ತಿಂಗಳಲ್ಲಿ ನಡೆದ ಜಿಲ್ಲಾಬೋರ್ಡ್ ಚುನಾವಣೆಯಲ್ಲಿ ತನ್ನ ಉಮೇದುವಾರನಿಗೆ ಜಯವನ್ನು ದೊರಕಿಸಿತೆಂಬ ಹೆಮ್ಮೆಯಿಂದ ಇದೇ ತಿಂಗಳಲ್ಲಿ ನಡೆವ ಕೊಟ್ಟೂರು ಪಂಚಾಯತಿ ಬೋರ್ಡಿಗೆ 11 ಜಾಗ ಗಳಿಗೆ 10 ಜನ ಹುರಿಯಾಳುಗಳನ್ನು ತಯಾರುಮಾಡಿಕೊಂಡು ರಂಗಸ್ಥಳಕ್ಕೆ ಬಂದಿತು ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ಸಿನವರು ಕಳ್ಳಶಾಸ್ತ್ರಿಗಳನ್ನು ಕರೆಯಿಸಿ ಅನೇಕ ಕಡೆಗೆ ಭಾಷಣ ಮಾಡಿಸಿದರು ಶಾಸ್ತ್ರಿಗಳು ತಮ್ಮ ಭಾಷಣದಲ್ಲಿ ಸ್ವತಂತ್ರಪಕ್ಷದವರಿಗೆ ಅನೇಕರೀತಿಯಿಂದ ಅನೇಕವಿಧಮಾಗಿ ಅಪಮಾನದ ಮಾತುಗಳನ್ನಾಡಿದರು ಹೆಣ್ಣುಮಕ್ಕಳಿಗೆ ನಿಮ್ಮ ಗಂಡರು ಕಾಂಗ್ರೆಸ್ಸಿಗೆ ಓಟು ಕೊಡದಿದ್ದರೆ ಅವರಿಗೆ ಮನೆಯಲ್ಲಿ ಊಟ, ತಿಂಡಿ ಕೊಡದಂತೆ ನಿರ್ಬಂಧಿಸಿರಿಯೆಂದು ಬೋಧಿಸಿದರು ಪುನಃ ಪಂಚಾಯಿತಿ ಬೋರ್ಡು ಚುನಾವಣೆಯಲ್ಲಿ ಬಂದಾಗ ಕೂಡ ಇದೇ ರೀತಿ ಅಮಂಗಲಭಾಷಣ ಮಾಡಿದರು ಆವರ ಜನರು ಅಲ್ಲಲ್ಲಿ ಗುಂಪು ಕಲೆತು ಕಾಂಗ್ರೆಸ್ಸಿನ ತತ್ವವು ಸತ್ಯ, ಅಹಿಂಸೆ, ಪಾದಿಪ್ರಚಾರ ಹೀಗಿದ್ದು, ಈ ಶಾಸ್ತ್ರಿಗಳು ಈ ತತ್ವವನ್ನೇ ಬಿಟ್ಟು ಬಿಡುವರಲ್ಲಾ' ಎಂದು ಮಾತಾಡಲಿಕ್ಕೆ ಸುರುಮಾಡಿದರು ಈ ಕಳ್ಳಶಾಸ್ತ್ರಿಗಳ ಅಭಿಪ್ರಾಯವನ್ನು ಧ್ವಂಸಮಾಡಲು ಶಿರೋಳದಿಂದ ಕೊಳ್ಳಶಾಸ್ತ್ರಿಗಳನ್ನು ಸ್ವತಂತ್ರಪಕ್ಷದವರು ಕರೆಯಿಸಿದರು ೨ಶೋಜ ಶಾಸ್ತ್ರಿಗಳು 5 6 ದಿವಸ ತಮ್ಮಬುದ್ಧಿಪ್ರೌಢಿಮೆಯಿಂದ ಕಳ್ಳಶಾಸ್ತ್ರಿಗಳು ಮಾಡಿದ ಅಪಪ್ರಚಾರವನ್ನು ಖಂಡಿಸಿ ಭಾಷಣಮಾಡಿದರು ಮಾನವ ಧರ್ಮ, ಭಾರತಮಹಿಳೆಯರ ಧರ್ಮ ಇವುಗಳ ಮೇಲೆ ತಮೋಘ ಭಾಷಣಗಳಾದವು. ತಾ॥ 27 6 38 ನೇ ದಿನ ಪಂಚಾಯತಿ ಬೋರ್ಡು ನೋಲಿಂಗ್ ಸ್ಟೇಷನ್ನಿಗೆ ಸ್ವತಂತ್ರಪಕ್ಷದ ಹುರಿಯಾಳುಗಳ ಒಟ್ಟಿಗೆ ಜನರು ತಂಡತಂಡವಾಗಿ ಬರಲಾರಂಭಿಸಿದರು ಕಳ್ಳಶಾಸ್ತ್ರಿಗಳು ಇದನ್ನು ನೋಡಿ 9 ಘಂಟೆಗೆ ಬಸ್ಸಿನಲ್ಲಿ ತಮ್ಮ ಭಾಷಣದ ಸೀನನ್ನು ತೆಗೆದುಕೊಂಡು ಪಲಾಯನಸೂತ್ರವನ್ನು ಪರಿಸಿದರು ತಾ॥ 29 6 38 ರಲ್ಲಿ ಬ್ಯಾಲೆಟ್ ಪೇಪರು ಎಣಿಕೆಯು ನಡೆಯಿತು 11 ಜಾಗೆಗಳಲ್ಲಿ 10 ಜಾಗೆಗಳಿಗೆ ಸ್ವತಂತ್ರಪಕ್ಷದವರಿಗೆ ಅಸಂಖ್ಯಾತ ಬಹುಮತದಿಂದ ಆರಿಸಿಬಂದರು ಒಂದು ಜಾಗವಲ್ಲಿ ಮಾತ್ರ ಕಾಂಗ್ರೆಸ್ ಉಮೇದುವಾರನು 3 ಓಟಿನಿಂದ ಹೆಚ್ಚಾಗಿ ಆರಿಸಿಬಂದನು ಇದಲ್ಲಾ ಕಳ್ಳಶಾಸ್ತ್ರಿಗಳು ಮಾಡಿದ ಭಾಷಣದ ದುಷ್ಪರಿಣಾಮವೆಂದೂ, ಕಾಂಗ್ರೆಸ್ಸಿಗೆ ಬಂದ ಹೆಚ್ಚಿನ ಪ್ರತಿಫಲವಂದೂ ಜನರಿಗೆ ಘಂಟಾಘೋಷವಾಗಿ ತಿಳಿದುಹೋಯಿತು ಈ ಗ್ರಾಮದ ಓಟರುಗಳು ಕಳ್ಳಶಾಸ್ತ್ರಿಗಳು ಚಾಕಿಕೊಟ್ಟ ಮಂತ್ರವನ್ನು ಅವರಮೇಲೆಯೆ ಪ್ರತಿವಿಗಿಸಿಬಿಟ್ಟರೆ ಲೋಕಮತ ಪತ್ರಿಕೆಯು ಕೊಟ್ಟೂರಿನಿಂದ ತನ್ನ ಸುದ್ದಿಗಾರನು ಏನು ಸುದ್ದಿ ತಿಳಿಸಿದರೂ ಕಣ್ಣು ಮುಚ್ಚಿಕೊಂಡು ಪತ್ರಿಕೆಯಲ್ಲಿ ಪ್ರಕಟಿಸಬಾರದು ನಿಜವಾದ ಅಂಶವನ್ನು ತಿಳಿದು ಮುಂದಾದರೂ ಪ್ರಕಟಿಸಲಿ ಮತ್ತು ತನ್ನ ಕೊಟ್ಟೂರಿನ ಸುದ್ದಿಗಾರನಿಗೆ ಮುಂದೆ ನಿಜವಲ್ಲದ ವಿಷಯವನ್ನು ಬರೆಯದಂತೆ ಎಚ್ಚರಿಕ ಕೊಡಲಿ ತಾ॥ 28 6-38 ರಲ್ಲಿ ಪ್ರಕಟಿಸಿದ್ದು ನೋಡಿದರೆ ಕೇವಲ ಉಪನಾಸದ ವಿಷಯವೇ ಸರಿ

ಓರ್ವ ಯಥಾರ್ಥವಾದಿ

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಂಘ

70, ಚಿಕ್ಕಪೇಟೆ, ಬೆಂಗಳೂರು ಸಿಟಿ

ಮೇಲ್ಕಂಡ ಫಂಡಿನಿಂದ 1938 39 ನೇ ಸಾಲಿಗೆ ವೇತನವನ್ನು ಪಡೆಯಲಪೇಕ್ಷಿಸುವ ಮೈಸೂರು ವೇಶದ ವೀರಶೈವ ವಿದ್ಯಾರ್ಥಿಗಳು ನಿಯಮಿತವಾದ ದರಖಾಸ್ತು ಫಾರಂಗಳಲ್ಲಿ ಇದೇ 1938 ನೇ ಇಸವಿ ಜುಲೈ ತಾರೀಖು 31 ರ ಒಳಗಾಗಿ ಸೆಕ್ರೆಟರಿಯವರಿಗೆ ತಲುಪುವಂತೆ ಅರ್ಜಿಗಳನ್ನು ಹಾಕಿಕೊಳ್ಳತಕ್ಕದ್ದು

ನಿಯಮಿತವಾದ ಫಾರಂಗಳಲ್ಲಿ ಅರ್ಜಿಗಳನ್ನು ಕಳುಹಿಸದೆಹೋದರೂ,ಅರ್ಜಿಗಳೊಂದಿಗೆ ಅಸಲ್(Original) ಸರ್ಟಿಫಿಕೇಟುಗಳನ್ನು ರವಾನಿಸದೆ ಹೋದರೂ ಅಥವಾ ಅವದಿ ವಿಾರಿ ಕಳುಹಿಸಿದರೂ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು

ದರಖಾಸ್ತು ಫಾರಂಗಳನ್ನು ಖುದ್ದಾಗಿಯಾಗಲಿ ಅಥವಾ ಸೆಕ್ರೆಟರಿಯವರ ಖುದ್ದು ವಿಳಾಸಕ್ಕೆ ಅರ್ಥಾಣೆ ಸ್ಟಾಂಪನ್ನು ರವಾನಿಸುವುದರ ಮೂಲಕವಾಗಿಯಾಗಲಿ ಪಡೆಯಬಹುದು

ತಾ॥ 27 6 38 ಸರಾಫ್ ಬಿ ಬಸಪ್ಪ,
ಆಕ್ಟಿಂಗ್ ಸೆಕ್ರೆಟರಿ.

ಶ್ರೀವಿಶ್ವಾರಾಧ್ಯೋ ವಿಜಯತೆ.

ಪುನರ್ಜನ್ಮ.

ಲೇಖಕರು—ಶ್ರೀಗುರುದೇವಪಿವಾಚಾರ್ಯರು, ಚಿಕ್ಕಮಣ್ಣೂರು
ಹಿರೇಮಠ, ಶ್ರೀವಿಶ್ವಾರಾಧ್ಯಾಶ್ರಮ, ಬೆಳವಡಿ.

ಜಗತ್ತಿನಲ್ಲಿರತಕ್ಕ ಪ್ರತಿಯೊಬ್ಬ ಮಾನವನೂ ಸತೀ ಸುತ ಸಂಪದಾದಿ ಸುಖವನ್ನು ಆಪೇಕ್ಷಿಸುತ್ತಾನೆ. ಎಲ್ಲ ರೀತಿಯಿಂದ ಸುಖಿಯಾಗಬೇಕಾದರೆ ಪೂರ್ವಜನ್ಮದಲ್ಲಿ ಸುಕರ್ಮವನ್ನು ಮಾಡಿರಬೇಕು. ಈ ವಿಷಯದಲ್ಲಿ ಕೆಲವರು ಮನುಷ್ಯನಿಗೆ ಪುನರ್ಜನ್ಮವಿಲ್ಲನೆಂದೂ, ಸದ್ಯಃ ಅನುಭವಿಸತಕ್ಕ ಸುಖವೇ ಸ್ವರ್ಗ, ದುಃಖವೇ ನರಕ ವೆಂದೂ ತಿಳಿದು ಸ್ವೇಚ್ಛಾಚಾರಿಗಳಾಗಿ ಸತ್ಕರ್ಮನಿರತ ರನ್ನು ನೋಡಿ ಇವರು ನಮ್ಮವರೆಂದು ತಿಳಿದು ಅವ ರೊಡನೆ ವಿನೋದಿಸುತ್ತ ಪಾಪದ ರಾಶಿಯನ್ನು ಬೆನ್ನಿಗೆ ಬಿಗಿದುಕೊಂಡು ಯಮಪುರಕ್ಕೆ ಪ್ರಯಾಣಮಾಡುವರು. ಇವರ ಅಭಿಪ್ರಾಯದಂತೆ ಒಂದೇ ಜನ್ಮದಲ್ಲಿ ಸರ್ವವೂ ಆಗಬೇಕಾದರೆ ಈ ಮನುಷ್ಯವರ್ಗದಲ್ಲಿ ಕುರುಡರು, ಕುಂಟರು, ಮೂಕರು, ಶ್ರೀಮಂತರು, ದರಿದ್ರರು ಎಂಬ ಅನೇಕಾನೇಕ ಭೇದಗಳು ನಮ್ಮ ಅನುಭವಪಥಕ್ಕೆ ಬರುತ್ತಿದ್ದಿಲ್ಲ. ಈ ವಿಷಯದಲ್ಲಿ " ಸುಮಹತ್ಸ್ವಲಮೈಷ ಮ್ಯಂ ಕರ್ಮಣಾಮಿಹ ದೃಶ್ಯತೆ | ವಹಂತಿ ಶಿಬಿಕಾಂ ಕೇಚಿದಾರೋಹಂತ್ಯಪರೇ ಸುಖಂ " ॥ ಈಪ್ರಕಾರ ವಾಗಿ ಉದ್ಘಟನೆಂಬ ಕವಿಯು ಕೆಲವರು ಸುಖವಾಗಿ ಪಲ್ಲಕ್ಕಿಯಲ್ಲಿ ಹತ್ತಬೇಕಾದರೆ ಕೆಲವರು ಹೊರಬೇಕಾ ದರೆ ಅವರವರ ಪ್ರಾಕ್ತನಕರ್ಮಫಲಭೋದನೆ ಕಾರಣ ವೆಂದು ಹೇಳಿದ್ದಾನೆ " ಸೇವಾಭಿರ್ನಕ್ಷಯತಿ ಮಹಿ ತಾಂ ಕರ್ಮಣೋ ದುರ್ವಿಪಾಕಃ " | ಈ ವಾಕ್ಯದಿಂದ ಲೂ, " ವ್ಯಾಯಾಃ ವ್ಯಾಕ್ತನಮೇವ ಕರ್ಮ ಬಲವತ್ ಕಸ್ಯೈಷ್ಯಂಕಮಿಂತ ಕಾ " ಎಂಬ ಶ್ರೀಬಸವಕಂಡಿತನ ವಾಕ್ಯದಿಂದಲೂ ಪೂರ್ವಜನ್ಮದಲ್ಲಿ ಮಾಡಿದ ಸುಕರ್ಮ ಕುಕರ್ಮಗಳನ್ನು ಅನುಸರಿಸಿ ಈ ಜನ್ಮದಲ್ಲಿ ನಾವು ಸುಖವನ್ನಾಗಲಿ, ದುಃಖವನ್ನಾಗಲಿ ಹೊಂದುತ್ತೇವೆ. ವಿಹಿತಕರ್ಮಯಾದರೂ " ಕರ್ಮ ಕಃ ಸ್ವಕೃತಂ ನ ಭುಂಕ್ತೇ " ಎಂದು ಸಾರಿದ್ದಾನೆ

ನ್ಯಾಯಾಧೀಶನು ಆಪರಾಧಿಗೆ ಶಿಕ್ಷೆಯನ್ನು ವಿಧಿಸ ತಕ್ಕ ಸಮಯದಲ್ಲಿ ಇವನು ಎ ಕ್ಲಾಸಿನ ಜೈಲಿನಲ್ಲಿರ ತಕ್ಕವನೆಂದೂ, ಅಥವಾ ಬಿ ಕ್ಲಾಸಿನ ಜೈಲಿನಲ್ಲಿರತ ಕ್ಕವನೆಂದೂ ಮತ್ತು ಇವನು ಇಂಥ ಆಹಾರದೊಡನೆ ಈ ಕಾರ್ಯವನ್ನು ಮಾಡತಕ್ಕವನಂದೂ ಇಷ್ಟು ದಿವಸ ಗಳ ಪರ್ಯಂತ ಜೈಲಿನಲ್ಲಿ ವಾಸಮಾಡತಕ್ಕದ್ದೆಂದೂ ವಿಧಿಸುತ್ತಾನೆ ಅದೇ ಪ್ರಕಾರವಾಗಿ ಸರ್ವತಂತ್ರಸ್ವತಂ ತ್ರನಾದ ಪರಮಾತ್ಮನೆಂಬ ನ್ಯಾಯಾಧೀಶನು ವಿಷಯ ಲಂಪಟನಾಗಿ ಪಾಪಿಯಾದವನ ಕರ್ಮವನ್ನು ಪರಿಶೀಲಿ ಸಿ ಇವನು ಇಷ್ಟೇ ದಿವಸಗಳ ಪರ್ಯಂತ ಜೀವಿತನಾ ಗಿರಬೇಕೆಂದೂ ಇಂಥ ಆಹಾರವನ್ನು ಸೇವಿಸುತ್ತ ಇದೇ ಕರ್ಮವನ್ನು ಮಾಡಬೇಕೆಂದೂ ನಿರ್ಧರಿಸಿ ಅಸಹ್ಯ ವಾದ ಸಂಸಾರನೆಂಬೀ ಬಂದೀಖಾನೆಗೆ ಕಳುಹಿಸುತ್ತಾ ನೆ ಒಕ್ಕಲಿಗನು ತಾನು ಹೊಲದಲ್ಲಿ ಬಿತ್ತಿದ್ದನ್ನೇ ಅರು ತಿಂಗಳ ಮೇಲೆ ಬೆಳೆದುಣ್ಣುವಂತೆ ಮಾನವನು ಪೂರ್ವಜನ್ಮದಲ್ಲಿ ತಾನು ಮಾಡಿದ ಕರ್ಮದ ಫಲವನ್ನೇ ಈಗ ಅನುಭವಿಸುವನು ಈ ಸಂಸಾರನೆಂಬ ಮಹಾ ಯಾತ್ರೆಯಲ್ಲಿ ಅನೇಕರು, ಪತಿಸುತರಿಂದ ಸುಖವಾಗಿ ಕಾಲಕಳೆಯುತ್ತಿದ್ದರೂ ಸಂಪತ್ತಿಲ್ಲದೆ ಬಳಲುತ್ತಿರುವರು ಕೆಲವರು ಸಂಪತ್ಸಾಲಿಗಳಾಗಿದ್ದರೂ ಮಕ್ಕಳಿಲ್ಲದೆ ಮರುಗುತ್ತಿರುವರು. ಕೆಲವರು ಪತಿಸುತಸಂಪದಾದಿಗ ಳಿಂದ ಕೂಡಿದವರಾದಾಗ್ಯೂ ಶಾರೀರಕಸುಖವಿಲ್ಲದೆ ಹಗಲಿರುಳೂ ನರಳುತ್ತಿರುವರು ಇವೆಲ್ಲವನ್ನೂ ವಿಚಾ ರಮಾಡಿನೋಡಿದರೆ ಕರ್ಮಫಲವು ಅನಿವಾರ್ಯವಾದು ದೆಂದು ಸಿದ್ಧವಾಗುತ್ತದೆ ಈ ವಿಷಯದಲ್ಲಿ ಸದ್ಯಃ ನಡೆದ ಘಟನೆಯೊಂದನ್ನು ವಾಚಕರ ನೇತ್ರಪಥದಲ್ಲಿಡುವೆನು.

(ಪುಷ್ಯಮಾಸದಲ್ಲಿ ಕಲ್ಯಾಣವೆಂಬ ಹಿಂದಿ ಮಾಸ ಪತ್ರಿಕೆಯಲ್ಲಿ ಪ್ರಕಟವಾದುದು). ಕಳೆದ ಆಗಷ್ಟ ತಿಂ ಗಳು ೧೧ ನೇ ತಾರೀಖು ರವಿವಾರ ದಿವಸ ಉದಯ ೫॥ ಘಂಟೆಯ ಸಮಯದಲ್ಲಿ ಕಲಕತ್ತಾ ಪಟ್ಟಣದಲ್ಲಿ ೧೮ ವರ್ಷದ ಒಬ್ಬ ಹುಡುಗನು ಕ್ಷಯರೋಗದಿಂದ ಮೃತ ನಾದನು. ಇವನು ಸಾಯುವುದಕ್ಕಿಂತ ಪೂರ್ವದಲ್ಲಿ ಇವನ ತಂದೆತಾಯಿಗಳು ಇವನ ರೋಗನಿವಾರಣೆಗಾಗಿ ಒಬ್ಬ ಸಾಧುವಿನ ಕಡೆಯಿಂದ ಔಷಧಕೊಡಿಸುತ್ತಿದ್ದರು. ಆದರೆ ಆ ಸಾಧುವಿನ ಔಷಧದಿಂದ ಗುಣಬರಲಿಲ್ಲವೆಂ ದು ಸಂದೇಹವುಳ್ಳವರಾಗಿ ಇಮ್ಮು ಕೆಲವು ಉತ್ತಮ ವೈದ್ಯರಿಂದಲೂ ಚಿಕಿತ್ಸೆಮಾಡಿಸುತ್ತಾ ಆ ಹುಡುಗನ ವಿಷಯದಲ್ಲಿ ಬಹುಪ್ರಯತ್ನವುಳ್ಳವರಾಗಿದ್ದರು. ಅವಧು ಸಾಯುವುದಕ್ಕಿಂತ ಪೂರ್ವರಾತ್ರಿಯಲ್ಲಿ ಅಂದರೆ ಶನಿವಾರ ರಾತ್ರಿ ೧॥ ಘಂಟೆಯ ಸಮಯದಲ್ಲಿ ಆ ಹುಡುಗನು ಸ್ಮೃತಿಯಿಲ್ಲದೆ ಹಾಸಿಗೆಯಲ್ಲಿ ಮಲಗಿದ್ದ ನು. ಉಪಚಾರಕ್ಕಾಗಿ ಅವನ ತಾಯಿ ಮತ್ತು ಚಿಕ್ಕಮ್ಮ ಇವರಿಬ್ಬರೂ ಆರ್ಧರಾತ್ರಿ ಕಣ್ದೆರೆದು ಕುಳಿತಿದ್ದರು. ಅವನ ಅಂತಿಮಾವಸ್ಥೆಯನ್ನು ಅವನ ಚಿಕ್ಕಮ್ಮನು ನೋಡಿ ತನ್ನ ಸಹೋದರಿಯನ್ನು ಕುರಿತು ಆ ಸಾಧು ವಿನಿಂದಲೇ ನಮ್ಮ ಹುಡುಗನ ರೋಗವು ನಿವಾರಣೆ ಯಾಗುವದೆಂದು ಬಹು ವಿಶ್ವಾಸವುಳ್ಳವರಾಗಿದ್ದೆವು. ಆದರೆ ಸಾಧುವಿನಿಂದ ನಮಗೆ ಯಾವ ಲಾಭವೂ ದೊರೆಯಲಿಲ್ಲ. ಈ ಹುಡುಗನು ಬದುಕಲಾರನು ಎಂದು ನುಡಿಯುವಷ್ಟರಲ್ಲಿಯೇ ಕೋಣೆಯಲ್ಲಿ ಧೂಪದಂತೆ ಗಮಗಮಿಸುವ ಸುಗಂಧವು ಎದ್ದಿತು. ಆ ನೇಲೆ ತಾಯಿ ಮತ್ತು ಚಿಕ್ಕಮ್ಮ ಇವರಿಬ್ಬರೂ ಇದು ಧೂಪದ ಹೊಗೆ ಅಥವಾ ಪುಷ್ಪಗಂಧವಿರಬಹುದೆಂದು ತಿಳಿದು ಆಶ್ಚರ್ಯಯುತರಾಗಿ ಕೋಣೆಯ ನಾಲ್ಕು ಕಡೆಗೂ ಹುಡುಕಹತ್ತಿದರು. ಇತ್ತರಲ್ಲಿ ಸ್ಮೃತಿಯಿಲ್ಲದೆ ಮಲ ಗಿದ್ದ ಹುಡುಗನು ಹಾಸಿಗೆಯಲ್ಲಿ ಚಟ್ಟನೇ ಎದ್ದು ಕುಳಿ ತು ಅವ್ವಾ ಸಾಧುಗಳು ನಮ್ಮ ಮನೆಗೆ ಬಂದಿದ್ದಾರೆ ನೋಡು ಮನೆಯಲ್ಲಿ ಎನಾದರೂ ಅಪವಿತ್ರವಸ್ತುಗಳಿ ಆದ್ದರೆ ಹೊರಗೆ ಚಲ್ಲು. ಎಲ್ಲಕಡೆಗೂ ಗಂಗಾಜಲವ ನ್ನು ಸಿಂಪಡಿಸು ನನ್ನನ್ನು ಯಾರೂ ಮುಟ್ಟಬೇಡಿರಿ. ಎಂದು ನುಡಿದನು ಕೆಲವು ಹೊತ್ತಿನ ನೇಲೆ ತನ್ನ ಚಿಕ್ಕಮ್ಮನನ್ನು ಕುರಿತು ತಾಯೀ, ಪೂಜ್ಯನಾದ ಸಾಧು ಗಿ ನಿಷ್ಕಾರಣವಾಗಿ ದೋಷವನ್ನು ಕೊಡಬೇಡ ನಾನು ಪೂರ್ವಜನ್ಮದಲ್ಲಿ ಯಾವನಾಗಿದ್ದೆನೆಂಬುದು ನಿನಗೆ ತಿಳಿಯದು. ಈ ಹೊತ್ತು ನಾನು ಇಂಥ ದುರ್ದ ಶೆಯನ್ನು ಯಾಕೆ ಹೊಂದಿದ್ದೇನೆ! ಇದರಲ್ಲಿ ಆ ಮಹಾ ತ್ಮನ ದೋಷವನೇನಿದೆ? ನೀನು ಆ ಪೂಜ್ಯನ ವಿಷಯ ದಲ್ಲಿ ಭಕ್ತಿವಿಶ್ವಾಸವುಳ್ಳವಳಾಗು ನಾನು ಪೂರ್ವಜನ್ಮ ದಲ್ಲಿ ಮಾಡಿದ ದುಷ್ಕರ್ಮವನ್ನು ವಿಚಾರಮಾಡಿ ನೋ ಡಿದರೆ ಇದಕ್ಕಿಂತಲೂ ಸಾವಿರಪಟ್ಟು ಹೆಚ್ಚಾಗಿ ಯಾತ ನೆಯನ್ನು ಹೊಂದಬೇಕಾಗಿತ್ತು. ಆದರೆ ಈ ಪೂಜ್ಯನ ದರ್ಶನದಿಂದ ನನಗೆ ಎಷ್ಟೂ ಕಷ್ಟವಿಲ್ಲವೆ ಪೂರ್ವ ಜನ್ಮದಲ್ಲಿ ನಾನು ರೇಲ್ವೆ ಕಂಪನಿಯಲ್ಲಿ ಕೆಲಸಮಾಡು ತ್ತಿದ್ದೆನು ಆ ಸಮಯದಲ್ಲಿ ನಾನು ಒಬ್ಬ ಮನುಷ್ಯ ನನ್ನು ತುಂಡುತುಂಡಾಗಿ ಕತ್ತರಿಸಿದೆನು. ಅನೇಕ ರೀತಿ ಯಿಂದ ದುಃಖಕೊಟ್ಟು ಅವನ ಪ್ರಾಣಹರಣಮಾಡಿ ದೆನು ಇದೆಲ್ಲ ಆಗಿ ೫೦ ವರ್ಷಗಳು ಕಳೆದವು ಆ ಸಮಯದಲ್ಲಿ ಸುಕರಿಯಾಸ್ಟ್ (ಎಂಬ ಒನಿಯಲ್ಲಿ) " ತಾಣ ಸಾರ್ಜಂಟ್ " ಎಂಬ ಸಬ್ ಇನ್ಸ್ಪೆಕ್ಟರ ನಿದ್ದನು. ಅವನು ಒಂದು ಕಣ್ಣಿನಿಂದ ಕುರುಡನಿದ್ದನು ಮತ್ತು ಎಷ್ಟೋ ದಿನಗಳು ಗತಿಸಿದ ಮೇಲೆ ಅವನು ನನ್ನನ್ನು ಹುಡುಕಿ ದಸ್ತಗಿರಿ ಮಾಡಿದನು. ಆ ಕಾಲದಲ್ಲಿ ನನಗೆ ಘೋರ ಶಿಕ್ಷೆಯಾಗಬೇಕಾಗಿತ್ತು. ಯಾವದೋ ಒಂದು ಕಾರಣದಿಂದ ಅದು ತಪ್ಪಿ ಕೆಲವು ದಿವಸಗಳ ಪರ್ಯಂತ ಕಠಿನಶಿಕ್ಷೆಯಾಯಿತು. ಮತ್ತು ನಾನು ಮಾಡಿದ ಕರ್ಮದ ಫಲವನ್ನು ಆ ಜನ್ಮದಲ್ಲಿ ಪೂರಾ ಹೊಂದದೇ ಇದ್ದುದರಿಂದ ಈಗ ನಾನು ಇಂಥ ದುರ್ದಶೆಯಿಂದ ಆ ಫಲವನ್ನು ಭೋಗಿಸಬೇಕಾಗಿದೆ. ಪುನಃ ಆ ಹುಡುಗನು ತನ್ನ ತಾಯಿಯನ್ನು ಕುರಿತು ಈ ರೀತಿಯಾಗಿ ಹೇಳಿದನು. ಅವ್ವಾ ಈ ಸಂಸಾರ ಯಾತ್ರೆಯಲ್ಲಿ ನನ್ನ ಸಮಯವು ಮುಗಿಯಿತು. ಇನ್ನು ಮೇಲೆ ನಾನು ಹೋಗುತ್ತೇನೆ. ಸಮಿಾಪದ ಕೋಣೆ ಯಲ್ಲಿ ಮಲಗಿದ್ದ ತನ್ನ ತಂದೆಯನ್ನು ತೋರಿಸಿ, ಈ ತನು ಪೂರ್ವಜನ್ಮದಲ್ಲಿ ನನಗೆ ಮಗನಾಗಿದ್ದನು. ಈ ತಪ್ಪು ಆ ಜನ್ಮದಲ್ಲಿ ನನಗೆ ವಿಶೇಷವಾಗಿ ಕಷ್ಟಕೊಡು ತ್ತಿದ್ದನು. ಆದ್ದರಿಂದಲೇ ಆ ಜನ್ಮದ ಸೇಡು ತೀರಿಸಿ ಕೊಳ್ಳುವುದಕ್ಕಾಗಿ ನಾನು ಈಗ ಈತನಿಗೆ ಮಗ ನಾಗಿ ಇಪ್ಪನಿದ್ದೇನೆ. ಆ ಮನುಷ್ಯನಿಗಾದರೂ ನನ್ನ ಮಗನು ಈರೀತಿ ಮಹಾರೋಗಿಯಾಗಿ ನನಗೆ ಎಷ್ಟು ಕಷ್ಟಕೊಡುತ್ತಲಿದ್ದಾನೆ. ಎಂಬ ವಿಷಯವು ಈಗ ತಿಳಿ ದಿದೆ. ಆದ್ದರಿಂದ ಕರ್ಮದ ಫಲವನ್ನು ಸರ್ವರೂ ಭೋಗಿಸಬೇಕಾಗಿದೆ. ಅದನ್ನು ವಿಾರಲು ಯಾರಿಂದಲೂ ಸಾಧ್ಯವಿಲ್ಲ.

ಆಸ್ತಿಕಶಿರಾಮಣಿಗಳೇ! ಈ ನವಯುಗದಲ್ಲಿ ಕೆಲ ವರು ಗುರುದೇವತೆಗಳನ್ನು ಕಂಡರೆ ಭೂತಗ್ರಸ್ತರಂತೆ ಕುಚೇಷ್ಟೆಗಳನ್ನು ಮಾಡುವರು. ವೃದ್ಧಮಾತಾಪಿತೃ ಗಳನ್ನು ನೋಡಿ ಇವು ಹಳೇ ತಲೆಯೆಂದು ಹಾಸ್ಯಮಾ ಡುವರು. ಪತಿಗಳಲ್ಲಿದ್ದ ಸತಿಯರ ಭಕ್ತಿಯಂತೂ ಬೆಂದು ಬೆಂಡಾಗಿಹೋಗಿದೆ. ಆದರಂತೆಯೇ ಸತಿಯರಲ್ಲಿದ್ದ ಪತಿಗಳ ಶ್ರದ್ಧೆಯಂತೂ ದೂರಸರಿದಿದೆ. ಇತರ ನೀತಿ ಕ್ರಿಯಾಚಾರಗಳ ಬೆಳಕೇ ಇಲ್ಲದಾಗಿದೆ. ಎಲ್ಲಿನೋಡಿ ದರೂ ಇದರಲ್ಲೇನಿದೆ? ಅದರಲ್ಲೇನಿದೆ? ಎಂದು ಮನ ಬಂದಂತೆ ವರ್ತಿಸುವ ನರರ ಬರುಗಾಳಿಯೇ ಬೀಸ ಹತ್ತಿದೆ. ಇಂಥ ಅಜ್ಞಾನವೆಂಬ ಕಾರ್ಗತ್ತಲೆಯಲ್ಲಿ ಕುಳಿತು ತಲೆದೂಗುತ್ತಿರುವ ಮಾನವರ ಉದ್ಧಾರಕ್ಕಾಗಿ ದಯಾಮಯನಾದ ಜಗದೀಶನು ಮೇಲೆ ಹೇಳಿದ ಇಂಥ ಅನೇಕಾನೇಕ ಅಗಾಧಲೀಲೆಗಳನ್ನು ತೋರಿಸು ತ್ತಾನೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಶ್ರೀ ಜಗದ್ಗುರುಗಳ ಅಂದೋಲಿಕಾ ಮಹೋತ್ಸವ ಹಿರೇಹಡಗಲಿ

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧೇಶ್ವರಶಿವಾಚಾರ್ಯಮಹಾಸ್ವಾಮಿ ಗಳವರ ಮಹೋತ್ಸವವು ಹಿರೇಹಡಗಲಿ ಗ್ರಾಮದಲ್ಲಿ ಕೌಟಿ ಪಾಲಪ್ಪ ಇವರು ತಾರೀಖು 24-6-38 ದಿವಸ ಬಿನ್ನವಿಸಿದ ಪ್ರಕಾರ ಕೌಲೂರು ತೋಟಯ್ಯನವರ ಮಂದಿರದಿಂದ ಅನೇಕ ವಾದ್ಯವೈಭವಗಳಿಂದಲೂ ಭಜ ನಾಸಂಘದವರ ಇಂಪಾದ ಗಾಯನದಿಂದಲೂ, ಪರಾ ಕುಗಳಿಂದಲೂ, ಪಂಚಕಲಶಯುಕ್ತ ನೆಕಲ ಬಿರುದಾವಳಿ ಸಹಿತ ಅಂದೋಲಿಕಾಮಹೋತ್ಸವದಿಂದ ಪುರವೀಧಿಗಳಲ್ಲಿ ಹಾಯ್ದು ಮಧ್ಯಾಹ್ನ ೧ ಗಂಟೆಗೆ ಮಂದಿರಕ್ಕೆ ಆಗಮಿ ಸಲು ದಂಪತಿಗಳು ಭಕ್ತಿಯಿಂದ ಶ್ರೀ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನಪೂರ್ವಕ ಮಹಾಪಾದಪೂಜೆಯನ್ನು ಮಾಡಿ ಗಣತಿಂತಿಣಿಗೆ ಭೂರಿಅನ್ನಸಂತರ್ಪಣೆಯನ್ನು ಸಾಯಂಕಾಲದವರೆಗೂ ನಡೆಯಿಸಲಾಯಿತು.

ತರುವಾಯ ಮೈಸೂರು ಅಸ್ಥಾನ ಪಂಡಿತರಾದ ವೇ॥ ಶಂಕರರಾಸ್ತ್ರಿಗಳು ಜಿಗಳೇರಿ ವೇ॥ ಮರುಳಸಿದ್ಧ ಶಾಸ್ತ್ರಿಗಳೂ ಗುರುಸೇವೆ ಮಾನವಧರ್ಮ ಎಂಬ ವಿಷ ಯಗಳನ್ನೊಳಗೊಂಡ ಭಾಷಣಮಾಡಿದರು. ಮರುದಿವಸ ಶಿವಾ ರ್ಚನಾನಂತರ ಮಹಾಸ್ವಾಮಿಯು ಮಾನಹಿಳ್ಳಿಮಠಕ್ಕೆ ದಯಮಾಡಿಸಿತು

ಹನುಮ್ಮಗಿ-ವೀರಭದ್ರಪ್ಪ.

ವಿವಾಹಮಹೋತ್ಸವ

ಬೆಂಗಳೂರು ಸಿಟಿ ವೀರಶೈವ ಪತ್ರಿಕಾಸಂಪಾದಕ, ಪಂಡಿತ ಸಿ. ಪಂಗಯ್ಯನವರ ಭಾವ ವೈದುನ ಚಿ॥ ಸ॥ ಎ. ಎಸ್. ನಂದೀಶ್ವರಯ್ಯ ಬಿ ಇ. ಎಂಬ ವರನಿಗೂ, ನಂಜನಗೂಡು ತಾಲೂಕು ಹುಲ್ಲಹಳ್ಳಿ ಜವಳಿಅಂಗಡಿ ಸಿದ್ದಣ್ಣನವರ ಚತುರ್ಥ ಪುತ್ರಿ ಚಿ॥ ಸೌ॥ ಹೆ॥ ಕುಂ॥ ಶೋ॥ ರುದ್ರಾಂಬಾ ಎಂಬ ವಧುವಿನೂ, ತಾ॥ 23-6-38 ರಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫ್ರೆಂಚ್‌ರಾಕ್ಸಿನ (ಹಿರೋ ಡೆಯ)ಲ್ಲಿ, ವಿವಾಹಮಹೋತ್ಸವವು ನಾಮಗೊಂಡ್ಲು ವೇ॥ ಸೋಮನಾರಾಧ್ಯರವರ ಪೌರೋಹಿತ್ಯದಲ್ಲಿ ನೆರೆ ನೇರಿತು ವೇ॥ ರೇವಣಾರಾಧ್ಯರವರೂ, ವೇ॥ ನಂಜುಂ ಡಾರಾಧ್ಯರವರೂ ಇದರಲ್ಲಿ ಭಾಗವಹಿಸಿದ್ದರು. ಆಗಮಿ ಸಿದ್ದ ಅನೇಕ ಪರಮತೀಯರು ಈ ವೇದೋಕ್ತ ವಿಧಾನ ವನ್ನು ನೋಡಿ ಸಂತುಷ್ಟರಾಗಿ ತಮ್ಮ ಸದಭಿಪ್ರಾಯ ವೆನ್ನು ಹೊರೆಗೆಡವುತ್ತಲಿದ್ದರು. ಈ ಕಲ್ಯಾಣೋತ್ಸವ ಸಮಯದಲ್ಲಿ ಶ್ರೀಮದ್ರಂಭಾಪುರೀ ವೀರಸಿಂಹಾಸನಾ ಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಾನದಿಂದ

ದಯಪಾಲಿಸಿದ್ದ ಆಶೀರ್ವಾದ ಪತ್ರವನ್ನೂ ಹೋಟಗಿ ಬೃಹನ್ಮಠಾಧ್ಯಕ್ಷರವರಿಂದ ಬಂದಿದ್ದ ಆಶೀರ್ವಾದ ಪತ್ರವನ್ನೂ ವೇ॥ ಸೋಮಶಾರಾಧ್ಯರು ಪಠಿಸಿ ಅಕ್ಷತಾರೋಪಣವನ್ನು ಮಾಡಿದರು. ಇದರಿಂದ ಎಲ್ಲರಿಗೂ ಉಂಟಾದ ಆನಂದಕ್ಕೆ ಪಾರವೇ ಇರಲಿಲ್ಲ.

ಬಳಿಕ ಮೈಸೂರು ವೀರಶೈವಮಂಡಲಿಯಲ್ಲಿ ಚೂಡಾರತ್ನ ಪ್ರಾಯವಾಗಿರುವ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಶ್ರೀಮಾನ್ ಪಿ. ಮಹದೇವಯ್ಯನವರು ಅತ್ಯಂತ ವಿಶ್ವಾಸಪೂರ್ವಕವಾಗಿ, ವಧೂವರರ ಶ್ರೇಯಸ್ಸನ್ನು ಕೋರಿ ಲಿಯಿಸಿದ್ದ ಪತ್ರವನ್ನು ಓದಲು ಸಭಿಕರು ಆನಂದಾಬ್ಧಿಯಲ್ಲಿ ಮುಳುಗಿದರು. ತರುವಾಯ ಮೈಸೂರು ಸ್ಟೇಟ್ ರೈಲ್ವೇಗಳ ಏಜಂಟರು ಶ್ರೀಮಾನ್ ವೈ॥ ಕೆ॥ ರಾಮಚಂದ್ರರಾಯರವರು " ಲೆಜಿಸ್ಲೇಟೀವ್ ಕೌನಸಿಲ್ಲಿಗೆ ಹೋಗಬೇಕಾಗಿರುವುದರಿಂದ ಲಗ್ನಕ್ಕೆ ಬರಲು ಅವಕಾಶವಾಗಲಿಲ್ಲವೆಂದು ವೈಯಕ್ತಿಕ ವಧೂವರರ ಶ್ರೇಯೋಭಿವೃದ್ಧಿಯನ್ನು ಬಯಸಿ, ಲಿಖಿಸಿದ ಪತ್ರಿಕೆಯನ್ನು ಓದಿದರು. ಕೋಲಾರದಿಂದ ಮಿ॥ ಸಾಂಬಶಿವಸ್ವಾಮಿಯವರು ತಂತೀಸಮಾಚಾರವು ತಲಪಿ, ಸಭಿಕರಿಗೆ ಆನಂದವನ್ನುಂಟುಮಾಡಿತು

ಇಷ್ಟರಲ್ಲಿ ಮೈಸೂರಿನಿಂದ ದಯಮಾಡಿಸಿದ್ದ ಮಿ॥ ರಾ॥ ಡಿ. ವೆಂಕಟಸ್ವಾಮಿಯವರು ಮತ್ತು ಮೈಸೂರು ಸ್ಟೇಟ್ ರೈಲ್ವೇಗಳ ಲೋಕೋಪ್ಯೋಜೇಷನರುಗಳು ಒಂದು ರಿಸ್ಟ್‌ವಾಚನ್ನು ವರನಿಗೆ ಓದಿಸಿ ಆದರ ಪೂರ್ವಕವಾಗಿ ಸಮರ್ಪಿಸಿದರು.

ಆಗ ಲಗ್ನಕರ್ತರು ಕ್ರಮವರಿತು ಸಭಿಕರಿಗೆ ಗಂಧ ಪುಷ್ಪಾದಿಗಳನ್ನು ಕೊಟ್ಟು ಬಳಿಕ ಮೈಸೂರು ಲಿಂಗಾಯಿತ ಎಜುಕೇಷ್ಯನ್ ಫಂಡಿಗೆ ಎರಡುರೂಪಾಯಿಗಳನ್ನು ಬೆಂಗಳೂರು ಸಿಟಿ ಚಿಕ್ಕಪೇಟೆ ಮಹಜನಿನಮಠದಲ್ಲಿರುವ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್ ಫಂಡಿಗಾಗಿ ಒಂದು ರೂಪಾಯಿಯನ್ನು ಮೈಸೂರು ಶ್ರೀ ಪಂಚಾಚಾರ್ಯಪ್ರಭಾ ಪತ್ರಿಕಾಪ್ರೋಷಣೆಗಾಗಿ ಒಂದು ರೂಪಾಯಿಯನ್ನು ಬೆಂಗಳೂರು ವೀರಶೈವ ಪತ್ರಿಕಾ ಪ್ರೋಷಣೆಗಾಗಿ ಒಂದು ರೂಪಾಯಿ ದುಸ್ಸು ತೆಗೆದು ವೀರಶೈವ ಪತ್ರಿಕಾಸಂಪಾದಕರಾದ ಪಂಡಿತ ಸಿ. ಸಂಗಯ್ಯನವರ ವಶಕ್ಕೆ ಕೊಡಲಾಯಿತು.

ನಾಕಬಲಿ ಶಾಸ್ತ್ರದ ದಿವಸ ಕೊಳ್ಳೇಗಾಲದ ಹೈಸ್ಕೂಲ್ ಟೀಚರ್ ಶ್ರೀಮಾನ್ ಎಸ್. ರುದ್ರಸ್ವಾಮಿಯವರೂ, ಬಿ.ಎ.,ಬಿ.ಎಲ್., ರವರೂ, ಭದ್ರಾವತಿಯ ಮೈಸೂರು ಐರ್ ಆಂಡ್ ಸ್ಟೀಲ್ ವರ್ಕ್ಸ್ ಮ್ಯಾನೇಜರವರ ಪರ್ಸನಲ್ ಕ್ಲಾರ್ಕ್ ವು॥ರಾ॥ ರಾಮಸ್ವಾಮಿಯವರೂ ಹೆಡ್‌ಕ್ಲಾರ್ಕ್ ಕೃಷ್ಣಪ್ಪನವರೂ, ಬೆಂಗಳೂರು ಇಂಜನೀರಿಂಗ್ ಕಾಲೇಜು ಪ್ರಿನ್ಸಿಪಾಲ್ ವೈ ಕೆ. ರಾಮಸ್ವಾಮಿಯವರೂ ಇವರೇ ಮುಂತಾದವರು ವಧೂವರರ ಶ್ರೇಯಸ್ಸನ್ನು ಕೋರಿ ಬರೆದುಬಂದಿದ್ದ ಟೆಲಿಗ್ರಾಮುಗಳನ್ನು ಓದಲಾಯಿತು

ಇವಾದಮೇಲೆ ಅನೇಕ ಮಂದಿ ಸಂಬಂಧಿಗಳು ಸುವರ್ಣರತ್ನಾಭರಣ, ರಜತಪಾತ್ರೆಗಳನ್ನೂ, ಉಡಿಗೆ ತೊಡಿಗೆಗಳನ್ನೂ, ನಧೂವರರಿಗೆ ಅರ್ಪಿಸಿದರು. ಹಲವರು ನಗದಾಗಿಯೂ ಅರ್ಪಿಸಿದರು.

ಈ ರೀತಿ ವಿವಾಹಕಾರ್ಯವು ನಿರ್ವಿಘ್ನವಾಗಿ ನೆರವೇರಲು ಬೆಂಗಳೂರು ಅಕ್ಕಿಮಂಡಿ, ಕೆ. ನಾಗಪ್ಪನವರೂ, ಇವರ ಸಹೋದರರಾದ ಶ್ರೀ ರೇಣುಕ ರೈಸ್ ಮಿಲ್ಲಿನ ಕೆ. ರಾಜಶೇಖರಯ್ಯನವರೂ ತಮ್ಮ ತಮ್ಮ ಕಾರ್ಯಗಳನ್ನು ಬಿಟ್ಟು ತುಂಬಾ ಶ್ರದ್ಧೆಯನ್ನು ವಹಿಸಿ ಕೆಲಸಮಾಡಿದ್ದೇ ಕಾರಣವಾಗಿದೆ ಫಲಹಾರ, ಊಟ ವಗೈರೆಗಳು ಕಾಲಕಾಲಕ್ಕೆ ಅತ್ಯಂತ ಸಮರ್ಪಕವಾಗಿ ನಡೆಯಲು ಏರ್ಪಡಿಸಿದ್ದರು. ಇಷ್ಟರಮಟ್ಟಿಗೆ ಬಹು ಸಂಭ್ರಮದಿಂದ ಈ ಶುಭಕಾರ್ಯವು ನೆರವೇರಿದುದು ಶ್ರೀಜಗದ್ಗುರು ಪಂಚಾಚಾರ್ಯರ ಆಶೀರ್ವಾದಬಲದಿಂದಲೇ ಎಂದು ಧಾರಾಳವಾಗಿ ಹೇಳಬಹುದು ಜಗದಾಚಾರ್ಯರು ವಧೂವರರಿಗೆ ಶುಭಪರಂಪರೆಯನ್ನೀಯಲಿ.

ಪ್ರತ್ಯಕ್ಷದರ್ಶಿ.

ವಿವಾಹಮಹೋತ್ಸವ, ಕುಂದೂರು.

ಇದೇ ಬಹುಧಾನ್ಯ ಸಂ॥ ಜ್ಯೇಷ್ಠ ಬ॥ ೩ ಗುರುವಾರ ತಾ॥ ೧೫-೬-೩೩ನೇ ದಿವಸ ಧಾರವಾಡ ಡಿ॥ ಬಂಕಾಪುರ ತಾಲೂಕ ಕುಂದೂರು ಶ್ರೀಮಂತ ನಾಗನಗೌಡರ ಸೋದರಳಿಯನಾದ ಚಿ॥ ಚಂದ್ರಶೇಖರ ಗೌಡ ಗುಡ್ಡನಗೌಡ ಪಾಟೀಲ್ ಇವರಿಗೆ ಶ್ರೀಮಂತ ಅಪ್ಪಾಸಾಹೇಬ ಖಾನಗೌಡ ದೇಸಾಯಿ ಇವರ ಬಂಧು ಶ್ರೀಮಂತ ಧರಮಗೌಡ ದೇಸಾಯಿ ಇನಾಮದಾರ ಬುಗಡೀಕಟ್ಟಿ ಇವರ ಸುಪುತ್ರಿ ಹ॥ ಕುಂ॥ ಸೌ॥ ಪಾರ್ವತೀಬಾಯಿ ಎಂಬ ಕನ್ಯಾರತ್ನವನ್ನು ತಂದು ವಿವಾಹಮಹೋತ್ಸವವು ಕುಂದೂರಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ಈ ಮಹೋತ್ಸವಕ್ಕೆ ಕುಲಗುರುಗಳಾದ ಕುಂದಗೋಳ ಪಂಚಗೃಹ ಬೃಹನ್ಮಠಾಧ್ಯಕ್ಷರಾದ ಶ್ರೀ॥ಷ॥ಬ್ರ॥ ಪಟ್ಟದಸ್ವಾಮಿಗಳು ಮತ್ತು ಶ್ರೀ॥ಷ॥ಬ್ರ॥ ಚರಮೂರ್ತಿಸ್ವಾಮಿಗಳು ಮತ್ತು ಬೀಳಗಿ ಬೃಹನ್ಮಠದ ಶ್ರೀ॥ಷ॥ಬ್ರ॥ ಪಟ್ಟದಸ್ವಾಮಿಗಳು ಬಂಕಾಪುರ ಅರಳೆಲೆಮಠದ ಶ್ರೀ॥ ಷ॥ ಬ್ರ॥ ಪಟ್ಟದಸ್ವಾಮಿಗಳು ಶಿಗ್ಗಾವಿ ಬೃಹನ್ಮಠ ಶ್ರೀ॥ಷ॥ಬ್ರ॥ ಚರಮೂರ್ತಿಸ್ವಾಮಿಗಳು ಶ್ರೀಜಗದ್ಗುರು ರಂಭಾಪುರೀ ಸಂಸ್ಥಾನದ ಏಜಂಟರಾದ ಪಂ॥ ಹರೀಶ್ವರಶಾಸ್ತ್ರಿಗಳು, ತಾಲೂಕ ಮಾಮಲೇದಾರ ಸಾಹೇಬರು ಮತ್ತು ಗ್ರಾಮಾಂತರ ಗಳಿಂದ ಅನೇಕಜನ ಪ್ರಮುಖರು ಆಗಮಿಸಿದ್ದರು. ಅಹೋರಾತ್ರಿಯಲ್ಲಿಯೂ ಅನ್ನಸಂತರ್ಪಣಕಾರ್ಯವು ನಡೆಯಿತು. ವಿವಾಹಮಂಟಪವು ಪುಷ್ಪಮಾಲಿಕೆಗಳಿಂದಲೂ ಲತಾವಳಿಗಳಿಂದಲೂ ನೋಡುವ ಜನರಿಗೆ ಮನೋಹರವಾಗಿ ಕಂಗೊಳಿಸುತ್ತಿತ್ತು. ವಿವಾಹಕಾರ್ಯವು ವಿಧ್ಯುಕ್ತಪ್ರಕಾರ ಹಂಚನಾಳ ವೇ॥ ಶಿವಕಂಠ ಶಾಸ್ತ್ರಿಗಳಿಂದ ನೆರವೇರಿಸಲ್ಪಟ್ಟಿತು. ಆನಂತರ ಡೋಣಿ ವೇ॥ ವಿರೂಪಾಕ್ಷಶಾಸ್ತ್ರಿಗಳು ಪಾತಿವ್ರತ್ಯದ ವಿಷಯದಲ್ಲಿ ಮನೋಹರವಾದ ಕೀರ್ತನಮಾಡಿದರು. ವಿವಾಹ ಸಮಯದಲ್ಲಿ ಕುಂದಗೋಳ ಶ್ರೀಸ್ವಾಮಿಗಳವರ ಆಜ್ಞೆ ಪ್ರಕಾರ ಶ್ರೀ ೧೦೮ ಜಗದ್ಗುರು ಕಾಶೀಪೀಠಕ್ಕೆ ಐದು ರೂಪಾಯಿಗಳೂ ಮತ್ತು ಪಂಚಾಚಾರ್ಯ ಪ್ರಭೆಗೆ ೫ ರೂಪಾಯಿಗಳೂ ಸಮರ್ಪಿಸಲ್ಪಟ್ಟವು ಆಸಾಧಾರಣ ಗುರುಭಕ್ತಿಸಂಪನ್ನರಾದ ನೂತನ ದಂಪತಿಗಳಿಗೆ ಶ್ರೀಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಭಾಗ್ಯಾದಿ ಸಕಲ ಸನ್ಮಂಗಲಗಳನ್ನು ಕೊಟ್ಟು ರಕ್ಷಿಸಲೆಂದು ಪ್ರಾರ್ಥಿಸುವ,

ಪ್ರತ್ಯಕ್ಷದರ್ಶಿ.

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ-ಶಿವದೀಕ್ಷಾಸಂಸ್ಕಾರ ಮತ್ತು ವಿವಾಹಮಹೋತ್ಸವ.

ಬಳ್ಳಾರಿ ಜಿಲ್ಲಾ ಹುವ್ವಿನಹಡಗಲಿ ತಾಲೂಕು ಹಿರೇಹಡಗಲಿ ಗ್ರಾಮಕ್ಕೆ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯಮಹಾಸ್ವಾಮಿಗಳವರು ದಯಮಾಡಿಸಿ ೧೮-೨ ತಿಂಗಳಿಂದಲೂ ಸಮಸ್ತಜನಸಮುದಾಯಕ್ಕೆ ಅನೆಂದವನ್ನುಂಟುಮಾಡುತ್ತಿರುವರು

ತಾರೀಖು ೨೧-೬-೧೯೩೩ನೇ ದಿವಸ ಇದೇ ಗ್ರಾಮದ ಕೌಲೂರು ಲಿಂಬಿಕಾಯಿಮರದ ತೋಟಯ್ಯನವರು ತಮ್ಮ ನುಂದಿರದಲ್ಲಿ ವಿವಾಹಕಾರ್ಯವನ್ನು ನಿಶ್ಚಯಿಸಿ ಕುಡತಿನಿಮಠದ ಶರಣಶ್ರೀಶಾಸ್ತ್ರಿಗಳ ಪೌರೋಹಿತ್ಯದಿಂದ ಸ್ವಸ್ತಿವಾಚನಾದಿ ಪೂರ್ವಕಾರ್ಯಗಳನ್ನು ನೆರವೇರಿಸಿದರು.

ತತ್ಸಮಯಕ್ಕೆ ಶ್ರೀಜಗದ್ಗುರುಮಹಾಸನ್ನಿಧಿಗೆ ಬನ್ನಹವಂಗೈದು ಆ ದಿವಸ ಉದಯ ೯ ಗಂಟೆಗೆ ವಾದ್ಯವಿಶೇಷಗಳಿಂದಲೂ ಭಜನಾಸಂಘದ ಬಾಲಕರ ಇಂಪಾದ ಗಾಯನದಿಂದಲೂ ಪಠಾಕುಗಳಿಂದಲೂ ಪಂಚಕಲಶಯುಕ್ತ ಅಂದೋಲಿಕಾಮಹೋತ್ಸವದೊಡನೆ ಜಗದ್ಗುರುಗಳನ್ನು ತಮ್ಮ ಮಂದಿರಕ್ಕೆ ಬಿಜಯಂಗೈಸಿಕೊಂಡು ಶ್ರೀರುದ್ರಾಭಿಷೇಕ ಮಹಾಪಾದಪೂಜಾ ಸಹಸ್ರಬಿಲ್ವಾರ್ಚನಾದಿಗಳನ್ನೆಸಗಿದರು. ವಿಶೇಷವಾಗಿ ಅನ್ನಸಂತರ್ಪಣೆಯು ನಡೆಯಿತು. ಸಾಯಂಕಾಲದಲ್ಲಿ ಮೈಸೂರು ಅರಮನೆ ಆಸ್ಥಾನಪಂಡಿತರಾದ ಉಮಾಮಹಿ ಮಳೆಮಠದ ವೇ॥ ಪಂಡಿತ ಶಂಕರಶಾಸ್ತ್ರಿಗಳೂ, ಆಸ್ಥಾನ ಪಂಡಿತರಾದ ವೇ॥ ಬಿ. ಗುರುಸಿದ್ಧಶಾಸ್ತ್ರಿಗಳವರೂ ಧಾರ್ಮಿಕ ಭಾಷಣಗಳನ್ನು ಮಾಡಿದರು.

ಮರುದಿವಸ ಬ್ರಾಹ್ಮಮುಹೂರ್ತದಲ್ಲಿ ಮನೆಯ ಕೆಲವು ಹೆಣ್ಣುಮಕ್ಕಳೂ ಮದುಮಗಳಾದ ಚಿ॥ ಕಾಶವ್ವನಿಗೂ ಶ್ರೀಜಗದ್ಗುರುಗಳವರ ಸನ್ನಿಧಿಯಲ್ಲಿ ಶಿವದೀಕ್ಷಾಸಂಸ್ಕಾರವು ವಿಧ್ಯುಕ್ತಪ್ರಕಾರ ನೆರವೇರಿತು.

ತೋಟಯ್ಯನವರ ತಮ್ಮನಾದ ಲೇಟ್ ಶಂಕರಯ್ಯನವರ ಪುತ್ರ ಚಿ॥ ಸೌ॥ ಕಾಶವ್ವನನ್ನು ಇದೇ ಗ್ರಾಮದ ಶಬ್ದಮಣಿಮಠದ ಚನ್ನಯ್ಯನವರ ಪುತ್ರ ಚಿ॥ ರುದ್ರಶಾಂತಯ್ಯನಿಗೆ ಕೊಟ್ಟು ಇದೇ ಬಹುಧಾನ್ಯಸಂವತ್ಸರದ ಜ್ಯೇಷ್ಠ ಬ॥ ೯ ಬುಧವಾರ ಉದಯ ಶುಭಮುಹೂರ್ತದಲ್ಲಿ ಪಾಣಿಗ್ರಹಣಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಿತು. ತರುವಾಯ ಸಂಧ್ಯಾಕಾಲದಲ್ಲಿ ಮಹಾಪಾದಸನ್ನಿಧಿಯಲ್ಲಿ ಚಿಗಟೇರಿ ವೇ॥ ಮರುಳಸಿದ್ಧ ಶಾಸ್ತ್ರಿಗಳು ಸಮಾಜಸುಧಾರಣೆ ಗುರುಭಕ್ತಿ ಎಂಬ ವಿಷಯಗಳ ಮೇಲೆ ಭಾಷಣಮಾಡಿದರು. ಮಹಾ ಸನ್ನಿಧಿಯವರು ಲೌಕಿಕ-ಪಾರಮಾರ್ಥಿಕ ದೃಷ್ಟಾಂತಗಳಿಂದ ಧಾರ್ಮಿಕವಿಷಯವನ್ನು ಅಪ್ಯಣಿಕೊಡಿಸಿದ ಬಳಿಕ ಮಂಗಲಾರತಿಯಾಗಿ ಶ್ರೀಜಗದ್ಗುರು ಪಂಚಾಚಾರ್ಯ ಜಯಘೋಷದಿಂದ ಸಭೆಯು ಮುಕ್ತಾಯವಾಯಿತು

ಚಿಕ್ಕಮರುಳಪ್ಪನವರ ಕೊಟ್ರಪ್ಪ.

ಶ್ರೀ ಶಿವಯೋಗಿಗಳ ಪುಣ್ಯತಿಥಿ

ಧಾರವಾಡ ಡಿ॥ ಕಲಘಟಗಿ ತಾಲೂಕ ಬೆಲವಂತರ ಹಿರೇಮಠದ ಲಿಂಗೈಕ್ಯ ಶ್ರೀ ಚನ್ನಬಸವೇಶ್ವರ ಶಿವಯೋಗಿಗಳವರ ಪುಣ್ಯತಿಥಿಯು ಪದ್ಮತಿಯಂಜೆ ಸದರಿ ವರ್ಧಂತ್ಯುತ್ಸವರಾದ ವೇ॥ ಸಿದ್ಧರಾಮೇಶ್ವರಸ್ವಾಮಿಗಳವರ ನೇತೃತ್ವದಲ್ಲಿ ಇದೇ ಜ್ಯೇಷ್ಠ ಬ॥ ೧೩ ತಾ॥ ೭೫-೬-೩೩ ಸೋಮವಾರದಿವಸ ವಿಶೇಷವೈಭವದಿಂದ ನೆರವೇರಿಸಲ್ಪಟ್ಟಿತು ಆ ದಿವಸ ಬೆಳಿಗ್ಗೆ ಶಿವಯೋಗಿಗಳ ಭಾವ ಚಿತ್ರಪಟವನ್ನು ಪಲ್ಲಕ್ಕಿಯಲ್ಲಿಟ್ಟು ಶ್ರೀಮಾನ್ ಶಿವನಗೌಡರು ಪಾಟೀಲ, ಸಂಗಪ್ಪ ಕಲಾಟ್ಟಿ, ನಾಗಪ್ಪ ಬಸನಕೊಪ್ಪ, ಗೂಳಯ್ಯ ಕೋಟಿ, ಚನ್ನಬಸಪ್ಪ ಬೈಲಂಣವರ, ಯಲ್ಲಪ್ಪ ರಡ್ಡೇರ ಮೊದಲಾದ ಗ್ರಾಮದ ಪ್ರಮುಖರೆಲ್ಲರೂ ಕೂಡಿ ವಾದ್ಯವೈಭವದೊಡನೆ ಮೆರವಣಿಗೆಯನ್ನು ಮಾಡಿದರು ಆ ದಿವಸ ಮಳೆ ಆಗುತ್ತಿದ್ದರೂ ಉತ್ಸವವಾಗುವವರೆಗೆ ಎಮ್ಮೆ ಮಳೆಯಾಗಲಿಲ್ಲ. ಶಿವಯೋಗಿಗಳವರ ಮಹಿಮಾಪ್ರಭಾವವನ್ನು ಕೇಳಿ ಮೇಘರಾಜನು ಶರಣಾಗತನಾದನೆಂಬುದು ಆಶ್ಚರ್ಯವಲ್ಲ. ಮಹಾತ್ಮರು ದೇಹಧಾರಿಗಳಾಗಿದ್ದರೂ ಇಲ್ಲದಿದ್ದರೂ ಮಹಿಮೆಯನ್ನು ತೋರುವರೆಂಬುದು ಇದರಿಂದ ಸಿದ್ಧವಾಗುವದು. ಈ ಪುಣ್ಯತಿಥಿ ಮಹೋತ್ಸವಕ್ಕೆ ವಿಜಾಪುರ ಡಿ॥ ತೊಪಿಶಾಳ, ಬ್ಯಾಡಗಿ, ಹಾವೇರಿ, ಕರ್ಜಗಿ, ಕದರಮಂಡಲಗಿ, ತರ್ಲಘಟ್ಟ, ಹುಬ್ಬಳ್ಳಿ, ಕಲಘಟಗಿ ಮೊದಲಾದ ಗ್ರಾಮಗಳಿಂದ ಸದ್ಭಕ್ತಮಹಾಶಯರು ಆಗಮಿಸಿದ್ದರು. ವಿಶೇಷವಾಗಿ ಅನ್ನಸಂತರ್ಪಣೆಯು ನಡೆಯಿತು. ರಾತ್ರಿ ೯ರಿಂದ ೧೧ರ ವರೆಗೆ ತೇಲವಂತ ಅಲದಕಟ್ಟಿ (ಡಾವೇರಿ) ಶ್ರೀಮಾನ್ ಸಂಗನಗೌಡರ ಸುಶ್ರಾವ್ಯಕೀರ್ತನವಾಯಿತು. ಶ್ರೀ ಶಿವಯೋಗಿಗಳವರ ರಥೋತ್ಸವವನ್ನು ಜರುಗಿಸಬೇಕೆಂದು ಹೊಸ ಗಡ್ಡಿತೇರನ್ನು ಮಾಡಿಸುವದರ ಸಲುವಾಗಿ ಈ ಗ್ರಾಮಲೇ ಕೆಲವು ಸದ್ಭಕ್ತ ಮಹಾಶಯರು ಉದಾರದೇಣಿಗೆಯನ್ನಿತ್ತಿದ್ದರೂ ಅರ್ಥಿಕ ಮುಗ್ಗಟ್ಟಿನಿಂದ ಮೂರು ವರ್ಷಗಳಾದರೂ ರಥದ ಕೆಲಸವು ಪೂರೈಸಲಿಲ್ಲ. ಮುಂದಿನವರ್ಷ ರಥೋತ್ಸವವನ್ನು ನೆರವೇರಿಸಬೇಕೆಂದು ನಿರ್ಣಯಿಸಿದೆ ಸದ್ಭಕ್ತ ಮಹಾಶಯರು ಉದಾರದೇಣಿಗೆಯನ್ನಿತ್ತು ಶಿವಯೋಗೀಶನ ಕೃಪೆಗೆ ಪಾತ್ರರಾಗಬೇಕೆಂದೂ ಶಿವಯೋಗಿವರ್ಯರು ಸರ್ವರಿಗೂ ಮಂಗಲವನ್ನುಂಟುಮಾಡಲೆಂದೂ ಪ್ರಾರ್ಥಿಸುವ,

ಶಿವಯೋಗಿ ಚರಣಸೇವಕ,
ಗುರಪ್ಪ ಶಿಕ್ಕೂರ ತರ್ಲಘಟ್ಟ.

ಪಂಚಾಚಾರ್ಯಪ್ರಭಾ.

೧೯೩೭ ನೆಯ ಜುಲೈ ತಾ|| ೪ ನೇ ಸೋಮವಾರ

ಧರ್ಮಶಾಸ್ತ್ರಜ್ಞಾನಶೂನ್ಯರ ಅಕಾಂಡತಾಂಡವ.

ವೇದಾವಲಂಬಿಗಳಾದ ಭಾರತೀಯರಲ್ಲಿ ಧರ್ಮಶಾಸ್ತ್ರಾನುಗುಣವಾಗಿ ಗೋತ್ರಸೂತ್ರಪ್ರವರಾದಿಗಳು ಅನಾದಿಕಾಲದಿಂದ ರೂಢಿಯಲ್ಲಿ ಬಂದಿರುತ್ತವೆ. ಗೋತ್ರಸೂತ್ರಪ್ರವರಾದಿಗಳನ್ನು ಬಿಟ್ಟವನು ಆರೂಢನಾಗಿರಬಹುದು ಅಥವಾ ಪತಿತನಾಗಿರಬಹುದು. ಬ್ರಹ್ಮಚರ್ಯಾದ್ಯಾಶ್ರಮಗಳಲ್ಲಿದ್ದು ಗುರುಮುಖದಿಂದ ಸಾಂಗವೇದಾಧ್ಯಯನ ಮಾಡಿ ಯೋಗಾಭ್ಯಾಸನಿರತನಾಗಿ ಇಂದ್ರಿಯಗಳನ್ನು ಜಯಿಸಿ ಮನಶ್ಶುದ್ಧಿಯನ್ನು ಪಡೆದು ಭಕ್ತಿಜ್ಞಾನವೈರಾಗ್ಯಗಳೆಂಬ ರತ್ನತ್ರಯವನ್ನು ಧಾರಣಮಾಡಿ ಪರಿಪಕ್ವಾಂತಃಕರಣನಾದಮೇಲೆ ಜೀವನಿಗೂ, ಪರಮಾತ್ಮನಿಗೂ ಒಂದೆಡೆಯಲ್ಲಿ ಸಂದರ್ಶನವುಂಟಾಗುವುದು. ಫಲವು ಉದಿಸಿ ದೊಡ್ಡದಾದಹಾಗೆ ಪುಷ್ಪವು ತಾನಾಗಿ ನಷ್ಟವಾಗಿ ಹೋಗುವಂತೆ ಬ್ರಹ್ಮಸಾಕ್ಷಾತ್ಕಾರವು ದೃಢಪಟ್ಟಿಹಾಗೆ ದೇಹವನ್ನಾಶ್ರಯಿಸಿಕೊಂಡುಬಂದ ಬ್ರಾಹ್ಮಣಾದಿ ವರ್ಣಭೇದಗಳೂ ಬ್ರಹ್ಮಚರ್ಯಾದಿ ಆಶ್ರಮಭೇದಗಳೂ ಕಳಚಿಹೋಗುವವು. ಎಷ್ಟನವರೆಗೆ ಜೀವಧರ್ಮವು ನೆಲೆಗೊಂಡಿರುವುದೋ ಅಷ್ಟನವರೆಗೂ ವರ್ಣಾಶ್ರಮಗಳಾಗಲಿ ಅವುಗಳ ಧರ್ಮಾನುಷ್ಠಾನಗಳಾಗಲಿ ಒಂದೂ ನಾಶವಾಗಲಾರವು

ಶ್ರುತಿಸ್ಮೃತಿಪುರಾಣಾನಾಂ ವಿರೋಧೋ ಯತ್ರ ದೃಶ್ಯತೇ ।
ತತ್ರ ತತ್ರ ವಿತರ್ಕೋಽಸ್ತಿ ನಿರ್ಣಯಸ್ತು ಸುದುರ್ಲಭಃ ॥

ವೀಣೆಯು ಬ್ರಹ್ಮರವನ್ನು ನೋಡುತ್ತ ನೋಡುತ್ತ ಕಾಲಕ್ರಮೇಣವಾಗಿ ತನ್ನ ಕೀಟದೆ ಸ್ವಭಾವವನ್ನು ಬಿಟ್ಟು ಬ್ರಹ್ಮರವೇ ಆಗಿಹೋಗುವಂತೆ ಕೇಂಚಿಜ್ಞನು ಮಾನವನು ಧಾರಾಮಯಿಯಾದ ಜ್ಞಾನದಿಂದ ಭಗವಂತನನ್ನು ಧ್ಯಾನಿಸುತ್ತ ಬಂದಲ್ಲಿ ಮಾನವ ಗುಣಗಳೆಲ್ಲವೂ ನಷ್ಟವಾಗಿ ಭಗವದಾಕಾರವನ್ನು ಪಡೆಯುವನು ದೇಹಸಂಬಂಧದಿಂದುಂಟಾದ ಹೇಯಗುಣಗಳು ಭಗವತ್ಸಾಕ್ಷಾತ್ಕಾರದಿಂದ ಸುಹಾತ್ಯನನ್ನು ಎಂದೂ ಪ್ರತಿಭಟಿಸಿ ಮೇಲೆ ಬೀಳಲಾರವು ಹಾಗೆ ಪ್ರತಿಭಟಿಸಿದರೆ ದೀಪಕ್ಕೆರಗಿನ ಶಲಭಗಳಂತೆ ನಷ್ಟಯಿ ಉರಿದುಬೀಳುವವು ಇಂಥವನನ್ನು ಧರ್ಮಶಾಸ್ತ್ರಗಳು ಮಹಾತ್ಮನೆಂದೂ ಆರೂಢನೆಂದೂ ನಿರಾಧಾರಿಯೆಂದೂ ಅತೀವರ್ಣಾಶ್ರಮಿಯೆಂದೂ ಅನಂತ ಪರಿಶುದ್ಧನಾಮಗಳಿಂದ ಕರೆಯುತ್ತವೆ ವರ್ಣಾಶ್ರಮಾಚಿಹ್ನೆವೆನಿಸಿದ ಗೋತ್ರಸೂತ್ರಗಳಾಗಲಿ ಶಿಖಾಯಜ್ಞೋಪವೀತಗಳಾಗಲಿ ಒಂದರ ತೊಡಕೂ ಇವನನ್ನು ಸೋಂಕುವುದಿಲ್ಲ. ದೇವರ ಉಪಾಸನೆಮಾಡದೆ ಭಕ್ತಿಜ್ಞಾನವೈರಾಗ್ಯಗುಣವಯವಾಗದೆ ಸ್ವಾಪಂಚಿಕವ್ಯವಹಾರವು ತೊಲಗದೆ ಜೀವಧರ್ಮವು ಬರಬರುತ್ತ ವಜ್ರಲೇಪಗೊಳ್ಳುತ್ತಿದ್ದರೂ ತನ್ನ ಸ್ವೇಚ್ಛಾವಿಹಾರಕ್ಕಾಗಿ ವರ್ಣಗಳಿಲ್ಲ, ಗೋತ್ರಗಳಿಲ್ಲ, ಸೂತ್ರಗಳಿಲ್ಲ, ಪ್ರವರಗಳಿಲ್ಲ ಎಲ್ಲಿಬೇಕಾದರೂ ಹೆಣ್ಣು ಕೊಡಬಹುದು ತರಬಹುದು. ಎಲ್ಲಿಬೇಕಾದರೂ ಉಣ್ಣಿಬಹುದು ತಿನ್ನಬಹುದು ಕುಡಿಯಬಹುದೆಂದು ಪಶುವಿನಂತೆ ವರ್ತಿಸುವನು ಅಪರಿಶುದ್ಧನಾಗುವುದಲ್ಲದೆ ಪತಿತನೆಂದು ಹೇಳಿಸಿಕೊಳ್ಳಲ್ಪಡುವನು. ನಮ್ಮ ಪ್ರಾಚೀನಮಹರ್ಷಿಗಳು ಲೋಕೋಪಕಾರಾರ್ಥವಾಗಿ ಧರ್ಮಶಾಸ್ತ್ರಗಳನ್ನು ರಚಿಸಿದರು. ಆ ಧರ್ಮಶಾಸ್ತ್ರಗಳಲ್ಲಿ ಪ್ರತಿಯೊಬ್ಬ ಮಾನವನೂ ವರ್ಣಾಶ್ರಮಬದ್ಧನಾಗಿಯೂ ಗೋತ್ರಸೂತ್ರಬದ್ಧನಾಗಿಯೂ ದೇವರನ್ನಾರಾಧಿಸಬೇಕು ವರ್ಣಾಶ್ರಮರಹಿತನಾಗಿ ಗೋತ್ರಸೂತ್ರಗಳನ್ನು ಲುಪ್ತಿಸಿ ದೇವರನ್ನಾರಾಧಿಸಿದರೆ ದೇವರು ಅಂಥ ಪೂಜೆಯನ್ನು ಒಪ್ಪುವುದಿಲ್ಲ. ಜೀವನು ಬ್ರಹ್ಮಜ್ಞಾನಿಯಾಗಬೇಕಾದರೆ ಪ್ರಥಮತಃ ಗೋತ್ರಸೂತ್ರಾನುಸಾರವಾಗಿ ಸಂಸ್ಕಾರಗಳನ್ನು ಪಡೆಯಲೇಬೇಕೆಂದು ಧರ್ಮಶಾಸ್ತ್ರಗಳು ಮುಕ್ತಕಂಠದಿಂದ ಹೊಗಳುತ್ತಿದ್ದರೂ, ಅವುಗಳ ಕಡೆಗೆ ಕಣ್ಣೆತ್ತಿ ನೋಡದೆ ವರ್ಣಸಾಂಕರ್ಯ ಗೋತ್ರಸಾಂಕರ್ಯಗಳಲ್ಲಿ ತೊಡಗಿರುವ ಜನರು ಇತ್ತೀಚೆಗೆ ಅಲ್ಲಲ್ಲಿ ಕಣ್ಣಿಗೆ ಬೀಳಹತ್ತಿದ್ದಾರೆ. ಆಂಗ್ಲಭಾಷಾಪ್ರವೀಣರಲ್ಲಿ ಇಂಥ ಅಶಾಸ್ತ್ರೀಯವಿಪ್ಲವಗಳು ಹೆಚ್ಚುತ್ತಿರುವವು. ಶ್ರೀಜಗದ್ಗುರು ಸಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವಸಿದ್ಧಾಂತವಲ್ಲಿಯಾದರೂ ಬ್ರಹ್ಮಸಾಕ್ಷಾತ್ಕಾರ (ಲಿಂಗಾಂಗಸಾಮರಸ್ಯ)ನನ್ನು ಪಡೆದು ನಿರಾಧಾರಿಯೆನಿಸಿಕೊಳ್ಳುವವನು ಮಾತ್ರ ವರ್ಣಾಶ್ರಮಗಳನ್ನಾಗಲಿ ದಾಟಬಲ್ಲನೇ ಹೊರತು ಮತ್ತೊಬ್ಬನಾವನೂ ದಾಟಲಾರನು. ಜೀವಾತ್ಮಾವನಸ್ಥೆಯಲ್ಲಿದ್ದು ಯಾವನಾದರೂ ಬಲಾತ್ಕಾರದಿಂದ ವರ್ಣಾಶ್ರಮಗಳನ್ನಾಗಲಿ ಗೋತ್ರಸೂತ್ರಗಳನ್ನಾಗಲಿ ತ್ಯಜಿಸಿದರೆ ಪತಿತನಾಗುವನೆಂದು ಸ್ಪಷ್ಟವಾಗಿ ಹೇಳಿದ್ದರೂ ಈಗಿನ ಸುಧಾರಿಸಿದವರೆಂದು ಹೇಳಿಸಿಕೊಳ್ಳುವ ಕೆಲ ವೀರಶೈವರು ಈ ನಿಬಂಧನೆಯನ್ನು ಕಿತ್ತುಹಾಕಲು ಹವಣಿಸುತ್ತಲಿದ್ದಾರೆ. ಎಲ್ಲೆಲ್ಲಿಯೂ ಈ ವಿಷಮಯ ವಾತಾವರಣವು ಬೀಸುವುದರಿಂದ ಧರ್ಮವೆಂಬ ವೃಕ್ಷವು ಬುಡವು ಸಡಿಲವಾಗಿ ಪತನೋನ್ಮುಖವಾಗಹತ್ತಿರುತ್ತದೆ. ಲಿಂಗಧಾರಿಗಳಾಗಿದ್ದರೆ ಎಲ್ಲಿಬೇಕಾದರೆ ಅಲ್ಲಿ ಹೆಣ್ಣು ತರಬಹುದಂತೆ! ಯಾವ ಜಾತಿಯವನಿಗಾದರೂ ಲಿಂಗಕಟ್ಟಿ ತಮ್ಮೊಳಗೆ ಶೇರಿಸಿಕೊಳ್ಳಬಹುದಂತೆ! ಅಂಥ ಲಿಂಗಕಟ್ಟಿದವನಲ್ಲಿ ಭೋಜನಾದಿಸವ್ಯವಹಾರವನ್ನು ಮಾಡಬಹುದಂತೆ! ವೀರಶೈವಮತಪಲ್ಲಿ ಗೋತ್ರಸೂತ್ರಗಳಲ್ಲವಂತೆ! ವರ್ಣಗಳಂತೂ ಸುತರಾಂ ಇಲ್ಲವಂತೆ! ವಿಧವಾವಿವಾಹಕ್ಕೆ ಬಹಳಮಟ್ಟಿಗೆ ಅವಕಾಶವುಂಟಂತೆ! ಇಂಥ ಆಪಲಾಪಗಳು ಎಲ್ಲೆಲ್ಲೂ ಕೇಳಿಬರುತ್ತಿರುವವು ಇಂಥ ಅಧರ್ಮಗಳು ಸಮಾಜದಲ್ಲಿ ಕಾಲಿದಲು ಆಂಗ್ಲವಿದ್ಯಾಪ್ರಭಾವವೇ ಕಾರಣನಾಗಿದೆ. ಇನ್ನು ಈ ವಿದ್ಯೆಯು ಎಷ್ಟರಮಟ್ಟಿಗೆ ಹೆಚ್ಚುತ್ತಹೋಗುವದೋ ಅಷ್ಟರಮಟ್ಟಿಗೆ ಅಧರ್ಮಗಳು ಹೆಚ್ಚುತ್ತಲೇ ಬರುವವು ಈ ರಾಜಕೀಯ ವಿದ್ಯೆಯು ಜೊತೆಯಲ್ಲಿ ಸಮಭಾಗವಾಗಿಯಾದರೂ ಭಾರತೀಯರ ದರ್ಮಗ್ರಂಥಗಳನ್ನೋದಿದ್ದರೆ ಅಂಥ ದುರಾಚಾರಪದ್ಧತಿಗಳನ್ನು ಸ್ವಲ್ಪಮಟ್ಟಿಗಾದರೂ ತಡೆಯಬಹುದು. ಧರ್ಮಗಂದವನ್ನೇ ಅರಿಯದವನಿಗೆ ಧರ್ಮಶ್ರದ್ಧೆಯು ಹುಟ್ಟುವುದೆಂತು? ವೃಷಾಹವ ಕೆಳಗಿನ ಶಿಕ್ಷವನು ಆ ಪ್ರವಾಹದಲ್ಲೇ ತೇಲಿಹೋಗುವದು ಸ್ವಭಾವವಾಗಿದೆ. ಸ್ವಲ್ಪ ಆಡ್ಡಗಟ್ಟಿಯಿದ್ದರೆ ಪ್ರವಾಹದಿಂದ ತಪ್ಪಿಸಿಕೊಳ್ಳಬಹುದು. ತಾನು ಯಾವದೇಶದಲ್ಲಿ ಜನ್ಮಧಾರಣಮಾಡಿರುವನೋ ಆ ದೇಶದಲ್ಲಿ ಅವತರಿಸಿದ ಮಹರ್ಷಿಗಳ ಮತ್ತು ಆಚಾರ್ಯರ ಧರ್ಮಮಾರ್ಗಗಳು ಎಂಥವುಗಳೋ ಅವುಗಳನ್ನು ತಿಳಿದು ಆ ಮಾರ್ಗದಲ್ಲಿ ಪ್ರತಿಯೊಬ್ಬನೂ ನಡೆಯುವುದನ್ನು ಕಲಿಯಬೇಕು. ಸಂಪರ್ಧಗುಣವಿಲ್ಲದ ರಾಜಕೀಯ ಭಾಷೆಗಳನ್ನು ಕಲಿತರೂ ಅವುಗಳನ್ನೆಲ್ಲಾ ದೇಹಯಾತ್ರೆಯನ್ನು ಸುಖಮಯವಾಗಿ ನಡೆಯಿಸುವುದಕ್ಕಾಗಿ ಉಪಯೋಗಿಸಬೇಕಲ್ಲದೆ ಆತ್ಮನನ್ನು ಪತಿತನನ್ನಾಗಿ ಮಾಡುವ ಸೂರ್ಗದಲ್ಲಿ ಉಪಯೋಗಿಸಕೂಡದು. ಸ್ವಭಾವತಃ ಆಂಗ್ಲದೇಶದಲ್ಲಿ ಜನ್ಮಧಾರಣಮಾಡಿದ ಜನಗಳು ಅನೇಕವಿಧಗಳಾದ ವಿದ್ಯೆಗಳನ್ನು ಕಲಿತು ಒಂದೊಂದು ಅದ್ಭುತಶಕ್ತಿಯನ್ನು ಕಂಡುಹಿಡಿದು ಅಪಾರವಾದ ಧನವನ್ನೂ, ಪ್ರತಿಷ್ಠೆಯನ್ನೂ ಪಡೆದರೂ ವಿದೇಶಗಳಲ್ಲಿ ಸಂಚರಿಸುತ್ತಿದ್ದರೂ ದೇವರ ಪ್ರೀತಿಗೆ ಸಾಧಕವಾದ ತಮ್ಮ ತಮ್ಮ ಧರ್ಮಮಾರ್ಗವನ್ನು ಮಾತ್ರ ಎಂದಿಗೂ ಬಿಡುವುದಿಲ್ಲ. ಅವರು ಮತ್ತೊಬ್ಬರ ಬುದ್ಧಿಕೌಶಲಾದಿಗಳನ್ನು ಮಾತ್ರ ಸಂಪಾದಿಸುವರಲ್ಲದೆ ತಮ್ಮ ಧರ್ಮದಿಂದ ಚ್ಯುತರಾಗುವುದಿಲ್ಲ. ನಮ್ಮ ಭಾರತೀಯರು ಮಾತ್ರ ಇನ್ನೊಂದು ವಿದ್ಯೆಯನ್ನು ಕಲಿತರಾಗಲಿ ಮತ್ತೊಂದು ದೇಶಕ್ಕೆ ಹೋದರಾಗಲಿ ಆಗಲೇ ತಮ್ಮ ಧರ್ಮಗಳಿಗೆಲ್ಲಾ ತರ್ಪಣವನ್ನು ಕೊಟ್ಟು ನಿದೇಶೀಯರಂತೆ ನಟಿಪಹತ್ತಿ ತಮ್ಮ ಮಹರ್ಷಿಗಳ ಮೇಲ್ಪಂಕ್ತಿಯೆನಿಸಿದ ಧರ್ಮಸಾಧಕಗಳಾದ ಶಿಖಾಸೂತ್ರಗಳನ್ನು ಕಿತ್ತಿಸೆದು ವರ್ಣಾಶ್ರಮಗಳಲ್ಲೇನುಂಟು? ಸಂಧ್ಯಾವಂದನ ದೇವತಾರ್ಚನೆಗಳಲ್ಲೇನುಂಟೆಂದು ಅಕಾಂಡತಾಂಡವವನ್ನಾಡುತ್ತ ಸಾಂಕರ್ಯವನ್ನು ಜೆಳಸಹತ್ತುವರು. ಮಹಾಜ್ಞಾನಿಗಳಾದ ಮಹರ್ಷಿಗಳನ್ನೂ ಮತಸ್ಥಾಪಕರನ್ನೂ ನಿಂದಿಸಹತ್ತುವರು. ಇದರಿಂದ ನಮ್ಮ ಭಾರತೀಯರ ಆತ್ಮಶಕ್ತಿಯು ಎಷ್ಟುಬಲಹೀನವಾದುದೆಂಬುದು ಗೊತ್ತಾಗುತ್ತದೆ. ಇತರರನ್ನು ತಮ್ಮಂತೆ ಮಾಡಿಕೊಳ್ಳುವುದನ್ನು ಬಿಟ್ಟು ತಾವು ಇತರರಂತಾಗುವುದನ್ನು ಕಲಿತರೆ ಭಾರತಧರ್ಮವು ಉಳಯುವುದೆಂತು? ಆದುದರಿಂದ ಭಾರತೀಯರು ದೃಢಮೂಲವಾಗಿಯೂ ವೇದಾಗಮಪ್ರಣೀತವಾಗಿಯೂ ಇರುವ ಮೋಕ್ಷದಾಯಕವಾದ ತಮ್ಮ ಧರ್ಮಧ್ವಜವನ್ನುಮಾತ್ರ ಬಿಡದೆ ರಾಜಕೀಯವಿದ್ಯೆಗಳಲ್ಲಿ ನಿಷ್ಣಾತರಾಗುವದು ಕುಶಲಮತಿಗಳ ಕರ್ತವ್ಯವಾಗಿದೆ.

ಒಳದೇಶದ ವೃತ್ತಾಂತಗಳು.

ವಿವಮೊಗ್ಗಡಿಸ್ಟ್ರಿಕ್ಟ್ ಸಾಗರದಿಂದ ಕಾಳಗುಪ್ಪ ಎಂಬಲ್ಲಿಗೆ ಸುಮಾರು 9 ಮೈಲಿಗಳವರೆಗೆ ರೈಲುಮಾರ್ಗವನ್ನು ಹೆಚ್ಚಿಸಬಹುದೆಂದು ಇಂಡಿಯಾಸರ್ಕಾರದವರು ಮೈಸೂರು ಸರ್ಕಾರದವರಿಗೆ ಅನುಮತಿಕೊಟ್ಟಿರುವರೆಂದು ಪ್ರಕಟವಾಗಿರುತ್ತದೆ.

ಕಳೆದತಿಂಗಳು 16 ನೆಯ ತಾರೀಖಿನದಿವಸ ಚನ್ನಪಟ್ಟಣದಲ್ಲಿ ನಡೆದ ದೊಂಬಿ ಹೊಡೆದಾಟದ ಸಂಬಂಧದಲ್ಲಿ ಸರ್ಕಾರದವರು ಪರಿಯಾದ ಬಂದೋಬಸ್ತನ್ನು ಮಾಡಿರುವರಲ್ಲದೆ, ಈ ಆನಾಹುತಕ್ಕೆ ಕಾರಣರಾದವರಮೇಲೆ ಕ್ರಮ ಜರುಗಿಸಿರುವರು.

ಮೈಸೂರು ಗವರ್ನಮೆಂಟಿನ ದ್ವಿತೀಯಮಂತ್ರಿವರಾದ ರಾಜಮಂತ್ರಿಪ್ರವೀಣ ಶ್ರೀಯುತ ಎ. ಮಾಧವರಾಯರವರು ಕಳೆದ 30 ನೆಯ ತಾರೀಖಿನ ರಾತ್ರಿ ದೆಶಲಿಗೆ ಪ್ರಯಾಣ ಮಾಡಿದರು ಅಲ್ಲಿಂದ ಅವರು ಸಿಮ್ಲಾಕ್ಕೆ ಹೋಗಿ ಜುಲೈ 15 ನೆಯ ತಾರೀಖಿಗೆ ಆಗಮಿಸುವವರಾಗಿದ್ದಾರೆ.

ರಾಜಧಾನಿಯಲ್ಲಿರುವ ಜೊಂಬಾಯಿ ಅನಂದಭವನದ ಮಾಲೀಕರಾದ ಮಿ|| ಪ್ರಸಾದರವರು ಕಳೆದ ಅಮಾವಾಸ್ಯೆಯದಿವಸ ಶ್ರೀರಂಗಪಟ್ಟಣದಲ್ಲಿ ಕಾವೇರಿ ಸ್ನಾನಕ್ಕಾಗಿ ಸಂಸಾರಸಮೇತ ಹೋಗಿ ಹೊಳೆಯಲ್ಲಿ ಸ್ನಾನಮಾಡುತ್ತಿದ್ದಾಗ 12 ವರ್ಷ ವಯಸ್ಸಿನ ಅವರ ಮಗಳು ಪ್ರವಾಹದಲ್ಲಿ ಕೊಚ್ಚಿಕೊಂಡುಹೋದಳೆಂದು ಕೇಳಿ ವಿಷಾದವನ್ನಿಸುತ್ತದೆ

ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪನೆಯಾದ ಮೇಲೆ ಅಂದರೆ 1918 ರಿಂದ 1938 ರ ವರಗೆ ಅಂದರೆ 20 ವರ್ಷಗಳಲ್ಲಿ ವಿಶ್ವವಿದ್ಯಾನಿಲಯದಲ್ಲಿ ಓದಿ ಪ್ರೌಢ ಪರೀಕ್ಷೆಗಳನ್ನು ಕೊಟ್ಟು ಉತ್ತೀರ್ಣರಾಗಿರುವ ಪ್ರೀಯರು 198 ಮಂದಿ ಇದ್ದಾರೆ ಅವರಲ್ಲಿ ಬಿ.ಎ. 84, ಬಿ.ಎ. (ಆನರ್ಸ್) 8, ಬಿ.ಎಸ್ ಸಿ 38, ಬಿ.ಎಸ್ಸಿ.(ಆನರ್ಸ್) 7, ಎಂ.ಎ 17, ಎಂ.ಎಸ್ಸಿ. 7, ಬಿ.ಟಿ. 32, ಎಂ.ಬಿ.ಬಿ.ಎಸ್. 3 ಒಟ್ಟು 198.

ಬೆಂಗಳೂರು ನಗರದ ಮಾರ್ಕೆಟ್ ಮುಂಭಾಗದಲ್ಲಿರುವ ಚೌಕವಲ್ಲಿ ಮೋಟಾರ್ ನಡೆಯಿಸುವವರು ವಿಶೇಷವಾಗಿ ಹಾರ್ನ್‌ಮಾಡುವುದರಿಂದ ಹತ್ತಿರವಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಬಹಳ ತೊಂದರೆಯಾಗುತ್ತಿರುವದೆಂದು ತಿಳಿದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು, ಆ ಪ್ರದೇಶದ ಸುತ್ತಲೂ ಹಗಲು ರಾತ್ರಿಯಾ ಮೋಟಾರು ನಡೆಸುವವರು ಹಾರ್ನಗಳನ್ನಾಗಲಿ ಶಬ್ದಮಾಡುವ ಇತರ ಸಾಧನಗಳನ್ನಾಗಲಿ ಉಪಯೋಗಿಸಬಾರದೆಂದು ಆಜ್ಞೆಮಾಡಿರುತ್ತಾರೆ.

ಸೌರಸಭೆಗಳ ಖಾಸಗಿ ಅಧ್ಯಕ್ಷರೆ ಉಪಾಧ್ಯಕ್ಷರೆ ಮತ್ತು ಸದಸ್ಯರ ಪ್ರಯಾಣದ ಭತ್ಯವನ್ನು ಮುಂದೆ ಕಾಣಿಸುವ ರೀತಿಯಲ್ಲಿ ಕತಮೆಮಾಡಿಕೊಡಬೇಕೆಂದು ಸರ್ಕಾರದ ಅಪ್ಪಣೆಯಾಗಿರುತ್ತದೆ ಅಧ್ಯಕ್ಷ, ಉಪಾಧ್ಯಕ್ಷರುಗಳಿಗೆ ಪ್ರತಿದಿನದ ಭತ್ಯ 4 ರೂ. ಮೈಲೇಜ್ 0-4-0 ರೈಲ್ವೆಖರ್ಚು ಎರಡನೆಯ ತರಗತಿಯ ದರದ ಒಂದೂವರೆಯಷ್ಟು. ಇತರ ಖಾಸಗಿ ಸದಸ್ಯರಿಗೆ ಪ್ರತಿದಿನದ 1 ರೂಪಾಯಿ, ಮೈಲೇಜ್ 0-3-0 ರೈಲ್ವೆಖರ್ಚು ಎರಡನೆ ತರಗತಿಯ ದರದ ಒಂಮೂವರೆಯಷ್ಟು ಕೊಡಬೇಕೆಂದು ಅಪ್ಪಣೆಯಾಗಿದೆ.

ಕೃಷ್ಣರಾಜನಗರದ ತಾಲೂಕು ಬೆಟಕನಹಳ್ಳಿಯಲ್ಲಿ ಬಿಸಿಗೌಡ, ನಂಗಾಜಮ್ಮ ಮತ್ತು ಮಲ್ಲಯ್ಯ ಎಂಬವರು ಹೊಲದ ವಿಚಾರವಾಗಿ ಬಸಮ್ಮ ಎಂಬಾಕೆಯ ಮೈಮೇಲೆ ಬಿದ್ದು ಭಾಯಸಡಿಸಿದರೆಂಬ ಅಪರಾಧವು ಸ್ಥಿರಪಟ್ಟು, ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೂರು ಮೆಂದಿಗೂ ತಲಾ ಒಂದು ತಿಂಗಳ ಕಠಿನಶಿಕ್ಷೆ 25 ರೂ. ಗಳ ದಂಡ, ದಂಡಕೊಡಲು ತಪ್ಪಿ

15 ದಿನಗಳ ಕಠಿನಶಿಕ್ಷೆಯು ವಿಧಿಸಲ್ಪಟ್ಟಿತು. ಈ ಕೃತ್ಯಕ್ಕೆ ಮಲ್ಲಯ್ಯನೇ ಖಾತನು ಪ್ರೇರಕನಾದುದರಿಂದ ಇವನಿಗೆ ಮತ್ತೆ ಬಂದು ತಿಂಗಳ ಕಠಿನ ಶಿಕ್ಷೆಯು ವಿಧಿಸಲ್ಪಟ್ಟಿತು.

ತಿಲೋತ್ತಮೆ ನಾಟಕ

ರಾಜಧಾನಿಯ ಶ್ರೀ ಚಾಮುಂಡೇಶ್ವರೀ ಕರ್ಣಾಟಕ ನಾಟಕ ಸಂಘದವರು ನಿನ್ನೆಯದಿವಸ ರತ್ನಾವಳೀ ಥಿಯೇಟರಿನಲ್ಲಿ " ತಿಲೋತ್ತಮೆ " ಎಂಬ ನಾಟಕವನ್ನು ಬಹು ಮನೋಹರವಾಗಿ ಅಭಿನಯಿಸಿದರು. ಆ ಸಮಯದಲ್ಲಿ ಸೂರು ಸರಕಾರದ ಚೀಫ್ ಸೆಕ್ರೆಟರಿಯವರು, ಡಿ॥ ಜೆ॥ ಕಾರ್ಯರವರು, ಡಿ॥ ಜಡ್ಜರವರು, ಪೋ॥ ಸೂಪರಿಂಟೆಂಡೆಂಟರವರು, ಫಸ್ಟ್‌ಕ್ಲಾಸ್ ಮ್ಯಾಜಸ್ಟ್ರೇಟರವರು ಮೊದಲಾದ ಅನೇಕಜನ ಸದಕಾರಿ ಅಧಿಕಾರಿಗಳೂ, ಪುರಮುಖರೂ, ಅನೇಕಜನ ಪ್ರೇಕ್ಷಕರೂ ನಾಟ್ಯಮಂದಿರವನ್ನಲಂಕರಿಸಿ, ನಾಟಕದ ಮನೋಹರದೃಶ್ಯವನ್ನು ನೋಡಿ ಸಂತೋಷಸಾಗರದಲ್ಲಿ ಲೋಲಾಡಿದರು. ದೇವೇಂದ್ರನ ಪಾತ್ರವನ್ನು ಳಿದು ಮಿಕ್ಕ ಪಾತ್ರಧಾರಿಗಳೆಲ್ಲರೂ ಸ್ತ್ರೀಯರೇ ತಮ್ಮ ಪಾತ್ರವನ್ನು ಬಹು ಹೃದಯಂಗಮವಾಗಿ ಅಭಿನಯಿಸಿದರು. ತಿಲೋತ್ತಮೆಯ ಪಾತ್ರವನ್ನು ವಹಿಸಿದ ಬಾಲಕನ ಭಾವವೈಖರಿಯು ಪರ್ಣನಾತೀತವಾಗಿತ್ತು. ಒಲ ವರ್ಷದ ಚಿಕ್ಕ ಬಾಲಿಕೆಯು ತೋರಿಸಿದ ಚಾತುರ್ಯವು ಆಶ್ಚರ್ಯವೈದೃಶವಾಗಿತ್ತು. ಹಾಸ್ಯಪಾತ್ರಧಾರಿಗಳ ವಚನ ವೈಖರಿಯು ವಿಚಿತ್ರವಾಗಿದ್ದು ನಿಲ್ಲಕ್ಷಣಾನಂದವನ್ನುಂಟು ಮಾಡಿತು. ಸೀನರಿಗಳ ಸೌಂದರ್ಯವು ನಾಟಕದ ಮೆರುಗನ್ನು ಹೆಚ್ಚಿಸಿತು. ಒಟ್ಟಿಗೆ ಈ ಕರ್ಣಾಟಕ ನಾಟಕಸಂಘವು ಕರ್ಣಾಟಕರಂಗಭೂಮಿಗೆ ಕಂಠಾಭರಣವಂತೆ ಕಮನೀಯವಾಗಿರುವಮೆಂದು ಬರೆದರೆ ಅತಿಶಯೋಕ್ತಿಯೆನಿಸದು. ಈ ನಾಟಕವು ಸಂಪಾದಿಸುವ ಕೇರ್ತಿ ಮೆಲ್ಲವೂ ಪ್ರಾಕ್ಟೀಸ್‌ಮ್ಯಾನೇಜರ್ ಸು॥ರಾ॥ ಕೊಟ್ಟೂರಪ್ಪಯ್ಯನವರಿಗೆ ಸೇರಿದುದಾಗಿದೆ. ಶ್ರೀಚಾಮುಂಡೇಶ್ವರಿಯ ಅನುಗ್ರಹಬಲದಿಂದ ಈ ಸಂಘವು ಉತ್ತರೋತ್ತರಾಭಿವೃದ್ಧಿಯನ್ನು ಹೊಂದಲೆಂದು ಹಾರೈಸುತ್ತೇನೆ.

ವರ್ತಮಾನಸಂಗ್ರಹ.

ಇಥಿಯೋಪಿಯದ ಜಯವನ್ನು ಇಪ್ಪತ್ತೈಂಟು ದೇಶಗಳೊಪ್ಪಿದವು

ಇಟಲಿಯು ಇಥಿಯೋಪಿಯವನ್ನು ಗೆದ್ದಿತೆಂಬಂಶವನ್ನು ಲೀಗ್ ಆಫ್ ನೇಷನ್ಸಿನ 28 ರಾಷ್ಟ್ರಗಳು ಒಪ್ಪಿಕೊಂಡಿವೆ ಎಂಬುದಾಗಿ ಕಾಮನ್ವಾಸಭೆಯಲ್ಲಿ ವಿದೇಶಾಂಗಕಾರ್ಯದ ಅಂಡರ್ ಸೆಕ್ರೆಟರಿಯವರಾದ ಶ್ರೀ ಬಟ್ಲರ್‌ರವರು ಹೇಳಿದರು.

ಬಿರುಗಾಳಿಯ ಅನಾಹುತ.

ಜಪಾನಿನ ಮುಖ್ಯನಗರಗಳಾದ ಟೋಕಿಯೋ ಮತ್ತು ಯಾಕೋಹಾಮಗಳಲ್ಲಿ ಅಸಾಧ್ಯ ಬಿರುಗಾಳಿಯ ಜೊತೆಗೆ ವಿಪರೀತ ಮಳೆಯೂ ಬಂದು ಸುಮಾರು 120 ಮನೆಗಳು ನಾಶವಾದವು 18 ಜನರು ಸತ್ತರು. ಕಳೆದ ೨೦ ವರ್ಷಗಳಿಂದ ಇಂತಹ ಬಿರುಗಾಳಿ ಮತ್ತು ಮಳೆ ಇಂದುವರೆಗೆ ಆಗಿಯೇ ಇರಲಿಲ್ಲವಂತೆ!

ಅಬಿಸಿನಿಯಾಚಕ್ರವರ್ತಿಗಳಿಗೆ ಧನಸಹಾಯ!

ಸದಚ್ಯುತರಾಗಿ ಇಂಗ್ಲಂಡಿನಲ್ಲಿ ನಾಶಮಾಡುತ್ತಿರುವ ಅಬಿಸೀನಿಯಾದೇಶದ ಸಾರ್ವಭೌಮರಿಗೆ ದಾರಿದ್ರ್ಯವೆಯ್ಯು ಹೆಚ್ಚು ಹೊಟ್ಟೆಬಟ್ಟೆಗಳಿಗೂ ಕೊರತೆಯುಂಟಾಗಿದೆಯಂತೆ! ಇದಕ್ಕಾಗಿ ಅಬಿಸೀನಿಯಾ ಅಸೋಸಿಯೇಷನ್‌ಸಂಸ್ಥೆಯವರು ದೇಶವಿದೇಶಗಳಿಂದ ಧನ ಸಹಾಯಪಡೆದು ಕಳುಹಿಸಿಕೊಡಬೇಕೆಂದು ಪ್ರಯತ್ನಿಸುತ್ತಾರೆ.

ಸಹಗಮನ

ನಹಾಸ್ ಎಂಬ ಊರಿನಲ್ಲಿ ತನ್ನ ಗಂಡನಮರಣವೆಂಬುದಾದ ದುಃಖವನ್ನು ಸಹಿಸಲಾರದೆ ಪತ್ನಿಯು ಗಂಡನ ದೇಹವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೊರಟಕೂಡಲೇ ತಾನೂ ಸಹ ಸಹಗಮನಮಾಡುವುದಾಗಿ ಅಲ್ಲಿದ್ದ ಜನರಿಗೆ ತಿಳುಹಿಸಿ ಅರಿಶಿನಬಟ್ಟೆಯನ್ನುಟ್ಟು ಹೆಣಿಗೆ ಕುಂಕುಮವನ್ನಿಟ್ಟುಕೊಂಡು ತನ್ನ ಎರಡು ಮಕ್ಕಳ ಸಮೇತ ಶವವನ್ನು ಹಿಂಬಾಲಿಸಿ ಅಲ್ಲಿ ಚಿತೆಗೆ ತಾನೇ ಅಗ್ನಿಯನ್ನಿಟ್ಟು ತನ್ನ ಮಕ್ಕಳನ್ನು ಮಾತ್ರ ಇತರರ ಸ್ವಾಧೀನಮಾಡಲಿಕ್ಕುವಿಲ್ಲದಕಾರಣ 7 ಮತ್ತು 6 ವರ್ಷದ ಎರಡು ಮಕ್ಕಳನ್ನೂ ಚಿತೆಯೊಳಕ್ಕೆಸೆದು ತಾನೂ ಧುಮುಕಿ ಭಸ್ಮವಾದಳು. ಈ ಘೋರಪ್ರಕರಣವನ್ನು ತಪ್ಪಿಸಬೇಕೆಂದು ಹೊರಟ ಪೋಲೀಸರು ತಲಪುವ ವೇಳೆಗೆ ಎಲ್ಲವೂ ಮುಗಿದಿದ್ದಿತು. ಅವರು ಅಲ್ಲಿದ್ದ 17 ಜನ ಗ್ರಾಮಸ್ಥರನ್ನು ಈ ಸಹಗಮನಕ್ಕೆ ಸಹಕಾರಿಗಳಾಗಿದ್ದರೆಂಬುದಕ್ಕಾಗಿ ದಸ್ತಗಿರಿಮಾಡಿರುತ್ತಾರೆ.

ಮನುಷ್ಯನನ್ನು ಹಾವು ನುಂಗಿತು!

ಉತ್ತರಭಾರತದ ಇಮ್ಲಿ ಎಂಬ ಸಂಸ್ಥಾನಕ್ಕೆ ಸೇರಿದ ರಂಗಪುರವೆಂಬ ಗ್ರಾಮದಲ್ಲಿ ಕಳೆದ ತಿಂಗಳು 10 ನೆಯ ತಾರೀಖಿನ ಸಾಯಂಕಾಲ ಒಬ್ಬ ರೈತನು ಹೊಲದಿಂದ ಮನೆಗೆ ಬರುತ್ತಿರುವಾಗ ವಿಶೇಷ ಮಳೆಬಂದುದರಿಂದ ಅವನು ಒಂದು ಮರದ ಬುಡದಲ್ಲಿ ಆಶ್ರಯಕ್ಕಾಗಿ ನಿಂತನು. ಮರದೃಷ್ಟದಿಂದ ಆ ಮರದಮೇಲಿದ್ದ ಒಂದು ಅಜಗರವು ಹೇಗೋ ಅವನನ್ನು ಆಕ್ರಮಿಸಿ ಮೇಲಕ್ಕೆಳೆದುಕೊಂಡು ನುಂಗತೊಡಗಿತು. ಇವನ ಆರ್ತನಾದವನ್ನು ಕೇಳಿದ ದಾರಿಗನೊಬ್ಬನು ಓಡಿಹೋಗಿ ಸುತ್ತುಮುತ್ತಿನಲ್ಲಿದ್ದ ರೈತರನ್ನು ಸಹಾಯಕ್ಕೆ ಕರೆದುಕೊಂಡು ಬರುವಷ್ಟರಲ್ಲಿಗೆ ಮನುಷ್ಯನನ್ನು ನುಂಗಿದ್ದ ಆ ಸರ್ಪವು ಮರಕ್ಕೆ ಸುತ್ತಿಕೊಂಡಿತ್ತು. ಸಹಾಯಕ್ಕೆಂದು ಬಂದವರು ಆ ಮನುಷ್ಯನನ್ನು ಇನ್ನೂ ಬದುಕಿಸಲು ಸಾಧ್ಯವಾಗಬಹುದೆಂಬಾಸೆಯಿಂದ ಹಾವನ್ನು ಕೊಂದರು. ಅವರ ಹೊಟ್ಟೆಯನ್ನು ಸೀಳಿ ನೋಡುವಲ್ಲಿ ನುಂಗಲ್ಪಟ್ಟ ಮನುಷ್ಯನ ಮೂಳೆಗಳೆಲ್ಲವೂ ಪುಡಿಪುಡಿಯಾಗಿ ಮುಖವು ಸಹ ಗುರ್ತಿಸಲು ಅಸಾಧ್ಯವಾಗಿತ್ತು. ಈ ಹಾವು 30 ಅಡಿಗಳ ಉದ್ದವಾಗಿತ್ತಂತೆ!

ಭಾರತದಲ್ಲಿ ನಾಂತಿಬೇಧಿ ಉಪದ್ರವ

ಈಗ ಭಾರತದ ಬ್ರಿಟಿಷ್ ಇಂಡಿಯಾ ಆಧಿಪತ್ಯಗಳಲ್ಲಿ ಕಾಲರಾ ಉಪದ್ರವವು ತಲೆದೋರಿದೆ. ಆದರಲ್ಲಿ ಸಂಯುಕ್ತಪ್ರಾಂತ್ಯದಲ್ಲಿ ಇದರ ಹಾವಳಿ ಅತಿಭಯಂಕರವಾಗಿದೆ. ಕಳೆದ ಕೆಲವು ವಾರಗಳಿಂದ ಸಹಸ್ರಾರು ಜನರು ಇದರ ಬಾಯಿಗೆ ತುತ್ತಾಗಿರುವರು. ಆದರ ಅಕ್ಕ ಪಕ್ಕದ ಆಧಿವತ್ಯಗಳಲ್ಲಿಯೂ ಈ ರೋಗವು ಹರಡಿದೆ. ಮಧ್ಯಪ್ರಾಂತಪ್ರೊಂದರಲ್ಲಿ ವಾರಕ್ಕೆ ಸಾರಕ್ಕೆ ಹೆಚ್ಚಾಗಿಯೂ ಪಂಜಾಬಿನಲ್ಲಿ 500-1000 ವರೆಗೂ, ಒರಿಸ್ಸಾದಲ್ಲಿ ನೂರಾರುಮಂದಿಯೂ ಈ ರೋಗಕ್ಕೆ ಬಲಿಬಿದ್ದಿರುತ್ತಾರೆ. ಮದರಾಸ್, ಬೀಹಾರ್ ಆಧಿಪತ್ಯದಲ್ಲೂ ಹೈದರಾಬಾದು ಸಂಸ್ಥಾನದಲ್ಲೂ ಈ ಸಾಂಕ್ರಾಮಿಕರೋಗವು ಹರಡಿದೆಯೆಂಬಸ್ಪಾದವಿದೆ. ಈ ದೇಶದಲ್ಲಿ ಸಾಮಾನ್ಯವಾಗಿ ವರ್ಷಕ್ಕೆ 2 ಲಕ್ಷ ಪ್ರಜೆಗಳು ಈ ರೋಗಕ್ಕೆ ತುತ್ತಾಗುತ್ತಾರೆ. ಕೆಲವು ವರ್ಷಗಳಲ್ಲಿ 5 ಲಕ್ಷಜನರು ಸತ್ತಿರುವುದೂ ಉಂಟು. ಸರ್ಕಾರದವರು ತೀವ್ರವಾದ ಪ್ರತೀಕಾರೋಪಾಯವನ್ನು ಕೈಗೊಳ್ಳದಿದ್ದಲ್ಲಿ ಈ ವರ್ಷವೂ ಭಯಂಕರ ಅನಾಹುತವಾಗುವುದೆಂದು ಯೋಚಿಸಲಾಗಿದೆ.

ಡಾ॥ ಹೂಸ್ಟಿಗ್ಗರವರೆಲ್ಲಿದ್ದಾರೆ?

ಜರ್ಮನಿಯು ಆಸ್ಟ್ರಿಯನ್ನಾಕ್ರಮಿಸುವ ಮೊದಲು ಆಸ್ಟ್ರಿಯಕ್ಕೆ ಛಾನ್ಸೆಲರಾಗಿದ್ದ ಡಾ॥ ಹೂಸ್ಟಿಗ್ಗರನ್ನು ಜರ್ಮನ್ನರು ಅವರ ಮನೆಯಲ್ಲೇ ಅವರನ್ನು ಸೆರೆಹಿಡಿದರು. ಅನಂತರ ಅವರನ್ನು ಲೀಪ್‌ಜಿಗ್‌ನಲ್ಲಿ ಎಲ್ಲೋಬಂಧನದಲ್ಲಿರಿಸಿ ಚಿತ್ರಹಿಂಸೆಗಳಿಗೆ ಗುರುಮಾಡಿರುತ್ತಾರೆಂದು ಪ್ರವಾದವಿದ್ದಿತು. ಈ ಹಿಂಸೆಗಳಲ್ಲಿ ಹೂಸ್ಟಿಗ್ಗರನ್ನು ಬಂಧಿಸಿರುವ ಕೊಠಡಿಯಲ್ಲಿ ಒಂದು ರೇಡಿಯೋ ಯಂತ್ರವನ್ನಿಟ್ಟು ನಾಜಿಗಳು ಅವರನ್ನು ಮನಸ್ಸಿಗೆ ಬಂದತೆ ಆ ಯಂತ್ರದ ಮೂಲಕ ಭಯಂಕರಿಸುತ್ತಿದ್ದರು. ಇದರಿಂದ ನೊಂದ ಅವರು ಯಂತ್ರವನ್ನು ಎರಡುಸಲ ಜೂರುಜೂರಾಗಿ ಒಡೆದರು. ಈಗ ಆ ಯಂತ್ರವನ್ನು ಮೇಲ್ಭಾವಣಿಯಲ್ಲಿ ಹುದುಗಿಸಿಟ್ಟು ಅವರ ಕೈಗೆ ಸಿಕ್ಕದಂತೆ ಮಾಡಿರುವರೆಂದು ಹೇಳಲಾಗಿದೆ. ಡಾ॥ ಹೂಸ್ಟಿಗ್ಗರನ್ನು ನಾಜಿಗಳು ಕೊಂದರೆಂದು ಒಂದುಸಲವೂ ಅವರು ವಿವಾಹ ಮಾಡಿಕ್ಕೊಂಡರೆಂದು ಮತ್ತೊಂದು ಸಲವೂ ಪ್ರಕಟವಾಗಿದೆ. ಅವರು ಏನಾಗಿರುವರೆಂಬ ವಿಚಾರಮಾತ್ರ ಯಾರಿಗೂ ತಿಳಿಯುವಂತಿಲ್ಲ. ನಾಜಿ ಸರ್ಕಾರವು ಗುಟ್ಟು ಹಾಗಿದೆ.

ಸ್ವೀಕಾರ.

ಧಾರವಾಡ ಡಿ॥ ಬಂಕಾಪುರ ತಾಲೂಕು ಕುಂಜೂರು ಗ್ರಾಮನಿವಾಸಿಗಳಾದ ಶ್ರೀಮಂತ ನಾಗನಗೌಡರ ಸೋದರಳಿಯ ಚಿ॥ ಚಂದ್ರಶೇಖರಗೌಡ ಗುಡ್ಡನಗೌಡ ಪಾಟೀಲ ಇವರಿಗೆ, ಶ್ರೀಮಂತ ಆಪ್ಪಾಸಾಹೇಬ ಖಾನಗೌಡ ದೇಸಾಯಿ ಇವರ ಬಂಧು ಶ್ರೀಮಂತ ಭರಮಗೌಡ ದೇಸಾಯಿ ಇನಾಮದಾರ ಬುಗಡಿಕಟ್ಟಿ ಇವರ ಪುತ್ರಿ ಚಿ॥ ಸೌ॥ ಪಾರ್ವತೀಬಾಯಿಯೆಂಬ ಕನ್ಯಾರತ್ನವನ್ನು ತಂದು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಕುಂದಗೋಳ ಪಂಚಗೃಹ ಜಂಗಮಮಠದ ಶ್ರೀ॥ಷ॥ಬ್ರ॥ ಪಟ್ಟೆದ ಸ್ವಾಮಿಗಳವರ ಆಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **5** ರೂಪಾಯಿಗಳು ಶ್ರೀಮಂತ ನಾಗನಗೌಡರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ॥ ಹಿರೇಹಡಗಲಿ ಗ್ರಾಮದ ವೇ॥ ಕೊಲೂರು ಲಿಂಬೆಕಾಯಿಮಠದ ತೋಟಿಯ್ಯನವರು ಮತ್ತು ಇದೇ ಗ್ರಾಮದ ಮಃ॥ ರಾ॥ ಕೊಟ್ರ ಹಾಲಪ್ಪನವರು ಶ್ರೀಮದುಜ್ಜಯಿನೀ ಜಗದ್ಗುರುಗಳವರಿಗೆ ಬಿನ್ನಹಮಾಡಿ ಮಾದಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ **1-4-0** ಯಂತೆ ಉಭಯರಿಂದಲೂ ತೆಗೆಯಿಸಿದ **2-8-0** ಗಳನ್ನು ವೇ॥ ಪುರಾಣಿಕಮಠದ ವಿರೂಪಾಕ್ಷಶಾಸ್ತ್ರಿಗಳದ್ವಾರಾ ತಲ್ಪಿರುತ್ತವೆ.

ಬೆಂಗಳೂರು ಸಿಟಿಯಲ್ಲಿರುವ ವೀರಶೈವ ಪತ್ರಿಕಾ ಸಂಪಾದಕರಾದ ಪಲ್ಲಿ ಸಿ. ಸಂಗಯ್ಯನವರ ಭಾವಮೈದುನ ಚಿ॥ ಎ. ಎಸ್. ನಂದೀಶ್ವರಯ್ಯ ಬಿ ಇ. ಎಂಬ ವರನಿಗೆ ನಂಜನಗೂಡು ತಾಲೂಕು ಹುಲ್ಲಹಳ್ಳಿಗ್ರಾಮದ ಮಃ॥ ರಾ॥ ಜವಳಿಅಂಗಡಿ ಸಿದ್ದಣ್ಣನವರ ಪುತ್ರಿ ಚಿ॥ ಸೌ॥ ರುದ್ರಾಂಬಾ ಎಂಬ ಪಥವನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **1** ರೂಪಾಯಿ ಪಲ್ಲಿ ಸಿ. ಸಂಗಯ್ಯನವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿ॥ ಚನ್ನಗಿರಿಟವ್ ನಿವಾಸಿಗಳಾದ ಮಃ॥ ರಾ॥ ಟಿ. ಎಸ್. ವೀರಭದ್ರಪ್ಪನವರ ಪೌತ್ರಿ ಚಿ॥ ಸೌ॥ ಗಿರಿಜಮ್ಮನನ್ನು ಬಳ್ಳಾರಿ ಡಿ॥ ಕೊಟ್ಟೂರು ಕಟ್ಟೆ ಮನೆ ಶೆಟ್ರು ಚಿ॥ ಭದ್ರಶೆಟ್ಟಿ ಗುರುಸಿದ್ಧಪ್ಪನಿಗೆ ಕೊಟ್ಟು ನೆರವೇರಿಸಿದ ನಿವಾಹಸಮಯದಲ್ಲಿ ಪರನಕಡೆಯವರು ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **2** ರೂಪಾಯಿಗಳು ವೇ॥ ಎಚ್. ವಿ. ಗುರಸ್ವಾಮಯ್ಯನವರು ಚನ್ನಗಿರಿ ಇವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ಡಿ॥ ಬಿಡದಿ ಗ್ರಾಮದಲ್ಲಿರುವ ಮಃ॥ ರಾ॥ ಚನ್ನವೀರಪ್ಪನವರ ಪುತ್ರ ಚನ್ನಪ್ಪನವರ ಪುತ್ರಿ ಚಿ॥ ಸೌ॥ ನಾಗಾಂಬಾ ಎಂಬ ಕನ್ಯೆಯನ್ನು ಸಂತೇಕೋಡ ಹಳ್ಳಿ ಮಃ॥ ರಾ॥ ಪ್ರಭುಶೆಟ್ಟರ ಪುತ್ರ ಚಿ॥ ನಂಜಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **2** ರೂಪಾಯಿಗಳು ಆಚಾರ್ಯ ತತ್ವಪ್ರಕಾಶಕ ಬಿ. ಸಿ. ರೇವಣ್ಣಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಜಮಖಂಡಿ ಸ್ಟೇಟ್ ಕುಂದಗೋಳ ಟವ್ನ ನಿವಾಸಿಗಳಾದ ಮಃ॥ ರಾ॥ ಪಲ್ಲೇದ ಗುರಪ್ಪನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **1** ರೂಪಾಯಿಯು ಹಿರೇಮಠದ ನೀಲಕಂಠಯ್ಯನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಪರಶುರಾಮ ಮತ್ತು ರೇಣುಕೆ

ಲೇಖಕರು—ಕನ್ನಡಕನಿ, ಆಸ್ಥಾನವಿದ್ವಾ ಆನವಟ್ಟಿ ರಾಮರಾಯರು.

ಪ್ರತಿಯೊಂದು ಸಂಸಾರದಲ್ಲಿಯೂ ಮಾತಾಪಿತೃಗಳು ತಮ್ಮ ವಂಶಾಭಿವೃದ್ಧಿಯನ್ನು ಬಯಸುತ್ತಿರುವುದುಂಟಷ್ಟೆ. ಇಂತಹ ವಂಶಾಭಿವೃದ್ಧಿಗೆ ಮಕ್ಕಳೇ ಕಾರಣ. ಈ ಲೋಕದಲ್ಲಿ ಒಬ್ಬರು ಮತ್ತೊಬ್ಬರನ್ನು ನೋಡಿ ತಮಗೆ ಪುತ್ರಸಂತಾನವಾಗಲಿಲ್ಲವಲ್ಲ ಎಂದು ಮರುಗಿ ಕೊರಗುತ್ತಿರುವುದನ್ನು ಸದಾ ಕಾಣುತ್ತಿರುವೆವು. ಇದಕ್ಕಾಗಿ ಜನನೀಜನಕರು ಶಾಸ್ತ್ರವಿಧಿಯಂತೆ ವ್ರತನಿಯಮಾದಿ ಕರ್ಮಗಳನ್ನು ಕೈಕೊಂಡು ಭಗವಂತನನ್ನು ನಿಜವಾದ ಭಕ್ತಿಯಿಂದ ಬೇಡಿಕೊಂಡು ಸ್ವಾಮಿಯ ಕರುಣವನ್ನು ಪಡೆಯಲೋಸುಗ ಬಹು ಪ್ರಯಾಸಪಡುತ್ತಾ, ನಿಶ್ಚಿತಮನೋದಾರ್ಢ್ಯದಿಂದಲೂ ವ್ರತಾದಿಗಳಿಂದಲೂ ದೇಹದೋಷನಿಯನ್ನು ಮಾಡಿಕೊಳ್ಳುತ್ತಾ, ಎಂದಿಗೆ ತಮ್ಮ ಮನೋರಥವು ಈಡೇರುವುದೆಂಬ ಭಾವದಿಂದ ವರ್ತಿಸುತ್ತಿರುವುದನ್ನು ನಾವು ಸದಾ ನೋಡುತ್ತಲೇ ಇರುವೆವು.

ತಂದೆಯು ಸುಪುತ್ರನಾದರೆ ಸಾಕು ಎಂದು ಬಯಸುವನು. ಏಕೆಂದರೆ, ಜನಿಸುವ ಸುತನು ಯೋಗ್ಯನೆಂದೆನಿಸಿ ವಿಖ್ಯಾತನಾದರೆ ಇಹದಲ್ಲಿ ತಂದೆಗೆ ಕೀರ್ತಿಯು ಲಭಿಸುವುದಲ್ಲದೆ, ವೃದ್ಧಾಪ್ಯದಲ್ಲಿ ತನ್ನನ್ನು ಪರಿಪಾಲಿಸಿಕೊಂಡು ಬರಲು ತುಂಬ ಸಹಾಯಕನಾಗಿದ್ದು, ಆತನು ಇಹಸುಖವಿದೂರನಾದಮೇಲೆಯೂ ತನ್ನನ್ನು ಪುನ್ನಾಮನರಕದ ಯಾತನೆಗಳಿಂದ ಕಾಪಾಡುವನೆಂದು ಯೋಚಿಸಿ ಪುತ್ರನಾದರೆ ಸಾಕೆಂದು ಬಯಸುವನು. ಹೆಂಡತಿಯಾದವಳು ಪತಿಯ ಮನೋಗತದಂತೆ ವರ್ತಿಸುತ್ತಾ, ಬಂಜೆಯೆಂಬ ಹೆಸರು ಹೋಗಲಾಡಿಸಿಕೊಂಡು ಪತಿಕುಲೋದ್ಧಾರಕ್ಕಾಗಿ ಬಯಸುತ್ತಾ ಪುತ್ರನ ಬಾಲಲೀಲೆಗಳನ್ನು ನೋಡಿ ಆನಂದಪಡುವ ಭಾಗ್ಯವೆಂದಿಗೆ ಲಭಿಸುವುದೋ ಎಂದು ಹಾರೈಸುತ್ತಿರುವಳು. ಒಂದುವೇಳೆ ಹೆಣ್ಣಿಂ ಮಗಳಾದಲ್ಲಿ, ಆವಳು ವಯೋವಂತಳಾದಮೇಲೆ ತನ್ನ ಪತಿಯ ಗೃಹಕ್ಕೆ ತೆರಳಿ, ಪತಿಸೇವಾಧುರಂಧರಳಾಗಿ, ಪತಿವ್ರತಾಶಿರೋಮಣಿಯೆಂದೆನಿಸಿಕೊಂಡು, ಉಭಯ ಕುಲಕ್ಕೂ ರತ್ನಪ್ರಾಯಳಾಗಿರುವಳೆಂಬ ಖ್ಯಾತಿಗೆ ಪಾತ್ರಳಾಗಿ ಬಾಳಿದರೆ ಸಾಕು, ಎಂದು ಬಯಸುವಳು ಇಂತಹ ಮಕ್ಕಳ ಪ್ರಾದುರ್ಭಾವವನ್ನು ಬಯಸಲು ಕೆಲವು ನಿಯಮಗಳನ್ನು ಅನುಸರಿಸಿ, ಸುತನು ನಡೆಯುವ ಮಾರ್ಗವನ್ನು ಕುರಿತು ಹೇಳಬೇಕಾಗಿದೆ

ಎಲೈ ಕುಮಾರನೆ! ಕೇಳು ಪ್ರಪಂಚದಲ್ಲಿ ಜೀವಿಸುತ್ತಿರುವ ಪ್ರಾಣಿಗಳು ನಡೆಸುತ್ತಿರುವ ಕಾರ್ಯಗಳನ್ನು ನೋಡಿ, ನಿನ್ನ ಆಜ್ಞಾನವನ್ನು ದೂರಮಾಡಿಕೊಂಡು ಪಿತನು ನಿನಗೆ ಬೋಧಿಸುವ ಸದ್ಬೋಧಾಮೃತವನ್ನು ಪಾನಮಾಡಿ ಆದರಂತೆಯೇ ನೀನು ನಡೆಯುತ್ತಿರು. ಅರಣ್ಯದಲ್ಲಿ ಸಂಚರಿಸುತ್ತಾ, ಬಲವು ಕುಗ್ಗಿ ಜರಾವಸ್ಥೆಯಲ್ಲಿರುವ ಮುದಿ ಬಕಪಕ್ಷಿಯನ್ನು ನೋಡು, ಅದು ತನ್ನ ಮರಿಹಕ್ಕಿಯನ್ನು ತನ್ನ ಹೆಗಲಿನಮೇಲೆ ಹೊತ್ತುಕೊಂಡು ಹೋಗಿ ಗುಟುಕುಕೊಡುತ್ತಾ ಕಾಪಾಡಿಕೊಂಡು ಬರುತ್ತಿರುವುದು ಇವರಂತೆಯೇ ಮಾನವಜನ್ಮವನ್ನು ಧರಿಸಿರುವ ಸುತನು ತಂದೆಗೆಮಾಡುವ ಸೇವೆಯೂ, ತೋರಿಸುವ ಭಕ್ತಿಯೂ, ವಿನಯವೂ ಇವುಗಳನ್ನು ಯೋಚಿಸಿದರೆ, ಕಮಲಗಳು ಬೆಳೆದ ತೋಟದಿಂದ ಹೊರಡುತ್ತಿರುವ ಮನೋಹರವಾದ ಪರಿಮಳಕ್ಕೆ ಸಾಟಿಯಾಗಿರುವುದೆಂದು ತಿಳಿ

ಇವುಗಳನ್ನು ನಾವು ಹಾಗೆಯೇ ಪರ್ಯಾಲೋಚಿಸಿದುದಾದರೆ ಮಾತಾಪಿತೃಗಳು ಮಗನ ನೇತ್ರಗಳಿಗೆ ಕಾಣಿಸಿಕೊಳ್ಳುವ ಪ್ರತಿದೇವರಿಂದಲಾಗಿ ಭಾವಿಸತಕ್ಕುದಾಗಿದೆ ಸುತನಾದವನು ಮಾತಾಪಿತೃಗಳ ಸೇವೆಯನ್ನು ಮಾಡಿ ದೇಹಸಾರ್ಥಿಕ್ಯವನ್ನುಂಟುಮಾಡಿಕೊಳ್ಳಲು ಅವರನ್ನು ಕಾಪಾಡಿಕೊಂಡು ಬರುವುದೇ ಅವನ ಮುಖ್ಯ ಕರ್ತವ್ಯವೆಂದು ಭಾವಿಸಬೇಕು. ಎಲೈ ಕುಮಾರನೆ! ನಿನ್ನ ದೇಹದಾಯಕನಾದ ಜನಕನಿಗೂ, ನಿನ್ನನ್ನು ಗರ್ಭದಲ್ಲಿ ಹೊತ್ತು, ಹೆತ್ತು ಕಾಪಾಡಿದ ಜನನಿಗೂ ಕಾಲಾನುಸಾರವಾಗಿ ಸೇವೆಗೈಯುವ ಮಾರ್ಗದಲ್ಲಿ ನಡೆಯುತ್ತಿರುವುದೇ ನಿನ್ನ ಅಭ್ಯುದಯಕ್ಕೆ ದಾರಿಯು ಈ ಖ್ಯಾತಿಯನ್ನು ಪಡೆಯುವುದಕ್ಕಾಗಿಯೇ ಮಾತಾಪಿತೃಗಳ ಸೇವಾಸಕ್ತನಾಗಿರುವುದೇ ಸುತನ ಕರ್ತವ್ಯವು. ಅವರು ನಿಜ ಪುತ್ರನ ಪುರೋಭಿವೃದ್ಧಿಗಾಗಿಯೇ ಹೇಳುವ ಉಕ್ತಿಗಳನ್ನು ಸುತನು ಕಿವಿಗೊಟ್ಟು ಕೇಳಿ, ತನ್ನ ಸೌಖ್ಯಕ್ಕೆ ಕುಂದುಂಟುಮಾಡಿಕೊಳ್ಳದಂತೆ ರಾರಾಜಿಸಲು ಹಿತೈಷಿಯಾಗಿ ಆ ಜನನೀಜನಕರನ್ನು ಸೇವಿಸುತ್ತಿರಬೇಕು.

ನೀರಿನ ಕೈವಾವಸ್ಥೆಯಲ್ಲಿ ಅಜ್ಞಾನದಿಂದ ಮಲಗಿಕೊಂಡಿದ್ದ ಕಾಲದಲ್ಲಿಯೂ, ಯೌವನಮದದಿಂದ ಮುಂದೋರದೆ ನಡೆಯುತ್ತಿರುವ ವೇಳೆಯಲ್ಲಿಯೂ ನಿನ್ನ ಈ ಅವಸ್ಥೆಗಳಲ್ಲಿ ನಿನಗೆ ಎಂತಹ ಸಹಾಯಸಂಪತ್ತುಗಳನ್ನೆಳವಡಿಸಬೇಕೋ ಅವುಗಳನ್ನು ಒದಗಿಸಿಕೊಟ್ಟು ಸಹಾಯಗಳನ್ನು ಮಾಡಿದ ಕಾಲಗಳಲ್ಲಿಯೂ, ತಂದೆಯು ಮಾಡಿದ ಆ ಮಹೋಪಕಾರಗಳನ್ನು ಯೋಚಿಸಿಕೊಂಡು, ಆತನ ವೃದ್ಧಾಪ್ಯದಲ್ಲಿ ಕಾವಾಡಿಕೊಂಡು ಬರುವುದೇ ನಿನ್ನ ಕರ್ತವ್ಯವು. ತಂದೆಗೆ ವಯೋಧರ್ಮದಿಂದ ಕಿವಿಮಾಟವು ಕಮ್ಮಿಯಾಗಿ, ಕಾಲಬಲವು ಕುಗ್ಗಿ, ಸೌಖ್ಯವೇನೆಂಬುದನ್ನೇ ಮರೆತುಬಿಡುತ್ತಾ, ಕಂಠಸ್ವರವು ಕುಂದಿ, ಇಹಲೋಕವನ್ನು ಬಿಡುವ ಕಾಲವು ಒದಗಿರುವ ವೃದ್ಧಾಪ್ಯದ ದೆಶೆಯಲ್ಲಿ ನಾನಾವಿಧವಾದ ವೇಷಗಳನ್ನಾಂತಿರುವುದನ್ನು ನೋಡಿ, ಆತನಿಗೆ ಸಹಾಯಮಾಡಬೇಕಾಗಿರುವುದು. ಎಲೈ ಮಗನೇ! ನೀನು ಈ ರೀತಿಯಲ್ಲಿ ಪಿತೃವನ್ನು ಪರಿಪಾಲಿಸಿಕೊಂಡು ಬರುತ್ತಿದ್ದರೆ, ನಿನ್ನ ತಂದೆಯಂತೆಯೇ ನೀನೂ ಬಾಲ್ಯ, ಯೌವನ, ಕೌಮಾರ ಮತ್ತು ವೃದ್ಧಾಪ್ಯಗಳೆಂಬ ವಿವಿಧವೇಷಗಳನ್ನು ಧರಿಸಿ ಸುಖದುಃಖಾದಿಗಳನ್ನು ಅನುಭವಿಸಬೇಕಾಗಿ ಬರುವುದರಿಂದ ಹಿಂಜರಿಯದಂತೆ ನಿಜವಾದ ಮಗನೆಂದು ತೋರ್ಪಡಿಸಿಕೊಳ್ಳಲು ತಂದೆಗೆ ಕಾಲೋಚಿತವಾದ ಸಹಾಯಗಳನ್ನು ಮಾಡುವುದೇ ನಿನ್ನ ಪ್ರಥಮಕರ್ತವ್ಯವೆಂದು ತಿಳಿದು ನಡೆದರೆ, ಇಹದಲ್ಲಿ ಕೀರ್ತಿಯನ್ನೂ, ಪರದಲ್ಲಿ ನೋಕ್ಷವನ್ನೂ ಹೊಂದಿ ರಾರಾಜಿಸುವುದರಲ್ಲಿ ಸಂಶಯವಿಲ್ಲವೆಂದು ಹೇಳಲು ಪರಶುರಾಮನೇ ಒಂದು ದೃಷ್ಟಾಂತವಾಗಿದಾನೆ.

ಹಿಂದೆ ಸಪ್ತರ್ಷಿಗಳಲ್ಲಿ ಪ್ರಸಿದ್ಧಿಹೊಂದಿದ ಜಮದಗ್ನಿ ಋಷಿಯ ಕುಮಾರನೇ ಆ ಪರಶುರಾಮನು. ಈ ಜಮದಗ್ನಿಋಷಿಯು ದುಃಖಪೂರಿತವಾದ ಈ ಪ್ರಪಂಚದ ಹಂಬಲನ್ನೇ ಬಿಟ್ಟು, ಪರಮಾತ್ಮಸ್ವರೂಪಿಯು ವಿಚಿತ್ರ ವೈಭವಗಳನ್ನು ಕುರಿತು ಯೋಚಿಸುತ್ತಾ, ಪರಮಾತ್ಮನನ್ನು ಚಿಂತಿಸುತ್ತಾ ಒಂಟಿಯಾಗಿ ಅರಣ್ಯದಲ್ಲಿ ಯತ್ಕಾಶ್ರಮವನ್ನು ವಹಿಸಿ ಜೀವಿಸಿಕೊಂಡಿದ್ದನು. ಈತನು ಪ್ರಥಮದಲ್ಲಿ ವೇದಾಧ್ಯಾಪನವನ್ನು ಮಾಡಿ ಯೋಗನಿಷ್ಠನಾಗಿ ವರ್ತಿಸುತ್ತಾ ಅನೇಕ ವರುಷಗಳನ್ನು ಕಳೆದನು. ಅನಂತರ ದೇಶಸಂಚಾರಾರ್ಥವಾಗಿ ಹೊರಟು ಕೊನೆಗೆ ಪರಂಜಿತು ಎಂಬ ಮಹಾರಾಜನ ರಾಜಧಾನಿಗೆ ಹೋದನು. ಆ ರಾಜನಿಗೆ ರೇಣುಕೆ ಎಂಬ ಒಬ್ಬ ಮಗಳಿದ್ದಳು. ರಾಜನು ಈ ಮಹಾತ್ಮರ ಸಂದರ್ಶನಾರ್ಥವಾಗಿ ಹೋಗಿ ಅವರನ್ನು ತನ್ನ ಅರಮನೆಗೆ ಬಹುಮರ್ಯಾದೆಯಿಂದ ಬರಮಾಡಿಕೊಂಡು ಮೇಲೆ, ರಾಜನ ಸನ್ನಿಧಿಯಲ್ಲಿ ನಿಂತಿದ್ದ ರೇಣುಕೆಯನ್ನು ನೋಡಿ ಆಕೆಯನ್ನು ತಾನು ವಿವಾಹಮಾಡಿಕೊಳ್ಳಬೇಕೆಂಬ ಇಂಗಿತವನ್ನು ರಾಜನಿಗೆ ತಿಳುಹಿಸಿದನು ಅನಂತರ ಭೂಮಿಪನು ಋಷಿಯ ಮನೋಗತದಂತೆ ರೇಣುಕೆಯೊಂ ಒಪ್ಪಿದಮೇಲೆ ವಿವಾಹಕಾರ್ಯಗಳನ್ನು ವಿಜೃಂಭಣೆಯಿಂದ ಶಾಸ್ತ್ರೋಕ್ತವಾಗಿ ನಡೆದನಂತರ ಋಷಿಯು ಹೆಂಡತಿಯಾದ ರೇಣುಕೆಯನ್ನು ಕರೆದುಕೊಂಡು ತನ್ನ ಆಶ್ರಮಕ್ಕೆ ತೆರಳಿದನು. ರೇಣುಕೆಯಾದರೋ, ಒಳ್ಳೆ ನಡತೆಯುಳ್ಳವಳಾಗಿಯೂ ನಂಬಿಕೆಗೆ ಪಾತ್ರಳಾಗಿಯೂ, ಪತಿಶುಶ್ರೂಷೆಯಲ್ಲಿ ತುಂಬ ಸಹಾಯಕಳಾಗಿಯೂ ಇದ್ದಳು ರೇಣುಕೆಯು ಅಗರ್ಭಶ್ರೀಮಂತಳಾಗಿದ್ದು, ಸುಜಾನುಭವವನ್ನು ಪಡೆದಿದ್ದರೂ ಕಷ್ಟಕರವಾದ ಅರಣ್ಯವಾಸಿಯಾಗಿದ್ದಾಗ್ಲೂ ಲೇಶಮಾತ್ರವೂ ವ್ಯಸನಪಡದೆ ಪತಿಶುಶ್ರೂಷಾಸಕ್ತಳಾಗಿ ತನ್ನ ಸೇವಾವೃತ್ತಿಯಿಂದ ಪತಿಸೌಖ್ಯದ ನಿರತಳಾಗಿರುತ್ತಿದ್ದಳು.

ರೇಣುಕೆಯು ತಾನು ವಾಸಿಸುತ್ತಿದ್ದ ಆಶ್ರಮದ ಸಮೀಪದಲ್ಲಿಯೇ ಪ್ರವಹಿಸುತ್ತಿದ್ದ ಒಂದು ನದಿಗೆ ಸ್ನಾನಾರ್ಥವಾಗಿ ಹೋಗಿದ್ದಾಗ್ಲೆ, ಮೈತ್ರಿಕಾವತೀ ದೇಶಕ್ಕೆ ರಾಜನಾದ ಚಿತ್ರರಥ ಎಂಬುವನನ್ನು ನೋಡಿ ಮೋಹಿತಳಾಗಿ ಆತನ ಸೌಂದರ್ಯಕ್ಕೆ ವಂಬ ಬಲೆಗೆ ಸಿಕ್ಕಿಬಿದ್ದಳು. ಈಕೆಯು ಅನಂತರ ಕಲ್ಮಷಹೃದಯಳಾಗಿ ಆಶ್ರಮಕ್ಕೆ ಹಿಂದಿರುಗಿಹೋದಳು. ಇತ್ತ ಜಮದಗ್ನಿಋಷಿಯು ರೇಣುಕೆಯು ಬರುವ ಕ್ಲಪ್ತಕಾಲವು ಮೀರಿರಲು, ಹಾಗೆಯೇ ಈಕೆಯ ಮುಖವನ್ನು ನೋಡಿ ತನ್ನ ಜ್ಞಾನದೃಷ್ಟಿಯಿಂದ ಆಕೆಯ ದುರಾಲೋಚನೆಯ ಕಾರ್ಯವನ್ನರಿತು, ಪಾತಿವ್ರತ್ಯಕ್ಕೆ ಕಳೆಯು ಕುಂದಿರುವುದನ್ನು ತಿಳಿದು, ಅತಿ ಕೋಪಾವೇಶಯುಕ್ತನಾಗಿ ತನ್ನ ಪುತ್ರರನ್ನು ಕರೆದು ಎಲೈ ಮಕ್ಕಳಿರಾ! ನಿಮ್ಮ ಮಾತೆಯ ಮನಸ್ಸು ಈಗ ಕಲುಷಿತವಾಗಿರುವುದರಿಂದ ಈಕೆಯ ಜೀವಿತವು ಅತ್ಯಂತ ಹೇಯವಾಗಿದೆ ಆದುದರಿಂದ ನಿಮ್ಮ ತಾಯಿಯನ್ನು ಈಗಲೇ ಕತ್ತರಿಸಿಹಾಕಿ, ಎಂದು ಆಜ್ಞೆ ಮಾಡಿದನು ಈ ಮಾತುಗಳನ್ನು ಕೇಳಿದ ಪುತ್ರರೆಲ್ಲಾ ತುಂಬ ಆಶ್ಚರ್ಯಯುಕ್ತರಾಗಿ, ಮಾತನಾಡದೆ ಸುಮ್ಮನೆ ನಿಂತುಕೊಂಡರು ವಾಚಕರೆ! ಇವರು ಆಗ ತಮ್ಮ ಮಾತೆಯನ್ನು ಕೈಯಾರ ಛೇದಿಸಲು ಸಾಧ್ಯವೇ? ಕ್ರೂರತರವಾದ ಇಂತಹ ಭೀಕರಕಾರ್ಯವನ್ನು ಮಾಡಲು ಮಕ್ಕಳಲ್ಲಿ ಯಾರೂ ಒಪ್ಪಲಿಲ್ಲ ಈ ಸ್ಥಿತಿಯನ್ನು ನೋಡಿದ ಜಮದಗ್ನಿಯು—ಎಲೈ ಪರಶುರಾಮನೆ! ನಿನ್ನ ಮಾತೆಯ ಸ್ಥಿತಿಯನ್ನು ನಿನಗೂ ತಿಳಿಸಿರುವೆನಷ್ಟೆ. ಈಗ ನನ್ನ ಆಜ್ಞೆಯಂತೆ ಈಕೆಯನ್ನು ಕೊಂದುಹಾಕುವೆಯ? ಎಂದು ಒತ್ತಿ ಪ್ರಶ್ನೆಮಾಡಿದನು ಪರಶುರಾಮನು—ಜನಕನೇ! ನಿನ್ನ ಆಜ್ಞೆಯನ್ನು ನಾನು ಶಿರಸಾವಹಿಸಲೇ ಬೇಕು, ಆಗಲಿ ಎಂದು ಹೇಳಿ ತನ್ನ ಮನಸ್ಸಿನಲ್ಲಿ ತನ್ನ ದೇಹವನ್ನು ಹೊತ್ತು ಹೆತ್ತು ಕಾಪಾಡಿದ ಮಾತೆಯನ್ನು ಕೊಲ್ಲುವುದು ಸಮ್ಮತವಲ್ಲದುದಾಗಿದೆ ಮಾತೆಯು ನನಗೆ ಮಾಡಿದ ಅಪರಿಮಿತವಾದ ವರ್ಣಿಸಲಳವಲ್ಲದ ಸಹಾಯಗಳು ಸಹ ಮನಸ್ಸಿಗೆ ಪ್ರತಿಬಂಧಕಗಳಾಗಿರುವುವು. ಏನುಮಾಡಲಿ! ತಂದೆಯಮಾತನ್ನು ಮೀರಲಾರೆ, ಎಂಬುದಾಗಿ ಮನಸ್ಸಿನಲ್ಲಿ ಬಹಳವಾಗಿ ಚಿಂತಿಸಿ, ನನ್ನಲ್ಲಿ ಜನಕನಾಜ್ಞಾಭಂಗವೆಂಬ ಕಲ್ಮಷವು ನಿಲ್ಲದಂತೆ ಮಾಡಿಕೊಂಡು, ಸುಪುತ್ರನೆಂಬ ಖ್ಯಾತಿಯನ್ನು ಮಾತೆಯ ಮನಸ್ಸಿಗೆ ಬರುವಂತೆಯೂ ಮಾಡಿಕೊಳ್ಳಬೇಕೆಂದು ದಿವ್ಯಾಲೋಚನೆಯನ್ನು ಮಾಡಿ, ತಂದೆಯನ್ನು ಕುರಿತು—ಜನಕನೆ! ನಿನ್ನವಾಕ್ಯವೇ ವೇದವಾಕ್ಯವು ನಿನ್ನನ್ನೇ ನಾನು ನಂಬಿರುವಾಗ್ಗೆ ನನಗೆ ಮುಂದಕ್ಕೆ ಯಾವ ಕೊರತೆಯೂ ಬಾರದೆಂದು ನಂಬಿರುವೆನು ಸುತನಾದ ನನ್ನ ಈ ದೇಹವು ನಿನ್ನ ದೇಹದ ಒಂದು ಭಾಗವಾಗಿರುವಾಗ್ಗೆ ನಾನು ಹೇಳಕಕ್ಕುದೇನಿದೆ? ಇದೋ ನಿನ್ನ ಆಜ್ಞೆಗೆ ಸಿದ್ಧನಾಗಿರುವೆನು, ಎಂದು ಹೇಳಿ ತಾಯಿಯ ಶಿರಚ್ಛೇದನಮಾಡಿದನು. ಇದನ್ನು ನೋಡಿದ ತಂದೆಗೆ ಬಹು ಸಂತೋಷವಾಯಿತು ಅನಂತರ ತಂದೆಯು ಮಗನನ್ನು ನೋಡಿ—ಸುಪುತ್ರನೇ! ನನ್ನ ಅಣತಿಗೂ, ನಿನ್ನ ಮನೋದಾರ್ಢ್ಯಕ್ಕೂ ಲೇಶವೂ ಕುಂದುಂಟುಮಾಡದ ರೀತಿಯಲ್ಲಿ ಸುತನಾದ ನಿನ್ನ ಕರ್ತವ್ಯವನ್ನು ನಡಿಸಿದುದನ್ನು ನೋಡಿ ನನ್ನ ಸಂತೋಷಕ್ಕೆ ಪಾರವೇ ಇಲ್ಲ. ನೀನೇ ನನಗೆ ನಿಜವಾದ ಪುತ್ರನು. ನಿನ್ನ ಮನೋಭಿಲಾಷೆಯೇನಿದ್ದರೂ ಹೇಳು ಈಗ ನಾನು ನಡೆಸಿಕೊಡುವೆನು, ಪರಶುರಾಮನು—ಪಿತನೆ! ಜನಕನ ವಾಕ್ಯವು ವೇದಸದೃಶವೆಂದು ನಂಬಿ ನನ್ನ ಕರ್ತವ್ಯವನ್ನು ನಡೆಸಿರುವೆನು. ಸ್ವಾರ್ಥತೆಗಾಗಿ ನಾನು ಏನೂ ಬೇಡುವ ವನಾಗಿಲ್ಲ ನಮ್ಮ ತಾಯಿಯನ್ನು ಬದುಕಿಸಿಕೊಡಬೇಕಾದುದೊಂದೇ ನನ್ನ ನಿರ್ಮಲಚಿತ್ತದಲ್ಲಿ ಅವಿರ್ಭವಿಸಿರುವ ಸಮೀಚೀನವಾದ ಈ ಯೋಜನೆಯು. ಮತ್ತೇನೂ ನನಗೆ ಬೇಕಾಗಿಲ್ಲ. ಜಮದಗ್ನಿಯು-ಪುತ್ರನೆ! ನಿನ್ನ ಕರ್ತವ್ಯವನ್ನು ನನ್ನ ಆಜ್ಞೆಯಂತೆ ಮನಃಪೂರ್ವಕವಾಗಿ ನಡೆಸಿರುವುದರಿಂದ ನಿನ್ನ ಮನೋಭೀಷ್ಟವನ್ನು ನಡೆಸಿಕೊಡುವುದು ಈಗ ನನ್ನ ಕರ್ತವ್ಯವಾಗಿರುವುದು, ಎಂದು ಹೇಳಿ

ಸ್ವಾಮಿಯನ್ನು ತನ್ನ ಯೋಗಸಾಮರ್ಥ್ಯದಿಂದ ರೇಣುಕೆಗೆ ಜೀವದಾನಮಾಡಿದನು. ಆತರ ಪರಶುರಾಮನು ಎಚ್ಚರವಾದ ತನ್ನ ಮಾತೆಯ ಪಾದಪದ್ಮಂಗಳಿಗೆ ನಮಸ್ಕರಿಸಿ—ಎಲೌ ತಾಯೆ! ನೀನು ಮಾಡಿದ ಅಜ್ಞಾನದ ಪಾಪಕಾರ್ಯಕ್ಕೆ ತಕ್ಕ ಪ್ರಾಯಶ್ಚಿತ್ತವು ಲಭಿಸಿ, ಕೊನೆಗೆ ಜೀವಿತಳಾಗುವಂತೆ ನಿನ್ನ ಪತಿಯೇ ಮಾಡಿರುವಾಗ್ಗೆ ನಿನಗೆ ಯಾವ ದೋಷವೇನೂ ಇರುವುದಿಲ್ಲ, ಎಂದು ಬಹಳವಾಗಿ ಬೇಡಿಕೊಂಡು, ಕೊನೆಗೆ ತಂದೆಯ ಪೂರ್ಣಾಶ್ರೀತಿಗೆ ಪಾತ್ರನಾದನು. ಈ ಮಾತುಗಳನ್ನು ಹೇಳಿ, ಪರಶುರಾಮನು—ಜನಕನೇ! ನನ್ನ ಮಾತೆಯನ್ನು ಕೊಂದ ಪಾಪಕಾರ್ಯಕ್ಕೆ ಪ್ರಾಯಶ್ಚಿತ್ತವೇನೆಂಬುದನ್ನು ದಯೆಮಾಡಿ ಆಜ್ಞೆಕೊಡಿಸಬೇಕು, ಎನಲು ಜಮದಗ್ನಿ—ಕುಮಾರನೆ! ನೀನು ಪುಣ್ಯಸ್ಥಳಗಳಿಗೆ ಹೋಗಿ, ದೇಹಶುದ್ಧತೆಯನ್ನು ಪಡೆಯಲು ತೀರ್ಥಯಾತ್ರೆಯನ್ನು ಮಾಡಿಕೊಂಡು ಬಾ, ಎಂಬುದಾಗಿ ಹೇಳಿದನು. ಆನಂತರ ಪರಶುರಾಮನು ಆಶ್ರಮವನ್ನು ಬಿಟ್ಟು ಮಾತಾಪಿತೃಗಳ ಆಜ್ಞಾಪ್ರಕಾರ ತೀರ್ಥಯಾತ್ರೆಗೆ ಹೊರಟನು.

ಇತ್ತ ಕಾರ್ತವೀರ್ಯನೆಂಬ ಮಹಾರಾಜನು ಜಮದಗ್ನಿ ಋಷಿಯ ಆಶ್ರಮಕ್ಕೆ ಹೋಗಿ, ಋಷಿಯಿಂದ ವಿಶೇಷ ಮರ್ಯಾದೆಯನ್ನು ಹೊಂದಿ ಆಶ್ರಮದಲ್ಲಿ ಕಟ್ಟಿಕಿದ್ದ ಋಷಿಯ ಗೋವನ್ನು ಬಲಾತ್ಕಾರದಿಂದ ತೆಗೆದುಕೊಂಡು ಹೋದನು. ಕಾಲದಲ್ಲಿ ಪರಶುರಾಮನು ತಂದೆಯ ಆಜ್ಞೆಯ ಪ್ರಕಾರ ಕ್ಷೇತ್ರಗಳ ಯಾತ್ರೆಯನ್ನು ಮಾಡಲು ಹೋಗಿದ್ದು ಆಗತಾನೆ ತಂದೆಯ ಸನ್ನಿಧಿಗೆ ಬಂದ ಮೇಲೆ ಆಶ್ರಮದಲ್ಲಿ ನಡೆದ ವಿಷಯಗಳನ್ನೆಲ್ಲಾ ತಿಳಿದು ಕೋಪಾವೇಶವುಳ್ಳವನಾಗಿ, ತಂದೆಯ ಅನುಜ್ಞೆಯನ್ನು ಪಡೆದು ಆ ಮಹಾರಾಜನಲ್ಲಿ ಹೋಗಿ, ಆತನ ಕಂಧರವನ್ನು ಕತ್ತರಿಸಿ, ತನ್ನ ತಂದೆಯ ಗೋವನ್ನು ಪುನಃ ತಂದೆಯ ಪಾದಕ್ಕೆ ತಂದು ಒಪ್ಪಿಸಿ, ಆ ರಾಜನ ತಿರಸ್ಸನ್ನು ತಂದೆಯ ಪಾದದ ಮೇಲೆ ತಂದಿಟ್ಟು ನಮಸ್ಕರಿಸಿದನು.

ಅತ್ತ ಕಾರ್ತವೀರ್ಯನ ಮಕ್ಕಳು ತಮ್ಮ ತಂದೆಯನ್ನು ಕೊಂದವನನ್ನು ಯುದ್ಧದಲ್ಲಿ ನಾಶಮಾಡಬೇಕೆಂದು ವಿಶೇಷ ಸೈನ್ಯವಿಂದೊಡಗೂಡಿ ಜಮದಗ್ನಿ ಋಷಿಯ ಆಶ್ರಮಕ್ಕೆ ಮುತ್ತಿಗೆಹಾಕಿದರು. ಆ ಕಾಲದಲ್ಲಿ ಪರಶುರಾಮನು ಆಶ್ರಮದಲ್ಲಿರಲಿಲ್ಲ. ರಾಜಪುತ್ರರು ಆ ಆಶ್ರಮವನ್ನು ನಾಶಮಾಡಿ ಕೊನೆಗೆ ಅಸಹಾಯನಾದ ಋಷಿಯನ್ನು ಕೊಂದುಹಾಕಿದರು. ಆ ಕಾಲದಲ್ಲಿ ಪರಶುರಾಮನು ಬಂದು ಆಶ್ರಮದಲ್ಲಿ ಸತ್ತುಬಿದ್ದಿದ್ದ ತನ್ನ ತಂದೆಯ ಶರೀರವನ್ನು ನೋಡಿ ಶಾಂತಚಿತ್ತದಿಂದ ತಂದೆಯ ಕರ್ಮಗಳನ್ನು ಮಾಡಿ ಶವವನ್ನು ಚಿತಿಯಮೇಲಿಟ್ಟು ಉರಿಯು ಹತ್ತಿ ಋಷಿಯ ತಲೆಯಮೆ ಲೆ ಪ್ರಜ್ವಲಿಸುತ್ತಿರುವಾಗ್ಗೆ, ಇದನ್ನು ನೋಡುತ್ತಿದ್ದ ಪರಶುರಾಮನ ಕೋಪಕ್ಕೆ ತಾಕುತಡಿಯಿಲ್ಲದಂತಾಗಿ, ತನ್ನ ತಂದೆಯನ್ನು ಕೊಂದ ಕಾರಣ ಕಾರ್ತವೀರ್ಯನ ವಂಶೋದ್ಭವನಾದ ಕ್ಷತ್ರಿಯರ ಬಾಡವನ್ನೇ ನಾಶಮಾಡುವೆನೆಂದು ಪ್ರತಿಜ್ಞೆಮಾಡಿದನು. ತಂದೆಯ ಕರ್ಮಗಳನ್ನೆಲ್ಲಾ ತೀರಿಸಿದ ನಂತರ ಪರಶುರಾಮನು ಭಯಂಕರವಾದ ಕೊಡಲಿಯನ್ನು ಭುಜದ ಮೇಲೆ ಹಾಕಿಕೊಂಡು ತಂದೆಯ ಆಶ್ರಮವನ್ನು ಬಿಟ್ಟು ಹೊರಟುಹೋದನು ಭಯಂಕರವಾದ ಯುದ್ಧವನ್ನಾರಂಭಿಸಿ ಕಾರ್ತವೀರ್ಯನ ವಂಶಕ್ಕೆ ಸೇರಿದ ಪ್ರತಿಯೊಬ್ಬನನ್ನು ಕೊಂದನಲ್ಲದೆ ನೀಚರಾದ ಕ್ಷತ್ರಿಯರನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡಿದನು. ಈ ರೀತಿಯಾಗಿ ಪರಶುರಾಮನು ಕ್ಷತ್ರಿಯರನ್ನೆಲ್ಲಾ ಇಪ್ಪತ್ತೊಂಬಾವರ್ತಿ ಸಂಹಾರಮಾಡಿದ ರಕ್ತಪ್ರವಾಹದಿಂದ ದೊಡ್ಡ ಏಳು ಕೆರೆಗಳು ತುಂಬುವಷ್ಟಾಯಿತು ಆನಂತರ ಪರಶುರಾಮನು ಜನಕರಾಜನಲ್ಲಿ ಹೋಗಿ, ತನ್ನ ಬಿಲ್ಲನ್ನು ಅವನ ವಶಕ್ಕೆ ಕೊಟ್ಟುಬಿಟ್ಟನು ಆನಂತರ ಅಲ್ಲಿಂದ ಅವನು ಪರ್ವತಗಳನ್ನಾರೋಹಣಮಾಡಿ ತನ್ನ ಕಾಲವನ್ನು ದೇವರ ಧ್ಯಾನದಲ್ಲಿಯೇ ಕಳೆದನು.

ವಾಚಕಮಹಾಶಯರೇ! ಪರಶುರಾವ ನು ತಂದೆತಾಯಿಗಳಿಗೆ ಪ್ರಾಪ್ತವಾಗಿದ್ದ ದುರ್ದೆಶೆಗಳನ್ನು ಕಣ್ಣಾರೆ ನೋಡಿ, ಅವರ ಕಷ್ಟಗಳನ್ನು ಪರಿಹರಿಸಿ, ತನ್ನ ಕರ್ತವ್ಯವನ್ನು ಸಂಪೂರ್ಣವಾಗಿ ನಡೆಸಿ ಕೃತಕೃತ್ಯನಾದಂತೆ ಮಗನು ತನ್ನ ಕರ್ತವ್ಯವೇನೆಂಬುದನ್ನು ತಿಳಿದು ಮಾತಾಪಿತೃಗಳ ಕಷ್ಟಕಾಲದಲ್ಲಿ ಬಿಡದೆ ಸಹಾಯವನ್ನು ಮಾಡಿ, ಅವರನ್ನು ಪರಿವಾಲಿಸಿಕೊಂಡು ಬರುವುದೇ ನಿಜವಾದ ಸುತನ ಕರ್ತವ್ಯವೆಂದು ತಿಳಿಯಬೇಕಾಗಿದೆ

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿರೋರತ್ನವೆಂಬಿಹಾಗೆ ಪ್ರಕಾಶಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶೀಪೀಠಾಧಿಪತಿಗಳೆಂಬ ಪ್ರಾಚೀನಾಚಾರ್ಯರೊ ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸಂಸ್ಕೃತವು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅನಾಯಾಸವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಸ್ಪಷ್ಟ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಸ್ಪಷ್ಟ ಟೀಕೆಯು ೧೩೫ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಪಂಟಾಪೂರ್ವಕವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಅರಿತು ಹೆಡಿಕೇಸ್ವಾಮಿಗೆ ಆಜ್ಞೆಯನ್ನು ಕೊಟ್ಟಿರುವರಲ್ಲದೆ, ಈ ಗ್ರಂಥದಲ್ಲಿ ನಿರೂಪಿಸುವುದಕ್ಕೋಸ್ಕರವಾಗಿ ಧನ್ಯವಾದ ಅನುಚಿತವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅನುಪಮ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಳ್ಳಲೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ಪಜಾ ಹೋಗಲಾಗಿ ೩ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ

ಮ್ಯಾನೇಜರ್,

ಶ್ರೀಪಂಚಾಕ್ಷರಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೂಕ	ಮೂಲ್ಯ
ಸ್ವರ್ಣಮಂಕರಧ್ವಜ	೧	೫ರಿ—೦—೦
ಸ್ವರ್ಣಶಾಂಭ್ರೋದಯ	೧	೧೦—೦—೦
,, ತ್ರಿ ಸೇ ಸಂಜೀರ	೧	೮—೦—೦
ರಸಸಿಂದೂರ	೧	೩—೦—೦
ಪ್ಪುಸಿಂದೂರ	೧	೪—೦—೦
ತಾಲಸಿಂದೂರ	೧	೪—೦—೦
ಶಿಖಾಸಿಂದೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ಸೂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೫—೦

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದಶಾಸ್ತ್ರಪ್ರಕಾಶಾಲಾ,

ಪೋಸ್ಟ್, ಒಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಥೆತ್ತು ಆಸ್ಥಲಿಲೆಗೆಳಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕನಿಜ್ಯಾತರಾಪ ಆಗಸ್ತ್ಯ, ವಧಿಚಿ, ವ್ಯಾಸ, ಸಾನಂದ, ದೂರ್ವಾಸ
ಮುಪರ್ಷಿಗಳಿಗೆ ಶಿವಸಿದ್ಧಾಂತವನ್ನು ಪರಿಚಯಿಸುವ ಫೋಟೋ ಸೈಜು ೧೦×೧೪ ಬೆಲೆ .... ೦—೧೦—೬
ಸಮಸ್ತ ಪೀಠಾರೋಹಣಮಾಡಿರತಕ್ಕ ನವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರವ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ .. ೦—೧೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರವ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ ... ೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಆವರ್ತರಿಸಿರುವ ಫೋಟೋ .... ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯
ಶ್ರೀ ರೇಣುಕಾಚಾರ್ಯರು ವಿಧೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು
ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ .... ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ ... ೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಡಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಪಿಠಾಚಾರ್ಯ ಮಹಾಸ್ವಾಮಿಗಳವರ ಫೋಟೋ ... ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .... .. ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ ... ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ .... ೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .... ೦—೦—೯
ಶ್ರೀ ಜಗದ್ಗುರು ಕೇದಾರಲಿಂಗಾಸ್ಥಾನ ಧರ್ಮಪೀಠದ ಸುಂದರ ಫೋಟೋ .... ೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿನ ಸುಂದರ ಫೋಟೋ ... ೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ .... ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವಮೇರೆ:—ಪೀನಸ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹಪ್ರಕುಟುಂಬಪೋಷಣಾರ್ಥವಾಗಿ ಉಪಯೋಗಿಸುತ್ತಾರೆ. ನೂರಕ್ಕೆ ೩ೀಸೆ ಪುಗಸಟ್ಟೆ ಕಳುಹಿಸಲಾಗುವುದು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ನಿ. ಪಿ. ಲ ಆಣೆ.

ನಿಮ್ಮ ಅಡ್ರೆಸ್ಸನ್ನು ತೀಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[11] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೩ ಆಣೆ
ಸೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ .... ೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ
ಪಂಚವಿಂಶತಿ ಶ್ರುತ್ಯರ್ಥಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .... ೧ ಆಣೆ
ಬಸವಾದಿನಿಜತತ್ತ್ವಸಮರ್ಪಣ (೮ನೆಯ ಆವೃತ್ತಿ) .... ೨ ಆಣೆ
ಶ್ರೀರೇಣುಕಾಚಾರ್ಯರತಕ(೨ನೆಯ ಆವೃತ್ತಿ) .... ೨ ಆಣೆ
ಪಂಚಾಚಾರ್ಯಪ್ರಭಾಕರ .... ೨ ಆಣೆ
ಶ್ರೀಗುರುತತ್ತ್ವಪದಗಳು .... ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ .... ೨ ಆಣೆ
ವೀರಶೈವಮತವಿಮಾಮಾಂಸಾ .... ೩ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ) .... ೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವನಿಶ್ಚಿಯೀಕರಣ (೩ನೆಯ ಆವೃತ್ತಿ) .... ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) .... ೬ ಆಣೆ
ವೀರಶೈವಮಹಾತ್ಮರು .... ೮ ಆಣೆ
ಬಸವಧ್ವಾಂತಭಿದಾಕರ (೩ನೆಯ ಆವೃತ್ತಿ) .... ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ೮ ಆಣೆ
Speeches by Pandit Shri Kashinatha Shastri (*English*) 12 As.

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) .... ೧೫ ಆಣೆ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೫೦೪ ಪ್ರಟ) .... ೮ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ.
ವೀರಶೈವಸಿದ್ಧಾಂತಸುಧಾಕರ .... ೨ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .... ೧ ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.
ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷೋಪಷ್ಟದಿ) .... ೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ
ವೀರಶೈವರತ್ನ (ಮರಾಠಿ) ... ... ೧ ರೂ
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ... ೧ ರೂ.
ವೀರಶೈವೇಂದುಶೇಖರ (ಸಂಸ್ಕೃತ) ... ... ೧ ರೂ.
ನಂದಿಕೇಶ್ವರಕಾರಿಕಾ (ಸಂಸ್ಕೃತ) ... . ೨ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ... ... ೨ ಆಣೆ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಮಹಾವಿದ್ವಾನ್ ವೇ|| ತಿರಸಿ ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ರಾಜಗದ್ದುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಯೋಕಮಂ ॥

ಸಂಪಾದಕರು—ಅಸ್ಥಾನ ಮಹಾವಿದ್ವಾ ವೇ॥ ತಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೧ನೇ ಜುಲೈ ೧೯೩೮ [ಸಂಚಿಕೆ ೧೦

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

(ಸತ್ಪಾತ್ರ ದಾನವು)

ಸ ಜೀವತಿ ಯಶೋ ಯಸ್ಯ ಕೀರ್ತಿರ್ಯಸ್ಯ ಸ ಜೀವತಿ ।
ಅಯಶೋಽಕೀರ್ತಿಸಂಯುಕ್ತೋ ಜೀವನ್ನಪಿ ಮೃತೋಪಮಃ॥

ಎಂಬ ಸುಭಾಷಿತಕಾರನ ವಚನದಂತೆ ಅನಂತ ಪುಣ್ಯಾತ್ಮರು ತಮಗೆ ಅನುಕೂಲವಾದ ಧರ್ಮಕಾರ್ಯಗಳನ್ನು ಮಾಡಿ ಕೀರ್ತಿಕಾಯರಾಗಿದ್ದಾರೆ ಕೆಲವರು ಭೂದಾನ, ಕೆಲವರು ಅನ್ನದಾನ, ಗೋದಾನ, ಕನ್ಯಾದಾನ ಕಾಂಚನದಾನ, ಧರ್ಮಗ್ರಂಥದಾನಗಳನ್ನು ಸತ್ಪಾತ್ರದಲ್ಲಿಮಾಡಿ ಕೀರ್ತಿಶೇಷರಾಗಿದ್ದಾರೆ. ಈ ದಾನಗಳಲ್ಲಿ ಒಬ್ಬರಾದ ಶ್ರೀಸಿದ್ದೇಶ್ವರ ಬಾಳಕೃಷ್ಣಯ್ಯಂಗೋಲೆ ಇವರು ೬೫ ಅರ್ವಾಚೀನ ಪ್ರಾಚೀನಗ್ರಂಥಗಳನ್ನು ಸತ್ಪಾತ್ರದಲ್ಲಿ ದಾನ ಮಾಡಿ ಪುಣ್ಯಭಾಗಿಗಳಾಗಿದ್ದಾರೆ. ಇವರ ಜನ್ಮಸ್ಥಾನವು ಸೋಲಾಪುರ ಜಿಲ್ಲಾ ಸಾಂಗೋಲೆಯಲ್ಲಾದರೂ ಇವರು ಈಗ ಸೊಲ್ಲಾಪುರದಲ್ಲಿದ್ದಾರೆ. ಇವರ ತಂದೆಯವರು ಹರಗುರುಭಕ್ತಿಪರಾಯಣರೂ ಸದಾಚಾರಶೀಲರೂ, ಧರ್ಮಗ್ರಂಥಗಳಲ್ಲಿ ವಿಶೇಷ ಶ್ರದ್ಧೆಯುಳ್ಳವರೂ ಆಗಿದ್ದರು. ಮತ್ತು ಇವರ ತಾಯಿಯವರೂ ಕೂಡ ಒಳ್ಳೆಯ ಶಾಂತಸ್ವಭಾವದವರೂ, ಸದಾಚಾರಸಂಪನ್ನರೂ ಆಗಿದ್ದರು. ತಾಯಿಯಂತೆ ಮಕ್ಕಳು ಎಂಬ ಗಾದೆಯಂತೆ ಗ್ರಂಥದಾತೃಗಳಾದ, ಸಿದ್ಧೇಶ್ವರರು ತಂದೆತಾಯಿಯ ಗುಣಗಳನ್ನೇ ಅಂಗೀಕರಿಸಿದ್ದಾರೆ. ತಮ್ಮ ತಂದೆಯವರು ಸಂಗ್ರಹಿಸಿದ್ದ ಪ್ರಾಚೀನಗ್ರಂಥಗಳ ಸದುಪಯೋಗವಾಗಬೇಕೆಂಬ ಸದಿಚ್ಛೆಯಿಂದ, ಸೋಲಾಪುರ ವಾಸದ ಸಂಸ್ಕೃತಪಾಠಶಾಲಾಧ್ಯಾಪಕರಾದ, ಪಂಡಿತ ಶ್ರೀಜಗದೀಶಶಾಸ್ತ್ರಿಗಳವರಲ್ಲಿಯೂ, ಶ್ರೀಗುರುಮೂರ್ತಿ ವೆ॥ಬ್ರ॥ ಜೈನಾಪುರ ಶ್ರೀಗಳವರಲ್ಲಿಯೂ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ಆಗ್ಯೆ ರಾಯಾಂತರವಾಗಿ ಶ್ರೀ॥ವ॥ಬ್ರ॥ ಬಾಲತಪಸ್ವಿ ಚೆನ್ನವೀರಶಿವಾಚಾರ್ಯರು ಬೃಹನ್ಮಠ ಹೋಟಗಿ ಇವರು ಮುಖ್ಯಾಂ ಸೋಲಾಪುರದಲ್ಲಿಯೇ ಇತ್ತು. ಇದನ್ನರಿತು ಜೈನಾಪುರ ಶ್ರೀಗಳೂ, ಪಂ॥ ಜಗದೀಶಶಾಸ್ತ್ರಿಗಳೂ, ಕೊಡುವವನ ಸತ್ಕಾರ್ಯಕ್ಕೆ ಕಡೆಯೇನು ಮೊದಲೇ ಬಿ? ಎಡತಾಕಿಸಿಕೊಂಡು ಕೊಡುವವನ ಸತ್ಪಾತ್ರವು ಸಿಗಲಿಯ ಗಾಯ ಸರ್ವಜ್ಞ ॥ ಎಂಬ ಉಕ್ತಿಯಂತೆ ಇದರೀ ಹೋಟಗಿ ಶ್ರೀಗಳವರಿಗೆ ಅರ್ಪಣಮಾಡಿ ಧನ್ಯರಾಗಿರೆಂದು ತಮ್ಮ ಸ್ವಭಾವಸಿದ್ಧವಾದ ಸದುಪದೇಶದಿಂದ ಪ್ರೋತ್ಸಾಹಿಸಲಾಗಿ ಕೂಡಲೇ,

ಯೋ ಹಿ ಕಾಲೋ ವೃತಿಕ್ರಾಮೇತ್ಪುರುಷಂ ಕಾಲಕಾಂಕ್ಷಿಣಾ ।
ದುರ್ಲಭಃ ಸಪುನಸ್ತೇನ ಕಾಲಃ ಕರ್ಮ ಚಿಕೀರ್ಷತಾ ॥

ಎಂಬ ಮಹಾಭಾರತೋಕ್ತಿಯಂತೆ, ಇಂತಹ ಸಂಧಿಯು ಪುನಃ ಸಿಗಲಾರದೆಂದು ಗ್ರಂಥದಾತೃಗಳು, ಪಂ॥ ಜಗದೀಶಶಾಸ್ತ್ರಿಗಳವರು ಜೈನಾಪುರ ಶ್ರೀಗಳವರೊಂದಿಗೆ ಹೋಟಗಿ ಶ್ರೀಗಳವರಿಗೆ ಬಿನ್ನಹವನ್ನು ಒಳ್ಳೇ ಭಯ ಭಕ್ತಿಯಿಂದ ಮಾಡಿ ತಮ್ಮ ಮನೆಗೆ ಕರೆದುಕೊಂಡು ಹೋಗಿ ಕುಟುಂಬಸಹಿತ ತೀರ್ಥಪ್ರಸಾದ ಸ್ವೀಕಾರ ಮಾಡಿ ತಮ್ಮಲ್ಲಿದ್ದ ೬೫ ಪ್ರಾಚೀನ ಗ್ರಂಥಗಳನ್ನು ಸದರಿ ಬಾಲತಪಸ್ವಿಗಳ ಪಾದಕ್ಕೆ ಅರ್ಪಣಮಾಡಿ ಗುರುಕೃಪೆಗೆ ಪಾತ್ರರಾದರು. ಎಷ್ಟೋಜನರಲ್ಲಿ ಅನಂತ ಗ್ರಂಥಗಳಿದ್ದರೂ ನೋಡುವುದಕ್ಕೂ ಕೊಡಲಾರದ ಮಹಾರಾಯರೂ ಹೆಲವು ಮಂದಿ ಇದಾರೆ. ಅಲ್ಲದೇ ೨ ಕ್ಕೃತನದಿಂದ ಹಾವಭಾವಮಾಡಿ ನರ್ತನಮಾಡುವವರಿಗೆ, ಕಳ್ಳರಿಗೆ, ಡೊಳ್ಳರಿಗೆ ಕೊಡುವರು ಸತ್ಕಾರ್ಯಕ್ಕೆ ಎಳ್ಳಷ್ಟೂ ಕೊಡರು ಕೆಲವರು ಅಪಾತ್ರಕ್ಕೆ ದಾನಮಾಡಿ ಸಾಪಭಾಗಿಗಳಾಗುತ್ತಾರೆಯೇ ಹೊರತು ಸತ್ಪಾತ್ರದಲ್ಲಿ ದಾನಮಾಡಿ ಕೀರ್ತಿಪಡೆಯುವವರೇ ಅತಿ ವಿರಳ. ಇಂಥ ಪ್ರಸಂಗದಲ್ಲಿಯೂ ಪಂ॥ ಕಾಶೀನಾಥಶಾಸ್ತ್ರಿಗಳವರು ತಮ್ಮ ಬಲವತ್ತರವಾದ ಧೈರ್ಯ ಸಾಹಸಗಳಿಂದಲೂ, ಅಮೋಘವಾದ ವಿದ್ವತ್ಪ್ರಭಾವದಿಂದಲೂ, ಅನಂತಗ್ರಂಥಗಳನ್ನು ಸಂಗ್ರಹಿಸಿ ಮುದ್ರಿಸಿ ದುರ್ವಾದಿಗಳನ್ನು ಖಂಡಿಸಿ ನಮ್ಮ ವೀರಶೈವಪ್ರಪಂಚವನ್ನು ಪ್ರಕಾಶಮಯವನ್ನಾಗಿ ಮಾಡಿದ್ದಾರೆ ಇದನ್ನು ನೋಡಿ ಕೆಲವು ಅಸೂಯಾಂಧರು ತಮ್ಮ ಗುಟ್ಟು ಹೊರಬೀಳುತ್ತದೆಂದು ನಿಂದಿಸಲು ತೊಡಗಿದ್ದಾರೆ. ಆದರೆ ಅರ್ಜುನನಿಗೆ ಹೀಯಾಳಿಸಿದಷ್ಟು ಅವನ ಸಾಮರ್ಥ್ಯವು ಹೆಚ್ಚಾದಂತೆ ಪಂಡಿತರಿಗೆ ನಿಂದಿಸಿದಷ್ಟು ಅವರ ಸಾಮರ್ಥ್ಯವು ಪ್ರಜ್ವಲಿಸುತ್ತಿರುವದು.

ಪಂಡಿಸಿದ ಒಡಲಿಲ್ಲ ಸತ್ಕಾರ್ಯಕ್ಕೆ ಕೊಡುವ ಕೈಯಿಲ್ಲ ।
ಕಂಡಕಂಡವರು ಕೈಲಾಸವೇಕಂದವೆ ಅಮ ।
ಕಂಡಹೊಲಸುತಿಂಮ ಚಹಾಳುಡಿಯುವ ಅಂಗಡಿಯೇ ॥

ಎಂಬಂತೆ ನಿಂದಕರಿಗೆ ನರಕವೇ ಸಿದ್ಧವಲ್ಲದೆ ಕೈಲಾಸವೆಂದಿಗೂ ಸಿಗಲಾರದು. ಆದ್ದರಿಂದ—

"ಆದ್ಯೈವ ಕುರುಯಚ್ಛ್ರೇಯಃ"

ಎಂಬ ಮಹಾಭಾರತೋಕ್ತಿಯಂತೆ ಅಶಾಶ್ವತವಾದ ಶರೀರವನ್ನು ನಂಬದೆ ಸಾರಾಸಾರವಿಚಾರಗಳನ್ನು ಮಾಡಿ ಸತ್ಕಾರ್ಯಗಳನ್ನು ಮಾಡುವದೇ ಮನುಷ್ಯ ಜನ್ಮದ ಆದ್ಯಕರ್ತವ್ಯವು, ಇದನ್ನರಿತೇ ಮೇಲ್ಕಂಡ ಗ್ರಂಥದಾತೃಗಳು ಸತ್ಪಾತ್ರದಾನವನ್ನು ಮಾಡಿ ಕೀರ್ತಿಭಾಜನರಾಗಿದ್ದಾರೆ. ಇಂಥ ದಾತೃಗಳು ವೀರಶೈವ ಸಮಾಜದಲ್ಲಿ ಹೆಚ್ಚಲೆಂದು ಶ್ರೀಜಗದಾಚಾರ್ಯರ ಚರಣಸನ್ನಿಧಾನೆಂಗಳಲ್ಲಿ ಪ್ರಾರ್ಥಿಸುವೆನು.

ಸೌ॥ ಭಾಗೀರಥಿಬಾಯಿ ಕಟಾಪ,
ಸೋಲಾಪುರ.

ಶಿವದೀಕ್ಷಾಸಮಾರಂಭ.

ಧಂಡರಪುರ ತಾ॥ ೫ಕೆ ಡೋಣಜದಲ್ಲಿ ಮೊದಲೇ ಪ್ರಸಿದ್ಧ ಪತ್ರಿಕೆಗಳಿಂದ ತಿಳಿಸಿದಂತೆ ತಾ॥ ೨೫-೫-೩೮ ನೆಯ ದಿವಸ ಸರ್ವಪಟ್ಟಾಧಿಕಾರಿಗಳ ಅಗಮನವಾಗಿ ರಾತ್ರಿ ಸಭೆ ಸೇರಿ "ದೀಕ್ಷಾವಶ್ಯಕತೆ" ಯ ವಿಷಯದಲ್ಲಿ ಬಹು ಸ್ವಾರಸ್ಯವಾದ ಭಾಷಣಗಳಾದವು. ತಾ॥ ೨೬-೫-೩೮ ಕ್ಕೆ ಸ್ಥಳ ಪರಸ್ಥಳಗಳಿಂದ ಬಂದ ವೀರಶೈವರಿಗೆ ಯಥಾಶಾಸ್ತ್ರವಾಗಿ ಶಿವೆಯನ್ನಿಡಿಸಿ ಶಿವದೀಕ್ಷಾಸಮಾರಂಭವು ನೆರವೇರಿಸಲ್ಪಟ್ಟಿತು. ಪರಾಂಡ ಕರ, ಜೈನಾಪುರ, ಮರಬ, ಹೋಟಗೀ, ಕಾಸೇಗಾಂವ ಹಾವಿನಹಾಳ, ಡೋಣಜ, ಚರಸಟ್ಟಾಧ್ಯಕ್ಷರು ಆಗಮಿಸಿದ್ದರು. ಮುಂಡೇವಾಡಿ, ಡೋಣಜ, ಮಂಗಳವೇಢೆ, ಜತ್ತ ಸಂಸ್ಥಾನ, ಮಂದ್ರೂಪ, ಮೋರಾಳ, ಇತ್ಯಾದಿ ನೇಕ ಗ್ರಾಮಗಳಿಂದ ಶಿವದೀಕ್ಷೆಗಾಗಿ ಬಂದ ಜನರಲ್ಲಿ ೫೦೦ ಜನರು ಶಿವದೀಕ್ಷೆಯನ್ನು ಹೊಂದಿದರು. ಮುಂಡೇವಾಡಿಗೌಡರು ಈ ಬಗ್ಗೆ ಬಹು ಪರಿಶ್ರಮ ಪಟ್ಟರು.

ಪ್ರತ್ಯಕ್ಷದರ್ಶಿ.

ವಿರಕ್ತಮಠದ ಧರ್ಮಾರ್ಥ ಜ್ಯೋತಿಷ, ವೈದಿಕ ಪಾಠಶಾಲೆಯ ವಾರ್ಷಿಕಪರೀಕ್ಷೆಯ ಪರಿಣಾಮ

ನರಗುಂದ ವಿರಕ್ತಮಠದ ಟ್ರಸ್ಟಿಗಳೂ ಇನ್ನುಳಿದ ಸದ್ಭಕ್ತರೂ ಕೂಡಿ ಶ್ರೀಮದ್ವೀರಶೈವ ಸಮಾಜೋನ್ನತಿ ಸಂಘವೊಂದನ್ನು ಸ್ಥಾಪಿಸಿದ್ದು, ಈ ಸಂಘದವತಿಯಿಂದ ಶ್ರೀ ವಿರಕ್ತಮಠದಲ್ಲಿ ಕಳೆದ ಭಾವನಾಮ ಸಂವತ್ಸರ ಶ್ರಾವಣ ಶುದ್ಧ ೧೫ದಿವಸ ಧರ್ಮಾರ್ಥ ಜ್ಯೋತಿಷ, ವೈದಿಕಪಾಠಶಾಲೆಯನ್ನು ಸ್ಥಾಪಿಸಿರುವದು ಸರಿಯೆಷ್ಟೆ! ಪ್ರತಿವರುಷದ ಪದ್ಧತಿಯ ಪ್ರಕಾರ ಈ ಪಾಠಶಾಲೆಯ ವಾರ್ಷಿಕಪರೀಕ್ಷೆಯು ಇದೇ ತಿಂಗಳು ತಾ॥ ೨೩ ಮತ್ತು ೨೪ ಈ ಎರಡುದಿನಗಳಲ್ಲಿ ವೇ॥ ಬ್ರ॥ ಶ್ರೀ॥ ಸಿ॥ ಶಿವಬಸವಶಾಸ್ತ್ರಿಗಳು ಬೃಹನ್ಮಠ ಹೂಲಿ ಹಂಚಾನಗರ್ತರಿಂದ ತೆಗೆದುಕೊಳ್ಳಲ್ಪಟ್ಟಿತು. ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳೆಲ್ಲರೂ ಉತ್ತೀರ್ಣರಾಗಿರುವರೆಂಬುದನ್ನು ತಿಳುಹಲು ಅತ್ಯಾನಂದವೆನಿಸುತ್ತದೆ. ಈ ಪಾಠಶಾಲೆಯ ವಾರ್ಷಿಕಪರೀಕ್ಷೆಯ ಪರಿಣಾಮದ ಮೇಲಿಂದ, ಈ ಪಾಠಶಾಲಾಧ್ಯಾಪಕರಾದ ಸಿದ್ಧಾಂತಿ ಗೌರೀಶಂಕರಶಾಸ್ತ್ರಿಗಳು ಕೊಂಗವಾಡ ಬೃಹನ್ಮಠ ಇವರು ಅತ್ಯಂತಶ್ರಮವಹಿಸಿ ಅಧ್ಯಯನಮಾಡಿಸಿರುವರೆಂಬುದು ಸ್ಪಷ್ಟವಾಗುವದು. ಈ ಪಾಠಶಾಲೆಯು ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಜಗದೀಶನನ್ನು ಪ್ರಾರ್ಥಿಸುವೆವು.

ಶ್ರೀಮದ್ವೀರಶೈವಸಮಾಜೋನ್ನತಿಸಂಘದ ಸೆಕ್ರೆಟರಿ,
ನರಗುಂದ.

ರೇಣುಕಗೀತೆ ಅರ್ಥಾತ್ (ಸಿದ್ಧಾಂತಶಿಖಾಮಣಿ)

ಲೇಖಕರು—ಕಾವ್ಯತೀರ್ಥ, ಸಾಹಿತ್ಯ-ವೇದಾಂತಾಚಾರ್ಯ
(ರಜತಪದಕಪ್ರಾಪ್ತ) ಶ್ರೀವಾಗೀಶಶಿವಾಚಾರ್ಯರು
ಮುದೇನೂರು, ಬೃಹನ್ಮಠ, ಪೋ. ರಾಣೆಬೆನ್ನೂರು, ಜಿ. ಧಾರವಾಡ

(ಲೇಖಾಂಕ-೧೩)

ಹೀಗೆ ಸುಲಭಸರಣಿಗೆ ಅನುವಾದಿತವಾದ ಸಿದ್ಧಾಂತ ಶಿಖಾಮಣಿಯ ನಾಮವನ್ನು ಕ್ರಿ.ಶ. ೧೧೬೦ ರಲ್ಲಿದ್ದ ಶ್ರೀಪತಿಪಂಡಿತಾರಾಧ್ಯರು ತಮ್ಮ "ಶ್ರೀಕರಭಾಷ್ಯ"ದಲ್ಲಿ ಅನೇಕ ಕಡೆ ಉಲ್ಲೇಖಿಸಿರುವರು—"ಅಥಾತೋ ಬ್ರಹ್ಮ ಜಿಜ್ಞಾಸಾ" ಸೂತ್ರದ ಭಾಷ್ಯಾವತರಣದಲ್ಲಿ—

"ಪವಿತ್ರಂತೇ ಇತಿ ಋಗ್ವೇದಮಂತ್ರಸ್ಯ
ಸಿದ್ಧಾಂತಶಿಖಾಮಣಾ ರೇಣುಕಾಚಾರ್ಯೇಣ
ಲಿಂಗಧಾರಣವರ್ತ್ಮೇನ ನಿರ್ದೇಶಾತ್।"
(೧—೧—೧)

ಎಂದು ಮುಂತಾದ ಬರೆಹದಿಂದ ಸಿದ್ಧಾಂತಶಿಖಾಮಣಿಯನ್ನು ಶ್ರೀಪತಿಪಂಡಿತರು ಚೆನ್ನಾಗಿ ಅಧ್ಯಯನಮಾಡಿಯೇ ಶ್ರೀಕರಭಾಷ್ಯವನ್ನು ಬರೆದಿರುವುದು ಸ್ಪಷ್ಟವಾಗುವುದು. ಶ್ರೀಪತಿಪಂಡಿತರ ಕಾಲನಿರ್ಣಯವೆಂತೂ ಶಿಲಾಶಾಸನಾದಿಗಳಿಂದ ಶಾಸಿತವಾಗಿದೆ. ಆಧಾರಪುರಸ್ಸರವಾಗಿ ಪ್ರತಿಪಾದಿತವಾದ ಶ್ರೀಪತಿಪಂಡಿತರ ಕಾಲನಿರ್ಣಯದ ಸತ್ಯವಿಷಯವನ್ನು ತಿಳಿಯಬೇಕೆಂಬ ಬಯಕೆಯುಳ್ಳ ಇತಿಹಾಸಕೋವಿದರು "ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ" ವೆಂಬ ದಿವ್ಯಗ್ರಂಥವನ್ನು ಅವಶ್ಯವಾಗಿ ಓದಬೇಕು. ಈ ಗ್ರಂಥವು 'ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು' ಎಂಬಲ್ಲಿ ನಾಲ್ಕಾಣೆಗೆ ದೊರೆಯುವುದು, ಇತಿಹಾಸ ಸಂಶೋಧಕರು ದ್ವೇಷಾಸೂಯೆಗಳನ್ನು ತ್ಯಾಗಮಾಡಿ ಕಾರ್ಯಗಳನ್ನು ನಡೆಯಿಸುವುದಾದರೆ ನಮ್ಮ ಭಾರತಾಭ್ಯುದಯಕ್ಕೆ ಇಷ್ಟೊಂದು ತಡಬೇಕೆ? ಎಲ್ಲಿ ನೋಡಿದರೂ ದ್ವೇಷ, ಎಲ್ಲಿನೋಡಿದರೂ ಅಸೂಯೆ, ತುಂಬಿ ತುಳುಕುತ್ತಿರುವಾಗ ಯಾವ ಉನ್ನತಿಯೂ ಆಗಲು ಸಾಧ್ಯವಿಲ್ಲವಷ್ಟೆ! ಪಕ್ಷಭೇದವೆಂಬುದು ಅಜ್ಞಾನಜನ್ಯವೆಂದು ಎಲ್ಲರೂ ಹೇಳಿರುವರೆಂದಮೇಲೆ ಇನ್ನೂ ಪಕ್ಷಗಳು ಲೋಸವಾಗಲೊಲ್ಲವೆಂದಮೇಲೆ ಜನಗಳಲ್ಲಿ ಇದುವರೆವಿಗೂ ಜ್ಞಾನೋದಯವಾಗಿಯೇ ಇಲ್ಲವೆಂದು ಹೇಳಬೇಕಲ್ಲವೇ? ಅಜ್ಞಾನಜನ್ಯವಾದ ಈ ಪಕ್ಷಭೇದವು ಬಹುದೂರದವರೆಗೂ ನಾಟಿದೆ ಎಂದು ತಿಳಿಯುವುದು ಸಾಮಾನ್ಯವಾಗಿ ವಿಚಾರಮಾಡಿ ನೋಡಿದರೆ ಈ ಪಾಕ್ಷಿಕದ್ವೇಷವು ಯಾವ ಪಂಡಿತನನ್ನೂ ಯಾವ ಐತಿಹಾಸಿಕಜ್ಞಾನಿಯನ್ನೂ ಯಾವ ಮಹಾಸ್ವಾಮಿಯನ್ನೂ ಬಿಟ್ಟಂತೆ ಕಾಣುವುದಿಲ್ಲ. ಅದು ಎಂತಹ ಸತ್ಯವಿಷಯವೇ ಇರಲಿ ಪಕ್ಷಗಳ ವೈಷಮ್ಯದಿಂದ ಅದು ಅಸತ್ಯವಾಗಿಯೂ, ಎಂತಹ ಅಸತ್ಯವಿಷಯವೇ ಇರಲಿ ಅದು ಪೂರ್ಣ ಸತ್ಯವಾದುದಾಗಿಯೂ ಮಾರ್ಪಡುವುದು ಸ್ವಾಭಾವಿಕವಾಗಿಹೋಗಿದೆ. ಹೀಗಾಗಿ ಸಾಮಾನ್ಯಜನಗಳಂತೂ ದಿಗ್ಭ್ರಾಂತರಾಗಿಹೋಗಿದ್ದಾರೆ. ಅವರ ಮಾನಸಿಕ ಪರಿಸ್ಥಿತಿಯು ವಿಪರೀತವಾಗಿ ಪರಿಣಮಿಸಿ ಅವರು ತಮ್ಮ ಸಮಾಜದಿಂದಲೇ ಹೊರಗಾಗಿರುವುದು ಲೇಸೆಂದು ಭಾವಿಸಿ ಇತರ ಸಮಾಜಾಭಿವೃದ್ಧಿಗಾಗಿ ಹೆಣಗುತ್ತಿರುವರು ಈ ಪಕ್ಷಗಳ ಗಲಾಟೆಯಿಲ್ಲಿ ಉಭಯವರ್ಗದಿಂದಲೂ ಹೇರಳವಾದ ದ್ರವ್ಯವು ನಷ್ಟವಾಗುತ್ತಿದೆ ಪರಮತೀಯರಿಗಂತೂ ಇದೊಂದು ಸುಗ್ಗಿಯಾಗಿಹೋಗಿದೆ. ನೆನ್ನೆ ಒಂದು ಪಕ್ಷದಲ್ಲಿ ವಿಪುಲವಾದ ದ್ರವ್ಯರಾಶಿಯಿಂದ ಕಾರ್ಯಮಾಡುತ್ತಿದ್ದ ವ್ಯಾಣಿಯು ಈ ದಿನ ಎರಡನೆಯ ಪಕ್ಷವು ಅದಕ್ಕಿಂತಲೂ ಹೆಚ್ಚು ಧನವನ್ನು ಕೊಡುವುದೆಂಬ ಭರವಸೆಯಿಂದ ಮೊದಲು ತಾನು ಸೇರಿದ ಪಕ್ಷವನ್ನು ಹುಲ್ಲುಕಡ್ಡಿಗೆ ಸಮವಾಗಿ ಹೀಯಾಳಿಸಿ ಬೆರೆಯಲೋ ಬಯ್ಯಲೋ ಆರಂಭಿಸಿದೆ ದುಡ್ಡಿನಾಶೆಯಿಂದ ತನ್ನ ಸ್ವೈಕ್ಯತ್ವ, ಪಾಂಡಿತ್ಯ ಹೆಚ್ಚೇಕೆ ಮನುಷ್ಯತ್ವವನ್ನೇ ಮಾರಿಕೊಳ್ಳುವ ಹೇವ್ಯಾಸವು ಇನ್ನೂ ಕಡಿಮೆಯಾಗಿಲ್ಲ. ಇಂತಾಗಿ ಜಗತ್ತೆಲ್ಲವೂ ಈಗ ನಿಜವಾದ ದಾರಿಯನ್ನು ಸಂಪೂರ್ಣವಾಗಿ ತ್ಯಾಗಮಾಡುವುದರಲ್ಲಿ ಹಗಲು ರಾತ್ರಿಗಳನ್ನು ಕಳೆಯಲಾರಂಭಿಸಿದೆ. ಅದುದರಿಂದ ಈಗ ಯಾರು ಏನು ಹೇಳಿದರೂ ವಿಶ್ವಾಸಪೂರ್ವಕವಾಗಿ ನಂಬುವುದು ಕಡಿಮೆಯಾಗಿದೆ. ಪಕ್ಷಾಂಧತೆಯನ್ನು ತ್ಯಾಗಮಾಡಿರೆಂದು ಬಹಿರಂಗವಾಗಿ ದೊಡ್ಡ ದೊಡ್ಡ ವರನೇಕರು ಹೇಳುತ್ತಿರುವರು. ಆದರೆ ಆ ಹೇಳುವಿಕೆ ಜನರಿಗೇ ಹೊರತು ತಮಗೆ ಅನ್ವಯಿಸುವಂತೆ ಕಾಣುವುದಿಲ್ಲ. ಈಗಿನ ಉಪದೇಶ ಅಥವಾ ವ್ಯಾಖ್ಯಾನಗಳು ನಾಟಕದ ನೇಪಥ್ಯಧಾರಿಗಳ ಮಾತುಗಳಂತೆ ಕೇವಲ ಮನೋರಂಜನೆಗೆ ಪಾತ್ರವಾಗಿಹವೇ ಹೊರತು ಹಾಗೆ ಹೇಳುವವರೇ ತಾವು ಹೇಳಿದುದೇನು? ಎಂಬ ಪರಿವೆಯಿಲ್ಲದೆ ಆಚರಿಸುತ್ತಿರುವುದು ಪ್ರತ್ಯಕ್ಷವಾಗಿದೆ. ಹೀಗಾಗಿ ಕರ್ನಾಟಕದ ಭಾಗ್ಯೋದಯವಂತೂ ಬಹಳ ದೂರದಲ್ಲಿದೆ. ಇದ್ದ ಭಾಗ್ಯವೂ ಮಣ್ಣುಗೂಡಿಹೋಗುತ್ತಿದೆ. ಏಕೀಕರಣಾಭಿಲಾಷಿಗಳಾದ ಸಮಾಜವೈದ್ಯರು ಕಣ್ಣಿರೆದು ನೋಡುವರೋ? ಮನೆಯಲ್ಲಿ ನಡುಮಟ್ಟ ಹೊಲಸನ್ನಿಟ್ಟುಕೊಂಡು ಕಟ್ಟುಗಥೇರಿಯನ್ನು ಸ್ವಚ್ಛವಾಗಿಡಬೇಕೆಂದು ಒಮ್ಮೆಲೇ ಪ್ರಯತ್ನಿಸುವುದಕ್ಕಿಂತಲೂ ಆರಂಭದಲ್ಲಿ ತನ್ನ ಮನೆಯೊಂದನ್ನು ಶುದ್ಧವಾಗಿಟ್ಟುಕೊಂಡರೆ ಸಾಕಾಗಿದೆ ವಿಶ್ವದ ಏಕೀಕರಣಕ್ಕೆದು ಸಹಾಯಕವಾಗಿದ್ದರೂ ಸ್ವಗೃಹ (ತನ್ನ ಸಮಾಜ)ದ ಏಕೀಕರಣಕ್ಕಾದರೂ ಸಾಧಕವಾಗಬಹುದು. ಒಟ್ಟನ್ನ ಮೇಲೆ ಇಲ್ಲಿ ಹೇಳುವುದಿಷ್ಟು—ಬರೆಯುವವರು ತಮ್ಮ ಬರೆಹದಲ್ಲಿಯ ಒಂದಕ್ಷರವನ್ನಾದರೂ, ಹೇಳುವವರು ಹೇಳುವಿಕೆಯಲ್ಲಿಯ ಒಂದು ಮಾತನ್ನಾದರೂ ಕೃತಿಯಲ್ಲಿ ತರುವುದಕ್ಕೆ ಯತ್ನಿಸಬೇಕು. ಇದೇ ಮನುಷ್ಯನಾಗಿ ಹುಟ್ಟಿದುದಕ್ಕೆ ಸಾರ್ಥಕ.

ಹೀಗೆ ಯಾರಾದರೂ ಯತ್ನಿಸುತ್ತಿರುವಲ್ಲಿ ಅವರೇ ಸಮಾಜ ಹಿತಚಿಂತಕರು, ಅವರೇ ನಿಷ್ಪಕ್ಷಪಾತಿಗಳು. ಹೆಚ್ಚೇಕೆ ಅವರೇ ದಿವ್ಯಜ್ಞಾನಿಗಳಾದ ತಪೋಧನರು. ಇದನ್ನೆಲ್ಲಾ ಇಲ್ಲಿಬರೆದ ಕಾರಣವಿಷ್ಟೆ—ದ್ವೇಷಾಸೂಯೆಗಳಿಂದ ನಿಜಸಿದ್ಧಾಂತವೆಲ್ಲಾ ಅಪಾರ್ಥವಾಗಿ ಹೋಗಬಾರದು. ನಿಜವಾದ ವಿಷಯವನ್ನು ಎಲ್ಲರೂ ಏಕಮುಖೇನ ಒಪ್ಪಿಕೊಳ್ಳಬೇಕು. ವ್ಯಕ್ತಿದ್ವೇಷಗಳಿದ್ದರೆ ಆ ದ್ವೇಷಗಳು ಕೇವಲ ವ್ಯಕ್ತಿಗಷ್ಟೇ ಸಂಬಂಧಿಸಿರಲಿ. ವ್ಯಕ್ತಿದ್ವೇಷಕ್ಕೂ ಸಮಾಜಸೇವೆಗೂ ಸ್ವಲ್ಪವೂ ಸಂಬಂಧವಿಲ್ಲ. ಆ ದ್ವೇಷವನ್ನು ಸಮಾಜರಚನೆಯಲ್ಲಿಯೂ ತಂದು ಅದನ್ನು ಹಾಳುಮಾಡಲು ಬಯಸುವುದು ಶುದ್ಧ ಮೂರ್ಖತನವೆಂಬ ವಿಷಯವನ್ನು ಸ್ಪಷ್ಟವಾಗಿ ಇಲ್ಲಿ ಹೇಳಿಬಿಟ್ಟರುವೆವು. ಈ ವಿಷಯವು ಇಲ್ಲಿ ಪ್ರಸ್ತುತವಲ್ಲದಿದ್ದರೂ ವಿಷಯವಿಮರ್ಶೆಗೆ ನಿಷ್ಪಕ್ಷಪಾತತನವು ಬೇಕಾಗುವದೆಂದು ವಿವರಿಸಿ ನಾವು ಹೇಳುವ ಪ್ರಮಾಣಗಳು ಈ ದೋಷಗಳಿಂದ ದೂರವಾದವುಗಳೆಂದು ಸಿದ್ಧಗೊಳಿಸಬೇಕಾಗಿದ್ದಾದುದರಿಂದ ಅಪ್ರಸ್ತುತಸರಣಿಗೇನೂ ಸೇರಿಲ್ಲವೆಂದು ಹೇಳಿ ಪ್ರಧಾನವಿಷಯದತಕಡೆಗೆ ಗಮನಿಸೋಣ!

ಸಿದ್ಧಾಂತಶಿಖಾಮಣಿಯ ಹೆಸರನ್ನು ಶ್ರೀಪತಿಪಂಡಿತರು ತಮ್ಮ ಶ್ರೀಕರಭಾಷ್ಯದಲ್ಲಿ ಎತ್ತಿಕೊಂಡಿರುವರಾದುದರಿಂದ ಅವರಿಗಿಂತಲೂ ಈ ಸಿದ್ಧಾಂತಶಿಖಾಮಣಿಯು ಪೂರ್ವಕಾಲದ್ದೆಂದು ಸಿದ್ಧವಾಯಿತಷ್ಟೆ! ಇನ್ನು ಈ ಸಿದ್ಧಾಂತಶಿಖಾಮಣಿಗೆ ಮೂಲಭೂತವಾದ ಗ್ರಂಥವು ಬಹು ಪೂರ್ವಕಾಲದಲ್ಲಿಯೇ ಪ್ರಸಿದ್ಧವಾಗಿದ್ದಿತೆಂದು ಹಿಂದೆಯೇ ಹೇಳಿಬಂದಿರುವೆವು ಈ ವಿಷಯವನ್ನು ಯತಿವರ ಶ್ರೀ ಮರಿತೋಂಟದಾರ್ಯರ ಅಭಿಪ್ರಾಯದಂತಲ್ಲದೆ ಶ್ರೀಪತಿಪಂಡಿತರ ಅಭಿಪ್ರಾಯದಿಂದಲೂ ಸಿದ್ಧಗೊಳಿಸಲು ಸುಲಭಸಾಧ್ಯವು ಶ್ರೀಪತಿಪಂಡಿತರು ಶ್ರೀಕರಭಾಷ್ಯದಲ್ಲಿ 'ಪತ್ಯುರಸಾಮಂಜಸ್ಯಾತ್' (೨-೨-೩೭) ಎಂಬ ಬ್ರಹ್ಮಸೂತ್ರದಮೇಲೆ ಭಾಷ್ಯವನ್ನು ಬರೆಯುತ್ತ ಸಿದ್ಧಾಂತಶಿಖಾಮಣಿಯು ೫೦ನೆಯ ಪರಿಚ್ಛೇದದಲ್ಲುಕ್ತವಾಗಿರುವ,

ಅಗಸ್ತ್ಯ ಮುಖಕಾರ್ದೂಲ ಸಮಸ್ತಾಗಮಪಾರಗ।
ಶಿವಜ್ಞಾನಕರಂ ವಕ್ಷ್ಯೇ ಸಿದ್ಧಾಂತ ಶ್ರುಣು ಸಾದರಂ ॥೨॥
ಅಗಸ್ತ್ಯ ಋಲು ಸಿದ್ಧಾಂತಾ ವಿಖ್ಯಾತಾ ರುಚಿಭೇದತಃ।
ಭಿನ್ನಾಚಾರಸಮಾಯುಕ್ತಾ ಭಿನ್ನಾರ್ಥಪ್ರತಿಪಾದಕಾಃ ॥೩॥

ಮೊದಲಾಗಿ ೮ ಶ್ಲೋಕಗಳನ್ನು ಅನುಕ್ರಮವಾಗಿ ಉದಾಹರಿಸಿ ಈ ಶ್ಲೋಕಗಳು ಸಿದ್ಧಾಂತಾಗಮಪ್ರೋಕ್ತಗಳೆಂದು ಅಪ್ಪಣೆ ಕೊಡಿಸಿರುವರು. ಈ ವಿಷಯವನ್ನು ಸಮಾಲೋಚಿಸಿ ನೋಡಿದರೆ ಸಿದ್ಧಾಂತಾಗಮವೂ ಕೂಡ ರೇಣುಕಾಗಸ್ತ್ಯಸಂವಾದರೂಪವಾಗಿರುವುದೆಂದು ಸ್ಪಷ್ಟವಾಗುವುದು. ಈ ಅನುಕಾರಣಗಳಿಂದ ರೇಣುಕಾಗಸ್ತ್ಯಸಂವಾದವು ನಡೆದುದು ಶ್ರೇತಾಯುಗದಲ್ಲಿಯೇ ಎಂದು ವಿಶ್ವಾಸಪೂರ್ವಕವಾಗಿ ಹೇಳಬೇಕಾಗಿದೆ. ಸಿದ್ಧಾಂತಶಿಖಾಮಣಿಯ ಪ್ರಾಚೀನತೆಯಾದರೋ ಈ ಹಿಂದೆ ಸಂಕ್ಷೇಪವಾಗಿ ಸೂಚಿಸಲ್ಪಟ್ಟಿದೆ. ಶ್ರೀಪತಿಪಂಡಿತರು ಸಿದ್ಧಾಂತಶಿಖಾಮಣಿಯ ಹೆಸರನ್ನೆತ್ತಿಕೊಂಡಿರುವುದರಿಂದ ಈ ಗ್ರಂಥವು ಶ್ರೀಕರಭಾಷ್ಯಕ್ಕೆ ಎಷ್ಟೋ ಪೂರ್ವಕಾಲದ್ದೆಂಬುದು ಸಹಜವೇ ಆದೆ.

ಶಿವಯೋಗಿಶಿವಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿ ಸ್ವತಃ ತಮ್ಮನ್ನು ಬೌದ್ಧಮತ ವಿರೋಧಿಗಳನ್ನಾಗಿ ಹೇಳಿಕೊಂಡಿರುವರು.

ಯೇನ ರಕ್ಷಾವತೀ ಜಾತಾ ಶಿವಭಕ್ತೀ ಸನಾತನೀ।
ಬೌದ್ಧಾದಿಪ್ರತಿಸಿದ್ಧಾಂತ ಮಹಾಧ್ವಾಂತಾಂಶುಮಾಲಿನಾ ॥೨೪॥
(ರೇ. ಗೀತೆ, ಪ. ೧)

ಎಂದಮೇಲೆ ಇವರು ಬೌದ್ಧರ ಹಾವಳಿಯಲ್ಲಿಯೇ ಈ ಸಿದ್ಧಾಂತಗ್ರಂಥವನ್ನು ಬರೆದರೆಂದು ಸಿದ್ಧವಾಗುವುದು. ಶಿವಯೋಗಿಶಿವಾಚಾರ್ಯರ ಕಾಲಮಾನವು ಇಷ್ಟೊಂದು ಸ್ವಾಧೀನವೆಂದು ನೀವು ಹೇಳುವಿರಾದರೆ ಸಿದ್ಧಾಂತಶಿಖಾಮಣಿಯಮೇಲೆ ನುರಿತೋಂಟದಾರ್ಯರು ಅವತರಣಿಕೆಯನ್ನು ಬರೆಯುವಾಗ—

"....ತಪಸಂತರಂ ರೇವಣಸಿದ್ಧೇಶ್ವರವೃಷ್ಟಿಗರ್ಭಸಂಭೂತಸಿದ್ಧರಾಮೇಶ್ವರಸಂಪ್ರದಾಯಪ್ರಸಿದ್ಧಃ, ಸಕಲಶಿವಾಗಮಾಚಾರಗಮ, ಶಿವಯೋಗೀಶ್ವರ ಇತ್ಯಭಿಧಾನವಾನ್ ಕಶ್ಚಿನ್ಮಾಹೇಶ್ವರಃ....."

ಹೀಗೇಕೆ ಉಲ್ಲೇಖಿಸಿದರೆಂದು ಅನೇಕರು ಸಂದೇಹಪಡಬಹುದಲ್ಲವೇ? ಈ ಸಂದೇಹವನ್ನೂ ಪರಿಹರಿಸುವುದಕ್ಕೆ ಯತ್ನಿಸೋಣ! ಯತಿವರ ಶ್ರೀ ಮರಿತೋಂಟದಾರ್ಯರು ಈ ಅವತರಣಿಕೆಯಲ್ಲುಟ್ಟೆ ಅಲ್ಲ, ಶಿವಯೋಗಿಶಿವಾಚಾರ್ಯರ ವಂಶಾವಳಿಯನ್ನು ಹೇಳುವ "ಕಶ್ಚಿದಾಚಾರಸಿದ್ಧಾನಾಮಗ್ರ್ಯಜೀಃ" ಎಂಬ ಪದ್ಯದ 'ಕಶ್ಚಿತ್' ಎಂಬ ಪದಕ್ಕೆ "ರೇವಣಸಿದ್ಧೇಶ್ವರವೃಷ್ಟಿಗರ್ಭಸಂಭೂತಸಿದ್ಧರಾಮೇಶ್ವರಃ" ಎಂದು ಅರ್ಥವನ್ನು ಬರೆದಿದ್ದಾರೆ. ಆ ಮುಂದೆ "ತಸ್ಯವಂಶೇ ಸಮುತ್ಪನ್ನೋ....." ಎಂಬ ೧೫೫ನೆಯ ಪದ್ಯದ 'ತಸ್ಯ' ಎಂಬ ಪದಕ್ಕೆ "ಸಿದ್ಧರಾಮೇಶ್ವರಸ್ಯ" ಎಂದು ಅರ್ಥ ಬರೆದಿದ್ದಾರೆ. ಆಮುಂದೆ "ತಸ್ಯಾಸೀನ್ಮನಂದನಃ ಶಾಂತಃ ಸಿದ್ಧನಾಥಾಭಿಧಃ ಶುಚಿಃ" ಎಂಬ ೧೭೬ನೆಯ ಪದ್ಯದ "ಸಿದ್ಧನಾಥಾಭಿಧಃ" ಎಂಬ ಪದಕ್ಕೆ "ಸಿದ್ಧರಾಮೇಶ್ವರಾಭಿಧಾಸಂಯುಕ್ತಃ" ಎಂದು ಅರ್ಥಬರೆದಿದ್ದಾರೆ. ಈ ವಿಧವಾದ ಅಸಂಗತವಾದ ಬರೆಹವು ಶ್ರೀ ಮರಿತೋಂಟದಾರ್ಯರ ಲೆಕ್ಕಣಿಕೆಯಿಂದ ಹೊರಬಿದ್ದಿದೆ ಎಂದು ಯಾವ ಪಂಡಿತನೂ ಹೇಳಲು ಧೈರ್ಯವಂತನಾಗಲಾರನು. ಪೂರ್ವಾಪರಸಂಗತವಲ್ಲದ ಈ ಪದ್ಧತಿಯು ಯಾವನೋ ಒಬ್ಬ ಮಂದನಿಂದ ನಿರ್ಮಿತವಾಗಿ ಶಿಖಾಮಣಿಯ ಟೀಕೆ-ಅವತರಣಿಕೆಗಳಲ್ಲಿ ಸೇರಿಸಲ್ಪಟ್ಟು ಮಹಾಮೇಧಾವಿಗಳೂ ಘನವಿದ್ವಾಂಸರೂ ಆದ ಶ್ರೀ ಮರಿತೋಂಟದಾರ್ಯರಿಗೆ ಕಲಂಕವನ್ನು ತಂದೊಡ್ಡಲಾಗಿದೆಯೇ ಹೊರತು ಈ ವಿಧವಾದ ಪೂರ್ವಾಪರ ಅಸಂಗತವಾದ ವಿಷಯವು ಮರಿತೋಂಟದಾರ್ಯರಿಂದ ಎಂದೂ ಉಕ್ತವಾಗಿಲ್ಲವೆಂದು ಖಂಡಿತವಾಗಿ ಹೇಳಬೇಕಾಗುವುದು ಐತಿಹಾಸಿಕ ಜ್ಞಾನವಿಲ್ಲದ ಪೆದ್ದ ಪಂಡಿತರನೇಕರು ಪೂರ್ವಾಪರವಿಚಾರವಿಲ್ಲದೆ ಕಾವ್ಯಾದಿಗಳನ್ನು ಬರೆದಿರುವುದು ಐತಿಹಾಸಿಕ ಲೋಕದಲ್ಲಿ ಎಷ್ಟು ಅಪಹಾಸ್ಯಕ್ಕೆ ಕಾರಣವಾಗಿದೆ ಎಂಬುದು ಎಷ್ಟೋದಿನಗಳಿಂದ ಸ್ಪಷ್ಟವಾಗುತ್ತ ಬಂದಿದೆ. ಇದಕ್ಕೆ ನಿದರ್ಶನವಾಗಿ ಕೆಲವು ವರ್ಷಗಳ ಹಿಂದೆ ಹಲಕೆಲ ದೀಡುಪಂಡಿತರು ಕೂಡಿಕೊಂಡು ದಿವ್ಯವಾದ ಶ್ರೀಕಂಠಭಾಷ್ಯವನ್ನು ಕೆಡಿಸಿ ನೀಲಕಂಠಭಾಷ್ಯವನ್ನು ಮಾಡಿ ಕೊಂಚ ಭಾಗವನ್ನು ಅಚ್ಚುಹಾಕಿಸುವುದರೊಗಾಗಿ ನಿಜವಿಷಯವು ಬಯಲಿಗೆ ಬಂದು ಅಚ್ಚಾದ ಸಾವಿರಾರು ಕಾಪಿಗಳು ಬೆಚ್ಚಗೆ ಕುಳಿತು ನಿದ್ರಿಸುತ್ತಿರುವುದು ಸಾಕಾಗಿದೆ. ಇನ್ನೂ ಇಂತಹ ಅನೇಕ ಉದಾಹರಣೆಗಳುಂಟು. ಅನೆಲ್ಲವನ್ನೂ ಇಲ್ಲಿ ಪ್ರಸ್ತಾಪಿಸುವುದು ಪ್ರಸ್ತುತವಲ್ಲ. ಶ್ರೀ ಮರಿತೋಂಟದಾರ್ಯರ ಹೆಸರಿನಿಂದ ಸಿದ್ಧಾಂತಶಿಖಾಮಣಿಯ ಅವತರಣಿಕೆಹಾಗೂ ಟೀಕೆಯಲ್ಲಿ ಮೂರ್ಖ ಪಂಡಿತರು ಮಾಡಿರುವ ಪ್ರಮಾದಗಳನ್ನೀಗ ಸರಿಪಡಿಸಬೇಕಾಗಿದೆ. ಇದೋ ತೆಗೆದುಕೊಳ್ಳಿ!

ಸಿದ್ಧಾಂತಶಿಖಾಮಣಿಯ ರಚನಾಕಾಲವು ಬಹು ಪ್ರಾಚೀನಕಾಲಕ್ಕೆ ಸೇರಿದ್ದೆಂದು ಈ ಹಿಂದೆ ಸಿದ್ಧಗೊಳಿಸಲ್ಪಟ್ಟಿದೆ. ಸರ್ವಸಾಮಾನ್ಯರ ನಂಬುಗೆಗಾಗಿ—ಶ್ರೀಕರ ಭಾಷ್ಯದಲ್ಲಿ ಸಿದ್ಧಾಂತಶಿಖಾಮಣಿಯು ಹೆಸರು ಬಂದಿರುವುದು. ಅದುದರಿಂದ ಈ ಗ್ರಂಥವು ೧೧ನೆಯ ಶತಮಾನಕ್ಕೆ ಪೂರ್ವದ್ದೆಂದು ಈ ಹಿಂದೆ ಒಡಂಬಡಿಸಿರುವುದು ಸಾಕಾಗಿದೆಯಷ್ಟೆ! ಶ್ರೀ ರೇವಣಸಿದ್ಧರ ವರಪ್ರಸಾದದಿಂದ ಹುಟ್ಟಿದ ಶ್ರೀ ಸಿದ್ಧರಾಮೇಶ್ವರರು ೧೨ನೆಯ ಶತಮಾನದವರು. ಶ್ರೀ ಸಿದ್ಧರಾಮರು ರೇವಣಸಿದ್ಧರ ವರಪ್ರಸಾದದಿಂದ ಜನಿಸಿದರೆಂದರೆ ರೇವಣಸಿದ್ಧರೂ ಇದೇ ೧೨ನೆಯ ಶತಮಾನದಲ್ಲಿಯೇ ಇದ್ದರೆಂದು ಹೇಳಬೇಕಾಗುವುದಿಲ್ಲವೆ? ಎಂದರೆ ಅವಶ್ಯವಾಗಿ ಹೇಳಬೇಕಾಗುವುದು ಆ ರೇವಣಸಿದ್ಧರು ರೇಣುಕರಿಗಿಂತಲೂ ಶಂಕರಾಚಾರ್ಯರಿಗೆ ಚಂದ್ರಮೌಳೇಶ್ವರ ಲಿಂಗವನ್ನು ದಯಪಾಲಿಸಿದ ರೇವಣಸಿದ್ಧರಿಗಿಂತಲೂ ದೇರೆಯವರಾಗಿದ್ದಾರೆ. ೧೨ನೆಯ ಶತಮಾನದಲ್ಲಿ ಶ್ರೀರೇವಣಸಿದ್ಧರೋರ್ವರಿದ್ದರೆಂದು ಹೇಳುವ ಶಿರವಾಳ ಶಾಸನವು ಇದೇ ರೇವಣಸಿದ್ಧರ ವಿಷಯಕವಾಗಿಯೇ ಇರುವುದೆಂದು ಏತಿಹಾಸಿಕಶಿಖಾಮಣಿಗಳು ಒಪ್ಪಿಕೊಳ್ಳುವರು. ಹೀಗೆ ಒಪ್ಪುವುದರಿಂದ ಹಿಂದಿನ ಚಾರಿತ್ರಿಕದೋಷಗಳಿಗೆ ಅವಕಾಶವಿಲ್ಲದೆ ರೇಣುಕ-ರೇವಣ ಸಿದ್ಧರ ವಿಷಯಕವಾದ ಲೀಲಾವಳಿಯು (ಅನೇಕ ಕವಿಗಳು ಹಾಡಿದುದು) ಸುಸಂಗತವಾಗಿ ಆ ಕವಿಗಳಿಗೆ ನಿರ್ಮಲಯಶವನ್ನು ತಂದುಕೊಡಲು ಸುಸಮರ್ಥವಾಗುವುದು. ಚಾರಿತ್ರಿಕ ಟಪ್ಪಣಿಗಳನ್ನು ರೋಧಿಸುತ್ತ ನಡೆದರೆ ೧೨ನೆಯ ಶತಮಾನಕ್ಕೆ ಪೂರ್ವದಲ್ಲಿಯೇ ಅನೇಕ ಜನ ಪ್ರಸಿದ್ಧರಾದ ಶಿವಲಿಂಗಧಾರಿಗಳು "ಬಸವಣ್ಣ" ಎಂಬ ಹೆಸರಿನಿಂದ ಮೆರೆದಿರುವುದು ಗೊತ್ತಾಗುವಂತೆ ೧೨ನೆಯ ಶತಮಾನಕ್ಕೆ ಪೂರ್ವದಲ್ಲಿ ಸುಪ್ರಸಿದ್ಧರಾಗಿ ಮೆರೆದ ರೇವಣಸಿದ್ಧೇಶ್ವರರ ಹೆಸರಿನಿಂದ ೧೨ನೆಯ ಶತಮಾನದಲ್ಲಿಯೂ ಅಲ್ಲಲ್ಲಿಂದೀಚೆಗೂ ಅನೇಕ ಮಾಹೇಶ್ವರರು ಆಗಿಹೋಗಿರುವುದು ಗೊತ್ತಾಗುವುದು. ಕೇವಲ ನಾಮಸಾಮ್ಯದಿಂದ ಪೂರ್ವದವರನ್ನು ಇತ್ತೀಚಿನವರನ್ನಾಗಿಯೂ ಇತ್ತೀಚಿನವರನ್ನು ಪೂರ್ವದವರನ್ನಾಗಿಯೂ ಹೇಳುವುದು ಪಂಡಿತರ, ಹೆಚ್ಚಾಗಿ ಇತಿಹಾಸಕೋವಿದರ ಕರ್ತವ್ಯವಲ್ಲ, ಇರಲಿ. ಶ್ರೀಮಂತೋಂಟದಾರ್ಯರ ಹೆಸರಿನಿಂದ ಪ್ರಚಾರವಾಗಿರುವ ಇತಿಹಾಸದೋಷವನ್ನು ಸರಿಪಡಿಸುವುದಕ್ಕಾಗಿ ಇಲ್ಲಿ ಈವಾಗ ಸಿದ್ಧಾಂತಶಿಖಾಮಣಿಕಾರರಾದ ಶಿವಯೋಗಿಶಿವಾಚಾರ್ಯರ ವಂಶಾವಳಿಯನ್ನು ಎತ್ತಿಕೊಳ್ಳೋಣ!

ಅಸೀದಾಚಾರಸಿದ್ಧಾನಾಮಗ್ರಣೀಃ ಶಿವಯೋಗಿನಾಂ ।
ಶಿವಯೋಗೀತಿವಿಖ್ಯಾತಃ ಶಿವಜ್ಞಾನಮುಪೋದಧಃ ॥೧೫॥
ಪಭಕ್ತಿಸುಧಾಸಿಂಧುಧ್ವಂಧನಾಮಲಚಂದ್ರಿಕಾ ।
ಧಾರತೀ ಯಸ್ಯ ವಿದಧೇ ಸ್ಪಾಯಃ ಕುವಲಯೋತ್ಸವಂ ॥೧೪॥
ಸ್ಯ ವಂಶೇ ಸಮುತ್ಪನ್ನೋ ಮುಕ್ತಾಮಣಿರಿವಾಮಲಃ ।
ಕುದ್ದದೇವಾಧಿಧಾಚಾರ್ಯೋ ಮೂರ್ಧನ್ಯಶ್ಶಿವಯೋಗಿನಾಂ ॥
ಮಿದ್ಧಾನಾತ್ಸರ್ವಜಂತೂನಾಂ ಪ್ರಣತಾನಾಂ ಪ್ರಜೋಧತಃ ।
ಮಿದ್ಧದೇವ ಇತಿ ಖ್ಯಾತಾ ಸಮಾಖ್ಯಾ ಯಸ್ಯ ವಿಶ್ರುತಾ ॥೧೬॥
ಖ್ಯಾಸೀನ್ನಂದನಃ ಶಾಂತಃ **ಸಿದ್ಧನಾಥಾಭಿಧಃ** ಶುಚಿಃ ।
ಪಸಿದ್ಧಾಂತಪದಿಗ್ದೇಶಾ ಶಿವಾಚಾರ್ಯಃ ಶಿವಾತ್ಮಕಃ ॥೧೭॥
ಶಿವಶೈವಶಿರೋರತ್ನಂ ವಿಶಿಷ್ಟಾಚಾರಸಂಪದಂ ।
ಜ್ಞಾನಮುಪಾಸಿಂಧುಂ ಯಂ ಪ್ರಶಂಸಂತಿ ದೇಶಿಕಾಃ ॥೧೮॥
ಶಿವಾಚಾರ್ಯಕುಲೇ ಜಾತಾ ಸತಾಮಾಚಾರಮಾತೃಕಾ ।
ಪಭಕ್ತೇಃ ಸ್ಥಿರಾ ಯಸ್ಮಿನ್ ಜಜ್ಞೇ ವಿಗತವಿಪ್ಲವಾ ॥೧೯॥
ಸ್ಯ ವೀರಶಿವಾಚಾರ್ಯಶಿವಾರತ್ನಸ್ಯ ನಂದನಃ ।
ಭವಜ್ಞೈವಯೋಗೀತಿ ಸಿದ್ಧೋವೇನ ಸುಧಾಕರಃ ॥೨೦॥

(ರೇ-ಗೀತಿ, ಪರಿ-೧)

ಸಿದ್ಧಾಂತಶಿಖಾಮಣಿಕಾರರ ರಚನೆಯಂತೆ ವಂಶಾವಳಿಯನ್ನು ವಿಚಾರಿಸುವಲ್ಲಿ (೧) ಶಿವಯೋಗಿ ಶಿವಾಚಾರ್ಯರು, ಇವರ ವಂಶದಲ್ಲಿ, (೨) ಮುದ್ದದೇವ ಚಾರ್ಯರು, ಸ್ವತಃ ಇವರ ಉದರದಿಂದ (೩) ಸಿದ್ಧನಾಥಶಿವಾಚಾರ್ಯರವರು, (೪) ಶಿವಯೋಗಿ ಶಿವಾಚಾರ್ಯರು (ಸಿದ್ಧಾಂತಶಿಖಾಮಣಿಕಾರರು) ಜನಿಸಿದರೆಂದು ಸ್ಪಷ್ಟವಾಗಿ ಗೊತ್ತಾಗುವುದು. ಶಿವಯೋಗಿ ಶಿವಾಚಾರ್ಯರ ವಂಶಾವಳಿಯನ್ನು ಹೇಳುವ ಮೇಲಣ ಈ ಪದ್ಯಗಳಲ್ಲಿ ಎಲ್ಲಿಯೂ ಸಿದ್ಧರಾಮೇಶ್ವರರ ಸುಳಿವೇ ಇರುವುದಿಲ್ಲ. ಇನ್ನು ಸಿದ್ಧರಾಮೇಶ್ವರ ಹಾಗೂ ಶಿವಯೋಗಿಶಿವಾಚಾರ್ಯರ ಕಾಲಮಾನ ವಿಷಯವನ್ನು ವಿಚಾರಿಸಿದರೂ ಸರಿಹೊಂದುವಂತಿಲ್ಲ. ಸಿದ್ಧರಾಮರು ೧೨ನೆಯ ಶತಮಾನದಲ್ಲಿದ್ದರೆಂಬುದೂ ಶಿವಯೋಗಿ ಶಿವಾಚಾರ್ಯರು ಅದಕ್ಕೆ ಎಷ್ಟೋ ಪೂರ್ವದಲ್ಲಿದ್ದರೆಂಬುದೂ ಹಿಂದೆ ಚೆನ್ನಾಗಿ ನಿರ್ಣಯಿಸಲ್ಪಟ್ಟಿದೆಯಷ್ಟೆ!

(ಸಶೇಷ)

ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತಿರುವ ಭವಿಷ್ಯತ್ತುಗಳ ಸಮಾಚಾರವು.

(ಬರೆದವ—ದೈವಜ್ಞವಿನೋದ)

ಇತ್ತೀಚಿಗೆ ವೃತ್ತಪತ್ರಿಕೆಗಳಲ್ಲಿ 'ಭವಿಷ್ಯ' ಶ್ರೀನ ವಿಷಯಗಳು ಹೆಚ್ಚಾಗುತ್ತಲಿವೆ. "ಮಾಸಭವಿಷ್ಯ, ವಾರಭವಿಷ್ಯ, ನಿತ್ಯಭವಿಷ್ಯ" ಗಳು ಆಯಾಯ ರಾಶಿಯವರಿಗೆ ಬರೆಯಲ್ಪಡುತ್ತಲಿವೆ. ಇದರೊಡನೆ ಗಾಳಿ, ಮಳೆ, ಬಿಸಿಲುಗಳ ಭವಿಷ್ಯವಿರುತ್ತವೆ. ರಾಜಕೀಯ ಪರಿಸ್ಥಿತಿಯ ಬಗ್ಗೆ ಬರೆಯುವರಲ್ಲದೆ, ಭೂಕಂಪ ಜ್ವಾಲಾಮುಖಿಗಳ ಅನಾಹುತಗಳನ್ನೂ ತಿಳಿಸುತ್ತಿರುವರು. ಭವಿಷತ್ಕಾಲದ ಗತಿಯನ್ನು ತಿಳಿಸುವದರಲ್ಲಿ ಜ್ಯೋತಿಶ್ಶಾಸ್ತ್ರವು ಪ್ರಬಲ ಸಹಾಯಕವೆಂಬುದು ಸಿದ್ಧಾಂತವು. ಈ ಜ್ಯೋತಿಶ್ಶಾಸ್ತ್ರವು ಸಾಮಾನ್ಯರ ಕೈಗೆ ಸಿಕ್ಕಿ 'ಹುರಳ್ಳಿದ ಭವಿಷ್ಯ' ವೆಂಬ ಆರೋಪಕ್ಕೆ ಪಾತ್ರವಾಗುತ್ತಿರುವದನ್ನು ನೋಡಿ ಪರಮ ವಿಷಾದವಾಗುತ್ತದೆ. ಜ್ಯೋತಿಶ್ಶಾಸ್ತ್ರವನ್ನು ಸಕ್ರಮವಾಗಿ ಅಧ್ಯಯನ ಮಾಡದೆ ಮತ್ತು ಅದರಲ್ಲಿ ಉತ್ತೀರ್ಣರಾಗದೆ ಮನಸ್ಸಿಗೆ ಬಂದಂತೆ ಭವಿಷ್ಯ ಬರೆಯುವ ಈ ಹಸಿಬಿಸಿ ಪಂಡಿತರಿಗೆ ವೃತ್ತಪತ್ರಿಕೆಯ ಸಂಪಾದಕರು ಸಹಾಯಮಾಡುತ್ತಲಿರುವದು ಸಖೇದಾಶ್ಚರ್ಯಜನಕವಾಗಿದೆ.

ಈಗ ಪ್ರಕಟವಾಗುತ್ತಿರುವ ಭವಿಷ್ಯಗಳಲ್ಲಿ ದ್ವಾದಶ ರಾಶಿಯವರಿಗೆ ವರ್ಷ-ಮಾಸ-ಪಕ್ಷ-ವಾರ ಇತ್ಯಾದಿ ನಿತ್ಯ ಭವಿಷ್ಯವನ್ನು ಬರೆಯುತ್ತಿರುವಷ್ಟೆ? ಹೀಗೆ ದ್ವಾದಶರಾಶಿಗಳನ್ನು ಪ್ರಸಿದ್ಧವಾಗಿ ಪ್ರಕಟಿಸಬೇಕಾದರೆ ಆ ಫಲಗಳೆಲ್ಲವೂ ಆಯಾಯ ರಾಶಿಯವರಿಗೆ ನಿಶ್ಚಯವಾಗಿ ಉಂಟಾಗುತ್ತವೆಂಬುವ ಪ್ರಮಾಣವನ್ನು ಈ ಭವಿಷ್ಯ ದ್ವಾದಿಗಳು ನೊದಲು ಪ್ರಕಟಿಸಲಿ. ಒಂದು ರಾಶಿಯು ಎರಡುನೆಕ್ಷತ್ರಗಳಮೇಲೆ ಮತ್ತೊಂದುನೆಕ್ಷತ್ರಚರಣವೊಂದನ್ನು ತೂಡಿಕೊಂಡಿರುವದು. ಅಂದರೆ ಒಂದು ರಾಶಿಗೆ ಮೂರು ನಕ್ಷತ್ರಗಳ ಸಂಬಂಧವಿದ್ದರೂ ಈ ಮೂರು ನಕ್ಷತ್ರಗಳ ವಿಭಾಗವು ದ್ವಿರಾಶಿಗೆ ಸಂಬಂಧಪಟ್ಟಿರುವುದು. ನಕ್ಷತ್ರಫಲವನ್ನು ನಿರೀಕ್ಷಿಸಿದರೆ ನಕ್ಷತ್ರಫಲವು ವಿಪರೀತವಾಗುವದು. ಈ ಗೊಂದಲಕ್ಕೆ ಹೋಗದೆ ದ್ವಾದಶರಾಶಿಗಳರುವ ಗ್ರಹಗೋಚರಫಲವನ್ನು ಬರೆದರೆ ಇದು ಶ್ರುತಿಪ್ರಾಮಾಣ್ಯ ಭವಿಷ್ಯವನ್ನು ತಿಳಿಸುವುದಿಲ್ಲ ದ್ವಾದಶರಾಶಿಯ ಗ್ರಹಗೋಚರಫಲಗಳ ಸಾಮಾನ್ಯಜ್ಞಾನವು ಜ್ಯೋತಿಶ್ಶಾಸ್ತ್ರಾಭ್ಯಾಸಿಗಳಾದ ಬಾಲಕರಿಗಾಗಿ ಪ್ರಾಥಮಿಕಪಾಠವಾಗಿರುವದು. ಈ ಬಾಲಬೋಧಿನಿಯೊಳಗಿನ ವಿಷಯದ ಜ್ಞಾನವನ್ನರಿಯದೆ ಮೇಷಾದಿರಾಶಿಯವರಿಗೆ ಭವಿಷ್ಯವನ್ನು ಬರೆಯುವದು ಪ್ರಾಜ್ಞರ ಲಕ್ಷಣವಲ್ಲ.

ನಮ್ಮ ನಾಡಿನಲ್ಲಿ ಭವಿಷ್ಯದಲ್ಲಿ ನಂಬಿಕೆಯುಳ್ಳ ಜನರು ಹೆಚ್ಚಾಗಿರುವರು. ಈ ನಂಬಿಗೆಯು ಶಾಸ್ತ್ರಾನುಭವವುಳ್ಳದ್ದಲ್ಲ, ಮುಗ್ಧನಂಬಿಗೆಯು. ಈಗ ಭವಿಷ್ಯ ಬರೆಯುವವರಿಗೆ ಜ್ಯೋತಿಶ್ಶಾಸ್ತ್ರದ ನಿಜವಾದ ಪರಿಚಯವಿಲ್ಲವೆಂದಬಳಿಕ ಉಳಿದವರ ವಾಡೀನು? ತಮ್ಮ ಹೆಸರಿನ ಮೊದಲಿನ ಅಕ್ಷರ, ಆ ಅಕ್ಷರವು ಯಾವ ನಕ್ಷತ್ರದ ಯಾವ ರಾಶಿಗೆ ಸೇರಿರುವದನ್ನು ಯಾರಿಂದಲೋ ತಿಳಿದುಕೊಂಡು ವರ್ತಮಾನಪತ್ರದೊಳಗಿನ ಭವಿಷ್ಯವನ್ನು ನೋಡುತ್ತಲಿವರುವರು. ಎಷ್ಟೋ ಜನರು ಈ ಭವಿಷ್ಯ ನೋಡುವದಕ್ಕಾಗಿಯೇ ಪತ್ರಿಕೆಗಳನ್ನು ತೆಗೆದುಕೊಳ್ಳುತ್ತಲಿರುವರಂತೆ! ಇಂಥವರ ಸಂಖ್ಯೆಯು ಬೆಳೆದಿದ್ದರಿಂದಲೇ ಪತ್ರಿಕೆಯವರು ಈ ಭವಿಷ್ಯಕ್ಕಾಗಿ ಒಂದೆರಡು ಪುಟಗಳನ್ನೇ ಕಾಯ್ದಿಟ್ಟಿರುವರು. ಜ್ಯೋತಿಶ್ಶಾಸ್ತ್ರಾಭ್ಯಾಸವನ್ನು ಮಾಡದವರೂ, ಮಾಡಿದವರೂ ಸಹ ಈ ಕಾರ್ಯಕ್ಕೆ ಪ್ರವೇಶಿಸಿದ್ದಾರೆ. ಇದು ವಿದ್ಯಾ ಪ್ರೌಢಿಮೆಗಾಗಿಯಲ್ಲ; ಯಃಕ್ಕಿಂಚಿತ್ ಧನಾಪೇಕ್ಷೆಗಾಗಿರುವದು. ರಾಶಿಯ ಭವಿಷ್ಯವು, ಆ ರಾಶಿಗತ ಜೀವಿಗಳಿಗೆಲ್ಲರಿಗೂ ಉಂಟಾಗುವದೆ? ಪ್ರತಿಯೊಂದು ರಾಶಿಗೆ ಸಂಬಂಧಿಸಿದ ಅನಂತಕೋಟಿ ಜೀವ ರಾಶಿಗಳಿರುವವಷ್ಟೇ? ಪ್ರತಿಯೊಂದು ಪ್ರಾಣಿಯ ಭವಿಷ್ಯವು ಇದರಿಂದ ವ್ಯಕ್ತವಾಗಲು ಸಾಧ್ಯವಿದೆಂದು ಹುಂಬನಿಗೆ ಸಹ ತಿಳಿಯುವುದು.

"ಧ್ರುವಬದ್ಧಂ ನಕ್ಷತ್ರಂ ನಕ್ಷತ್ರೈಶ್ಚ ಗ್ರಹಾಃ ಪ್ರತಿನಿಬದ್ಧಾಃ ।
ಗ್ರಹಬದ್ಧಂ ಕರ್ಮಫಲಂ ಶುಭಾಶುಭಂ ಸರ್ವಜಂತೂನಾಂ ॥"

ನಕ್ಷತ್ರಾದಿಗಳಿಂದ ಬದ್ಧವಾದ ಸೂರ್ಯಾದಿಗ್ರಹಗಳು ಖಗೋಲದಲ್ಲಿದ್ದು ಅವುಗಳಿಂದ ಭೂಗೋಲದ ಸರ್ವ ಜಂತುಗಳೂ ಬದ್ಧವಾಗಿರುತ್ತವೆ. ಇದರಿಂದ ಮನುಷ್ಯಾದಿ ಸಕಲ ಪ್ರಾಣಿಗಳ ಶುಭಾಶುಭ ಜ್ಞಾನವು ವ್ಯಕ್ತವಾಗುತ್ತದೆ.

ಸಮಸ್ತ ಪ್ರಾಣಿಗಳ ಭವಿಷ್ಯವನ್ನು ಕೇವಲ ರಾಶಿಗಳ ಮೇಲಿಂದ ವ್ಯಕ್ತಗೊಳಿಸಿ ಸಂದೇಹಸಾಮ್ರಾಜ್ಯದಲ್ಲಿ ಧುಮುಕಿಸುವುದು ವಿಹಿತವೆಂದು ತೋರುವದಿಲ್ಲ. ಈಗ ಈ ರೀತಿ ಭವಿಷ್ಯ ಬರೆಯುವ ಮೇಧಾವಿಗಳು ಶಬ್ದಾಡಂಬರಗಳನ್ನು ಹಚ್ಚಿಟ್ಟು 'ಸಿಂಹರಾಶಿಯವರೇ! ನಿಮಗೆ ಈ ವಾರದಲ್ಲಿ ಬಲವಿಲ್ಲ. ಹಲ್ಲುಗಳನ್ನು ಕಳೆದುಕೊಂಡ ಸಿಂಹವು ನಿಲವನ್ನು ಸೇರಿದಂತೆ ನೀವು ಹೊರಗಿನ ಉಸಾಬರಿಗೆ ಹೋಗದೆ ಸುಮ್ಮನೆ ಮನೆಯಲ್ಲಿ ಕುಳಿತುಕೊಳ್ಳಿರಿ. ನಿಮ್ಮ ಉಪ್ಪು ಉಂಡವರೇ ನಿಮಗೆ ವಿರೋಧಿಸುವ ಪ್ರಸಂಗವಪ್ಪೆ." 'ಧನುರಾಶಿಯವರೇ? ನಿಮಗೆ ಈ ವಾರದಲ್ಲಿ ಸಂಪೂರ್ಣ ಬಲವಿದೆ. ವಿವಾಹೇ ವ್ಯಾಜ್ಯಗಳು ಗೆದೆಯಲ್ಪಡುವವು. ಘೋಜದಾರಿ ಪ್ರಕರಣದಲ್ಲಿ ಜಯಮಾಲೆಯು ನಿಮ್ಮ ಕೊರಳಿಗೆ ಬೀಳುವದು. ಅಕಸ್ಮಾತ್ತಾಗಿ ಹೊನ್ನಿನ ಹೊಳೆಯು ನಿಮ್ಮ ಮನೆಗೆ ತಾನಾಗಿ ಹರಿದುಬರುವ ಸಂಭವವದೆ." ಇಂಥ ಭವಿಷ್ಯದ ಮಾತುಗಳ ಮಾಲಿಕೆಯು ಎಲ್ಲರನ್ನೂ ಬೆರಗುಗೊಳಿಸಲಾರದೇ? ಭವಿಷ್ಯಗಾರರ ಲೇಖನಿಗೆ ಗಾದೆಯ ಮಾತುಗಳೂ, ನೀತಿಯ ನುಡಿಗಳೂ, ಸಕಲ ಒಗ್ಗರಣೆಗಳಿಂದ ಯುಕ್ತವಾಗಿ ದೊರೆತಿರುತ್ತವೆ. ಇವರ ಭವಿಷ್ಯದಲ್ಲಿ ಅಧಿಕಾರಯುಕ್ತವಾದ ದೆವ್ವೋಕ್ತಿಗಳು ಪದೇ ಪದೇ ಬರುತ್ತಲಿವೆ. 'ಎಚ್ಚರಿಕೆ' 'ಸಾವಧಾನ' "ಕೂತು ಮಲಗರಿ' "ನಿಂತು ಓಡಿರಿ" ಧೈರ್ಯತಾಳಿ ಇವೇ ಮೊದಲಾದ ಜಾಗ್ರತೆಯ ಜಾಣ್ನುಡಿಗಡಲಿನಿಂದ ಭವಿಷ್ಯವು ನೋಟಕರಿಗೆ ಸೀಟಾಗಿ ಕಾಣುವುದು. ಅದು ಏನೇ ಇರಲಿ, ಭವಿಷ್ಯದ ನಿಜಾಂಶವನ್ನಷ್ಟು ವಿಮರ್ಶಿಸೋಣ.

ರಾಶಿಗಳ ಭವಿಷ್ಯವನ್ನು ರಾಶಿಗಳಿಗಾಗಿ ಬರೆಯುವರೋ? ಅಥವಾ ಆ ರಾಶಿಗತ ಜೀವಕೋಟಿಗೆ ಬರೆಯುವರೋ? ರಾಶಿಗಳಿಗಾಗಿ ಬರೆದ ಭವಿಷ್ಯವನ್ನು ಆ ರಾಶಿಯ ಸಕಲ ಜೀವಿಗಳೂ ಭೋಗಿಸುವರೋ? ಭವಿಷ್ಯವಾದಿಗಳು ಭೋಗಿಸುವರೋ? ಜೀವಿಯ ಪಿಂಡಾವಿರ್ಭೂತಕಾಲದ ಮುಹೂರ್ತವು ಭವಿಷ್ಯವನ್ನು ಹೇಗೆ ಹೇಗೆ ತಿಳಿಸಲ್ಪಡುವದು? ಜನ್ಮಲಗ್ನ, ದ್ವಾದಶಭಾವ, ದಶಾಂತರ್ದಶಾಧಿಪಗ್ರಹಾದಿಗಳ ಚಲಸ್ಥಾದಿ ಫಲಗಳು ಈ ರಾಶಿಭವಿಷ್ಯಕ್ಕೆ ಸಂಬಂಧವಿಲ್ಲವೋ? ಗೋಚಾರ ಫಲವು ಸ್ವತಂತ್ರವಾಗಿರುವದೇ? ಹಾಗಿದ್ದರೆ ಈಗಿನ ಭವಿಷ್ಯವಾದಿಗಳು ಪ್ರಮಾಣಗಳನ್ನು ಪ್ರಸಿದ್ಧಪಡಿಸುವರೇ? ತಾಗ ತಾವು ಬರೆಯುವ ಭವಿಷ್ಯವಾದರೂ ಯಾವ ಯಾವ ಆಧಾರಗಳಿಂದ ಬರೆಯಲ್ಪಡುವದು? ಮೇಲ್ಕಂಡ ವಾಡಗ್ರಸ್ತವಿಷಯಗಳಮೇಲೆ ಭವಿಷ್ಯವನ್ನು ಬರೆಯುವದೆ—ಜ್ಯೋತಿರ್ವಿಬುಧ, ಜ್ಯೋತಿಷಾಲಂಕಾರ, ಸಿದ್ಧಾಂತಿಗಳು ಸಿದ್ಧರಾಗುವರೋ

ಪಂಚಾಚಾರ್ಯಪ್ರಭಾ.

೧೯೩೮ನೆಯ ಜುಲೈ ತಾ|| ೧೧ ನೇ ಸೋಮವಾರ

ಲಿಂಗಧಾರಣದ ಶ್ರೇಷ್ಠತೆ.

ದೇವತಾ ದ್ವಿವಿಧಾ ಪ್ರೋಕ್ತಾಃ ಶ್ರೌತಾಶ್ರೌತ ವಿಭಾಗತಃ ।
ಶ್ರೌತ ಧರ್ಮ್ಮನಿಷ್ಠಾನಾಂ ಶ್ರುತಿಸಿದ್ಧಾ ಹಿ ದೇವತಾಃ ॥
ಅಶ್ರೌತತಂತ್ರನಿಷ್ಠಾನಾಂ ಶ್ರುತಿಸಿದ್ಧಾ ನ ದೇವತಾಃ ।
ಅಶ್ರೌತಧರ್ಮನಿಷ್ಠಾನಾಮಶ್ರೌತಾ ಏವ ದೇವತಾಃ ॥
ಶ್ರೌತಧರ್ಮ್ಮನಿಷ್ಠಾನಾಂ ಲಿಂಗಂ ತು ಶ್ರೌತಮೇವ ಹಿ ।
ಅಶ್ರೌತಧರ್ಮನಿಷ್ಠಾನಾಮಶ್ರೌತಂ ಲಿಂಗಮಿಷ್ಯತಂ ॥
ದೇವತಾ ವೇದಸಿದ್ಧಾ ಯಾಸ್ತಾಸಾಂ ಲಿಂಗಂ ತು ವೈದಿಕಂ ।
ಅಶ್ರೌತತಂತ್ರನಿಷ್ಠಾ ಯಾಸ್ತಾಸಾಮಶ್ರೌತಮೇವ ಹಿ ॥

ದೇವರಲ್ಲಿ ಅಶ್ರೌತದೇವರೆಂದೂ ಶ್ರೌತದೇವರೆಂದೂ ಎರಡು ವಿಧವುಂಟು. ಋಗ್ಯಜುಸ್ಸಾಮಗಳಲ್ಲಿ ಯಾವ ಯಾವ ದೇವರ ಸ್ವರೂಪವು ವಿವರಿಸಲ್ಪಟ್ಟಿರುತ್ತದೆಯೋ ಆ ದೇವರು ಶ್ರೌತದೇವರೆಂದೂ ಯಾವ ದೇವರ ಸ್ವರೂಪವು ವಿವರಿಸಲ್ಪಟ್ಟಿರುವುದಿಲ್ಲವೋ ಆ ದೇವರು ಅಶ್ರೌತ ದೇವರೆಂದೂ ಉಕ್ತವಾಗಿದೆ. ಅವೈದಿಕಧರ್ಮವನ್ನು ಅವಲಂಬಿಸಿದವರು ಶ್ರೌತದೇವರನ್ನು ಅರ್ಚಿಸಲಾಗದು. ವೈದಿಕಧರ್ಮವನ್ನವಲಂಬಿಸಿದವರು ಅಶ್ರೌತದೇವರನ್ನು ಅರ್ಚಿಸಲಾಗದು. ಲಿಂಗದಲ್ಲಿ ಶ್ರೌತಲಿಂಗವೆಂತಲೂ ಅಶ್ರೌತಲಿಂಗವೆಂತಲೂ ಎರಡು ವಿಧವುಂಟು. ಗುರುವಿನಿಂದ ಶಿವದೀಕ್ಷಾಪೂರ್ವಕವಾಗಿ ಪಂಚಸೂತ್ರಘಟಿತವಾದ ಶಿವಲಿಂಗವು ವೇದಪ್ರತಿಪಾದ್ಯವಾದುದರಿಂದ ಶ್ರೌತಧರ್ಮನಿರತರಿಂದ ಪೂಜಿಸಲ್ಪಡಲು ಅರ್ಹವಾದುದು. ವೇದಗಳಲ್ಲಿ ಹೇಳಲ್ಪಡದ ಲಿಂಗವಾದರೋ ಅಶ್ರೌತಧರ್ಮನಿರತರಿಂದ ಪೂಜಿಸಲ್ಪಡತಕ್ಕುದು.

ಎಂದು ಶಿವಾಗಮಗಳು ದೇವತಾಸ್ವರೂಪವನ್ನು ಸ್ಪಷ್ಟಪಡಿಸಿರುತ್ತವೆ. ವೀರಶೈವಮತಸ್ಥಾಪನಾಚಾರ್ಯರಾದ ರೇಣುಕಭಗವತ್ಪಾದಾಚಾರ್ಯರು—

ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ ।
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಷ್ಠಯಾತ್ ॥
ಋಗಿತ್ಯಾಹ ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ।
ತಸ್ಮಾತ್ಪವಿತ್ರಂ ತಲ್ಲಿಂಗಂ ಧಾರ್ಯಂ ಶೈವಸಮಾಶ್ರಯಂ ॥
ಬ್ರಹ್ಮೇತಿಲಿಂಗಮಾಖ್ಯಾತಂ ಬ್ರಹ್ಮಣಃ ಪತಿರೀಶ್ವರಃ ।
ಪವಿತ್ರಂ ತದ್ಧಿ ವಿಖ್ಯಾತಂ ತತ್ಸಂಪರ್ಕಾತ್ತ್ವನುಷ್ಠಿತಃ ॥
ಅತಶ್ಚ ತನುರಜ್ಜೋ ವೈ ಆಮಸ್ಯಂಸ್ಕಾರವರ್ಜಿತಃ ।
ದೀಕ್ಷಯಾ ರಹಿತಶ್ಚಾಪ್ಯಸ್ಥಾಸ್ನೈಯಾಲ್ಲಿಂಗಮುತ್ತಮಂ ॥
ಆಶೌರಾಪಾಪಕಾತೀತಃ ಯಾ ತೇ ರುದ್ರ ಶಿವಾ ತನೂಃ ।
ಯಜುಷಾ ಗೀಯತೇ ಯಸ್ಮಾತ್ತಸ್ಮಾಚ್ಛೈವೋಽಘವರ್ಜಿತಃ॥

"ಪವಿತ್ರಂತೇ" ಎಂಬ ಋಗ್ವೇದಮಂತ್ರವೂ, "ಯಾ ತೇ ರುದ್ರ" ಎಂಬ ಯಜುರ್ವೇದಮಂತ್ರವೂ ಶಿವದೀಕ್ಷಾಪೂರ್ವಕವಾಗಿ ಪಂಚಸೂತ್ರಘಟಿತ ಶಿವಲಿಂಗವನ್ನು ಶರೀರದಲ್ಲಿ ಅನವರತವೂ ಧರಿಸುತ್ತ ಹಸ್ತಕಮಲದಲ್ಲಿ ಪೂಜಿಸುತ್ತಿರಬೇಕೆಂದು ಹೇಳುವವೆಂದು ಆಮಂತ್ರಾರ್ಥನಿರ್ವಚನವನ್ನು ಮಾಡಿ ತೋರಿಸಿರುವುದರಿಂದ ವೀರಶೈವರು ಆರಾಧಿಸುವ ಶಿವಲಿಂಗವು ಶ್ರೌತವೆನಿಸುವುದು.

ಶ್ರೌತಾಶ್ರೌತವಿಭೇದೇನ ದ್ವಿಧಾ ಲಿಂಗಸ್ಯ ಧಾರಣಂ ।
ಸಡವ್ಯ ಶುದ್ಧಿಲಿಂಗಂ ತು ಶ್ರೌತಮಿತ್ಯಭಿಗೀಯತೆ ॥
ಅಶ್ರೌತಂ ತಸ್ತಲಿಂಗಾದಿಧಾರಣಂ ಪ್ರೋಚ್ಯತೇ ಶಿವೇ ।
ಶ್ರೌತಾನಾಂ ವೀರಶೈವಾನಾಂ ವೇದಮಾರ್ಗೈಕವರ್ತಿನಾಂ ।
ತಪ್ತಲಿಂಗಪರಿಗ್ರಾಹೇ ಪ್ರತ್ಯವಾಯೋ ಮಹಾನ್ ಭವೇತ್ ॥

ವರ್ಣಾಧ್ವ ಪದಾಧ್ವಾದಿ ಷಡಧ್ವ ಸಂಸ್ಕಾರಪೂರ್ವಕ ಸ್ಫಾಟಿಕ-ಶ್ರೀಶೈಲಜಾದಿ ಪಂಚಸೂತ್ರಘಟಿತಶಿವಲಿಂಗವನ್ನು ಧರಿಸುವದು ಶ್ರೌತಲಿಂಗಧಾರಣವೆನಿಸುತ್ತದೆ. ಲಿಂಗಮುದ್ರೆಯನ್ನು ಅಗ್ನಿಯಲ್ಲಿ ಕಾಯಿಸಿ ಶರೀರದಲ್ಲಿ ಧರಿಸುವುದೇ ಅಶ್ರೌತಲಿಂಗಧಾರಣವೆನಿರುತ್ತದೆ. ವೀರಶೈವರು ಯಾವಾಗಲೂ ವೇದಮಾರ್ಗನಲ್ಲಿಯೇ ಸಂಚರಿಸುವವರಾದುಹರಿಂದ ಶ್ರೌತಲಿಂಗವನ್ನು ಪೂಜಿಸುತ್ತಲೂ ಧರಿಸುತ್ತಲೂ ಇರಬೇಕೆಂದೂ, ವೀರಶೈವರು ಶ್ರೌತ ಲಿಂಗವನ್ನು ಬಿಟ್ಟು ಅಶ್ರೌತವಾದ ತಪ್ತಲಿಂಗವನ್ನು ಧರಿಸಿದರೆ ಮಹಾದೋಷಿಗಳಾಗುತ್ತಾರೆಂದೂ ಶಿವನು ಪಾರ್ವತಿಯನ್ನು ಕುರಿತು ಸಿದ್ಧಾಂತಾಗಮದಲ್ಲಿ ಬೋಧಿಸಿರುವನು.

ಬ್ರಹ್ಮವಿಷ್ಣ್ವಾದಯೋ ದೇವಾ ಮುನಯೋ ಗಾತಪಾದಯಃ ।
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ ॥
ಲಕ್ಷ್ಮ್ಯಾದಿಕಶ್ಚ ಯಸ್ಸರ್ವಾಶ್ಚಿ ಪಭವಿಭಾವಿತಾಃ ।
ಧಾರಯಂತ್ಯಲಿಕಾಗ್ರೇಷು ಶಿವಲಿಂಗಮಹರ್ನಿಶಂ ॥
ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ ।
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಷ್ಠಯಾತ್ ॥

ಚತುರ್ಮುಖಬ್ರಹ್ಮನೂ, ವಿಷ್ಣುವೂ ಇಂದ್ರಾದಿ ದೇವತೆಗಳೂ, ಗೌತಮಾದಿಮುನಿಗಳೂ, ಲಕ್ಷ್ಮೀ ಸರಸ್ವತ್ಯಾದಿ ದೇವಿಯರೂ ಈ ಶ್ರೌತಲಿಂಗವನ್ನು ತಮ್ಮ ಉತ್ತಮಾಂಗಗಳಲ್ಲಿ ಧರಿಸಿ ಪೂಜಿಸಿ ತಮ್ಮ ತಮ್ಮ ಮಹಾಪದವಿಗಳನ್ನು ಪಡೆದಿರುವರು. ಎಂದು ರೇಣುಕ ಭಗವತ್ಪಾದರು ಶ್ರೌತಲಿಂಗಧಾರಣದ ಆಧಿಕ್ಯವನ್ನು ಜಗತ್ತಿನಲ್ಲಿ ಸಾರಿರುವರು.

ಗುರುರ್ಲಿಂಗಂ ಜಂಗಮಶ್ಚ ತೀರ್ಥಂ ಚೈವ ಪ್ರಸಾದಕಂ ।
ಭಸ್ಮರುದ್ರಾಕ್ಷಮಂತ್ರಾಶ್ಚೇತ್ಯಷ್ಟಾವರಣಸಂಜ್ಞಿತಾಃ ॥

ಎಂಬ ಶಿವಾಗಮವಚನಪ್ರಕಾರವಾಗಿ ವೀರಶೈವನ ಉದ್ಧಾರಕ್ಕಾಗಿ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷ, ಮಂತ್ರಗಳೆಂಬ ಎಂಟು ವಸ್ತುಗಳುಂಟು. ಇವುಗಳಿಗೆ ಅಷ್ಟಾವರಣಗಳೆಂದು ಹೇಳುತ್ತಾರೆ. ಈ ಅಷ್ಟಾವರಣಗಳಲ್ಲಿ ಶಿವಲಿಂಗವೇ ಪ್ರಧಾನವಾದುದು. ಉಳಿದವುಗಳು ಆ ಲಿಂಗಕ್ಕೆ ಸಾಧನವಾದವುಗಳು. ಶಿವಲಿಂಗದ ಸ್ವರೂಪವನ್ನು ತಿಳಿದುಕೊಳ್ಳುವುದಕ್ಕಾಗಿಯೇ ಗುರು ಜಂಗಮ ಪಾದೋದಕ ಪ್ರಸಾದ ಮಂತ್ರ ರುದ್ರಾಕ್ಷ ಭಸ್ಮ ಇವು ಬೇಕಾಗಿವೆ. ಲಿಂಗದ ಸ್ವರೂಪವನ್ನು ತಿಳಿಯಲಿಚ್ಛಿಸದವನಿಗೆ ಗುರುಜಂಗಮರಾಗಲಿ, ತೀರ್ಥಪ್ರಸಾದಗಳಾಗಲಿ, ಭಸ್ಮರುದ್ರಾಕ್ಷಗಳಾಗಲಿ, ಮಂತ್ರವಾಗಲಿ ಯಾವುವೂ ಬೇಕಾಗಿಲ್ಲ. ಭವರೋಗಿಗೆ ಶಿವಲಿಂಗವೇ ಜೀವನೌಷಧವು. ಗುರುವೇ ಔಷಧದಾತೃವು. ಪಾದೋದಕಪ್ರಸಾದಾದಿಗಳೇ ಪಥ್ಯವು. ಮಂತ್ರರುದ್ರಾಕ್ಷಭಸ್ಮಗಳೇ ಚಿಕಿತ್ಸೆಯು. ಜಂಗಮನೇ ಚಿಕಿತ್ಸಾದಾಯಕನು. ಅನಾದಿಕಾಲದಿಂದ ಜನನಮರಣರೂಪಮಹಾತಾಪಪೀಡಿತನಾಗಿ ನೆರಳುತ್ತಿರುವ ಜೀವನು ಸ್ಥೂಲಶರೀರಕ್ಕುಂಟಾದ ರೋಗಗಳನ್ನು ಆಯುರ್ವೇದದಲ್ಲಿ ಉಕ್ತವಾದ ಔಷಧಸೇವನೆಯಿಂದಲೂ, ಪಥ್ಯಗಳಿಂದಲೂ ಪರಿಹರಿಸಿಕೊಳ್ಳುವಂತೆ ಋಗಾದಿವೇದೋಕ್ತವಾದ ಗುರುಮಹಾವೈದ್ಯದತ್ತವಾದ ಶಿವಲಿಂಗವೆಂಬ ಸಂಜೀವಿನೀಸೇವನೆಯಿಂದ ಭವರೋಗವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ವೀರಶೈವರಿಗೆ ಈ ಶ್ರೌತಲಿಂಗವಿಧಾನವು ಸಿದ್ಧಾಂತದಲ್ಲಿ ಉಕ್ತವಾಗಿದೆ.

ಅಷ್ಟಾವರಣಸಂಪನ್ನಃ ಪಂಚಾಚಾರಪರಾಯಣಃ ।
ವೈದಿಕಂ ಕರ್ಮ ಕುರ್ವೀತ ಜ್ಞಾನೈಕಫಲಸಾಧನಂ ॥

ಅಷ್ಟಾವರಣಗಳನ್ನೂ ಪಂಚಾಚಾರಗಳನ್ನೂ ಅವಲಂಬಿಸಿದವನಾವನುಂಟೋ ಅವನು ಸ್ವರ್ಗಸ್ಥಾರಾಜ್ಯಾದ್ಯನಿತ್ಯ ಫಲಗಳಿಗೆ ಸಾಧನವಾದ ಜ್ಯೋತಿಷ್ಟೋಮಾದಿ ಪಶುಕರ್ಮ್ಮಗಳನ್ನನುಷ್ಠಿಸದೆ ಜ್ಞಾನಸಾಧನವಾದ ಶಿವಲಿಂಗಧಾರಣ ಪೂಜಾದಿ ವೇದೋಕ್ತಕರ್ಮಗಳನ್ನನುಷ್ಠಿಸಬೇಕೆಂಬ ಶ್ರೀಜಗದ್ಗುರು ಪಂಚಾಚಾರ್ಯರು ನಿಯಮಮಾಡಿರುವದರಿಂದ ವೀರಶೈವರು ಈ ಶ್ರೌತಶಿವಲಿಂಗವನ್ನು ಧರಿಸಿ ಪೂಜಿಸಿ ಮೋಕ್ಷಸುಖವನ್ನು ಪಡೆದು ಧನ್ಯರಾಗಬೇಕಾದುದು ಅವರ ಆದ್ಯಕರ್ತವ್ಯವಾಗಿದೆ.

ಒಳದೇಶದ ವೃತ್ತಾಂತಗಳು.

ಈ ವರ್ಷದ ದಸರಾ ಪ್ರದರ್ಶನವು ಸೆಪ್ಟಂಬರ್ ಮಾಹೆ 24 ನೆಯ ತಾರೀಖು ಶನಿವಾರದಿಂದ ಅಕ್ಟೋಬರ್ 9 ನೆಯ ತಾರೀಖಿನವರೆಗೆ ನಡೆಯುವುದೆಂದು ತಿಳಿದುಬರುತ್ತದೆ.

ಬೆಂಗಳೂರಿನಿಂದ ಹೊರಡುತ್ತಿದ್ದ ನವಜೀವನವೆಂಬ ದೈನಂದಿನಪತ್ರಿಕೆಯ ಸಂಪಾದಕರಿಗೆ ವಿಶೇಷ ನಷ್ಟವಾದ ಕಾರಣದಿಂದ ಜುಲೈ ತಿಂಗಳಿನಿಂದ ಆ ಪತ್ರಿಕೆಯು ನಿಂತುಹೋಯಿತೆಂದು ತಿಳಿದುಬರುತ್ತದೆ.

ಮೈಸೂರು ಸಂಸ್ಥಾನದ ವಿದ್ಯಾರ್ಥಿಸಮ್ಮೇಳನದವರು ಕಳೆದ 6 ನೆಯ ತಾರೀಖಿನ ಸಾಯಂಕಾಲ ದಿವಾನರ ಬಳಿಗೆ ನಿಯೋಗಗೋಷ್ಠಿಯನ್ನು ಕಳುಹಿಸಿದ್ದರು. ಅಕಾರಾಕಳೇರಿಯಲ್ಲಿ ದಿವಾನರು ಶಾಂತಚಿತ್ತದಿಂದ ಅವರು ಹೇಳಿದ್ದನ್ನೆಲ್ಲಾ ಕೇಳಿ, ಸಮ್ಮೇಳನದ ಖರ್ಚಿಗಾಗಿ 100 ರೂಪಾಯಿಗಳನ್ನು ದಾನಮಾಡಿದರೆಂದು ಕೇಳುತ್ತೇನೆ.

ಬೇಲೂರು ತಾ|| ಬಸವನಹಳ್ಳಿಗ್ರಾಮದ ಕಾಫಿ ತೋಟದ ಕೂಲಿಯಾದ ರಂಗನೆಂಬವನು ತನ್ನ ಹೆಂಡತಿ ವೆಂಕಟೆಯೆಂಬವಳ ನಡತೆಯ ವಿಷಯದಲ್ಲಿ ಸಂದೇಹ ಪಟ್ಟು ಅವಳನ್ನು ಮಚ್ಚಿನಿಂದ ಹೊಡೆಯಲು ಅದರಿಂದ ಅವಳು ಮೃತಳಾದಳೆಂದು ಮೊಕದ್ದಮೆಯಾಗಿತ್ತು. ಆಪಾದಿತನ ತಪ್ಪು ರುಜುವಾತಾಯಿತೆಂದು ಸೆಷನ್ಸ್ ಜಡ್ಜರಾದ ಮೆ|| ಎಚ್. ಕೆ. ವೀರಬಸವಯ್ಯನವರು, ಅಪರಾಧಿಗೆ 5 ವರ್ಷಗಳ ಕಠಿನ ಶಿಕ್ಷೆಯನ್ನು ವಿಧಿಸಿದರು.

ಈಗ್ಗೆ ಕೆಲವು ದಿವಸಗಳ ಹಿಂದೆ ದೊಡ್ಡಬಳ್ಳಾಪುರ ತಾ|| ಆಫೀಸಿನ ಬಳಿ ಇರುವ ಆದಿಕರ್ನಾಟಕರ ಪಾಳ್ಯದಲ್ಲಿ ಗಿಡ್ಡಪ್ಪ ಎಂಬಾತನ ಮನೆಯಲ್ಲಿ, ಮೇಕೆಯ ಹೊಟ್ಟೆಯಲ್ಲಿ ಒಂದು ಕುರಿಮರಿಯು ಜನನವಾಗಿರುತ್ತದೆ. ಆದರೆ ಆಕಾರವು ವಿಚಿತ್ರವಾಗಿದೆ. ಕೊಂಬು ಕಾಲು, ಮುಖ ಮತ್ತು ಬಾಲ ಇವುಗಳು ಮೇಕೆಯ ರೂಪವಾಗಿದ್ದು ಇನ್ನುಳಿದ ಭಾಗವೆಲ್ಲವೂ ಕುರಿಯ ಆಕಾರವಾಗಿರುತ್ತದೆ. ಇದು ಕುರಿಯ ಹಿಂಡಿನಲ್ಲಿ ಸೇರುವುದಿಲ್ಲ. ಕುರಿಗೆ ತುಪ್ಪಟವಿದ್ದಂತೆ ಇದಕ್ಕೂ ಸಹ ಮುಖ ಒಂದು ಬಿಟ್ಟು ಜಾಕಿ ಎಲ್ಲೆಲ್ಲೂ ಅದರಂತೆ ವಿಪರೀತ ತುಪ್ಪಟ ಬೆಳೆದಿರುತ್ತದೆ. ಇದನ್ನು ನೋಡಿದವರೆಲ್ಲರೂ ಆಶ್ಚರ್ಯಪಡುವರು. ಅಲ್ಲದೆ ಇದನ್ನು ಮೈಸೂರು ತಮಾಷೆ ಬಂಗಲೆಗೆ ಕಳುಹಿಸಲು ಇಲ್ಲಿನ ಪಶು ವೈದ್ಯಶಾಲೆಯವರು ವಿಚಾರಮಾಡುತ್ತಿರುವರಂತೆ !

ಚನ್ನಗಿರಿಗೆ ರಂಭಾಪುರೀಜಗದ್ಗುರುಗಳವರ ಆಗಮನ:

ಶಿವಮೊಗ್ಗಾ ಡಿ|| ಚನ್ನಗಿರಿ ಟವನ್ ನಿವಾಸಿಗಳಾದ ವೀರಶೈವಮಹಾಜನಗಳ ಸ್ವಾರ್ಥನೆಯ ಮೇರೆಗೆ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ 108 ಜಗದ್ಗುರು ಶಿವಾನಂದವರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು ಇದೇ ತಿಂಗಳು 18 ನೆಯ ತಾರೀಖು ಸೋಮವಾರ ದಿವಸ ಬಿಜಯಮಾಡುವರೆಂದೂ, ಆ ದಿವಸ ಅಸಾಧಾರಣ ವೈಭವದೊಡನೆ ಮಹೋತ್ಸವವು ನೆರವೇರುವದೆಂದೂ ಆ ಸಮಯಕ್ಕೆ ಗುರುಭಕ್ತರೆಲ್ಲರೂ ಆಗಮಿಸಿ ಮಹೋತ್ಸವನಲ್ಲಿ ಭಾಗಿಗಳಾಗಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದೂ ಸ್ವಾಗತಸಮಿತಿಯವರು ಕೋರುತ್ತಾರೆ.

ವರ್ತಮಾನಸಂಗ್ರಹ.

ಆಸ್ಟ್ರಿಯದ ಯಹೂದ್ಯವಕೀಲರ ಪಾಡು

ಆಸ್ಟ್ರಿಯಾದೇಶದ 776 ಮಂದಿ ಯಹೂದ್ಯವಕೀಲರ ಸನ್ನದುಗಳು ರದ್ದುಮಾಡಲ್ಪಟ್ಟಿವೆ. ಅಲ್ಲಿಯ ಪ್ರಮುಖ ಕೈಗಾರಿಕೆಯ ಕಾರ್ಖಾನೆಗಳೆಲ್ಲವೂ ಹಿಟ್ಲರನ ಆಜ್ಞಾಧೀನವಾಗಿವೆ.

ಪ್ಯಾಲಸ್ತೈನ್ ಗಲಭೆ

ಪ್ಯಾಲಸ್ತೈನಿನಲ್ಲಿ ಅಸಾಧ್ಯವಾದ ಗಲಭೆಗಳು ನಡೆದು ಅನೇಕ ಮರಣಗಳಾದವು. ಪ್ರಯಾಣಿಕರಿಂದ ಕೂಡಿದ ಬಸ್ಸೊಂದು ಹೋಗುತ್ತಿದ್ದ ಕಾಲದಲ್ಲಿ ಅದರಮೇಲೊಂದು ಬಾಂಬನ್ನು ಎಸೆಯಲಾಯಿತು. ಅದು ಸಿಡಿದು 3 ಜನರು ಕೊಲ್ಲಲ್ಪಟ್ಟರು. ಜಾಫಾವಲ್ಲಿ ನಡೆದ ಘರ್ಷಣದಲ್ಲಿ ಜೂರಿಯು ಇರಿತದಿಂದ 4 ಜನ ಅರಬರು ಕೊಲ್ಲಲ್ಪಟ್ಟರೆಂದೂ ಮತ್ತು 5 ಜನ ಗಾಯಗೊಂಡರೆಂದೂ ತಿಳಿದುಬಂದಿವೆ. ಇಬ್ಬರು ಜ್ಯೂಗಳಿಗೆ ಗಾಯಗಳಾಗಿವೆ.

ಅಗ್ನಿಯ ಅನಾಹುತ

ತಿರುಪತಿ ಬಳಿ ಇರುವ ಆಗಾರಾಲ ಯೆಂಬ ಗ್ರಾಮದಲ್ಲಿ ಕಳೆದ ೬ ನೆಯ ತಾರೀಖಿನ ಸಾಯಂಕಾಲ ಬೆಂಕಿ ಹತ್ತಿ 60 ಗುಡಿಸಲುಗಳು ಬೂದಿಯಾದವು. 10,000 ರೂ. ಗಳು ನಷ್ಟವಾಗಿದೆಯೆಂದು ಅಂದಾಜು ಮಾಡಲಾಗಿದೆ.

ಜಪಾನಿನಲ್ಲಿ ಪ್ರವಾಹದ ಅನಾಹುತ

ಜಪಾನಿನ ಕೋಬೆ ನಗರವೆಲ್ಲ ಪ್ರವಾಹದಿಂದ ನೀರಲ್ಲಿ ಮುಳುಗಿ ಹೋಗಿದೆ. ಈ ಪ್ರವಾಹದ ಅನಾಹುತದಿಂದ 131 ಜನರು ಮೃತರಾದರು. 300 ಜನರ ಪತ್ತೆಯೇ ಇಲ್ಲ. ಪ್ರಜೆಗಳೆಲ್ಲರೂ ತಲ್ಲಣಿಸುತ್ತಿದ್ದಾರೆ.

ಸೂಯಜಿನಲ್ಲಿ ಮುಷ್ಕರ

ಸೂಯಜ್ ಕಾಲುವೆಯಲ್ಲಿ ಬೆಂಕಿಬಿದ್ದು ಉರಿಯುತ್ತಿದ್ದ ದೆಂದು ನೌಕೆಯನ್ನು ಒಂದುಕಡೆಗೆ ಎಳೆದುಹಾಕಲು ಕೆಲಸಗಾರರು ನಿರಾಕರಿಸಿದ್ದರಿಂದ ಸೂಯಜ್ ಕಾಲುವೆಯಲ್ಲಿ ಇತರ ನೌಕೆಗಳ ಪ್ರವೇಶಕ್ಕೆ ಅಡಚಣೆಯುಂಟಾಗಿದೆ.

ವೈಸ್‌ರಾಯರ ಸಂಚಾರ

ವೈಸ್ರಾಯರವರು ಈ ತಿಂಗಳು ೨೩ ನೆಯ ತಾರೀಖಿನ ದಿವಸ ಸಿಮ್ಲಾ ನಗರವನ್ನು ಬಿಟ್ಟು ಧೋಲಪುರ, ತಲಾಂ, ಧಾರಾ, ಕೋಟಾ, ಬೂಂದಿ, ಜೆಹರಾಹೂನ್ ಮೊದಲಾದ ನಗರಗಳಲ್ಲಿ ಸಂಚರಿಸುವರು. 11 ದಿವಸ ಗಳವರೆಗೆ ಅವರ ಸಂಚಾರವು ನಡೆಯುವದೆಂದು ತಿಳಿದು ಬರುತ್ತದೆ.

ಎಲೆಕ್ಟ್ರಿಕ್ ಹಾರ್ನ್ ಉಪಯೋಗಿಸಲು ಅಡ್ಡಿ!

ಬೊಂಬಾಯಿ ನಗರದಲ್ಲಿ ಸಂಚರಿಸುವ ಮೋಟಾರು ಸೈಕಿಂದಾಗುವ ಶಬ್ದವನ್ನು ಆದಷ್ಟು ಕಡಿಮೆ ಮಾಡಬೇಕೆಂದು ಅಲ್ಲಿಯ ಪೋಲೀಸು ಇಲಾಖೆಯವರು ನಿರ್ಧರಿಸಿ ತದಕ್ಕಾಗಿ ಮುಂದಿನವರುಷ ಜನವರಿ ತಿಂಗಳಿನಿಂದ ಯಾವ ಮೋಟಾರುವಾಹನಗಳೂ ವಿದ್ಯುಚ್ಛಕ್ತಿಯಹಾರ್ನ್‌ಗಳನ್ನು ಉಪಯೋಗಿಸಕೂಡದೆಂದು ಆಜ್ಞೆ ಮಾಡಿರುತ್ತಾರೆ.

ಹತ್ತಿಯಿಂದ ಮನೆ!

ಅಮೆರಿಕದ ಯುನೈಟೆಡ್ ಸ್ಟೇಟ್ಸಿನ ಸಂಶೋಧಕರು ಹತ್ತಿಯಿಂದ ಮನೆಯನ್ನು ನಿರ್ಮಿಸುವ ಉಪಾಯವನ್ನು ಕಂಡುಹಿಡಿಯುತ್ತಿರುವರು. ಅವರ ಪ್ರಯೋಗದಂತೆ ಗೃಹಗಳು ಒಳಗೂ ಹೊರಗೂ ಹತ್ತಿಯಿಂದಲೇ ತಯಾರಿಸಲ್ಪಡುತ್ತವೆ. ಆಧುನಿಕ ಎಲ್ಲ ಅನುಕೂಲಗಳೂ ಈ ಗೃಹದಲ್ಲಿ ಒದಗಿಸಲ್ಪಡುತ್ತವೆ. ಬೆಂಕಿ ಗಾಳಿಗಳ ಭಯವೂ ಇದಕ್ಕೆ ಇರುವುದಿಲ್ಲ.

ರೈಲಿನಲ್ಲಿ ಸ್ತ್ರೀಹತ್ಯೆ!

ಕಳೆದ 1 ನೆಯ ತಾರೀಖು ಶುಕ್ರವಾರ ರಾತ್ರಿ ಪಂಜಾಬ್ ಮೇಲಿನ 2 ನೆ ತರಗತಿಯಲ್ಲಿ ಮಧ್ಯವಯಸ್ಸಿನ ಪಾರ್ಸಿ ಯುವತಿಯ ಕೊಲೆ ಸಂಭವಿಸಿದೆ. ಅವಳ ಹೆಸರು ಅವಳ ಪೆಟ್ಟಿಗೆಯಲ್ಲಿದ್ದ ಕಾರ್ಡಿನಮೇಲೆ "ಶ್ರೀಮತಿ ಬನ್ನೂಬಾಯಿ ಸವತ್ಸತಾಣಾಪೂರೇವಾಲ" ಎಂಬುದಾಗಿ ತಿಳಿದು ಬಂದಿದೆ. ಅವಳು ಶುಕ್ರವಾರ ಬೆಳಿಗ್ಗೆ ರೈಲುಹತ್ತಿದಳು. ದಿನ ರಾತ್ರಿ ಅವಳ ಶವವು ನರ್ಮದಾ ನದಿಯ ಸೇತುವೆಯ ಮೇಲೆ ದೊರೆಯಿತು.

ಉಕ್ಕಿನ ನಾಣ್ಯ!

ಇಟಲಿದೇಶದವರು ಹೊರಗಿನಿಂದ ತರಿಸಿಕೊಳ್ಳುವ ಪದಾರ್ಥಗಳನ್ನು ಕಡಿಮೆಮಾಡಬೇಕೆಂಬ ಉದ್ದೇಶದಿಂದ ಅನೇಕ ಉಪಾಯಗಳನ್ನು ಹುಡುಕುತ್ತಿದ್ದಾರೆ ಮುಂದಿನ ಕ್ಟೋಬರ್ ತಿಂಗಳಿನಿಂದ ನಾಣ್ಯಗಳ ತಯಾರಿಗೆ ಹಿತ್ತಾಳೆಯನ್ನು ಉಪಯೋಗಿಸುವ ಬದಲು ಉಕ್ಕು ಮಿಶ್ರಿತವಾದ ಒಂದು ಬಗೆಯ ಲೋಹವನ್ನು ಉಪಯೋಗಿಸಲೇಕೆಂದು ಅವರು ನಿರ್ಧರಿಸಿರುವರು.

ಶ್ರೀಮನ್ಮಹಾರಾಜರವರ ನಾಮಾಂಕಿತ ಭತ್ರ

ಸೇಲಂ ಮುನಿಸಿಪಲ್ ಕೌನ್ಸಿಲಿನವರು 20 ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಒಂದು ಧರ್ಮ ಭತ್ರವನ್ನು ಕಟ್ಟಿಸಿರುವರು. ಇದಕ್ಕೆ ಶ್ರೀ ಕೃಷ್ಣರಾಜೇಂದ್ರ ಮುನಿಸಿಪಲ್ ಭತ್ರವೆಂದು ಹೆಸರಿಟ್ಟಿದ್ದಾರೆ. ನಮ್ಮ ಶ್ರೀಮನ್ಮಹಾರಾಜರವರು 1923 ರಲ್ಲಿ ಆ ಪಟ್ಟಣಕ್ಕೆ ದಯಮಾಡಿಸಿದ್ದಾಗ 2500 ರೂಪಾಯಿಗಳನ್ನು ದಾನವಾಗಿ ಕೊಟ್ಟಿದ್ದರಿಂದ ಅದಕ್ಕೆ ಅವರ ನಾಮಧೇಯವನ್ನಿಡಲಾಗಿದೆ.

ತುರ್ಕಿಯಲ್ಲಿ ಖೈದಿಗಳ ಬಿಡುಗಡೆ

ತುರ್ಕಿದೇಶದ ಅಂಕಾರದ ರಾಜಕೀಯ ಖೈದಿಗಳೆಲ್ಲರನ್ನೂ ಮತ್ತು 150 ಮಂದಿ ದೇಶದ್ರೋಹಿಗಳೆಂದು ಗಡಿಪಾರುಮಾಡಲ್ಪಟ್ಟಿದ್ದವರನ್ನೂ ಸರಕಾರವು ಮನ್ನಿಸಿ ಬಿಡುಗಡೆ ಮಾಡಲಿದೆಯೆಂದು ಪ್ರಕಟವಾಗಿದೆ. ಗಡೀಪಾರಾಗಿ ಅನ್ಯದೇಶದಲ್ಲಿ ವಾಸಿಸುತ್ತಿದ್ದವರಲ್ಲಿ 74 ಜನರು ಜೀವಂತರಾಗಿರುವರೆಂದೂ ಅವರೆಲ್ಲರೂ ಹಿಂತಿರುಗಿ ತುರ್ಕಿಗೆ ಬರಲಿರುವರೆಂದೂ ತಿಳಿದುಬರುತ್ತದೆ.

ಮಿಲಿಟರಿ ಅಧಿಕಾರಿಗಳ ಸಂಬಳದಮೇಲೆ ಕೋರ್ಟು ಅಟಾಚ್‌ಮೆಂಟ್ ಕೂಡದು.

ಮಿಲಿಟರಿ ಅಧಿಕಾರಿಗಳ ಸಂಬಳಗಳನ್ನು ವಶಪಡಿಸಿಕೊಳ್ಳುವ ವಿಚಾರದಲ್ಲಿ ಇಂಡಿಯಾ ಸರಕಾರದ ರಕ್ಷಣಾಶಾಖೆಯವರು ಹೇಳಿಕೆಯೊಂದನ್ನು ಹೊರಡಿಸಿರುವರು. ಅದರಂತೆ 1938 ನೆಯ ಸೈನ್ಯ ಮತ್ತು ವೈಮಾನಿಕ ಕಾನೂನಿನ 4 ನೆಯ ವಿಧಿಯಂತೆ 3-12-38 ನೆಯ ತಾರೀಖಿನ ಮೇಲೆ ಅಧಿಕಾರಿಗಳು ಮಾಡುವ ಸಾಲಗಳನ್ನು ಕೋರ್ಟಿನ ಆಜ್ಞೆಯಂತೆ ವಶಪಡಿಸಿಕೊಳ್ಳಲಾಗುವುದಿಲ್ಲವೆಂದು ಇಂಡಿಯಾ ಸರ್ಕಾರದವರು ಸಾರ್ವಜನಿಕರ ಗಮನಕ್ಕೆ ತರಲಿಚ್ಛಿಸಿರುವರು.

ಹಿಟ್ಲರನು ಇಟಲಿ ರಾಜಪುತ್ರಿಯನ್ನು ವರಿಸುವನಂತೆ!

ಇಟಲಿ ಅರಸರ ಪುತ್ರಿಯಾದ ರಾಜಕುಮಾರಿ ಮೇರಿಯಾ ಎಂಬ 23 ವರ್ಷ ವಯಸ್ಸಿನ ಯುವತಿಯು ಜರ್ಮನಿಯ ಸರ್ವಾಧಿಕಾರಿ ಹಿಟ್ಲರನನ್ನು ಮದುವೆಯಾಗುವಳೆಂಬ ಸುದ್ದಿ ಹೊರಟಿದೆ. ಕಳೆದಸಾರೆ ಹಿಟ್ಲರನು ಇಟಲಿಗೆ ಬಂದಿದ್ದಾಗ್ಗೆ ರಾಜಕುಮಾರಿಯವನ್ನು ತನಗೆ ಲಗ್ನ ಮಾಡಿಕೊಡಬೇಕೆಂದು ಕೇಳಿದನಂತೆ!

ಸ್ಪೇ ಯುದ್ಧ!

ಸುಗುಟಾವಿನಿಂದ 15 ಮೈಲು ದೂರದಲ್ಲಿರುವ ಬರಿಯಾನಾ ನೌಕಾದೇವನ್ನು ದಂಗೆಕೋರರು ವಶಪಡಿಸಿಕೊಂಡರು. ಅದು ಮೆಡಟರೇನಿಯನ್ ಸಮುದ್ರತೀರದಲ್ಲಿದೆ. ಸಾಗುಂಟ ಮತ್ತು ವೆಲೆನ್ಸಿಯದ ಮುಖ್ಯ ರಕ್ಷಣಾಕ್ಷೇತ್ರವಾದ ನ್ಯೂಲ್ಲಿನ ಕಡೆಗೆ ದಂಗೆಕೋರರು ನುಗ್ಗುತ್ತಿರುವರು. ದಂಗೆಕೋರರು ಮುಂದುವರಿದು ಸ್ಪೇನಿನ ಸರ್ಕಾರದ 8 ಸೈನ್ಯಪಡೆಗಳನ್ನು ನಾಶಮಾಡಿದರೆಂದೂ 2 ಸಾವಿರ ಜನರನ್ನು ಸೆರೆಹಿಡಿದರೆಂದೂ, ನೂರು ಮೈಲಿಗಳ ಸ್ಥಳವನ್ನು ಆಕ್ರಮಿಸಲಾಯಿತೆಂದೂ ಹೇಳಲಾಗಿದೆ.

ಮರಣದಂಡನೆ

ಹೈದರಾಬಾದ್ ಪ್ರಾಂತದಲ್ಲಿ ಭರಮಯ್ಯನೆಂಬವನು ಬಾಲಮ್ಮನೆಂಬ ಹೆಣ್ಣೊಂದುವರ್ಷದ ಹುಡುಗಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಅವಳನ್ನು ತೊಂದು ಅವಳ ಮೈಮೇಲಿದ್ದ 600 ರೂ. ಬೆಲೆಬಾಳುವ ಆಭರಣಗಳನ್ನು ಕಸಿದುಕೊಂಡನೆಂಬ ಆಪಾದನೆಯಮೇಲೆ ಸೆಷನ್ಸ್ ಜಡ್ಜರು ಅವನಿಗೆ ಜೀವಾಂತ್ಯದವರೆಗೆ ಸೆರೆಮನೆಯ ವಾಸವನ್ನು ವಿಧಿಸಿದ್ದರು. ಅದು ಶ್ವೀಕೃತಿಗೋಸ್ಕರ ಹೈಕೋರ್ಟಿಗೆ ಬರಲು ನಾಜಿಯಾರ್‌ಜಂಗ್ ಮತ್ತು ರಾಯ್ ಬಿಶ್ವೇಶ್ವರನಾಥರವರು ಅವನಿಗೆ ಮರಣದಂಡನೆಯನ್ನು ವಿಧಿಸಿದರು.

ಜಪಾನ್ ಮಂತ್ರಿಮಂಡಲದ ಪ್ರಾರ್ಥನೆ

ಒಂದು ವರ್ಷದ ಯುದ್ಧದ ಸಂಬಂಧವಾಗಿ ಜಪಾನಿನ ವಿದೇಶಾಂಗ, ಆರ್ಥಿಕ, ಯುದ್ಧದ ಮತ್ತು ನೌಕಾಶಾಖೆಗಳ ಸಚಿವರು ಒಂದು ಹೇಳಿಕೆಯನ್ನು ಹೊರಡಿಸಿ ಎಷ್ಟು ವರ್ಷವಾದರೂ ಚೀನದ ಈ ಯುದ್ಧದಲ್ಲಿ ಜಯ ಹೊಂದುವವರೆಗೆ ಜಪಾನರು ಮುಂದೆಬಂದು ತ್ಯಾಗಮಾಡಬೇಕೆಂದು ಸೂಚಿಸಿದರು. ಆ ಹೇಳಿಕೆಯಲ್ಲಿ ಹಾಂಕೋನಗರವು ಬಹುಬೇಗ ಕೈವಶವಾಗುವುದೆಂದೂ, ಮಾರ್ಷಲ್ ಚಿಯಾಂಗ್ ಕೈಷೇಕರ ಆಡಳಿತವನ್ನು ಒಪ್ಪುವುದಿಲ್ಲವೆಂದೂ, 'ಕಮ್ಯೂನಿಜಂ ಮಟ್ಟಹಾಕಲಾಗುವುದೆಂದೂ ಸೂಚಿಸಲಾಗಿದೆ. ಜಪಾನರ ಅಧಿಕಾರಯುತವಾದ ಹೇಳಿಕೆಯಂತೆ 5,10,109 ಚೀನರೂ 36,629 ಜಪಾನರೂ ಸತ್ತಿರುವುದಾಗಿ ಗೊತ್ತಾಗಿದೆ. ಚೀನಾ ಜಪಾನ್ ಯುದ್ಧವಾರಂಭವಾದ ಕಾಲದಿಂದ ಚೀನರಿಂದ 218 ಭಾರವಾದ ಫಿರಂಗಿಗಳನ್ನೂ, 275 ಟ್ಯಾಂಕುಗಳನ್ನೂ, ಶಸ್ತ್ರ ಸಜ್ಜಿತ ಕಾರುಗಳನ್ನೂ, ಮೋಟಾರು ಲಾರಿಗಳನ್ನೂ ಶಸ್ತ್ರಸಜ್ಜಿತವಾದ 8 ರೈಲುಗಳನ್ನೂ, 89 ರೈಲ್ವೆ ಇಂಜಿನ್ನುಗಳನ್ನೂ, 2171 ರೈಲ್ವೆ ಗಾಡಿಗಳನ್ನೂ ಮತ್ತು 11,950 ಚೀನರ ಕತ್ತಿಗಳನ್ನೂ ವಶಪಡಿಸಿಕೊಳ್ಳಲಾಯಿತು. ಜಪಾನರ ಸಮುದ್ರ ನೌಕಾದಳವು 43 ಚೀನರ ಯುದ್ಧಪ ಹಡಗುಗಳನ್ನು ನಾಶಪಡಿಸಿದುವೆಂದೂ ವೈಮಾನಿಕದಳವು ಚೀನರ 1070 ವಿಮಾನಗಳನ್ನು ನಾಶಪಡಿಸಿದುವೆಂದೂ ತಮ್ಮ ಕಡೆ 89 ವಿಮಾನಗಳೂ 1110 ನೌಕೆಗಳೂ ನಾಶವಾದವೆಂದೂ ಸೂಚಿಸುತ್ತದೆ.

ಸ್ವೀಕಾರ.

ನೈಜಾಂಸ್ಟೇಟ್ ಲಾತೂರುಗ್ರಾಮದಲ್ಲಿರುವ ಮಾ।ರಾ। ಕನ್ನಡಮಾಸ್ಟರ್ ಸಿದ್ಧರಾಮಪ್ಪನವರ ಪುತ್ರಿ ಚಿ। ಸೌ। ಭಾಗೀರಥೀಬಾಯಿಯನ್ನು ಕಾಶೀಕ್ಷೇತ್ರದಲ್ಲಿರುವ ಚಿ। ರಾ। ಜೇಶ್ವರಬೋಭಜೆ ಎಂಬಾತನಿಗೆ ಕೊಟ್ಟು ಜಂಗಮವಾಡಿ ಮಠದಲ್ಲಿ ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 5 ರೂ. ಗಳು ಕಾಶೀವೀರಶೈವವಿದ್ಯಾಶ್ರಮಕ್ಕೆ ದವತಿಯಿಂದ ತಲ್ಪಿರುತ್ತವೆ.

ಅರಶೀಕೆರೆ ತಾ।। ಸಸಿವಾಳಗ್ರಾಮದ ಕೊಳಗಲ್ಲು ಮಠದ ವೇ।। ಮರುಳಯ್ಯನವರ ಪುತ್ರಿ ಚಿ।। ಸೌ।। ಮರುಳಮ್ಮನಿಗೂ, ಹಿರೇಸಾದರಹಳ್ಳಿಯಲ್ಲಿರುವ ಮಠದ ವೇ।। ಮರುಳಯ್ಯನವರ ಪುತ್ರ ಚಿ।। ಕೊಟ್ಟೂರಯ್ಯನಿಗೂ ದೊಡ್ಡಮೇಟಿಕುರ್ಕೆ ಮಠದ ವೇ।। ಸಿ. ಈಶ್ವರಶಾಸ್ತ್ರಿಗಳ ಪೌರೋಹಿತ್ಯದಲ್ಲಿ ನೆರವೇರಿದ ವಿವಾಹಸಮಯದಲ್ಲಿ ವಧೂವರರಿಂದ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ಮತ್ತು ಅರಶೀಕೆರೆ ತಾ।। ರಾಂಪುರಗ್ರಾಮದ ಮಠದ ವೇ।। ಸಣ್ಣರುದ್ರಪ್ಪದೇವರ ಪುತ್ರ ಚಿ।। ಮಹಾದೇವಶಾಸ್ತ್ರಿ ಎಂಬ ವರನಿಗೂ ಸಸಿವಾಳಗ್ರಾಮದ ಮಠದ ವೇ।। ಅಡವಯ್ಯನವರ ಪುತ್ರಿ ಚಿ।। ಸೌ।। ಬಸವಮ್ಮನೆಂಬ ವಧುವಿಗೂ, ನಡೆದ ವಿವಾಹಸಮಯದಲ್ಲಿ ತೆಗೆಯಿಸಿದ 1 ರೂಪಾಯಿ ಒಟ್ಟು 3 ರೂಪಾಯಿಗಳು ವೇ।। ಸಿ. ಈಶ್ವರಶಾಸ್ತ್ರಿಗಳಧ್ವಾರಾ ತಲ್ಪಿರುತ್ತವೆ.

ದಾವಣಗೆರೆ ತಾ।। ಕಂದನಕೋವಿಗ್ರಾಮದಲ್ಲಿ ಕರುಗಲ್ಲು ಸ್ಥಾಪಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ದಾವಣಗೆರೆ ಹಿರೇಮಠದ ವೇ।। ಎಚ್. ಎಂ. ಶಿವಾನಂದಸ್ವಾಮಿಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಹಿರೇತೊಟ್ಲು ಕೆರೆಯಲ್ಲಿರುವ ವೇ।। ಪುಟ್ಟಿರುದ್ರಪ್ಪದೇವರ ಪುತ್ರಿ ಚಿ।। ರುದ್ರಪ್ಪದೇವರಿಗೆ ದೊಡ್ಡ ಅಗ್ರಹಾರದಲ್ಲಿರುವ ವೇ।। ಚನ್ನಮಲ್ಲಪ್ಪದೇವರ ಪುತ್ರ ಚಿ।। ಸೌ।। ಪುಟ್ಟವೀರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿಯು ಹುದಲೂರು ಉಜ್ಜೀದಮಠದ ವೇ।। ದೊಡ್ಡವೀರಪ್ಪದೇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ, ಶ್ರೀಜಗದ್ಗುರು ಪಂ। ಚಾ। ರ್ಯ। ರು ನಿತ್ಯಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ವಿವಾಹ ಮಹೋತ್ಸವ

ಲಾಕೂರಲ್ಲಿರುವ ಕಶ್ಮಹಮಾಸ್ಟರ್ ಮ॥ ರಾ॥ ಸಿದ್ದರಾಮಪ್ಪನವರ ಪುತ್ರಿ ಚಿ॥ ಸೌ॥ ಘನೀರಥೀಬಾಯಿ ಬೆಂಬ ಕನ್ಯೆಗೂ, ಚಿ॥ ರಾಜೇಶ್ವರ ಬೋಬಜೇ, ಎಂಬ ವರನಿಗೂ ಜೇಷ್ಠ, ಬ॥ ಲ, ಮಂಗಳವಾರ (21-6-38) ದಿವಸ ವಿವಾಹಮಹೋತ್ಸವವು, ಶ್ರೀ ಕಾಶೀಕ್ಷೇತ್ರದ ಜಂಗಮವಾಡೀ ಮಠದಲ್ಲಿ, ಬಹಳ ವಿಜೃಂಭಣೆಯಿಂದ ನೆರವೇರಿತು.

ಜ್ಯೇಷ್ಠ, ಬ॥೬ ಭಾನುವಾರವಾಗ್ವಾನಕಾರ್ಯವೂ ಬ॥ ೭ ಸೋಮವಾರ, ದೇವತಾಪ್ರತಿಷ್ಠಾದಿ ಕಾರ್ಯಗಳೂ ಬ॥ ೮ ಮಂಗಳವಾರ, ಶ್ರೀ-ಜಗದ್ಗುರು ಪಂಚಾಚಾರ್ಯ ಕಲಶಸ್ಥಾಪನಪೂರ್ವಕ ಧಾರಾಮುಹೂರ್ತವೂ ವಿಧ್ಯುಕ್ತವಾಗಿ ಶ್ರೀ ಚಿಕ್ಕವೀರಶಿವಾಚಾರ್ಯರು ಪುರದಮಕ್ಕಮತ್ತು ವೇ॥ ಸಿದ್ಧಲಿಂಗಶಾಸ್ತ್ರಿ ಬಂಕಾಪುರ ಇವರುಗಳ ವೈದಿಕತ್ವದಲ್ಲಿ ನೆರವೇರಿದವು. ಆನಂತರ ಶ್ರೀ ಕಾಶೀಜಗದ್ಗುರು ಮಹಾಸನ್ನಿಧಿಯವರಿಂದ, ವಧೂವರರಿಗೆ, ಅಕ್ಷತೆವರ್ಷದರೂಪವಾಗಿ ಉಡುಗೆರೆಗಳು ಆಶೀರ್ವದಿಸಲ್ಪಟ್ಟವು.

ಇದೇಸಮಯದಲ್ಲಿ ಲೋಕಮಾನ್ಯ ಶ್ರೀ ಪಂಚಾಚಾರ್ಯಪ್ರಭಾಪೋಷಣೆಗೆ 5 ರೂಪಾಯಿಗಳೂ ವೀರಶೈವ ಗರ್ಜನೆಗೆ 5 ರೂ. ಗಳೂ, ಕಾಶೀ ವೀರಶೈವ ವಿದ್ವತ್ಸಂಘಕ್ಕೆ 5 ರೂ ಗಳೂ, ಒಟ್ಟು (15-0-0) ರೂ. ಗಳು, ವಧೂವರರಕಡೆಯಿಂದ ತೆಗೆಯಿಸಲ್ಪಟ್ಟವು ಅದೇ ಸಮಯದಲ್ಲಿ ಶ್ರೀ ಕಾಶೀವೀರಶೈವ ವಿದ್ವತ್ಸಂಘದ ಸೆಕ್ರೆಟರಿಗಳಾದ ಶ್ರೀ ವಿರುಪಾಕ್ಷಸ್ವಾಮಿ ಮಠದ ರೇಕುಳಗೀ ಇವರು ಸಂಘದವತಿಯಿಂದ ವಧೂವರರಿಗೆ ಮಂಗಳವನ್ನು ಕೋರಿದರು. ಈ ವಿವಾಹಮಹೋತ್ಸವಕ್ಕೆ ಅನೇಕಜನ ಪುರಪ್ರಮುಖರು ಆಗಮಿಸಿದ್ದರಿಂದ ವಿಶೇಷ ಶೋಭೆಯುಂಟಾಗಿತ್ತು. ಸರ್ವರಿಗೂ, ಫಲಪುಷ್ಪಾದಿ ತಾಂಬೂಲವಿಧಿಯೋಗವು ನಡೆದು, ಶ್ರೀ ಜಗದಾಚಾರ್ಯರ ಜಯಘೋಷದೊಡನೆ ಮಂಗಲಕಾರ್ಯವು ಸಮಾಪ್ತಿಗೊಂಡಿತು

ಒರ್ವ ಪ್ರತ್ಯಕ್ಷದರ್ಶಿ

ಶ್ರೀಜಗದ್ಗುರು ರೇಣುಕಾಚಾರ್ಯಪ್ರಸೀದ.

ಕಂದನಕೋವಿಯಲ್ಲಿ ಕೆರುಗಲ್ಲುಸ್ಥಾಪನೆ.

ದಾವಣಗೆರೆ ತಾಲೂಕು ಕಂದನಕೋವಿ ಗ್ರಾಮದಲ್ಲಿ ಒಕ್ಕುಧಾನ್ಯ ಸಂವತ್ಸರದ ವೈಶಾಖ ಶು॥ ೭ ಶುಕ್ರವಾರ ಬೆಳಿಗ್ಗೆ ಈ ಗ್ರಾಮದನಿವಾಸ್ಥರು ಯಜಮಾನರು ಕಟ್ಟು ದೈವದವರು ಬಹು ವಿಜೃಂಭಣೆಯಿಂದ ದಕ್ಷಿಣ ಕಾಶಿಗೆ ಹೋಗಿ ನೇಮಿಸಿದ ಕರುಗಲ್ಲಿಗೆ ೧೦೮ ಕೊಡ ನೀರನ್ನು ಎರೆದು ೧೨ ಎತ್ತುಗಳನ್ನು ಹೂಡಿದ ರಥದ ಮೇಲೆ ಆ ಕರುಗಲ್ಲನ್ನು ಇಟ್ಟು ಬಹು ವಿಜೃಂಭಣೆಯಿಂದ ತಿರುಗಿ ಗ್ರಾಮಕ್ಕೆ ಬಂದರು.

ವೈಶಾಖ ಶು॥ ೮ ಶನಿವಾರ ಬೆಳಿಗ್ಗೆ 8 ಘಂಟೆಯಿಂದ 12 ಘಂಟೆಯವರೆಗೆ ನವಗ್ರಹಪೂಜಾ ನವಗ್ರಹ ಹೋಮ ಶಾಂತಿಗಳು ಈಶ್ವರದೇವಾಲಯದಲ್ಲಿ ದಾವಣಗೆರೆ ವೇ॥ ಸಿದ್ಧಾಂತಿ ಹೆಜ್ಜೆ. ಯಂ. ಶಿವಾನಂದ ಸ್ವಾಮಿ ಶಾಸ್ತ್ರಿಗಳವರಿಂದ ವೇದೋಕ್ತವಾಗಿ ನಡೆದವು

ವೈಶಾಖ ಶು॥ ೯ ಭಾನುವಾರ ಬೆಳಿಗ್ಗೆ 7 ಘಂಟೆಯಿಂದ ಗ್ರಾಮದಿಗ್ಬಂಧನೆಯೂ 9 ಘಂಟೆಯಿಂದ 10½ ಘಂಟೆಯವರೆಗೆ ಗ್ರಾಮದ ಕರುಗಲ್ಲು ಸ್ಥಾಪನೆಯೂ, ದಾವಣಗೆರೆ ಗ್ರಾಮದ ಪುರೋಧಿಕಾರಿಗಳಾದ ವೇ॥ ಸಿದ್ಧಾಂತಿ ಹೆಜ್ಜೆ. ಯಂ. ಶಿವಾನಂದಸ್ವಾಮಿಶಾಸ್ತ್ರಿಗಳು ಮತ್ತು ಜಂಗಮ ತುಂಬಿಗೇರಿ ಗುಡ್ಡನಾಯ್ಕನಹಳ್ಳಿ ಮಠದ ವೇ॥ ಮಹದೇವಯ್ಯನವರಿಂದ ನಡೆಯಿತು. ಬಳಿಕ ಗ್ರಾಮದೇವರ ಮತ್ತು ಪಂಚಪೀರಾಧೀಶ್ವರರ ಭಾವಚಿತ್ರಸಮೇತ ಪಲ್ಲಕ್ಕಿ ಮಹೋತ್ಸವವು ಗ್ರಾಮದ ಮುಖ್ಯಮುಖ್ಯಬೀದಿಗಳಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಆ ಮೇಲೆ ಗಣಾರಾಧನೆ ನಡೆಯಿತು. ಅಗ್ಗೆ 5 ತೋಪುಗಳು ಹಾರಿಸಲ್ಪಟ್ಟವು

ಕಾರ್ಯದರ್ಶಿಗಳು,
ಯಜಮಾನ್ ಬೆಳ್ಳೂಡಿ, ಯಂ. ಚನ್ನಬಸಪ್ಪ.
ಚಟ್ನಹಳ್ಳಿ ಸಿ. ಸಿದ್ದಪ್ಪ.

ಪ್ರಶ್ನೋತ್ತರ ರತ್ನಮಾಲಿಕಾ

ಲೇಖಕರು—ಮಲ್ಲಿಕಾರ್ಜುನಾರಾಧ್ಯ, ರಾಣಿಬೆನ್ನೂರು.
ಮಳೆಮಠ, ಮುದೇನೂರು, ಮು॥ ಶಿಸಟೂರು.

ಪ್ರ—ಕಾಲಕೂಟ ವಿಷವೂ ಸಹ ಯಾವಾಗ ಅಮೃತೋಪಮಾನವಾಗುವದು?

ಉ—ಚಿನ್ಮಾತ್ರದೃಷ್ಟಿಯಿಂದ ಆತ್ಮಾನಾತ್ಮವಿಭಾಗವಂ ತ್ಯಜಿಸಿದಾಗ.

ಪ್ರ—ದುರ್ಮತಿಯೆಂದರೆ ಯಾವನು?

ಉ—ಪ್ರಾಜ್ಞರು ಎಂಥ ಸುಸಮಯದಲ್ಲಿ ಕೇಳತಕ್ಕದ್ದಂ ಕೇಳ ತಿಳಿಯತಕ್ಕದ್ದಂ ತಿಳಿದು, ನೋಡತಕ್ಕದ್ದಂ ನೋಡಿ, ಪಡೆದುಕೊಳ್ಳತಕ್ಕದಂ ಯಾವನು ಪಡೆದುಕೊಳ್ಳವದಿಲ್ಲವೋ ಅವನೇ! ಇಂತಹ ದುರ್ಮತಿಗಳ ಮನೋರಥವು ಹೇವನಂ ಸರ್ವತಾಗ್ರದಂತೆ ಸಿದ್ಧಿಸುವದಿಲ್ಲವು. ಮತ್ತು ಕುರುಡನು ಬೆಳಕಿಗೆ ಬಂದರೂ ಅವನಿಗೆ ಬೆಳಕಾಗದಿರುವಂತೆ ಅಜ್ಞಾನಸಮುದ್ರದಲ್ಲಿ ಮುಳುಗಿದವನು ಆಪ್ತೈಶ್ವರ್ಯವಂತನಾಗಿದ್ದರೂ ಎಂದೆಂದಿಗೂ ಪ್ರಕಾಶಕ್ಕೆ ಬರುವದಿಲ್ಲವು ಆದರೆ ಸುಮತಿಯಾದವನು ಅಂತಹ ಪ್ರಾಜ್ಞರು ಪ್ರಾಪ್ತವಾದ ಸುಸಮಯದಲ್ಲಿ ತಿಲಗಳಿಂ ತೈಲವಂ ಸೆಳೆಯುವ ಯಂತ್ರಗಳಂತೆ ಜ್ಞಾನಾಮೃತರಸವಂ ಹೀರಿಕೊಳ್ಳುವನು ಮತ್ತು ಅವನು ಸೂರ್ಯೋಪಾಸಕನು ಸೂರ್ಯನಂ ಹೊಂದುವಂತೆ ಪ್ರಾಜ್ಞನೇ ಆಗುವನು.

ಪ್ರ—ಸ್ವಾನುಭವವು ಯಾವುದರಂತಿರ್ಪುದು?

ಉ—ಕಲ್ಲುಸಕ್ಕರೆಯ ರುಚಿಯಂತೆ ಸ್ವಾನುಭವ ಮಾತ್ರ ಗಮ್ಯವಾದ್ದರಿಂದ ಬಾಯಿಯಿಂದ ಹೇಳುವದಕ್ಕೂ ಇನ್ನೊಬ್ಬನಿಗೆ ತೋರಿಸಲಿಕ್ಕೂ ಅಶಕ್ತವಾಗಿರ್ಪುದು ಆದರೆ ಗಾಳಿಯಲ್ಲಿರುವ ನವಿಲುಗರಿಯು ಕೊನೆಯಂತೆ ಚಂಚಲವಾದ ಮನಸ್ಸಿನ ಬಾಹ್ಯವಿಷಯಗಳು ವಿಷವಾಗಲು ಅಂತರಂಗವಿಷಯಗಳು ಹಿಮಗಾಲದಲ್ಲಿ ವೃಕ್ಷದ ಪೊದರುಗಳಲ್ಲಿ ಸೇರಿರುವ ಪಕ್ಷಿಗಳಂತೆ ಆತ್ಮನೆಲ್ಲಿ ಐಕ್ಯವಾಗುವವು. ಆಗ ತರಂಗವು ಸಮುದ್ರದಲ್ಲಣಗುವಂತೆ ಆತ್ಮನು ಪರಮಾತ್ಮನಲ್ಲೈಕ್ಯವಂ ಪಡೆಯುವಲ್ಲಿ ತಾನೇ ಸಕಲ ಚರಾಚರ ಸ್ವರೂಪನಾಗಿರುವೆನೆಂಬ ಭಾವವುಂಟಾಗುವದು. ಹೀಗೆ ಈ ಅನುಭವವು ಹೇಗೆಹೇಗೆ ವೃದ್ಧಿಯಂ ಹೊಂದುವದೋ ಹಾಗೆಹಾಗೆ ವಿಷಯವಾಸನಾಸಮೂಹ ನಾಶವೂ ಚಿತ್ತೋಪಶಾಂತಿಯೂ ಸರ್ವಸಮತ್ವವೂ ಪ್ರಕಾಶಿಸುವುವು.

ಪ್ರ—ಅವಿದ್ಯೆಯಿಂ ಬಂಧಿತನಾಗಿ ಈ ದೇಹವಂ ತಾನೆಂದು ತಿಳಿದಿರುವವರಿಗೆ ಮಲಮೂತ್ರಾದಿ ಸ್ಥಾನವಾದ ನಾರಿಯರು ಹೇಗೆ ಕಾಣುವರು?

ಉ—ನಾರಿಯು ತಾರಕೆಯಂತೆಯೂ, ಜನ್ಮದ ಬಳ್ಳಿಯಂತೆಯೂ, ಮಿಂಚಿನಂತೆಯೂ, ರತ್ನದ ಪುತ್ಥಳಿಯಂತೆಯೂ, ಕಾಣುವಳು. ಇವರಿಗೆ ಅಂಗನೆಯರೇ ಉಪಾಸ್ಯದೇವತೆಗಳಾಗಿರುವರು ಅವರ ಮಾತುಗಳೇ ವೇದವಾಕ್ಯಗಳು ಶೃಂಗಾರ ಪ್ರಬಂಧವೇ ಉಪನಿಷತ್ತುಗಳಾಗಿಯೂ ಅಂಗನಾಸಂಭೋಗವೇ ರಾಜಯೋಗವಾಗಿಯೂ ಭೋಗಾನಂದವೇ ಅಭ್ಯುದಯವೇ ಸಾಯುಜ್ಯ ಮೋಕ್ಷವಾಗಿಯೂ ತೋರುವದು. ಮತ್ತು ಈ ಮಾಯಾವಿನ ಮರವಂ ಕಂಡ ಕೋತಿಯಂತೆ ಸಂತುಷ್ಟರಾಗುವರು. ಅವಳು ಕಣ್ಣೆದುರಿಗೆ ಇಲ್ಲದಿದ್ದಲ್ಲಿ ಕ್ಷಣಮಾತ್ರದಲ್ಲಿಯೇ ಬೆಲ್ಲಂಗುಳು ಕಾಡ್ಗಿಚ್ಚಾಗುವದು, ಅಲ್ಲದೆ ಏನನ್ನೋ ಕಳೆದುಕೊಂಡವನಂತೆ ದಿಗ್ಭ್ರಾಂತನಾಗುವನು. ತಂಪಾದ ಸುಳಿಗಾಳಿಯು ಸಹ ಪ್ರಳಯಕಾಲದ ವಿಷಮಾರುತವಾಗುವದು. ಇಂತು ಮನೋಹರವಾದ ಪದಾರ್ಥಗಳೆಲ್ಲವೂ ಪ್ರಾಣಹರಣವಾಗುವಲ್ಲಿ ಅವಿದ್ಯಾವಿಲಾಸವೆನ್ನೆಂತು ಬಣ್ಣಿಸುವದು. ಆದರೆ, ಸತ್ಸಮಾಗಮದಿಂದ ಜ್ಞಾನೋದಯವಾಗಲು ಸೂರ್ಯೋದಯದಿಂ ಕಮಲ ಗರ್ಭದಲ್ಲಿದ್ದ ಭೃಮರದಂತೆ ಹೃದಯದೊಳಗಣ ಅಜ್ಞಾನವು ಹೋಗುವದು.

ವಾಚಕರೇ! ಈ ಸಂಸಾರದಲ್ಲಿ ಮರುಮರೀಚಿಕಾ ಜಲದಿಂ ದಾಹಪುಳ್ಕನಂತೆ ವಂಚಿಕರಾದ ಸ್ತ್ರೀಯರುಗಳ ಪುರುಷರ ಪ್ರಭವಂ ನೋಹಪಡಿಸುವರು. ಧೈರ್ಯ ಗಾಂಭೀರ್ಯಾದಿ ಅವರ ಗುಣಗಳಂ ಖಂಡಿಸುವರು. ಅವರಿಗೆ ನಾನಾಪ್ರಕಾರವಾದ ದುಃಖಗಳಂ ಕೊಡುವರು ಈ ಕಾಮಿನಿಯರು ತಮ್ಮ ಮಹಾರಾಜನು ಹುಟ್ಟಿದ ಮನೆಯೆಂದು ಯೋಚಿಸದೆ ಆ ಮನವನ್ನೇ ಕೆಡಿಸುವರು. ಬೆಣ್ಣೆಗೆ ಸಮಾನರಾದ ಪುರುಷರಿಗೆ ಅಗ್ನಿ ಸಮಾನರಾದ ಕಾಮಿನಿಯರು ಸಮೀಪದಲ್ಲಿದ್ದಾಗ ರಸಾಭಾಸವೃತ್ತಿ ಹಾರಗಳಿಂದ ಸಂತಾಪವುಂಟಾಗುವದು. ಇಲ್ಲದಿದ್ದರೂ ವಿಯೋಗಸಂತಾಪಗಳಿಂದ ಪ್ರಾಣಾಂತವಾದ ವ್ಯಥೆಯುಂಟಾಗುವವು. ಮತ್ತು ದರ್ಶನಮಾತ್ರದಿಂದಲೇ ಮನುಷ್ಯಪಾಯಿಗಳಂತೆ ಭ್ರಾಂತಿಯನ್ನುಂಟುಮಾಡುವರು ಮದವನ್ನುಂಟುಮಾಡುವುದರಲ್ಲಿ ಸ್ತ್ರೀಯೂ ಮದ್ಯವೂ ಸಹ ಸಮವಾದಾಗ್ಯೂ ಮದ್ಯಮದವು ಅಲ್ಪಕಾಲದಲ್ಲಿಯೇ ಇಳಿಯುವದರಿಂದ ಮದ್ಯಕ್ಕಿಂತಲೂ ಸ್ತ್ರೀಯಳೇ ಅಧಿಕಳೆಂದು ತಿಳಿಯಬೇಕು. ಮತ್ತು ದುಷ್ಕೃತವೆಂಬ ಅಗ್ನಿಗೆ ತಿಪ್ಪೆಯಾಗಿ, ನರಕಾಗ್ನಿಗೆ ಇಷ್ಟವಾಗಿ, ದುಃಖಾಗ್ನಿಗೆ ಕಿಡಿಯಾಗಿರುವ ನಾರಿಯು ಅಗ್ನಿಮಯವಾದ ಪ್ರತಿಮೆಯಾದ್ದರಿಂದ ದರ್ಶನ ಸ್ಪರ್ಶನ ಸಂಭಾಷಣಾದಿ ಸಮಸ್ತ ವ್ಯಾಪಾರಗಳಲ್ಲೂ ಸಂತಾಪಕರಳಾದ ಈ ನಾರಿಯಿಂದ ಪುರುಷನು ನಿಸ್ಸಾರನಾಗುವನು. ಮುಖ್ಯವಾಗಿ ಶೃಂಗಾರಾದಿರಸಗಳಿಗೆ ಸ್ಥಾನವಾದ ಈ ಸ್ತ್ರೀಯೇ ಭೋಗಸ್ಥಾನವಾದ್ದರಿಂದ ಇವಳಂ ಪರಿಗ್ರಹಿಸಿದವನಿಗೆ ಭೋಗೇಚ್ಛೆಯುಂಟಾಗಿ ಜಗತ್ತಿನ ವ್ಯಾಪಾರಗಳೆಲ್ಲವೂ ಬೇಕಾಗುವವು ಆದ್ದರಿಂದ ಏಮನದಂತೆ ಇವಳನ್ನು ತ್ಯಜಿಸಿದವನಿಗೆ ಜಗದ್ವ್ಯಾಮೋಹವು ತಪ್ಪುವದು. ಪುರುಷರಿಂದ ಸ್ತ್ರೀಯರಿಗೂ ಘಾತಕಗಳುಂಟು! ಆದಾಗ್ಯೂ ಹೂವು ಹಣ್ಣುಗಳಂತೆ ಸ್ತ್ರೀಯರತ ಮೋಹಕರ (ಆಕರ್ಷಣ) ಶಕ್ತಿಯು ಅಧಿಕ ಪ್ರಮಾಣದಲ್ಲಿರುವುದರಿಂದ ವ್ಯಾಜ್ಯದಿಂದ ತಿರಸ್ಕಾರವಾಗಿ ಪರಿಗಣಿಸಲ್ಪಟ್ಟಿರುವರು. ಸಾರಾಂಶ—ಹೇಗೆ ಹೇಗೆ ನೋಡಿದರೂ ರಕ್ತ-ಮಾಂಸ-ಮಲಮೂತ್ರಗಳಿಂದ ತುಂಬಿದ ಅಸ್ಥಿಪಂಜರವಾದ ಶರೀರದಲ್ಲಿ ಯಾವುದೂ ಮನೋಹರವಾಗಿ ಕಾಣುವದಿಲ್ಲವಾದಪ್ಯುಕ್ತದಿಂದಲೂ, ಜರಾಮೃತ್ಯುಭೋಗಾದಿಗಳ ಭಯದಿಂದಲೂ, ಭೋಗಸ್ಥಾನವಾದ ಸ್ತ್ರೀಯರಲ್ಲಿ ಮನಸ್ಸನ್ನಿಡದೆ ಶಾಂತವಾಗಿರುವಾತನೇ ಪುರುಷೋತ್ತಮನೆನಿಸುವನು. ಹಾಗಲ್ಲದೆ ಸಕಲ ಮಲಗಳಂ ಪೂರ್ಣವಾಗಿರುವ ರಕ್ತಮಾಂಸಮಯವಾದ ಬೊಂಬೆಗಳನ್ನು(ಸ್ತ್ರೀಯರನ್ನು) ಪ್ರಾಣಕಾಂತೆಯರೆಂದಾಲಿಂಗಿಸುವ ನರನು ನಾಯಿಗಿಂತಲೂ ಕಡೆಯೆಂದು ಪ್ರಾಜ್ಞರಿಂದ ಪರಿಗಣಿಸಲ್ಪಡುವನು.

ಪ್ರ—ಸ್ವಸ್ವರೂಪಜ್ಞಾನವು ಜನರಿಗೆ ಅದೇಕೆ ಅಸಾಧ್ಯವಾಗಿರುವುದು?

ಉ—ಇದರಲ್ಲಿ ತನ್ನ ಸ್ವರೂಪವಂ ತಾನೇ ತಿಳಿಯಬೇಕಾಗಿರುವುದರಿಂದಲೂ, ಸ್ವರೂಪವನ್ನು ತೋರಿಸುವುದಕ್ಕೆ ಬುದ್ಧಿಯು ಕನ್ನಡಿಯಾಗಿರುವುದರಿಂದಲೂ, ಜಗದ್ವಾಸನೆಯೆಂಬ ಧೂಳಿಯಿಂದ ಮಲಿನವಾಗಿರುವುದರಿಂದಲೂ ಅಸಾಧ್ಯವಾಗಿರವುದು. ಆದರೆ ಆ ಬುದ್ಧಿಗೆ ಏನೇಕ ಸತ್ಸಂಗಗಳ ಜೋಡಾದರೆ ಸಾಣೆಗೆಕೊಟ್ಟ ಅಲಗಿನಂತೆ ಹೆದನಾಗಿಯೂ ಪರಿಬಿದ್ಧವಾದ ಹಾವಿನಂತೆ ಶುದ್ಧವಾಗಿಯೂ ಆಗಿ ಸ್ವಸ್ವರೂಪವೆಂಬ ಪ್ರತಿಬಿಂಬವಂ ಗ್ರಹಿಸುವುದಕ್ಕೆ ಯೋಗ್ಯವಾಗುವುದು. ಮನುಷ್ಯನು ಈ ಸಾಧನೆಯಿಂದ ಸ್ವರೂಪಜ್ಞಾನವನ್ನಳವಡಿಸಿಕೊಂಡೊಡನೆಯೇ ಗುಣಜ್ಞರಾದ ಸತ್ಪುರುಷರಂ ಗಣಿಸೇ ನರಂತೆ ಜಗದ್ವಾಸನೆಯು ಮಾಯವಾಗಿ ವಸ್ತೋದಕ ಧಾರೆಗಳಂ ಚಾತಕ ಪಕ್ಷಿಯು ಕ್ರೀಡಿಸುವಂತೆ ಆನಂದ ಲೋಲನಾಗುವನು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರತುಮುಂಡವಲ್ಲಿರುವ ಪತ್ರಿಯೊಂದು ಗುರುವರ್ಗದ ಮರಕ್ಕೆ ವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಹಾಧೀಜಗಳು ಮವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯ ದಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅದರೆ ವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮತವರಿಗೆ ತ್ತು ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ರಿಹಾರಮಾಡುವುದಕ್ಕೋಸ್ಕರ ನೇಲ್ಕಂಡ ಪುಸ್ತಕವನ್ನು ಹೊಸ ಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ಹದವು ಜನ್ಮಾಂಗ ತೋರಿಸಲ್ಪಟ್ಟಿದೆ. ಅದುದರಿಂದ ಸದರಿ ಪುಸ್ತಕ ನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ಪಂಕಪಾರಂಪರ್ಯವಾಗಿ ಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದ ರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ತಿ ಸುಲಭಕ್ಕಯದಲ್ಲಿ ದೊರೆಯುವವು.

ಔಷಧಿ ಹೆಸರು	ತೂಕ	ಮೂಲ್ಯ
ಸ್ವರ್ಣಮಕರಧ್ವಜ	೧	೫೦—೦—೦
ಸ್ವರ್ಣಚಂದ್ರೋದಯ	೧	೧೦—೦—
,, ೨ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಲತಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಯಸ್ತ್ಯಾಳಿಭಸ್ಮ	೧	೦—೮—೦
ಪಂಚಿನಭಸ್ಮ	೧	೦—೮—೦
ಅಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ವರ್ಣಮಕ್ಷಿಕಾಭಸ್ಮ	೧	೦—೧೫—೦
ಪ್ರವಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಸ್ವೇಚ್ಛೆನ ಭಸ್ಮ	೧	೦—೮—೦
ರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರಿತಾಲಭಸ್ಮ	೧	೦—೮—೦
ಸ್ಟೋರಿ (೧ನೇ ನಂಬರ್)	೧	೫೦—೦—೦
ರಾಜೇತ ಸೂರ್ಯಪುಟಿ	೧	೧—೦—೦
ರಾಜೇತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾ ರ ಲೇಪ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗು ದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್, ಒಮಿಮಟ್ಟ, ಜಿಲ್ಲಾ ಗಡವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಸಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಪ್ಪೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇವರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ್ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರವಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ೪ನೇ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಹಿಡಿಕೇವನ್ನಿಗೆ ಅಪ್ಪಣೆಯನ್ನಿತ್ತಿರುವಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅವ್ಯತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧೫ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ಧರೀಚಿ, ವ್ಯಾಸ, ಸನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ .... ೦—೧—೬

ಸದ್ಯ: ಪೀಠಾರೋಹಣಮಾಡಿರತಕ್ಕ ಏವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೫ .... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧೫ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ವಿಶ್ವಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೫ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರನಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೫ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೫ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೫ .... ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .... ೦—೦—೯

ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ .... ೦—೦—೯

ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೯

ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಷ್ಟಮಹಲ್ಲಕ್ಕಿ ಮಹೋತ್ಸವದ ಫೋಟೋ .... ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ. * ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ ಗಳನ್ನು ಕೊಟ್ಟಿರುವ ರು. ಪ್ರಸಿದ್ಧವಾದ ಈ ನಶ್ಯವ ಪುಡಿಯೇ ಸ್ವಸ್ಥವಾಗುವ ವ್ಯಾಧಿ ಗಳು ಯಾವವೆಂದರೆ :—ಪೀನಸಿ, ಒಂಟಿ ತಲೆನೋವು, ತಲೆಯ ಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾ ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗು ವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋಗಿಸುತ್ತಾರೆ. ಮಾಮೂ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ.

ನಿಮ್ಮ ಆಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[12] ಪೋ. ಬಾ ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೨ ಆಣೆ

ಗೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ

ಮರುಲಸಿದ್ಧೇಶ್ವರಸ್ತೋತ್ರ .... ೧ ಆಣೆ

ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ

ಪಂಚವಿಂಶತಿ ಪ್ರಶ್ನಸ್ವರೂಪ (೩ನೆಯ ಆವೃತ್ತಿ) .... ೧ ಆಣೆ

ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .... ೧ ಆಣೆ

ಬಸವಾದಿಸಿಜತತ್ತ್ವಾರ್ಪಣ (೪ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯಶತಕ(೨ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ .... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯಶತಕ .... ೨ ಆಣೆ

ವೀರಶೈವಮತಮಿಮಾಂಸಾ .... ೩ ಆಣೆ

ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ

ಸನ್ಯಾಸಾಶ್ರಮವಿಮರ್ಶತತ್ತ್ವನಿರ್ಣಯ (೩ನೆಯ ಆವೃತ್ತಿ) .... ೬ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) .... ೬ ಆಣೆ

ವೀರಶೈವಮಹಾತ್ಮರು .... ೪ ಆಣೆ

ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) .... ೪ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ೪ ಆಣೆ

Speeches by Pandit Shri Kashinatha Shastri (*English*) 12 As.

ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) .... ೧.೨ ಆಣೆ

ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) .... ೪ ರೂ

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ

ವೀರಶೈವಸಿದ್ಧಾಂತಸುಧಾಕರ .... ೨ ರೂ

ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .... ೧ ರೂ

ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ

ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ

ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧.೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧.೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) .... ೧.೨ ಆಣೆ

ಶಿಖಾಸೂತ್ರಸಿದ್ಧಾಂತದರ್ಪಣ .... ೧.೨ ಆಣೆ

ವೀರಶೈವರತ್ನ (ಮರಾಠಿ) ... ... ೧ ರೂ

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ... ೧ ರೂ

ವೀರಶೈವೇತಿಹಾಸ (ಸಂಸ್ಕೃತ) ... ... ೧ ರೂ

ಸಂಧಿಕೇಶ್ವರಕಾರಿಕಾ (ಸಂಸ್ಕೃತ) ... .. ೨ ಆಣೆ

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ... ... ೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. * ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಮಹಾವಿದ್ವಾನ್ ವೇ|| ತಿರಸಿ ಗುರುಪಾಂಕಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗನ್ಮರೂತ್ತಮವರ್ ಪಾಲಿಪ್ಪುದೀ ಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೪ ಆಣೆ. ವಿ ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ. ಸೋಮವಾರ ತಾ॥ ೧೮ನೇ ಜುಲೈ ೧೯೩೫ [ಸಂಚಿಕೆ ೧೧

ರೇಣುಕವಿಜಯಮಹಾಪುರಾಣ.

(ಶ್ರಾವಣಮಾಸವು ಬಂದಿತು.)

ಯಾವ ಮಹಾತ್ಮನು ಈ ಭೂಮಂಡಲದಲ್ಲಿ ಸೋಮೇಶ್ವರಲಿಂಗಮುಖದಿಂದವತರಿಸಿ ತನ್ನ ಮಹಿಮಾಪ್ರಭಾವದಿಂದ ಸಮಸ್ತ ಮಾನವಕೋಟಿಯನ್ನುದ್ಧರಿಸಿದನೋ, ಆ ಗುರುಸಾರ್ವಭೌಮ ಶ್ರೀಜಗದ್ಗುರು ರೇಣುಕಾಚಾರ್ಯನ ಪವಿತ್ರಚರಿತ್ರವನ್ನು ಶ್ರವಣಮಾಡುವುದು ಸ್ರತಿಯೊಬ್ಬ ಗುರುಭಕ್ತನ ಆದ್ಯಕರ್ತವ್ಯವಾಗಿದೆ ಆದುದರಿಂದ ಪ್ರತಿಯೊಂದು ಗ್ರಾಮದ ಭಕ್ತಮಾಹೇಶ್ವರರೂ ಆ ಮಹಿಮನ ಪುರಾಣವನ್ನು ತರಿಸಿಕೊಂಡು ಪುರಾತನ ಪದ್ಧತಿಯಂತೆ ಶ್ರಾವಣಮಾಸದಲ್ಲಿ ಪುರಾಣವನ್ನು ಪ್ರಾರಂಭಮಾಡಿ, ಪ್ರವಚನಪುಂಗವನ ಸಚ್ಚರಿತ್ರವನ್ನು ಕೇಳಿ, ತನ್ಮುಗ್ರಾಮವನ್ನೂ ತವ್ಮ ವಂಶವನ್ನೂ ಪಾವನಗೊಳಿಸಿಕೊಳ್ಳಬೇಕೆಂದು ಕೋರಿಕೆ ಬೆಲೆ ೧ ರೂ

ವೈದಿಕಶಿವಪೂಜಾವಿಧಿ.

ಶ್ರಾವಣಮಾಸದಲ್ಲಿ ರುದ್ರಾಭಿಷೇಕಾದಿಗಳಿಗೂ, ಪಾರಾಯಣಾದಿಗಳಿಗೂ ಮುಖ್ಯವಾಗಿ ಬೇಕಾಗಿರುವ ಈ ಪವಿತ್ರಗ್ರಂಥವನ್ನು ಸರ್ವರೂ ತರಿಸಿಕೊಂಡು, ವೇದೋಕ್ತವಾಗಿ ಪೂಜಾದಿಗಳನ್ನು ನೆರವೇರಿಸಿ, ಶ್ರೀಶಿವನ ಕೃಪೆಗೆ ಪಾತ್ರರಾಗಬೇಕು. ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ವೀರಶೈವಮಹಾತ್ಮರು.

ಶ್ರೀಜಗದ್ಗುರುರೇಣುಕಾದಿಪಂಚಾಚಾರ್ಯರಿಂದ ಯುಗಯುಗಾಂತರಗಳಲ್ಲಿ ಸ್ಥಾಪಿತವಾಗಿರುವ ವೀರಶೈವಮತದೊಳಗೆ ಪ್ರಾಚೀನಕಾಲದಲ್ಲಿ ಅನೇಕಜನ ಮಹಾತ್ಮರು ಅವತರಿಸಿ, ಅನೇಕಾನೇಕಾದ್ಭುತಲೀಲೆಗಳನ್ನಾಚರಿಸಿ ಜಗದ್ವಂದ್ಯರಾಗಿ ಹೋಗಿದ್ದಾರೆ. ಆ ಮಹಾತ್ಮರ ಲೀಲೆಗಳೇ ವೀರಶೈವರಿಗೆ ತಿಳಿಯದಾಗಿವೆ. ಈ ವಿಷಯವನ್ನು ಸರ್ವರೂ ತಿಳಿದುಕೊಂಡು ಧನ್ಯರಾಗಲೆಂಬ ಉದ್ದೇಶದಿಂದ ವೇ॥ ಪಂ॥ **ಶ್ರೀಕಾಶೀನಾಥಶಾಸ್ತ್ರಿಗಳವರು** ಮೇಲ್ಕಂಡ ಗ್ರಂಥವನ್ನು ನೂತನವಾಗಿ ರಚಿಸಿದ್ದಾರೆ. ಈ ಗ್ರಂಥವು ಚಾರಿತ್ರಿಕದೃಷ್ಟಿಯಿಂದ ಬರೆಯಲ್ಪಟ್ಟಿರುವುದರಿಂದ ಇದರ ಮಹತ್ತ್ವವು ವರ್ಣನಾತೀತವಾಗಿದೆ. ಈ ಗ್ರಂಥದಲ್ಲಿ— **ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರ** ಸಂಕ್ಷಿಪ್ತಚರಿತ್ರವು ಬರೆಯಲ್ಪಟ್ಟಿರುವುದಲ್ಲದೆ, **ದೂರ್ವಾಸಮಹರ್ಷಿ, ಸದಾನಂದಶಿವಯೋಗಿ, ಆನಂದಲಿಂಗ ಶಿವಾಚಾರ್ಯ, ಭೂಳುಂಡಲಿಂಗಶಿವಾಚಾರ್ಯ, ಶಿವಯೋಗಿಶಿವಾಚಾರ್ಯ, ಖಡ್ಗನಶಿವಾಚಾರ್ಯ, ಮಲ್ಲಿಕಾರ್ಜುನಶಿವಾಚಾರ್ಯ, ಹಲಾಯುಧ, ಮಂಚನಪಂಡಿತಾರಾಧ್ಯ, ಶ್ರೀಪತಿಪಂಡಿತಾರಾಧ್ಯ, ಉದ್ಭಟಾರಾಧ್ಯ, ಓಹಿಲಾರಾಧ್ಯ, ಕೆರೆಯಪದ್ಮರಸ, ನಿಜಗುಣಶಿವಯೋಗಿ, ಮಲ್ಲಿಕಾರ್ಜುನಶಿವಯೋಗಿ,** ಇವರೇ ಮೊದಲಾದ ಮಹಾತ್ಮರ ಚರಿತ್ರಗಳು ಬರೆಯಲ್ಪಟ್ಟಿವೆ. ಆದುದರಿಂದ ಗುರುಭಕ್ತಿಶೀಲರಾದ ಸಮಸ್ತ ವೀರಶೈವರೂ ಈ ಗ್ರಂಥವನ್ನು ತರಿಸಿಕೊಂಡು, ಓದಿನೋಡಿ ವೀರಶೈವಮತದ ಪ್ರಾಚೀನವೈಭವವನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ.

ಬೆಲೆ ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಕೊಟ್ಟೂರು ಪಂಚಾಯತಿಬೋರ್ಡಿನ ನೂತನಾಧ್ಯಕ್ಷರು.

ಬಳ್ಳಾರಿ ಡಿ॥ ಕೊಟ್ಟೂರು ಟವನ್ನಿನಲ್ಲಿ ಈ ತಿಂಗಳು 16 ನೆಯ ತಾರೀಖಿನ ದಿವಸ ಪಂಚಾಯತಿಬೋರ್ಡ್ ಆಫೀಸಿನಲ್ಲಿ 10 ಜನ ಸ್ವತಂತ್ರಪಕ್ಷದ ಮೆಂಬರರು, ಒಬ್ಬ ಕಾಂಗ್ರೆಸ್‌ಮೆಂಬರು ಹಾಜರಾಗಿ, ನಿಮಿಟಿಂಗನ್ನು ಜರಾಗಿಸಿದರು ವೇ॥ ವಿ॥ ಮು॥ ಜಾಗಟಗೇರಿ ಚನ್ನಬಸವಪ್ಪಯ್ಯನವರು ಪ್ರತಿಸ್ಪರ್ಧಿಗಳಿಲ್ಲದೆ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಬಳಿಕ ನೂತನಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಮೆ॥ ರಾ॥ ಕಡ್ಲಿ ಕಲ್ಲುಮನೆ ಕೊಟ್ರಜ್ಜಪ್ಪನವರು ಪ್ರತಿಸ್ಪರ್ಧಿಗಳಿಲ್ಲದೆ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

(ಸ್ವತಂತ್ರಪಕ್ಷದಮೆಂಬರುಗಳು)

1. ವಿ॥ ಮು॥ ಜಾ॥ ಚನ್ನಬಸವಪ್ಪಯ್ಯ, 2. ಕಲ್ಲು ಮರದ ಸಾಂತಯ್ಯ, 3 ಕಡ್ಲಿ ಕೊಟ್ರಜ್ಜಪ್ಪ, 4. ರಾಚಮಡುಗು ನಾರಾಯಣಪ್ಪ, 5 ಶಾಂತನಗೌಡ ಸಾಂತನಗೌಡರ, 6. ಜಾಗಟಗೇರಿ ಕೊಟ್ರಪ್ಪಜ್ಜಿ ವೀರಪ್ಪ, 7. ಭಟ್ಟ ಸೈದುಸಾಹೇಬ ಬಹದ್ದೂರ್, 8. ಕೋಟೆ ಹುಸೇನಸಾಹೇಬ ಬಹದ್ದೂರ್, 9. ಗು॥ ಗುರುಬಸಪ್ಪ, 10. ಚಲವಾದಿ ಭೀಮಪ್ಪ.—(ಕಾಂಗ್ರೆಸ್ ಮೆಂಬರ್) 1. ಭದ್ರಶೆಟ್ಟಿ ಸಣ್ಣರುದ್ರಪ್ಪ.

ಶ್ರೀಮದ್ರಂಭಾಪುರೀ ಜಗದ್ಗುರುಗಳು ಚನ್ನಗಿರಿಗೆ ವಿಜಯಂಗೈಸುವರು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಮಜ್ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಚನ್ನಗಿರಿ ಟವನ್ ಮತ್ತು ತಾಲ್ಲೂಕಿನ ಭಕ್ತಾದಿಗಳ ಪ್ರಾರ್ಥನೆಯಮೇರೆಗೆ ಸಕಲ ಬಿರುದಾವಳಿಗಳೊಡನೆ ಸುವರ್ಣ ರಜತಾಂದೋಲಿಕಾ ಮಹೋತ್ಸವದಿಂದ ತಾ॥ 25-7-35 ನೇ ಸೋಮವಾರ ವಿಜಯಂಗೈಸುವರು. ಆ ಕಾಲಕ್ಕೆ ಪಂಡಿತೋತ್ತಮರ ಭಾಷಣಗಳೂ, ಕೀರ್ತನಗಳೂ, ಪುರಾಣಪ್ರವಚನವೂ ಜರುಗುವವು. ಅಸಾಧಾರಣ ವೈಭವಯುಕ್ತವಾಗಿ ಜರುಗುವ ಮಹೋತ್ಸವದ ಸಲುವಾಗಿ ಸ್ವಾಗತಸಮಿತಿಯವರು ಎಲ್ಲಾ ಸೌಕರ್ಯಗಳನ್ನು ವಿಶೇಷವಾಗಿ ಏರ್ಪಡಿಸಿರುತ್ತಾರೆ.

ಧರ್ಮಸಾಹಿತ್ಯ

ಸಂಪಾದಕರು—ಯರ್. ಪುಟ್ಟವೀರಯ್ಯನವರು

ಮಲನಾಡಿನ ಪ್ರಮುಖ ಪಟ್ಟಣವಾದ ಶಿವಮೊಗ್ಗಾ ನಗರದಿಂದ ಹೊರಡಲಿರುವ ಮಾಸಪತ್ರಿಕೆ. ವಿಶ್ವಧರ್ಮಗಳ ಪರಿಶೀಲನೆ, ವೀರಶೈವಧರ್ಮಪ್ರತಿಪಾದನೆ, ಪ್ರಾಚೀನ ಗ್ರಂಥಗಳ ಶೋಧನೆ ಮತ್ತು ಪ್ರಕಟನೆ ಮೊದಲಾದ ಧ್ಯೇಯಗಳಿಂದ ಅನೇಕಾನೇಕ ವಿದ್ವನ್ಮಣಿಗಳನ್ನೊಳ್ಗೊಂಡ ಸಂಪಾದಕೀಯ ಮಂಡಳಿಯ ಲೇಖನಗಳೊಡನೆ ಶೀಘ್ರದಲ್ಲೇ ಹೊರಬೀಳುತ್ತದೆ.

ರೇಣುಕಗೀತೆ ಅರ್ಥಾತ್ (ಸಿದ್ಧಾಂತಶಿಖಾಮಣಿ)

ಲೇ|| ಕಾವ್ಯತೀರ್ಥ, ಸಾಹಿತ್ಯಸೇವಾಂತರಾಚಾರ್ಯ (ರಜತಪದಕಪ್ರಾಪ್ತ)
ಶ್ರೀ ಸಾಗೀತಶಿವಾಚಾರ್ಯರು, ಬೃಹನ್ಮಠ ಮುದೇನೂರು.
ಪೋ. ರಾಣೇಬೆನ್ನೂರು, ಜಿ. ಧಾರವಾಡ.

(ಲೇಖಾಂಕ ೧೪)

ಸಿದ್ಧಾಂತಶಿಖಾಮಣಿಯ ಅವತರಣಿಕೆಯಲ್ಲಿ ಶ್ರೀ ಮರಿತೋಂಟದಾರ್ಯರೆಂದು ಅನೇಕ ಅಸಂಬದ್ಧ ವಿಷಯಗಳು ಸೇರಿದ್ದಂತೆ ಸಿದ್ಧಾಂತಶಿಖಾಮಣಿಯಲ್ಲಿಯೂ ಶಿವಯೋಗಿಶಿವಾಚಾರ್ಯಕೃತಗಳೆಂದು ಅನೇಕ ಶ್ಲೋಕಗಳು ಆಯಾ ಕಾಲದ ಅನೇಕ ಪಂಡಿತರಿಂದ ಸೇರಿಸಲ್ಪಟ್ಟಿವೆ ಆದುದರಿಂದಲೇ ಆ ಶ್ಲೋಕಗಳು ವೀರಶೈವ ಸಿದ್ಧಾಂತಕ್ಕೆ ತೀರ ವಿರೋಧಕರಗಳಾಗಿ ತೋರುವವು ಈ ವಿಧವಾದ ದೋಷಗಳನ್ನು ಪಂಡಿತಜನರು ಕಂಡು ಹಿಡಿದು ಅಚ್ಚು ಹಾಕಿಸಬಹುದೆನ್ನುವುದರಲ್ಲಿಯೇ ಭಾವ ಪ್ರಕಾಶ ವ್ಯಾಖ್ಯಾಯುತವಾದ ಸಿದ್ಧಾಂತಶಿಖಾಮಣಿಯು ವೀರಶೈವ ತತ್ತ್ವಶಾಸ್ತ್ರದ ಹೃದಯವನ್ನು ಚನ್ನಾಗಿ ಅರಿತ ಪಂಡಿತವರ್ಯ ನಾಗನೂರು ಬೃಹನ್ಮಠಾಧೀಶ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ರಚಿಸಲ್ಪಟ್ಟ ಪ್ರಕಾಶಕ್ಕೆ ಬಂದು ಅನೇಕ ಕುಂದುಕೊರತೆಗಳನ್ನು ದೂರಮಾಡಿತು ವೀರಶೈವಸಿದ್ಧಾಂತಕ್ಕೆ ಸರಿಹೋಗದ ವಿಷಯಗಳೆಲ್ಲಾ ಈ ಗ್ರಂಥದಿಂದ ಬೇರ್ಪಡಿಸಲ್ಪಟ್ಟು ಬೇರೆ ಕಡೆ ಮುದ್ರಿಸಲ್ಪಟ್ಟಿರುವುದು ಸ್ತುತ್ಯವಾದ ಸಂಗತಿಯಾಗಿದೆ ಅಸ್ತು!

ಈ ಹಿಂದೆ ನಾವು ರೇಣುಕಾಗಸ್ತ್ಯ ಸಂವಾದಕಾಲವು ತ್ರೇತಾಯುಗಕ್ಕೆ ಸಂಬಂಧಿಸಿದುದೆಂದು ವಿವರಿಸಿದ್ದೆವು ಆ ಕಾಲದಲ್ಲಿ ಬುದ್ಧಸಿದ್ಧಾಂತದ ಸುದ್ದಿಯು ಇದ್ದಿಲ್ಲವೆಂಬುದು ಸರ್ವಸಮ್ಮತವಾದ ಸಂಗತಿ ಹೀಗಿದ್ದೂ ಶ್ರೀರೇಣುಕಾಚಾರ್ಯರು ಅಗಸ್ತ್ಯರನ್ನು ಕುರಿತು ಆ ಸಿದ್ಧಾಂತವಿಷಯವಾಗಿ ಅಪ್ಪಣೆಕೊಡಿಸಿರುವರಲ್ಲಾ! ಇದಕ್ಕೆ ಸಮಾಧಾನವೇನೆಂದು ಇತಿಹಾಸವಿದರು ಪ್ರತ್ಯಿಸಬಹುದಲ್ಲವೆ? ಸರಿ ಬುದ್ಧ ಸಿದ್ಧಾಂತವಿಷಯವು ರೇಣುಕಾಚಾರ್ಯರಕಾಲದ್ದಲ್ಲವೆಂಬುದು ನಮಗೂ ಗೊತ್ತು. ಮರಿತೋಂಟದಾರ್ಯರ ಅವತರಣಿಕೆಯಲ್ಲಿ ಸಂಗತವಲ್ಲದ ವಿಷಯಗಳು ಬೇರೆಯವರಿಂದ ಸೇರಿಸಲ್ಪಟ್ಟಿರುವಂತೆ ಶಿವಯೋಗಿಶಿವಾಚಾರ್ಯರ ಮೂಲ ಗ್ರಂಥದಲ್ಲಿಯೂ ಬೇರೆಯವರು ಈ ವಿಷಯವನ್ನು ಸೇರಿಸಿರಬಹುದೆಂದು ಒಪ್ಪಿಕೊಳ್ಳಬೇಕಾಗುವುದು. ಕಾವ್ಯಗಳನ್ನು ಹೆಚ್ಚು ಮಹತ್ವಪೂರ್ಣಗಳನ್ನಾಗಿ ಮಾಡಬೇಕೆಂಬ ಆಶೆಯಿಂದಲೋ ಅಥವಾ ಕರ್ತೃತ್ವಾನಾಯಕರ ಪ್ರಭಾವವನ್ನು ಬೆಳೆಸಬೇಕೆಂಬ ಹೇತುವಿನಿಂದಲೋ ಸ್ವತಃ ಗ್ರಂಥಕಾರರಾಗಲಿ ಅಥವಾ ಇತರರಾಗಲಿ ಆದ್ಯ ಗ್ರಂಥಗಳಲ್ಲಿ ಹೀಗೆ ಬೆಳೆಸಿದ ಸಂದರ್ಭಗಳು ಅನೇಕವಾಗಿದುವವು ಸಿದ್ಧಾಂತಶಿಖಾಮಣಿಯಲ್ಲಿ—

ಇಂದ್ರಿಯಾಣಾಂ ತಥಾತ್ಮತ್ವೆ ಮನಸ್ಯೇ ಪರಿಭಾಷ್ಯತೇ|
ಬುದ್ಧಿತತ್ತ್ವಗತೈರ್ಬ್ರಾಹ್ಮೈರ್ಬುದ್ಧಿರಾತ್ಮೇತಿ ಗೀಯತೇ ॥೫೨॥

ಎಂಬ ಪದ್ಯವು ಬೌದ್ಧರ ವಿಷಯವನ್ನು ಹೇಳುವುದೇನೋ ಸತ್ಯ ಆದರೆ ಶಿವಯೋಗಿಶಿವಾಚಾರ್ಯರೇ ಈ ಪದ್ಯವನ್ನು ರಚಿಸಿದರೆಂದು ಹೇಳಲು ಸಾಧ್ಯವಿಲ್ಲ ಏಕೆಂದರೆ ಅವರಿಗೆ ಶ್ರೀರೇಣುಕರು ತ್ರೇತಾಯುಗದವರೆಂಬುದೂ ಆ ಕಾಲದಲ್ಲಿ ಬುದ್ಧಸಿದ್ಧಾಂತವು ಇದ್ದಿಲ್ಲವೆಂಬುದೂ ಚನ್ನಾಗಿ ಗೊತ್ತಿದ್ದಿತು ಬೌದ್ಧಸಿದ್ಧಾಂತವು ಶಿವಯೋಗಿಶಿವಾಚಾರ್ಯರ ಕಾಲದಲ್ಲಿ ಮಾತ್ರ ಹೆಚ್ಚು ಪ್ರಚಾರಪಲ್ಲಿದ್ದಿತು. ಈ ಕಾರಣದಿಂದ ರೇಣುಕರು ಈ ವಿಷಯವನ್ನು ಹೇಳಿದಂತೆ ರಚಿಸಿರುವ ಈ ಪದ್ಯವನ್ನು ಬೇರೆಯವರೇ ಈ ಗ್ರಂಥದಲ್ಲಿ ಸೇರಿಸಿರುವರೆಂದು ನಿಶ್ಚಯಮಾಡಿಕೊಳ್ಳಬೇಕು ಏಕೆಂದರೆ ಆಗ್ರಂಥಕರ್ತೃವಿಗೆ ವಿಚಾರಮಾಡಿ ಬರೆಯುವ ಸ್ವಭಾವವುಳ್ಳ ಕವಿಗಳು ಸಿದ್ಧಾಂತಗ್ರಂಥಗಳಲ್ಲಿ ಈ ವಿಧವಾದ ಪ್ರಮಾದಗಳನ್ನು ಮಾಡುವರೆಂಬುದು ವಿಶ್ವಾಸಯೋಗ್ಯವಾದ ಮಾತಲ್ಲ. ಹಾಗಿ ಒಂದುವೇಳೆ ಶಿವಯೋಗಿಶಿವಾಚಾರ್ಯರು ತಮ್ಮ ಕಾಲದಲ್ಲಿ ಪ್ರಬಲವಾಗಿದ್ದ ಬುದ್ಧಸಿದ್ಧಾಂತವನ್ನು ಖಂಡಿಸುವ ಭರದಲ್ಲಿ ಕಾಲಮಾನವನ್ನು ವಿಚಾರಿಸದೆ ಶ್ರೀ ರೇಣುಕವಚನವನ್ನಾಗಿ 'ಬುದ್ಧಿತತ್ತ್ವಗತೈರ್ಬ್ರಾಹ್ಮೈಃ' ಮುಂತಾಗಿ ಬರೆದಿರಲೂ ಬಹುದೆಂದು ಒಪ್ಪಿಕೊಳ್ಳುವುದಾದರೆ ಈ ಅಪವಾದವನ್ನು ಮಹಾಕವಿಗಳ ಮೇಲೂ ಹೊರಿಸಬೇಕಾಗಿ ಬರುವುದು ಇದೋ ನೋಡಿ! ಆದಿಕವಿಗಳಾದ ವಾಲ್ಮೀಕಿ ಮಹರ್ಷಿಗಳು ಸ್ವಕೃತರಾಮಾಯಣಗ್ರಂಥದಲ್ಲಿ ರಾಮವಾಕ್ಯವನ್ನಾಗಿ ಈ ಪದ್ಯವನ್ನು ರಚಿಸಿರುವರು—

ಯಥಾಹಂ ಚೋರಸ್ತಥಾಹಿ ಬುದ್ಧಃ ।
ತಥಾಗತಂ ನಾಸ್ತಿಕಮತ್ರ ವಿದ್ಧಿ ॥

ಈ ರಾಮವಾಕ್ಯದಲ್ಲಿ ರಾಮನ ಹಿಂದೆಯೂ ರಾಮನ ಸಮಕಾಲದಲ್ಲಿಯೂ ಇಲ್ಲದ ಬುದ್ಧನು ಎಲ್ಲಿಂದ ಬಂದನು? ತ್ರಿಕಾಲಜ್ಞಾನಿಗಳಾದ ವಾಲ್ಮೀಕಿಮಹರ್ಷಿಗಳು ರಾಮನ ಮುಖದಿಂದ ಬುದ್ಧನು ಚೋರನೆಂದು ನುಡಿಸಿ ತಮ್ಮ ದಿವ್ಯಜ್ಞಾನವನ್ನು ಕಳೆದುಕೊಂಡರೆಂದು ಹೇಳಬೇಕಾಗುವುದೇನು? ಬುದ್ಧನ ಕಾಲವಾವುದು ರಾಮ, ವಾಲ್ಮೀಕಿಗಳ ಕಾಲವಾವುದು? ಒಂದಕ್ಕೊಂದು ಸಂಬಂಧವೇ ಇಲ್ಲ. ಈ ಪ್ರಮಾದವನ್ನು ವಾಲ್ಮೀಕಿಗಳ ಮೇಲೆ ಹೊರಿಸಲು ಯಾವ ಇತಿಹಾಸಕೋವಿದನು ತಾನೆ ಒಪ್ಪಿಕೊಳ್ಳವನು? ಆದುದರಿಂದ ಬುದ್ಧ ಸಿದ್ಧಾಂತವಿರೋಧಿಗಳಾದ ಯಾರೋ ಈ ಪದ್ಯವನ್ನು ರಾಮಾಯಣದಲ್ಲಿ ರಾಮನ ವಾಕ್ಯವನ್ನಾಗಿ ಸೇರಿಸಿದರೆ ಹೆಚ್ಚುಬೆಲೆ ಬರುವುದೆಂದು ನಿಶ್ಚಯಿಸಿ ಹೀಗೆ ಮಾಡಿರಬೇಕೇ ಹೊರತು ಇದು ವಾಲ್ಮೀಕಿಮಹರ್ಷಿಗಳ ಕೃತಿಯಲ್ಲವೆಂದು ಹೆಚ್ಚು ವಿಚಾರಕ್ಕೆ ಅವಕಾಶಕೊಡದಂತೆ ಹೇಳಬಹುದೇನೋ ಆಗಲಿ ಅದು ರಾಮವಾಕ್ಯ ವಾಲ್ಮೀಕಿಕೃತವೆಂದು ನಂಬುವುದಾದರೆ ವಾಲ್ಮೀಕಿ ರಾಮರು ಮೊನ್ನೆ ಎರಡುವರೆ ಸಾವಿರ ವರ್ಷಗಳ ಹಿಂದೆ ಆಗಿಹೋದರೆಂದು ಇತಿಹಾಸವನ್ನೇ ಬದಲಾಯಿಸಿ ಬರೆಯಬೇಕಾಗುವುದು. ಪೂರ್ವಪರ ಇತಿಹಾಸಜ್ಞಾನವಿಲ್ಲದೆಯಾರಾದರೂ ತಮ್ಮ ಕಲ್ಪನೆಗಳನ್ನು ಲೋಕೋತ್ತರಗ್ರಂಥಗಳಲ್ಲಿ ಸೇರಿಸಿದರೆ ಹೀಗೆ ಮಹಾದೋಷಕ್ಕೆ ಅವಕಾಶಪ್ರೊದಗುವುದೆಂಬುದು ಇದರಿಂದ ಸರ್ವರಿಗೂ ಪ್ರತ್ಯಕ್ಷವಾಯತಸ್ಸ್? ಇನ್ನೂ ತೆಗೆದುಕೊಳ್ಳಿ!

ಮಹಾಕವಿ ಕಾಲಿದಾಸನು ಸ್ವಕೃತ ರಘುವಂಶ ಮಹಾಕಾವ್ಯದ ೪ ನೆಯ ಸರ್ಗದಲ್ಲಿ ಅಪಾರವಾದ ರಘು ಮಹಾರಾಜನ ಸೇನೆಯನ್ನು ವರ್ಣಿಸುವಾಗ ಈ ಪದ್ಯವನ್ನು ರಚಿಸಿರುವನು—

ತಸ್ಯಾನೀಕೈರ್ವಿಸರ್ಪದ್ಭಿರಪರಾಂತಜಯೋದ್ಯತೈಃ ।
ರಾಮಾಸ್ತ್ರೋತ್ಸಾರಿತೋತ್ಸಾಪ್ಯೋತ್ಸ ಸಕ್ಯಲಗ್ನ ಇವಾರ್ಣವಃ ॥

ಈ ಪದ್ಯದಲ್ಲಿ ರಘುವಂತದಲ್ಲಿ ಮುಂದೆ ಜನಿಸಬೇಕಾಗಿರುವ ರಾಮಚಂದ್ರನ ಹಾಗೂ ಆತನ ಸಮಯದಲ್ಲಿ ಪ್ರಸಿದ್ಧನಾಗಬೇಕಾಗಿರುವ ಪರಶುರಾಮನ ವಿಷಯ ಅಥವಾ ಆತನ ನಾಮವು ಹೇಗೆ ಬರಬೇಕು? ಇದು ತೀರ ಅಸಮಂಜಸ ಇತಿಹಾಸ ಪದ್ಧತಿಯನ್ನು ಎಲ್ಲರಿಗೂ ಮೊದಲು ಕಾವ್ಯಾದಿಗಳಲ್ಲಿ ಸಂಗತವಾಗಿ ಹೆಣೆಯುವಲ್ಲಿ ಹೆಸರುವಾಸಿಯಾದ ಕಾಳಿದಾಸ ಮಹಾಕವಿಯೂ ಸಹ ಹೀಗೆ ಕಾಲಮಾನದ ಪರಿವೆಯಿಲ್ಲದೆ ಬರೆದಿರಬಹುದೇ? ಎಂದು ಶಂಕಿಸುವುದಾದರೆ ಈ ವಿಷಯವನ್ನು ಯಾರೂ ಒಪ್ಪಲಾರರು. ಅಥವಾ ಕೆಲವರು ಈ ಪದ್ಯವು ಕವಿಯ ಉಕ್ತಿಯಾಗಿರುವುದರಿಂದ ಹಾಗೆ ಬರೆದಿರುವಲ್ಲಿ ದೋಷವೇನೆಂದು ಕೇಳಬಹುದು. ಒಳ್ಳೆಯದು ಮೊದಲು ಈ ಪದ್ಯದ ಅರ್ಥವನ್ನು ವಿಚಾರಮಾಡಿ! "ಪರಶುರಾಮನ ಬಾಣದಿಂದ ಹಿಂದಕ್ಕೆ ತಳ್ಳಲ್ಪಟ್ಟುದಾದಾಗ್ಯೂ ಸಮುದ್ರವು ರಘುಮಹಾರಾಜನ ಸೈನ್ಯಾಧಿಕ್ಯದಿಂದ ಮತ್ತೆ ಸಹ್ಯಪರ್ವತದವರೆಗೂ ವ್ಯಾಪಿಸಿಕೊಂಡಿತೋ ಎನ್ನುವಂತಿದ್ದಿತು" ಎಂಬೀ ಸಂದರ್ಭದಲ್ಲಿ ರಘುಮಹಾರಾಜನಿಗಿಂತಲೂ ಪೂರ್ವದಲ್ಲಿಯೇ ಪರಶುರಾಮನ ಅವತಾರವಾಗಿಹೋಗಿದ್ದಿತೆಂದು ತಿಳಿದುಬರುವುದು. ಆದರೆ ಈ ವಿಚಾರವು ಪೂರಾ ಶುಳ್ಕಂಬುದು ಅದೇ ರಘುವಂಶದಿಂದಲೇ ಗೊತ್ತಾಗುವುದು. ಜಾನಕೀ ಸ್ವಯಂವರವನ್ನು ತೀರಿಸಿಕೊಂಡು ಅಯೋಧ್ಯೆಗೆ ಬರುತ್ತಿರುವ ಬಾಲಕನಾದ ರಾಮಚಂದ್ರನ ಕಾರ್ಯದಿಂದ ಅಸೂಯೆಗೊಂಡು ಮಧ್ಯಮಾರ್ಗದಲ್ಲಿಯೇ ಪರಶುರಾಮನು ರಾಮನೊಡನೆ ಯುದ್ಧಕ್ಕೆ ಬಂದುದೂ ರಾಮಚಂದ್ರನಿಂದ ಪರಾಜಯವನ್ನು ಹೊಂದಿದುದೂ ಇದೇ ರಘುವಂಶದಲ್ಲಿಯೇ ಉಕ್ತವಾಗಿದೆ (ವಾರ್ಧಕ್ಯದಲ್ಲಿದ್ದ) ಪರಶುರಾಮನು ರಘುಮಹಾರಾಜನಿಗಿಂತಲೂ ಎಷ್ಟೋ ಪೂರ್ವದಲ್ಲಿಯೇ ತನ್ನ ಬಾಣದಿಂದ ಸಮುದ್ರವನ್ನು ಹಿಂದಕ್ಕೆ ಸರಿಸಿದ್ದನೆಂಬ ಐತಿಹ್ಯವು ಸ್ವಲ್ಪವಾದರೂ ಈಗ ಸಂಗತವಾಗಿರುವುದೇ ಹೇಗೆ? ಇತಿಹಾಸಜ್ಞಾನವಿಲ್ಲದ ಬಾಲಕರಾದರೂ ಇದನ್ನು ಒಪ್ಪಲಾರರು.

(ಸಶೇಷ)

ಚಿಕ್ಕಮಣ್ಣೂರುಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶಿವದೀಕ್ಷಾಸಂಸ್ಕಾರ

ಧಾರವಾಡಜಿಲ್ಲಾ ಸವಣೂರಸಂಸ್ಥಾನ ಪೈಕಿ ಜೇಕಿನಕಟ್ಟೆ ಗ್ರಾಮಕ್ಕೆ ಸಮಾಜೋದ್ಧಾರಕ ಶ್ರೀ|| ಷ|| ಬ್ರ|| ರೇವಣಸಿದ್ಧ ಶಿವಾಚಾರ್ಯ ಪಟ್ಟದಸ್ವಾಮಿಗಳು ಬೃಹನ್ಮಠ ಚಿಕ್ಕಮಣ್ಣೂರು ಇವರು ಕಬನೂರು, ಹಿರೇಬೆಂಡಿಗೇರಿ, ಬನ್ನೂಗು, ಬನ್ನಿಕೊಪ್ಪ, ಹಿರೇಮಲ್ಲೂರ ಗ್ರಾಮಗಳಲ್ಲಿ ಧರ್ಮಸುಧಾರಣೆಯ ಸಭೆಗಳನ್ನು ಮಾಡಿ ಪ್ರತಿಯೊಂದು ಧರ್ಮದವರಿಗೂ ಧರ್ಮಬೋಧೆಯನ್ನುಮಾಡಿ ಸುಧಾರಕರಿಗೆ ಬೇಡಾದ ಜೇಕಿನಕಟ್ಟೆಗ್ರಾಮಕ್ಕೆ ಕಳೆದತಿಂಗಳು ೩೦ ನೆಯ ತಾರೀಖಿಗೆ ಆಗಮಿಸಿದರು. ಗ್ರಾಮದ ಪ್ರಮುಖರಾದ ವೇ|| ಚನ್ನಬಸವಯ್ಯನವರು ಹಿರೇಮಠ, ಮ|| ರಾ|| ಬಸನಗೌಡರು ಪೋಲೀಸ ಪಾಟೇಲ, ಸಿದ್ದನಗೌಡರು ಅಯ್ಯನಗೌಡ್ರ, ಪರ್ವತಪ್ಪಮಾಸ್ತರರು ಕುಂದಗೋಳ ಇವರೆಲ್ಲರೂ ಬಂದು ಸ್ವಾಮಿಗಳವರ ದರ್ಶನತೆಗೆದುಕೊಂಡರು. ಮರುದಿನಸ ಸಾರ್ವಜನಿಕ ಸಭೆಯು ಶ್ರೀ ಹುತ್ತಮಲ್ಲೇಶ್ವರಸ್ವಾಮಿಯ ಭವ್ಯವಾದ ದೇವಸ್ಥಾನದಲ್ಲಿ ನಡೆಯಿತು. ಸವಣೂರಸಂಸ್ಥಾನ ಪೈಕಿ ಮಣ್ಣೂರಗ್ರಾಮದ ಸಂಗೀತವಿದ್ವತ್ ಪದವೀಧರರಾದ ಗವಾಯಿ ವೇ|| ತೋಟಪ್ಪಯ್ಯನವರೆ, ಹಾಗೂ ತಬಲಾ ವಿದ್ವತ್ ವೇ|| ಚೆನ್ನಬಸವಯ್ಯನವರ ಸಂಗೀತವು ಬಹು ಆನಂದಕರವಾಗಿ ನಡೆಯಿತು. ಗವಾಯಿಗಳು ತ್ಯಾಗರಾಜನ ಹಾಗೂ ಪುರಂದರರು ರೇಣುಕಾಚಾರ್ಯರ ಮೇಲೆ ಮಾಡಿದ ಕೃತಿಗಳನ್ನು ತಮ್ಮ ಮಂಜಳಧ್ವನಿಯಿಂದ ಹಾಡಿ ಜನರಿಗೆ ಅಪಾರವಾದ ಆನಂದವನ್ನುಂಟುಮಾಡಿದರು. ಅನಂತರ ಶ್ರೀ ಸ್ವಾಮಿಗಳವರು ಮಾನವರು ಪುಣ್ಯವಿಶೇಷದಿಂದ ಸನಾತನಧರ್ಮದಲ್ಲಿ ಜನ್ಮವೆತ್ತಿದ ಬಳಿಕ ನಿರರ್ಥಕ ಕಾಲಹರಣಮಾಡಬಾರದೆಂದೂ ಪುರಾತನ ಧರ್ಮಗುರುಗಳು ಮೋಕ್ಷವನ್ನು ಪಡೆಯುವದಕ್ಕೆ ಒಂದೊಂದು ಮಾರ್ಗವನ್ನು ಹಾಕಿಕೊಟ್ಟಿರುವದರಿಂದ ಅದೇ ಮಾರ್ಗದಲ್ಲಿಯೇ ನಡೆಯಬೇಕೆಂದೂ, ಮಾಂಸಪಿಂಡವನ್ನು ಕಳೆದುಕೊಂಡು ಮಂತ್ರಪಿಂಡವುಳ್ಳವರಾಗಬೇಕಾದರೆ ಶಿವದೀಕ್ಷೆಯನ್ನು ಪಡೆದು ಮೋಕ್ಷ ಸಾಮ್ರಾಜ್ಯಸುಖವನ್ನನುಭವಿಸಬೇಕೆಂದೂ, ಶ್ರೀಜಗದ್ಗುರು ರೇಣುಕಭಗವತ್ಪಾದರು "ದೀಯತೇಽ ಶಿವಜ್ಞಾನಂ ಕ್ಷೀಯತೇ ಪಾಶ ಬಂಧನಂ | ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ ॥ ಎಂದು ಬೋಧಿಸಿರುವದರಿಂದ ಸರ್ವರೂ ದೀಕ್ಷೆಯನ್ನು ಸ್ವೀಕರಿಸಬೇಕೆಂದೂ ಬೋಧಿಸಿದರು. ತಾ|| ೩-೭-೧೯೩೮ನೇ ದಿವಸವೇ ಈ ಗುರುವಾಕ್ಯವನ್ನು ದೇಹತಾಣಿಯಂತೆ ಭಾವಿಸಿ ೨೬ ಜನ ಭಕ್ತಮಾಹೇಶ್ವರ ಸ್ತ್ರೀ ಪುರುಷರು ದೀಕ್ಷೆಯನ್ನು ಪಡೆದುಕೊಂಡಕ್ಷಣವೇ ದೀಕ್ಷೆಯ ಮಹತ್ವವನ್ನು ನಮಗೆ ಇದುವರೆಗೆ ಯಾವ ಸ್ವಾಮಿಗಳೂ ತಿಳುಹಿಸಿದ್ದಿಲ್ಲ. ಇನ್ನುಮುಂದೆ ಸರ್ವರೂ ದೀಕ್ಷೆಯನ್ನು ತೆಗೆದುಕೊಳ್ಳಬೇಕೆಂದು ನಿಶ್ಚಯಿಸಿದರು ಅದೇ ದಿನ ಸಾಯಂಕಾಲಕ್ಕೆ ಪುನಃ ಸಭೆಯು ಕೂಡಿತು. ಆಗ್ಗೆ ಶ್ರೀ ಸ್ವಾಮಿಗಳು ಶಾಸ್ತ್ರಲೌಕಿಕ ಉದಾಹರಣೆಗಳನ್ನು ಕೊಟ್ಟು ಶಿವದೀಕ್ಷೆಯಿಂದಲೇ ಮೋಕ್ಷಪ್ರಾಪ್ತಿಯು ದೀಕ್ಷೆಯಿಲ್ಲದವರಿಗೆ ಮೋಕ್ಷವು ದೊರೆಯುವದಿಲ್ಲೆಂದೂ, ಹನುಮಂತ ಅಗಸ್ತ್ಯ ವ್ಯಾಸಮಹರ್ಷಿ ಮೊದಲಾದ ಮಹಾತ್ಮರು ದೀಕ್ಷೆಯಿಂದಲೇ ಮೋಕ್ಷವನ್ನು ಪಡೆದವರೆಂದೂ, ಸರಳವಾಗಿ ಬೋಧಮಾಡಿದಾಕ್ಷಣವೇ ಸಮಸ್ತರೂ ನಾಳೆ ದೀಕ್ಷೆಯಾಗುತ್ತೇವೆಂದು ಕರತಾಡನ ಮಾಡುತ್ತ ಜಯಜಯಕಾರಮಾಡಿದರು ಜಳಕ ಸಭೆಯು ಸಮಾಪ್ತಿಯಾಯಿತು ತಾ||೪-೭-೧೯೩೮ನೆಯ ದಿವಸ ಪುನಃ ದೀಕ್ಷೆಯು ಸ್ವಾರಂಭವಾಗಿ ೩-೪ ದಿನಸಗಳವರೆಗೆ ನಡೆಯಿತು. ಮ|| ರಾ|| ಜಾಯಪ್ಪಗೌಡರು, ತರೀದಕೊಪ್ಪ, ಮಲ್ಲನಗೌಡರು ನಾಗನಗೌಡರು, ಲಕ್ಷ್ಮೇಶ್ವರ ಗದಿಗಪ್ಪನವರು ಮಹಾಂತಶೆಟ್ಟಿ ಇವರು ದೀಕ್ಷೆಹೊಂದುವದಕ್ಕೆ ಲಕ್ಷ್ಮೇಶ್ವರದಿಂದ ಬಂ

ಯುವತಿಯರಿಗೆ ಗುಂಡುತಗುಲಿತು

ನವ ದೇಹಲಿಯಲ್ಲಿ ಸುಮಾರು 14 ವರ್ಷ ವಯಸ್ಸಿನ ಈರ್ವರು ತರುಣಿಯರು ತಮ್ಮ ಮನೆಯ ಮಹಡಿಯ ಮೇಲೆ ಓಡಾಡುತ್ತಿದ್ದಾಗ ಅವರಿಗೆ ಗುಂಡು ತಗಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಕಾಶ್ಮೀರ ಗೇಟಿನ ಬಳಿ ಒಬ್ಬನು ಕೋತಿಗಳನ್ನು ಗುಂಡಿನಿಂದ ಹೊಡೆಯುತ್ತಿರುವಾಗ ಗುರಿತಪ್ಪಿ ಆ ಏಟುಗಳು ಈ ಯುವತಿಯರಿಗೆ ತಗುಲಿದವು. ಪೋಲೀಸರು ಆ ಮನುಷ್ಯನನ್ನು ದಸ್ತಗಿರಿ ಮಾಡಿರುವರು.

ಧಕಾಯಿತರ ಕನ್ಯಾಪಹರಣ!

ಷೀಕ್‌ಪುರಜಿಲ್ಲೆಯ ಚುಹರ್‌ಖಾನಗ್ರಾಮಕ್ಕೆ ಪೋಲೀಸ್‌ವೇಷಧಾರಿಗಳಾದ 5 ಜನ ಧಕಾಯಿತರು ಪ್ರವೇಶಿಸಿ ಯಾವುದೋ ಮೊಕದ್ದಮೆಯ ಸಂಬಂಧವಾಗಿ ಅಲ್ಲಿಯ ಒಬ್ಬ ಹುಡುಗಿಯ ಆವಶ್ಯಕತೆಯಿರುವುದೆಂದು ಹೇಳಿ, ಒಬ್ಬ ಹುಡುಗಿಯನ್ನು ತನ್ನ ವಶಪಡಿಸಿಕೊಂಡು ಮೋಟಾರ್‌ಕಾರಿನಲ್ಲಿ ಕುಳ್ಳಿರಿಸಿಕೊಂಡು ಪರಾರಿಯಾದರು ಆನಂತರ ಪೋಲೀಸರಲ್ಲವೆಂದೂ ಧಕಾಯತರೆಂದೂ ಆಮೇಲೆ ತಿಳಿದುಬಂದುದರಿಂದ ಸರಕಾರವರು ಧಕಾಯಿತರನ್ನು ಶೋಧಮಾಡಿಸುತ್ತಿದ್ದಾರೆ

ಭೂಕಂಪ!

ಕಾರೆವಾಡದ ಹತ್ತರ ಕಳೆದ 15 ದಿವಸಗಳ ಕೆಳಗೆ ಭೂಮಿಯು ಅದುರುತ್ತಿರುವುದಾಗಿ ಪ್ರಕಟವಾಗಿದೆ. ಭೂಮಿಯು ಆದುರುವುದಕ್ಕೆ ಮುಂಚೆ ಗುಂಡಿನ ಶಬ್ದದಂತೆ ದೊಡ್ಡ ಶಬ್ದವು ಕೇಳಿಬಂದು ಅನಂತರ ಮನೆಗಳ ಮೇಲ್ಛಾವಣಿಗಳೆಲ್ಲಾ ಅದುರಲು ಪ್ರಾರಂಭಿಸುವುದು. ಹೀಗೆ ಪ್ರತಿದಿನ ಸುಮಾರು 10 ಸಾರೆ ಅದುರುತ್ತಿರಲು ಜನಗಳು ಭಯಗ್ರಸ್ತರಾಗಿ ಗ್ರಾಮಗಳನ್ನು ಬಿಟ್ಟೋಡುತ್ತಿರುವುದಾಗಿ ವರ್ತಮಾನವು ಪ್ರಕಟವಾಗಿತ್ತು. ಈರೀತಿ ಭೂಮಿಯು ಕಂಪಿಸಲು ಸಮೀಪದಲ್ಲಿ ಕಲ್ಲಿದ್ದಲು ಗಣಿ ಇರುವುದೇ ಕಾರಣವೆಂದು ತಿಳಿಯುತ್ತಿದೆ.

ತಿರುವಾಂಕೂರು ನ್ಯಾಷನಲ್ ಮತ್ತು ಕ್ವಿಲಾನ್ ಬ್ಯಾಂಕ್

ಬ್ಯಾಂಕಿನ ಲೆಕ್ಕಪತ್ರಗಳನ್ನು ಪರಿಶೀಲಿಸಿ ಅದು ಇನ್ನು ಮುಂದೆ ಲೇವಾದೇವಿ ನಡೆಸಲು ಶಕ್ತಿಯನ್ನು ಪಡೆದಿದೆಯೋ! ಅಥವಾ ಅದನ್ನು ಮುಚ್ಚಿಡುವುದೇ ಸರಿಯೇ ಎಂಬ ವಿಚಾರವನ್ನು ತಿಳಿಸಲು ಮದರಾಸ್ ಹೈಕೋರ್ಟ್ ಈರ್ವರು ಮೆಸರ್ಸ್ ಪ್ರೇಜರ್ ಅಂಡ್‌ರೋಸ್ ಕಂಪೆನಿಯ ಮಿ॥ ಪಿಲ್ರಿ ಮತ್ತು ಮಿ॥ ಗಿಲ್, ಎಂಬವರುಗಳನ್ನು ತಾತ್ಕಾಲಿಕ ಲಿಕ್ವಿಡೇಟರುಗಳಾಗಿ ನಿಯಮಿಸಿರುತ್ತಾರೆ. ಲಿಕ್ವಿಡೇಟರುಗಳ ಖರ್ಚುವೆಚ್ಚಗಳನ್ನೆಲ್ಲಾ ರಿಜರ್ವ್ ಬ್ಯಾಂಕಿನವರೇ ವಹಿಸುವರು.

ಪುರಾತನ ಗ್ರಂಥಗಳು ದೊರೆತಿವೆ.

ತ್ರಿವೇಂದ್ರಂ ಓರಿಯಂಟಲ್ ರೀಸರ್ಚ್ ಶಾಖೆಯವರಿಗೆ ಈಗ 50 ಅಪೂರ್ವ ತಾಳಪತ್ರದ ಗ್ರಂಥಗಳು ದೊರೆತಿವೆ. ಸಾರ್ವಜನಿಕರ ಉಪಯೋಗಕ್ಕೆಂದು ಇವು ಅನೇಕವನ್ನು ಆಗಲೇ ಅಚ್ಚುಹಾಕಿಸಿದ್ದಾರೆ. ಒಂದಿನ ಈ ಹಳೆಯ ಗ್ರಂಥಸಂಶೋಧನೆಗೆ ಸಂಬಂಧಿಸಿದ ಅಧಿಕಾರಿಗಳೊಬ್ಬರು ನದಿಯಲ್ಲಿ ಸ್ನಾನಮಾಡುತ್ತಿರುವಾಗ ತಾಳೆಯೋಲೆಯ ಗ್ರಂಥದ ಗರಿಗಳು ನೀರಿನಲ್ಲಿ ತೇಲಿಬಂದವು. ಅವರು ಅವನ್ನು ತೆಗೆದುಕೊಂಡು ನೋಡಲುಅವು ಒಂದು ಶ್ರೇಷ್ಠಗ್ರಂಥದ ಗರಿಗಳೆಂದು ತಿಳಿಬಂದಿತು. ಈಗ ಆ ಗ್ರಂಥದಿಂದ ಅನೇಕರಿಗೆ ಉಪಕಾರವಾಗಿದೆ. ಆದರಲ್ಲಿ ಸಾಮವೇದ ಭಾಷ್ಯದ ಕೆಲವು ಟೀಕೆಗಳಿದ್ದವಂತೆ!

ತುರ್ಕಿ ಸ್ಥಾನದಲ್ಲಿ ವಿವಾಹದ ವಯಸ್ಸು

ತುರ್ಕಿ ಸ್ಥಾನದ ಎಲ್ಲ ತರುಣ ತರುಣಿಯರು 15 ಮತ್ತು 17 ವಯಸ್ಸಿನವರಾದ ಕೂಡಲೇ ಮದುವೆಯಾಗಬೇಕೆಂಬ ಹೊಸ ಸಂಸ್ಥಾನದ ಆಜ್ಞೆಯು ಹೊರಡಿಸಲ್ಪಟ್ಟಿದೆ. ಈ ವಿಷಯದಲ್ಲಿ ಈ ವಯಸ್ಸು 14 ಮತ್ತು 16 ಕ್ಕೆ ಇಳಿಸಲಾಗಿದೆ. ಕೆಮಾಲನ ಬದಲಾವಣೆಯಂತೆ ಇಲ್ಲಿ ಯುವತಿಗೆ ವಿವಾಹ ವಯಸ್ಸು 17 ಮತ್ತು 18 ಎಂದು ಗೊತ್ತು ಮಾಡಲ್ಪಟ್ಟಿತ್ತು. ವಿವಾಹ ಮಾಡಿಕೊಳ್ಳುವವರ ವಯಸ್ಸನ್ನು ನಿರ್ಣಯಿಸುವುದು ಸಾಮಾನ್ಯವಾಗಿ ಆಯಾ ದೇಶದ ವಾತಾವರಣ ಮತ್ತು ಅವರ ಜೀವನದ ಮೇಲೆ ಅವಲಂಬಿಸಿದೆ. ಮೊದಲು ಮುಸ್ಲಿಂ ವಿಧಿಯಂತೆ ಹೆಣ್ಣು ಮಕ್ಕಳು ತಮ್ಮ 9 ನೆಯ ವಯಸ್ಸಿನಲ್ಲಿ ಲಗ್ನವಾಗಬಹುದಾಗಿತ್ತು.

ಜರ್ಮನಿಯಲ್ಲಿ ನೋಟಾರುಗಳಿಗೆ ನಿಶ್ಯಬ್ದವಾದ ಹಾರ್ನ

ಜರ್ಮನಿಯಲ್ಲಿ ನೋಟಾರು ಬಸ್ಸು, ಲಾರಿ, ಕಾರುಗಳಿಗೆ ಶಬ್ದಮಾಡದ ಹಾರ್ನಗಳನ್ನು ಒದಗಿಸಿದ್ದಾರೆ. ಒಂದು ನೋಟಾರಿನವನು ಇನ್ನೊಂದು ನೋಟಾರಿನನ್ನು ನಿಗೆ ತಾನು ಮುಂದೆ ಹೋಗಬೇಕೆಂಬ ಸೂಚನೆ ಕೊಡಬೇಕಾದರೆ, ತನ್ನ ನೋಟಾರಿನಲ್ಲಿರುವ ಒಂದು ಗುಂಡಿಯನ್ನು ಒತ್ತುತ್ತಾನೆ. ಇದರಿಂದ ಮುಂದಿನ ನೋಟಾರಿನವನ ಬಳಿಯಲ್ಲಿರುವ ವೈಕ್ರೋಫೋನಿನಲ್ಲಿ ಒಂದು ಬಗೆಯ ಶಬ್ದವುಂಟಾಗುವುದು. ಈ ಶಬ್ದವನ್ನು ಕೇಳಿದ ಡ್ರೈವರನು ತನ್ನ ನೋಟಾರಿನ ಹಿಂದಿರುವ ಕೆಂಪುದೀಪವನ್ನು ಹಚ್ಚಿ ತನಗೆ ಕೇಳಿಸಿರುವುದಾಗಿ ಸೂಚಿಸುತ್ತಾನೆ. ಮತ್ತು ಹಿಂದಿರುವ ಗಾಡಿಯನ್ನು ಮುಂದೆ ಹೋಗುವಂತೆ ಸೂಚಿಸಲು ಹಸುರುದೀಪವನ್ನು ಹಚ್ಚುತ್ತಾನೆ.

ಪ್ಯಾಲಸ್ಟೈನ್ ಪರಿಸ್ಥಿತಿ!

ಪ್ಯಾಲಸ್ಟೈನಿನ ಉತ್ತರಭಾಗದಲ್ಲೆಲ್ಲ ಹಿಂಸಾತ್ಮಕ ಕೃತ್ಯಗಳು ನಡೆಯುತ್ತಲೇ ಇವೆ. ಕಳೆದ 11 ನೆಯ ತಾರೀಖಿನದಿವಸ 6 ಜನರು ಹತರಾದರು. 12 ಮಂದಿ ಗಾಯಗೊಂಡರು. ಹೈಫ ಮತ್ತು ನಜೆರತ್‌ಗಳ ಮಧ್ಯೆ ಬಂಗೆಖೋರರು ನುಗ್ಗಿ ಒಬ್ಬ ಬ್ರಿಟಿಷ್ ಅಧಿಕಾರಿಯನ್ನು ಗಾಯಗೊಳಿಸಿದರು. ಈ ಸಂದರ್ಭದಲ್ಲಿ ಒಬ್ಬ ಯಹೂದ್ಯ ಕಾರ್ಖಾನೇಬಲನು ಮೃತನಾದನು. ಇಬ್ಬರಿಗೆ ಗಾಯಗಳಾದವು. ಏರಿಷ್‌ಗಾರ್ಡಿನ ಪ್ರಥಮ ಸೈನ್ಯಪಡೆಯು ಈಜಿಪ್ಟಿನಿಂದ ಲಿಡ್ಡಕ್ಕೆ ಮುಟ್ಟಿದೆ. ನಗರದ ಪೂರ್ವಭಾಗದಲ್ಲಿ ರುಷ್ಯರು 6 ಟಾಂಬುಗಳನ್ನು ಹಾಕಿದ್ದರಿಂದ ಯಹೂದ್ಯ ಗಿರಣಿ ಕೆಲಸಗಾರರಿಗೆ ಗಾಯಗಳಾದವು. ಬಸ್ಸಿನಲ್ಲಿ ಹೋಗುತ್ತಿದ್ದ ಯಹೂದ್ಯರ ಮೇಲೂ ದಾಳಿಯು ನಡೆಯಿತು. ಇವರಿಂದ ಒಬ್ಬನು ಇರಿಯಲ್ಪಟ್ಟು ಸತ್ತನು ಅರಬ್ಬಿಯನರ ಕಲ್ಲಿನ ಹೊಡೆತ ಮತ್ತು ಚೂರಿಯ ಇರಿತದಿಂದಲೂ ಗಾಯಗೊಂಡ ಕೆಲವರು ಆಸ್ಪತ್ರೆಯಲ್ಲಿ ಸ್ಥಾಣಬಿಟ್ಟರು. ಪರಿಸ್ಥಿತಿಯು ಉಗ್ರರೂಪವನ್ನು ತಾಳುತ್ತಿದೆ.

ಕಪಿಗೆ ಕರುಣೆತೋರಿದ್ದಕ್ಕೆ ವಿಪತ್ತು!

ಉತ್ತರಪ್ರದೇಶದಲ್ಲಿರುವ ಖಾನಾಪುರವೆಂಬ ಗ್ರಾಮದಲ್ಲಿ ಒಂದುಮನೆಗೆ ಪ್ರತಿದಿನವೂ ಬೆಳಿಗಿನಹೊತ್ತು ಒಂದು ಕಪಿಯು ಬರುತ್ತಿತ್ತು. ಆ ಮನೆಯ ಯಜಮಾನಿಯು ಅದರಮೇಲೆ ದಯೆಯಿಟ್ಟು ಪ್ರತಿದಿನವೂ ಅದಕ್ಕೆ ಆಹಾರವನ್ನು ಕೊಡುತ್ತಿದ್ದಳು. ಹೀಗಿರಲು ಒಂದುದಿನ ಯಜಮಾನಿಯು ಆದಕ್ಕೆ ಆಹಾರವನ್ನು ಕೊಡಲು ಮರೆತು ಹೊರಗೆ ಹೋಗಿರುವಾಗ್ಗೆ, ಎಂದಿನಂತೆ ಬಂದ ಮಂಗವು ತನಗೆ ಆಹಾರವನ್ನು ಕೊಡಲು ಯಾರೂ ಬಾರದಿದ್ದರಿಂದ ಮನೆಯೊಳಗೆ ನುಗ್ಗಿ ತೊಟ್ಟಿಲಲ್ಲಿ ನಿದ್ರಿಸುತ್ತಿದ್ದ 2 ತಿಂಗಳ ಮಗುವನ್ನು ಎತ್ತಿಕೊಂಡು ಹೋಗಿ ಮರವನ್ನೇರಿತು. ಆಷ್ಟರಲ್ಲಿ ಮನೆಗೆಬಂದ ಯಜಮಾನಿಯು ತೊಟ್ಟಿಲಲ್ಲಿ ಮಗುವನ್ನು ಕಾಣದೆ ಹೊರಗೆ ಬಂದು ಮರದಮೇಲೆ ಕಪಿಯ ಕೈಯಲ್ಲಿ ಅಳುತ್ತಿರುವ ಮಗುವನ್ನು ಕಂಡು ಭೀತಳಾಗಿ ಆಹಾರವನ್ನು ತೋರಿಸಿದರೆ ಮಗುವನ್ನು ಕೆಳಕ್ಕೆ ತರುವದೆಂದು ಭಾವಿಸಿ ತಟ್ಟೆಯಲ್ಲಿ ಆಹಾರವನ್ನು ತಂದಿಟ್ಟಳು. ಅದನ್ನು ನೋಡಿದಕೂಡಲೆ ಕೋತಿಯು ಕುಳಿತಿದ್ದ ಸ್ಥಳದಿಂದಲೇ ಮಗುವನ್ನು ಕೈಬಿಟ್ಟಿತು. ಮಗುವು ಮೇಲಿನಿಂದ ಬಿದ್ದು ಮೃತಪಟ್ಟಿತು.

ನಾಲ್ವರಿಗೆ ಮೋಸಮಾಡಿದ ಹೆಂಗಸು!

ತುರ್ಕಿಯಲ್ಲಿ ಸುಮಾರು 21 ವರುಷ ವಯಸ್ಸಿನ ಸುಂದರ ತರುಣಿಯೋರ್ವಳು ಒಂದೇ ವರುಷದಲ್ಲಿ ನಾಲ್ವರನ್ನು ವಿವಾಹವಾಗಿ ಮೋಸಮಾಡಿ ಅವರ ಹಣಕಾಸುಗಳನ್ನು ಜೋಬಿಕೊಂಡು ಹೋದಳೆಂಬ ಆಪಾದನೆಯ ಮೇಲೆ ವಿಚಾರಣೆಗೆ ಗುರಿಯಾಗಿದ್ದಾಳೆ. ಇವಳು ಮೊದಲು ತನ್ನ ಗ್ರಾಮದ ಒಬ್ಬ ರೈತನನ್ನು ಮದುವೆಯಾಗಿ ಕೆಲವು ದಿವಸ ಅವನ ಹತ್ತರ ಇದ್ದು ಅವನ ಹಣವನ್ನು ಅಪಹರಿಸಿಕೊಂಡು ಬೇರೋಂದೂರಿಗೆ ಹೋಗಿ ಹೆಸರನ್ನು ಬದಲಾಯಿಸಿಕೊಂಡು, ಅಲ್ಲಿ ಒಬ್ಬ ಚರ್ಮ್ಯಾರನನ್ನು ಮದುವೆಯಾಗಿ ಕೆಲವು ದಿವಸಗಳಿದ್ದು, ಅಲ್ಲಿ ಕೈಗೆ ಸಿಕ್ಕಿದ್ದನ್ನು ತೆಗೆದುಕೊಂಡು ಅಡ್ಡಾ ಎಂಬ ಊರನ್ನು ತಲಪಿ, ಅಲ್ಲಿ ಬೇರೋಂದು ಹೆಸರನ್ನಿಟ್ಟುಕೊಂಡು ಒಬ್ಬ ಬೇಸಾಯಗಾರನನ್ನು ವರಿಸಿ ಎರಡು ತಿಂಗಳಾದ ಮೇಲೆ ಅವನನ್ನೂ ತ್ಯಜಿಸಿ ಹೊರಟು, ಇಸ್ತಾಬೂಲ್ ನಗರವನ್ನು ಸೇರಿ ಅಲ್ಲಿ ಬೇರೊಬ್ಬನೊಡನೆ ಸಂಸಾರ ಸಾಗಿಸಲು ನಿಂತಳು. ಅವಳ ಮೊದಲನೆಯ ಗಂಡನು ಪೋಲೀಸರಿಗೆ ದೂರು ಕೊಟ್ಟನು. ಪೋಲೀಸರು ಅವಳನ್ನು ಇಸ್ತಾಬುಲ್ಲಿನಲ್ಲಿ ದಸ್ತಗಿರಿ ಮಾಡಿ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಚೀನಾ ಜಪಾನ್ ಯುದ್ಧದ ಪರಿಸ್ಥಿತಿ.

ಚೀನರೂ ಜಪಾನರೂ ಒಂದು ವರ್ಷದಿಂದ ನಡೆದಿರುವ ಯುದ್ಧದಲ್ಲಿ ತಮ್ಮ ತಮ್ಮ ಕಡೆ ನೃತರ 7 ನೆಯ ಸ್ಮಾರಕೋತ್ಸವವನ್ನು ಕಳೆದ 7 ನೆಯ ತಾರೀಖಿನ ದಿನ ನಡೆಸಿದರು. ಪೂರ್ವದೇಶಗಳಲ್ಲಿ ಇಲ್ಲಿಯವರೆಗೂ ನಡೆದಿರುವ ಎಲ್ಲ ಯುದ್ಧಗಳಿಗಿಂತಲೂ ಈ ಯುದ್ಧವೇ ಬಹಳ ದೊಡ್ಡದು. ಈ 12 ತಿಂಗಳ ಕದನದಿಂದ ಜಪಾನಿನ ಧ್ವಜವು ನಾಲ್ಕು ಪ್ರಾಂತಗಳ ಮೇಲೂ ಮತ್ತೆ ನಾಲ್ಕು ಪ್ರಾಂತಗಳ ಕೆಲವು ಭಾಗಗಳಲ್ಲೂ ಹಾರುತ್ತಿದೆ. ಚೀನಾದಲ್ಲಿರುವ ಒಟ್ಟು 18 ಪ್ರಾಂತಗಳಲ್ಲಿ 4 ಮಾತ್ರ ಜಪಾನರ ಕೈಸೇರಿವೆ. ಉಳಿದ 14 ಪ್ರಾಂತಗಳು ಇನ್ನೂ ಚೀನೀಯರ ಕೈಯಲ್ಲಿಯೇ ಇವೆ. ಜಪಾನರು ವಶಪಡಿಸಿಕೊಂಡಿರುವ ಮುಖ್ಯ ನಗರಗಳು ಮತ್ತು ರೇವುಪಟ್ಟಣಗಳಲ್ಲಿ ಅಮಾಯ್, ಷಾಂಗೈ, ನಾರ್ಕಿಂಗ್, ಸಿಂಗ್‌ಚೌಚೇಫೂ, ಟೇಸ್ಸೀ, ಪೀಸಿಂಗ್ ಮತ್ತು ಸುಮಾರು 3500 ಮೈಲಿ ರೈಲ್ವೆ, 1300 ಮೈಲಿಗಳ ಸಮುದ್ರತೀರ ಮತ್ತು ನೌಕಾ ವ್ಯಾಪಾರಕ್ಕೆ ಅನುಕೂಲವಾದ, ಹಳದಿನದಿ ಮತ್ತು ಯಾಂಗ್‌ಟಿಸ್ ನದಿಯ ಬಹುಭಾಗ ಇವುಗಳು ಚೀನರ ಅಧಿಕಾರವಲ್ಲಿ ಉಳಿದಿರುವುವು. ಹಾಂಕೊ, ಚುಂಗ್‌ಕಿಂಗ್, ಕ್ಯಾರ್ಟೆ, ಸ್ವಾಂಟೊ, ಫೂಟಾ ಮುಂತಾದ ಮುಖ್ಯ ನಗರಗಳು, 2400 ಮೈಲಿ ರೈಲ್ವೆ, 1200ಮೈಲಿ ಸಮುದ್ರತೀರ. ಚೀನದ ಮಧ್ಯದಲ್ಲಿ ಬಹು ಮುಖ್ಯವಾದ ಹವಾಯ್‌ನದಿ ಮತ್ತು ಗ್ರಾಂಡ್‌ಕೆನಾಲ್, ವ್ಯಾಪಾರದ ವಿಷಯದಲ್ಲಿ ಚೀನದ ಮಧ್ಯ ಮತ್ತು ಉತ್ತರ ಪ್ರದೇಶಗಳನ್ನೆಲ್ಲಾ ಜಪಾನರು ವಶಪಡಿಸಿಕೊಂಡಿರುವುದಲ್ಲದೆ, ಪ್ರಪಂಚದಲ್ಲೆಲ್ಲಾ ಮೂರನೆಯ ದೊಡ್ಡ ಕಲ್ಲಿದ್ದಲು ಗಣಿಯನ್ನೂ ಮಂಗೋಲಿಯದ ಒಳಭಾಗದ ಉಣ್ಣೆಯನ್ನೂ ಷಾಟಂಗ್ ಮತ್ತು ತಿಯಾಂಗ್‌ಸುವಿನ ಹೊಗೆಸೊಪ್ಪು, ಷಾಟಂಗಿನ ಅಫೀಮು ಮತ್ತು ಷಾಂಗ್ಹೈ ರೇಷ್ಮೆ ಗಿರಣಿಗಳ ಪತ್ತಿ ಇವುಗಳನ್ನೆಲ್ಲ ವಶಪಡಿಸಿಕೊಂಡಿದ್ದಾರೆ. ಚೀನದ ಮರಣಸಂಖ್ಯೆ ಬಹಳವಾಗಿದೆ. ಯುದ್ಧದಲ್ಲಿ ಪ್ರಾಣಬಿಟ್ಟವರಲ್ಲದೆ, ವಿಮಾನದಾಳಿಗೊಳಗಾಗಿ ಅನೇಕರೂ, ತಿನ್ನಲು ಆಹಾರವಿಲ್ಲದೆ ಅನೇಕರೂ ಪ್ರಾಣಬಿಟ್ಟಿರುವರು. ಶರಣಾಗತರಾಗಬೇಕೆಂಬ ಜಪಾನರ ಸೂಚನೆಗೆ ಚೀನರು ಒಪ್ಪದೆ ಒಗ್ಗಟ್ಟಿನಿಂದ ಕಾದಾಡುತ್ತಿದ್ದಾರೆ.

ಸ್ವೀಕಾರ.

ಬಳ್ಳಾರಿ ಡಿ॥ ಕೊಟ್ಟೂರು ಪಂಚಾಯತಿ ಬೋರ್ಡಿಗೆ ವೇ॥ ಮಿ॥ ಮ॥ ಜಾಗಟಗೇರಿ ಚೆನ್ನಬಸವಪ್ಪಯ್ಯನವರು ಅಧ್ಯಕ್ಷರಾಗಿ ಆರಿಸಿ ಬಂದ ಸಂತೋಷಕ್ಕಾಗಿ ಪ್ರಭಾ ಪೋಷಣಕ್ಕೋಸ್ಕರ 5 ರೂ. ಗಳನ್ನು ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಬೃಹಸ್ಪತ್ಯಾಚಾರ್ಯರ ಮಗ ಕಚ ಮತ್ತು ಶುಕ್ರಾಚಾರ್ಯರ ಮಗಳು ದೇವಯಾನಿ.

ಲೇಖಕರು:—ಕನ್ನಡಕವಿ, ಆಸ್ಥಾನವಿದ್ವಾ ಆನವಟ್ಟಿ ರಾಮರಾಯರು.

ಗುರುವೆಂದರೆ ಶಿಷ್ಯನಿಗೆ ಪರಮಾತ್ಮನ ಜ್ಞಾನವನ್ನು ಹೊಂದುವಂತೆ ಮಾಡುವವನೆಂದು ಅರ್ಥ ಇಂತಹ ಗುರುವನ್ನು ಶಿಷ್ಯನಾದವನು ಪ್ರತಿದೇವನೆಂದು ಭಾವಿಸಿ, ಅವನ ಪಾದಸರೋಜಸೇವೆಯಿಂದ ನಿಜದೇಹಶುದ್ಧಿಯಂ ಪಡೆಯುವನೆಂಬುದರಲ್ಲಿ ಸಂದೇಹವಿಲ್ಲ ಶಿಷ್ಯನ ಗುರುಭಕ್ತಿಗೂ ಸೇವಾವೃತ್ತಿಗೂ ಮೆಚ್ಚಿ ಸಂತೋಷಪಟ್ಟ ಗುರುವು ಶಿಷ್ಯನ ಯೋಗ್ಯತೆಯನ್ನು ಸಂಪೂರ್ಣವಾಗಿ ತಿಳಿದು, ಅವನಿಗೆ ಬೋಧಿಸುವನು ತೃಪ್ತನಾದ ಶಿಷ್ಯನು ಜ್ಞಾನವೆಂಬ ಮಹಾನಿಧಿಯನ್ನು ಪಡೆದು ಇಹದಲ್ಲಿ ಮಾನ್ಯತೆಯನ್ನು ಹೊಂದಿ, ಮೋಕ್ಷಾನಂದವೆಂಬ ಅಮೃತಪಾನದಿಂದ ಸಂತುಷ್ಟನಾಗಿ ಧನ್ಯನಾಗುವನು.

ಗುರುಗಳಾದರೋ, ತಮ್ಮ ಜೀವಿತಕಾಲವೆಂಬ ರಂಗಸ್ಥಳದಲ್ಲಿ ಪ್ರವೇಶಿಸುವ ಕಾಮಾದಿ ಷಡ್ವರ್ಗಗಳೆಂಬ ಶತ್ರುಗಳ ಸತ್ವವನ್ನಡಗಿಸಿ ಭಕ್ತಿಯೆಂಬ ರಾಜ್ಯವನ್ನು ತಮ್ಮ ವಶವರ್ತಿಯನ್ನಾಗಿ ಮಾಡಿಕೊಂಡು ಶರಣವರ್ಯರಿಗೆ ಸದುಪದೇಶಾಮೃತವನ್ನು ಪೀರಿಸುವಂತೆ ಮಾಡುವ ಗುರುವರ್ಯರಿಗೆ ಸಾಟಿಯಾದವರು ಮತ್ತಾರಿರುವರು? ಗುರುಗಳಾದವರು ಲೋಕಾನುವರ್ತಿಗಳಾದ ಮಹನೀಯರಿಗೆ ವಿಧಿವಿಹಿತ ಸನ್ಮಾರ್ಗವರ್ತನೆಯೆಂಬ ಮಾರ್ಗದಲ್ಲಿ ನಡಿಸಿ, ಆ ಕರ್ಮದ ಫಲಗಳನ್ನು ಸ್ವಾದಿಸುವಂತೆ ಸೈಗು, ಧರ್ಮಾಧರ್ಮಗಳ ವಿಚಿತ್ರ ವ್ಯಾಪಾರಗಳನ್ನು ತಾಳ್ಮೆಯಿಂದ ಮನಸ್ಸಿಗೆ ಬರುವಂತೆ ಬೋಧಿಸುತ್ತಾ, ಅವರನ್ನು ಜನನ-ಮರಣರೂಪಸಂಸಾರದಿಂದ ಉದ್ಧಾರಮಾಡುವ ಮಾರ್ಗವನ್ನು ತೋರುವುದೆಂಬ ತತ್ವವನ್ನು ಶಾಸ್ತ್ರದ್ವಾರಾ ಆಶ್ರಿತರ ಮನಸ್ತೋಷ್ಟವಂತೆ ವಿವರಿಸುಗಳನ್ನು ದೃಷ್ಟಾಂತಪೂರ್ವಕವಾಗಿ ತೋರಿಸುತ್ತಾ, ಐಹಿಕಾಶಾತತೆಗಳು ಕ್ಷಣಿಕಸುಖಪ್ರದವೆಂಬ ಮರ್ಮವನ್ನು ಬೋಧಿಸುತ್ತಾ, ಆ ಧರ್ಮಾಚರಣೆಯಿಂದ ಲಬ್ಧವಾದ ಪಾಪರಾಶಿಗಳು ನಿರ್ಮೂಲವಾಗುವುದೆಂಬ ಉಸ ದೇಶಕ್ಕೆ ಕಾರಣಭೂತರಾಗಿರುವ ಮಹಾಮಹಿಮರು ಇಂತಹ ಮಹನೀಯರ ಸಂದರ್ಶನವು ಲೋಕನೇತ್ರಪ್ರಾಯನಾದ ಸೂರ್ಯನ ಆಗಮನದಂತೆ ಶಿಷ್ಯರ ಅಜ್ಞಾನವೆಂಬ ಅಂಧಕಾರವನ್ನು ನಿರ್ಮೂಲಮಾಡಿ, ಭಕ್ತಿ ಹೃದಯಸರೋಜವನ್ನು ವಿಕಸನಗೊಳಿಸಿ, ಜ್ಞಾನನೇತ್ರಕ್ಕೆ ವರ್ಚಸ್ಸನ್ನು ಕೊಟ್ಟುಂತಿರುವುದು ಎಂಬುದಕ್ಕೆ ದೇವಗುರುಗಳಾದ ಬೃಹಸ್ಪತ್ಯಾಚಾರ್ಯರೂ, ರಾಕ್ಷಸಗುರುಗಳಾದ ಶುಕ್ರಾಚಾರ್ಯರೂ ದೃಷ್ಟಾಂತಭೂತರಾಗಿರುವರು

ಹಿಂದೆ ದೇವತೆಗಳಿಗೂ, ರಾಕ್ಷಸರಿಗೂ ಪರಸ್ಪರ ವೈರವು ಯಾವಾಗಲೂ ಇದ್ದಿತು ಇವರು ಪ್ರತಿಯೊಂದು ರಂಗಸ್ಥಳದಲ್ಲಿಯೂ ತಾವೇ ಶ್ರೇಷ್ಠರೆಂದೆನಿಸಿಕೊಂಡು ಮೂರುಲೋಕಗಳನ್ನಾಳಬೇಕೆಂಬ ದುರಾಶೆಯುಳ್ಳವರಾಗಿದ್ದರು ಇದಕ್ಕಾಗಿ ಆನೇಕ ವೇಳೆ ಇವರಲ್ಲಿ ಪರಸ್ಪರ ವೈರವು ಜನಿಸಿ, ದ್ವಂದ್ವಯುದ್ಧಗಳು ನಡೆಯುತ್ತಲೇ ಇದ್ದವು ದೇವತೆಗಳ ಕಡೆಯಲ್ಲಿ ಬೃಹಸ್ಪತ್ಯಾಚಾರ್ಯರೂ, ರಾಕ್ಷಸರ ಕಡೆಯಲ್ಲಿ ಶುಕ್ರಾಚಾರ್ಯರೂ ಅಧ್ಯಕ್ಷರಾದ ಗುರುಗಳಾಗಿದ್ದರು. ಒಂದು ವಿಷಯದಲ್ಲಿ ಬೃಹಸ್ಪತ್ಯಾಚಾರ್ಯರಿಗಿಂತಲೂ ಶುಕ್ರಾಚಾರ್ಯರೇ ವಿಶೇಷಮಹಿಮಾನ್ವಿತರಾಗಿದ್ದರು ಹೇಗೆಂದರೆ— ಪರಸ್ಪರ ಯುದ್ಧವು ಸಂಧಿಸಿದ ಕಾಲದಲ್ಲಿ ರಾಕ್ಷಸರ ಕಡೆ ಇಹಲೋಕವ್ಯಾಪಾರಬಿಟ್ಟವರನ್ನೆಲ್ಲಾ ಶುಕ್ರಾಚಾರ್ಯರು ತಾವು ಕಲಿತಿರುವ ಸಂಜೀವಿನೀ ಎಂಬ ಅಮೋಘವಾದ ವಿದ್ಯಾಸಾಮರ್ಥ್ಯದಿಂದ ಬದುಕಿಸುತ್ತಿದ್ದರು! ಇದರಿಂದ ರಾಕ್ಷಸರ ಕಡೆ ನಷ್ಟವಾಗುತ್ತಿರಲಿಲ್ಲ ಕ್ರಮೇಣ ದೇವತೆಗಳ ಕಡೆಯವರ ಸಂಖ್ಯೆಯು ಕಮ್ಮಿಯಾಗುತ್ತ ಬರುತ್ತಿದ್ದಿತು

ಸನ್ನಿವೇಶವು ಹೀಗಿರುತ್ತಿರಲು ಒಂದಾನೊಂದುದಿವಸ ದೇವತೆಗಳು ತಮ್ಮ ಗುರುವಾದ ಬೃಹಸ್ಪತ್ಯಾಚಾರ್ಯರ ಮಗನಾದ ಕಚನನ್ನು ಕುರಿತು— ಧೀಶಾಲಿಯಾದ ಕಚನೇ! ಯುದ್ಧದಲ್ಲಿ ನಮ್ಮ ಕಡೆಯವರು ಸಾಯುತ್ತಾ ಬರುವುದರಿಂದ ಬಲವು ಹೀನವಾಗುತ್ತಾ ಬರುತ್ತಿರುವುದಷ್ಟೆ ನಮ್ಮ ವಿಜ್ಞಾಪನೆಯೇನೆಂದರೆ—ಶುಕ್ರಾಚಾರ್ಯರು ಸಂಜೀವಿನೀ ಮಂತ್ರವನ್ನು ಜಿಹ್ವಾಗ್ರಿ ಬಲ್ಲವರಾಗಿರುವುದರಿಂದ ನೀನು ಹೇಗಾದರೂ ಮಾಡಿ ಶುಕ್ರಾಚಾರ್ಯರ ಶಿಷ್ಯವೃತ್ತಿಯಲ್ಲಿದ್ದುಕೊಂಡು, ಗುರುವಿಗೆ ಸಂತೋಷಪಡಿಸು. ಗುಣವಾನ ಮುಗ್ಧಳಾದ ದೇವಯಾನಿ ಎಂಬುವಳು ಇರುವಳು. ಆಕೆಯು ಮನಸ್ಸನ್ನು ಸಂತೋಷಪಡಿಸು. ಇದರಿಂದ ಆ ಶುಕ್ರಾಚಾರ್ಯರಲ್ಲಿರುವ ಸಂಜೀವಿನೀ ವಿದ್ಯೆಯನ್ನು ಬಹು ರಹಸ್ಯವಾಗಿ ತಿಳಿದುಕೊಂಡುಬಂದು ನಮ್ಮೆಲ್ಲರನ್ನು ಕಾಪಾಡು, ಎಂದು ಬಹಳವಾಗಿ ಪ್ರಾರ್ಥಿಸಿಕೊಂಡರು.

ಆಸ್ತ ಕಚನು ದೇವತೆಗಳ ಪ್ರಾರ್ಥನೆಯನ್ನು ಲಾಲಿಸಿ, ತುಂಬ ಮರುಕಪಟ್ಟು, ಶತ್ರುಗಳ ಸಮೂಹದಲ್ಲಿದ್ದು ಕಾರ್ಯವನ್ನು ನೆರವೇರಿಸಿಕೊಂಡು ಬರುವುದೆಂದರೆ ಅತ್ಯಂತ ಕಷ್ಟವೆಂದು ಯೋಚಿಸಿ, ತಂದೆಯ ಅನುಜ್ಞೆಯನ್ನು ಪಡೆದು ಹತ್ತುಜನಗಳಿಗೆ ಅನುಕೂಲವಾಗುವುದಾದರೆ ದೇವನು ನನ್ನ ಕಾರ್ಯಕ್ಕೆ ಸಹಾಯ ಮಾಡಾನು ಎಂದು ನಿಶ್ಚಯಿಸಿ, ಶುಕ್ರಾಚಾರ್ಯರ ಸನ್ನಿಧಿಗೆ ಹೋಗಿ, ತಾನಾರೆಂಬುದನ್ನು ತಿಳಿಸಿ ಅವರ ಶಿಷ್ಯನಾಗಿರಬೇಕೆಂದು ಬೇಡಿಕೊಂಡನು ಹೀಗೆ ಕೆಲವು ಕಾಲ ಕಳೆಯಿತು. ಶುಕ್ರಾಚಾರ್ಯರು ಈತನ ಗುಣಾತಿಶಯಗಳನ್ನು ಪರೀಕ್ಷಿಸಿದರಲ್ಲಿ ಯಾವ ಲೋಪವೂ ಕಾಣದಿರಲಿಲ್ಲವಾಗಿ, ಬಹಳವಾಗಿ ಮೆಚ್ಚಿ, ಬಹುಕಾಲ ಬ್ರಹ್ಮಚರ್ಯಾಶ್ರಮದಲ್ಲುದ್ದುದನ್ನೂ ನೋಡಿ, ಕೊನೆಗೆ ತನ್ನ ಶಿಷ್ಯನಾಗಿರಲು ಒಪ್ಪಿಕೊಂಡರು

ಕಚನಾದರೋ, ತಂದೆಯ ಬೋಧೆಯಿಂದ ತುಂಬ ವಿದ್ಯಾವಂತನಾಗಿ, ನೋಡುವುದಕ್ಕೆ ಬಹು ಸುಂದರನಾಗಿದ್ದನು. ಗೋವುಗಳಿಗೆ ಅರಣ್ಯಾದಿಗಳಲ್ಲಿ ಹುಲ್ಲುಮೇಯಿಸಿಕೊಂಡು ಬರುವ ಕೆಲಸವನ್ನು ಬಹು ಆದರದಿಂದ ಮಾಡುತ್ತಿದ್ದನು. ಕಚನು ಗೋವುಗಳನ್ನು ಮೇಯಿಸಲು ಕರೆದುಕೊಂಡು ಹೋಗಿ ಅರಣ್ಯದಲ್ಲಿ ಬಿಟ್ಟು ತಾನು ಒಂಟಿಯಾಗಿರುವುದನ್ನು ನೋಡಿದ ಕೆಲವು ರಾಕ್ಷಸರು ಶತ್ರುಪಕ್ಷದಿಂದ ಬಂದವನು ಮುಂದಕ್ಕೇನುಮಾಡುವನೋ ಎಂಬ ಭೀತಿಯಿಂದ ಕೋಪಾವೇಶದಿಂದ ಇವನನ್ನು ಕೊಂದು ದುಷ್ಟಮೃಗಗಳಿಗೆ ಆಹುತಿಯಾಗಲೆಂದು ಮೃತಶರೀರವನ್ನು ಅರಣ್ಯದಲ್ಲಿ ಬಿಸಾಡಿಬಿಟ್ಟರು. ಬಹಳ ಹೊತ್ತಾಯಿತು. ಎಂದಿನಂತೆಯೇ ಗೋವುಗಳು ಬಂದ ದಾರಿಯನ್ನು ಹಿಡಿದು ಶುಕ್ರಾಚಾರ್ಯರ ಆಶ್ರಮಕ್ಕೆ ಹೋಗಿ ಸೇರಿಕೊಂಡವು ಇತ್ತ ದೇವಯಾನಿಯು ಬಹಳಕಾಲವಾದರೂ ಕಚನು ಬಾರದಿರುವುದನ್ನು ತಿಳಿದು ತಂದೆಯ! ಕಚನು ಇನ್ನೂ ಅರಣ್ಯದಿಂದ ಬರಲಿಲ್ಲ, ಹಸುಗಳು ಕ್ಷುಪ್ತಕಾಲಕ್ಕೆ ಬಂದು ಸೇರಿದುವು ಹೀಗಿರುವಲ್ಲಿ ಅವನು ಮಾತ್ರ ಬಾರದಿರಲು ಕಾರಣವೇನೆಂದುಸಿರಿ, ತನ್ನ ಅಸಮಾಧಾನವನ್ನು ಸೂಚಿಸಿದಳು.

ಶುಕ್ರಾಚಾರ್ಯರು ತನುಜೆಯಾಡಿದ ಮಾತುಗಳನ್ನು ಯೋಚಿಸಿ ತಾವು ಕಲಿತ ಸಂಜೀವಿನೀಮಂತ್ರವನ್ನುಚ್ಚರಿಸಿ—"ಎಲೈ ಕಚನೆ! ಎಲ್ಲಿರುವೆ ಬಾ" ಎಂದು ಕೂಗಿದರು. ಸ್ವಲ್ಪಹೊತ್ತಿನಲ್ಲಿಯೇ ಸತ್ತ ಕಚನು ಜೀವಸಹಿತ ಬಂದು ಗುರುಗಳ ಮುಂಭಾಗದಲ್ಲಿ ಕೈಮುಗಿದುಕೊಂಡು ನಿಂತಿರಲು, ಶುಕ್ರಾಚಾರ್ಯರು ಕಚನೇ! ಈ ದಿವಸ ಇಷ್ಟು ದೀರ್ಘಕಾಲಮಾಡಿಕೊಂಡು ಬರಲು ಕಾರಣವೇನು? ಕಚ—ಸ್ವಾಮಿಯೇ! ಗೋವುಗಳನ್ನು ಅರಣ್ಯದಲ್ಲಿ ಬಿಟ್ಟು ಮೇಯಿಸುತ್ತಾ ನೋಡಿಕೊಂಡು ಕುಳಿತಿರುವಾಗ್ಗೆ ಕೆಲವು ರಾಕ್ಷಸರು ಹತ್ತಿರಕ್ಕೆ ಬಂದು, ಖಡ್ಗದಿಂದ ನನ್ನನ್ನು ಸಂಹರಿಸಿ, ಅರಣ್ಯದಲ್ಲಿ ಶರೀರವನ್ನು ಬಿಸಾಡಿ ಹೊರಟುಹೋದರು. ಇದು ನಿಜಾಂಶವು. ಎಂದು ಹೇಳಲು ಗುರುವು ಯೋಚಿಸಿದಂತೆಯೇ ನಡೆದಿರುವುದೆಂದು ತಿಳಿದು ಬಹಳ ವ್ಯಸನಪಟ್ಟುಕೊಂಡನು ಈ ವಿಷಯವನ್ನು ತಿಳಿದ ದೇವಯಾನಿಯೂ ಆಶ್ಚರ್ಯಚಕಿತಚಿತ್ತಳಾದಳು ಕೆಲವು ಕಾಲವು ಕಳೆಯಿತು.

ಹೀಗಿರಲು ಮತ್ತೊಂದು ಸಮಯದಲ್ಲಿ ಕಚನು ಜೀವಿತನಾಗಿರುವುದನ್ನು ಕಂಡ ರಾಕ್ಷಸರು ಆಶ್ಚರ್ಯಯುಕ್ತರಾಗಿ ಪುನಃ ಕೊಂದು ಬಿಸಾಡಿದರು ಆ ದಿವಸವೂ ಸಂಜೆಯಲ್ಲಿ ದೇವಯಾನಿಯ ಪ್ರಾರ್ಥನೆಯಂತೆ ಶುಕ್ರಾಚಾರ್ಯರು ಕಚನನ್ನು ಪುನಃ ಬದುಕಿಸಿದರು. ಇವ್ಯವಸ್ಥೆಗಳನ್ನೆಲ್ಲಾ ನೋಡಿ ತುಂಬ ಯೋಚಿಸಿದ ರಾಕ್ಷಸರು ಮೂರನೆಯಬಾರಿ ಕಚನನ್ನು ಕೊಂದು, ಅವನ ಶರೀರವನ್ನು ಸುಟ್ಟು ಬೂದಿಮಾಡಿ, ಆ ಬೂದಿಯನ್ನು ದ್ರಾಕ್ಷಾರಸದಲ್ಲಿ ಬೆರೆಸಿ ಅವರ ಗೋಚರಕ್ಕೆ ಬಾರದಂತೆ ಶುಕ್ರಾಚಾರ್ಯರಿಗೆ ಕುಡಿಯಲು ಕೊಟ್ಟರು ಇತ್ತ ಬಹಳ ಕಾಲವಾಯಿತು ಕಚನು ಬಾರದಿರುವುದನ್ನು ಕುರಿತು ದೇವಯಾನಿಯು ಬಹಳವಾಗಿ ಪೇಚಾಡಿ, ಈ ಸಾರಿಯೂ ಕಚನಿಗೆ ತುಂಬ ಅಪಾಯವಾಗಿರಬಹುದೆಂದು ಆನಾಸಕಿ ಯೋಚಿಸಿ ತಂದೆಯೇ! ಕಾಲವು ಮೀರಿಧುನ್ನದ. ಕಚನ ಸುಳಿವೇ ಇಲ್ಲದ್ದರಿಂದ ತುಂಬ ಸಂದೇಹವಾಗಿದೆ ಆತನ ಸದ್ಗುಣಾನ್ವಿತನು. ನೀನು ನೋಡಿಷಂತೆಯೇ ಆತನು ಆಶ್ರಮದಲ್ಲಿ ಮಾಡಬೇಕಾಗಿರುವ ಕಾರ್ಯಗಳನೇಕವಿರುವುವು. ಆತನು ತಮ್ಮ ಸೇವಾಸಕ್ತಿಯಲ್ಲಿ ಲೀನಚಿತ್ತನು. ಇವೆಲ್ಲಾ ತಮಗೆ ಸೊತ್ತಿರುವ ವಿಷಯ. ಅವನನ್ನು ಕಾಣದಿದ್ದರೆ ನನ್ನ ಇಹಲೋಕದ ವರ್ತನೆಯು ಸ್ವಾರ್ಥವೆಂದು ಮನಸ್ಸಾಗುವುದು. ಈಸೇ ಹೇಗಾದರೂಮಾಡಿ ಆತನನ್ನು ಮಾಡಬೇಕೆಂದು ವಿಜ್ಞಾಪಿಸಿಕೊಂಡು, ಕಣ್ಣೀರುಹಾಕುತ್ತಾ ನಿಂತಳು. ತಂದೆಯು ಮಗಳ ಮನೋಭಾವವನ್ನರಿತುಕೊಂಡು ಸಂಜೀವಿನೀ ಮಂತ್ರವನ್ನುಚ್ಚರಿಸಿದರೂ ಸಫಲವಾಗಲಿಲ್ಲ ಅನೇಕವೇಳೆ ಕಚನ ಹೆಸರನ್ನು ಹಿಡಿದು ಕೂಗಿದರೂ ನಿಷ್ಫಲವಾಗಿ ಅವನ ಸುಳಿವೇ ಕಾಣಬರಲಿಲ್ಲ— ಅನಂತರ—ಎಲೌ ತನಯಳೆ? ಕೆಲವರು ನಮ್ಮಲ್ಲಿ ಬಹಳ ಕೆಟ್ಟವರಿರುವಲೆಂದು ನಿನಗೆ ತಿಳಿಯದವಿಷಯವಲ್ಲ ತೋದಿಸಿದರು ಇನ್ನೂ ಯೋಚಿಸಿ ನೋಡುವೆನು; ಎಂದು ಸಮಾಧಾನೋಕ್ತಿಗಳನ್ನಾಡುತ್ತಿರುವ ಸಮಯದಲ್ಲಿ ಕಚನು ಆಚಾರ್ಯರ ಹೊಟ್ಟೆಯೊಳಗಿನಿಂದ ಶುಕ್ರಾಚಾರ್ಯರಿಗೆ ತಿಳಿಯುವಂತೆ ತನಗೆ ಪ್ರಾಪ್ತವಾದ ತೊಂದರೆಗಳೆಲ್ಲವನ್ನೂ ಹೇಳಿದನು ಅವೆಲ್ಲಾ ಗುರುಗಳ ತಿಳಿವಳಿಕೆಗೆ ಬಂದವು. ಇದನ್ನು ಶುಕ್ರಾಚಾರ್ಯರು ತಿಳಿದು, ನಡೆದ ವಿಷಯಗಳೆಲ್ಲವನ್ನು ಮಗಳಿಗೆ ತಿಳುಹಿಸಿದರು.

ಈ ವಿಷಯವನ್ನು ತಿಳಿದಮೇಲೆ ರಾಕ್ಷಸರು ಮಾಡಿದ ಕಾರ್ಯವೆಂದು ತೀರ್ಮಾನಿಸಿಕೊಂಡು—ಮಗಳೆ! ಕಚನು ನನ್ನ ಹೊಟ್ಟೆಯಲ್ಲಿಯೇ ಇರುವನು ನನ್ನ ಮಂತ್ರೋಚ್ಚಾರಣೆಯಿಂದ ಕಚನು ಬದುಕಿದನು. ನನ್ನ ಹೊಟ್ಟೆಯಿಂದ ಅವನು ಹೊರಗೆ ಬರಲು ನಾನು ಕರೆದರೆ ನನ್ನ ಹೊಟ್ಟೆಯನ್ನು ಸೀಳಿಕೊಂಡು ಹೊರಗೆಬಂದುದಾದರೆ ಕೊನೆಗೆ ನಾನು ಸಾಯಲೇಬೇಕು. ಇಂತಹ ವಿಷಮ ಸ್ಥಿತಿಯಲ್ಲಿರುವೆನು, ಏನು ಮಾಡಲಿ! ಎಂದು ಹೇಳಿದನು. ದೇವಯಾನಿ—ತಂದೆಯೇ! ಕಚನ ಸದ್ಗುಣಾಗಳೇ ನನ್ನ ಪ್ರಾಣಕ್ಕೆ ಸದೃಶವೆಂದು ಭಾವಿಸಿ, ವರ್ತಿಸುತ್ತಿರುವಾಗ್ಗೆ, ಅವನನ್ನು ತಾವು ಉದಾರೀನವಾಹುವುದಾದರೆ ನಾನೂ ಕಚನಂತೆ ಇಹಲೋಕವಿದೂರಳಾಗುವುದರಲ್ಲಿ ಸಂದೇಹವಿಲ್ಲ, ಎಂದು ಬಹಳವಾಗಿ ಬೇಡಿಕೊಂಡಮೇಲೆ, ಶುಕ್ರಾಚಾರ್ಯರು ತುಂಬ ಯೋಚಿಸಿ ಕಚನನ್ನು ಕುರಿತು ಕಚನೆ! ನನ್ನನ್ನು ಬದುಕಿಸಲು ಸಂಜೀವಿನೀಮಂತ್ರವನ್ನು ನಿನಗೆ ಬೋಧಿಸಬೇಕಾಯಿತು ಈಗ ಬೋಧಿಸುವೆನು ಅದನ್ನು ಜ್ಞಾಪಕದಲ್ಲಿಟ್ಟುಕೊಂಡು, ನೀನು ಹೊರಗೆ ಬಂದಮೇಲೆ, ಆ ಮಂತ್ರೋಚ್ಚಾರಣೆಯನ್ನು ಮಾಡಿ, ನನ್ನನ್ನು ಬದುಕಿಸು ಮಗಳ ಮನೋರಥವನ್ನು ಈಡೇರಿಸು, ತಿಳಿಯಿತೆ? ಎಂದು ಹೇಳಿ ಕೆಲವು ಅಕ್ಷರಗಳನ್ನು ಬಿಡಿದು ಅವರಿಗೆಲ್ಲಾ ತೋನೆಗೆ ಬುದ್ಧಿವಾದಗಳನ್ನು ಹೇಳಿ, ಮುಂದಕ್ಕೆ ಕಚನು ನನ್ನಷ್ಟೇ ಬುದ್ಧಿವಂತನಾಗುವನು, ಮುಂದಕ್ಕೆ ಈ ಪ್ರಕಾರ ನೀವು ಮಾಡಬೇಡಿ, ಎಂದು ಎರಡುಸಾರಿ ಹೇಳಿ ಉಪದೇಶಿಸಿದಮೇಲೆ ಕಚನಿಗೆ ಕೊನೆಗೆ ಸಂಜೀವಿನೀ ಮಂತ್ರೋಪದೇಶಮಾಡಿದನು ಸ್ವಲ್ಪ ಹೊತ್ತಿನಲ್ಲಿಯೇ ಕಚನು ಗುರುವಿನ ಹೊಟ್ಟೆಯನ್ನು ಸೀಳಿಕೊಂಡು ಹೊರಗೆ ಬಂದು, ಗುರುಬೋಧೆಯಂತೆ ತಾನು ಕಲಿತ ಸಂಜೀವಿನೀ ಮಂತ್ರವನ್ನುಚ್ಚರಿಸಿ, ತೋನೆಗೆ ಗುರುವು ಜೀವಿಸುವಂತೆ

ಡಿ, ತಾನು ಇಂದಿಗೆ ಗುರುಸೇವಾಧುರಂಧರನಾಗಿರುವೆನೆಂದು ಗುರುಪಾದಗಳಿಗೆ ನಮಸ್ಕಾರಮಾಡಿ, ದೇವಯಾನಿಗೂ ತುಂಬ ಸಂತೋಷಪಡಿಸಿದನು. ಈ ವಿಷಯವನ್ನು ತಿಳಿದಮೇಲೆ ಅಂದಿನಿಂದ ಮಿಕ್ಕ ರಾತ್ರಿಸರು ಪುನಃ ಕಚನ ತಂಟೆಗೆ ಹೋಗದಂತಾಯಿತು. ಕಚನಿಗೆ ಗುರುವಿನ ಕೃಪೆಯೂ, ವಿದ್ಯಾಭ್ಯಾಸವೂ ಆಗಿಯಿತು. ಇವನ ಮನೋಗತವಾದ ಸಂಜೀವಿನೀ ಮಂತ್ರವು ಇವನ ಕರತಲಕ್ಕೆ ಬಂದಾಯಿತು. ಹೀಗೆ ಕೆಲವು ಕಾಲಗಳು ಕಳೆದಮೇಲೆ ಕಚನು ತನ್ನ ತಂದೆಯ ಹತ್ತಿರಕ್ಕೆ ಹೋಗಬೇಕೆಂದು ಹೊಳೆದು ತೊನೆದೆ ನಿಶ್ಚಯಿಸಿಕೊಂಡು ಒಂದುದಿವಸ ಗುರುವಿನಪ್ರಣಿಯನ್ನು ಪಡೆದು ದೇವಯಾನಿಯ ಬಳಿಗೆ ಬಂದು—ಸಹೋದರಿ! ಎಂದು ಹೇಳಿದ ಮಾತು ಅಳಿಯು ತಿಪಿನೆ ಬಿಡ್ಡ ಕೂಡಲೆ, ಅವನಿಗೆ ಏನೋ ಒಂದು ವಿಚಿತ್ರವಾದ ಮನೋಭಾವವುಂಟಾಗಿ, ದೇವಯಾನಿ—ಕಚನೆ! ನಾನಾರೆಂದು ತಿಳಿದಿರುವೆ? ನನ್ನ ಭಾವನೆಯೇನು? ನೀನು ಹೇಳುತ್ತಿರುವುದೇನು? ಶಾಂತಿಯಿಂದ ಆಲೋಚಿಸು, ಎನಲು ಈ ಮಾತುಗಳನ್ನು ಕೇಳಿದ ಕಚನು ಭ್ರಾಂತನಾಗಿ ತನ್ನನ್ನೆ ನಿಂತುಕೊಂಡಿರಲು, ಹತ್ತಿರಕ್ಕೆ ಹೋಗಿ, ಎಲೈ ಕಚನೆ, ನಿನ್ನ ಜೀವವ ಉಳಿಸಬೇಕೆಂದು ಮೂರುಬಾರಿ ತಂದೆಯನ್ನು ಬೇಡಿಕೊಂಡು ಜೀವಿತನನ್ನಾಗಿ ಮಾಡಿಸಿದುದಕ್ಕೆ, ನಿನ್ನ ಮೇಲಣ ಅನುರಾಗದಿಂದಿರುವ ನಾನು, ನಿನಗಾಗಿ ನಾನು ಪ್ರಾಣಬರುವಂತೆ ಮಾಡುವುದಕ್ಕೆ ಪ್ರತಿಫಲಕಾರ್ಯಸಾಧನೆಯೆಂದು ಭಾವಿಸಿರುವೆಯೋ! ಎಲೆಲೆ ಕಚನು ಹೃದಯದ ಮನೋಭಾವವನ್ನು ತಿಳಿದು—ನಿನ್ನ ಪ್ರಣಯವು ಈಗಣ ನಿನ್ನ ತಿಗೆ-ಸಹಾಯಮಾಡಿದೆ ಅನುರಾಗವೆಂಬ ಹೊದಿಕೆಯು ನಿನ್ನ ಅತ್ಯಮೇಲೆ ಹೊದಿಸಿರುವುದರಿಂದ, ವಿವೇಕವು ಚ್ಯುತಿಯೊಂದಿಗೆ ಹೊಗ್ಗೆಗೆ ವರ್ತಿಸುವುದುಚಿತವೆ? ನಿನ್ನ ತಂದೆಯು ನನಗೆ ವಿದ್ಯಾಪ್ರದಾನಮಾಡಿದ್ದಕ್ಕಾಗಿ ನನ್ನ ತಂದೆಗೆ ಸಮಾನನು. ಆಗಿಯಲ್ಲಿ ಈಗ ನಿಷ್ಠಭಾವನೆಯು ಆನುಚಿತವು! ಎನಲು ದೇವಯಾನಿಯು ನನ್ನ ಜೀವದಾನಕ್ಕೆ ನಾನೇ ಮೊದಲು ಅನುಮೋದಿಸಿ ನಮ್ಮ ತಂದೆಯನ್ನು ಬೇಡಿ ಸ್ಮೃ ಕಾರಣಾಂತರದಿಂದ ನಿನಗೆ ಸಂಜೀವಿನೀ ಮಂತ್ರೋಪದೇಶವುಂಟಾದುದು ತಪ್ಪ ದೆತೆಯಿಂದಲೇ ಇತ್ತು ಯಾರಿಗೂ ಸಾಧ್ಯವಿಲ್ಲದ ಆ "ಸಂಜೀವಿನಿ" ಮಂತ್ರೋಪದೇಶವು ನಿನಗೆ ಹೇಗೆ ಲಭ್ಯವೋ, ಹಾಗೆಯೇ ನೀನೂ ನನಗೆ ಲಭ್ಯನಾದೆ. ಸ್ತ್ರೀಯರು ತಮ್ಮ ಕಾಲವನ್ನೂ, ಶರೀರದ ಸೌಖ್ಯವನ್ನೂ, ಅತ್ಯಂ ತೋಷವನ್ನೂ ಸನ್ಮಾರ್ಗದಲ್ಲಿ ಸತ್ಪಾತ್ರದಲ್ಲಿ ಉಪಯೋಪಿಸಿ, ನಿಷ್ಕಳಂಕರೀತಿಲ್ಲಿಯು ಇವುದೇ ತಮ್ಮ ಏಳಿಗೆಗೆ ಪ್ರಾಮುಖ್ಯವು. ನಿನ್ನ ಭಾವನೆಯನ್ನು ನಾನ್ನು ತೆಕ್ಕಾಗಿ ಬಲ್ಲೆನು. ಆದರೆ ಅವುಗಳನ್ನು ನಿನ್ನ ಮನಸ್ಸಿಗೆ ತಂದುಕೊಳ್ಳಬೇ ಡ್ಡ ನ್ನು ಕೃತಾರ್ಥನನ್ನಾಗಿ ಮಾಡು. ಶರೀರವು ನಶ್ವರವು. ಮನಸ್ಸು ಚಾಂಚಲ್ಯವು ಎಂಬುದನ್ನು ತಿಳಿದು ಇಹಲೋಕಭೋಗಾಪೇಕ್ಷೆಯೆಂಬುದು ಪಾಂಚಭೌತಿಕವಾದ ಶರೀರಗಳಿಂದ ಎಂತಹ ಋಷಿಗಳಿಗೂ ತಪ್ಪಿದುದಿಲ್ಲ ಜ್ಞಿನ್ನಾಗಿ ಯೋಚಿಸು. ಸುಳುವಾರಿಯರ ಹೃದಯಕಮಲಕ್ಕೆ ನಿಷೇಧೂಪದೇಶವಾಕ್ಯಗಳೆಂಬ ಮುಳ್ಳುಗಳಿಂದ ಚುಚ್ಚಿ ಚುಚ್ಚಿ ಅದನ್ನು ನೀರಸವನ್ನಾಗಿಮಾಡಿ ಬಿಸಾಡುವಂತೆ ಮಾಡಿ, ನಿರಾಶೆ ಯುಳ್ಳವನಾಗಿಸುವ ಪಕ್ಷಕ್ಕೆ ಮುಂದಕ್ಕೆ ಉಭಯರ ಸ್ಥಿತಿಯು ಹೇಗೆ ಪರ್ಯವಸಾನ ವಾಗಿಬೇಕಾಗಿ ಬರುವುದೋ ನನಗೆ ತಿಳಿಯದು ಎನಲು ಕಚ—ಸುಂದರೀಮಣಿ ನಿನ್ನ ಮನಸ್ಸನ್ನು ಬಿಗಿಹಿಡಿದು ಶರೀರದಮೇಲಣ ಅನುರಾಗವೆಂಬ ಮುಸುಕು ನಿನಗೆ ಮೊದಲು ಕವಿದಿರುವುದು ಅನಂತರ ಜೀವನಮೇಲೆ, ಕ್ಷಣಿಕ ಸುಖವೆಂಬ ಅಜ್ಞಾನದ ಮುಸುಕು ಮುಚ್ಚಿಕೊಂಡಿರುವುದೇ ಕಾರಣವಾಗಿ ನಿನ್ನಂತಹ ಜೀವಿಗಳ ವಿಚಿತ್ರವರ್ತನೆಗೆ ಕಾರಣವಾಗಿರುವುದೆಂದು ತಿಳಿದು ನನ್ನ ಮಾತುಗಳ ಬೆಲೆಯನ್ನು ಹೋಗಿ ತೂಗಿ ನೋಡು, ಎನಲು ದೇವಯಾನಿ—ಪ್ರಾಣಪದಕನೆ! ನೀನಾದರೋ, ಸಕ್ಕುಲಪ್ರಸೂತನು. ದೇವತಾಯೋಗ್ಯನು, ಜ್ಞಾನದಲ್ಲಿ ತಂದೆಗೆ ಸಮಾನನು, ಹೀಗಿರುವ ನೀನು ನನಗೆ ಈಗ ಪ್ರಾಣವಲ್ಲಭನಾಗಿರಲು ಶಕ್ಯವೆಷ್ಟು. ನಾನು ಪ್ರೀತಿಯಿಂದ ನಿನಗಾಗಿ ಮಾಡಿದ ನಾನಾವಿಧ ಉಪಕಾರ ಕಾರ್ಯಗಳನ್ನು ಜ್ಞಾಪಿಸಿಕೊ. ನನ್ನ ನಿಷ್ಕಳಂಕವಾದ ಪ್ರೀತಿಗೆ ನೀನು ಪಾತ್ರನಾಗು. ನನ್ನಲ್ಲಿ ಸುಖವಾಗಿರಬೇಕಂಬುದೇ ನಿಷ್ಕಳಂಕವಾಗಿ ನಾನು ಬೇಡಿಕೊಳ್ಳುತ ಪ್ರೀತಿವಚನಗಳು ಎನಲು, ಕಚನು ಇದುವರೆಗೂ ನನ್ನ ಗುರುವಿನ ಮಗಳೆಂದು ಬಹಳವಾಗಿ ಮೆಚ್ಚಿ ನಾವಂದಿಸಿರುವೆನು. ನಿನ್ನ ಅನುರಾಗಕ್ಕೆ ಪಾತ್ರನಾಗಿ, ನಿನ್ನ ಕರಸ್ಪರ್ಶನಾನಂದ ಲಹರಿಯಲ್ಲಿ ಮುಳುಗಿದೆನಾದರೆ, ಪಾಪವೆಂಬ ಸುಳಿಗೆ ಸಿಕ್ಕಿ, ಹೊಂದಿರುವ ಜ್ಞಾನವು ನಿರ್ಮೂಲವಾಗಿಸಿಕೊಂಡು ಜನ್ಮದ ಸಫಲತೆಯನ್ನ ಹೊಂದದ್ದೆ, ಹಂದಿ ನಾಯಿ ಗಳಂತೆ ಜನ್ಮವನ್ನುಂಟುಮಾಡಿಕೊಳ್ಳುವುದಕ್ಕೆ ಹೇತುವಾಗಿ ಅನುರಾಗವೆಂಬ ಜಾಜ್ವಲ್ಯಮಾನವಾದ ಬೆಂಕಿಯಲ್ಲಿ ಬಿದ್ದು ಭಸ್ಮೀಭೂತವಾಗುವುದು ಜನ್ಮದ ಮುಖ್ಯೋದ್ದೇಶವಲ್ಲ; ಮುಂದಕ್ಕೆ ನನಗೆಂತಹ ಕಷ್ಟಬಂದರೂ ಲಕ್ಷ್ಯಪಡೆ ಶಿರಸ್ಸೊಡ್ಡಿ ನಿಲ್ಲುವೆನು, ಎನಲು ದೇವಯಾನಿ ಕೆಲ್ಲಲ್ಲಿ ಕಚನೆ! ನನ್ನ ನಿರ್ಮಲಭಾವವು ನಿನಗೆ ಇನ್ನೂ ತಿಳಿಯದು (ಅತ್ಯಂತಕೋಪಗೊಂಡು) ನೀನು ಹೊಂದಿರುವ ಜ್ಞಾನ ದಿಂದ ಮುಂದಕ್ಕೆ ಯಾವ ಪ್ರಯೋಜನವೂ ನಿನಗೆ ಲಭಿಸದಿರಲಿ! ಎಂದ. ಶಾಪ ವನ್ನು ಕೊಟ್ಟಳು

ಕಚ—ಎಲೌ ಮಾನಿನೀಮಣಿ! ನಾನು ಋಷಿಕುಮಾರನು, ನಿನ್ನನ್ನು ಸಹೋದರಿಯನ್ನಾಗೆಣಿಸಿರುವನು. ಹಿಂಗಿರಲು ವಿವಾಹದ ಯೋಚನೆಯೇಕೆ? ಇದೋ! ನಿನ್ನ ವಿಜ್ಞಾಪನೆಯನ್ನು ಗುರುಭಕ್ತಿಪೂರ್ವಕ- ನಿರಾಕರಿಸುವೆನು ನೀನು ನನ್ನ ಮೇಲಣ ಅನುರಾಗದಿಂದ ತುಂಬ ಶುಷ್ಕಕುತ್ಸಿತವೆಯಾದುದರಿಂದ ಈಗ ನಿನ್ನನ್ನು ನೀನೆ ಮರೆತಿರುವಾಗ್ಗೆ ನನ್ನ ಮಾತಿನ ಬೆಲೆಯು ತಿಳಿಯುವಂತಿಲ್ಲ. ನೀನಾದರೋ ನನಗೆ ಶಾಪವನ್ನು ಕೊಟ್ಟರುವೆ ಆದೇ ರೀತಿಯಲ್ಲಿಯೇ ನಾನೂ ನಿನಗೆ ಹೇಳುವೆನು ಕೇಳು ಏನೆಂದರೆ— ಮುಂದಕ್ಕೆ ಯಾವ ಋಷಿಕುಮಾರನೂ ನಿನ್ನನ್ನು ಪಾಣಿಗ್ರಹಣಮಾಡಿಕೊಳ್ಳದಿರಲಿ, ಎಂದು ಹೇಳಿ ಹೊರಟು ಕೊನೆಗೆ ಕಚನು ಗುರುವಿಗತಂದಿಸಿ ಅವರಿಂದೀವಾದವನ್ನು ಪಡೆದು ಅಲ್ಲಿಂದ ಹೊರಟು, ತಂದೆಯಾದ ಬೃಹಸ್ಪತ್ಯಾಚಾರ್ಯರ ಬಳಿಗೆ ಹೋಗಿ ಗುರುಸೇವೆಯಿಂದ ಲಭಿಸಿದ ಸಂಜೀವಿನೀಮಂತ್ರೋಪದೇಶದ ಬಲವನ್ನು ಹೇಳಿ ಪಿತನ ಪ್ರೀತಿಗೆ ಪಾತ್ರನಾದನು.

ವಾಚಕಮಹಾಶಯರೆ, ದೇವರು ನಮಗೆಗೆ ದಯೆಪಾಲಿಸಿರುವ ಪಂಚೇಂದ್ರಿ ಯಗಳ ಶಕ್ತಿಗಳನ್ನು ಎಲ್ಲೆಗೆ ಮೀರಿಬರುವಂತೆ ಮಾಡಿಕೊಳ್ಳದೆ ಮನಸ್ಸು ಚಾಂಚಲ್ಯಕೆಡೆಯಾಗುವ ಸ್ಥಳಗಳಲ್ಲಿ ನಿಲ್ಲದೆ, ಏಕಶಃಋಷುವು ನಶ್ವರವೆಂದು ಭಾವಿಸಿ, ವಿವೇಕದಿಂದ ನಡೆದುದಾದರೆ ತನಗೆ ಯಶಸ್ಸು, ಪರಿರಿಗೆ ಹಿತವೂ ಉಂಟಾಗಿ, ದೇವಪ್ರೀತಿಗೆ ಪಾತ್ರನಾಗಿ, ಮೋಕ್ಷಸುಖವನ್ನು ಬಯಸುವುದಾದರೆ ನಿಜಗುರುವಿನಲ್ಲಿಟ್ಟಿರುವ ಕಚನ ನಡೋವ್ಯಕ್ತಿಯಂತೆ ನಡೆದರೆ, ವಾಚಕರು ಸನ್ಮಾರ್ಗಗಾಮಿಗಳಾಗಿ ವಿಖ್ಯಾತರಾಗುವರೆಂದು ತಿಳಿದು ನಡೆಯಲು ಮಾದ್ರಿಗಾಗಿ ಈ ಕಥೆಯನ್ನು ಬರೆದಿರುವೆನು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಸಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಅವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ಶಿವಪ್ರಸಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರ ನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿ ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದರಿಂದ ಪ್ರತಿಯೊಬ್ಬ ವೀರಶೈವನೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧೨ ಆಣೆ. ವಿ ಪಿ. ಚಾರ್ಜ ಪ್ರತ್ಯೇಕ

ಮ್ಯಾನೇಜರ್, ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುಸಂಸ್ಥದ ಸುಖಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿವೆ, ಆ ಮಹಾಧಿಕಾರಿಗಳು ಏದುವರ್ಷಕ್ಕೋ ಹತ್ತುವರ್ಷಕ್ಕೊಂದೋ ಐದುವಾರ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅವರಿಗೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳಲು ಕಾಣಿಕೆಯನ್ನು ಸೂತ್ರ ತೆಗೆದುಕೊಂಡು ಹೋಗಿರಿದುವರು ಈ ಅವ್ಯವಸ್ಥೆಯಿಂದ ಅನೇಕ ಮರದವರಿಗೆ ತನ್ನ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇವನ್ನು ಮೊದಮಾಡುವುದಕ್ಕೋಸ್ಕರ ನೋಟ್ಕಂಡ ಪುಸ್ತಕವನ್ನು ಪೊಸ ವಾಗಿ ಮುದ್ರಣಗೊಳಿಸಿದ್ದೇವೆ. ಇವರಲ್ಲಿ ಬರೆಯುವ ವಿಷಯಗಳ ನಿಪರವು ಜ್ಞಾಪಿಗೆ ತೊರಿಸಲ್ಪಟ್ಟಿದೆ ಅದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಯರೂ ತರಿಸಿಕೊಂಡು ಅದರಲ್ಲಿಪ್ಪಂತೆ ನಿಪರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥೂ ಕೆದಲಂಥ ಕಾಗದಗಳನ್ನು ಪಯೋಗಿಸಿರುವಷಲ್ಲದೆ ಸುಂದರವಾದ ಮುದ್ರಣವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಶಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ .... ೦—೧—೬

ಸದ್ಯ: ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ ... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಧೇಷಣನ ಪ್ರಾರ್ಥನಾನುಸಾರವಾಗಿ ವಿಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ರೇವಣಸಿದ್ಧೇಶ್ವರಾಚಾರ್ಯ ಮಹಾಸ್ವಾಮಿಗಳವರ ಫೋಟೋ ... ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .. ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ ... ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .. ೦—೦—೯

ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ .... ೦—೦—೯

ಹಿಮಸೇತ್ವರ್ಪತದ ಮಧ್ಯಪ್ರದೇಶದಲ್ಲಿರುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರುವ ಸುಂದರ ಫೋಟೋ .... ೦—೦—೯

ಸೊಲ್ಲಾಪುರದಲ್ಲಿ ನಿರ್ಮಿಸಿರುವ ಉಜ್ಜಯಿನೀ ಜಗದ್ಗುರುಗಳವರ ಅಶ್ವಾರೂಢ ಪಲ್ಲಕ್ಕಿ ಮಹೋತ್ಸವದ ಫೋಟೋ .. ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧೦ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ ಕಂಡುಹಿಡಿಯಲ್ಪಟ್ಟಿದ್ದು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರು. ಪ್ರಸಿದ್ಧವಾದ ಈ ನಶ್ಯದ ಪುಡಿಯು ಸ್ವಸ್ಥವಾಗಿವ ವ್ಯಾಧಿಗಳು ಯಾವವೆಂದರೆ :—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂರಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇವನ್ನು ಅನೇಕ ಪ್ರಭುಗಳು ತಮ್ಮ ಗೃಹದ ಕುಟುಂಬದೌಷಧವಾಗಿ ಉಪಯೋಗಿಸುತ್ತಾರೆ. ಮಾತ್ರವಲ್ಲದೆ ಪ್ರಾಣಸಂಜೀವಿನಿ ಸೇವೆ ಪ್ರಾಗಸಪ್ಟೆ ಕಳುಹಿಸಲಾಗುವುದು. ಬುಡ್ತಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಹನ್ನೆರಡು ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ಲ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[೬] ಪೋ. ಬಾ. ೫೧೦, ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	....	೨ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	....	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	....	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	....	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	....	೧ ಆಣೆ
ಬಸವಾದಿಸಿಜತತ್ತ್ವದರ್ಪಣ (೪ನೆಯ ಆವೃತ್ತಿ)	....	೨ ಆಣೆ
ಶ್ರೀರೇಣುಕಾಚಾರ್ಯಶತಕ(೨ನೆಯ ಆವೃತ್ತಿ)	....	೨ ಆಣೆ
ಪಂಚಾಚಾರ್ಯಪ್ರಭಾಕರ	....	೨ ಆಣೆ
ಶ್ರೀಗುರುತತ್ತ್ವಪದಗಳು	....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	....	೨ ಆಣೆ
ವೀರಶೈವಮತಮಿಮಾಂಸಾ	....	೩ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	....	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	....	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	....	೬ ಆಣೆ
ವೀರಶೈವಮಹಾತ್ಮರು	....	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)		**೮ ಆಣೆ**
Speeches by Pandit Shri Kashinatha Shastri (*English*)		**12 As.**

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....	೧೨ ಆ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	....	೮ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	೨ ರೂ
ವೀರಶೈವಸಿದ್ಧಾಂತಸುಧಾಕರ	....	೨ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	....	೧ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	....	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	೧ ರೂ.
ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ)	....	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)		೧೨ ಆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	....	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	....	೧೨ ಆ
ವೀರಶೈವರತ್ನ (ಮರಾಠಿ)	...	೧ ರ
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ...	...	೩ ರ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	.	೧ ರ
ವೀರಶೈವೇಂದುಶೇಖರ (ಸಂಸ್ಕೃತ) ...	...	೧ ರ
ನಂದಿಕೇಶ್ವರಕಾರಿಕಾ (ಸಂಸ್ಕೃತ) ...	...	೨ ಆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ...	...	೨ ಆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಕಯ್ಯಾಜರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಮಹಾವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಗಳಿಂದ ದತ್ತವಾದ ಸಹಸ್ರಾರುರೂಪಾಯಿ ಬೆಲೆಬಾಳುವ ತಮ್ಮ ವೀಣೆಯನ್ನು ತಮ್ಮ ಪ್ರಿಯಶಿಷ್ಯರಾದ ಚಿ॥ ಕೇಶವಮೂರ್ತಿಯವರಿಗೆ ದಾನಮಾಡಿರುವುದಾಗಿ ತಿಳುಹಿಸಿದರು. ತಮಗೆ ಶ್ರೀಮದ್ಭಾಗವತವನ್ನು ಬೋಧಿಸಿದ ಪಂ॥ ಭೀಮಸೇನಾಚಾರ್ಯರಿಗೆ ವಂದಿಸಿ, ಶಾಲುಗಳನ್ನೂ, ವಸ್ತ್ರಗಳನ್ನೂ ದ್ರವ್ಯವನ್ನೂ ಸಮರ್ಪಿಸಿದರು. ಇಂತಹ ಧೀಮಾನಾದನ ನಿಪುಣರು ದೊರೆಯುವದು ದುರ್ಲಭ! ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ವರ್ತಮಾನಸಂಗ್ರಹ.

ದೋಣಿಯ ಅನಾಹುತ!

ಕಳೆದ 17ನೆಯ ತಾರೀಖಿನ ದಿವಸ ಮಧ್ಯಾಹ್ನ ತಪತೀ ನದಿಯಲ್ಲಿ 20 ಜನರು ಕುಳಿತು ಹೋಗುತ್ತಿದ್ದ ದೋಣಿಯು ಮುಳುಗಿ ಹೋಯಿತು. 15 ಜನರ ಮೇಲೆ ನದಿಯು ಪಾಲಾದರೆಂದು ತಿಳಿದು ಬರುತ್ತದೆ.

ಸರ್. ಎಸ್. ರಾಧಾಕೃಷ್ಣರವರ ಆಗಮನ

ಪ್ರಸಿದ್ಧ ತತ್ತ್ವ ಶಾಸ್ತ್ರಜ್ಞರಾದ ಸರ್. ಎಸ್. ರಾಧಾಕೃಷ್ಣರವರು ಕಲಕತ್ತೆಗೆ ಆಗಮಿಸಿದ್ದಾರೆ. ಅವರು ಡಿಸೆಂಬರ್ ಅಂತ್ಯದವರೆಗೂ ಅಲ್ಲಿಯೇ ಇದ್ದು ಆನಂತರ ಆಕ್ಸ್‌ಫರ್ಡಿಗೆ ತೆರಳುವರು.

ಬಂಗಾಳಾದಲ್ಲಿ ರಾಜಬಂದಿಗಳ ಬಿಡುಗಡೆ

ಕಳೆದ 21 ನೆಯ ತಾರೀಖಿನ ದಿವಸ ಬಂಗಾಳಾ ಸರ್ಕಾರವರು ಮತ್ತೆ 30 ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಬೇಕೆಂದು ಆಜ್ಞೆ ಹೊರಡಿಸಿದರು. ಇನ್ನು ಇಂತಹ ಬಂದಿಗಳು 178 ಜನರು ಮಾತ್ರ ಉಳಿದಿರುವರಂತೆ!

೯೦ ಘಂಟೆಗಳಲ್ಲಿ ಪೃಥ್ವೀ ಪ್ರದಕ್ಷಿಣ.

ಮಿ॥ ಹಾವರ್ಡ್ ಹ್ಯೂಜನೇಬ ಅಮೇರಿಕನ್ ವೈಮಾನಿಕನು ಭೂಪ್ರದಕ್ಷಿಣೆ ಮಾಡಿದನು. ಅವನು ೯೦ ಘಂಟೆಗಳಲ್ಲಿ ೨೪೫೦೦ ಮೈಲು ಪ್ರವಾಸ ಮಾಡಿ ಜಗತ್ಪ್ರಸಿದ್ಧ ಆಮೀತಿಯ ವೈಮಾನಿಕನೆಂಬ ಹೆಸರು ಸಡೆದಿರುವನು.

ಲಾಟರಿ ಹಣದ ಸಂತೋಷದಿಂದ ಮರಣ!

ಸಾಹೆನ್ ಎಂಬ ಗ್ರಾಮದಲ್ಲಿ ನೆಗ್ಲಮ್ ಎಂಬ ಜಾತಿಯ ಒಬ್ಬ ಬಡವನಿಗೆ ಒಂದು ಲಾಟರಿಯಲ್ಲಿ ೧೫ ಸಾವಿರ ರೂಪಾಯಿಗಳು ಬೊಕ್ಕಿತು. ಈ ಬಗ್ಗೆ ಟೆಲಿಗ್ರಾಂ ಬಂದಕೂಡಲೆ ಅವನಿಗೆ ಹರ್ಷವು ಉಕ್ಕೇರಿ ಕೂಡಲೆ ಅವನು ಮರಣ ಹೊಂದಿದನಂತೆ!

ಮುಸಲ್ಮಾನರ ಗೋರಿಯಲ್ಲಿ ವಿಷ್ಣುವಿನ ಮೂರ್ತಿ.

ಪಾಟಣಾದಲ್ಲಿರುವ ಮುಸಲ್ಮಾನರ ಒಂದು ಗೋರಿಯಲ್ಲಿ ವಿಷ್ಣುವಿನ ಮೂರ್ತಿಗಳು ಹೊರಟಿರುತ್ತವೆ. ಇದನ್ನು ಕಂಡು ಹಿಂದೂಜನರು ಬೇರೆ ಗೋರಿಗಳಲ್ಲಿಯೂ ನೋಡಬೇಕೆಂದು ಗೋರಿಗಳನ್ನು ಅಗಿಯಲಿಕ್ಕೆ ಆಗ್ರಹ ಮಾಡಹತ್ತಿದರು. ಇದರಿಂದ ಹಿಂದೂ ಮುಸಲ್ಮಾನರಲ್ಲಿ ಅಸಮಾಧಾನವುಂಟಾಗಿರುತ್ತದೆ.

ಬ್ರಿಟಿಷ್ ಚಕ್ರವರ್ತಿಗಳಿಗೆ ಪ್ಯಾರಿಸ್ಸಿನಲ್ಲಿ ಅದ್ಭುತ ಸ್ವಾಗತ! ಅವರ ಗೌರವಾರ್ಥವಾಗಿ ೧೦೧ ತೋಪುಗಳು ಹಾರಿಸಲ್ಪಟ್ಟವು.

ಜಾರ್ಜ್ ಚಕ್ರವರ್ತಿಗಳೂ, ಎಲಿಜಬೆತ್ ರಾಣಿಯವರೂ ೧೫ ನೆಯ ತಾರೀಖಿನ ದಿವಸ ವೈಕೌಂಟ್ ಹ್ಯಾಲಿಫಾಕ್ಸ್, ಸರ್ ಆಲೆಗ್ಜಾಂಡರ್ ಮೊದಲಾದವರೊಡನೆ ರೈಲಿನಲ್ಲಿ ಸಾಯಂಕಾಲ ೪-೧೫ ಘಂಟೆಗೆ ಪ್ಯಾರಿಸ್ ಸ್ಟೇಷನ್ನಿಗೆ ಆಗಮಿಸಿದರು. ಅವರ ಗೌರವಾರ್ಥವಾಗಿ ೧೦೧ ತೋಪುಗಳನ್ನು ಹಾರಿಸಲಾಯಿತು. ಅಧ್ಯಕ್ಷ ಲೆಬ್ರೂನರೂ ಮತ್ತು ಅವರ ಸತಿಯವರೂ ಚಕ್ರವರ್ತಿಗಳನ್ನೂ ಮತ್ತು ರಾಣಿಯವರನ್ನೂ ಸ್ವಾಗತಿಸಿದರು.

ಮದ್ರಾಸ್ ಕೌನ್ಸಿಲ್ ಅಧಿವೇಶನ

ಮದರಾಸ್ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಅಧಿವೇಶನವು ಆಗಸ್ಟ್ ೧೬ನೆಯ ತಾರೀಖಿನ ದಿವಸ ಆರಂಭವಾಗುವುದು. ಆ ದಿನ ಖಾಸಗಿ ಸದಸ್ಯರು ನಿರ್ಣಯಗಳ ಮೂಲಕ ಮತ್ತು ಮನೂದೆಗಳ ಮೂಲಕ ತಂದಿರುವ ವಿಷಯಗಳು ಚರ್ಚಿಸಲ್ಪಡುವುವು.

ಎಂಟನೆಯ ಮಂತ್ರಿಗಳು.

ಬೊಂಬಾಯಿ ಇಲಾಖೆಯೊಳಗೆ ಗ್ರಾಮಪುನರ್ಘಟನೆ ಮುಂತಾದ ಕೆಲಸಗಳ ಸಲುವಾಗಿ ಇನ್ನೊಬ್ಬ ಮಂತ್ರಿಗಳನ್ನು ನೇಮಿಸುವರೆಂದು ತಿಳಿಯುತ್ತದೆ. ಈಗ ಮುಂಬಯಿ ಮಂತ್ರಿಮಂಡಲದಲ್ಲಿ ೭ಜನ ಮಂತ್ರಿಗಳಿದ್ದು ಅವರಿಗೆ ಬಹಳ ಕೆಲಸಗಳಿರುವದರಿಂದ ಗ್ರಾಮಪುನರ್ಘಟನೆಯ ಕಡೆಗೆ ಲಕ್ಷ್ಯಕೊಡಲಿಕ್ಕೆ ಆಗುವದಿಲ್ಲವಾದ್ದರಿಂದ ಇನ್ನೊಬ್ಬರನ್ನು ನೇಮಿಸುವರಾಗಿದ್ದಾರೆ.

ಅಹಮದಾಬಾದಿನಲ್ಲಿ ಪಾನನಿರೋಧ

ಎಕ್ಸೈಜ್ ಶಾಖೆಯ ಪೋಲೀಸರು ರಹದಾರಿಗಳನ್ನಿಟ್ಟುಕೊಳ್ಳದೆ ಮದ್ಯವನ್ನಿಟ್ಟು ಕೊಂಡಿರುವವರನ್ನು ಹಿಡಿಯಲು ಬಹಳ ಎಚ್ಚರವಿಂದಿದ್ದಾರೆ. ಅನೇಕಮಂದಿ ಸ್ತ್ರೀ ಪೋಲೀಸರೂ ಸಹ ನೀಲವಸ್ತ್ರಧಾರಿಗಳಾಗಿ ಈ ಕಾರ್ಯದಲ್ಲಿ ಉದ್ಯುಕ್ತರಾಗಿದ್ದಾರೆ. ಒಬ್ಬನು ಒಂದುಸೀಸೆ ಮದ್ಯವನ್ನಿಟ್ಟುಕೊಂಡಿದ್ದುದನ್ನು ಓರ್ವ ಸ್ತ್ರೀ ಪೋಲೀಸಳು ಕಂಡು ಹಿಡಿದಳು. ಆತನಿಗೆ ಮ್ಯಾಜಿಸ್ಟ್ರೇಟರು ೭೫ ರೂ. ಗಳ ದಂಡ ವಿಧಿಸಿದರು.

ಇಗ್ಲೆಂಡ್ ಜರ್ಮನಿ ಒಪ್ಪಂದ

ನಿಡ್‌ಮೇಯರವರು ರಾಜಕೀಯ ವಿಚಾರದಲ್ಲಿ ಯಾವ ವಿಧವಾದ ಚರ್ಚೆಯನ್ನು ನಡೆಸಲೂ ಸಿದ್ಧರಾಗಿ ಬಂದಿಲ್ಲವೆಂದೂ, ಅವರೆ ಅವರು ಜರ್ಮನಿಯ ಸ್ಮರಣಾರ್ಥ ಅಧಿಕಾರಿಗಳೊಡನೆ ಬಾಂಧವ್ಯವಿಟ್ಟುಕೊಂಡಿರುವುದರಿಂದ ಲಾರ್ಡ್ ಲೊಥಿಫಾಕ್ಸ್‌ರೊಡನೆ ಚರ್ಚಿಸಿ ಜರ್ಮನಿ ಸರ್ಕಾರದ ಇಚ್ಛೆಯಂತೆ ಮುಖ್ಯವಿಷಯಗಳಲ್ಲಿ ಶಾಂತಿಯುತವಾದ ಒಪ್ಪಂದವನ್ನಾಡಿಕೊಳ್ಳಲು ಚರ್ಚೆಗಳನ್ನು ಮುಂದುವರಿಸಲು ಸಹಾಯವಾಯಿತೆಂದೂ ಮಹಾ ಪ್ರಧಾನರಾದ ನೆವಿಲೆ ಛೇಂಬರ್ಲೇನರು ಕಾಮನ್ಸ್ ಸಭೆಯಲ್ಲಿ ಹೇಳಿದರು.

ಜವಾಹರಲಾಲರು ಲಂಡನ್ನಿನಿಂದ ಪ್ಯಾರಿಸ್ಸಿಗೆ ಹೊರಟರು.

ಪಂಡಿತ ಜವಾಹರಲಾಲ ನೆಹರುರವರು ತಮ್ಮ ಮಗಳು ಶ್ರೀಮತಿ ಇಂದಿರಾ ನೆಹರುರವರೊಡನೆ ಕಳೆದ 20 ನೆಯ ತಾರೀಖಿನ ದಿವಸ ಲಂಡನ್ನಿನಿಂದ ಪ್ಯಾರಿಸ್ಸಿಗೆ ಪ್ರಯಾಣ ಮಾಡಿದರು. ಲಂಡನ್ನಿನಲ್ಲಿರುವ ಇಂಡಿಯಾ ಲೀಗಿನವರು ಪಂಡಿತರಿಗೆ ಫಲಪುಷ್ಪಗಳನ್ನು ಸಮರ್ಪಿಸಿದರು. ಪಂಡಿತರು ತಿರುಗಿ ಸೆಪ್ಟೆಂಬರ್ ತಿಂಗಳಲ್ಲಿ ಲಂಡನ್ನಿಗೆ ಬರುವುದಾಗಿ ಹೇಳಿದರು.

ರಷ್ಯಾ ಜರ್ಮನಿ ಮನಸ್ತಾಪ!

ರಷ್ಯಾದವರು ಮಾಂಚುಕೊ ಉತ್ತರ ಗಡಿಯೊಳಗೆ ಸೈನ್ಯ ಮತ್ತು ಯುದ್ಧ ಸಾಮಗ್ರಿಗಳನ್ನು ಶೇಖರಿಸುತ್ತಿರುವದನ್ನು ಜರ್ಮಾ ಸರ್ಕಾರದವರು ಪ್ರತಿಭಟಿಸಿ ಕೂಡಲೆ ಅವುಗಳನ್ನು ಹಿಂದಕ್ಕೆ ಕರೆಯಿಸಿಕೊಳ್ಳದಿದ್ದರೆ ಬಲಪ್ರಯೋಗಮಾಡಬೇಕಾಗುವುದೆಂದು ತಮ್ಮ ರಾಯಭಾರಿಗಳ ಮೂಲಕ ಶ್ರೀ ಎಂ. ಲಿಟ್ವಿನಾಫರಿಗೆ ತಿಳುಹಿಸಿದರು. ಅದಕ್ಕೆ ಅವರು ಮಾಂಚುಕೊ ಗಡಿಯಲ್ಲಿರುವ ಚಾಂಗ್‌ಷು ಫೆಂಗ್ ಗುಡ್ಡಪ್ರವೇಶವು ಸೋವಿಯಟ್ ಸರ್ಕಾರಕ್ಕೇ ಸೇರಿದ್ದೆಂದು ಹೇಳಿ ಅದನ್ನು ಸಮರ್ಥಿಸಲು 1869ರಲ್ಲಿ ನಡೆದ ಚಾಂಗ್‌ಚುನ್ ಒಪ್ಪಂದವಕಾಲದ ನಕ್ಷೆಯೊಂದನ್ನು ತೋರಿಸಿದರು. ಈ ಮನಸ್ತಾಪದ ಪರಿಣಾಮವೇನಾಗುವುದೋ ನೋಡಬೇಕಾಗಿದೆ.

ನೆರಬಲಿಯ ಹೃದಯ!

ಜಬ್ಬಲ್ಪುರದ ಗಿರಣಿ ಕೂಲಿಕಾರಳೊಬ್ಬಳ ಮಗುವು ಅದೃಶ್ಯವಾಗಿರುವುದಾಗಿ ಪೋಲೀಸರಿಗೆ ದೂರು ಹೋಗಲು, ಅವರು ಕೂಡಲೇ ತಕ್ಕವಲ್ಲಿಯೇ ವಾಸಿಸುತ್ತಿದ್ದ ಒಬ್ಬ ಹೆಂಗಸನ್ನು ದಸ್ತಗಿರಿಮಾಡಿ ಅಲ್ಲಿ ಗುಪ್ತವಾಗಿಡಲ್ಪಟ್ಟಿದ್ದ ಮಗುವನ್ನು ಶೋಧಮಾಡಿದರು. ದಸ್ತಗಿರಿಯಾದ ಸ್ತ್ರೀಯಳಿಗೆ ಒಂದು ಮಗುವಿರುವುದೆಂದೂ, ಅದು ಸರ್ವದಾ ವ್ಯಾಧಿಯಿಂದ ನರಳುತ್ತಿರುವುದರಿಂದ ಕಾಳಿಕಾದೇವಿಗೆ ಬೇರೊಂದು ಮಗುವನ್ನು ಬಲಿಕೊಟ್ಟರೆ ತನ್ನ ಮಗುವು ಗುಣ ಹೊಂದುವದೆಂದು ಯೋಚಿಸಿ ನೆರೆಮನೆಯ ಮಗುವನ್ನು ಅಪಹರಿಸಿ ಬಲಿಕೊಡುವ ಪ್ರಯತ್ನ ನಡೆಯಿಸಿದ್ದಳೆಂದೂ, ಸಕಾಲದಲ್ಲಿ ಪೋಲೀಸರು ಅವಳನ್ನು ದಸ್ತಗಿರಿಮಾಡಿದೆ ಹೋಗಿದ್ದಲ್ಲಿ ಹತ್ಯಾಕಾರ್ಯವು ನಡೆಯುತ್ತಿತ್ತೆಂದೂ ತಿಳಿದು ಬರುತ್ತದೆ.

ಪಂ॥ ಕುಕ್ಸ್, ಪಂ॥ ಮಿಶ್ರ ಮತ್ತು ಶ್ರೀ ಮೆಹತಾ, ಈ ಮೂವರೂ ವಾರ್ಧಾಕ್ಕೆ ಹೊರಟರು.

ಮಧ್ಯಪ್ರಾಂತದ ಹಳೆ ಮಂತ್ರಿಮಂಡಲದಲ್ಲಿದ್ದ ರಾಜೀನಾಮೆ ಕೊಡಲೊಪ್ಪದ ಮೇಲ್ಕಂಡ ಮೂವರಿಗೂ ವಾರ್ಧಾದಿಂದ ಆಹ್ವಾನವು ಬಂದಿದೆ. ಮಧ್ಯಪ್ರಾಂತದ ಮಂತ್ರಿಗಳ ಬಿಕ್ಕಟ್ಟಿನ ವಿಚಾರವನ್ನು ಪರಿಶೀಲಿಸಲು ವಾರ್ಧಾದಲ್ಲಿ ನೇರಲಿರುವ "ಪಾರ್ಲಿಮೆಂಟು" ಉಪಸಮಿತಿಯ ಮುಂದೆ ತನ್ಮ ಪಾದವನ್ನಿಡಲು ಆ ಮೂವರೂ ಅಲ್ಲಿಗೆ ಹೋಗಿದ್ದಾರೆ. 'ಪಾರ್ಲಿಮೆಂಟಿನ' ಉಪಸಮಿತಿಯ ಸದಸ್ಯರಾದ ಸರದಾರ್ ಪಟೇಲ್ ಬಾಬು ರಾಜೇಂದ್ರಪ್ರಸಾದ್ ಮತ್ತು ಮೌಲಾನಾ ಅಬ್ದುಲ್ ಕಲಾಂ ಆಜಾದ್ ಈ ಮೂವರೂ ಈಗ ವಾರ್ಧಾದಲ್ಲಿದ್ದಾರೆ.

ಭಾರತದ ಸಂಯುಕ್ತ ರಾಜ್ಯಾಂಗವ್ಯವಸ್ಥೆಯನ್ನು ತಿದ್ದಲಾಗುವುದಿಲ್ಲ.

ಕಾಮನ್ಸ್ ಸಭೆಯಲ್ಲಿ ಶ್ರೀ ಥಾಮಸ್ ವಿಲಿಯಮ್ಸ್‌ರವರು "ಇಂಡಿಯಾ ಶಾಸನದ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ವಿಷಯದಲ್ಲಿ ಭಾರತದ ಪ್ರತಿಭಟನೆಯು ಬಹಳಮಾಗಿರುವದರಿಂದ ಶಾಸನದ 112 ಮತ್ತು 117 ನೆಯ ವಿಧಿಗಳನ್ನು ತಿದ್ದುಪಡಿಮಾಡಿ, ತಿದ್ದುಪಡಿಯಾದ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಮಸೂದೆಯನ್ನು ಸರ್ಕಾರದವರು ಸಭೆಯ ಮುಂದಿಡುವರೆ?" ಎಂಬುದಾಗಿ ಪ್ರಶ್ನಿಸಲು, ಕರ್ನಲ್ ಮೂಯಿರ್ ಹೆಡ್‌ರವರು "ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯಲ್ಲಿ ಸೂಚಿಸಿರುವ ವಿಧಿಗಳನ್ನು ಪಾರ್ಲಿಮೆಂಟಿನವರು ಅಂಗೀಕರಿಸಿರುವರು. ಅವುಗಳನ್ನು ಪುನಃ ಪರಿಶೀಲಿಸಬೇಕೆಂದು ಪಾರ್ಲಿಮೆಂಟ್ನನ್ನು ಕೇಳಲು, ಸರಕಾರವು ಸಿದ್ಧವಾಗಿಲ್ಲವೆಂದೆ. ಉತ್ತರ ಕೊಟ್ಟರು.

ಮಧ್ಯಪ್ರಾಂತ್ಯದ ಮಂತ್ರಿಮಂಡಲದಲ್ಲಿ ಒಡಕು.

ಗವರ್ನರ ಕಾರ್ಯದರ್ಶಿಗಳು ಹೊರಡಿಸಿರುವ ಪ್ರಕಟನೆಯಲ್ಲಿ, ಮಧ್ಯಪ್ರಾಂತ್ಯದ ಗೌರ್ನರು ತಮಗೆ ಶಾಸನದತ್ತವಾದ ಅಧಿಕಾರವನ್ನು ಉಪಯೋಗಿಸಿ ಮಂತ್ರಿಮಂಡಲದಲ್ಲಿದ್ದ ರವಿಶಂಕರರುಕ್ಲ, ಪಂಡಿತ ದ್ವಾರಕಾ ಪ್ರಸಾದ ಮಿಶ್ರ ಮತ್ತು ಶ್ರೀ ಡಿ. ಕೆ. ಮೆಹತಾ ಈ ಮೂವರು ಮಂತ್ರಿಗಳ ಕೆಲಸದ ಅವಧಿಯನ್ನು ಕೊನೆಗಾಣಿಸಿದರು ಇದರಿಂದ ಸಾರ್ವಜನಿಕರಲ್ಲಿ ತಪ್ಪುಭಿಪ್ರಾಯವುಂಟಾಗಬಾರದೆಂದು ಗೌರ್ನರರು ಕುತೂಹಲವುಳ್ಳವರಾಗಿದ್ದಾರೆ. ಈ ಕಾರ್ಯಕ್ರಮವನ್ನು ಕೈಗೊಳ್ಳದೆ ವಿಧಿಯೇ ಇಲ್ಲವೆಂದು ಗೌರ್ನರ ಅಭಿಪ್ರಾಯ. ಕಳೆದ 20ನೆಯ ತಾರೀಖಿನ ದಿವಸ ಮಹಾಪ್ರಧಾನ ಡಾ॥ ಖಾರೆಯವರು ತಮ್ಮ ಮತ್ತು ಮಂತ್ರಿಮಂಡಲದ ರಾಜಿನಾಮೆಯನ್ನೊಪ್ಪಿಸಿದರು. ಮಹಾಪ್ರಧಾನರು ರಾಜಿನಾಮೆಯೊಪ್ಪಿಸಿದರೆ ಮಂತ್ರಿಮಂಡಲವೆಲ್ಲವೂ ರಾಜಿನಾಮೆ ಕೊಟ್ಟಂತೆ ಎಂಬುದು ಸಂಪ್ರದಾಯ. ಆದರೆ ಮೇಲ್ಕಂಡ ಮೂವರು ಆ ಸಂಪ್ರದಾಯಕ್ಕೆ ಒಪ್ಪುವದಿಲ್ಲವೆಂದು ಡಾ॥ ಖಾರೆಯವರು ಹೇಳಿದ್ದರಿಂದ ಗೌರ್ನರರು ಅವರ ಕಾರ್ಯಾವಧಿಯನ್ನು 'ಕೊನೆಗಾಣಿಸಿದರು.

[೫ನೆಯ ಪುಟದಿಂದ ಮುಂದುವರಿದುದು.]

ಹೆಂಡರನ್ನು ಮಾರಿ ಉಪಜೀವಿಸುವ ಭಂಡರೆಂಬ ಆವಹೇಳನಕ್ಕೆ ಗುರಿಯಾಗುವರು. ಧರ್ಮಶಾಸ್ತ್ರಾನುಸಾರ ಕವರುಮನೆಯವರಿಗೂ ಗಂಡನ ಮನೆಯವರಿಗೂ ಈ ವಿಧವೆಯನ್ನು ಮತ್ತೊಬ್ಬರಿಗೆ ಕೊಡಲಿಕ್ಕೆ ಬರುವದಿಲ್ಲ ವೆಂಬುದು ಸಿದ್ಧಾಂತವು. ಆದರೆ ಆ ವಿಧವೆಯು ತಾನೇ ಸ್ವತಂತ್ರಳಾಗಿ ಮತ್ತೊಬ್ಬನನ್ನು ಮದುವೆಮಾಡಿಕೊಳ್ಳುವ ಸಾಹಸಕ್ಕೆ ಬಿದ್ದರೆ ಅದು ಹಿಂದೂಧರ್ಮದ ಪದ್ಧತಿಯಲ್ಲವು. ವಾಶ್ಚಿಮಾತ್ಯರಾಷ್ಟ್ರಗಳಲ್ಲಿ ಸ್ತ್ರೀಸ್ವಾತಂತ್ರ್ಯ ಮಾತ್ರವಿರುವದು. ಅದನ್ನೇ ಅನುಕರಿಸಬೇಕೆನ್ನುವ ಮಹಾಶಯರು ಹಿಂದೂಧರ್ಮಕ್ಕೆ ತಿಲಾಂಜಲಿಯನ್ನಿತ್ತು, ಧರ್ಮಶಾಸ್ತ್ರಗ್ರಂಥಗಳನ್ನು ಅಗ್ನಿಗೆ ಆಹುತಿ ಕೊಟ್ಟು, ಪಾಶ್ಚಿಮಾತ್ಯರ ವಂಶಕ್ಕೆ ಸೇರಲಿ.

ವಿಧವಾವಿವಾಹಕ್ಕೆ ಉಡಿಕೆ ಎಂಬ ಸಂಪ್ರದಾಯವಿರುವದು ಇದಕ್ಕೆ—ವಿವಾಹ—ಮದುವೆ—ಲಗ್ನವೆಂಬ ಪವಿತ್ರನಾಮಗಳಲ್ಲ. ಇಂಥ ಉಡಿಕೆಯು ಈ ಮತದ ಕೆಲವು ಜಾತಿಯವರಲ್ಲಿ ಅಜ್ಞಾನದಿಂದ ಪ್ರವೇಶವಾಗಿರುವದು. ಈ ಅಪವಾದವನ್ನೇ ಇಡೀ ವೀರಶೈವಮತದ ಮೇಲೆ ಹೊರಿಸುವದು ಪರಮ ಅನ್ಯಾಯವಾದುದು. ಇತ್ಯಾದಿ ಕಾರಣಗಳಿಂದ ಪರಕೀಯರ ದೃಷ್ಟಿಯಲ್ಲಿ ಈ ಮತಧರ್ಮವು "ಶೂದ್ರ" ಕೋಟಿಗೆ ಸೇರಿರಬಹುದೆಂದು ಭಾವಿಸಲಾಗುವುದು ಪರಳೀ ಪ್ರಕರಣಕ್ಕೆ ಇದೇ ವಿಪರೀತ ಕಲ್ಪನೆಯೂ ಮೂರ್ಖಮತ್ತಾಗಿ ಘೋರವಾದ ವ್ಯಾಜ್ಯಕ್ಕೆ ಕಾರಣವಾಯಿತಲ್ಲವೇ? ಆ ಪ್ರಕರಣದಲ್ಲಿ ವಿಧವಾವಿವಾಹ, ಸಂಜಸೂತಕಾಭಾವ ಶಿಖಾರಾಹಿತ್ಯ, ವೇದಬಾಹಿರತೆ ಮೊದಲಾದುವುಗಳನ್ನು ಮುಂದುಮಾಡಿದ್ದರೆ ಒಪಪಿಸಿಯಂತೆಯೇ ಪರಳೆಯಾಗುತ್ತಿತ್ತು. ಪರಳೆಯ ವ್ಯಾಜ್ಯದಲ್ಲಿ ವೀರಶೈವಮತವು ವೇದಾಗಮ ಸಮ್ಮತವಾದದ್ದೆಂದೂ, ಬ್ರಾಹ್ಮಣ್ಯದಿಂದ ಕೂಡಿದ್ದೆಂದೂ, ಪ್ರತಿಪಾದಿಸಿ ವಿಜಯವನ್ನು ಸಂಪಾದಿಸಿದ್ದು ಸುವರ್ಣಾಕ್ಷರದಿಂದ ಬರೆದಿಡಲರ್ಹವಾಗಿದೆ ಈ ವಿಜಯದುದ್ಘಾಟನೆಗೆ ಮುಖ್ಯ ಕಾರಣರಾದ ಈಗಿನ ರಂಭಾಪುರೀ ಶ್ರೀ ಗುರುಸಿದ್ಧ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಭಗವತ್ಪಾದರವರೂ (ಆ ಪ್ರಕರಣದ ಕಾಲಕ್ಕೆ ಸದಾಶಿವಶಾಸ್ತ್ರಿಗಳು ಎಂಬ ನಾಮಾಂಕಿತ ವಿತ್ತು.) ನೈಸೂರಿ ರಾಜಸ್ಥಾನ ಮಹಾವಿದ್ವಾಂಸರಾದ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳೂ, ವೀರಶೈವ ಬ್ರಾಹ್ಮಣ ತಾಗೂ ವೇದಾಧಿಕಾರದ ಬಗ್ಗೆ ಅಮೋಘವಾದ ಸಾಕ್ಷ್ಯವನ್ನು ಸಾದರಗೊಳಿಸಿದ್ದು ಸುಪ್ರಸಿದ್ಧ ವಷ್ಟೇ. ನಾಮಧಾರಿ ಲಿಂಗಧಾರಿಗಳು ವೇದಸಿಂದರಾಗಿ ಧರ್ಮಬಾಹ್ಯವಾದ ವಿಧವೆಗಳ ಉಡಿಕೆಯ ಬಡ ಒಡಿಕೆಗೊಳಗಾಗಿರುವದು ವೀರಶೈವ ಶೂದ್ರವರ್ಣದಲ್ಲಿ ಸಹ ಸಂಶಲು ಅಧಿಕಾರವು ಬರಲಾರದು. ಅಸ್ತು!

ಮಾನವನ ಜೀವನವು ಕೇವಲ ಭೌತಿಕ ಸುಖಾಪೇಕ್ಷೆಯುಳ್ಳದ್ದೆಂದು ಅಜ್ಞಾನಿಗಳ ವಿಚಾರವಷ್ಟೆ! ಉಪ್ಪು, ಕಾರ, ಹುಳಿಯನ್ನುಂಡ ವಿಧವೆಯರು ವಿಷಯ ಸುಖವನ್ನು ಹೇಗೆ ತಡೆವಾರು? ಎಂಬ ಸಂದೇಹಾಸ್ಪದ ವಿಚಾರದಿಂದಲೋ ಬೇರಾವ ಕಾರಣದಿಂದಲೋ ಈ ವಿಧವೆಗಳ ಉಡಿಕೆಯನ್ನು ಪ್ರಚಾರದಲ್ಲಿ ತಂದಂತೆ ಕಾಣುತ್ತದೆ ಮಾನವಜನ್ಮದ ಸಾರ್ಥಕತೆಯ ಸಾಧನವು ಸಾಮಾನ್ಯರಿಗೆ ಹೇಗೆ ಗೋಚರವಾಗಬೇಕು? ವೀರಶೈವ ಮತವು ಭೌತಿಕ ಸುಖವು ಕ್ಷಣಿಕವಾದುದೆಂದೂ ಸಾತ್ವಿಕ ಸುಖ (ನಿತ್ಯಸುಖ) ವೇ ಶಾಶ್ವತವೆಂದೂ ಸಾರುವದು ಉಡಿಕೆಯು ವಿಷಯದ ಶಾಂತಿಗಾಗಿ ನೆರವೇರುವದು ಈ ಉಡಿಕೆಯಲ್ಲಿ ಧಾರ್ಮಿಕ ವಿಧಿಗಳ ಪ್ರಯೋಗಗಳಿಲ್ಲ. ಉಡಿಕೆಯು ಕಾರ್ಯದ ವಿಚಿತ್ರರೀತಿಯನ್ನು ಇಲ್ಲಿ ಬರೆಯಲು ಜುಗುಪ್ಸೆಯಾಗುವದು ಮಾಡಿಕೊಳ್ಳುವವನ ಮುಖದರ್ಶನವಿಲ್ಲದ ವಿಧವೆಯು ಸಧವೆಯಾಗುವಳು ಈ ಧರ್ಮಹೀನಕಾರ್ಯದಲ್ಲಿ ಸುಮಂಗಲೆಯರು ಹಣಕಿಹಾಕುವದೊತ್ತಟ್ಟಿಗಿರಲಿ, ಇದರ ಸಮಿಪಕ್ಕೆ ಸುಳಿದಾಡುವದಿಲ್ಲ ಈ ಉಡಿಕೆಯು (ವಿಧವಾವಿವಾಹದ) ಅಮಂಗಲವಿವರಣೆಯನ್ನು ಒರೆದನ್ನು ನಮ್ಮ ಲೇಖನಿಗೆ ಆಸಹ್ಯವುಂಟಾಗುವದರಿಂದ ಇದನ್ನಿಲ್ಲಿಗೆ ವಿರಮಿಸಿ ಪರಮ ಪವಿತ್ರವಾದ ವೀರಶೈವ ಮಹಾಮತದಲ್ಲಿ ವಿರಾಜಿಸುವ ದ್ವಿಜಶ್ರೇಷ್ಠರಲ್ಲಿದ್ದ ಸ್ತ್ರೀಧರ್ಮದ ಕಡೆಗೆ ಹೊರಳೋಣ!

ನಮ್ಮ ಆರ್ಯಾವರ್ತದಲ್ಲಿ ಯಾವಾಗಲೂ ಸ್ತ್ರೀ ಧರ್ಮ ಪ್ರಾಶಸ್ತ್ಯದಿಂದ ಪ್ರಕಾಶಿಸುತ್ತಿರುವದು. ಪುರಾತನ ಕಾಲದಿಂದಲೂ ಅನೇಕ ವೀರಸಾಧ್ವೀಶಿರೋಮಣಿಗಳು ಅಗಣಿತಮಹಿಮಾಶಾಲಿಗಳಾಗಿ ಹೋಗಿದ್ದಾರೆ. ಆ ಪತಿವ್ರತೆಯರಿಂದಲೇ ಭರತಖಂಡವು ಪವಿತ್ರವಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಲ್ಲವು.

"ಬಾಲಯಾವಾ ಯುವತ್ಯಾವಾ ವೃದ್ಧಯಾ ವಾಪಿ ಯೋಷಿತಾ।
ನ ಸ್ವಾತಂತ್ರ್ಯೇಣ ಕರ್ತವ್ಯಂ ಕಿಂಚಿತ್ಕಾರ್ಯಂಗೃಹೇಷ್ವಪಿ ॥

ಬಾಲ್ಯೇ ಪಿತುರ್ವಶೇ ತಿಷ್ಠೇತ್ಪಾಣಿಗ್ರಾಹಸ್ಯ ಯೌವನೇ।
ಪುತ್ರಾಣಾಂ ಭರ್ತರಿ ಪ್ರೇತೇ ನ ಭಜೇತ್ ಸ್ತ್ರೀ ಸ್ವತಂತ್ರತಾಂ॥"

ಇದರಿಂದ ಸ್ತ್ರೀಯರ ಸ್ವಾತಂತ್ರ್ಯವನ್ನು ಹರಣ ಮಾಡಿ ಪುರುಷರು ಇವರನ್ನು ನಾನಾ ವಿಧದಿಂದ ಹಿಂಸೆಗೊಳಿಸುವರೆಂದು ಆಧುನಿಕ ಸುಧಾರಕ ವರ್ಗದೊಳಗಿನ ಪಶ್ಚಿಮ ದಿಙ್ಮುಖಿಗಳು ಆರೋಪಿಸುತ್ತಿರುವರು. ಭಾರತೀಯದರ್ಮವನ್ನು ತಿಳಿಯದಿರುವದೇ ಈ ಆಸ್ಪದಕ್ಕೆ ಕಾರಣವಾಗಿದೆಯಲ್ಲದೆ ಬೇರಿಲ್ಲ ಭಾರತೀಯರು ಸ್ತ್ರೀಯರಿಗೆ ಸಾಮಾನ್ಯವಾದ ಸ್ವಾತಂತ್ರ್ಯವನ್ನು ಕೊಟ್ಟಿರುವದಿಲ್ಲ ಭಾರತೀಯ ಸ್ತ್ರೀಯರಿಗಿರುವ ಸ್ವಾತಂತ್ರ್ಯಸುಖವು ತ್ರಿಲೋಕದಲ್ಲಿಲ್ಲ. ಆದರೆ ಪರಿರಾಷ್ಟ್ರೀಯ ಸ್ತ್ರೀಯರ ಥಳಕಿನ ಸ್ವಾತಂತ್ರ್ಯವು ನಮ್ಮ ನಾಡಿಗೆ ಯಾವ ಕಾಲದಲ್ಲಿಯೂ ಬೇಡ ಸ್ವದೇಶೀಯ ಸೌಖ್ಯಕ್ಕಿಂತ ಮಿಗಿಲಾದ ಸುಖಾನುಭವವನ್ನು ನಮ್ಮ ಸ್ತ್ರೀಯರು ಜಗದಾದಿಯಿಂದಲೂ ಅನುಭವಿಸುತ್ತಿರುವದನ್ನು ಪುರಾಣೇತಿಹಾಸಾದಿಗಳಲ್ಲಿ ನೋಡಲಿ. ನಮ್ಮ ಆರ್ಯ ಮಹಿಳೆಯರು ಅಡಿಗೆಯ ಮನೆಯಲ್ಲಿದ್ದು ಪತಿವ್ರತಾ ನಿಷ್ಠರಾಗಿ ಬಾಳುತ್ತಲಿದ್ದರೆ, ಅವರ ಸನಾತನಧರ್ಮವು ಜಗತ್ಕಲ್ಯಾಣವನ್ನುದ್ಧರಿಸಲು ಸಮರ್ಥವಾಗಿರುವದನ್ನು ಯಾರೂ ಮರೆಯಬಾರದು. ಸ್ತ್ರೀಧರ್ಮವನ್ನು ಹಾಳುಮಾಡಿ ಗಂಡುಬೀರಿಯರಂತೆ ಕ್ಷಣಕ್ಕೊಬ್ಬ ಗಂಡನನ್ನು ಮಾಡಿಕೊಂಡು ಕಂಡಕಂಡವರಿಗೆ ಜೋಂಬನವನ್ನು ಕೊಟ್ಟು ಕೈಕೈಗಳನ್ನು ಬಿಗಿಯಾಗಿ ಹಿಡಿದು ಅಲ್ಲಾಡಿಸುವ ಅಮಂಗಲಸ್ವಾತಂತ್ರವನ್ನು ಆರ್ಯಮಹಿಳೆಯು ಕನಸುಮನಸ್ಸಿನಲ್ಲಿ ಬಯಸಲಾರಳು

ವೀರಶೈವ ಸ್ತ್ರೀಜನಾಂಗದಲ್ಲಿ ಮತಧರ್ಮಾಚರಣೆಗಳು ಇನ್ನೂ ಸಜೀವವಾಗಿರುವದು ಸಂತೋಷಪದ ಸಂಗತಿಯಾಗಿದೆ ಇತ್ತೀಚೆಗೆ ಸಂಸರ್ಗದೋಷದಿಂದ ವೀರಶೈವ ಮಹಿಳೆಯರು ಆರ್ಯಸಂಸ್ಕೃತಿಗೆ ತಿಲಾಂಜಲಿಯನ್ನಿತ್ತು ಅಭಿನವ ಪಾಶ್ಚಿಮಾತ್ಯರಾಗತೊಡಗುವ ಪದ್ಧತಿಯು ನಿಂದ್ಯವಾದುದು ವೀರಶೈವ ಸ್ತ್ರೀಯರ ಪವಿತ್ರಾಚರಣೆಯ ಕಡೆಗೆ ಮತಾಚಾರ್ಯರು ವಿಶೇಷ ಗಮನಿಸಬೇಕು. ವೀರಶೈವ ಮಹಾಮತದಲ್ಲಿ ದ್ವಿಜವರ್ಣೀಯರ ಸಂಖ್ಯೆಗಿಂತ ಆಗಂತುಕ ಜಾತಿಗಳ ಸಂಖ್ಯೆಯು ಹೆಚ್ಚಾಗಿದೆ. ಶುದ್ಧವಂಶೀಯರು ಇದಕ್ಕೆ ಅವಕಾಶಕೊಡದೆ ತಮ್ಮ ಪವಿತ್ರತೆಯನ್ನು ಚನ್ನಾಗಿ ಕಾಪಾಡಿಕೊಂಡಿದ್ದರೂ ಈ ನಾಮಧಾರಿಲಿಂಗಾಯತರೆಂಬವರಿಂದ ಅಖಿಲವೀರಶೈವಮತಕ್ಕೆ ಕುಂದುಂಟಾಗದಂತೆ ಪ್ರಯತ್ನಿಸಬೇಕು. ವೀರಶೈವರು ವಿಧವೆಯರನ್ನು ಪವಿತ್ರ ದೃಷ್ಟಿಯಿಂದ ಕಾಣುತ್ತಾರೆ ನೀರಶೈವ ವಿಧವಾಸ್ತ್ರೀಯರಿಗೆ ವಿಶೇಷಗೌರವಾದರಗಳರುತ್ತವೆ. ವೀರಶೈವವಿಧವಾಧರ್ಮಾಚರಣೆಗಳನ್ನು ಧರ್ಮಶಾಸ್ತ್ರಗಳು ಸೊಗಸಾಗಿ ಪ್ರತಿಪಾದಿಸುತ್ತವೆ

ಮೃತೇ ಭರ್ತರಿ ಸಾ ಸಾಧ್ವೀ ಶಿವಚಿಂತಾಪರಾಯಣಾ।
ಧೂಕಯ್ಯಾ ನತ್ತಫೋಜೀಚ ನಿರ್ವಿಕಾರಾಜಿತೇಂದ್ರಿಯಾ ॥

ನಿತ್ಯಸ್ನಾನಾರ್ಚನಕೇತೀ ತೃಕ್ತಾಂಬೂಲಭೂಷಣಾ।
ಮಿಷದ್ರಾ ಮಿತಹಾರೀ ಗಂಧಪುಷ್ಪಾ ಮಿತಭೂಷಿಣೀ ॥

ಇಂದುವಾರೆ ತು ವಿಧಿವದುಪವಾಸಂ ಶಿವಾರ್ಚನಂ।
ಶಿವಪಂಚಾಕ್ಷರೀಜಪಂ ಭೂತಿರುದ್ರಾಕ್ಷಧಾರಣಂ ॥

ಶಿವಭಕ್ತೇಷು ವಾತ್ಸಲ್ಯಂ ಕುರ್ವಂತೀ ಭಕ್ತಿತತ್ಪರಾ।
ಕ್ಷಮಾದಯಾಸಮಾಯುಕ್ತಾ ಕಷಾಯವಸನಾವೃತಾ ॥

ಏವಂವಿಧೇನ ಶೀಲೇನ ನಯೇದಾಯುರನಾಳುವಾ।
ಪತಿಮನ್ಯಂ ನಗಚ್ಛೇತ ಗತಾಚೇನ್ನರಕಂ ವ್ರಜೇತ್ ॥

ಗಂಡನು ಮೃತನಾದರೆ ಪತಿವ್ರತೆಯಾದ ಆ ಸಾ ಶಿರೋಮಣಿಯು ಶಿವಧ್ಯಾನನಿರತಳಾಗಬೇಕು. ಜಿತೇಂದ್ರಿಯಳಾಗಿ, ಸುವರ್ಣಾಭರಣಾದಿಗಳನ್ನು ಧರಿಸಿಕೊಳ್ಳದೆ, ತಾಂಬೂಲ ಗಂಧ ಪುಷ್ಪ ಮೊದಲಾದುವುಗಳನ್ನು ತ್ಯಜಿಸಿ, ಉತ್ತೇಜಕಾಹಾರಗಳನ್ನು ಭುಂಜಿಸದೆ ಒಂದೇ ವೇಳೆಯಲ್ಲಿ ಸಾತ್ವಿಕಾಹಾರವನ್ನು ಭೋಜನ ಮಾಡುತ್ತಲೂ, ಪ್ರತಿ ಸೋಮವಾರ ಅನಶನವ್ರತವನ್ನು ಆಚರಿಸಬೇಕು. ಕಂಬುಬಟ್ಟೆಯನ್ನುಡಬೇಕು ಪ್ರತಿದಿನವು ಸ್ನಾನ, ತ್ರಿಕಾಲ ಲಿಂಗಾರ್ಚನೆ, ಶಿವಪಂಚಾಕ್ಷರೀ ಜಪ, ಭಸ್ಮ ರುದ್ರಾಕ್ಷ ಧಾರಣವುಳ್ಳವಳಾಗಿ ಸೈರಣೆ ದಯೆಯುಳ್ಳವಳಾಗಿ ಭಕ್ತಿತತ್ಪರಳಾಗಿ ಜೀವನ ಯಾತ್ರೆಯನ್ನು ಸಾಗಿಸಬೇಕು. ಇದಕ್ಕೆ ವಿರೋಧವಾಗಿ ವಿಷಯದಾಸೆಗೆ ಮನಸೋತು ಮತ್ತೊಬ್ಬನನ್ನು ವರಿಸಿದರೆ ಘನತರವಾದ ನರಕಪ್ರಾಪ್ತಿಯಾಗುವದೆಂದು ಧರ್ಮಶಾಸ್ತ್ರಗಳು ಸಿಂಹನಾದಮಾಡುತ್ತಲಿವೆ. ವೀರಶೈವ ವಿಧವಾಸ್ತ್ರೀಯರು ಧರ್ಮಮಾರ್ಗಗಾಮಿಗಳಾಗಿ "ಸತಿ ಜಾಹಂ ಪತಿಲಿಂಗಂ" ಎಂಬ ರೇಣುಕಗೀತೋಕ್ತಿಯಂತೆ ಲಿಂಗಾರ್ಚನೆಯಲ್ಲಿ ನಿಷ್ಠರಾಗಿ ಲಿಂಗಾಂಗ ಸಾಮರಸ್ಯರೂಪ ಮೋಕ್ಷಾನಂದವನ್ನು ಪಡೆಯಲಿ

ಸ್ವೀಕಾರ

೧. ಬೆಂಗಳೂರುಸಿಟಿ, ಸೂಲುಕುಂಟೆ ಮಃ|| ರಾ|| ಲೆಟ್ಟರ ವೀರಭದ್ರಪ್ಪನವರ ದ್ವಿತೀಯ ಪುತ್ರಿ ಚಿ|| ಸೌ|| ಕುಃ|| ಪ್ರೇಮಾದೇವಿ (ಕುಮಾರಿ ಮುದ್ದಮ್ಮ ಬಿ. ಎಸ್. ಸಿ ಎಂಬ ವಧುವನ್ನು ಚೌಡದಾನಪುರ ಶ್ರೀ ಶಾಂತವೀರವಡೆಯರವರ ದ್ವಿತೀಯ ಪುತ್ರ ಚಿ|| ರಾ|| ಚಂದ್ರಶೇಖರರಾಜವಡೆಯರ್ ಬಿ ಎ ಅನಸ್ ಎಂಬ ವರನಿಗೆ ಕೊಟ್ಟು ಬೆಂಗಳೂರುಸಿಟಿಯಲ್ಲಿ ನಡೆದ ವಿವಾಹಮಹೋತ್ಸವ ಸಮಯದಲ್ಲಿ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತಕಾಲೇಜ್ ಫಂಡಿಗಾಗಿ ಕೊಟ್ಟ ಒಂದುರೂಪಾಯಿಯು, ಯಂ. ಎಲ್. ಇ ಫಂಡು ನೆಕ್ರೆಟರಿಗಳಾದ ಶ್ರೀಮಾನ್ ಸರಾಫ್ ಬಸಪ್ಪನವರಿಂದ ಬಂದಿರುತ್ತದೆ

೨. ಬೆಂಗಳೂರಿನಲ್ಲಿರುವ ವೇ|| ಮಲ್ಲರಬಾಣವಾಡಿ ಮಠದ ಬಿ ಬಸವಾರಾಧ್ಯರವರ ಪುತ್ರ ಚಿ|| ರಾ|| ಜಿ ಗಂಗಪ್ಪನೆಂಬ ವರನಿಗೆ, ಪುಂಗನೂರಿನಲ್ಲಿರುವ ವೇ|| ಪೂಜಾಗಾನಹಳ್ಳಿಮಠದ ನಂಜುಂಡಾರಾಧ್ಯರವರ ಪುತ್ರಿ ಚಿ|| ಸೌ|| ಹ|| ಶಿದ್ದಮ್ಮನೆಂಬ ವಧುವನ್ನು ಕೊಟ್ಟು ನಡೆಯಿಸಿದ ವಿವಾಹಮಹೋತ್ಸವಕಾಲದಲ್ಲಿ, ವಧೂವರರ ಕಡೆಯಿಂದ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತಕಾಲೇಜು ಫಂಡಿಗಾಗಿ ತೆಗೆದ ಒಂದುರೂಪಾಯಿಯು, ವೇ|| ಜಿ ಕೆ. ರುದ್ರಾರ್ಯರವರ ಮೂಲಕ ಬಂದಿರುತ್ತದೆ.

೩. ಬೆಂಗಳೂರು ವೀರಶೈವ ಪತ್ರಿಕಾಸಂಪಾದಕ ಪಂಡಿತ ಸಿ ಸಂಗಯ್ಯನವರ ಭಾವಮೈದ, ನಾಮಗೊಂಡ್ಲು ಮಃ|| ಸುಬ್ಬಣ್ಣನವರ ಜ್ಯೇಷ್ಠಪುತ್ರ ಚಿ|| ರಾ|| ಎಸ್. ಎಸ್. ನಂದೀಶ್ವರಯ್ಯ ಬಿ. ಇ. (ಲೋಕೋಪ್ರೊಬೇಷನರ್ ಮೈಸೂರು) ಎಂಬ ವರನಿಗೂ, ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಮಃ|| ರಾ|| ಜವಳ ಅಂಗಡಿ ಸಿದ್ದಣ್ಣನವರ ಚತುರ್ಥ ಪುತ್ರಿ ಚಿ|| ಸೌ|| ಹ|| ಕುಃ|| ರುದ್ರಾಂಬಾ ಎಂಬ ವಧುವಿಗೂ, ಫ್ರೆಂಚ್ ರಾಕ್ಕೆನಲ್ಲಿ ನಡೆದ ವಿವಾಹಸಮಯದಲ್ಲಿ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತಕಾಲೇಜ್ ಫಂಡಿಗಾಗಿ ತೆಗೆದ ಒಂದುರೂಪಾಯಿ ವೀರಶೈವ ಪತ್ರಿಕಾ ಸಂಪಾದಕರಾದ ಪಂಡಿತ ಸಿ. ಸಂಗಯ್ಯನವರಿಂದ ಬಂದಿರುತ್ತದೆ

ಶ್ರೀಜಗದ್ಗುರು ಪಂಚಾಚಾರ್ಯರು ಮೇಲೆ ಕಂಡ ಮಹನೀಯರಿಗೆ ನಿತ್ಯಮಂಗಳವನ್ನೀಯಲೆಂದು ಕೋರುತ್ತೇವೆ.

ಎಲ್. ರುದ್ರಯ್ಯ,
ಸೆಕ್ರೆಟರಿ
ಶ್ರೀ ಜ ರೇ ಪಂ.ಸಂ. ಕಾ. ಫಂಡು,
ಮಹಂತಿನಮಠ, ಬೆಂಗಳೂರುಸಿಟಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಪ್ರಚಾರಕ್ಕಾಗಿ ಪತ್ರಿಯೊಂದು ಗುರುವರ್ಗದ ಮಠಕ್ಕೆ ಸಂಬಂಧಪಟ್ಟಿರುವ ಶಿಷ್ಯರ ಮನೆಗಳಿರುತ್ತಿದ್ದು, ಆ ಮಹಾಧಿಕಾರಿಗಳು ಆಗಾಗ್ಗೆ ಸಂಚಾರಕ್ಕೋಸ್ಕರ ಹತ್ತು ವರ್ಷಕ್ಕೊಮ್ಮೆ ಒಂದುಸಾರಿ ಹೋಗಿ ಶಿಷ್ಯರ ಮನೆಯ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯೋಗಕ್ಷೇಮ ವಿಷಯುಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇವನ್ನು ಪೂರೈಸಾಡುವುದಕ್ಕೋಸ್ಕರ ನೇಲ್ಕಂಡ ಪುಸ್ತಕವನ್ನು ಹೊಸ ರೀತಿಯಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಬಹಳ ಸುಲಭವಾಗಿ ತೋರಿಸಲ್ಪಟ್ಟಿದೆ ಅದುದರಿಂದ ಸದರಿ ಪುಸ್ತಕವನ್ನು ಶಿಷ್ಯಮನೆಯ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಇದನ್ನು ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಎಲ್ಲಾ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗುತ್ತಿರುವ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ಡೋಸ್	ಮೂಲ್ಯ
ಸ್ವರ್ಣಮುಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮೃಲ್ಲಸಿಂದೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮೦—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮೦—೦
ನಾಗಭಸ್ಮ	೧	೦—೮೦—೦
ಮೃತ್ಯುಂಜಯಭಸ್ಮ	೧	೦—೧೫—೦
ಪಂಚಸಮಭಸ್ಮ	೧	೦—೮೦—೦
ಮಿಸ್ರಭಸ್ಮ	೧	೦—೮೦—೦
ಮಿಂಡೂರಭಸ್ಮ	೧	೦—೮೦—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೫—೦
ಅಭ್ರಕಭಸ್ಮ	೧	೩—೦—೦
ವೈಕ್ರಾಂತಭಸ್ಮ		೪೦—೦—೦
ಪ್ರವಾಲಭಸ್ಮ	೧	೦—೮೦—೦
ಶಂಖಭಸ್ಮ	೧	೦—೮೦—೦
ಕಪರ್ದಿಭಸ್ಮ	೧	೦—೮೦—೦
ಮೌಕ್ತಿಕಭಸ್ಮ	೧	೦—೮೦—೦
ಗೋದಂತಹರತಾಲಭಸ್ಮ	೧	೦—೮೦—೦
ಸೂರ್ಯೋದಯ (ಗಂಧಕ)	೧	೫೦—೦—೦
ಲಾಜೀತ ಸೂರ್ಯವೃಟಿ	೧	೧—೦—೦
ಲಾಜೀತ ಚಂದ್ರವೃಟಿ	೧	೦—೮೦—೦

ಸೂಚನೆ:— ಈ ಔಷಧಾಲಯದಲ್ಲಿ ಸರ್ವಸ್ವಕಾರದ ಲೇಖ ಜೂರ್ಣ ಗುಟಿಕಾ ತೈಲ ಘೃತ ಗುಗ್ಗುಲ ಮತ್ತು ಔಷಧಿಗಳು ಸರ್ವದೋಗಗಳಿಗೆ ದೊರೆಯುವವು

ವಿಳಾಸ—ವ್ಯವಸ್ಥಾಪಕರು

ಆಯುರ್ವೇದರಸಾಯನಶಾಲೆ,

ಪೋಸ್ಟ್ ಓಬಿಪುರ ಜಿಲ್ಲಾ ಗಢವಾಲ್ ಯುಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಪ್ರಕಾಶಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಕೂನ್ಯವಾಗಿ ಉಚ್ಚರಿಸಬಾರದಷ್ಟೆ ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಾಗಲಿ ವೈದಿಕಸ್ವರಗಳು ಪ್ರಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು ಅಲ್ಲದೆ ಈ ಪೂಜಾ ವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವಿನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವಿನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೨ ಆಣೆ** ವಿ ಪಿ ಚಾರ್ಜ್ ಪ್ರತ್ಯೇಕ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾಸಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ಬಹಳ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಹೆಡೆಕೇಷನ್ನಿಗೆ ಅಸ್ಪದೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರವಾಗಿ ಅನ್ಯವಾದ ವಿಶಾಲಚಿತ್ರವನ್ನು ಸಹ ದಯವಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ದನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೫೪೪ ಪುಟಗಳಿಂದ ಕೂಡಿದ್ದು ಬಿಳಿ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದಲೂ ಕೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥದರ್ಶನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ ೮ ರೂಪಾಯಿ ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ ಗೆ ದೊರೆಯುವುದು ವಿ ಪಿ ಚಾರ್ಜ್ ಗಿಂತ ಮೊದಲೇ ಪ್ರತ್ಯೇಕ.

ಮ್ಯಾನೇಜರ್

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಳಭಕ್ತ ಅನ್ನುತಲೆಗೆಳೆದು ಕೂಡಿಪ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಪಿಖ್ಯಾತರಾದ ಅಗಸ್ತ್ಯ, ಧಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ .... ೦—೦—೬

ಸದ್ಭಕ್ತ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ ೦—೦—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ ... ೦—೦—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ ... ೦—೦—೪

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೪

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೪

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ ... ೦—೦—೪

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೪

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೪

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೪

ಶ್ರೀಸುಸುಜ್ಞಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ . ೦—೦—೪

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾಸಂಪತಿಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .. ೦—೦—೪

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೪

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ ... .. ೦—೦—೪

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಪ್ರಾಚೀನ ಪ್ರಾಚೀನವಾದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .... ೦—೦—೪

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ . ೦—೦—೪

ಶ್ರೀ ಜಗದ್ಗುರು ಕೇದಾರ ರತ್ನಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .. ೦—೦—೪

ಶ್ರೀ ಜಗದ್ಗುರು ಕೇದಾರ ರತ್ನಸಿಂಹಾಸನದ ಧರ್ಮಪೀಠದ ಸುಂದರ ಫೋಟೋ .. ೦—೦—೪

ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ... ೦—೦—೪

ಸೊಪ್ಪಾಧುರದಲ್ಲಿ ನೆರೆನೇರಿರ ಉಜ್ಜಯಿನೀ ಜಗದ್ಗುರುಗಳವರ ಆಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ . ೦—೦—೪

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಶ್ರೌತಾಶ್ರೌತವಿಭೇಗೇನ ದ್ವಿಧಾ ಲಿಂಗಸ್ಯ ಧಾರಣಂ ।
ಷಡಧ್ವಶುದ್ಧಿಲಿಂಗಂ ತು ಶ್ರೌತಮಿತ್ಯಭಿಧೀಯತೆ ॥
ಆಶ್ರೌತಂ ತಪ್ತಲಿಂಗಾದಿಧಾರಣಂ ಪ್ರೋಚ್ಯತೇ ಶಿವೇ ।
ಶ್ರೌತಾನಾಂ ವೀರಶೈವಾನಾಂ ವೇದಮಾರ್ಗೈಕವರ್ತಿನಾಂ ॥
ತಸ್ತಲಿಂಗಪರಿಗ್ರಹೇ ಪ್ರತ್ಯವಾಯೋ ಮಹಾನ್ ಭವೇತ್ ॥

ವೀರಶೈವರು ಶ್ರೌತಲಿಂಗಧಾರಿಗಳೆಂದು ಸ್ಪಷ್ಟವಾಗಿ ಹೇಳಿರುವುದರಿಂದ ವೀರಶೈವಮತವು ವೈದಿಕಮಾರ್ಗವೆಯಲ್ಲಿ ಸಂಪ್ರೋತವಾಮಮೊಂದು ಪ್ರಧಾನಮಾರ್ಗವೆಯೆಂದು ಸ್ಪಷ್ಟವಾಗುತ್ತದೆ. ಮತ್ತು ಪ್ರಾಚೀನಕಾಲೀನರಾದ ವೀರಶೈವಮತದ ಸಕಲ ಹವ್ಯಕವ್ಯಾಧಿಕಾರಿಗಳಾದ ವೈದಿಕ್ರಂಪ್ರದಾಯಿಗಳಾದ ಗುರುಮರಾದಿಕಾರಿಗಳು ಪರೋಪಸನಿತ್ತಗಳಿಗೂ, ಬ್ರಹ್ಮಸೂತ್ರಗಳಿಗೂ ಭಾಷ್ಯ ಗಳನ್ನು ಬರೆದಿರುವುದನ್ನುವರೂ ನೋಡಿದರೆ ಭ್ರಾಂತಿ ಯಿಂದ ದೂರಾಗಬಹುದು ವೀರಶೈವರು ಮಹಾಪತಿ ಪ್ರತಿಯಂತೆ ಶಿವನೋರ್ವನನ್ನೇ ಪೂಜಿಸುವುದರಿಂದಲೂ

"ತ್ವಂ ವೇತ್ಸಾನಾಂ ಬ್ರಾಹ್ಮಣಾನಾಮಭಿಪತಿರ್ವಿಷ್ಣು ಕ್ಷತ್ರಿ ಯಾಣಾಮಧಿಪತಿರ್ವ್ಯಾಹ್ಮಣಾನಾಂ ಬ್ರಾಹ್ಮಣೈರ್ಭೂಯತ "

ಎಲ್ಲಿ ಶಿವನೇ ದೇವತೆಗಳಾದ ಬ್ರಾಹ್ಮಣರಿಗೆಲ್ಲಾ ಬ್ರಾಹ್ಮಣನಾದ ನೀನೇ ಅಧಿಪತಿಯು ಕ್ಷತ್ರಿಯರಿಗೆಲ್ಲಾ ವಿಷ್ಣುವೇ ಅಧಿಪತಿಯು ಬ್ರಾಹ್ಮಣನಾದವನು ಬ್ರಾಹ್ಮಣ ದೇವತೆಯನ್ನು ಉಪಾಸಿಸಬೇಕೆಂದು ಶ್ರುತಿಸ್ಮೃತಿಯು ಹನುಶ್ಞೆಯಿತ್ತಿರುವದರಿಂದಲೂ,

ಬ್ರಾಹ್ಮಣಾನಾಂ ಶಿವೋ ವೇತ್ತಾ ಕ್ಷತ್ರಿಯಾಣಾಂ ತು ಮಾಧವಃ ।
ವೈಶ್ಯಾನಾಂ ತು ತಥಾ ಬ್ರಹ್ಮಾ ಶೂದ್ರಾಣಾಂ ಸುರನಾಯಕ ।
ಬ್ರಾಹ್ಮಣೋ ಭಗವಾನ್ ರುದ್ರಃ ಕ್ಷತ್ರಿಯಃ ಪರಮೇಶ್ವರಃ ।
ಪಿತಾಮಹಸ್ತಥಾ ವೈಶ್ಯೋ ವೃಷಲಸ್ತು ವರಂಪದಃ ।

ಇತ್ಯಾದಿ ಮನುಪರಾಶರೋಕ್ತಿಯಿಂದಲೂ ಶಿವನೇ ಬ್ರಾಹ್ಮಣನೆಂದೆ. ನಿಶ್ಚಯವಾಗಿರುವಾಗ ಅಂಥ ಸಕಲ ದೇವಮಯನಾದ ಶಿವನೋರ್ವನನ್ನೇ ಪರೆಹೊಕ್ಕು ಶಿವನನ್ನೇ ಆರಾಧಿಸುತ್ತ ಶಿವನಲ್ಲಿಯೇ ಸಮರಸತ್ವವನ್ನು ಪಡೆಯುವ ವೀರಶೈವ ಮತದ ಪಾವಿತ್ರ್ಯವು ಅಸದೃಶ ವಾಗಿರುವದು. ಭ್ರಾಂತರು ವೇದೋಕ್ತ ಕರ್ಮಜ್ಞಾನಾ ಚರಣೆಯುಳ್ಳ ವೀರಶೈವಮತದಲ್ಲಿಯೂ ಈ ಮತಾಚಾರ್ಯ ರಲ್ಲಿಯೂ ಪೂಜ್ಯಬುದ್ಧಿಯನ್ನಿರಿಸಿ ಸಹೃದಯರೂ ಗುಣಪಕ್ಷಪಾತಿಗಳೂ ಎಂಬ ಪ್ರಶಸ್ತಿಯನ್ನುಳಿಸಿಕೊಳ್ಳ ಬೇಕೆಂದಾಶಿಸುತ್ತೇನೆ.

ಒಳದೇಶದ ವೃತ್ತಾಂತಗಳು.

ನಮ್ಮ ಸಂಸ್ಥಾನದಲ್ಲಿ ಕ್ಷಯರೋಗ ಪರಿಹಾರ ನಿಧಿಗೆ ಚಿನ್ನದಗಣಿ ಕಂಪೆನಿಯವರು ಕೊಟ್ಟ ಮೊಬಲಗೂ ವೇರಿ ಜುಲೈ ತಿಂಗಳ ಅಂತ್ಯಕ್ಕೆ 1,44434 ರೂ. ಗಳು ಚಂದಾ ರೂಪದಲ್ಲಿ ವಸೂಲಾಗಿವೆ.

ನಮ್ಮ ಸಂಸ್ಥಾನದ ದಿವಾನ್‌ಸಾಹೇಬರವರು ಈ ತಿಂಗಳು 5 ನೆಯ ತಾರೀಖಿನ ದಿವಸ ಮದ್ರಾಸ್ ವಿಶ್ವ ವಿದ್ಯಾನಿಲಯದ ಪಟ್ಟಪ್ರಧಾನೋತ್ಸವವನ್ನು ನೆರವೇರಿಸಿ, ಆ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಬೋಧರೂಪವಾದ ಅಮೂಲ್ಯಭಾಷಣವನ್ನು ಮಾಡಿದರು

ಶ್ರೀಮತಿ ಅನ್ನಪೂರ್ಣಾದೇವಿ ತಿಮ್ಮಾರೆಡ್ಡಿಯವರು ಮದ್ಯವಾಸನಿರೋಧ ಚಳವಳಿಯನ್ನು ವಿಮರಾಶ್ಚತ್ಕದಲ್ಲಿ ಕಳೆದವಾರ ಪ್ರಾರಂಭಿಸಿದರು. ಗೀರೀಬಿನನೂರಿನ ಸು ಮಾರು 1000 ಸಂಸಾರದವರು ಈ ದುರಭ್ಯಾಸವನ್ನು ಸಂಪೂರ್ಣವಾಗಿ ಬಿಟ್ಟುಬಿಡುವುದಾಗಿ ವಾಗ್ದಾನ ಮಾಡಿ ರುವರಂತೆ !

ಬೆಂಗಳೂರು ಬ್ಯಾಂಕಿನ ಡೈರೆಕ್ಟರುಗಳ ಇಷ್ಟದಂತೆ ಬ್ಯಾಂಕಿನ ಲೆಕ್ಕಪತ್ರಗಳನ್ನೂ ಆಸ್ತಿಪಾಸ್ತಿಗಳನ್ನೂ ಆಜ ಮಾಯಿಷಿ ಮಾಡಲು ದಂಡಿನ ಡಿ|| ನ್ಯಾಯಾಧೀಶರು ಮಿ|| ಎಲಿಯಟ್ ವಿಲ್ಲರ್ ಮತ್ತು ರಾವ್‌ಸಾಹೇಬ್ ಕುಪ್ಪುಸ್ವಾಮಿನಾಯ್ಡು ಇವರುಗಳನ್ನು ಹೆಂಗಾಮಿ ಲಿಕ್ವಿ ಡೇಟರರನ್ನಾಗಿ ನೇಮಿಸಿ ಅವರುಗಳಿಗೆ ಬ್ಯಾಂಕಿನಿಂದ ತಿಂಗಳಿಗೆ 500 ರೂ. ಪ್ರತಿಫಲವನ್ನು ಕೊಡುವಂತೆ ಗೊ ತ್ತುಮಾಡಿದ್ದಾರೆ.

ತುಮಕೂರಿಗೆ ಸಮೀಪವಾಗಿರುವ ದೇವರಾಯನ ದುರ್ಗದ ಬೆಟ್ಟದಲ್ಲಿ ಕೆಲವು ವರ್ಷಗಳಿಂದ ವಾಸಮಾಡಿ ಕೊಂಡು ಅಲ್ಲಿರುವ ಶ್ರೀ ನರಸಿಂಹಸ್ವಾಮಿಯ ಸೇವೆಮಾ ಡಿಕೊಂಡಿದ್ದ ಒಬ್ಬ ಸ್ವಾಮಿಗಳನ್ನು ಯಾರೋ ದುರಾ ತ್ಮರು ಹೊಡೆದು ಅವರ ಬಳಿಯಿದ್ದ ಬೆಳ್ಳಿ ಸಾಮಾನು ಗಳನ್ನು ಅಪಹರಿಸಿರುತ್ತಾರೆ. ಪೋಲೀಸರು ಕೋಧನಡೆ ಸುತ್ತಿದ್ದಾರೆ. ತಿಮ್ಮ ಎಂಬವನೊಬ್ಬನನ್ನು ವಸ್ತುಗಿರಿ ಮಾಡಿರುತ್ತಾರೆ.

ಬೆಂಗಳೂರಿಂದ ದೊಡ್ಡಬಳ್ಳಾಪುರದ ಮಾರ್ಗವಾಗಿ ಪುದ್ದಗಿರಿಗೆ ಹೋಗುವ ಬಿ. ಎಸ್. ಮೋಟಾರ್ ಸರ್ವಿಸ್ಸಿಗೆ ಸೇರಿದ ಬಸ್ಸೊಂದು ಕಳೆದ 30 ನೆಯ ತಾರೀ ಖು ರವಿವಾರ ಸಾಯಂಕಾಲ ದೊಡ್ಡಬಳ್ಳಾಪುರದ ಊರೊಳಗೆ ಬರುತ್ತಿರುವಾಗ್ಗೆ ಕೈಲ್ಲೆ ರೋಡ್‌ಕ್ರಾಸಿನಲ್ಲಿ 16 ವರ್ಷ ವಯಸ್ಸಿನ ಒಬ್ಬ ಹುಡುಗನು ಬಸ್ಸಿಗೆ ಅಡ್ಡ ಲಾಗಿ ಓಡಿಬಂದನು. ಬಸ್ಸಿನ ಡ್ರೈವರು ಬ್ರೇಕು ಹಾಕಿ ದರೂ ಬಸ್ಸು ನಿಲ್ಲದೆ ಹುಡುಗನ ಕಾಲುಗಳಮೇಲೆ ಹರಿ ಯಿತು ಹುಡುಗನನ್ನು ಅದೇ ಬಸ್ಸಿನಲ್ಲೇ ಆಸ್ಪತ್ರೆಗೆ ಸಾಗಿಸಿದರು. ಚಿಕಿತ್ಸೆ ನಡೆಯುತ್ತಿದೆ.

ಮಂಡ್ಯದ ಮಿ|| ಜೋನ್‌ಗೌಡ ಎಂಬಾತನು ಟಿಕೆಟ್ಟಿ ಲ್ಲದೆ ಫೈಲಿನಲ್ಲಿ ಪ್ರಯಾಣ ಮಾಡಿದರೆಂದು ಮಂಡ್ಯದ ಫೈಲ್ವೆ ಸ್ಟೇಷನ್‌ಮಾಸ್ಟರು ಆತನಮೇಲೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹೂಡಿದ್ದ ಕ್ರಿಮಿನಲ್ ಕೋರ್ಟಿನ ಮೊಕ ದ್ದಮೆಯಲ್ಲಿ ಮ್ಯಾಜಿಸ್ಟ್ರೇಟರು ಅಪರಾಧಿಯು ತಪ್ಪಿತಸ್ಥ ನೆಂದು ತೀರ್ಮಾನಿಸಿ 10 ರೂ. ದಂಡ ವಿಧಿಸಿದರು. ಆದರಮೇಲೆ ಆಪಾದಿತನು ಹೈಕೋರ್ಟಿಗೆ ಅಪೀಲು ಮಾಡಿಕೊಳ್ಳಲು, ನ್ಯಾಯಾಧೀಶರಾದ ಜಸ್ಟಿಸ್ ರಂಗಸ್ವಾಮಿಅಯ್ಯಂಗಾರ್‌ಯವರು ಮೊಕದ್ದಮೆಯನ್ನು ವಿಮರ್ಶಿಸಿ ಟಿಕೆಟ್ಟಿಲ್ಲದೆ ಫೈಲಿನಲ್ಲಿ ಪ್ರಯಾಣ ಮಾಡಿದರೆ ಅಥವಾ ಹೆಚ್ಚಿಗೆ ಫೈಲ್ವೆದರವನ್ನು ಕೊಡಲು ತಿರಸ್ಕರಿಸಿ ದರೆ ಕ್ರಿಮಿನಲ್ ಶಿಕ್ಷೆಗೆ ಅರ್ಹವಾದ ಅಪರಾಧ ಮಾಡಿ ದಂತಾಯಿತೆಂಬುವುದಕ್ಕೆ ಫೈಲ್ವೆ ಆಕ್ಟಿನಲ್ಲಿ ಎಲ್ಲೂ ತಿಳಿತ್ತು ವುದಿಲ್ಲ. ಮತ್ತೆ ಜವನು ಅಪರಾಧ ಮಾಡಿರು ತ್ತಾನೆಂದು ಮ್ಯಾಜಿಸ್ಟ್ರೇಟರು ಆತನಿಗೆ ದಂಡವಿಧಿಸಲು ಯಾವ ಸಿದ್ಧರವಾದ ಕಾರಣವೂ ಕಂಡುಬಂದಿರಲಿಲ್ಲ. ಮ್ಯಾಜಿಸ್ಟ್ರೇಟರು ಹೆಚ್ಚಿನ ಫೈಲ್ವೆದರವನ್ನು ಮಾತ್ರ ದಂಡ ದಂತೆ ವಸೂಲ್ಮಾಡಲು ಅಧಿಕಾರ ಹೊಂದಿರುತ್ತಾರೆ. ಅದಕ್ಕೆಂತ ಹೆಚ್ಚಿನ ದಂಡ ವಸೂಲ್ಮಾಡಿದ್ದಲ್ಲಿ ಅದನ್ನು ಹಿಂದಕ್ಕೆ ಕೊಟ್ಟ್ಬಿಡಬೇಕೆಂದು ತೀರ್ಮಾನಮಾಡಿರು ತ್ತಾರ

ವರ್ತಮಾನಸಂಗ್ರಹ.

ಶಾಲೆಗೆ ಬಾಲಕರನ್ನು ಕಳುಹಿಸದಿದ್ದಕ್ಕೆ ಶಿಕ್ಷೆ!

ಬೋಬಾಯಿಯಲ್ಲಿ ಎರಡು ಮುನಿಸಿಪಲ್ ವಾರ್ಡ್‌ಗಳಲ್ಲಿ ನೈಮರಿ ಶಿಕ್ಷಣಕ್ಕಾಗಿ ತಮ್ಮ ಮಕ್ಕಳನ್ನು ಕಳು ಹಿಸದಿದ್ದಕ್ಕಾಗಿ 500 ಜನ ತಾಯಿತಂದೆಗಳನ್ನೂ ಮತ್ತು ಗಾರ್ಡಿಮನ್ನರುಗಳನ್ನೂ ಪ್ರಾಸಿಕ್ಯೂಷನ್ನಿಗೆ ಒಳ ಪಡಿಸಲಾಗಿದೆ.

ರತ್ನಖಚಿತವಿಗ್ರಹದ ಕಳುವು

ಕಲಿಕತ್ತೆಯ ರತ್ನವ್ಯಾಪಾರಿಗಳಾದ ಶ್ರೀ ರಾಧಾ ಕೃಷ್ಣ್ ಮತ್ತು ಗೋವಿಕೃಷ್ಣ ಇವರ ಮನೆಗೆ ಕಳ್ಳರು ನುಗ್ಗಿ ಸುಮಾರು 150000 ರೂಪಾಯಿ ಬೆಲೆ ಬಾಳುವ ರತ್ನಖಚಿತವಾದ ಶಿವನ ವಿಗ್ರಹವನ್ನೂ ಮತ್ತು 2 ಲಕ್ಷ ರೂಪಾಯಿ ಬಾಳುವ ಇತರ ರತ್ನಾಭರಣ ಗಳನ್ನೂ ಅಪಹರಿಸಿಕೊಂಡು ಹೋಗಿದ್ದಾರೆ. ಈ ಸಂ ಬಂಧವಾಗಿ ಮನೆಯ ಇಬ್ಬರು ಆಳುಗಳನ್ನು ವಸ್ತುಗಿರಿ ಮಾಡಲಾಗಿದೆ. ಶೋಧವು ನಡೆಯುತ್ತಿದೆ.

ಅಮೃತಸರದ ಗಲಭೆ

ಅಮೃತಸರದಲ್ಲಿ ಪೊಲೀಸರ ಮೇಲೆ ನಡೆದ ಲಾಠಿಚಾರ್ಜು ಮತ್ತು ಕರ್ಫ್ಯೂ ಜಾರಿಗೊಳಿಸಿದ ವಿಷಯವನ್ನು ವಿಚಾರಿಸಲು ಪಂಜಾಬ್ ಕಾಂಗ್ರೆಸ್ ಕಮಿಟಿಯವರು ಡಾ॥ ಸತ್ಯಪಾಲ್ ಮತ್ತು ಸೈಫುದ್ದೀನ್ ಕಿಚ್ಲು ಅಹಮದ್‌ರವರನ್ನು ನೇಮಿಸಿದ್ದಾರೆ.

ಕೈಲ್ಕೆ ಅನಾಹುತ!

ವೆಸ್ಟ್‌ಇಂಡೀಸ್ ದ್ವೀಪಸ್ತೋಮಕ್ಕೆ ಸೇರಿದ ಜಮೈಕಾ ಎಂಬ ದ್ವೀಪದಲ್ಲಿ ಕಳೆದವಾರ ಸುಮಾರು 200 ಜನ ಪ್ರಯಾಣಿಕರಿದ್ದ ರೈಲುಬಂಡಿಯು ಕಂಬಿಯಿಂದ ಹೊರಳಿ ಬಿದ್ದುದರಿಂದ 50 ಜನರು ಮೃತರಾದರೆಂದೂ, 80 ಜನರು ವಿಶೇಷವಾಗಿ ಗಾಯಗೊಂಡಿರುವರೆಂದೂ ತಿಳಿದುಬರುತ್ತದೆ.

ಅನಾಥಸ್ತ್ರೀಯರ ಗೃಹ

ಠೀವಾ ಸಂಸ್ಥಾನದಲ್ಲಿ ವಿಧವಾ ಸ್ತ್ರೀಯರ ಮತ್ತು ಅನಾಥಸ್ತ್ರೀಯರ ರಕ್ಷಣೆಗಾಗಿ ಒಂದು ಅನಾಥ ಗೃಹವನ್ನು ಸ್ಥಾಪಿಸಲು ಅಲ್ಲಿಯ ಮಹಾರಾಜರವರು 45000 ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರ ಆಡಳಿತಕ್ಕಾಗಿ ಒಂದು ಸಮಿತಿಯ ನೇಮಕವೂ ಆಗಿದೆ.

ಪ್ಯಾಲಸ್ಟೈನ್ ಗಲಭೆ

ಪ್ಯಾಲಸ್ಟೈನ್ ಪ್ರಾಂತ್ಯದ ನೇಬ್ಲಸ್‌ಬಳಿ ದಂಗೆಯೊರ ಪೊಡನೆ ಹೊಡೆದಾಡುತ್ತಿರುವಾಗ 3 ಜನ ಬ್ರಿಟಿಷ್ ಸೈನಿಕರಿಗೆ ಗಾಯಗಳಾದವು. 6 ಜನ ದಂಗೆಕೋರರು ಕೊಲ್ಲಲ್ಪಟ್ಟರು. ಅವರ ಬಳಿ ಇದ್ದ ಅನೇಕ ರೈಫಲ್ಲುಗಳೂ ಬಹಳ ಮದ್ದುಗುಂಡುಗಳೂ ಸೈನಿಕರ ವಶವಾದವು.

ಗಡಿನಾಡಿನ ಗಲಭೆ!

ಗಡಿನಾಡಿನಲ್ಲಿ ರೂಕ್ಷಜನರು ಕಳೆದ 1ನೆಯ ತಾರೀಖಿನ ದಿವಸ ಮೂರುಮಂದಿ ಹಿಂದುಗಳನ್ನು ಅಪಹರಿಸಿಕೊಂಡು ಹೋದರು. ಡಾಮ್‌ಡಿಲ್ ಹತ್ತಿರ ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿಹಾಕಿದ್ದರು. ಕಲಾಬಾಗ್-ಬನ್ನುರೈಲ್ವೆ ರಸ್ತೆಯಲ್ಲಿ ಬನ್ನುವಿನಿಂದ 28 ಮೈಲಿ ಮೂರದಲ್ಲಿರುವ ಜೊರಾಬಾಸೇತುವೆಯನ್ನು ಉರುಳಿಸುವ ಪ್ರಯತ್ನವು ನಡೆಯಿತೆಂದೂ, ಸೇತುವೆಯ ಮಧ್ಯದ ಕಂಬಿಯು ಬಿರುಕುಬಿಟ್ಟು ಎರಡು ಕಬ್ಬಿಣದ ತೊಲೆಗಳು ಮುರಿದುಹೋದವೆಂದೂ ಹೇಳಲಾಗಿದೆ.

ಯಹೂದ್ಯರ ಮೇಲೆ ಜರ್ಮನ್ನಿನ ಹೊಸನಿರ್ಬಂಧ

ಯಹೂದ್ಯರು ನಾನಾ ಕಸಬುಗಳನ್ನೂ ವಾಣಿಜ್ಯೋದ್ಯಮಗಳನ್ನೂ ನಡೆಸಬಾರದೆಂದು ಜರ್ಮನ್ ಸರ್ಕಾರದ ಕಡೆಯಿಂದ ಹೊಸನಿರ್ಬಂಧನವನ್ನು ಮಾಡಿರುತ್ತಾರೆ. ಇನ್ನು ಮುಂದೆ ಯಹೂದ್ಯರು ಕಾವಲುಗಾರರ ಕೆಲಸವನ್ನೂ ಹೆಣಕಾಸಿನ ವಿಷಯದಲ್ಲಿ ಮಂತ್ರಾಲೋಚನೆ ಕೊಡುವುದನ್ನೂ ತೋಟ ಗದ್ದೆ ಮುಂತಾದವುಗಳ ಮಾರಾಟವನ್ನೂ ನಡೆಸಲಾಗದು. ತಮ್ಮತಮ್ಮಲ್ಲಿ ಅಲ್ಲದೆ ಇತರ ಮತೀಯರ ವಿವಾಹ ಮಧ್ಯಸ್ಥಿಕೆಯನ್ನು ನಾಡಲಾಗದು. ಇದೂ ಅಲ್ಲದೆ ವಿದೇಶಗಳಿಗೆ ಹೋಗುವವರಿಗೆ ಮಾರ್ಗದರ್ಶಕ ಕೆಲಸವನ್ನೂ ಕೈಕೊಳ್ಳಕೂಡದೆಂದು ನಿರ್ಬಂಧಿಸಿರುತ್ತಾರೆ.

ಪೋಲೆಂಡ್ ಯುವತಿಯ ಆತ್ಮಹತ್ಯೆಯ ಪ್ರಯತ್ನ

ಕಳೆದ 30ನೆಯ ತಾರೀಖಿನ ರಾತ್ರಿ ಲಾಹೋರಿನ ಹೋಟೆಲೊಂದರಲ್ಲಿ ವಾಸಮಾಡುತ್ತಿದ್ದ ಪೋಲೆಂಡ್ ದೇಶದ ಯುವತಿಯೊರ್ವಳು ವಿಷಸೇವನೆಯಿಂದ ಆತ್ಮಹತ್ಯೆಮಾಡಿಕೊಳ್ಳಲು ಪ್ರಯತ್ನಿಸಿದಳಂತೆ. ಆದರೆ ತಾಪತ್ರಯಗಳನ್ನು ಸಹಿಸಲಾರದೆ ಹೊರದೇಶಕ್ಕೆ ಬಂದು ಕೂಡಿಕೊಂಡಿದ್ದರಿಂದ ಎಲ್ಲರಿಗೂ ಎಚ್ಚರವಾಯಿತು. ಪೋಲೀಸರು ಕೂಡಲೆ ಆಕೆಯನ್ನು 'ಮೆಯೋ' ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆ ಮಾಡಿಸಿದರು. ಅವಳು ಗುಣ ಹೊಂದುತ್ತಿದ್ದಾಳೆ. ಆತ್ಮಹತ್ಯೆಮಾಡಿಕೊಳ್ಳಲೆತ್ನಿಸಿದಳೆಂದು ಪೋಲಿಸರು ಆಕೆಯ ಮೇಲೆ ನ್ಯಾಯಾಸ್ಥಾನದಲ್ಲಿ ಮೊಕದ್ದಮೆ ಹೂಡಿದ್ದಾರೆ.

ರಂಗೂನಿನಲ್ಲಿ ಹೊಡೆದಾಟ

ಬರ್ಮಾದೇಶದ ರಾಜಧಾನಿಯಾದ ರಂಗೂನ್ ನಗರದಲ್ಲಿ ಮುಸಲ್ಮಾನರು ಪ್ರಕಟಿಸಿದ್ದ ಒಂದು ಗ್ರಂಥದ ವಿಚಾರವಾಗಿ ಜಗಳ ಹುಟ್ಟಿ ಬೌದ್ಧಸನ್ಯಾಸಿಗಳಿಗೂ ಬರ್ಮಿಯರಿಗೂ ಮತ್ತು ಇಂಡಿಯಾದಿಂದ ಹೋಗಿ ನೆಲಸಿರುವ ಮುಸಲ್ಮಾನರುಗಳಿಗೂ ದೊಡ್ಡ ಹೊಡೆದಾಟವೇ ನಡೆಯಿತು. ಇಟ್ಟಿಗೆ, ಕಲ್ಲು, ಲಾಠಿ, ಚೂರಿ ಮೊದಲಾದ ಆಯುಧಗಳು ಧಾರಾಳವಾಗಿ ಉಪಯೋಗಿಸಲ್ಪಟ್ಟವು. ಸುಮಾರು 42ಮಂದಿ ಸತ್ತರು. 300ಮಂದಿಗೆ ಗಾಯಗಳಾಗಿವೆ. ಸತ್ತವರಲ್ಲಿ ನೂರಕ್ಕೆ ತೊಂಭತ್ತು ಮಂದಿ ಮಹಮ್ಮದೀಯರು. ಸುಮಾರು 2ಲಕ್ಷರೂಪಾಯಿಗಳಷ್ಟು ನಷ್ಟವಾಗಿರುವದಾಗಿ ಪರಿಗಣಿಸಲ್ಪಟ್ಟಿದೆ. ಗಲಭೆಯು ಮುಂದುವರಿಯದಂತೆ ಮಿಲಿಟರಿ ರಕ್ಷಣೆಯು ಏರ್ಪಡಿಸಲ್ಪಟ್ಟಿದೆ.

ರಷ್ಯಾಜರ್ಮಾ ಘರ್ಷಣ!

ವಾದಗ್ರಸ್ತವಾದ ಗಡಿ ಪ್ರದೇಶವನ್ನು ರಷ್ಯಾದೇಶ ಬಿಟ್ಟುಹೋಗಲು ಸಿದ್ಧವಾಗಿಲ್ಲ. ಚಾಂಗ್ ಕುಫೆಂಗ್‌ನಲ್ಲಿ ಕದನವಾರಂಭವಾದರೂ ರಷ್ಯದ ವಿಚಾರದಲ್ಲಿ ಕ್ರೂರ ನೀತಿಯನ್ನನುಸರಿಸಲಾಗದೆಂದು ಜರ್ಮಾ ಸರ್ಕಾರದವರು ನಿರ್ಧರಿಸಿರುವರಂತೆ! ಕಳೆದ 2 ನೆಯ ತಾರೀಖಿನ ಬೆಳಗ್ಗೆ 15 ರಷ್ಯ ವಿಮಾನಗಳು ಚಾಂಗ್‌ಕುಫೆಂಗ್‌ಮೇಲೆ ಬಾಂಬುಗಳನ್ನು ಹಾಕಿದವೆಂದೂ ಆದರೆ ನಷ್ಟವೇನೂ ಹೆಚ್ಚಾಗಿಲ್ಲವೆಂದೂ ಹೇಳಲಾಗಿದೆ. ಹೊಡೆದಾಟವಾದಂದಿನಿಂದ ಜಪಾನಿನಕಡೆ 3 ಜನ ಅಧಿಕಾರಿಗಳೂ 27 ಜನ ಸೈನಿಕರು ಮೃತರಾದರೆಂದೂ 67 ಮಂದಿ ಗಾಯಗೊಂಡರೆಂದೂ, ರಷ್ಯದಕಡೆ 250 ಜನರು ಗಾಯಗೊಂಡರೆಂದೂ ಕೋರಿಯಾ ಸೈನ್ಯಕಚೇರಿಯು ಪ್ರಕಟಿಸಿದೆ.

ಬೌದ್ಧದೇವಸ್ಥಾನದಲ್ಲಿ ಹಿಂದೂ ವಿಗ್ರಹಗಳು.

ಬರ್ಮಾದೇಶದ ಪ್ರೊಮೆ ಜಿಲ್ಲೆಯ ಒಂದು ಬುದ್ಧನ ಗುಡಿಯ ಆವರಣದಲ್ಲಿ ಅಗೆಯುತ್ತಿದ್ದಾಗ ಕೆಲವು ಬಹು ಪುರಾತನ ವಸ್ತುಗಳು ದೊರೆತವು. ಇವುಗಳಲ್ಲಿ ಹಿಂದೂ ಪುರಾಣ ಪ್ರಸಿದ್ಧ ವ್ಯಕ್ತಿಗಳ ಅಮೃತಶಿಲೆಯ ಮತ್ತು ಲೋಹದ ಪ್ರತಿಮೆಗಳು ಅನೇಕ ಶಿಕ್ಕಿವೆ. ಇದರಿಂದ ಹಿಂದೂಗಳು ಬರ್ಮಾದೇಶವಲ್ಲಿ ಬಹಳ ಪುರಾತನಕಾಲದಿಂದಲೂ ವಾಸಿಸುತ್ತಿದ್ದರೆಂದು ವ್ಯಕ್ತವಾಗುತ್ತದೆ. ಈ ದೊರೆತ ಪ್ರತಿಮೆಗಳೆಲ್ಲ ಆ ಗುಡಿಯ ಬೌದ್ಧಭಿಕ್ಷುವಿನ ವಶದಲ್ಲಿವೆ.

ವಿದ್ಯುಚ್ಛಕ್ತಿಯಿಂದ ಗಾಯಗೊಂಡನು

ಮಾಯಾವರಮ್ಮಿನಿಂದ ಟ್ರಾಂಕ್ವೆಬಾರಿಗೆ ನೂತನವಾಗಿ ಹಾಕಿರುವ ವಿದ್ಯುತ್‌ಲೈನಿನಲ್ಲಿ ನಿನ್ನೆ ವಿದ್ಯುಚ್ಛಕ್ತಿಯು ಪ್ರವಹಿಸುತ್ತಿದೆಯೋ ಇಲ್ಲವೋ ಎಂಬ ವಿಚಾರದಲ್ಲಿ ಇಬ್ಬರು ಬಾಲಕರಿಗೆ ಚರ್ಚೆ ಹುಟ್ಟಿ ಪರೀಕ್ಷಿಸಲೋಸುಗ ಒಬ್ಬನು ಕಂಬವನ್ನು ಹತ್ತಿ ತಂತಿಯನ್ನು ಮುಟ್ಟಿದ್ದರಿಂದ ಕೆಳಗುರುಳಿ ವಿಶೇಷ ಗಾಯಗೊಂಡನು. ಅವನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಗುಣಹೊಂದುತ್ತಿದ್ದಾನೆ. ವಿದ್ಯುಚ್ಛಕ್ತಿಯ ಪ್ರಾರಂಭೋತ್ಸವನನ್ನು ನಡೆಸುವ ಮೊದಲು ಪರೀಕ್ಷಾರ್ಥವಾಗಿ ವಿದ್ಯುಚ್ಛಕ್ತಿವಾಹವನ್ನು ಬಿಟ್ಟಿದ್ದಕಾರಣ ಈ ಅನಾಹುತವು ಸಂಭವಿಸಿತು.

ಪಾಂಡಿಚೇರಿಯ ಗೌರ್ನರಿಗೆ ವರ್ಗ.

ಪಾಂಡಿಚೇರಿಯ ಗೌರ್ನರು ವರ್ಗಾಯಿಸಲ್ಪಟ್ಟುದಕ್ಕೆ ಪಂ॥ ಜವಹರಲಾಲರೇ ಕಾರಣರೆಂದು ಯೋಚಿಸಲಾಗಿದೆ. ಪಂಡಿತರು ನಾರ್ಮಂಡಿಗೆ ಪ್ರಯಾಣಬೆಳಸುವ ಮುನ್ನ ಫ್ರೆಂಚ್ ವಸಾಹತುಗಳಲ್ಲಿ ನಡೆಯುತ್ತಿರುವ ಜನ್ಯಾಯವಾದ ಆಡಳಿತವನ್ನು ಕುರಿತು ಕೆಲವು ಮಂದಿ ಫ್ರೆಂಚ್ ಮಂತ್ರಿಗಳೊಡನೆಯೂ, ರಾಜಕೀಯ ಮುಖಂಡರೊಡನೆಯೂ ಚರ್ಚೆನಡೆಸಿದರಂತೆ! ಈಗ ಪಾಂಡಿಚೆರಿಯಲ್ಲಿ ನಡೆಯುತ್ತಿರುವ ಅಸಾಧ್ಯ ದಬ್ಬಾಳಿಕೆಗಳ ವಿವರವನ್ನೆಲ್ಲಾ ತಿಳಿಹಿಸಿದರಂತೆ. ಇವನ್ನು ಕೇಳಿ ಮಂತ್ರಿಗಳು ದಂಗುಬಡಿದು ಕುಳಿತರೆಂದೂ ಆದಕಾರಣವೇ ಗೌರ್ನರನ್ನು ತತ್‌ಕ್ಷಣ ವರ್ಗಮಾಡಿದರೆಂದೂ ತಿಳಿಯುತ್ತದೆ.

ಯುದ್ಧದಲ್ಲಿ ಜೇನುಹುಳಗಳ ಉಪಯೋಗ

ಪೂರ್ವದಲ್ಲಿ ಯುದ್ಧವೇ ಮೊದಲಾದ ಅಪಾಯ ಕಾಲಗಳಲ್ಲಿ ಒಂದುಸ್ಥಳದಿಂದ ಇನ್ನೊಂದುಸ್ಥಳಕ್ಕೆ ಗುಪ್ತವಾಗಿಯೂ ಶೀಘ್ರವಾಗಿಯೂ ಸುದ್ದಿಯನ್ನು ಕಳುಹಿಸಲು ಪಾರಿವಾಳಗಳನ್ನು ಉಪಯೋಗಿಸುತ್ತಿದ್ದರು. ಅದರಂತೆ ಯುದ್ಧದಲ್ಲಿ ಶತ್ರುಗಳಮೇಲೆ ಪ್ರಯೋಗಿಸಲು ಜಪಾನಿನ ವಿಜ್ಞಾನಿಯೊಬ್ಬನು ಜೇನು ನೊಣಗಳನ್ನು ತಯಾರು ಮಾಡುತ್ತಿದ್ದಾನೆ. ಈಗ ಹುಳುಗಳು ಗಂಟೆಗೆ 3 ಮೈಲಿಯಂತೆ ಹಾರಿದರೂ ಮುಂದೆ 30 ಮೈಲಿಗಳ ವೇಗದಲ್ಲಿ ಹಾರಬಲ್ಲವಂತೆ! ಇವುಗಳ ಕೆಲಸವೇನೆಂದರೆ ತಮ್ಮ ಯಜಮಾನನ ಅಪ್ಪಣೆ ದೊರೆತೊಡನೆ ಪೂರ್ವಕಾಲದ ಸರ್ಪಾಸ್ತ್ರಾದಿಗಳಂತೆ ಶತ್ರುಸೈನ್ಯವನ್ನು ಮುತ್ತಿ ವೈರಿಗಳನ್ನು ಕಡಿದು ಕೊಲ್ಲುವುದಾಗಿದೆ.

ಭಾರತದಲ್ಲಿ ಚೀನಾದೇವಾಲಯ

ಈಗ್ಯೆ ಸುಮಾರು 2527 ವರ್ಷಗಳ ಹಿಂದೆ ಗೌತಮ ಬುದ್ಧನು ತನ್ನ 5 ಜನ ಶಿಷ್ಯರಿಗೆ ಉಪದೇಶಮಾಡಿದ ಸ್ಥಳವಾದ ಸಾರನಾಥದಲ್ಲಿ ಚೀನಾದೇಶದ ಬೌದ್ಧ ಸನ್ಯಾಸಿಯೊಬ್ಬನು ಚೀನೀಕಲೆಯಿಂದ ಕೂಡಿದ ಭಾರಿ ದೇವಸ್ಥಾನವನ್ನು ಕಟ್ಟಿಸಲಿರುವರು. ಇದಕ್ಕಾಗಿ ಎರಡು ಎಕರೆಯಷ್ಟು ಸ್ಥಳವನ್ನು ಕ್ರಯಕ್ಕೆ ಪಡೆದಿರುವನು ದೇವಸ್ಥಾನಕ್ಕಾಗಿ 7500 ಪವನುಗಳನ್ನು ಖರ್ಚುಮಾಡುವುದಾಗಿ ಹೇಳಲಾಗಿದೆ. ಏಷ್ಯಾಖಂಡದ ಸಹಸ್ರಾರು ಬೌದ್ಧಧರ್ಮಾನುಯಾಯಿಗಳಿಗೆ ಸಾರನಾಥವು ಯಾತ್ರಾಸ್ಥಳವಾಗಿದೆ. ಈ ದೇವಸ್ಥಾನವೇಲೆ ಇದರ ಮಹಿಮೆಯು ಇನ್ನೂ ಹೆಚ್ಚು ಚೀನಾದೇಶದಿಂದಲೂ ಅನೇಕರನ್ನು ಆಕರ್ಷಿಸಬಹುದಲ್ಲದೆ, ಜಪಾನೀಯರೂ ಸಹ ಭಾರತಕ್ಕೆ ಬರಬಹುದಾಗಿದೆ.

ಪಂ॥ ಜವಾಹರಲಾಲರ ಯೂರೋಪುಸಂಚಾರ

ಪಂಡಿತ ಜವಹರರು ತಮ್ಮ ಪ್ರವಾಸಕಾರ್ಯಕ್ರಮವನ್ನು ಮತ್ತೆ ಬದಲಾಯಿಸಿರುವರು. ಅವರು ಕಳೆದ 5ನೆಯ ತಾರೀಖು ಪ್ಯಾರಿಸ್ಸಿಗೆ ಆಗಮಿಸಿ 6 ನೆಯ ತಾರೀಖಿನ ದಿವಸ ಮ್ಯೂನಿಚ್ಚಿಗೆ ಪ್ರಯಾಣ ಬೆಳೆಸಿದರು. ಅಲ್ಲಿಂದ ಪ್ರೇಗಿಗೆ ಹೊರಟು 9ನೆಯ ತಾರೀಖಿಗೆ ಪ್ರೇಗ್ ನಗರವನ್ನು ತಲಪುವರು. ಪಂಡಿತರು ಜೆಕೋಸ್ಲೋವೇಕಿಯದ ಮಂತ್ರಿಗಳಾದ ಡಾ॥ ಬೆನೆಸ್ ಹಾಡ್ಜರವರನ್ನು ಭೇಟಿಮಾಡಿಕೊಂಡು ಸುಡೆಟನ್ ಪ್ರಾಂತಗಳಲ್ಲಿ ಸಂಚರಿಸಿ ಅಲ್ಪಸಂಖ್ಯಾತರಾದವರ ಸಮಸ್ಯೆಯನ್ನು ಪರಿಶೀಲಿಸಿ 11 ನೆಯ ತಾರೀಖಿನವೇಳೆಗೆ ಕ್ರಾಮ್‌ಡನ್ ವಿಮಾನನಿಲ್ದಾಣದಲ್ಲಿ ಭಾರತದಿಂದ ಬರಲಿರುವ ತಮ್ಮ ಸಹೋದರಿ ಶ್ರೀಮತಿ ವಿಜಯಲಕ್ಷ್ಮೀಪಂಡಿತರನ್ನು ಎದುರುಗೊಳ್ಳಲು ಲಂಡನ್ನಿಗೆ ಹೋಗುವರು. ಅವರ ಮುಂದಿನ ಕಾರ್ಯಕ್ರಮವಿನ್ನೂ ಗೊತ್ತಾಗಿಲ್ಲ. ಸೆಪ್ಟಂಬರ್ ಮಧ್ಯದಲ್ಲಿ ಅವರು ಜಿನೀವಾಕ್ಕೆ ಪ್ರಯಾಣಮಾಡುವ ನಿರೀಕ್ಷೆ ಇದೆ. ಅನಂತರ ಅವರು ದಕ್ಷಿಣಯೂರೋಪು ಮತ್ತು ತುರ್ಕಿಯಲ್ಲಿ ಸಂಚರಿಸುವರೆಂದು ಯೋಚಿಸಲಾಗಿದೆ.

ವಿ ಮರ್ಶೆ.

ಆರ್ಯವೈದ್ಯ ಎಂಬ ಹೆಸರಿನ ಆಯುರ್ವೇದ ಮಾಸಪತ್ರಿಕೆಯು ಹುಬ್ಬಳ್ಳಿಯಿಂದ ಪ್ರತಿತಿಂಗಳಲ್ಲಿಯೂ ಪ್ರಕಟವಾಗುತ್ತಿರುವುದು. ಈ ಪತ್ರಿಕೆಯ ನಾಲ್ಕು ಸಂಚಿಕೆಗಳು ನಮ್ಮ ಕರಗತವಾಗಿವೆ. ಈ ಮಾಸಪತ್ರಿಕೆಯಲ್ಲಿ ಲೋಕೋಪಯುಕ್ತವಾದ ಅನೇಕ ಆಯುರ್ವೇದವಿಷಯಗಳು ಶಾಸ್ತ್ರೀಯವಾಗಿ ಪ್ರಕಟಿಸಲ್ಪಡುತ್ತಿರುವವು. ಕರ್ನಾಟಕದೇಶದಲ್ಲಿ ಈ ವಿಧವಾದ ಪತ್ರಿಕೆಗಳ ಆವಶ್ಯಕತೆಯು ಹೆಚ್ಚಾಗಿ ಬೇಕಾಗಿದೆ. ಈ ಪತ್ರಿಕೆಯು ಪಠನದಿಂದ ಪ್ರತಿಯೊಬ್ಬರಿಗೂ ಆಯುರ್ವೇದಸ್ವರೂಪವು ಚೆನ್ನಾಗಿ ವ್ಯಕ್ತವಾಗುವುದರಲ್ಲಿ ಸಂಶಯವಿಲ್ಲ. ಈ ಪತ್ರಿಕೆಯು ಚಿರಕಾಲ ಬಾಳಿ ಕರ್ನಾಟಕದೇಶೀಯರಲ್ಲಿ ತನ್ನ ಪ್ರಭೆಯನ್ನು ಹರಡಲೆಂದಾಶಿಸುತ್ತೇವೆ

ವಾರ್ಷಿಕ ಚಂದಾ ೨-೦-೦.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪಂಡಿತಾರಾಧ್ಯಗುಹೆಯೂ, ಪಂಡಿತರ ಆಗಮನವೂ.

ತಾ|| ೨೬-೭-೩೪ ನೆಯ ಮಂಗಳವಾರದ ದಿವಸ ಹೋಟಗಿ ಬ್ರಹ್ಮನ್ಮಠಕ್ಕೆ ಸೋಲಾಪುರ ನಾರದ ಪಾಠ ಶಾಲಾಧ್ಯಾಪಕರಾದ ಪಂ|| ಜಗದೀಶಶಾಸ್ತ್ರಿಗಳವರ ಆಗಮನವಾಯಿತು ಮರುದಿವಸ ಅಮಾವಾಸ್ಯೆ ಯಿದ್ದ ದ್ದರಿಂದ ಅವರ ಮುಕ್ಕಾಮು ಆ ದಿವಸ ಮಠದಲ್ಲಿಯೇ ಆಯಿತು ಸದರಿ ಮಠದ ಬಿಲ್ವವನದಲ್ಲಿ, ಮಠಾಧ್ಯಕ್ಷರಾದ ಶ್ರೀ|| ಪ|| ಬ್ರ|| ಬಾಲಶಿವಸ್ವಾ ಮಿಗಳು, ಶ್ರೀ ವೀರ ಶಿವಾರ್ಚಾರು ಪೂರ್ವದಲ್ಲಿ ಒಂದೆರಡು ಸಾರೆ ಅನುಷ್ಠಾನ ಮಾಡಿದ ಪರ್ಣಕುಟೀರ ಮತ್ತು ಯಾವತ್ತು ಶ್ರೀಗಳವರ ಶಿವಲಿಂಗಾನುಷ್ಠಾನವು ಆ ಸ್ಥಳದಲ್ಲಿಯೇ ಆಗಿ, ತನ್ಮೂಲಕ ಪುಣ್ಯಲಾಭವು ತಮಗೆ ದೊರೆಯ ಬೇಕೆಂಬ ಸದುದ್ದೇಶದಿಂದ, ಕೆಲವು ಸೋಲಾಪುರದ ಮಾತ್ರ ವರ್ಗವೂ, ಪಿತೃವರ್ಗವೂ ಕೂಡಿ, ಶಕ್ತ್ಯನುಸಾರವಾಗಿ ಖರ್ಚು ಮಾಡಿ ಒಳ್ಳೆಯ ಭದ್ರವಾದ ಗುಹೆಯನ್ನು ಕಟ್ಟಿಸಿ ತಮ್ಮ ಗುರುಭಕ್ತಿಯನ್ನು ವ್ಯಕ್ತ ಪಡಿಸಿದ್ದಾರೆ. ಆ ಗುಹೆಯಲ್ಲಿಯೇ ಪೂರ್ವದಲ್ಲಿ ಶ್ರೀ ಜಗದ್ಗುರು ಏಕೋರಾಮಾರಾಧ್ಯ ಮತ್ತು ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿ ಉತ್ಸವದಲ್ಲಿ ಪಟ್ಟಣದ ಅಧಿಕಾರಿಗಳ ಶಿವಪೂಜೆಯೂ, ಗಣತರ್ಪಣೆಯೂ ಆದಾಗ್ಯೂ ಶ್ರೀ ಹೋಟಗಿ ಶ್ರೀಗಳವರ ಅನುಷ್ಠಾನವು ಇನ್ನೂ ಆಗಿರಲಿಲ್ಲ ಆದ್ದರಿಂದ ಅಮಾವಾಸ್ಯೆಯ ದಿವಸ ಪಂಡಿತಜಿಯವರ ನೇತೃತ್ವ ಶಿವಪೂಜೆಯು ಸದರಿ ಗುಹೆಯಲ್ಲಿ ಮಾಡಿಸಲ್ಪಟ್ಟಿತು. ಪಂಡಿತಜೀಯವರು ಒಳ್ಳೆಯ ಆನಂದದಿಂದ ಸೋಡಷೋಪಚಾರಪೂಜೆಯನ್ನು ಮಾಡಿಕೊಂಡು ಆ ಗುಹೆಗೆ 'ಜಗದ್ಗುರು ಪಂಡಿತಾರಾಧ್ಯಗುಹೆ' ಎಂದು ಹೆಸರಿಟ್ಟರು. ತರುವಾಯ ಸಾಯಂಕಾಲ ೪ ಘಂಟೆಗೆ ಪಂಡಿತಜಿಯವರ ಆಗಮನಕ್ಕಾಗಿ ಹೋಟಗಿ ಸದ್ಭಕ್ತರು ಹೋಟಗಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮಾಡಬೇಕೆಂದು ನಿಶ್ಚಯಿಸಿದರು ಕೂಡಲೆ ಸಭೆಯು ಪ್ರಾರಂಭವಾಗಿ ಅಧ್ಯಕ್ಷರು ಪಂಡಿತಜಿಯವರ ವಿದ್ವತ್ತನ್ನೂ ಅವರ ಸದ್ಗುಣಗಳನ್ನೂ ಸ್ವಲ್ಪದರಲ್ಲಿಯೇ ಜನರಿಗೆ ಅಪ್ಪಣೆ ಕೊಡಿಸಿ, ಉಪನ್ಯಾಸ ಮಾಡಲು ಸೂಚಿಸಿದರು ಆ ಮೇಲೆ ಪಂಡಿತಜಿಯವರು ೩ ಮುಕ್ಕು ವಿದ್ವತ್ಪೂರ್ಣ ವಾಣಿಯಿಂದ, ಲಿಂಗಪೂಜಾ, ಗುರುಮಹತ್ವ, ಶ್ರಾವಣ ಮಾಸದ ಫಲ ಈ ಬಗ್ಗೆ ಅಬಾಲವೃದ್ಧರಿಗೂ ತಿಳಿಯು ವಂತೆ ಒಳ್ಳೇ ಶಾಂತರೀತಿಯಿಂದ ಉಪನ್ಯಾಸಮಾಡಿ ದರು. ಅನಂತರ ಸೌ|| ಭಾಗೀರಥೀಬಾಯಿ ಕಟೋಪ ಇವರು ಸದರಿ ಪಂಡಿತಜಿಯವರ ವಿಷಯವನ್ನೇ ತೆಗೆದು ಕೊಂಡು ಇನ್ನಿಷ್ಟು ಜನರಿಗೆ ಆನಂದವಾಗುವಂತೆ ಉಪ ನ್ಯಾಸ ಮಾಡಿದರು ೪ ಮೇಲೆ ಅಧ್ಯಕ್ಷಪೂಜ್ಯರು, ಪಂಡಿತರು ಭಾಷಣದ ಅದಿಯಲ್ಲಿ 'ನಾನೊಬ್ಬ ಶಾಲಾ ಮಾಸ್ತರನಿದ್ದೇನೆ' ಎಂದು ಉದ್ಗಾರ ತೆಗೆದಿದ್ದರೂ, ಆನಂತ್ಯಾಗಿ 'ಪಂಡಿತರು ಶಾಲಾಮಾಸ್ತರನಿದ್ದೇನೆಂ ಬುದು' ಅವರ ಸ್ವಭಾವಸಿದ್ಧ ಗುಣವಾಗಿದೆ ತುಂಬಿದ ಕೊಡ ತುಳುಕುವುದಿಲ್ಲ ಎಂಬುವಂತೆ, ಇದೇ ಪಂಡಿತರ ಅಮೃತಹಸ್ತದಿಂದ ನಮ್ಮಂಥ ಗುರುವರ್ಗದ ವರು, ಸನ್ಯಾಸಿಗಳು ಅನೇಕಪುರಾಣಕರು, ಕೀರ್ತನ ಕಾರರು ಆಗಿ ಜಗತ್ತಿನಲ್ಲಿ ಪ್ರಸಿದ್ಧರಾಗಿದ್ದಾರೆ. ಆದರೂ ಅವರ ಈ ರೀತಿ ಉದ್ಗಾರವು ಸಹಜ ವಿನಯವನ್ನು ತೋರುಕುತ್ತದೆ ಎಂದು ಅವರ ಅಭಿಪ್ರಾಯವಾಗಿ ಅವರು ಮಾಡಿದ ಭಾಷಣವನ್ನು ಸ್ವತಿಪಾದನೆಮಾಡಿ ಒಳ್ಳೆ ಕಳಕಳಿಯಿಂದ ಸನುಪದೇಶವನ್ನಿತ್ತರು ಆ ಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಸದರಿ ಜಗದ್ಗುರು ಪಂಡಿತಾರಾಧ್ಯರ ಗುಹೆಯ ಛಾಯೆ ಶ್ರೀ ಬಾಲಶಿವಸ್ವಾಮಿಗಳ ಶ್ರವಣಮಾಸದ ಶಿವ ಲಿಂಗಾನುಷ್ಠಾನವೂ ಬ್ರಹ್ಮಮಠದಲ್ಲಿ ಪಾದಪೂಜಾಮ ಹೋತ್ಸವವೂ ನೆರವೇರುತ್ತಿರುವರು ನಿತ್ಯವೂ ಸ್ಥಳ ಪರಸ್ಥಳದವರು ಒಳ್ಳೆಯ ಭಕ್ತಿಯಿಂದ ಬಂದು ಸದರಿ ಶ್ರೀಗಳವರ ತಿರ್ಥಪ್ರಸಾದ ದರ್ಶನಾತೀರ್ವಾದಗಳನ್ನು ಪಡೆದುಕೊಂಡು ಧನ್ಯರಾಗುತ್ತಿರುವರು ಇಂಥ ದಿವ್ಯ ಜ್ಯೋತಿಗಳೇ ಜಗತ್ತಿನಲ್ಲಿ ಹೆಚ್ಚಾಗಿ, ನಮ್ಮಂಥ ಪಾಮರರನ್ನು ಉದ್ಧಾರ ಮಾಡಲೆಂದು ಜಗದಾಚಾರ್ಯರ ಚರಣಸನ್ನಿಧಾನಗಳಲ್ಲಿ ಪ್ರಾರ್ಥಿಸುವೆನು.

ಸೌ|| ಭಾಗೀರಥೀಬಾಯಿ ಕಟೋಪ,
ಸೋಲಾಪುರಸಿಟಿ

ಶ್ರೀಜಗದ್ಗುರು ಭಜನಾಸಂಘದವರ ಸೇವೆಯು

ಶ್ರೀ ರೇವಣಸಿದ್ಧ ಶಿವಾಚಾರ್ಯ ಪಟ್ಟದಸ್ವಾಮಿಗಳು, ಬ್ರಹ್ಮನ್ಮಠ ಚಿಕ್ಕಮಂಡೂರ ಇವರು ಸಿಗ್ಗಾವಿಗ್ರಾಮದಲ್ಲಿ ಸಭೆಗಳನ್ನು ಮಾಡಿ ಅಲ್ಲಿಯ ಕಾರ್ಯವನ್ನು ಪೂರೈಸಿಕೊಂಡು ಬಂಕಾಪುರಗ್ರಾಮಕ್ಕೆ ಆಗಮಿಸಿದರು. ಭಜನಾಸಂಘದವರು ಫಲಪುಷ್ಪಪಾಣಿಗಳಾಗಿ ಜಗದಾಚಾರ್ಯರ ಮೇಲೆ ಬಹುಮನೋಹರವಾಗಿ ಭಜನೆಯನ್ನು ಮಾಡುತ್ತ ಸಂದರ್ಶಿಸಿದರು. ಆಗ್ಗೆ ಶ್ರೀಸ್ವಾಮಿಗಳು ಆನಂದತುಂದಿಲಹೃದಯರಾಗಿ ಭಜನೆಯನ್ನು ಏಕೆ ಮಾಡಬೇಕು? ಇದರ ಪ್ರಯೋಜನವೇನು? ಎಂಬ ವಿಷಯದಮೇಲೆ ಭಾಷಣಮಾಡುತ್ತ ದೋಷವನ್ನು ಕಳೆದುಕೊಂಡು ಪುಣ್ಯಶರೀರಿಗಳಾಗುವದಕ್ಕೂ ಶಿವಸಾಯುಜ್ಯವನ್ನು ಪಡೆಯುವದಕ್ಕೂ ಭಜನಾದಿಗಳೇ ಕಾರಣವಾಗಿವೆ. ಸದ್ಗುರುಗಳಲ್ಲಿ ಭಕ್ತಿಯುತರಾಗಿ ಪೇಟಿ, ತಬಲಾ, ಜಾಂಜು ಮೊದಲಾದ ಸಂಗೀತದ ಸಾಮಗ್ರಿಯೊಡನೆ ಮಾಡುವ ಭಜನೆಯನ್ನು ಕೇಳಿ ಸರ್ವರೂ ಪವಿತ್ರವಾಗುವದಕ್ಕೆ ಸಂದೇಹವಿಲ್ಲ. ಕೆಲಕೆಲವರು ಹಗಲಿರುಳು ಹರಟೆಯನ್ನು ಕೊಚ್ಚಿ ಭಗವನ್ನಾಮಸಂಕೀರ್ತನವನ್ನು ಮಾಡದೆ ನಿರರ್ಥಕವಾಗಿ ಕಾಲಕಳೆಯುವುದುಂಟು. ಇಂತಹ ಸಾಸ್ತಿಕ್ಯಕಾಲದಲ್ಲಿ ನವತರುಣರಾದ ನೀವುಗಳು "ಸಂಘೇ ಶಕ್ತಿಃ" ಎಂಬಂತೆ ಸಂಘಶಕ್ತಿಯು ಳ್ಳವರಾಗಿ ಆನಂದದಿಂದ ಭಜನೆಯನ್ನು ಮಾಡುವದು ಬಹು ಸ್ತುತ್ಯವಾಗಿದೆ ಪ್ರತಿಯೊಂದು ಗ್ರಾಮದ ದೇವಸ್ಥಾನ ಗುರುಮಠಗಳಲ್ಲಿಯೂ ಒಗೆಗಳಲ್ಲಿಯೂ ಕೋಳಿ ಕೂಗುವ ಸಮಯದಲ್ಲಿ ಸಮಸ್ತರು ಮುಖಪ್ರಕ್ಷಾಲನ ಮಾಡಿ ತ್ರಿಪುಂಡ್ರವ ಧರಿಸಿ ಪೇಟಿ, ತಬಲಾ, ತಪ್ಪಡಿ, ಜಾಂಜು, ಜಗದ್ಗುರು ಲಿಂಗೋದ್ಭವಮೂರ್ತಿ ಪಂಚಾಚಾರ್ಯರ ಭಜನಾಸಂಘವೆಂದು ಬರೆದ ಬೋರ್ಡುಹಿಡಿದು ಕೊಂಡು ಎಲ್ಲರೂ ಒಂದೇ ಶಿಸ್ತಿನಿಂದ ಭಜನೆಯನ್ನು ಶ್ರಾವಣ ಆದಿಯಾಗಿ ಗಣೇಶಚೌತಿವರೆಗೆ ಪ್ರಾತಃಕಾಲದಲ್ಲಿ ಭಜನೆಯನ್ನು ಮಾಡುತ್ತ ಪ್ರಭಾತಫೇರಿಯನ್ನು ಮಾಡಬೇಕೆಂದು ಸರ್ವರಿಗೂ ಬೋಧಿಸಿದರು.

ಭಜನೆಗೆ ಆರಂಭವಾಯಿತು. ಇದೇ ಸೋಮವಾರದಿಂದ ಸ್ತೀಪುರುಷರು ಜಗದಾಚಾರ್ಯರ ಚಿತ್ರಪಟವನ್ನು ಪೂಜೆಮಾಡಿ ಹೂಮಾಲೆಗಳನ್ನು ಹಾಕಿ ನಮಸ್ಕರಿಸಿ ಧನ್ಯರಾಗುತ್ತಲಿದ್ದಾರೆ. ಬಾಲಬಾಲಕಿಯರು ಜಾಗರೂಕರಾಗಿ ದೇವಗುರುಗಳಲ್ಲಿ ಭಕ್ತಿಯನ್ನು ತೋರಿಸಿ ಧನ್ಯರಾಗುವದೇ ಶ್ರಾವಣಮಾಸದ ಫಲವಾಗಿದೆ. ಪ್ರತಿಯೊಂದು ಊರಿನವರೂ ಇದರಂತೆ ಭಜನೆಯನ್ನು ಮಾಡುತ್ತ ಬಂದರೆ ಮಾರಿಕಾಜ್ವರ ಪೀಡೆ ವಿಶಾಚಿಗಳ ಬಾಧೆಯಿಂದ ದೂರರಾಗಿ ದೇಶಮಧ್ಯದಲ್ಲಿ ಮಳೆಬೆಳೆಗಳು ಚೆನ್ನಾಗಿ ಆಗಿ ಸರ್ವರೂ ಆರೋಗ್ಯಭಾಗ್ಯದ ಶಿಖರವನ್ನೈದುವರು.

ಬಸಪ್ಪ ಸೊಪ್ಪಣ್ಣವರ ಖಾಲಿ. ಬಂಕಾಪುರ.

ಸರ್. ಶೆಟ್ಟರ ನಿಧನದ ಬಗ್ಗೆ ಶೋಕಸಭೆ, ಬಾಸೆ.

ರಾಜಸಭಾಭೂಷಣ, ದಿವಾನ ಬಹಾದೂರ, ಸರ್ ಕೆ. ಪಿ ಪುಟ್ಟಣ್ಣಶೆಟ್ಟರು ಬೆಂಗಳೂರ್ದಲ್ಲಿ ತಾ||೩೦-೭-೩೪ರಲ್ಲಿ ಶಿವೈಕ್ಯರಾದ ಬಗ್ಗೆ ಬಾಸೆಯಲ್ಲಿ ತಾ||೩೧.೭.೩೪ರಲ್ಲಿ ಏರ್ಪಾಡಾಗಿರುವ ದೇವಾಲಯದಲ್ಲಿ ಸಮಾ ಜಭೂಷಣ ಶ್ರೀ ಝುಂಜೇ ವಕೀಲ ಸೋಲಾಪುರ ಇವರ ಅಧ್ಯಕ್ಷತೆಯಲ್ಲಿ ದುಃಖಪ್ರದರ್ಶನಕ್ಕಾಗಿ ಜಾಹೀರಸಭೆಯು ಕೂಡಿದ್ದಿತು. ಸಭೆಯಲ್ಲಿ ಶ್ರೀ ಅಧ್ಯಕ್ಷರು, ಶ್ರೀ ಹಾಲಿಕರರು, ಶ್ರೀ ಶಿವಾಜಿ ಪರುಶುರಾಮರು, ಶ್ರೀ ಪರಾಂಡಕರ ಸ್ವಾಮಿಗಳ ಮತ್ತು ಪತ್ರೀರಾಮಲಿಂಗಯ್ಯನವರ ದುಃಖಪ್ರದರ್ಶಕ ಭಾಷಣಗಳಾಗಿ ದುಃಖಪ್ರದರ್ಶನದ ಕರಾವ ಮಾಡಲ್ಪಟ್ಟು ಸದರಿ ಕರಾವನ್ನು ಅವರ ಕುಟುಂಬದವರಿಗೆ ಕಳುಹಿಸುವ ಅಧಿಕಾರವು ಅಧ್ಯಕ್ಷರಿಗೆ ಕೊಡಲ್ಪಟ್ಟಿತು. ಸರ್ ಶೆಟ್ಟರವರು ಮೈಸೂರಸಂಸ್ಥಾನದಲ್ಲಿ ತಮ್ಮ ವಿದ್ವತ್ತ್ವೆಯಿಂದಲೂ ಸೌಜನ್ಯದಿಂದಲೂ ಮತ್ತು ಪ್ರಾಮಾಣಿಕತನದಿಂದಲೂ ಕಾರಕೂನಸ್ಥಳದಿಂದ ಮಂತ್ರಿಪದವಿಯವರೆಗೂ ಏರಿದರು. ಅವರು ಸಮಾಜದ ಅನೇಕ ಕಾರ್ಯಗಳನ್ನು ಮಾಡಿರುವರು ದೇಶದ ಉನ್ನತಿಯಸಲುವಾಗಿ ಅವರು ಮಾಡಿರುವ ಕಾರ್ಯಗಳು ಬಹುಬೆಲೆಯಾಗಿರುತ್ತವೆ. ಅವರು ದಾನ ವೀರರೆಂಬುದು ಅನೇಕಸಂಸ್ಥೆಗಳಿಗೆ ಮೂರುಲಕ್ಷರೂಪಾಯಿಗಳಮೇಲುಪಟ್ಟು ಕೊಟ್ಟಿರುವದರಿಂದಲೇ ಗೊತ್ತಾಗುವದು. ಈಗ್ಗೆ ಮೂರು ನಾಲ್ಕುತಿಂಗಳುಗಳ ಪೂರ್ವದಲ್ಲಿ ಸರ್ ಶೆಟ್ಟರವರು ಬೆಂಗಳೂರಿನಲ್ಲಿರುವ ವೀರಶೈವ ಫ್ರೀ ಬೋರ್ಡಿಂಗಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿರುವರು. ಅವರು ಕೈಲಾಸವಾಸಿಗಳಾದುದರಿಂದ ಹಿಂದುಸ್ಥಾನದಲ್ಲಿಯ ಕರ್ತವ್ಯದಕ್ಷ ಮಹಾನ್ ಶ್ರೀಮಂ ವಿಭೂತಿಯು ಇಲ್ಲದಂತಾಗಿ ಹಿಂದುಸ್ಥಾನದ ಭಯಂಕರ ಹಾನಿಯಾದಂತಾಗಿದೆ. ಇತ್ಯಾದಿ ವಿಷಯಗಳಮೇಲೆ ವಕ್ತೃಗಳ ಭಾಷಣಗಳಾದವು.

ರಾಮಲಿಂಗಪ್ಪ ಉಪ್ಪಾರಾವ ಪತ್ರೀ, ಬಾಸೆ.

ಶ್ರೀಮಜ್ಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು.

ಪುರಾಣಾಶ್ರವಚನ, ಸೊಲ್ಲಾಪುರ

ವಾರ್ಷಿಕಪದ್ಧತಿಯಂತೆ ಈ ವರ್ಷವೂ ಶ್ರೀಮಾನ್ ಗುರುಸಿದ್ಧಪ್ಪಶೆಟ್ಟಿ ಇವರ ಮನೆಯಲ್ಲಿ ಸೌ|| ಭಾಗೀರಥೀಬಾಯಿ ಕಟೋಪ ಇವರು 'ಪದ್ಮರಾಜಪುರಾಣ' ಎಂಬ ಪುರಾಣವನ್ನು ಹೇಳಲು ಪ್ರಾರಂಭಮಾಡಿರುವರು. ಶ್ರಾವಣಶುದ್ಧ ಪಂಚಮಿಯಿಂದ ಶ್ರೀ|| ಪ|| ಬ್ರ|| ಜೈನಾಪುರಶ್ರೀಗಳವರು ದಯಮಾಡಿಸಿ ಶುಭಾಶೀರ್ವಾದವನ್ನಿತ್ತರು. ತಾ ೪ ಗುರುವಾರದ ದಿವಸ ಸೊಲ್ಲಾಪುರಕ್ಕೆ ದಯಮಾಡಿಸಿದ ಶ್ರೀ ವಿರೂಪಾಕ್ಷಶಾಸ್ತ್ರಿಗಳವರು ವಂದಲಿ ಇವರು ಸೌ ಭಾಗೀರಥೀಬಾಯಿಯವರ ಪುರಾಣಶ್ರವಣಕ್ಕೆ ದಯಮಾಡಿಸಿದ್ದರು. ಪುರಾಣದ ಕವಿತ್ವಸರಣಿಯನ್ನೂ ಸೌ ಭಾಗೀರಥೀಬಾಯಿಯವರು ವಿವರವಾಗಿ ಹೇಳುವ ಶೈಲಿಯನ್ನೂ ವಿಮರ್ಶಿಸಿದ್ದಾದರೆ ಹಾಲಿನಲ್ಲಿ ಸಕ್ಕರೆಯೆ ಬೆರೆದಂತಾಗುವುದೆಂದು ಶುಭಾಶೀರ್ವಾದಪೂರ್ವಕ ಉಪನ್ಯಾಸಮಾಡಿ ವೀರಶೈವಸಮಾಜಭೂಷಣನೆನಿಸಿರುವ ತಂತಹ ಮಾತೃಶ್ರೀಯವರು ಹೆಚ್ಚಲೆಂದು ಜಗದಾಚಾರ್ಯರನ್ನು ಪ್ರಾರ್ಥಿಸಿದರು. ನಿತ್ಯವೂ ಸ್ತ್ರೀಪುರುಷರಾದಿಯಾಗಿ ಸರ್ವರೂ ಪುರಾಣಕ್ಕೆ ಬರುತ್ತಿರುವರು. ಪುರಾಣದ ಪ್ರಾರಂಭದಲ್ಲಿ ಬಾಲಕಿಯರು ಈಶಸ್ತುತಿ. ಜಗದಾಚಾರ್ಯರ ಸ್ತೋತ್ರಗಳನ್ನು ಹಾಡಿ ಜನರನ್ನು ಆನಂದಗೊಳಿಸುತ್ತಿರುವರು.

ಓರ್ವ ಶ್ರೋತೃ,
ಸೊಲ್ಲಾಪುರ

ಕಾಶೀ ವಿಶ್ವವಿದ್ಯಾಲಯದಲ್ಲಿ ಕೆಳ್ಳರಿಗೂ ವಿದ್ಯಾರ್ಥಿಗಳಿಗೂ ಹೊಡೆದಾಟವಾಗಿ ಸ್ವಾಜಹಾನ್!

ಕಾಶೀ ವಿಶ್ವವಿದ್ಯಾಲಯದ ಹರಸಂದನ ಲಾಡ್ಜನ್ನು ತಾಲ್ಲುಜನೆ ಕಳ್ಳವಿಹೋಕ್ಕಾಲು ಜಿಲ್ಲೆ ವಿದ್ಯಾರ್ಥಿಗಳಿಗೂ ಅವರಿಗೂ ನಡೆದ ಜೊತೆದಾಟದಲ್ಲಿ ಮೂವರು ವಿದ್ಯಾರ್ಥಿಗಳು ಗಾಯಗೊಂಡರು ಒಬ್ಬ ದರೋಡೆಯೋರನು ಗಾಯಗೊಂಡ ವಿದ್ಯಾರ್ಥಿಗಳಲ್ಲಿ ಒಬ್ಬನ ಸ್ಥಿತಿಯು ಚಿಂತಾಜನಕವಾಗಿದೆ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಪುರದಲ್ಲಿರುವ ಪತ್ರಿಯೊಂದು ಗುರುವರ್ಗದ ಮಕ್ಕಳ್ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಹಾಧಿಕಾರಿಗಳು ನಮುಪರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಮೋಸಗಿಡುವರು. ಈ ಅನ್ಯವಸ್ಥೆಯಿಂದ ಅನೇಕ ಸುಶಿಕ್ಷಿತವರ್ಗಕ್ಕೆ ತಮ್ಮ ಶಿಷ್ಯನ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಿಸಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಆದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬರುವ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪರೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೦ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ಕೋ	ಮೂಲ್ಯ
ಸ್ವರ್ಣಮಕರಧ್ವಜ	೧	೫೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
.. ೩ ನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಸುಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತೀವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಾಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಪಂಚಲೋಹಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೫—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕ್ಯಾಚಿಪ್ಪಿನ ಭಸ್ಮ	೧	೦—೮—೦
ಸಾವಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರಿತಕಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯ ಪುಟಿ	೧	೧—೦—೦
ಶಿಲಾಜಿತ ಅಗ್ನಿ ಪುಟಿ	೧	೦—೮—೦

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್, ಒಖಿಮಠ, ಜಿಲ್ಲಾ ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯು ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾದಿದ್ದ ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇವರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ್ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿರೋವರ್ತಿಯಾದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾಸಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಕರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಆಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳೆಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೫೦೦ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಸಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಹೆಡೆಕೇಪನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿರೋಜಿಸುವುದಕ್ಕೋಸ್ಕರ ಕೆಲವು ಹಸ್ತವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ತೋಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿಸಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯಿಸ್ಸದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮೀಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್.

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧಿತ್ತು ಅಮೃತಲೀಲೆಗಳಿಂದ ಕೂಡಿದ ಫೋಟೋ ಸೈಜು ೫೦×೧೪ ಬೆಲೆ ೧೯ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ಧಧೀಚಿ, ವ್ಯಾಸ, ಸಾನಂದ, ದೂರ್ವಾಸ
ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬
ಸಮ್ಯಕ್ ಪೀಠಾರೋಪಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೯ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೯ ೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ . ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಕ್ಷಿಪ್ತಾಭಿಷೇಕ ಮಾಡುವ ಫೋಟೋ . ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಸ್ವಾರ್ಥನಾನುಸಾರವಾಗಿ ವಿಕಕಾಲವಲ್ಲಿಯೇ ಮೂರುಕೋಟಿ ಗುರುರೂಪವನ್ನು
ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೯ ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ ೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ . ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೯ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೯ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೯ ೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ ೦—೦—೯
ಹಿಮವತ್ಪರ್ವತದ ಮೇಲ್ಭಾಗದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅದ್ದೂರಿಯ ಪಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ. ಕಳುಹಿಸುವದಕ್ಕಾಗುವುದಿಲ್ಲ ೫ ರೂಪಾಯಿಗಳ
ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜ ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯವು ಪುಡಿಯಿಂದ ಸ್ವಸ್ಥವಾಗಿವ ವ್ಯಾಧಿಗಳು ಯಾವಮೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ದನ್ಯಾದಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂರಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ಪಸ್ಪವಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತವೆ ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪ್ರಭುವಾಗಿ ಉಪಯೋಗಿಸುತ್ತಾರೆ. ಮಾದಾ ಸೀಸೆ ಪ್ರಗಸಟ್ಟೆ ಕ್ರಾಂಸಲಾದೀತು ಬುಡ್ಡಿ ಒಂದಕ್ಕೆ ಕ್ರಯ ರೂ ೦ ಲ-೦ ವಿ ಪಿ ೦ಳ-೦ ಡಜನ್ ಒಂದಕ್ಕೆ ಕ್ರಯ ರೂ ೭ ಲ ೦ ವಿ ಪಿ ೫ ಆಣೆ.

ನಿನ್ನ ವಿಶ್ವಾಸವನ್ನು ಜಯಿಸುವಂತೆ ಒರೆಯಿರಿ

ಗುರುಬಸವ ಆಂಡ್ ಕಂಪೆನಿ ಲಿಮಿಟೆಡ್,

[16] ಪೋ ಬಾ ನಂ೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೩ ಆಣೆ
ಗೋತ್ರಸೂತ್ರಸಟ (೫ನೆಯ ಆವೃತ್ತಿ) .... ೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ .... ೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .... ೧ ಆಣೆ
ಬಸವಾದಿನಿಜಶತ್ರ್ವವರ್ಪಣ (೪ನೆಯ ಆವೃತ್ತಿ) .... ೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) .... ೨ ಆಣೆ
ಪಂಚಾಚಾರ್ಯಪ್ರಭಾಕರ .... ೨ ಆಣೆ
ಶ್ರೀಗುರುತತ್ತ್ವಪದಗಳು .... ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ . .... ೨ ಆಣೆ
ವೀರಶೈವಮತಮೀಮಾಂಸಾ .... .. ೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ
A brief life sketch of Pandit Sri Kashinatha Shastri (*English*) 4 As
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) .... ೬ ಆಣೆ
ಸಿದ್ಧಾಂತ ಶಿಖಾಮಣಿ (ಸೂಲಮಾತ್ರ ಚಕ್ಕಸೈಜು) ೬ ಆಣೆ
ವೀರಶೈವಮಹಾತ್ಮರು ... ... ೮ ಆಣೆ
ಬಸವಧ್ವಾಂತವಿನಾಶಕರ (೨ನೆಯ ಆವೃತ್ತಿ) . . .... ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರ್ಯುಲವಾರಿ ಭಾಷಣಮು (ತೆಲುಗು) ೮ ಆಣೆ
Speeches by Pandit Shri Kashinatha Shastri (*English*) 12 As.

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ... ೧೩ ಆಣೆ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ಸಹಿತ ಪ್ರಮಾ) . ೪ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .. ೨ ರೂ
ವೀರಶೈವಸಿದ್ಧಾಂತಸುಧಾಕರ .. .. ೨ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) ೧ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .. ೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ) ೧ ರೂ
ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ) ೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಜಾಮೀಸಟ್ಟದಲ್ಲಿ) .... ೧ ರೂ
ವೈದಿಕಶಿವಪೂಜಾವಿಧಿ (ವೈದಿಕತತ್ತ್ವಯುಕ್ತವಾದ ಅತ್ಯಂತ ಸುಂದರಮುದ್ರಣ) ೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೩ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೩ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ ... . ೧೩ ಆಣೆ
ವೀರಶೈವರತ್ನ (ಮರಾಠಿ) . .. ... ೧ ರೂ
ಲಿಂಗಧಾರಣಚಂದ್ರಿಕಾ (ಸಂಸ್ಕೃತ) . ೩ ರೂ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) . ೧ ರೂ.
ವೀರಶೈವೇಂದುಶೇಖರ (ಸಂಸ್ಕೃತ) . ೧ ರೂ.
ನಂದಿಕೇಶ್ವರಕಾರಿಕಾ (ಸಂಸ್ಕೃತ) ೨ ಆಣೆ
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) .. ೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್ —ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಮಹಾವಿದ್ವಾನ್ ವೇ|| ಶಿರಸಿ ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ತೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಸೀಮಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋಪ್ಪರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾ ವೇ॥ ತಿರಸಿ ಗುರುಶಾಂತತಾಸ್ತ್ರಿಗಳು.

ಒಳವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ೪ ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ ನೇ ಆಗಸ್ಟ್ ೧೯೩೮ [ಸಂಚಿಕೆ ೧೫

ಒಳದೇಶದ ವೃತ್ತಾಂತಗಳು.

ನಿವೃತ್ತರಾದ ಶಸ್ತ್ರಚಿಕಿತ್ಸಾಪ್ರವೀಣ ಡಾ॥ ಎನ್ ಕುಬ್ಬರಾಯರ ಸ್ಥಾನಕ್ಕೆ ಸೀನಿಯರ್ ಸರ್ಜನ್ನರಾದ ಖಾಜಸೇವಾಸಕ್ತ ಡಾ॥ ಬಿ ಕೆ ನಾರಾಯಣರಾಯರು ಮೆಡಿಕಲ್ ಕೌನ್ಸಿಲ್ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ

ಕಳೆದ ಜೂನ್ ತಿಂಗಳಲ್ಲಿ ನೆರವೇರಿದ ನ್ಯಾಯವಿಧಾಯಕಸಭೆಯಲ್ಲಿ, ಮೈಸೂರು ಸಂಸ್ಥಾನದಲ್ಲಿ ಮತಾಂತರ ಕೊಂದಿದವರಿಗೆ ದಾಯಭಾಗದ ಹಕ್ಕನ್ನು ಕಾಪಾಡುವ ಮಸೂದೆಯು ಪಾಸಾಯಿತಷ್ಟೆ ! ಈ ಮಸೂದೆಗೆ ಶ್ರೀಮನ್ಮಹಾರಾಜರವರು ಒಪ್ಪಿಗೆಯನ್ನಿತ್ತಿರುವರೆಂಬ ತಿಳಿದು ಬರುತ್ತದೆ

ಮೈಸೂರು ಯೂನಿವರ್ಸಿಟಿಯ ವಾರ್ಷಿಕ ಮಹಾಸಭೆಯು ಈ ಸಾರಿ ಆಕ್ಟೋಬರ್ ತಿಂಗಳು 6ನೆಯ ತಾರೀಖಿನ ಗುರುವಾರ ರಾಜಧಾನಿಯಲ್ಲಿ ನಡೆಯುವ ದೆಂದೂ, ರಾಜತಂತ್ರಜ್ಞರಾದ ರೈಟ್-ಆನರಬಲ್ ಸರ್ ತೇಜ್‌ಬಹದ್ದೂರ್ ಸಪ್ರುರವರು ಆ ಸಭೆಯಲ್ಲಿ ಭಾಷಣ ಮಾಡಲೊಪ್ಪಿರುವರೆಂದೂ ತಿಳಿದುಬರುತ್ತದೆ

ಭದ್ರಾವತಿ ಉಕ್ಕಿನಕಾರ್ಖಾನೆಯಲ್ಲಿ ಕೆಲಸ ನೂಡುತ್ತಿರುವಾಗ್ಗೆ ಜೀಕೆಯ ಅನಾಹುತಕ್ಕೆ ಸಿಕ್ಕಿ ಸತ್ತುಹೋದ ಬುವ್ಯತೀರ ಎಂಬವನ ಕುಟುಂಬವರ್ಗದವರಿಗೆ ಪಾಪತಿ ಮಾಡಲು ಆ ಕಾರ್ಖಾನೆಯವರು 1200 ರೂ ಗಳನ್ನು ದೇವಣಾತಿ ಮಾಡಿರುವರೆಂದೂ, ಮೇಲ್ಕಂಡವನ ನಾರಸು ದಾರರು ಈ ಲಾಗಾಯಿತು ಮೂರುತಿಂಗಳೊಳಗೆ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಂಡು ಈ ಪರಿಹಾರಪ್ರವ್ಯವನ್ನು ಪಡೆಯಬಹುದೆಂಬೂ ಪ್ರಕಟವಾಗಿದೆ

ರಾಜಧಾನಿಯಲ್ಲಿರುವ ಬಕ್ಷಿ ನರಸಪ್ಪನವರ ದೇವಸ್ಥಾನಕ್ಕೆ ಸೇರಿದ ಅಂಗಡಿ ಮಳಿಗೆಗಳ ಬಾಬತು ಮುನಿಸಿಪಲ್ ಕಂದಾಯದ ಬಾಕಿ ಬರಬೇಕೆಂದು ಮೈಸೂರು ಮುನಿಸಿಪಾಲಟಿಯವರು ದಾವಾ ಮಾಡಿದ್ದರು ಮುನಸೀಸರು ವಿಚಾರಣೆ ಮಾಡಿ ಆ ಅಂಗಡಿಗಳಿಗೆ ತೆರಿಗೆ ಹಾಕಕೂಡದೆಂದು ಕೀರ್ತಿಶೇಷರಾದ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಅಪ್ಪಣೆಯನ್ನು ಸರಿಸಿ ಆಗಿನ ಚೀಫ್ ಕಮಿಷನರಿಂದ ಕೊಡಲ್ಪಟ್ಟಿದ್ದ 1861 ನೇ ಇಸವಿಯ ಸನ್ನದು ಇರುವದನ್ನು ಪರಾಮರ್ಶಿಸಿ, ತೆರಿಗೆಯನ್ನು ಹಾಕಕೂಡದೆಂದು ತೀರ್ಮಾನಿಸಿದರು

ಮೈಸೂರು ಮುನಿಸಿಪಾಲಿಟಿಯವರು ಇಲ್ಲಿಯ ಕ್ಷೌರಿಕರ ಮೇಲೆ ತೆರಿಗೆಯನ್ನು ಹಾಕಬೇಕೆಂದು ಮಾಡಿದ ತೀರ್ಮಾನವನ್ನು ಪ್ರತಿಭಟಿಸಲು ನಗರದ ಕ್ಷೌರಿಕರೆಲ್ಲರೂ ಶ್ರಾವಣ ಉಪಾಕರ್ಮಕಾಲವಾದ 9, 10, 11ನೆಯ ತಾರೀಖುಗಳಲ್ಲಿ ಯಾರಿಗೂ ಕ್ಷೌರವನ್ನು ಮಾಡಕೂಡದೆಂದು ಮುಷ್ಕರವನ್ನು ಹೂಡಿದರು. ಇದರಿಂದ ನಗರದಲ್ಲಿರುವವರಿಗೆ ಬಹಳ ತೊಂದರೆಯಾಯಿತು. ಅನೇಕರು ಕಸ್ಯಾನುಗಳಿಗೆ ಹೋಗಿ ಅಲ್ಲಿ ಜಾಲ, ಉಪಾಕರ್ಮವಿಧಿಗಳನ್ನು ನೆರವೇರಿಸಿದರು. ಕೆಲವರು ಒಂದಕ್ಕೆ ನಾಲ್ಕು ದಂಡತೆತ್ತು ಗುಪ್ತವಾಗಿ ಕೆಲವರಿಂದ ಜಾಲ ಕರ್ಮವನ್ನು ನೆರವೇರಿಸಿದರು

ಹೈದರಾಬಾದ್ ಸಂಸ್ಥಾನದಲ್ಲಿ ವೇಶ್ಯೆಯರಮೇಲೆ ನಿರ್ಬಂಧ!

ಹೈದರಾಬಾದು ಸಂಸ್ಥಾನದಲ್ಲಿ ಹೊರಗಿನಿಂದ ವೇಶ್ಯೆಯರು ಬಂದು ನೆಲಸುತ್ತಿರುವುದರಿಂದ ಅಲ್ಲಿ ಹೊಸ ಸಮಸ್ಯೆಗಳುಂಟಾಗಿವೆ ಆದುದರಿಂದ ಹೊರಗಿನ ವೇಶ್ಯೆಯರ ಸಮಾಗಮವನ್ನು ತಡೆಗಟ್ಟುವುದು ಅವಶ್ಯಕವೆಂದು ಹೈದರಾಬಾದ್ ಶಾಸನಸಭೆಯ ಸದಸ್ಯರಾದ ಶ್ರೀ ಉಬ್ಬಲ್ಲ ಪಾಪಾರವರು ಆಭಿಪ್ರಾಯಪಡುತ್ತಾರೆ. ಇದಕ್ಕಾಗಿ ಅವರು ಒಂದು ಹೊಸ ಮಸೂದೆಯನ್ನು ಸಿದ್ಧಗೊಳಿಸಿದ್ದಾರೆ. ಈ ಮಸೂದೆಯಲ್ಲಿ ಎಂಟು ವಿಧಿಗಳಿವೆ ಹೊರಗಿನಿಂದ ಬರತಕ್ಕ ವೇಶ್ಯೆಯರನ್ನು ಅವರು ಸಂಸ್ಥಾನದೊಳಕ್ಕೆ ಆಗಮಿಸಿದ ಏಳು ದಿನಗಳೊಳಗಾಗಿ ಹೊರಕ್ಕೆ ಕಳುಹಿಸುವ ಮತ್ತು ಅವರು ಅಲ್ಲಿ ಇರುವಷ್ಟು ದಿನಗಳ ತನಕ ನಿಯಮಿತವಾದ ಸ್ನಾನದಲ್ಲಿ ಇರಿಸುವ ಅಧಿಕಾರವನ್ನು ಹೈದರಾಬಾದು ನಗರದ ಪೋಲೀಸ್ ಕಮಿಷನರಿಗೂ ಮತ್ತು ಜಿಲ್ಲೆಗಳ ಸೂಪರಿಂಟೆಂಡೆಂಟರಿಗೂ ಕೊಡಲಾಗಿದೆ ಮತ್ತೊಂದು ವಿಧಿಯಪ್ರಕಾರ ಹೈದರಾಬಾದ್ ಸಂಸ್ಥಾನಕ್ಕೆ ಬರುವ ಅಂತಹ ಜನರು, ಪೋಲೀಸ್ ಶಾಖೆಯವರಿಗೆ ತಮ್ಮ ಆಗಮನದ ಸುದ್ದಿಯನ್ನು ಮೊದಲೇ ತಿಳಿಸಬೇಕೆಂತಲೂ ಇಲ್ಲವಾದರೆ ಅವರಿಗೆ ದಂಡ ಹಾಕಲಾಗುವದೆಂದೂ ತಿಳಿಸಲಾಗಿದೆ

ಪ್ರೇಮಕ್ಕಾಗಿ ಆತ್ಮಹತ್ಯೆ!

ಲಾಹೋರಿಗೆ ಹತ್ತು ಮೈಲಿ ದೂರದಲ್ಲಿ ರೈಲ್ವೆ ಕಂಬಿಗಳ ಮೇಲೆ ಒಬ್ಬ ಹಿಂದೂ ಯುವಕನ ಶವವು ಸಿಕ್ಕಿತು ಅವನ ಜೇಬಿನಲ್ಲಿ ಒಂದು ಕಾಗದವಿತ್ತು. ಆ ಕಾಗದದಿಂದ ಈ ಪ್ರಕರಣದ ವಿಚಾರವೆಲ್ಲ ಹೊರಬಿದ್ದಿದೆ ಆತ್ಮಹತ್ಯೆ ಮಾಡಿಕೊಂಡ ಹುಡುಗನು ಒಬ್ಬ ವೇಶ್ಯೆಯನ್ನು ಪ್ರೀತಿಸಿ ಅವಳನ್ನು ಮದುವೆಯಾಗೆಂದನಂತೆ! ಅದಕ್ಕವಳು ಒಪ್ಪಲಿಲ್ಲ ನಷ್ಟ ಶವವನ್ನು ನನ್ನ ಪ್ರೇಮಿ ವೇಶ್ಯೆಗೆ ಒಪ್ಪಿಸಬೇಕೆಂದು ಬರೆದು ಆತ್ಮಹತ್ಯ ಮಾಡಿಕೊಂಡನಂತೆ! ಪೋಲೀಸರು ಆ ವೇಶ್ಯೆಯನ್ನು ಕರಯಿಸಿ ವಿಚಾರಮಾಡುತ್ತಿದ್ದಾರೆ

ರಣಹದ್ದುಗಳಿಂದ ಮರಣ

ಜಗನ್ನಾಥಪುರದಲ್ಲಿ ದನ ಮೇಯಿಸುವವನೊಬ್ಬನು ದನಗಳನ್ನು ಕಾವಲಿಗೆ ಹೊಡೆಮಕೊಂಡು ಹೋಗುತ್ತಿರುವಾಗ್ಗೆ ಕೆಲವು ರಣಹದ್ದುಗಳು ಒಂದು ದನದಮೇಲೆ ಬಿದ್ದು ಕುಕ್ಕಿ ಪೀಡಿಸುವುದನ್ನು ಕಂಡು ಅವುಗಳನ್ನು ಓಡಿಸಲು ಹೋದನು. ಆದರೆ ತಮ್ಮ ಆಹಾರಕ್ಕೆ ಅಡ್ಡಿ ಎಂದ ಇವನಮೇಲೆ ಕೋಪಗೊಂಡ ಹದ್ದುಗಳು ಅವನನ್ನೇ ಮುತ್ತಿ ಕೊಂಬಬಿಟ್ಟವು.

ಸ್ಕಾಲರ್ಷಿಪ್ ಪರಿಸ್ಥಿತಿ

ಕಳೆದ 6ನೆಯ ತಾರೀಖಿನದಿವಸ ಮುಸ್ಲಿಂ ಗೂಡಚಾರನೊಬ್ಬನು ಗಾಯಗೊಳಿಸಲ್ಪಟ್ಟನು ಒಬ್ಬ ಯಹೂದ್ಯನು ಗುಂಡಿನೇಟಿಗೆ ಸಿಕ್ಕಿ ಮೃತನಾದನು ಸೈನಿಕರ ದಂಗೆ ಬೋರರ ಹೆರ್ಷಣದಿಂದ 26 ಜನ ಥಕಾಯಿತರು ಪುಡಿದರು 23 ಜನ ಗಾಯಗೊಂಡರು, 8 ಜನ ಸೆರೆ ಸಿಕ್ಕಿದರು ನೆಬ್ಲೂಸ್ ಬಳಿ ಅರಬರ ಬಸ್ಸೊಂದರಲ್ಲಿ ಪ್ರಯಾಣನೂಡುತ್ತಿದ್ದ ಬ್ರಿಟಿಷ್ ಕಾನ್ಸ್ಟೇಬಲನನ್ನು ಆವನ ಸಿಂದೆ ಕುಳಿತಿದ್ದ ಅರಬ್ಬಿ ಪ್ರಯಾಣಿಕನೊಬ್ಬನು ಗುಂಡಿಟ್ಟು ಕೊಂದು ಪರಾರಿಯಾದನು

ಮುಸ್ಲಾಸ್ ಕಾಂಗ್ರೆಸ್ ಮಂತ್ರಿಗಳಬಗ್ಗೆ ವಕೀಲರ ಅಸಮಾಧಾನ

ಮಂಗಳೂರಿನ ವಕೀಲರ ಸಂಘದವರು ಕಳೆದ ಮಂಗಳವಾರ ಸಭೆ ಸೇರಿ, ಮದರಾಸಿನ ಸಚಿವರಾದ ಮಾ॥ರಾ॥ ಸಿ ರಾಜಗೋಪಾಲಾಚಾರಿಯವರು ಮತ್ತು ಮಾ॥ ಕೆ. ರಾಮ್ ಪಣಿಕರವರು ತಾವು ವಕೀಲ ವೃಂದಕ್ಕೆ ಸೇರಿದವರಾಗಿದ್ದಾಗ್ಯೂ ಇತ್ತೀಚಿಗೆ ತಮ್ಮ ಸಂಚಾರದಲ್ಲಿ ಭಾಷಣಗಳನ್ನು ಮಾಡಿದಾಗ ವಕೀಲವೃತ್ತಿಯ ವಿಷಯದಲ್ಲಿ ನಿಂದಾಸ್ಪದವಾದ ಮಾತುಗಳನ್ನಾಡಿರುವುದು ವ್ಯಸನಕರವಾಗಿದೆಯೆಂದು ಒಂದು ನಿರ್ಣಯವನ್ನು ಆಸುನೋದಿಸಿರುತ್ತಾರೆ ಈ ಸಂಘದವರು ಕಾಂಗ್ರೆಸ್ ಸದಸ್ಯರ ಚುನಾವಣೆಗಳಾಗಿ ಅವಿಶ್ರಾಂತರಾಗಿ ಮಾಡಿದಿರುವಲ್ಲಿ ಅಂದ ಸಂಸ್ಥೆಯ ವಿಷಯದಲ್ಲಿಯೇ ಅವರುಗಳು ಪದೇಪದೇ ವಿರೋಧಭಾವನೆಯನ್ನು ವ್ಯಕ್ತಪಡಿಸುತ್ತಿರುವುದು, ಆ ಸಂಸ್ಥೆಗೇನೇ ಅಗೌರವ ಮಾಡಿದಂತಾಗುವದೆಂದು ಎಂದು ವಕೀಲರು ಅಭಿಪ್ರಾಯಪಟ್ಟಿರುತ್ತಾರೆ

ಸ್ವೀಕಾರ.

ಬಳ್ಳಾರಿ ಡಿ॥ ಹುಬ್ಬಿನಹಡಗಲಿ ಶಹರನಿವಾಸಿಗಳಾದ ಮಾ॥ರಾ॥ ಶ್ರೀಮಂತ ಗುರ್ರಿ ಹುಚ್ಚಪ್ಪನವರ ಗೃಹದಲ್ಲಿ ಶ್ರಾವಣ ಶು॥ 12 ಸೋಮವಾರ ಶ್ರೀ॥ ಷ॥ ಬ್ರ॥ ಪುರವ ಪಟ್ಟಾಧ್ಯಕ್ಷ ಸ್ವಾಮಿಗಳವರ ಸನ್ನಿಧಿಯಲ್ಲಿ ವೇ॥ ಬನ್ನಿಕಲ್ಲು ಬೃಹನ್ಮಠದ ಕೊಟ್ರಪ್ಪಶಾಸ್ತ್ರಿಗಳವರ ಪೌರೋಹಿತ್ಯದಿಂದ ಶ್ರೀಮತಿ ಲೆಟ್ಟು ಮುದ್ದಿರೇವಕ್ಕ, ಶ್ರೀಮತಿ ಸಜ್ಜನರ ವೀರಮ್ಮ, ಶ್ರೀಮತಿ ಹಣ್ಣಿ ಸಣ್ಣ ವೀರಮ್ಮ ಇವರಿಗೆ ಶಿವದೀಕ್ಷಾ ಸಂಸ್ಕಾರವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವೇ॥ ಹಂಚಿನಾಳು ಬೃಹನ್ಮಠದ ರುದ್ರಯ್ಯನವರಿಂದ ತೆಗೆಯಿಸಿದ 5 ರೂ ಗಳು ಮಾ॥ರಾ॥ ಸೊಪ್ಪಿನ ಗುರುಲಿಂಗಪ್ಪನವರದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಮದ್ರಾಸ್ ಅಖಿಲಭಾರತ ಕೈಗಾರಿಕಾ ಪ್ರದರ್ಶನದಲ್ಲಿ ಮೈಸೂರು ದಿವಾನ್‌ಸಾಹೇಬರ ಭಾಷಣ.

ಮಹಿಳೆಯರೇ ಮತ್ತು ಮಹಾಶಯರೇ,

ಈ ದಿನ ನಾನು ಮೈಸೂರು ಸಂಸ್ಥಾನವನ್ನು ಕುರಿತು ಭಾಷಣ ಮಾಡಬೇಕೆಂದು ಕೇಳಿದ್ದಾರೆ ನನ್ನ ಗಂತು ಮೈಸೂರು ಸಂಸ್ಥಾನವೆಂದರೆ ತುಂಬ ಪ್ರೇಮ ಆದರೆ ಪ್ರೇಮಿಗಳ ವರ್ಣನೆಗಳೆಂದರೆ ಅವರೆಹೊರತು ಉಳಿದವರಿಗೆ ಯಾವಾಗಲೂ ಬೇಸರವೂ ದಣಿವೂ ತಪ್ಪುವಂತಿಲ್ಲ ಆದಕಾರಣ ನನ್ನ ಉತ್ಸುಕತೆಯನ್ನು ಕೊಂಚ ಹತೋಟಿಯಲ್ಲಿಟ್ಟುಕೊಂಡು, ಮೈಸೂರು ಸಂಸ್ಥಾನದ ವಿಚಾರವಾಗಿ ನಿಷ್ಪಕ್ಷಪಾತವಿಂದ ನುಡಿದಿರುವ ಇತರರ ನುಡಿಗಳನ್ನೇ ಉದಾಹರಿಸಿ ಮಾತನಾಡುತ್ತೇನೆ ಹೀಗೆ ಮಾಡುವುದರಿಂದ ನನ್ನ ಭಾಷಣವು ತೀಪೆ ಹಾಕಿದಂತಾಗುತ್ತದೆ. ಆದರೆ ಹಾಗಿದ್ದರೂ ಸಹ ಅದು ಸರಿಯಾದ ಅಭಿಪ್ರಾಯದಿಂದ ಕೂಡಿ ಸೊಗಸಾದ ರೀತಿಯಲ್ಲಿ ನುಡಿದಿರುವವರ ಮಾತುಗಳಿಂದ ಕೂಡಿದ ತೀಪೆಯ ಭಾಷಣವಾಗಿರುತ್ತದೆ

ನನ್ನ ಭಾಷಣವನ್ನು ಮುಂದುವರಿಸುವ ಮೊದಲು ತಮಗೊಂದು ಅಂಶವನ್ನು ಸೂಚಿಸಿ ಎಚ್ಚರಿಕೆ ಕೊಡಲಿಚ್ಛಿಸುವೆನು ಎಷ್ಟೇ ವಿವರಣೆ ಮಾಡಿದರೂ ಕೂಡ, ವಿವರಣೆಯಿಂದಲೇ ಪೂರ್ತಿಯಾಗಿ ವಸ್ತುಪರಿಚಯ ಮಾಡಿಕೊಡುವುದು ಸಾಗದ ಕೆಲಸ ಆದಕಾರಣ, ಲಂಡನ್ ನಗರದಲ್ಲಿ ಮೈಸೂರುಸಂಸ್ಥಾನದ ಔಷಧವು ನಡೆದ ಕಾಲದಲ್ಲಿ ಈಚೆಗೆ ಒಬ್ಬರು ಮಹಾಶಯರು ಸೂಚಿಸಿದ ಮಾತುಗಳನ್ನ ತಮ್ಮ ಗಮನಕ್ಕೆ ತರುತ್ತೇನೆ ಓಡಿಯೋಗವರೆಲ್ಲ ಪರಿಶೀಲಿಸಿ ನೋಡಲು ಅನುಕೂಲಿಸುವಂತೆ ತೆರೆದಿಟ್ಟ ಪುಸ್ತಕದಂತೆ ಸಂಸ್ಥಾನವು ಶೋಭಿಸುತ್ತಿದೆಯೆಂದು ಅವರು ಹೇಳಿದರು ಒಡುವವನಿಗಿಂತ ನಡೆಯುವವನು ಇನ್ನೂ ಚೆನ್ನಾಗಿ ಪರಿಶೀಲಿಸಬಹುದು ನಡೆಯುವವನಿಗಿಂತ ನಿಂತು ನೋಡುವವನು ದೇಹಕ್ಕೂ ಆತ್ಮಕ್ಕೂ ಇಂಪು ಮಾಡಿಕೊಂಡು ಲಾಭ ಹೊಂದಬಹುದು. ನಮ್ಮ ಸಂಸ್ಥಾನಕ್ಕೇ ಬಂದು ನೆಲೆಸುವವರು ಹಿಂದೆ ೧೪೦೦ ನೆಯ ಇಸವಿಯಷ್ಟು ಮುಂಚೆಯೇ ಪೈಂಟ್ ಇತಿಹಾಸಕಾರನೊಬ್ಬನು ಹೇಳಿರುವ "ಈ ಪ್ರದೇಶದಲ್ಲಿ ಪ್ರಕೃತಿಯು ದೊರೆಯಿಸಿರತಕ್ಕ ಅತ್ಯಂತ ಚೆಲುವಿನ ಆಗರ ವೆಂದರೆ ಮೈಸೂರು ಸಂಸ್ಥಾನದ ಪ್ರದೇಶಗಳೇ" ಎಂಬ ಮಾತುಗಳು ಎಷ್ಟು ದಿಟವೆಂಬುದನ್ನು ಪರೀಕ್ಷಿಸಿ ನೋಡಬಹುದು.

ಅಪಾರ ಖನಿಜಸಂಪತ್ತು

ಕೈಗಾರಿಕೆಗಳಿಗೆ ಉಪಯುಕ್ತವಾದ ಕಚ್ಚಾವಸ್ತುಗಳು ಅತ್ಯಂತ ಸಮೃದ್ಧವಾಗಿರುವ ದೇಶಗಳಲ್ಲಿ ಮೈಸೂರು ಸಂಸ್ಥಾನವೂ ಒಂದು ಖನಿಜಗಳ ವಿಷಯದಲ್ಲಂತು, ಮೈಸೂರು ಸಂಸ್ಥಾನದಲ್ಲಿ ದೊರೆಯುವ ಖನಿಜಗಳ ಪಟ್ಟಿಯನ್ನು ನೋಡಿದರೆ, "ಇದೇನು! ಬೈಬಲ್ಲಿನಲ್ಲಿ ಹೇಳಿರುವ ಖನಿಜಗಳ ಪಟ್ಟಿಯೇ ಇಳಿದು ಬಂದಿದೆ!" ಎಂದು ವಿಸ್ಮಯವಾಗುವುದು ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ, ಕರಿಯ ಸೀಸ, ಕ್ರೋಮೈಟ್, ಮಾಗ್ನಸೈಟ್, ಮಾನಜೈಟ್, ಕಬ್ಬಿಣ ಮಿಶ್ರಿತವಾದ ಬಾಕ್ಸೈಟ್, ಬಳಪದ ಕಲ್ಲು, ಕಾಗೆ ಬಂಗಾರ, ಮ್ಯಾಂಗನೀಸ್ ಇವುಗಳೆಲ್ಲ ಮೈಸೂರು ಸಂಸ್ಥಾನದಲ್ಲಿವೆ ಗೆಲೀನ ಎಂಬ ಸೀಸ ಗಂಧಕಗಳು ಸೇರಿರುವ ಅದುರೂ, ಕುಂದದ ಕಲ್ಲುಗಳೂ ಇವೆ ಅಮೃತಶಿಲೆಯೂ "ಸುಧಾಶಿಲೆ" ಎಂಬ ಬಿಳಿಯ ಶಿಲೆಯೂ ದೊರೆಯುತ್ತವೆ ಇನ್ನೂ ಇತರ ಅನೇಕ ಖನಿಜಗಳೂ ಸಂಸ್ಥಾನದಲ್ಲಿವೆ

ಇನ್ನು ಜೌಬೀನೆಯ ವಿಚಾರ—ತೇಗ, ಬೀಟಿ, ಕರಿಯಮರ, ಜಂಬೆ—ಈ ಮರಗಳ ವಿವಿಧ ಜಾತಿಗಳೂ ಮೈಸೂರು ಸಂಸ್ಥಾನದಲ್ಲಿ ಬೆಳೆಯುತ್ತವೆ ಬಿಲ್ವಾರದ ಮರ, ಬೂರಗದ ಮರ, ಹುರಗಲು ಮರ ಹೊನ್ನೆಮರ, ಹೊಂಗೆಮರ, ಕಕ್ಕೆಮರ, ಸಾಗಡೆಮರ ಮತ್ತು ದಾಲಮರ—ಇವೂ ಸಹ ಮೈಸೂರುಸಂಸ್ಥಾನದಲ್ಲಿ ಬೆಳೆಯುತ್ತವೆ.

ಮೈಸೂರುಸಂಸ್ಥಾನದ ಬೆಳೆಗಳಲ್ಲಿ ಗೋಧಿ, ಬತ್ತ, ರಾಗಿ, ಜೋಳ, ಕಾಪಿ, ಕಬ್ಬು ಹತ್ತಿ, ಹೊಗೆಸೊಪ್ಪು, ಎಳ್ಳು, ಕಡಲೆಕಾಯಿ, ತೆಂಗಿನಕಾಯಿ, ಹರಳು, ಮೆಣಸು, ಶುಂಠಿ, ಅರಿಸಿನ, ಅಡಕೆ—ಇವೆಲ್ಲ ಸೇರಿವೆ

ಹಣ್ಣುಗಳು ಮತ್ತು ಕಾಯಿಪಲ್ಯಗಳಲ್ಲಿ ಬಹುಶಃ ಮೈಸೂರು ಸಂಸ್ಥಾನದಲ್ಲಿ ಬೆಳೆಯಲಾರದೆ ಯಾವುವೂ ಇಲ್ಲ ಮೈಸೂರಿನಲ್ಲಿ ಪೀಚ್ ಹಣ್ಣುಗಳು, ಸೇಬು, ಕಿತ್ತಲೆ, ಚಿಪ್ಪರವ್ಹಾಕ್ಷೆ, ಮಾವಿನಹಣ್ಣು, ಪಪ್ಪಾಯಿ, ಬಾಳೆಹಣ್ಣು, ಅಂಜೂರ, ನಿಂಬೆ, ಗೂಸ್‌ಬೆರಿ, ಸ್ಟ್ರಾಬೆರಿ, ಮುಂತಾದ ಹಣ್ಣುಗಳೆಲ್ಲ ದೊರೆಯುತ್ತವೆ. ಹುರುಳಿಕಾಯಿ, ಬದನೆಕಾಯಿ, ದಂಟು, ಕೀರೆ, ಚಿಲ್ಲಕೀರೆ, ಮುಂತಾದ ಸೊಪ್ಪುಗಳು, ಇವುಗಳ ಎಲ್ಲ ಜಾತಿಗಳೂ ಬೆಳೆಯುತ್ತವೆ ಆಲೂಗೆಡ್ಡೆಯೂ ನೀರುಳ್ಳಿಯೂ ಟನ್ನುಗಟ್ಟಲೆ ಬೆಳೆಯುತ್ತವೆ ತಾವು ಗಳು ಮದರಾಸಿನಲ್ಲಿ ಭುಜಿಸುವ ಸಮಸ್ತ ಕಾಯಿಪಲ್ಯಗಳೂ ಮೈಸೂರು ಸಂಸ್ಥಾನದಲ್ಲಿ ಬೆಳೆಯುತ್ತವೆ

ಇಷ್ಟೇ ಇಲ್ಲ ಈ ಸೌಕರ್ಯಗಳ ಜೊತೆಗೆ ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದ ಎಲ್ಲ ಸೌಕರ್ಯಗಳೂ ಇವೆ ನದಿಗಳು ಸಮೃದ್ಧಿಯಾಗಿ ನೀರನ್ನೊದಗಿಸುತ್ತವೆ. ಕೆರೆಗಳ ಸಾಲುಗಳೇ ತುಂಬಿರುವುದರಿಂದ, ಅವುಗಳಿಂದ ಹೊರಟ ನೀರಿನ ಆವಿಯು ಬಟ್ಟೆಯ ನೆಯ್ಗೆಗೆ ತಕ್ಕಷ್ಟು ಆರ್ದ್ರತೆಯನ್ನು ವಾಯುಮಂಡಲಕ್ಕೆ ಕೊಡುತ್ತದೆಂದು ಆ ವೃತ್ತಿಯಲ್ಲಿ ನಿಪುಣರಾದವರು ಅಭಿಪ್ರಾಯಪಟ್ಟಿದ್ದಾರೆ ಸುಮಾರು ೭೦೦ ಮೈಲಿಗಳಿಗಿಂತಲೂ ಹೆಚ್ಚು ದೂರವಿರುವ ರೈಲ್ವೆಮಾರ್ಗಗಳಿವೆ. ಒಟ್ಟು ೪,೭೦೦ ಮೈಲಿಗಳ ದೂರದ ಜಲ್ಲಿಕಾಮಗಾರಿಯಾದ ರಸ್ತೆಗಳಿವೆ; ಅವುಗಳಲ್ಲಿ ಹೆಚ್ಚಿನ ಭಾಗಗಳಿಗೆ ಈಗ ಕೀಲೆಣ್ಣೆಯ ಅಥವಾ ಕಾಕಂಬಿಯ ದಮ್ಮಸ್ಸು ಮಾಡಿದ್ದೇನೆ. ಒಟ್ಟು ೨,೬೦೦ ನೆಯ್ಲಿಗಳ ದೂರದ ಇತರ ರಸ್ತೆಗಳವೆ ವಿದ್ಯುಚ್ಛಕ್ತಿಯು ಸಂಸ್ಥಾನದ ಮೂಲೆ ಮೂಲೆಗೂ ಒದಗುವಂತೆ ಏರ್ಪಾಡು ನಡೆದಿದೆ. ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಯೂನಿಟ್ ಒಂದಕ್ಕೆ ೯ ಕಾಸುಗಳ ಮೇರೆಗೆ ಒದಗಿಸುತ್ತಿದ್ದೇನೆ. ಟೆಲಿಫೋನುಗಳು ಆಗಲೇ ಹೆಚ್ಚಿವೆ ಅವು ಬೇಗ ಬೇಗ ಇನ್ನೂ ಹೆಚ್ಚುತ್ತಿವೆ ರೈತರು ಕಷ್ಟಪಟ್ಟು ಕೆಲಸಮಾಡುವವರಾಗಿಯೂ ಸೌಧಾವಿಗೆಳಾಗಿಯೂ, ಇದ್ದುಕೊಂಡು, ಕೈಗಾರಿಕೆಯು ಹೊಸಹೊಸ ವಿಧಾನಗಳನ್ನನುಸರಿಸಿಲು ತಮಗೆ ಸಾಮರ್ಥ್ಯವುಂಟೆಂಬುದನ್ನು ತೋರ್ಪಡಿಸಿಕೊಂಡಿದ್ದಾರೆ.

ಕೈಗಾರಿಕೆಗಳು

ಪ್ರಕೃತಿಸಿದ್ಧವಾಗಿ ದೊರೆತಿರುವ ಈ ದೊಡ್ಡ ಭಾಗ್ಯಗಳನ್ನು ರೂಢಿಸಿಕೊಂಡು ಲಾಭ ಹೊಂದುವುದರಲ್ಲಿ ಮೈಸೂರು ಸಂಸ್ಥಾನದ ಪ್ರಜೆಗಳಾಗಲಿ ಅಥವಾ ಮೈಸೂರು ಸಂಸ್ಥಾನದ ಸರ್ಕಾರದವರಾಗಲಿ ಹಿಂದೆ ಬಿದ್ದಿಲ್ಲ. ಚಿನ್ನದ ಗಣಿಗಳಲ್ಲಿಯೂ, ಕಬ್ಬಿಣದ ಗಣಿಯಲ್ಲಿಯೂ ಕೆಲಸ ನಡೆದು, ಚಿನ್ನವೂ, ಕಬ್ಬಿಣವೂ ತಯಾರಾಗುತ್ತಿವೆ ಮ್ಯಾಂಗನೀಸ್ ಅದುರನ್ನೂ ಕ್ರೋಂ ಅದುರನ್ನೂ ನಾವು ಗಣಿಗಳಿಂದ ತೆಗೆಯುತ್ತಿದ್ದೇವೆ ಹತ್ತಿಯಲ್ಲಿ ಪಂಚೆಗಳು ಮುಂತಾದ ಸನಗುಗಳು, ಕಾಲುಚೀಲ ಮುಂತಾದ ಸನಗುಗಳು, ಅಂಗಿ ಪರಿಯಂತ ಒಟ್ಟಿಗಳು, ರೇಷ್ಮೆ ಬಟ್ಟೆ, ಜರತಾರಿ ಉಣ್ಣೆಯ ಸನಗುಗಳು ಮುಂತಾದುವುಗಳನ್ನು ತಯಾರಿಸುವ ನಾನಾ ಗಿರಣಿಗಳು ಏರ್ಪಟ್ಟಿವೆ. ಸಾಬೂನು ಕಾರ್ಖಾನೆ, ಸಕ್ಕರೆ ಕಾರ್ಖಾನೆ, ಸಿಮೆಂಟು ಕಾರ್ಖಾನೆ, ಮತ್ತು ಕಾಗದದ ಕಾರ್ಖಾನೆ—ಇವೂ ಏರ್ಪಟ್ಟಿವೆ ಗಂಧದ ಎಣ್ಣೆಯ ಕೈಗಾರಿಕೆಯು ಸಂಸ್ಥಾನದ ವೈಶಿಷ್ಟ್ಯದಂತಿರುವ ಒಂದು ದೊಡ್ಡ ಕೈಗಾರಿಕೆಯಾಗಿದೆ ರಸಾಯನವಸ್ತುಗಳು ಕೃತಕಗೊಬ್ಬರಗಳು, ಔಷಧಗಳಿಗಾಗಿ ಉಪಯೋಗವಾಗುವ ವಸ್ತುಗಳು, ಔಷಧಗಳು—ಇವುಗಳನ್ನು ತಯಾರಿಸುವ ಕಾರ್ಖಾನೆಗಳವೆ "ಬ್ಯಾಕ್ ಲೈಟ್" ಸಾಮಾನುಗಳು, ವಿಶೇಷ ರೀತಿಯ ಮಣ್ಣಿನ ಜಾಡಿಗಳು ಮುಂತಾದ ಗಟ್ಟಿ ಸಾಮಾನುಗಳು, ಆಟದ ಸಾಮಾನುಗಳು—ಇವುಗಳನ್ನು ಮಾಡುವ ಕಾರ್ಖಾನೆಗಳು ಏರ್ಪಟ್ಟಿವೆ "ವರ್ಜಿನಿಯ"ಜಾತಿಯ ಹೊಗೆಸೊಪ್ಪಿನ ಕೈಗಾರಿಕೆಯು ತುಂಬ ಲಾಭದಾಯಕವಾಗಿ ಪರಿಣಮಿಸುವಂತೆ ತೋರುತ್ತಿದೆ. ಮುಖ್ಯವಾಗಿ ನಮ್ಮ ಸಂಸ್ಥಾನದ ವಿದ್ಯುಚ್ಛಕ್ತಿ ಕಾಮಗಾರಿಗಳ ಉಪಯೋಗಕ್ಕೆ ಒದಗುವುದಕ್ಕಾಗಿ ಪಿಂಗಾಣಿಯ "ಇನ್‌ಸುಲೇಟರು" ಗಳು, "ಟ್ರಾನ್ಸ್‌ಫಾರ್ಮರು" ಗಳು, "ಬ್ಯಾಟರಿ" ಗಳು, "ಸ್ವಿಚ್ಚು" ಗಳು, ಮೆತ್ತು ಇತರ ವಿದ್ಯುಚ್ಛಕ್ತಿಯಂತ್ರಸಾಧನ ಸಂಬಂಧದ ವಸ್ತುಗಳನ್ನು ತಯಾರಿಸುವುದಕ್ಕಾಗಿ ಕಾರ್ಖಾನೆಗಳು ಏರ್ಪಟ್ಟಿವೆ.

ಮೈಸೂರಿನವರ ಧ್ಯೇಯ

ಈ ಕಾರ್ಖಾನೆಗಳಲ್ಲಿ ತಯಾರಾಗುತ್ತಿರುವ ವಸ್ತುಗಳನ್ನು ಕಂಡು ನಾವು ಹೆಮ್ಮೆ ಪಡುತ್ತೇವೆ. ನಮ್ಮ ಸಂಸ್ಥಾನದ ಜನರೆಲ್ಲರೂ ಅವುಗಳನ್ನು ಉಪಯೋಗಿಸಬೇಕೆಂಬುದು ನಮ್ಮ ಅಭಿಲಾಷೆ ಕೇವಲ ನಮ್ಮ ಸಂಸ್ಥಾನದ ವಸ್ತುಗಳೇ ಆಗಬೇಕೆಂದು ಬಯಸುವ ಸಂಕುಚಿತ ಬುದ್ಧಿಯುಳ್ಳವರೆಂದು ಕರೆಯಲ್ಪಡುವ ಸಂಭವವಿದ್ದರೂ ಸಹ ಅಳುಕದೆ, ನಾವು ಆ ರೀತಿ ಅಭಿಲಾಷೆ ಪಡುತ್ತ ನಿಜವಾದ ದೇಶಾಭಿಮಾನಿಗಳಾದ ಮೈಸೂರು ಸಂಸ್ಥಾನದವರೆಲ್ಲರೂ ಒಂದು ಧ್ಯೇಯವನ್ನಿಟ್ಟುಕೊಳ್ಳಬಯಸುತ್ತೇವೆ ಧ್ಯೇಯವು ಇದು: ಮೈಸೂರು ಸಂಸ್ಥಾನದವರು ಮೈಸೂರು ಸಾಬೂನನ್ನು ಉಪಯೋಗಿಸಿ ಸ್ನಾನಮಾಡಿ, ಮೈಸೂರುಸಂಸ್ಥಾನದಲ್ಲಿ ತಯಾರಾದ ಟವಲುಗಳಿಂದ ಮೈಯನ್ನು ಒರಿಸಿಕೊಳ್ಳಬೇಕು, ಮೈಸೂರು ಸಂಸ್ಥಾನದಲ್ಲಿ ತಯಾರಾದ ರೇಷ್ಮೆಯ ಬಟ್ಟೆಗಳನ್ನು ಧರಿಸಬೇಕು, ಮೈಸೂರು ಸಂಸ್ಥಾನದ ಕುದುರೆಗಳ ಮೇಲೆ ಸವಾರಿಮಾಡಿ, ಪುಷ್ಕಳವಾಗಿ ಮೈಸೂರು ಸಂಸ್ಥಾನದ ಆಹಾರವಸ್ತುಗಳನ್ನು ಸೇವಿಸಬೇಕು; ಮೈಸೂರು ಸಂಸ್ಥಾನದಲ್ಲಿ ಬೆಳೆದ ಕಾಫಿಬೀಜಗಳಿಂದಲೂ ಮೈಸೂರು ಸಂಸ್ಥಾನದ ಕಾರ್ಖಾನೆಯಲ್ಲಿ ತಯಾರಾದ ಪಕ್ಕರೆಯಿಂದಲೂ ಮಾಡಿದ ಕಾಫಿಯನ್ನು ಕುಡಿಯಬೇಕು, ಮೈಸೂರು ಸಂಸ್ಥಾನದಲ್ಲಿ ತಯಾರಾದ ಸಿಮೆಂಟಿನ್ನೂ ಮೈಸೂರು ಸಂಸ್ಥಾನದ ಚೌಬೀನೆಯನ್ನೂ ಮೈಸೂರು ಸಂಸ್ಥಾನದಲ್ಲಿ ತಯಾರಾದ ಉಕ್ಕನ್ನೂ ಉಪಯೋಗಿಸಿ ಮನೆಗಳನ್ನು ಕಟ್ಟಿಕೊಳ್ಳಬೇಕು, ಮೈಸೂರು ಸಂಸ್ಥಾನದಲ್ಲಿ ತಯಾರಾದ ಕುರ್ಚಿ ಮೇಜು ಮುಂತಾದ ಸಾಮಾನುಗಳನ್ನು ಆ ಮನೆಗಳಲ್ಲಿ ಉಪಯೋಗಿಸುತ್ತ, ಮೈಸೂರು ಸಂಸ್ಥಾನದಲ್ಲಿ ತಯಾರಾದ ಕಾಗದದಮೇಲೆ ಬರೆಯಬೇಕು ಸರ್ ಜಾನ್ ವಾರ್ಡ್ಲ್ ಮಿಲ್ನ್ ಅವರ ಭಾಷಣದ ವಾಕ್ಯವನ್ನು ಮೇಲೆ ಉದಾಹರಿಸಿದೆನಷ್ಟೆ! ಆ ವಾಕ್ಯವನ್ನು ಈ ಸಂದರ್ಭಕ್ಕೂ ಅನ್ವಯಿಸಿ ಮೈಸೂರು ಸಂಸ್ಥಾನದ ಕೈಗಾರಿಕೆಗಳು ತೆರೆದಿಟ್ಟ ಪುಸ್ತಕದಂತೆ ಸಿದ್ಧವಾಗಿವೆ ಅಥವಾ ಬಹುಶಃ ನಾನು ಹೀಗೆ ಹೇಳಬೇಕಾಗುತ್ತದೆ; ಅಂಗಡಿಯ ಮುಂಭಾಗದಲ್ಲಿ ತೆರೆದಿಟ್ಟಂತೆ ಮೈಸೂರು ಸಂಸ್ಥಾನದ ವಸ್ತುಗಳು, ಮೈಸೂರು ನಗರದಲ್ಲಿ ಪ್ರತಿವರ್ಷವೂ ದಸರಾದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಲ್ಪಡುತ್ತವೆ ಮದರಾಸು ಅಧಿಕಶ್ರಮದಿಂದ ಬಂದು ಆ ಪ್ರದರ್ಶನದಲ್ಲಿ "ಸ್ಟಾಲು" ಗಳನ್ನು ತೆಗೆದುಕೊಂಡು ತಮ್ಮ ವಸ್ತುಗಳನ್ನು ಪ್ರದರ್ಶಿಸುವವರನ್ನು ನಾವು ಆದರದಿಂದ ಸ್ವಾಗತಿಸುತ್ತೇವೆ ದಸರಾ ಕಾಲದಲ್ಲಿ ಮೈಸೂರಿಗೆ ದಯಮಾಡಿ ಅಲ್ಲಿ ಪ್ರದರ್ಶನದಲ್ಲಿ ಮಾರಾಟಕ್ಕಾಗಿ ಇಟ್ಟಿರುವ ಮೈಸೂರು ಸಂಸ್ಥಾನದ ವಸ್ತುಗಳನ್ನು ಕೊಂಡುಕೊಳ್ಳುವುದಕ್ಕೆ ತಮ್ಮ ಹಣವನ್ನು ವೆಚ್ಚಮಾಡುವವರನ್ನು ನಾವು ಇನ್ನೂ ಆದರದಿಂದ ಸ್ವಾಗತಿಸುತ್ತೇವೆ

ಪುಣ್ಯ ಕ್ಷೇತ್ರಗಳು

ಇನ್ನು, ಮೈಸೂರು ಸಂಸ್ಥಾನದ ಭಾಗ್ಯದಂತಿರುವ ಮತ್ತೊಂದು ಲಕ್ಷಣವನ್ನು ಕುರಿತು ಒಂದೆರಡು ಅಂಶಗಳನ್ನು ಸೂಚಿಸಿ ಇವನ್ನು ನಿನ್ನ ಗಮನಕ್ಕೆ ತರುತ್ತೇನೆ; ಪ್ರವಾಸಿಗಳಿಗೂ ಸ್ವೇಚ್ಛೆಕರಿಗೂ ಮೈಸೂರು ಸಂಸ್ಥಾನವೇನನ್ನು ತೋರಬಲ್ಲುದೆಂಬುದನ್ನು ಸೂಚಿಸುತ್ತೇನೆ. ನಾನು ಈ ಮೊದಲೇ ಕೆಲವು ಪುಣ್ಯಕ್ಷೇತ್ರಗಳನ್ನು ಸೂಚಿಸಿದ್ದೇನೆ ಪ್ರಸಿದ್ಧವಾದ ಯಾತ್ರಾಸ್ಥಳಗಳಾದ ಇನ್ನೂ ಅನೇಕ ಪುಣ್ಯಕ್ಷೇತ್ರಗಳೂ ಅಲ್ಲಿವೆ ಶೃಂಗೇರಿ, ಮೇಲ್ಕೋಟೆ, ಪಂಚಲಿಂಗ ದರ್ಶನದ ಯಾತ್ರೆಗೆ ಅಮ್ಮ ತವಾದ ಸಿದ್ಧತೆಗಳಾಗುತ್ತಿರುವ ತಲಕಾಡು, ನಂಜನಗೂಡು, ಹಿಂದೂ ಮುಸಲ್ಮಾನ ಪುಂಗಡಗಳೆರಡಕ್ಕೂ

ಪವಿತ್ರವಾದ ಆರಾಧನಾಸ್ಥಾನವಾದ ದತ್ತಾತ್ರೇಯ ಪೀಠ, ತೀರ್ಥಹಳ್ಳಿ, ದೋರನಹಳ್ಳಿ ಮುಂತಾದುವು ಆ ಪುಣ್ಯಕ್ಷೇತ್ರಗಳು. ಈ ಸಂಬಂಧದಲ್ಲಿ ನಾನು ಮತ್ತೊಂದು ಪುಣ್ಯಕ್ಷೇತ್ರದ ಹೆಸರನ್ನೂ ಸೂಚಿಸುವು ದಾದರೆ ವಿದುರಾಶ್ವತ್ಥದ ಹೆಸರನ್ನೂ ಸೂಚಿಸಿಬಿಡು ವೆನು. ಅಲ್ಲಿ ವಿಷಾದಕರವಾದ ಘಟನೆಯು ಈಚೆಗೆ ನಡೆದುದೇನೋ ನಿಜವೆ! ಆದರೆ ಅದನ್ನು ಜನರೆಲ್ಲರೂ ಮರೆತಮೇಲೂ ಸಹ, ವಿದುರನು ನೆಟ್ಟ ಅಶ್ವತ್ಥವೃಕ್ಷದ ಸಲುವಾಗಿ ಚಿರಕಾಲ ಜನಗಳ ಮನಸ್ಸಿನಲ್ಲಿ ಸಂತಸಪೂ ಸ್ಮರಣೆಯಲ್ಲಿರುವ ಪವಿತ್ರ ಕ್ಷೇತ್ರವದು ಈ ಪುಣ್ಯ ಕ್ಷೇತ್ರಗಳಲ್ಲದೆ ಮೈಸೂರು ಸಂಸ್ಥಾನದಲ್ಲಿ ಪ್ರಾಚೀನ ಕಾಲದ ರಾಜಧಾನಿಗಳಿವೆ. ಪ್ರಸಿದ್ಧವಾದ ರಣಭೂಮಿ ಗಳವೆ; ಅಶೋಕನ ಶಾಸನಗಳವೆ ಹೊಯ್ಸಳರ ಕಾಲದ ಸ್ಮಾರಕಗಳವೆ; ಕೋಟೆಯೋ ಅಥವಾ ದೇವಾ ಲಯವೋ ಕುಂಭಿಯಮೇಲಿರುವ ರಮ್ಯವಾದ ಹಲವು ಬೆಟ್ಟಗಳವೆ

ಗೇರುಸೊಪ್ಪೆಯಲ್ಲುಂಟು, ಶರಾವತಿಯು ೮೦೦ ಅಡಿ ಗಳ ಎತ್ತರದಿಂದ ನೀರು ಬೀಳುವ ಜಲಪಾತವು ಈ ಪ್ರಪಂಚದಲ್ಲಿ ಮತ್ತೊಂದಿಲ್ಲ ಅಲ್ಲದೆ ಸಂಸ್ಥಾನದಲ್ಲಿಯ ಗಣನೀಯವಾದ ಭಾಗಕ್ಕೆ ವಿದ್ಯುಚ್ಛಕ್ತಿಯನ್ನೊದಗಿ ಸುವ ಕಾರಣ, ಶಿವನಸಮುದ್ರದ ಜಲಪಾತವು ಪ್ರಪಂ ಚದಲ್ಲಿರುವ ಅತ್ಯಂತ ಉಪಯೋಗಕರಗಳಾದ ಜಲಪಾ ತಗಳ ಗುಂಪಿಗೆ ಸೇರಿರುವಂತೆ, ಗೇರುಸೊಪ್ಪೆಯ ಜಲ ಪಾತವು ಪ್ರಪಂಚದಲ್ಲಿರುವ ಅತ್ಯಂತ ರಮಣೀಯ ವಾದ ಜಲಪಾತಗಳ ಗುಂಪಿಗೆ ಸೇರಿದೆ.

ದಸರಾ ಮಹೋತ್ಸವ

ಕೊನೆಯದಾಗಿ, ನೋಟಕರನ್ನು ಮುಗ್ಧಗೊಳಿಸುವ ದಸರಾ ಉತ್ಸವವನ್ನು ಸೂಚಿಸುವೆನು. ಮೊನ್ನೆ ಮೊನ್ನೆ ದಸರಾಕಾಲದ ನೋಟಗಳನ್ನು ಕಂಡ ಲೇಖಕರೊಬ್ಬರು "ವರ್ಣಿಸಲು ಆಳವಲ್ಲದ ವೈಭವದ ದೃಶ್ಯಗಳು, ಅರೇ ಬಿಯರ್ ನೈಟ್ಸ್ ಕತೆಗಳಲ್ಲಿ ಹೇಳುವ ಬಗೆಯ ಅಟ್ಟಹಾಸವನ್ನು ನೆನಪಿಗೆ ತರುವಂತಿರುವ ದೃಶ್ಯಗಳು" ಎಂದು ವರ್ಣಿಸಿದ್ದಾರೆ.

ದಸರಾ ಉತ್ಸವವನ್ನು ನೋಡಲು ಮೈಸೂರು ನಗ ರಕ್ಕೆ ದಯಮಾಡುವವರು ಆ ವೈಭವದ ದೃಶ್ಯಗಳನ್ನು ಕಂಡು ಪೂರ್ಣಾನಂದವನ್ನನುಭವಿಸುವಂತೆ ಮಾಡುವು ದಕ್ಕಾಗಿ ಅವರಿಗೆ ಸಾಧ್ಯವಾದಷ್ಟು ಸೌಕರ್ಯಗಳನ್ನು ಏರ್ಪಟ್ಟಿರುತ್ತವೆ. ಬೆಂಗಳೂರಿನಲ್ಲಿಯೂ ಮೈಸೂರಿನ ಲ್ಲಿಯೂ ಅತ್ಯುತ್ತಮವಾದ ಹೋಟಲುಗಳವೆ ಜನಸಂ ದಣಿಗೆ ದೂರವಾದ ಏಕಾಂತ ಪ್ರದೇಶವನ್ನು ಬಯಸು ವವರಿಗಾಗಿ ನಂದಿದುರ್ಗದ ಮೇಲೆ ವಿದ್ಯುದ್ದೀಪಗಳಿಂದ ರಂಜಿಸುತ್ತಿರುವ ಸೊಗಸಾದ ಬಂಗಲೆಗಳವೆ ಕೃಷ್ಣ ರಾಜಸಾಗರ, ಹಾಸನ, ಗೇರುಸೊಪ್ಪೆ (ಜೋಗ್) ಜಲಪಾತ, ಶಿವನಸಮುದ್ರ, ಮುಂತಾದ ಸ್ಥಳಗಳಲ್ಲಿ ಸಹ ಕುರ್ಚಿ, ಮಂಚ ಮುಂತಾದುವುಗಳಿಂದ ಸುಸಜ್ಜಿ ತವಾಗಿ ತಕ್ಕ ಸಿಬ್ಬಂದಿಯೊಡಗೂಡಿರುವ ಬಂಗಲೆಗಳವೆ. ಅಲ್ಲಿಗೆ ಹೋಗುವವರು ಹಾಸಿಗೆಯನ್ನು ಮಾತ್ರ ತೆಗೆ ದುಕೊಂಡು ಹೋದರೆ ಸಾಕು. ಊಟಕ್ಕಾಗಲಿ, ಸ್ಥಳ ವಸತಿಗಳಿಗಾಗಲಿ ಕುರ್ಚಿ ಮುಂತಾದ ಸಾಮಾನುಗಳಿ ಗಾಗಲಿ, ಅಲ್ಲಿ ನಿರಾತಂಕವಾಗಿರುತ್ತದೆ. ನಮ್ಮ ಪೂರ್ವಿ ಕರು ಮುಖ್ಯ ಮುಖ್ಯವಾದ ಸಂಚಾರ ಮಾರ್ಗಗಳಲ್ಲಿ ಮಜಲು ಮಜಲಿಗೂ ಪ್ರವಾಸಿಗಳಿಗಾಗಿ ಮುಸಾಫರಖಾ ನೆಗಳನ್ನೂ ಬಂಗಲೆಗಳನ್ನೂ ಕಟ್ಟಿಸಿ ಉಪಕರಿಸಿರು ತ್ತಾರೆ. ಸುಮಾರು ಹತ್ತು ಹತ್ತು ಮೈಲಿಗಳ ದೂರ ಕ್ಕೂ ಅವು ಸಿದ್ಧವಾಗಿವೆ ಹಾಸಿಗೆಯನ್ನು ಅಲ್ಲಿಗೆ ತೆಗೆ ದುಕೊಂಡು ಹೋದರೆ ಅಲ್ಲ ಸ್ಥಳವಸತಿ ದೊರೆಯು ತ್ತದೆ. ಸಾಮಾನ್ಯವಾದ ಊಟಕ್ಕೆ ಅಲ್ಲಿ ಅನುಕೂಲ ವಿರುತ್ತದೆ.

ಬೆಟ್ಟಿಯಲ್ಲಿ ಅಶಕ್ತಿಯುಳ್ಳವರ ವಿನೋದಕ್ಕಾ ಮೈಸೂರು ಸಂಸ್ಥಾನದಲ್ಲಿ ಅವಕಾಶವುಂಟು

ವ್ಯಾಘ್ರಾಸ್ತ್ರೆಗಳನ್ನು ಬೇಟೆಯಾಡಿದೆ ಜಿವುಗಳ ಭಾವ ಚಿತ್ರಗಳನ್ನು (ಫೋಟೋಗಳನ್ನು) ತೆಗೆದುಕೊಳ್ಳುವವ ರಿಗೂ ಮೈಸೂರು ಸಂಸ್ಥಾನದಲ್ಲಿ ಬೇಕಾದಷ್ಟು ಸೌಕ ರ್ಯಗಳವೆ. ಕಾಡಿನ ಮಧ್ಯದಲ್ಲಿರುವ ಬಂಡಿಪುರದಲ್ಲಿ ಅನುಕೂಲವಾದ ಬಂಗಲೆಯದೆ ಅಲ್ಲಿಗೆ ಸಮೀಪದ ಲ್ಲಿಯೇ ಮದರಾಸು ಸರ್ಕಾರದವರು ಬೇಟೆಗಾರರಿಗಾಗಿ ಏರ್ಪಡಿಸಿರುವ ಮಡುಮಲೈ ಎಂಬ ಸ್ಥಳದಲ್ಲಿ ಸೌಕ ರ್ಯಗಳು ಕಲ್ಪಿತವಾಗಿವೆ ಇದೇರೀತಿ ಚಾಮರಾಜ ನಗರ ತಾಲ್ಲೂಕಿನ ಕಾಡುಗಳ ರಮ್ಯವಾದ ಪ್ರದೇಶಗಳಲ್ಲಿ ಮೈಸೂರು ಸಂಸ್ಥಾನದವರು ಕಲ್ಪಿಸಿರುವ ಸೌಕರ್ಯ ವಸತಿಯೂಇದೆ.

ಆಟಗಾರರಿಗೆ ಇಷ್ಟವಾದ ಇತರ ಕೆಲವು ವಿಚಾರಗ ಳಲ್ಲಿಯೂ ಮೈಸೂರು ಸಂಸ್ಥಾನವು ಪ್ರಸಿದ್ಧವಾಗಿದೆ ಮೈಸೂರು ಬೆಂಗಳೂರು ನಗರಗಳಲ್ಲಿ ವರ್ಷಕ್ಕೆರಡು ಸಾರಿ ಕುದುರೆ ಜೂಜುಗಳು ನಡೆಯುತ್ತವೆ. ಬೆಂಗಳೂ ರಿನಲ್ಲಿ ಅತ್ಯುತ್ತಮವಾದ ಬೇಟೆಯ ನಾಯಿಗಳವೆ ಶ್ರೀಮದ್ ಮಹಾರಾಜರವರ ವರ್ಧಂತ್ಯುತ್ಸವದ ಕಾಲ ದಲ್ಲಿ ಮತ್ತು ದಸರಾಕಾಲದಲ್ಲಿ ಮೈಸೂರು ನಗರದಲ್ಲಿಯೂ ಯೂ, ಇತರಕಾಲದಲ್ಲಿ ಬೆಂಗಳೂರು ನಗರದಲ್ಲಿಯೂ ಕ್ರಿಕೆಟ್, ಫುಟ್‌ಬಾಲ್, ಹಾಕಿ ಮತ್ತು ಟೆನಿಸ್ ಆಟ ಗಳ ಪಂದ್ಯಗಳು ನಡೆಯುವುವು. ಆಗ್ಗೆ ಭರತಖಂಡದ ಯಾವ ಪ್ರಾಂತಗಳ ಕ್ಲಬ್ಬುಗಳವರು ಬೇಕಾದರೂ ಸ್ಪರ್ಧೆಗೆ ಬರಬಹುದು. ನದಿಗಳಲ್ಲಿ ದೊಡ್ಡ ಮೀನುಗಳ ಬೇಟೆಗೆ ಅವಕಾಶವಿದೆ. ದೋಣಿಗಳಲ್ಲಿ ಸಂಚರಿಸುವ ಆಟಪಾಟಗಳಲ್ಲಿ ಆಸಕ್ತಿಯಿರುವವರಿಗೆ ಮೈಸೂರುನಗ ರವು ಆಗರದಂತಿದೆ. ಈ ಆಸಕ್ತಿಯಿರುವವರಿಗಾಗಿ ಬೇತ ಮಂಗಲದಲ್ಲಿಯೂ ಹೆಸರಘಟ್ಟದಲ್ಲಿಯೂ ಸೊಗಸಾದ ಕ್ಲಬ್ಬುಗಳವೆ. ಕೃಷ್ಣರಾಜಸಾಗರದಲ್ಲಿಯೂ ವಾಣೀವಿ ಲಾಸಸಾಗರದಲ್ಲಿಯೂ ಅವಿಯ ಶಕ್ತಿಯಿಂದ ನಡೆಯುವ ದೋಣಿಗಳೇ ಮುಂತಾದುವುಗಳ ಸಂಚಾರದ ವಿಷಯ ದಿಗೆ ಯಥೇಷ್ಟವಾಗಿ ಅವಕಾಶವಿದೆ.

ಫಲಪುಷ್ಪಗಳ ವೈವಸಾಯದಲ್ಲಿ ಅಭಿರುಚಿಯುಳ್ಳವ ರಿಗೂ ಮೈಸೂರು ಸಂಸ್ಥಾನದಲ್ಲಿ ಯಥೇಷ್ಟವಾದ ಅನು ಕೂಲವುಂಟು. ಅಲ್ಲಿರುವಷ್ಟು ಅನುಕೂಲಗಳಿರುವ ಸ್ಥಳಗಳ ಸಂಖ್ಯೆ ಒಟ್ಟು ಭರತಖಂಡದಲ್ಲಿಯೇ ಹೆಚ್ಚಾ ಗಿಲ್ಲ ವರ್ಷದಲ್ಲೆಲ್ಲ ಹಿತವಾದ ತಾಯುಗುಣ, ಫಲವ ತ್ತಾದ ಭೂಮಿ, ಸಮೃದ್ಧಿಯಾದ ನೀರಿನ ವಸತಿ, ಇವು ಗಳಿರುವಕಾರಣ, ವರ್ಷದ ಯಾವ ಕಾಲದಲ್ಲೆಂದರೆ ಆ ಕಾಲದಲ್ಲಿ ಉಷ್ಣವಲಯದ ಗಿಡಗಳನ್ನೂ ಮತ್ತು ಸಮ ಶೀತೋಷ್ಣ ವಲಯದ ಗಿಡಗಳನ್ನೂ ಎಲ್ಲೆಂದರೆ ಅಲ್ಲಿ ಅಕ್ಕಪಕ್ಕಗಳಲ್ಲಿ ಬೆಳೆಯಬಹುದಾದ ಸೌಕರ್ಯವಿದೆ ಮೈಸೂರು ಸಂಸ್ಥಾನದಲ್ಲಿ ನಲವತ್ತು ವರ್ಷಗಳ ಹಿಂದೆ ಯೇ ೨೫೦ ಜಾತಿಯ ಗುಲಾಬಿ ಗಿಡಗಳು ೧೬೦ ಜಾ ತಿಯ ಜರಿಗಿಡಗಳು, ೧೫೨ಜಾತಿಯ ಕ್ರೋಟ್ ಗಿಡ ಗಳು—ಇವುಗಳನ್ನು ಬೆಳೆಯುತ್ತಿದ್ದುದಾಗಿ ಬರೆದಿಟ್ಟಿ ದ್ದಾರೆ. ಇತರ ಹೂಗಿಡಗಳ, ಬಣ್ಣ ಬಣ್ಣದ ಎಲೆಗಳ ತರಿಗುಲ್ಮಗಳ ಮತ್ತು ಸುಂದರವಾದ ಹೂಗಳುಳ್ಳ ಲತೆ ಗಳ ಮತ್ತು "ಸೀತೆ ಹೂ" ಗಿಡಗಳ ("ಆರ್ಚಿಡ್" ಗಿ ಡಗಳ) ಸಂಖ್ಯೆಗಂತು ಲೆಕ್ಕವೇ ಇರಲಿಲ್ಲ

ಈಚೆಗಂತು ಅವುಗಳ ಸಂಖ್ಯೆಯು ಇನ್ನೂ ಹೆಚ್ಚಾ ಗಿದೆ ಕಸಿಕಟ್ಟುವ ಕೆಲಸವೂ, ನಿಶ್ಶಜಾತಿಗಳ ಗಿಡ ಗಳನ್ನು ಬೆಳೆಯುವ ಕೆಲಸವೂ ಅಪರಿಮಿತವಾಗಿ ನಡೆ ದೂ ನಡೆಯುತ್ತಲೂ ಇವೆ ಇವರ ಫಲಿತಾಂಶವಾಗಿ ಮೈಸೂರು ಸಂಸ್ಥಾನದ ಹೆಸರೂ ಮತ್ತು ಮೈಸೂರು ಸಂಸ್ಥಾನದೊಡನೆ ಸಂಬಂಧವಿದ್ದವರ ಹೆಸರುಗಳೂ ಪ್ರಪಂಚದಲ್ಲಿ ಮೈಸೂರು ಸಂಸ್ಥಾನದಿಂದ ಪಡೆದ ಕೆಲಕೆಲವು ಜಾತಿಯ ಗಿಡಗಳನ್ನು ಬೆಳೆಯುತ್ತಿರುವ ಸ್ಥಳಗಳಲ್ಲೆಲ್ಲ ಪ್ರಸಿದ್ಧವಾಗಿವೆ

ಮೈಸೂರು ನಗರಕ್ಕೆ ೧೧ ಮೈಲಿ ದೂರದಲ್ಲಿ ನಯ ನಮನೋಹರವಾದ "ಬೃಂದಾವನ" ವಿದೆ ಪ್ರತಿವ ರ್ಷವೂ ಬೃಂದಾವನವನ್ನು ೨,೦೦,೦೦೦ ಜನಗಳು ನೋಡಿಕೊಂಡುಹೋಗುವರು.

ಇನ್ನು, ವಿದ್ಯಾಭ್ಯಾಸ ವಿಚಾರದಲ್ಲಿ ಅಸಕ್ತರಾಗಿರು ವವರ ಮನಸ್ಸಿಗೆ ಹರ್ಷವನ್ನುಂಟುಮಾಡುವ ಅಂಶಗಳೆ ರಡಿವೆ. ಭರತಖಂಡದಲ್ಲಿ ವಿಶ್ವವಿದ್ಯಾಲಯದ 'ಡಿಗ್ರಿ' ಪ್ರಶಸ್ತಿಯನ್ನು ಪಡೆದಿರುವ ಸ್ತ್ರೀಯರಲ್ಲಿ ಮೊಟ್ಟಮೊದ ಲನೆಯವರು ಮೈಸೂರು ಸಂಸ್ಥಾನದ ಮಹಿಳೆಯೊಬ್ಬ ರು. ಮದರಾಸು ಸರ್ಕಾರದ ಮುಖ್ಯ ಸಚಿವರಾದ ಶ್ರೀಮಾ ಸಿ. ರಾಜಗೋಪಾಲಾಚಾರ್ಯರವರು ಮೈ ಸೂರು ಸಂಸ್ಥಾನದಲ್ಲಿ ವ್ಯಾಸಂಗಮಾಡಿದವರು.

ಮೈಸೂರಿನ ಪರಮ ಭಾಗ್ಯ

ಮೈಸೂರು ಸಂಸ್ಥಾನದ ಸುಯೋಗದಿಂದ ದೊರೆ ತಿರುವ ಭಾಗ್ಯಗಳಲ್ಲೆಲ್ಲ ಅತ್ಯಂತ ಹೆಚ್ಚಿನ ಭಾಗ್ಯದ ವಿಚಾರವನ್ನು ಈ ಭಾಷಣದ ಕೊನೆಯಲ್ಲಿ ಪ್ರಸ್ತಾ ವಿಸಲು ಉಳಿಸಿಟ್ಟುಕೊಂಡಿದ್ದೇನೆ. ವಿವೇಕಿಗಳೂ, ಮಾನ್ಯರೂ, ಕೃಪಾಳುಗಳೂ ಆದ ನಮ್ಮ ಶ್ರೀಮನ್ಮಹಾ ರಾಜರವರನ್ನು ಪಡೆದಿರುವುದೇ ಆ ಭಾಗ್ಯ ಕೌಟಿ ಲ್ಯನು ಬರೆದಿರುವ ಅರ್ಥಶಾಸ್ತ್ರದ ವಿಷಯಾಧಿಕಾರದ ಏಳನೆಯ ಅಧ್ಯಾಯದಲ್ಲಿ ರಾಜನ ಮುಖ್ಯ ಕರ್ತವ್ಯ ಗಳಾವುವೆಂಬ ವಿಚಾರವಾಗಿ ಸೂಚಿಸಿರುವುದೇನೆಂದರೆ:

"ರಾಜನು ಅರಿಷಡ್ವರ್ಗ ತ್ಯಾಗದಿಂದ ಇಂದ್ರಿಯ ನಿಗ್ರಹ ಮಾಡಿರಬೇಕು. ವೃದ್ಧಸಂಯೋಗದಿಂದ ಪ್ರಜ್ಞಾಭಿವೃದ್ಧಿಮಾಡಿಕೊಳ್ಳಬೇಕು ಯಾವಾಗಲೂ ಕಾರ್ಯಸಟುತ್ವವನ್ನು ತೋರಿಸಿ ಪ್ರಜೆಗಳ ಯೋಗ ಕ್ಷೇಮವನ್ನು ಸುರಕ್ಷಿತವಾಗಿ ಕಾಪಾಡಬೇಕು ಪ್ರಜೆ ಗಳು ಸ್ವಧರ್ಮ ನಿರತರಾಗಿರುವಂತೆ ಅಧಿಕಾರವನ್ನು ನಡೆಯಿಸಿ ಕಾರ್ಯಾನುಶಾಸನ ಮಾಡಬೇಕು. ವಿದ್ಯೋಪದೇಶದಿಂದ ವಿನಯವನ್ನು ಪಡೆಯಬೇಕು ಹೀಗೆ ಜಿತಾತ್ಮನಾಗಿ ಅರ್ಥ ಸಂಯೋಗವನ್ನು ಪ್ರಜೆ ಗಳಿಗೆ ದೊರೆಯಿಸಿ ಅವರ ಅಭ್ಯುದಯವನ್ನು ಸಾಧಿಸಿ ಅವರಿಗೆ ಪ್ರಿಯನಾಗಬೇಕು"

ಕೌಟಿಲ್ಯನ ಅರ್ಥಶಾಸ್ತ್ರವು ರಾಜಧರ್ಮವು ಈ ರೀತಿ ನಿರೂಪಿಸಿದೆಯೆಸ್ಟೆ. ಶ್ರೀಮನ್ಮಹಾರಾಜರವರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರರವರನ್ನು ಈಗ್ಗೆ ಸುಮಾರು ಮೂವತ್ತು ವರ್ಷಗಳ ಹಿಂದೆ ಸೇವಿ ಸಿದ ಇಂಡಿಯನ್ ಸಿವಿಲ್ ಸರ್ವಿಸ್ಸಿಗೆ ಸೇರಿದ ಮೇಧಾ ವಿಗಳಾದ ಅಧಿಕಾರಿಗಳೊಬ್ಬರು ಮೆಹಸ್ವಾಮಿಯವರ ವಿಚಾರವಾಗಿ ಈಗ್ಗೆ ಹನ್ನೆರಡು ವರ್ಷಗಳ ಕೆಳಗೆ ಬರೆ ದಿಟ್ಟಿರುವುದನ್ನು ಅದರೊಡನೆ ಹೋಲಿಸಿ ನೋಡಬೇ ಕೆಂದು ತಮಗೆ ಬಿನ್ನವಿಸುವೆನು.

'ಶ್ರೀಮನ್ಮಹಾರಾಜರವರು ಕಿರಿಯವಯಸ್ಸಿನವರಾ ದರೂ ಅಸಾಧಾರಣರೀತಿಯ ಹಿರಿಯ ಮೇಧಾವಿಗಳಾ ಗಿದ್ದರು ಅದಾಗ್ಯೂ ವಯೋನುಗುಣವಾದ ಬಾಲ ಭಾವದಿಂದ ಸಾಹಸಪ್ರಿಯರ್ಶನದ ಆಟಪಾಟಗಳಲ್ಲಿಯೂ ಮತ್ತು ಇತರ ಸರ್ವವಾದ ಸುಖಸಾಧನಗಳಲ್ಲಿಯೂ ತೀವ್ರಾಸಕ್ತಿಯನ್ನಿಟ್ಟು ಪೂರ್ಣಮನಸ್ಸಿನಿಂದ ಅವುಗಳ ನ್ನನುಭವಿಸಿ ಹರ್ಷಿಸಲು ಅದರಿಂದ ಯಾವ ಬಾಧೆ ಕೂ ಇರಲಿಲ್ಲ ಅವರು ಬೇಟೆಯ ನಾಯಿಗಳನ್ನು ಬಿಟ್ಟುಕೊಂಡು ಕುದುರೆಯನ್ನು ಓಡಿಸಿ ಧೀರತೆಯಿಂದ ಬೇಟೆಯಾಡಿ ಸುಪ್ರಸಿದ್ಧರಾದ ಆಟಗಾರನೊಡನೆ ಮೇಲುಗೈಯಾಗಿ ಪೋಲೋ ಆಟವನ್ನಾಡಿ, ಅತ್ಯು ತ್ತಮರೀತಿಯಲ್ಲಿ ಕ್ರಿಕೆಟ್ ಚೆಂಡಾಟವನ್ನಾಡುತ್ತಿ ದ್ದರು. ಅವರಿಗೆ ವ್ಯಾಣಿಗಳಲ್ಲಿ ಬಹಳ ಪ್ರೀತಿ ಜರಿ ಪ್ಲೆಯೂ ಮುಖ್ಯವಾಗಿ. ಕಾದುರೆಗಳಲ್ಲಂತೂ ಸಂತತವೂ ಅವರೊಡನೆ ಇರುತ್ತಿದ್ದ ನಾಯಿಯೊಡನೆಯೂ ಬಹಳ ಪ್ರೀತಿ. ಬೆಳಗಿನಜಾವತ್ತು ಅವರು ಅಶ್ವಶಾಲೆಗೆ ಹೋಗಿ ಅಲ್ಲಿ ಕುದುರೆಗಳಿಗೆ ಶಿಕ್ಷಣ ಕೊಡುತ್ತಿದ್ದುದನ್ನು ಪರಾಮ ರ್ಶಿಸಿ ಅಲ್ಲಿದ್ದ ಬಂಡಿಯ ಕುದುರೆಗಳಿಗೂ, ಪೋಲೋ ಕುದುರೆಗಳಿಗೂ ಬೇಟೆಯ ಕುದುರೆಗಳಿಗೂ ಮಸಾಲೆ ಸೊಪ್ಪನ್ನೂ ಮೂಲಂಗಿಯನ್ನೂ ತಿನ್ನಿಸದೆ ತಪ್ಪಿನ ದಿನವೇ ಇಲ್ಲ ಅವರಿಗೆ ಪಾಶ್ಚಾತ್ಯ ಪೌರಸ್ತ್ಯ ಸಂಗೀ ತಗಳೆರಡರಲ್ಲಿಯೂ ಅಭಿರುಚಿ ಮತ್ತು ಪರಿಶ್ರಮ. ಅವರು ತಮ್ಮ ಸ್ನೇಹಿತರಾಗಿರಲು ಆರಿಸಿದ ಇಂಗ್ಲೀಷ್ ಜನರೆಲ್ಲರೂ ಶೀಲವಂತರೇ ಆಗಿರುತ್ತಿದ್ದರು. ಶೀಲ ವಂತರಲ್ಲದವರನ್ನು ಪ್ರಮಾದದೋಷದಿಂದ ಅವರು ಆರಿಸಿದ ಒಂದು ಸಂದರ್ಭವೂ ನನ್ನ ಕಣ್ಣಿಗೆ ಬೀಳ ಲಿಲ್ಲ ಭಾರತೀಯರಲ್ಲಿ ಅವರು ಆರಿಸಿದವರಲ್ಲಿ ಪ್ರತಿ ಯೊಬ್ಬರ ವಿಚಾರವಾಗಿಯೂ ಆ ಎಳೆಯ ವಯಸ್ಸಿನಲ್ಲಿ ಅವರಿಗಿದ್ದ ಯೋಗ್ಯತಾನಿಷ್ಕರ್ಷೆಯ ಅಂತರ್ಜ್ಞಾನ ಸಾಮರ್ಥ್ಯವು ವಿಸ್ಮಯಕರವಾಗಿದ್ದಿತು. ವಯಸ್ಸಿನ ಲ್ಲೇನೋ ನಾನೇ ಅವರಿಗಿಂತ ವಿಶೇಷ ಹಿರಿಯನಾಗಿ ದ್ದರೂ ಕೆಲವು ವಿಚಾರಗಳ ತಾರತಮ್ಯಜ್ಞಾನದಲ್ಲೇ ನೋ ಅವರೇ ನನಗಿಂತ ಹಿರಿಯರಾಗಿದ್ದರು. ಎಂದೆಂ ದಿಗೂ ಅವರು ಹಿರಿಯರಾಗಿದ್ದೂ ಇರುತ್ತಾರೆ. ಹಿಂದೆ

[೬ನೆಯ ಪುಟವನ್ನು ನೋಡಿ.]

ಪಂಚಾಚಾರ್ಯಪ್ರಭಾ.

೧೯೩೮ ನೆಯ ಆಗಸ್ಟ್ ತಾ|| ೧೫ ನೇ ಸೋಮವಾರ

ಪಾಶುಪತ-ಮಹಾಪಾಶುಪತ ಮತಗಳಲ್ಲಿ ಭೇದ.

ಪಶು-ಪಾಶ-ಪತಿ ಈ ಮೂರು ಪದಾರ್ಥಗಳ ಸ್ವರೂಪವನ್ನರಿಯುನಿಕೆಯೇ ಪಾಶುಪತಮತದ ರಹಸ್ಯವಾಗಿರುವದು. ಪಶುವೆಂದರೆ ಜೀವನು, ಪಾಶವೆಂದರೆ ಜನನ ಮರಣರೂಪಬಂಧನವು, ಪತಿಯೆಂದರೆ ನಿಯಮಕನಾದ ಪರಶಿವನು , ಲೋಕದಲ್ಲಿ ಪಾಶದಿಂದ ಬಂಧಿಸಲ್ಪಟ್ಟ ಪಶುವು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ನಿಬಂಧದಿಂದ ವ್ಯಥೆಪಡುತ್ತಲಿರುವನೆ. ಅಂತಹ ಪಶುವಿನ ಕೊರಳಿಗೆ ಬಿದ್ದಿರುವ ಪಾಶವನ್ನು ಕಡಿಹಾಕಲಿಯಾದ ಪಶುಪಾಲಕನು ಛೇದಿಸುವುದಾದರೆ ಆ ಪಶುವು ನಿರಾತಂಕವಾಗಿ ಸಂತೋಷಪಡುವದಲ್ಲವೆ! ಅದರಂತೆ ಮಾಯಾಪಾಶದಿಂದ ಬಂಧಿಸಲ್ಪಟ್ಟು ಕಾಮ-ಕ್ರೋಧಾದಿಗಳಿಗೆ ವಶನಾಗಿ ಸುಖದುಃಖಗಳನ್ನನುಭವಿಸುತ್ತಲೂ,

"ರಮಣೀಯಚರಣಾ ರಮಣೀಯಾಂ ಯೋನಿಮಾಪದ್ಯಂತೇ"

ಎಂಬ ಶ್ರುತಿಯ ಅಭಿಪ್ರಾಯದಂತೆ ಪುಣ್ಯಪಾಪಕರ್ಮಾನುಗುಣವಾಗಿ ಬ್ರಾಹ್ಮಣಾದಿ ನಾನಾವಿಧ ಜಾತಿಗಳಲ್ಲಿ ಶರೀರಗಳನ್ನು ಧರಿಸುತ್ತಲೂ ಇರುವ ಜೀವನನ್ನು ಅನಾದಿಕಾಲದಿಂದ ಆವರಿಸಿರುವ ಈ ಮಾಯಾಪಾಶವನ್ನು ಪತಿಯಾದ ಪರಶಿವನು ಎಂದ ಛೇದಿಸುವನೋ ಅಂದೇ ಜೀವನು ಬಂಧದಿಂದ ನಿವೃತ್ತನಾಗಿ ನಿತ್ಯಸುಖಸ್ವರೂಪ ಮೋಕ್ಷಸಾಮ್ರಾಜ್ಯವನ್ನ ಪಡೆಯುವನು ಈ ವಿಷಯದಲ್ಲಿ—

'ಆತ್ಯಂತಿಕಪಾಶನಿವೃತ್ತಿಪೂರ್ವಕ ಶಿವತ್ವಪ್ರಾಪ್ತಿರಂತ ಮುಕ್ತಿಃ'

ಎಂದು ಭಾಷ್ಯಕಾರರು ಅಪ್ಪಣೆಕೊಡಿಸಿರುವರು ಈ ಪಾಶುಪತನ್ಯಾಸವು ಪಾಶುಪತ, ಮಹಾಪಾಶುಪತವೆಂದು ಎರಡು ಪ್ರಕಾರವಾಗಿರುವದು

ದ್ವಿಧಾ ಪಾಶುಪತಂ ಜ್ಞೇಯಂ ಶೂರ್ಮಪುರವಿಶೇದತಃ
ಶೈವದೀಕ್ಷಾನುಸಾರೇಣ ಭಸ್ಮರುದ್ರಾಕ್ಷಧಾರಣಂ ॥
ಲಬ್ಧ್ವಾ ಶಿವಂ ಗುಹಾದೇವಂ ಲಿಂಗರೂಪಮನುತ್ತಮಪತಿಂ ।
ಯೋರ್ಚಯೇತ್ತಂ ತ್ರಿಕಾಲಂ ನೈ ಪೂರ್ವಪಾಶುಪತಂ ಹಿ ತತ್ ॥

ಶೈವದೀಕ್ಷೆಯನ್ನು ಪಡೆದು ಭಸ್ಮರುದ್ರಾಕ್ಷಧಾರಿಯಾಗಿ ತ್ರಿಕಾಲದಲ್ಲಿಯೂ ಶಿವಲಿಂಗವನ್ನು ಅರ್ಚಿಸುವುದೇ ಪಾಶುಪತವೆನಿಸುವದು

ನಿಗಮಾಗಮಸಂಧಾನವೇದವಿಧಾನತಃ ।
ಶಿವಲಿಂಗಂ ಕರೇ ಕಂಠೇ ಧೃತ್ವಾ ವಕ್ಷಸ್ಥಲೇಷು ವಾ ॥
ತ್ರಿಕಾಲಂ ಯೋರ್ಚಯೇದ್ಭಕ್ತ್ಯಾ ಮಹಾಪಾಶುಪತೋ ಹಿ ಸಃ ॥

ಎಂಬ ನಿಗಮಾಗಮಪ್ರಮಾಣಾನುಸಾರವಾಗಿ ವೇದಾಗಮಗಳಲ್ಲಿ ಹೇಳಿದಂತೆ ಪಡೆದ್ಭಸ್ಮೋದ್ಧೂಳನಪೂರ್ವಕ ಶ್ರೌತ ಶಿವದೀಕ್ಷೆಯನ್ನು, ಪಡೆದು ಪಂಚಸೂತ್ರಫಲಿತವಾದ ಶ್ರೌತಶಿವಲಿಂಗವನ್ನು ಪಸ್ತವಲ್ಲಾಗಲಿ ಕಂಠದಲ್ಲಾಗಲಿ ವಕ್ಷಸ್ಥಲದಲ್ಲಾಗಲಿ ಧರಿಸಿದ್ದು ಭಕ್ತಿಯಿಂದ ತನ್ನ ಹಸ್ತ ವೀರವಲ್ಲಿರಿಸಿ ತ್ರಿಕಾಲದಲ್ಲಿ ಶ್ರೌತವಿಧಾನದಿಂದ ಪೂಜಿಸುತ್ತಿರುವುದೇ ಮಹಾಪಾಶುಪತವೆನಿಸುವದು

ಶ್ರೌತಂಶ್ರೌತವಿಭೇದೇನ ತದ್ದ್ವಿಧಾ ಪರಿಕೀರ್ತ್ಯತೇ ।
ವರ್ಣಾಶ್ರಮೋಚಿತಂ ಧರ್ಮಂ ನೇದಮಾರ್ಗವಿರೋಧತಃ ।
ಕೃತ್ವಾರ್ಚಯತಿ ಯಶ್ಶಂಭುಂ ಶ್ರೌತಶೈವಸ್ಯ ಈರ್ಯತೇ ।

ಈ ಪಾಶುಪತದಲ್ಲಿ ಶ್ರೌತವಾಶುಪತವೆಂತಲೂ, ಆಶ್ರೌತ ಪಾಶುಪತವೆಂತಲೂ ಮತ್ತೆ ಎರಡುಪ್ರಕಾರವುಂಟು ಅವುಗಳಲ್ಲಿ ಬ್ರಾಹ್ಮಣಾದಿವರ್ಣಗಳನ್ನೂ ಬ್ರಹ್ಮಚರ್ಯಾದ್ಯಾಶ್ರಮಗಳನ್ನೂ ಬಿಡದೆ, ನೇಮೋಕ್ತಮಾರ್ಗಾನುಸಾರವಾಗಿ ಯಾರು ಪರಶಿವಲಿಂಗವನ್ನು ಪೂಜಿಸುವರೋ ಅವರು ಶ್ರೌತಪಾಶುಪತರೆನಿಸುವರು

ವರ್ಣಾಶ್ರಮೋಚಿತಂ ಧರ್ಮಂ ತ್ಯಕ್ತ್ವಾ ತಾಂತ್ರಿಕಮಾರ್ಗತಃ ।
ಯಃ ಪೂಜಯತಿ ವಿಶ್ವೇಶಂ ತಂತ್ರಶೈವಸ್ಯ ಉಚ್ಯತೇ ।

ಬ್ರಾಹ್ಮಣಾದಿವರ್ಣಧರ್ಮಗಳನ್ನೂ ಬ್ರಹ್ಮಚರ್ಯಾದ್ಯಾಶ್ರಮಧರ್ಮಗಳನ್ನೂ ನಿರಾಕರಿಸಿ ವೇದಮಂತ್ರಗಳನ್ನು ಪರಿಸದೆ ಕೇವಲ ತಾಂತ್ರಿಕಮಾರ್ಗದಿಂದ ಯಾರು ಪರಶಿವನನ್ನು ಪೂಜಿಸುವರೋ ಅವರು ಆಶ್ರೌತಪಾಶುಪತರೆನಿಸಿಕೊಳ್ಳುವರು.

ಆಶ್ರೌತಪಾಶುಪತರಿಗೆ ವೇದೋಕ್ತಕರ್ಮಾನುಷ್ಠಾನಗಳಾಗಲಿ, ಪಡಧ್ವನ್ಮೋಧನಪೂರ್ವಕ ಶಿವಲಿಂಗಧಾರಣವಾಗಲಿ, ಶ್ರೌತಭಸ್ಮರುದ್ರಾಕ್ಷಧಾರಣವಾಗಲಿ, ಶ್ರೌತ ಮಂತ್ರವಾಗಲಿ, ಶ್ರೌತಶಿವಪ್ರಸಾದಪಾದೋದಕಗ್ರಹಣವಾಗಲಿ ವಿಹಿತವಾಗಿಲ್ಲ

'ಶ್ರೌತಾನಾಂ ವೀರಶೈವಾನಾಂ ವೇದಮಾರ್ಗೈಕವರ್ತಿನಾಂ'

ಎಂಬ ಪ್ರಮಾಣೋಕ್ತಿಯ ಬಲದಿಂದ ವೀರಶೈವರು ಯಾವಾಗಲೂ ವೇದಮಾರ್ಗಾವಲಂಬಿಗಳಾದುದರಿಂದ, ಇವರು ಪೂಜಿಸುವ ಇಷ್ಟಲಿಂಗವಾಗಲಿ, ಇಷ್ಟಲಿಂಗವನ್ನು ಅನುಗ್ರಹಿಸುವ ಗುರುವಾಗಲಿ, ಜಂಗಮನಾಗಲಿ, ಮಂತ್ರವಾಗಲಿ, ರುದ್ರಾಕ್ಷವಾಗಲಿ, ಭಸ್ಮವಾಗಲಿ, ಪಾದೋದಕವಾಗಲಿ, ಪ್ರಸಾದವಾಗಲಿ ಎಲ್ಲವೂ ವೇದೋಕ್ತಗಳೇ ಆಗಿರುತ್ತವೆ ಲಿಂಗಧಾರಣಸಾಧಕಗಳಾದ ಶಿವದೀಕ್ಷಾವಿಧಿಕರ್ಮಗಳೆಲ್ಲವೂ ವೇಸಮಂತ್ರೋಚ್ಚಾರಣಪೂರ್ವಕವಾಗಿಯೇ ನಡೆಯುತ್ತಲಿವೆ ಪ್ರತಿದಿವಸವೂ ತ್ರಿಕಾಲದಲ್ಲಿ ಮಾಡಬೇಕಾಗಿರುವ ಇಷ್ಟಲಿಂಗಪೂಜಾವಿಧಾನವಾದರೋ ಕೇವಲ ವೇದಮಯವಾಗಿಯೇ ನಡೆಯುತ್ತಿರುವದು ಮತ್ತು ಗೃಹಸ್ಥಾಶ್ರಮಿಗಳಿಗೆ ಆಯಾಯ ಕಾಲಗಳಲ್ಲಿ ನಡೆಯಬೇಕಾಗಿರುವ ಗರ್ಭಾಧಾನಾದಿ ನೈಮಿತ್ತಿಕವಿಧಾನಗಳೆಲ್ಲವೂ ವೇದಮಂತ್ರಗಳಿಂದಲೇ ನಡೆಯುತ್ತಿರುವುವು ಅಂತ್ಯೇಷ್ಟಿಕ್ರಿಯೆಯೂ ವೇದ ಮಂತ್ರಗಳಿಂದಲೇ ನಡೆಯುವದು ಇತ್ಯಾದಿಕಾರಣಗಳಿಂದ ವೀರಶೈವರು ಶ್ರೌತಮಹಾಪಾಶುಪತರೆಂದು ಹೇಳಿಸಿಕೊಳ್ಳುವರು ವೀರಶೈವಮತದಲ್ಲಿ ಯಾರು ವರ್ಣಾಶ್ರಮಗಳಲ್ಲನೆಂದು ಹೇಳುವರೋ ಅವರು ಶೈತಕೋಶಾತಿಕೀನ್ಯಾಯಾನುಸಾರವಾಗಿ ನಾನುಧಾರಿ ವೀರಶೈವರೆನಿಸಿಕೊಳ್ಳುವರಲ್ಲದೆ ಶ್ರೌತವೀರಶೈವರೆನಿಸಿಕೊಳ್ಳವುದಿಲ್ಲ ಅಂದಮೇಲೆ ಶ್ರುತ್ಯುಕ್ತಕರ್ಮಾನುಷ್ಠಾನಗಳೆಲ್ಲಿಂದ ಒದಗುವುದೂರರು. ಇಂದವರಿಗೆ ಪಂಚಸೂತ್ರಮಯವಾದ ಇಷ್ಟಲಿಂಗಧಾರಣದ ಫಲವಾದರೂ ಮರುಮರೀಚಿಕಾಜಲದಂತೆಯೇ ಸರಿ!

ವರ್ಣಾಶ್ರಮಾಸದಾಚಾರಾ ಶಿವೇನ ಕಥಿತಾಃ ಪುರಾ ।
ಯೇ ತಾನುಲ್ಲಂಘ್ಯ ವರ್ತಂತೇ ಶಿವಸ್ಯಾಜ್ಞಾ ಫಲಾಸಿನಃ ।
ರಾಜಾಜ್ಞಾ ಭಂಗಕೃನ್ನೃಣಾಂ ಯಥಾ ದಂಡೋ ಭವಿಷ್ಯತಿ ।
ಶಿವಾಜ್ಞಾ ಭಂಗಕೃನ್ನೃಣಾಂ ದಂಡೋ ಹಿ ನರಕಸ್ತಥಾ ॥
ಸಾಂಬೇನ ಶಂಭುನಾಜ್ಞಪ್ತಂ ಧರ್ಮಂ ತ್ಯಕ್ತ್ವಾ ಚರ್ಯಯೇದ್ಯಿವಂ ।
ಸ ತಸ್ಮೈ ಕುಪ್ಯತೇ ಶಂಭುಸ್ತಾಜ್ಞಾ ಭಂಗಮಿತ್ಯತಃ ।
ಚೋದನಾಲಕ್ಷಣಂ ಧರ್ಮಂ ಶಿವೇನಾಜ್ಞಪ್ತಮತ್ಯಜನ್ ।
ಶಂಕರಂ ಪೂಜಯೇದ್ಯಸ್ತು ತಸ್ಮೈ ಸಾಂಬಃ ಪ್ರಸೀದತಿ ।

ಬ್ರಾಹ್ಮಣಾದಿವರ್ಣಗಳು ಬ್ರಹ್ಮಚರ್ಯಾದ್ಯಾಶ್ರಮಗಳು ಜಗದಾದಿಯಲ್ಲಿ ಶಿವನಿಂದಾಜ್ಞಪ್ತಗಳಾಗಿವೆ ಇಂಥ ವರ್ಣಾಶ್ರಮಗಳನ್ನು ಯಾರು ಇಲ್ಲವೆಂದು ಹೇಳುವರೋ ಅವರು ವೇದಕರ್ತನಾದ ಶಿವನ ಆಜ್ಞೆಯನ್ನಲ್ಲಂಘಿಸುವರು. ಅಂಥವರು ರಾಜಾಜ್ಞೆಗೆ ಭಂಗವನ್ನುಂಟುಮಾಡುವ ಅಪರಾಧಿಗಳಂತೆ ದಂಡನಾರ್ಹರಾಗುವರು ಪ್ರಜಾಪಾಲಕನಾದ ಮಹಾರಾಜನು ಮಾಡಿದ ನಿಯಮಗಳನ್ನೆಲ್ಲಾ ಅನುಸರಿಸುವ ಪ್ರಜೆಗಳಂತೆ, ಎಲಭಕ್ತರು ಪರಮೇಶ್ವರನು ಆಜ್ಞಾಪಿಸಿವ ಧರ್ಮಮಾರ್ಗವನ್ನು ಅನುಸರಿಸಿ ಪರಾವೆ ಲಿಂಗವನ್ನು ಅರ್ಚಿಸುತ್ತ ಬ್ರಪುರಕೇಟನ್ಯಾಯಾನುಸಾರವಾಗಿ ಶಿವತಾದಾತ್ಮ್ಯವನ್ನು ಪಡೆಯುವೇಕು ರಾಜಾಜ್ಞೆಗೆ ವಿರೋಧಿಗಳಾದವರು ರಾಜನ ಕೋಪಕ್ಕೆ ಭಾಗಿಗಳಾಗುವಂತೆ ನಿಜಾಜ್ಞೆಗೆ ವಿರೋಧಿಗಳಾಗಿ ಶಿವನನ್ನಾರಾಧಿಸುವರು ಶಿವನ ಕೋಪಕ್ಕೆ ಭಾಗಿಗಳಾಗುತ್ತಾರೆ ಧರ್ಮವನ್ನು ಬಿಡದೆ ಆ ಪರಶಿವಲಿಂಗವನ್ನು ಪೂಜಿಸುವನ. ರಾಜಾಜ್ಞೆಯನ್ನನುಸರಿಸುವ ಪ್ರಜೆಗಳಂತೆ ಶಿವನೊಲುಮೆಯನ್ನು ಪಡೆಯುವನು ಎಂದು ಶಿವಾಗಮಗಳು ಪ್ರತ್ಯಕ್ಷವಾಗಿ ಬೋಧಿಸುವವರಿಂದಲೂ ಇಷ್ಟಲಿಂಗಧಾರಿಗಳಾದ ವೀರಶೈವಬ್ರಾಹ್ಮಣರು ವರ್ಣಾಶ್ರಮೋಚಿತ ಧರ್ಮಗಳನ್ನು ಬಿಡದವರಾದುದರಿಂದಲೂ ಶ್ರೌತಮಹಾಪಾಶುಪತವ್ರತಧಾರಿಗಳೆನಿಸುತ್ತಾರೆ ವರ್ಣಾಶ್ರಮಧರ್ಮಗಳನ್ನು ತ್ಯಜಿಸುವ ಮಿಕ್ಕ ಲಿಂಗಮುದ್ರಾಧಾರಿಗಳು ಆಶ್ರೌತ ಪಾಶುಪತರೆನಿಸಿಕೊಳ್ಳುತ್ತಾರೆ ಇವರು ಶ್ರುತ್ಯುಕ್ತಕರ್ಮಗಳಿಗೆ ವಿರೋಧಿಗಳಾದುದರಿಂದ ಅವೈದಿಕರೆನಿಸಿಕೊಳ್ಳುವರು

ವರ್ತಮಾನಸಂಗ್ರಹ.

ಹಿಂದೂಸ್ಥಾನದ ರಕ್ಷಣೆಗಾಗಿ ೭೫ ಸಾವಿರ ಇಂಗ್ಲೀಷ್ ಸೈನಿಕರು.

ಹಿಂದೂಸ್ಥಾನದ ರಕ್ಷಣೆಗಾಗಿ ಇಂಗ್ಲೆಂಡಿನಿಂದ ೭೫ ಸಾವಿರ ಜನ ಬ್ರಿಟಿಷ್ ಸೈನಿಕರನ್ನು ಕರೆಯಿಸಬೇಕೆಂಬ ವಿಚಾರವು ನಡೆಯುತ್ತಿರುವುದೆಂದು ತಿಳಿದುಬರುತ್ತದೆ.

ಜರ್ಮನಿಯಲ್ಲಿ ಸೈನ್ಯಸಿದ್ಧತೆ!

ಇತ್ತೀಚಿಗೆ ಜರ್ಮನಿಯಲ್ಲಿ ಅಸಾಧ್ಯವಾದ ಸೈನ್ಯ ಸಿದ್ಧತೆಯು ನಡೆದಿದೆಯಂತೆ! ಇದನ್ನು ನೋಡಿ ಜರ್ಮನಿಯ ಪ್ರಜೆಗಳು ಕಳವಳಗೊಂಡಿರುವರು. ಫ್ರಾನ್ಸ್ ಗಡಿನಾಡಿನಲ್ಲಿ ೫೦ ಸಾವಿರ ಸೈನ್ಯವನ್ನು ಜರ್ಮನ್ನರು ಇಟ್ಟಿದ್ದಾರಂತೆ!

ಕಲ್ಲು ಉರುಳಿ ಮರಣ.

ಬೆಜವಾಡ ಹೈದರಾಬಾದು ರಸ್ತೆಯಲ್ಲಿ ಅನೇಕಮಂದಿ ಕೆಲಸಗಾರರು ಒಂದು ಗುಡ್ಡದ ಭಾಗವನ್ನು ಉರುಳಿಸುತ್ತಿದ್ದಾಗ ದೊಡ್ಡದೊಡ್ಡ ಕಲ್ಲು ಬಂಡೆಗಳು ಉರುಳಿ ಮೂವರು ತತ್ಕ್ಷಣ ಸತ್ತರು ಒಬ್ಬನಿಗೆ ಕಾಲುಗಳು ಮುರಿದವು ಇವನು ಆಸ್ಪತ್ರೆಯಲ್ಲಿ ಚಿಂತಾಜನಕಸ್ಥಿತಿಯಲ್ಲಿದ್ದಾನೆ

ಹಳೆಯ ಸ್ಟಾಂಪುಗಳನ್ನು ಪಯೋಗಿಸಲಾಗದು.

ಬರುವ ಸಪ್ಟಂಬರ್ ೧ನೆಯ ತಾರೀಖಿನಿಂದ ವಿಕ್ಟೋರಿಯ ಮಹಾರಾಣಿಯ ಮತ್ತು ೧ನೆಯ ಎಡ್ವರ್ಡ್ ಪ್ರಭುಗಳ ಚಿತ್ರಗಳಿರುವ ನೋಸ್ಟ್ ಸ್ಟಾಂಪುಗಳನ್ನು ಉಪಯೋಗಿಸಕೂಡದೆಂದೂ ಹಳೆ ಸ್ಟಾಂಪುಗಳುಳ್ಳವರು ಆರು ತಿಂಗಳೊಳಗಾಗಿ ಅವುಗಳನ್ನು ಪೋಸ್ಟಾಫೀಸಿಗೆ ಕೊಟ್ಟು ಅದೇ ಬೆಲೆಯ ಹೊಸ ಸ್ಟಾಂಪುಗಳನ್ನು ಪಡೆಯಬಹುದೆಂದೂ ಪ್ರಕಟವಾಗಿದೆ

ಫಕೀರನ ಅದ್ಭುತಶಕ್ತಿ!

ತಂಜಿಪ್ಪೂರಿನ ರಹಿಮಾನ್ ಎಂಬ ಹೆಸರಿನ ಫಕೀರ ನೊಬ್ಬನು ಇಂಗ್ಲೆಂಡಿನಲ್ಲಿ ಅದ್ಭುತಸಾಮರ್ಥ್ಯವನ್ನು ತೋರಿಸಿ ಅಲ್ಲಿಯ ಜನರನ್ನು ಚಕಿತರನ್ನಾಗಿ ಮಾಡಿದ್ದಾನೆ ಇವನು ಒಂದು ಪೆಟ್ಟಿಗೆಯಲ್ಲಿ ಮಲಗಲು ೫ ದಿವಸಗಳವರೆಗೆ ಆ ಪೆಟ್ಟಿಗೆಯನ್ನ ಸಮುದ್ರದಲ್ಲಿ ಮುಳುಗಿಸಿದರಂತೆ! ೫ ದಿನಗಳಾದನೇಲೆ ತೆಗೆಯಲು ಸುಖವಾಗಿದ್ದನು ಇದನ್ನನ್ನೋಡಿ ವೈಜ್ಞಾನಿಕರು ಬೆರಗಾಗಿ ಹೋಗಿದ್ದಾರೆ

ಬರ್ಮಾದಲ್ಲಿ ಶಾಂತಿಯುಂಟಾಗಿದೆ.

ಬರ್ಮಾದಲ್ಲಿರುವ ಹಿಂದೂ ಮುಸ್ಲಿಂ ಮತ್ತು ಬರ್ಮಾ ಬೌದ್ಧಮತೀಯರಲ್ಲಿ ಹೊಡೆದಾಟಗಳು ನಿಂತು ಶಾಂತಿಯು ನೆಲೆಗೊಂಡಿದೆ ಬರ್ಮಾಯ ಮತ್ತು ಭಾರತೀಯ ಮುಖಂಡರು ಸಸ ಸರಿ ಎರಡು ಕೋಮಿನವರೂ ಸ್ನೇಹಭಾವದಿಂದ ವರ್ತಿಸಬೇಕೆಂದು ಒತ್ತಾಯಪಡಿಸುತ್ತಿದ್ದಾರೆ ಮಾಂಡಲೆಯಲ್ಲಿ ಯಾವ ಗಲಭೆಯೂ ಇಲ್ಲವೆಂದು ಅಧಿಕಾರಯುತವಾಗಿ ಪ್ರಕಟವಾಗಿದೆ

ಬೊಂಬಾಯಿ ಪಾನನಿರೋಧಕಾರ್ಯ

ಬೂಂಬಯಿಯಲ್ಲಿ ನಡೆದಿರುವ ಪಾನನಿರೋಧಕಾರ್ಯವು ಜನಸಾಮಾನ್ಯ ಪಡೆದಿರುವದೆಂಬುದರ ಅನುಭವವು ಉಂಟಾಯಿತ ಕಳೆದ ಒಂಭತ್ತನೆಯ ತಾರೀಖು ಮತ್ತು ಹತ್ತನೆ ಎರಡು ದಿನಗಳಿಂದ ನಗರದ ಎಲ್ಲ ಮದ್ಯದಂಗಡಿಗಳನ್ನೂ ಪ್ರಜ್ಞಾಪೂರ್ವಕವಾಗಿ ಅಪ್ಪಣೆಮಾಡಲಾಗಿತ್ತು ಇದರಿಂದ ಎಲ್ಲವೆಯಲ್ಲೂ ಶಾಂತವಾಗಿತ್ತು. ಕ್ರಯಾಣಸೌಕರ್ಯಗಳಿದ್ದರೂ ಕೂಡ ನಗರದ ಅಕ್ಕಪಕ್ಕಗಳಲ್ಲಿದ್ದ ಹೆಂಡದಂಗಡಿಗಳಿಗೆ ವಿದೇಶಜನರು ಹೋಗಲಿಲ್ಲ ಕುಡಿಯುವರೆಲ್ಲಿ ಈ ಎರಡು ದಿನದ ಪಾನನಿರೋಧಕಾರ್ಯಕ್ರಮಕ್ಕೆ ಸಂತೋಷದಿಂದ ಸಮ್ಮತಿಸಿದರೆಂದು ತೋರುತ್ತಿದೆ ಸಂಬಳದ ದಿನ ಗಿರಣಿಕ್ಷೇತ್ರಗಳಲ್ಲಿ ಕೂಲಿಗಳಲ್ಲಿ ಹೊಡದಾಟಗಳಾಗುತ್ತಿದ್ದವು ಈ ಸಾರೆ ಶಾಂತವಾಗಿತ್ತು

ಕಾಗದಗಳನ್ನು ಬರೆಯುವ ತೊಂದರೆಯೇ ತಪ್ಪಿತು

ಡಚ್‌ಪೋಸ್ಟ್ ಖಾತೆಯವರು ಒಂದು ಹೊಸ ಯಂತ್ರವನ್ನು ಕಂಡುಹಿಡಿದಿದ್ದಾರೆ. ಒಂದು ರಿಕಾರ್ಡ್ ಮಿಷನ್ ಯಂತ್ರಕ್ಕೆ ಒಂದು ನಾಣ್ಯವನ್ನು ಹಾಕಿ ಬರೆಯಬೇಕಾದ ಸಂಗತಿಯನ್ನು ಅದರ ಮುಂದೆ ಹೇಳಿದರೆಕೂಡ 3 ಗ್ರಾಮೋಫೋನಿನಂತೆ ಒಂದು ರಿಕಾರ್ಡು ಸಿದ್ಧವಾಗುತ್ತದೆ. ಆದನ್ನು ಕಾಗದದಲ್ಲಿ ಸುತ್ತಿ ವಿಳಾಸಬರೆದು ಪೋಸ್ಟಾಪಿನಲ್ಲಿ ಕಳಿಸಬೇಕು ತೆಗೆದುಕೊಳ್ಳುವವರು ಅದನ್ನು ಗ್ರಾಮೋಫೋನದಲ್ಲಿಟ್ಟು ಕೇಳಬೇಕಂತೆ!

ಸಮುದ್ರದಲ್ಲಿ ಮುಳುಗಿದ್ದ ಬಂಗಾರವನ್ನು ತೆಗೆಯುತ್ತಿದ್ದಾರೆ

ಸುಮಾರು 139 ವರ್ಷಗಳ ಹಿಂದೆ ಲಕ್ಷಾಂತರ ರೂ ಬಾಯಿ ಬೆಲೆಬಾಳುವ ಚಿನ್ನದ ಗಟ್ಟಿಗಳನ್ನು ತುಂಬಿಕೊಂಡು ಬರುತ್ತಿದ್ದ ಲೂಸ್ಟ್ರೋ ಎಂಬ ಹಡಗು ಆಮ್ಸ್ಟರ್ಡಾಂ ಬಳಿ ಸಮುದ್ರದಲ್ಲಿ ಮುಳುಗಿ ಹೋಗಿತ್ತು. ಈಗ ಅದರ ಶೋಧಕ್ಕಾಗಿ ಹೊರಟ ಡಚ್ ಹಡಗಿನವರು ಒಂದು ಬಂಗಾರದ ಗಟ್ಟಿಯನ್ನು ಸಮುದ್ರ ತಳದಿಂದ ಮೇಲಕ್ಕೆತ್ತಿದ್ದಾರೆ. ಆದರ ಬೆಲೆ ಸುಮಾರು 840 ಪೌಂಡು. ಇನ್ನೂ ಹೆಚ್ಚಿನ ಬಂಗಾರವು ಎತ್ತಲ್ಪಡಬಹುದೆಂದು ನಿರೀಕ್ಷಿಸಲ್ಪಟ್ಟಿದೆ

ಜರ್ಮನಿಯಲ್ಲಿ ಯಹೂದ್ಯರ ಸ್ಥಿತಿ!

ಜರ್ಮನಿ ಸರ್ಕಾರದ ಹೊಸ ಕಾನೂನಿನಂತೆ ಅಲ್ಲಿ ವ್ಯವಸ್ಥಿತಿಯಿಂದ ಜೀವಿಸುವ ಯಹೂದ್ಯರಿಗೆ ಕೊಟ್ಟ ವ ರಹದಾರಿಯು ಸೆಪ್ಟೆಂಬರ್ 30 ಕ್ಕ ಮುಗಿಯುವುದು. ಯುದ್ಧಕಾಲದಲ್ಲಿ ರಣರಂಗೆದಲ್ಲಿ ಯಾರು ಸೇವೆ ಸಲ್ಲಿಸಿರುವೋ ಅಂಧವರಿಗೆ ಮಾತ್ರ ತಿರುಗಿ ರಹದಾರಿ ಕೊಡುವುದು ಅವರುಗಳುಕೂಡ ಯಹೂದ್ಯರಿಗೆ ಮಾತ್ರ ಚಿಕಿತ್ಸೆಮಾಡಬೇಕು ಇತರರಿಗೆ ಮಾಡಕೂಡದೆಂದು ನಿರ್ಬಂಧವಿದೆ

ಹೈದರಾಬಾದಿನಲ್ಲಿ ಯೋಗಾಸನಪ್ರದರ್ಶನ

ಮೈಸೂರು ಜಗನ್ಮೋಹನ ಭವನದ ಯೋಗಶಾಲಾ ಮುಖ್ಯಕರಾದ ಶ್ರೀಮಾನ್ ಕೃಷ್ಣಮಾಚಾರ್ಯರೂ ಅವರ ಸೋದರಾದ ಶ್ರೀ ದೇಶಿಕಾಚಾರ್ಯರೂ ಹೈದರಾಬಾದಿಗೆ ಹೋಗಿ ಒಂದು ತಿಂಗಳಿನಿಂದ ಅಲ್ಲಿ ಪ್ರದರ್ಶನಗಳನ್ನು ಮಾಡಿಸುತ್ತಿದ್ದಾರೆ ಪ್ರತಿ ಪ್ರದರ್ಶನಕ್ಕೂ ಸ್ತ್ರೀಪುರುಷರು ಸೇರಿ ಶ್ರೀಯುತರ ಆಸನ ಪ್ರದರ್ಶನವನ್ನು ನೋಡಿ ಚಿತ್ತಾಕರ್ಷಿತರಾಗಿ ಮೈ. ಯಂ ಸಿ ಎ ದಲ್ಲಿ ಒಂದು ಶಿಬಿರಗತಿಯು ವಿಶೇಷವಾಗಿ ಅನೇಕ ತರುಣರು ಶಿಕ್ಷಣ ಪಡೆಯುತ್ತಿದ್ದಾರೆ ಕೆಲವು ಲಾಯರುಗಳೂ ವರ್ತಕರೂ ತಮ್ಮ ಕಾಯಿಲೆಗನುಗುಣವಾದ ವ್ಯಾಯಾಮವನ್ನು ಕಲಿದು ಅಭ್ಯಸಿಸುತ್ತಲಿದ್ದಾರೆ

ಛಾಯಾಗ್ರಾಹಿ ಪಿಸ್ತೂಲು

ಅಮೆರಿಕದ ಪೋಲೀಸರಿಗಾಗಿ ಹೊಸಮಾದರಿಯ ಪಿಸ್ತೂಲುಗಳು ನಿರ್ಮಿಸಲ್ಪಟ್ಟಿವೆ ಈ ರಿವಾಲ್ವರಿನ ಕೂತಗೆ ಒಂದು ಛಾಯಾಗ್ರಾಹಿ ಯಂತ್ರವು ಸೇರಿಸಲ್ಪಟ್ಟಿದೆ ಇದರಿಂದ ತಪ್ಪಿಸಿಕೊಂಡೋಡುವ ಕಳ್ಳನಿಗೆ ಗುಂಡಿನೇಟು ಒಂದುವೇಳೆ ತಪ್ಪಿದರೂ, ಅವನ ಭಾವಚಿತ್ರವನ್ನು ಮಾತ್ರ ಈ ಛಾಯಾಗ್ರಾಹಿ ಪಿಸ್ತೂಲು ಗ್ರಹಿಸುವುದು. ಇದರಿಂದ ಕಳ್ಳನನ್ನು ಹುಡುಕಲು ಅನುಕೂಲವಾಗುವುದು ಈ ರಿವಾಲ್ವರು ಬೇರೆಯವುಗಳಂತೆ ಮೂರೇ ಇದ್ದು ಇದಕ್ಕೆ ಸರಿಸಿರುವ ಕ್ಯಾಮರಾ 2 ಇಂಚು ಮಾತ್ರವಿರುತ್ತದೆ

ತನ್ನ ಸಮಾಧಿಯನ್ನು ತಾನೇ ಕಟ್ಟಿಸಿಕೊಂಡನು.

ಈಜಿಪ್ಟಿನ ಒಬ್ಬ ಧನಿಕನು ತನ್ನ ಮರಣಾನಂತರ ತನ್ನ ಇಚ್ಛೆಯಂತೆ ಬೇರೆಯನರು ಸಮಾಧಿಯನ್ನು ಕಟ್ಟಿಸುವರೋ ಇಲ್ಲವೋ ಎಂಬ ಸಂದೇಹದಿಂದ ವಿಶಾಲವಾದ ಸಮಾಧಿಯನ್ನು ತಾನೇ ಕಟ್ಟಿಸಿಕೊಂಡಿರುವನು ಇದರಲ್ಲಿ ಹಂಪತೂಲಿಕಾತಲ್ಪ, ವಿಶಾಲವಾದ ಕೊರಡಿಗಳು ಸ್ನಾನಗೃಹ, ಟೆಲಿಫೋನ್, ವಿದ್ಯುದ್ದೀಪ ಎಲ್ಲವೂ ಇವೆ ಸಮಾಧಿಯನ್ನು ಕಟ್ಟಿಸಿಕೊಂಡವನು ಇನ್ನೂ ದೃಢಕಾಯನಾಗಿದ್ದಾನೆ ಅಲ್ಲದೆ ಆ ಸಮಾಧಿಯ ಫ್ಲೀ ವಾಸಮಾಡಲು ಉಪಕ್ರಮಿಸಿದ್ದಾನೆ ಅಲ್ಲಿಂದ ಹೊರಗೆ ಸಾಗಿಸುವ ಕಷ್ಟವೂ ಇರಕೂಡದೆಂಬ ಇಚ್ಛೆ ಇರಬಹುದು.

ಸಂಸಾರಿಗಳಿಗೆ ಮಾತ್ರ ಸರಕಾರಿ ಉದ್ಯೋಗ

ಜರ್ಮನಿಯ ಆರೋಗ್ಯಮಾಸಪತ್ರಿಕೆಯೊಂದರಲ್ಲಿ ಸರ್ವಾಧಿಕಾರಿ ಹಿಟ್ಲರನ ಮನೋಗತ ಪ್ರಕಟವಾಗಿದೆ. ಸರ್ಕಾರಿ ಉದ್ಯೋಗವು ಬೇಕಿರುವ ಪ್ರತಿಯೊಬ್ಬನೂ ತಾನು ಮದುವೆಯಾಗಿ ಕನಿಷ್ಠ ಪಕ್ಷ ಎರಡುಮಕ್ಕಳ ತಂದೆಯಾದರೂ ಆಗುವುದಾಗಿ ವಚನ ಕೊಡಬೇಕೆಂದೂ, ವಚನವನ್ನು ಪಾಲಿಸಲಾರದೆ ಹೋದರೆ ತನ್ನ ನೌಕರಿಯನ್ನು ಬಿಟ್ಟು ತಾನು ನಿರುದ್ಯೋಗಿಯಾಗಿರುವುದಾಗಿ ಪ್ರತಿಜ್ಞೆ ಮಾಡಬೇಕೆಂದೂ ಅಲ್ಲಿಯ ಆರೋಗ್ಯಶಾಖೆಯ ಕಮಿಷನರರಾದ ಪ್ರೊಫೆಸರ್ ರುಡಿರವರು ನಾಜಿ ಸರಕಾರಕ್ಕೆ ಸಿಫಾರಸು ಮಾಡಿರುತ್ತಾರೆ

ನಾಗರಕರ ಮೇಲೆ ಬಾಂಬು ಪ್ರಯೋಗಿಸುವದನ್ನು ಪರಿಶೀಲಿಸಲು ಬ್ರಿಟಿಷ್ ಸಮಿತಿ

ಸ್ಪೇನ್ ದೇಶದ ನಗರಗಳ ಮೇಲೆ ಬಾಂಬುಗಳನ್ನು ಸುರಿಸಿ ನಿರಪರಾಧಿಗಳಿಗೆ ಪ್ರಾಣಹಾನಿ ಮೊದಲಾದ ಅನರ್ಥವನ್ನುಂಟುಮಾಡುತ್ತಿರುವುದನ್ನು ಪರಿಶೀಲಿಸುವುದಕ್ಕಾಗಿ ನಿಯಮಿಸಲ್ಪಟ್ಟಿರುವ ಬ್ರಿಟಿಷ್ ಸಮಿತಿಯವರು ಕಳೆದ 13ನೆಯ ತಾರೀಖಿನ ದಿವಸ ಬೂಲೌಸಿ ನಗರಕ್ಕೆ ಬಂದ. ಅಲ್ಲಿಂದ ಯುದ್ಧದಲ್ಲಿ ತೊಡಗಿರುವ ಎರಡು ಪಕ್ಷದವರು ಕೊಡುವ ಆಹ್ವಾನವನ್ನು ಸ್ವೀಕರಿಸಿ ಬಾಂಬುಗಳಿಂದ ಉಂಟಾದ ನಗರಗಳ ಪರಿಶೀಲನೆಮಾಡಿ ಬಾಂಬುಗಳನ್ನು ಉದ್ದೇಶಪೂರ್ವಕ ಸುರಿಸಲಾಯಿತೇ? ಎಂಬುದನ್ನು ಪರಿಶೀಲಿಸಿ ಬ್ರಿಟಿಷ್ ನಿವೇಶಂಗ ಕಚೇರಿಗೆ ವರದಿ ಮಾಡುವವರಾಗಿದ್ದಾರ

ಬೊಂಬಾಯಿಸರ್ಕಾರದ ಹೊಸ ಆಜ್ಞೆ

ಬೊಂಬಾಯಿಸರ್ಕಾರದ ನೌಕರರಾಗಿದ್ದು ವಿರಾಮ ವೇತನಗಳನ್ನು ಪಡೆಯುತ್ತಿರುವವರೆಲ್ಲರೂ ಇನ್ನುಮುಂದೆ ಖಜಾನೆಯಲ್ಲಿ ತಮ್ಮ ಪೇಷಣಗಳನ್ನು ತೆಗೆದುಕೊಳ್ಳುವಾಗ್ಗೆ ತಪ್ಪದೆ ಛಾಯಾಚಿತ್ರಗಳಿರುವ 'ಪ್ಯಾಸ್‌ಪೋರ್ಟ್' ಗಳನ್ನು ತೋರಿಸಬೇಕೆಂಬ ಆಜ್ಞೆ ಮಾಡಿದ್ದಾರೆ ಇದುವರೆಗೆ ನೇತನ ತೆಗೆದುಕೊಳ್ಳುತ್ತಿದ್ದವರ ಹಜೆಟ್ಟಿನ ಗುರುತಿನ ಸಹಿಯನ್ನು ಪರಿಶೀಲಿಸಿ ವೇತನಗಳನ್ನು ಕೊಡಲಾಗುತ್ತಿತ್ತು ಈ ಪದ್ಧತಿಯು ತೃಪ್ತಿಕರವಲ್ಲವೆಂದು ಕಂಡುಬಂದ ಪ್ರಯುಕ್ತ ಈ ಹೊಸ ಆಜ್ಞೆಯನ್ನು ಹೊರಡಿಸಿರುತ್ತಾರೆ

ಚೀನಾದೇಶಕ್ಕೆ ವೈದ್ಯಸಹಾಯ!

ಹಿಂದೂಸ್ಥಾನದ ಕಾಂಗ್ರೆಸ್ ಸಭೆಯವರು ಈಗ ನಡೆಯುತ್ತಿರುವ ಚೀನಾ ಜಪಾನ್ ಯುದ್ಧದಲ್ಲಿ ಕಷ್ಟಕ್ಕೆ ಗುರಿಯಾಗಿರುವ ಚೀನಾದೇಶವರಿಗೆ ವೈದ್ಯಸಹಾಯವನ್ನೊದಗಿಸಿಕೊಡಲು ಹಿಂದೂಸ್ಥಾನದ ಉದ್ಯಂತವಲ್ಲೂ ಪ್ರಯತ್ನಶೀಲರು ನೂಡಿರುತ್ತಾರೆ! ಡಾ॥ ಮದನಮೋಹನ ಅಟಲ್‌ರವರ ನಾಯಕತ್ವದಲ್ಲಿ ಔಷಧಪಾನಗ್ರಿಗಳೊಡನೆ ಆಗಸ್ಟ್ ತಾ॥ 17 ಕ್ಕೆ ಹಿಂದೂಸ್ಥಾನದಿಂದ ಚೀನಾ ಯುದ್ಧರಂಗಕ್ಕೆ ಹೊರಡತಕ್ಕದ್ದೆಂದು ನಿಶ್ಚಯೆಯಾಗಿತ್ತು ಆದರ ಕಾರಣಾಂತರಗಳಿಂದ ಈ ವೈದ್ಯರು ತಮ್ಮ ಪ್ರಯಾಣವನ್ನು ಆಗಸ್ಟ್ ತಾ॥ 29ರ ವರೆಗೂ ಮುಂದುವರಿಸಿರುತ್ತಾರೆ

ಬೊಂಬಾಯಿ ಕೌನ್ಸಿಲ್ಲಿನಲ್ಲಿ ವಿಷಮ ವಿವಾಹದ ಬಗ್ಗೆ ಬಿಲ್ಲು

೪೫ ವರ್ಷದ ಮೇಲಿನ ಗಂಡಸರು ೧೮ ವರ್ಷ ಮೊಳಗಿನ ಹುಡುಗಿಯರನ್ನು ಲಗ್ನವಾಗುವ ರೂಢಿಯನ್ನು ಕಾಯಿದೆಯಿಂದ ತಡೆಯುವದಕ್ಕಾಗಿ ಮುಂದಿನ ನುಂಟಾಯಿ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಶ್ರೀಮತಿ ಲೀಲಾವತಿ ಮುನಿಷಿಯವರು ಒಂದು ಬಿಲ್ಲನ್ನು ತರಲವರಿದ್ದಾರೆ. ಹುಡುಗಿಯ ಪಾಲಕ, ಪುರೋಹಿತ, ಹಾಗೂ ವರ ಇವರನ್ನು ಅಪರಾಧಿಗಳನ್ನಾಗಿ ಪರಿಗಣಿಸಿ ಶಿಕ್ಷಿಸಬೇಕೆಂದೂ, ಮುಂಬಯಿ ಪ್ರಾಂತದವರು ಇನ್ನೊಂದು ಪ್ರಾಂತಕ್ಕೆ ಹೋಗಿ ಲಗ್ನಮಾಡಿಕೊಂಡು ಬಂದರೂ ಈ ಕಾಯಿದೆಯನ್ನು ಅವರಿಗೆ ಅನ್ವಯಿಸಬೇಕೆಂದೂ ಆ ಬಿಲ್ಲಿನಲ್ಲಿ ಸೂಚಿಸಿದ್ದಾರೆ

ಗಡಿನಾಡಿನ ಗಲಭೆ

ವಾಯವ್ಯಗಡಿಯಲ್ಲಿರುವ ಬನ್ನು ಎಂಬ ಊರಿಗೆ ಮೂರುಮೈಲು ದೂರವಲ್ಲಿರುವ ಸೈಜಾಮ್ ಧರ್ಮ್‌ಜೇಲ್ ಎಂಬ ಊರಿಗೆ ಸುಮಾರು 100 ಮಂದಿ ತಕಾಯಿತರು ನುಗ್ಗಿ ಹಿಂದೂಗಳ ಅಂಗಡಿಗಳನ್ನು ಲೂಟಿಮಾಡಿ ಸುಮಾರು 2000 ರೂಪಾಯಿಗಳ ಪದಾರ್ಥಗಳನ್ನು ಅಪಹರಿಸಿದರು ಕಳೆದ 15 ತಿಂಗಳಿನಿಂದ ಈಚೆಗೆ ತಕಾಯಿತರು ಆ ಊರನ್ನು 5 ಸಾರಿ ಲೂಟಿಮಾಡಿರುವರೆಂದು ಹೇಳಲಾಗಿದೆ ಕಳೆದ 1 ನೆಯ ತಾರೀಖಿನದಿನ ಸರ್ಕಾರಿ ವಿಮಾನಗಳು ಕಾಡುಜನರು ವಾಸಮಾಡುವ ಪ್ರದೇಶದಮೇಲೆಲ್ಲಾ ಹಾರಾಡಿ ಆಹಮದ್‌ಜಾಲ್ ವಜೀರುಗಳು ಆ ಪ್ರದೇಶವನ್ನು 48 ಘಂಟೆಗಳಕಾಲದಲ್ಲಿ ಬಿಟ್ಟು ಹೊರಡಬೇಕು, ಮುಂದೆ ತಿಳಿಸುವವರೆಗೆ ಆ ಸ್ಥಳದಲ್ಲಿ ವಾಪಸ್ಸು ಹೋಗಬಾರದೆಂದು ಸೂಚಿಸುವ ಹಸ್ತಪತ್ರಿಕೆಗಳನ್ನು ಜಲ್ಲಿದನಂದು ತಿಳಿದುಬರುತ್ತದೆ

ದೇಶತ್ಯಾಗಿಗಳು ಪ್ರಸಿದ್ಧವೈದ್ಯರಾಗಿ ಬಂದರು

ಬೆಳಗಾಂವ ಡಿಸ್ಟ್ರಿಕ್ಟಿಗೆ ಸೇರಿದ ಒಂದು ಹಳ್ಳಿಯ ಕುಲಕರ್ಣಿಯೆಂಬ ಯುವಕರು 18 ವರ್ಷಗಳ ಕೆಳಗೆ ಕಾಲೇಜಿನ ವಿದ್ಯಾಭ್ಯಾಸವನ್ನು ತ್ಯಜಿಸಿ ತಮ್ಮ ಮೂವರು ಸ್ನೇಹಿತರೊಂದಿಗೆ ಆವೆ ರಿಕದೇಶಕ್ಕೆ ಹೊರಟುಹೋದರು ಎರಡು ವರುಷಗಳವರಿಗೆ ಈ ನಾಲ್ವರು ಸ್ನೇಹಿತರೂ ದಕ್ಷಿಣ ಅಮೆರಿಕೆಯ ಒಂದು ಸಂಸ್ಥಾನದಲ್ಲಿ ಹೊಲಗದ್ದೆಗಳಲ್ಲಿ ಕಲಸಮಾಡುವುದರಿಂದಲೂ ಬೀದಿಯಲ್ಲಿ ಸುವಾಸನಾದ್ರವ್ಯಗಳನ್ನು ಮಾರುವುದರಿಂದಲೂ ಬಹುಕಷ್ಟ ಜೀವನವನ್ನು ನಡೆಸಿದರ ಕೆಲವು ವರ್ಷಗಳ ನಂತರ ಕುಲಕರ್ಣಿಯೊಬ್ಬರನ್ನು ಅಲ್ಲಿ ಬಿಟ್ಟು ಉಳಿದವರು ಹಿಂದೂಸ್ಥಾನಕ್ಕೆ ಹಿಂದಿರುಗಿದರು ಕುಲಕರ್ಣಿಯವರು ಮಾತ್ರ ತಲ್ಲೇ ಕಲಸಮಾಡುತ್ತಾ ವಿದ್ಯಾರ್ಜನೆಯನ್ನು ಮಾಡತೊಡಗಿ ಉತ್ತರ ಅಮೆರಿಕೆಯ ಸಂಯುಕ್ತಸಂಸ್ಥಾನದವರು ನಡೆಯಿಸಿದ ಅರ್ಜಶಾಸ್ತ್ರಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದರ ಅನಂತರ ಮತ್ತೊಂದು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ನೇಮಕ, ಸಾಹಿತ್ಯ ಸಂಬಂಧವಾದ ಅನೇಕ ಸೈಸ್ಟೂಟಿಗಳಲ್ಲಿ ಬಹುಮಾನ ಪಡೆದರು ಆನಂತರ ವೈದ್ಯವಿದ್ಯೆಯನ್ನು ಭ್ಯಾಸಮಾಡಿ ಎಂ ಡಿ ಪ್ರಪತ್ರಿಯನ್ನು ಪಡೆದು ಕಳೆದವಾರ ಬೋಂಬಾಯಿಗೆ ಬಂದಿರುವರು

ಕಾಲರಾ (ವಿಷೂಚಿಕಾ)

(೧) ಉತ್ತರಣಿ ಬೇರನ್ನು ನೀರಿನಲ್ಲಿ ತಿಯಿದು ತೆಗೆದುಕೊಂಡರೆ ವಿಷೂಚಿಕವು ತತ್ಕಾಲಕ್ಕೆ ನಾಶವಾಗುತ್ತದೆ. (೨) ಹಾಗಲಕಾಯಿರಸ ಮತ್ತು ಎಳ್ಳೆಣ್ಣೆ ಇವುಗಳನ್ನು ಸಮಪ್ರಮಾಣದಲ್ಲಿ ತೆಗೆದುಕೊಂಡರೆ ಕಾಲರಾಬೇನೆಯು ವಾಸಿಯಾಗುತ್ತದೆ (೩) ಎಳೆ ಮೂಲಂಗಿ ಗಡ್ಡಿಯ ಕಷಾಯ ಆದರಲ್ಲಿ ಸಿಪ್ಪಲೀ ಚೂರ್ಣ ಹಾಕಿ ತೆಗೆದು ಕೊಳ್ಳಬೇಕು (೪) ಬಿಲ್ವಪತ್ರಿಹಣ್ಣು ಮತ್ತು ಶುಂಠಿ ಇವುಗಳನ್ನು ಕೂಡಿಸಿ ಕಷಾಯಮಾಡಿ ತೆಗೆದುಕೊಂಡರೆ ವಿಷೂಚಿಕಾ (ವಾಂತಿ ಭ್ರಾಂತಿ) ಗಳು ನಾಶವಾಗುತ್ತವೆ. (೫) ಬಿಲ್ವಪತ್ರಿಹಣ್ಣು ಶುಂಠಿ ಮತ್ತು ಜಾಯಫಳ ಇವುಗಳ ಕಷಾಯವನ್ನು ತೆಗೆದುಕೊಂಡರೆ ವಿಷೂಚಿಕವು ನಾಶಹೊಂದುತ್ತದೆ (೬) ಚಕ್ರಾಣಿ ಬೇರನ್ನು ನೀರಿನಲ್ಲಿ ತೆಯಿದು ತೆಗೆದುಕೊಂಡರೆ ಕಾಲರಾ ಬೇನೆಯು ತತ್ಕಾಲಕ್ಕೆ ನಾಶವಾಗುತ್ತದೆ. (೭) ಮಜ್ಜಿಗೆ ಮತ್ತು ಜವಕ್ಷಾರ ಇವುಗಳನ್ನು ಕೂಡಿಸಿ ತೆಗೆದುಕೊಂಡರೆ ವಿಷೂಚಿಕಯಲ್ಲಿಯ ಪೀಡೆಗಳು ದೂರವಾಗುತ್ತವೆ (ಆರ್ಯವೈದ್ಯ)

[೩ನೆಯ ಪುಟದಿಂದ ಮುಂದುವರಿದುದು]

ನಡೆದ ಒಂದು ಸಂಗತಿಯನ್ನು ತಾನಿಲ್ಲಿ ಸೂಚಿಸುವುದಕ್ಕಾಗಿ ಅವರು ನನ್ನನ್ನು ಕ್ಷಮಿಸುವರೆಂದು ಭಾವಿಸಿದ್ದೇನೆ. ನವಗಿಂತ ಬುದ್ಧಿವಂತಿಕೆಯುಳ್ಳವರೊಬ್ಬರು ಹಲವು ತಿಂಗಳುಗಳಕಾಲ ತಮ್ಮ ನಿಜಸ್ವಭಾವವನ್ನು ತೋರ್ಪಡಿಸದೆ ನನಗೆ ಅವರ ವಿಚಾರದಲ್ಲಿ ಸದಭಿಪ್ರಾಯವು ಹುಟ್ಟುವಂತೆ ನಟಿಸುತ್ತಿದ್ದುದನ್ನು ಶ್ರೀಮನ್ಮಹಾರಾಜರವರು ವಿನೋದದಿಂದ ಪರಾಂಬರಿಸುತ್ತ ಮೌನವಾಗಿದ್ದರು. ನಾನು ಅತಿಮಿಗೆ ಬಡ್ತಿ ಕೊಡಬೇಕೆಂದು ಕಳುಹಿಸಿದ ಸಲಹೆಯನ್ನು ಅಂಗೀಕರಿಸದೆ ಶ್ರೀಮನ್ಮಹಾರಾಜರವರು ಅತನ ನಿಜಸ್ವಭಾವವನ್ನು ನನಗೆ ತಿಳಿಸಿ ಹಾಸ್ಯಾಸ್ಪದವಾದ ಆ ಸನ್ನಿವೇಶವನ್ನು ಮನದಟ್ಟುಮಾಡಿಕೊಟ್ಟರು. ರಾಜ್ಯಭಾರದ ಸ್ವಾರಂಭದಲ್ಲಿ ಒದಗಿದ ಕಷ್ಟಗಳನ್ನೆಲ್ಲ ಎದುರಿಸಿ, ಶ್ರೀಮನ್ಮಹಾರಾಜರವರು ದೂರಾಲೋಚನೆ ಇಲ್ಲದಿದ್ದವರು, ವಿದ್ಯಮಾನಗಳು ಚೆನ್ನಾಗಿ ತಿಳಿದಿಲ್ಲದಿದ್ದವರು ಮತ್ತು ಆತ್ಮಪ್ರಿಯ ಹೊಂದಿದ್ದವರು, ಅಪೇಕ್ಷೆಗಳನ್ನೆ ಮನಸ್ಸಿಗೆ ತೆಗೆದುಕೊಳ್ಳದೆ ಸಾವಧಾನ ಸಮಚಿತ್ತರಾಗಿ ಶಾಂತಿಯಿಂದಲೂ ತಾಳ್ಮೆಯಿಂದಲೂ ವರ್ತಿಸುತ್ತಿದ್ದರು. ಬಹಳ ದೀರ್ಘಾಲೋಚನೆಯಿಂದ ಅವರೊಂದು ನಿರ್ಧಾರಕ್ಕೆ ಬರುತ್ತಿದ್ದರು. ಒಮ್ಮೆ ಒಂದ ವಿಚಾರವೆನ್ನು ನಿರ್ಧರಿಸಿದರೆಂದರೆ ಅವರ ಆಜ್ಞೆಯನ್ನೆಂದಿಗೂ ಮಾರ್ಪಡಿಸುತ್ತಿರಲಿಲ್ಲ. ಜವಾಬ್ದಾರಿಯುಳ್ಳ ಅಧಿಕಾರಿಗಳು ದೀರ್ಘಾಲೋಚನೆಯಿಲ್ಲದೆ ದುಡುಕಿ ವರ್ತಿಸಿ ಪರಸ್ಪರವಾಗಿ ಅಸಂಗತವಾದ ಅಥವಾ ಪರಸ್ಪರ ವಿರುದ್ಧವಾದ ಆಜ್ಞೆಗಳನ್ನು ಕೊಡುವುದು ಮಾತ್ರ ಶ್ರೀಮನ್ಮಹಾರಾಜರವರ ದೃಷ್ಟಿಯಲ್ಲಿ ಅಕ್ಷಮ್ಯವಾದ ಅಪರಾಧ. ತಾವು ಸಂಪೂರ್ಣವಿಶ್ವಾಸಿಗಳಾಗಿದ್ದ ಕಾರಣ, ಇತರರ ಅಳುಕು ಬುದ್ಧಿಯನ್ನು ಅವರು ಒಪ್ಪಿ ಸಮರ್ಥಿಸುವವರಾಗಿರಲಿಲ್ಲ. ಅವರ ತಾಳ್ಮೆಗೆ ಮಿತಿಯೇ ಇರಲಿಲ್ಲ. ಕಿರಿಯ ವಯಸ್ಸಿನವರಿಗೆ ಸಹಜವಾದ ಆತುರಪ್ರಕೃತಿಯೇ ಅವರಿಗಿರಲಿಲ್ಲ ಶಾಂತಚಿತ್ತರಾಗಿ ಅವರು ಒಂದಾದಮೇಲೆ ಮತ್ತೊಂದರಂತೆ ದೊಡ್ಡ ದೊಡ್ಡ ವಿಸರ್ಜಾಡುಗಳನ್ನು ತಾವೇ ಅಲೋಚಿಸಿ, ರೂಪಿಸಿ, ಸಾವಧಾನದಿಂದ ಸಾಂಗವಾಗಿ ನೆರವೇರಿಸಿ ಪೂರ್ಣಫಲವನ್ನು ಪಡೆಯುತ್ತಿದ್ದ ಬಗೆಯು ಇತರರಿಗೆ ಮನಮುಟ್ಟುವಂತಿದ್ದಿತು ಯಾವ ಅವಸರವನ್ನೂ ಅಥವಾ ಅಶಾಂತಿಯನ್ನೂ ಪ್ರದರ್ಶಿಸದೆ ಶ್ರೀಮನ್ಮಹಾರಾಜರವರು ಕಾರ್ಯವನ್ನು ಸಾಧಿಸುತ್ತಿದ್ದ ರೀತಿಯು ಅಸಾಧಾರಣವಾಗಿದ್ದಿತು "

ಈ ಬಗೆಯ ಅಂತರ್ಜ್ಞಾನದ, ಆ ಬಗೆಯ ತಾಳ್ಮೆ ವಿವೇಕಗಳ, ಆ ಬಗೆಯ ವಿಸೋದ ಶೀಲತೆಯಿಂದ ಕೂಡಿದ ಉತ್ಸಾಹ ಶಕ್ತಿಯು, ಆ ಬಗೆಯ ಪ್ರೀತಿ ವಿಶ್ವಾಸಗಳಿಂದ ಕೂಡಿದ ಪರಾಂಬರಿಕೆಯ ಮಾರ್ಗದರ್ಶಿತ್ವವೂ ಸಹಾಯವೂ ಮುವತ್ತೈದು ವರ್ಷಗಳಿಂದಲೂ ಮೈಸೂರು ಸಂಸ್ಥಾನಕ್ಕೆ ದೊರೆತು, ಅನೇಕ ಸಂಧಿಕಟ್ಟುಗಳಲ್ಲಿ ಸಹ ಸುಗಮವಾಗಿ ಕಾರ್ಯಸಿದ್ಧಿಯು ಲಭಿಸಿ, ಅಸಂಖ್ಯಾತವಾದ ಮಾರ್ಪಾಟುಗಳುಂಟಾಗಲು ಸಹಾಯವಾಗಿ ತನ್ಮೂಲಕ ಅನುಕೂಲವಾಗಿರುವುದು ಮೈಸೂರು ಸಂಸ್ಥಾನದ ಅನರ್ಘ್ಯಭಾಗ್ಯ. ಈಗ ಒದಗಿರುವ ಬಿಕ್ಕಟ್ಟಿನ ಸಮಯದಲ್ಲಿ ಕೂಡ ನಮಗೆ ದಾರಿತೋರಿ ಅನುಗ್ರಹಿಸಲು ಅದೇ ಅಮೋಘ ಗುಣಗಳ ಕೃಪಾಶ್ರಯವು ಲಭಿಸಿರುವ ಸನ್ನಿವೇಶಕ್ಕಾಗಿ ಮೈಸೂರು ಸಂಸ್ಥಾನವೇ ಕೃತಜ್ಞತೆಯಿಂದ ತುಂಬಿದೆ ರಾಜಕೀಯ ಸುಧಾರಣೆಗಳು ನಡೆಯುಬೇಕೆಂಬ ವಿಚಾರದಲ್ಲಿ ಶ್ರೀಮನ್ಮಹಾರಾಜರವರಿಗಿಂತ ಅಧಿಕವಾಗಿ ಉತ್ಸುಕರಾಗಿರುವವರು ಮತ್ತೊಬ್ಬರಿಲ್ಲ, ಅಲ್ಲದೆ ಕಾರ್ಯರಂಗಕ್ಕೆ ದೂರವಾಗಿರುವ ಕೇವಲ ಧ್ಯೇಯಗಳನ್ನು ಮುಂದಿಟ್ಟುಕೊಂಡು ಆತುರಪಡುವವರ ಅಶೋತ್ತರಗಳನ್ನು ಮನದಟ್ಟು ಮಾಡಿಕೊಂಡು ವಾಸ್ತವ ವಿದ್ಯಮಾನಗಳ ಬಿಕ್ಕಟ್ಟಿನ ಪ್ರಸಂಗಗಳಿಗೆ ಅವುಗಳನ್ನು ಹೊಂದಿಸಿ ಸುಮುಖರಾಗಿಸಿಕ್ಕೆ ತಾಲು ಶ್ರೀಮನ್ಮಹಾರಾಜರಷ್ಟಿಗಿಂತಲೂ ಅಧಿಕವಾಗಿ ಸಾಮರ್ಥ್ಯವನ್ನು ಪಡೆದಿರುವವರೂ ಮತ್ತೊಬ್ಬರಿಲ್ಲ.

ಸ್ವತ್ಕೋತ್ತರ ಕರ್ಮಮಾಲಿಕಾ

ಲೇಖಕರು—ಮಲ್ಲಿಕಾರ್ಜುನಾರಾಧ್ಯ, ರಾಣಿಬೆನ್ನೂರು.
ಮಳೆಮರ, ಮುದೇನೂರು, ಮುಖಿ ತಿಪಟೂರು.

ಪ್ರ—ಕರ್ಮೇಂದ್ರಿಯಗಳನ್ನು ನಿಗ್ರಹಮಾಡಿಕೊಂಡು ಜ್ಞಾನೇಂದ್ರಿಯಗಳನ್ನು ನಿಗ್ರಹಿಸಲಾರದೆ ಮನಸ್ಸಿನಿಂದ ಭೋಗ್ಯವಸ್ತುಗಳ ಭೋಗವಂ ಧ್ಯಾನಿಸುವವರಿಗೇನು ಫಲ?

ಉ—ಅಂತಹ ಶಲುಷಿತಾತ್ಮರಿಗೆ ಬಹಿರಂಗದಲ್ಲಿ ಪ್ರತಿಷ್ಠೆಮಾತ್ರ ದೊರೆಯುವದಲ್ಲದೆ ಮತ್ತೇನೂ ಫಲವಾಗಲಾರದು. ಆದರೆ ಉಭಯ ಇಂದ್ರಿಯಗಳನ್ನು ನಿಗ್ರಹಿಸಿ ಪರಬ್ರಹ್ಮವಂ ಸಾಧಿಸುತ್ತಿದ್ದರೆ ವಸಂತಸಾರವು ಫಲಪುಷ್ಪ ಲತಾರೂಪದಿಂ ವ್ಯಕ್ತಿಯಂ ಹೊಂದುವಂತೆಯೂ, ಕಬ್ಬಿನರಸವು ಸಕ್ಕರೆಯಾಗುವಂತೆಯೂ, ಕಪ್ಪೆಯಚಿಪ್ಪಿನಲ್ಲಿ ಬಿದ್ದ ಸ್ವಾತಿಮಳೆಯ ನೀರು ಮುತ್ತಾಗುವಂತೆಯೂ ಹಸುವಿನ ಹೊಟ್ಟೆಯಂ ಸೇರಿದ ತೃಣರಸವು ಕ್ಷೀರವಾಗುವಂತೆಯೂ ಪುಟವಿಟ್ಟ ವಿಷದ್ರವ್ಯಗಳು ದಿವ್ಯೌಷಧಗಳಾಗುವಂತೆಯೂ ಪರಸ್ವರೂಪ ತಾಳುವಂತೆ. ಇಲ್ಲವಾದರೆ ಹುಲಿಯ ಚರ್ಮವಂ ಹೊದ್ದುಕೊಂಡು ಮೇಷವನ್ನಳವಡಿಸಿಕೊಂಡು ರಾತ್ರಿಯಲ್ಲಿ ಕಬ್ಬಿನ ಹೊಲವಕ್ಕು ಮೇಯಲಿಕ್ಕೆ ಹೋಗಿ ಜನ್ಮಾಗಿ ಹೊಡೆಸಿಕೊಂಡುಬಂದ ಕತ್ತೆಯಂತೆ ವ್ಯಥೆಯುಂಟಾಗುವದು.

ಪ್ರ—ಜಾಗ್ರತ್, ಸ್ವಪ್ನ, ಸುಷುಪ್ತಿ ಎಂದರೇನು?

ಉ—ಜೀವನು ಸ್ಥೂಲದೇಹವಂ ಪಿಡಿದು ಬಂದ ಅಂತಃಕರಣವೃತ್ತಿಯೇ ಜಾಗರವು. ಜೀವನು ಸೂಕ್ಷ್ಮದೇಹವಂ ಪಡಿವುದೇ ಸ್ವಪ್ನವು. ಜೀವನು ಕಾರಣಶರೀರವಂ ಪಿಡಿದು ಚಂದ್ರನಂ ಕಂಡ ಕನ್ಯೆಯಂತೆ ಸಂತುಷ್ಟನಾಗಿ ವಿಶ್ರಾಂತಿಯನ್ನನುಭವಿಸುತ್ತಿರುವುದೇ ಸುಷುಪ್ತಿಯು.

ಪ್ರ—ಒಂದು ಕಾರ್ಯಸಾಗುವುದಕ್ಕೆ ಶರೀರ ಮತ್ತು ಮನಸ್ಸುಗಳಲ್ಲಿ ಕಾರ್ಯಕಾರಿಯಾವದು?

ಉ—ಮನಸ್ಸು. ಶರೀರವು ಮರದ ತುಂಡಿನಂತೆ ಇದ್ದಿಡೆಯಲ್ಲಿಯೇ ಬಿದ್ದಿರುವದಲ್ಲದೆ ಮನದಂತೆ ಸಂಚರಿಸಲಾರದು. ದೇಹವು ರೋಗಾದಿಗಳಿಂದ ಬಿದ್ದಿದ್ದರೂ ಮನದ ಉತ್ಸಾಹದಿಂದನೇಕ ಕಾರ್ಯಗಳು ನಡೆಯುವುವು. ಮನಸ್ಸು ಸ್ವಲ್ಪ ಅಲಸ್ಯವಾಗಿದ್ದಲ್ಲಿ ಶರೀರವು ಪರಿಪೂರ್ಣ ಸ್ವವಾಗಿದ್ದರೂ ಯಾವ ಕಾರ್ಯವೂ ನಡೆಯಲಾರದಷ್ಟೆ! ಮತ್ತು ಮನಸ್ಸು ಚಿತ್ರಪ್ರತಿಮೆಯಂ ಮೋಹಿಸಿದ್ದಾಗ್ಗೂ ಶರೀರದಲ್ಲಿ ಕಾಮವಿಕಾರವುಂಟಾಗುವದು. ಶರೀರವು ಮನಮೋಹನಸುಂದರಸ್ತನವನ್ನಾಶ್ರಯಿಸಿದ್ದರೂ ಮನವು ಮಾತ್ರ ದೇವತಾಭಾವನೆಯಿಂದಿರಲು ಆ ಸ್ತನವು ಮಾತೃಸ್ತನಕ್ಕಿಂತಲೂ ಮಿಗಿಲಾಗುವದು ಇಂತಹರೀತಿಗಳಿಂದ ಮನವೇ ಅಧಿಕವಾಗುವದಾದಕಾರಣ ಮನನೇ ಕಾರ್ಯಕಾರಿಯೆಂದು ವ್ಯಕ್ತವಾಗುವದು.

ಪ್ರ—ಮನಸ್ಸು ಮತ್ತು ಕರ್ಮಗಳಿಗೆ ಛೇದವೇನು?

ಉ—ಪುಷ್ಪಗಳಲ್ಲಿ ಅಡಗಿದ್ದ ವಾಯುವು ಆಯಾಯ ಗಂಧದೂಪದಿಂದ ಹೊರಹೊರಡುವಂತೆ ಆಯಾಯ ಭಾವದಿಂದಲೇ ಮನಸ್ಸು ಚರಿಸುವದು. ಇದರಿಂದ ಜ್ಞಾನೇಂದ್ರಿಯಗಳು ಜಾಗೃತವಾಗಲು (ಚಲಿಸಲು) ವಾಯುವನ್ನನುಸರಿಸುವ ಭೂಮಿಯ ಧೂಳಿಯಂತೆ ಕರ್ಮೇಂದ್ರಿಯಗಳು ಜ್ಞಾನೇಂದ್ರಿಯಾನುಗುಣದಿಂದ ಜಾಗೃತವಾಗುವವು. ಆಗ ಗಾಳಿಬಡಿದ ವಸ್ತುವು ಅದರ ಪರಿಮಳವಂ ಗ್ರಹಿಸುವಂತೆ ಸೂಕ್ಷ್ಮತನುವಿನಿಂದುಂಟಾದ ಭಾವವನ್ನೇ ಸ್ಥೂಲತನುವು ವಹಿಸುವದು. ಈ ಸ್ಥೂಲತನುವಿನಿಂದಲೇ ಕಾರ್ಯಗಳು ಜರಗುವುದರಿಂದ ಕರ್ಮರೂಪವಾದ ಫಲಕ್ಕೆ ಮನನೇ ಬೀಜವಾಗಿರ್ಪುದು. ಈ ಪರಿಯಲ್ಲಿ ಕಾಮುಮದ ಸತ್ವವೇ ಗಂಧದ ಸತ್ವವಾದುದರಿಂದ ಮನಃ ಕರ್ಮಗಳಿಗೆ ಸತ್ತಾಛೇದವಿರುವದಿಲ್ಲವು ಅಲ್ಲದೆ ಈ ಮನಸ್ಸು ಯಾವುದಂ ಗ್ರಹಿಸುವದೋ "ತಾನು ಮೆಚ್ಚಿದನಳೆ ರಂಭೆ" ಎನ್ನುವಂತೆ ಅದನ್ನೇ ಸರ್ವೋತ್ತಮವೆಂದು ತಿಳಿಯುವದಾದ್ದರಿಂದ ಆ ಕರ್ಮದ ಫಲಿಯೇ ಅನುರಕ್ತವಾಗಿದ್ದು ಪುಷ್ಪದಿಂ ಹೊರಹೊರಡುವ ವಾಯುವಿನಂತೆ ಆ ವಾಸನೆಯಿಂದಲೇ ಪ್ರಕಾಶಿಸುತ್ತ ಫಲದಿಂದುಂಟಾಗುವ ಬೀಜದಂತೆ ಕರ್ಮಾನುಗುಣವೆಂದು ಹೇಳಲ್ಪಡುವದು.

ಪ್ರ—ಮನವು ಯಾವ ರೀತಿಯಿಂದ ಜೀವಿಸುವದು?

ಉ—ವನರಾಜನಾದ ಸಿಂಹವನ್ನಾಶ್ರಯಿಸಿರುವ ಮೃಗವು ಸಿಂಹಪರಾಕ್ರಮದಿಂದ ಲಬ್ಧವಾದ ಮಾಂಸವಂ ಭುಜಿಸುವಂತೆ ಚೆದ್ಮಸ್ಥವನ್ನಾಶ್ರಯಿಸಿರುವ ಮನವು ಅದರ ಪ್ರಭಾವಾತಿಶಯದಿಂದುಂಟಾದ ದೃಶ್ಯವನ್ನಾಶ್ರಯಿಸಿ. ಆದರೆ ಈ ಮನವು ಸ್ವತಃ ತನಗೆ ಭೋಗಜ್ಞಾನಗಳಲ್ಲದಿದ್ದರೂ ಇಚ್ಛಾಮಾತ್ರದಿಂ ಸೇರದಿರುವುದಂ ಸೇರಿ, ಸುತ್ತಲೂ ಸೇರಿರುವುದಂ ಬಿಡದೆ ಸುತ್ತಲೂ ಆತ್ಮನಿಗೋಸ್ಕರ ಸರ್ವಕಾರ್ಯಗಳನ್ನೂ ಮಾಡುತ್ತಿರುವದು. ಮತ್ತು ಈ ಮನಸ್ಸು ಮಾಡದಿದ್ದದ್ದು ಪಡೆಯದಿದ್ದದ್ದು ಸಹ ಯಾವುದೂ ಇಲ್ಲ. ಇಂತಹ ಅಸಮಾನರಶಕ್ತಿಯುಳ್ಳ ಮನಸ್ಸನ್ನು ಯಾವನು ಸಾಧಿಸಿ ಇಷ್ಟಾರ್ಥವನ್ನು ಹೊಂದಿಸಿದನೋ ಅವನೇ ಪುರುಷೋತ್ತಮನೆನಿಸುವನು.

ಪ್ರ—ನೋಸ-ಳಳ್ಳ ತನ-ಕಾಮಕ್ರೋಧಾತ್ಮಕವಾದ ಐಶ್ವರ್ಯದ ಬಲದಿಂದ ಮದೋನ್ಮತ್ತರಾಗಿ ಆ ಆವೇಶದಿಂದ ದುರ್ಮಾರ್ಗದಲ್ಲಿ ಪ್ರವರ್ತಿಸಿದ ದೋಷಗಳಿಂದ ಮರಣಾನಂತರದಲ್ಲಿ ಯಾವ ಜನ್ಮಬರುವದು?

ಉ—ಮುಂಗತಿಯ ಜನ್ಮ. ವಾಚಕರೇ! ಕಲ್ಲು ಮುಳ್ಳುಗಿತ ಮರಗಳಿಂದ ನಿಬಿಡೀಕೃತವಾದ ಘೋರಾರಣ್ಯದಲ್ಲಿ ಬೇಳುತ್ತ-ಏಳುತ್ತ-ಮುಗ್ಗರಿಸುತ್ತ ಅತಿ ಪ್ರಯಾಸದಿಂದಲೂ ಬಹು ಸಾಹಸದಿಂದಲೂ ಪರ್ವತಾಗ್ರಕ್ಕೆ ಸಾಗಿ ಹೋಗಿ ಕುಳಿತಂತೆ ನಮಗೆ ಈ ಆರಿವಿನ ನರಜನ್ಮವು ಬಹುಕಾಲದಿಂದಲೂ ಅನೇಕ ಸತ್ಕರ್ಮಗಳಿಂದ ಸಾಧಿಸಿಕೊಂಡು ಬಂದಂಥದಾಗಿರುವದು. Make hay while the sun shines ಎಂಬಂತೆ ಇದರ ಸದುಪಯೋಗಮಾಡಿಕೊಳ್ಳದೆ ಮರುಕ್ಷಣ ಯೋಗಮಾಡಿಕೊಂಡರೆ, ಅಂದರೆ ಐಶ್ವರ್ಯದ ಬಲದಿಂದ ಧರ್ಮವಿರುದ್ಧವಾಗಿ ನಡೆಯ ಮುಂದೆ ಮುಂಗತಿ, ಇಲಿ, ನರಿ, ನಾಯಿಗಳ ಜನ್ಮವಂ ಪಡೆಯುವದಾದರೆ ಅವನಂತಹ ಮೂರ್ಖನೂ. ನೀಚನೂ ಅತ್ಯಧಾತುರನೂ ಮತ್ತೊಬ್ಬನಿಲ್ಲವೆಂದು ಸಾರಿಸಾರಿ ಹೇಳಬಹುದು. ಅಲ್ಲದೆ ಹಾಗೆ ಒಹು ಪ್ರಯಾಸದಿಂದ ಸಾಗಿಹೋದ ಪರ್ವತಾಗ್ರದಿಂದ ಒಮ್ಮಿಂದೊಮ್ಮೆಲೇ ಅಪ್ಪಲಿಸಿಕೊಂಡು ತಲೆಕೆಳಗಾಗಿ ದಾರಿಯಲ್ಲಿ ಬಿದ್ದು ಪ್ರಾಣವಂ ಬಿಟ್ಟುಂತಾಗುವದು ಅದರಪ್ರಯುಕ್ತ ಸರ್ವಾರ್ಥಕಾರಿಯಾದ ಈ ಧನಸುದಿಂದ ಪೌರುಷವದು ವಿವೇಕಿಗಳ ಲಕ್ಷಣವಲ್ಲವು.

ಪ್ರ—ಮನಸೆಂಬ ಮದ್ದಾನೆಗೆ ಅಂಕುಶವಾವದು?

ಉ—ವಿನಯ ವಿರಕ್ತಿ, ಬೋಧನೆಗಳು. ಇವುಗಳ ಸಹಾಯದಿಂದಲೂ. ತಾತ್ಸರ್ಯವಿಚಾರದಿಂದಲೂ ಪರಮಾತ್ಮನಿಚಾರವಃ ನಿಶ್ಚಯಿಸಿ ಅವಿದ್ಯಾಕೃತವಾದ ಪದಾರ್ಥಸ್ಥಿತಿಯಿಂದಂಟಿಗಿದ್ದ ಮನವಂ ಬಿಟ್ಟು ದೃಶ್ಯನೇ ದೈವ್ಯರೂಪದಿಂದ ಪ್ರಕಾಶಿಸುವದೆಂದು ನೋಡಿ.ತ್ತಾ ಪರಮೋದ್ದೇಶವಿಷಯದಲ್ಲಿ ಜಾಗರೂಕನಾಗಿಯೂ, ಸಂವ್ಯವಹಾರಗಳಲ್ಲಿ ನಿದ್ರಾಳುವಾಗಿಯೂ ಭೋಗಗಳಲ್ಲಿ ವಿರಕ್ತನಾಗಿಯೂ. ಬ್ರಹ್ಮೈಕ್ಯಾನುಸಂಧಾನವಂ ಮಾಡುವಾತಂಗೆ ಜ್ಞಾನಪ್ರಕಾಶದಲ್ಲಿ ಬಿಸಿಲೋಳ್ ಮಂಜಿನಂತೆ ಜ್ಞಾನವ್ಯೂ, ಎರಡನೇ ಪದಾರ್ಥದ ಭ್ರಾಂತಿಯಲ್ಲದು ಶರತ್ಕಾಲದ ನದಿಗಳಂತೆಯೂ, ನೀರಿನಲ್ಲ ಬಲ್ಲಂತೆಯೂ ನೀರಿನಿಂದ ಬೇರೆ ಬಂದ ಮತ್ಸ್ಯನಂತೆಯೂ ಸಮಸ್ತವಾದ ಆಕೆಗಳು ಕೃತಿಯಾಗುವವು ಆಗ ಕಂಡಕಂಡದ್ದಕ್ಕೆ ಹಾತೊರೆಯುತ್ತಿದ್ದ ಮನವು ಕ್ರಿಮಿಯಂತೆ ದೃಶ್ಯಕದಮ ದೋಳ್ ಬೀಳದೆ ದಿಂಡು ಸಿಕ್ಕುವವರೆಗೆ ಬಾಳೆಯ ಪಟ್ಟೆಗಳಂ ತೆಗೆಯುವಂತೆಯೂ, ಚೆನ್ನ ನಿಲ್ಲುವವರೆಗೆ ಧಾತುವಂ ತೊಳೆಯುವಂತೆಯೂ ನಿವೃತ್ತಿಮಾರ್ಗದಲ್ಲಿರುವುದು ಈ ರೀತಿಯಲ್ಲಿ ಮನವು ನಿವೃತ್ತಿಮಾರ್ಗದಲ್ಲಿ ನಿಶ್ಚಲ ವಿಚಾರದಿಂದುದಕದಲ್ಲಿ ಕ್ಷೀರಧ್ಯಾತಿಯಂತೆ ದೃಶ್ಯದಲ್ಲಿ ಸಂಸಾರಭ್ರಾಂತಿಯಳಿಯುವುದು. ಮತ್ತು ಅಜ್ಞಾನದಿಂ ನೀರಿಂದು ಕುಡಿಯಲ್ಪಡುವ ಮದ್ಯದಂತೆ ಸಾರವೆಂದನುಭವಿಸಲ್ಪಡುವ ಸಂಸಾರವು ಜ್ಞಾನದಿಂ ಬಿಡಲ್ಪಡುವುದು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡವೆಲ್ಲಿರುವ ಪತ್ರಿಯೊಂದು ಗುರುವರ್ಗದ ಮತಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮತಾಧಿಕಾರಿಗಳು ಸಮಯವರ್ತಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮತವರ್ಗಗಳಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಪೂರೈಸಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ರೀತಿಯಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ಪ್ರಕಾರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಪ್ರತಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಆದರೆಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ಸಂಪೂರ್ಣಪಡಿಸಬೇಕಾಗಿ ಬಂದ ತಮ್ಮ ಶಿಷ್ಯರಿಗೆನ್ನು ಕಾಣಾಡಿಕೊಳ್ಳಬೇಕು. ಇವಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವವಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೦ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ಕೋಲ	ಮೊಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ವಜ್ರಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೫—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೊಡಿನ ಭಸ್ಮ	೧	೦—೮—೦
ಗೋದಂತಿಹರಿತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿ ಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು.

ಆಯುರ್ವೇದರಸಾಯನಶಾಲಾ,
ಪೋಸ್ ಓವಿಮಕ, ಬೆಲ್ಲಾ ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸದೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ್ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶೀಧರ್ಮೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ವಾಙ್ಮೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೫೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರವಷ್ಟು ಭವ್ಯವಾದ ಬಾವಚಿತ್ರವನ್ನು ಸಹ ದಯವಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಆದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬಿಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦×೧೪ ಬೆಲೆ ೧ಕ್ಕೆ ... ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಧೀಚಿ, ವ್ಯಾಸ, ಸಾನಂದ, ಮೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪವರ್ತಿಸುವ ಫೋಟೋ ಸೈಜು ೧೦×೧೪ ಬೆಲೆ .... ೦—೧—೬

ಸದ್ಯೋ ಪೀತಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ .... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೪ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಧೀಷಣನ ಪ್ರಾರ್ಥನಾನುಸಾರವಾಗಿ ಏಳಕಾಲದಲ್ಲಿಯೇ ನೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ .... ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಸೂಲಧರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಡಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಸುಮುಜ್ಜಯಿಸೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯವರ ಫೋಟೋ .... ೦—೦—೯

ಶ್ರೀಸುಪ್ರೊಧಾಪುರೀ ಸೀಂಹಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯

ಶ್ರೀಸುಮುಜ್ಜಯಿಸೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿಸೀ ಸೀರಪ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿಸೀ ಸೀರಪ ಅತ್ಯಂತ ಪ್ರಾಚೀನ ಕಟ್ಟಿಪಪ ಸುಂದರ ಫೋಟೋ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .... ೦—೦—೯

ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ .... ೦—೦—೯

ಹಿಮಾವತ್ಪರ್ವತದ ಕುಳ್ಳದಲ್ಲಿ ಲೋಭಿಸುವ ಶ್ರೀ ಕೇದಾರನಾಥಸ್ವಾಮಿಯ ನುಂದಿರದ ಸುಂದರ ಫೋಟೋ .... ೦—೦—೯

ಸೊರ್ಲಾಪುರದಲ್ಲಿ ನೆರೆಸೇರಿದ ಉಜ್ಜಯಿಸೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ .... ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ಸ್ಯಾಮಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಜಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುದ್ಧಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೪ ಆಣೆ.

ನಿಮ್ಮ ಅಪ್ರೈಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[17] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೨ ಆಣೆ

ಗೋತ್ರಸೂತ್ರಪಟ (ಋನೆಯ ಆವೃತ್ತಿ) .... ೧ ಆಣೆ

ಮರುಲಸಿದ್ಧೇಶ್ವರಸ್ತೋತ್ರ .... ೧ ಆಣೆ

ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ

ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ

ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .... ೧ ಆಣೆ

ಬಸವಾದಿಸಿಜತತ್ತ್ವದರ್ಪಣ (೪ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯಶತಕ(೩ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ .... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯಶತಕ .... ೨ ಆಣೆ

ವೀರಶೈವಮತವಿಮಾಮಾಂಸಾ .... ೩ ಆಣೆ

ವೀರಶೈವಾಚಾರವಿಧಿ (೩ ನೆಯ ಆವೃತ್ತಿ) .... ೩ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ

A brief life-sketch of Pandit Sri Kashinatha Shastriji (*English*) **4 As.**

ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) .... ೬ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಕ್ಕಸೈಜು) .... ೬ ಆಣೆ

ವೀರಶೈವಮಹಾತ್ಮರು .... ೮ ಆಣೆ

ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) .... ೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವಾರಿ ಧಾಷಣಗಳು (ತೆಲುಗು) **೮ ಆಣೆ**

Speeches by Pandit Shri Kashinatha Shastri (*English*) **12 As.**

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) .... ೧೨ ಆಣೆ

ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) .... ೮ ರೂ

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ.

ವೀರಶೈವಸಿದ್ಧಾಂತಸುಧಾಕರ .... ೨ ರೂ

ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .... .. ೧ ರೂ.

ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ

ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) .... ೧೨ ಆಣೆ

ಶಿವಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ

ವೀರಶೈವರತ್ನ (ಮರಾಠಿ) ... ... ೧ ರೂ.

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ.

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ–ಸಂಸ್ಕೃತ) ... ೧ ರೂ.

ವೀರಶೈವೈಶ್ವರ್ಯ (ಸಂಸ್ಕೃತ) ... ... ೧ ರೂ.

ನಂದಿಕೇಶ್ವರಕಾರಿಕಾ (ಸಂಸ್ಕೃತ) .. ... ೨ ಆಣೆ.

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ... ... ೨ ಆಣೆ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ವಿದ್ವಾನ್ ವೇ|| ತಿರು ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ತ್ರಿಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜಸಿತರ್ ವಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪಶತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಸ್ಪುವೀತೋಽನಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು

ಸ್ಥಳವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳವರಿಗೆ ೨ ರೂ ೪ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಆಗಸ್ಟ್ ೧೯೩೮ [ಸಂಚಿಕೆ ೧೬

ನರಹಲುಗಳಿಗೆ ಕಡಿದಾಟ! ಕುರಿಮೇಕೆಗಳಿಗೆ ಗೋಳಾಟ!

ಅಹಿಂಸಾ ಪರಮೋ ಧರ್ಮಃ

ಪರಿ—ಷಟ್ಪದಿ

ಬೆಚ್ಚನಿರಲು ಕೊಟ್ಟಗೆಯೊಳಗಿರಿಸುವ ।
ಹಚ್ಚನೆ ಯುಲ್ಲನು ಸೊಪ್ಪನು ತಿನಿಸುನೆ ।
ಬೆಚ್ಚುದಿರಲುಸಾಗ್ ನಮ್ಮಯ ಹಗೆಗಳ ಬಚ್ಚುವೆ ನೀಂ ವನೆಯೇ॥
ಮುಪ್ಪಿದೊಡನ್ದೆಗುಯು ನಿಚ್ಚಲಸಾಡುವೆ ।
ನಚ್ಚಿನ ಕೆಚ್ಚಿದಯಾತೀ ಕಾಣಲ ।
ಹೆಚ್ಚಳು ರೋಗ ಚಿಕಿತ್ಸೆಯು ಗೈದೆಮ್ಮಿಚ್ಛೆಯರಿಜೆ ಪೊರೆವೆ ॥೧॥

ತುಸ್ಪಟಿವೀವೆವು ಚಳಿಗಳೆಗಳೆಯಲು
ತುಪ್ಪನ ಹಾಲ್ಮೊಸರಾಗುವುದೊಡಿಕೆ ।
ಲೊಪ್ಪನ ಹಿಕ್ಕೆಯು ಬೆಳೆಗಪ್ಪುಮ ಪುಲ್ಲೊಪ್ಪಸಿತ್ತು ನಮ್ಮಂ ॥
ಒಪ್ಪದಿ ರಕ್ಷಿಸುಪಕೃತಿಯನು ನೆನೆ ।
ದಪ್ಪನಮಿನಾರದೆ ನಿನ್ನನೆ ನಂಬಿಜೆ ।
ಅಪ್ಪಾ ! ನಮ್ಮನ್ಹಾಹುತಿಗೊಪ್ಪಿಸೆ ತಪ್ಪೇಂ ಮಾಡಿದೆವೋ ॥೨॥

ಮಾರಿಗೆ ಬಲಿಯೆಂದೆಂಬ ಸಮಿಯನೆಳ ।
ದೋರಿಸುತಿರಲೆ ತರಿಯುವೆನೆಮ್ಮನು ನು ।
ಯಾರುಂದರು ಬಿಸಿರಕ್ತವ ಮಾಂಸನ ಮಾರಿಗೆ ಬರಿಮೂರೇ ॥
ಮಾರಿ ನಿನಗ ತಾಯ್ಮೆ ಮಗಲ್ಲವೆ ತಾ ।
ಯಾರದಿ ಕಲಿತೀಘ್ರಾತ್ಮಕೆ ದ್ರೋಹವ ।
ಯಾರನ್ಮಾನು ಮಕ್ಕಳ ತಿನಲೊಪ್ಪಳು ಪೂರನ್ಮೊಪ್ಪುವರೇ? ॥೩॥

ಮದುವೆಯಲಿಸ್ಪರ ಬಂಧೂಗಳಾತಣ ।
ಕೊದವಿಸ ದೋಗವ ನೀಗುವ ಶಾಸ್ತ್ರಕೆ ।
ಮುದಿರಭಕ್ತರ ಬಾಯ ಸವಿಗೆ ಒಲಿವರಕೆಗೆ ದೇವತೆಗೆ ॥
ಸ್ಪಷ್ಟೆಯಾತಕಾತ್ಮವಕೆ ನಾವಾಳಿಗೆ ।
ಯದಿದೇಂ ಜಾಂತಿಗೆ ಪುಣ್ಣಿಮೆ ಹೆಬ್ಬುಕೆ ।
ಸದಯದಿ ಸದೆಯದಿರೆಮ್ಮನು ನಮ್ಮಯ ಕಂದಮ್ಮಗಳನ್ನು ॥೪॥

ಕೊಂಪವಳಿಗೆ ಕೊಲೆಯೆಂದಿಗೆ ತಪ್ಪದು ।
ಕೊಂಪಾಪಾಪವು ತಿಂದರು ಹೋಗದು ।
ದೆಂದಾದುನ ಗಾದೆಯಾ ಕೇಳ್ದರಿಯಾ' ಮಂನಮತಿಯೆ ನಮ್ಮೊಲ್
ಮುಂದರಿಯದೆ ಯೊಂದೊಂದು ನೆಪದಿ ನೀರ ।
ಕೊಂದರೆ ನಿನ್ನೀಳಿಗೆಗದು ತೊಂದರೆ ।
ಕಂದರ ತಿಂಪಾಸಾಪವು ತಪ್ಪ ವದೆಂದೆಂದಿಗು ತಾಂಪೆ ॥೫॥

ಮಡಿಯುನೆ ಯೊಳ್ಳೆಯ ಬೆಳೆಯೆನು ಬೆಳೆಯುನೆ ।
ಯಡರಿದಿರುಗಿ ಪಲುಪಾಲನೆಮೂಡುವೆ ।
ಯಡಿಗಡಿಗಸ್ಥರ ದಾಸ್ಯಕೆ ಸಿಲ್ಲುವೆ ಪಡೆಯುವೆ ಬಯಧನಮಂ ॥
ಕಮೂಪಾದನ ನಿನಗಡಸಿದೆ ಸರಿಯನ ।
ರುದುಪನು ಸಾಮ್ಯಮೊಳುಹಾವರು ದುಡಿದರು ।
ಕಡಿವನೆ ನಿನ್ನ ಪೋಲಾಪ್ರತ್ಯ ಸಾತ್ವಿಕ ಕಿಡುಕೆಸಗದ ಪಲುವಂ ॥೬॥

ನಿನ್ನಯ ಮನಸೊಪ್ಪದೆ ನಮ್ಮುಗಳಂ ।
ತಿನ್ನದೆ ಬಿಟ್ಟರ ಸಾಕದೆ ಮರುಕರಿ ।
ಪೊನ್ನತ್ತವರಿಗೆ ತಿನ್ನಲು ಕೊಟ್ಟರದಿನ್ತೀಂ ತಿಂದಪೊಲೇ ॥
ತಿನ್ನಲು ಹುಟ್ಟವೆ ಬಿಟ್ಟರೆ ನೀಂಗೆ ।
ಯುನ್ನತಿಗೀಪೂನ್ಥಲ ಸಾಲದು ಹೇ ।
ಗೆನ್ನುವನುಂಟಾಬ್ರಹ್ಮನೆನುವನೇ ತನ್ನ ವರನು ಹಾಗೆ ॥೭॥

ಪಾತಕ ಜಾರವು ಸಸ್ಯಾಯಿಯ ಜೀ ।
ವಾತುಮವನು ತಗೆದುಗಾಲು ನಿಮಗೆ ಮನು ।
ಜೀತರಜೀವಿಯು ಕೊಂಮುಂದರೆ ಪಾತಕವು ಬಹುವೆ ನಮಗೇ ? ॥
ಈತರದೊಪರೆ ಸಾವಿಸುತಿಪ ಳ ।
ರ್ಮಾತುಮರೇತಕೆ ತಿನ್ನಲೊ ಬಂಧು ।
ಪ್ರಾತನುಳಿನ್ನಿತರಮನುಷ್ಯರ ನರಸಾಂಸವ ರುಚಯೇ ॥೮॥

ಮಾಂಸಾಪ ರಿಗಳುರುರು ನೊಸಜು ನಿ ।
ಸ್ಪಂಶಯವಾ ಪ್ರಾಣಿಯ ಸದು ಸಣ್ಣ ।
ಧ್ವನಿಸಮಾಡದಿರೆ ನನ್ನನು ಮಾಂಸಾಹಾರಿಯೆಗೆ ನೀಂ ಸುನುಜ ।
ಹಿಂಸಾಶೃತ್ಮನಸುಳಿವೇ ಬಾಳ್ವಸು ।
ಪಂಶಜಸೋದರರಿಲ್ಲವೆ ಬಿಡುಳಿರಿ ।
ಕಾಂಶವಿದರಲಪಕೀರ್ತಿಯೂ ಕೊಲೆಯೂ ಕಂಸನಪ್ಪೊಲು ನಿನಗೂ॥

ಕೊಲಬೇಕೆಂದರೆ ಕೊಲು ನಿನ್ನ ಪ್ರಿಸ ।
ಬಲನೆನ್ನುನ ಘಟಿಸರ್ವನ ಮಾರಿಗೆ ।
ಬಲಿಗೊಡಬೇಕೆ ಕೊಡು ಮಡಪೆನ್ನುವ ಮಲೆಯುವ ಸಲಗನನು ॥
ಮೆಲಬೇಕೆಂದರೇಮೆಲು ನಿಟ್ಟಿನ್ನುವ ।
ಹುಲಿಯನು ನಿಜಸುಖಫಲಮಂಟಿವರೊಳು ।
ಕೊಲದಿರು ಮೆಲದಿರು ಬಲಿಗೊಡದಿರು ಕುರಿಮೇಕೆಯ ಜಾಥುಗಳ॥

ವೇಳಲು ನಾವೋ ಮೂಕರು ಭಾಷೆಯಾ ।
ಮೂಲವರಿಯೆವಾಲೋಚಿಸೆ ಬರದಿ ।
ನ್ಯಾಳುವನೆಲ್ಲವ ಲೋಪವ ದೋಷವನೆತ್ತಿಪಲಂಜಿಕೆಯು ॥
ಗೋಳನು ಕವಿನೀರಾತ್ಮಿಕ್ಕಪ್ರತಿನಿಧಿ ।
ಪೇಳಿಪರೀಪಿನ್ನ ಪವನು ಲಾಲಿಸು ।
ಕೇಳದಿರಲು ಕೋಗಾಗೆ ನರಕವಲಿ ಬೀಳುವೆ ಕೀಳನಪೆ ॥೧೧॥

ನಿರುತಪಹಿಂಸಾಪರಮೋ ಧರ್ಮಃ ।
ಪನವುಕ್ತಿ ಹೀಗೆನುತಲೊರೆಬುತಿದೆ ।
ಶಿರಮೊಳು ಹೊತ್ತಾಚರಿಪರು ನಿನ್ನಯ ಸೋದರ ಜೈಪುವಂ ॥
ಉರುತರದೀಮೇಲ್ಸಂಜ್ಞೆಯ ನೀನನು ।
ಸರಸು ಸ್ಪರ್ಯಾಪೆ ಕಾಡಿಕೆಯುಮದಿಪ ।
ಪರಸುಖ ಜೊರೆವುದು ಪರಶಿವನೊಲಿವನು ಶಿರವಾಗಿಪೆ ಎದಿರೊಳ್॥

ಮುತುಕೂರು ವೀರಭದ್ರಪ್ಪ,
ಮಂಗಪೋಟಿಯಾನೆ ಮಸವೇವಪುರ ಚಳ್ಳಕೆರೆ ತಾಲ್ಲೂಕು

ಚರಿತ್ರಾರ್ಹವಾದ ಒಂದು ಸ್ಥಳ

(ಲೇಖಕ—ಬುಕ್ಕಾಂಬುಧಿ, ಬಿ ಗಂಗಾಧರಯ್ಯ ಹೈಸೂರು)

ನಮ್ಮ ಕನ್ನಡನಾಡಿನಲ್ಲಿ ಪ್ರಸಿದ್ಧವಾದ ಅನೇಕ ಸ್ಥಳಗಳಿವೆ ಅದರಲ್ಲೂ ಮೈಸೂರುದೇಶದ ಮಲೆನಾಡು ಪ್ರಾಂತದ ಕಡೂರು, ಹಾಸನ, ಶಿವಮೊಗ್ಗ ಡಿಸ್ಟ್ರಿಕ್ಟ್‌ಗಳ ಬಾಗಗಳ ಅನೇಕ ಸ್ಥಳಗಳಲ್ಲಿ ಚರಿತ್ರಾರ್ಹವಾದ ಸ್ಥಳಗಳನೇಕವಿವೆ. ಇನ್ನೂ ಕೆಲವು ಸ್ಥಳಗಳು ಪುರಾಣ ಪ್ರಸಿದ್ಧವಾದ ಮತಮಾನ್ಯಗಳಿಂದಲೂ, ಗುಡಿಗೋಪುರಗಳಿಂದಲೂ ಹೊಂದಿ ಅಲ್ಲಲ್ಲಿ ಸಿಕ್ಕಿರುವ ಶಾಸನಗಳ ಮೂಲಕ ತಮ್ಮ ಪೂರ್ವದ ಯಶಸ್ಸನ್ನು ಬೀರುತ್ತಿವೆ. ಬೇಲೂರು ಹಳೆಬೀಡು ದೇವಸ್ಥಾನಗಳು ಪೂರ್ವದ ಶಿಲ್ಪ ಕಲೆಯನ್ನು ಪ್ರಜ್ವಲಗೊಳಿಸುತ್ತಿವೆ. ಕಡೂರು ಜಿಲ್ಲಾ ಬಾಳೆಹೊನ್ನೂರು ಶೃಂಗೇರಿ ಈ ಸ್ಥಳಗಳು ಧರ್ಮಪೀಠಾಚಾರ್ಯರ ಪ್ರಸಿದ್ಧ ಮತಗಳಿರುವ ಸ್ಥಳಗಳಾಗಿವೆ.

ಹಿಂಗೆಯೇ ಕಡೂರುಜಿಲ್ಲೆಯಲ್ಲಿ ಬುಕ್ಕಾಂಬುಧಿ ಎಂಬುದೊಂದು ಚಿಕ್ಕ ಗ್ರಾಮವಿರುವುದು ಈ ಗ್ರಾಮದಲ್ಲಿ ಒಂದು ದೊಡ್ಡ ಕೆರೆಯಿರುವುದು ಈ ಕೆರೆಯ ಹೆಸರೇ ಆ ಗ್ರಾಮಕ್ಕೆ ಬಂದಿರುತ್ತದೆ ಕೆರೆಗೆ ಸಮೀಪದಲ್ಲಿ ಒಂದು ಪ್ರಾಚೀನ ದೇವಸ್ಥಾನವು ಪಂಚಲಿಂಗಗಳ ಮತ್ತು ಗಣಪತಿಯ ಉದ್ಭವಸ್ಥಳವಾಗಿದೆ ಈ ದೇವಸ್ಥಾನದಲ್ಲಿರುವ ಒಂದು ಶಿಲಾಶಾಸನದಿಂದ ಈ ಗ್ರಾಮವು ವಿಜಯನಗರದ ಅರಸರಾದ ಹುಕ್ಕಬುಕ್ಕರ ಕಾಲದಲ್ಲಿ ಸಮಾರು ೧೪ನೇ ಶತಮಾನದಲ್ಲಿ ಸ್ಥಾಪನೆಯಾಗಿರುವುದಾಗಿ ತಿಳಿದುಬರುತ್ತದೆ ಈ ಗ್ರಾಮದೆ ಸಮೀಪದಲ್ಲಿ ಭೈರವೇಶ್ವರಬೆಟ್ಟವೆಂಬುದೊಂದು ಬೆಟ್ಟವಿದ್ದು ಅದರ ಮೇಲ್ಭಾಗದಲ್ಲಿ ಕೆಲವು ಗುಹೆಗಳೂ, ವೀರುಲಸಿದ್ಧೇಶ್ವರ ದೇವಸ್ಥಾನವೂ ಇವ ಅಲ್ಲಿರುವ ಗುಹೆಗಳು ತಪಸ್ಸಿಗಳ ತಪಸ್ಸಿಗೆ ಅನುಕೂಲವಾಗಿರುತ್ತವೆ ಈಗ ಅವುಗಳೆಲ್ಲಾ ಪಾಳುಬಿದ್ದಿವೆ ಈಗ್ಗೆ ಸುಮಾರು ೧೩ ವರ್ಷಗಳ ಹಿಂದೆ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಇಲ್ಲಿಗೆ ವಿಜಯಂಗೈಸಿ ಈ ಸ್ಥಳವನ್ನು ಚರಿತ್ರಾರ್ಹವಾಗುವಂತೆ ಮಾಡಿ ಈ ಗ್ರಾಮವನ್ನು ಉದ್ಧರಿಸಿದರು ಶ್ರೀ ವೀರಶೈವ ಪಂಚಾಚಾರ್ಯಪೀಠಗಳಲ್ಲೊಂದಾದ ಉಜ್ಜಯಿನಿ ಪೀಠಾಧೀಶ ಪರಶಿವಾವತಾರಿ ಶ್ರೀ ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರು ಶಿಷ್ಯೋದ್ಧಾರಕ್ಕಾಗಿ ದೇಶಮಧ್ಯದಲ್ಲಿ ಸಂಚರಿಸುತ್ತ ಇಲ್ಲಿಗೆ ಆಗಮಿಸಿದರು ಆಗ್ಗೆ ರಂಭಾಪುರೀ ಪೀಠಕ್ಕೆ ವಟುಚುನಾವಣೆಯ ವಿಚಾರದಲ್ಲಿ ದೇಶಮಧ್ಯದಲ್ಲಿ ಬಹುಗೊಂದಲವೆದ್ದಿತ್ತು ಕಾಹಕವಿರಕ್ತರ ಹಾವಳಿಯಿಂದ ಯುಗಾಂತರಗಳಿಂದಲೂ ಪ್ರಸಿದ್ಧವಾಗಿದ್ದ ಪಂಚಪೀಠಗಳು ಹಿಂದುಳಿದಿದ್ದವು ಇದರಿಂದ ಈ ಶಿವಾವತಾರಿಗಳ ಮನಸ್ಸಿಗೆ ಬಹುವ್ಯಥೆಯುಂಟಾಗಿತ್ತು ಆಗ ಶ್ರೀಜಗದ್ಗುರುಗಳು ತಮ್ಮ ಸಂಸ್ಥಾನದ ಸಿಬ್ಬಂದಿಯನ್ನೆಲ್ಲ ಈ ಗ್ರಾಮದಲ್ಲಿರಿಸಿ ತಾವೊಬ್ಬರೇ ಪಾದಚಾರಿಗಳಾಗಿ ಭೈರವೇಶ್ವರಬೆಟ್ಟವನ್ನು ಹತ್ತಿ ಅಲ್ಲಲ್ಲಿ ಸುತ್ತಿ ಕೊಂತು ಕೊನೆಗೆ ಅಲ್ಲಿರುವ ಒಂದು ಗುಹೆಯನ್ನು ಸೇರಿ ಸುಮಾರು ೬ ತಿಂಗಳವರೆಗೆ ಅಲ್ಲಿಯೇ ವಾಸಿಸಿದರು ಆಗ ದೇಶದೇಶಗಳಿಂದ ಅನೇಕ ವೀರಶೈವಭಕ್ತ ಶಿರೋಮಣಿಗಳು ತಂಡತಂಡವಾಗಿ ಬಂದು ದರ್ಶನವನ್ನು ಪಡೆಯುತ್ತಿದ್ದರು. ಶ್ರೀಮಹಾಸ್ವಾಮಿಯವರು ಈ ಗುಹೆಯಲ್ಲಿ ಘೋರತಪವನ್ನಾಚರಿಸಿ ತಮ್ಮ ಕಾರ್ಯ ಸಾಧಿಸಿಕೊಂಡರು ಶ್ರೀರೇಣುಕನ ಅನುಗ್ರಹದಿಂದ ತಮ್ಮ ಇಷ್ಟದಂತೆ ವೀರಸಿಂಹಾಸನಕ್ಕೆ ಅರ್ಹರು ಬಂದನಂತರ ತಮ್ಮ ತಪಸ್ಸನ್ನು ಮುಕ್ತಾಯಗೊಳಿಸಿ ಈ ಗ್ರಾಮದಿಂದ ವೀರಶೈವಪ್ರಮುಖರೊಂದಿಗೆ ಬಾಳೆಹೊನ್ನೂರಿಗೆ ವಿಜಯಂಗೈಸಿ ಪಟ್ಟಗಟ್ಟಿದ ವಿಚಾರವು ಇಡೀ ಭರತಖಂಡದ ವೀರಶೈವಮಂಡಲಿಗೆ ತಿಳಿದೇಇದೆ ನಾನು ಶ್ರೀಜಗದ್ಗುರುಗಳ ಸೇವೆಯಲ್ಲಿ ೬ ತಿಂಗಳಕಾಲ ವಿದ್ದುದರಿಂದ ಮುಂದಿನ ವಿಷಯವನ್ನು ವಿಶದವಾಗಿ ವಿವರಿಸುತ್ತೇನೆ.

ಧಾರ್ಮಿಕ ಸಾಮಾಜಿಕ ಟಿಪ್ಪಣಿಗಳು

[ಟಿಪ್ಪಣಿಕಾರ—ದೈವಜ್ಞ ವಿನೋದ]

(೧) ಧರ್ಮಾತ್ಮರು ರಾಜಕೀಯಕ್ಷೇತ್ರದಲ್ಲಿ ಪ್ರವೇಶಿಸುವರೇ?

ಈಗಿನ ರಾಜಕೀಯಕಾರಣದಲ್ಲಿ ಧಾರ್ತೀಯ ಧರ್ಮಾಂಗವು ಕ್ಷಯರೋಗಕ್ಕೀಡಾಗಿದೆ. (ಸ್ವೆಗ್ರವಾಸಿಯಾಗಲು ಸಮಾಪಿಸಿರುವದೆಂದು ಹೇಳಬಹುದು), ಅತ್ಯಂತ ಪ್ರಾಚೀನ ಕಾಲದಿಂದ ಧರ್ಮವು ರಾಜಕೀಯ ರಂಗಭೂಮಿಯಲ್ಲಿ ಮುಖ್ಯಪಾತ್ರವನ್ನು ವಹಿಸಿದ್ದಿತು. ಧರ್ಮದ ಪ್ರಭುತ್ವದಿಂದ ರಾಜ-ಪ್ರಜೆಗಳು ಸ್ವರ್ಗೀಯ ಸುಖವನ್ನು ಹೊಂದಿದ್ದರು. ಧರ್ಮಹೀನವಾದ ರಾಜಕೀಯ ತಂತ್ರವು ಪ್ರಜೆಗಳನ್ನು ಬಂಧಿಸಿ ನಾನಾವಿಧವಾಗಿ ಗೋಳಾಡಿಸುವದು. ಹೀನಾವಮಾನಕ್ಕೆ ಗುರಿಯಾದ ಪ್ರಜೆಗಳ ಮೇಲೆ ಈ ರೀತಿ (ಧರ್ಮಬಾಹ್ಯವಾಗಿ) ಯಾಗಿ ಪ್ರಭುತ್ವಮಾಡುವ ರಾಜಶಕಟವು ಸರಳಮಾರ್ಗವನ್ನು ಹಿಡಿಯದೆ ಘೆನತರವಾದ ಇಕ್ಕಟ್ಟನ ಹಾದಿಯಲ್ಲಿ ಶಿಕ್ಕು ನೆರಳಬೇಕಾಗುತ್ತದೆ. ಯಾರು ರಾಜಕಾರ್ಯಪಟುಗಳೋ ಅವರು ಧರ್ಮಶಾಸ್ತ್ರಕೋವಿದರಾಗಬೇಕು. ರಾಜಕಾರ್ಯವು ಸಾಮಾನ್ಯವಾದುದಲ್ಲ. ಅಖಿಲಪ್ರಜಾವರ್ಗಕ್ಕೂ ಅಗತ್ಯವಾದ ಸುಖಸಾಧನಗಳನ್ನು ಕಲ್ಪಿಸಿ ಆ ಭೋಗವನ್ನು ಲೋಪವಿಲ್ಲದೆ ಹೊಂದುತ್ತಿರುವ ಪ್ರಜೆಗಳನ್ನು ಆಳುತ್ತಿರುವ ಪ್ರಭುತ್ವವೇ ನಿಜವಾದ ಪ್ರಭುತ್ವವು, ಪ್ರಜೆಗಳನ್ನು ಧರ್ಮಮಾರ್ಗದಲ್ಲಿ ತಿರುಪದಕ್ಕೂ ರಾಜಕಾರಣವೇ ಮುಖ್ಯವಾಗಿದೆ. ನಮ್ಮನ್ನ (ಪ್ರಜೆಗಳನ್ನು) ಆಳುತ್ತಿರುವವನು ರಾಜನಲ್ಲ; ರಾಜಶಾಸನಗಳು ಆ ರಾಜಶಾಸನಗಳು ಪ್ರಜಾಧರ್ಮಪಾಲಕಗಳಾಗಿರಬೇಕು "ರಾಜಧರ್ಮ ಪ್ರಜಾಧರ್ಮ" ಎಂಬ ಉಭಯಧರ್ಮಗಳು ಅನೇಕಾರ್ಥಗಳನ್ನು ಗರ್ಭೀಕರಿಸಿಕೊಂಡಿರುತ್ತವೆ. ರಾಜನಿಗೂ ಪ್ರಜೆಗಳಿಗೂ 'ಧರ್ಮ' ಎಂಬುದೇ ಮೂಲಾಧಾರವು, ಇದು ಉಭಯರಿಗೆ ಹಿತವನ್ನುಂಟುಮಾಡುವದರಿಂದ ಧರ್ಮವೆಂಬ ಹೆಸರನ್ನು ಪಡೆಯಿತು

ಧಾರಣಾದ್ಧರ್ಮಮಿತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ|
ಯತ್ಸ್ಯಾದ್ಧಾರಣಸಂಯುಕ್ತಃ ಸ ಧರ್ಮ ಇತಿ ನಿಶ್ಚಯಂ ||

ಈ ಧರ್ಮದಿಂದ ಪ್ರಜೆಗಳೂ-ರಾಜನೂ ಬಂಧಿಸಲ್ಪಟ್ಟಿರುತ್ತಾರೆ ಧರ್ಮವು ನಾಶವಾದರೆ ಪ್ರಜೆಗಳೂ- ರಾಜನೂ ಅಳಿಗಾಲದ ದಾರಿಯನ್ನು ಹಿಡಿದರೆಂದೇ ಸಿದ್ಧವಾಗುವದು. ಈಗ ಭರತಖಂಡದ ರಾಜಶಾಸನಸಭೆಗಳಿಂದ ನವೀನವಾಗಿ ತೂರಿಬರುತ್ತಿರುವ ಶಾಸನಗಳು ಭಾರತೀಯ ಪ್ರಜೆಗಳ ಧರ್ಮಾಭಿವೃದ್ಧಿಯನ್ನು ಅತ್ಯಂತ ಹೀನಾವಸ್ಥೆಗೆ ತರುತ್ತಿರುವದನ್ನು ನೋಡಿ ಸನಾತನಿಗಳು ಮರುಗುತ್ತಿರುವರು. ಹೀಗೆ ದುಃಖಪಡುವದಕ್ಕಿಂತ ಸನಾತನಿಗಳು ರಾಜಕಾರಣಪಟುಗಳಾಗಿ ಶಾಸನಸಭೆಗಳಲ್ಲಿ ಬಹುಸಂಖ್ಯಾಕರಾಗಬಹುದೇ? ಪ್ರತಿ ಶಾಸನಗಳು ಬಹುಮತದಿಂದ ನಿರ್ಣಯಿಸಲ್ಪಟ್ಟು ಜಾರಿಯಲ್ಲಿ ಬರುತ್ತವೆಯೇ? ಭಾರತೀಯರ ಶಾಸನಗಳು ಮನು-ಹಾರೀತ-ಪರಾಶರ-ಯಾಜ್ಞವಲ್ಕ್ಯ ಮೊದಲಾದ ಸ್ಮೃತಿಗಳ ಅವಲಂಬನೆಯಿಂದ 'ಹಿಂದೂ ಲಾ' ಎಂಬ ನಾಮಾಂಕಿತದಿಂದ ವಿರಾಜಿಸುತ್ತಿರುವದೆಂಬುದನ್ನು ನಾವೀಗ ಸಂಪೂರ್ಣ ಮರೆಯಬೇಕಾಗಿದೆ ಈಗಿನ ಶಾಸನಸಭೆಯ ಮಹಾಶಯರು ತಮ್ಮ ಪಾಶ್ಚಿಮಾತ್ಯ ವಿದ್ಯಾಸಂಸ್ಕೃತಿಯ ಪ್ರಭಾವದಿಂದ ಅನೇಕಾನೇಕ ಮಸೂದೆಗಳನ್ನು ಮುಂದೊಡ್ಡುತ್ತಿರುವರು. ಇವುಗಳಲ್ಲಿ ನಮ್ಮ ಆರ್ಯಧರ್ಮಪ್ರದೀಪದ ಕಿರಣಾಂಶವೂ ಸಹ ಇರುವದಿಲ್ಲ. ಆರ್ಯಧರ್ಮರಕ್ಷಣೋಪಾಯಗಳನ್ನು ನೆನಪಿಗೆ ತರಲು ಇವರಿಗೆ ಸಾಧ್ಯವಾಗಲಿಕ್ಕಿಲ್ಲ. ಯಾವಾಗಲೂ ಪಾಶ್ಚಾತ್ಯ ಸಂಸ್ಕೃತಿಯ ಗಾಳಿಗೆ ಮೈಯೊಡ್ಡಿದವರು ಪೌರಸ್ತ್ಯಸನಾತನ ಧರ್ಮಭಾಸ್ಕರನನ್ನು ನೋಡುವುದೇ ದುರ್ಲಭವಾಗಿದೆ.

ವಿಶ್ವಭಾರತೀಯಧರ್ಮಗ್ಲಾನಿಯನ್ನು ದೂರಮಾಡಲು ವೀರಸನಾತನೀಯರು ಜಾಗ್ರತರಾಗಲೇಬೇಕು. ಧರ್ಮಜ್ಞರಿಗೆ ರಾಜಕಾರಣವು ಸಾಮಾನ್ಯವಾಗಿ ಕಾಣಬಹುದು. ಜನಾಂಗದ ಹಿತಾಭಿವೃದ್ಧಿಗೆ ರಾಜಕೀಯ ಕ್ಷೇತ್ರವು ಅನಿವಾರ್ಯಕವಾದುದಾಗಿದೆ ಈ ಕ್ಷೇತ್ರಪರಿಶುದ್ಧಿಗಾಗಿ ಧರ್ಮಾತ್ಮರು ಉದಯರಾಗಲೇಬೇಕು. ಧರ್ಮ-ಧರ್ಮವೆಂದು ಮಠ-ಗುಹೆ-ಅರಣ್ಯಾದಿಗಳಲ್ಲಿ ಜಪಮಾಡಿ ಜನಹಿತಮಾಡುವ ಶಿವಯೋಗಿಗಳಿಗಿಂತಲೂ ನಮಗೀಗ ರಾಜಕಾರಣದಲ್ಲಿ ಧುಮುಕಿ ರಾಷ್ಟ್ರೋದ್ಧಾರವಮಾಡುವ ಧರ್ಮವೀರರು ಬೇಕಾಗಿದ್ದಾರೆ.

(೨) ಕೈ|| ವಾ|| ಸರ್. ಕೆ. ಪಿ. ಪುಟ್ಟಣ್ಣಶೆಟ್ಟರ ಜೀವನರಹಸ್ಯವನ್ನು ಸ್ವಾರ್ಥಾಂಧರು ತಿಳಿಯಬಹುದೇ?

ದಿವಂಗತರಾದ ಡಾಕ್ಟರ್ ಸರ್.ಕೆ.ಪಿ ಪುಟ್ಟಣ್ಣಶೆಟ್ಟರ ಪವಿತ್ರಕೀರ್ತಿಯು ಭಾರತಪ್ರಪಂಚದಲ್ಲಿ ಅಚಿಂದ್ಯಾರ್ಕವಾಗಿ ಉಳಿಯುತೆಂದು ಸಕಲಮತೀಯ ಜನಾಂಗವು ಕೊಂಡಾಡುತ್ತಿರುವುದು ಲೋಕವಿಖ್ಯಾತವಾದ ಸಂಗತಿಯಾಗಿದೆ. ಅದರಲ್ಲಿ ವೀರಶೈವಮತೀಯರಂತೂ, ಈ ದಾನಶೂರವಿಭೂತಿಯ ವಿಯೋಗದಬಗ್ಗೆ ಅಪಾರವಾದ ದುಃಖವನ್ನು ವ್ಯಕ್ತಮಾಡಿ ಅವರ ನಿರ್ಮಲ ಜೀವನ ರಹಸ್ಯವನ್ನು ಕೊಗಳುತ್ತಲಿರುವರು. ಬಡವರಾದಿಯಾಗಿ ರಾಜಾಧಿರಾಜರವರೆಗೆ ಮಾನ್ಯತೆವೆತ್ತ ಕೀರ್ತಿಶೇಷರಾದ ಸರ್-ಶೆಟ್ಟರವರ ಜೀವನರಹಸ್ಯವನ್ನು ಪ್ರಾಜ್ಞರು ಅನೇಕಪ್ರಕಾರವಾಗಿ ವೃತ್ತಪತ್ರಿಕಾದಿಗಳಲ್ಲಿ ಪ್ರಸಿದ್ಧಗೊಳಿಸಿದ್ದಾರೆ ಇವರ ವಿಯೋಗವಾರ್ತೆಯನ್ನೂ-ಚರಿತ್ರೆಯನ್ನೂ ಇಂಗ್ಲೀಷ್-ಹಿಂದಿ-ಮರಾಠಿ ತೆಲಗು ಕನ್ನಡಭಾಷೆಯ ಸಕಲಪತ್ರಿಕೆಗಳೂ ತಮ್ಮ ಅನುತಾಪಸೂಚಿನೆಯೊಡನೆ ಪ್ರಸಿದ್ಧಗೊಳಿಸಿರುತ್ತವೆ ಧರ್ಮಾತ್ಮರಾಗಿ, ರಾಜಕಾರಣಪಟುಗಳೆಂದೂ, ರಾಜ ಪ್ರಜಾನುರಾಗಿಗಳೆಂದೂ ಪ್ರಸಿದ್ಧಿಯನ್ನು ಪಡೆದವರ ಜೀವನರಹಸ್ಯವು ಎಷ್ಟು ನಿರ್ಮಲವಾಗಿರಬಹುದೆಂಬುದನ್ನು ಸಾಮಾನ್ಯರು ಸಂಪೂರ್ಣವಾಗಿ ತಿಳಿಯಲಾರರು. ಅಲ್ಪಜ್ಞರು ಇವರ ಜೀವನರಹಸ್ಯವನ್ನು ಪ್ರಸಿದ್ಧಗೊಳಿಸಹೋಗಿ ತಮ್ಮ ಅಜ್ಞತೆಯನ್ನು ಪ್ರಕಾಶಪಡಿಸುತ್ತಿರುವದನ್ನು ನೋಡಿ ವಿನೋದನು ಬೆಂಡಾಶ್ಚರ್ಯಗಳಿಂದೊಡಗೂಡಿರುವನು. ಉತ್ತರಕರ್ನಾಟಕವಲ್ಲಿ ಪ್ರಕಟವಾಗುವ ಒಂದು ದಿನಪತ್ರಿಕೆಯಲ್ಲಿ ಕೈ|| ವಾ|| ಸರ್ ಶೆಟ್ಟರವರ ಜೀವನರಹಸ್ಯವನ್ನು ಒರ್ವಶಾಸ್ತ್ರಿಗಳು ಪ್ರಕಟಿಸಿದ್ದಾರೆ. ಅದರಲ್ಲಿ ಶಾಸ್ತ್ರಿಗಳು ತಮ್ಮ ಶಾಸ್ತ್ರೀಯ ಮಾರ್ಗವನ್ನು ಬಹುದೂರಬಿಟ್ಟು ಪಕ್ಷಾಂಧದ ಕಾಡುಮಾರ್ಗವನ್ನು ಹಿಡಿದಿದ್ದಾರೆ. "ಶೆಟ್ಟರು ವೀರಶೈವ ಸಮಾಜದ ಒಂದುಪಕ್ಷಕ್ಕೆ ಆಂಟಿಕೊಂಡಿದ್ದರಿಂದ ಬಹುಜನರ ನಿಂದೆಗೆ ಪಾತ್ರರಾಗಿದ್ದರು." ಎಂಬ ಅನುಚಿತ ವಿಚಾರವನ್ನು ಹೊರಗೆಡವಿದ್ದಾರೆ. ಸರ್-ಶೆಟ್ಟರು ಬಹುಜನರ ನಿಂದೆಗೆ ಪಾತ್ರರಾಗಿದ್ದಾರೆ, ಈ ಶಾಸ್ತ್ರಿಗಳು ಬಹುಜನರೊಡನೆ ಇರಬಹುದು, ಆ ಬಹುಜನರೊಡನೆ ಕಾವೂ ಶೆಟ್ಟರ ನಿಂದಾಕಾರ್ಯದಲ್ಲಿ ಪಾಲುಗಾರರಾಗಿರಬೇಕು. ಆದ್ದರಿಂದಲೇ ಇವರು ಈ ನಿಂದೋಕ್ತಿಯನ್ನು ಹೊರಗೆಡವಿದ್ದಾರೆ. ಶೆಟ್ಟರು ಸಾಧಾರಣರಲ್ಲ. ಸತ್ಯದ ಪಕ್ಷಪಾತಿಗಳು. ಸತ್ಯಾನ್ವೇಷಿಗಳಾಗಿ ಸತ್ಪಕ್ಷದಲ್ಲಿ ದೃಢರಾಗಿ ಅಕ್ಷಯವಾದ ಕೀರ್ತಿಯನ್ನು ಉಳಿಸಿಕೊಂಡಿರುವೆರು. ದುಡ್ಡು ಶಿಕ್ಕಕಡೆಗೆ ಹೊರಳಾಡುವ ಸ್ವಾರ್ಥಾಂಧರು ಕೈ|| ವಾ|| ಸರ್ ಶೆಟ್ಟರ ಜೀವನರಹಸ್ಯವನ್ನು ತಿಳಿಯಲಾರರು.

(೩) ವೀರಶೈವ ಸಾಮಾಜಿಕಸುಧಾರಣೆಯು ಹೇಗಾಗುವದು?

ವೀರಶೈವಸಾಮಾಜಿಕ ಸಂಘಟನೆಯ ಕಾರ್ಯವು ಸಾಧಾರಣವಾದುದಲ್ಲ ಇದರ ಸದ್ಯದಪರಿಸ್ಥಿತಿಯು ಅನೇಕ ಬಿಕ್ಕಟ್ಟನ ತೊಡಕುಗಳಿಂದ ಚಿಂತಾಜನಕವಾಗಿದೆ. ಅವುದಾದರೊಂದು ಸಮಾಜದಲ್ಲಿ ಸಾಮಾನ್ಯವಾಗಿ ಒಂದೆರಡು ತೊಡಕುಗಳದ್ದರೆ ಅವು ತೀವ್ರದಲ್ಲಿಯೇ ಆ ಸಮಾಜಾಭಿಮಾನಿಗಳಿಂದ ಪರಿಹಾರಹೊಂದುತ್ತವೆ. ನಮ್ಮಾಸಮಾಜದಲ್ಲಿ ತೊಡಕುಗಳು ಪ್ರತಿಯೊಬ್ಬ ಮುಂದಾಳುವಿನನ್ನು ಒಂಭಿಸಿರುತ್ತವೆ. ಭಿದ್ರ-ಭಿದ್ರವಾಗಿದ್ದ ಸಮಾಜವನ್ನು ಏಕರೂಪವನ್ನಾಗಿ ಮಾಡುವ ಸರ್ವಸಮರ್ಥವಿಭೂತಿಯ ಅಗತ್ಯವು ನಮ್ಮ ಸಮಾಜಕ್ಕೆ ಹೆಚ್ಚಾಗಿರುವದು. ನಿಷ್ಪಕ್ಷಪಾತಿಯಾಗಿಯೂ, ಸಶಕ್ತಸಂಘನಾಗಿಯೂ, ಇರುವವನು ಸಮಾಜದಲ್ಲಿ ಪ್ರವೇಶಿಸಿ ಪ್ರತಿಯೊಂದು ತೊಡಕುಗಳನ್ನು ಸುಲಭವಾಗಿ ನಿವಾರಣಗೊಳಿಸಿದರೆ ಯಾವ ಪಂಗಡಕ್ಕೂ ಅಸಮಾಧಾನವಾಗದು. ಈಗ ನಮ್ಮ ಸಮಾಜದೊಳಗಿರುವ ತೊಡಕುಗಳು ಬೇರಾವಸಮಾಜದಲ್ಲಿಲ್ಲವೆಂದು ಹೇಳಬಹುದು ಸಮಾಜೋದ್ಧಾರಕ್ಕೆ ಮೂಲಾಧಾರವಾಗಿದ್ದ 'ಮತಸ್ಥಾಪನಾಚಾರ್ಯ' ವಿಷಯದ ಬಗ್ಗೆ ಘನೆತರವಾದ ಕೋಲಾಹಲವೆದ್ದಿರುವದು ವಿಶ್ವಪ್ರಸಂಚದಲ್ಲಿದ್ದ ಸಮಸ್ತಮತಗಳಲ್ಲಿ ಅಯಾಯ ಮತಸ್ಥಾಪಕರ ಬಗ್ಗೆ ಕಿಂಚಿತ್ತಾದರೂ ವಿರೋಧವಿಲ್ಲವು. ವೀರಶೈವಮತದಲ್ಲಿ ಮಾತ್ರ ಮತಸ್ಥಾಪಕರ ವಿಷಯದಲ್ಲಿ ವಿರೋಧವು ಆಕಾಂಡತಾಂಡವ ಮಾಡುತ್ತಲಿರುವಮೆ ಸಮಾಜಸುಧಾರಣೆಯ ಹಂಬಲಿಗರು ಮೊಟ್ಟಮೊದಲು ಈ ದುಃಸ್ಥಿತಿಯನ್ನು ದೂರಮಾಡಿದರೆ ಇನ್ನುಳಿದ ಸಾಮಾನ್ಯವಾದ ಅತಂಕಗಳು ತಮ್ಮಿಂದ ತಾವೇ ಪರಿಹಾರವಾಗುತ್ತವೆ. ಮತಾವತರಣಕ್ಕೆ ಮೂಲಕಾರಣೀಭೂತರಾದವರ ಮೇಲೆ ದ್ವೇಷಾಸೂಯೆಗಳನ್ನು ಬೆಳೆಸುವ ಗುಂಪೊಂದು ಈ ಸಮಾಜದಲ್ಲಿ ಸಜೀವವಾಗಿರುವ ವರೆಗೆ ಸಾಮಾಜಿಕ ಸುಧಾರಣೆಯು ಹೇಗಾಗುವದು?

ಆಭರಣಗಳನ್ನೇಲಿರುವ ಅಬಲೆಯರ ಹಕ್ಕಾಕಿ.

(ಲೇಖಕಿ—ಸುಲೋಚನಾಜಾಬದ, ಹುಲೇಮಕ್ಕಳ ಲಕ್ಷ್ಮೀಪತಿಯವರು)

ಭಗಿನಿಯರೇ! ಒಡವೆಗಳೆಂದರೆ ನಿಮಗೆ ಬಹಳ ಆಶೆ! ಅವು ಇಲ್ಲದೆ ಒಂದರಗಳಿಗೆಯಾದರೂ ಇರಲಾರಿರಿ. ಅವುಗಳನ್ನ ನಿಮ್ಮ ಜೀವಕ್ಕೆ-ತಲೂ ಹೆಚ್ಚಾಗಿ ಪ್ರೀತಿಸುವಿರಿ. ಒಂದು ವೇಳೆ ಅವುಗಳನ್ನು ಧರಿಸಿಕೊಳ್ಳದಿದ್ದರೂ ಪೆಟ್ಟಿಗೆಯಲ್ಲಿ ತುಂಬಿಟ್ಟು ಆನಂದಪಡುವಿರಿ. ಒಡವೆಗಳೇ ನಿಮಗೆ ಪರಮಭೂಷಣವೆಂದೂ ಅವುಗಳಿಂದಲೇ ನಿಮಗೆ ಸಮಾಜದಲ್ಲಿ ಮಾನವುಂಟೆಂದೂ ತಿಳಿದಿರುವಿರಿ. ಕೆಲವು ಹೆಣ್ಣುಮಕ್ಕಳಂತೂ ಆಭರಣಗಳಲ್ಲದೆ ಬೀಗರ ಮನಗೆ ಕಾಲಿಡರು ಹಬ್ಬಹುಣ್ಣಿಮೆಗಳನ್ನು ಮಾಡರು ಮದುವೆಮುಂಜಿಗಳನ್ನು ನೋಡರು. ಕೆಲವರು ತಮ್ಮ ಗಂಡಂದಿರು ಬೇಕಾದಷ್ಟು ಬಡತನದೊಳರಲಿ, ಸಾಕಷ್ಟು ಸಾಲಮೊಳರಲಿ, ಅದನ್ನು ಸ್ವಲ್ಪವೂ ಲೆಕ್ಕಿಸದೆ ಹಗಲಿರುಳು ಅವರ ಜೀವವನ್ನು ಹಿಂಡಿ ಹಿಪ್ಪೆಮಾಡಿ ತಮಗೆ ಬೇಕಾದ ಆಭರಣಗಳನ್ನು ತರಿಸುವರು ಒಂದು ಪಕ್ಷ ಗಂಡಸರು ತಮ್ಮ ಆಡಚಣೆಯ ಮೂಲಕ ಕೊಡಿಸದಿದ್ದರೆ ಅವರ ಕೂಡ ಸಿಡಿಮಿಡಿಗುಟ್ಟತ್ತ, ಏನಾದರೊಂದು ನೆವದಿಂದ ಮಕ್ಯಳನ್ನು ಹೊಡೆಯುತ್ತ ನಿತ್ಯದ ತಮ್ಮ ಮನೆಗೆಲಸಗಳನ್ನು ತೊರೆದು ಮೂಲೆಹಿಡಿದು ಮುಸುಕುಹಾಕಿಕೊಂಡು ಮಲಗಿಬಿಡುವರು ಅಯ್ಯೋ ಪಾಪ! ತಮ್ಮ ಗಂಡಂದಿರು ತಮ್ಮ ಸಲುವಾಗಿ ತಮ್ಮ ಜೀವನವನ್ನು ಅನ್ಯರಲ್ಲಿ ಒತ್ತೆ ಇಟ್ಟು ಮರಣಪರ್ಯಂತ ದುಡಿದರೂ ಚಿಂತೆಯಿಲ್ಲ ತಾವು ಮಾತ್ರ ವಸ್ತ್ರಾಭರಣಗಳಿಂದ ನೀಟಾದರೆ ಸಾಕೆಂದು ಹಾರೈಸುವರು ಆದರೆ ಅನುಕೂಲವಿದ್ದ ಶ್ರೀಮಂತ ಹೆಣ್ಣುಮಕ್ಕಳು ವಸ್ತ್ರಾಭರಣಗಳನ್ನು ಧರಿಸುವರಂದೇ? ಎಂದು ತಾವು ಕೇಳಬಹುದು; ಮುಖ್ಯವಾಗಿ ಸ್ತ್ರೀಯರಿಗೆ, "ಗುಣವೇ ಭೂಷಣವಲ್ಲದೆ ಮಡಿಹೆಂಪಾದಿಗಳು ಭೂಷಣವಲ್ಲ" ಯಾವ ಸ್ತ್ರೀಯರಲ್ಲಿ, ಸತ್ಯ, ಶಾಂತಿ, ಸನ್ಯಾರ್ಗ, ಪತಿಭಕ್ತಿ, ವಿದ್ಯೆ, ವಿನಯ, ದಯೆ, ಧರ್ಮ, ಮತ್ತು ಅತಿಥಿಸತ್ಕಾರಗಳು ಇಲ್ಲವೋ, ಆ ಸ್ತ್ರೀಯರು ತಮ್ಮ ಪಾದದಿಂದ ಹಿಡಿದು ಮಸ್ತಕದವರೆಗೂ, ಆಭರಣಗಳನ್ನು ಧರಿಸಿದಾಗ್ಯೂ, ಆವರು ಮತಿಗಳಲ್ಲಿ ಶೃಂಗರಿಸಿದ ಗೊಂಬೆಗಳಂತೆಯೇ ಸರಿ ಗುಣವಿಲ್ಲದ ಸ್ತ್ರೀಯಳು ಆಪರಿಮಿತ ಆಭರಣಗಳನ್ನು ಧರಿಸಿವಾಗ್ಯೂ ಅಳಿಗೆ ಮರ್ಯಾದೆಯಿಲ್ಲ; ಆದರೆ ಗುಣವಿದ್ದ ಸ್ತ್ರೀಯಳು ಆಭರಣಗಳಾಂತಂಬರವಿಲ್ಲದೆ ತನ್ನ ಕೊರಳಲ್ಲಿದ್ದ ಒಂದು ಮಂಗಳಸೂತ್ರ ಮತ್ತು ಒಂದು ಸಾದಾ ಸೀರೆ ಧರಿಸಿದಾಗ್ಯೂ ಅಳಿಗೆ ಹೆಚ್ಚು ಮರ್ಯಾದೆ ಬೊರೆಯುವದು. ಅದುದರಿಂದ ಭಗಿನಿಯರೇ! ಸದ್ಗುಣಗಳೇಬ ಆಭರಣಗಳನ್ನು

ಧರಿಸಿ, ಪಾತಿವ್ರತ್ಯವೆಂಬ ಪೀತಾಂಬರವನ್ನು ಉಡಿರಿ. ಆಭರಣಗಳು ಕಳ್ಳರ ಕೈಗಂಟುಗಳು ಆವು ನಿಮ್ಮ ಜೀವನ ಶಕ್ತುಗಳು ಮತ್ತು ಆವು ಕ್ಷಣಕಾಸಂದವನ್ನು ಕೊಡುವಂಥವುಗಳೆಂಬ ಸಂಗತಿಯನ್ನು ಅರಿತು ಸದ್ವಿವೇಕದಿಂದ ವರ್ತಿಸಬೇಕಾಗಿ ನನ್ನ ವಿನಂತಿಯಿದೆ.

ಕೆಲ ಆಶಾವಾದಿನಿಯರಾದ ಹೆಣ್ಣುಮಕ್ಕಳು ಏನು ಮಾಡುತ್ತಾರೆಂದರೆ—ಹೆಜ್ಜೆಯನ್ನು ಎತ್ತಿ ಇಡಲಾರದಷ್ಟು ಭಾರವುಳ್ಳ ಪಂಜೇರಿನ ಸರಪಳಿಯನ್ನು ಕಳ್ಳರ ಕಾಲಿಗೆ ಹಾಕಿದ ಬೇಡಿಯಂತೆ ಹಾಕಿಕೊಂಡು, ಆದೇ ಅಯಾಸದಿಂದ ಆಡ್ಡಾಡುವರು. ಹರಡುಗಳು ಕೆತ್ತಿ ಕಾಲು ನೋವಾದಾಗ್ಯೂ ಅವುಗಳನ್ನು ಬಿಡದೆ ಮತ್ತೆ ಅವುಗಳ ಕೆಳಗೆ ನಾಲ್ಕುಸೇರಿನ ಪೈಜಣವನ್ನೂ ಹಾಕಿ ಕೊಳ್ಳುವರು. ಇವೆಲ್ಲದೆ ಕಾಲಿನ ಪ್ರತಿಯೊಂದು ಬೆರಳಿಗೂ ಕಾಲುಂಗುರ, ಪಿಲ್ಲಿ, ಗೆಜ್ಜೆಪಿಲ್ಲಿ, ಮಿಂಚಪಿಲ್ಲಿ, ಮುಂತಾದ ಸಲ್ಲದ ಒಡವೆಗಳನ್ನು ಇಟ್ಟುಕೊಂಡು ಓಡಾಡುವರು ಕೈಯಲ್ಲಿ ಕಡಗ, ಬೇಡಿ, ಹರಡಿ, ಕಂಕಣ, ತೋಳ್ಬಂದಿ ಮುಂತಾದ ಒಡವೆಗಳನ್ನು ಧರಿಸುವರು. ಮೊಗಿಗಿಂತ ಮೂಗುತಿ ದೊಡ್ಡದು ಎಂಬಂತೆ ಗಾಡಿನತ್ತು ಇಟ್ಟುಕೊಳ್ಳುವರು. ಕೆಲವರು ಮೂಗಿನ ಕೆಳಗೆ ತೂತುಮಾಡಿ ಬುಲಾಕು ಧರಿಸುವರು. ಇವಂತೂ ಬಲು ಅಸಹ್ಯವು. ಇನ್ನು ಕರ್ಣಾಭರಣಗಳಿಗಂತೂ ಲೆಕ್ಕವೇ ಇಲ್ಲ ಬುಗುಡಿಯಂತೆ, ಬಾವಲಿಯಂತೆ, ತಾಲೂಕಿವಂತೆ, ಮತ್ತು ಜಿಲ್ಲೆಗಳಂತೆ ಈ ಮುಂತಾದ ಅನಂತ ಅಸಹ್ಯ ಒಡವೆಗಳನ್ನು ಧರಿಸುವರು ಮುಖ್ಯವಾಗಿ ಧರಿಸಿನಿಯರೇ ನಿಮ್ಮ ಶರೀರದ ಅವಯವಗಳು ಭೂಷಣವಾಗಿ ತೋರಬೇಕಾದರೆ ನಾನು ಈ ಕೆಳಗೆ ಕೊಟ್ಟವುಗಳನ್ನು ಅನುಸರಿಸಿರೆಂದು ನನ್ನ ವಿನಂತಿಯಿದೆ.

(೧) ಚರಣಗಳಿಗೆ ತೀರ್ಥಯಾತ್ರೆಗಳೇ ಭೂಷಣವಲ್ಲದೆ ಸರಪಳಿ ಪೈಜಣಗಳಲ್ಲ.

(೨) ಕರಗಳಿಗೆ ಸತ್ಪಾತ್ರದಾನವೇ ಭೂಷಣವಲ್ಲದೆ ವಂಕಿ, ಕೋಟು, ಪಾಟ್ಲಗಳಲ್ಲ.

(೩) ಕರ್ಣಕ್ಕೆ ಪುಣ್ಯಕಥೆಗಳನ್ನು ಕೇಳುವದಲ್ಲದೆ ಬುಗುಡಿ, ಬಾವಲಿಗಳಲ್ಲ.

(೪) ಕೊರಳಿಗೆ ಮಂಗಲಸೂತ್ರವೆ ಭೂಷಣವಲ್ಲದೆ ಸರಿಗಿ, ಟೀಕಿ, ಚೈನುಮಾತ್ರವಲ್ಲ

(೫) ಶಿರಸ್ಸಿಗೆ ಪತಿಪಾದಕೆರಗುವದು ಭೂಷಣವಲ್ಲದೆ ಕೇದಿಗೆ, ಕೂರ್ಮಗಳಲ್ಲ

(೬) ಶರೀರಕ್ಕೆ ಪಾತಿವ್ರತ್ಯವೇ ಭೂಷಣವಲ್ಲದೆ ಬಟ್ಟೆ, ಪೀತಾಂಬರಗಳಲ್ಲ

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀಜಗದ್ಗುರು ಪಂಚಾಚಾರ್ಯ ಧರ್ಮಾರ್ಥ ಸಂಸ್ಕೃತ ವೈದಿಕ ಜ್ಯೋತಿಷ ಪಾಠಶಾಲಾ ಬಣ್ಣದಮಠ ಪಾನೇರಿ

"ಸ್ವಧರ್ಮೇ ನಿಧನಂ ಶ್ರೇಯಃ" ಎಂಬ ಆರ್ಯೋಕ್ತಿಯಂತೆ ಪ್ರತಿಯೊಬ್ಬ ಮನುಷ್ಯನು ತನ್ನ ಧರ್ಮದಂತೆ ವರ್ತಿಸುವದು ಮುಖ್ಯ ಕರ್ತವ್ಯವಾಗಿದೆ. ಮನೆಯ ಯಜಮಾನನ ಆಚರಣೆಯನ್ನು ಆತನ ಪುತ್ರಪೌತ್ರಾದಿಗಳು ಹೇಗೆ ಅನುಸರಿಸುವರೋ ಅದರಂತೆ ಮತರೂಪ ಮಂದಿರಕ್ಕೆ ಯಜಮಾನರಾದ ಗುರುವರ್ಗದವರಿಗೆ ಮತ ತತ್ವವನ್ನು ಬೋಧಿಸಿ ಅವರಿಂದ ಸಮಸ್ತಭಕ್ತಾದಿಗಳನ್ನು ಪುನೀತರನ್ನಾಗಿ ಮಾಡುವ ಸದುದ್ದೇಶದಿಂದ ಶ್ರೀ|| ಷ|| ಬ್ರ|| ಚನ್ನಮಲ್ಲಶಿವಾಚಾರ್ಯಸ್ವಾಮಿಗಳ ನೇತೃತ್ವದಲ್ಲಿ ಮೇಲ್ಕಂಡ ಪಾಠಶಾಲೆಯು ಸ್ಥಾಪನೆಯಾಗಿ ಕೆಲವು ದಿನಗಳು ಆದಾಗ್ಯೂ ಕಾಯಂ ಅಧ್ಯಾಪಕರ ಅಭಾವದಿಂದ ಹೆಚ್ಚು ವಿದ್ಯಾರ್ಥಿಗಳಿಗೆ ಅಶ್ರಯವಿದ್ದಿಲ್ಲ. ತಾರೀಖು ೧-೮-೩೮ ರಲ್ಲಿ ಬಹುದಿವಸ ಅಧ್ಯಾಪಕರಾಗಿ ಅನುಭವಕಾಲಿಗಳಾದ ವಿದ್ಯಾರತ್ನ, ಕಾವ್ಯತೀರ್ಥ ವೇ|| ಪಂ|| ಶ್ರೀ ವಿರೂಪಾಕ್ಷಶಾಸ್ತಿಗಳು ಗಾವರವಾಡ ಇವರನ್ನು ಕಾಯಂ ಅಧ್ಯಾಪಕರನ್ನಾಗಿ ನಿಯಮಿಸಿರುತ್ತದೆ. ಸದರಿಯವರಿಂದ ಜ್ಯೋತಿಷ ವ್ಯಾಕರಣ ಸಾಹಿತ್ಯ ವೈದಿಕಾದಿ ವಿಷಯಗಳು ನಿರಾತಂಕವಾಗಿ ಜರುಗುತ್ತವೆ. ಸದ್ಯ: ಕಮಿಟಿಯವರು ೫೦ ಜನ ವಿದ್ಯಾರ್ಥಿಗಳನ್ನು ಹೆಚ್ಚು ತೆಗೆದುಕೊಳ್ಳಲು ನಿಶ್ಚಯಿಸಿದ್ದಾರೆ. ಅದಕಾರಣ ಈ ಸಂಸ್ಥೆಗೆ ಅಧ್ಯಯನಕ್ಕಾಗಿ ಬರಲು ಇಚ್ಛಿಸುವ ವಿದ್ಯಾರ್ಥಿಗಳು ೧೮ ವರ್ಷ ವಯಸ್ಸಿನೊಳಗಿದ್ದು ಕನ್ನಡ ನಾಲ್ಕನೆಯ ಇಯತ್ತೆಯಲ್ಲಿ ತೇರ್ಗಡೆ ಹೊಂದಿರಬೇಕು. ನಮ್ಮ ಸಂಸ್ಥೆಯ ನಿಯಮಕ್ಕನುಸರಿಸಿ ತಮ್ಮ ಗ್ರಾಮದ ಮಹಾಜನರಿಂದ ಸದ್ವರ್ತನೆಯ ಬಗೆ ಪ್ರಶಂಸಾಪತ್ರಿಕೆಯನ್ನು ತೆಗೆದುಕೊಂಡು ಪಾಲಕರೊಡನೆ ಇದೇ ತಿಂಗಳ ತಾರೀಖು ೨೫ ರೊಳಗಾಗಿ ಹಾಜರಾಗಬೇಕು.

ದೊ. ಶಿ. ಭಕ್ತ,
ಪೆನಶನ್‌ಮಾಸ್ತರ ಸೆಕ್ರೆಟರಿ.

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘ ಶಾಲೀಮ ನ್ಯೂಂದಿರಿಗಿ

ಕುರುಂದವಾಡ ಸಂಸ್ಥಾನಪ್ಯೆಕಿ ಮೈಂದಿರಿಗಿ ಗ್ರಾಮದಲ್ಲಿ ಶ್ರಾವಣ ತು||. ೧೩ ಸೋಮವಾರದಿವಸ ಶ್ರೀ ವೀರಭದ್ರದೇವರ ಪಲ್ಲಂಕ್ಕಿ ಮಹೋತ್ಸವವು ಹೊರಡುವಕಾಲಕ್ಕೆ ಶ್ರೀ ವೀರಸಂಗಪಟ್ಟದ ಸ್ವಾಮಿಗಳು ಹಿರೆಮಠ ಇವರಿಂದ ಸ್ಥಾಪಿತವಾದ ಭಜನಾ ಸಂಘೆ ಮತ್ತು ಶಿವಭಲಮಠದ ಭಜನಾಸಂಘ ಮತ್ತು ಸಂಗಮೇಶ್ವರ ಭಜನಾಸಂಘ ಇಂತಿಷ್ಟು ಭಜನಾ ಸೇವಕರು ಕೂಡಿ ವೀರಭದ್ರದೇವರ ಗುಡಿಗೆ ಭಜನೆ ಮಾಡುತ್ತಾ ಹೊರಟರು. ಅಲ್ಲಿಂದ ಪಲ್ಲಕ್ಕಿಮಹೋತ್ಸವವು ೮ ಘಂಟೆಗೆ ಹೊರಟಿತು. ಜನರು ಅಲ್ಲಲ್ಲಿ ಪುರಂತ ವಡನಗಳನ್ನು ಹೇಳುತ್ತಾ ಶ್ರೀ ಪಂಚಾಚಾರ್ಯರ ಜಯಘೋಷಮಾಡುತ್ತಿದ್ದರು. ಈ ರೀತಿ ವಿಶೇಷ ವೈಭವದಿಂದ ಉತ್ಸವವು ಮಲ್ಲಕಾರ್ಜುನದೇವಸ್ಥಾನಕ್ಕೆ ಹೋಗಿ ತಲಿತು. ಅಲ್ಲಿ ಮಂಗಳಾರತಿಯಾಯಿತು. ಅಲ್ಲಿಂದ ಗೌರೀಕಟ್ಟೆಗೆ ಹೋಯಿತು. ಅಲ್ಲಿ ಪಂಚಾಚಾರ್ಯ ಸ್ತೋತ್ರಗಳನ್ನು ಪಠಿಸಲಾಯಿತು ಇದಲ್ಲದೆ ಈ ಭಜನಾಮಂಡಳಿಯವರು ಬಸವನು ತನ್ನಕಾಲದಲ್ಲಿ ಮಾಡಿದ ಧರ್ಮವಿರೋಧಕಾರ್ಯಗಳನ್ನು ಪದರೂಪವಾಗಿ ರಚಿಸಿ ಹಾಡಿ ಸರ್ವರನ್ನೂ ಸಂತೋಷಗೊಳಿಸಿದರು. ಬಸವಲಿಂಗಪ್ಪ ಗೊಬ್ಬೂರ ಇವರು ಈ ಪದವನ್ನು ಮಧುರಧ್ವನಿಯಿಂದ ಹಾಡಿದರು. ಅಲ್ಲಿ ಬಸವಮತದ ಜನರುಕೂಡ ಬಂದಿದ್ದರು. ಬಳಿಕ ಅಲ್ಲಿಂದ ಪಲ್ಲಕ್ಕಿ ಮಹೋತ್ಸವು ಹೊರಟು ಪುನಃ ಸಂಸ್ಥಾನಕ್ಕೆ ತಲ್ಪಿತು.

ಕಾರ್ಯಭಾಗಿಗಳು—ವೀರಯ್ಯಸ್ವಾಮಿ ಬಜಾರ ಮಠ, ಗುರುಸಿದ್ಧಯ್ಯಸ್ವಾಮಿ ಬೆಂಜಗೇರಿ, ಧಳಪ್ಪ ಜಕ್ಕಾಪುರ, ಸಿದ್ರಾಮಪ್ಪ ಪಾಟೀಲ, ಕರಿಬಸಪ್ಪ ಗೊಬ್ಬೂರ, ಮಲಕಾಜಪ್ಪ ಪಡಸಲಿಗಿ, ಶರಣಪ್ಪ ಲೋಣಿ, ತಿಪ್ಪಣ್ಣ ಸಂಗಾ, ಮೋನಪ್ಪ ಸುತಾರ,

---

ಚನ್ನಗಿರಿ ಸಮಾಚಾರ

ಮೈಸೂರು ಸಂಸ್ಥಾನದ ಮೆಹಬ್ಬೂಬ ಮುಜರಾಯಿ ಕಮಿಷನರ್ ಸಾಹೇಬರವರು ತಾ|| ೧೭-೮-೩೮ ನೇ ಬುಧವಾರ ಪ್ರಾತಃಕಾಲ ಹರಿಹರದಿಂದ ಭದ್ರಾವತಿಗೆ ದಯಮಾಡಿಸುವಾಗ ಮಧ್ಯೆ ಚನ್ನಗಿರಿ ಟವನ್ನಲ್ಲಿ ಶ್ರೀ ರಂಭಾಪುರೀ ಜಗದ್ಗುರುಗಳವರು ಮೊಕ್ಕಾಂ ಮಾಡಿರುವ ವಿಷಯವನ್ನು ತಿಳಿದು ರಾಜ್ಯಕಾರ್ಯ ಗೌರವಗಳು ವಿಶೇಷವಾಗಿದ್ದರೂ ಅವಕಾಶವನ್ನು ಕಲ್ಪಿಸಿಕೊಂಡು ಆಗಮಿಸಿ ಮಹಾಸ್ವಾಮಿಗಳವರ ದರ್ಶನವನ್ನು ಹೊಂದಿ ನಿರ್ಬಾಧವಾಗಿ ನಡೆಯುತ್ತಿರುವ ತಪೋನುಷ್ಠಾನಾದಿ ಸತ್ಕರ್ಮಗಳ ವಿಚಾರವನ್ನು ಕೇಳಿ ಸಂತೋಷಪಟ್ಟು ಸುಮಾರು ಅರ್ಧಘಂಟೆಯವರೆಗೂ ಶ್ರೀಗಳವರೊಂದಿಗೆ ಸಂಭಾಷಿಸಿ, ಫಲಮಂತ್ರಾಕ್ಷತೆಗಳನ್ನು ಸ್ವೀಕರಿಸಿ, ಶ್ರೀ ವೀರೇಶ್ವರ ಮಹಾಮೂರ್ತಿಗೆ ಮಂಗಳಾರತಿಯಾದ ನಂತರ ಪ್ರಸಾದವನ್ನು ಪಡೆದು ಮುಂದಕ್ಕೆ ಪ್ರಯಾಣ ಬೆಳೆಸಿದರು.

ಗುರುಭೇಟಿ

ತಾ|| ೧೭-೮-೩೮ರ ಬುಧವಾರ ಸಾಯಂಕಾಲ ೬ ಘಂಟೆಗೆ ಸರಿಯಾಗಿ ಸ್ವಾಗತ ಸಂಘದವರ ಅಪೇಕ್ಷೆಯಂತೆ ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಸನ್ನಿಧಿಯಲ್ಲಿ ನೆರೆದಿದ್ದ ಮಹಾಸಭೆಯಲ್ಲಿ ಕೇರ್ಪಡೆ ಕೇಸರಿ ಕಮಿಭೂಷಣೇತ್ಯಾದಿ ಬಿರುದಾಂಕಿತರಾದ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಶ್ರೀ ರೇಣುಕರ ಅದ್ಭುತ ಲೀಲೆಗಳಲ್ಲೊಂದಾದ ಗೋರಕ್ಷಗರ್ವಭಂಗವೆಂಬ ಗುರು ಕೀರ್ತನವನ್ನು ಬಹುಸರಸವಾಗಿ ಅನುವಾದಮಾಡಿ ಸಮಸ್ತ ಜನರನ್ನೂ ಭಕ್ತಿಪರವಶರನ್ನಾಗಿ ಮಾಡಿದರು. ಬಳಿಕ ಸ್ವಾಗತಸಂಘದವರ ಪ್ರಾರ್ಥನೆಯಮೇರೆಗೆ ಶ್ರೀ ಜಗದ್ಗುರುಗಳವರು ಶಾಸ್ತ್ರಿಗಳಿಗೆ ಫಲಮಂತ್ರಾಕ್ಷತೆಗ ಳೊಂದಿಗೆ ಸಂಭಾವನೆಯನ್ನು ಆಶೀರ್ವದಿಸಿದರು. ಆ ಮೇಲೆ ಜಗದ್ಗುರುಗಳು ನಿಗಮಾಗಮೋಪನಿಷದ್ವಚನ ಗಳಾಧಾರದಿಂದ ಭಕ್ತಿ ವಿಷಯವನ್ನು ಕುರಿತು ಭಾಷಣ ಮಾಡಿದರು ಶ್ರೀ ಭಗವತ್ಪಾದರವರ ಸದ್ಭೋಧಾಮೃತ ವನ್ನು ಪಾನಮಾಡಿ ಸರ್ವರೂ ಪುನೀತರಾಗಿ ಆನಂದೋದ್ಗಾರದಿಂದ ಗುರುಜಯಘೋಷವನ್ನು ಮಾಡಿದನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ಶಿವಲಿಂಗಾನುಷ್ಠಾನ-ಅಕ್ಕಲಕೋಟೆ

ಸೊಲ್ಲಾಪುರ ಜಿಲ್ಲೆಯಲ್ಲಿರುವ ಸಂಸ್ಥಾನ ಅಕ್ಕಲ ಕೋಟೆದಲ್ಲಿ ಜಹಗೀರ ಜೇವರಗೀ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಗುರುಶಾಂತಶಿವಾಚಾರ್ಯರು ಶ್ರಾವಣ ಶುದ್ಧ ಪ್ರತಿಪದ ಮೊದಲ್ಗೊಂಡು ಉಗ್ರಾನುಷ್ಠಾನವನ್ನಾರಂಭಿಸಿರುವರು ಶ್ರೀಗಳವರು ಯತ್ಕಿಂಚಿತ್ ಗೋಸ್ಪೀರವನ್ನು ಮಾತ್ರ ಸ್ವೀಕರಿಸುತ್ತಿರುವರು. ಆಹಾರದ ಕೊರತೆಯಿಂದ ಶರೀರವು ಕೃಶವಾದರೂ, ಮುಖದಲ್ಲಿ ಬ್ರಹ್ಮತೇಜಸ್ಸು ಉಕ್ಕುತ್ತಿರುವದು. ಶ್ರೀಗಳವರ ದರ್ಶನಾಶೀರ್ವಾದಕ್ಕೊಸ್ಕರ ನಿತ್ಯದಲ್ಲಿಯೂ, ಸ್ಥಲ, ಪರಸ್ಥಲಗಳಿಂದ ನೂರಾರು ಜನರು ತಪ್ಪದೆ ಬರುತ್ತಿರುವರು ಬರುಹೋಗುವವರ ಸರ್ವವ್ಯವಸ್ಥೆಯನ್ನು ಶ್ರೀಯುತ ಗುರುಲಿಂಗಪ್ಪ ಹಿಂಡೋಳೆ, ಎಂಬವರು ದಕ್ಷತೆಯಿಂದ ನೆರವೇರಿಸುತ್ತಿರುವರು. ಶ್ರೀಗಳವರ ಸರ್ವವ್ಯವಸ್ಥೆಗೂ ಶ್ರೀಯುತ ಹಿಂಡೋಳೆಯವರೇ ಕಾರಣರಾಗಿದ್ದಾರೆ ಶ್ರೀಗಳವರು ಅನುಷ್ಠಾನವನ್ನಾರಂಭಿಸಿದ ಸ್ಥಲವು ಇಲ್ಲಿಯ ಸಂಸ್ಥಾನಾಧಿಪತಿಗಳದು ಇರುತ್ತದೆ. ಆದರೂ ಪ್ರಯತ್ನಪಟ್ಟು ಶ್ರೀ ಹಿಂಡೋಳೆಯವರು ಅನುಷ್ಠಾನಕ್ಕೆ ಅನುಕೂಲತೆಯನ್ನು ಮಾಡಿಕೊಟ್ಟಿರುವರು. ಶ್ರೀಗಳವರ ಅನುಷ್ಠಾನದ ಸರ್ವಫಲವೂ ಶ್ರೀಯುತ ಗುರುಲಿಂಗಪ್ಪ ಹಿಂಡೋಳೆಯವರಿಗೇ ನಿಶಾಸೆಲಂದು ಬರೆದರೆ ಅತಿಶಯೋಕ್ತಿಯಲ್ಲ. ಈ ತಪೋವನವು ಬಿಲ್ವವೃಕ್ಷಗಳಿಂದಲಂಕೃತವಾಗಿರುತ್ತದೆ ಇಂತಹ ಶ್ರೀಗಳಿಂದಲೂ ಇಂತಹ ಸದ್ಭಕ್ತರಿಂದಲೂ ಸದ್ಧರ್ಮೋದ್ಭವವು ಸರ್ವತ್ರ ಪ್ರಕಾಶಪಡಬೇಕಾಗಿದೆ

ವಿಶ್ವಲ ರೇವಣಸಿದ್ಧಪ್ಪ, ಭರಮಶೆಟ್ಟಿ.

ಮತಸ್ಥಾಪನಾಚಾರ್ಯರಲ್ಲಿ ಪ್ರಾರ್ಥನೆ.

ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿರುವ ನೆಲಮಂಗಲ ತಾಲೂಕು, ದೊಡ್ಡಬಳ್ಳಾಪುರ ತಾಲೂಕು, ಕೊರಟಗೆರೆ ತಾಲೂಕು, ತುಮಕೂರು ತಾಲೂಕುಗಳಲ್ಲಿರುವ ಕೆಲವು ಗ್ರಾಮಗಳಲ್ಲಿರುವ ಅಲಿಂಗಿಜನರು ಇತ್ತೀಚೆಗೆ ಮತಾಚಾರ್ಯರ ಅಪ್ಪಣೆಯಿಲ್ಲದೆ ಮತ್ತು ಸುತ್ತುಮುತ್ತು ಗ್ರಾಮಗಳ ಶೆಟ್ಟರು ಯಜಮಾನರ ಅನುಮತಿಯಿಲ್ಲದೆ ಲಿಂಗಧಾರಣವನ್ನು ಮಾಡಿಕೊಂಡಿರುತ್ತಾರೆ. ಇದರಿಂದ ಆಯಾ ಗ್ರಾಮಗಳಲ್ಲಿ ನಾನಾವಿಧವಾದ ಜಿಜ್ಞಾಸೆಗೆ ಕಾರಣವಾಗಿದೆ. ಮತಾಚಾರ್ಯರ ಅಪ್ಪಣೆಯಿಲ್ಲದೆ ಈ ವಿಧವಾದ ಕಾರ್ಯಗಳು ನಡೆಯುವದು ಅತ್ಯಂತ ಅನ್ಯಾಯವು ಹೀಗೆ ಮಾಡುವದರಿಂದ ಕಟ್ಟುವವರಿಗೂ ಕಟ್ಟಿಸಿಕೊಳ್ಳುವವರಿಗೂ ಯಾವ ಫಲವು ದೊರೆಯುವದೋ ತಿಳಿಯದಾಗಿದೆ. ಇಂತಹ ವಿಷಯವನ್ನು ಮೂಲಪೀಠಾಚಾರ್ಯರು ಗಮನಕ್ಕೆ ತೆಗೆದುಕೊಂಡು ಸರಿಯಾದ ಕಾರ್ಯಭಾಗವನ್ನು ನಡೆಯಿಸಬೇಕೆಂದು ಪ್ರಾರ್ಥನೆ. ಇಲ್ಲದಿದ್ದಲ್ಲಿ ಮತವು ಅನಾಯವಾಗಿ ಹೋಗುವದರಲ್ಲಿ ಸಂದೇಹವಿಲ್ಲ. ನಿಜಸ್ಥಿತಿಯನ್ನು ಪೀಠಾಚಾರ್ಯರಲ್ಲಿ ಅರಿಕೆಮಾಡಿಕೊಂಡಿದ್ದೇನೆ.

ಯಜಮಾನ ಬಸವಲಿಂಗಪ್ಪ, ಹುತ್ತರಿ.

ಪಂಚಾಚಾರ್ಯಪ್ರಭಾ.

೧೯೩೮ ನೆಯ ಆಗಸ್ಟ್ ತಾ|| ೨೨ ನೇ ಸೋಮವಾರ

ಸನಾತನಧರ್ಮ

ಶ್ರುತಿಸ್ಮೃತ್ಯುದಿತಂ ಧರ್ಮಮನುತಿಷ್ಠನ್ ಹಿ ಮಾನವಃ ।
ಇಹಕೀರ್ತಿಮವಾಪ್ನೋತಿ ಪ್ರೇತ್ಯ ಚಾನುತ್ತಮಂ ಸುಖಂ ॥

ಋಗ್ಯಜುಸ್ಸಾಮಾಥರ್ವಗಳೆಂಬ ನಾಲ್ಕುವೇದಗಳಲ್ಲಿಯೂ ವೇದಾನುಕೂಲಗಳಾದ ಮನ್ವಾದಿಧರ್ಮಶಾಸ್ತ್ರಗಳಲ್ಲಿಯೂ ಶಾಸ್ತ್ರಾನುಸಾರಿಗಳಾದ ಅಷ್ಟಾದಶಪುರಾಣಗಳಲ್ಲಿಯೂ, ಪುರಾಣಾನುಸಾರಿಗಳಾದ ಭಾರತಾದಿ ಇತಿಹಾಸಗಳಲ್ಲಿಯೂ ವಿಧಿಸಲ್ಪಟ್ಟಿರುವ ಕರ್ತವ್ಯಕರ್ಮಗಳಿಗೆ ಧರ್ಮವೆನ್ನುತ್ತಾರೆ. ಆಸ್ತಿಕನಾದ ಮಾನವನು ಇಂಥ ಧರ್ಮವನ್ನು ಬಿಡದೆ ಅನುಸರಿಸಿ ನಡೆಯುವವನಾದರೆ ತಾನಿರುವನವರೆಗೆ ಯಶಸ್ಸನ್ನು ಪಡೆದು ಸುಜ್ಞಾನಾನಂತರ ಧರ್ಮಾನುಷ್ಠಾನಮಾಡಿದ ಅಂತಹ ದಿವ್ಯಾತ್ಮನು ಪುನಃ ದೇಹಸಂಬಂಧವಿಲ್ಲದ ನಿತ್ಯಸುಖವನ್ನು ಪಡೆವನೆಂದು ಧರ್ಮಶಾಸ್ತ್ರಕಾರರು ಧರ್ಮಾನುಷ್ಠಾನದಿಂದಾಗುವ ಮಹಾಪ್ರಯೋಜನವನ್ನು ಪ್ರತಿಪಾದಿಸಿರುವರು. ಧರ್ಮವು ಅಧರ್ಮಾಗಬಲ್ಲದು. ಅಧರ್ಮವು ಧರ್ಮವಾಗಲಾಗದು. ಧರ್ಮಲಕ್ಷಣವೇ ಬೇರೆ ಅಧರ್ಮಲಕ್ಷಣವೇ ಬೇರೆ. ರೋಗಿಯಾದ ಪುರುಷನು ಪಥ್ಯವಸ್ತುಗಳನ್ನು ದ್ವೇಷಿಸುವಂತೆಯೂ ಅಪಥ್ಯವಸ್ತುಗಳನ್ನು ಪ್ರೀತಿಸುವಂತೆಯೂ, ಭವರೋಗಿಗಳು ಭವರೋಗ ವಿಮೋಚಕವಾದ ಧರ್ಮಗಳನ್ನು ದೂಷಿಸುವುದೂ, ಭವ ರೋಗಜನಕವಾದ ಅಧರ್ಮಗಳನ್ನು ಪ್ರೀತಿಸುವುದೂ ಸ್ವಭಾವವಾಗಿದೆ. ಅಪಥ್ಯಕಾರಿಗಳಾದ ವಿಷಾಧ್ಯಗಳನ್ನು ಸೇವಿಸುವುದರಿಂದ ಪ್ರಕೃತದಲ್ಲಿ ನಾಲಗೆಯು ಸೌಖ್ಯವಹಿಸಿದರೂ ಆ ಸೌಖ್ಯಪ್ರಭಾವವು ಕುಷ್ಠಿಯನ್ನು ಪ್ರವೇಶಿಸಿ ಭೂತಾಕಾರವಾಗಿ ದೇಹಗೋಲ್ಬಣಗೊಳಿಸಿ ಮಾನವನನ್ನು ಅವಮೃತ್ಯು ಬೇಗನೆ ಸ್ವಯತ್ನದಲ್ಲಿ ಸೆಳೆಯುವಂತೆ ಅನಾದಿಕಾಲದಿಂದ ಜನಸಮೂಹಗಳೂಪವಾದ ಮಹಾಯಂತ್ರದಲ್ಲಿ ಶಿಕ್ಷಣ ಅನೇಕ ದೀನೋತ್ಕರ್ಷ ಜನ್ಮಗಳನ್ನು ಪಡೆಯುತ್ತ ಕ್ಷಣಿಕವಾದ ವಿಷಯಸುಖಗಳೇ ತಮ್ಮ ಜೀವಮಾನದ ಫಲವೆಂದು ಭ್ರಮಿಸಿ ಭವಾಂಬುಧಿಯಲ್ಲಿ ಬಳಲುತ್ತಿರುವರು. ಈ ಬಳಲಿಕೆಯು ತಪ್ಪಬೇಕಾದರೆ ಧರ್ಮವೆಂಬ ನೌಕಾಪಹಾಯವು ಬೇಕೇಬೇಕು. ಇದಕ್ಕಾಗಿಯೇ " ಧೃಯತ ಇತಿಧರ್ಮಃ " ಸಾರ್ವೋನ್ಮುಖವಾಗಿ ಪ್ರಸರಿಸುತ್ತಿರುವ ಆತ್ಮನನ್ನು ಹಿಂದಿರುಗಿಸುವುದರಿಂದ ಧರ್ಮವೆಂಬ ಹೆಸರನ್ನು ಪಡೆಯಿತು. ಆಯಾಮ ಶಬ್ದಗಳಲ್ಲಿ ಅಯಾಯ ಶಕ್ತಿಗಳಿಲ್ಲದಿದ್ದರೆ ಆಯಾಯ ಹೆಸರುಗಳನ್ನು ತುಚ್ಛಧನು ಅವುಗಳಿಗಿಡುತ್ತಿರಲಿಲ್ಲ. ಜಲಾಹರಣಾದಿರಕ್ತಿಗಳಲ್ಲದಿದ್ದರೆ ಘಟವೆಂಬ ಹೆಸರನ್ನೇಕೆ ಇಡುತ್ತಿದ್ದನು. ಆಮದರಿಂದ ಪಾಪಾಪನೋದನಶಕ್ತಿಯು ಈ ಧರ್ಮವಲ್ಲಿ ಇದ್ದೇ ಇರಬೇಕೆಂದು ನಾವು ನಂಬಬೇಕೇಕು. ಅವಲ್ಲದೆ ಲೋಕದಲ್ಲಿ ಅಪ್ತನಾದ ಪುರುಷನು ಸುಳ್ಳುಹೇಳಿ ತನ್ನನನೆನ್ನು ಕೆಡಿಸುವುದಿಲ್ಲವೆಂಬುದು ಎಲ್ಲರಿಗೂ ತಿಳಿದಿದೆ. ಆದುದರಿಂದಲೇ " ಆಪ್ತಸ್ತುಯಧಾರ್ಥವಕ್ತಾ " ಎಂದು ಶಾಸ್ತ್ರಕಾರರು ಆಪ್ತನ ಲಕ್ಷಣವನ್ನು ತೋರಿಸಿರುತ್ತಾರೆ. ಇಲ್ಲಿ ವೇದಗಳೂ ಆ ವೇದಗಳನ್ನು ಹಿಂಬಾಲಿಸಿದ ಧರ್ಮಶಾಸ್ತ್ರಾದಿಗಳೂ ಆಪ್ತವಾಕ್ಯಗಳಾಗಿರುತ್ತವೆ. ಮಹಾರೋಗದಿಂದ ಯಾವಾಗಲೂ ನೆರಳುತ್ತಿರುವ ಜನನ್ನು ಕುರಿತು ಅನ್ಯಾಜಕರುಣಾಮೂರ್ತಿಯಾದ ವೇದಪುರುಷನು " ಧರ್ಮಂಚರ ಸತ್ಯಂವದ " ಎಂದು ಗುರುಮುಖದಿಂದ ಡಂಗುರವನ್ನು ಹೊಡಿಸುತ್ತಿದ್ದರೂ ಬಧಿರನೆಂತೆ ಅತ್ತಕಡೆಗೆ ಕಿವಿಗೊಡದಿರುವುದನ್ನು ನೋಡಿದರೆ ವಜ್ರಲೇಪದಂತಿರುವ ಮಹಾಮಾಯೆಯನ್ನು ಬಣ್ಣಿಸುವರಾರು ? ಧರ್ಮಮಾರ್ಗದಲ್ಲಿ ಕಾಲಿಡದವನಿಗೆ ಮನುಷ್ಯಜನ್ಮವೇಕೆ ? ಬರೆ ಆಹಾರ ನಿದ್ರಾಮೈಥುನಗಳ ಸೌಖ್ಯ ಪಡೆವುದೊಂದೇ ಮಾನವಜನ್ಮದ ಗುರಿಯಲ್ಲವು. ಇವುಗಳು ಮನುಷ್ಯಜನ್ಮಗಳಲ್ಲಿಶ್ಚಿದ್ದರೂ ಇತರ ಜನ್ಮಗಳಲ್ಲಿಯೂ ತಾವಾಗಿಯೇ ಸಿದ್ಧಿಸುತ್ತವೆ. ಇದಕ್ಕಾಗಿ ಇಷ್ಟು ಪ್ರಯತ್ನಪಡಬೇಕಾಗಿಲ್ಲವು. ಪರಮಾತ್ಮನು ಪುಣ್ಯಪಾಪಗಳನ್ನು ತುಲನೆಮಾಡಿ ಪಂಚಜ್ಞಾನೇಂದ್ರಿಯಗಳಿಂದಲೂ ಪಂಚಕರ್ಮೇಂದ್ರಿಯಗಳಿಂದಲೂ ಅಂತಃಕರಣಗಳಿಂದಲೂ ಕೂಡಿದ ಈ ಮಾನವದೇಹದಲ್ಲಿ ಜೀವಾತ್ಮನು ಪ್ರವೇಶಿಸಿಕೊಳಿಸುವಂತೆ ಮಾಡಿ ಧರ್ಮವೆಂಬ ರಾಜಮಾರ್ಗವನ್ನು ತೋರಿಸಿರುವನು. ಇಂಥ ಪರಮಾತ್ಮನು ಮಾನವನೀಗೋಸ್ಕರ ಹಾಕಿದ ಧರ್ಮವೆಂಬ ರಾಜಮಾರ್ಗವನ್ನು ಹಾಳುಮಾಡಿ ಕಾಡುಮೇಡುಗಳಲ್ಲಿ ಅಲೆಯುತ್ತಹೋದರೆ ಪ್ರಾಪ್ಯಸ್ಥಾನವು ಹೇಗೆ ತಾನೇ ಬುಂಟಾಗುವದು ? " ಸಂಸರ್ಗಜಾದೋಷಗುಣಾ ಭವಂತಿ " ಎಂಬ ನ್ಯಾಯಾನುಸಾರವಾಗಿ ಉಪ್ಪಿನೇರಿಯಲ್ಲಿ ವಿದ್ಯುತ್ಪ್ರವಾಹದ ನೆಳವಿಗೆ ಬಿದ್ದು ತಾನು ಎಲ್ಲಿಂದ ಬಂದಿರುವನೆಂದು ತಿಳಿಯದೆ ಎಲ್ಲಭಾಗವಲ್ಲಿ ಅವರಂತಾಗಬೇಕೆಂದು ಹೆಂಬಲಿಸಿ ಸನಾತನನಾಗಿ ಬಂದಿರುವ ವೇದ ಶಾಸ್ತ್ರಗಳೆಂಬ ಆಪ್ತವಾಕ್ಯಗಳ ಮೇಲೆ ವಿಶೋಧವನ್ನು ಮಾಡಹತ್ತಿರುವರು. ಧರ್ಮಗಳೆಂದರೆ ಸಾಮಾಜಿಕಸುಧಾರಣೆಗಳೆಂದು ಹೇಳತೊಡಗಿರುವರು. ಸಾಮಾಜಿಕಸುಧಾರಣೆಗಳು ಕಾಲಾನುಸಾರವಾಗಿ ಹೇಗೆ ಬದಲಾವಣೆಪಡೆಯುವವೋ ಹಾಗೆ ಹಾಗೆ ಧರ್ಮಗಳೂ ಬದಲುಪಡೆಯಬೇಕೆಂದು ಜೀಳುವುದೇ ಇವರ ಸಾದಾನುಸರಣವು. ಯಾವುದು ಧರ್ಮವೆಂದೂ ಯಾವುದು ಅಧರ್ಮವೆಂದೂ ವೇದಗಳಿಂದ ನಿಶ್ಚಿತವಾಗಿರುವುದೋ ಅವೇ ಧರ್ಮಗಳಾಗಿಯೂ ಅಧರ್ಮಗಳಾಗಿಯೂ ಇರುತ್ತವೆ. ಭಾರತ ಯುದ್ಧ ಋಗ್ಯಜುಸ್ಸಾಮವಾದಿಗಳನ್ನೇ ವೇದಗಳನ್ನಾಗಿಯೂ ಈ ವೇದಗಳ ಆನುಭೂರ್ವಿಯೂ ಕಲ್ಪಕಲ್ಪಾಂತರಗಳಲ್ಲಿ ಏಕರೂಪವಾಗಿರುತ್ತದೆಯೆಂದೂ ಈ ವೇದಗಳು ಪರಮಾತ್ಮನ ದಿವ್ಯವಾಣಿಯೆಂದೂ, ನ್ಯಾಯವಾಗಿ ನಂಬಿರುವ ಜನರಿಗೆ ಗೋದಂಬೆಯಂತೆ ಸ್ಪಷ್ಟವೇ ಬದಲಾವಣೆ ಹೊಂದುವ ಸಾಮಾಜಿಕ ರಾಜಕೀಯ ಸುಧಾರಣೆಗಳು ಧರ್ಮಗಳಾಗಿ ಪರಿಣಮಿಸಬಹುದೆಂಬುದೆನ್ನು ವಾಚಕರೇ ವಿಚಾರಿಸಲಿ. ನನ್ನ ಆಸೈರು ಅಂಥ ವೇದಗಳ ಸೂಧಾರ್ಥಗಳನ್ನೆಲ್ಲ ಕಲಕಿ ತಪ್ಪುಗಳ ಸಾರ ನನ್ನ ತೆಗೆದು ಧರ್ಮಶಾಸ್ತ್ರಗಳನ್ನು ಬರೆಸಿರುತ್ತಾರೆ. ' ಶಾಸನಾಚ್ಛಾಸ್ತ್ರಮಿತ್ಯಾಹುಃ " ಎಂಬ ನಿರ್ವಚನಾನುಸಾರವಾಗಿ ಇಂಥ ಆಚರಣೆಗಳೇ ಧರ್ಮಗಳೆಂದೂ ಇಂಥ ಆಚರಣೆಗಳೇ ಅಧರ್ಮಗಳೆಂದೂ ಧರ್ಮಾಚರಣೆಯು ಭವಸಮುದ್ರವಲ್ಲಿ ತೇಲಿ ಹೋಗುತ್ತಿರುವ ಆತ್ಮನನ್ನು ಬಿಡದು ನಿಲ್ಲಿಸಿ ಪರಮಾತ್ಮನನ್ನು ಶೇರಿಸುವುದೆಂದೂ ಅಧರ್ಮಾಚರಣೆಯು ಕಾಮಕ್ರೋಧಾದಿಗಳೆಂಬ ದುಷ್ಟ ಜಂತು ಭೂಯಿಷ್ಠವಾದ ಭವಾರಣ್ಯಕ್ಕೆ ದೂಡುವುದೆಂದೂ ಶಾಸ್ತ್ರವು ನನ್ಯಾಗಳನ್ನು ಶಾಸನಮಾಡುತ್ತದೆ. ಇಂಥ ನರಕಹೇತುವಾದ ಅಧರ್ಮವನ್ನು ಧರ್ಮವನ್ನಾಗಿಯೂ ಸ್ವರ್ಗಹೇತುವಾದ ಧರ್ಮವನ್ನು ಅಧರ್ಮವನ್ನಾಗಿಯೂ ಮಾಡುವುದೆಂದರೆ ಕೆರೆನಾಯಿಯನ್ನು ಬಿಳೆನಾಯಿಯನ್ನಾಗಿ ಮಾಡಬೇಕೆಂಬಾಶೆಗೆ ಸಮಾನವಾದುದೆಯೇ ಸರಿ ಆದುದರಿಂದ ಸಾಮಾಜಿಕಸುಧಾರಕೆಗಳೆಂದರೆ ಹೊಟ್ಟೆಬಟ್ಟೆಗೂ ಲೌಕಿಕಗೌರವಪ್ರತಿಷ್ಠೆಗೂ ಸಾಧನವಾದ ಒಂದು ವಿಧ ಕಲಾಕೌಶಲವಿದ್ಯೆಯೆಂದು ತಿಳಿದು ಅವನ್ನು ಆರ್ಜಿಸುವುದರಲ್ಲಿ ತೊಡಗಬೇಕಲ್ಲದೆ ಧರ್ಮಧ್ವಜವನ್ನು ಕಿತ್ತೆಸೆದು ಅಧರ್ಮಧ್ವಜವನ್ನು ನಾಟಲು ಯಾರೂ ಪ್ರಯತ್ನಪಡಬಾರದು. ಹಾಗೆ ಮಾಡಿದರೆ,

ರಮಣೀಯ ಚರಣಾ ರಮಣೀಯಾಂ ಯೋನಿಮಾಪದ್ಯಂತೆ ।
ಕಪೂಯಚರಣಾಃಕಪೂಯಾಂ ಯೋನಿಮಾಪದ್ಯಂತೆ ॥

ಎಂಬ ಧರ್ಮಾಧರ್ಮಗಳ ಫಲವನ್ನು ಸಾರುವ ಶ್ರುತಿವೇದಿಮ ವಾಣಿಯೇ ಪುಸಿಯಾಗುತ್ತದೆ. ಮಾತೃ ವಾತ್ಸಲ್ಯೋನ್ಮಿಷಗಳಿಗೆ ಆಗುವ ಅನಿಷ್ಟಫಲವನ್ನು ನಾವು ಹೇಳಬೇಕಾಗಿಲ್ಲವು. ಆದುದರಿಂದ ಧರ್ಮವೆಂಬುದು ಯಾವುಗಲೂ ಅಪ್ರಕೆಂಪ್ಯವಾದುದಲ್ಲದೆ ಒಂದು ಕಾಲದಲ್ಲಿಯೂ ಕಂಪನಕೊಳ್ಳುವ ಸ್ವಭಾವ ಉಳ್ಳದಲ್ಲ. ನಮ್ಮ ಸನಾತನಧರ್ಮಾವಲಂಬಗಳು ಯಾವಾಗಲೂ ವೇದಧರ್ಮವನ್ನು ಕಾಪಾಡುವವರಾದುದರಿಂದ ಪೂರ್ವ ಕಾಲದಿಂದ ವೇದಾಧಾರದಿಂದ ಧರಶಖಂಡದಲ್ಲಿ ಕಾಲೂರಿನಿಂತಿರುವ ಸನಾತನಧರ್ಮಕ್ಕೆ ಯಾರೂ ಪ್ರತಿಘಟನೆದೆ ಅನುಕೂಲವಾಗಿ ವರ್ತಿಸುವ ಸದ್ಬುದ್ಧಿಯನ್ನು ಸನಾತನಿಗಳಿಗೆ ಪರಮಾತ್ಮನು ಅನುಗ್ರಹಿಸಲಿ.

ಒಳದೇಶದ ವೃತ್ತಾಂತಗಳು.

ತಮ್ಮ ಕೇಂದ್ರ ಕಚೇರಿಯು ಇಪ್ಪತೆಯು ಮೇನೆಗೆ ಬೆಂಗಳೂರು ದಂಡಿನ ಕ್ವಾಲಿಕೆಟ್ ಬ್ಯಾಂಕು ತನ್ನ ಕಾರ್ಯಗಳನ್ನು ನಿಲ್ಲಿಸಿ ಕಳೆದ 16 ನೆಯ ತಾರೀಖಿನ ದಿವಸ ಬಾಗಿಲು ಹಾಕಿತು. ಇದರಿಂದ ಜನರಲ್ಲಿ ಸುತ್ತೆ ಕಳವಳವು ಹೆಚ್ಚಿದೆ. ತಿರುವಾಂಕೂರು ನ್ಯಾಷನಲ್ ಮತ್ತು ಕ್ವಿಲಾ ಬ್ಯಾಂಕು ಮುಚ್ಚಿದ ಮೇಲೆ ದರ್ಬಾ ಕಮರ್ಷಿಯಲ್ ಬ್ಯಾಂಕು ಅವಸ್ಸಾಯಿಸಿತು. ಬೆಂಗಳೂರು ಬ್ಯಾಂಕಿನ ಸಂಬಂಧವಾಗಿ ಬೆಂಗಳೂರು ದಂಡಿನ ಡಿ|| ಕೋರ್ಟಿನಲ್ಲಿ ವ್ಯವಹಾರವು ನಡೆದು ಅದು ತನ್ನ ಕೆಲಸವನ್ನು ನಿಲ್ಲಿಸಿತು. ಈಗ ಕ್ವಾಲಿಕೆಟ್ ಬ್ಯಾಂಕು ಹೊಣ ಪಾವತಿಮಾಡುವದನ್ನು ನಿಲ್ಲಿಸಿರುವುದು ಬಹುಜನರ ಯೋಚನೆಗೆ ಕಾರಣವಾಗಿದೆ.

ಬೆಂಗಳೂರು ಕಬ್ಬನ್‌ಪೇಟೆಯಲ್ಲಿರುವ 62 ವಯಸ್ಸಿನ ಮುದುಕನು 18 ವರ್ಷ ವಯಸ್ಸಿನ ಪಾಲಿಕೆಯನ್ನು ವಿವಾಹವಾಗಲು ಪ್ರಯತ್ನಿಸಿ ಕಡೆಗೂ ನಿಶ್ಚಯಿಸಲ್ಪಟ್ಟನು. ದೈವವಶಾತ್ ಸಮಾಜದಲ್ಲಿ ಇಂತಹ ದುಷ್ಟಾಚಾರಗಳು ನಡೆಯದಂತೆ ಮಾಡಲು, ಪ್ರಚಾರಮಾಡುತ್ತಿರುವ ಶ್ರೀ ಬಿ. ಎಂ. ಶ್ರೀಕಂಠಯ್ಯನವರಿಗೆ ಈ ವರ್ತಮಾನ ತಿಳಿಯಲು, ಅವರು ವಯೋವೃದ್ಧ ಕವಿಯನ್ನು ನೋಡಿ ಮಾತುಕತೆ ನಡೆಸಿ, ಈ ಮದುವೆಯಲ್ಲಿ ಸಧಾನಿಗೆ ಇಷ್ಟವಿಲ್ಲವಾದ್ದರಿಂದ ಬಲಾತ್ಕಾರ ವಿವಾಹವಾ ಕೂಡದೆಂದೂ, ಅಲ್ಲದೆ 50 ವರ್ಷಗಳಿಗೆ ಪೂರ್ವದಲ್ಲಿ 14 ವರ್ಷಗಳಿಗೆ ಕಡಮೆಯಿರುವ ಪಾಲಿಕೆಯನ್ನು ವಿವಾಹವಾಗುವುದು ಕಾನೂನುಬದ್ಧಕಾರ ಶಿಕ್ಷಾರ್ಹವಾದ ಅಪರಾಧವೆಂದೂ ತಿಳಿಸಿದನು. ಇದರಿಂದ ಸಮಿಸಿಕಕೆಟ್ಟವರು ಹೆಣ್ಣನ್ನು ಕೊಡಲು ಇಷ್ಟವಿಲ್ಲದಾಗಿ ಈ ವಿವಾಹವಿಲ್ಲವಾಯಿತು.

ಕಳೆದ 14ನೆಯ ತಾರೀಖಿನ ದಿವಸ ಚಿತ್ರದುರ್ಗದಲ್ಲಿ ನಡೆದ ಸೌತ್ ಇಂಡಿಯಾ ಸಂಸ್ಥಾನವೈಶ್ಯ ಸೌತ್ ಇಂಡಿಯಾ ಆರ್ಯವೈಶ್ಯ ಅಧ್ಯಕ್ಷತೆಯನ್ನು ವಹಿಸಲು ಮಜುಮಾಡಿಸಿದ್ದ ಶ್ರೀಮದ್ಯೆ ದಲಿಜಂಗಮರಿಗೆ ಎಲ್ಲಿನ ಜಿಲ್ಲಾ ಬೋರ್ಡ್ ಮತ್ತು ಪೌರ ಸಭೆಯವರೂ ಅಭಿಮಾನಿಗಳೂ ಇನ್ನೂತ ಪೂರ್ಣ ಸ್ವಾಗತ ವನ್ನು ಬಯಿಸಿ ಊರಿಲ್ಲೆಲ್ಲಾ ಮೆರವಣಿಗೆಯನ್ನು ಮಾಡಿ ಜಿಲ್ಲಾಬೋರ್ಡ್ ಕಚೇರಿಯ ಬಳಿ ಜಾತಿದ್ದ ಸಭಾಮಂಟಪಕ್ಕೆ ಕರತಂದರು. ಮೆರವಣಿಗೆಯು ಎರಡು ಕಡೆಯೂ ಜನರು ಛತ್ರಿಯಿಂ ನೀರು ಸ್ವಾಗತವನ್ನು ಬಯಸಿದರು. ಸಭೆಯಲ್ಲಿ ಅಸಾಸೀನರಾದ ಶ್ರೀಮದ್ಯವರಾಜರಿಗೆ ಪೌರಾಭಿನಂದನ ಪತ್ರವನ್ನೆಲ್ಲಿಸಿ ತಾವು ಮಾಡಿರುವ ಪ್ರಜಾಹಿತ ಕಾರ್ಯಗಳನ್ನು ನಿವೇದಿಸಿದರು. ಅನಂತರ ಜಿಲ್ಲಾಬೋರ್ಡಿನವರು ಮಿನ್ನಪತ್ರಕೆಯನ್ನೊಪ್ಪಿಸಿ ತಾವು ಮಾಡಿರುವ ಪ್ರಜಾಹಿತ ಕಾರ್ಯಗಳನ್ನು ನಿವೇದಿಸಿದರು. ಅನಂತರ ಶ್ರೀಮದ್ವೀರರಾಜರು ಸಮುಯೋಚಿತ ಮಾತಣಾದಿಂದ ತಮ್ಮ ಸಾತೋಷವನ್ನೂ ಸಹಾಮಭೂತಿಯನ್ನೂ ವ್ಯಕ್ತಪಡಿಸಿದರು. ಅನಂತರ ರಾತ್ರಿಗೀ ರಿತೆಯ ವರಸಾದಮೇಳೆ ನಡೆದು ಮಿಶ್ರಾಯುಷಿಯಿತು ಸಾಯಂಕಾಲ 4-30 ಗಂಟೆಗೆ ಸೌತ್ ಇಂಡಿಯಾ ರೈಲಿಯ ಸೇರಿ ಧ್ವಜವಂದನಾದಿಗಳು ನಡೆದವು. ಉಪ್ಪಷ್ಟಪೇವನ್ನೆಲಂಕರಿಸಿದ್ದ ಶ್ರೀಮದ್ಯವರಾಜರವರಿಗೆ ರಾಜಿ ಸಜಸ್ಕರ ಪರವಾಗಿ ಒಂದು ಬಿನ್ನಪತ್ರಕೆಯು ಅರ್ಪಿಸಲ್ಪಟ್ಟಿತು. ಅನಂತರ ಶ್ರೀಮದ್ಯವರಾಜರು ಸೌತ್ ಇಂಡಿಯಾ ಜಳಗಳಯಧ್ಯೇಯ ರೈಲಿಯ ಉಪಯೋಗ ಮೊದಲಾದ ವಿಷಯಗಳನ್ನು ಕುರಿತು ಭಾಷಣವನ್ನು ಮಾಡಿದರು. ಬಂತ ಬಹುಮಾನವಿತರಿಣೆಗಳ ಫೈಟ್ಟಿಗಳು ಉಟವಾಟಿಗಳು ಮತ್ತು ಶಿಬಿರಾಗ್ನಿಯೂ ನಡೆದು, ಸಮಾರಂಭವು ಕೊನೆಗೆಂಡಿತು. ಶ್ರೀಮದ್ಯವೆರಾಜರವರು ಚಿತ್ರದುರ್ಗಕ್ಕೆ ದಯಮಾಡಿ ಸಿದ್ದು ಅಲ್ಲಿನ ಪ್ರಜೆಗಳೆಲ್ಲಾ ಮಹೆದಾನಂದವನ್ನುಂಟು ಮಾಡಿತು.

ಮೋಟಾರು ವಾಹನಗಳಮೇಲೆ ಮುನಿಸಿಪಲ್ ಆಕ್ಟ್ರಾಯಿತೆರಿಗೆಯ ವಿಷಯದಲ್ಲಿ ಹೈಕೋರ್ಟು ತೀರ್ಪು

ಮೈಸೂರು ನಗರದ ಶ್ರೀ ಜಿ. ಆರ್. ರಾಮಯ್ಯನವರು ಆಕ್ಟ್ರಾಯ್ ಸುಂಕಕೊಡದೆ ಒಂದು ಮೋಟಾರ್ ಲಾರಿಯನ್ನು ಇಟ್ಟುಕೊಂಡಿದ್ದರೆಂದು ಪೌರಸಭೆಯವರು

ಅವರನೇಲೆ ಪೊಕದ್ದಮೆ ಹೂಡಿ ಶಿಕ್ಷೆಗೆ ಗುರಿಮಾಡಿದ್ದರು ಈ ವಿಷಯವನ್ನು ಪುನರ್ವಿಮರ್ಶೆಮಾಡಬೇಕೆಂದು ಶ್ರೀ ರಾಮಯ್ಯನವರು ಹೈಕೋರ್ಟಿಗೆ ಅಪೀಲು ಮಾಡಿದ್ದರು. ವಿಷಯವು ಚಿಕ್ಕದಾದರೂ ಇದರಿಂದ ಬಹು ಮುಖ್ಯ ಅಂಶಗಳು ಹೊರಬೀಳುವರೆ ಎಂದು ನ್ಯಾಯ ಮೂರ್ತಿ ಶ್ರೀ ಕೆ. ಶಂಕರನಾರಾಯಣರಾಯರು ಅಪೀಲನ್ನು ಸ್ವೀಕರಿಸಿದ್ದರು. ಆದು 18 ನೆಯ ತಾರೀಖಿನ ಮನ ಹೈಕೋರ್ಟಿನಲ್ಲಿ ವಿಚಾರಕ್ಕೆಗೆ ತೆಗೆದುಕೊಳ್ಳಲ್ಪಟ್ಟಿತು ಎರಡುಪಕ್ಷಗಳ ವಕೀಲರ ವಾದವಿವಾದಗಳಾದನೇಲೆ, ನ್ಯಾಯಾಧೀಶರು ತೀರ್ಪನ್ನು ಈ ರೀತಿ ಕೊಟ್ಟರು ಪ್ರೌಸಭೆಯವರು ಹೇಳುವಂತೆ ನಡೆಯುವುದಾದರೆ ಬಸ್ಸಿನ ಪಾಲೀಕನು ತನ್ನಬಸ್ಸಿನ ಉತ್ಪತ್ತಿಯ ಪ್ರತಿ ರೂಪಾಯಿಗೂ 3 ಕಾಸು ಆಕ್ಟ್ರಾಯ್ ಸುಂಕ ಕೊಡಬೇಕಾಗುತ್ತದೆ ನ್ಯಾಸೂರುದೇಶದಲ್ಲಿ ನೂರಾರು ಪೌರಸಭೆಗಳಿವೆ ಒಬ್ಬ ವಾ ಪಾರಿಯು ಮೋಟಾರಿನಲ್ಲೇ ದೇಶದಲ್ಲೆಲ್ಲಾ ಸಂಚರಿಸಬೇಕಾಗುವದು. ಆಗ ಪ್ರತಿ ಪೌರಸಭೆಯೂ ಈ ರೀತಿ ಸುಂಕ ವಸೂಲುಮಾಡಿದರೆ ಕೊನೆಯಲ್ಲಿ ವರ್ತಕನು ಮೋಟಾರ್ ಬೆಲೆಯ 1½ ಯಷ್ಟು ಸುಂಕವನ್ನು ಕೊಟ್ಟಂತಾಗುತ್ತದೆ ಮೈಸೂರು ಮೋಟಾರ್ ವೇಹಿಕಲ್ಸ್ ಆಕ್ಟು ಟ್ಯಾಕ್ಸಸ್ ರೆಗ್ಯುಲೇಷ್ ಪ್ರಕಾರ ಒನ್ಮೆ ತೆರಿಗೆ ಕಟ್ಟಿದ್ದರೂನಾಗ ಪುನಃ ಆಕ್ಟ್ರಾಯ್ ತೆರಿಗೆ ಕೊಡಲೂ ಕಾರಣವಿಲ್ಲವೆಂದೂ, "ಆಕ್ಟ್ರಾಯ್ ತೆರಿಗೆಯಿಂದ ಮೋಟಾರುವಾಹನಗಳು ವಿನಾಯಿಸಲ್ಪಟ್ಟಿವೆ" ಮುಂತಾಗಿ ಕಾನೂನು ಇರುವುದರಿಂದ ಮೋಟಾರುವಾಹನದ ಮೇಲೆ ಎರಡು ಸಾರೆ ತೆರಿಗೆಹಾಕುವದು ನ್ಯಾಯವಲ್ಲವೆಂದೂ, ಇದು ಮೈಸೂರಿನ ಹೆಸರಿಗೆ ತಕ್ಕುದಲ್ಲವೆಂದೂ ವಿವರಿಸಿ ಕೆಳಗಿನ ಕೋರ್ಟಿನ ತೀರ್ಪನ್ನು ರದ್ದುಪಡಿಸಿದರು

ವರ್ತಮಾನಸಂಗ್ರಹ.

ನಿಜಾನುರ ಐಶ್ವರ್ಯ!

ಹೈದರಾಬಾದಿನ ನೈಜಾಂವರ ಖಜಾನೆಯಲ್ಲಿ 20 ಕೋಟಿ ರೂಪಾಯಿಬೆಲೆಯ ಬಂಗಾರವು ಗಟ್ಟಿಗಳಲೆ ಎಂದು ಪ್ರಕಟವಾಗಿದೆ ಪ್ರಪಂಚದ ಧಾರಿ ಕೋಟ್ಯಧೀಶ್ವರರಲ್ಲಿ ನೈಜಾಂರವೂ ಒಬ್ಬರಾಗಿರುವರು

ಪ್ರವಾಹದ ಹಾವಳಿ

ಸಂಯುಕ್ತಸ್ಥಾಂತ್ಯದಲ್ಲಿ ಅಸಾಧ್ಯ ಮಳೆಯಾಗಿ ಪ್ರವಾಹದ ಪೆಸೆಯಿಂದ 177500 ಜನರು ತಮ್ಮ ಮನೆಗಳನ್ನು ಕಳೆದುಕೊಂಡು ಅನಾದರಾಗಿರುವರು ಸುಮಾರು 100 ಮಂದಿ ಮನುಷ್ಯರೂ 1200 ಪಶುಕುಲಗಳೂ ಮೃತ ಪಟ್ಟಿರುವಂತಾಗಿ ಪ್ರಕಟವಾಗಿದೆ.

ಪ್ರವಾಹದ ಅನಾಹುತ'

ಕಳೆದ 18 ನೆಯ ತಾರೀಖಿನದಿವಸ ಭೋಪಾಲಿಗೆ 13 ಮೈಲು ದೂರದಲ್ಲಿರುವ ರೈಸಿನಿಂದ ಭೋಪಾಲಿಗೆ ಹೋಗುತ್ತಿದ್ದ ಒಂದು ಬಸ್ಸು ನೀರಿನಲ್ಲಿ ಮುಳುಗಿದ್ದ ನದಿಯ ಸೇತುವೆಯನ್ನು ದಾಟಲು ಪ್ರಯತ್ನಿಸಿ ಪ್ರವಾಹದ ರಭಸವು ಅಧಿಕವಾಗಿದ್ದುದರಿಂದ ಕೊಚ್ಚಿಹೋಯಿತು ಅದರಲ್ಲಿದ್ದ 11 ಜನರಲ್ಲಿ 5 ಜನರನ್ನು ಪ್ರವಾಹದಿಂದ ಉಳಿಸಲಾಯಿತು. ಉಳಿದ ಪ್ರಯಾಣಿಕರೂ ಮತ್ತು ಬಸ್ ಡ್ರೈವರನೂ ಕಾಣದಾದರು

ಟ್ರಂಕ್ ಪೆಟ್ಟಿಗೆಗಳಲ್ಲಿ ಶವ

ದೇಹಲಿಯಿಂದ ಇಟಾರಸಿ ಸ್ಟೇಷನ್ನಿಗೆ ಕಳೆದ 12 ನೆಯ ತಾರೀಖಿನದಿವಸ ಬಂದ ಗ್ರಾಂಡ್‌ಟ್ರಂಕ್ ಎಕ್ಸ್‌ಪ್ರೆಸ್ ರೈಲ್‌ಗಾಡಿಯಲ್ಲಿ ಎರಡು ಟ್ರಂಕುಗಳು ಬಿದ್ದಿದ್ದವು. ಅಧಿಕಾರಿಗಳು ಅವುಗಳನ್ನು ತೆಗೆಸಿನೋಡುವಲ್ಲಿ ಒಳಗೆ ಯುವತಿಯೊಬ್ಬಳ ಮೃತದೇಹವು ಎರಡುಚೂರುಮಾಡಿ ತುಂಬಲ್ಪಟ್ಟಿತ್ತು. ಮೃತಳು ಹಿಂದುವೆಂದು ಯೋಚಿಸಲಾಗಿದೆ. ಕತ್ತಿನಲ್ಲಿ ಬಹಳ ಗಾಯವಾಗಿದೆ. ಹಿಂದಿನರಾತ್ರಿ ಇವಳ ಕೊಲೆಯಾಗಿರಬೇಕೆಂದು ಊಹಿಸಲಾಗಿದೆ. ಪೋಲೀಸರು ತೀಕ್ಷ್ಣವಾಹಿಸುತ್ತಿದ್ದಾರೆ.

ವಿಮಾನ ಅನಾಹುತ

ಕಳೆದವಾರ ಎರಡು ವಿಮಾನ ಅನಾಹುತಗಳು ನಡೆದವು. ರಾಯಲ್‌ವಿರ್‌ಫೋರ್ಸಿನ ವಿಮಾನವೊಂದು ಫೆಲಿಕ್ಸ್‌ಸ್ತೋ ಎಂಬಲ್ಲಿ ಭೂಮಿಗೆ ಬಿದ್ದಪ್ಪಳಿಂದ 6ಮಂದಿ ಮೃತಪಟ್ಟರು ಒಂದು ಮೃತದೇಹವು ಮಾತ್ರ ದೊರಕಿದೆ ಫ್ರೇಗ್-ಪ್ಯಾರಿಸ್ ಸರ್ವಿಸ್‌ನ ಪ್ರಯಾಣಿಕರ ವಿಮಾನವೊಂದು ಬ್ಲಾಕ್‌ಫಾರೆಸ್ಟ್ ಎಂಬಲ್ಲಿ ಮುರಿದು ಬಿದ್ದು 11ಮಂದಿ ಪ್ರಾಣ ಕಳೆದುಕೊಂಡರು.

ಲೋಹದುತಿಗೆ!

ಇನ್ನು ಶೀಘ್ರದಲ್ಲೇ ಹೆಗುರುವಾವ ಅಲ್ಯೂಮಿನಿಯಂ ಲೋಹದಿಂದ ತಯಾರಾದ ಅಂಗಿ, ರವುಕೆ, ಮುಂತಾದ ವುಗಳನ್ನು ಸ್ತ್ರೀಯರು ದರಿಸುವುದನ್ನು ನಾವು ನೋಡಬಹುದು ಲಂಡನ್, ವ್ಯಾರಿಸ್‌ನಗರಗಳ ಉಡುಗೆಯ ನಿರ್ಮಾಪಕರು ಈ ಲೋಹವನ್ನು ಸಿಲ್ಕಿನಂತೆ ನೆಯ್ದು ಅದರಿಂದ ಉತ್ತಮವಾದ ಬಟ್ಟೆ ಬರೆಗಳನ್ನು ತಯಾರಿಸಬಹುದೆಂದು ಕಂಡುಹಿಡಿದಿದ್ದಾರೆ

ಭೂಗತನಿಧಿ ದೊರೆಯಿತು

ನಾಗಪುರದ ಒಂದು ಹಳ್ಳಿಯಲ್ಲಿ ಕಳೆದ ಜೂ 25ನೆಯ ತಾರೀಖಿನದಿನ ಒಬ್ಬ ವಿಧವೆಗೆ ಭೂಗತವಾಗಿದ್ದ ನಿಧಿ ದೊರೆಯಿತು ಅದರಲ್ಲಿ ಬೊಗಲರ ಕಾಲದ 41ಚಿನ್ನದ ನಾಣ್ಯಗಳೂ 2ಚಿನ್ನದ ಉಂಗುರಗಳೂ 211ಬೆಳ್ಳಿಯ ನಾಣ್ಯಗಳೂ ಇದ್ದವು ಇದರಲ್ಲಿ ಕೆಲವು ಬಾಗ ಮಾತ್ರ ಸರ್ಕಾರಕ್ಕೆ ಒಪ್ಪಿಸಲ್ಪಟ್ಟಿತು ಅದರ ಬೆಲೆ 1376ರೂಗಳು ಸಂಪೂರ್ಣ ನಿಧಿಯು ಬೆಲೆ ಸುಮಾರು 3ಸಾವಿರ ರೂಪಾಯಿಗಳಾಗಬಹುದೆಂದು ಹೇಳಲಾಗಿದೆ

ಚೀನಾ-ಜಪಾನ್ ಯುದ್ಧ!

ಹಾಂಕೋನ್‌ನಗರದಮೇಲೆ ಜಪಾನರು ವಿಮಾನಧಾಳಿ ನಡೆಸಿದರು ಇದರಿಂದ 80 ಮಂದಿ ಸತ್ತರು 200 ಮಂದಿಗೆ ಗಾಯಗಳಾದವು ಜನರೆಲ್ಲ ಸುರಕ್ಷಿತ ಸ್ಥಳಗಳಿಗೆ ಹೋಗಿ ಆಶ್ರಯಿಸಿಕೊಂಡದ್ದರಿಂದ ಹೆಚ್ಚು ಅನಾಹುತವಾಗಿಲ್ಲ ಯಾಂಗ್‌ಟಿಸ್ಸ್‌ನದಿಯ ಬಳಿ ಚೀನಾ ಸೈನಿಕರನ್ನು ಸೋಲಿಸಿ ಮುಂದಕ್ಕೆ ಹಾಂಕೋನ್‌ನಗರಪಮೇಲೆ ನುಗ್ಗಬೇಕೆಂದು ಮಾಡಿದ್ದ ಜಪಾನ್ಯಸೈನಿಕರ ಪ್ರಯತ್ನವು ಇಮವರಿಗೂ ವಿಫಲವಾಗಿದೆ ಜುಲೈ 6 ನೆಯ ತಾರೀಖಿನಿಂದ ಈ 3ದಿನಗಳು 6 ರ ವರೆಗೆ ಉತ್ತರಚೀನಾದಲ್ಲಿ 13800 ಜನ ಜಪಾನರು ಹತರಾದರೆಂದೂ 4600 ಮಂದಿ ಗಾಯಗೊಂಡರೆಂದೂ ಚೀನಾದವರು ಪ್ರಕಟಿಸಿದ್ದಾರೆ ಇದೇ ಸಮಯದಲ್ಲಿ ಮಂಚುಕೋವಿನ 6 ಸಾವಿರ ಸೈನಿಕರನ್ನು ಸೆರೆಹಿಡಿದಿರುವುದಾಗಿ ಹೇಳಲಾಗಿದೆ

ಪತಿಯನ್ನು ಗುರುತಿಸಲಾರದ್ದಕ್ಕಾಗಿ ಪತ್ನಿಯ ವಿವಾಹ ವಿಚ್ಛೇದ ಪ್ರಯತ್ನ

ಫ್ರಾನ್ಸ್‌ದೇಶದ ನ್ಯಾನ್ಸಿ ಎಂಬಲ್ಲಿ ಅವಳ ಸಹೋದರರಲ್ಲಿ ಒಬ್ಬನನ್ನು ಮದುವೆಯಾದ ಒಬ್ಬ ಸ್ತ್ರೀಯು ಈ ಸಹೋದರರಲ್ಲಿ ತನ್ನ ಗಂಡನಾರೆಂಬುದನ್ನು ತತ್‌ಕ್ಷಣ ಗುರುತಿಸಲಾರದೆ ಅನೇಕಸಲೆ ಗಂಡನನ್ನು ಮೈದುನನೆಂದೂ ಮೈದುನನನ್ನು ಗಂಡನೆಂದೂ ಸಂಬೋಧಿಸಿ ಮಾತನಾಡಬೇಕಾಗಿರುತ್ತಿದ್ದುದರಿಂದ ಬಹಳ ಸಂಕೋಚಕ್ಕೆ ಕಾರಣವಾಗುತ್ತಿತ್ತು ಈ ಸಹೋದರರಾದರೋ ಬಾಲ್ಯದಿಂದಲೂ ವಿಶ್ವಾಸದಿಂದ ಒಟ್ಟಿಗೆ ಇದ್ದವರು ಈಗ ಬೇರೆ ಇರಲು ಒಪ್ಪಲಿಲ್ಲ. ಇದರಿಂದ ಗಂಡನಗುರುತು ಹಚ್ಚುವ ಕಷ್ಟಕ್ಕೆ ಸಿಕ್ಕಿಬಿದ್ದ ಪತ್ನಿಯು ಬೇಸರಗೊಂಡು ವಿವಾಹ ವಿಚ್ಛೇದನಕ್ಕೆ ದಾವೆ ಹಾಕಿದ್ದಾಳೆ ಜಡ್ಜರಿಗೆ ಈ ನ್ಯಾಯತೀರ್ಮಾನವು ಬಹಳ ಸಂದೇಹಕ್ಕಿಟ್ಟಿದೆ.

ಅದೃಶ್ಯ ವಿಮಾನಗಳು

ಯುದ್ಧ ಕಾಲದಲ್ಲಿ ಉಪಯೋಗಿಸಲು ಶತ್ರುಗಳ ದೃಷ್ಟಿಗೆ ಸುಲಭವಾಗಿ ಬೀಳದೆ ಅದೃಶ್ಯವಾಗಿದ್ದುಕೊಂಡು ಬಾಂಬುಗಳನ್ನು ಸುರಿಸಬಲ್ಲ ವಿಮಾನಗಳನ್ನು ತಯಾರಿಸಲು ಬ್ರಿಟಿಷ್ ವಿಜ್ಞಾನಿಗಳು ಪ್ರಯತ್ನಪಡುತ್ತಿದ್ದಾರೆ. ಇದಕ್ಕಾಗಿ ಇವರು ಉಪಯೋಗಿಸಬೇಕೆಂದಿರುವ ಪದಾರ್ಥವು ಸಿದ್ಧವಾದರೆ ಇದು ಇತರ ಲೋಹಗಳಿಕ್ಕೇ ಗಟ್ಟಿಯಾಗಿರುವದಲ್ಲದೆ ಗಾಜಿನಿಂದ ನಿರ್ಮಿತವಾದ ವಸ್ತುವಿನಂತಿದ್ದು ಬಿಳಿಬೋಡಗಳ ನುಡ್ಯೆ ಹಾರುತ್ತಿದ್ದರೆ ಆದು ಇರುವದೇ ಯಾರಿಗೂ ಗೋಚರವಾಗುವದಿಲ್ಲ. ಮತ್ತು ಜಲಧಾಗದ ನೇಲೆ ಹಾರುತ್ತಿರುವಾಗ ಅವರ ನೆರಳು ನೀರಿನಲ್ಲಿ ಪ್ರತಿಬಿಂಬಿಸದು ಅಂತು ಇದು ಒಂದು ವಿಧವಾದ ಗಾಜಿನಿಂದ ನಿರ್ಮಿತವಾಗಿದ್ದು ಬೆನ್ನುಹತ್ತಿ ಬರುವ ಶತ್ರು ವಿಮಾನಗಳಿಗೂ ಬೇಗ ಕಾಣದಂತಾಗಿ ತಪ್ಪಿಸಿಕೊಳ್ಳಬಲ್ಲವಂತೆ!

ಪತಿಪರಾಯಣೆಯ ಕಾಶೀಯಾತ್ರೆ

ಪೂನಾದಲ್ಲಿ ಪತಿಪರಾಯಣೆಯಾದ ಸಾಧ್ವಿಯೊಬ್ಬಳು ನಾಲ್ಕು ವರ್ಷಗಳ ಕೆಳಗೆ ತನ್ನ ಪತಿಯನ್ನು ಕಳೆದುಕೊಂಡು ಸಹಗಮನಮಾಡಲು ಪೋಲೀಸರು ಅಡ್ಡಿಪಡಿಸಿದ್ದರಿಂದ ಚಿಂತಾಕ್ರಾಂತಳಾಗಿ ಒಂದೇಸಮನೆ 9 ತಿಂಗಳ ಕಾಲ ಪ್ರತಿ ರಾತ್ರಿಯನ್ನೂ ತನ್ನ ಗಂಡನ ಸಮಾಧಿಯಲ್ಲೇ ಮಲಗಿಕೊಂಡು ಕಳೆಯುತ್ತಿರಲು ಆಕೆಯ ಪತಿಯು ಅವಳ ಕನಸಿನಲ್ಲಿ ಬಂದು "ನೀನು ನಡೆಯಬೆ ಊರುಳಿ ಕೊಂಡೇ ಕಾಶಿಗೆ ಹೋದರ ಅಲ್ಲಿ ನಸ್ಸನ್ನು ಸೇರುವೆ" ಎಂದು ಹೇಳಿದಂತಾಯರು ಕೂಡಲೆ ಆಕೆಯು ಪೂನಾದಿಂದ ಹೊರಟು ದಿನಕ್ಕೆ 8 ಮೈಲಿಗಳಂತೆ ಉರುಳುತ್ತ 3 ವರ್ಷಗಳ ನಂತರ ಈಗ ರೋಂಸಿಗೆ ತಲಸಿದುತ್ತಾಳೆ. ಆಕೆಯು ಕಾಶಿಗೆ ತಲಪಬೇಕಾದರ ಇನ್ನೂ 1 ತಿಂಗಳು ಬೇಕಾಗುವುದಂತೆ! ಈಕೆಯ ಪತಿಭಕ್ತಿಯು ಅಸಾಧಾರಣವಾದುದು

ಮುಸ್ಸೋಲಿನಿಯ ವೀರಭಾಷಣ.

ತಿರೋಲಿಯಲ್ಲಿ ತನ್ನ ಮಹಾಸೈನ್ಯವನ್ನುದ್ದೇಶಿಸಿ ಮುಸ್ಸೋಲಿನಿಯು ಭಾಷಣಮಾಡಿದನು ಅದರಲ್ಲಿ ಆತನು "ಯುರೋಪಿನ ಎಲ್ಲ ರಾಷ್ಟ್ರಗಳಿಲ್ಲೂ ಪ್ರಚಂಡ ಯುದ್ಧಸನ್ನಾಹದ ಬೇರೀಧ್ವನಿಗಳೇ ಕೇಳಿಬರುತ್ತಿವೆ. ಈ ಪ್ರಸಂಗದಲ್ಲಿ ಇಟಲಿಯಲ್ಲಿ ನಾವುಗಳು ಕೈಕಟ್ಟಿಕುಳಿತುಕೊಳ್ಳುವದು ರುಚಿಕರವಲ್ಲ ಇನ್ನು ಮುಂದೆ ಜಯಂಕರ ಸಂಭವಗಳನ್ನು ಎದುರಿಸಬೇಕಾಗಬಹುದಾದ್ದರಿಂದ ಅದಕ್ಕೆ ತಕ್ಕ ಸಿದ್ಧತೆಗಳನ್ನು ಈಗಿನಿಂದಲೇ ಮಾಡಿಕೊಳ್ಳಬೇಕಾಗಿದೆ ಯುರೋಪಿನ ಈಗಿನ ಪರಿಸ್ಥಿತಿಯಲ್ಲಿ ಇಟಲಿಯಾಗಲಿ ಇನ್ನಾವದೇಶವಾಗಲಿ ಯುದ್ಧಸಿದ್ಧತೆಗಳನ್ನು ಮಾಡಿಕೊಳ್ಳುವುದು ಅಪರಾಧವೆಲ್ಲ ಮುಂಜಾಗ್ರತೆಯ ಪ್ರಯತ್ನಗಳನ್ನು ಕೈಕೊಳ್ಳದಿದ್ದರೆ ಮಾತ್ರ ಆತ್ಮಘಾತಮಾಡಿಕೊಂಡಂತಾಗುವುದು" ಎಂದು ಆನೇಕದಿಂದ ನುಡಿದನು

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಂಘ, ಬೆಂಗಳೂರು

ದಿವಾ ಬಹದ್ದೂರ್ ಪಿ. ಮಹಾದೇವಯ್ಯನವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು

ವೈಸೂರು ವೀರಶೈವ ವಿದ್ಯಾಬಿವೃದ್ಧಿ ಫಂಡ್ ಸಂಘದ ಕಾರ್ಯನಿರ್ವಾಹಕಮಂಡಲಿಯ ಸಭೆಯು ನಿನ್ನೆ ದಿವಸ ಬೆಂಗಳೂರು ಸಿಟಿ ದಿವಾ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಛತ್ರವಲ್ಲಿ, ನೇರಿ, ಸಂಘವು ಸ್ಥಾಪಿತವಾದ ಆಗಾಗಯ್ತು ತಮ್ಮ ಅವಸಾನಕಾಲದವರಿವಿಗೂ 30 ವರ್ಷಗಳ ಪೇಲ್ಬಟ್ಟು ಅದರ ಅಧ್ಯಕ್ಷರಾಗಿದ್ದು, ಸಂಘವನ್ನು ಉನ್ನತಸ್ಥಿತಿಗೆ ತಂದು, ಸಮಾಜಕ್ಕೂ ಮತ್ತು ದೇಶಕ್ಕೂ ಉಪಕಾರಸೇವೆ ಮಾಡಿದ, ರಾಜ ಸಭಾಭೂಷಣ ದಿವಾ ಬಹದ್ದೂರ್ ಡಾಕ್ಟರ್ ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿ, ಕೆ.ಟಿ. ಸಿ. ಐ. ಇ. ಯವರ ನಿಧನಕ್ಕಾಗಿ ತನ್ನ ಸಂತಾಪವನ್ನು ಸೂಚಿಸಿ, ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸಲಾಯಿತು.

ಸಂಘದ ಅಧ್ಯಕ್ಷಸ್ಥಾನಕ್ಕೆ ಉಪಾಧ್ಯಕ್ಷರಾಗಿದ್ದ ರಾಜ ಧರ್ಮಪ್ರವೀಣದಿವಾ ಬಹದ್ದೂರ್ ಪಿ. ಮಹಾದೇವಯ್ಯ, ಬಿ.ಎ; ಬಿ.ಎಲ್. ಯವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

ಬೆಂಗಳೂರು ಸರಾಫ್ ಬಸಪ್ಪ,
ತಾ|| 15-8-1938 ಆಕ್ಟಿಂಗ್ ಸೆಕ್ರೆಟರಿ.

ವಾಲ್ಮೀಕಿ ಮಹರ್ಷಿ

ಲೇಖಕರು—ಕನ್ನಡಕವಿ, ಆಸ್ಥಾನವಿದ್ವಾ ಆನವಟ್ಟಿ ರಾಮರಾಯರು.

ಒಬ್ಬ ಮನುಷ್ಯನಲ್ಲಿ ಒಂದು ವಿಧವಾದ ಗುಣವಿದ್ದುದಾದರೆ, ಅವನು ಇತರರನ್ನು ತನ್ನಂತೆ ಮಾಡಿಕೊಳ್ಳುವನೆಂಬುದು ನಿಶ್ಚಯ. ಈಗ ಹೇಳದಂತೆಯೇ ಮತ್ತೊಬ್ಬನು ತನ್ನಂತೆಯೇ ನಡೆಯುವಂತೆ ಮಾಡಿಕೊಳ್ಳಬೇಕಾಗಿದ್ದರೆ ಮೊದಲು ಅವನನ್ನು ವಿಶ್ವಾಸದಿಂದ ಕಾಣುವುದೇ ಅದಕ್ಕೆ ಮೊದಲಿನ ಅಸ್ತಿಭಾರವೆಂದರಿಯಬೇಕು. ಇದೇರೀತಿಯಾಗಿ ದುರಾಶೆ ಮತ್ತು ಸೋಮಾರಿತನ ಇವುಗಳನ್ನು ಹೊಂದಿರುವ ಮಾನವನೂಕೂಡ ಇತರರನ್ನೂ ಅನಾಯಾಸವಾಗಿ ಒಬ್ಬರ ಗೋಚರಕ್ಕೊಬ್ಬರಂತೆ ನಿಧಾನವಾಗಿ ತನ್ನಂತೆಯೇ ಮಾಡಿಕೊಳ್ಳುವನು. ಇಂತವನ ಇರುವಿಕೆಯು ಅಂಟುರೋಗದಂತೆ ಪರಿಣಮಿಸಿ ಹರಡಿ ಕೊನೆಗೆ ಅವನಂತೆಯೇ ಇತರರೂ ವರ್ತಿಸಲು ಪ್ರೇರೇಪಿಸುವುದು. ಅವನ ಶಕ್ತಿ ವಿದ್ಯುಚ್ಛಕ್ತಿಯಂತೆ ಪರಿಣಮಿಸುತ್ತ ಇತರರಮೇಲೆಯೂ ಹರಡಿ, ಅವರೂ ತನ್ನ ಸ್ವಭಾವದವರಂತೆಯೇ ಆಗಲು ಪ್ರಯತ್ನಿಸುವರು. ಇದೇ ರೀತಿಯಾಗಿ ಮಹನೀಯರು ತಾವು ಸಂಪಾದಿಸಿದ ಸದ್ಗುಣಗಳಂತೆಯೇ ಇತರರೂ ಧೈರ್ಯವಂತರಾಗಿಯೂ, ಕೆಲಸಮಾಡುವುದರಲ್ಲಿ ಉಲ್ಲಾಸವುಳ್ಳವರಾಗಿಯೂ ಮತ್ತು ದೈವಭಕ್ತಿಯುಕ್ತರಾಗಿಯೂ ಇರುವಂತೆ ಮಾಡಬೇಕಾದರೆ ಬಿಡತಕ್ಕವರಲ್ಲ. ಅವರಲ್ಲಿರುವ ಶಕ್ತಿಯೇ ಅಂತಹ ಸಮೀಚೀನಶಕ್ತಿಯುಳ್ಳದಾಗಿರುವುದು. ಇಂತವರೇ ಮಹಾತ್ಮರು. ಇಂತಹ ಸಚ್ಚರಿತ್ರರು ಯಾವದೇಶಕಾಲಗಳಲ್ಲಿ ಜೀವಿಸಿಕೊಂಡಿದ್ದಾಗ್ಲೂ, ಅವರು ತಮ್ಮ ಗುಣಾಗಳಗಣ್ಸುರೂಪವಾಗಿರುವಂತೆಯೇ ಎಂತಹವರನ್ನಾದರೂ ಮಹನೀಯರನ್ನಾಗಿಯೂ, ದೇಶಾಭಿಮಾನಿಗಳನ್ನಾಗಿಯೂ ಇರುವಂತೆ ಮಾಡುವುದೇ ಅವರ ಶಕ್ತಿ ವಿಶೇಷದಲ್ಲೊಂದಾಗಿರುವುದು. ಇಂತಹ ಮಹನೀಯರ ಗುಣಕಥನವನ್ನು ಆಗಾಗ್ಗೆ ಮಾಡುತ್ತಿದ್ದರೆ ಸ್ವಶಕ್ತಿಯಿಂದ ಮೆರೆಯುತ್ತಾ, ಸ್ವಾತಂತ್ರ್ಯವುಳ್ಳವರಾಗಿ ನಿರಾತಂಕದಿಂದ ಜೀವಿಸಿಕೊಂಡಿರುವರು ನಾವು ಒಬ್ಬನ ಗುಣಾತಿಶಯವನ್ನು ತಿಳಿಯಬೇಕಾಗಿದ್ದರೆ, ಅವನ ಸ್ನೇಹಿತನಾದೆಂಬುದನ್ನು ತಿಳಿದರೆ ಅದು ಸಾಕಾಗಿರುವುದು. ಇದೇರೀತಿಯಾಗಿ ಸತ್ಯ, ಧರ್ಮ ಮತ್ತು ಧೈರ್ಯ ಮುಂತಾದ ಸದ್ಗುಣಗಳುಳ್ಳ ಮಹನೀಯರನ್ನು ಸ್ನೇಹಿಸುತ್ತಿದ್ದರೆ ಅವರಂತೆಯೇ ನಾವೂ ಆಗುವುದರಲ್ಲಿ ಸಂದೇಹವೇ ಇಲ್ಲ

ವಾಚಕಮಹಾಶಯರೆ! ಮಹನೀಯರೆಂಬ ರತ್ನಗಳು ಪುರಾತನವಾದ ಈ ಲೋಕವೆಂಬ ಒಂದು ಗುಡಿಸಲಿನಲ್ಲಿ ಹತ್ತಾರು ಮಾತ್ರವೇ ಇರುವುವು. ಇಂತಹ ರತ್ನಗಳನ್ನು ಕಾಲವುರುಪನು ಮೃತ್ಯುವೆಂಬ ಭರಣಿಯಲ್ಲಿ ಒಟ್ಟಿಡುವುದಕ್ಕೆ ಮುಂಜೆಯೇ, ಅವರ ಸಹವಾಸವನ್ನು ಮಾಡಿ, ಅವರಂತೆಯೇ ನಾವು ಸಕಲ ವಿಷಯಗಳಲ್ಲಿಯೂ ವರ್ತಿಸುತ್ತಾ ಬರಬೇಕು. ನಾವು ಎಂತಹ ನೀಚಗುಣಗಳನ್ನು ಹೊಂದಿದಾಗ್ಲೂ, ಮಹನೀಯರ ಸಹವಾಸದಿಂದ ಅವುಗಳೆಲ್ಲಾ ನಿರ್ನಾಮವಾಗಿ, ಅವರಂತೆಯೇ ನಮ್ಮನ್ನು ಅವರು ಮಾಡುವುದರಲ್ಲಿ ಯಾವ ಸಂಶಯವೂ ಇಲ್ಲವೆಂಬುದಕ್ಕೆ ವಾಲ್ಮೀಕಿರ ಪೂರ್ವಚರಿತ್ರೆಯೇ ಒಂದು ದೊಡ್ಡ ದೃಷ್ಟಾಂತವಾಗಿರುವುದು.

ಪೂರ್ವದಲ್ಲಿ ರತ್ನಾಕರನೆಂಬ ಪ್ರಸಿದ್ಧನಾದ ಒಬ್ಬ ಕಳ್ಳನಿದ್ದನು. ಇವನು ಕಳ್ಳತನದಿಂದಲೇ ಜೀವಿಸಿಕೊಂಡಿದ್ದನು. ಇವನು ಒಂದಾನೊಂದು ಘೋರವಾದ ಕಾಡಿನಲ್ಲದ್ದುಕೊಂಡು ಆ ಮಾರ್ಗವಾಗಿ ಸಂಚರಿಸುವ ಮಾರ್ಗಸ್ಥರನ್ನು ಸಂಹರಿಸಿ, ಅವರಲ್ಲಿರುವ ವಸ್ತುಗಳನ್ನೆಲ್ಲಾ ಪಹರಿಸಿಕೊಂಡು ಹೋಗುತ್ತಿದ್ದನು.

ಹೀಗಿರುತ್ತಿರಲು ಬ್ರಹ್ಮನೂ, ನಾರದಮಹರ್ಷಿಯೂ ಸನ್ಯಾಸಿವೇಷವನ್ನು ಧರಿಸಿಕೊಂಡು ಆ ರತ್ನಾಕರನಿದ್ದ ಕಾಡಿಗೆ ಬಂದು, ಅವನ ವೃತ್ತಿಯನ್ನು ತಿಳಿದಿದ್ದಾದರೆ, ಆ ಕಳ್ಳನನ್ನು ಉದ್ದೇಶಿಸಲೆಂದೇ ಸನ್ಯಾಸಿವೇಷದಿಂದ ಅವನ ಹತ್ತಿರ ಹತ್ತಿರಕ್ಕೆ ಬರುತ್ತಿದ್ದರು ಇದನ್ನು ದೂರದಿಂದ ನೋಡುತ್ತಿದ್ದ ಆ ಕಳ್ಳರತ್ನಾಕರನು, ಈ ದಿವಸ ನನ್ನ ಯೋಚನೆಯು ನೆರವೇರಿತೆಂದು ಯೋಚಿಸಿ, ಕೈಯಲ್ಲಿ ಹಿಡಿದಿದ್ದ ಮುದ್ಗರವನ್ನು ತಿರುಗಿಸುತ್ತಾ ಇರುವಾಗ್ಗೆ ಆ ಸನ್ಯಾಸಿಗಳು ಇದಿರಿಗೆ ಬಂದು ನಿಂತುದನ್ನು ನೋಡಿ—ಸನ್ಯಾಸಿಗಳೆ. ನಿಮ್ಮಲ್ಲಿರುವುದನ್ನು ನನ್ನ ಮುಂದೆ ತಂದಿಡಿ. ಇಲ್ಲದಿದ್ದರೆ ನಿಮ್ಮದೇಹದ ಆಲೆಯನ್ನು ಖಂಡಿತವಾಗಿಯೂ ಬಿಡಿ! ಎಂದು ಹೇಳಿದನು. ಇದನ್ನು ಕೇಳಿದ ಬ್ರಹ್ಮನು—ಅಯ್ಯಾ! ನೀನಾರು?

ಕಳ್ಳ—ನಾನು ಒಬ್ಬ ಕಳ್ಳ. ನಿಮ್ಮ ಹತ್ತಿರವಿರುವುದನ್ನೆಲ್ಲಾ ಅಪಹರಿಸಿ, ಕೊಲ್ಲುವೆನು, ತಿಳಿಯಿತೋ? ಎನಲು

ಬ್ರಹ್ಮ—ನಾವು ಸನ್ಯಾಸಿಗಳು. ನಿಮ್ಮಲ್ಲೇನಿರುವುದು? ನೀನು ಊಹಿಸುವಂತೆ ನಮ್ಮಲ್ಲಿ ಏನೂ ಸಿಕ್ಕುವಹಾಗಿಲ್ಲ. ಇದು ಹಾಗಿರಲಿ. ನೀನು ಮನುಷ್ಯನಾಗಿ ಹುಟ್ಟಿ, ದೊಡ್ಡವನಾಗಿ ಬೆಳೆದು ನಿರಪರಾಧಿಗಳನ್ನು ಹಿಂಸೆಪಡಿಸುವುದು ನಿನಗೆ ಯಾವನ್ಯಾಯ?

ಕಳ್ಳ—ನಾನೇನು ಮೂಢನೆಂದು ತಿಳಿದಿರುವಿರಾ? ಈ ಹೆಸ್ತಿಂದಿಂದಲೇ ನಿಮ್ಮಂತವರನ್ನು ಸಾವಿರಗಟ್ಟಲೆ ಕೊಂದು, ಯಮಪುರಿಗೆ ಕಳುಹಿಸಿರುವೆನು. ನಿಮ್ಮ ನಯಮಾತಿಗೆ ನಾನು ಬೆರಗಾಗುವನಲ್ಲ!

ಬ್ರಹ್ಮ—ನಾವು ಸಾನಿಗೆ ಅಂಜುವವರಲ್ಲ. ಕೊಲ್ಲಲೇಬೇಕೆಂದಿದ್ದರೆ ಕೊಲ್ಲು. ಸಿದ್ಧರಾಗಿರುವೆವು. ಕೆಲವು ಪ್ರಶ್ನೆಗಳನ್ನು ಕೇಳುವೆವು, ಅವಕ್ಕೆ ಉತ್ತರಕೊಟ್ಟು ಅನಂತರ ನಮ್ಮನ್ನು ಕೊಂದುಬಿಡು,

ಕಳ್ಳ—ನಿಮ್ಮನ್ನು ಈಗ ನೋಡಿದಕೂಡಲೆ, ಏಕೆ ಶಾಂತಮನಸ್ಸುಟ್ಟುವುದೋ ಗೊತ್ತಿಲ್ಲ. ಒಳ್ಳೇದು ಏನು ಹೇಳುವಿರೋ ಹೇಳಿ,

ಬ್ರಹ್ಮ—ನೀನು ಒಳ್ಳೆಯವನೇ ಸರಿ. ಇಂತಹ ಪಾಪಕರ್ಮದಲ್ಲಿ ನಿನ್ನ ಮನಸ್ಸು ಹೇಗೆ ಪ್ರವೃತ್ತವಾಯಿತು?

ಕಳ್ಳ—ನೀವು ಎಲ್ಲರಂತಿರದೆ ನಿಮಗೆ ಸನ್ಯಾಸಿವೇಷವೇಕೆ? ನಿಮ್ಮಹಾಗೆಯೇ ನಾನೂ ಈ ವೃತ್ತಿಯನ್ನು ಅನುಸರಿಸದಿದ್ದರೆ ನಮ್ಮ ಮಾತಾಪಿತೃಗಳನ್ನೂ, ಹೆಂಡತಿಯನ್ನೂ ಪಾಪಿಷ್ಠರೆಂದೆ?

ಬ್ರಹ್ಮ—ನೀನು ಈ ರೀತಿಯಿಂದ ಸಂಪಾದಿಸುವ ದ್ರವ್ಯದಿಂದ ವ್ಯಾಪ್ತವಾದ ಪಾಪದಲ್ಲಿ ನೀನು ಭಾಗಿಯಾಗಿರುವುದಲ್ಲದೆ, ನಿಮ್ಮ ಜನಗಳನ್ನೂ ಭಾಗಿಗಳನ್ನಾಗಿ ಮಾಡುವೆಯಾ?

ಕಳ್ಳ—ಅವರೂ ಭಾಗಿಗಳಾಗಲೇ ಬೇಕು.

ಬ್ರಹ್ಮ—ಎಂದಿಗೂ ಇಲ್ಲ. ನೀನು ಮಾಡಿದ ಪಾಪವನ್ನು ನೀನು ಮಾತ್ರ ಅನುಭವಿಸಬೇಕಲ್ಲದೆ, ಅವರು ಎಂದಿಗೂ ಭಾಗಿಗಳಾಗುವಹಾಗಿಲ್ಲ. ತಿಳಿಯಿತೆ? ಈ ವಿಷಯವನ್ನು ಕುರಿತು ನಿಮ್ಮ ಜನರೊಡನೆ ಮಾತನಾಡಿ, ಬರುವಿಯೋ? ನಿನ್ನ ಪಾಪಕ್ಕೆ ಅವರೂ ಭಾಗಿಗಳಾಗುವಸಂದರ್ಭಕ್ಕೆ, ಜಾಗ್ರತೆಯಾಗಿ ತಿಳಿದುಬಾ, ನಿನ್ನೆ ಪ್ರಾರ್ಥಿಗಳನ್ನು ನೆರವೇರಿಸಿಕೊ ಎಂದು ಜೋಳ ನಿಂತುಕೊಂಡರು.

ಕಳ್ಳ—ನೀವು ದೊಡ್ಡ ಮೋಸಗಾರರು! ನಿಮ್ಮನ್ನು ಬಿಟ್ಟು ಹೋಗಲು ನಾನು ಮೂಢನೊ! ಹುಚ್ಚನೊ!

ಬ್ರಹ್ಮ—ಸತ್ಯಮಾಡಿ ಹೇಳುವೆವು, ನಾವು ಮೋಸಮಾಡಿ ಹೋಗುವುದಿಲ್ಲ. ನಿಮ್ಮ ಮಾತಾಪಿತೃಗಳನ್ನು ವಿಚಾರಿಸಿಕೊಂಡುಬಾ. ನಾವು ಮುಂದಕ್ಕೆ ಹೋಗಲು ದಾರಿಯನ್ನೇ ಕಾಣೆವು, ಎಂದು ಹೇಳುತ್ತಲೆ ರತ್ನಕಾರನು ಹಾಗೆಯೇ ಯೋಚಿಸಿ, ಸನ್ಯಾಸಿಗಳೆ! ನಾನು ಹೋಗಿ ಕೇಳಿಕೊಂಡು ಒರುವೆನು ಎಂದು ಹೇಳಿ ಮನೆಯ ಕಡೆಗೆ ಹೋದನು. ಅವನು ಮುಂದೆ ಮುಂದೆ ಹೋಗುತ್ತಾ, ಹಿಂದಿರುಗಿ ನೋಡಿಕೊಳ್ಳುತ್ತಾ ಹೋಗಿ ಮನೆಗೆ ಸೇರಿ ಮೊದಲು ತಂದೆಯನ್ನು ಕುರಿತು—ಅಪ್ಪ! ನಾನು ಮನುಷ್ಯರನ್ನುಕೊಂದುತಂದ ಹಣದಿಂದ ನಿಮ್ಮೆಲ್ಲರನ್ನೂ ಕಾಪಾಡಿಕೊಂಡು ಬರುತ್ತಿರುವೆನಷ್ಟೆ. ನಾನು ಮಾಡಿದ ಪಾಪದಲ್ಲಿ ನೀನೂ ಭಾಗಿಯಾಗಿರುವೆಯಷ್ಟೆ? ತಂದೆಯು—ಪುತ್ರನೆ! ನೀನುಮಾಡಿದ ಪಾಪ, ಪುಣ್ಯಗಳು ನಿನ್ನನ್ನು ಸೇರುವುದೇ ಹೊರತು, ನನಗೆ ಸಂಬಂಧವಿಲ್ಲ ನೀನು ಹುಡುಗನಾಗಿದ್ದಾಗ್ಗೆ, ನಾನು ಸಂಪಾದಿಸಿ ನಿನ್ನನ್ನು ಕಾಪಾಡಿದೆ. ಈಗ ನೀನು ನಮ್ಮನ್ನು ಕಾಪಾಡುವ ಭಾರ ನಿನ್ನಮೇಲಿದೆ. ಯಾವರೀತಿಯಿಂದ ಸಂಪಾದಿಸಿದೆಯೊ ಅದರ ಫಲವು ನಿನ್ನದೇ ಹೊರತು, ನನ್ನದಲ್ಲ. ನರಹತ್ಯಮಾಡ, ಎಂದು ಯಾರು ನಿನಗೆ ಹೇಳಿದವರು? ನಾನು ನಿನ್ನ ಪಾಪಕ್ಕೆ ಭಾಗಿಯಲ್ಲ. ಎನಲು ಈ ಮಾತುಗಳನ್ನು ಕೇಳಿದ ರತ್ನಕಾರನ ಮನಸ್ಸು ಬೇರೆಯಾಯಿತು. ಮುಖವು ಮ್ಲಾನವಾಯಿತು. ಯಾವ ಮಾತುಗಳನ್ನೂ ಆಡದೆ ಆ ಸ್ಥಳವನ್ನು ಬಿಟ್ಟು ತಾಯಿಯ ಸಮೀಪಕ್ಕೆ ಹೋಗಿ—ಅಮ್ಮ! ಎಂದು ಹೇಳಿಕೊಂಡು ಕಂಗಳಲ್ಲಿ ಧಾರಾಪೂರ್ವಕವಾಗಿ ಕಂಬನಿಗಳನ್ನು ಸುರಿಸುತ್ತಾ—ಅಮ್ಮ! ಇದುವರೆಗೂ ನಾನಾವಿಧ ಕೆಟ್ಟಕೃತ್ಯಗಳನ್ನು ಮಾಡಿ, ನಾನು ಸಂಪಾದಿಸಿಕೊಂಡುಬಂದ ಹಣದಿಂದ ನಿಮ್ಮನ್ನು ಕಾಪಾಡಿಕೊಂಡು ಬಂದಿರುವೆನಷ್ಟೆ ನಿನ್ನ ಪಾಪಗಳಲ್ಲಿ ಒಂದು ಭಾಗವನ್ನಾದರೂ ನೀನು ಸ್ವೀಕರಿಸುವೆಯೊ ಇಲ್ಲವೊ? ಎನಲು,

ತಾಯಿ—ಮಗನೆ! ನಿನ್ನನ್ನು ಗರ್ಭದಲ್ಲಿ ಹೊತ್ತು, ಎಮ್ಮೋಕಷ್ಟಗಳನ್ನನುಭವಿಸಿ, ಸಾಕಿ ದೊಡ್ಡವನನ್ನಾಗಿಮಾಡಿದೆ ನನ್ನ ಕರ್ತವ್ಯವನ್ನು ನೀನು ನಿನ್ನ ಜನ್ಮದಲ್ಲಿ ಒಂದುಭಾಗವನ್ನೂ ತೀರಿಸಲಾರೆ ಹೀಗಿರಲು ನೀನೇನು ನನಗೆ ಉಪಕಾರ ಮಾಡಬಲ್ಲೆ? ನೀನು ಮಗನಾಗಿ ಜನ್ಮಿಸಿದ್ದಕ್ಕಪ್ರದರಿಂದ ನಮ್ಮನ್ನು ಕಾಪಾಡುವ ಕರ್ತವ್ಯವೆ ಮಾತ್ರ ನಿನಗೆ ಸೇರಿರುವುದು. ಸಂಪಾದನೆಯನ್ನು ಹೇಗೆಮಾಡುವೆಯೋ ನನಗೆ ತಿಳಿಯದು. ನಿನ್ನ ಪಾಪಕಾರ್ಯಕ್ಕೆ ನೀನೇ ಭಾಗಿಯಲ್ಲದೆ ನನ್ನೆದಲ್ಲ, ಜೋಗು, ಎಂದು ಹೇಳದಳು. ರತ್ನಕಾರನು ಮಾತೆಯಾಡಿದ ವಾಕ್ಯಗಳನ್ನು ಕೇಳಿ ನಿರಾಶನಾಗಿ, ಕೊನೆಗೆ ಹೆಂಡತಿಯ ಹತ್ತಿರಕ್ಕೆ ಬಂದು—ಎಲೆ! ನೀನು ನನ್ನ ಆರ್ಧಾಂಗಿಯಾಗಿರುವೆಯಲ್ಲವೆ? ನಿನ್ನನ್ನು ಕಾಪಾಡಲು ಅನೇಕ ಪಾಪಕಾರ್ಯಗಳನ್ನು ಮಾಡಿ ದ್ರವ್ಯವನ್ನು ತಂದು ನಿನ್ನನ್ನು ಕಾಪಾಡಿಕೊಂಡು ಒರುತ್ತಿರುವೆನು ನೀನು ಆರ್ಧಾಂಗಿಯಾದ್ದರಿಂದ ನನ್ನ ಪುಣ್ಯಕ್ಕೂ ಪಾಪಕಾರ್ಯಕ್ಕೂ ನೀನೂ ಭಾಗಿನಿಯಾಗಿರುವೆಯಲ್ಲವೆ? ನಿನ್ನ ಅಂತರಂಗದ ಅಭಿಪ್ರಾಯವನ್ನು ಹೇಳು, ಎನಲು ಹೆಂಡತಿ—ಪ್ರಾಣನಾಥನೆ! ನಾನು ನಿನ್ನ ಕರವನ್ನು ಹಿಡಿದು ನಿನ್ನ ಪೋಷಣೆಗೆ ಒಳಪಟ್ಟಿರುವೆನು. ನಿನಗೆ ಭರ್ತೃ ಎಂದು ಹೆಸರು. ನನ್ನ ಪಾಲನೆಯು ನಿನ್ನ ಪಾಲಿಗೆ ಬಿದ್ದಿರುವುದು. ನೀನು ಪಾಪಕಾರ್ಯಮಾಡಿಂದು ನಾನು ಹೇಳಿರುವೆನೆ? ಇಲ್ಲ. ಹೀಗಿರಲು ನಿನ್ನ ಪಾಪಕ್ಕೆ ನಾನು ಭಾಗಿನಿಯಾಗಲಾರೆನು, ಎಂದು ಹೇಳಿದಳು. ಈ ಮಾತುಗಳನ್ನೆಲ್ಲಾ ಕೇಳಿದ ರತ್ನಕಾರನು ಮನಸ್ಸಿನಲ್ಲಿ ಎಂತ ಕೆಲಸಮಾಡಿದೆ? ನನ್ನ ಪಾಪಕಾರ್ಯದ ಫಲಕ್ಕೆ ನಾನೊಬ್ಬನೇ ಭಾಗಿಯಾದೆನೆ! ಎಂತಹ ವೃತ್ತಿಯನ್ನನುಸರಿಸಿದೆ! ನಾನು ಹೋಗಿ ಅವರಿಗೆ ಹೇಗೆ ಮುಖವನ್ನು ತೋರಿಸಲಿ. ಅವರು ಹೇಳಿದಂತೆಯೇ ಆಯಿತಲ್ಲ. ಎಂತಹ ಕೆಲಸಮಾಡಿದೆ, ಇಂತಹ ಯೋಚನೆಗೆ ನನಗುಂಟುಮಾಡಿದವರು ಮಹಾತ್ಮರಾಗಿರಬೇಕು. ಅವರನ್ನೇ ಶರಣುಹೊಂದಿ, ನನ್ನ ಮುಂದಣ ಮಾರ್ಗವಾವುದೆಂದು ಕೇಳಿ, ಅವರ ಆಜ್ಞೆಯಂತೆಯೇ ನಡೆವೆನು, ಎಂದು ಯೋಚಿಸಿಕೊಂಡು ಮುಂದಕ್ಕೆ ಹೊರಟನು.

ಇತ್ತ ರತ್ನಕಾರನ ಕಣ್ಣಿಗೆ ಈ ಪ್ರಪಂಚವು ಕತ್ತಲೆಯು ಕವಿದಂತೆ ಕಾಣುವಂತಾಯಿತು. ಮನಸ್ಸಿನಲ್ಲಿ ಅನುತಾಪವು ಹುಟ್ಟುವಂತಾಯಿತು. ಪಾಪಭೀತಿಯಿಂದ ನೇತ್ರಗಳನ್ನು ಮುಚ್ಚಿಕೊಂಡಿರಲಾಗಿ, ಮನಸ್ಸೆಂಬ ಕಣ್ಣಿಗೆ ಘೋರವಾದ ಮತ್ತೊಂದು ಪ್ರಪಂಚವು ಗೋಚರಿಸುವಂತಾಯಿತು. ನೂರಾರು ಕುಂಡಗಳು ಇರುವಂತೆಯೂ, ಭೀತರೂಪಿಸಿಂದ ದೂರದು ತನಗೆ ಕಾದುಕೊಂಡಿರುವಂತೆಯೂ ಕಾಣುಬರುವಂತಾಯಿತು. ಇವುಗಳೆಲ್ಲವನ್ನೂ ನೋಡಿ, ಮನೋಭೀತಿಯುಂಟಾಗಿ ಗಟ್ಟಿಯಾಗಿ ಅಳುವಂತೆಯೂ ಆಯಿತು. ನೇತ್ರಗಳಲ್ಲಿ ಕಂಬನಿಗಳು ಧಾರಾಪೂರ್ವಕವಾಗಿ ಜರಿಯುವಂತಾಯಿತು. ಮುಂದೇನುಮಾಡಬೇಕೋ ಅದೇ ತಿಳಿಯದಂತಾಗಿ,

ಭ್ರಾಂತಚಿತ್ತನಾಗಿ ನಿಂತನು. ನಾನಂತು, ದುರ್ಮಾರ್ಗದಿಂದ ಭೀಕರ ಕೃತ್ಯಗಳನ್ನೆಸಗಿ—ಅನೇಕ ಮಕ್ಕಳನ್ನು ಹಾಳುಮಾಡಿದ ಈ ಕರಗಳಿಂದ ಪಾಪಮಾಡಿರುವೆನಲ್ಲ, ನಷ್ಟಿಂದ ಎಷ್ಟು ರಮಣೆಯರು ನಾಶವಾದರೋ! ಇನ್ನು ನಾನು ಜೀವಿಸಬಾರದು. ಮಾಡಿರುವ ಪಾಪಕ್ಕೆ ಆ ಮಹಾತ್ಮರನ್ನೇ ಬೇಡಿಕೊಂಡು, ಬುದ್ಧಿವಾರ್ಗವನ್ನು ಕೇಳಿ ನಡೆಯುವೆನು. ಈ ವಿಧವಾದ ಮನಸ್ಸಿಗೆ ಆ ಮಹಾತ್ಮರೇ ಕಾರಣರಾಗಿರುವುದರಿಂದ, ಅವರೇ ನನಗೆ ದೇವರು, ಎಂದು ಹೇಳಿಕೊಳ್ಳುತ್ತಾ, ಪ್ರತಂಚವೇ ಬೇಡವಾಗಿ, ಆ ಮಹಾತ್ಮರ ಸನ್ನಿಧಿಗೆ ಬಂದು, ಅವರ ಪಾದಗಳಿಗೆ ನಮಸ್ಕರಿಸಿ, ಮೂತನಾಡದೆ ಕಂಬನಿಗಳನ್ನು ಸುರಿಸುತ್ತಾ ನಿಂತನು.

ಬ್ರಹ್ಮನು—ಎಲೈ ಕಳ್ಳನೆ! ಏಕೆ ಅಳುತ್ತಿರುವೆ?

ರತ್ನಕಾರ—ನಾನು ಮಾಡಿದ ಪಾಪಕ್ಕೆ ಎಷ್ಟು ವೈಧಿಸಿಟ್ಟರೂ ಸಾಲದು. ನಾನು ಮಹಾ ಪಾಪಿ, ನಾನು ಜೀವಿಸಿರಬಾರದು.

ಬ್ರಹ್ಮ—ಅದು ಹಾಗಿರಲಿ. ನಿನ್ನ ಪಾಪಕ್ಕೆ ಯಾರಾದರೂ ಭಾಗಿಗಳಾದರೆ?

ರತ್ನಕಾರ—ಹಾವು ನನ್ನೆನ್ನು ಕಚ್ಚಿದರೆ ಮತ್ತೊಬ್ಬರು ದುಃಖಪಡುವರೆ? ನಾನಲ್ಲದೆ ಮತ್ತಾರು? ಇನ್ನು ನಾನು ಜೀವಿಸಬಾರದು. ತಮ್ಮ ದರುಶನದಿಂದ ನನ್ನೆನ್ನು ನಾನು ತಿಳಿದುಕೊಂಡಾಯಿತು. ನೀವೇ ನನಗೆ ಪ್ರತಿದೇವರಾಗಿರುವಿರಿ, ಎಂದು ಹೇಳಿಕೊಳ್ಳುತ್ತಾ ನಿಂತುಕೊಂಡನು ನಾನು ಪತಿತನು. ಮಹಾ ಪಾಪ ಸಾಗರದಲ್ಲಿ ಮುಳುಗಿರುವ ಪತಿತನನ್ನು ಉದ್ಧಾರಮಾಡಬೇಕಾಗಿ ಬೇಡುವೆನು,

ಬ್ರಹ್ಮ—ಅಯ್ಯಾ! ಭಯಪಡಬೇಡ, ಅಳಬೇಡ, ಅರಿಯದೆ ಮಾಡಿದ ಪಾಪಕಾರ್ಯಗಳಿಗೆ ಪ್ರಾಯಶ್ಚಿತ್ತವುಂಟು. ನಾವು ಪುನಃ ಇಲ್ಲಿಗೆ ಬರುವವರೆಗೂ ನಿನ್ನ ಪಾಪಕಾರ್ಯಗಳನ್ನು ಸ್ಮರಿಸುತ್ತ ಪರಮೇಶ್ವರನನ್ನು ಆರಾಧಿಸುತ್ತಿರು, ಎಂದು ಹೇಳಿ ಮಾಯವಾದರು.

ಇತ್ತ ರತ್ನಕಾರನು ಅಂತಹ ಘೋರವಾದ ವನದಲ್ಲಿ ಕಠೋರವಾದ ತಪಸ್ಸಿನಲ್ಲಿ ಮಗ್ನನಾದನು. ಎಷ್ಟೋ ಗ್ರೀಷ್ಮಋತುಗಳು ಕಳೆದವು. ಹಿಮಂತ ಋತುಗಳು ಕಳೆದುವು. ಬ್ರಹ್ಮನು ಮತ್ತೆ ಬರಲಿಲ್ಲ. ರತ್ನಕಾರನ ಶರೀರವು ಕೃಶವಾಯಿತು. ಇವನ ಶರೀರದನೇಲೆ ಮಳೆಯೂ ಹಿಮವೂ ಬಿದ್ದರೂ ಚಲಿಸಲಿಲ್ಲ ಬ್ರಹ್ಮನು ಬರಲಿಲ್ಲ. ಇವನು ಮಾಡಿದ ಪಾಪಗಳಿಗೆ ಪ್ರಾಯಶ್ಚಿತ್ತ ವಾದಂತಾಯಿತು. ರತ್ನಕಾರನಿಗೆ ಬಾಹ್ಯಜ್ಞಾನವು ಲುಪ್ತವಾಯಿತು. ಶರೀರದ ನೇಲೆ ಹುತ್ತಬೆಳೆದು ಅವನ ದೇಹವೆಲ್ಲಾ ಮುಚ್ಚಿಹೋಗುತ್ತಾ ಬಂದಿತು ಆ ಹುತ್ತದೊಳಗೆ ನಿಂತು ರತ್ನಕಾರನು ಪರಮೇಶ್ವರನ ಅನುಗ್ರಹವನ್ನು ಬೇಡುತ್ತಲಿದ್ದನು.

ಇತ್ತ ಬ್ರಾಹ್ಮಣನು ರತ್ನಕಾರನಿಗೆ ತಕ್ಕ ಪ್ರಾಯಶ್ಚಿತವಾಯಿತೆಂದು ತಿಳಿದುಕೊಂಡು, ಆ ವನಕ್ಕೆಹೋಗಿ ಮತ್ತೆ ಬಂದು ಅವನನ್ನು ಉದ್ಧರಿಸಿದನು. ರತ್ನಕಾರನು ತನ್ನ ನೇತ್ರಗಳನ್ನು ಬಿಟ್ಟುನೋಡಲು, ಇದಿರಿಗೆ ಬ್ರಹ್ಮನುಬಂದು ನಿಂತಿರುವುದನ್ನು ನೋಡಿ, ಅತನ ಪಾದಗಳಮೇಲೆ ಬಿದ್ದು, ಬಹಳವಾಗಿ ರೋಧಿಸುತ್ತಾ—ಸ್ವಾಮಿಯೇ! ನನಗಾವುದಾದರೊಂದು ಮಾರ್ಗವನ್ನು ತೋರಿ ಪುನೀತನಾಗಲು ಮಾರ್ಗವುಂಟೆ? ಎಂದು ಬೇಡಿಕೊಂಡನು. ಅನಂತರ ಬ್ರಹ್ಮನು—ಅಯ್ಯಾ! ಅಂಜಬೇಡ. ನೀನು ಇದುವರೆಗೂ ಮಾಡಿದ ಪಾಪಗಳೆಲ್ಲಾ ನಷ್ಟವಾದುವು, ಎಂದು ಹೇಳಿದನು. ಈ ಮಾತುಗಳನ್ನು ಕೇಳಿದ ರತ್ನಕಾರನನ್ನು ಬ್ರಹ್ಮನು ವಲ್ಮೀಕದಿಂದ ಹೊರಗೆ ಬರಮಾಡಿಕೊಂಡು, ಇವನಿಗೆ ವಾಲ್ಮೀಕಿಯೆಂದು ಹೆಸರುಕೊಟ್ಟನು. ಮುಖ್ಯವಾಗಿ ಸಾಧುಗಳ ಸಂಗದಿಂದ ಕಳ್ಳನು ಕೊನೆಗೆ ಮುನಿಸದವಿಯನ್ನು ಹೊಂದಿ ಪ್ರಸಿದ್ಧಿಗೆ ಬಂದನು. ಇದು ಸಜ್ಜನರ ಸಹವಾಸದಿಂದಲ್ಲದೆ ಮತ್ತಾರಿಂದಲೂ ಸಾಧ್ಯವಾಗಲಿಲ್ಲ.

ಇತ್ತ ಒಂದುದಿನ ವಾಲ್ಮೀಕಿಯು ತಮಸಾನದಿಯ ತೀರದಲ್ಲಿದ್ದಾಗ್ಗೆ, ದಾಂಪತ್ಯವನ್ನು ಹೊಂದಿದ್ದ ಎರಡು ಕ್ರೌಂಚಪಕ್ಷಿಗಳನ್ನು ನೋಡಿದ ಒಬ್ಬ ಬೇಡನು ಸಮೀಪಕ್ಕೆಹೋಗಿ,ತನ್ನ ಬಾಣಪ್ರಯೋಗದಿಂದ ಗಂಡುಹಕ್ಕಿಯನ್ನು ಹೊಡೆದುಕೊಂದನು ಇದನ್ನು ಅಕಸ್ಮಾತ್ತಾಗಿ ನೋಡಿದ ವಾಲ್ಮೀಕಿಯು ಬಹಳ ದುಃಖವನ್ನು ಹೊಂದಿದನು. ಯಾವಮನುಷ್ಯನು ತನ್ನ ಕೈಯ್ಯಾರ ನೂರಾರು ಪ್ರಾಣಿಗಳನ್ನು ಕೊಲ್ಲುವುದಕ್ಕೆ ಹಿಂಜರಿಯಲಿಲ್ಲವೊ ಅಂತಹವನೇ ಒಂದುಹಕ್ಕಿಯನ್ನು ಕೊಂದುದನ್ನು ನೋಡಿದಮಾತ್ರದಿಂದಲೇ, ದುಃಖವನ್ನು ತಾಳಲಾರದೆ—"ಎಲೈ ಬೇಡನೆ! ನಿನ್ನ ಅಹಂಕಾರವು ಅಡಗಲಿ ನೀನು ಶಾಶ್ವತವಾಗಿರಬೇಡ" ಎಂದು ಹೇಳಿದನು. ಇವನು ಉಚ್ಚರಿಸಿದ ಶಬ್ದಪ್ರಯೋಗದಿಂದ ಆ ಬೇಡನು ಅಲ್ಲಿಯೇ ಮೃತನಾದನು. ಇದನ್ನುನೋಡಿ, ಏನು ನನ್ನ' ಬಾಯಿಯಿಂದ ಹೊರಟ ಮಾತುಗಳಿಂದಲೇ ಇವನು ಸತ್ತುಹೋದನಲ್ಲ, ಏನುಮಾಡಲಿ ಎಂದುಹೇಳಿ ಯೋಚಿಸಿಕೊಂಡಿರುವಾಗ್ಗೆ, ಅಕಸ್ಮಾತ್ತಾಗಿ ನಾರದನು ಅಲ್ಲಿಗೆಬಂದು—ಎಲೈ ವಾಲ್ಮೀಕಿಯೆ! ನೀನು ಹಾಗೆ ಯೋಚಿಸಬೇಡ, ನಿನ್ನ ಶಬ್ದಪ್ರಯೋಗಗಳು ರಾಮ ಚಂದ್ರನ ವಿಷಯಗಳಿಂದ ತುಂಬಿದೆ ಇದನ್ನೆ ಮೊದಲುಮಾಡಿಕೊಂಡು ರಾಮಾಯಣವನ್ನು ಬರೆ ಎಂಬುದಾಗಿ ಹೇಳಿ, ಸಂಕ್ಷೇಪವಾಗಿ ರಾಮಾಯಣವನ್ನು ಅವನಿಗೆ ಬೋಧಿಸಿದನೆಂಬೆ, ವಾಲ್ಮೀಕಿಯು ರಾಮಾಯಣವನ್ನು ಬರೆದು ಲೋಕ ವಿಖ್ಯಾತನಾದನು, ಮೇಲ್ಕಂಡ ವಿಷಯಗಳೆಲ್ಲವೂ ವೃತ್ತಿವಾಸವೆಂಬ ರಾಮಾಯಣ ದಲ್ಲಿ ಉಕ್ತವಾಗಿರುವುದೆಂದು ವಾಚಕರು ತಿಳಿಯಬೇಕು.

ಮುಖ್ಯವಾಗಿ ಸತ್ಸಹವಾಸದಿಂದ ಎಂತಹಕನ್ಯವನ್ನಾದರೂ ಸದ್ಗುಣಾಶ್ರಿತ ನಾಗಿ ಲೋಕದಲ್ಲಿ ವಿಖ್ಯಾತಿಯನ್ನು ಪಡೆಯುವನೆಂದು ವಾಚಕರು ಗಮನಿಸಬೇಕು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಜ್ಞೇನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ ಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಧಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ಪ್ರಯತ್ನವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಸಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರತಮ್ಮ ಭವ್ಯವಾದ ಜಾವಚಿತ್ರವನ್ನು ಸಹ ದಯವಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗ ಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದ ದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿ ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ಆ ರೂಪಾಯಿ. ಒಂದುರೂಪಾಯಿಗೆ ಪಾರ್ಸಲ್ಖರ್ಚಿನಂತೆ ಕಮಿಷನ್ ರಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ಈ ಆಕ್ಷೇಪ್ಯಕ್ಕೆ ಈ

ಮ್ಯಾನೇಜರ್.—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗಿರುವ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ಕೊಡಿ	ಮುಖ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ತಿ ಸೇ ಸಂಬರ್	೧	೮—೦—೦
ರಸಸಿಂಧೂರ	೧	೨—೦—೦
ವಲ್ಲಿಸಿಂಧೂರ	೧	೪—೦—೦
ಕಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೩—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦

ನೋಟು—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಳಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,

ಅಯುರ್ವೇದರಸಾಯನಶಾಲಾ,

ಪೋಸ್ಟ್, ಹಿರಿಮಗಳೂರು ತಾ|| ಕಡೂರು ಜಿಲ್ಲಾ ಚಿಕ್ಕಮಗಳೂರು ಮೈಸೂರು.

ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರ ಸ್ಮಾರಕಸಭೆ,

ಬೆಂಗಳೂರು.

ಕಳೆದ ತಾ॥ ೧೯ನೇ ಶುಕ್ರವಾರ ಬೆಂಗಳೂರು ನಗರದಲ್ಲಿ ಸರ್ ಪುಟ್ಟಣ್ಣಶೆಟ್ಟರವರ ಪೌರಭವನದಲ್ಲಿ ನಮ್ಮ ಸಂಸ್ಥಾನದ ದಿವಾನ್ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ ಕೀರ್ತಿಶೇಷರಾದ ಡಾ॥ ಸರ್ ಕೆ. ಪಿ ಪುಟ್ಟಣ್ಣಶೆಟ್ಟಿಯವರ ದೇಶವಾತ್ಸಲ್ಯವನ್ನೂ ಔದಾರ್ಯವನ್ನೂ ಪ್ರಶಂಶಿಸಿದರು. ಅಧಿಕಾರಿಗಳೂ ವರ್ತಕರೂ ಪ್ರಜೆಗಳೂ ಮಂಡಿರುಗಳೂ ಸಾವಿರಾರುಜನರು ಸೇರಿದ್ದರು.

ಶ್ರೀಮನ್ಮಹಾರಾಜರವರು ಸರ್ ಪುಟ್ಟಣ್ಣಶೆಟ್ಟಿಯವರ ನಿಧನಕ್ಕಾಗಿ ತಮ್ಮ ಅನುತಾಪವನ್ನು ಸೂಚಿಸಿ ಸಭೆಗೆ ಈ ಸಂದೇಶವನ್ನು ಕಳುಹಿಸಿದ್ದರು—'ರಾಜ ಸಭಾಭೂಷಣ ದಿವಾನ್ ಬಹದ್ದೂರ್ ಡಾ॥ ಸರ್ ಕೆ. ಪಿ ಪುಟ್ಟಣ್ಣಶೆಟ್ಟಿಯವರ ವಿಯೋಗಕ್ಕಾಗಿ ನಿನ್ನೊಡನೆ ನಾವೂ ವ್ಯಸನಪಡುವವರಾಗಿದ್ದೇವೆ ಅವರ ದೀರ್ಘಕಾಲದ ಜೀವನವು ರಾಜಭಕ್ತಿ, ಕರ್ತವ್ಯತತ್ಪರತೆ, ಶ್ರಮಪಟ್ಟು ಕೆಲಸ ಮಾಡುವುದು ಮತ್ತು ವಿಶಾಲಹೃದಯದ ಔದಾರ್ಯ ಇವುಗಳಿಗೆ ನಿದರ್ಶನವಾಗಿದ್ದಿತು. ನಾವು ಅವರ ಬಂಧುಬಳಗದವರಿಗೆ ನಮ್ಮ ಅಂತಃಕರಣ ಪೂರ್ವಕವಾದ ವ್ಯಸನವನ್ನು ಸೂಚಿಸುತ್ತೇವೆ ಮತ್ತೆ ಈ ಮಹಾಸಭೆಯವರು ಮೈಸೂರಿನ ಪ್ರಜೆಗಳು ಅವರನ್ನು ಸರ್ವದಾ ಸ್ಮರಿಸಿಕೊಳ್ಳುವಂತೆ ಉಚಿತವಾದ ಸ್ಮಾರಕವೊಂದನ್ನು ರಚಿಸುವರೆಂದು ನಂಬಿದ್ದೇವೆ'

ಶ್ರೀಮನ್ಮಹಾರಾಜರವರ ಮೇಲ್ಕಂಡ ಸಂದೇಶವನ್ನು ಮಹಾಸಭೆಯಮುಂದೆ ಓದಿಹೇಳಿದನಂತರ ಅಧ್ಯಕ್ಷರು ಸರ್ ಪುಟ್ಟಣ್ಣಶೆಟ್ಟಿಯವರ ಮರಣಕ್ಕಾಗಿ ಸಂಸ್ಥಾನದ ಪ್ರಜೆಗಳ ಸಂತಾಪವನ್ನೂ ಲೇಡಿ ಪುಟ್ಟಣ್ಣಶೆಟ್ಟಿಯವರಿಗೂ ಅವರ ಮನೆತನದವರಿಗೂ ಇಂಥ ದುಃಖಕರವಾದ ವಿಯೋಗ ಪ್ರಾಪ್ತವಾದುದಕ್ಕಾಗಿ ತಮ್ಮ ಸಹತಾಪವನ್ನೂ ಸೂಚಿಸಿದ ನಿರ್ಣಯವನ್ನು ಸಭೆಯ ಮುಂದಿಟ್ಟರು. ಆ ಸಂದರ್ಭದಲ್ಲಿ ದಿವಾನ್‌ರವರು ಈ ರೀತಿ ಭಾಷಣ ಮಾಡಿದರು:

ದಿವಾನ್‌ರವರ ಭಾಷಣ

"ಮಹಿಳೆಯರೇ ಮತ್ತು ಮಹಾಶಯರೇ,—ನೈಸೂರು ಸಂಸ್ಥಾನದ ವಿಶೇಷಮಾನ್ಯರಾದ ಸತ್ಪುರುಷರಲ್ಲೊಬ್ಬರಾಗಿದ್ದ ಸರ್ ಕೆ ಪಿ ಪುಟ್ಟಣ್ಣಶೆಟ್ಟಿಯವರು ಕಾಲಾಧೀನರಾದುದಕ್ಕಾಗಿ ನಮಗುಂಟಾಗಿರುವ ಅಪಾರವಾದ ಸಂತಾಪವನ್ನು ಸೂಚಿಸಲು ನಾವುಗಳೆಲ್ಲರೂ ಸಭೆ ಸೇರಿದ್ದೇವೆ ಅವರೇ ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟಿರುವ ಈ ನಗರ ಭವನದಲ್ಲಿ ಇಂದಿನ ಸಭೆಯು ನಡೆಯುವುದು ಯುಕ್ತವಾಗಿದೆ. ಸರ್ ಕೆ ಪಿ ಪುಟ್ಟಣ್ಣಶೆಟ್ಟಿಯವರು ಸ್ವದೇಶಕ್ಕೂ ದೇಶಬಾಂಧವರಿಗೂ ಅಸಾಧಾರಣ ಸೇವೆಯನ್ನು ಸಲ್ಲಿಸಿದರು; ತುಂಬ ವೃದ್ಧರಾಗುವವರೆಗೂ ಬಾಳಿದರು; ಮಹತ್ತರವಾದ ಗೌರವಗಳನ್ನೂ ಬಿರುದುಗಳನ್ನೂ ಪಡೆದು ದಿವಂಗತರಾದರು. ವೀರಶೈವ ಪಂಗಡದ ವಿದ್ಯಾರ್ಥಿನಿಲಯವನ್ನು ತಾವು ಬದುಕಿರುವಾಗಲೇ ಏರ್ಪಡಿಸಿ ಕಣ್ಣಿನಿಂದ ನೋಡಿಬಿಡಬೇಕೆಂಬ ಪ್ರಬಲವಾದ ಆಕಾಂಕ್ಷೆಯು ಅವರಿಗಿದ್ದಿತು. ಅವರ ಮರಣದಿಂದ ನಮ್ಮೆಲ್ಲರಿಗೂ ಸಂತಾಪವುಂಟಾಗಿದ್ದರೂ ಆ ಆಕಾಂಕ್ಷೆ ನೆರವೇರುವವರೆಗಾದರೂ ಅವರು ಜೀವಿಸಿದ್ದರಲ್ಲಾ—ಎಂದು ಅಲ್ಪ ಸ್ವಲ್ಪ ತೃಪ್ತಿಯೂ ಉಂಟಾಗುವುದಾಗಿದೆ. ಆದಾಗ್ಯೂ ಈ ಅಂಶದಿಂದಲೇ ಆಗಲಿ ಅಥವಾ ಸರ್ ಪುಟ್ಟಣ್ಣಶೆಟ್ಟಿಯವರು ತೀರ ವೃದ್ಧಾಪ್ಯಕಾಲದವರೆಗೂ ಜೀವಿಸಿದ್ದರೆಂಬ ಅಂಶದಿಂದಲೇ ಆಗಲಿ ನಮ್ಮ ನಷ್ಟವೇನೂ ಕಡಮೆಯಾಗುವಂತಿಲ್ಲ; ಅಥವಾ ಸಂಸ್ಥಾನದ ಸಾರ್ವಜನಿಕ ಜೀವನದಲ್ಲಿಯೂ ಮತ್ತು ನಮ್ಮ ಹೃದಯಗಳಲ್ಲಿಯೂ ಅವರ ಮರಣದಿಂದ ತೀರವಾಗಿ ಹೋಗಿರುವ ಸ್ಥಾನವು ಭರ್ತಿಯಾಗುವ ಅವಕಾಶವೂ ಇಲ್ಲ.

"ಸರ್ ಪುಟ್ಟಣ್ಣಶೆಟ್ಟಿಯವರಿಂದ ಸಂಸ್ಥಾನಕ್ಕೆ ಆಗಿರುವ ಮಹತ್ತರವಾದ ಸೇವೆಯಷ್ಟೆಂಬುದನ್ನು ನಾನೆಲ್ಲರೂ ಚೆನ್ನಾಗಿ ಬಲ್ಲೆವು. ಬ್ರಿಟಿಷ್ ಕಮೀಷನ್ ಸೇವೆಯಲ್ಲಿದ್ದ ಶ್ರೀಮನ್ಮಹಾರಾಜರವರ ಸೇವೆಗೆ ಬಂದು, ಹಲವು ಆಡಳಿತಕ್ಕೂ ಹೊಸ ಆಡಳಿತಕ್ಕೂ ನಿಯಮಗಳಲ್ಲಿಯೂ ಧೈರ್ಯಗಳಲ್ಲಿಯೂ ವಿಕೇಭಾವ ವಿರುವಂತೆ ಮಾಡಿದ ಶಕ್ತರಾದ ಅಧಿಕಾರಿಗಳಲ್ಲಿ ಅವರೂ ಒಬ್ಬರು. ಆ ಅಧಿಕಾರಿಗಳೆಲ್ಲರೂ ಸೇರಿ, ಶ್ರದ್ಧೆಯಿಂದ ಹೊಸಹೊಸ ವಿಧಾನಗಳಲ್ಲಿ ಶ್ರಮಿಸಿ ಕೆಲಸಮಾಡಿ, ಹೊಸ ಆಡಳಿತಕ್ಕೆ ಭದ್ರವಾದ ತಳಹದಿಯನ್ನು ಹಾಕಿ ಅವರ ಮುಂದಿನವರು ವಿಕಲ್ಪಪ್ರಕಾರವಾಗಿ ಪ್ರಗತಿಮಾರ್ಗವನ್ನನುಸರಿಸಿ ಮೈಸೂರು ಸಂಸ್ಥಾನವು ಮಾದರಿ ಸಂಸ್ಥಾನವೆಂಬ ಹೆಸರನ್ನು ಪಡೆಯುವುದಕ್ಕೆ ಅನುಕೂಲವನ್ನು ಕಲ್ಪಿಸಿದರು ಹೀಗೆ ಉಪಕಾರಮಾಡಿದ ಕಾರ್ಯದಕ್ಷರಾದ ಹಿಂದಿನ ಅಧಿಕಾರಿಗಳಲ್ಲಿ ಸರ್ ಪುಟ್ಟಣ್ಣಶೆಟ್ಟಿಯವರೇ ಕೊನೆಯವರು. ದಕ್ಷರಾದ ಆ ಅಧಿಕಾರಿಗಳಲ್ಲಿ ಶ್ರೇಷ್ಠರಾದವರ ಗುಂಪಿಗೆ ಅವರೂ ಸೇರಿದ್ದರು

"ಸರ್ಕಾರಿ ಹುದ್ದೆಯಿಂದ ವಿಶ್ರಾಂತರಾದಮೇಲೆ ಮತ್ತೆ ಸಾರ್ವಜನಿಕಸೇವೆಗೆ ಮೊದಲುಮಾಡಿ ದೊಡ್ಡ ಕೆಲಸಗಳನ್ನು ಸಾಧಿಸುವ ಸುಯೋಗವು ದೊರೆಯುವುದು ದುರ್ಲಭ. ಈ ರೀತಿ ಸಾರ್ವಜನಿಕ ಸೇವೆಮಾಡಿ ನೊತನರೀತಿಯಲ್ಲಿ ಮತ್ತೆ ಖ್ಯಾತಿಯನ್ನು ಗಳಿಸುವ ಸುಯೋಗವು ಸರ್ ಪುಟ್ಟಣ್ಣಶೆಟ್ಟಿಯವರಿಗೆ ಲಭಿಸಿತು ಅವರು ಸರ್ಕಾರಿ ಹುದ್ದೆಯಿಂದ ವಿಶ್ರಾಂತರಾದಮೇಲೆ ಕಾಲುಶತಮಾನ ಕಾಲ, ಒಂದಾದಮೇಲೆ ಮತ್ತೊಂದರಂತೆಯೂ, ಹಲವು ಸಮಯಗಳಲ್ಲಿ ಒಟ್ಟೊಟ್ಟಿಗೂ, ಸಾರ್ವಜನಿಕ ಕಾರ್ಯಸ್ಥಾನಗಳನ್ನಲಂಕರಿಸಿ ತಮ್ಮ ದೇಶಬಾಂಧವರಿಗೂ ಮಿತ್ರರಿಗೂ ಆಶ್ಚರ್ಯವನ್ನೂ, ತೃಪ್ತಿ ಸಂತೋಷಗಳನ್ನೂ ಉಂಟುಮಾಡಿದರು. ಬೆಂಗಳೂರು ಪೌರಸಭೆಯ ಅಧ್ಯಕ್ಷತೆ, ಮೈಸೂರುಬ್ಯಾಂಕಿನ ಅಧ್ಯಕ್ಷತೆ, ಮತ್ತು ಪೌರ ಸಾಮಾಜಿಕ ಸಂಘದ ಅಧ್ಯಕ್ಷತೆ—ಇವುಮೂರೂ ಅವರು ಆ ರೀತಿ ಅಲಂಕರಿಸಿದ ಕೆಲವು ಸಂಸ್ಥಾನಗಳಲ್ಲಿ ಕೆಲವು ಮಾತ್ರ. ಮೈಸೂರು ಸಂಸ್ಥಾನದಲ್ಲಿ ನಡೆದ ಸಾರ್ವಜನಿಕ ಕಾರ್ಯಕಲಾಪಗಳಲ್ಲಿ ಬಹುಶಃ ಯಾವುವನ್ನೇ ನೋಡಿದರೂ, ಅವರು ಅವುಗಳಲ್ಲಿ ಭಾಗವನ್ನೇ ವಹಿಸಿರುತ್ತಿದ್ದರು; ಅಥವಾ ಹಾಗೆ ಭಾಗವಹಿಸಿದ ಹಲವು ಸಂದರ್ಭಗಳಲ್ಲಿ ವಿವೇಕಮಯವಾದ ಸಲಹೆಗಳನ್ನು ಕೊಟ್ಟು ಮಾರ್ಗದರ್ಶಿಗಳಲ್ಲಿ ಮುಖ್ಯರಾಗಿರುತ್ತಿದ್ದರು ಈಚಿನ ವರ್ಷಗಳಲ್ಲಿ ಪೌರ ಸಾಮಾಜಿಕ ಕಾರ್ಯಗಳಲ್ಲಿಯೂ ಸಂಸ್ಥಾನದಲ್ಲಿ ನಡೆದಿರುವ ವಿಚಾರಗಳಲ್ಲಿಯೂ ಸಂಸ್ಥಾನದಲ್ಲಿ ನಡೆದಿರುವ ಮಹತ್ತರವಾದ ಪುರೋಭಿವೃದ್ಧಿಗಳಿಗೆ ಅವರ ವಿವೇಕಮಯವಾದ ಸಲಹೆಗಳೂ ಮಾರ್ಗದರ್ಶನವೂ ಸಹ ಹೆಚ್ಚಿನ ಕಾರಣವೆಂದು ನಾವು ಧಾರಾಳವಾಗಿ ಹೇಳಬಹುದಾಗಿದೆ

"ಸರ್ಕಾರಿ ಹುದ್ದೆಯಲ್ಲಿದ್ದಾಗಿನ ಭವ್ಯವಾದ ಸೇವೆಯಿಂದಲೂ, ಅದರಿಂದ ವಿಶ್ರಾಂತರಾದ ಮೇಲಿನ ಅತಿಶಯವಾದ ಸಾರ್ವಜನಿಕ ಸೇವೆಯಿಂದಲೂ ಸರ್ ಪುಟ್ಟಣ್ಣಶೆಟ್ಟಿಯವರು ತಮ್ಮ ಜೀವಮಾನದ ಕಡೆಯ ವರ್ಷಗಳಲ್ಲಿ ಅಸಾಧಾರಣವಾದ ಖ್ಯಾತಿಗೌರವಗಳನ್ನು ಪಡೆದಿದ್ದರು. ಸರ್ಕಾರದವರಿಗೆ ಅವರು ಆಪ್ತಮಿತ್ರರಾದರು. ಮಹಾಜನರಿಗೆ ಅವರು ವಿಶ್ವಾಸಪಾತ್ರರಾದ ನಾಯಕರಾಗಿ, ವಿವೇಕಮಯವಾದ ಸಲಹೆಗಳನ್ನಿತ್ತು ಮಾರ್ಗದರ್ಶಕರಾದರು. ಸರ್ಕಾರದ ಕಾರ್ಯಗಳಲ್ಲಾಗಲಿ ಸಾರ್ವಜನಿಕ ಕಾರ್ಯಗಳಲ್ಲಾಗಲಿ ಅಥವಾ ಕೇವಲ ವ್ಯಕ್ತಿಸಂಬಂಧವಾದ ವಿಚಾರಗಳಲ್ಲಾಗಲಿ ಅವರ ಸಲಹೆಗಳನ್ನೋ ಅಥವಾ ಹಿತವಚನಗಳನ್ನೋ ಕೇಳಲು ಅವರ ಬಳಿಗೆ ಹೋದವರಾದರೂ ಅವರ ಮಾತುಗಳಿಂದ ಮನಸ್ಸಿನ ಭಾರವಿಳಿದು ಲಾಭಹೊಂದದೆ ಬರುತ್ತಿರಲಿಲ್ಲ.

"ಜೀವನದ ವಿಷಯದಲ್ಲಿ ನಿರಾಶೆಯ ಭಾವನೆಗೂ ಸರ್ ಪುಟ್ಟಣ್ಣಶೆಟ್ಟಿಯವರ ಮನೋಧರ್ಮಕ್ಕೂ ಬಹಳ ದೂರ ಶುಭ್ರವಾಗುವುದೆಂಬ ಭರವಸೆಯಿಂದ ಕೂಡಿದ್ದ ಆಶಾವಾದಿಗಳವರು. ಅವರ ತುಂಬು ಜೀವನದ ಸ್ಥಿತಿಯೊಂದು ಕ್ಷಣವನ್ನೂ ಅವರು ಅದಕ್ಕನುಸಾರವಾದ ಉತ್ಸುಕತೆಯಿಂದ ಕಳೆದರು. ಕೊನೆಯ ಸಾರಿ ನಾನು ಅವರನ್ನು ಕಂಡಿದ್ದುದು ಅವರು ದಿವಂಗತರಾದ ಹಿಂದಿನ ದಿನ. ಮಾರನೆಯ ದಿನ ಬೆಳಗೆ ನಾನು ಮೈಸೂರಿಗೆ ಹೋಗಬೇಕಾಗಿದ್ದುದರಿಂದ ಅದಕ್ಕೆ ಮುಂಚೆ ಅವರನ್ನು ನೋಡಿಕೊಂಡು ಬರೋಣವೆಂದು ಹಿಂದಿನ ದಿನ ಹೋಗಿದ್ದೆನು. ಆಗ್ಗೆ ನಾನು ಅವರೊಡನೆ "ಸರ್ ಪುಟ್ಟಣ್ಣಶೆಟ್ಟಿಯವರೇ, ತಮಗೆ ಶೀಘ್ರವಾಗಿಯೇ ಮತ್ತೆ ಆರೋಗ್ಯವುಂಟಾಗಿ ಯಥಾಪ್ರಕಾರ ತಾವು ಲವಲವಿಕೆಯಿಂದ ಕೆಲಸಮಾಡುವಿರೆಂದು ನನ್ನ ಹಾರೈಕೆ" ಎಂದೆನು. ಆಗ ಅವರಿಗೆ ಅರವಾಸಿ ಮಾತ್ರವೇ ಹೊರಗಿನ ವಿಚಾರಗಳನ್ನು ಗ್ರಹಿಸಲು ಪ್ರಜ್ಞೆಯಿದ್ದೂ ಕೂಡ ಅವರು ಆದರದಿಂದ ನನ್ನ ಕೈಯನ್ನು ಹಿಡಿದುಕೊಂಡು, ನಗುಮುಖದಿಂದ "ನಿಜ, ನಿಜ; ಹಾಗಾಗುತ್ತದೆ" ಎಂದು ಉತ್ತರ ಹೇಳಿದರು.

"ವ್ಯಕ್ತಿ ಸಂಬಂಧದ ದೃಷ್ಟಿಯಿಂದ ಸರ್ ಪುಟ್ಟಣ್ಣಶೆಟ್ಟಿಯವಂಶೆಯೇ ಸನ್ಮಿತ್ರರೂ ಒಳ್ಳೆಯ ಜೊತೆಗಾರರೂ ಆದವರಿದ್ದಾರೆ. ಸಾರ್ವಜನಿಕ ಜೀವನದ ದೃಷ್ಟಿಯಿಂದ ಅವರಂತೆಯೇ ವಿಶ್ವಾಸಪಾತ್ರರಾದ ಮಹನೀಯರಿದ್ದಾರೆ ಆದರೆ ಸ್ನೇಹ ಧರ್ಮದಲ್ಲಿ ಶ್ರೇಷ್ಠರೂ ಸಾರ್ವಜನಿಕ ಕಾರ್ಯಗಳಲ್ಲಿ ದಕ್ಷರಾದ ಸಾಧಕಶ್ರೇಷ್ಠರೂ ಆಗಿ ಅವರೆಂಥ ಗುಣಗಳೂ ಒಟ್ಟಿಗೆ ಸೇರಿದ ಜಾಯಮಾನವುಳ್ಳ ಸರ್ ಪುಟ್ಟಣ್ಣಶೆಟ್ಟಿಯವರಂಥವರು ಹೆಚ್ಚು ಮಂದಿಗಳಲ್ಲ.

"ಸರ್ಕಾರದಿಂದ ಹಿಡಿದು ತೀರ ಸಾಮಾನ್ಯ ಪ್ರಜೆಯವರೆಗಿನವರಲ್ಲಿ ಆನೇಕರು ಅವರನ್ನು ಆಪ್ತರೆಂದು ಭಾವಿಸಿ ವಿಶ್ವಾಸವನ್ನಿಟ್ಟುಕೊಂಡಿದ್ದರು. ಅವರು ದೇಶಬಾಂಧವರೆಲ್ಲರ ಗೌರವಕ್ಕೂ ಪಾತ್ರರಾಗಿದ್ದರು. ಜನರಲ್ಲಿ ಅವರು ಅದರ ತೋರುತ್ತಿದ್ದರು. ಧರ್ಮಾರ್ಥವಾಗಿ ಅವರು ಹೇರಳವಾಗಿ ಹಣವನ್ನು ವೆಚ್ಚಮಾಡುತ್ತಿದ್ದರು ಸಂಸ್ಥಾನದ ಹಿತಸಾಧನೆಯಲ್ಲಿಯೂ ಸಂಸ್ಥಾನದ ದೊಡ್ಡ ಹೆಸರಿಗಾಗಿ ಹೋರಾಡುವುದರಲ್ಲಿಯೂ ಅವರು ಸರ್ವದಾ ಸಿದ್ಧವಾಗಿರುತ್ತಿದ್ದರು. ಯಾರಲ್ಲಿಯೂ ದ್ವೇಷವಿಲ್ಲದೆ ಅಜಾತಶತ್ರುಗಳೆನಿಸುವ ಮಹನೀಯರ ಸಂಖ್ಯೆಯು ತೀರ ಕಡಿಮೆ; ಸರ್ ಪುಟ್ಟಣ್ಣಶೆಟ್ಟಿಯವರೂ ಅವರಲ್ಲೊಬ್ಬರು

"ಬೆಂಗಳೂರು ನಗರನೆಂದರೆ ಅವರಿಗೆ ಪ್ರಾಣ. ಅವರ ಮನೆಯೂ ಇದೇ. ಅವರ ಸ್ವರ್ಗವೂ ಇದೇ. ಬೆಂಗಳೂರು ನಗರವನ್ನು ಈಗಿನ ಸ್ಥಿತಿಗೆ ತರಲು ಸಾಧಕವಾಗಿರುವ ಅನೇಕ ಅಭಿವೃದ್ಧಿಕಾರ್ಯಗಳು ಪ್ರಾರಂಭವಾಗುವುದಕ್ಕೆ ಅವರೇ ಕಾರಣಕರ್ತರು.

"ವಿಕ್ಟರ್ ಹ್ಯೂಗೋ" ಎಂಬ ಪ್ರಸಿದ್ಧಲೇಖಕನು ಸೂಚಿಸಿರುವಂತೆ ನಾವೆಲ್ಲರೂ ಮರಣದಂಡನೆಗೆ ಗುರಿಯಾಗಿರುವವರೇ ನಮ್ಮ ಜೀವನವು ಪೂರೈಸುವಾಗ್ಗೆ ಈಗ ಕಣ್ಮರೆಯಾದ ನಮ್ಮ ಮಿತ್ರರ ದೊಡ್ಡ ಜೀವನದಿಂದ ನಮ್ಮ ಜೀವನಗಳಲ್ಲಿ ಸತ್ಪರಿಣಾಮವುಂಟಾಗಲಿಲ್ಲವೆಂಬ ಮಾತು ಹೊರಡಲುಕಾರಣವಿಲ್ಲದಿರಲಿ!"

ಅನಂತರ ಸರ್ ವಿ. ಎಸ್ ಶಿವಸ್ವಾಮಿ ಅಯ್ಯರ್‌ರವರೂ, ಡಾ॥ ಎಂ. ರಾಯರ್‌ರವರೂ ಮಿ॥ ಬಿ. ಪುಟ್ಟಯ್ಯನವರೂ ರಾಜಭರ್ಮಪ್ರವೀಣ ದಿವಾನ್ ಬಹದ್ದೂರ್ ಪಿ ಮಹದೇವಯ್ಯನವರೂ ರಾವ್ ಬಹದ್ದೂರ್ ಬಿ ಕೆ ಗರುಡಾಚಾರ್ಯರವರೂ ರೆವರೆಂಡ್ ಎಚ್ ಎಚ್. ನ್ಯೂಹಾಮ್‌ರವರೂ ಮಿ॥ ಬಿ. ಎಂ. ಶ್ರೀಕಂಠಯ್ಯನವರೂ ಇವರೇ ಆದಿಯಾಗಿ ಇನ್ನೂ ಕೆಲವರು ಮೇಲ್ಕಂಡ ನಿರ್ಣಯಕ್ಕೆ ಬೆಂಬಲಕೊಟ್ಟು ಸರ್ ಪುಟ್ಟಣ್ಣಶೆಟ್ಟಿಯವರ ನಾನಾ ಪರಹಿತ ಕಾರ್ಯಗಳನ್ನೂ ಸದ್ಗುಣ ಸತ್ಕರ್ಮಗಳನ್ನೂ ವರ್ಣಿಸಿ ಭಾಷಣಗಳನ್ನು ಮಾಡಿದರು

ಸಭಿಕರೆಲ್ಲರೂ ಮೌನದಿಂದೆದ್ದು ನಿಂತು ತಮ್ಮ ಸಹತಾಪವನ್ನು ಸೂಚಿಸುವುದರ ಮೂಲಕ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಿದರು

ಸಾರ್ವಜನಿಕ ಮುಖಂಡರೂ ದೇಶವತ್ಸಲರೂ ಧರ್ಮಾತ್ಮರೂ ಆದ ಸರ್ ಪುಟ್ಟಣ್ಣಶೆಟ್ಟರವರ ಜ್ಞಾಪಕಾರ್ಥವಾಗಿ ಸವಿಾಚೀನವಾದ ವಿರ್ವಾಹವನ್ನು ಮಾಡಲು ಅವಶ್ಯಕವಾದ ಕಾರ್ಯಗಳನ್ನು ಕೈಕೊಳ್ಳಲು ರಾವ್ ಬಹದ್ದೂರ್ ಬಿ. ಕೆ ಗರುಡಾಚಾರ್ಯರ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿದರು. ಅನಂತರ ಸಭೆಯುಮುಕ್ತಾಯವಾಯಿತು.

ಅನ್ಯಭಾಷೆಯಲ್ಲಿ ಮಾತನಾಡಿದ್ದಕ್ಕೆ ನೌಕರಿ ಹೋಯಿತು.

ರಷ್ಯಾದೇಶದ ಗಡಿಯಲ್ಲಿರುವ ರುಮೇನಿಯದ 3 ಜನ ಆಫೀಸರುಗಳು ಸಾರ್ವಜನಿಕಸಂಸ್ಥೆಯಲ್ಲಿ ರಷ್ಯ ಭಾಷೆಯಲ್ಲಿ ಭಾಷಣ ಮಾಡಿದ್ದಕ್ಕಾಗಿ ಕೋರ್ಟ್ ನಲ್ಲಿ ವಿಚಾರಣೆ ನಡೆದು ಅವರು ಕೆಲಸಗಳಿಂದ ಡಿಸ್ ಮಿಸ್ ಮಾಡಲ್ಪಟ್ಟರು. ಇವರಲ್ಲಿ ಒಬ್ಬ ಹೆಂಗಸೂ ಇದ್ದಳು. ಮಾತೃಭಾಷಾಭಿಮಾನವೆಂದರೆ ಹೀಗಿರಬೇಕು.

ಗೂಢಚಾರರಿಗೆ ಮರಣದಂಡನೆ.

ಫ್ರಾನ್ಸ್ ದೇಶದಲ್ಲಿ ಗೂಢಚಾರರ ಸಂಖ್ಯೆಯು ಹೆಚ್ಚು ತ್ತಿರುವುದರಿಂದ ಅದನ್ನು ತಡೆಗಟ್ಟಲು ದೇಶವು ಶಾಂತ ವಾಗಿರುವ ಕಾಲದಲ್ಲಿ ಗುಪ್ತಚಾರರು ಕೆಲಸಮಾಡುತ್ತಿರು ವವರು ಸೊತ್ತಾದರೆ ಅಂಥವರಿಗೆ ಮರಣದಂಡನೆ ನಿಧಿ ಸುವುದಾಗಿ ಪ್ರಕಟಿಸಿರುತ್ತಾರೆ. ಇದಕ್ಕಾಗಿ 252 ಜನ ಪೋಲೀಸ್ ಅಧಿಕಾರಿಗಳನ್ನು ಹೊಸದಾಗಿ ನೇಮಿಸಿ ಕೊಂಡಿರುತ್ತಾರೆ. ಈ ವರ್ಷ ವಾರ ಒಂದಕ್ಕೆ 4 ಮಂದಿ ವಿದೇಶ ಗೂಢಚಾರರು ಶಿಕ್ಕಿಬೀಳುತ್ತಿರುವರೆಂದೂ ಇವ ರಲ್ಲಿ ಜರ್ಮನಿ ಮತ್ತು ಇಟಲಿಯ ಗೂಢಚಾರರೇ ಹೆಚ್ಚೆಂದೂ ತಿಳಿದುಬರುತ್ತದೆ.

ಮನೆಬದ್ದು ಮರಣ

ಕಳೆದ 21 ನೆಯ ತಾರೀಖಿನ ರಾತ್ರಿ ಕಾಶಿಯಲ್ಲಿ ವಿಪರೀತ ಮಳೆಬಿದ್ದುದರಿಂದ ಒಂದು ಮನೆಯು ಕುಸಿದು ಬಿದ್ದು. ಅದರಲ್ಲಿ ವಾಸವಾಗಿದ್ದ ಗಂಡ, ಹೆಂಡತಿ ಮತ್ತು 5 ಮಕ್ಕಳಿಂದ ಕೂಡಿದ ಒಂದು ಪೂರ್ತಿ ಸಂಸಾರವೇ ನಾಶವಾಯಿತು. ಕಾಶಿಯಲ್ಲಿ ಜೂ. 22 ನೆಯ ತಾರೀಖಿನವರೆಗೆ ಒಟ್ಟು 26 ಅಂಗುಲ ಮಳೆಯಾಗಿರುವದೆಂದೂ, ಗಂಗಾನದಿಯ ಪ್ರವಾಹವು ಹೆಚ್ಚಿರುವುದೆಂದೂ ತಿಳಿದು ಬರುತ್ತದೆ.

ಕಾರ್ಸ್ಪೇಬಲಿನ ಮನೆಯಲ್ಲೇ ಅಪಹೃತಸ್ತ್ರೀ

ಕರಾಚಿಯಿಂದ ಒಬ್ಬ ಸ್ತ್ರೀಲೇಸಿನಿಗೆ ಇವ್ವಲ್ಲಿವ್ವಂತೆ ಪತ್ರ ಬರೆದಾಯಿತು. ಆವನು ಹೋದಕೂಡಲೆ ಅದೇ ಮನೆಗೆ ಒಂದು ಇನ್ನೊಬ್ಬನು ಮುರದ ಹೆಲಗೆಯಿಂದ ಮುಚ್ಚಲ್ಪಟ್ಟ ಬಾವಿ ಯೊಂದರಲ್ಲಿ ಒಂದು ಕುಳಿಯನ್ನು ನೋಡಿ ಆವನ್ನು ತೆಗೆಯಲು ಕಪರಲ್ಲಿ ಒಂದುವರುಷದ ಹಿಂದೆ ಅಪಹರಿಸಲ್ಪಟ್ಟು ಪತ್ತೆ ಯಾಗದಿದ್ದ ಹೆಂಗಸೂಬ್ಬಳು ಮುಚ್ಚಿಡಲ್ಪಟ್ಟಿದ್ದದ್ದು ಕಂಡುಬಂದಿತು. ಆಕೆಯ ಹೇಳಿಕೆಯಂತೆ ತನಿಪೆ ನಡೆಯು ತ್ತಿದೆ. ಅಕಸ್ಮಾತ್ ವರ್ಗವಾವ್ತರಿಂದ ಆ ಹಿಂದಿನ ಕಾರ್ ಸ್ಪೇಬಲ್ಲಿನ ಆಕೆಯನ್ನು ಅಲ್ಲಿಂದೊಯ್ಯಲು ಸಾಧ್ಯವಾಗ ದಿಲ್ಲವೆಂದು ತಿಳಿದುಬರುತ್ತದೆ.

ಕಳ್ಳರಿಂದ ಕಳ್ಳತನದ ಪತ್ತೆಯಾಯಿತು

ಗ್ಲಾಸ್ಗೊ ನಗರದ ಜೇಮ್ಸ್‌ನಾನ್ಸ್ ಎಂಬವನು ಕಳ್ಳತನದಿಂದ ಅನೇಕ ನಗನಾಣ್ಯಗಳನ್ನು ಸಂಗ್ರಹಿಸಿ ತನ್ನ ಮನೆಯಲ್ಲಿ ಬಚ್ಚಿಟ್ಟಿದ್ದನು. ಈಗ ಕೆಲವುದಿವಸಗಳ ಹಿಂದೆ ಅವನು ವಿಹಾರಾರ್ಥವಾಗಿ ಹೊರಗೆ ಹೋಗಿದ್ದಾಗ್ಗೆ ಅವನಮನೆಗೆ ಕಳ್ಳರು ಬಿದ್ದು ಶಿಕ್ಕಿದ್ದಷ್ಟೆಲ್ಲಾ ದೋಚಿ ಕೊಂಡು ಹೋದರು. ಅವರನ್ನು ಪತ್ತೆಮಾಡಲು ಹೊರಟ ಪೋಲೀಸರಿಗೆ ಜೇಮ್ಸನು ಕದ್ದು ಮುಚ್ಚಿಟ್ಟಿದ್ದ ಕಳ್ಳ ರೂಲುಗಳು ದೊರೆತುದರಿಂದ ವಿಹಾರದಿಂದ ಬಂದೊಡನೆ ಪಸ್ತಗಿರಿ ಮಾಡಲ್ಪಟ್ಟನು. ಅವನಿಗೆ ಎರಡುತಿಂಗಳು ಕಾರಾಗೃಹಶಿಕ್ಷೆಯಾಯಿತು.

ಬರ್ಮಾಗಂಭೀಗಳ ಹಾನಿ

ಬರ್ಮಾದಲ್ಲಿ ನಡೆದ ಗಲಭೆಗಳಿಂದ ಅಲ್ಲಿ ಹೋಗಿ ನೆಲೆ ಸಿದ್ದ 16 ಸಾವಿರ ಹಿಂದೀ ಪ್ರಜೆಗಳಿಗೆ ಅಪಾರನಷ್ಟವಾಗಿರು ವುದರಿಂದ ಅವರಿಗೆಲ್ಲಾ ಸರಿಹಾರವ್ಯವನ್ನು ಕೊಡು ವಂತೆ ಬರ್ಮಾ ಸರ್ಕಾರವನ್ನು ಕೇಳಬೇಕೆಂದು ಕಲ್ಕತ್ತೆಯ ಸಾರ್ವಜನಿಕ ಸಭೆಯೊಂದು ನಿರ್ಣಯಿಸಿತು. ಲಂಗೂನಿನಲ್ಲಿ ಹಿಂದೂ ಮುಸ್ಲಿಂ ಸಾಹುಕಾರರ 32 ಮಠಸ ಪೋಗಳು ಸುಟ್ಟುಹೋಗಿ ಸುಮಾರು 1 ಲಕ್ಷ ರೂಪಾಯಿ ನಷ್ಟವಾಗಿದೆ. ಯಾರೋ ದುಷ್ಟರು ಉದ್ದೇಶಪೂರ್ವಕ ವಾಗಿ ಅದಕ್ಕೆ ಬೆಂಕಿಯಿಟ್ಟಿರಬೇಕೆಂದು ಶೋಚಿಸಲಾಗಿದೆ.

ಕೆಲಸವು ಮರಣದಲ್ಲಿ ಕೊನೆಗೊಡಿತು

ಮಣಿಪುರದ ಜಿಲ್ಲೆಯ ಒಂದು ಪೋಲೀಸು ಠಾಣೆಯ ಹೆಡ್ ಕಾನ್ಸ್ಟೇಬಲ್ ಜಗದೀಶಪ್ರಸಾದ್ ಮತ್ತು ಕಾನ್ ಸ್ಟೇಬಲ್ ಹರಿಪ್ರಸಾದ್ ಎಂಬವರಿಗೆ ಮೊದಲಿನಿಂದಲೂ ಮನಸ್ತಾಪವಿತ್ತು. ಕಳೆದವಾರ ಇವರಿಬ್ಬರೂ ಒಂದು ರಾತ್ರಿ ಠಾಣೆಯಲ್ಲಿ ಕೆಲಸದಮೇಲಿದ್ದರು. ಆಗ ಇವರಿಬ್ಬ ರಲ್ಲಿ ಕಲಹವುಂಟಾಗಿ ಒಬ್ಬರಮೇಲೊಬ್ಬರು ಗುಂಡು ಹಾರಿಸಿದರು. ಗುಂಡಿನ ಶಬ್ದವನ್ನು ಕೇಳಿ ಜನರು ಓಡಿ ಬಂದು ನೋಡಿದಾಗ ಇಬ್ಬರೂ ಸತ್ತು ಬಿದ್ದಿದ್ದರು.

ಚರ್ಚ್ ಗಂಟೆಗಳಿಂದ ಯುದ್ಧಸಾಮಗ್ರಿ.

ಯುದ್ಧಸಾಮಗ್ರಿಗಳಿಗೆ ಬೇಕಾಗುವಷ್ಟು ಲೋಹ ವಿಲ್ಲದೆ ಕಷ್ಟಪಡುತ್ತಿರುವ ಜರ್ಮನ್ ಸರ್ವಾಧಿಕಾರಿ ಹಿಟ್ಲರನ ದೃಷ್ಟಿಯು ಬಹುಪುರಾತನಕಾಲದಿಂದಲೂ ಜನರನ್ನು ಪ್ರಾರ್ಥನೆಗೆ ಎಚ್ಚರಿಸುವ ಸಲುವಾಗಿ ಚರ್ಚುಗಳ ಮೇಲೆ ಕಟ್ಟಿರುವ ಭಾರಿಭಾರಿ ಗಂಟೆಗಳಮೇಲೆ ಬಿದ್ದಿದೆ. ಅವನು ಆ ಗಂಟೆಗಳನ್ನೆಲ್ಲ ತೆಗೆಯಿಸಿ ಅವುಗಳ ಬದಲು ಅಲ್ಯೂ ಮಿನಿಯಂ ಗಂಟೆಗಳನ್ನು ಅಲ್ಲಿಗೆ ಕಟ್ಟಿಸಿ ಪುರಾತನಕಾಲದ ಕಂಚಿನ ಮತ್ತೂ ಇತರ ಲೋಹಗಳ ಘಂಟೆಗಳನ್ನು ಯುದ್ಧ ಸಾಮಗ್ರಿಗಳ ಸಲುವಾಗಿ ಕರಗಿಸಲು ಏರ್ಪಾಟು ಮಾಡುತ್ತಿರುವನು.

ರೈಲ್ವೆ ಅನಾಹುತ.

ಅಯ್ಯಲೂರು-ಮಾನಮಧುರೈ ರೈಲ್ವೇಸ್ಟೇಷನ್ನುಗಳ ಮಧ್ಯೆ ನೇಕೋಲಾ ಪ್ಯಾಸೆಂಜರ್ ರೈಲು ಕಂಬಿತಪ್ಪಿ ಕೆಳಕ್ಕೆ ಬಿದ್ದ ಪ್ರಯುಕ್ತ 25 ಮಂದಿ ಸತ್ತಿರೆಂದೂ 117 ಮಂದಿ ಗಾಯಗೊಂಡರೆಂದೂ ತಿಳಿದುಬರುತ್ತದೆ. ಮುಸ್ಲಿ ಮರ ಹೆಚ್ಚಕ್ಕಾಗಿ ಆ ಗಾಡಿಯಲ್ಲಿ ಬಹುಮಂದಿ ಮುಸ್ಲಿ ಮರು ಪ್ರಯಾಣಮಾಡುತ್ತಿದ್ದುದರಿಂದ ಮೃತರು ಮತ್ತು ಗಾಯಗೊಂಡವರ ಪೈಕಿ ಹೆಚ್ಚುಮಂದಿ ಮುಸ್ಲಿಮರಂತೆ! ರೈಲು ಬಂದಾಗ ಆವನ್ನು ಮುಂದಕ್ಕೆ ಬಿಡಕೂಡದೆಂದು ಹಳ್ಳಿಗರು ಕೂಗಿಕೊಂಡರೂ ಡ್ರೈವರು ಆವಕ್ಕೆ ಲಕ್ಷ್ಯ ಕೊಡದೆ ಮುಂದೆ ಹೋಗಿ ಅನಾಹುತಕ್ಕೊಳಗಾದನೆಂದೂ ಆ ಪ್ರದೇಶದಲ್ಲಿ ಮಳೆ ವಿಶೇಷವಾಗಿ ಸುರಿದು ಲೈನು ಕೊಚ್ಚಹೋಗಿದ್ದ ಕಾರಣ ಈ ವಿಷಾದಘಟನೆಯು ಸಂಭ ವಿಸಿತೆಂದೂ ತಿಳಿದುಬರುತ್ತದೆ. ಗಾಯಗೊಂಡವರನ್ನೆಲ್ಲ ಮಧುರೆಯ ಆಸ್ಪತ್ರೆಗೆ ಕರೆದುಕೊಂಡುಹೋಗಲಾಯಿತು.

ಕೆನಡಾದಲ್ಲಿ ರೂಜ್‌ವೆಲ್ಟರ ಭಾಷಣ.

ಆನೇಕ ಸಂಯುಕ್ತ ಸಂಸ್ಥಾನದ ವೈಸಿಡೆಂಟರಾದ ರೂಜ್‌ವೆಲ್ಟರು ಕೆನಡಾದೇಶದ ಕೆಂಗ್ಸ್ಟನ್ ಎಂಬಲ್ಲಿಗೆ ದೋಣಿದ್ವಾರ ಮಾಡಿದ ಭಾಷಣದಲ್ಲಿ ಪ್ರಪಂಚವು ಯುದ್ಧಾಸಕ್ತವಾವರೆ ಅಸೌರಿಕೆಯೇನುಮಾಡುವದೆಂಬು ದನ್ನು ಸೂಚಿಸಿದರು. ಹಿದರಂತೆ ಇಲ್ಲಿಯವರೆಗೂ ಅವೌ ರಿಕೆಯ ಯಾವಾಗಲೂ ತಾಟಸ್ಥ್ಯಪ್ರಿಯವಾಗಿದ್ದರೂ ಈಗ ಪೊದಲಿನಂತೆ ದೂರವಾಗಿರುವವರ ಬದಲು ಪ್ರಪಂ ಚದಲ್ಲೇ ಅಶಾಂತತೆಯು ಉತ್ಪನ್ನವಾದಲ್ಲಿ ಹಿದನ್ನು ನಿವಾರಿಸಲು ಕೈಲಾದಷ್ಟು ಯತ್ನಿಸುವುದಾಗಿಯೂ ಮತ್ತು ತಮ್ಮ ಬಲವೂ, ಯುದ್ಧಸಾಮಗ್ರಿಗೂ ರಾಜಕಾರಣ ದಲ್ಲಿ ತಮ್ಮನ್ನು ಅತ್ಯಂತ ಬಲಿಷ್ಠರನ್ನಾಗಿ ಮಾಡಿರುವು ದಾಗಿಯೂ ಹೇಳಿದರು. ಅಲ್ಲದೆ ಒಂದುವೇಳೆ ಅಮೇರಿ ಕೆಯ ಮೇಲೆಯೆ ಯುದ್ಧಪ್ರಸಂಗವು ಬರುವುದಾದರೆ ಕೆನಡಾದೇಶದೊಡನೆ ಸಹಕರಿಸಿ ಅವನ್ನು ಎದುರಿಸುವು ದಾಗಿ ನುಡಿದರು. ಈ ಭಾಷಣವು ಅತ್ಯಂತ ಸ್ಫೂರ್ತಿಯು ತವಾದ್ದೆಂದು ಇಂಗ್ಲೆಂಡಿನ ಪತ್ರಿಕೆಗಳೆಲ್ಲ ಹೊಗಳುತ್ತಿವೆ.

ಜಮಖಂಡಿಸಂಸ್ಥಾನದಲ್ಲಿ ಸುಧಾರಣೆ.

ಜಮಖಂಡಿ ಸಂಸ್ಥಾನದ 5 ನೆಯ ಪ್ರಜಾಪ್ರತಿನಿಧಿ ಸಭೆಯ ಆರಂಭಭಾಷಣದಲ್ಲಿ ಆ ಸಂಸ್ಥಾನಾಧಿ ಪತಿಗಳು ಮಾತನಾಡುತ್ತ "ನಮ್ಮ ಆಡಳಿತದ ಧ್ಯೇಯವು ನಮ್ಮ ಪ್ರಜೆಗಳ ಹಿತವರ್ಧನೆಗಾಗಿಯೇ ಆಗಿದೆ. ಇದ ಕ್ಕಾಗಿ ಸಂಸ್ಥಾನದ ತಿರಿಗೆಯಲ್ಲಿ ಸೇಕಡಾ 25 ರಷ್ಟು ಕಡಿ ಮೆಮಾಡಿರುತ್ತೇವೆ. ದುಷ್ಕಾಲವಾದ್ದರಿಂದ ಈ ವರುಷದ ಹಪ್ಪತ್ತೆಯನ್ನು ನಿಲ್ಲಿಸಿದ್ದೇವೆ. ಬಂದಿನ ಬಾಕಿಯನ್ನು ಕಂತು ಗಳಾಗಿ ಮಾಡಿ ತೆಗೆದುಕೊಳ್ಳಲಾಗುವುದು. ನಮ್ಮ ಸ್ವಂತ ಖರ್ಚಿನಲ್ಲಿ 28 ಸಾವಿರ ರೂಪಾಯಿ ಕಡಿಮೆ ಮಾಡಿರುವೆವು." ಎಂದು ಹೇಳಿದರು. ಸಂಸ್ಥಾನದ ಒಕ್ಕಲಿಗರ ಸುಧಾರಣೆಗಾಗಿ ಅಧಿಪತಿಗಳು ಶ್ರೀಯುತ ವಿ. ಜೆ. ಕಾಳೆ ಇವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಿಸಿದ್ದಾರೆ. ಸರಕಾರಿ ಲೆಖ್ಖಪತ್ರಗಳನ್ನು ಕನ್ನಡದಲ್ಲಿ ಇಡಲಾಗುವುದು. ಅಧಿಕಾರಿಗಳನ್ನು ಕನ್ನಡ ಕಲಿಯಲು ನಿರ್ಬಂಧಪಡಿಸುವೆವು, ಎಂದು ಹೇಳಿದರು.

ಭಕ್ಷುಕನು ಕೋಟೀಶ್ವರನಾಗಿದ್ದನು

ಯೂರೋಪಿನ ಲಿತುವಿನಿಯ ಗಡಿಪ್ರದೇಶದಲ್ಲಿ ಕೊನೆಯವರೆಗೂ ಭಿಕ್ಷೆಯಿಂದ ಜೀವಿಸುತ್ತಿದ್ದ ಒಬ್ಬ ಪುಣ್ಯಾತ್ಮನು ಈಚೆಗೆ ಮೃತನಾದನು. ಮರಣಕಾಲದಲ್ಲಿ ಈತನು ಬಡ ವಿದ್ಯಾರ್ಥಿಗಳಿಗಾಗಿ ೧೫ ಕೋಟಿ ರೂಪಾ ಯಿಗಳನ್ನು ದಾನಮಾಡಿರುವನು.

ವಿಶ್ವದಲ್ಲೆಲ್ಲಾ ಹೆಚ್ಚು ಹಾಲುಕೊಡುವ ಆಕಳು!

ಬ್ರಿಟಿಷ್‌ದ್ವೀಪದ ಭಾಗವಾದ ವೇಲ್ಸ್‌ದೇಶದಲ್ಲಿ ನಡೆದ ವ್ಯವಸಾಯಸಂಬಂಧದ ಒಂದು ಪ್ರದರ್ಶನವೆಲ್ಲಿ ಹಾಲೆಂಡ್‌ದೇಶದ ಹಸುವೊಂದನ್ನು ಪ್ರದರ್ಶಿಸಿದ್ದರು. ಇದು ಒಂದು ಹೊತ್ತಿಗೆ ಸುಮಾರು 60 ಸೇರು ಹಾಲು ಕೊಟ್ಟು ಎಲ್ಲರನ್ನೂ ಆಶ್ಚರ್ಯಗೊಳಿಸಿತು. ಅಲ್ಲದೆ ಈ ಹಸುವು ಒಂದು ಪಾಠಶಾಲೆಯಲ್ಲಿ ಓದುವ 240 ಜನ ಮಕ್ಕಳಿಗೆ ದಿನಪಹ ಪ್ರತಿಯೊಬ್ಬರಿಗೂ ಅರ್ಧ ಪಾವು ಹಾಲಿನಷ್ಟು ಒದಗಿಸುವುದಂತೆ! ಪೂರ್ವದಿಂದಲೂ ಹಾಲೆಂಡಿನ ಆಕಳುಗಳೇ ಉತ್ತಮವಾದುವೆಂದು ಇಂಗ್ಲೆಂ ಡಿಗೆ ತರಲ್ಪಡುತ್ತಿದ್ದವು. 1870 ನೆಯ ಇಸವಿಯಿಂದೀಚೆಗೆ ದನಗಳ ರೋಗಾದಿಗಳು ಬಂದದ್ದರಿಂದ ಆ ಹಸುಗಳನ್ನು ತರಿಸುವುದು ನಿಂತುಹೋಯಿತು. ಆದರೂ ಆ ಜಾತಿ ಹಸುಗಳನ್ನು ಹಾಲೆಂಡಿನಲ್ಲಿಯೂ ದೆಪ್ಟಿಣಆಫ್ರಿಕದಲ್ಲಿಯೂ ಕಾಪಾಡಿದ್ದರು. ಕಳೆದ 25 ವರುಷಗಳಿಂದ ತಿರುಗಿ ಹಾಲೆಂ ಡಿನಿಂದ ಇಂಗ್ಲೆಂಡಿಗೆ ತರುವುದಕ್ಕೆ ತೊಡಗಿರುತ್ತಾರೆ. ಅಂತೂ ಹಾಲೆಂಡಿನ ಹಸುಗಳಷ್ಟು ಹೆಚ್ಚುಹಾಲುಕೊಡುವ ಹಸುಗಳು ಪ್ರಪಂಚದಲ್ಲೆಲ್ಲೂ ಇಲ್ಲ. ಈ ಹಸುಗಳ ಹಾಲು ಬೇರೆ ಹಸುಗಳ ಹಾಲಿನಷ್ಟು ಗಟ್ಟಿಯಾಗಿಯೂ ರುಚಿಯಾಗಿಯೂ ಇರುವುದಿಲ್ಲವಾದರೂ ಬೇಗ ಜೀರ್ಣ ವಾಗುವುದರಿಂದ ಮಕ್ಕಳಿಗೂ ಒಳಹೀನರಿಗೂ ಯೋಗ್ಯ ವಾಗಿರುವುದಂತೆ!

ಓಂ ಮಂಡಲಿಯ ವಿಚಿತ್ರಕಾರ್ಯ!

ಕರಾಚಿಯಲ್ಲಿ ಮೊತ್ತ ವ್ಯಾಪಾರಿಗಳಾಗಿದ್ದ ಸಿಂಧ್ ಹೈದರಾಬಾದ್ ಪ್ರಾಂತಕ್ಕೆ ಸೇರಿದ ಲೇಕರಾಜ್ ಕೃಪಾ ಲಸಿ ಎಂಬವರು ತಮ್ಮ ಲಕ್ಷಾಂತರ ರೂಪಾಯಿಗಳ ಆಸ್ತಿಯನ್ನು ಸ್ತ್ರೀಯರ ವಿಲೇಗೆಂದೂ ವ್ಯಯಮಾಡಿ ಓಂ ಮಂಡಲಿಯೆಂಬ ಒಂದು ಸ್ತ್ರೀಸಂಘವನ್ನು ಸ್ಥಾಪಿಸಿರು ವರು. ಈ ಸಂಘದ ಸದಸ್ಯರಾದ ಸ್ತ್ರೀಯರೆಲ್ಲರೂ ಬ್ರಹ್ಮ ವಿದ್ಯೆಯನ್ನು ಅಭ್ಯಾಸಮಾಡಬೇಕೆಂಬುದೊಂದು ನಿಬಂಧನೆ. ಆ ಪ್ರಾಂತ್ಯದ ಅನೇಕ ಅನಿವಾಹಿತ ಮತ್ತು ವಿವಾ ಹಿತ ತರುಣಿಯರು ತಮ್ಮ ಗಂಡಂದಿರಿಗೆ ಬೇರೆ ವಿವಾಹ ವಾಗಲು ಅನುಮತಿಯಿತ್ತು ಈ ಸಂಘಕ್ಕೆ ಬಂದು ಸೇರು ತ್ತಲಿದ್ದಾರೆ. ಇದರಿಂದ ಅನೇಕ ಸಂಸಾರಗಳು ಹಾಳಾ ಗಲು ಪ್ರಾರಂಭವಾಗಿವೆ. ಮುಖ್ಯವಾಗಿ 'ಬಾಯಿಬಂದ್' ಎಂಬ ಪಂಗಡವು ಇದರ ಎಟಿಗೆ ಗುರಿಯಾಗಿದೆ. ಈ ಪರಿ ಸ್ಥಿತಿಯನ್ನು ಸರಿಪಡಿಸಲು ಸಿಂದ್ ಹೈದರಾಬಾದಿನಲ್ಲಿ ಹಿಂದೂ ಪಂಚಾಯಿತಿಯೊಂದು ಏರ್ಪಾಡಾಗಿದೆ. ಈ ಪಂಚಾಯಿತಿಯವರು ಓಂಮಂಡಲಿಯ ಕಟ್ಟಿಡದ ಮುಂದೆ ನಿಂತು ಮೊದಲನೆಯ ದಿನ ಸುಮಾರು 30 ಮಂದಿ ಮಹಿ ಳೆಯರನ್ನು ಆ ಸಂಘಕ್ಕೆ ಸೇರದಂತೆ ಪ್ರಾರ್ಥಿಸಿ ಹಿಂದಕ್ಕೆ ಕಳುಹಿಸಿದರು. ಆದರೆ ಮಾರನೇದಿವಸ ಅಷ್ಟೇ ರೀತಿ ಬೋಧಿಸಲು ಹೋದಾಗ ಹೆಂಗಸರು ಅವರ ಮಾತನ್ನು ಕೇಳದೆ ಎರಿಸ್ವರಿಸಿ "ಭಾಯಿ ಲೇಕ್‌ರಾಜ್ ಕೃಪಾಲಾನಿ ಯವರು ಶ್ರೀಕೃಷ್ಣನ ಅವತಾರ, ನಾವೆಲ್ಲರೂ ಗೋಪಿ ಕಾಸ್ತ್ರೀಯರು ನಾವು ಶ್ರೀಕೃಷ್ಣನನ್ನು ಬಿಟ್ಟಿರುವುದು ಹೇಗೆ?" ಎಂದು ಹೇಳಿ ಹೊರಟುಹೋದರಂತೆ! ಈಚೆಗೆ ಈ ಮಂಡಲಿಯವರು ಈ ಪಂಚಾಯಿತರ ಕಾಟದಿಂದ ತಮ್ಮನ್ನು ತಪ್ಪಿಸಬೇಕೆಂದು ಮ್ಯಾಜಿಸ್ಟ್ರೇಟರಿಗೆ ಅರ್ಜಿ ಹಾಕಿರುವರು. ಈಗ ಈ ಮಂಡಲಿಯಲ್ಲಿ ಸುಮಾರು 300 ಜನ ತರುಣಿಯರಿರುವರು.

ನೀಲಗುಂದಗ್ರಾಮದ ಸಮಾಚಾರ

ವಿಜಾಪುರ ಡಿ॥ ಬಾದಾಮಿ ತಾ॥ ನೀಲಗುಂದ ಗ್ರಾಮವು ಪುರಾತನಕಾಲದಿಂದಲೂ ಮಹಾಮಹಾ ತಪಸ್ವಿಗಳಿಗೂ ಪಂಡಿತರಿಗೂ ವಾಸಸ್ಥಾನವೆನಿಸಿ ಪವಿತ್ರ ಭೂಮಿಯೆನಿಸಿಕೊಂಡಿದೆ. ಅವುಗಳ ಕುರಹು ಈಗಲೂ ಕಂಡುಬರುವ ಶಿವಕರಣರ ಸ್ಥಾನಗಳಿಂದಲೂ, ಪುಲಿಕೇಶಿ ಮತ್ತು ಚಾಲುಕ್ಯರ ಕಾಲದ ಭವ್ಯ ದೇವಸ್ಥಾನಗಳಿಂದಲೂ ಪ್ರೇಕ್ಷಕರ ಕಣ್ಮನಂಗಳಿಗೆ ಆನಂದಗೊಳಿಸುವದು. ಈ ಗ್ರಾಮದ ಉತ್ತರದಿಕ್ಕಿಗೆ ೧ ಮೈಲು ದೂರವಿರುವ ತೀರ್ಥಗುಡ್ಡವೆಂಬಲ್ಲಿ ಅತಿ ಪ್ರಾಚೀನ ಕಾಲದ ಶಿವಾಲಯವುಂಟು. ಈ ಶಿವಲಿಂಗವು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರ ಕಾಲದಲ್ಲಿ ಸ್ಥಾಪಿತವಾದುದೆಂದು ಕೆಲವು ಆಧಾರಗಳಿಂದ ತಿಳಿಯುತ್ತದೆ. ಇಲ್ಲಿ ವೀರಶೈವವನಿತೆಯು ದೊಡ್ಡ ಪ್ರಮಾಣದಿಂದಿದ್ದು ಗುರುವರ್ಗದ ಮಠಗಳು ೩-೪ ಇರುತ್ತವೆ ಇಲ್ಲಿಯ ಮಠಾಧಿಕಾರಿಗಳ ಅಜಾಗರೂಕತೆಯಿಂದ ವೀರಶೈವಮತದ ನಿಜತತ್ವಗಳಿಗೆ ಬೆಲೆಯಿಲ್ಲದಾಗಿತ್ತು. ಇದೀಗ ಪಂಚಾಚಾರ್ಯಪ್ರಭಾಪತ್ರಿಕೆಯು ಈ ಗ್ರಾಮಕ್ಕೆ ಬರಲಿಕ್ಕೆ ಹತ್ತಿದಮೇಲೆ ಮತದ ನಿಜತತ್ವಗಳು ಪ್ರಸಾರವಾಗತೊಡಗಿವೆ ಇಲ್ಲಿ ಪಂಚಾಚಾರ್ಯ ಭಜನಾಸಂಘವು ಸ್ಥಾಪಿತವಾಗಿ ೧ ವರುಷವಾಯಿತು. ಈ ಸಂಘದವತಿಯಿಂದ ತಿಂಗಳೊಪ್ಪತ್ತಿನಲ್ಲಿ ಪಂಚಾಚಾರ್ಯ ಲಾಯಬ್ರರಿಯು ಸ್ಥಾಪಿತವಾಗಿ ತಕ್ಕದ್ದಾಗಿದೆ. ಇದೇ ಶ್ರಾವಣ ಬ॥೮ ತಾ॥ 18-8-38 ಶುಕ್ರವಾರ ಪ್ರತಿವರುಷದಂತೆ ಮಹಾಶಿವಯೋಗಿ ಶಿವಪ್ಪಯ್ಯಸ್ವಾಮಿಗಳ ತಪೋಭೂಮಿಯೆನಿಸಿದ ಹಿರೇತೋಟ್ಟವೆಂಬಲ್ಲಿ ಮಹಾಗಣಾರಾಧನೆಯು ನಡೆದು ಸಾವಿರಾರು ಜನರಿಗೆ ಅನ್ನಸಂತರ್ಪಣೆಯಾಯಿತು. ಸಾಯಂಕಾಲ ಪಲ್ಲಕ್ಕಿ ಉತ್ಸವವು ಭಜನ ಮತ್ತು ವಾದ್ಯವೈಭವದೊಡನೆ ನೆರವೇರಿತು. ಇದೇ ಸೋಮವಾರ ತಾ॥ 22-8-38 ನೇ ದಿವಸ ಪಂಚಾಚಾರ್ಯ ಭಜನಾಸಂಘದವತಿಯಿಂದ ಮಹಾಗಣಾರಾಧನೆಯಾಗಿ ಸಾವಿರಾರು ಜನರಿಗೆ ಅನ್ನಸಂತರ್ಪಣೆಯಾಯಿತು. ಸಾಯಂಕಾಲಕ್ಕೆ ಜಗದ್ಗುರು ಪಂಚಾಚಾರ್ಯರ ಭಾವಚಿತ್ರದ ಮೆರವಣಿಗೆಯು ವಾದ್ಯವೈಭವದೊಡನೆ ಜರುಗಿದಮೇಲೆ ಸಭೆ ಸೇರಿತು. ಹಿರಿಯರ ಅಪ್ಪಣೆಯಂತೆ ಸಂ॥ದ ವ್ಯವಸ್ಥಾಪಕರಾದ ನಿ॥ ರಾ॥ ಶರಭಣ್ಣ ಶಿರೋಳ ಇವರು ಮತಾಚಾರರು ಅವರಿಗೆ ಮಾಡಿದ ಕಾರ್ಯಗಳು, ವೀರಶೈವಮತದ ತತ್ವಗಳು, ಗುರುವರ್ಗವನ್ನು ಜಾಗೃತಿಗೊಳಿಸಿದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೀರಶೈವಮತಕ್ಕಾದ ಉಪಕಾರ, ಪ್ರಭಾಪತ್ರಿಕೆಯ ಪ್ರಭಾವ ಇತ್ಯಾದಿ ವಿಷಯಗಳ ಬಗ್ಗೆ ಮನೋಹರವಾದ ಭಾಷಣವನ್ನು ಮಾಡಿದರು ಇಲ್ಲಿ ವೀರಶೈವಪ್ರಮುಖರಾದ ಶ್ರೀ ಚನ್ನಪ್ಪನವರು ಹಿರೇಲಿಂಗಪ್ಪನವರ, ಶ್ರೀ ಬಸಪ್ಪನವರು ಎಲಿಗಾರ ಮುಂತಾದವರು ಇಲ್ಲಿಯ ಸಂಘಸಂಸ್ಥೆಗಳಿಗೆ ಉತ್ತೇಜಕರವಾಗಿ ತನುಮನೋಧನಗಳಿಂದ ಸಹಾಯ ಮಾಡುವದನ್ನೂ ಮತ್ತು ಧರ್ಮಕ್ಕೆ ಅಳಿಗಾಲ ತಂದಂಥ ಚಹಾದ ಅಂಗಡಿಗಳನ್ನು ಮುಚ್ಚಿಸಿ ಗ್ರಾಮಹಿತದ ಕೆಲಸಗಳನ್ನು ಕಳಕಳಿಯಿಂದ ಮಾಡುವದನ್ನೂ ನೋಡಿ ಸರ್ವರೂ ಈ ಮಹಾಶಯರ ಆಧಾರವನ್ನು ಮನ್ನಿಸಿದರು. ಬಳಿಕ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಏರ್ವ ಗುರುಭಕ್ತ, ನೀಲಗುಂದ.

ಪ್ರಶ್ನೋತ್ತರರತ್ನಮಾಲಿಕಾ

ಲೇಖಕರು:—ಮಲ್ಲಿಕಾರ್ಜುನಾರಾಧ್ಯ ರಾಸೆಬೆನ್ನೂರು ಮಳೆಮರ ಮುದೇನೂರು.

ಪ್ರ—ಆಯುಃ ಪರಿಮಿತಿಗೆ ಸೇರತಕ್ಕ ದಿನಗಳಾವುವು?

ಉ—ಹೃದಯಾಕಾಶದೊಳ್ ಆತ್ಮಚಂದ್ರನ ಚಂದ್ರಿಕೆ ಪ್ರಕಾಶಿಸಲು ಸಾನಂದವಾದ ಪ್ರಾಜ್ಞರಮೆಚ್ಚಿಗೆಗೆ ಯೋಗ್ಯವಾದ ಕೈಯಿಗಳೆಷ್ಟು ದಿವಸ ನಡೆಯುವವೋ ಆ ದಿವಸಗಳು. ಇಂತಹ ಸನ್ಮಾರ್ಗ ಹೀನನು (ತಾನು ಯಾರೆಂದು ತಿಳಿಯದವನು) ಎಷ್ಟುವರ್ಷ ಜೀವಿಸಿದ್ದರೂ ಅವನ ಆಯಸ್ಸು ಹದ್ದು ಕಾಗೆಗಳ ಬಾಳಿನಂತೆ ವ್ಯರ್ಥವಾಗುವದು. ಆದಕಾರಣ ಉದ್ಧವಂತನಾದವನು ಮೈತ್ರ್ಯಾದಿ ಸದ್ವಾಸನೆಗಳನ್ನಳವಡಿಸಿಕೊಳ್ಳುತ್ತಾ ಬಂದಲ್ಲಿ ನಿರಾವರಣ ಮಣಿದೀಪ ಪ್ರಕಾಶವಿದಂತೆ ಕಾರಣ ಸುವಾಸನೆಗಳಣಗುವವು. ಆಗ ಶೈಲವಂ ಗಾಳಿಯಂತೆ ಹರ್ಷಾಮರ್ಷಗಳು ಅಲ್ಲಾಡಿಸಲಾರವು; ಗಜವಂ ಸಿಂಹದಂತೆ ಸೃಷ್ಟಿಪ್ರಪಂಚಗಳೂ ದುರ್ವ್ಯವಹಾರಗಳೂ ಘಾಸಿಮಾಡಲಾರವು. ತದನಂತರದಲ್ಲಿ ಮನವು ಮನ್ವಂತರಗತಿಯಲ್ಲಿ ಕಲಿಕಲ್ಮಂಷವಂ ಬಿಟ್ಟು ಕೃತಯುಗ ಧರ್ಮವಂ ಹೊಂದುವ ಪ್ರಪಂಚದಂತೆ ಸ್ವರೂಪವಂ ಬಿಡದೆ ಶಾಂತವಾಗುವದು. ಅವನ ಜೀವಿತವ ದಿನಗಳ ಗಣನೆಯು ಸಹ ಅಯುಸ್ಸಿಗೆ ಸೇರುವವು. ಮುಖ್ಯವಾಗಿ ಮನಸ್ಯನಾದವನು ಸನ್ಮಾರ್ಗಗಾಮಿಯಾಗಿರಬೇಕೆಂಬ ಭಾವವು.

ಪ್ರ—ಚಿನ್ಮಾತ್ರಸ್ವರೂಪದಲ್ಲಿ ದೃಷ್ಟಿಯುಳ್ಳವನು ವ್ಯವಹಾರಪರನಾಗಿದ್ದರೆ ಏನು ಫಲವಾಗುವುದು?

ಉ—ಆ ಶಿವಯೋಗಿಗೆ ಅಸಂಗಧಾವವಿರುವದರಿಂದ ನೀರಿನಿಂ ಮತ್ಸ್ಯದ ನೇತ್ರದಂತೆ ವ್ಯಾವಹಾರಿಕ ಸುಖದುಃಖಗಳಿಂದವನು ಉಪಹತನಾಗುವುದಿಲ್ಲವು. ಮತ್ತು ಕಲ್ಲನೊಡೆದು ತೆಗೆದ ಮಣಿಯೂ, ತೊಟ್ಟು ಕಳಚಿಬಿದ್ದ ಫಲವೂ, ಜಡದೇಹವಂ ಬಿಟ್ಟ ಜೀವನೂ, ಪರ್ವತಾಗ್ರದಿಂದ ಕೆಳಗೆ ಬಿದ್ದ ನೀರೂ ಸಹ ತಿರುಗಿ ಪೂರ್ವದಂತೆ ಆಯಾಯ ಸ್ಥಾನಕ್ಕೆ ಸೇರದಂತೆ ಒಡೆದ ಹೃದಯಗ್ರಂಥಿಯೂ ಮರಳಿ ಗುಣಗಳಂ ಸೇರಲಾರದು. ಆದರೆ, ಸಂಕಲ್ಪರೂಪವಾದ ಮನವೆಲ್ಲಿರುವುದೊ ಅಲ್ಲಿ ಅಲ್ಲಿ ಸ್ಮಶಾನದಲ್ಲಿ ಕಾಗೆಗಳಂತೆ ಆಶಾಪಾಶಗಳೆಲ್ಲವೂ ಸಿದ್ಧವಾಗುವುವು. ಜ್ಞಾನಿಗಳಿಗಾದರೋ ಮನವಿದ್ದಾಗ್ಯೂ ತತ್ತ್ವಜ್ಞಾನದಿಂದವರಿಗೆ ಸರ್ವಾತ್ಮಭಾವನೆ ಇರುವುದರಿಂದ ಸಂಸಾರಬೀಜವಾದ ಸಂಕಲ್ಪವುಂಟಾಗುವುದಿಲ್ಲವು.

ಪ್ರ—ಮನೋಜಯಕ್ಕೆ ಮುಖ್ಯ ಸಾಧನಗಳಾವವು?

ಉ—ಈ ಮನಸ್ಸು ಅಲೆಗಳಲ್ಲಿ ಕಿಲ್ಕಿದ ತರಗೆಲೆಗಳಂತೆ ಚಂಚಲವಾಗಿರುವುದು. ವಿಷಯಾನುರಕ್ತವಾದ ಚಕ್ಷುರಾದೀಂದ್ರಿಯಗಳಿಂದ ಅಂಗೈಯಿಂದ ಜೊಡೆಯಲ್ಪಟ್ಟ ಚಿಂಡಿನಂತೆ ಹಾರುತ್ತಿರುವದು. ಇಂದ್ರಿಯವೃತ್ತಿಮಯವಾದ ಸೋಪಾನಗಳನ್ನೇರುವಂತೆ ಹಿಂದಣಿಂದ ಬಿಡುತ್ತಾ ಮುಂದಕ್ಕೆ ಜೋಗುತ್ತಿರುವುದು. ಮತ್ತು ಯಾವುದರಿಂದ ಹಿಂತಿರುಗಿಸಲ್ಪಡುವದೋ ಅದನ್ನೇ ಅತಿ ಮೂರ್ಖನಂತೆ ಪಿಡಿಯುತ್ತಿರುವದು. ಇಂತಹ ಅಘಟಿತಘಟನಾಸಾಮರ್ಥ್ಯವುಳ್ಳ ಮನೋಜಯಕ್ಕೆ ಅಧ್ಯಾತ್ಮಜ್ಞಾನ, ಸತ್ಸಂಗ, ಪ್ರಾಸನಾತ್ಯಾಗ, ಪ್ರಾಣನಿರೋಧಗಳೇ ಸಾಧನಗಳಾಗಿರುವವು ಈ ಸಾಧನಗಳಿಂದ ಜಲಧಾರೆಗಳಿಂ ಭೂಮಿಯ ಧೂಳಿಯಂತೆ ಚಿತ್ತ ವಣಗುವದು

ಪ್ರ—ಜೀವಪಶುವಿನ ಲಕ್ಷಣವೇನು?

ಉ—ಅತಿಭಯಂಕರವಾದ ಈ ಜಗತ್ತೆಂಬ ಮಹಾರಣ್ಯದಲ್ಲಿ ಕಾಮನೆಂಬ ಮುಗುದಾಡಿಂದಲೂ, ವಾಸನೆಗಳೆಂಬ ಕೌದಿಯಿಂದಲೂ, ಮಮಕಾರವೆಂಬ ಕುತ್ತಿಗೆಯ ಸಂಕೋಲೆಗಳಿಂದಲೂ, ಅಹಂಕಾರವೆಂಬ ಸ್ವರೂಪದಿಂದಲೂ, ಧರ್ಮಾಧರ್ಮ ವಿಶ್ವರ್ಯಾನೈಶ್ವರ್ಯಗಳೆಂಬ ವಾದಗಳಿಂದಲೂ, ಜ್ಞಾನಾಜ್ಞಾನಗಳೆಂಬ ಬಾಲಮುಖಗಳಿಂದಲೂ, ರಾಗದ್ವೇಷಗಳೆಂಬ ಕೋಡುಗಳಿಂದಲೂ, ಕೂಡಿಕೊಂಡು ದೂಪಯುಕ್ತವಾಗಿ ಭೋಗಗಳೆಂಬ ಹುಲ್ಲನ್ನುತಿನ್ನುತ್ತ ಜರೆಯೆಂಬರೋಗದಿಂದ ಜಡವಾಗಿ ನಿಟ್ಟುಸುರುಗಳಂ ಬಿಡುತ್ತ ಜಗದ್ವ್ಯಾಪಾರಿಯಾದ ಮನಸ್ಸಿಗೆ ಅಧೀನವಾಗಿ ದುಷ್ಕರ್ಮವೆಂಬ ಸೂರ್ಯನ ವ್ಯಸನಸಂತಾಪದಿಂದ ತಪ್ತವಾಗಿ ಇಂದ್ರಿಯಗಳೆಂಬ ಬಾಲಕರಿಂದ ವಿಷಯಗಳಲ್ಲಿ ಸೆಳೆಯಲ್ಪಡುತ್ತ ವಿವೇಕ ವಿಚಾರರೂಪವಾದ ಸನ್ಮಾರ್ಗವನ್ನೂ, ಶಾಂತಿಯೆಂಬ ನೆರಳನ್ನೂ, ಕಾಣದೆ ಸರ್ವಕಾಲಗಳಲ್ಲೂ ಕ್ಷುತ್ಪಿಪಾಸೆಗಳಿಂದಲೂ, ದುರ್ವ್ಯಾಪಾರಗಳಿಂದಲೂ, ಭೋಗ್ಯವಸ್ತುಗಳ ಭಾರದಿಂದಲೂ ಶ್ರಮಪಡುತ್ತ ನಿತ್ಯ ದುಃಖಿಯಾದ ಜೀವನೆಂಬ ಪಶುವು ಮೋಹವೆಂಬ ಕೆಳೆರಿನ ಹಳ್ಳದಲ್ಲಿ ಬಿದ್ದಿರುವದು. ಆದರೆ ನಾವಿಕನಿಂದ ನಾವೆಯಂತೆ ಸಂಸಾರತಾರಕವಾದ ತತ್ತ್ವಜ್ಞಾನದಿಂದ ಚಿತ್ತವು ನಷ್ಟವಾಗುವಲ್ಲಿ ಅಹಂಕಾರಸ್ವರೂಪವು ಹೋಗಿ ಪರಿಹರಿದ ಹಾವಿನಂತೆ ಜೀವನು ಶುದ್ಧನಾಗಿ ಮುಕ್ತಿ ಪಡೆವನು.

ವೀರಶೈವಗರ್ಜನ ಖಾಸ್ ಅಂಕ ಗುರುಬೋಧ.

ಬರುವ ವಿಜಯದಶಮಿಗೆ ೭ ವಳನೇವರ್ಷದ ಆರಂಭವಾಗವದು. ಈ ಅಂಕವು ಅತ್ಯಂತೋದಾತ್ತ ಆಕರ್ಷಕ ಮತ್ತು ಸಂಗ್ರಾಹ್ಯವಾಗಿ ಹೊರಡುವದಿದ್ದು ಅದರಲ್ಲಿ ಅನೇಕ ವಿದ್ವಾಂಸರ ಶಾಸ್ತ್ರಿಗಳ ಮತ್ತು ಪಂಡಿತರ ಲೇಖನಗಳು ಬರತಕ್ಕವುಗಳಿದುತ್ತವೆ. ಅದು ಸರ್ವರಿಗೂ ಅತ್ಯಂತೋಪಯುಕ್ತಗ್ರಂಥವಾಗುವದಿದ್ದು ವರ್ಗಣಿದಾರರಿಗೆ ಇರುವ ವರ್ಗಣಿಯಲ್ಲಿಯೇ ದೊರೆಯುವದು. ಯಾವ ವರ್ಗಣಿದಾರರಿರುವದಿಲ್ಲವೋ ಅವರು ಇದೇ ದಿನದಲ್ಲಿಯೇ ವರ್ಗಣಿದಾರರಾಗಿರಿ. ವರ್ಗಣಿದಾರರ ಹೊರತು ಇತರರಿಗೆ ಈಅಂಕದ ಬೆಲೆಯು ನಾಲ್ಕಾಣೆಯಾಗುವದು

ಪೋಸ್ಟೇಜ್ ಖರ್ಚು ಬೇರೆ.

ಮ್ಯಾನೇಜರ, ವೀರಶೈವಗರ್ಜನ,
ಬಾರ್ಶಿಟರ್ವ ಲೋಖಂಡಗಲ್ಲಿ.
ಫರ ನಂಬರ, ೧೪೨೨.

ಮಲೆಜ್ವರಕ್ಕೆ ಮಲೇರಿಯಾನ ಇದು ಮಲೆಜ್ವರ, ಚಳಿಜ್ವರ, ದಿನಬಿಟ್ಟು ಬರುವಜ್ವರ, ೩ ನ ೪ ದಿವಸಕ್ಕೊಮ್ಮೆ ಬರುವಜ್ವರ, ಕ್ವಿನೇನ್‌ನಿಂದಲೂ ಇಂಜಕ್ಷನ್‌ನಿಂದಲು ಬಿಡದಿರುವ ಜ್ವರವನ್ನು ಗಿತ್ತೆ ಸನೇತ ಸಂಪೂರ್ಣ ಗುಣಪಡಿಸುತ್ತದೆ. ೪ ಔನ್ಸ್ ಸೀಸೆಗೆ ಆಣೆ 0-14-0, 8 ಔನ್ಸ್ ಸೀಸೆಗೆ ರೂ. 1-8-0, ಡಜನಿಗೆ ರೂ. 9-12-0, ರೂ. 16-8-0.

ಕಂಪೌಂಡ್ ಸಿರಪ್ ಸಾಲಸೆವನ—ಸ್ವಸ್ಥೇಂದ್ರಿಯ. ಸ್ಖಲನ, ಶೀಘ್ರಸ್ಖಲನ, ಧಾತುಕಳಕೊಳ್ಳುವದು, ಮೂತ್ರದೊಡನೆ ನಪ್ಪನಾಗುವದು, ವೀರ್ಯಕ್ಷಯ, ತೆಳ್ಳಗಾದಧಾತು, ನಿನ್ನಿಲ್ಲದ ಬುಡವನ್ನು ಕಿತ್ತು ಬಿಸಾಡುವದಲ್ಲದೆ ಧಾತುಪುಷ್ಟಿ, ರಸಾಯನ ವಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0.

ಪ್ರಖ್ಯಾತಿಪಟ್ಟ ನಮನೆ ಎಕ್ಕೆಪಿಲ್ಲರ್ ಬಿಲ್ಲೆಗಳು—ಸಕಲತರದ ಹೊಟ್ಟೆಹುಳುಗಳನ್ನು ನಾಶಪಡಿಸಿ ಬಾಧಿಸುವದರಲ್ಲಿ ಮುಖ್ಯ ದೆಷಧಿ. ಡಜನ್ನಿಗೆ ಆ. 9-5-0 ನೂರರ ಬಾಟ್ಲಿಗೆ ರೂ. 2-0-0.

ಕಂಪೌಂಡ್ ಸಿರಪ್ ಬ್ಲಾಟಿ—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇವಸ, ಖಾಸನನ್ನು ಖಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ 3.8-0, ರೂಪಾಯಿ 1.14.0.

ಬೇಬಿ ಟೋರ್—ಬಾಲ್ಯಾವಸ್ಥೆಯಲ್ಲಿ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ತಾವು ರೆಗ್ರತೆಗೆ ರೋಗದಿಂದ ಮಾಂಸ ಜೋಲುಬಿದ್ದು, ಮೈ, ಕೈ, ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ—

ಸೀಸೆಗೆ ರೂಪಾಯಿ 1-4-0

ಕಂಪೌಂಡ್ ಸಿರಪ್ ವೆಸಿಳೂಜ—ಪ್ರಮೇಹ, ಮೂತ್ರಾಶಯದಿಂದ ದುರ್ವಾಸನೆಯ ಕೀವು, ಮೂತ್ರಹೊಯ್ಯುವಾಗ ತನೆಯಾಪಾದ ಕರಿಣ ಉರಿ, ಮೂತ್ರಕೃಚ್ಛ್ರ, ಮೂತ್ರ ಅಗ್ಗಿ ಬಾದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು. ಇವೇ ಮೊದಲಾದ ಸ್ತ್ರೀಮೇಹದ ಲಕ್ಷಣಗಳ ಬುಡವನ್ನು ಕೆಲವು ತಾಸುಗಳಲ್ಲಿ ರಾಮಬಾಣದಂತೆ ನಿಲ್ಲಿಸುವದು.

ಸೀಸೆಗೆ ರೂ. 3-8-0, ರೂ. 1-14-0

ಶುದ್ಧ ಟಕ್ಕು, ಹೊಗ್ಗೊಪಥಿ ದೆಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುವರ್ಗದ ಮತಕ್ಕೆ ಸೇರಿದಾದ ಶಿಷ್ಯರ ಮನೆಗಳಿರುತ್ತಿದ್ದು, ಆ ಮತಾಧಿಕಾರಿಗಳು ಒಮ್ಮೊಮ್ಮೆಯೋ ಹತ್ತು ವರ್ಷಗಳಿಗೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮತದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ಪದವು ಚಿಹ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಉಪಯೋಗಿಸದಲ್ಲದಿದ್ದಲ್ಲಿ ಅವರವರನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬರುವ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಯಾವುದೇ ಕಾಗದಗಳನ್ನು ಉಪಯೋಗಿಸುವಷ್ಟಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೂಕ	ಮತಿಲ್ಯ
ಸ್ವರ್ಣಾನುಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ನೇ ನಂಬರ್	೧	೬—೦—೦
ಸಹಸ್ರಸಿಂಧೂರ	೧	೨—೦—೦
ಸುವರ್ಣಸಿಂಧೂರ	೧	೪—೦—೦
ಮೌಕ್ತಿಕಸಿಂಧೂರ	೧	೪—೦—೦
ರಜತಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ರಜತವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ವೈಕ್ರಾಂತಭಸ್ಮ	೧	೦-೧೫—೦
ಪಿಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಮಾಕ್ಷಿಕಭಸ್ಮ	೧	೦—೮—೦
ಪಂಚಸಭಸ್ಮ	೧	೦—೮—೦
ಸೀಸಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಧಭಸ್ಮ	೧	೦-೧೫—೦
ಪ್ರವಳಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಶಂಖಭಸ್ಮ	೧	೦—೮—೦
ಕಾರಂಗದ ಕೋಡಿನ ಭಸ್ಮ	೧	೦—೮—೦
ಅಜದಂತಿಶರಶಾಲಭಸ್ಮ	೧	೦—೮—೦
ಸುವರ್ಣಸೂರಿ (೧ನೇ ನಂಬರ್)	೧	೫೦—೦—೦
ಸುವರ್ಣಸೂರ್ಯಪುಟಿ	೧	೧—೦—೦
ರಜತಸೂರ್ಯಪುಟಿ	೧	೦—೮—೦

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರವಾದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲು ಮೊದಲಾದ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,
ಪೋಸ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರೀಕ್ಷಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವಿಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ್ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿವಾದ್ವೈತವೆಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ವ್ಯಾಘ್ರನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡಿಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರವಾಗಿ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿದೆಯೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್.—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಸ್ಪುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಶಿಷ್ಠ, ವ್ಯಾಸ, ಸಾನುಪ, ಮೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ... ೦—೧—೬

ಸತ್ಯೇ ಪೀಠಾರೋಹಣಮಾಡಿರತಕ್ಕ ಏಕರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ .. ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ... ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ನೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮಮಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ... ೦—೦—೯

ಶ್ರೀಮನ್ಮೃಂಛಾಪುರೀ ಸೀಹಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ... ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸ್ಥಳಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ . . ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಸುಹಾವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .. ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಿದದ ಸುಂದರ ಫೋಟೋ ೧ಕ್ಕೆ .. ೦—೦—೯

ಶ್ರೀ ಜಗದ್ಗುರು ಕೇದಾರೇಶ್ವರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ . ೦—೦—೯

ಶ್ರೀ ಜಗದ್ಗುರು ಕೇದಾರನಾಥಸಂಸ್ಥಾನ ಧರ್ಮಪೀಠದ ಸುಂದರ ಫೋಟೋ ... ೦—೦—೯

ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ... ೦—೦—೯

ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಷ್ಟ ಸಲ್ಲಕ್ಕಿಮಹೋತ್ಸವದ ಫೋಟೋ ... ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ. * ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನ ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ ಗಳನ್ನು ಕೊಟ್ಟಿರು. ಪ್ರಸಿದ್ಧವಾದ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯ ಗಳು ಯಾವವೆ ರೆ:—ಪೀನಸಿ, ಒಟ್ ತಲೆನೋವು, ತಲೆ ಲ್ಲಿಯ ರೋಗಗ ಕಣ್ಣುಗಳಲ್ಲಿ ಉಂ ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹಜ್ಯೋತಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾವಿನ ಸೀಸೆ ಪ್ರಗಸಟ್ಟೆ ಕಳುಹಿಸಲಾಗುತ್ತಿತ್ತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ತಪ್ಪಲ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[19] ಪೋ. ಬಾ. ೫೧೦, ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೨ ಆಣೆ

ಗೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ

ವೀರಲಿಸಿದ್ಧೇಶ್ವರಸ್ತೋತ್ರ .... ೧ ಆಣೆ

ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ

ಪಂಚನಿಂಶತಿ ಪ್ರಶ್ನಿಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ

ಶ್ರೀಸಂಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .... ೧ ಆಣೆ

ಬಸವಾದಿನಿಜತತ್ತ್ವಾರ್ಪಣ (೮ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯರತತ್ತ(೨ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ .... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯರತಕ .... ೨ ಆಣೆ

ವೀರಶೈವಮತವಿಮಾರ್ಶಾ .... ೩ ಆಣೆ

ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... .. ೪ ಆಣೆ

A brief life sketch of Pandit Sri Kashinatha Shastriji (*English*) 4 As.

ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ) .... ೬ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಕೈಜ.) .... ೬ ಆಣೆ

ವೀರಶೈವಮಹಾತ್ಮರು .... ೮ ಆಣೆ

ಬಸವಧ್ವಾಂತನಿವಾರಕರ (೩ನೆಯ ಆವೃತ್ತಿ) .... ೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ೮ ಆಣೆ

Speeches by Pandit Shri Kashinatha Shastri (*English*) 12 As.

ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) .... ೧೨ ಆಣೆ

ಶಿವಾಪ್ಪೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ) .... ೮ ರೂ

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ

ವೀರಶೈವಸಿದ್ಧಾಂತಸುಧಾಕರ .... ೨ ರೂ

ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .... .. ೧ ರೂ

ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ

ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ

ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) ... . ೧೨ ಆಣೆ

ಶಿಖಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ

ವೀರಶೈವಧರ್ಮ (ಮರಾಠಿ) ... ... ೬ ರೂ

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ–ಸಂಸ್ಕೃತ) ... ೬ ರೂ

ವೀರಶೈವೇಂದುಶೇಖರ (ಸಂಸ್ಕೃತ) ... ... ೬ ರೂ

ನಂದಿಕೇಶ್ವರಕಾರಿಕಾ (ಸಂಸ್ಕೃತ) ... .. ೨ ಆಣೆ

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ... ... ೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೧೦ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನ ಮಹಾವಿದ್ವಾನ್ ವೀ॥ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾನ್ ವೇ॥ ತಿರಸಿ ಗುರುಶಾಂತಶಾಸ್ತ್ರಿಗಳು.

ವರ್ಷದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೪ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೫ ನೇ ಸೆಪ್ಟೆಂಬರ್ ೧೯೩೭ [ಸಂಚಿಕೆ ೧೮

ಶ್ರೀಕರಭಾಷ್ಯಂ

(ಚತುಸ್ಸೂತ್ರೀ)

ಶ್ರೀಪತಿಪಂಡಿತಾರಾಧ್ಯರು ಕ್ರಿ. ಶ. ೧೧ನೆಯ ಶತಮಾನದಲ್ಲಿ ಬ್ರಹ್ಮಸೂತ್ರಗಳ ಮೇಲೆ ವೀರಶೈವಮತ ರವಾಗಿ ಭಾಷ್ಯವನ್ನು ರಚಿಸಿರುವ ವಿಷಯವು ಜಗತ್ಪ್ರಸಿದ್ಧವೇ ಆದೆ. ಈ ಭಾಷ್ಯವು ಈ ಮೊದಲು ಮದ್ರಾಸ್, ಮೈಸೂರು, ಬೆಂಗಳೂರು ನಗರಗಳಲ್ಲಿ ಮುದ್ರಿತವಾಗಿರುವದು. ಆದರೆ ಮುದ್ರಾಪಕರಿಗೆ ವೀರಶೈವಸಿದ್ಧಾಂತಸ್ವರೂಪವು ರಿಯಾಗಿ ತಿಳಿಯದೆ ಇರುವದರಿಂದ ಅವರು ಮುದ್ರಿಸಿದ ಭಾಷ್ಯಗಳು ಅನಂತಾನಂತ ತಪ್ಪುಗಳಿಂದ ಕೂಡಿಹೋಗಿವೆ. ೀರಶೈವಮತಕ್ಕೆ ಪ್ರಾಣಸ್ವರೂಪವಾಗಿರುವ ಈ ಭಾಷ್ಯವನ್ನು ಅತ್ಯಂತಶುದ್ಧವಾಗಿ ಮುದ್ರಣಮಾಡಿಸಿ ಈ ತೀಯರಿಗೆ ಉಪಕಾರವನ್ನು ಮಾಡಬೇಕೆಂದು ಬಹುಜನ ಮಹಾಭಿಮಾನಿಗಳು ಪ್ರಾರ್ಥಿಸಿಕೊಂಡ ಮೇರೆಗೆ **ಾಗನೂರುಬೃಹನ್ಮಠಾಧ್ಯಕ್ಷರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಈ ಭಾಷ್ಯವನ್ನು ಕೂಲಂಕ ವಾಗಿ **ಪರಿಶೋಧಿಸಿ** ಯಾವ ದೋಷಾದಿಗಳೂ ಇಲ್ಲವೆಂತೆ ಸುದ್ರಿಸಿದ್ದಾರೆ. ಸರ್ವಃ ಪತಸ್ಸೂತ್ರಿಯು ಮುದ್ರಿತ ಾಗಿದೆ. ಮುಂದೆ ಕ್ರಮೇಣ ಸಂಪೂರ್ಣಭಾಷ್ಯವು ಮುದ್ರಿಸಲ್ಪಡುವುದು. ಮತಸಿದ್ಧಾಂತವೆಲ್ಲವೂ ಚತುಸ್ಸೂತ್ರಿ ುಲ್ಲಿಯೇ ಪ್ರತಿಪಾದಿತವಾಗುವದರಿಂದ ಪ್ರತಿಯೊಂದು ವೈದಿಕಮತದಲ್ಲಯೂ ಚತುಸ್ಸೂತ್ರೀಭಾಷ್ಯಾಭ್ಯಾಸವೇ ುಖ್ಯವಾಗಿದೆ. ಆದುದರಿಂದಲೇ ಪಂಡಿತರು ಮೊದಲು ಚತುಸ್ಸೂತ್ರೀಭಾಷ್ಯವನ್ನು ಮುದ್ರಿಸಿರುವರು. ಭಾಷ್ಯದಲ್ಲಿ ುದಾಹೃತವಾಗಿರುವ ಸಮಸ್ತ ವೇದಮಂತ್ರಗಳಿಗೂ ಅಕರವು ಕೊಡಲ್ಪಟ್ಟಿರುವದು. ಭಾಷ್ಯದ ಅದಿಯಲ್ಲಿ ವಿಷಯಾ ುಕ್ರಮಣಿಕೆಯು ಮುದ್ರಿಸಲ್ಪಟ್ಟಿರುವದರಿಂದ ವಿಷಯವಿಚಾರಶೀಲರಿಗೆ ಬಹಳ ಅನುಕೂಲವಾಗಿರುವದು. ಈ ಭಾಷ್ಯವು ುನೋಹರವಾಗಿ ಮುದ್ರಿಸಲ್ಪಟ್ಟಿದ್ದು, ಸುಂದರವಾದ ಬೈಂಡಿನಿಂದ ಕೂಡಿರುವದು. ಪ್ರಾಚೀನ ವೀರಶೈವಮತಪ ುಧಾರ್ಧತತ್ತ್ವವನ್ನು ತಿಳಿಯಲಪೇಕ್ಷೆಯುಳ್ಳವರು ಈ ಭಾಷ್ಯವನ್ನು ಅವಶ್ಯವಾಗಿ ತರಿಸಿಕೊಂಡು ವಿದ್ವಾಂಸರ ುಖದಿಂದ ನಿಜತತ್ತ್ವವನ್ನು ತಿಳಿದು ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧ ರೂಪಾಯಿ.**

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ.

ಶ್ರೀಕರಭಾಷ್ಯವನ್ನು ರಚಿಸಿರುವ ಶ್ರೀಪತಿಪಂಡಿತಾರಾಧ್ಯರು ಕ್ರಿ. ಶ. ೧೧ನೆಯ ಶತಮಾನದಲ್ಲಿದ್ದರೆಂಬ ವಿಷಯವು ಅನೇಕ ಪ್ರಾಚೀನಗ್ರಂಥಗಳಿಂದಲೂ, ಶಿಲಾಶಾಸನಾದಿಗಳಿಂದಲೂ ಸಿದ್ಧವಾದುದಾಗಿದೆ. ಹೀಗಿದ್ದರೂ ಂಗಳೂರು ನಗರನಿವಾಸಿಗಳಾದ ರಾವ್‌ಸಾಹೇಬ ಸಿ. ಹಯವದನರಾಯರೆಂಬವರು ಈ ಭಾಷ್ಯದ ಮೇಲೆ ಇಂಗ್ಲೀಷಿ ಲ್ಲಿ ಬರೆದಿರುವ ಇಂಟ್ರೆಡಕ್ಷನ್ನಿನಲ್ಲಿ ಇವರು ೧೪ನೆಯ ಶತಮಾನದಲ್ಲಿದ್ದರೆಂದು ಬರೆದು ಜಗತ್ತಿನ ಜನರಿಗೆಲ್ಲಾ ಮಹಾ ುನೆಯನ್ನುಂಟುಮಾಡಿದ್ದಾರೆ. ರಾಯರು ಬರೆದಿರುವ ಈ ವಿಧವಾದ ಅಯಥಾರ್ಥಾಭಿಪ್ರಾಯವನ್ನು ವೇ॥ ಪಂಡಿತ ಕಾಶೀನಾಥಶಾಸ್ತ್ರಿಗಳವರು ಅನೇಕಾನೇಕಪ್ರಮಾಣಗಳಿಂದ ಆಮೂಲಾಗ್ರವಾಗಿ ಖಂಡಿಸಿ, ವೀರಶೈವಮತಕ್ಕೂ ಕರಭಾಷ್ಯಕ್ಕೂ ಅಸಾಧಾರಣವಾದ ಗೌರವವನ್ನುಂಟುಮಾಡಿದ ವಿಷಯವು ಈ ಪುಸ್ತಕದಲ್ಲಿ ಉಕ್ತವಾಗಿದೆ.

ಬೆಲೆ ೪ ಆಣೆ

A BRIEF LIFE-SKETCH OF PANDIT SRI KASHINATHA SHASTRIJI

This Book printed in English contains a brief life sketch of Pandit i Kashinatha Shastriji. It shows the very many good and memorable deeds ne by Sastriji up tili now. **Price per Copy 4 Annas.**

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶ್ರೀಮದ್ರಂಭಾಪುರೀ ಜಗದ್ಗುರುಪೀಠದ ಜೀರ್ಣೋದ್ಧಾರ ಫಂಡು.

ಶ್ರೀಮದ್ರಂಭಾಪುರೀ ವೀರಸಿಂಹಾಸನ ಮಠವು ಪ್ರಾಚೀನಕಾಲದ ಕಟ್ಟಡವಾಗಿದ್ದು ಜೀರ್ಣವಾಗುತ್ತ ಬಂದಿರುತ್ತದೆ. ಈ ಪೀಠಾಧಿಪತಿಗಳಾದ ಶ್ರೀಮದ್ಜಗ ದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿ ಗಳವರು ನೂತನ ಕಟ್ಟಡದ ಬಗ್ಗೆ ಕೆಲಸವನ್ನು ಪ್ರಾರಂಭ ಮಾಡಿಸಿರುತ್ತಾರೆ. ಸನಾತನ ವೈದಿಕ ಧರ್ಮಾಭಿಮಾನಿಗ ಳಾದ ಸರ್ವ ಆಸ್ತಿಕಮಹಾಜನರ ಉದಾರ ಸಹಾಯ, ಸಲಹೆ, ಸಹಾನುಭೂತಿಗಳನ್ನು ನಿರೀಕ್ಷಿಸಿ ಜೀರ್ಣೋ ದ್ಧಾರದ ನಿಧಿಯನ್ನು ಸಂಗ್ರಹಿಸಲು ಪ್ರಾರಂಭಿಸಿರುತ್ತದೆ. ಈ ಬಗ್ಗೆ ಶ್ರೀ ಮಹಾಸಂಸ್ಥಾನದ ವತಿಯಿಂದ ಪ್ರಚಾರ ಕಾರ್ಯಕ್ಕಾಗಿ ಶಿವಮೊಗ್ಗ ಶ್ರೀ ಯ. ಪುಟ್ಟವೀರಯ್ಯನ ವರು ನೇಮಿಸಲ್ಪಟ್ಟಿರುತ್ತಾರೆ. ಸರ್ವರೂ ಪ್ರೋತ್ಸಾಹಿಸಿ ಪುಣ್ಯಭಾಗಿಗಳಾಗಬೇಕೆಂದು ಹಾರೈಸುತ್ತೇವೆ.

ಏಜಂಟ್.

ಪಾದಪೂಜಾಮಹೋತ್ಸವ

ಶ್ರೀಮದ್ರಂಭಾಪುರೀ ಶಾಖಾಸೂತ್ರಾನುವರ್ತಿಗಳಾದ ಶ್ರೀ ಮಳಲಿಮಠದ ಪಟ್ಟಾಧ್ಯಕ್ಷ ಶ್ರೀ ಗುರುನಾಗಾ ರ್ಜುನಶಿವಾಚಾರ್ಯಸ್ವಾಮಿಗಳವರು ತಾ॥ ೧೯-೮-೩೭ನೇ ಶುಕ್ರವಾರ ಧಾರವಾಡ ಡಿ॥ ಹಾವೇರಿ ತಾ॥ ಹಂದಿಗ ನೂರು ಸಂಸ್ಥಾನದಲ್ಲಿ ತಮ್ಮ ಶಿಷ್ಯರಾದ ಶ್ರೀಮಂತ ಸರದಾರ ಬುಳ್ಳಪ್ಪನವರು ದೇಸಾಯಿ ಮತ್ತು ಅವರ ಅನುಜರಾದ ದೊಡ್ಡ ಮುರಿಗಪ್ಪನವರು, ಸಣ್ಣ ಮುರಿ ಗಪ್ಪನವರು, ರೇವಪ್ಪ ಬಸವಂತರಾವನೇಸಾಯಿ, ಸಂ॥ ಹಂದಿಗನೂರು ಇವರಲ್ಲಿಗೆ ದಯಮಾಡಿಸಿದರು. ತಾ॥ ೨೨-೨೩-೨೪ನೇ ಸೋಮವಾರ, ಮಂಗಳವಾರ, ಗುರು ವಾರ ವಿವಸ ಎಲ್ಲ ಶಿಷ್ಯರ ಮನೆಗಳಲ್ಲಿಯೂ ಪಾದಪೂಜಾ ಸಮಾರಂಭವು ನಡೆಯಿತು. ೨೩ನೇ ಮಂಗಳವಾರ ಸಹಸ್ರ ಬಿಲ್ವಾರ್ಚನಪೂರ್ವಕ ಪಾದಪೂಜಾಸಮಾರಂಭವು ಶ್ರೀ ರೇವಪ್ಪ ಬಸವಂತರಾವ ದೇಸಾಯಿ ಇವರಲ್ಲಿ ಬಹು ವೈಭ ವದಿಂದ ನೆರವೇರಿತು. ಸದರಿ ಸಮಾರಂಭಕ್ಕೆ ಎಲ್ಲ ಮಂಡ ಳಿಯೂ ಕೂಡಿದ್ದು ಗಣಾರಾಧನೆಯು ನೆರವೇರಿಸಲ್ಪಟ್ಟಿತು. ಆಗ್ಗೆ ಸರ್ವರೂ ಶ್ರೀಗುರುಗಳವರಿಂದ ಆತೀರ್ವಾದವನ್ನು ಪಡೆದರು.

ಶಿವಬಸವಯ್ಯ ಹಿರೇಮಠ, ಹಂದಿಗನೂರು.

ಧಾರವಾಡದಲ್ಲಿ ಟೆಲಿಫೋ ಯಂತ್ರದ ತಯಾರಿ

ಕಲ್ಕತ್ತೆಯಲ್ಲಿರುವ ಇಂಡಿಯಾ ಸರ್ಕಾರದ ಟೆಲಿ ಗ್ರಾಫ್ ಕಾರ್ಖಾನೆಯಲ್ಲಿಯೇ ಇನ್ನು ಮುಂದೆ ಟೆಲಿಫೋ ಯಂತ್ರದ ಸಾಧನವನ್ನು ರಚಿಸುವ ವಿಚಾರವು ನಡೆಯು ವರು. 1939ನೇ ವರ್ಷ ಮಾರ್ಚಿತಿಂಗಳ ಕೊನೆಯ ವೇ ಳೆಗೆ ಸಾವಿರಾರು ಯಂತ್ರಗಳು ಸಿದ್ಧವಾಗುವವೆಂದು ತಿಳಿ ಯುತ್ತದೆ.

ಪಂಚಾಚಾರ್ಯಪ್ರಭಾ.

೧೯೩೭ ನೆಯ ಸೆಪ್ಟೆಂಬರ್ ತಾ॥ ೫ನೇ ಸೋಮವಾರ

ಗುರುವರ್ಗಕ್ಕೆ ವೈದಿಕವಿದ್ಯೆಯ ಆವಶ್ಯಕತೆ.

ವೇದವೇದಾಂತಪ್ರತಿಪಾದ್ಯವಾದೀ ವೀರಶೈವಮತದಲ್ಲಿ ಜನ್ಮವನ್ನು ಧರಿಸಿದವರಿಗೆ ದೀಕ್ಷಾಪೂರ್ವಕ ಶಿವಲಿಂಗವನ್ನನುಗ್ರಹಿಸಿ ಬ್ರಹ್ಮೋಪದೇಶವನಿಸಿಗಿ ಮುಕ್ತಿ ಮಾರ್ಗವನ್ನು ತೋರಿಸುವುದಕ್ಕಾಗಿ ಗುರುವರ್ಗವೊಂದು ಅನಾದಿಕಾಲದಿಂದ ಬಂದಿರುತ್ತದೆ. ಈ ಗುರುವಂಶವು ವೀರಶೈವಮತದಲ್ಲಿಲ್ಲದಿದ್ದರೆ ಇಲ್ಲಿ ಹುಟ್ಟಿದ ಪೀಳಿಗೆಗಳಿಗೆ ಶಿವಲಿಂಗವನ್ನು ಧರಿಸುವವರಾರು? ಮುಂದೆ ಶಿವದೀಕ್ಷೆಮಾಡುವವರಾರು? ವಿಧ್ಯುಕ್ತವಾಗಿ ಬ್ರಹ್ಮಚರ್ಯ ಗೃಹಸ್ಥಾದ್ಯಾಶ್ರಮಧರ್ಮಗಳನ್ನು ಬೋಧಿಸುವವರಾರು? ಪ್ರತಿಯೊಬ್ಬ ಲಿಂಗಾಂಗಿಗಳ ಗೃಹದಲ್ಲಿ ನಡೆಯಬೇಕಾಗಿರುವ ಗರ್ಭಾಧಾನಾದಿ ಷೋಡಶಸಂಸ್ಕಾರಗಳನ್ನೆಸಗುವ ಪೌರೋಹಿತ್ಯದ ಅಧಿಕಾರವನ್ನು ಸ್ವೀಕರಿಸುವವರಾರು? ಪ್ರಮಾದದಿಂದ ನಿಷಿದ್ಧಕಾರ್ಯಗಳನ್ನೆಸಗಿದವರನ್ನು ವಿಧ್ಯುಕ್ತವಾಗಿ ಪ್ರಾಯಶ್ಚಿತ್ತದಿಂದ ಶುದ್ಧಿಗೊಳಿಸುವವರಾರು? ಭಕ್ತರ ಮನೆಗಳಲ್ಲಿ ಕಾಲಾನುಸಾರವಾಗಿ ನಡೆಯುವ ಜನ್ಯಕನ್ಯಗಳನ್ನು ನೆರವೇರಿಸುವವರಾರು? ಇನ್ನೆಲ್ಲವೂ ಗುರುಗಳಿಂದಲೇ ನಿರ್ವಾಹವಾಗಬೇಕಾಗಿರುವುದರಿಂದ ಈ ಸಮಾಜಕ್ಕೆ ಗುರುವರ್ಗವದರಿಂದಾಗುವ ಮಹಾಪ್ರಯೋಜನವನ್ನು ಅಷ್ಟಿಷ್ಟೆಂದು ಹೇಳತೀರದು. ಅದಲ್ಲದೆ ಪೂರ್ವಕಾಲದಲ್ಲಿ ಲೌಕಿಕ ಪಾರಮಾರ್ಥಿಕಶಿಕ್ಷಣವೂ ಸಹ ಮತಾಧಿಪತಿಗಳಾದ ಗುರುವರ್ಗದಿಂದಲೇ ನಡೆಯುತ್ತಲಿದ್ದಿತು. ಅದಕ್ಕಾಗಿಯೇ ಊರೂರುಗಳಲ್ಲಿ ಗುರುಮಠಗಳು ರಚಿಸಲ್ಪಟ್ಟಿದ್ದವು. "ಮಠ ಶ್ಚಾತ್ರಾದಿನಿಲಯಃ" ಎಂದು ಅಮರಕೋಶಕಾರನು ಸಹ ಶಿಷ್ಯರು ಓದುವ ಮನೆಗಳಿಗೆ ಮಠವೆಂದು ಒಪ್ಪಿಗೆಯನ್ನು ಕೊಟ್ಟಿರುತ್ತಾನೆ. ಆದುದರಿಂದ ಗುರುವಂಶವು ವೀರಶೈವ ಮಹಾಪುರುಷನ ಹೃದಯಸ್ಥಾನವಾಗಿರುವದು ಈ ಗುರುವಂಶಕ್ಕೆ ಮೂಲಭೂತರಾದ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರು ವೀರಶೈವಸಮಾಜದ ಪಂಚಪ್ರಾಣಗಳಂತಿರುವರು. ಸೃಷ್ಟ್ಯಾದಿಯಲ್ಲಿ ಪಂಚಾಚಾರ್ಯರು ಭೂಲೋಕದಲ್ಲಿ ಅವತರಿಸದಿದ್ದರೆ ವೀರಶೈವಮತನೆಂಬ ಮಹಾಶಿಶುವು ಉತ್ಪತ್ತಿಯಾಗುತ್ತಲಿತ್ತೆ? ಶ್ರೀ ಪಂಚಾಚಾರ್ಯರು ಈ ಮತವೆಂಬ ಶಿಶುವನ್ನು ಉತ್ಪತ್ತಿಮಾಡಿ, ಅದಕ್ಕೆ ವೇದಾಗಮವೆಂಬ ದಿವ್ಯಾವೃತವನ್ನು ತೊಡಿಸಿ ತಾವು ಸಂಚಪ್ರಾಣದಂತೆ ಸದಾ ವಿಹರಿಸುತ್ತ ಬಂದಿರುವುದರಿಂದಲೇ ಈ ಮತವು ಸರ್ವತೋಮುಖವಾಗಿ ವಿರಾಜಿಸಹೆತ್ತ ಸನಾತನಮತಗಳೊಳಗೊಂದು ಪ್ರಧಾನ ಮತವೆನಿಸಿಕೊಂಡಿತು. ಸ್ವರ್ಗವಲ್ಲಿ ವಿಷ್ಣುಬ್ರಹ್ಮಾದಿ ದೇವತೆಗಳೂ ಭೂಲೋಕದಲ್ಲಿ ಪ್ರಸಿದ್ಧ ಮಹರ್ಷಿಗಳೂ, ಶಿವಲಿಂಗವನ್ನು ಧರಿಸಿಕೊಂಡು ತನ್ಮಹಾಪ್ರಾಕೃತತತ್ವವನ್ನು ಬಿಟ್ಟು ಅಪ್ರಾಕೃತಮಹಾವೈಭವವನ್ನು ಪಡೆದರೆಂದು ಶಿವಾಗಮಗಳು ಲಿಂಗಧಾರಣದ ಮಹತ್ವವನ್ನು ಪ್ರದರ್ಶಿಸಿರುವುವು. ಇಂಥ ಮಹಾವೈಭವದಿಂದ ಮೆರೆದ ವೀರಶೈವಮತವು ಈಗೀಕೆ ಅನಾಮಧೇಯವಾಯಿತೆಂದು ಆಲೋಚಿಸಿದರೆ ಭವರೋಗಮಹಾವೈದ್ಯನೆನಿಸಿರುವ ಆಚಾರ್ಯಪರಂಪರಾಗತಗುರುವಂಶವು ಹೀನಸ್ಥಿತಿಗೆ ಬಂದುದೇ ಕಾರಣನೆಂದು ಸ್ಪಷ್ಟವಾಗುತ್ತದೆ.

ಅಚಿನೋತಿ ಹಿ ಶಾಸ್ತ್ರಾರ್ಥಾನಾಚಾರೇ ಸ್ಥಾಪಯತ್ಯಪಿ ।
ಸ್ವಯಮಾಚರತೇ ಯಸ್ತು ಸ ಆಚಾರ್ಯ ಇತಿ ಸ್ಮೃತಃ ॥
ದದಾತಿ ಯಃ ಪತಿಜ್ಞಾನು ಜಗನ್ಯಾಯಾನವರ್ತಕಂ ।
ಅದ್ವೈತವಾಸನೋಪಾಯಂ ತಮಾಚಾರ್ಯವರಂ ವಿದುಃ ॥
ಯತ್ಸಾನ್ನಿಧ್ಯದರ್ಪಣಾಭೋಗೇ ನಿರ್ಮಲೇ ದೃಶ್ಯತೇ ಸದಾ ।
ನೋಕ್ಷಶ್ರೀರರ್ಚಿಂಬವೋಪೇಣ ಸಗುರುರ್ಭವತಾದರಃ ॥

ಯಾವನು ವೇದವೇದಾಂತಗಳನ್ನು ಪರಿಶೀಲಿಸುತ್ತ ತಾನೂ ಆದರಂತೆ ಆಚರಿಸುತ್ತ ಶಿಷ್ಯರನ್ನು ಸನ್ಮಾರ್ಗಗಾಮಿಗಳನ್ನಾಗಿ ಮಾಡುತ್ತ ಉಪದೇಶದಿಂದ ಶಿಷ್ಯರ ಪಶುಧರ್ಮವನ್ನು ತೊಲಗಿಸಿ ಮಾಯಾಪಾಶನಿವರ್ತಕವಾದ ಪತಿಧರ್ಮವುಳ್ಳವರನ್ನಾಗಿ ಮಾಡುವನೋ ಅವನೇ ಆಚಾರ್ಯಪದವಾಚ್ಯನಾಗುತ್ತಾನೆ.

ಯಾವ ಗುರುವಿನ ಸುಧಾಸ್ರಾವಿಯಾದ ವಚನಗಳಿಂಬ ನಿರ್ಮಲದರ್ಪಣದಲ್ಲಿ ಮೋಕ್ಷಲಕ್ಷ್ಮಿಯು ಬಿಂಬರೂಪದಿಂದ ಕಾಣಿಸಿಕೊಳ್ಳುವಳೋ ಅವನೇ ಭವತಾರಕನಾದ ಗುರುವು ಎಂದು ಆಚಾರ್ಯಶಬ್ದದ ಮತ್ತು ಗುರುಶಬ್ದದ ಮಹತ್ವವನ್ನು ಶ್ರೀರೇಣುಕಾಚಾರ್ಯರು ಋಷಿಪುಂಗವನಾದ ಅಗಸ್ತ್ಯಮಹರ್ಷಿಗೆ ಬೋಧಿಸಿರುತ್ತಾರೆ. ಗುರುವಂಶಸಂಭೂತರಾದ ಗೃಹಸ್ಥರಾಗಲಿ ಸಚ್ಚರಾಧಿಪತಿಗಳಾಗಲಿ ಎಲ್ಲರೂ ತಮ್ಮ ತಮ್ಮ ಮಕ್ಕಳಿಗನ್ನು ಅಧ್ಯಯನಕಾಲೆಗಳನ್ನಾಗಿ ಮಾಡಿ ಶಿಷ್ಯರಿಗೆ ಸದ್ಯೋಭೆಯನ್ನೂ ಸದಾಚಾರಗಳನ್ನೂ ಉಪದೇಶಿಸುತ್ತ ತಾವೂ ಆಚರಿಸುತ್ತ ಕಾಮಕ್ರೋಧಲೋಭಗಳನ್ನು ದೂರಮಾಡುತ್ತ ಶ್ರೀ ರೇಣುಕನಾಣತಿಯನ್ನು ಪಾಲಿಸುತ್ತ ಬಂದಿದ್ದರೆ ಮತವು ದರ್ಪಣದಂತೆ ಪ್ರಕಾಶಮಾನವಾಗುತ್ತಿತ್ತು. ಇತ್ತೀಚೆಗೆ ಗುರುವಂಶದವರು

"ತಸ್ಮಾದ್ಬ್ರಾಹ್ಮಣೇನ ನಿಷ್ಕಾರಣಂ ಷಡಂಗೋ ವೇದೋಽಧ್ಯೇಯೋ ಜ್ಞೇಯಶ್ಚ"

ಬ್ರಾಹ್ಮಣನು ಯಾವ ಪ್ರಯೋಜನವಿಲ್ಲದಿದ್ದರೂ ಸಾಂಗವೇದಾಧ್ಯಯನಮಾಡಬೇಕೆಂದೂ, ಅವುಗಳ ಅರ್ಥವನ್ನು ಚನ್ನಾಗಿ ಮನನಮಾಡಬೇಕೆಂದೂ ಪತಂಜಲಿ ಮಹಾಭಾಷ್ಯಕಾರರು ಹೇಳಿರುವಂತೆ ಗುರುವಂಶದಲ್ಲಿ ಹುಟ್ಟಿದವರು ವೇದವೇದಾಂಗಾದಿ ವೈದಿಕವಿದ್ಯೆಯನ್ನೋದಿ ಶಿಷ್ಯರಿಗೆ ಬೋಧಿಸುವುದೊಂದೇ ತಮ್ಮ ಜೀವಮಾನವ ಕರ್ತವ್ಯವೆಂಬುದನ್ನು ಮರೆತು ಲೌಕಿಕರಂತೆ ಬಹಿರಾಡಂಬರಗಳಲ್ಲಿ ಲೋಲರಾಗುತ್ತ ಬಂದರು.

ಯಥಾ ಗುರುಸ್ತಥಾ ಶಿಷ್ಯೋ ಯಥಾ ರಾಜಾ ತಥಾ ಪ್ರಜಾ ॥

ರಾಜರು ಎಷ್ಟರಮಟ್ಟಿಗೆ ನೀತಿವಂತರಾಗಿ ನ್ಯಾಯಾರ್ಜಿತವಾಗಿ ಧರ್ಮಾರ್ಥಕಾಮಮೋಕ್ಷಪುರುಷಾರ್ಥಗಳನ್ನು ಬಯಸುವರೋ ಅಷ್ಟರಮಟ್ಟಿಗೆ ಪ್ರಜೆಗಳೂ ಸಹ ಸುಶಿಕ್ಷಿತರಾಗುವರು. ಗುರುಗಳು ಎಷ್ಟರಮಟ್ಟಿಗೆ ತತ್ತ್ವನೇತ್ರರಾಗುವರೋ ಶಿಷ್ಯರೂ ಸಹ ಅಷ್ಟರಮಟ್ಟಿಗೆ ತತ್ತ್ವನೇತ್ರಗಳಾಗುತ್ತಾರೆಂಬ ನೀತಿವಚನವನ್ನು ಮರೆತರು. ಗುರುವಂಶೀಯರು ಇನ್ನಾವರೂ ತಾವು ಲೌಕಿಕವ್ಯಾಪಾರದಿಂದ ಹಿನ್ಮೆಟ್ಟಿ ವೈದಿಕವಿದ್ಯೆಯನ್ನು ಕಲಿತು ಸದಾಚಾರಸಂಪನ್ನರಾಗಿ ಮಂತ್ರಸಿದ್ಧಿಯನ್ನು ಪಡೆದು ತಮ್ಮ ತಮ್ಮ ಶಿಷ್ಯರಿಗೆ ಬೋಧಿಸುತ್ತ ಬಂದರೆ ನಾವೋನ್ನುಖವಾಗಹೆತ್ತಿರುವ ಗುರುಶಿಷ್ಯ ಭಾವವು ಪುನಃ ಚೇತರಿಸಿಕೊಳ್ಳುವದು. ಪರಮಪವಿತ್ರವಾದ ಗುರುತ್ವಾಧಿಕಾರವನ್ನು ನಿರ್ವಹಿಸಬೇಕಾದರೆ ದೈವೀ ಶಕ್ತಿಯನ್ನು ಪಡೆಯಲೇ ಬೇಕು. ಇದು ಎಂದು ಸಿದ್ಧಿಸುವುದೋ ಅಂದೇ ಶಿಷ್ಯರು ಧನ್ಯರಾಗುವರು. ಜಗದಾಚಾರ್ಯರ ಅನುಗ್ರಹದಿಂದ ಗುರುವರ್ಗವು ಅಭಿವೃದ್ಧಿಯನ್ನು ಹೊಂದಲೆಂದಾಶಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ದಸರಾ ಮಹೋತ್ಸವವು ಈ ವರುಷ ಶಿವಮೊಗ್ಗಾ ಡಿ॥ ಸಂತೆಬೆನ್ನೂರು ಗ್ರಾಮದಲ್ಲಿ ನೆರವೇರುವುದೆಂದು ತಿಳಿದುಬರುತ್ತದೆ.

ಚಿತ್ರದುರ್ಗದಲ್ಲಿ ೩೦ ನೆಯ ತಾರೀಖಿನ ದಿವಸ ಇಬ್ಬರು ಕುರಿ ಕಾಯುವ ಹುಡುಗರು ಕೋಟೆಯ ಗೋಡೆಯ ಒಂದು ಕಲ್ಲಿನಮೇಲೆ ನಿಂತಿರುವಾಗ ಅಕಸ್ಮಾತ್ ಕಲ್ಲು ಉರುಳಿ ಕೆಳಗೆ ಬಿದ್ದಿತು. ಇದರಿಂದ ಒಬ್ಬನು ಮಡಿದನು. ಮತ್ತೊಬ್ಬನಿಗೆ ಭಯಂಕರ ಗಾಯುಗಳಾಗಿವೆ ಎಂದು ತಿಳಿದುಬರುತ್ತದೆ.

ಕಳೆದ 27ನೆಯ ತಾರೀಖಿನ ದಿವಸ ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ಲಿನ ಕೂಟವು ರಾಜಕಾರ್ಯಪುರೀಣ ಮಾ॥ ರಾ॥ ಎ. ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆದಾಗ, ವಿಶ್ವವಿದ್ಯಾನಿಲಯದ ಇಂಟರ್ಮೀಡಿಯಟ್ ತರಗತಿಗಳಲ್ಲಿ ಲಾಟಿ ಮತ್ತು ಫ್ರೆಂಚ್ ಭಾಷೆಗಳನ್ನು ವಿಚ್ಛೇದಕಭಾಷೆಗಳನ್ನಾಗಿ ಬೋಧಿಸಬಹುದೆಂದು ತೀರ್ಮಾನವಾಯಿತು.

ಕಳೆದ 28ನೆಯ ತಾರೀಖಿನ ದಿವಸ ನಡೆದ ಮೈಸೂರು ಪೌರಸಭೆಯ ಅಧಿವೇಶನದಲ್ಲಿ ಶ್ರೀ ಟಿ. ಮರಿಯಪ್ಪನವರು ಬೈಸಿಕಲ್‌ಗಳಮೇಲೆ ಈಗ ವಸೂಲು ಮಾಡುತ್ತಿರುವ 3 ರೂಪಾಯಿ ತೆರಿಗೆಯನ್ನು 2 ರೂಪಾಯಿಗಳಿಗಿಳಿಸಬೇಕೆಂದು ತಂದ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಮೈಸೂರು ದೇವರಾಜ ಮಾರ್ಕೆಟ್ಟಿನಲ್ಲಿ ಕಕ್ಕಸನ್ನು ಕಟ್ಟಿಸಿದ್ದರೂ ಮಾರ್ಕೆಟ್ಟಿನಲ್ಲಿರುವ ಸ್ತ್ರೀಯರಿಗೆ ಅದರಿಂದ ಯಾವ ಪ್ರಯೋಜನವೂ ಆಗಿಲ್ಲವೆಂದೂ ಕಕ್ಕಸುಗಳೆಲ್ಲ ಗಂಡಸರ ಪಾಲಾಗಿ ಸ್ತ್ರೀಯರಿಗೆ ಬಹಳ ತೊಂದರೆಯಾಗಿದೆಯೆಂದೂ, ಮಾರ್ಕೆಟ್ಟಿನಲ್ಲೇ ಬಹುಮಂದಿ ಸ್ತ್ರೀಯರು ಇರುತ್ತಾರಾದ್ದರಿಂದ ಅವರಿಗೆ ಪ್ರತ್ಯೇಕ ಸ್ಥಳವನ್ನು ಕಲ್ಪಿಸುವುದು ಅತ್ಯಗತ್ಯವೆಂದೂ ಈ ಸೌಕರ್ಯದಿಂದ ಸಮೀಪದ ಗಲ್ಲಿಗಳೆಲ್ಲ ಗಲೀಜಾಗಿ ಹೋಗಿವೆಯೆಂದೂ ಶ್ರೀ ಎಸ್. ರಂಗಣ್ಣಯ್ಯನವರು ಪೌರಸಭಾಧ್ಯಕ್ಷರಿಗೆ ಮಾಡಿದ ಪ್ರಾರ್ಥನೆಯನ್ನು ಅಧ್ಯಕ್ಷರು ಅಂಗೀಕರಿಸಿದರೆಂದು ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

ಗಡಿಪ್ರದೇಶದ ಫ್ರೆಂಚ್ ಪ್ರಜೆಗಳಿಗೆ ಇಟಲಿಯ ಆಜ್ಞೆ!

ಫ್ರಾನ್ಸ್-ಇಟಲಿ ಗಡಿಪ್ರದೇಶದಲ್ಲಿರುವ ವ್ಯಾಲಮತ್ತು ಚಾಪ್ಲಿರ್ ಪ್ರದೇಶದಲ್ಲಿ ಭೂಮಿಗಳನ್ನು ಕೊಂಡಿರುವ ಫ್ರೆಂಚರು ತಮ್ಮ ಆಸ್ತಿಗಳನ್ನು ಕೂಡಲೆ ಬಿಟ್ಟು ಕೊಡಬೇಕೆಂದು ಇಟಲಿ ಅಧಿಕಾರಿಗಳು ಆಜ್ಞೆಮಾಡಿರುತ್ತಾರೆ. ವಸಕರಗಳನ್ನು ಸಾಗಿಸಲು ಈಗಿರುವ ಸೈರನ್ನು ಕಟ್ಟುವುದಾಗಿ ಫ್ರೆಂಚರಿಗೆ ಒಂಬತ್ತು ತಿಂಗಳು ಅವಧಿಯು ಮಾತ್ರ ಕೊಡಲ್ಪಟ್ಟಿದೆ. ಅನಂತರ ಸ್ಥಿರಾಧಿಕಾರಿಗಳು ಆ ಪ್ರದೇಶವನ್ನೆಲ್ಲಾ ಆಕ್ರಮಿಸಿಕೊಳ್ಳುವರು. ಈ ಆಜ್ಞೆಗೆ ಕಾರಣವೇನೆಂಬುದು ತಿಳಿದುಬಂದಿಲ್ಲ.

ಗಾಂಧಿಯನವರ ಬಿಡಾರದ ಮುಂದೆ ಅಸ್ಪೃಶ್ಯರ ಸತ್ಯಾಗ್ರಹ.

ಮಧ್ಯಪ್ರಾಂತದ ಅಸ್ಪೃಶ್ಯರು ತಮ್ಮ ಜಾತಿಯವರೊಬ್ಬರನ್ನು ಮಂತ್ರಿಗಳನ್ನಾಗಿ ತೆಗೆದುಕೊಳ್ಳಬೇಕೆಂದೂ, ಇಲ್ಲದಿದ್ದರೆ ಸತ್ಯಾಗ್ರಹವನ್ನು ನಿಲ್ಲಿಸುವದಿಲ್ಲವೆಂದೂ ಗಾಂಧಿಯನರ ಬಿಡಾರದ ಮುಂದೆ 8 ದಿವಸಗಳಿಂದಲೂ ಉಪವಾಸಪ್ರತವನ್ನು ಮಾಡಹತ್ತಿದ್ದಾರೆ. ಗಾಂಧಿಯನರು ಯಾವ ವಿಧವಾದ ಸಮಾಧಾನವನ್ನು ಹೇಳಿದರೂ ಅವರು ಅದಕ್ಕೆ ಒಪ್ಪಿರುವದಿಲ್ಲ. ಅಸ್ಪೃಶ್ಯರು ಡಾ॥ ಖರೆಯವರ ಪ್ರೋತ್ಸಾಹದಿಂದ ಹೀಗೆ ಮಾಡುತ್ತಿದ್ದಾರೆಂದು ಕೆಲವರು ಹೇಳುತ್ತಿರುವರು.

ವಿಮಾನ ಅನಾಹುತ

ಬಹಳ ಮಂಜು ಬೀಳುತ್ತಿದ್ದ ಕಾರಣ ಕಣ್ಣು ಕಾಣದೇ ಟೋಕಿಯೋ ಪಟ್ಟಣದ ಮೇಲೆ ಹಾರಾಡುತ್ತಿದ್ದ ಎರಡು ಜಪಾನ್ ವಿಮಾನಗಳು ಪರಸ್ಪರ ತಾಕಿ ಕೆಳಗುರುಳಿದವು ಅವುಗಳಲ್ಲಿ ಒಂದು ಕಾರ್ಖಾನೆಯೊಂದರ ಬಳಿ ಬಿತ್ತು. ಅದರಲ್ಲಿ ಸಿಕ್ಕಿಕೊಂಡಿದ್ದವರನ್ನು ಬಿಡಿಸಲು ಸಮೀಪಕ್ಕೆ ಬರುವುದರೊಳಗೆ ಅದರಲ್ಲಿದ್ದ ಪೆಟ್ರೋಲಿಗೆ ಬೆಂಕಿ ಬಿದ್ದು ಸಿಡಿದು 26ಮಂದಿ ಸುಟ್ಟುಹೋದರು 700 ಜನಗಳಿಗೆ ಗಾಯುಗಳಾದವು ಸಕ್ಕದಲ್ಲಿದ್ದ ಕಾರ್ಖಾನೆಗೂ ಬೆಂಕಿಯು ಆವರಿಸಿ ಸುಟ್ಟುಹೋದ್ದರಿಂದ ಇನ್ನು ಅನಾಹುತವಾಯಿತು.

ಕಳ್ಳರ ಸ್ಕೂಲು

ಯಾರಿಗೂ ತಿಳಿಯದಂತೆ ಸೇದು ಕತ್ತರಿಸಿ ಕಳ್ಳತನ ಮಾಡುವುದು ಹೇಗೆಂಬ ವಿಷಯದಲ್ಲಿ ಶಿಕ್ಷಣ ಕೊಡುತ್ತಿದ್ದ ಒಂದು ಗುಪ್ತಶಾಲೆಯು ಈಚೆಗಷ್ಟೆ ರಾಜಧಾನಿಯಾದ ಕೈರೋ ನಗರದ ಪೋಲೀಸರಿಂದ ಪತ್ತೆಮಾಡಲ್ಪಟ್ಟಿತು. ಇದರ ಗುರುವಾದ ಹಸನ್ ಅಲಿ ಎಲ್‌ಜಾಯಿತ್‌ರವರ ಮನೆಯಲ್ಲಿ ನಡೆಸಲ್ಪಡುತ್ತಿತ್ತು. 15 ಹುಡುಗರು ವಿದ್ಯಾಭ್ಯಾಸಮಾಡುತ್ತಿದ್ದರು. ಇವರು ಉತ್ತಮ

ೀತಿಯಿಂದ ಕಿಸೆ ಕತ್ತರಿಸುವುದನ್ನು ಮೋರ್ಡಿನಮೇಲೆ ರಕ್ಷಿಬರೆದು ವಿಶದವಾಗಿ ತಿಳಿಸುತ್ತಿದ್ದರಂತೆ! ಮೊದಲನೇ ಪರೀಕ್ಷೆಯಲ್ಲಿ ಉತ್ತೀರ್ಣರಾದಮೇಲೆ ಮಿಕಾಯಿಗಳು ಕೊಡಲ್ಪಡುತ್ತಿದ್ದವು. ಆನಂತರ ಎರಡನೇ ಪರೀಕ್ಷೆಯಲ್ಲಿ ಉತ್ತೀರ್ಣರಾದಮೇಲೆ ಹೊರಗೆ ಅವರ ಕೈಚಳಕವನ್ನು ತೋರಿಸಲು ಯೋಗ್ಯತಾಪತ್ರಗಳು ಕೊಡಲ್ಪಡುತ್ತಿದ್ದ ನಂತೆ.

ನೆಲ ನೀರು ಗಾಳಿಗಳಲ್ಲಿ ನಡೆಯುವ ವಾಹನ

ರಷ್ಯಾ ದೇಶದ ಕ್ಯಾಪ್ಟನ್‌ವಿಕ್ಟರ್ ದಿ ಟೋಲ್‌ಸ್ಕನು ಹೊಸದೊಂದು ವಾಹನವನ್ನು ತಯಾರಿಸಿದ್ದಾನೆ. ಇದು 12ಕ್ಕಿಂತ ಉದ್ದವಿದ್ದು 3 ಚಕ್ರಗಳಿಂದ ಕೂಡಿದೆ. ಇದು ನೆಲದಮೇಲೆ ಮೋಟಾರುಕಾರಿನಂತೆ ಗಂಟೆಗೆ 60 ಮೈಲಿ ಯಂತೆ ಓಡಬಲ್ಲದು, ನೀರಿನಲ್ಲಿಳಿಸಿದರೆ ಮೋಟಾರ್ ದೋಣಿಯಂತೆ ಗಂಟೆಗೆ 24 ಮೈಲುಗಳ ವೇಗದಲ್ಲಿ ಚಲಿಸ ಬಲ್ಲದು. ಮತ್ತು ಆಕಾಶದಲ್ಲಿ ವಿಮಾನದಂತೆ 20 ಮೈಲಿ ಗಳ ವೇಗದಲ್ಲಿ ಹಾರಬಲ್ಲದು. ಅಂತೂ ಇಂಥಹೊಂದು ವಾಹನದಿಂದ ನೆಲ ನೀರು ಗಾಳಿಗಳೆಂಬ ಭೇದವಿಲ್ಲದೆ ಪ್ರಪಂಚ ಪರ್ಯಟನಮಾಡಿಕೊಂಡು ಬರಬಹುದು.

ಬರುಗಾಳಿಯಿಂದ ಜಪಾನರಿಗೆ ಭಯಂಕರ ವಿಪತ್ತು

ಜಪಾನಿನಮೇಲೆ ಬರುಗಾಳಿಯು ಬೀಸಿ ಭಯಂಕರ ನಷ್ಟವನ್ನುಂಟುಮಾಡಿದೆ ಅಲ್ಲಲ್ಲಿ ಎತ್ತರವಾದ ಪ್ರದೇಶ ದಿಂದ ಮಣ್ಣು ಕಲ್ಲುಗಳು ಜರಿದುಬಿದ್ದು ಪ್ರಾಣಾಪಾಯ ಗಳುಂಟಾಗಿವೆ. ಸೈತಮಾ ಎಂಬ ಹಳ್ಳಿಯಲ್ಲಿ 13ಮಂದಿ ಗುಮ್ಮಾ ಎಂಬ ಹಳ್ಳಿಯಲ್ಲಿ 11ಮಂದಿ ಟೋಕಿಯೋ ವಲ್ಲಿ 3ಮಂದಿ ಮೃತರಾಗಿರುತ್ತಾರೆ 12000ಜನರು ಮನೆ ಪುಠಗಳಲ್ಲದೆ, ಬೈಲುಪ್ರದೇಶದಲ್ಲಿ ತಿಬಿರಗಳನ್ನು ಮಾಡಿ ಕೊಂಡಿದ್ದಾರೆ. 730ಮನೆಗಳು ಉರುಳಿದವು. ಯಾಕೋ ಹಾಮದಲ್ಲಿ ವ್ಯಾಪಾರ ನೌಕೆಗಳಿಗೆ 50ಲಕ್ಷ ಟೀಗಳಷ್ಟು ನಷ್ಟವುಂಟಾಗಿರುವುದಾಗಿ ಅಂದಾಜಾಗಿದೆ.

ಪ್ರೀತಿಯು ಪ್ರಾಣಹರಣಮಾಡಿತು

ಅಮೇರಿಕದ ಓಹಿಯೋನಗರದ ಡೇಟ್ ಎಂಬಲ್ಲಿ ನಾಯಿಗಳ ಪ್ರದರ್ಶನಕ್ಕೆ ಜಗತ್ತಿನಲ್ಲೇ ಒಡ್ಡವೆಂದು ಗಣಿಸಲ್ಪಟ್ಟ ಯಾರ್ಕ್ ಎಂಬ ನಾಯಿಯೂ ತರಲ್ಪಟ್ಟಿತ್ತು. ಅದನ್ನು ನೋಡಿದವರೆಲ್ಲರೂ ಅದರ ಆಕಾರ ಬೆಳವಣಿಗೆಗಳಿಗೆ ಸಂತೋಷಪಟ್ಟು ಪ್ರೀತಿಯಿಂದ ಅದರ ಬೆನ್ನುತಟ್ಟಿ ಹೋಗುತ್ತಿದ್ದರು. ಅಂತೂ ಪ್ರದರ್ಶನ ಮುಗಿಯುವವೇಳೆಗೆ ನಾಲ್ಕಾರುಸಾವಿರ ಪ್ರೀತಿಯ ಪೆಟ್ಟು ಗಳು ಅದಕ್ಕೆ ಬಿದ್ದವು. ಸಾಯಂಕಾಲ ಅದರ ಯಜ ಮಾನನು ಅದನ್ನು ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು ಮನೆಗೆಹೋಗಿ ತಲಪುವುದರೊಳಗೆ ಅದರ ಪ್ರಾಣವೇ ಹಾರಿಹೋಗಿತ್ತು.

ಹೆಚ್ಚು ದಕ್ಷಿಣೆ ತೆಗೆದುಕೊಳ್ಳುವ ಪುರೋಹಿತರಿಗೆ ಎಚ್ಚರಿಕೆ!

ಹೈದರಾಬಾದ್ ಪ್ರಾಂತದ ಒಬ್ಬ ನಿವೃತ್ತ ನ್ಯಾಯಾ ಧೀಶರು ಪೂರ್ವಪದ್ಧತಿಯಂತೆ ತಮ್ಮಮೊಮ್ಮಗನ ವಿವಾ ಹವನ್ನು ಪುರೋಹಿತರ ಮೂಲಕ ಮಾಡಿಸಿ ದಕ್ಷಿಣೆ ತಾಂ ಬೂಲಾದಿಗಳನ್ನು ಕೊಟ್ಟು ಕಳುಹಿಸಿದಮೇಲೆ ಪುರೋಹಿ ತರು ತಮ್ಮಿಂದ 4-6-6 ಗಳನ್ನು ಹೆಚ್ಚಾಗಿ ದಕ್ಷಿಣೆ ಪಡೆದಿ ರುತ್ತಾರೆಂದು ತೋರಿ ಆ ಹಣವನ್ನು ವಾಪಸು ಪಡೆಯಲು ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುತ್ತಾರೆ. ಪುರೋಹಿ ತರಾದರೋ ತಾವು ಬಲಾತ್ಕಾರವಾಗಿ ಹಣ ಕಸಿದುಕೊಳ್ಳ ಲಿಲ್ಲವೆಂದೂ ಯಜಮಾನರೇ ಮನಃಪೂರ್ವಕವಾಗಿ ಕೊ ಟ್ಟದ್ದನ್ನು ಗ್ರಹಿಸಿರುವೆನೆಂದೂ ಹೇಳಿರುತ್ತಾರೆ. ಇದಕ್ಕೆ ಕೋರ್ಟು ತೀರ್ಪೇನೆಂಬುದನ್ನು ನೋಡಬೇಕಾಗಿದೆ.

ವಿದ್ಯುಚ್ಛಕ್ತಿಯ ಅನಾಹುತ

ಕಲ್ಕತ್ತೆಯ ಬಲ್ಲಿಗಂಜ್ ಎಂಬ ಭಾಗದಲ್ಲಿ ವಿದ್ಯುತ್ತಿನ ತಂತಿಗೆ ಸಿಕ್ಕಿ ತೂಗಾಡುತ್ತಿದ್ದ ಒಂದು ಬಟ್ಟೆಯನ್ನು ತೆಗೆಯಲು ಡಾ॥ ಹರೀಂದ್ರಚಂದ್ರ ಮುಖರ್ಜಿ ಎಂಬವರ ಮಡದಿಯು ಮುಂದುವರಿದದ್ದರಿಂದ ವಿದ್ಯುಚ್ಛಕ್ತಿಯ ಏಟಿನಿಂದ ಕೆಳಗುರುಳಿದಳು. ಇದರ ಕಾರಣ ತಿಳಿಯದೆ 70 ವರುಷ ವಯಸ್ಸಿನ ಡಾಕ್ಟರರು ಆ ಬಟ್ಟೆಯನ್ನು ತೆಗೆ ಯಲು ಮುಂದಾದ್ದರಿಂದ ವಿದ್ಯುತ್ತಿನ ಏಟಿಗೆ ತುತ್ತಾದರು. ಇದೇನೆಂದು ನೋಡಲು ಮತ್ತು ಸಹಾಯಮಾಡಲು ಹೋದ ಇವರ ತರುಣ ಮಿತ್ರುಗಳೂ ವಿದ್ಯುಚ್ಛಕ್ತಿಯಾಹ ದಿಂದ ಭಾಸಿಗೊಂಡು ಗಾಯಗೊಂಡರು. ಎಲ್ಲರೂ ನಿಧಾ ನವಾಗಿ ಸುಧಾರಿಸಿಕೊಂಡರೂ ಮುದುಕರಾದ ಡಾ॥ ಹರೀಂದ್ರಚಂದ್ರರು ಮಾತ್ರ ಮೃತರಾದರು.

ಕೆನ್ಯಾಪಹರಣದ ದುಷ್ಪರಿಣಾಮ

ಭಾಟಂಡಪ್ರಾಂತ್ಯದ ಒಬ್ಬ ಯುವಕನ ಪತ್ನಿಯೆನ್ನು ಸಿಖ್ಖಿ ಎಂಬ ಗ್ರಾಮದ ಕೆಲವು ಜನ ಪುಂಡರು ಅಪ ಹರಿಸಿಕೊಂಡುಹೋಗಿ ಮಾನಹಾನಿಗೆ ಯತ್ನಿಸಿದರೆಂದೂ ಅಪ್ಪರಲ್ಲಿ ಮತ್ತೆಕೆಲವರು ಆ ದುಷ್ಪರನ್ನು ತಡೆದು ಅವ ರಿಗೆ 100 ರೂ. ಗಳನ್ನು ಕೊಟ್ಟು ಆ ತರುಣಿಯನ್ನು ಅವಳ ಪತಿಯ ಸಮೀಪಕ್ಕೆ ತಂದು ಬಿಟ್ಟರೂ, ತನ್ನ ಸತಿ ಗೊದಗಿದ ಕಳಂಕದಿಂದ ಕ್ರುದ್ಧನಾದ ಯುವಕನು ಆ ದುಷ್ಪರ ಗ್ರಾಮಕ್ಕೆ ಹೋಗಿ ತನ್ನ ಪತ್ನಿಯ ಅಪಹಾರ ವಲ್ಲಿ ಭಾಗವಹಿಸಿದ್ದರೆಂದು ಸಂದೇಹವಿದ್ದ 70 ಜನ ಪುಂಡರನ್ನು ಗುಂಡಿನಿಂದ ಹೊಡೆದನು. ಅವರಲ್ಲಿ 12 ಮಂದಿ ಮೃತರಾದರು, ಉಳಿದವರಿಗೆ ಏಪರೀತ ಗಾಯ ಗಳಾಗಿವೆಯೆಂದು ತಿಳಿದುಬರುತ್ತದೆ.

ಹತ್ತಿಯಿಂದ ಮನೆಯ ಕಟ್ಟಿಡ.

ಅಮೆರಿಕೆಯಲ್ಲಿ ಪರದೇಶಕ್ಕೆ ಕಳುಹಿಸಿದಮೇಲೂ ಸಾವಿರಾರು ಮಣ ಹತ್ತಿಯು ಉಳಿದುಹೋಗುತ್ತಿದೆ. ಇದ ಕ್ಕೊಂದು ಉಪಯೋಗವನ್ನು ಕಂಡುಹಿಡಿಯಲು ಅಲ್ಲಿಯ ವೈಜ್ಞಾನಿಕರು ಪ್ರಯತ್ನಪಟ್ಟು ಕೃತಕೃತ್ಯರಾಗಿದ್ದಾರೆ. ಅದೇನೆಂದರೆ ಹತ್ತಿಯನ್ನು ಯಂತ್ರಗಳ ಸಹಾಯದಿಂದ ಹಲಗೆಗಳಾಗಿ ಮಾರ್ಪಡಿಸಿ ಮನೆ ಕಟ್ಟಲು ಉಪ ಯೋಗಿಸಬಹುದಾಗಿದೆ. ನೆಲಕ್ಕೆ ಹಾಸಲೂ ಹತ್ತಿ ಯ ಹಲಗೆಗಳನ್ನೇ ಉಪಯೋಗಿಸಬಹುದು. ರಸಾಯನ ಪ್ರಯೋಗದಿಂದ ಇದು ಅನೇಕ ವರುಷ ಬಾಳಿಕೆ ಬರುವಂತೆ ಮಾಡಬಹುದೆಂದು ಕಂಡುಹಿಡಿದಿದ್ದಾರೆ. ಇದರ ಉಪಯೋಗದಿಂದ ಬಹಳ ಅಗ್ಗವಾಗಿ ಮನೆ ಕಟ್ಟ ಬಹುದಂತೆ!

ಜರ್ಮನಿಯ ಸಿದ್ಧತೆಯನ್ನು ಕುರಿತು ಮಿ॥ ಚರ್ಚ್ ಹಿಲ್‌ರವರ ಎಚ್ಚರಿಕೆ

ಈಗ ಜರ್ಮನಿಯಲ್ಲಿ 15 ಲಕ್ಷ ಸೈನಿಕರು ಶಸ್ತ್ರ ಸನ್ನದ್ಧರಾಗಿದ್ದಾರೆ. ರಿಜರ್ವ್ ಸೈನ್ಯವೂ ಸಿದ್ಧವಾಗಿದೆ. ಹೊಲ ಗದ್ದೆಗಳಲ್ಲಿ ಕೆಲಸಮಾಡುವ ಕುದುರೆಗಳನ್ನೂ ಮೋಟಾರು ಲಾರಿಗಳನ್ನೂ ಕೂಡಿಸುತ್ತಿದ್ದಾರೆ. ರೈ ಮತ್ತು ಜುಗೊಸ್ಲೋವೇಕಿಯ ಗಡಿ ಪ್ರದೇಶಗಳಲ್ಲೂ ದೊಡ್ಡ ಸಂಡನ್ನು ಇಡಲಾಗಿದೆ. ಮುದುಕರು ದೇಶ ವನ್ನು ಬಿಟ್ಟು ಹೋಗದಂತೆ ಆಜ್ಞಾಪಿಸಲ್ಪಟ್ಟಿದ್ದಾರೆ. ಯುವಕರೂ ವೈಢಾಂಗರೂ ಸೈನ್ಯಕ್ಕೆ ಸೇರಲು ಸಿದ್ಧರಾ ಗಿರಬೇಕೆಂದು ತಿಳಿಸಲ್ಪಟ್ಟಿದ್ದಾರೆ. ದೇಶದಲ್ಲೆಲ್ಲಾ ಕೋ ಟಿ-ಕೊತ್ತಲಗಳು ಬಲಪಡಿಸಲ್ಪಡುತ್ತಿವೆ. ಈ ಸಿದ್ಧತೆಗಳ ಅರ್ಥವು ಯುದ್ಧವೇ ಆಗಿರಬಹುದೆಂದು ಮಿ॥ ಚರ್ಚ್ ಹಿಲ್ಲರು ಒಂದು ಲೇಖನದ ಮೂಲಕ ಎಚ್ಚರಿಸಿರುತ್ತಾರೆ.

ಸ್ತ್ರೀನೌಕರರಿರಕೂಡದು

ಸರಕಾರದ ಕಚೇರಿಗಳಲ್ಲೂ, ಕೈಗಾರಿಕೆ, ವ್ಯಾಪಾರ ನಡೆಸುತ್ತಿರುವ ಕಂಪೆನಿಗಳಲ್ಲೂ ಸ್ಫುರದ್ರೂಪಿಗಳಾದ ಯುವತಿಯರನ್ನು ನೌಕರಿಗೆ ಇಟ್ಟುಕೊಳ್ಳುವುದರಿಂದ ಅನೇಕ ವ್ಯಾಜ್ಯಗಳಿಗೆ ಕಾರಣವಾಗುತ್ತಿರುವುದು. ಅದುದ ರಿಂದ ಸರ್ಕಾರದವರು ಸ್ತ್ರೀಯರಿಲ್ಲದಂತೆಯೂ ನೌಕರಿಗಳಿಂದ ತೆಗೆಯಬೇಕು. ಮೇಲ್ಪಟ್ಟ ಅಧಿಕಾರಿಗಳು ಕೆಲಸದ ವೇಳೆ ಯಲ್ಲೂ ಸಹ ಈ ಸುಂದರ ತರುಣಿಯರನ್ನು ತಮ್ಮ ಸುತ್ತು ಕುಳ್ಳಿರಿಸಿಕೊಂಡು ಕಾಲ ಕಳೆಯುವರು. ಈ ರೀತಿ ಯುವ ತಿಯರು ನೌಕರಿಯಲ್ಲಿರುವುದರಿಂದ ಅಧಿಕಾರಿಗಳಲ್ಲಿಯೇ ಮನಸ್ತಾಪವೂ ಜಗಳಗಳೂ ಉಂಟಾಗುವುವಲ್ಲದೆ ಅವ ರವರ ಪತ್ನಿಯರಿಗೆ ತಮ್ಮ ಪತಿಗಳಮೇಲೆ ಸಂಶಯವೂ ಕೋಪವೂ ಉಂಟಾಗಲು ಕಾರಣವಾಗುತ್ತದೆ. ಸರಕಾ ರದ ಕೆಲಸಗಳೂ ಸರಿಯಾಗಿ ನಡೆಯದೆ ಸಾವಕಾಶವಾಗು ತ್ತಿರುವುದು. ಆದ್ದರಿಂದ ಸ್ತ್ರೀನೌಕರರನ್ನೆಲ್ಲಾ ತೆಗೆದು ಅವರ ಸ್ಥಳದಲ್ಲಿ ಪುರುಷರನ್ನು ನೇಮಿಸಬೇಕೆಂದು ಸಯ್ಯಾಂ ರಾಜ್ಯದ ಓರ್ವ ಮುಖಂಡರು ಸಿಂಗಪುರದ ರಾಷ್ಟ್ರೀಯ ಅಸ್ಸೆಂಬಿಯಲ್ಲಿ ತಿಳಿಸಿದರು.

ಜೀನಾ-ಜಪಾ ಯುದ್ಧ.

ಪಶ್ಚಿಮ ಜ್ಯೂಚೆಂಗ್‌ನಲ್ಲಿ ಚೀನರು ಜಯಶೀಲರಾಗಿ ಜಪಾ ಸೈನ್ಯಗಳನ್ನು 4 ಮೈಲು ಹಿಂದಕ್ಕೆಟ್ಟಿದರು. ಜಪಾನರ ಕಡೆ 4000 ಸೈನಿಕರು ಸತ್ತರು. ಚೀನಾದ ರಕ್ಷಣಸೈನ್ಯವನ್ನು ಭೇದಿಸಲು ಅಸಮರ್ಥರಾದಕಡೆಯ ಲ್ಲೆಲ್ಲಾ ಜಪಾ ಸೈನಿಕರು ವಿಷವಾಯುಪ್ರಯೋಗ ಮಾಡಲಾರಂಭಿಸಿರುವರು. ಚೀನಾದೇಶಕ್ಕೆ ಕಾಂಗ್ರೆಸ್ ಕಡೆಯಿಂದ ಕಳುಹಿಸಬೇಕೆಂದಿದ್ದ ಭಾರತದ ವೈದ್ಯಸಹಾ ಯಪಡೆಯು ಕಳೆದ ಒಂದನೆಯ ತಾರೀಖಿನ ರಾತ್ರಿ "ರಾಜಪುಟಾಣ" ಹಡಗಿನಲ್ಲಿ ಬೊಂಬಾಯಿ ನಗರದಿಂದ ಪ್ರಯಾಣಮಾಡಿತು. ಶ್ರೀಮತಿ ಸರೋಜಿನೀದೇವಿ, ಶ್ರೀ ಮತಿ ಹರಿಸಿಂಗ್, ಚೀನಾದೇಶದ "ವೈಸ್‌ಕಾನ್ಸಲ್" ಮುಂತಾದವರು ಬಂದರಿನಲ್ಲಿ ಸೇರಿದ್ದು ವೈದ್ಯರನ್ನು ಬೀ ಳ್ಕೊಟ್ಟರು. ವೈದ್ಯರ ಜೊತೆಯಲ್ಲಿ 54 ಪೆಟ್ಟಿಗೆಗಳಷ್ಟು ಔಷಧಗಳನ್ನೂ ಇತರ ಸಲಕರಣೆಗಳನ್ನೂ ತೆಗೆದುಕೊಂ ಡು ಹೋಗಲಾಗಿದೆ.

ಹಿಟ್ಲರನಿಗೂ ಜಗ್ಗದ ರಮಣಿ.

ಜರ್ಮನ್ ಸರ್ವಾಧಿಕಾರಿ ಹೆರ್ ಹಿಟ್ಲರನಿಗೆ ಎಲ್ಲರಿ ಗಿಂತಲೂ ಹೆಚ್ಚು ಭೀತಿದಾಯನಿಯೆಂದರೆ ಬವೇರಿಯ ಪ್ರಾಂತ್ಯದ 26 ವರ್ಷ ವಯಸ್ಸಿನ ಒಬ್ಬ ರಮಣಿಯಾ ಗಿದ್ದಾಳೆ. ಈಕೆಯ ಪತಿಯು ಡಾಚಿನಿನಲ್ಲಿ ಬಂಧಿಸಲ್ಪಟ್ಟು ಪ್ರಾಣಕಳೆದುಕೊಂಡನು. ಆ ದಿನದಿಂದ ಈಕೆಯು ನಾಜಿ ಗಳ ವಿರುದ್ಧ ಜಳವಳಿಗಾರಂಭಿಸಿದ್ದಾಳೆ. ಜರ್ಮನಿ ಭಯಂಕರ ಗುಪ್ತದಳವನರಾದ "ಕೆಸ್ಪೊ" ನವರಿಂದ ಲೂ ಈಕೆಯನ್ನು ಹಿಡಿಯಲಾಗಲಿಲ್ಲ. ಈಕೆಯ ದಸ್ತ ಗಿರಿಗೆ ಸಹಾಯಮಾಡಿದವರಿಗೆ 5 ಸಾವಿರ ಪೌಂಡುಗಳ ಬಹುಮಾನ ಕೊಡುವುದಾಗಿ ಪ್ರಸಿದ್ಧಪಡಿಸಿದ್ದರೂ ಈಕೆ ಯು ಇನ್ನೂ ಯಾರಕೈಗೂ ಶಿಕ್ಕಿಲ್ಲ, ನಿಂತಲ್ಲಿನಿಲ್ಲದೆ ತನ್ನ ಮೋಟರಿನಲ್ಲಿ ಸದಾ ಪ್ರಯಾಣಮಾಡುತ್ತಾ ಅದ ರಲ್ಲಿನ ರೇಡಿಯೋ ಯಂತ್ರದ ಮೂಲಕ ಆಗಾಗ ಹಿಟ್ಲರ್-ನಾಜಿಗಳ ವಿರುದ್ಧ ಭಾಷಣಗಳನ್ನು ಮಾಡುತ್ತಾ ತನ್ನ ಪತಿಯ ಕೊಲೆಗೆ ಪ್ರತೀಕಾರಪ್ರಯತ್ನವನ್ನು ನಡೆಸುತ್ತಿ ರುವ ಈಕೆಯ ಧೈರ್ಯಸಾಹಸಗಳು ಅನುಕರಣೀಯವೇ ಸರಿ.

ಸ್ವೀಕಾರ.

ಡಾವಣಗೆರೆ ನಿವಾಸಿಗಳಾದ ಮ॥ ರಾ॥ ಸುಸಲ್ವಾಡಿ ವೀರಪ್ಪನವರು ಶಿವಾಧೀನರಾದ ಸಮಯದಲ್ಲಿ ವೇ॥ ಟಿ. ಎಚ್. ಎಂ. ರಾಜಶೇಖರಪ್ಪಯ್ಯನವರು ಪ್ರಭಾಪ್ರೇಷಣ ಕ್ಕೋಸ್ಕರ ತೆಗೆಯಿಸಿದ 1 ರೂ. ಯು ಮ॥ ರಾ॥ ಎಂ. ಮಾಗಾನಹಳ್ಳಿ ನಂಜುಂಡಪ್ಪನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪ ಂ ಚಾ ಚಾ ರ್ಯ ರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ತಿದ್ದುಪಡಿ

ಕಳೆದವಾರ ನಮ್ಮ ಪತ್ರಿಕೆಯಲ್ಲಿ ಸರ್ ಕೆ.ಸಿ. ವುಟ್ಟಣ್ಣಶೆಟ್ಟರ ಬಗ್ಗೆ ನಡೆದ ಸ್ಮಾರಕಸಭೆಯ ವಿಷಯವು ಪ್ರಕಟವಾಗಿರುವುದು ಸರಿಯಷ್ಟೆ! ದಿವಾನರ ಭಾಷಣವು ಮುಗಿದಮೇಲೆ ಮದ್ರಾಸಿನ ಸರ್ ಪಿ. ಎಸ್. ಶಿವಸ್ವಾಮಿ ಅಯ್ಯರ್‌ರವರು ಅನುಮೋದನೆವನ್ನಿತ್ತರೆಂದೂ, ಬಳಿಕ ಆದನ್ನೇ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಮೆ॥ ಪಿ. ಮಹಾದೇವಯ್ಯನವರು ಸಮರ್ಥನಮಾಡುವ ದರ ಮೂಲಕ ಭಾಷಣಮಾಡಿದರೆಂದೂ ತಿದ್ದಿ ಓದಿ ಕೊಳ್ಳಬೇಕು.

ಸಂ.—

[ಒನೆಯ ಪುಟದಿಂದ ಮುಂದುವರೆದುದು]

ಡಾ|| ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿರವರು ೭೦ ವರ್ಷಗಳ ಕಾಲ ಅಖಿಲಭಾರತ ವೀರಶೈವ ಕಾನ್‌ಫರೆನ್ಸ್ ಎಂಡೋಮೆಂಟ್ ಫಂಡಿನ ಪ್ರೆಸಿಡೆಂಟರಾಗಿಯೂ ಇದ್ದರು. ಇವರು ಈ ಫಂಡಿನ ಹಣವನ್ನೆಲ್ಲಾ ಮೈಸೂರಿನಿಂದ ಹೊರಕ್ಕೆ ಸಾಗಿಸಲು ಹಲವರು ನಡೆಯಿಸಿದ ಪ್ರಯತ್ನಗಳನ್ನು ಪ್ರತಿಭಟಿಸಿ, ಮೈಸೂರು ಸರ್ಕಾರದಲ್ಲಿ ಅದನ್ನು ಭದ್ರವಾಗಿರಿಸಿದರು. ಅವರು "ಎಂಡೋಮೆಂಟ್ ಫಂಡ" ನ್ನು ಸೊಸೈಟಿ ರೆಗ್ಯುಲೇಷನ ಪ್ರಕಾರ ರಿಜಿಸ್ಟರು ಮಾಡಿಸಿ ಅದರ ಉಪಯೋಗಕ್ಕೆ ಸೂಕ್ತವಾದ ರೂಲುಗಳನ್ನು ಮಾಡಿಸಿದರು. ಅದರ ಹಣವು ಈಗ ಸುಮಾರು 96,000 ರೂಪಿಗಿದೆ. ಅದರಿಂದ ಬರುವ ಬಡ್ಡಿಯನ್ನು ಇಂಡಿಯಾದ ಅನೇಕ ಭಾಗಗಳಲ್ಲಿ ನಡೆಯುವ ವೀರಶೈವ ಮಹಾಸಭೆಗಳಿಗೆ ಸಹಾಯದ್ರವ್ಯವನ್ನು ಕೊಡಲು ಉಪಯೋಗಿಸಬಹುದಾಗಿದೆ.

ಕಳೆದ 28 ವರ್ಷಗಳಿಂದ ರಾವ್‌ಬಹದ್ದೂರ್ ಗುಬ್ಬಿ ತೋಟದಪ್ಪನವರ ಧರ್ಮಸಹಾಯಗಳಿಗೂ ಅವರು ಪ್ರೆಸಿಡೆಂಟರಾಗಿದ್ದರು. ತಮ್ಮ ನೇತೃತ್ವದಲ್ಲಿ ನಡೆಯುವ ಈ ಧರ್ಮ ಕೆಲಸಗಳಲ್ಲೆಲ್ಲ ಯಾವಾಗಲೂ ಅವರು ಹೆಚ್ಚು ಶ್ರದ್ಧೆ ವಹಿಸಿದರು. ಅವರ ಕೈಕೆಳಗೆ ಸಾರ್ವಜನಿಕರ ಅನುಕೂಲಕ್ಕೆ ತಕ್ಕಂತೆ ಈ ಧರ್ಮಕಾರ್ಯಗಳೆಲ್ಲವೂ ಬಹಳ ಸಮರ್ಪಕವಾಗಿ ಸ್ವಲ್ಪ ಖರ್ಚಿನಿಂದ ನಡೆಸಲ್ಪಡುತ್ತಿದ್ದವು. ಎಷ್ಟಾದರೂ ಹೆಚ್ಚು ಖರ್ಚಿನ ಕೆಲಸ ನಡೆಯಬೇಕಾದರೆ ಉಳಿತಾಯದ ಹಣದಿಂದ ನಡೆಸಲ್ಪಡುತ್ತಿದ್ದವು.

ಡಾ|| ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿರು ಆತ್ಯುತ್ತಮ ನಡತೆಯವರೆಂದು ಪ್ರಸಿದ್ಧರಾಗಿದ್ದರು. ವಿದ್ಯೆಗಿಂತಲೂ ನಡತೆಯೇ ಶ್ರೇಷ್ಠವಾದುದೆಂದು ಎಣಿಸಲ್ಪಟ್ಟಿದೆ. ನಮ್ಮ ಮುಂದಿನ ಜನಾಂಗದ ಮೇಲ್ಮೈಗೆ ನಾವು ಬಿಟ್ಟುಹೋಗ ಬಹುದಾದ ಅತ್ಯುಚ್ಚ ಆದಾಯವೆಂದರೆ ಒಳ್ಳೆಯ ನಡತೆಯೆಂದು ನ್ಯಾಯವಾಗಿ ಹೇಳಲ್ಪಟ್ಟಿದೆ. ಈ ವಿಷಯದಲ್ಲಿ ಒಬ್ಬ ಶ್ರೇಷ್ಠ ಗ್ರಂಥಕಾರನು ಈರೀತಿ ಹೇಳಿರುತ್ತಾನೆ.

A good character is, in all cases, the fruit of personal exertion. It is not inherited from parents: it is not created by external advantages. It is no necessary appendage of birth, wealth, talents, or situation. But it is the result of one's own endeavours: the fruit and reward of principles manifested in a course of virtuous and honourable action."

" ಎಲ್ಲ ಸಂದರ್ಭಗಳಲ್ಲಿಯೂ ಶ್ರೇಷ್ಠ ನಡತೆಯು ಸ್ವಪ್ರಯತ್ನದ ಫಲವಾಗಿದೆ. ಇದು ಹುಟ್ಟುಗುಣವಾಗಿ ತಾಯಿ ತಂದೆಗಳಿಂದ ಬರತಕ್ಕದ್ದಲ್ಲ. ಇದು ಬಾಹ್ಯದ ಅನುಕೂಲಗಳಿಂದ ಉಂಟಾಗತಕ್ಕುದಲ್ಲ. ಇದು ವಂಶ, ಐಶ್ವರ್ಯ, ವಿದ್ಯೆ ಅಥವಾ ಅಧಿಕಾರ ಇವುಗಳೊಂದಿಗೆ ಕೂಡಿ ಬರತಕ್ಕ ದ್ದಲ್ಲ. ಆದರೆ ಅದು ಅವನವನ ಸ್ವಪ್ರಯತ್ನದಿಂದ ಬರುವಂಥದು. ಧರ್ಮಯುಕ್ತವಾದ ಸತ್ಕಾರ್ಯಗಳನ್ನು ಮಾಡುವದರಿಂದ ಉಂಟಾಗತಕ್ಕ ಸತ್ಫಲವಾಗಿರುತ್ತದೆ.

ಸಮಾಜದ ಉನ್ನತಿ ಅವನತಿಗಳು ಪ್ರತಿಯೊಬ್ಬ ವ್ಯಕ್ತಿಯ ನಡತೆಯಮೇಲೆ ಅವಲಂಬಿಸಿವೆ. ಈ ವಿಷಯದಲ್ಲಿ ಹೀಗೆ ಹೇಳಲ್ಪಟ್ಟಿದೆ.

"Good character is human nature in its best form. It is moral order embodied in the in the individual. Men of character are not only the consciences of society, but in every well governed state they are its best motive power; for it is moral qualities which in the main, rule the world."

ಇದರಿಂದ ನಾವುಗಳೆಲ್ಲರೂ ಇಲ್ಲಿ ಕೂಡಿರುವುದು ಒಬ್ಬ ಶ್ರೇಷ್ಠ ಸಾರ್ವಜನಿಕ ವ್ಯಕ್ತಿಯ ಅಗಲುವಿಕೆಯನ್ನು ಜ್ಞಾಪಿಸಿ ಮರ್ಯಾದಿಸುವುದಕ್ಕೆ ಮಾತ್ರವಲ್ಲದೆ ಆಬಾಲ ವೃದ್ಧರಿಗೂ ತಿಲಕಪ್ರಾಯರಾಗಿ ಅನುಸರಣೀಯರಾಗಿದ್ದ ಜ್ಞಾನಿಗಳೊಬ್ಬರನ್ನು ಗೌರವಿಸುವುದಕ್ಕೂ ಆಗಿದೆ.

ಅವರು ಯಾವಾಗಲೂ ಸಂತೋಷಸ್ವಭಾವದವರಾಗಿದ್ದರು. ಕಾರ್‌ಲೈಲ್ ಎಂಬವನು ಹೇಳುವಂತೆ ಸಂತೋಷಸ್ವಭಾವದ ಮನುಷ್ಯನು, ದುಃಖಸ್ವಭಾವದ ಮನುಷ್ಯನಿಗಿಂತ ಹೆಚ್ಚು ಕೆಲಸವನ್ನು ನಿರ್ವಹಿಸುವನಲ್ಲದೆ ಅದನ್ನು ಚೆನ್ನಾಗಿಯೂ, ನೀರ್ಭಿಡುಯತ್ನದಿಂದಲೂ ಮಾಡುವನು. ಮತ್ತು ಜಾಸನ್ನನು ಪ್ರತಿವಿಷಯದ ಉತ್ತಮಭಾಗವನ್ನು ಮಾತ್ರ ಗಮನಿಸುವ ಸ್ವಭಾವವು ವರ್ಷಕ್ಕೆ ಸಾವಿರ ಪೌಂಡುಗಳ ಉತ್ಪತ್ತಿಗಿಂತ ಶ್ರೇಷ್ಠವಾದುದೆಂದು ಹೇಳುತ್ತಾನೆ. ಡಾ|| ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು ಸಂತೋಷಸ್ವಭಾವದ ಮೇಲ್ಮೈಯನ್ನು ಚೆನ್ನಾಗಿ ಅರಿತಿದ್ದರು. ಇವರ ಮರ್ಯಾದಾಯುತವಾದ ಮೃದುಸ್ವಭಾವವು ಎಲ್ಲ ಮನುಷ್ಯರ ಪ್ರೀತಿಯನ್ನು ಅವರ ಕಡೆಗೆ ಆಕರ್ಷಿಸುವ ಮಂತ್ರವಾಗಿದ್ದಿತು. ಇವರು ಅನೇಕ ಒಳ್ಳೆ ಕೆಲಸಗಳನ್ನು ಪೂರ್ಣಮಾಡಿ ಪೂರ್ಣಕೀರ್ತಿಯಿಂದ ಕೂಡಿ, ಪೂರ್ಣವೃದ್ಧಾಪ್ಯದಲ್ಲಿ ಮೃತರಾದರು.

ಕೆಲವು ಜ್ಞಾನಿವೃದ್ಧರು, ಮರಣವು ಪ್ರಪಂಚದಲ್ಲಿ ಜೀವರಾಶಿಗಳಿಗೊದಗುವ ಪ್ರಕೃತಿಯ ಅನೇಕ ಬದಲಾವಣೆಗಳಲ್ಲೊಂದು ವಿಷಯವಾಗಿ ದೇವರಿಂದ ನಿರ್ಮಿಸಲ್ಪಟ್ಟಿರುವದರಿಂದ ಅದರ ಸಾಮಾನ್ಯವನ್ನು ಕುರಿತು ಯಾರೂ ಹೆದರಬೇಕಾಗಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಒಬ್ಬ ಗ್ರಂಥಕಾರನು

" It is impossible that any thing so natural, so necessary, and so universal as death, should ever have been designed by providence as an evil to mankind."

" ಸಾವಿನಂಥ ಸ್ವಾಭಾವಿಕವಾದ, ಸಾಮಾನ್ಯವಸ್ತುವನ್ನು ದೇವರು ಮನುಷ್ಯನ ಕೆಡಕಿಗಾಗಿ ನಿರ್ಮಿಸಿರಲಾರನು " ಎಂದು ಬರೆದಿರುತ್ತಾನೆ.

ಒಬ್ಬನು ಸರ್ವವಿಜಯಿಯಾಗಿ, ಧೊರೆಯಾಗಿರಬಹುದು. ಆದರೆ ಅವನು ಸಾಮಾನ್ಯಮನುಷ್ಯನಂತೆ ಮರಣ ಹೊಂದಲೇಬೇಕು. ಮರಣಶಯ್ಯೆಯು ಪ್ರತಿಮನುಷ್ಯ ಪ್ರಾಣಿಯನ್ನೂ ಅವನ ಸ್ವಾಭಾವಿಕಸ್ಥಿತಿಗೆ ತರುವದು, ಮತ್ತು ಅತಿ ಮುಖ್ಯವಾದ ಜೀವೇಶ್ವರಸಂಬಂಧವನ್ನು ಅವನ ಮನಸ್ಸಿಗೆ ತೋರಿಸುವುದು. ಎಂದು ಬೇರೊಬ್ಬ ಮಹನೀಯನು ಜೋಧಿಸಿರುವನು.

ಇನ್ನೊಬ್ಬ ಗ್ರಂಥಕಾರನು.

" No man who is fit to live need fear to die. To us here, death is the most terrible thing we know. But when we have tasted its reality it will mean to us birth, deliverence, a new creation of ourselves. It will be what health is to the sickman; what home is to the exile; what the loved one given Back is to the bereaved. As we draw near to it a solemn gladness should fill our hearts. It is God's great morning lighting up the sky."

"ಜೀವಿಸಿರಲುಯೋಗ್ಯನಾದ ಯಾವಮನುಷ್ಯನೂ ಸಾವಿಗೆ ಅಂಜಬೇಕಾಗಿಲ್ಲ. ಇಲ್ಲಿರುವ ನಮಗೆ ನಾವು ತಿಳಿದಿರುವ ಎಲ್ಲಕ್ಕಿಂತಲೂ ಸಾವು ಭಯಂಕರವಾದುದು. ಆದರೆ ನಾವು ಅದರ ನಿಶ್ಚಿತವನ್ನು ಅನುಭವಿಸಿದಾಗ ಅದು ನಮಗೆ ಪುನರ್ಜನ್ಮವೆಂದೂ ಹಿಂದಿನದರಿಂದ ಬಿಡುಗಡೆಯೆಂದೂ ನಮ್ಮ ಗಳ ಹೊಸ ಸೃಷ್ಟಿಯೆಂದೂ ಅನುಭವವಾಗುವುದು. ಅದು ರೋಗಿಗೆ ಆರೋಗ್ಯದಂತೆಯೂ, ದೇಶಭ್ರಷ್ಟನಿಗೆ ಸ್ವದೇಶಾಗಮನದಂತೆಯೂ, ಕಳೆದುಕೊಂಡಿದ್ದ ಪ್ರೀತಿಯ ವಸ್ತುವು ದೊರಕಿದಂತೆಯೂ ಇರುವುದು. ಮರಣವನ್ನು ನಾವು ಸಮೀಪಿಸಿದಂತೆಲ್ಲಾ ನಮಗೆ ಒಂದು ವಿಧವಾದ ಸಂತೋಷವೇ ಉಂಟಾಗಬೇಕು. ಅದು ಭಗವಂತನ ಹೊಸದಿನದ ಪ್ರಾತಃಕಾಲದ ಬೆಳಕು" ಎಂದು ಬರೆದಿರುವನು.

" There is no death! What seems so is transition. This life of mortal breath is but a Suburb of the life elysian, whose portal we call death."

LONGFELLOW.

"ಸಾವೆಂಬುದಿಲ್ಲ! ಹಾಗೆ ಕಾಣುವುದು ಕೇವಲಬದಲಾವಣೆ ಮಾತ್ರ. ನಶ್ವರವಾದ ಈ ಜೀವನವು ಸಾವೆಂಬ ಬಾಗಿಲಿನಿಂದ ಕೂಡಿದ ಸಂತೋಷಯುಕ್ತವಾದ ನಿತ್ಯಜೀವನದ ಬಹಿಃಪ್ರದೇಶ ಮಾತ್ರ.

ಲಾಂಗ್‌ಫೆಲೊ.

" Not by lamentations and mournful chants ought we to celebrate the funeral of a good man, but by hymns, for in ceasing to be numbered with mortals he enters upon the heritage of a diviner life"

PLUTARCH.

"ನಾವು ಒಳ್ಳೆಯ ಮನುಷ್ಯನ ಅಪರಕರ್ಮವನ್ನು ಗೋಳಾಡುವಿಕೆಯಿಂದಲೂ ದುಃಖಯುಕ್ತವಾದ ವಾಕ್ಯಗಳಿಂದಲೂ ನಡೆಸಬಾರದು. ಅದಕ್ಕೆ ಬದಲು ದೇವರ ಪ್ರಾರ್ಥನೆಯಿಂದ ನಡೆಯಿಸಬೇಕು. ಏತಕ್ಕೆಂದರೆ ಜೀವಕ್ಕೋಟಿಯ ಮಧ್ಯದಿಂದ ಪಾರಾದವನು ತನ್ನ ಹಕ್ಕಾದ ದೈವೀ ಸಂಪತ್ತನ್ನು ಹೊಂದುವವನಾಗಿದ್ದಾನೆ."

ಪ್ಲುಟಾರ್ಕ್.

" Be of good cheer about death, and know this of a truth, that no evil can happen to a good man, either in life or after death."

SOCRATES.

ಮಲೆಜ್ವರಕ್ಕೆ ಮಲೇರಿಯಾನ

ಇದು ಮಲೆಜ್ವರ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ೨ ಅ ೩ ದಿವಸಕ್ಕೊಮ್ಮೆ ಬರುವಜ್ವರ, ಕ್ವಿನೇನಿನಿಂದಲೂ ಇಂಜಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ಗೆದ್ದ ಸಮೇತ ಸಂಪೂರ್ಣ ಗುಣಪಡಿಸುತ್ತದೆ. ೪ ಔನ್ಸ್ ಸೀಸೆಗೆ ಆಣೆ 0-14-0, 8 ಔನ್ಸ್ ಸೀಸೆಗೆ ರೂ. 1-8-0, ಡಜ್ಜನಿಗೆ ರೂ. 9-12-0, ರೂ. 16-8-0.

ಕಂಪೌಂಡ್ ಸಿರಪ್ ಸಾಲಸೆವನ—ಸ್ವಪ್ನೇಂದ್ರಿಯ ಸ್ವಲನ, ಶೀಘ್ರಸ್ಖಲನ, ಧಾತುಕಳಕೊಳ್ಳುವದು, ಮೂತ್ರದೊರೆತನಸ್ವವಾಗುವದು, ವೀರ್ಯಸ್ಥಂಭನ, ತೆಳ್ಳಗಾದಧಾತು, ಇವೆಲ್ಲದ ಬಾಧವನ್ನು ಕಿತ್ತು ಬಿಸಾಡುವದಲ್ಲದೆ ಧಾತುಪುಷ್ಟಿ ರಸಾಯನ ವಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0.

ಪ್ರಖ್ಯಾತಿಪಟ್ಟ ವಮನೆ ಎಳ್ಳೆಣ್ಣೆಲ್ಲರ್ ಬಿಲ್ಲೆಗಳು—ಸಕಲತರದ ಹೊಟ್ಟಿ ಹುಳುಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ. ಡಜನ್ನಿಗೆ ಆ. 0-5-0 ನೂರರ ಪಾಟ್ಟಿಗೆ ರೂ. 2-0-0.

ಕಂಪೌಂಡ್ ಸಿರಪ್ ಬ್ಲಾಟಿ—ಜಠೇ 3 ತಿಂಗಳ ಸೇವನೆಯಿಂದ ಉಚ್ಛ್ವಾಸ, ನೇತ್ರಸ್ಥ, ಪ್ರಾಸವನ್ನು ಪಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ. 3-8-0, ರೂಪಾಯಿ 1-14-0.

ಬೇಬಿ ಟೋ—ಬಾಲ್ಯಾವಸ್ಥೆಯಲ್ಲಿ ಎಲುಬುಗಳಲ್ಲಿ ಸುಣ್ಣದ್ಧಾತುವು ಕಡಮೆಯಾಗಿ ಎಲುಬುಗಳು ಮೆತ್ತಗಾಗಿ ತಾಮರೆನ್ಸುಹಣ ರೋಗದಿಂದ ನಾಸಾ ಜೋಲುಬಿದ್ದು, ಮೈ, ಕೈ, ಕಾಲು ಸೊರಗಿ ಕ್ಷೀಣವಾಗಿ ಬಿಡುವ ಮಕ್ಕಳಿಗೆ ಪ್ರಸಿದ್ಧ ಅಮೃತ—

ಸೀಸೆಗೆ ರೂಪಾಯಿ 1-4-0

ಕಂಪೌಂಡ್ ಸಿರಪ್ ವೆಸಿಳೂಜ—ಪ್ರಮೇಹ, ಮೂತ್ರದ್ವಾರದಿಂದ ದುರ್ವಾಸನೆಯ ಕೀವು, ಸೂತ್ರಹೊಯ್ಯುವಾಗ ತನೆಯಲಾರದ ಕಣಿ ಉರಿ, ಮೂತ್ರಕೃಚ್ಛ್ರ, ಮೂತ್ರ ಆಗಾಗ್ಗೆ ಬಂದು ತಡೆಯಲಕ್ಕೆ ಸಾಮರ್ಥ್ಯವಿಲ್ಲದಿರುವಿಕೆ. ಇವೇ ಮೊದಲಾದ ಪ್ರಮೇಹದ ಲಕ್ಷಣಗಳ ಬುಡವನ್ನು ಕೆಲವು ತಾಸುಗಳಲ್ಲಿ ರಾಮಬಾಣವಂತೆ ನಿಲ್ಲಿಸುವದು.

ಸೀಸೆಗೆ ರೂ. 3-8-0, ರೂ. 1-14-0

ಕುದ್ಮ ಟಿಕ್ಕು, ಹೊಮ್ಮೊಪಥಿ ಔಷಧಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.

[೩] ಮಲೇರಿಯಾನ ಕಂಪೆನಿ, (2I) ಮಂಗಳೂರು, ದ. ಕ.

"ಸಾವಿನ ವಿಷಯದಲ್ಲಿ ಸಂತೋಷದಿಂದಿರು; ಒಳ್ಳೆಯ ಮನುಷ್ಯನಿಗೆ ಜೀವನದಲ್ಲಾಗಲಿ ಮೃತನಾದಮೇಲಾಗಲಿ ಎಂದೂ ಕೆಡಕಾಗಲಾರದೆಂದು ನಿಶ್ಚಯವಾಗಿ ತಿಳಿದಿರು.

ಸಾಕ್ರೆಟಿಸ್.

"Death is the golden key that opens the palace of eternity."

MILTON.

"ಸಾವೆಂಬುದು ನಿತ್ಯಜೀವನದ ಅರಮನೆಯ ಬೀಗವನ್ನು ತೆಗೆಯುವ ಚಿನ್ನದ ಬೀಗದಕೈಯಾಗಿದೆ."

ಮಿಲ್ಟನ್.

To persevere

"In obstinate condolement is a course of impious stubbornness 'tis unmanly grief: It shows a will most incorrect to heaven, A heart unfortified a mind impatient, An understanding simple and unschool'd

. . . . . .

'Tis a fault to heaven, A fault against the dead, a fault to nature, To reason most absurd."

HAMLET, ACT i. SC. 2.

"ನಿರಂತರ ಶೋಕಿಸುವುದು ಭಕ್ತಿಯಿಲ್ಲದ ಕಠಿನ ಮಾರ್ಗ, ಅದು ಅಮಾನುಷವಾದ ದುಃಖ, ಅದು ದೇವರ ವಿಷಯದಲ್ಲಿರುವ ತಪ್ಪುತಿಳುವಳಿಕೆ, ಧೃಢವಿಲ್ಲದ ಹೃದಯ, ಚಂಚಲವಾದ ಮನಸ್ಸು, ಹತೋಟಿಯಲ್ಲಿಲ್ಲದ ಬುದ್ಧಿ ಇವುಗಳನ್ನು ವ್ಯಕ್ತಪಡಿಸುತ್ತದೆ..... ....."

ಇದು ದೇವರ ವಿಷಯದಲ್ಲಿ ಅಪರಾಧ, ಮೃತರ ವಿಷಯದಲ್ಲೂ ಪ್ರಕೃತಿ ವಿಷಯದಲ್ಲೂ ತಪ್ಪು ಯೋಚಿಸುವನಕ್ಕೂ ಕೂಡ ಅಸಹ್ಯವಾದದು." ಹ್ಯಾಂಮ್ಲೆಟ್ ಆಕ್ಟ್ 1 ಸೀನ್ 2.

ಷೇಕ್ಸ್‌ಪಿಯರ್ ಕವಿಯು ತನ್ನ "ಹ್ಯಾಮ್ಲೆಟ್, ಕಿಂಗ್ ಲೀರ್ ಮತ್ತು ರೋಮಿಯೋ ಮತ್ತು ಜೂಲಿಯಟ್" ಎಂಬ ಮೂರು ಪ್ರಸಿದ್ಧ ನಾಟಕಗಳಲ್ಲಿ ಸಾವಿನಿಂದಾಗುವ ವ್ಯಸನದಲ್ಲಿ ತನ್ನ ಮತವೇನೆಂಬುದನ್ನು ತಿಳುಹಿಸಿರುತ್ತಾನೆ. ಒಬ್ಬ ಗ್ರಂಥಕಾರನು, ಪೂರ್ವಕಾಲದ ಅಥವಾ ವರ್ತಮಾನಕಾಲದ ಯಾವ ಮಹನೀಯನೂ ಸತ್ತವರಿಗಾಗಿ ವ್ಯಸನಪಡುವದು ಎಷ್ಟು ದೋಷ? ಭಕ್ತಿ ಹೀನತೆ, ಮೃತರ ವಿಷಯದಲ್ಲಿ ಎಷ್ಟು ಅಪರಾಧ? ಪ್ರಕೃತಿಯ ವಿಷಯದಲ್ಲಿ ತಪ್ಪು ತಿಳಿವಳಿಕೆ? ಸ್ವಸುಖತತ್ಪರತೆ? ಎಂಬುದನ್ನು ಷೇಕ್ಸ್‌ಪಿಯರಿನಷ್ಟು ಯೋಚಿಸಿ, ವಾದಿಸಲಸಾಧ್ಯವಾದಷ್ಟು ಖಚಿತವಾಗಿ ತಿಳಿಸಿಲ್ಲವೆಂದು ಬರೆದಿರುತ್ತಾನೆ. ನಾವು ಕಳೆದುಕೊಂಡದ್ದಕ್ಕಾಗಿ ನಾವು ದುಃಖಿಸಿದರೆ ಅದು ನಮ್ಮ ಸ್ವಸುಖತತ್ಪರತೆಯನ್ನು ನಿರ್ವಿವಾದವಾಗಿ ತೋರಿಸುತ್ತದೆ. ನಮ್ಮ ಪ್ರೀತಿಪಾತ್ರರಾದ ಮೃತರು ಸ್ವರ್ಗದಲ್ಲಿರುವರೆಂದು ತಿಳಿದೂ ವ್ಯಸನಪಡುವದಾದರೆ ಅವರ ಸುಖದ ವಿಷಯದಲ್ಲಿ ನಮ್ಮ ಅಸಹನೆಯನ್ನು ತೋರ್ಪಡಿಸದಂತಾಗುವದು.

"ನಮ್ಮ ಸ್ನೇಹಿತನು ಉಚ್ಚಪದವಿಗೆ ವರ್ಗಮಾಡಲ್ಪಟ್ಟಾಗ ನಾವು ವ್ಯಸನಪಡುವುದಿಲ್ಲ. ನಮ್ಮ ಸೋದರರು ಉತ್ತಮಸ್ಥಿತಿಗೆ ಬಂದಾಗಲಾಗಲಿ ನಮ್ಮ ತಾಯಿ ಅಥವಾ ಮಗುವಿನ ಸುಖವನ್ನು ನೋಡಿ ದುಃಖಿಸುವುದಿಲ್ಲ. ಹೀಗಿರಲು ನಮ್ಮ ಸ್ನೇಹಿತರು, ಸೋದರನು, ಸೋದರಿಯು, ಮಗುವು ಅಥವಾ ತಾಯಿಯು ಮರಣಹೊಂದಿ ಸೌಖ್ಯವನ್ನು ಪಡೆದಾಗ ಯಾತಕ್ಕೆ ವ್ಯಸನಪಡಬೇಕು?"

ಷೇಕ್ಸ್‌ಪಿಯರಿನ ಮತದಂತೆ ನಾವು ಸ್ವಸುಖ ತತ್ಪರರಾಗದೆ, ಬುದ್ಧಿಯುಳ್ಳವರೂ ನಂಬಿಕೆಯುಳ್ಳವರೂ ಆಗಿದ್ದ ಪಕ್ಷದಲ್ಲಿ ಯಾರಾದರೂ ನಮ್ಮ ಪ್ರೀತಿಪಾತ್ರರ ಮರಣ ಸಮಯದಲ್ಲಿ ಸಂತೋಷವನ್ನೇ ಪಡಬೇಕು. ನಮ್ಮ ಮತ್ತು ಇತರರ ಮೇಲ್ಗೈಗಾಗಿ ಪ್ರೀತಿಪಾತ್ರರು ಪ್ರೀತಿಗಾಗಿ ನಮ್ಮನ್ನು ಜಗುಟೆ ನೋಯಿಸಿದರೂ ಅದು ಹೇಗೆ ಆಪೇಕ್ಷಣೀಯವೋ ಹಾಗೆಯೇ ಮರಣವನ್ನೂ ಅದೇ ದೃಷ್ಟಿಯಿಂದ ನೋಡಿ ಸ್ವಾಗತಿಸಬೇಕು. ಮೃತ್ಯವನ್ನು ಎದುರಿಸಿ ಹೊಡೆದಾಡುವ ಬದಲು ನೂತನ ವಧುವನ್ನೋಪಾದಿಯಲ್ಲಿ ಅದನ್ನಾಲಂಗಿಸಲು ಸಿದ್ಧರಾಗಿರಬೇಕು.

ಮಾತಾಪಿತರು ತಮ್ಮ ಸಲಕ್ಷಣವಾದ ಮಗುವಿನ ಮರಣಕ್ಕಾಗಿ ದುಃಖಿಸಿದಾಗ ಹೀಗೆ ಬೋಧಿಸಲ್ಪಟ್ಟಿದ್ದಾರೆ—

"Heaven and yourself had part in this fair maid; now Heaven hath all, and all the better is it for the maid: your part in her you could not keep from death, but Heaven keeps his part in eternal life."

"ಈ ಅಂದವಾದ ಮಗುವಿನಲ್ಲಿ ನೀವೂ ಈಶ್ವರನೂ ಭಾಗತನ್ನು ಹೊಂದಿದ್ದಿರಿ. ಈಗ ದೇವರೇ ಎಲ್ಲವನ್ನೂ ತೆಗೆದುಕೊಂಡನು ಅದರಿಂದ ಮಗುವಿಗೆ ಒಳ್ಳೆಯದೇ ಆಯಿತು. ಯಾಕೆಂದರೆ ನಿಮ್ಮ ಭಾಗವನ್ನು ಮರಣದಿಂದ ನೀವು ತಪ್ಪಿಸಲಾರಿರಿ, ಆದರೆ ದೇವರಾದರೊ ಅದನ್ನು ಮರಣರಹಿತವಾದ ಸೌಖ್ಯದಲ್ಲಿಟ್ಟಿರುತ್ತಾನೆ.

ಪ್ರಪಂಚದಲ್ಲಿನ ಯಾವ ಚರ್ಚೆಯೂ ಈ ಷೇಕ್ಸ್‌ಪಿಯರಿನ ಯೋಚನೆಯಲ್ಲಿರುವ ಸತ್ಯ ಮತ್ತು ಜ್ಞಾನವನ್ನು ಕಡಮೆಮಾಡಲಾರದು. ಆದ್ದರಿಂದ ಮಹಿಳೆಯರೆ ಮತ್ತು ಮಹನೀಯರೆ, ನಮ್ಮನ್ನು ಬಿಟ್ಟು ಹೋಗಿರುವ ಡಾ|| ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರ ಆತ್ಮವು ಸ್ವರ್ಗದಲ್ಲಿರುವುದೆಂದು ನಿಶ್ಚಯವಾಗಿ ನಂಬಿ ಆ ಆತ್ಮಸುಖ ಶಾಂತಿಗಳಿಗಾಗಿ ಭಗವಂತನನ್ನು ಪ್ರಾರ್ಥಿಸೋಣ!

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರವಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೫ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪುಷ್ಕಳರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡಿಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಧನ್ಯವಾದ ಚಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಿಹಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ

ಮ್ಯಾನೇಜರ್,—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ಕೆಂಪು	ನುಣ್ಣಲ್ಕ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ತ್ರಿನೇತ್ರ ಸಂಜೀವ	೧	೮—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
	ಭಸ್ಮಗಳು.	
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೩—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿಕ್ಕಾಳಿಭಸ್ಮ	೧	೦—೮—೦
ಕಂಚಿಸಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವದೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್, ಒಮಿನುತ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ಕ್ಕೆ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ಧಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ .... ೦—೧—೬
ಸದ್ಗುರು ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೫ಕ್ಕೆ .. ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೫ಕ್ಕೆ .... ೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯
ಶ್ರೀ ರೇಣುಕಾಚಾರ್ಯರು ವಿಧೇಹಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೫ಕ್ಕೆ .... ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಂಭುಲಿಂಗೇಶ್ವರ ಶಿವಾಚಾರ್ಯರ ಫೋಟೋ .... ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .. ೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸ್ನಾನಥಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೫ಕ್ಕೆ ... ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೫ಕ್ಕೆ ... ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೫ಕ್ಕೆ .. ೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ... ೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ .. ೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರುವ ಸುಂದರ ಫೋಟೋ ... ೦—೦—೯
ಸೋಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಆಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ ... ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧೦ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇವನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ.—ಪೀನಸ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು. ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟು ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇವನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ರಗಸಟ್ಟೆ ಕಳುಹಿಸಲಾಗುವದು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೩-೮-೦ ವಿ ಪಿ. ೪ ಆಣೆ.

ನಿಮ್ಮ ಆಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[20] ಪೋ ಬಾ. ೫೧೦. ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೨ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .... ೧ ಆಣೆ
ಬಸವಾದಿನಿಜತತ್ತ್ವಾರ್ಪಣ (೪ನೆಯ ಆವೃತ್ತಿ) .... ೨ ಆಣೆ
ಶ್ರೀರೇಣುಕಾಚಾರ್ಯಶತಕ(೩ನೆಯ ಆವೃತ್ತಿ) .... ೨ ಆಣೆ
ಪಂಚಾಚಾರ್ಯಪ್ರಭಾಕರ .... ೨ ಆಣೆ
ಶ್ರೀಗುರುತತ್ತ್ವಪದಗಳು .... ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ .... ೨ ಆಣೆ
ವೀರಶೈವಮತವಿಮಾಂಸಾ .... ೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ
A brief life-sketch of Pandit Sri Kashinatha Shastriji (*English*) **4 As.**
ಸನ್ಯಾಸಾಶ್ರಮವಿಮರ್ಶತತ್ತ್ವನಿರ್ಣಯ (೩ನೆಯ ಆವೃತ್ತಿ) .... ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) .... ೬ ಆಣೆ
ವೀರಶೈವಮಹಾತ್ಮರು .... ೮ ಆಣೆ
ಬಸವಸ್ವಾಂತದಿವಾಕರ (೨ನೆಯ ಆವೃತ್ತಿ) .... ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (*ತೆಲುಗು*) **೮ ಆಣೆ**
Speeches by Pandit Shri Kashinatha Shastri (*English*) **12 As.**

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) .... ೧೨ ಆಣೆ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೩ ಪುಟ) .... ೮ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೩ ರೂ.
ವೀರಶೈವಸಿದ್ಧಾಂತಸುಧಾಕರ .... ೩ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .... .. ೧ ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.
ಈಶಾವಾಸ್ಯೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಿಸಲ್ಪಟ್ಟಿದೆ) .... ೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) .... ೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ
ವೀರಶೈವರತ್ನ (ಮರಾಠಿ) ... ... ೧ ರೂ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ) ... ೧ ರೂ.
ವೀರಶೈವೇಂದ್ರಶೇಖರ (ಸಂಸ್ಕೃತ) ... ... ೧ ರೂ.
ನಂದಿಕೇಶ್ವರಕಾರಿಕಾ (ಸಂಸ್ಕೃತ) ... ... ೨ ಆಣೆ.
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ... ... ೨ ಆಣೆ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧೦ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಮಹಾವಿದ್ವಾನ್ ವೇದ ಶಿರೋ ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಭಜನೆಗೆ ಸಂತೋಷಪಟ್ಟು ಜಗದ್ಗುರು ಪಂಚಾಚಾರ್ಯರ ಅಕ್ಷರಮಾಲೆಯಿಂದ ಶೋಭಿಸುವ ಮಕಮಲ್ಲಿನ ಮಕರ ತೋರಣವನ್ನು ತಯಾರುಮಾಡಿಸಿ ಈ ಸಭೆಯು ಚಿರ ಸ್ಥಾಯಿಯಾಗಿ ನಡೆಯಲೆಂದು ಸಂಘಕ್ಕೆ ಅರ್ಪಿಸಿದರು ಸಾಯಂಕಾಲದಲ್ಲಿ ಭಜಂತ್ರಿ ದೊಳ್ಳುಭಜನಾ ದೊಡನೆ ವಾಲಕಿಯಲ್ಲಿ ಉತ್ಸವವು ಬಿಜಾರದಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಆ ದಿವಸ ಎಲ್ಲಿ ನೋಡಿದರೂ ಆಚಾರ್ಯರ ಜಯಘೋಷವೇ ಕೇಳಬರುತ್ತಿದ್ದಿತು ಹೆಜ್ಜೆ ಹೆಜ್ಜೆಗೆ ಸುಮಂಗಲಿಯರು ಆರತಿಯನ್ನು ಬೆಳಗುತ್ತಿದ್ದರು. ಪ್ರತಿಯೊಬ್ಬರು ಅಂಗಡಿ ಮನೆಗಳ ಮುಂಭಾಗದಲ್ಲಿ ಫಲಕರ್ಪೂರಾದಿಗಳನ್ನು ಅರ್ಪಿಸುತ್ತ ಜಯಾಪೇರ್ವಾದವನ್ನು ಪಡೆದರು ಯಾವ ವಿಘ್ನವಿಲ್ಲದೆ ಉತ್ಸವವು ಸ್ವಾಮಿಗಳು ಮುಖ್ಯಾಂಮಾಡಿದ ಛತ್ರೀದಸ್ವಾಮಿಗಳ ಮಠಕ್ಕೆ ಬಂದಾಕ್ಷಣವೇ ಆಚಾರ್ಯರಿ ಜಯಘೋಷ ದೊಡನೆ ಉತ್ಸವವು ಸಮಾಪ್ತಿಮಾಡಲ್ಪಟ್ಟಿತು ಮಹಾರಯರೇ ಚಿಕ್ಕಮಂಗೂರ ಸ್ವಾಮಿಗಳು ಇಲ್ಲಿಗೆ ದಯವ ಮಾಡಿಸಿ ಭಕ್ತರಿಗೆ ಬೋಧಮಾಡಿ ಈ ಮಂಗಲ ಕಾರ್ಯವನ್ನು ನಡೆಸಿದ್ದು ಸ್ತುತ್ಯವಾಗಿದೆ ಇದರಂತೆ ಪ್ರತಿಯೊಬ್ಬ ಧರ್ಮಗುರುಗಳು ದೇಶಮಧ್ಯದಲ್ಲಿ ಸಂಚರಿಸಿ ಭಕ್ತಮಂಡಳಿಗೆ ಉಪದೇಶವನ್ನು ಮಾಡುತ್ತಬಂದರೆ ವೀರಶೈವಧರ್ಮವು ಪ್ರಜ್ವಲಗೊಳ್ಳುವುದಂಲ್ಲಿ ಅಭ್ಯಂತರವಿಲ್ಲ

ಪ್ರದ್ಯಕ್ಷದರ್ಶಿ.

ಕೃಷ್ಣರಾಜಸಾಗರದ ಬೃಂದಾವನದಲ್ಲಿ ಲೋಕಸೇವಾನಿರತ ಸಿದ್ಧಲಿಂಗಶೆಟ್ಟರಿಗೆ ಸತ್ಕಾರಕೂಟ

ತಾ॥ ೨-೯-೩೮ ನೇ ಸೋಮವಾರ ಸಾಯಂಕಾಲ ೫ ಘಂಟೆಯಲ್ಲಿ ಪ್ರೋಗ್ರಾಂ ಪ್ರಕಾರ ಸತ್ಕಾರಕೂಟವನ್ನು ಮೈಸೂರು ಜಿಲ್ಲಾಧಿಕಾರಿಗಳಾದ ಮೆಹರ್ಬಾ ಮೆಕ್ರಿ ಸಾಹೇಬರ ಅಧ್ಯಕ್ಷತೆಯಲ್ಲಿ ಕೃಷ್ಣರಾಜನಗರದ ತಾಲೂಕು ಹೊಸಅಗ್ರಹಾರದ ಹೋಬಳಿ ಗಳಿಗೇಕರೆ ಕಾರ್ಗಹಳ್ಳಿಕೊಪ್ಪಲು ದೊಡ್ಡಕೊಪ್ಪಲು ಗ್ರಾಮಸ್ಥರು ಲೋಕಸೇವಾನಿರತ ಮ॥ ರಾ॥ ಶೆಟ್ಟರಿಗೆ ಕೊಡಲಾಯಿತು ಈ ಸಮಾರಂಭಕ್ಕೆ ಎಗ್ಜಿಕ್ಯೂಟೀವ್ ಇಂಜನೀಯರ್ ಶೇಷಗಿರಿರಾಯರು, ಡಿ॥ ಫಾರೆಸ್ಟರ್ ರೇಣ್ಣನವರು ಮೈಸೂರು ಬ್ಯಾಂಕ್ ಮ್ಯಾನೇಜರ್ ಎ ಎಸ್. ನುಲ್ಲಪ್ಪನವರು ಎಫ್. ಸಿ ದೇವರಾಜೆ ಅರಸಿನವರು, ಲ್ಯಾಂಡ್ ಅಕ್ವಿಜೇಷನ್ ಸಾಹೇಬರು, ಕೃಷ್ಣರಾಜನಗರದ ಅಸಿಸ್ಟೆಂಟ್ ಇಂಜನೀಯರು, ಸೆಕ್ಷನ್ ಆಫೀಸರು, ಕೃಷ್ಣರಾಜಸಾಗರದ ಅಸಿಸ್ಟೆಂಟ್ ಇಂಜನೀಯರುಗಳು, ಮೈಸೂರು ಸಿಟಿ, ಮುನಿಸಿಪಲ್ ಕೌನ್ಸಿಲ್ ವೈಸ್ ಪ್ರೆಸಿಡೆಂಟರು ಧನಕೋಟಿ ಶೆಟ್ಟರು, ಮುನಿಸಿಪಲ್ ಕೌನ್ಸಿಲರ್ ತಮ್ಮಯ್ಯನವರು ಕೃಷ್ಣರಾಜನಗರದ ಮುನಿಸಿಪಲ್ ಕೌನ್ಸಿಲ್ ವೈಸ್‌ಪ್ರೆಸಿಡೆಂಟರು ವೈ. ವಿ ಗುಂಡೂರಾಯಸು, ವೈ. ಯಸ್. ವೆಂಕಟಸುಬ್ಬಯ್ಯನವರು, ಡಿ॥ ಡೋರ್ಡ್ ಮೆಂಬರ್ ಬಿ. ಚೆನ್ನಪ್ಪನವರು, ರಿಟೈರ್ಡ್ ಡಾ. ನಾಗಭೂಷಣಾದಿಯರು, ರಿಟೈರ್ಡ್ ಪಂಡಿತರು ಕೃಷ್ಣಪ್ಪನವರು, ಆಡ್ವೋಕೇಟ್ ತಿಮ್ಮಪ್ಪಯ್ಯನವರು ಆದಿಯಾಗಿ ಅನೇಕಜನ ಖಾಸಗೀ ದೊಡ್ಡ ಮನುಷ್ಯರುಗಳು ಸುಮಾರು ೩೦೦ ಜನಗಳು ಸೇರಿದ್ದರು ಮೊದಲು ಫೋಟೋವನ್ನು ಕಾವೇರಮ್ಮನವರ ವಿಗ್ರಹದ ಸಮೀಪದಲ್ಲಿ ತೆಗೆಯಲಾಯಿತು. ಅನಂತರ ಬೃಂದಾವನದಲ್ಲಿ ಇರುವ ಇಂಗ್ಲೀಷ್ ಟ್ರಾವಲರ್ಸ್ ಬಂಗ್ಲೆಯಲ್ಲಿ ಸರ್ವರಿಗೂ ಫಲಾಹಾರಕೊಡಲಾಯಿತು ಮೈಸೂರು ಮ॥ ರಾ॥ ಮಾಯಿಗೌಡರಿಂದ ನಪರತ್ನಮಾಲೆಕೆ ಓದಿ ಲೋಕಸೇವಾನಿರತ ಶೆಟ್ಟರಿಗೆ ಒಪ್ಪಿಸಲಾಯಿತು ಗಳಿಗೇಕರೆ, ಕಾರ್ಗಹಳ್ಳಿಕೊಪ್ಪಲು ದೊಡ್ಡಕೊಪ್ಪಲು, ಗ್ರಾಮಸ್ಥರು ಅಭಿನಂದನ ಪತ್ರಿಕೆಯನ್ನು ಓದಿ ಗಂಧದ ಪೆಟ್ಟಿಗೆಯಲ್ಲಿಟ್ಟು ಲೋಕಸೇವಾನಿರತರಿಗೆ ಒಪ್ಪಿಸಲಾಯಿತು ಮ॥ ರಾ॥ ಶೆಟ್ಟರು ಸಮಯೋಚಿತವಾದ ಭಾಷಣವನ್ನುಮಾಡಿ ಅಧ್ಯಕ್ಷರಿಗೂ ಸಭಿಕ ಮಹಾಶಯರಿಗೂ, ಈ ಸತ್ಕಾರಕೂಟವನ್ನು ಏರ್ಪಡಿಸಿದ ಗ್ರಾಮಸ್ಥರಿಗೂ, ಧನ್ಯವಾದವನ್ನು ಅರ್ಪಿಸಿದರು. ಅನಂತರ ಮೈಸೂರು ಸಿಟಿ ಮುನಿಸಿಪಲ್ ವೈಸ್‌ಪ್ರೆಸಿಡೆಂಟರು ಮ॥ ರಾ॥ ಶೆಟ್ಟರ ಗುಣಗಾನಮಾಡಿ ಭಾಷಣಮಾಡಿದರು. ಕೃಷ್ಣರಾಜನಗರದ ವೈಸ್‌ಪ್ರೆಸಿಡೆಂಟರು ಮ॥ ರಾ॥ ವೈ. ವಿ ಗುಂಡೂರಾಯರು ಭಾಷಣಮಾಡಿ ಮ॥ ರಾ॥ ಶೆಟ್ಟರು ಮಹಾಪ್ರಭುಗಳಿಂದ ಪ್ರಶಸ್ತಿಯನ್ನು ಪಡೆದು ನಮ್ಮ ಕೃಷ್ಣರಾಜನಗರಕ್ಕೆ ಕೀರ್ತಿಯನ್ನು ತಂದರೆಂದು ಗುಣಗಾನ ಮಾಡಿದರು. ಜಿಲ್ಲಾಧಿಕಾರಿಗಳಾದ ಮೆ॥ ಮೆಕ್ರಿಸಾಹೇಬರು ಲೋಕಸೇವಾನಿರತರಿಗೆ ಸತ್ಕಾರಕೂಟವನ್ನು ನನ್ನ ಅಧ್ಯಕ್ಷತೆಯಲ್ಲಿ ನಡೆಸಿರುವುದು ಎರಡನೆಯ ಸಾರೆಯೆಂದು ಹೇಳಿ ಶೆಟ್ಟರು ಮಾಡಿರುವ ಪ್ರಜಾಸೇವೆಯನ್ನು ಪ್ರಭುಗಳು ದಿವ್ಯಚಿತ್ತಕ್ಕೆ ತಂದು ಈ ಪ್ರಶಸ್ತಿಯನ್ನು ದಯಪಾಲಿಸಿದ್ದು ತುಂಬಾ ಸಂತೋಷವಾದುದಕ್ಕಾಗಿ ಮೇಲ್ಕಂಡ ಗ್ರಾಮಸ್ಥರುಗಳು ಈ ಸತ್ಕಾರಕೂಟವನ್ನು ನಿರ್ವಡಿಸಿದ್ದಕ್ಕೆ ವಂದನೆಯನ್ನು ತಿಳಿಸಿ ಮ॥ ರಾ॥ ಶೆಟ್ಟರ ಸೇವೆಯನ್ನು ಧನಿಕರೆಲ್ಲರೂ ಮೇಲ್ಪಂಕ್ತಿಯನ್ನಾಗಿಟ್ಟುಕೊಳ್ಳವುದು ಬಹಳ ಒಳ್ಳೆಯದೆಂದು ತಿಳಿಸಿ ಸ್ವಾರಸ್ಯವಾದ ಭಾಷಣಮಾಡಿದರು ಸರ್ವರೂ ಗಂಧ ಹೂವಿನಹಾರಗಳನ್ನು ಸ್ವೀಕರಿಸಿ ಜಯಕಾರದೊಡನೆ ತೆರಳಿದರು. ಗಳಿಗೇಕೆರೆ ಕಾರ್ಗಹಳ್ಳಿ ಕೊಪ್ಪಲು, ದೊಡ್ಡಕೊಪ್ಪಲು ಗ್ರಾಮಸ್ಥರುಗಳಲ್ಲಿ ಪ್ರಮುಖರಾದ ಮ॥ ರಾ॥ ಗಳಾದ ಹಲಗಪ್ಪನವರು, ಚಿಕ್ಕವೀರಶಪ್ಪನವರು, ವೀರಣ್ಣನವರು, ಕುನ್ನೇಗೌಡರು ಬಹಳ ಮಂತುವರ್ಜನಹಿಸಿ ಈ ಸತ್ಕಾರಕೂಟವನ್ನು ಏರ್ಪಡಿಸಿ ಸರ್ವರ ವೆಚ್ಚಗೆಗೆ ಪಾತ್ರರಾದರು

ಪ್ರತ್ಯಕ್ಷದರ್ಶಿ

ಶ್ರೀ ಗುರುನಿವಾಸ ಸಂಸ್ಕೃತಹೈಸ್ಕೂಲಿನಲ್ಲಿ ವಿದ್ಯಾಗಣಪತಿ ಮಹೋತ್ಸವ, ಬಳ್ಳಾರಿ

ಸ್ಮರಿತವರ್ಷ ಪದ್ಧತಿಯಂತೆ ಈ ವರ್ಷವಾದರೂ ಮೇಲ್ಕಂಡ ಹೈಸ್ಕೂಲಿನಲ್ಲಿ ಶ್ರೀವಿದ್ಯಾಗಣಪತಿಮಹೋತ್ಸವಸಮಾರಂಭವು ಒಳ್ಳೆ ವೈಭವದಿಂದ ನೆರವೇರಿತು ಭಾದ್ರಪದ ಶುದ್ಧ ೪ ಭಾನುವಾರ ಸಾಯಂಕಾಲ ೫ ಘಂಟೆಗೆ ಟಿ. ಯಂ ಶಿವಶಂಕರಶರ್ಮ ಇವರ ವೈದಿಕತ್ವದಲ್ಲಿ ವಿಧ್ಯುಕ್ತ ಪೂಜೆಯೂ ಮಹಾಮಂಗಳಾರತಿಯೂ ಆದನಂತರ ಆಂದಿನ ಕಾರ್ಯಕ್ರಮವು ಪ್ರಾರಂಭಿಸಿತು. ತಾ॥ ೩೦-೮-೩೮ ನೇ ಮಂಗಳವಾರ ಸಾಯಂಕಾಲ ೬ ಘಂಟೆಗೆ 'ಕನ್ನಡದ ಸೊಗಸು' ಎಂಬ ವಿಷಯದಮೇಲೆ ಮೆ॥ ಬಿ ಯಂ. ಮರುಬಸಿದ್ಧಯ್ಯನವರ ಶುಶ್ರಾವ್ಯ ಭಾಷಣವಾಯಿತು ತಾ॥ ೩೧-೮-೩೮ನೇ ಸಾಯಂಕಾಲ ೫ ಘಂಟೆಗೆ ಸಾಹಿತ್ಯತೀರ್ಥ, ವೇದಾಂತಾಚಾರ್ಯ ಇತ್ಯಾದಿ ಬಿರುದಾಂಕಿತರಾದ ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷ ನೀಲಕಂಠತೀವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ "ಸಂಸ್ಕೃತ ಸಾಹಿತ್ಯದಲ್ಲಿ ಕಾಳಿದಾಸನ ಸ್ಥಾನ" ಎಂಬ ವಿಷಯದಮೇಲೆ ಆಸ್ಥಾನವಿದ್ವಾನ್ ವೈ. ನಾಗೇಶಶಾಸ್ತ್ರಿಗಳ ಮನೋಹರ ಭಾಷಣವಾಯಿತು. ಬಳಿಕ ಅಧ್ಯಕ್ಷರ ಉಪದೇಶರೂಪವಾದ ಭಾಷಣವಾಯಿತು. ತಾ॥ ೧-೯-೩೮ನೇ ಗುರುವಾರ ಸಾಯಂಕಾಲ ೬॥ ಘಂಟೆಗೆ ಶ್ರೀ ವಿದ್ಯಾಗಣಪತಿಯ ಮಹೋತ್ಸವವು ರಜತನಿರ್ಮಿತ ಮಂಟಪದಲ್ಲಿ ಮಂಗಲವಾದ್ಯಗಳೊಡನೆ ನಗರದ ಮುಖ್ಯಮುಖ್ಯ ಬೀದಿಗಳಲ್ಲಿ ನೆರವೇರಿತು. ಅನಂತರ ಪ್ರಸಾದವಿನಿಯೋಗವಾಗಿ ಮಹೋತ್ಸವ ಸಮಾರಂಭವು ಸಮಾಪ್ತಿಯಾಯ್ತೆನ್ನಲಿದಿತು. ಈ ಮಹೋತ್ಸವಕಾರ್ಯದಲ್ಲಿ ಬಿ. ಯಂ. ವಿರೂಪಾಕ್ಷಶರ್ಮ, ವಿ ಯಂ. ಪಂಚಾಕ್ಷರಶರ್ಮ, ಎಸ್. ಎಂ. ವೀರೇಶಶರ್ಮ, ಹೆಚ್. ಎಂ. ಅನ್ನದಾನಶರ್ಮ ಇತ್ಯಾದಿಜನರು ಶ್ರಮವಹಿಸಿ ಕಾರ್ಯ ಮಾಡಿದ್ದಕ್ಕಾಗಿಯೂ ಈ ಮಹೋತ್ಸವದಲ್ಲಿ ಭಾಗಿಗಳಾಗಿರತಕ್ಕ ಮಹಾಜನಗಳಿಗೂ ಸರ್ವವಿಘ್ನೇಶ್ವರನಾದ ವಿಘ್ನೇಶನು ಶುಭ್ಯಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ

ಈ ಹೈಸ್ಕೂಲಿನಿಂದ ಮದ್ರಾಸ್ ಗೌರ್ನಮೆಂಟ್ ಪರೀಕ್ಷೆಗೆ ಹೋದ ೫೫ ಜನವಿದ್ಯಾರ್ಥಿಗಳಲ್ಲಿ ೩ ಜನರು ಪಾಸಾಗಿರುವರು. ಇಂತಹ ಕಠಿನಪರೀಕ್ಷೆಯಲ್ಲಿ ೫೫ ಜನರಲ್ಲಿ ೩ ಜನರು ಪಾಸಾಗಿರುವುದು ಹೈಸ್ಕೂಲಿನ ಅಧ್ಯಾಪಕರ ಹಾಗೂ ಪ್ರೆಸಿಡೆಂಟರೇ ಮೊದಲಾದ ಕಮಿಟಿಯ ಮಹಾಜನರ ಶ್ರಮದ ಫಲವೆಂದೇ ಹೇಳಬೇಕಾಗಿದೆ

ತೇರ್ಗಡೆ ಹೊಂದಿದವರ ಹೆಸರು—ವೇ॥ ಎಚ್. ಎಂ. ಗುರುಶಾಂತಶಾಸ್ತ್ರೀ, ವೇ॥ ಸೋಮಶೇಖರಶರ್ಮ ವೇ॥ ನಾಗಭೂಷಣಶರ್ಮ.

ಶಿವಯೋಗಿಶಿವಾಚಾರ್ಯರು,
ನೆಗಳೂರು, ಹಿರೇಮಠ.

ಶ್ರೀ ಮಳಲಿಮಠದ ಸ್ವಾಮಿಗಳವರ ಶುಭಾಗಮನ.

ತೀರ್ಥಹಳ್ಳಿತಾಲೂಕು ಮಳಲಿ ಮಠಾಧ್ಯಕ್ಷರಾದ ಶ್ರೀಗುರು ನಾಗಾರ್ಜುನಶಿವಾಚಾರ್ಯಸ್ವಾಮಿಗಳವರು ಹಂದಿಗನೂರುಸಂಸ್ಥಾನದಿಂದ ಬಂಕಾಪುರದಲ್ಲಿರುವ ತಮ್ಮಶಿಷ್ಯರಾದ ಶ್ರೀಮಾನ್ ಸಿದ್ಧಲಿಂಗಪ್ಪ ಉರ್ಫ ಅಪ್ಪಾಸಾಹೇಬ ದೇಸಾಯಿ ಹಂದಿಗನೂರು ಇವರಲ್ಲಿಗೆ ಇದೇ ತಿಂಗಳು ೫ ನೇ ತಾರೀಖಿನವಿವಸ ಆಗಮಿಸಿದರು. ಶ್ರೀಮಂತ ದೇಸಾಯಿಯವರು ತಮ್ಮ ಗುರುಗಳವರನ್ನು ಅಸಾಧಾರಣ ಪೂಜ್ಯಬುದ್ಧಿಯಿಂದ ಸತ್ಕರಿಸಿ ಪಾದಪೂಜಾದಿಗಳನ್ನು ಮಾಡಿ ಪಾದೋದಕ ಪ್ರಸಾದಾದಿಗಳನ್ನು ಸ್ವೀಕರಿಸಿ ಗುರುಕಾಣಿಕೆಯನ್ನು ಸಮರ್ಪಿಸಿ ಧನ್ಯರಾದರು ಹಂದಿಗನೂರು ಸಂಸ್ಥಾನದಲ್ಲಿರುವ ಭಕ್ತಿಯು ಅತ್ಯಂತ ಸ್ತೋತ್ರಾರ್ಹವಾದುದು. ಶ್ರೀ ಜಗದಾಚಾರ್ಯರು ಈ ಸಂಸ್ಥಾನದ ಸಂತತಿಯವರಿಗೆಲ್ಲ ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುವ. ಓರ್ವಗುರುಭಕ್ತ.

ಪ್ರಶ್ನೋತ್ತರರತ್ನಮೂಲಿಕಾ

ಲೇಖಕರು.—ಮಲ್ಲಿಕಾರ್ಜುನಾರಾಧ್ಯ ರಾಜೆಬೆನ್ನೂರು
ಮಳೆಮರ ಸುಜೇನೂರು.

ಪ್ರ—ಬಾಲ್ಯ ಮತ್ತು ಯೌವನದಲ್ಲಿ ವಿಹಾರಯೋಗ್ಯವಾದ ವಸ್ತುಗಳಾವುವು ?

ಉ—ಬಾಲ್ಯದಲ್ಲಿ ಅಜೇತನವಾದ (ಮರದ) ಬೊಂಬೆಗಳು ಯೌವನದಲ್ಲಿ ಸಜೇತನವಾದ (ಸ್ತ್ರೀ) ಬೊಂಬೆಗಳು. ಆದರೆ, ಬಾಲ್ಯದ ಬೊಂಬೆಗಳಲ್ಲಿ ಅಂಗಗಳಂ ಭೇದಿಸಿನೋಡಲು ಜುಗುಪ್ಸೆಗೆ ವಿಷಯವಾದದ್ದು ಏನೊಂದೂ ಇರುವದಿಲ್ಲ ಯೌವನದ ಬೊಂಬೆಯಂ ನೋಡುವಲ್ಲಿ ಜುಗುಪ್ಸಿತವಾದ ಮಲವು ಸಕಲಾಂಗಗಳಲ್ಲೂ ಕಾಣುವದರಿಂದ, ಅವಿಚಾರ ರಮಣೀಯವಾದ ಚರ್ಮ ಮಾತ್ರದಲ್ಲಿ ಅನುರಾಗವನ್ನುಂಟುಮಾಡುವ ಯೌವನಕ್ಕಿಂತಲೂ ಜುಗುಪ್ಸಿತವಲ್ಲದ ಮರದ ಬೊಂಬೆಯಲ್ಲಿನು ರಾಗವನ್ನುಂಟುಮಾಡುವ ಬಾಲ್ಯಕನವೇ ಸರ್ವೋತ್ತಮವಾದದ್ದು. ಮತ್ತು ಅಧಿವ್ಯಾಧಿಗಳೆಂಬ ಪಕ್ಷಿಗಳಿಗೆ ಅವಾಸವೃಕ್ಷವಾಗಿ, ವಿಲಾಸಮನೋರಥಗಳೆಂಬ ತರಂಗಗಳಿಗೆ ಸಾಗರವಾಗಿ, ವಾಪಲಕ್ಷ್ಮಿಗೆ ವಿಲಾಸಸ್ಥಾನವಾದ್ದರಿಂದ ಧನಕ್ಷಯವನ್ನೂ, ರೋಗದ ಬರುವಿಕೆಯನ್ನೂ, ಜನಾಪವಾದವನ್ನೂ, ಶರೀರಗಳಿತವಾಗುವದನ್ನೂ, ಜ್ಞಾನವೃದ್ಧರ ವಾಕ್ಯವನ್ನೂ, ವಿನಿಸಿಸೇಧಶಾಸ್ತ್ರಗಳನ್ನೂ ಎಣಿಸದಿರುವಂತೆ ನಿಕಾರವನ್ನುಂಟುಮಾಡಿ ಕಂಡ ಕಂಡ ಸ್ಥಳಗಳಲ್ಲಿ ಕೆಡಹುವ ಯೌವನಕ್ಕಿಂತಲೂ ಕೆಟ್ಟದ್ದೂ ಶತ್ರುವೂ ಮತ್ತೊಂದಿಲ್ಲವು. ಆದರೆ ವಾಚಕರೇ ! ದೇಹವೆಂಬ ರಾತ್ರಿಗೆ ಇಂದ್ರಿಯ ಪ್ರಕಾಶವಾಗಿ, ಮನವೆಂಬ ಸಿಂಹಕ್ಕೆ ಸಿಂಹವಾಗಿ, ಜೀವನವೆಂಬ ನದಿಗೆ ಪ್ರವಾಹವಾಗಿ ಇಂದ್ರಿಯಗಳೆಂಬ ಚಕೋರಗಳಿಗೆ ಇಂದ್ರಮಂಡಲವಾಗಿ ಬುದ್ಧಿಬಲೋತ್ಸಾಹಗಳೆಂಬ ಪುಷ್ಪಗಳಿಗೆ ವಸಂತಕಾಲವಾಗಿ ಪ್ರಕಾಶಿಸುವ ಯೌವನವು ಜ್ಞಾನ ಸಂಪಾದನೆಗೆ ಮುಖ್ಯಕಾಲವಾದ್ದರಿಂದ ವಿಚಾರದಿಂ ರಾಗದ್ವೇಷ ಸಿಕಾಚಿಗಳಿಗವಕಾಶವಂ ಕೊಡದೆ ನೀರಿನಿಂದ ಕ್ಷೀರವಂ ಸೆಳೆಯುವ ಹಂಸದಂತೆ ಶಾಸ್ತ್ರಾಭ್ಯಾಸಾದಿ ಸದ್ವ್ಯಾಪಾರಗಳಿಂದ ಕಾಮಚಾಪಲ್ಯವಂ ಯಾರು ನಿಗ್ರಹಿಸುವರೋ ಅವರು ವೈದ್ಯಾಧ್ಯಕಾಲದಲ್ಲಿಯೂ ಯೌವನದಲ್ಲಿಯೂ ಸಹ ಸಂತುಷ್ಟರಾಗಿರುವರು. ಮನೋನಿಗ್ರಹವಿಲ್ಲದವರಿಗೆ ಪಶ್ಚಾತ್ತಾಪವೇ ಫಲವಲ್ಲದೆ ಮತ್ತೊಂದಿಲ್ಲವು ಮತ್ತು ಯೌವನದಲ್ಲಿ ಅತ್ಯಂತ್ಯಮುಖ್ಯವಾಗಿ ನುನೋಹರವಾದ್ದು ಕ್ರೀಡಾಸ್ಥಾನವೆಂದು ಪರಿಗ್ರಹಿಸಲ್ಪಟ್ಟಿರುವ ರಕ್ತಮಾಂಸ, ಎಲುಬು, ಜೀರ್ಣ, ಜೊಲ್ಲು, ಸಿಂಬಳ, ಮಲ-ಮೂತ್ರ ಇತ್ಯಾದಿ

[೬ ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೩೮ ನೆಯ ಸೆಪ್ಟೆಂಬರ್ ತಾ॥ ೧೨ನೇ ಸೋಮವಾರ

ಗುರುಸ್ಥಲವಿಚಾರ.

ವೀರಶೈವಮತದ ನಿಜತತ್ವವನ್ನು ಪ್ರಕಾಶಪಡಿಸುವುದಕ್ಕಾಗಿ ಭೂಲೋಕದಲ್ಲಿ ಮಾಹೇಶ್ವರವರ್ಗವೆಂಬ ದೊಂದು ವರ್ಗವು ಅನಾದಿಕಾಲದಿಂದ ಬಂದಿರುತ್ತದೆ. ಈ ಮಾಹೇಶ್ವರರನ್ನು ಆಯಾಯ ದೇಶಾನುಸಾರವಾಗಿ ಕೆಲವೆಡೆಗಳಲ್ಲಿ ಗುರುಸ್ಥಲದವರೆಂದೂ ಕೆಲವೆಡೆಗಳಲ್ಲಿ ಆರಾಧ್ಯರೆಂದೂ, ಕೆಲವೆಡೆಗಳಲ್ಲಿ ಜಂಗಮರೆಂದೂ ಕರೆಯುವ ಸಂಪ್ರದಾಯವುಂಟು. ಈ ಮೂರು ಶಬ್ದಗಳೂ ಘಟ, ಕುಂಭ, ಕಲಶಗಳಂತೆ ಒಂದೇ ಅರ್ಥವನ್ನು ಕೊಡುವ ಶಬ್ದಗಳಾಗಿರುವವು ಭಕ್ತರ ಮನೆಗಳಲ್ಲಿ ಯಾವ ನಿತ್ಯನೈಮಿತ್ತಿಕ ಸಂಸ್ಕಾರಗಳು ನಡೆದರೂ ಅವುಗಳೆಲ್ಲವೂ ಈ ಮಾಹೇಶ್ವರವರ್ಗವಮಿಂದಲೇ ನಡೆಯಬೇಕೆಂಬ ನಿಬಂಧನೆಯು, ಶಾಸ್ತ್ರನಿಯಮವಾಗಿಯೂ. ರೂಢಿವಾಗಿಯೂ ಬಂದಿರುತ್ತದೆ.

ನಷೇಕಾಖೀಲ ಕರ್ಮಾಣಿ ಯಃ ಕರೋತಿ ಯಥಾವಿಧಿ ।
ಸಂಭಾವಯತಿ ಚಾನ್ನೇಸ ಸ ವಿಪ್ರೇಣ ಗುರುರುಚ್ಯತೇ ॥
ಅಲ್ಪಂ ವಾ ಬಹು ವಾ ಯಸ್ಯ ಶ್ರುತಸ್ಯೋಪಕರೋತಿ ಯಃ।
ತಮೇವ ಗುರುಂ ವಿದ್ಯಾತ್ ಶ್ರುತೋಪಕ್ರಿಯಯಾ ತಯಾ॥

ಎಂದು ಮನುಧರ್ಮಶಾಸ್ತ್ರವು ಇದೇ ಅರ್ಥವನ್ನು ಪ್ರತಿಪಾದಿಸುತ್ತದೆ. ಅದರಿಂದ ಗುರುವಪಾಚ್ಯರಾದ ವೀರಮಾಹೇಶ್ವರರು ಮಂತ್ರತಂತ್ರಜ್ಞರಾಗಿ ಶಿಷ್ಯರ ಮನೆಗಳಲ್ಲಿ ನಡೆಯುತ್ತಿರುವ ಗರ್ಭಾಧಾನಾದಿ ಷೋಡಶ ಸಂಸ್ಕಾರಗಳನ್ನೂ ಕ್ರಮವಾಗಿ ನಡೆಯಿಸುವುದರಿಂದಲೂ ಭಗವಂತನನ್ನು ಆರಾಧಿಸುವ ಧ್ಯಾನಿಸುವ ಕ್ರಮಗಳನ್ನು ಪದೇಶವಾಡುವದರಿಂದಲೂ ಗುರುಸ್ಥಲ ಆರಾಧ್ಯ ಜಂಗಮ ಮಾಹೇಶ್ವರ ಇತ್ಯಾದಿ ಹೆಸರುಗಳು ಬಂದಿರುತ್ತವೆ. ಈ ಹೆಸರುಗಳೆಲ್ಲ ವೀರಶೈವಸಿದ್ಧಾಂತಸ್ಥಾಪಕರಾದ ಶ್ರೀ ರೇಣುಕಾದ್ಯಾಚಾರ್ಯರು ಉಪದೇಶಮಗಳಾಗಿರುತ್ತವೆಯಲ್ಲದೆ ಸ್ವೇಚ್ಛಾಕಲ್ಪಿತಗಳಾದ ಶಬ್ದಗಳಾಗಿಲ್ಲವು. ಯಾರು ವಂಶಾನುಗತವಾಗಿ ಮಹಾಚಾರ್ಯರ ಸೂತ್ರಗಳನ್ನವಲಂಬಿಸಿರುತ್ತಾರೆಯೋ ಅವರಲ್ಲಿ ಈ ಎರಿತ್ರನಾಮಗಳು ಅನ್ವಯಿಸುತ್ತವೆ. ವೀರಶೈವಸಿದ್ಧಾಂತದಲ್ಲಿ ಯಾದರೂ ಈ ಶಬ್ದಗಳೆಲ್ಲವೂ ಶಿಷ್ಯನು ಗುರುವಿಗೆ ಸಂಬೋಧಿಸುವ ಶಬ್ದಗಳಾಗಿ ಕಂಡುಬರುವುದರಿಂದ ಈ ನಾಮಗಳನ್ನು ಯಾರು ಬೇಕಾದರೂ ಸ್ವತಂತ್ರವಾಗಿಟ್ಟುಕೊಳ್ಳಲು ಶಕ್ಯವಿಲ್ಲ. ಶ್ರೀರೇಣುಕಭಗವತ್ಪಾದಾಚಾರ್ಯರು,

ಏವಮಾಚಾರಸಂಯುಕ್ತೋ ವೀರಶೈವೋ ಮಹಾವ್ರತೀ ।
ಪೂಜಯೇತ್ತ್ರಿರಯೂ ಭಕ್ತ್ಯಾ ಗುರೂ ಲಿಂಗಂ ಚ ಸಂತತಂ ॥
ಗುರೋಃಶಬ್ದೋರ್ಚನೇನಾಪಿ ಸಾಕ್ಷಾತ್ಪಥ್ಯೇರ್ಚಿತಶ್ಚಿವಃ ।
ಸಾಸ್ತಿ ಭೇದಸ್ತಯೋಃ ಕಶ್ಚಿನೇಕತ್ವಾತ್ತತ್ತ್ವರೂಪತಃ ॥
ಯಥಾ ದೇಗೇ ಜಗನ್ನಾಥೇ ಸರ್ವಾನುಗ್ರಹಕಾರಕೇ ।
ತಥಾ ಗುರುವರೇ ಕುರ್ಯಾದ್ಭಾವಾನ್ ದಿನೇ ದಿನೇ ॥
ಅಪ್ರತ್ಯಕ್ಷೇಣ ಮಹಾದೇವಃ ಸರ್ವೇಷಾಮಾತ್ಮಮಾಯಯಾ।
ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಭಕ್ತಸಿದ್ಧಯೇ ॥
ಗುರೋರಾಜ್ಞಾ ಸ ಲಂಘೇತ ಸಿದ್ಧಿಕಾಮೋ ಮಹಾನಯಃ ।
ತದಾಜ್ಞಾ ಲುಪ್ತಸೇನಾಸಿ ಶಿವಾಜ್ಞಾ ಚೈವಲೋಪ ಭವೇತ್ ॥

ಅಸ್ತಿಕನೂ, ಆಚಾರಸಂಪನ್ನನೂ ಆದ ವೀರಶೈವನು ಗುರುವನ್ನೂ ಆ ಗುರುವಿನಿಂದ ಬಂದ ಶಿವಲಿಂಗವನ್ನೂ ಭಕ್ತಿಯಿಂದಾರಾಧಿಸಬೇಕು. ಗುರುವನ್ನು ಪೂಜಿಸುವದರಿಂದ ಪ್ರತ್ಯಕ್ಷವಾಗಿ ಶಿವನನ್ನು ಪೂಜಿಸಿದಂತಾಗುತ್ತದೆ. ಸ್ವದೂಪತಃ ಗುರುವಿಗೂ ಶಿವನಿಗೂ ಅವಭೇದವೂ ಕಾಣಬಿರುವುದರಿಂದ ದೇವದೇವನಾದ ಪರಶಿವನನ್ನು ಪೂಜಿಸುವಂತೆ ಶ್ರೀಗುರುವನ್ನೂ ಸಹ ಪೋಡಶೋಪಚಾರಗಳಿಂದ ಪ್ರತಿದಿವಸವೂ ಅರ್ಚಿಸಬೇಕು. ಸರ್ವಕರ್ತನಾದ ಪರಮೇಶ್ವರನು ಸರ್ವಾಗತನಾಗಿದ್ದರೂ ತನ್ನಲ್ಲಿರುವ ಮಾಯಾಶಕ್ತಿಯಿಂದ ಕಣ್ಣಿಗೆ ಗೋಚರಿಸದೆ ಗುರುರೂಪದಿಂದ ಎಲ್ಲರಿಗೂ ಕಾಣಿಸಿಕೊಳ್ಳುತ್ತ ತನ್ನ ಉಪದೇಶವಾಣಿಯಿಂದ ಎಲ್ಲರ ಹೃದಯಕ್ಷೇತ್ರದಲ್ಲಿ ಭಕ್ತಿಯೆಂಬ ಆಮೃತಬೀಜವನ್ನು ಬಿತ್ತುವನು. ಕ್ಷೇತ್ರಕಾಲಕನಂತೆ ಅಯಾಯ ಕಾಲಗಳಲ್ಲಿ ದೀಕ್ಷಾದಿಸಂಸ್ಕಾರಗಳೆಂಬ ವ್ಯವಸಾಯಮಾಡುತ್ತ ಮೋಕ್ಷಹೇತುವಾದ ಆ ಭಕ್ತಿಬೀಜನನ್ನು ಮಲವಾಯಿಗಳೆಂಬ ಕ್ರಿಮಿಗಳು ತಗಲದಂತೆ ಬೆಳೆಯಿಸುತ್ತ ಪೋಷ್ಟವೆಂಬ ಮಹಾಫಲವನ್ನು ತೋರಿಸುವುದರಿಂದ ಗುರುವಿನ ಉಪಕಾರವನ್ನು ಆಷಿಸ್ಟೆಂದು ವರ್ಣಿಸಲಸದಳವಾಗಿದೆ. ಸಿದ್ಧಿಯನ್ನು ಪಡೆದು ಮಾನವಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕೆಂಬವನು ಗುರುವಿನ ಆಜ್ಞೆಯನ್ನು ಮೀರಬಾರದು. ಹಾಗೆ ಮೀರಿದವನು ಸರ್ವಸಾಕ್ಷಿಯಾದ ಪರಮೇಶ್ವರನ ಆಜ್ಞೆಯನ್ನು ಮೀರಿದಂತಾಗುವದು ಎಂದು ಗುರುವಚನಕ್ಕೆ ಅತ್ಯಂತ ಮಹತ್ವವನ್ನು ಹೇಳಿರುವುದರಿಂದ ಅನಾದಿಕಾಲದಿಂದ ಗುರುಪದವಾಚ್ಯರಾದ ಮಾಹೇಶ್ವರರಲ್ಲಿ ಭಕ್ತಿಯುಂಟಾದ ಪರ್ತಿಸುವುದೇ ಭಕ್ತರ ಲಕ್ಷಣವಾಗಿದೆ. ಗುರುಸ್ಥಲವೆಂಬ ಶಬ್ದದಲ್ಲಾದರೋ ವೀರಶೈವಸಿದ್ಧಾಂತರಹಸ್ಯಾರ್ಥವೆಲ್ಲವೂ ಅಡಕವಾಗಿದೆ. ಹೇಗೆಂದರೆ—ಗುರು ಶಬ್ದದ ಮುಂದಿರುವ ಸ್ಥಲಶಬ್ದವನ್ನು ಶಾಸ್ತ್ರಕಾರರು ಈ ವಿಧವಾಗಿ ನಿರ್ವಚನೆಮಾಡಿರುತ್ತಾರೆ.

ಸರ್ವೇಷಾಂ ಸ್ಥಾನಭೂತತ್ವಾದ್ಗುರುಭೂತತ್ವತಸ್ತಥಾ ।
ತತ್ಸ್ಥಾನಾಂ ಮಹದಾನೀನಾಂ ಸ್ಥಲಮಿತ್ಯಭಿಧೀಯತೆ ॥

ಯಾವ ಶಿವನು ಸ್ಥಾವರಜಂಗಮಾತ್ಮಕವಾದ ಸಕಲ ಜಗತ್ತಿಗೂ ಸಕಲ ರಕ್ಷಿತಗಳಿಗೂ ಸಕಲ ತೇಜಸ್ಸುಗಳಿಗೂ ಆಧಾರವಾಗಿರುವನೋ ಅವನೇ ಸ್ಥಲಶಬ್ದವಾಚ್ಯನೆನಿಸುವನು. ಅಂತಹ ಸ್ಥಲಶಬ್ದವಾಚ್ಯವಾದ ಶಿವಲಿಂಗವು ತನ್ನ ಅವಿಭಕ್ತಶಕ್ತಿಜಲನಮಾತ್ರದಿಂದ ಲಿಂಗಸ್ಥಲವೆಂದೂ ಅಂಗಸ್ಥಲವೆಂದೂ ಎರಡಾಯಿತು. ಅವುಗಳಲ್ಲಿ ಲಿಂಗಸ್ಥಲವೇ ಉಪಾಸ್ಯವೆನಿಸಿತು. ಅಂಗಸ್ಥಲವೇ ಉಪಾಸಕವೆನಿಸಿತು. ಲಿಂಗಸ್ಥಲವನ್ನು ಆಶ್ರಯಿಸಿದ ಶಕ್ತ್ಯಂಶವು ಅಂಗ (ಜೀವ) ಸ್ಥಲವನ್ನಾಶ್ರಯಿಸಿ ಭಕ್ತಿಯೆನಿಸಿತು. ಲಿಂಗದಲ್ಲಿರುವ ಶಕ್ತಿಯು ಪ್ರಪಂಚನವನ್ನು ಸೃಷ್ಟಿಸುವುದಕ್ಕೆ ಸಾಧನವಾಯಿತು ಅಂಗವನ್ನಾಶ್ರಯಿಸಿದ ಭಕ್ತಿಯು ಮುಕ್ತಿಸಾಧನವಾಯಿತು. ಆ ಲಿಂಗಸ್ಥಲವು ಭಾವ ಪ್ರಾಣ ಇಷ್ಟವೆಂದು ಮೂರುವಿಧವಾಯಿತು. ಅಂಗಸ್ಥಲವು ಯೋಗಾಂಗ ಭೋಗಾಂಗ ತ್ಯಾಗಾಂಗವೆಂದು ಮೂರು ಪ್ರಕಾರವಾಗಿ ಕ್ರಮವಿಂದ ಐಕ್ಯಸ್ಥಲ ಶರಣಸ್ಥಲ ಪ್ರಾಣಲಿಂಗಿಸ್ಥಲ ಪ್ರಸಾದಿಸ್ಥಲ ಮಾಹೇಶಸ್ಥಲ ಭಕ್ತಸ್ಥಲ ಎಂದು ಆರು ಭೇದವನ್ನು ಹೊಂದಿತು. ಇವುಗಳನ್ನೇ ಷಟ್‌ಸ್ಥಲಗಳೆಂದು ಹೇಳುತ್ತಾರೆ. ಒಟ್ಟಾಗಿ ಲಿಂಗಸ್ಥಲಭೇದಗಳೂ ಅಂಗಸ್ಥಲಭೇದಗಳೂ ಸೇರಿ ನೂರೊಂದು ಸ್ಥಲಗಳಾಗಿ ಪರಿಣಮಿಸಿರುವುವು. ಇವುಗಳಲ್ಲಿ ಒಂದೊಂದು ಸ್ಥಲದ ರಹಸ್ಯವನ್ನು ತಿಳಿದು ಅನುಷ್ಠಿಸುತ್ತ ಬಂದಹಾಗೆಲ್ಲಾ ಆತ್ಮನು ಪಾಶಗಳಿಂದ ಬಿಡಲ್ಪಟ್ಟುವುದಾಗಿ ಭೃಮರಕೀಟನ್ಯಾಯದಂತೆ ಶಿವತಾದಾತ್ಮ್ಯವನ್ನು ಪಡೆವನು. ಇಂಥ ಸ್ಥಲಶಬ್ದದ ಗೂಢಾರ್ಥಗಳನ್ನೆಲ್ಲ ಭಕ್ತನಿಗೆ ತಿಳಿಪಡಿಸುವದರಿಂದ ಗುರುವರ್ಗಕ್ಕೆ ಗುರುಸ್ಥಲವೆಂಬ ವ್ಯವಹಾರವುಂಟಾಯಿತು. ಆರಾಧಿಸುವುದಕ್ಕೆ ಯೋಗ್ಯರಾದುದರಿಂದ ಆರಾಧ್ಯರೆಂಬ ವ್ಯವಹಾರವುಂಟಾಯಿತು. ತಾಂತರೂ ಸ್ವತಂತ್ರರೂ ಜಗತ್ಪೂಜ್ಯರೂ ಆದುದರಿಂದ ಜಂಗಮರೆಂಬ ವ್ಯವಹಾರವುಂಟಾಯಿತು. ಮಾಯಿಕವಾದ ಪ್ರಪಂಚವನ್ನು ತ್ಯಜಿಸಿರುವುದರಿಂದ ಮಾಹೇಶ್ವರ ಎಂಬ ವ್ಯವಹಾರವುಂಟಾಯಿತು. ಹಿಂದಿನ ಪ್ರತಿಯೊಬ್ಬ ಗುರುಮನೆತನದವರು ಇಂಥ ಪಾರಮಾರ್ಥಿಕ ರಾಜ್ಯವನ್ನು ಆಳುತ್ತ ಬಂದಿದ್ದರಿಂದ ದಿವ್ಯಜ್ಯೋತಿಗಳೆನಿಸಿ ಮಹಾತ್ಮರೆನಿಸಿ ತಮ್ಮ ಯಶಃಕಾಯವನ್ನು ಸ್ಥಿರಗೊಳಿಸಿದರು. ಅವರ ವಂಶದಲ್ಲಿ ಹುಟ್ಟಿದ ಈಗಿನ ಗುರುಸ್ಥಲದವರು ಅವರ ಸಹಸ್ರಾಂಶದಲ್ಲಿ ಒಂದಂಶವನ್ನಾದರೂ ಪಾರಮಾರ್ಥಿಕಸತ್ಯವನ್ನು ಪಡೆಯದಿರುವುದರಿಂದ ಹಾಸ್ಯಾಸ್ಪದರಂತಾಗಿ ಪರಿಣಮಿಸಿದ್ದಾರೆ. ಇದನ್ನರಿತು ಅಖಿಲಗುರುವಂಶೀಯರು ಲೌಕಿಕರಂತೆ ವಿಜೃಂಭಿಸುವದನ್ನು ಬಿಟ್ಟು ತಮ್ಮ ಪೂರ್ವಜರಂತೆ ನೈದಿಕಸಂಪತ್ತನ್ನು ಗಳಿಸಿ ತಮ್ಮ ಪವಿತ್ರವಾದ ನಾಮವನ್ನು ಸಾರ್ಥಕಪಡಿಸಿಕೊಳ್ಳುವಂತೆ ಪೂರ್ವಾಚಾರ್ಯರು ಅನುಗ್ರಹಿಸಲಿ.

ಶ್ರೀಜಗದ್ಗುರು ರಂಭಾಪುರೀ ಸಂಸ್ಥಾನದ ವಿಜಂಟರಾಗಿದ್ದ ಸೇ॥ ಎಚ್. ಎಂ. ರಾಘವಾಂಕಯ್ಯನವರು ತಮ್ಮ ಜನ್ಮಸ್ಥಳವಾದ ಬಳ್ಳಾರಿ ಡಿ॥ ಹಿರೇಹಾಳ ಗ್ರಾಮದಲ್ಲಿ ಈ ತಿಂಗಳು ೫ ನೆಯ ತಾರೀಖಿನ ದಿವಸ ವೀರಾಧೀನರಾದರೆಂಬ ವಿಷಯವನ್ನು ಬರೆಯಲು ವಿಷಾದವೆನಿಸುತ್ತದೆ ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ವಿಶ್ವವಿದ್ಯಾನಿಲಯದ ಪದವೀಪ್ರದಾನ ಸಮಾರಂಭವು ಈ ವರ್ಷ ಅಕ್ಟೋಬರ್ ತಿಂಗಳು ೬ನೆಯ ತಾರೀಖು ಗುರುವಾರ ಬೆಳಿಗ್ಗೆ ೫ ಘಂಟೆಗೆ ರಾಜಧಾನಿಯಲ್ಲಿರುವ ಜಗನ್ಮೋಹನಬಂಗಲೆಯಲ್ಲಿ ನಡೆಯುವದು.

ಮೈಸೂರು ದಸರಾ ವಸ್ತುಪ್ರದರ್ಶನವು ಈ ತಿಂಗಳು 24 ನೆಯ ತಾರೀಖಿನಿಂದ ಅಕ್ಟೋಬರ್ 9 ನೆಯ ತಾರೀಖಿನ ವರೆಗೆ ನಡೆಯುವುದು. ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನವು ಇದೇ ತಿಂಗಳು 28 ನೆಯ ತಾರೀಖು ಬುಧವಾರದಿಂದ ಪ್ರಾರಂಭವಾಗುವುದು.

ಜನಗಳಿಗೆ ಪ್ರಶ್ಚಿಹಾಯಕವಾದ ಆಹಾರಗಳಾವುವೆಂಬುದನ್ನು ಪರೀಕ್ಷಿಸಲು ಸರ್ಕಾರದವರು ಒಂದು ಸಮಿತಿಯನ್ನು ನಿರ್ಮಾಣಿಸಿರುತ್ತಾರೆ ಈ ಸಮಿತಿಗೆ ಆರೋಗ್ಯ ಇಲಾಖೆ ಡೈರೆಕ್ಟರರೇ ಅಧ್ಯಕ್ಷರಾಗಿಯೂ ಪಬ್ಲಿಕ್ ಹೆಲ್ತ್ ಇನ್ಸ್ಪೆಕ್ಟರ್ ಸೂಪರಿಟೆಂಡೆಂಟರು ಕಾರ್ಯದರ್ಶಿಗಳಾಗಿಯೂ ನಿಯಮಿತರಾಗಿದ್ದಾರೆ.

ಮೈಸೂರು ಲಕ್ಷ್ಮೀಪುರದ ಒತ್ತಾವಣೆಯಲ್ಲಿರುವ ಡಾ॥ ಸಿ. ಪಿ. ಸಚ್ಚಿದಾನಂದ ಎಂಬವರ ಮನೆಗೆ ಕಳೆದ ತಿಂಗಳು ೩೦ ನೆಯ ತಾರೀಖಿನ ದಿವಸ ರಾತ್ರಿ ಕಳ್ಳರು ಬಿದ್ದು ಸುಮಾರು ೫ ಸಾವಿರ ರೂಪಾಯಿ ಬೆಲೆಬಾಳುವ ನಗನಾಣ್ಯಗಳನ್ನು ಅಪಹರಿಸಿರುತ್ತಾರೆಂದು ತಿಳಿದುಬರುತ್ತದೆ. ಪೋಲೀಸರು ಪೋಧನೆಮಾಡುತ್ತಿದ್ದಾರೆ.

ಟಿ. ನರಸೀಪುರದ ತಾಲೂಕು ತಲಕಾಡುಗ್ರಾಮದ ಜಾನುಭೋಗ ಶ್ರೀಕಂಠಯ್ಯನೆಂಬಾತನು ಕೈತರಿಂದ ಸಮಾರಾದಕಂವಾಯಿತ ಮೊಜಲಗು 41-9-3 ಗೇಕನ್ನು ಖಜಾನೆಗೆಕಟ್ಟಿ ಪರಿಪಹೋಗಪಡಿಸಿದನೆಂಬ ಮೊಕದ್ದಮೆಯಾಗಿ ವ್ಯಾಜ್ಯನಿಷ್ಟರು. ಅಪರಾಧಿಗೆ ೩ ತಿಂಗಳು ಕಠಿಣ ಶಿಕ್ಷೆಯನ್ನೂ ೫೦ ರೂಪಾಯಿ ಜುಲ್ಮಾನೆಯನ್ನೂ ಜುಲ್ಮಾನೆ ಕೊಡಲು ತಪ್ಪಿದರೆ ಮತ್ತೊಂದು ತಿಂಗಳು ಶಿಕ್ಷೆಯನ್ನೂ ವಿಧಿಸಿದರು.

ಶಿವಮೊಗ್ಗದ ಸೆಷನ್ಸ್ ಕೋರ್ಟಿನಲ್ಲಿ ಹೊಸನಗರದ ಖೂನಿ ಕೇಸು ವಿಚಾರಣೆ ನಡೆಯುತ್ತಿದ್ದಾಗ ಸಾಕ್ಷಿ ಕೊಡುತ್ತಿದ್ದ ಗೋವಿಂದಪ್ಪನೆಂಬವನು ಪ್ರಜ್ಞೆ ತಪ್ಪಿ ಕೆಳಕ್ಕೆ ಬಿದ್ದನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ನಡೆಸಿದರೂ ಪ್ರಯೋಜನವಾಗದೆ ಮೃತನಾದನು. ಅವನು ಹೆಂಡತಿಯ ಕೊಲೆಗಾಗಿ ಆಪಾದಿತನಾಗಿರುವ ಅಪರಾಧಿಯ ಮಾವನೆಂದೂ ಹೃದಯಕ್ರಿಯೆಯು ನಿಂತು ಮೃತನಾದನೆಂದೂ ತಿಳಿದುಬರುತ್ತದೆ.

ರಾಜಧಾನಿಯಲ್ಲಿ ಈ ತಿಂಗಳು 24 ನೆಯ ತಾರೀಖಿನಿಂದ ದಸರಾಮಹೋತ್ಸವವು ಪ್ರಾರಂಭವಾಗುತ್ತದೆ. ಅವರ ಕಾರ್ಯಕ್ರಮವು ಈ ರೀತಿಯಿರುತ್ತದೆ. ಪ್ರಥಮ ದಿವಸ ಪ್ರಾತಃಕಾಲ ಶ್ರೀಮನ್ಮಹಾರಾಜರವರು 10-16 ಘಂಟೆಗೆ ದರ್ಬಾರ್‌ಹಾಲನ್ನು ಪ್ರವೇಶಿಸಿ 10-38 ಕ್ಕೆ ಸಿಂಹಾಸನಾರೋಹಣಮಾಡುತ್ತಾರೆ. ಮುಂದೆ ಪ್ರತಿದಿವಸವೂ ಪ್ರಾತಃಕಾಲ ಪಟ್ಟದ ಗಜಾಶ್ವಗಳ ಪೂಜೆಯೂ, ರಾತ್ರಿ 7 ಘಂಟೆಗೆ ದರ್ಬಾರೂ ನಡೆಯುತ್ತವೆ. ಅಕ್ಟೋಬರ್ 2 ನೆಯ ತಾರೀಖಿನ ದಿವಸ ಶ್ರೀಮನ್ಮಹಾರಾಜರವರಿಂದ ಆಯುಧಪೂಜೆಯು ನೆರವೇರಿಸಲ್ಪಡುತ್ತದೆ. ಅಕ್ಟೋಬರ್ 3 ನೆಯ ತಾರೀಖಿನ ದಿವಸ ಯುವರೋಸಿಯರ್ ದರ್ಬಾರು ನಡೆಯುತ್ತದೆ. ಅಕ್ಟೋಬರ್ 4 ನೆಯ ತಾರೀಖಿನ ಮಧ್ಯಾಹ್ನ 4 ಘಂಟೆಗೆ ಶ್ರೀಮನ್ಮಹಾರಾಜರವರು ಅಂಬೆಯಮೇಲೆ ಬಂಗಾರದ ಅಂಬಾರಿಯಲ್ಲಿ ಕುಳಿತು ಜಂಬೂಸವಾರಿ ಬೆಳೆಯಿಸುತ್ತಾರೆ.

ಶ್ರೀಮದ್ರಂಭಾಪುರೀ ಜಗದ್ಗುರುಗಳ ಸಂಚಾರ

ತಮ್ಮ ಶಿಷ್ಯಕೋಟಿಯನ್ನುನ್ನತಪರಿಸಲು ಸಂಚರಿಸುತ್ತಿರುವ ಶ್ರೀಮದ್ರಂಭಾಪುರೀ ಜಗದ್ಗುರು ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಶಿವಮೊಗ್ಗಾ ಡಿ॥ ಚನ್ನಗಿರಿ ತಾ॥ ಸಂತೆಬೆನ್ನೂರು ಭಕ್ತಾದಿಗಳ ಪ್ರಾರ್ಥನೆಯಂತೆ ನಿನ್ನೆದಿವಸ ಬೆಳಿಗ್ಗೆ 9 ಘಂಟೆಗೆ ಸಕಲ ಬಿರುದಾವಳಿಗಳೊಡನೆ ಚತುರಂಗಬಲಪರಿವಾರಸಮೇತರಾಗಿ ದಯಮಾಡಿಸಿದರು.

ವರ್ತಮಾನಸಂಗ್ರಹ.

ಹೊಸವಿಮಾನ ಕಾರ್ಖಾನೆ

ಬ್ರಿಟಿಷ್ ಮತ್ತು ಕಾನಡಾ ದೇಶಗಳಿಗೆ ಬೇಕಾಗುವ ಯುದ್ಧವಿಮಾನಗಳನ್ನು ಕಟ್ಟಲು ಕಾನಡಾ ದೇಶದ 'ಟೊರೆಂಟೋ'ವಿನಬಳಿ 1 ಲಕ್ಷ 20 ಸಾವಿರ ಪೌಂಡು ಖರ್ಚು ಮಾಡಿ ವಿಮಾನ ನಿರ್ಮಾಣ ಕಾರ್ಖಾನೆಯೊಂದನ್ನು ಸ್ಥಾಪಿಸಬೇಕೆಂದು ನಿಶ್ಚಯಿಸಲ್ಪಟ್ಟಿದೆ.

ಇಲಿಗಳ ಹಾವಳಿಯಿಂದ ಕಂದಾಯ ಮಾಫಿ

ಸಿಂಧೂದೇಶದಹೊಲಗದ್ದೆಗಳಲ್ಲಿ ಬೆಳೆದು ನಿಂತಿದ್ದ ಬೆಳೆಯನ್ನೆಲ್ಲ ಇಲಿಗಳು ತಿಂದು ಹಾಳುಮಾಡಿದ್ದರಿಂದ ಅಲ್ಲಿಯ ಸರ್ಕಾರದವರು ಸುಮಾರು 1,67,107 ರೂ. ಗಳ ಕಂದಾಯವನ್ನು ವಜಾ ಮಾಡಬೇಕಾಯಿತೆಂದು ತಿಳಿದು ಬರುತ್ತದೆ.

ಕಾಶಿಯಿಂದ ಕೋತಿಗಳ ಉಚ್ಚಾಟನೆ

ಕಾಶೀಪಟ್ಟಣದಲ್ಲಿ ಕೋತಿಗಳ ಹಾವಳಿಯು ಸಹಿಸಲಸಾಧ್ಯವಾಗಿರುವುದರಿಂದ ಅವುಗಳನ್ನು ಹಿಡಿದು ದೂರವಿರುವ ಕಾಡಿಗೆ ಸಾಗಿಸಲು ಅಲ್ಲಿಯ ಪೌರಸಭೆಯವರು 250ರೂಪಾಯಿಗಳನ್ನು ಕೊಡಲೊಪ್ಪಿದ್ದಾರೆ. ಕೋತಿಗಳನ್ನು ಹಿಡಿಯುವ ಕಾರ್ಯವು ಮಧುರೆ ನಿವಾಸಿಯೊಬ್ಬನಿಗೆ ವಹಿಸಲ್ಪಟ್ಟಿದೆ.

ಜರ್ಮನ್ ಪೋಲೀಸರಿಗೆ ಮರಣದಂಡನೆ

ಸಾಲ್ಮ್ ವಿಸೋಫ್, ಪೀಟರ್‌ಹಿಂಜ್ ಮತ್ತು ವಿಲ್ಹೆಲ್ಮ್‌ಹ್ಯಾರ್ಟ್ ಎಂಬ ಮೂವರು ಜರ್ಮನ್ ಗುಪ್ತಪೋಲೀಸರು ಸೈನ್ಯದ ಗುಟ್ಟನ್ನು ಹೊರಗೆಡವಿ, ಅನ್ಯದೇಶದ ಗೂಢಚಾರರೊಡನೆ ಸ್ನೇಹಬೆಳೆಯಿಸಿದ್ದರೆಂಬ ಆರೋಪದಮೇಲೆ ಮರಣದಂಡನೆಗೆ ಗುರಿಯಾದರು. ಈ ವರ್ಷ ಇವರಂತೆ ಮರಣದಂಡನೆಗೆ 21 ಮಂದಿ ಗುರಿಯಾದರೆಂದು ತಿಳಿದುಬರುತ್ತದೆ.

ಜರ್ಮನಿಗೆ ಮೆಕ್ಸಿಕೋ ಎಣ್ಣೆ

ಜರ್ಮನಿಯವರು ಮೆಕ್ಸಿಕೊದಿಂದ ಎಣ್ಣೆತರಿಸಿಕೊಳ್ಳಲು ಏರ್ಪಾಡುಮಾಡಿರುವರು. ಈ ಎಣ್ಣೆಯಬೆಲೆ ಸುಮಾರು 20ಲಕ್ಷಪೌಂಡು. ಈ ಬೆಲೆಯಲ್ಲಿ ಸೇಕಡ 40 ರಷ್ಟು ಹಣವನ್ನು ನಗದಾಗಿ ಕೊಡುವಂತೆಯೂ ಉಳಿದ ದ್ರವ್ಯಕ್ಕೆ ಮೆಕ್ಸಿಕೊಸರ್ಕಾರಕ್ಕೆ ಗಣಿಗಳಿಂದ ಎಣ್ಣೆತೆಗೆಯುವ ಯಂತ್ರಗಳ ಸಾಧನಗಳನ್ನೊ ದಗಿಸುವಂತೆಯೂ ಒಪ್ಪಿಗೆ ಮಾಡಿಕೊಂಡಿದ್ದಾರೆ.

ಇಟಲಿಯೂ ಯಹೂದ್ಯರನ್ನು ಬಹಿಷ್ಕರಿಸಿದೆ.

ಇಟಲಿ ದೇಶದ ಸರ್ಕಾರಿ ವಿದ್ಯಾಶಾಲೆಗಳಲ್ಲೂ ವಿಶ್ವವಿದ್ಯಾನಿಲಯಗಳಲ್ಲೂ ಯಹೂದ್ಯ ಉಪಾಧ್ಯಾಯರುಗಳು ಪಾಠ ಹೇಳಕೂಡದೆಂದೂ ಮತ್ತು ಯಹೂದ್ಯ ಬಾಲಕರನ್ನು ಸರ್ಕಾರಿ ಸ್ಕೂಲುಗಳಿಗೆ ಸೇರಿಸಕೂಡದೆಂದೂ ಇಟಲಿ ಸರ್ಕಾರದವರು ನಿರ್ಬಂಧಾಜ್ಞೆಯನ್ನು ಹೊರಡಿಸಿರುತ್ತಾರೆ. ಈ ಅಪ್ಪಣೆಯಿಂದ 1500 ಜನ ಯಹೂದ್ಯ ಉಪಾಧ್ಯಾಯರುಗಳಿಗೂ 8000 ಜನ ವಿದ್ಯಾರ್ಥಿಗಳಿಗೂ ತೊಂದರೆಯಾಗಿದೆ.

ಬೆಟ್ಟಜರಿದು ಅನಾಹುತ!

ಸಂಯುಕ್ತಪ್ರಾಂತಕ್ಕೆ ಸೇರಿದ ಹಿಮಾಚಲದ ತಪ್ಪಲಿನಲ್ಲಿರುವ ಟೆಹೆರಿಸಂಸ್ಥಾನದವಲ್ಲಿ ಹರಿಯುವ ನಾಮ ಎಂಬ ನದಿಯ ದಡದಲ್ಲಿದ್ದ ಒಂದು ದೊಡ್ಡ ಬೆಟ್ಟವು ಕುಸಿದು ನದಿಗೆ ಅಡ್ಡಲಾಗಿ ಬಿದ್ದು ಅಲ್ಲಿಯೇ ಒಂದು ಸರೋವರವನ್ನಾಗಿಮಾಡಿತು. ಕೆಲವು ಕಾಲದನಂತರ ನೀರಿನ ವೇಗವು ಹೆಚ್ಚಾದುದರಿಂದ ಅದು ಅಡ್ಡಲಾಗಿ ಬಿದ್ದಿದ್ದ ಬೆಟ್ಟದ ಮಣ್ಣನ್ನು ಕೊರೆದು ಸ್ಥಳಮಾಡಿಕೊಂಡು ಮುಂದೆ ಸುಗ್ಗಿಸ್ಪದರಿಂದ ದಡದಲ್ಲಿ ಮೇಯುತ್ತಿದ್ದ ನೂರಾರು ದನಕರುಗಳು 32 ಜನರೂ ಕೊಚ್ಚಿಹೋದರು. 3-4 ಗ್ರಾಮಗಳು ನೀರಿನಲ್ಲಿ ಮುಳುಗಿಹೋದವು.

ರಾತ್ರಿಯಲ್ಲಿ ವಿಮಾನಪ್ರಯಾಣ

ಕರಾಚಿಯಿಂದ ಬೊಂಬಾಯಿಗೆ ಇನ್ನುಮುಂದೆ ರಾತ್ರಿ ಕಾಲದಲ್ಲಿ ವಿಮಾನದ ಮೂಲಕ ಪ್ರಯಾಣ ಸೌಕರ್ಯವನ್ನು ಕಲ್ಪಿಸಲಾಗಿದೆ. ಈ ವರ್ಷಾಂತ್ಯದಲ್ಲಿ ಈ ಪ್ರಯತ್ನವು ಮುಕ್ತಾಯವಾಗುವದೆಂದೂ ಅಂದಿನಿಂದ ರಾತ್ರಿ ಹೊತ್ತಿನಲ್ಲಿ ವಿಮಾನಪ್ರಯಾಣವನ್ನು ಸುರಕ್ಷಿತವಾಗಿ ಮಾಡಬಹುದೆಂದೂ ತಿಳಿದುಬಂದಿದೆ.

ವೇಷಧಾರಿ ಸಾಧುವಿನ ಮೋಸ!

ಬೊಂಬಾಯಿಯಲ್ಲಿ ರಾಮಜಾನಿರಬನೆಂಬ ಒಬ್ಬ ಸಾಧುವು ಕಳೆದ 4 ನೆಯ ತಾರೀಖಿನದಿವಸ ಭಾಸ್ಕರಜಾನಿ ಎಂಬೊಬ್ಬನಿಗೆ ಭವಿಷ್ಯಹೇಳುವುದಾಗಿ ಆವನ ಕೈಗಳನ್ನು ಪರೀಕ್ಷಿಸುತ್ತ ಆವನು ಕೈಯಲ್ಲಿ ಕಟ್ಟಿದ್ದ ಬೆಳ್ಳಿ ಗಡಿಯಾರವನ್ನು ಬಂಗಾರವನ್ನಾಗಿ ಮಾಡಿಕೊಡುವುದಾಗಿ ಆಶೆತೋರಿಸಿ ಅದನ್ನು ಅವನಿಂದ ತೆಗೆದುಕೊಂಡು ಸ್ವಲ್ಪ ಮರೆಯಾಗಿರಬೇಕೆಂದು ಅವನನ್ನು ಸ್ವಲ್ಪದೂರ ಕಳಿಸಿ ಪರಾರಿಯಾದನು. ಪೋಲೀಸರು ಆ ಸಾಧುವನ್ನು ಬಂಧಿಸಿ ಅವನಮೇಲೆ ನೊಕದ್ದಮೆ ಮಾಡಿರುತ್ತಾರೆ.

ಕಾಂಗ್ರೆಸ್ಸಿಗೆ ನಿಜಾಂಸರ್ಕಾರದ ಬಹಿಷ್ಕಾರ

ಹೈದರಾಬಾದ್ "ಸ್ಟೇಟ್ ಕಾಂಗ್ರೆಸ್" ಸಂಸ್ಥೆಯನ್ನು ಸ್ಥಾಪಿಸಕೂಡದೆಂದು ಸರ್ಕಾರದ ಆಜ್ಞೆಯು ಅಲ್ಲಿಯ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟಿದೆ. ಕಾಂಗ್ರೆಸ್‌ಸಂಸ್ಥೆಗೆ 'ವರ್ಕಿಂಗ್‌ಕಮಿಟಿ' ಸದಸ್ಯರನ್ನು ಆರಿಸುವದಕ್ಕೂ ಮತ್ತು ಅದರ ಆಡಳಿತ ವ್ಯವಸ್ಥೆಗೆ ಸಂಬಂಧಪಟ್ಟ ವಿಧಿ ನಿಯಮಗಳನ್ನು ಅಂಗೀಕರಿಸುವದಕ್ಕೂ ಕಳೆದ 9ನೆಯ ತಾರೀಖಿನ ದಿವಸ ಕಾಂಗ್ರೆಸ್ ಕೆಲಸಗಾರರ ಸಭೆ ಸೇರಬೇಕಾಗಿತ್ತು. ಇದಕ್ಕಾಗಿ ಕೂಡಲೇ ಸರಕಾರದವರು ಪ್ರತಿಬಂಧಕವನ್ನುಂಟುಮಾಡಿದರು.

೩ ವರ್ಷಗಳಲ್ಲಿ ೯ ಮಕ್ಕಳನ್ನು ಹಡೆದ ಮಹಾತಾಯಿ!

ಸಿಂಧಪ್ರಾಂತಕ್ಕೆ ಸೇರಿದ ಅಯನಗರವೆಂಬ ಗ್ರಾಮದಲ್ಲಿ ಅಲ್ಲಿ ಒಬ್ಬ ಸಿಕ್ ಜಾತಿಯ ಸ್ತ್ರೀಯಳು ಕಳೆದ ೩ ವರ್ಷಗಳಲ್ಲಿ ೯ ಮಕ್ಕಳನ್ನು ಹಡೆದಿದ್ದಾಳೆ. ೧೯೩೬ನೇ ಜನವರಿಯಲ್ಲಿ, ೧೯೩೭ರ ಮೇ!! ತಿಂಗಳಲ್ಲಿ ೧೯೩೭ನೇ ಜುಲೈತಿಂಗಳಲ್ಲಿ, ಪ್ರತಿಸಲವೂ ಮೂರು ಮೂರು ಮಕ್ಕಳಂತೆ ಪ್ರಸವಿಸಿದಳಂತೆ! ಈಕೆಯು ಕೂಲಿಕಾರನಾದ ಸ್ವೀಮಸಿಂಗ್ ಎಂಬವನ ಹೆಂಡತಿ.

112 ವರ್ಷದ ನಟನು.

ಜಗತ್ತಿನಲ್ಲೆಲ್ಲ ಬಹಳ ವಯಸ್ಸಾಗಿ ಪ್ರಸಿದ್ಧ ನಟ ಎಂದು ಹೇಳಲ್ಪಟ್ಟ 112 ವಯಸ್ಸಿನ ರಿಚರ್ಡ್ ಫಿಲಿಪ್ಸ್ ನೆಂಬವನು ಹಾಲಿವುಡ್ಡಿನಲ್ಲಿರುವನು. ಇನ್ನು ದಿನೇದಿನೇ ಬಲಿಷ್ಠನಾಗುತ್ತಿರುವನಲ್ಲದೆ, ಆರೋಗ್ಯವುಳ್ಳವನಾಗಿಯೂ ಇರುವನು. ಕಣ್ಣುಗಳು ಚೆನ್ನಾಗಿ ಕಾಣಿಸುವವು; ಕಿವಿ ಕೇಳಿಸುವುವು. ಈತನು ತನ್ನ 12ನೆಯ ವರ್ಷದಲ್ಲಿ ಚಲನ ಚಿತ್ರಪ್ರಪಂಚಕ್ಕೆಳಿದು ಈಗ ತನ್ನ ಶತಮಾನೋತ್ಸವವನ್ನು ನೆರವೇರಿಸಲಿರುವನಂತೆ!

ಕೆಲಸ ಕೊಡಲಿಲ್ಲವೆಂದು ಕೊಲೆಮಾಡಿದನು.

ಲಕ್ನೊನಿಸಿಡೆನ್ಸಿ ಬಳಿಗೆ ಒಬ್ಬ ನಿರುದ್ಯೋಗಿಯು ಹೋಗಿ ಅಲ್ಲಿ ಕಾವಲಿದ್ದ ವರೋಷ್ಯನೊಬ್ಬನನ್ನು ಒಂದು ಮಾಲಿಕೆಲಸ ಕೊಡಬೇಕೆಂದು ಕೇಳಿಕೊಂಡನು. ಆದರೆ ಏರೋಷ್ಯನು ಇಲ್ಲೇನು ಕೆಲಸವಿಲ್ಲವೆಂದೂ ಕೂಡಲೆ ಹೊರಹೊರಡಬೇಕೆಂದೂ ಹೇಳಿದ್ದರಿಂದ ಕುಪಿತನಾದ ನಿರುದ್ಯೋಗಿ ಮನುಷ್ಯನು ತನ್ನ ಬಳಿಯಲ್ಲಿದ್ದ ಕಠಾರಿಯಿಂದ ಅವನನ್ನು ತಿವಿದು ಕೊಂದನು. ಮೃತನ ಸಹಾಯಕ್ಕೆ ಬಂದ ಒಬ್ಬ ಮಾಲಿಯೂ ಇರಿಯಲ್ಪಟ್ಟು ಆಸ್ಪತ್ರೆಯಲ್ಲಿ ಮೃತನಾದನು. ಇವರುಗಳ ಸಹಾಯಕ್ಕೆಂದು ಬಂದ ಗಾಡಿಯವನ ಕೈಗಳು ಕತ್ತರಿಸಲ್ಪಟ್ಟವು. ಪೋಲೀಸರು ಈ ಘಾತುಕನನ್ನು ದಸ್ತಗಿರಿಮಾಡಿರುತ್ತಾರೆ.

ಸತ್ತವರ ಕಣ್ಣು ಬದುಕಿರುವವರಿಗೆ

ಪ್ರಾಣಹೋದ 24 ಘಂಟೆಗಳೊಳಗೆ ಮೃತರ ಕಣ್ಣಿನ 'ಕೊರ್ನಿಯಾ' ಎಂಬ ಭಾಗವನ್ನು ತೆಗೆದು ಕುರುಡರ ಕಣ್ಣಿಗೆ ಜೋಡಿಸಿ ಹೊಲೆದು ದೃಷ್ಟಿಬರುವಂತೆ ಮಾಡುವದು ಫಲಕಾರಿಯಾಗಿ ಕಂಡುಬಂದಿರುವುದಂದ ಅಮೇರಿಕಾ ದೇಶದ ಕುರುಡರಿಗೆ ಕಣ್ಣುಕೊಡುವ ಕೆಲಸದಲ್ಲಿ ಅಲ್ಲಿಯ ವಿಜ್ಞಾನಿಗಳೂ ಡಾಕ್ಟರರೂ ಮುಂದುಹೊರಟಿದ್ದಾರೆ. ಇದಕ್ಕಾಗಿ ಲಕ್ಷಗಟ್ಟಲೆ ಜನರ ನೇತ್ರ ಶಕ್ತಿ ಚಿಕಿತ್ಸೆ ನಡೆಯಿಸಲು ಯೋಚಿಸಿದ್ದಾರೆ.

ಸತ್ತವನು ಬದುಕಿದನು!

ಜೆಂದವಾರ ಜಿಲ್ಲೆಯ ಡಾಲ್ಬಾ ಎಂಬ ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನು ವಿಕಾಂಗಿಯಾಗಿ ನಾಸವಾಗಿದ್ದನು. ಆತನಿಗೆ ವಾಂತಿಭೇದಿರೋಗವು ಬಂದು ವ್ಯತನಾದನು. ಝಾಡಮಾಲಿಗಳು ಅವನೆನ್ನು ಅಂತ್ಯಕ್ರಿಯೆಗಾಗಿ ಸ್ಮಶಾನಕ್ಕೆ ತೆಗೆದುಕೊಂಡುಹೋದರು. ಆರಾತ್ರಿ ಬಹಳ ಮಳೆ ಬಂದುದರಿಂದ ಹಾಗೇ ಬಿಟ್ಟುಬಂದರು. ಕೆಲವು ಘಂಟೆಗಳಮೇಲೆ ಅವನು ಪುನರ್ಜೀವವನ್ನು ಪಡೆದು ಬಹಳ ಕಷ್ಟದಿಂದ ತನ್ನ ಗುಡಿಸಲಿನ ಸಮೀಪಕ್ಕೆ ಬಂದನು. ಅಷ್ಟರಲ್ಲಿ ಸರಕಾರಿ ಅಧಿಕಾರಿಗಳು ಗುಡಿಸಿಲನ್ನು ಸುಟ್ಟುಹಾಕಿದ್ದರು. ಆ ಹಳ್ಳಿಯವರು ಆ ಬ್ರಾಹ್ಮಣನನ್ನು ನೋಡಿ ಅವನು ಭೂತರೂಪವಾಗಿ ಬಂದಿರುವನೆಂದು ಹೆದರಿ ಆವನಿಗೆ ಆಶ್ರಯವನ್ನೇ ಕೊಡಲಿಲ್ಲ. ಯಾರೂ ಉಪಚರಿಸದಿದ್ದುದರಿಂದ 3 ದಿವಸಗಳಮೇಲೆ ಸತ್ತುಹೋದನು.

ಯುವಕರಿಗೆ ನೈಜಾಂಬಾದಶಹರ ಹಿತೋಕ್ತಿಗಳು

ಕಳೆದವರುಷದಿಂದ ವಿಜೃಂಭಣೆಯಾಗಿ ನಡೆಯುತ್ತಿರುವ ನೈಜಾಂರವರ ರಜತಮಹೋತ್ಸವದಲ್ಲಿ ಅವರಿಗೆ ಒಪ್ಪಿಸಲ್ಪಟ್ಟ ಕ್ಯಾಸ್ಕೆಟ್ಟೈಗಳನ್ನು ಭದ್ರವಾಗಿ ಕಾಪಾಡಿದಲು ಪ್ರತ್ಯೇಕವಾಗಿ "ಜೂಬಿಲಿ ಪೆವಿಲಿಯನ್" ಎಂಬ ಪ್ರತ್ಯೇಕ ಭವನವನ್ನೇ ಕಟ್ಟಲಾಗಿದೆ. ಈ ಭವನದ ಪ್ರಾರಂಭೋತ್ಸವವನ್ನು ಕಳೆದ 8ನೆಯ ತಾರೀಖಿನದಿವಸ ನೈಜಾಮರು ನೆರವೇರಿಸುತ್ತ ವಿದ್ಯಾರ್ಥಿಗಳನ್ನು ಕುರಿತು– "ಸಂಸ್ಥಾನದ ಪ್ರಾಮುಖ್ಯತೆ ಮತ್ತು ಅದರ ಭವನವಾದ ಆಶಯಗಳನ್ನು ಗಮನದಲ್ಲಿರಿಸಿಕೊಂಡು ತರುಣರು ಸಮಯದಲ್ಲಿ ಜವಾಬ್ದಾರಿಗಳನ್ನು ವಹಿಸುವದಲ್ಲವೆ ಮುಂದೆ ಬರುವ ಅತಿ ಮುಖ್ಯವೂ ಕಷ್ಟಕರವೂ ಆದ ಕೆಲಸಗಳನ್ನು ನಿರ್ವಹಿಸುವ ಶಕ್ತಿಯನ್ನು ಪಡೆಯುವಿರೆಂದು ನಾನು ನಿರೀಕ್ಷಿಸಿದ್ದೇನೆ. ಹೈದರಾಬಾದ್ ಇನ್ನೂ ಮುಂದುವರಿಯಬೇಕಾಗಿದೆ. ಆದುದರಿಂದ ಹೈದರಾಬಾದಿನ ತರುಣರು ತಮ್ಮ ಶಕ್ತಿಸಾಮರ್ಥ್ಯಗಳನ್ನು ಯೋಗ್ಯವಾದ ರೀತಿಯಲ್ಲಿ ವಿನಿಯೋಗಿಸಿ ಕೀರ್ತಿ ತರುವರೆಂದು ನಾನು ಭಾವಿಸಿದ್ದೇನೆ" ಎಂದು ಹೇಳಿದರು.

18,000 ಅಡಿಗಳಿಂದ ಧುಮುಕಿದ ವೀರನು!

ವೇಲ್ಸಿನ ವೈಮಾನಿಕನಾದ ಗೈನ್‌ಜಾನ್ಸ್ ಎಂಬ ಯುವಕನು ಸುಮಾರು 18,000 ಅಡಿಗಳ ಎತ್ತರದಿಂದ ಕೊಡೆಯ ಸಹಾಯದಿಂದ ಭೂಮಿಗಿಳಿದು ವಿಶ್ವದ ರಿಕಾರ್ಡನ್ನು ಸ್ಥಾಪಿಸಿರುವನು. ರಾತ್ರಿಯ ವೇಳೆಯಲ್ಲಿ ಈ ರೀತಿಯಲ್ಲಿ ಇಳಿಯುವುದಕ್ಕೆ ಇವನೇ ಪ್ರಥಮತಃ ಸ್ವಯತ್ನಪಟ್ಟನೆಂದು ಹೇಳಲಾಗಿದೆ. ಇವನು ಮಿಡ್ಲೆಸ್ಸಿನ ಹೆಸ್ಟನ್ ವಿಮಾನನಿಲ್ದಾಣದಿಂದ ಸುಮಾರು 10 ಗಂಟೆ ರಾತ್ರಿಯಲ್ಲಿ ವಿಮಾನವೇರಿ ಹೋದನು. ವಿಲ್ಟ್‌ಷೈರಿನ ನೆದರ್‌ವಾನ್ ಎಂಬಲ್ಲಿ ವಿಮಾನದಿಂದ ಆಕಾಶಪುಟ್ಟಿಯಲ್ಲಿ ಕುಳಿತು ಕೆಳಗಿಳಿಯಲಾರಂಭಿಸಿದನು. ಆಗ 18,000 ಅಡಿಗಳ ಎತ್ತರದಲ್ಲಿದ್ದನೆಂದು ಅವನಕೈಗೆ ಕಟ್ಟಲಾಗಿದ್ದ ಬಾರಾಗ್ರಾಫ್ ಯಂತ್ರವು ತೋರಿಸುತ್ತಿತ್ತಂತೆ! ಈತನು ಮತ್ತೊಂದು ಕೈಗೆ ಪ್ರಕಾಶಮಾನವಾದ ವಿದ್ಯುದ್ದೀಪವನ್ನು ಕಟ್ಟಿಸಿಕೊಂಡಿದ್ದನಂತೆ! ತನ್ನ ಕೊಡೆಯನ್ನು ಬಿಚ್ಚಿಕೊಳ್ಳುವುದಕ್ಕೆ ಮುಂಚಿತವಾಗಿ ಇವನು ಸುಮಾರು 8ಸಿ ಸೆಕೆಂಡುಗಳವರೆಗೆ ಭೂಮಿಯಕಡೆ ನೇರವಾಗಿ ಇಳಿಯಬೇಕಾದ ಪ್ರಸಂಗವು ಬಂದಿತಂತೆ! ಕೊನೆಗೆ ಈತನು ನೆದರವಾನ್ ವಿಮಾನನಿಲ್ದಾಣದಿಂದ ಸುಮಾರು ಎರಡು ಮೈಲಿ ದೂರದಲ್ಲಿ ಹೋಗಿಬಿದ್ದನಂತೆ!

[೩ ನೆಯ ಪುಟದಿಂದ ಮುಂದುವರೆದುದು]

ಹೇಯಪದಾರ್ಥಗಳಿಂದ ಸಕಲಾಂಗಗಳಲ್ಲಿ ತುಂಬಿರುವ ರಮಣೀಯ ಅಂಗದಲ್ಲಿ ಯಾವದು ರಮಣೀಯವಾದದ್ದೂ ದೇವರೇ ಬಲ್ಲ!

ಪ್ರ–ಅಸಂಗಾತ್ಮನ ಸ್ವರೂಪವೇನು?

ಉ–ವಿವೇಕ ವೈರಾಗ್ಯ ವಿಚಾರಗಳಿಂದ ತರ್ಮುಖವಾದ ಈತನ ಮನಸ್ಸು ಪ್ರಪಂಚ ಕಲ್ಪನೆಯಂ ಬಿಟ್ಟು ನಿರ್ವಿಕಲ್ಪವಾದ ಚನ್ಮಾತ್ರ ಸ್ವರೂಪದಲ್ಲಿ ಲಯಿಸಿರುವದು ಈಶ್ವರಾಜ್ಞೆಯಂತೆ ನಡೆಯುವ ಈತನು ಕರ್ಮಗಳನ್ನು ಮಾಡುತ್ತಿದ್ದರೂ ಆಕಾಶದಲ್ಲಿ ಮೋಡಗಳಂತೆರುವನು ಮತ್ತು ಬ್ರಹ್ಮ ಸಾಕ್ಷಾತ್ಕಾರದಿಂ ನಿತ್ಯತೃಪ್ತನಾಗಿರುವುದರಿಂದ ಇಚ್ಛಾ-ಭಯ-ಕ್ರೋಧಗಳಲ್ಲದವನಾಗಿ, ಪರಿಪೂರ್ಣಭಾವದಿಂದ ಅಹಂಕಾರವಿಲ್ಲದೆ ಕರ್ಮಗಳಂ ಮಾಡುತ್ತಿದ್ದರೂ ನಿರ್ಲೇಪನಾಗಿ ದೇಹಭಾವವಿಲ್ಲದ್ದರಿಂದ ದೇಹಕ್ಕಾಗುವ ಉಪಹತಿಗಳೇನೂ ತೋರುವದಿಲ್ಲವು. ಈ ಮಹಾತ್ಮನು ಮದನ ಮದಮನೋಹರಳಾದ ಮದಿರಾಕ್ಷಿಯನ್ನು ಸಹ ಮಣ್ಣಿನ ಬೊಂಬೆಯೆಂದು ತಿಳಿಯುವನು ಮೃಗಳಂತೆ ಮನೋಹರವಾದ ನೇತ್ರವುಳ್ಳ ನವತರುಣಿಯರ ದರ್ಶನದಲ್ಲಿ ಕಾಡು ಮರದಂತಿರುವನು. ಭೋಗಗಳಂ ರೋಗಗಳಂತೆಲೂ ಅಪತ್ತುಗಳಂ ಸಂಪತ್ತುಗಳಂತೆಲೂ. ದೃಶ್ಯಸಂಪದವಂ ಬಿಸಿಲು ಜೊರೆಯೆಂತಲೂ ತಿಳಿಯುವನು ಅಲ್ಲದೆ ನವ ತರುಣಿಯಂ ಕೂಡಿದಾಗ್ಯೂ ಸಮಾನ ವಯೋರೂಪ ಳಾದ ಪ್ರೌಢಾಂಗನೆಯ ಬಿಡದಿದ್ದಾಗ್ಯೂ ಸ್ಮರ ಶರ ಗಳು ಇವನಲ್ಲಿ ಧೂಳಸಮಾನವಾಗುವುವು ಮರುಭೂ ಮಿಯಲ್ಲಿ ದಾರಿಕಾರನಂತೆ ಭೋಗಗಳಲ್ಲಿ ಬೀಳನು ತೈಲವನ್ನು ಸುಳಗಾಳಯಂತೆ ದೃಶ್ಯ ಲಕ್ಷ್ಮಿಯು ಇವನಂ ಅಲ್ಲಾಡಿಸಲಾರಳು ಆದರೆ ಕಣ್ಣು ಬೆಳಕಿನಲ್ಲಿ ಪಸರಿಸುವಂತೆ ಅಸಂಗವಾದ ಭಾವದಿಂ ಭೋಗಗಳಲ್ಲಿವನು ನಡೆಯುವನು ಕಾಕತಾಳನ್ಯಾಯದಿಂದುಂಟಾದ ಭೋಗಗಳಿಂದಿವನಿಗೆ ಮಂದರಗಿರಿಗೆ ಸಿಮುದ್ರದ ಅಲೆಗಳಂತೆ ಸುಖದುಃಖಗಳೇ ತೋರವು

ವಾಚಕರಿಕರೇ! ಮಿಂಚು ಹುಳುವಿನ ಮಿರುಗಿಗೆ ಸಮಾನವಾದ ಸಂಭೋಗಸುಖದಲ್ಲಿ ನಮ್ಮದಂತಹ್ಯತ ಗಳಂ ದುಃಖ(ಸೋ)ವು ತೋರದಿರುವಲ್ಲಿ ಅಖಂಡಾನಂ ದದಲ್ಲಿರುವ ಈ ಮಹಾವೀಯನಿಗೆ ದೇಹಚ್ಯುತಿಯಿಂದೇನಾ ದೀತ!

ಪ್ರ–ಧರ್ಮಾಭಿಮಾನಿಗಳ ಕರ್ತವ್ಯವೇನು?

ಉ–ಪೃಥಿವ್ಯಾದಿ ಪಂಚತತ್ವಗಳು ಗುಣಕರ್ಮಗಳಲ್ಲಿ ಪರಸ್ಪರ ವ್ಯತ್ಯಾಸವುಳ್ಳವುಗಳಾಗಿದ್ದಾಗ್ಯೂ ಅವುಗಳ ಸ್ವಾಭಾವಿಕ ಕ್ರಿಯೆಗಳನ್ನು ಸ್ವಜಾತೀಯ ವಿಜಾತೀಯ ಸ್ವಗತ ಭೇದಶೂನ್ಯವಾದ ಪರಮಾತ್ಮನ ವಿಧಿಯಂತೆ ನಿಯಮಿತಕಾಲದಲ್ಲಿ ನಡೆಯಿಸುತ್ತ ಒಂದರ ಕಾರ್ಯವಂ ಮತ್ತೊಂದು ಮಾಡದಂತೆಯೂ, ಜಗದ್ರಕ್ಷಕನಾದ ಸೂರ್ಯನೂ ಸಹ ಪರಮಾತ್ಮನಿಂದ ಕ್ಲುಪ್ತವಾದ ಮಾರ್ಗದಲ್ಲಿ ಮೊದಲು ತಾನು ನಡೆದು, ತನ್ಮೂಲಕ ತನ್ನನುಚರರಾದ ಉಪಗ್ರಹಗಳು ತಮಗೆ ನಿಯಮಿತವಾದ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವಹಾಗೆಯೂ, ಮತ್ತು ಲತಾವೃಕ್ಷಾದಿಗಳು ಆಯಾಯ ಕಾಲದಲ್ಲಿ ಋತುಧರ್ಮಾನುಸಾರವಾಗಿ ಬಾಹ್ಯವಿಕಲ್ಪಗಳನ್ನು ಹೊಂದಿದರೂ ಮೂಲದಲ್ಲಿ ಮಾತ್ರ ನಿರ್ವಿಕಲ್ಪದಿಂದಿರುವಂತೆಯೂ ಜಗತ್ಸಂಬಂಧವಾದ ಕಷ್ಟ ನಷ್ಟ ನಿಸ್ಸೂಗಳು, ಬಡತನವು ಸಹ ಬಂದರೂ ಧರ್ಮಭ್ರಷ್ಟರಾಗದೆ ಧರ್ಮಮಾರ್ಗದಲ್ಲಿ ನಡೆದು ತನ್ಮೂಲಕ ಜಗತ್ತಿಗೆ (ಅವರವರಿಗೆ) ವಿಹಿತವಾದ ಧರ್ಮದಲ್ಲಿ ನಡೆಯುವಂತೆ ಬೋಧಿಸುತ್ತ ಎಂದು ಮಾರ್ಗದರ್ಶಕರಾಗಬೇಕು ಹೀಗೆ ಮಾಡುತ್ತಾ ಬಂದರೆ ಸ್ವಭಾವನಿರೋಧವಾದ ದೋಷಗಳು ಪ್ರಾಪ್ತವಾಗದೆ, ಜಗತ್ತು ಕ್ರಮವಾದ ಮಾರ್ಗದಲ್ಲಿ ನಡೆದು ಸಂಕರ (ಸಂಸರ್ಗ) ದೋಷಗಳಿಲ್ಲವೂ ಕಮನವಾಗಿ, ಜಗತ್ತಿಗೆ ಸುಖವೂ, ಲಾಭವೂ ಶಾಂತಿಯೂ ಉಂಟಾಗುವವು ಪ್ರಿಯವಾಚಕರೇ! ಈ ಕಲಿ ಕಾಲದಲ್ಲಿ ಚಿತ್ತಸ್ಥೈರ್ಯವಿಲ್ಲದ ಕೆಲ ಅವಿವೇಕಿಗಳು ಯಾವುದಾದರೊಂದು ನೆಪಮಾಡಿ ಸ್ವಧರ್ಮಮಾರ್ಗಗಳನ್ನು ಬಿಟ್ಟು ಸ್ವೇಚ್ಛಾಪ್ರವರ್ತಕರಾಗುವರು ಹೀಗೆ ಮಾಡುವುದರಿಂದ ಇವರಿಗೆ ಸ್ವಧರ್ಮವನ್ನು (ನಡವಳಿಕೆ) ಬಿಟ್ಟ ದ್ರೋಹವೂ ಅನ್ಯಧರ್ಮ (ನಡವಳಿಕೆ) ವಂ ಸ್ವೀಕರಿಸಿದ ದ್ರೋಹವೂ ಹೀಗೆರಡೂ ಗಂಟು ಬೀಳುವವು. ಆದ್ದರಿಂದ ಇಂತಹ, ಲಗಾಮುಹರಿದ ಕುದುರೆಯಂತಹ ನಡವಳಿಕೆ ಸರ್ವತ್ರ ನಿಷಿದ್ಧವಾಗಿರುವದು. ಆದರೆ, ತಪಸ್ಸು, ವಿದ್ಯೆ, ಸ್ವರೂಪಜ್ಞಾನವುಳ್ಳ ಧರ್ಮಾಭಿಮಾನಿಗಳು ಮಾತ್ರ ಅತಿ ನಿಕೃಷ್ಟವಾದ ದೆಸೆಯಲ್ಲಿಯೂ ಸಹ ಸ್ವಕರ್ಮ (ನಡವಳಿಕೆ) ಭ್ರಷ್ಟರಾಗರು ಸತ್ಪುರುಷರಿಗೆ ಧರ್ಮವೇ ಪಥ್ಯವು ಪ್ರಾಣಗಳಲ್ಲ

ಪ್ರ–ಲೌಕಿಕವಾಗಿ ಯಾರಿಗೆ ಹಣ-ಹೊಲ-ಮನೆ ಸಂಪಾದಿಸಿಡಬಾರದು?

ಉ–ಅದೃಷ್ಟಹೀನ ಮತ್ತು ಅದೃಷ್ಟವಂತ ಇವರೀರ್ವರಿಗೆ. ಏಕೆಂದರೆ ಅದೃಷ್ಟಹೀನನು ಕಲ್ಪವೃಕ್ಷದಬಳಿಗೆ ಹೋದರೂ ಏನೂ ಪ್ರಯೋಜನವಾಗುವದಿಲ್ಲ ಮತ್ತು ಪೂರ್ವಿಕರು ಗಳಸಿಟ್ಟದ್ದು ಎತ್ತಿದ್ದರೂ ಅದನ್ನು ಕಳೆದುಕೊಂಡು ಹುಟ್ಟದರಿದ್ರನಾಗುವನು ಇನ್ನು ಅದೃಷ್ಟವಂತನು ಹೋದಕಡೆಗಳಲ್ಲೆಲ್ಲ ಋದ್ಧಿಸಿದ್ಧಿಗಳನ್ನು ಹೊಂದುವನು, ನುತ್ತು ಪೂರ್ವಿಕರ ಆಸ್ತಿವಸ್ತ್ರಗಳಿಗೆ ಏನೂ ಇಲ್ಲದಿದ್ದರೂ ಆಸ್ತಿವಂತನಾಗುವನು ಈ ದೃಶ್ಯಗಳನ್ನು ನಾವು ನೋಡುತ್ತಲೇ ಇದ್ದೇವೆ. ಆದ್ದರಿಂದ ಈರ್ವರಿಗೂ ಅಸ್ಟೆ! ಪ್ರಿಯವಾಚಕರೇ! ವಸ್ತುಸ್ಥಿತಿಯು ಹೀಗಿರಲು ಕೆಲ ಮೂಢರು ತಮ್ಮ ಮಕ್ಕಳು ಮೊಮ್ಮಕ್ಕಳಿಗೆಂದು ಆಸ್ತಿ ಸಂಪಾದಿಸುವುದಕ್ಕಾಗಿ ಸುಳ್ಳು-ಮೋಸ-ಕಳ್ಳತನ-ವಿಶ್ವಾಸಘಾತಕತನಗಳನ್ನು ಮಾಡುತ್ತಾರೆ ಈ ಅಲಂಗರು ಮನುಷ್ಯವೃತ್ತಿಗೆ ತಕ್ಕದ್ದಲ್ಲದ ಈ ದುರ್ವೃತ್ತಿಗಳ ಬಗ್ಗೆ ಸ್ವಲ್ಪವೂ ನಾಚಿಕೊಳ್ಳದೆ ಮೂಗು-ಮೇಲು ಮಾಡಿಕೊಂಡು ಮಾರೀಕೋಣನಂತೆ ತಾನೇತಾನಾಗಿ ತಿರುಗುತ್ತಿರುವದು ಪರಮಾಶ್ಚರ್ಯ! ಪರಮಾಶ್ಚರ್ಯ!!

ಪ್ರ–ಜಂತುಗಳ ಜನ್ಮಕ್ಕೆ ಕಾರಣವಾದ ಯಾವ ಗುಣವು ಜಲದಲ್ಲುಂಟು?

ಉ–ಜಂತುಗಳ ಜನ್ಮ ಆರಂಭಕವಾದ ಯಾವ ರಜೋಗುಣವು ಜನನೀಜನಕರ ವಿರ್ಯದಲ್ಲುಂಟೋ ಅದೇ ರೀತಿಸ್ಸೇ ಅನ್ಯಜಂತುಗಳ ಉತ್ಪತ್ತಿಗೋಸ್ಕರ ಜಲದಲ್ಲುಂಟು.

ಪ್ರ–ಪ್ರಾಣಿಗಳು ಅಪೇಕ್ಷಿಸದಿದ್ದರೂ, ಬೇಡವೆಂದರೂ, ತಪ್ಪಿಸಿಕೊಂಡಿದ್ದರೂ, ಎಲ್ಲದ್ದರೂ ಬಡವರು ಬಲ್ಲಿದರೆಂಬ ಜೀವನಿಲ್ಲಿಗೆ ಪ್ರಾಪ್ತವಾಗತಕ್ಕದ್ದಾ ವೆದು?

ಉ–ಮರಣ. (ದೇಹದೃಷ್ಟಿಯಿಂದ)

ಪ್ರ–ಮನುಷ್ಯರಲ್ಲಿ ಎಷ್ಟು ತರಗತಿಗಳುಂಟು?

ಉ–ನಾಲ್ಕು ತಮ್ಮ ಹಿತದಕಡೆಗೆ ದೃಷ್ಟಿಯಿಲ್ಲದೆ ಪರಹಿತವಂ ಕಲ್ಪಿಸುವವರು ಸತ್ಪುರುಷರು: ಸ್ವಹಿತಕ್ಕೆ ವಿರೋಧವಿಲ್ಲದಂತೆ ಪರಹಿತವಂ ಕಲ್ಪಿಸುವವರು ಸಾಮಾನ್ಯರು; ಸ್ವಹಿತಕ್ಕಾಗಿ ಪರಹಿತಾರ್ಥಭಾತಕಮಾಡತಕ್ಕವರು ನರರಕ್ಕಸರು, ಮತ್ತು ತನಗೆ ಹಿತವಿಲ್ಲದಿದ್ದರೂ ಪ್ರಯತ್ನಪೂರ್ವಕವಾಗಿ ಪರಹಿತಘಾತಕನಾಡುವ ಇನ್ನೊಂದು ಪುಂಗಡವುಂಟು ಇಂಥವರನ್ನು ಏನೆಂದು ಕರೆಯಬೇಕೋ ತಿಳಿಯದಾಗಿದೆ.

ರಾಘವಾಂಕಯ್ಯನವರ ನಿಧನ, ಹಿರಿಹಾಳು.

ತಾ|| ೫-೯-೩೮ ನೇ ಸೋಮವಾರ ರಾತ್ರಿ ೯॥ ಘೆಜ್ ಎಂ ರಾಘವಾಂಕಯ್ಯನವರು ತಮ್ಮ ಮಠದಲ್ಲಿ ಶಿವೈಕ್ಯರಾದರೆಂದು ತಿಳಿಸಲು ಬಹಳ ವಿಷಾದವಾಗುತ್ತದೆ ಈ ಮಹಾಶಯರು ರಂಭಾಪುರೀ ಸಂಸ್ಥಾನದ ಏಜಂಟರಾಗಿದ್ದರು ಸಂಗೀತಕಲೆಯಲ್ಲಿ ಅತ್ಯಂತ ಪ್ರವೀಣತ್ವವನ್ನು ಪಡೆದು ನಮ್ಮ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಈ ಕಲೆಯೆಂಬ ಬೀಜವನ್ನು ಬಿತ್ತಿ ಅನೇಕ ಪದಕಗಳನ್ನು ಪಡೆದಿದ್ದರು. ಅಲ್ಲದೆ ಈ ಕಲಾಕೋವಿದರು ನಮ್ಮ ಗ್ರಾಮದಲ್ಲಿ ಒಂದು ಶ್ರಮವಹಿಸಿ ಬಾಲಲೀಲಾವಿನೋದಿನಿ ಸಂಗೀತ ನಾಟಕಮಂಡಲಿಯನ್ನು ಸ್ಥಾಪಿಸಿ ಈ ನಾಟಕಗಳನ್ನು ಕರ್ನಾಟಕದೇಶದಲ್ಲೆಲ್ಲ ಪ್ರದರ್ಶಿಸಿ ಕೀರ್ತಿಭಾಗಿಗಳಾಗಿದ್ದರು ಇಂತಹವರನ್ನು ಕಳೆದುಕೊಂಡುದು ನಮ್ಮ ಸಮಾಜಕ್ಕೆ ಹಾನಿಯೆಂದೇ ಹೇಳಬೇಕಾಗಿದೆ ಇವರ ಆತ್ಮಕ್ಕೆ ಶಾಂತಿಯುಂಟಾಗಲೆಂದು ಪರಮಾತ್ಮನನ್ನು ಪ್ರಾರ್ಥಿಸುವೆ,

ಓರ್ವ ಗ್ರಾಮನಿವಾಸಿ.

ಗುರುಕಾರ್ ಮರಿಮಲ್ಲಪ್ಪನವರ ಧರ್ಮದ ಫಂಡು ಮೈಸೂರು

ನೇಲ್ತಂಡ ಫಂಡಿನಿಂದ ವಿದ್ಯಾರ್ಥಿ ವೇತನವನ್ನು ಪಡೆಯಲಪೇಕ್ಷಿಸುವ ಕಾಲೇಜು, ಮೆಡಿಕಲ್ ಮತ್ತು ಇಂಜನಿಯರಿಂಗ್ ಸ್ಕೂಲು ಮತ್ತು ಇತರ ಕಲಾಶಾಲೆಗಳಲ್ಲಿ ಉಚ್ಚ ಶಿಕ್ಷಣವನ್ನು ಪಡೆಯುತ್ತಿರುವ ಮೈಸೂರು ದೇಶೀಯರೂ ಬಡವರೂ ಆದ ವೀರಶೈವ ವಿದ್ಯಾರ್ಥಿಗಳು 1938 ನೇ ಸೆಪ್ಟಂಬರ್ ಆಖೈರಿನೊಳಗಾಗಿ ಫಂಡಿನ ಸೆಕ್ರೆಟರಿಗಳಿಗೆ ತಲಪುವಂತೆ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು ಅಪ್ಲಿಕೇಷನ್ ಫಾರಮ್ಮನ್ನು ಅಪೇಕ್ಷಿಸತಕ್ಕವರು ಸೆಕ್ರೆಟರಿಗಳಿಗೆ 0-0-6 ಪೈ ಸ್ಟ್ಯಾಂಪನ್ನು ಕಳುಹಿಸಿ ಫಾರಂಗಳನ್ನು ಬುಕ್‌ಪೋಸ್ಟ್ ಮೂಲಕ ಪಡೆಯಬಹುದು

M. S. Basavalingayya,
6—9—1938 Hon. Secretary
Marimallappa's Charities
Mysore.

ಮಲೆಜ್ವರಕ್ಕೆ ಮಲೇರಿಯಾನ

ಇದು ಮಲೆಜ್ವರ, ಚಳಿ ಜ್ವರ, ದಿನಬಿಟ್ಟು ಬರು ವಜ್ವರ, ೨ ವ ೩ ದಿವಸಕ್ಕೊಮ್ಮೆ ಬರುವಜ್ವರ, ಕ್ವಿನೇನಾಸಂದಲೂ ಇಂಜಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ಗೆದ್ದಿ ಸಮೇತ ಸಂಪೂರ್ಣ ಗುಣಪಡಿಸುತ್ತದೆ. ೪ ಔನ್ಸ್ ಸೀಸೆಗೆ ಆಣೆ 0-14-0, 8 ಔನ್ಸ್ ಸೀಸೆಗೆ ರೂ. 1-8-0, ಡಜ್ಜನಿಗೆ ರೂ 9-12-0, ರೂ. 16 8-0

ಕಂಪೌಂಡ್ ಸಿರಪ್ ಪಾಲಸವನ—ಸ್ವಸ್ಥೇಂದ್ರಿಯ ಸ್ವಲನ, ಶೀತ್ಸ್ವಲನ, ಧಾತುಕಳಕೊಳ್ಳುವದು, ಮೂತ್ರದೊರೆತ ನಪ್ಪಳಾಗುವದು, ವೀರ್ಯಕ್ಷಯ, ತೆಳ್ಳಗಾವಧಾತು, ಇವೆಲ್ಲವು ಬುಡನ್ನು ಕಿತ್ತು ಬಿಸಾಡುವದಲ್ಲದೆ ಧಾತುಪುಷ್ಟಿ ರಸಾಯನ ವಾಗಿರುತ್ತದೆ ಸೀಸೆಗೆ ರೂ 3-8 0 ಮತ್ತು 1-14 0.

ಪ್ರಜ್ಞಾತಿಪಟ್ಟ ನಮನೆ ಎಕ್ಜೆಮೆಲ್ಲರ್ ಬಿಲ್ಲೆಗಳು—ಸಕಲತರದ ಹೊಟ್ಟೆಯಲುಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜ್ಜನಿಗೆ ಅ. 0-5 0 ಸೂರರೆ ಬಾಟ್ಲಿಗೆ ರೂ. ೨-0 0.

ಕಂಪೌಂಡ್ ಸಿರಪ್ ಬ್ಲಾಟಿ—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೆಮ್ಮ, ಜಾಸವನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. ಸೀಸೆಗೆ ರೂ. 3.8 0, ರೂಪಾಯಿ 1.14.0.

ಬೇಬಿ ಟೋ—ಬಾಲ್ಯಾವ್ಯಾಯದಲ್ಲಿ ಎಲುಬುಗಳಲ್ಲಿ ಸೂಕ್ಷ್ಮಜೈವಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ತಾವು ರಿಕ್ರೆಟಿಸ್ ರೋಗದಿಂದ ಮಾಂಸ ಜೋಲುಬಿದ್ದು, ಮೈ, ಕೈ, ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ–

ಸೀಸೆಗೆ ರೂಪಾಯಿ 1-4-0

ಕಂಪೌಂಡ್ ಸಿರಪ್ ನೆಸಿಫ್ರೂಜ–ಪ್ರಮೇಹ, ಮೂತ್ರ ಪ್ರಾತದಿಂದ ದುರ್ಬಾಸನೆಯ ಕೀವು, ಮೂತ್ರಜೊಯ್ಯನಾಗ ತಡೆಯಲಾರದ ಕಠಿಣ ಉರಿ, ಮೂತ್ರಕೃಚ್ಛ್ರ, ಮೂತ್ರ ಆಗಾಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು. ಇವೇ ಮೊದಲಾದ ಸ್ರಸೇಪದ ಲಕ್ಷಣಗಳ ಬುಡವನ್ನು ಕೆಲವು ತಾಸುಗಳಲ್ಲಿ ರಾಮಬಾಣದಂತೆ ನಿಲ್ಲಿಸುವದು

ಸೀಸೆಗೆ ರೂ. 3-8-0, ರೂ. 1-14-0

ತುದ್ಮ ಟಕ್ಯ, ಹೊಮ್ಮೊಪಥಿ ಔಷಧಿಗಳು ನಮ್ಮಲ್ಲಿ ಜೊರೆಯುತ್ತವೆ ಕ್ಯಾಟಲಾಗಿಗೆ ಬರೆಯಿರಿ.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಸ್ತುತಿರಂತು ॥

ಧರ್ಮದಸುಗ್ಗಿ, ಕಬನೂರು.

ಕಬನೂರು ಸವಣೂರು ಸಂಸ್ಥಾನಕ್ಕೆ ಶೀರಿದ ಒಂದು ಪ್ರಧಾನ ಗ್ರಾಮವಾಗಿರುತ್ತದೆ. ಇಲ್ಲಿ ವೀರಶೈವರ ಸಂಖ್ಯೆಯು ಹೆಚ್ಚಿದ್ದು ಇವರಲ್ಲಿ ಗುರುದೇವತಾಭಕ್ತಿಯು ಜಾಗೃತಿಯಲ್ಲಿರುವುದು. ಸಧ್ಯ ವಾಗಿದ್ದರೂ ಚತುರರೂ ಧಾರ್ಮಿಕ-ಲೌಕಿಕ-ಕಾರ್ಯಗಳಲ್ಲಿ ಮುಂದು ನರಿಯುವ ಸ್ವಭಾವದವರೂ ಆಗಿರುವರು. ಇಂತಹ ಗ್ರಾಮದಲ್ಲಿ ಅನಾಗ್ಯೆ ಧರ್ಮದ ಸುಗ್ಗಿಯು ನಡೆಯುತ್ತಿರುವುದು ಸ್ವಾಭಾವಿಕ ವಾಗಿಬಿಡುವುದು. ಈ ಹಿಂದೆ ಈ ಗ್ರಾಮದವರು ಧರ್ಮಜಾಗೃತಿಯ ಬಗ್ಗೆ ಒಂದು ಸಭೆಯನ್ನು ಮಾಡಿ ಕೀರ್ತಿವಂತರಾಗಿರುವರು. ಈ ಗ್ರಾಮದಮೇಲೆ ಬೆಂಗಳೂರು ಮಹಾಂತಿನ ಮಹಾಧ್ಯಕ್ಷ ಶ್ರೀ|| ಪ|| ಬ್ರ|| ಗಂಗಾಧರಶಿವಾಚಾರ್ಯರವರ ಪ್ರೇಮವು ಹೆಚ್ಚು. ಈ ಕಬ ನೂರು ಭಕ್ತರಾದರೋ ಶ್ರೀ ಸ್ವಾಮಿಗಳವರನ್ನು ತಮ್ಮ ಸ್ಥಾನಕಳಿ ಯೆಂದೇ ಭಾವಿಸಿರುವರು. ಹಿಂದೆ ನಡೆದ ಸಭೆಯು ಶ್ರೀ ಸ್ವಾಮಿ ಗಳವರ ಪ್ರೇರಣೆ ಸಾಯಸಗಳಿಂದ ನೆರವೇರಿದಮಾಗಿರುತ್ತದೆ. ಈ ಕಾಲಪಲ್ಲಿ ಧರ್ಮವೆಂದರೆ ಎಲ್ಲರಿಗೂ ತಲೆಬೇನೆಯಾಗಿದೆ. ಬ್ರಿಟೀಷರು ಭರತಖಂಡಕ್ಕೆ ಬಂದಮೇಲೆ ಧರ್ಮಕ್ರಿಯೆಗಳು ಮಾಯವಾಗುವ್ಯೆಗೆ ನಾಕವಾದವು. ಇತ್ತೀಚೆಗೆ ಭಾರತೀಯರಿಂದು ಹೇಳಿ ಕೊಳ್ಳುತ್ತಿರುವ ಕಾಂಗ್ರೆಸ್ಸಿನವರಿಂದಂತೂ ಧರ್ಮವು ಆಡಿಯಿಲ್ಲ ದಾಗಿ ಹತ್ತಿದೆ. ಇದು ಕಾಲಮಹಿಮೆಯೆಂದೇ ಹೇಳಬೇಕಾಗಿದೆ. ಇದರಿಂದ ಭಾರತಮಾತೆಯು ಹೇಗೆ ಉದ್ಧಾರವಾಗುವಳೋ ಯಾ ರಿಗೂ ತಿಳಿಯದಾಗಿದೆ. ಕಾಲಮಹಿಮೆಗನುಸಾರವಾಗಿ ಭಾರತವಲ್ಲಿ ಸಕ್ಷ್ಮಗಳು ಆನಂತಾನಂತವಾಗಿ ಪಟ್ಟುತ್ತೊಡಗಿವೆ ಈ ದುಷ್ಟಟ ಗಳಲ್ಲಿ ಜಹಪೂ ಒಂದಾಗಿರುವದು. ಇದೊಂದರಿಂದಲೇ ಹಳ್ಳಿಗಳಲ್ಲಿ ನಾಯ ಹಾನಿಯನ್ನು ಹೇಳತೀರದು. ಕಬನೂರು ಗ್ರಾಮದವರು ಬೆಂಗಳೂರಿನ ಮಹಾಂತಿನ ಮಹಾಧ್ಯಕ್ಷ ಶ್ರೀ|| ಪ|| ಬ್ರ|| ಗಂಗಾಧರ ಶಿವಾಚಾರ್ಯಸ್ವಾಮಿಗಳವರ ಸಮಪದೇಶದಿಂದ ದುಷ್ಟಚಟ್ಟಿಗಳಿಂ ದಾಗುವ ಹಾನಿಯನ್ನು ಲಕ್ಷ್ಯಕ್ಕೆತಂದು ಜಹಾಕುಡಿಯುವುದನ್ನು ಬಿಟ್ಟು ವರ್ಷವೊಂದಕ್ಕೆ ಸಾಲ್ಕು ಸಾವಿರರೂಪಾಯಿಗಳನ್ನು ಲಾಭ ಮಾಡಿಕೊಂಡುದಲ್ಲದೆ ಶೀರದೆ ಅರೋಗ್ಯಕ್ಕೆ ಬಲವಾದ ಸೌಗ ವನ್ನು ಹೊಂದಿ ಧನ್ಯರಾದರೆಂದು ಹೇಳಲು ಸಂತೋಷವಾಗುತ್ತಿರು ವುದು. ಇವರನ್ನು ಭಾರತಮಾತೆಯ ವೀರಪುತ್ರರೆಂದು ಹೇಳಲು ಅಡ್ಡಿಯಿಲ್ಲ. ಹೀಗೆ ಸದ್ಗ್ರಾಮದವರೂ ದುಷ್ಟಟಿಗಳ ದುರಾಶೆ ಯನ್ನು ಹರಿತ್ಯಜಿಸಿ ಲಾಭವನ್ನೂ ಆರೋಗ್ಯವನ್ನೂ ತದ್ದ್ವಾರಾ ದೇಶಾಭಿವೃದ್ಧಿಯನ್ನೂ ತಂದುಕೊಳ್ಳುವುದಾದರೆ "ಮಾತೃದೇವೋ ಭವ ಪಿತೃದೇವೋಭವ ಆಚಾರ್ಯದೇವೋಭವ" ಎಂಬ ಶ್ರುತಿಪ್ರಮಾ ಣದಂತೆ ಭಾರತಭೂಮಿಯ ಹಾರಿದ್ರ್ಯನಿಟ್ಟಿದನಕ್ಕೆ ಅವಕಾಶವನ್ನು ತಂದುಕೊಂಡಂತಾಗುವುದು. ತೋಗಿಲೆಗಳಿಗಿಂತ ಕಾಗೆಗಳೇ ಹೆಚ್ಚಿ ದ್ದಂತೆ ದುಷ್ಟಚಟ್ಟಿಗಳಿಂದ ವಿಪರಿಸತಕ್ಕವರೇ ವಿಶೇಷವಾಗಿರುವ ರೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ಆದರೆ ಈ ಕಬನೂರು ಗ್ರಾಮದಂಥಾದ ಸದ್ಗ್ರಾಮಗಳೂ ಪ್ರತಿಜ್ಞೆಯಿಂದ ಚಹಕನ್ನು ಪರಿತ್ಯಜಿಸಿ ಅವ್ಯಕ್ಕೆ ತೃಪ್ತರಾಗದೆ ವಿಚಾರನ್ಯಪ್ಪಿಯುಳ್ಳವರಾಗಿ ನ್ಮ ಧರ್ಮತತ್ವಗಳನ್ನು ತಿಳಿದುಕೊಂಡು ಆಚರಣೆಗೆ ತಂದುಕೊಳ್ಳಲು ಸಂಕಲ್ಪವನ್ನು ಮಾಡಿ ಬೆಂಗಳೂರು ಶ್ರೀ ಸ್ವಾಮಿಗಳವರನ್ನು ಪ್ರಾರ್ಥಿಸಿಕೊಂಡುದರಿಂದ ಸದರಿ ಸ್ವಾಮಿಗಳವರು ಅವರ ಪ್ರಾರ್ಥ ನೆಯನ್ನು ತಮ್ಮ ಕರ್ತವ್ಯದ ಸಾಧಳ್ಳಕ್ಕೆ ಹೇತುವಾಗಿರುವುದೆಂದು ಸಂತೋಷಿಸಿ ಶ್ರೀಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ಜಗದ್ಗುರು ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಜಗದ್ಗುರು ಪಂಚಾಚಾರ್ಯ ಸಾರ್ವಭೌಮ ಸಿದ್ಧಾಂತ ಶಿಖಾಮಣಿ ಅಷ್ಟಾದಶ ಶಾಸ್ತ್ರಪುರಾಣ ವೇದಾಗಮ ಪಾರಾಣಕರಾದ ಶುಣ್ಣ ಕಲ್ಲಭವಿರೆ ಅರಾಧ್ಯಮತೆದೆ ವೇ|| ಪಂ|| ಪುರಾಣರತ್ನ ಪದವೀಧರ ವೃಸಭಲಿಂಗಶಾಸ್ತ್ರಿಗಳೊಡನೆ ಕಬ ನೂರು ಗ್ರಾಮಕ್ಕೆ ದಯಮಾಡಿಸಿದರು. ಅವರ ಸನ್ನಿಧಾನದಲ್ಲಿ ಕಾರ್ಯಕ್ರಮಗಳು ನಿರ್ಧರಿಸಲ್ಪಟ್ಟು ಸರ್ವರ ಪ್ರಾರ್ಥನೆಯಪ್ರಕಾರ ಈ ಬಯಧಾನ್ಯಸಂವತ್ಸರದ ಜ್ಯೇಷ್ಠ ಬಹುಳ ಪ್ರತಿಪದ ಸೋಮ ವಾರದಲ್ಲಿ ಶ್ರೀ|| ಸ್ವಾಮಿಗಳವರಿಂದ ಧರ್ಮೋಪದೇಶವೂ ನೇ|| ಶಾಸ್ತ್ರಿಗಳವರಿಂದ ಶ್ರೀ ರೇಣುಕವಿಜಯಮಹಾಪುರಾಣಪ್ರವಚನವೂ ಆರಂಭವಾಯಿತು. ಕಬನೂರು ಗ್ರಾಮದಲ್ಲಿ ಸುಶಿಕ್ಷಿತ ಮನೆತನದ ವರಾದ ಶ್ರೀಮಾ ಪಟೇಲ್ ಮುದಿಗೌಡರು ತಮ್ಮ ಉದ್ಯಾನವಲ್ಲಿ ಶ್ರೀ ಸ್ವಾಮಿಗಳವರ ಆನುಜ್ಞಾನತ್ಯಾಗಿಯೇ ರಚಿಸಿದ್ದ ಬಂಗ್ಲೆಯಲ್ಲಿ ಪ್ರತಿನಿತ್ಯವೂ ಶ್ರೀ ಸ್ವಾಮಿಗಳವರ ರುದ್ರಾಭಿಷೇಕಪೂರ್ವಕ ಲಿಂಗ ಪೂಜೆಯೂ ಸೋಮವಾರಕ್ಕೊಮ್ಮೆ ವಿಧ್ಯುಕ್ತ ಗುರುಪೂಜೆಯೂ ಅತಿಶ್ರದ್ಧಾಭಕ್ತಿಗಳಿಂದ ತೃಪ್ತಿಯೂ ಪ್ರಚಲಿತವಾಯಿತು. ಹಗಲುಪೂಜೆ ಯಿಂದಲೂ ರಾತ್ರಿ ಪುರಾಣಪ್ರವಚನೋಪನ್ಯಾಸಗಳಿಂದಲೂ ಸರ್ವರೂ ಧರ್ಮಾಮೃತವನ್ನು ಪಾನಮಾಡುತ್ತಿದ್ದರು. ಸರ್ವತ್ರ ಪ್ರಸರಣ ವೀಲವಾದ ಈ ಅಮೃತ ಪಾನಾಪೇಕ್ಷೆಯಿಂದಲೂ ಆಜುಬಾಜು ಗ್ರಾಮದ ಸ್ತ್ರೀಪುರುಷ ಪುಣ್ಯಜೀವಿಗಳು ಉಭಯಕಾಲದ ಮಂ ಗಳಕಾರ್ಯದಲ್ಲಿ ಭಾಗಿಗಳಾಗುತ್ತಿದ್ದರು. ಇದರಿಂದ ಶ್ರೀಜಗದ್ಗುರು ಪಂಚಾಚಾರ್ಯ ಸಾರ್ವಾಭೌಮ ಕೋಷೆಯು ತೋರಬಹತ್ತಿತು. ಗ್ರಾ ಮದ ಅವರೆಣದಲ್ಲಿ ಆಹಾರ್ಯಪೂಗಗಳವರ ಮತ್ತು ಸರಶಿವಸ ಜಯ ಸೋಪಾಹಾರ್ಯವ್ಯ ಕರಿಧರ್ಮ ದುಲಕತೆಯ ಕಾಯಿಯನ್ನು ಕತ್ತರಿಸು ವುದಾಯಿತು. ಮಹಾಪುರಾಣದ ಅಧ್ಯಯನ ಸಮಾಪ್ತಿಯ ಕಾಲ್ಯಾ ರಾಧನೆಗಳು ಮಹೋತ್ಸವಪೂರ್ವಕವಾಗಿ ಅಟ್ಟಹಾಸದಿಂದ ಜರಗ ಹತ್ತಿದವು. ಈ ಕಲ್ಯಾಣವ್ಯವಹಾರದಲ್ಲಿ ಶಿವದೀಕ್ಷೆಯೇ ಶಿವಧರ್ಮಾ ಧಿಕಾರಕ್ಕೆ ಕಾರಣವೆಂಬುದನ್ನು ತಿಳಿದುಕೊಂಡು ಶುಭಮುಹೂರ್ತ ನಲ್ಲಿ ಸ್ತ್ರೀಪುರುಷನೇಕರು ಶಿವದೀಕ್ಷಾಸ್ವೀಕಾರಾರ್ಥ ಮುರಾಚಾರಗಳ ಸ್ನಾಧಿಸಲು ವೀರ ಕಂಕಣವನ್ನು ಧರಿಸಿದರು. ಗುರುಲಿಂಗಜಂ ಗಮ ಸೇವೆಯೇ ನಮ್ಮ ಜೀವಿತ ಸಾಧಳ್ಳವೆಂಬ ಭಾವನೆಯು ನೆಲೆ ಗೊಂಡಿತು. ಬಂಕಾಪುರ, ಮತ್ತಿಗಟ್ಟ, ಗುರೆಳ್ಳಿ, ಕೊಡಿಗೇಗಿ, ಮುಗಳಟ್ಟ ಮುಂತಾದ ಅನೇಕ ಗ್ರಾಮಗಳಿಂದ ಶ್ರೀ ಪಂಚಾಚಾರ್ಯ ಭಜನಸಂಘದವರ ಸುಶ್ರಾವ್ಯಭಜನೆಯು ಶ್ರೋತೃಗಳ ಕಾಯ ವಾಚಾ ನಸ್ಸುಗಳನ್ನು ನಿರ್ಮಲಗೊಳಿಸಿ ಪೂಜಾಪ್ರವಚನ ಕಾರ್ಯಗಳಲ್ಲಿ ಉತ್ಸಾಹವನ್ನುಂಟುಮಾಡುತ್ತಿದ್ದಿತು. ಈ ಶುಭಸ್ಪಸ್ಪರ್ಶದಲ್ಲಿ ಅನೇಕ ಮತದವರೂ ಹಣ ಆಟ್ಟಹಾಸದಿಂದ ಗುರುಗಳ ಪೂಜೆ ಯನ್ನು ಮಾಡಿ ಕೃತಾರ್ಥಜೀವಿಗಳಾದರು. ಇಂತಹ ಧರ್ಮಶೌಖ್ಯದ ಸುಗ್ಗಿಯಲ್ಲಿ ಕಬನೂರು ಭಕ್ತರು ಎರಡುವರೆತಿಂಗಳನ್ನು ನಿಮಿಷಾ ರ್ಧದಂತೆ ಕಳೆದರು. ಶ್ರೀಜಗದ್ಗುರು ಪಂಚಾಚಾರ್ಯ ಭಗವತ್ಪಾದರ ಕೃಪಾಬಲದಿಂದ ಅನುಷ್ಠಾನವೂ ತತ್ಕೋಪದೇಶ ಶವೂ ಪ್ರವಚನವೂ ನಿರ್ವಿಘ್ನವಾಗಿ ಜರಗಿ ಭಾದ್ರಪದ ಶುದ್ಧ ಚತುರ್ಥೀ ಭಾನುವಾರಕ್ಕೆ ಮಹಾಗಣಪತಿಪ್ರತಿಷ್ಠೆಯೊಡನೆ ಸಮಾಪ್ತಿಯಾದವು. ಗ್ರಾಮವು ತಳರು ತೋರಣಗಳಿಂದ ಅಲಂಕೃತವಾಗಿ ಶೋಭಿಸುತ್ತಿತ್ತು. ಮಧ್ಯಾಹ್ನ ಸಾಲ್ಕು ಘಂಟೆಗೆ ಪಲ್ಲಕ್ಕಿಯಲ್ಲಿ ಶ್ರೀ ಸ್ವಾಮಿಗಳವರ ಮತ್ತು ಶ್ರೀ ಪ್ರಸಿದ್ಧಪಾರಾಣದ ಮಹೋತ್ಸವವು ಪ್ರಚಲಿತವಾಯಿತು. ಉತ್ಸವದ ನಿಮಿತ್ತವಾಗಿಯೂ ಪ್ರಸಿದ್ಧಿಪತ್ರಿಕೆಯಲ್ಲಿ ಕಂಡ ಗುರು ರಾಜಾಜ್ಞೋತ್ಕೃಷ್ಟ ಸಭೆಯು ನಿಮಿತ್ತವಾಗಿಯೂ ಆಗಮಿಸಿದ್ದ ಜನಗಳ ಸಂಖ್ಯೆಯು ಏಯಸಾನಿಕ್ಕೆ ಮೀರಿದ್ದಿತು. ಬಾಕಾಪುರ ಮುಂತಾದ ಅನೇಕ ಗ್ರಾಮಗಳಿಂದ ಭಜಕರೂ ಬಾಣಾಫಬಂಜಿ ಯವರೂ ಜೋ೨ನರೂ ಇನ್ನೂ ಇತರ ವೇಕ್ಷಿಯ ವಾದ್ಯವೃಂದವೂ ಬಂದಿದ್ದರು. ಮುಖ್ಯವಾಗಿ ಉತ್ಸವನ್ನು ವಿಸ್ತಾರಗೊಳಿಸುವ ಸಾಧನವರು ಬಹು ಪರಸಿನಿಂದ ಸೇನೆಯನ್ನು ಮಾಡುತ್ತಿದ್ದರು. ಪರಿಪೆಯು ಆಚಾರ್ಯರ ಜಯಘೋಷವೂ ಪ್ರತಿಸುನಿಗೆಗಳಲ್ಲಿ ಪುಣ್ಯ ವತಿಯರು ನೀರಾಜನವನ್ನೆತ್ತಿ ಫಲಾಶೀರ್ವಾದಗಳನ್ನು ಪಡೆಯುವ ಸಂಭ್ರಮವೂ ದರ್ಶನೀಯವಾಗಿದ್ದಿತು. ಪರಿಪೆಯು ಸುವ ವಸ್ತೆಗಾಗಿ ಸವಣೂರ ಸಂಸ್ಥಾನಾಧಿಪತ್ಯದಿಂದ ಶ್ರೀಮಾ ಪೋಲೀಸ್ ಸಬ್ ಇನ್ಸ್‌ಪೆಕ್ಟರವರು ತಮ್ಮ ಸಿಬ್ಬಂದಿಯೊಡನೆ ಆಗಮಿಸುವ ವ್ಯವಸ್ಥೆ ಯನ್ನಿಟ್ಟಿದ್ದರಿಂದ ಪ್ರಭುತ್ವದ ಪ್ರಭಾವದಿಂದ ಮಹೋತ್ಸವವು ಗ್ರಾಮಪ ಸಕಲ ಬೀದಿಗಳಲ್ಲಿಯೂ ನಿರ್ವಿಘ್ನವಾಗಿ ಜರಗಿ ಪ್ರವಚ ನಾಲಯಕ್ಕೆ ಬಂದಿತು. ಬಳಿಕ ಸಭೆಯು ಪ್ರಾರಂಭವಾಯಿತು. ಪ್ರಜೆಗಳ ಪ್ರಾರ್ಥನಾಪ್ರಕಾರ ಸವಣೂರಸಂಸ್ಥಾನ ಪ್ರಭುತ್ವಸ್ಥಾನ ದಿಂದ ಶ್ರೀಮಾ ಅಬ್ದುಲ್ ತಬ್ರೇಜಖಾನ ಬಿರಾದರ ನವಾಬರು, ಇತರ ರಾಜಬಂಧುಗಳು, ಶ್ರೀಮಾ ಸವಣೂರಸಂಸ್ಥಾನ ಶಿರಸ್ತಾರ್ ರಾಯಪ್ಪನವರು, ಶ್ರೀಮಾ ಜ್ಯೋ೨ ಡಾಕ್ಟರ್‌ರವರು, ಸಾಹೂ ರು ಸಾಹುಕಾರ್ ಹಾವಣಿಗೆ ಮಹಾಲಿಂಗಪ್ಪನವರು, ಬಂಕಾಪುರ, ಶಿಗ್ಗಾವಿ, ಪಾಲಕೊಪ್ಪ, ನೂಲ್ಗಿ, ತಿರುಮಲಕೊಪ್ಪ, ಬೆಂಡಿಗೇರಿ, ಬೂದಿಹಾಳ, ಶಿಶುನಾಳ, ಕುಂದಗೋಳ ಯಲಗೂರು, ಮುಂತಾದ ಗ್ರಾಮಗಳಿಂದ ಮಹಾಶಯರನೇಕರು ಆಗಮಿಸಿ ಸಭೆಯನ್ನಲಂಕ ರಿಸಿದ್ದರು. ಕಾರ್ಯಾರಂಭದಲ್ಲಿ ಶ್ರೀಮಾ ಪೀಟ ಬಸವಪ್ಪಮಾಸ್ತ್ರ ರರು ಶ್ರೀಮಾ ಪಟೇಲ್ ಮುದಿಗಾಡರು ತಮ್ಮಲ್ಲಿ ಎರಡುವರೆ ತಿಂಗಳಿಂದ ನಡೆದ ಪೂಜಾಪುರಾಣಪ್ರವಚನೋಪನ್ಯಾಸಗಳಿಂದುಂ ಟಾದ ಆನಂದವನ್ನು ತೋಪಡಿಸಿ, ಗುರುಗಳ ಅವಶ್ಯ ಕತೆಯಿದ್ದಂತೆ ರಾಜರ ಆವಶ್ಯಕತೆಯೂ ಪ್ರಜೆಗಳಾದ ನಮಗೆ ಸುಖದಾಯಕಗಳು ಗಿರುವುದೆಂಬುದನ್ನು ನ್ಯಕ್ತಪಡಿಸಿದರು. ಬಳಿಕ ಸವಣೂರ ಸಂಸ್ಥಾನದ ಜ್ಯೋತಿ ಡಾಕ್ಟರರು ಇಹಪರಗಳ ಸುಖಸಾಧನೆಯು ತಳಪದಿಯೆಂದರೆ ಗುರುರಾಜನಿಷ್ಠೆ ಯೆಂಬುದೊಂ ದೇ ಎಂದು ವಿಶ್ವಾಸಪೂರ್ವಕವಾಗಿ ಉಪನ್ಯಸಿಸಿದರು. ಬಳಿಕ ಶ್ರೀಜಗದ್ಗುರುರಂಭಾಪುರೀ ಮಹಾಸಂಸ್ಥಾನದ ವಿಜಂಟ ವೇ|| ಪಂ|| ಪರೀಕ್ಷೇಶಶಾಸ್ತ್ರಿಗಳು ಆರಾಧ್ಯಮತ ಸುಣಕಲ್ಲ ಬಿದರಿ ಇವರು ಗುರು ರಾಜರ ಅವಶ್ಯಕತೆಯು ಪ್ರಜಾರಕ್ಷಣೆಗೆ ಆತೀವ ನೋದಕವಾದ್ದು ಆ ಉಭಯತೀರಗಳನ್ನಾಶ್ರಯಿಸಿಯೇ ಪ್ರಜಾಶ್ರಯಾಪವು ಪ್ರಾಪ್ಯ ಸ್ಥಾನವನ್ನು ಪಡೆಯುವುಹಾಗಿದೆ ಎಂಬುವನ್ನು ಯುಕ್ತಿಯಿಂದುಕ ನ್ಯಸಿಸಿದರು. ಇವೇ ವಿಷಯದನೇಲೆ ಹುಬ್ಬಳ್ಳಿ ಮುನಿಸಿಪಾಲ್ಟಿ ಸ್ಕೂಲ್‌ಮಾಸ್ಟರ್ ಶ್ರೀಮಾ ಮಹಾದೇವಪ್ಪ ಕುಂದಾಪನಳ್ಳಿ ಮತ್ತು ಸವಣೂರಸಂಸ್ಥಾನ ಶಿರಸ್ತಾರ್ ಶ್ರೀಮಾ ರಾಯಪ್ಪನವರು ಗಂಭೀರವಾಗಿ ಭಾಷಣಗಳನ್ನು ಮಾಡಿದರು. ಅನಂತರ ಬೆಂಗಳೂರು ನಿಟ ಶ್ರೀಮಹಾಂತಿನಮಹಾಧ್ಯಕ್ಷ ತ|| ಬ್ರ|| ಗಂಗಾಧರಶಿವಾಚಾರ್ಯ ರವರು ಧಾರ್ಮಿಕ-ಲೌಕಿಕ ತತ್ವಗಳ ಮಾರ್ಗವನ್ನು ನುಸರಿಸಿ ನರ ಪತಿಜನಪದಗಳ ಅಭಿವೃದ್ಧಿಯು ಪರಸ್ಪರಾನುರಾಗಮೂಲವಾಗಿರು ವುದರಿಂದ ಈ ಅನುರಾಗವು ವಿಶಿಷ್ಟವಾಗಿರಬೇಕೆಂದು ಹೆಚ್ಚಿ ಸಾಮ್ಯಪ್ರ ಯೋಜನಲಾಭಗಳು ದೊರೆಯುವವು. ರಾಜಪ್ರಜೆಗಳ ಬಯಕೆ ಗಳು ಪ್ರಜೆಗಳನ್ನಾಶ್ರಯಿಸಿ ರಾಜರಿಗೂ, ರಾಜರನ್ನಾಶ್ರಯಿಸಿ ಪ್ರಜೆ ಗಳಿಗೂ ಯೋಗಕ್ಷೇಮಚಿಂತನೆಗೆ ಕಾರಣವಾಗಿಯುವುದರಿಂದ ಇವು ಅನ್ಯಾಹತವಾಗಿ ಏಕಪ್ರಕಾರವಾಗಿ ಸಾಗಿದರೆ ಅದೇ ದೇಶವೃದ್ಧಿ ಯೆಂದು ಹೇಳಿಕೊಳ್ಳುವುದು. ಇಂತಹ ಶುಭಯೋಗವು ಈ ಸವಣೂರ ಸ್ಟೇಟಿಗೆ ಸೇರಿದ ಕಬನೂರಲ್ಲಿ ಈ ಸ್ಟೇಟಿನ ಪ್ರಜೆಗಳ ಸಹಾನುಭೂತಿಯಿಂದ ಪ್ರಕಟವಾದದು ಅತ್ಯಾನಂದಕ್ಕೆ ಕಾರಣವಾ ಗಿದೆ. ಸುವಣೂರಸಂಸ್ಥಾನದ ಪ್ರಭುಗಳಾದ ಮೆ|| ನವಾಬಸಾಹೇಬ ಬಹದ್ದೂರ್‌ರವರು ಪರಸಾರೀಸಹೋದರರೂ ಧರ್ಮಪ್ರಿಯರೂ ಪ್ರಜಾ ಪ್ರಾರ್ಥನೆಯನ್ನು ನಿರೀಕ್ಷಿಸದೆ ಸ್ವಯಂ ವಿಚಾರವಿಂದ ಕುಂಬಳೊ ರತೆಗಳನ್ನು ಕಂಡು ಯಾವಾಗಲೂ ಹಿತವನ್ನುಂಟುಮಾಡುತ್ತಿರುವ ರೆಂಬ ಶುಭವಾರ್ತೆಯು ಕೃತವಾಗಿ ಆನಂದವನ್ನುಂಟುಮಾಡುತ್ತಿರು ವುದು ಈ ಶುಭಸ್ಪಸ್ಪರ್ಶವು ಜನಸಮುದಾಯವನ್ನು ಹೆಚ್ಚಿಸುತ್ತಿರುವು ದರಿಂದ ಅವರ ಪ್ರಜೆಗಳಾದ ನೀವೇ ಧನ್ಯರೆಂದು ಹೇಳಲು ಅಡ್ಡಿ ಯಿಲ್ಲ. ಈ ಸಂಸ್ಥಾನಪ್ರಭುಗಳಾದ ಮೆ|| ನವಾಬಸಾಹೇಬರುಬಹದ್ದೂ ರ್‌ರವರಿಗೂ ಅವರ ಕುಟುಂಬವರ್ಗಕ್ಕೂ ಧಾರ್ಮಿಕ-ಲೌಕಿಕ ಸುಖವಿ ದ್ದಿಗೆ ಕಾರಣನಾದ ಗುರುರಾಜನಿಷ್ಠೆಯನ್ನು ಕಾರ್ಯತಃ ತೋರಿಸಿ ಸತ್ಪ್ರ ಜೆತಾತಿಗಳೆನಿಸಿದ ನಿಮಗೂ ಜಗದ್ಗುರು ಪಂಚಾಚಾರ್ಯ ಭಗವತ್ಪಾದರು ಇತೋಕ್ಯಶಕ್ತಿಯವಾಗಿ ಅನುರಾಗವನ್ನು ಹೆಚ್ಚಿಸಿ ಅಯುರಾ ರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಆಶೀರ್ವದಿಸಿದರು. ಬಳಿಕ ಶ್ರೀಮಾ ಮೇಟಿ ಬಸವಪ್ಪನವರು ಗುರು ವರ್ಗದವರೂ ಪಂಡಿತರೂ ಅಧಿಕಾರಿವರ್ಗದವರೂ ರಾಜಬಂಧು ಗಳೂ ಇತರ ಮಹಾಶಯರೂ ಈ ಮಹೋತ್ಸವಕ್ಕೂ ಸಭೆಗೂ ಆಗಮಿಸಿ ಛಾಗಿಗಳಾಗಿ ಮಂಗಲಕಾರ್ಯವನ್ನು ಸಾಂಗಗೊಳಿಸಿದ್ದಕ್ಕೆ ತಮ್ಮುಪಕಾರವನ್ನು ಸ್ಮರಿಸುವೆನೆಂದು ಸರ್ವರ ಅಭಿವಂದನವನ್ನು ಹುಸ್ಸಿಸಿದರು. ಬಳಿಕ ಮಹಾಪುರಾಣದ ಮಂಗಲಾರತಿಯಾಗಿ ಸದ್ದಿ ರಿಗೂ ಹಾರ ತುರುಯಿಗಳು ಆರ್ಸಿಸಲ್ಪಟ್ಟು ಜಗದ್ಗುರು ಪಂಚಾ ಚಾರ್ಯರ ಜಯಘೋಷದಿಂದಲೂ ಈ ಸಂಸ್ಥಾನಾಧಿಪತಿಗಳಿಂದ ಮೆ|| ನವಾಬಸಾಹೇಬ ಬಹದ್ದೂರ್‌ರವರ ಜಯಘೋಷದಿಂದಲೂ ಸಭೆ ಯು ವಿಸರ್ಜಿಸಲ್ಪಟ್ಟಿತು. ಇಂತಹ ಪುಣ್ಯಕಾರ್ಯವನ್ನು ನೆರವೇರಿಸಿ ಶಿವಧರ್ಮವನ್ನು ಗೆಲಿಸಿದ ಕಬನೂರು ಪುಣ್ಯಪುರುಷರಿಗೆ ಸಕಲ ಮನೋರಥಗಳು ಫಲಿಸಿ ಪುನಃಪುನಃ ಇಂತಹ ಸತ್ಕರ್ಮಗಳಲ್ಲಿ ಪ್ರವೃತ್ತಿಯುಂಟಾಗಿ ಯಶಸ್ಸಿಗಳಾಗಲೆಂದು ಭಗವಂತನನ್ನು ಭಜಿ ಸುವೆನು.

ದಿವಾನ್‌ಸಾಹೇಬರ ಆಗಮನ

ಮೆ|| ದಿವಾನ್‌ಸಾಹೇಬರವರು ತಾ|| ೩೧-೮-೧೯೩೪ ಬುಧ ವಾರ ಕಬನೂರಿಗೆ ಆಗಮಿಸಿ ಕಬನೂರಿನಲ್ಲಿ ಜರಿಗಿದ ಸತ್ಕರ್ಮಗ ಪ್ರಭಾವವು ಸವಣೂರು ಸಂಸ್ಥಾನಕ್ಕೆ ಆರಿಕೆಯಾಗಿ ಸತ್ಕರ್ಮಗಳ ಪ್ರತಿಫಲರೂಪವಾಗಿ ಕಂದಾಯವಲ್ಲಿ ಹಿಂದೆ ರೂಪಾಯಿಗೆ ಒಂದು ಆಣೆಯಷ್ಟು ಸೂಟುಬಿಟ್ಟಿದ್ದಂತೆ ಈವಾಗಲೂ ಒಂದು ಆಣೆ ಸೂಟು ಬಿಟ್ಟು ಪನ್ನು ಸಮುದಾಯದಲ್ಲಿ ವ್ಯಕ್ತಪಡಿಸಿ ಪ್ರಜೆಗಳನ್ನು ಅನಂ ದಸಾಗರದಲ್ಲಿ ಮುಳಿಗೇಳಿಸಿದರು ಇನೇ ಅಲ್ಲವೇ ಪ್ರಜಾನುರಾ ಗವು? ಬಳಿಕ ಮೆ|| ದಿವಾನ್‌ಸಾಹೇಬರವರು ಸು|| ರಾ|| ಮುದಿ ಗೌಡರ ಉದ್ಯಾನವಲ್ಲಿರುವ ಬಂಗ್ಲೆಗೆ ಬಂಮ ಈ ಸಂಭೋದಿಯಕ್ಕೆ ಕಾರಣಭೂತರಾದ ಬೆಂಗಳೂರುನಿಟ ಸುಹಾಂತಿನಮಹಾಧ್ಯಕ್ಷ ಶ್ರೀ|| ಸ|| ಬ್ರ|| ಗಂಗಾಧರಶಿವಾಚಾರ್ಯರವರನ್ನು ಸಂದರ್ಶಿಸಿ ಸತ್ಕರ್ಮಗಳ ಬಗ್ಗೆ ಉಲ್ಲಾಸ ಆನಂದವನ್ನು ವ್ಯಕ್ತಮಾಡಿ ಆರ್ಘಾಫಂಟೆವರೆಗೂ ಶುಭಾಲಾಪಗಳಿಂದಿರ್ದು ಪುಷ್ಪಾಹಾರಾದಿಗಳಿಂದ ಗೌರವಿಸಲ್ಪಟ್ಟು ಶ್ರೀ|| ಸ್ವಾಮಿಗಳವರಿಂದ ಫಲಾಶೀರ್ವಾದವನ್ನು ಪಡೆದು ಸಂಸ್ಥಾನಕ್ಕೆ ದಯಮಾಡಿಸಿದರು. ಜಗತ್ತಿನಲ್ಲಿ ಸತ್ಕರ್ಮವು ಜಗದಲಿನುರಾಗವನ್ನು ದೊರಕಿಸುವುದಿರುವಲ್ಲಿ ಇತರೋಕ್ಷದಲ್ಲಿ ತನ್ನ ಶಕ್ತಿಯನ್ನು ತೋರಿ ಸದಿರ ಪೈದೇ? ಕಬನೂರು ನುಹಾಶಯರೇ ಧನ್ಯರು!

ಓರ್ವ ಗುರುಭಕ್ತ, ಕಬನೂರು.

॥ ಶ್ರೀಗುರು ಪಂಚಾಚಾರ್ಯೇಭ್ಯೋ ನಮಃ ॥

ರೇಣುಕವಿಜಯಪುರಾಣಸಮಾಪ್ತಿಯೂ ಗರ್ಭಾಷ್ಟಮಸಂಸ್ಕಾರವೂ.

ಶಿವಮೊಗ್ಗಡಿಸ್ಟ್ರಿಕ್ಟ್ ಸಿಕಾರಿಪುರತಾಲೂಕು ಮಳೂ ರು ಗ್ರಾಮವಾಸಿ ವಿ|| ಜೋಗಿಹಳ್ಳಿ ಭರಮಪ್ಪನವರ ಮನೆಯಲ್ಲಿ ರೇಣುಕವಿಜಯಪುರಾಣವು ನ್ಯಾರಂ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಪ್ಪತಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೪—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಸಮಿಷ್ಟಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧೦—೬

ಸಪ್ತಃ ಪೀಠಾರೋಹಣಮಾಡಿರತಕ್ಕ ಏವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧೦—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ ೦—೧೦—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .. ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಸ್ವಾರ್ಥಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಸೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರನಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೦—೯

ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ ೦—೦—೯

ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ೦—೦—೯

ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೩ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂರಕ್ಕೆ ನೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿನವೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪ್ರಯೋಜವಾಗಿ ಉಪಯೋಗಿಸುತ್ತಾರೆ ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು ಬುಡ್ಡಿ ಒಂದಕ್ಕೆ ಕ್ರಯ ರೂ ೦೪-೦ ವಿ ಪಿ. ೦-೪ ೦. ಡಜನ್ ಒಂದಕ್ಕೆ ಕ್ರಯ ರೂ ೩ ೮ ೦ ವಿ ಪಿ ೪ ಆಣೆ

(Registered Trade Mark)

ನಿಮ್ಮ ಆಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[೫] ವೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಮಾವಳಿ .... ೨ ಆಣೆ

ಗೋತ್ರಸೂತ್ರಪಟ (೫ನೆಯ ಆವೃತ್ತಿ) ... ೧ ಆಣೆ

ಮರುಲಸಿದ್ಧೇಶ್ವರಸ್ತೋತ್ರ ... ೧ ಆಣೆ

ಸನ್ಯಾಸಾಶ್ರಮ ವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) ೧ ಆಣೆ

ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) ... ೧ ಆಣೆ

ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .... ೧ ಆಣೆ

ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯಶತಕ(೨ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ .... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯಶತಕ .... ೨ ಆಣೆ

ವೀರಶೈವಮತಮಾಮಾಂಸಾ .... ೩ ಆಣೆ

ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ

A brief life sketch of Pandit Sri Kashinatha Shastriji (*English*) **4 As.**

ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) .... ೬ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) .. ೬ ಆಣೆ

ವೀರಶೈವಮಹಾತ್ಮರು .. ... ೮ ಆಣೆ

ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) .... ೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) **೮ ಆಣೆ**

Speeches by Pandit Shri Kashinatha Shastri (*English*) **12 As.**

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ... ೧೨ ಆಣೆ

ಶ್ರೀಕರಭಾಷ್ಯ (೩ಚಿತ್ರಪಟ) .. ೧ ರೂ

ಶಿವಾದ್ವೈತವಿಜಯ (ಕನ್ನಡವ್ಯಾಖ್ಯಾನ ೧೩೨ನೆಯ ಪುಟ) . ೪ ರೂ

ಸಿದ್ಧಾಂತಶಿಖಾವಳಿ (ಕನ್ನಡ ಟೀಕಾಸಹಿತ) .. .. ೨ ರೂ

ವೀರಶೈವಸಿದ್ಧಾಂತಸಾರ ಧಾಕರ .... ೨ ರೂ

ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) .. ೧ ರೂ

ಸಿದ್ಧಾಂತಶಿಖಾಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ

ಕೇನೋಪನಿಷತ್ (ಕನ್ನಡ ಟೀಕಾಸಹಿತ) ... ೧ ರೂ

ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೨ ಆಣೆ

ಶಿಷ್ಯಾಸೂತ್ರಸಿದ್ಧಾಂತದರ್ಪಣ .. .... ೧೨ ಆಣೆ

ವೀರಶೈವರತ್ನ (ಮರಾಠಿ) .. .. . ೧ ರೂ.

ಲಿಂಗಧಾರಣಚಂದ್ರಿಕಾ (ಸಂಸ್ಕೃತ) .. .. ೩ ರೂ.

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ೧ ರೂ.

ವೀರಶೈವೇಂದುಶೇಖರ (ಸಂಸ್ಕೃತ) ... ೧ ರೂ.

ನಂದಿಕೇಶ್ವರಕಾರಿಕಾ (ಸಂಸ್ಕೃತ) ೨ ಆಣೆ

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) .. ೨ ಆಣೆ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಮಹಾವಿದ್ವಾ ವೇ|| ಶಿರಸಿ ಗುರುಕಾಶಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು || REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಜೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರಪರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಥಾನ ಮಹಾವಿದ್ವಾ ವೇ॥ ತರಸಿ ಗುರುಶಾಂತಶಾಸ್ತ್ರಿಗಳು

ಸ್ಥಳದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧೯ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ. ಸೋಮವಾರ ತಾ॥ ೧೯ನೇ ಸೆಪ್ಟೆಂಬರ್ ೧೯೩೮ [ಸಂಚಿಕೆ ೨೮

ಶ್ರೀಕರಭಾಷ್ಯಂ

(ಚತುಸ್ಸೂತ್ರೀ)

ಶ್ರೀಮತಿಪಂಡಿತಾರಾಧ್ಯರು ಕ್ರಿ ಶ ೧೧೧ನೆಯ ಶತಮಾನದಲ್ಲಿ ಬ್ರಹ್ಮಸೂತ್ರಗಳ ಮೇಲೆ ವೀರಶೈವಮತ ಪರವಾಗಿ ಭಾಷ್ಯವನ್ನು ರಚಿಸಿರುವ ವಿಷಯವು ಜಗತ್ಪ್ರಸಿದ್ಧವೇ ಆಗಿದೆ ಈ ಭಾಷ್ಯವು ಈ ಮೊದಲು ಮದ್ರಾಸ್, ಮೈಸೂರು, ಬೆಂಗಳೂರು ನಗರಗಳಲ್ಲಿ ಮುದ್ರಿತವಾಗಿರುವದು ಆದರ ಮುದ್ರಾಪಕರಿಗೆ ವೀರಶೈವಸಿದ್ಧಾಂತಸ್ವರೂಪವು ಸರಿಯಾಗಿ ತಿಳಿಯದೆ ಇರುವದರಿಂದ ಅವರು ಮುದ್ರಿಸಿದ ಭಾಷ್ಯಗಳು ಆನಂತಾನಂತ ತಪ್ಪುಗಳಿಂದ ಕೂಡಿಹೋಗಿವೆ. ವೀರಶೈವಮತಕ್ಕೆ ಪ್ರಾಣಸ್ವರೂಪವಾಗಿರುವ ಈ ಭಾಷ್ಯವನ್ನು ಅತ್ಯಂತರುದ್ಧವಾಗಿ ಮುದ್ರಣಮಾಡಿಸಿ ಈ ಸುತೀರ್ಥರಿಗೆ ಉಪಕಾರವನ್ನು ಮಾಡಬೇಕೆಂದು ಒಹುಜನ ಮತಾಭಿಮಾನಿಗಳು ಪ್ರಾರ್ಥಿಸಿಕೊಂಡ ಮೇರೆಗೆ **ನಾಗನೂರುಬೃಹನ್ಮಠಾಧ್ಯಕ್ಷರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಈ ಭಾಷ್ಯವನ್ನು ಕೂಲಂಕಷವಾಗಿ ಪರಿಶೋಧಿಸಿ ಯಾವ ದೋಷಾದಿಗಳೂ ಇಲ್ಲದಂತೆ ಮುದ್ರಿಸಿದ್ದಾರೆ ಸದ್ಯಃ ಚತುಸ್ಸೂತ್ರಿಯು ಮುದ್ರಿತವಾಗಿದೆ ಮುಂದೆ ಕ್ರಮೇಣ ಸಂಪೂರ್ಣಭಾಷ್ಯವು ಮುದ್ರಿಸಲ್ಪಡುವುದು ಮತಸಿದ್ಧಾಂತವೆಲ್ಲವೂ ಚತುಸ್ಸೂತ್ರಿಯ ಲ್ಲಿಯೇ ಪ್ರತಿಪಾದಿತವಾಗುವದರಿಂದ ಪ್ರತಿಯೊಂದು ವೈದಿಕಮತದಲ್ಲಿಯೂ ಚತುಸ್ಸೂತ್ರೀಭಾಷ್ಯಾಭ್ಯಾಸವೇ ಮುಖ್ಯವಾಗಿದೆ ಆದುದರಿಂದಲೇ ಪಂಡಿತರು ಮೊದಲು ಚತುಸ್ಸೂತ್ರೀಭಾಷ್ಯವನ್ನು ಮುದ್ರಿಸಿರುವರು ಭಾಷ್ಯದಲ್ಲಿ ಉದಾಹೃತವಾಗಿರುವ ಸಮಸ್ತ ವೇದಮಂತ್ರಗಳಿಗೂ ಆಕರವು ಕೊಡಲ್ಪಟ್ಟಿರುವದು ಭಾಷ್ಯದ ಅದಿಯಲ್ಲಿ ವಿಷಯಾನುಕ್ರಮಣಿಕೆಯು ಮುದ್ರಿಸಲ್ಪಟ್ಟಿರುವದರಿಂದ ವಿಷಯವಿಚಾರಶೀಲರಿಗೆ ಬಹಳ ಅನುಕೂಲವಾಗಿರುವದು ಈ ಭಾಷ್ಯವು ಮನೋಹರವಾಗಿ ಮುದ್ರಿಸಲ್ಪಟ್ಟಿದ್ದು, ಸುಂದರವಾದ ಬೈಂಡಿನಿಂದ ಕೂಡಿರುವದು ಪ್ರಾಚೀನ ವೀರಶೈವಮತದ ಯಥಾರ್ಥತತ್ತ್ವವನ್ನು ತಿಳಿಯಲಪೇಕ್ಷೆಯುಳ್ಳವರು ಈ ಭಾಷ್ಯವನ್ನು ಅವಶ್ಯವಾಗಿ ತರಿಸಿಕೊಂಡು ವಿದ್ವಾಂಸರ ಮುಖದಿಂದ ನಿಜತತ್ತ್ವವನ್ನು ತಿಳಿದು ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧ ರೂಪಾಯಿ.**

ಶ್ರೀಮತಿಪಂಡಿತಾರಾಧ್ಯರ ಕಾಲನಿರ್ಣಯ.

ಶ್ರೀಕರಭಾಷ್ಯವನ್ನು ರಚಿಸಿರುವ ಶ್ರೀಮತಿಪಂಡಿತಾರಾಧ್ಯರು ಕ್ರಿ ಶ ೧೧೧ನೆಯ ಶತಮಾನದಲ್ಲಿದ್ದರೆಂಬ ವಿಷಯವು ಅನೇಕ ಪ್ರಾಚೀನಗ್ರಂಥಗಳಿಂದಲೂ, ಶಿಲಾಶಾಸನಾದಿಗಳಿಂದಲೂ ಸಿದ್ಧವಾಗಿದೆ ಹೀಗಿದ್ದರೂ ಬೆಂಗಳೂರು ನಗರನಿವಾಸಿಗಳಾದ ರಾವ್ ಸಾಹೇಬ ಸಿ ಹಯವದನರಾಯರೆಂಬವರು ಈ ಭಾಷ್ಯದ ಮೇಲೆ ಇಂಗ್ಲೀಸಿನಲ್ಲಿ ಬರೆದಿರುವ ಇಂಟ್ರಡಕ್ಷನ್ನಿನಲ್ಲಿ ಇವರು ೧೪ನೆಯ ಶತಮಾನದಲ್ಲಿದ್ದರೆಂದು ಬರೆದು ಜಗತ್ತಿನ ಜನರಿಗೆಲ್ಲಾ ಮಹಾ ಭ್ರಮೆಯನ್ನುಂಟುಮಾಡಿದ್ದಾರೆ ರಾಯರು ಬರೆದಿರುವ ಈ ವಿಧವಾದ ಅಯಥಾರ್ಥಾಭಿಪ್ರಾಯವನ್ನು ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಅನೇಕಾನೇಕಪ್ರಮಾಣಗಳಿಂದ ಆಮೂಲಾಗ್ರವಾಗಿ ಖಂಡಿಸಿ, ವೀರಶೈವಮತಕ್ಕೂ ಶ್ರೀಕರಭಾಷ್ಯಕ್ಕೂ ಅಸಾಧಾರಣವಾದ ಗೌರವವನ್ನುಂಟುಮಾಡಿದ ವಿಷಯವು ಈ ಪುಸ್ತಕದಲ್ಲಿ ಉಕ್ತವಾಗಿದೆ

ಬೆಲೆ ೪ ಆಣೆ

A BRIEF LIFE-SKETCH OF PANDIT SRI KASHINATHA SHASTRIJI

This Book printed in English contains a brief life sketch of Pandit Sri Kashinatha Shastriji It shows the very many good and memorable deeds done by Sastriji up till now. **Price per Copy 4 Annas.**

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸ್ವೀಕಾರ.

ಬೆಂಗಳೂರು ಸಿಟಿ ಚಾಮರಾಜಪೇಟೆ ಮಂಡಿ ಮಿರಾ॥ ಕೆ ಯೂ ಅಯ್ಯಣ್ಣಶೆಟ್ಟರು ತಮ್ಮ ಸಹೋದರಿ ಚಿರಂ ಸೌ॥ ನಂಜಮ್ಮನವರ ಶಿಷ್ಟಸ್ವೀಕಾರವೆಂಬ ಶುಭಕೇಳೇಪೆ ಮಿ॥ ರಾ॥ ಎಸ್ ಹಂಸಯ್ಯನವರ ತೃತೀಯಕುಮಾರ ಚಿರಂಜೀ॥ ಎಸ್ ಎಚ್ ನಂಜುಂಡಸ್ವಾಮಿಗೆ ಕೊಟ್ಟು ನಡೆಯಿಸಿದ ವಿವಾಹಕಾಲದಲ್ಲಿ ಮಿ॥ರಾ॥ ಅಯ್ಯಣ್ಣಶೆಟ್ಟರಿಂದ ಪ್ರಭಾ ಪೋಷಣೆಗೆ ಸಮರ್ಪಿಸಿದ **2** ರೂ ಗಳು ಮೈಸೂರು ವೀರಶೈವವಿದ್ಯಾಭಿವೃದ್ಧಿಸಂಘ ಸಂಪುಟ ಆಫೀಸಿಗೆ ಸಕ್ರೆಟರಿ ಮಿ॥ ರಾ॥ ಸರಾಸ್ ಬಿ ಒಸಪ್ಪನವರ ದ್ವಾರಾ ತಲ್ಪಿರುತ್ತವೆ

ಸೊಲ್ಲಾಪುರದಲ್ಲಿರುವ ಮಿ॥ ರಾ॥ ಸಿದ್ಧರಾಮಪ್ಪ ವಾಕಳೆ ಎಂಬವರು ಶ್ರೀ ಮಲ್ಲಿನಾಥಸ್ವಾಮಿ ಮೊದಲಾದ ದೇವರಿಗೆ ಲಕ್ಷುರ ದ್ರಾಭಿಷೇಕವನ್ನು ನೆರವೇರಿಸಿ, ಮಹಾ ಗಣಾರಾಧನೆಯನ್ನು ಮಾಡಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂ ಗಳು ಶ್ರೀ॥ ಪಟ್ಟ॥ ಹೋಟಿಗಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಆಕ್ಕಲಕೋಟ ಸಂಸ್ಥಾನದಲ್ಲಿ ಶ್ರೀ ಜೇವುರಗಿ ಬೃಹನ್ಮಠದ ಶ್ರೀ॥ ಪಟ್ಟ॥ ಬ್ರ॥ ಪಟ್ಟದಸ್ವಾಮಿಗಳವರು 41 ದಿವಸಗಳವರೆಗೆ ಅನುಷ್ಠಾನವನ್ನು ಮಾಡಿ, ಅಂತ್ಯದಲ್ಲಿ ನೆರವೇರಿದ ಮಹಾಪಾದಪೂಜಾಸಮಾರಂಭದಲ್ಲಿ ಪ್ರಭಾ ಪೋಷಣಕ್ಕೋಸ್ಕರ ತೆಗೆಯಿಸಿದ **2** ರೂ. ಗಳು ಶ್ರೀ॥ ಪಟ್ಟ॥ ಬ್ರ॥ ಹೋಟಿಗಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ನಿಜಾಮ ಇಲಾಖಾ ಬಿದರ ಡಿ॥ ಡಿಗ್ರಿ ಚಂಡೇಶ್ವರ ಗ್ರಾಮಗಳ ಹತ್ತರವಿರುವ ಸಂಗಮೇಶ್ವರದೇವಸ್ಥಾನದಲ್ಲಿ ಮುಧೋಳದ ಶ್ರೀ ಶಿವಲಿಂಗಶಿವಾಚಾರ್ಯರ ಪುರಾಣವನ್ನು ಪ್ರಾರಂಭಿಸಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **1**ರೂ ಯು ವೇ॥ ವಂದಲಿ ದಾಸೋಹಮಠದ ವಿರೂಪಾಕ್ಷಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ

ಗದಗಶಹರ ನಿವಾಸಿಗಳಾದ ಮಿ॥ ರಾ॥ ಹಂಚಿನಾಳ ಮುರಿಗಪ್ಪನವರ ಧರ್ಮಪತ್ನಿಯನರಾದ ಕುಂ॥ ಸೌ॥ ಬಸವಣ್ಣವ್ವನವರು ಶಿವಾಧೀನರಾಗಿ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1**ರೂ. ಯು ವೇ॥ ಗುಡ್ಡಿಮಠದ ಸಂಗಯ್ಯನವರದ್ವಾರಾ ತಲ್ಪಿರುತ್ತದೆ.

ಈ ನೇಮ್ಯಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನಿತ್ತು ಅನುಗ್ರಹಿಸಲೆಂದು ಹಾರೈಸುತ್ತೇವೆ

ಹಾವಟೆ ವಕೀಲರಿಗೆ ಪಾರ್ಶ್ವರೋಗ ಪ್ರಾಪ್ತಿ.

ಹುಬ್ಬಳ್ಳಿಯಲ್ಲಿರುವ ಮಿ॥ ರಾ॥ ಹಾವಟೆ ವಕೀಲರಿಗೆ ೧ ವಾರದಿಂದ ಪಾರ್ಶ್ವ (ಲಕವಾ) ರೋಗವು ಪ್ರಾಪ್ತವಾಗಿದೆಯೆಂದು ತಿಳಿದುಬರುತ್ತದೆ.

ಶಿವಲಿಂಗಾಷ್ಟಾನಸಮಾರಂಭ ಅಳ್ಳಲಕೋಟೆ

ಸೊಲ್ಲಾಪುರ ಜಿಲ್ಲೆಯಲ್ಲಿ ಅಳ್ಳಲಕೋಟೆಯೆಂಬ ಸಂಸ್ಥಾನವುಂಟು. ರಾಡಾವಿಜಯಸಿಂಹ ರಾಜಾಸಾಹೇಬರು ಸದ್ಯಃ ರಾಜ್ಯಪರಿಪಾಲನಮಾಡುವರು. ಇವರ ಅಧಿಪತ್ಯದಲ್ಲಿ ಅನುಷ್ಠಾನಕ್ಕೆ ಯೋಗ್ಯವಾದ ಬಿಲ್ವವನ ವೊಂದುಂಟು. ಅದು ಬಹುಮನೋಹರವೂ, ಅನುಷ್ಠಾನಾದಿಗಳಿಗೆ ಬಹುಅನುಕೂಲವೂ ಆಗಿದೆ. ಜೀವುರಿ ಬ್ರಹ್ಮಶಾಧ್ಯಕ್ಷರಾದ ಶ್ರೀ|| ಪ|| ಬ|| ಗುರುಶಾಂತವೀರಾಚಾರ್ಯರು ಈ ಬಿಲ್ವವನದಲ್ಲಿ ಅನುಷ್ಠಾನ ಮಾಡಬೇಕೆಂಬ ತಮ್ಮ ಮನೋಗತವನ್ನು ಶ್ರೀಯುತ ಗುರುಲಿಂಗಪ್ಪ ಹಿಂಡೋಳೆ, ಬಸವಣ್ಣಪ್ಪ, ಪಾಟೀಲ, ವಿಶ್ವಲ ಧರಮಶೆಟ್ಟಿ ಮುಂತಾದವರಿಗೆ ತಿಳುಹಿಸಿದರು. ರಾಜಾಸಾಹೇಬರ ಪಾಸ ವನವಾದುದರಿಂದ ರಾಜಾಸಾಹೇಬರು ಏನು ಆಜ್ಞಾ ಪಿಸುವರೋ ಏನೋಎಂದು ಸಂಶಯದಿಂದ ಶ್ರೀಯುತ ಹಿಂಡೋಳೆಯವರು ಅರ್ಜಿ ಹಾಕಿದರು ಶ್ರೀರಾಜಾಸಾಹೇಬರು ಆತ್ಮೋದ್ಧಾರಕವಾದ ಈ ಕಾರ್ಯಕ್ಕೆ ಕೂಡಲೆ ಹುಕುಮನ್ನು ದಯವಾಲಿಸಿದರು. ಪೂರ್ವದರಾಜರು ತಪಸ್ವಿಗಳಿಗೆ ಸರ್ವಾನುಕೂಲತೆಗಳನ್ನು ಒದಗಿಸಿಕೊಡುತ್ತಿದ್ದರೆಂಬ ವಾಕ್ಯವು ಇದರಿಂದ ಸ್ಮರಣಕ್ಕೆ ಬರುವದು. ಇದು ಕ್ಷಾತ್ರಧರ್ಮಕ್ಕೆ ಒಪ್ಪುವ ಕಾರ್ಯವೇ ಸರಿ! ಶ್ರಾವಣ ಶು|| ೧ ಮೊದಲ್ಗೊಂಡು ೪ ದಿವಸಗಳ ಸಂಕಲ್ಪದಿಂದ ಶ್ರೀಗಳವರು ಅನುಷ್ಠಾನವನ್ನಾರಂಭಿಸಿದರು. ಬಿಲ್ವವನರಕ್ಷಕರಾದ ಶ್ರೀ ಕಾಟಕರ ಹವಲ್ದಾರರು ಒಳ್ಳೆ ದಕ್ಷತೆಯೊಂದ ಶ್ರೀಗಳವರ ಅನುಷ್ಠಾನಕ್ಕೆ ಎಷ್ಟೂ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದರು ಕಾಟಕರರು ಶ್ರೀಗಳ ಅನುಷ್ಠಾನಕ್ಕೆ ಆರ್ಥಭಾಗಿಗಳೆಂದೂ ಅಡ್ಡಿಯಿಲ್ಲ. ಶ್ರೀಗಳು ಕೇವಲ ೫ ತೊಲೆ ಸ್ಫಟಿಕವನ್ನು ಮಾತ್ರ ಪಾನಮಾಡಿ ಉಗ್ರತರ ಸ್ವಾನುಷ್ಠಾನಶಿರಸಹತ್ತಿದರು ಈ ವಾರ್ತೆಯು ವಾಯುವೇಗದಿಂದ ಸೊಲ್ಲಾಪುರಜಿಲ್ಲೆಯನ್ನೆಲ್ಲ ವ್ಯಾಪಿಸಿತು ಅನಂತರ ಜನಸಂದಣಿಯು ದರ್ಶನಾರ್ಥವಾಗಿ ಕೂಡಹತ್ತಿತು. ಬರುಹೋಗುವವರ ವ್ಯವಸ್ಥೆಯನ್ನು ಶ್ರೀಯುತ ಹಿಂಡೋಳೆಯವರು ಬಹು ಎಚ್ಚರಿಕೆಯಿಂದ ಮಾಡುತ್ತಿದ್ದರು ಪ್ರತಿದಿನವು ಭಜನೆಯವರೂ ಕೀರ್ತನಕಾರರೂ ಬಂದೇ ಬರುತ್ತಿದ್ದರು ಸ್ತ್ರೀಪುರುಷಸಮುದಾಯವಂತೂ ಗಣನಾತೀತವಾಗಿ ಬರುತ್ತಿತ್ತು.

ಭಾದ್ರಪದ ಶು|| ೧೪ ಗುರುವಾರಕ್ಕೆ ಶ್ರೀಗಳವರು ಹೋಟಗಿ ಶ್ರೀಗಳೊಂದಿಗೆ ತಮ್ಮ ಅನುಷ್ಠಾನವನ್ನು ಪರಿಸಮಾಪ್ತಿಗೊಳಿಸಿದರು. ಈ ಸಮಾರಂಭಕ್ಕೆ ಹೋಟಗಿ, ಜೈನಾಪುರ, ಕ್ಯಾಸನೂರು, ಮುಳ್ಳೂರ ಶ್ರೀ|| ಪ|| ಬ|| ಪಟ್ಟಾಧ್ಯಕ್ಷರೂ, ಸೊಲ್ಲಾಪುರ ವಾಕಶಾಲೆಯ ವಿದ್ಯಾರ್ಥಿಗಳೂ, ಸೌ|| ಭಾಗೀರಥೀಬಾಯಿ ಕಟಾಪ ಈ ಮಾತೃಶ್ರೀಯವರೂ ಸ್ಪೆಶಲ್ ಮೋಟಾರಿನಿಂದ ಕರೆಯಿಸಲ್ಪಟ್ಟಿದ್ದರು. ಅನುಷ್ಠಾನಸಮಾಪ್ತಿಯಾದಮೇಲೆ ಜೇವುರಿ ಶ್ರೀಗಳವರ ಮಹಾಪಾದಪೂಜೆಯು ೧ ಲಕ್ಷ ಬಿಲ್ವದಲಗಳಿಂದಲೂ ಏಕಾದಶಸಹಸ್ರದೀಪಗಳಿಂದಲೂ ಏಕಾದಶರುದ್ರಾಭಿಷೇಕದಿಂದಲೂ ನೆರವೇರಿಸಲ್ಪಟ್ಟಿತು ಶ್ರೀಗಳ ಎಡಬಲಭಾಗದಲ್ಲಿ ಪಟ್ಟಾಧ್ಯಕ್ಷಸ್ವಾಮಿಗಳೂ, ಅನಂತರ ಸೈದಿಕರೂ, ಅಮೇಲೆ ಭಕ್ತ ಸಮೂಹವೂ ನೆರೆದಿದ್ದುದರಿಂದ ಪ್ರತ್ಯಕ್ಷ ಕೈಲಾಸದಂತೆ ಕಂಗೊಳಿಸುತ್ತಿತ್ತು. ಶ್ರೀಗಳವರು ಜಟಾಧಾರಿಗಳಾಗಿರುವುದರಿಂದ ಪ್ರತ್ಯಕ್ಷ ಶಂಕರನಂತೆಯೇ ತೋರುತ್ತಿದ್ದರು ಮಸ್ತಕ ಮೇಲೆ ಪುಷ್ಪನಿರ್ಮಿತಕಿರೀಟವು ಬಹು ಅಂದವನ್ನುಂಟುಮಾಡಿತ್ತು. ಮಹಾಪಾದಪೂಜೆಗೆ ಶ್ರೀಯುತ ಗುರುಲಿಂಗಪ್ಪ ಹಿಂಡೋಳೆಯವರೇ ಕುಳಿತಿದ್ದರು. ಧನ್ಯ! ಧನ್ಯ! ಹಿಂಡೋಳೆಯವರೇ ಧನ್ಯರು!

ಅನಂತರ ಅದೇದಿವಸ ಸಾಯಂಕಾಲ ೪ ಘಂಟೆಗೆ ಶ್ರೀ ಅನುಷ್ಠಾನಮೂರ್ತಿಗಳ ಉದ್ಯಾನೆಯಲ್ಲಿ ಸಭೆಸೇರಿತು ಆರಂಭದಲ್ಲಿ ಸೊಲ್ಲಾಪುರದ ಕುಮಾರಿಯರು ಜಗದಾಚಾರ್ಯರ ಸ್ತುತಿಯನ್ನು ಪಾಡಿದರು ಅನಂತರ ಅನುಷ್ಠಾನಾರಂಭದಲ್ಲಿ (ಶ್ರಾ|| ಶು|| ೧ ಸಮಯದಲ್ಲಿ) ಬಂದ ಬೆಂಗಳೂರು, ಹೋಟಗಿ ಶ್ರೀಗಳವರ ಪತ್ರಗಳು ಓದಲ್ಪಟ್ಟವು. "ಭೀಷ್ಮಬ್ರಹ್ಮಚಾರಿ" ಪ|| ಬ|| ಶ್ರೀ ಗಂಗಾಧರಶಿವಾಚಾರ್ಯರು ಮಹಾಂತಿನಮಠ, ಬೆಂಗಳೂರು ಸಿಟಿ ಇವರಿಂದ ಅನುಗ್ರಹಿಸಲ್ಪಟ್ಟ "ಶ್ರೀ ಬಾಲ ಶಿವಯೋಗಿ" ಎಂಬ ಉಪಕಾವ್ಯವು ಜಗದಾಚಾರ್ಯರ ಜಯಘೋಷದೊಡನೆ ಪ್ರಸಿದ್ಧಿಸಲ್ಪಟ್ಟಿತು. ಶ್ರೀಬಾಲ ಶಿವಯೋಗಿಗಳಾದ ಅನುಷ್ಠಾನಮೂರ್ತಿಗಳು ಮಹತ್ವ ಪೂರ್ಣಬೋಧಪ್ರದಭಾಷಣದಿಂದ ಭಕ್ತರನ್ನು ಆಶೀರ್ವದಿಸಿದರು. ಮುಳ್ಳೂರು, ಹೋಟಗಿ, ಶ್ರೀಗಳ ಹಾಗೂ ಸೌ|| ಭಾಗೀರಥೀಬಾಯಿ ಕಟಾಪ, ರಾ|| ಮಲ್ಲಪ್ಪ ಜತ್ತೆ ಇವರು ಅನುಷ್ಠಾನದ ಮಹತ್ವ, ಅನುಷ್ಠಾನದಿಂದಾಗುವಶುಖ, ಈ ವಿಷಯದಮೇಲೆ ಮಾತನಾಡಿದರು. ಸೊಲ್ಲಾಪುರ ಕುಮಾರಿಯರ ಸಂವಾದವು ಬಹು ಹೃದಯಂಗಮವಾಯಿತು ರಾತ್ರಿಯೆಲ್ಲಾ ಭಜನೆ, ಕೀರ್ತನಾದಿಗಳಲ್ಲಿ ಕಳೆಯಿತು. ಮಾರನೇದಿವಸ ಭಾದ್ರಪದ ಶು|| ೧೫ ಪ್ರಾತಃಕಾಲ ೧೦ ಘಂಟೆಗೆ ಶ್ರೀಬಾಲಶಿವಯೋಗಿಗಳ ಪಲ್ಲಕ್ಕಿ ಮಹೋತ್ಸವವು ಬಹುವೈಭವದಿಂದಲೂ, ಉತ್ಸಾಹದಿಂದಲೂ ನೆರವೇರಿತು. ಈ ಸಮಯದಲ್ಲಿ "ಶಿವಪೂಜೆಯಲ್ಲಿ ಕರಡಿಬಿಟ್ಟ" ಎಂಬುವಂತೆ ಅನುಷ್ಠಾನಮೂರ್ತಿಯ ಜೊತೆಗೆ ತಾನೂ ವೆರೆಯಬೇಕೆಂದು ಹಂಬಲಿಸಿ ಪ್ರಾಣವನ್ನು ಎತ್ತೋ ದಿಕ್ಕೊಕಾಣದಂತಾಗಿ, ಕೂಲಿಗಾಗಿ ಪಲ್ಲಕ್ಕಿಯನ್ನು ಹೊತ್ತ ಜನರು ಆ ಪಲ್ಲಕ್ಕಿಯನ್ನು ಅರಣ್ಯದಲ್ಲಿಯೇ ಇಟ್ಟರು ಬೋಳಪಂಥಿಕ್ಷದವರು ಅದನ್ನು ಅನೇಲೆ ಹೋಗಿ ತಂದರು ಅನುಷ್ಠಾನಮೂರ್ತಿಯ ಉತ್ಸವಕ್ಕೆ ವಿಘ್ನವನ್ನು ತರಲೊಡ್ಡಿದ ಬೋಳಪಂಥಿಗಳು ಮತ್ತೂ ಹೆಚ್ಚಾಗಿ ಬೋಳಾದವು ಅಸ್ತು! ಅನುಷ್ಠಾನಮೂರ್ತಿಯ ಉತ್ಸವವು ಮರಕ್ಕೆ ತಲ್ಪಿದಮೇಲೆ ಹೋಟಗಿ ಶ್ರೀಗಳವರ ಭಾಷಣವಾಗಿ ಎಲ್ಲ ಭಜನರು ಭಿಡವರಿಗೂ, ಜಗದಾಚಾರ್ಯಲಿಂಗೊದ್ಭವರಜಕಲಂಕೆಟ್ಟು ಗುರು, ವೀರಶೈವರೆಷ್ಟಗ್ರಂಥಗಳೂ ಅಶೀರ್ವದಿಸಲ್ಪಟ್ಟವು ವೈಂದರಿಗಿ, ಜೇವರಿ ಭಜನಾಸಂಘಗಳು ಕರಂಬಿಗೂ ಬಹು ಪರಿಣಾಮವನ್ನುಂಟುಮಾಡಿದವು ವೈಂದರಿಗಿ ಶ್ರೀ ಜಗದಾಚಾರ್ಯಭಜನಾಸಂಘದವರ ಕೀರ್ತನೆಯು ಮತ್ತು ಸಿಸ್ಟೂ ಸರ್ವರಿಗೂ ಮಾರ್ಗದರ್ಶಕಗಳಾದವು

ಅದೇದಿವಸ ರಾತ್ರಿ ಹೋಟಗಿ ಶ್ರೀಗಳ ಅಧ್ಯಕ್ಷತೆಯಲ್ಲಿ ಸಭೆಸೇರಿತು ಮುಳ್ಳೂರು, ಜೈನಾಪುರ ಶ್ರೀಗಳ ಸೌ|| ಭಾಗೀರಥೀಬಾಯಿ ಕಟಾಪ, ಜೆ ಜೆ. ಪಾಟೀಲ ಫೌಂಡ್ರಿ, ಬಸವಣ್ಣಪ್ಪ ಪಾಟೀಲ ಗಂಗಾಧರಶರ್ಮ ಹೊನಗೋಡ ಮುಂತಾದವರ ಭಾಷಣಗಳಾದವು. ಸೌ|| ಭಾಗೀರಥೀಬಾಯಿ ಕಟಾಪ ಇವರ ಶಾಸ್ತ್ರೋಕ್ತ ಭಾಷಣವು ಸಭೆಸೇರನ್ನು ಚಕಿತರನ್ನಾಗಿಮಾಡಿತು ಜೆ ಜೆ. ಪಾಟೀಲ ಫೌಂಡ್ರಿ, ಇವರ ಭಾಷಣವು ಸವಕರುಣರನ್ನು ಬಡಿದೆಬ್ಬಿಸುವಂತಾಯಿತು ಈ ಉತ್ಸವಕ್ಕೆ ಹೋಟಗಿ, ಚಿಂಚೋಳಿ, ದಿಂಡೂರ, ವಾಡಿ, ಚಿಪ್ಪಳಗಾಂವ, ಫೈಟಣ, ಕಿಣಿ, ಕರಜೋಳ, ವಳಸಂಗ, ಜಾನಾಪೂರ, ಸರಸಂಬ, ಮೋಳ, ಬೆಳಂಬಾ, ಸೊಲಾಪೂರ, ವಾಡಿ, ವಾಗದರಿ, ಬುದಪಿ, ಜೇವರಗಿ, ಉಡಗಣ್ಣಾಮಗಳ ಜಗದಾಚಾರ್ಯಭಜನಾಸಂಘದವರೂ ದರ್ಶನಾರ್ಥಿಗಳೂ ಸುಮಾರು ಸಾವಿರಕ್ಕೆ ಮಿಕ್ಕಿ ನೆರೆದಿದ್ದರು ಎತ್ತನೋಡಿದಡತ್ತ ಜಗದಾಚಾರ್ಯರ ಜಯಧ್ವಜಗಳೇ! ಎಲ್ಲಿ ಕೇಳದ್ದಲ್ಲಿ ಜಗದಾಚಾರ್ಯರ ಜಯಘೋಷವೇ! ಹೀಗಾಗಿ ಅಳ್ಳಲಕೋಟೆ ಪಟ್ಟಣವೆಲ್ಲಾ ಪವಿತ್ರಗೊಂಡಿತು ಈ ಕಾರ್ಯವನ್ನು ಈ ಕೆಳಗೆ ಕಾಣಿಸಿದ ಮಹನೀಯರು ಬಹು ವಿಶ್ವಾಸದಿಂದಲೂ ವಿಶ್ವಪ್ರಯತ್ನದಿಂದ ನೆರವೇರಿಸಿದರು. ರಾ|| ಗುರುಲಿಂಗಪ್ಪ ಹಿಂಡೋಳೆ, ವಿಶ್ವಲರಾವ ಧರಮಶೆಟ್ಟಿ, ಬಸವಣ್ಣಪ್ಪ ಪಾಟೀಲ, ಶರಣಪ್ಪ ಸೌದಿ, ಗದಿಗೆಪ್ಪ ಶಕಪುರೆ, ರೇವಣಸಿದ್ದಪ್ಪ ಭಾಲಶೆ, ರೇವಣಸಿದ್ದಪ್ಪ ಕಾಪಸೆ, ಗುರುಲಿಂಗಪ್ಪ ಮಹಂತ, ಸೋಮಲಿಂಗಪ್ಪ ಡಿಗ್ಗಿ, ಚನ್ನಪ್ಪ ಮಾಶಾಳ, ಮಹಾರುದ್ರಪ್ಪ ಮಾಶಾಳ, ರೇವಪ್ಪ ಶಿಬಾದೆ, ರುದ್ರಪ್ಪ ವಾಲೆ, ಬಾಸೂರಾವ ಮುಂಡೆ, ಕುಂಭಾರಮಂಡಳಿ ಇತ್ಯಾದಿ ಜನರ ಸ್ವಯತ್ನಪೂರ್ವಕಾನುಕೂಲತೆವಾದದ್ದು ಸೋಹಿತೆ, ಎಂಬ ಪ್ರೌಢಿಸಿದ ಅಧಿಕಾರಿಗಳನ್ನು ಇಲ್ಲಿ ನಾನು ಸ್ಮರಣಮಾಡದಿರೆನು. ಇವರು ತಮ್ಮ ಚಾತುರ್ಯ ಮತ್ತು ಅದಿಕಾರದಿಂದ ಉತ್ಸವವನ್ನು ಶ್ರೀಗಳ ಮಠಕ್ಕೆ ಸಿರ್ವಘ್ನತೆಯಿಂದ ಮುಟ್ಟಿಸಿ, ಸರ್ವರನ್ನೂ ಸೋಹಿತರನ್ನಾಗಿಮಾಡಿ, ತಮ್ಮ ಸೋಹಿತೆ ಎಂಬ ಅಡ್ಡಹೆಸರನ್ನು ಸಾರ್ಥಕಗೊಳಿಸಿಕೊಂಡರು ಈ ಮಹಾಸಮಾರಂಭದಲ್ಲಿ ಪ್ರಭಾದೇವಿಗೆ ೨ ರೂಪಾಯಿಗಳು ಅರ್ಪಿಸಲ್ಪಟ್ಟವು. ಪ್ರತ್ಯಕ್ಷದರ್ಶಿ.

ಶ್ರೀ ಮಹಾಂತಚರವರ್ಯರ ಅನುಷ್ಠಾನ ಸಮಾಪ್ತಿಯೂ ಪುರಾಣಶಾಂತಿಯೂ.

ನೈಜಾಂತಇಲಾಖಾ ಬಿದರಜಿಲ್ಲಾ ಉದಗೀರ ತಾ|| ಮುಧೋಳ ಬೃಹನ್ಮಠಾಧೀಶರಾದ, ಶ್ರೀ ಪ|| ಬ|| ಮಹಾಂತಚರವರ್ಯರು ಇದೇ ಆಷಾಢ ಶು|| ೧ ಪ್ರತಿಪದದಲ್ಲಿ ಮುರಗ-ಡಿಗ್ಗಿ-ಚಂಡೇಶ್ವರ, ಈ ಮೂರುಗ್ರಾಮಗಳ ಸೀಮಾಂತರದಲ್ಲಿ ವೈಭವಗಳಿಂದಲೂ ಬಿಲ್ವವನಗಳಿಂದಲೂ-ಗಂಗಾಸ್ರವಾಹಿಂದಲೂ ರಾರಾಜಿಸುತ್ತಿರುವ ಶ್ರೀ ಸಂಗಮೇಶ್ವರದೇವಾಲಯದಲ್ಲಿ ಅನುಷ್ಠಾನವನ್ನಾರಂಭಿಸಿದರು. ಸದ್ಭಕ್ತಿಪರಾಯಣರಾದ ಡಿಗ್ಗಿ-ಚಂಡೇಶ್ವರ ಗ್ರಾಮವಾಸಿಗಳು ಕಲಿಕಾಮಧೇನು ಬಿರುದಾಂಕಿತರಾದ ಶ್ರೀಶಿವಲಿಂಗಸ್ವಾಮಿಗಳ ಪುರಾಣವನ್ನು ಕೇಳಬೇಕೆಂದು ಪ್ರಾರ್ಥಿಸಲಾಗಿ ಶ್ರೀ ಚರವರ್ಯರು ಪುರಾಣವನ್ನು ಪ್ರಾರಂಭಮಾಡಿದರು. ಸಂಗೀತವಿದ್ಯಾ ಬಸವಲಿಂಗಪ್ಪ ಪುರಾಣಿಕ ಡಿಗ್ಗಿ ಇವರು ಮಧುರವಾದ ಸಂಗೀತದೊಡನೆ ಶ್ರೀ ಶಿವಲಿಂಗಸ್ವಾಮಿಗಳ ಮಹಿಮಾತಿಶಯಗಳನ್ನೂ ವೀರಶೈವಧರ್ಮದ ವಿಷಯಗಳನ್ನೂ ಶಾಸ್ತ್ರಸಮತವಾಗಿ ಬೋಧಿಸಿದರು. ಚರವರ್ಯರು ಕೇವಲ ಸ್ವೀರಾಹಾರಿಗಳಾಗಿದ್ದರೂ ನಶ್ವರವಾದ ಶರೀರದ ಆಯಾಸವಿಲ್ಲದೆ ಉಪದೇಶವಾಣಿಯಿಂದ ಶಿಷ್ಯರ ಅಜ್ಞಾನವನ್ನು ನಾಶಗೊಳಿಸಿ ಸುಜ್ಞಾನವನ್ನುಂಟುಮಾಡಿದರು ಮತದ ಗುರುಗಳಾದ ಪಟ್ಟಚರಾಧಿಕಾರಿಗಳು ಶಾಸ್ತ್ರಸಮ್ಮತವಾಗಿ ವೀರಶೈವರ ನಿಜತತ್ವಗಳನ್ನು ಹಿಂಗೆ ಬೋಧಿಸುತ್ತಾ ನಡೆದರೆ ಸದ್ಯಃ ಆವಿರ್ಭವಿಸುತ್ತಿರುವ ನೂತನ ಸಂಕರಸಂಧವು ನಿರ್ಮೂಲವಾಗುವುದರಲ್ಲಿ ಸಂಶಯವಿಲ್ಲ ಪುರಾಣದ ಮಧ್ಯದಲ್ಲಿ ಸಂಧಿಯ ಶಾಂತಿಗಳನ್ನು, ಮಾಡುವುದಕ್ಕಾಗಿ ಕತಗಾಯಿ, ಬೀಳಕಾಣಿ, ಕೊಟ್ಟಗ್ಯಾಳ, ನೊಫೆ ಮೊದಲಾದ ಗ್ರಾಮಗಳ ಸದ್ಭಕ್ತರು ಅನ್ನಸಂತರ್ಪಣೆಮಾಡಿದರು. ಡಿಗ್ಗಿ, ಚಂಡೇಶ್ವರ ಸದ್ಭಕ್ತರು ತಮ್ಮತಮ್ಮ ಸಂಸಾರಭಾರವನ್ನು ಸಹಿಸುತ್ತಲೂ, ವರ್ಷಾಕಾಲದ ವೃಷ್ಟಿಯ ಅಧಿಕ್ಯದಿಂದ ನದೀಪ್ರವಾಹದ ವೇಗವನ್ನುದೂರಿಕರಿಸಿ ಎರಡು ವೈಲಿನಲ್ಲಿರುವ ಪುರಾಣಶ್ರವಣಕ್ಕೆ ಅಗಮಿಸಿ ಸ್ವಾಮಿಗಳ ಬೋಧೆಯನ್ನು ಕೇಳಿ ತಮ್ಮತಮ್ಮ ಗ್ರಾಮಗಳಿಗೆ ಬರುವುದನ್ನು ನೋಡಿದರೆ ಭಕ್ತರ ಭಕ್ತಿಯ ವೈಭವವನ್ನು ಬರೆಯಲು ಈ ಲೇಖನಿಯಿಂದ ಸಾಧ್ಯವಿಲ್ಲ ಈ ಕಲ್ಯಾಣ ಪ್ರಾಂತದಲ್ಲಿ ಮೂರುತಿಂಗಳುಗಳಿಂದ ಮಳೆಯು ವಿಶೇಷವಾಗಿ ಸುರಿಯುತ್ತಿದ್ದರೂ ಶ್ರೀ ಶಿವಲಿಂಗಚರವರ್ಯರ ಮಹಿಮೆಯಿಂದ ಯಾವ ಕಷ್ಟಗಳೂ ಒದಗದೆ ಸುಖವುಂಟಾದ್ದರಿಂದ ಇದೇ ಭಾದ್ರಪದ ಶು|| ೫ ರಾದಪೂಜೆಯೂ ಶ್ರೀ ಮಹಾಗಣಾರಾಧನೆಯೂ ಬಹು ವಿಜೃಂಭಣೆಯಿಂದ ಸಮಾಪ್ತಿಗೊಂಡಿತು. ಅನಂತರ ಪುರಾಣಶ್ರವಣಮಹಿಮೆಯನ್ನೂ ಆಚಾರ್ಯರ ತತ್ವಗಳನ್ನೂ ವೇ|| ವಿರೂಪಾಕ್ಷಶಾಸ್ತ್ರಿಗಳು ವಂದ್ಯಿದಾಸೋಹಮಠ, ಇವರು ತಮ್ಮ ಮನೋಹರವಾದ ದಿವ್ಯವಾಣಿಯಿಂದ ಸಭಿಕರಿಗೆ ಬೋಧಿಸಿದರು. ಮತ್ತು ಗಂಭೀರ ಇಚ್ಛೈಯಿಂದ ಶ್ರೀ ಚರವರ್ಯರು ಗುರುತ್ವದ ವಿಷಯವನ್ನು ಕುರಿತು ಭಾಷಣಮಾಡಿದರು. ಬಳಿಕ ಭಾಲಕಿಪಟ್ಟದ್ದೇವರು ಭಕ್ತರ ಇಚ್ಛೆಯಮೇರೆಗೆ ಗುರುಗಳಂದಾಗುವ ಪ್ರಯೋಜನವನ್ನು ಬೋಧಿಸಿದರು. ಕಾರ್ಯಕ್ಕೆ ಅತ್ಯಂತ ಭಕ್ತಿಯಿಂದ ಶ್ರಿಕರಣಪೂರ್ವಕಮಾಗಿ ತನುಮನಧನಗಳಿಂದ ಸಹಾಯಮಾಡಿದ ಮ|| ಹಾವಗೀರಾವ ಶಿರಿಗಿರೆ ಸಾ|| ಡಿಗ್ಗಿ-ಭೀಮರಾವ ಪಾಟೀಲ ಮ|| ಅಂಜಾರಾವ ಪಾ|| ಬಿ|| ಶಿವಲಿಂಗಪ್ಪ ಪಾ|| ಬ|| ಗಂಗಾರಾಮ ಪಾ|| ಬಿ|| ಮಹಾದಪ್ಪರಾಯರು ಮ|| ಶಂಕರಪ್ಪ ಪಾ|| ಮಾಣೇಕರಾವ ಮ|| ಪಾ|| ವಿರೂಪಾಕ್ಷಪ್ಪ ಮಾಶೇಶ್ವರ ಡಿಗ್ಗಿ ಶಿದ್ಧರಾಮಪ್ಪ ಸಿರಿಗಿರೆ, ಸಂಗಪ್ಪ ಗುರಪ್ಪ, ಬಾಪುರಾಯೆ ಗುರಪ್ಪ ಚಂಡೇಶ್ವರ ಹಾವಗಿ ಜಾ|| ಮಡಿವಾಳಪ್ಪ ಈ ಡಿಗ್ಗಿಯ ಸದ್ಭಕ್ತರು ಮತ್ತು ಚಂಡೇಶ್ವರದ ಮ|| ಮಾಣೇಂಬ ಪಾ|| ಬಸವಪ್ಪ ಬಿ|| ಪ|| ದಬಾತಿ ಶಿದ್ಧರಾಮಪ್ಪ, ಪ|| ಚಿನಮಲ್ಲಿಪ್ಪ, ವೆಂಕಟರಾವ ಪೊ|| ಪಾ|| ಶರಣಪ್ಪ ಪಾ|| ಮಹಾದಪ್ಪ ಪಾಟೀಲ, ವೇ|| ಗುರು ಶಿದ್ಧಪ್ಪ ಮಠ ಈ ಸರ್ವಸದ್ಭಕ್ತರು ಈ ಮಹತ್ಕಾರ್ಯಕ್ಕೆ ಮನಸಾನೆರವೇರಿಸಿದ ಕಾರಣ ಶ್ರೀ ಜಗದ್ಗುರು ಪಂಚಾಚಾರ್ಯರು ಇವರಿಗೆ ಸನ್ಮಂಗಲವನ್ನೀಯಲಿ ಪಂಚಾಚಾರ್ಯಪ್ರಭೆಗೆ ಒಂದುರೂಪಾಯಿ ಅರ್ಪಿಸಲ್ಪಟ್ಟಿತು.

ಅನಂತರ ಆತ ಸಂಭ್ರಮದಿಂದ ಶ್ರೀಗಳನ್ನು ಮಿಗ್ಗಿ ಮತ್ತು ಜಂಡೇಶ್ವರಗ್ರಾಮಗಳಿಗೆ ಕರೆದುಕೊಂಡು ಬಂದರು. ಶ್ರೀ ಜರವಯ್ಯರ ಹೇಳಿಕೆಯಿಂದಲೂ, ಮಂದಲಶಾಸ್ತ್ರಿಗಳ ದೋಧೆಯಿಂದಲೂ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಭಜನಾಸಂಘಗಳು ಸ್ಥಾಪಿಸಲ್ಪಟ್ಟವು.

ಶ್ರೀ ಪಂಚಾಚಾರ್ಯ ಭಜನಾಸಂಘ, ಮಿಗ್ಗಿ

ಅಧ್ಯಕ್ಷರು—ಮ॥ ಹಾವಗೀರಾವ ಶಿರಿಗಿ, ಸೆಕ್ರೇಟರಿ—ಮ॥ ಭೀಮರಾವ-ಗಂಗಾರಾಂ ಪಾಟೀಲ, ವೆ॥ ಬಸವಲಿಂಗಪ್ಪ ಪುರಾಣಿಕ, ಮೆಂಬರರು—ಶಿವಲಿಂಗಪ್ಪ ಬಿ॥, ಮ॥ ಮಾಧವರಾವ ರಾಂಪುರ, ಮ॥ ಶಂಕರಪ್ಪ ಟ್ಟಿ॥, ಗುರಪ್ಪ ರಂತಾಳೆ, ಸಿದ್ದರಾಮಪ್ಪ ಶಿರಿಗೆರೆ, ಬಂಗಪ್ಪ ಬಿ, ಹಾಗಪ್ಪ ಶಿರಿಗೆರೆ, ಶಿವಲಿಂಗಪ್ಪ ಶಿರಿಗೆರೆ, ವೆ॥ ವಿರೂಪಾಕ್ಷಪ್ಪ ಮಾಹೇಶ್ವರ, ವೇ॥ ಅಡಿವಪ್ಪ ಪೂಜಾರಿ, ಮಡಿವಾಳಪ್ಪ, ಜಂಡೇಶ್ವರ, ಅಮೃತರಾವ ಜೂಲ, ಶಾಮರಾವ ಬ॥, ಬಾಪುರಾವ ಬ॥, ಮಾಣಿಕರಾವ ಪಾ॥ ಬ॥, ವೇ॥ ರೇವಣಯ್ಯ ಮಠಪತ್ತಿ, ವೇ॥ ಶಿವಲಿಂಗಮಾಹೇಶ್ವರ, ವ್ಯವಸ್ಥಾಪಕ ಮ॥ ಅಣ್ಣಾರಾವ ಬರೆದಾರ.

ಶ್ರೀಪಂಚಾಚಾರ್ಯ ಭಜನಾಸಂಘ ಜಂಡೇಶ್ವರ

ಅಧ್ಯಕ್ಷರು—ಮ॥ ರಾ॥ ಬಾಜಿರಾವ, ಅಣ್ಣಾರಾವ, ಪಾಟೀಲ ಬಿ॥, ಸೆಕ್ರೆಟರಿ ಮ॥ ಚನ್ನಮಲ್ಲಪ್ಪ ಶಿದ್ಧಲಿಂಗಯ್ಯ, ಮೆಂಬರ ಮ॥ ಸಿದ್ಧರಾಮಪ್ಪ, ಬ॥ ಶಾಮರಾವ, ಸಿದ್ದರಾಮ ಸಿಂಗಿರೆ, ಶಿದ್ಧರ ಶಾಕರ ಸರ್ವಭಕ್ತ ವೇ॥ ಗುರುಶಿದ್ಧವ್ವಾ ಮಠ, ಹಣ್ಮುಖಯ್ಯ, ಮ॥ ಮಹಾಂತಯ್ಯ ಮಠಪತ್ತಿ, ಮಹಾಲಿಂಗಯ್ಯ, ಮ॥ ಮಹಾದಪ್ಪ ಬಿರಾದಾರದ ಬಾಲೆ, ಮ॥ ಗುರಪ್ಪ ಮೆಲಿಗೆ, ಮ॥ ಮಾಣಿಕತೋಂಡಾರೆ, ಮ॥ ಅಪ್ಪಾರಾವ ಶಿರಿಗಿ, ಮ॥ ವಿಶ್ವನಾಥ ಬ॥, ಮ॥ ಕಾಶೀನಾಥ, ಮ॥ ಗಣಪತಿ ಸೊನಾಳೆ, ಮ॥ ಬಸವಪ್ಪ ಬರಾದಾರ, ಪಾ॥ ದಬಾಲೇ.

ಶಾರದಾದೇವಿಯ ಪುರಾಣಪ್ರವಚನ

ವೀರಶೈವಮತದಲ್ಲಿ ಪ್ರತ್ಯಕ್ಷ ಶಾರದಾದೇವಿಯು ಸೊಲ್ಲಾಪುರದಲ್ಲಿರುವಳು. ಈ ಶಾರದಾದೇವಿಯಿಂದ ಸೊಲ್ಲಾಪುರವು ಪುನೀತವಾಗುತ್ತಿರುವದು. ಈ ದೇವಿಯ ಶಕ್ತಿಯು ಈವರೆಗೆ ಯಾರಿಗೂ ಗೊತ್ತಿರಲಿಲ್ಲ. ಸದಾಚಾರಿಗಳಲ್ಲಿಯ ಸದ್ಭಕ್ತಿಯ ಪರೀಕ್ಷೆಯು ಸಮ್ಮುಗಳಿಂದಲೇ ಆಗತಕ್ಕದ್ದಲ್ಲವೇ? ಅದರಿಂದ ದೇವಿಯ ಶಕ್ತಿಯು ಪಾಮರಜನರಿಗೆ ಹೇಗೆ ತಿಳಿಯಬೇಕು? ಬಂಗಾರದ ಪರೀಕ್ಷೆಯು ಒರೆಗಲ್ಲಿಗೆ ಆಗುವದಲ್ಲದೆ ಉಳಿದಕಲ್ಲಿಗೆ ಆದೀತೇ? ಈ ದೇವಿಯ ಪರೀಕ್ಷೆಗಾಗಿಯೇ ಪ್ರತ್ಯಕ್ಷರಾದರೋ ಏನೋ ಎಂಬಂತೆ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರು ಸೊಲ್ಲಾಪುರಕ್ಕೆ ದಯಮಾಡಿಸಿದ್ದಾಗ ಈ ದೇವಿಯಲ್ಲಿರುವ ವಿದ್ವತ್ತೆಯನ್ನು ನೋಡಿ ಮಹಾಸನ್ನಿಧಿಯು "ಶಾರದಾದೇವಿ" ಎಂಬಭಿಧಾನವನ್ನಿತ್ತರು. ಶ್ರೀಜಗದ್ಗುರು ಪೂಜ್ಯಪಾದದಿಂದ ಪವಿತ್ರಾತ್ಮರಾದ ಸೌ॥ ಭಾಗೀರಥೀಬಾಯಿ ಕಟಾಪ ಇವರನ್ನು ಹೊಗಳುವ ಶಕ್ತಿಯು ಯಾರಲ್ಲುಂಟು. ಸೌ॥ ಭಾಗೀರಥೀಬಾಯಿಯವರು ಪರಮ ಗುರುಭಕ್ತರು. ಇವರು ಪ್ರತಿವರ್ಷದಂತೆ ಈ ವರ್ಷದಲ್ಲಿಯೂ ಶ್ರೀಯುತ ಮಲ್ಲಿಕಾರ್ಜುನಪ್ಪ ಶೇಟಿಯವರ ಆಗ್ರಹದಿಂದ ಶ್ರಾವಣ ಶು॥ ೭ ಮಿಗೆ "ಶ್ರೀ ಪದ್ಮರಾಜ ಪುರಾಣವನ್ನು ಹೇಳಲುಪಕ್ರಮಿಸಿದರು. ಇವರ ಪುರಾಣಪ್ರವಚನ ಪದ್ಧತಿಯನ್ನರಿಸಕೊಂಡೇ, ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು ಪದರೀ ಪುರಾಣವನ್ನು ದಯಪಾಲಿಸಿದರು. ಈ ಪುರಾಣದಿಂದ ಈ ವರ್ಷದಲ್ಲಿ ವೀರಶೈವರಲ್ಲಿ 'ಶಿವಾಧಿಕ್ಯ' ಬೀಜವು ಜೆನ್ನಾಗಿ ಬೇರೂರಿತು. ಕಡೆಗೆ ಸೌ॥ ಭಾಗೀರಥೀಬಾಯಿಯವರು ತಮ್ಮ ವಿಚ್ಛಿಕ ಗುರುಗಳನ್ನು ಕರೆತಂದು ಪೂಜಿಸಿ ಪುರಾಣವನ್ನು ಪರಿಸಮಾಪ್ತಿಗೊಳಿಸಿದರು. ಪುರಾಣಾಂತ್ಯದಲ್ಲಿ ವೇ॥ ಪಂ॥ ಶ್ರೀ ಜಗದೀಶಶಾಸ್ತ್ರಿಗಳವರು, ವೇ॥ ಪಂ॥ ಶ್ರೀ ಮಣೂರು ಮಲ್ಲಿಕಾರ್ಜುನಶಾಸ್ತ್ರಿಗಳವರು, ಜೈನಾಪುರ ಹೋಟಗೀ ಶ್ರೀಗಳು ಶ್ರೀಬಾಬಾಸಾಹೇಬ ದಠಗೋಪಾಟೀಲ ಮ್ಯುನಿಸಿಪಲ್ ಕೌನ್ಸಿಲರ್, ಶ್ರೀಯುತ ಶಿವಲಿಂಗಪ್ಪ ಮಾಳಗೆ, ಶ್ರೀಶಂಕರಪ್ಪ ಜಾತೋತೆ, ಶ್ರೀಯುತ ಮಲ್ಲಿಕಾರ್ಜುನಪ್ಪ ಗಂಭೀರೆ, ಮುಂತಾದ ಪ್ರಸಿದ್ಧ ವ್ಯಕ್ತಿಗಳ ಆಗಮನವಾಗಿತ್ತು. ಮೇಲ್ಕಂಡ ಉಭಯ ಪಂಡಿತರೂ, ಹೋಟಗೀ ಶ್ರೀಗಳೂ ಉತ್ತಮವಾದ ಭಾಷಣವನ್ನು ಮಾಡಿದರು. ಶ್ರೀಯುತ ಶೇಟಿಯವರು ಶರೀರಾರಾದರೂ ಬಹು ಅಶಕ್ತರಾಗಿದ್ದಾರೆ ಶ್ರೀಮತೀ ಮುಕ್ತಾಬಾಯಿಶೇಟಿಯವರ ಪ್ರಯತ್ನದ ಫಲವೇ ಈಗ ಹೊರಬೀಳಹತ್ತಿರುವದೆಂದರೂ ಅತಿಶಯಿಲ್ಲ. ಸೌ॥ ಭಾಗೀರಥೀಬಾಯಿಯವರು ೪೧ ದಿವಸಗಳವರೆಗೆ ಕೇವಲ ಗೋಕ್ಷೀರದಮೇಲೆಯೇ ಇದ್ದರು. ಇಂತಹ ಮಾತೃವಿನ ಅವಶ್ಯಕತೆಯು ವಿಶೇಷವಿರುತ್ತದೆ ಜಗದಾಚಾರ್ಯರು ಇವರಿಗೆ ಇದಕ್ಕೂ ಹೆಚ್ಚಾದ ಶಕ್ತಿಯನ್ನು ದಯಪಾಲಿಸಲಿ.

ಈ ಶಾರದಾದೇವಿಯ ಪ್ರಯತ್ನದಿಂದ ಶ್ರೀ ರತ್ನಾಬಾಯಿ ಹಿರೇಹಬ್ಬು, ಲಕ್ಷ್ಮೀಬಾಯಿ ಗಾಬಣೆ, ಶ್ರೀ ಕಾಶೀಬಾಯಿ ನಂದಿಮಳಿ, ಮುಂತಾದ ಮಾತೃವರ್ಗವು ಆದರ್ಶವರ್ಗವಾಗಿರುವದೆಂದು ತಿಳುಹಿಸಲು ಆತ್ಯಂತ ಸಂತೋಷವಾಗುವದು.

ಗುರುಪಾದಪೂಜೆ

ಹೋಟಗೀಗ್ರಾಮದಲ್ಲಿ ಸೊಲ್ಲಾಪುರದ ವೀರಶೈವ ಸ್ತ್ರೀಪುರುಷರು ಬೃಹನ್ಮಠದಲ್ಲಿ "ಶ್ರೀಜಗದ್ಗುರು ಪಂಡಿತಾರಾಧ್ಯ ಗುಹೆ" ಯೊಂದನ್ನು ಕಟ್ಟಿಸಿದರು. ಆ ಸ್ಥಲದಲ್ಲಿ ಹೋಟಗಿ ಶ್ರೀಗಳು ತಮ್ಮ ವಾರ್ಷಿಕವ್ರತವಾದ "ಶಿವಲಿಂಗಾನುಷ್ಠಾನ" ವನ್ನು ೪೧ ದಿವಸಗಳವರೆಗೆ ನೆರವೇರಿಸಿದರು ಇದೇ ಸುಸಮಯವೆಂದರಿತು ಹೋಟಗಿ ಸದ್ಭಕ್ತರಾದ ಮಲ್ಲಯ್ಯಸ್ವಾಮಿ, ಬಾಪೂರಾವ ಪಾಟೀಲ, ಶಿವಪ್ಪ ಪಾಟೀಲ, ಶಿವಲಿಂಗಪ್ಪ ಗಂಗದೆ, ಗುರುಪಾದಪ್ಪ ಗಂಗದೆ, ಚನ್ನಬಸಪ್ಪ ಗಂಗದೆ, ದೇವರಾಯ ಹೂಡೆ, ಕಾಮನಾಶ ಅರವತ್ತು, ಮಲ್ಲಿಕಾರ್ಜುನಪ್ಪ ದಿಂಡೂರೆ, ಬೀಕಪ್ಪ ದಿಂಡೂರೆ, ಕಲ್ಲಪ್ಪ ರೇಷ್ಮೆ, ವೀರಪ್ಪ ಸುಕಾರ, ನಾಗಪ್ಪ ಕುಂದೂಳವಾಡೀ ಮುಂತಾದವರು 'ಗುರುಪಾದಪೂಜೆಯನ್ನು' ಶ್ರಾವಣ ಶು॥ ೧ ರಿಂದ ಆರಂಭಿಸಿ ಭಾ॥ ಶು॥ ೧೧ರವರೆಗೆ ಪರಿಸಮಾಪ್ತಿಗೊಳಿಸಿದರು. ಕಡೆಗೆ ಮಹಾಪಾದಪೂಜೆಯಾಯಿತು. ಆಗ ಸೊಲ್ಲಾಪುರದಿಂದ ಸೌ॥ ಭಾಗೀರಥೀಬಾಯಿ ಕಟಾಪ ಇವರು ೧೧ ಜನ ವೈದಿಕರನ್ನು ಕರೆತಂದಿದ್ದರು ಪಾದಪೂಜಾವಿಶಿಷ್ಟವು ಬಹು ಸುಂದರವಾಗಿತ್ತು. ಜೈನಾಪುರ, ಕನಕಗಿರಿ ಶ್ರೀಗಳ ಆಗಮನವಾದುದರಿಂದ ಬಹಳ ಶೋಭೆಯುಂಟಾಗಿತ್ತು. ಬೆಂಬೋಳಿ ಗುರುಸಿದ್ಧಪ್ಪನವರು ವಿಶೇಷ ಪರಿಶ್ರಮಪಟ್ಟು ಗುರುಕೃಪೆಗೆ ಪಾತ್ರರಾದರು

ಜಿ. ಜಿ. ಪಾಟೀಲ

ಶ್ರೀಯುತ ವಾಕಳೆಯವರ ಅಸಾಧಾರಣಭಕ್ತಿ

ಸೊಲ್ಲಾಪುರದಲ್ಲಿ ಶ್ರೀಯುತ ಸಿದ್ಧರಾಮಪ್ಪ ಪ್ರಭಪ್ಪ ವಾಕಳೆ, ಎಂಬ ಸದ್ಭಕ್ತರು ಇರುವರು. ಇವರ ಭಕ್ತಿಯು ಅಸಾಧಾರಣವಾದುದು. ಇವರ ನೈಜವಾದ ಭಕ್ತಿಯು ಅನಂತ ಶ್ರೀಮಂತರನ್ನೂ ಪಂಡಿತರನ್ನೂ ಆಶ್ಚರ್ಯಗೊಳಿಸಹತ್ತಿರುವದು. ಇವರು ಪ್ರತಿವರ್ಷದಲ್ಲಿಯೂ ತಪ್ಪದೆ ಶ್ರೀಶೈಲಯಾತ್ರೆಯನ್ನು ಮಾಡುತ್ತಿರುವರು. ಪ್ರತಿವರ್ಷ ಶ್ರಾವಣಮಾಸದಲ್ಲಿ ಇಲ್ಲಿಯ ಶ್ರೀ ಮಲ್ಲಿಕಾರ್ಜುನಸ್ವಾಮಿಗೆ ರುದ್ರಾಭಿಷೇಕವನ್ನು ನೆರವೇರಿಸಿದಂತೆ ಈ ವರ್ಷವೂ, ನೆರವೇರಿಸಿದರು. ೪೧ ದಿವಸ ಕೇವಲ ಗೋಕ್ಷೀರಾಹಾರಿಗಳಾಗಿದ್ದರು ರಾತ್ರಿ ನಿದ್ರೆಯೇ ಇಲ್ಲ. ಹಗಲು ೨ ಘಂಟೆ ಮಾತ್ರ ನಿದ್ರಿಸುತ್ತಿದ್ದರು. ತಮ್ಮ ವ್ರತ ಪರಿಸಮಾಪ್ತಿಗೆ ವಾರ್ಷಿಕಪದ್ಧತಿಯಂತೆ ಹೋಟಗಿ ಶ್ರೀಗಳನ್ನು ಬರಮಾಡಿಕೊಂಡು, ಪಾದಪೂಜೆಗೈದು ಧನ್ಯರಾದರು. ಶ್ರಾ॥ ಶು॥ ೧ ರಂದು ಭಿಸಿ, ಭಾ॥ ವ॥ ೩ ಮಿತಿಯದಿವಸ ಲಘುರುದ್ರ (೧೫೧ ಆವರ್ತನ)ವನ್ನು ಶ್ರೀ ಮಲ್ಲಿನಾಥಸ್ವಾಮಿಗೆ ಮಾಡಿಸಿದರು. ಅದಿಲಿಂಗ, ಯೋಗಿನಾಥ, ಶ್ರೀ ಸಿದ್ಧೇಶ್ವರರಿಗೆ ೧೫ ಲಿಂಗಳು ರುದ್ರಾಭಿಷೇಕವನ್ನು ಮಾಡಿಸಿದರು ಕಡೆಗೆ ಸಾವಿರಾರು ಮಾಹೇಶ್ವರ ಮೂರ್ತಿಗಳನ್ನು ಪಂಚಾಮೃತಾನ್ನದಿಂದಲೂ ಧೂರಿದಕ್ಷಿಣೆಯಿಂದಲೂ ತೃಪ್ತಿಗೊಳಿಸಿದರು. ಇಂತಹ ಸದ್ಭಕ್ತರು ಅನೇಕರಾಗಿ ಈ ನಿಸ್ವಾರ್ಥರ ಆಕಾಂಡಕಾಂಡವವನ್ನು ಸಾರ್ವಜನಿಕರಿಗೆ ಅತಿಶೀಘ್ರದಿಸಲೆಂದು ಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸುವೆನು.

ಓರ್ವಗುರುಭಕ್ತ.

ಪ್ರಶ್ನೋತ್ತರರತ್ನಮಾಲಿಕಾ

ಲೇಖಕರು:—ಪುಲ್ಲಿಕಾರ್ಜುನಾರಾಧ್ಯ ರಾಚಪ್ಪನ್ನೂರು ಮಳೆಮಠ ಮುದೇನೂರು.

ಪ್ರ—ಜೀವಾತ್ಮನಿಗೆ ಬಹುಕಾಲದಿಂದ ವಜ್ರಲೇಪದಂತೆ ಬಲವಾಗಿ ಅಂಟಿಕೊಂಡು ಬಂದಿರುವ ವಾಸನೆಗೆ ಮದ್ದು ಯಾವದು?

ಉ—ಜೀವತನ್ನನೂ, ಶಾಶ್ವತನೂ, ಶಾಂತನೂ, ವ್ಯೋಮಾತೀತನೂ, ನಿರಂಜನನೂ, ನಾವ-ಬಿಂದು-ಕಲಾತೀತನೂ ಅದ ಸದ್ಗುರುವಿನುಪದೇಶಕ್ರಮವು. ಉದಾಹರಣೆಗಾಗಿ ಒಂದು ಲೌಕಿಕ ಉಪಾಯವಂ ನೋಡಿರಿ. ಒಬ್ಬನು ಒಂದು ಹೋಟಲಿನ ಪಕ್ಕದಲ್ಲಿ ಹೋಗುತ್ತಿರುವಾಗ ಅಲ್ಲಿ ಮಾಡುತ್ತಿರುವ ಪದಾರ್ಥಗಳ ವಾಸನೆಗೆ ಮನಸೋತು ಹಾಗೆಯೇ ವಾಸನೆಯಂ ಸೇವಿಸುತ್ತ ನಿಂತನು. ಹೋಟಲಿನವನು ಇದನ್ನು ಕಂಡು ಪದಾರ್ಥಗಳ ವಾಸನೆಯನ್ನು ತೆಗೆದುಕೊಂಡಿದ್ದಕ್ಕಾಗಿ ೧ ರೂಪಾಯಿ ಕೊಟ್ಟು ಹೋಗೆಂದು ಹಿಡಿದುಕೊಂಡನು. ಅದಕ್ಕವನು ನಾನು ಪದಾರ್ಥಗಳಂ ತಿನ್ನಲಿಲ್ಲ. ಅದೇಕೆ ಕೊಡುವದೆಂದನು. ಇವರಿಬ್ಬರ ಜಗಳವನ್ನು ನೋಡುವುದಕ್ಕಾಗಿ ನೂರಾರುಜನರು ಸೇರಿದರು. ಅವರೆಲ್ಲೊಬ್ಬ ಜಾಣನು ಹೋಟಲಿನವನನ್ನು ಹತ್ತಿರಕ್ಕೆ ಕರೆದು ನಿನ್ನ ಪದಾರ್ಥಗಳ ವಾಸನೆಯನ್ನು ತೆಗೆದುಕೊಂಡಿದ್ದಕ್ಕಾಗಿ ರೂಪಾಯಿ ಕೊಡಬೇಕಲ್ಲವೇ? ಹಾಗಾದರೆ ನಾನು ಕೊಡುತ್ತೇನೆ ತೆಗೆದುಕೋ ಎಂದು ಹೇಳುತ್ತ ಕೆಸೆಯಿಂದ ಒಂದು ರೂಪಾಯಿ ತೆಗೆದುಕೊಂಡು ಹೋಟಲಿನವನ ಕಿವಿಯಹತ್ತಿರ ಶಬ್ದ ಮಾಡಿ ನಿನ್ನ ಪದಾರ್ಥಗಳ ವಾಸನೆತೆಗೆದುಕೊಂಡಿದ್ದಕ್ಕೂ ನೀನು ರೂಪಾಯಿಶಬ್ದವನ್ನು ಕೇಳಿದ್ದಕ್ಕೂ ಸರಿ ಹೋಯಿತಲ್ಲವೇ ಎಂದು ಹೇಳಿ ವ್ಯಾಜ್ಯವನ್ನು ಬಗೆಹರಿಸಿದನು ವಾಚಕರೇ, ಹೀಗೆ ವಾಸನಾನಿವೃತ್ತಿಗೆ ಶ್ರವಣ ಪ್ರವೃತ್ತಿಯೇ ಯೋಗ್ಯವಾಗಿರುವದು.

ಪ್ರ—ಕರೆಯದೆ ಬರುವವನು, ಬರೆಯದೆ ಓದುವವನು. ಬರೆಗಾಲಿನಿಂ ನಡೆವವನಾರು?

ಉ—ತನ್ನನ್ನು ತಾನರಿತುಕೊಳ್ಳದೆ (ಆತ್ಮಜ್ಞಾನವಂ ಪಡೆಯದೆ) ಮರಹುಟ್ಟಿ ಮರಬಿದ್ದಂತೆ ಯಾವನು ಮೃತ್ಯುವಿಗೋಸ್ಕರವಾಗಿ ಮರಳಿ ಮರ್ತ್ಯಕ್ಕೆ ಬರುವನೋ ಅವನೇ ಒಂದನೆಯವನು. ಆತ್ಮಾನಾತ್ಮವಿಚಾರವಾಗಿ ಸಂಭಾಷಿಸದೆ ಯಾವಾಗಲೂ ಜಗತ್ಸಂಬಂಧವಾದ ಕಾಡುಹರಟೆಯಲ್ಲಿರುವನೋ ಅವನು ಎಂಡನೆಯವನು. ಮತ್ತು ತಾನು ಯಾರು, ಈ ಹಿಂದೆ ಏನಾಗಿದ್ದೆನು, ಈಗೇನಾಗಿರುವೆನು, ಮುಂದೇನಾಗುವೆನು ಎಂಬುದನ್ನು ನೆಯದೆ (ಆತ್ಮಲಾಭವಂ ಪಡೆಯದೆ) ಯಾವನು ನಿರ್ಗತಿಕನಂತೆ ಇಹಯಾತ್ರೆಯಂ ಮುಗಿಸುವನೋ ಅವನು ಮೂರನೆಯವನು. ಸಾರಾಂಶ—ಹೃತ್ಕಮಲಮಧ್ಯಸ್ಥನಾಗಿಯೂ ಜ್ಞೈತನ್ಯಸ್ವರೂಪನಾಗಿಯೂ, ನಿತ್ಯನಾಗಿಯೂ ತೇಜೋರೂಪನಾಗಿಯೂ, ಕದಂಬ ಕುಸುಮದಂತೆ ಆಕಾರವುಳ್ಳವನಾಗಿಯೂ, ತುರ್ಯಾತೀತನಾಗಿಯೂ, ಪರಾತ್ಪರನಾಗಿಯೂ, ಅನಂತನಾಗಿಯೂ, ಆನಂದಪ್ರೂಪನಾಗಿಯೂ, ಜ್ಞಾನಮಯನಾಗಿಯೂ, ಗಾಳಿಯಿಲ್ಲದ ದೀಪದಂತೆ ಸ್ಥಿರನಾಗಿಯೂ, ಅಕೃತ್ರಿಮವಾದ ಜೀವರತ್ನದಂತೆ ಕಾಂತಿಯುಳ್ಳವನಾಗಿಯೂ, ಭಾಸ್ಕರನಾಗಿಯೂ ಇರುವ ಪರಮಾತ್ಮನ ಸಾಕ್ಷಾತ್ಕಾರವಂ ಪೆಡೆಯದವರೆಂದು ವ್ಯಕ್ತವಾಗುವದಲ್ಲದೆ ಮೇಲುದಾಹರಿಸಿರುವ ಮೂರು ವಿಮರ್ಶನೆಗಳೂ ಒಬ್ಬನಿಗೇ ಅನ್ವಯಿಸುವವು. ಆದ್ದರಿಂದಲೇ ಜ್ಞಾನಿಗಳು "ಆಗಮವೆನರಿಯದೇ ಹೇಗಯ್ಯ ಶಿವಪೂಜೆ, ನಾಗಸಂಪಿಗೆಯ ಮರವೇರಿ ಮುದಿಗೂಬೆ ಕಾಣಾ ಪೋದಂತೆ" ಎಂದು ಹೇಳಿರುವರು. ಇಲ್ಲಿ ಆಗಮವನರಿಯದೆ ಅಂದರೆ, ತಾನು ಈ ಮರ್ತ್ಯಕ್ಕೆ ಮನುಷ್ಯಜನ್ಮಧಾರಣಮಂ ಮಾಡಿಕೊಂಡುಬಂದುದರ ಕಾರಣವೇನೆಂಬುದಂ ಅರಿಯದೆ ಎಂದು ಭಾವವು.

[೬ನೆಯ ಪುಟವನ್ನು ನೋಡಿ]

12-10

ಪಂಚಾಚಾರ್ಯಪ್ರಭಾ.
೧೯ನೇ ಸೆಪ್ಟೆಂಬರ್ ತಾ|| ೨೬ನೇ ಸೋಮವಾರ

ಗುರುಗಳು ಹೇಗಿರಬೇಕು ?

ವೀರಶೈವಮತಪಥಪ್ರಕಾಶಕರಾಗಿ ಆಗಾಗ್ಗೆ ಸಂಭವಿಸುತ್ತಿರುವ ಧರ್ಮಗ್ಲಾನಿಯನ್ನು ಹೋಗಲಾಡಿಸುವುದಕ್ಕಾಗಿ ವೀರಶೈವರು ವಾಸಮಾಡಿರುವ ಪ್ರತಿಯೊಂದು ಗ್ರಾಮಗಳಲ್ಲಿಯೂ ಗುರುಸ್ಥಲಸೂತಕಗಳು ಪ್ರಾಚೀನಕಾಲದಿಂದ ಏರ್ಪಡಿಸಲ್ಪಟ್ಟಿರುತ್ತವೆ. ಭರತಖಂಡದಲ್ಲಿ ಗುರುವರ್ಗದ ಮಠಗಳಿಲ್ಲದ ಗ್ರಾಮಗಳೇ ಕಂಡುಬರುವುದಿಲ್ಲ. ಇದನ್ನು ವಿಚಾರಮಾಡಿ ನೋಡಿದರೆ ಗುರುವರ್ಗದ ಮಠಗಳೆಂಬುವಗಳು ವೀರಶೈವಮತೀಯರ ಭವರೋಗಕ್ಕೆ ಚಿಕಿತ್ಸೆ ಮಾಡುವ ವೈದ್ಯಶಾಲೆಗಳಾಗಿಯೂ ದುರಾಚಾರ ಮುಸ್ಪ ಧರ್ಮಾದಿಗಳನ್ನು ಪೆಟ್ಟು ತುಳಿದು ಸದ್ಧರ್ಮಸ್ಥಾಪನಾರ್ಥವಾಗಿ ಶಿಕ್ಷಾರಕ್ಷೆಗಳನ್ನು ಮಾಡುವ ನ್ಯಾಯಮಂದಿರಗಳಾಗಿಯೂ ಸ್ವಮತೀಯರಿಗೆ ಸದ್ಭೋಧೆಯನ್ನಿತ್ತು ಸುನೀತಿಶಿಕ್ಷಣಯಾ ಸಮ್ಯಗ್ಜ್ಞಾನಸಂಪನ್ನರಾಗಿ ಮಾಡುವ ಮಹಾಪಾಠಶಾಲೆಗಳಾಗಿಯೂ ಇರುವಂತೆ ಮಾಡಬೇಕೆಂಬುದೇ ಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾದಿ ಪೂರ್ವಾಚಾರ್ಯರ ಋದ್ಧೇಶವಾಗಿತ್ತೆಂದು ಸ್ಪಷ್ಟವಾಗುತ್ತದೆ. ಭವರೋಗವನ್ನು ಪರಿಹರಿಸುವ ಮಂತ್ರೌಷಧೋಪದೇಶವೆಂಬ ದಿವ್ಯೌಷಧವು ಅವರ ಬಳಿಯಲ್ಲಿರುವುದರಿಂದ, ದೇಹಕ್ಕುಂಟಾದ ರೋಗವನ್ನು ನಿವಾರಿಸುವುದಕ್ಕಾಗಿ ಪ್ರತಿಯೊಂದೂರಲ್ಲಿಯೂ ಆಸ್ಪತ್ರೆಗಳು ಆವಶ್ಯಕಗಳಾಗಿರುವಂತೆ ದೇಹದೊಳಗಣ ಆತ್ಮಕ್ಕೆ ಸಂಭವಿಸಿದ ಭವರೋಗವನ್ನು ನಿವಾರಿಸುವುದಕ್ಕಾಗಿ ವೀರಶೈವರಿರುವ ಪ್ರತಿಯೊಂದೂರುಗಳಲ್ಲಿಯೂ ಗುರುಮಠಗಳು ಅವಶ್ಯಕವಾಗಿರಬೇಕಾಗಿವೆ. ಉತ್ಪತ್ತಿಸ್ಥಿತಿಲಯಕಾರಣರೂ ಅನುಭವಿಗಳೂ ಕರುಣಾಶಾಲಿಗಳೂ ಆದ ವೈದ್ಯರೂ ವೈದ್ಯಶಾಲೆಗಳಲ್ಲಿದ್ದರೆ ಜನಗಳಿಗೆ ಆರೋಗ್ಯವುಂಟಾಗುವಂತೆ, ಗುರುಮಠಗಳಲ್ಲಿ ತತ್ತ್ವವೇತ್ತರಾದ ಶ್ರೋತ್ರಿಯ ಗುರುಗಳಿದ್ದರೆ ಆತ್ಮನು ಭವರೋಗದಿಂದ ನಿಸ್ಸತ್ತುವಾಗುವುದರಲ್ಲಿ ಸಂಶಯವಿಲ್ಲ. ಈ ಸಮಾಜದಲ್ಲಿ ಶೋಭಿಸುತ್ತಿರುವ ಗುರುಗಳು ಇತ್ತೀಚೆಗೆ ತಮ್ಮ ಕರ್ತವ್ಯಕರ್ಮಗಳನ್ನು ಬಿಟ್ಟು ಸಾಮಾನ್ಯ ಮಾನವರಂತೆ ಆಚರಿಸುತ್ತ ಬಂದಿದ್ದರಿಂದ ಧಾರ್ಮಿಕಸ್ಥಿತಿಯು ಶಿಥಿಲವಾಗಲು ಕಾರಣವಾಯಿತು. ಭಕ್ತರಾದರೋ ಜೀವನಾರ್ಥವಾಗಿ ಅನೇಕ ಲೌಕಿಕವ್ಯವಹಾರಗಳಲ್ಲಿ ತೊಡಗಿದ್ದುದರಿಂದ ಸುಳ್ಳು ವೇಸ ಮುಂತಾದ ಕೆಲಸಗಳಲ್ಲಿ ತೊಡಗಿದರೂ ತೊಡಗಬಹುದು. ಇಂಥ ದುಸ್ಸ್ವಭಾವಗಳನ್ನು ತಪ್ಪಿಸಿ ದೇವರಲ್ಲಿ ಪ್ರೀತಿಯು ಹೆಚ್ಚುವಂತೆ ಮಾಡುವುದೇ ಮತಾಧಿಕೃತಿಗಳ ಕರ್ತವ್ಯವು. ಈ ಮತಾಧಿಕಾರಿಗಳು ಧಾರ್ಮಿಕಸೂತ್ರವನ್ನು ಯಾವಾಗಲೂ ತಮ್ಮ ಕೈಯಲ್ಲಿ ಹಿಡಿದಿರುವುದರಿಂದ ಯಾವಾಗಲೂ ಅಂತರಂಗದಲ್ಲಿಯೂ ಬಹಿರಂಗದಲ್ಲಿಯೂ ಧರ್ಮಸ್ವರೂಪ ಪಿಗಳೇ ಆಗಿರಬೇಕು.

ಮತಸ್ಥಲಿನಮುತ್ಪನ್ನಶ್ಚಾಂತಶ್ಚೈವಾಗಮಾರ್ಥವಿತ್ ।
ಆನೂಚಾನಃ ಪ್ರಸನ್ನಾತ್ಮಾ ಶಿವದೀಕ್ಷಾಭಿಷೇಚಿತಃ ॥
ಶಿವಾಗಮಜ್ಞೋ ಮತಿಮಾಂಶ್ಚ ಕ್ಷಮಾಜಾಸರಾಯಣಃ ।
ರುದ್ರಾಕ್ಷಧಾರಣಾಲಾಂ ವಿಭ್ರಾಣಶ್ಚ ಶುಂಡಾಂಕಿತಮಸ್ತಕಃ ॥
ವಿಭುತ್ವದೀಪ್ತಃ ಕುಲಜಶ್ಚಿವಾಚಾರಪರಾಯಣಃ ।
ಭಸ್ಮೋದ್ಧೂಲನನಿಷ್ಣಾತೋ ಧರ್ಮವಿದ್ಭಾಸ್ತ್ರಕೋವಿದಃ ॥
ಮಿತಾಶೀ ಮಿತವಾಕ್ಚಶ್ಚ ಯಮವಾನ್ಗೋಗತಸ್ಕರಃ ।
ಜಿತೇಂದ್ರಿಯೋ ಜಿತಕ್ರೋಧಸ್ತಪಸ್ವೀ ದಯಾಪರಃ ॥
ಸ್ಮರಬುದ್ಧಿಃ ಸಿರಂತಭ ಶಿವಪೂಜಾದಿಕರ್ಮಸು ॥
ಸತ್ಯವಾಗರ್ಜವಯುತಃ ಪ್ರಾಜ್ಞೋ ಮೇಧಾವೀ ನಿಯತಶುಚಿಃ ।
ಲಿಂಗಾಂಗಸ್ಥಲಭೇದಜ್ಞಃ ಷಟ್‌ಸ್ಥಲಜ್ಞಃ ಸತತ್ಪರಃ ।

ಮತಾಧಿಕಾರಿಗಳಾಗುವವರು ಗುರುವಂಶೋತ್ಪನ್ನರಾಗಿಯೂ ವಿದ್ಯಾನೀತಿಸೌಜನ್ಯ ಶಮದಮಾದಿಗುಣಸಂಪತ್ತಿ ಸತ್ಕುಲಪ್ರಸೂತಿ ಮುಂತಾದ ಸನ್ಲಕ್ಷಣಗಳುಳ್ಳವರಾಗಿಯೂ ಇರಬೇಕೆಂದು ಕ್ರಿಯಾಸಾರಾದಿಗ್ರಂಥಗಳು ಗುರುವಿನ ಲಕ್ಷಣವನ್ನು ತೋರಿಸಿರುತ್ತವೆ.

ಶಿಷ್ಯೋತ್ಕರ್ಷಂ ವೀತಕೃಪಮತಂ ಸ್ವಾಚಾರಮುತ್ತಮಂ ।
ಸ್ವಾಶ್ರಯೆ ತ್ವಯಿಯಥಾಪಸ್ಯ ಚಿರಮಾರ್ಚಿತಾನ್ ಪ್ರತೋಷಯಃ॥
ಸಂಚಾರಂ ಕುರುತಸ್ಯರ್ತ್ಯೇಷ್ಯಾದಿಕ್ಯಾಮರಾದಾಶ್ ॥

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಷ್ಟಾವಧಾನ ಮಹಾವಿದ್ವಾನ್ ವೇದ ತಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೊತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾನ್ ವೇ॥ ತರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೮ ನೇ ಅಕ್ಟೋಬರ್ ೧೯೩೫ [ಸಂಚಿಕೆ ೨೩

ಶ್ರೀಕರಭಾಷ್ಯಂ
(ಚತುಸ್ಸೂತ್ರೀ)

ಶ್ರೀಪತಿಪಂಡಿತಾರಾಧ್ಯರು ಕ್ರಿ. ಶ. ೧೧ ನೆಯ ಶತಮಾನದಲ್ಲಿ ಬ್ರಹ್ಮಸೂತ್ರಗಳ ಮೇಲೆ ವೀರಶೈವಮತ ಪರವಾಗಿ ಭಾಷ್ಯವನ್ನು ರಚಿಸಿರುವ ವಿಷಯವು ಜಗತ್ಪ್ರಸಿದ್ಧವೇ ಆದೆ. ಈ ಭಾಷ್ಯವು ಈ ಮೊದಲು ಮದ್ರಾಸ್, ಮೈಸೂರು, ಬೆಂಗಳೂರು ನಗರಗಳಲ್ಲಿ ಮುದ್ರಿತವಾಗಿರುವದು. ಆದರೆ ಮುದ್ರಾಪಕರಿಗೆ ವೀರಶೈವಸಿದ್ಧಾಂತಸ್ವರೂಪವು ಸರಿಯಾಗಿ ತಿಳಿಯದೆ ಇರುವದರಿಂದ ಅವರು ಮುದ್ರಿಸಿದ ಭಾಷ್ಯಗಳು ಅನಂತಾನಂತ ತಪ್ಪುಗಳಿಂದ ಕೂಡಿಹೋಗಿವೆ. ವೀರಶೈವಮತಕ್ಕೆ ಪ್ರಾಣಸ್ವರೂಪವಾಗಿರುವ ಈ ಭಾಷ್ಯವನ್ನು ಅತ್ಯಂತಶುದ್ಧವಾಗಿ ಮುದ್ರಣಮಾಡಿಸಿ ಈ ಮತೀಯರಿಗೆ ಉಪಕಾರವನ್ನು ಮಾಡಬೇಕೆಂದು ಬಹುಜನ ಮತಾಭಿಮಾನಿಗಳು ಪ್ರಾರ್ಥಿಸಿಕೊಂಡ ಮೇರೆಗೆ **ನಾಗನೂರುಬೃಹನ್ಮಠಾಧ್ಯಕ್ಷರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಈ ಭಾಷ್ಯವನ್ನು ಕೂಲಂಕಷವಾಗಿ ಪರಿಶೋಧಿಸಿ ಯಾವ ದೋಷಾದಿಗಳೂ ಇಲ್ಲವಂತೆ ಮುದ್ರಿಸಿದ್ದಾರೆ. ಸದ್ಯಃ ಚತುಸ್ಸೂತ್ರಿಯು ಮುದ್ರಿತವಾಗಿದೆ. ಮುಂದೆ ಕ್ರಮೇಣ ಸಂಪೂರ್ಣಭಾಷ್ಯವು ಮುದ್ರಿಸಲ್ಪಡುವುದು. ಮತಸಿದ್ಧಾಂತವೆಲ್ಲವೂ ಚತುಸ್ಸೂತ್ರಿಯಲ್ಲಿಯೇ ಪ್ರತಿಪಾದಿತವಾಗುವದರಿಂದ ಪ್ರತಿಯೊಂದು ನೈದಿಕಮತದಲ್ಲಿಯೂ ಚತುಸ್ಸೂತ್ರೀಭಾಷ್ಯಾಭ್ಯಾಸನೇ ಮುಖ್ಯವಾಗಿದೆ. ಆದುದರಿಂದಲೇ ಪಂಡಿತರು ಮೊದಲು ಚತುಸ್ಸೂತ್ರೀಭಾಷ್ಯವನ್ನು ಮುದ್ರಿಸಿರುವರು. ಭಾಷ್ಯದಲ್ಲಿ ಉದಾಹೃತವಾಗಿರುವ ಸಮಸ್ತ ವೇದಮಂತ್ರಗಳಿಗೂ ಆಕರವು ಕೊಡಲ್ಪಟ್ಟಿರುವದು. ಭಾಷ್ಯದ ಆದಿಯಲ್ಲಿ ವಿಷಯಾನುಕ್ರಮಣಿಕೆಯು ಮುದ್ರಿಸಲ್ಪಟ್ಟಿರುವದರಿಂದ ವಿಷಯವಿಚಾರಶೀಲರಿಗೆ ಬಹಳ ಅನುಕೂಲವಾಗಿರುವದು. ಈ ಭಾಷ್ಯವು ಮನೋಹರವಾಗಿ ಮುದ್ರಿಸಲ್ಪಟ್ಟಿದ್ದು, ಸುಂದರವಾದ ಬೈಂಡಿನಿಂದ ಕೂಡಿರುವದು. ಪ್ರಾಚೀನ ವೀರಶೈವಮತದ ಯಥಾರ್ಥತತ್ತ್ವವನ್ನು ತಿಳಿಯಲಪೇಕ್ಷೆಯುಳ್ಳವರು ಈ ಭಾಷ್ಯವನ್ನು ಅವಶ್ಯವಾಗಿ ತರಿಸಿಕೊಂಡು ವಿದ್ವಾಂಸರ ಮುಖದಿಂದ ನಿಜತತ್ತ್ವವನ್ನು ತಿಳಿದು ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧ ರೂಪಾಯಿ.**

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ.

ಶ್ರೀಕರಭಾಷ್ಯವನ್ನು ರಚಿಸಿರುವ ಶ್ರೀಪತಿಪಂಡಿತಾರಾಧ್ಯರು ಕ್ರಿ. ಶ. ೧೧ ನೆಯ ಶತಮಾನದಲ್ಲಿದ್ದರೆಂಬ ವಿಷಯವು ಅನೇಕ ಪ್ರಾಚೀನಗ್ರಂಥಗಳಿಂದಲೂ, ತಿಲಾಶಾಸನಾದಿಗಳಿಂದಲೂ ಸಿದ್ಧವಾಮದಾಗಿದೆ. ಹೀಗಿದ್ದರೂ ಬೆಂಗಳೂರು ನಗರನಿವಾಸಿಗಳಾದ ರಾವ್‌ಸಾಹೇಬ ಸಿ. ಹಯವದನರಾಯರೆಂಬವರು ಈ ಭಾಷ್ಯದ ಮೇಲೆ ಇಂಗ್ಲೀಷಿನಲ್ಲಿ ಬರೆದಿರುವ ಇಂಟ್ರೊಡಕ್ಷನ್ನಿನಲ್ಲಿ ಇವರು ೧೪ ನೆಯ ಶತಮಾನದಲ್ಲಿದ್ದರೆಂದು ಬರೆದು ಜಗತ್ತಿನ ಜನರಿಗೆಲ್ಲಾ ಮಹಾ ಭ್ರಮೆಯನ್ನುಂಟುಮಾಡಿದ್ದಾರೆ. ರಾಯರು ಬರೆದಿರುವ ಈ ವಿಧವಾದ ಅಯಥಾರ್ಥಾಭಿಪ್ರಾಯವನ್ನು ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಅನೇಕಾನೇಕಪ್ರಮಾಣಗಳಿಂದ ಆಮೂಲಾಗ್ರವಾಗಿ ಖಂಡಿಸಿ, ವೀರಶೈವಮತಕ್ಕೂ ಶ್ರೀಕರಭಾಷ್ಯಕ್ಕೂ ಅಸಾಧಾರಣವಾದ ಗೌರವವನ್ನುಂಟುಮಾಡಿದ ವಿಷಯವು ಈ ಪುಸ್ತಕದಲ್ಲಿ ಉಕ್ತವಾಗಿದೆ.

ಬೆಲೆ ೪ ಆಣೆ

A BRIEF LIFE-SKETCH OF PANDIT SRI KASHINATHA SHASTRIJI

This Book printed in English contains a brief life sketch of Pandit Sri Kashinatha Shastriji. It shows the very many good and memorable deeds done by Sastriji up till now. **Price per Copy 4 Annas.**

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಜೆಕೋಸ್ಲೋವೇಕಿಯದ ಸ್ಥಿತಿ

ಯೂರೋಪಿನ ಮಹಾಯುದ್ಧವಾದ ನಂತರ ಸ್ವತಂತ್ರವಾದ ಸಣ್ಣ ರಾಷ್ಟ್ರಗಳಲ್ಲೊಂದಾದ ಜೆಕೋಸ್ಲೋವೇಕಿಯದ ಸ್ವಾತಂತ್ರ್ಯದ ರಕ್ಷಣಾಭಾರವನ್ನು ಇಂಗ್ಲೆಂಡ್, ಫ್ರಾನ್ಸ್, ರಷ್ಯ ಮತ್ತು ಮಿತ್ರಮಂಡಲಿಯ ರಾಷ್ಟ್ರಗಳು ವಹಿಸಿದ್ದವು. ಈಗ ಜರ್ಮನಿಯು ಅನುಸರಿಸುತ್ತಿರುವ ರಾಜ್ಯವಿಸ್ತರಣನೀತಿಯಿಂದ ಸೆಳೆಯಲ್ಪಟ್ಟ ಜರ್ಮನರು ಹೆಚ್ಚಾಗಿ ವಾಸಿಸುವ ಸುಡೇಟೆನ್ ಪ್ರಾಂತ್ಯದ ಜರ್ಮ ಪ್ರಜೆಗಳು ಜೆಕ್ ಸರ್ಕಾರದಮೇಲೆ ತಿರುಗಿಬಿದ್ದು ತಮ್ಮನ್ನೂ ತಾವು ವಾಸಿಸುವ ಪ್ರಾಂತ್ಯವನ್ನೂ ಜರ್ಮನ್ ಸರ್ಕಾರಕ್ಕೆ ಒಪ್ಪಿಸಿಬಿಡಬೇಕೆಂದು ಕೇಳಿದ್ದಲ್ಲದೆ ತಮ್ಮ ಸಹಾಯಕ್ಕೆ ಜರ್ಮನ್ ಸರ್ವಾಧಿಕಾರಿ ಹೆರ್ ಹಿಟ್ಲರರು ಬರುವಂತೆ ಪ್ರಾರ್ಥಿಸಿದರು. ಆತನು ಅದರಂತೆ ಜೆಕ್ ಸರ್ಕಾರದವರು ಆ ಪ್ರಾಂತ್ಯಗಳನ್ನು ತನ್ನ ಅಧೀನ ಮಾಡದಿದ್ದರೆ ಯುದ್ಧ ಮಾಡಿ ಅವುಗಳನ್ನು ವಶಪಡಿಸಿಕೊಳ್ಳುವುದಾಗಿ ಪ್ರಸಿದ್ಧಪಡಿಸಿದನು. ಈ ಘರ್ಷಣ ಉಂಟಾದರೆ ಯೂರೊಪಿನಲ್ಲಿ ಮತ್ತೊಂದು ಮಹಾಯುದ್ಧವೇ ಪ್ರಾಪ್ತವಾಗುವುದೆಂಬ ಭೀತಿಯಿಂದ ಎಲ್ಲರೂ ತಳಮಳಿಸತೊಡಗಿದರು. ಈ ವಿಜ್ಞಾನಯುಗದಲ್ಲಿ ಯುದ್ಧದಿಂದಾಗಬಹುದಾದ ಭಯಂಕರ ಪರಿಣಾಮವನ್ನಾಲೋಚಿಸಿ ಬ್ರಿಟಿಷ್ ಮತ್ತು ಫ್ರೆಂಚ್ ಸರ್ಕಾರದವರು ಸಂಧಿಗಾಗಿ ಪ್ರಯತ್ನಿಸತೊಡಗಿದರು. ರಷ್ಯದವರು ಮಾತ್ರ ಯುದ್ಧವಾದರೆ ತಾವು ಸಹಾಯಕ್ಕೆ ಬರುವುದಾಗಿ ಜೆಕ್ ಸರ್ಕಾರಕ್ಕೆ ತಿಳಿಸಿದರು. ಜೆಕ್ ಸರ್ಕಾರದವರು ರಷ್ಯದವರೊಬ್ಬರ ಸಹಾಯಕ್ಕೆಂತಲೂ ಫ್ರೆಂಚ್ ಮತ್ತು ಬ್ರಿಟಿಷ್ ಸರ್ಕಾರದವರ ಇಷ್ಟದಂತೆ ನಡೆಯಲು ಒಪ್ಪಿದರು. ಅದರಂತೆ ಬ್ರಿಟಿಷ್ ಅಮಾತ್ಯರಾದ ಮಿ॥ ನವಿಲೆ ಛೇಂಬರ್‌ಲೇ ರವರು ಎರಡುಬಾರಿ ಜರ್ಮನಿಗೆ ಹೋಗಿ ಹಿಟ್ಲರನ ಇಷ್ಟವನ್ನು ತಿಳಿಮ ಅವನ್ನು ತಮ್ಮವರಲ್ಲಿ ಚರ್ಚಿಸಿ ಕಡೆಗೆ ಯುದ್ಧದ ಅನಾಹುತವನ್ನು ಹೇಗಾದರೂ ತಪ್ಪಿಸಲೇಬೇಕೆಂದು, ಇಟಲಿ, ಜರ್ಮನಿ, ಫ್ರಾನ್ಸ್ ಮತ್ತು ಬ್ರಿಟಿಷ್ ಪ್ರತಿನಿಧಿಗಳ ಸಮ್ಮೇಳನವನ್ನು ನಡೆಸಿ, ಕೆಲವು ನಿಬಂಧನೆಗಳ ಕೊಡನೆ ಜರ್ಮನರು ಹೆಚ್ಚಾಗಿ ವಾಸಿಸುವ ಪ್ರದೇಶಗಳನ್ನು ಜರ್ಮನಿಗೆ ಬಿಟ್ಟುಕೊಡುವುದೇ ಒಳ್ಳೆಯದೆಂದೂ ಹಾಗೆ ಮಾಡಿದರೆ ಉಳಿದ ಪ್ರಾಂತ್ಯದ ಸ್ವಾತಂತ್ರ್ಯರಕ್ಷಣೆಗೆ ಮೇಲ್ಕಂಡ ನಾಲ್ಕು ರಾಷ್ಟ್ರದವರೂ ಜವಾಬ್ದಾರಿ ವಹಿಸುವುದಾಗಿಯೂ ಜೆಕ್ ಸರ್ಕಾರಕ್ಕೆ ತಿಳಿಸಿ ಒಪ್ಪಿಸಿದರು. ಇದರಿಂದ ಸದ್ಯಕ್ಕೆ ಪ್ರಾಪ್ತವಾಗಲಿದ್ದ ಮಹಾಯುದ್ಧವು ನಿಲ್ಲಿಸಲ್ಪಟ್ಟಿತು. ಆಗಲೇ ಜರ್ಮನ್ ಸೈನ್ಯಗಳು ತಮಗೆ ಒಪ್ಪಿಸಲ್ಪಡಬೇಕಾದ ಭಾಗಗಳನ್ನು ಆಕ್ರಮಿಸುತ್ತಿವೆ. ಹೆರ್ ಹಿಟ್ಲರೂ ಆ ಪ್ರಾಂತ್ಯದ ಜನಗಳಿಗೆ ಸಂದರ್ಶನವೀಯಲು ಸುಡೆಟನ್ ಪ್ರಾಂತ್ಯಕ್ಕೆ ಪ್ರವೇಶಿಸಿರುತ್ತಾರೆ. ಈ ನಡವಳಿಕೆಗಳಿಂದ ಮನನೊಂದ ಜೆಕ್ ಸರ್ಕಾರದ ಮಂತ್ರಿಮಂಡಲವು ರಾಜೀನಾಮೆ ಇತ್ತಿತು. ಜನರಲ್ ಸಿಡೋವಿಯವರ ಕೈಕೆಳಗೆ ಹೊಸ ಮಂತ್ರಿಮಂಡಲವು ಸ್ಥಾಪಿಸಲ್ಪಡುತ್ತಿದೆ.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ರವರು ಅರ್ಪಣೆ ಕೊಡಿಸಿದ ಭಾಷಣದ ಕೆಲವು ಭಾಗಗಳು.

——

ತಾ॥ 28—9—1938.

೧೯೩೭-೩೮ನೆಯ ಸಾಲಿನ ಕಾಲಸ್ಥಿತಿ.

1937-38ನೆಯ ಸಾಲಿನಲ್ಲಿ ಕಾಲಸ್ಥಿತಿಯು ತುಂಬ ಆನಂದ ತವಾಗಿದ್ದು, ವಿಶೇಷತನಾಗಿ ಮಾರ್ಪಟ್ಟಿತು. ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ನಾಡಿಕೆಯ ಪ್ರಮಾಣಕ್ಕಿಂತಲೂ ಬಹಳ ಹೆಚ್ಚಾಗಿ ಮಳೆಯಾಯಿತು. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹಿಂದೆ ಎಂದೂ ಆಗದಿದ್ದಷ್ಟು ಮಟ್ಟಿಗೆ ಕಳೆದ ಅಕ್ಟೋಬರು ತಿಂಗಳನಲ್ಲಿ ಅತಿವೃಷ್ಟಿಯಾಯಿತು. ಆದರ ಪರಿಣಾಮವಾಗಿ 30 ಕೆರೆಗಳು ಬಗೆಬಗೆಯ ನಷ್ಟಗಳಿಗೆ ಗುರಿಯಾದವು; ಅವುಗಳಲ್ಲಿ ಕೆಲವು ಒಡೆದುಹೋದವು; ಉಳಿದ ಕೆರೆಗಳು ಇತರ ವಿಧಗಳಲ್ಲಿ ನಷ್ಟ ಪಟ್ಟವು. ಎಳಂದೂರಿನಲ್ಲಿ ಆದಿಕರ್ಷಾಟಕರಿಗೂ ಉಪ್ಪಲಿಗರಿಗೂ ಸೇರಿದ 350 ಮನೆಗಳು ಕೊಚ್ಚಿಹೋದವು. ಇತ್ತ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈ ರೀತಿ ಅತಿವೃಷ್ಟಿಯಾದರೆ, ಅತ್ತ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ತಕ್ಕಷ್ಟು ಮಳೆಯೇ ಆಗಲಿಲ್ಲ. ಆದಕಾರಣ ಇತ್ತ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೆರೆಗಳನ್ನು ಮರಸ್ತುಪಡಿಸುವುದಕ್ಕಾಗಿ ವಿಶೇಷ ಏರ್ಪಾಡಿನ ಸ್ಕೀಮುಗಳನ್ನು ಏರ್ಪಡಿಸಬೇಕಾಯಿತು; ಅತ್ತ ಆ ಮೂರು ಡಿಸ್ಟ್ರಿಕ್ಟುಗಳಲ್ಲಿ ಬೆಳೆಗಳು ಅರಿಯಾಗಿ ಆದದ್ದೂ ಮೋದುವೆಕ್ಕಾಗಿ 2,31,059 ರೂಪಾಯಿಗಳು ಕಂದಾಯ ಮಾಫಿಗಳನ್ನು ಕೊಡಬೇಕಾಯಿತು. ಅಷ್ಟೇ ಅಲ್ಲ. ಸುಮಾರು 85,000 ರೂಪಾಯಿಗಳ ಇತರ ಕಂದಾಯ ಮಾಫಿಗಳನ್ನೂ ಕೊಟ್ಟು, ಆ ಸೊತ್ತವನ್ನೂ ಆ ಸೊಬಲಗಿಗೆ ಸೇರಿಸಬೇಕಾಗಬಹುದು. ಕಂದಾಯ ಮಾಫಿಗಳನ್ನು ಕೊಟ್ಟುದರ ಜೊತೆಗೆ ದನಕರುಗಳ ಮೇವಿಗೆ ಅನುಕೂಲಪಡಿಸಿಕೊಡುವುದೂ ಅವಶ್ಯಕತೆಯಾಯಿತು. ಆದುದರಿಂದ, ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಿಗೆ ಸೇರಿದ ಅನೇಕ ಪ್ರದೇಶಗಳಲ್ಲಿಯೂ ಮತ್ತು ಕಡೂರು ಡಿಸ್ಟ್ರಿಕ್ಟು ತಾಲೂಕೆಯ ತಾಲ್ಲೂಕಿನ ಸಾನು ಪ್ರದೇಶಗಳಲ್ಲಿ ಯೂ ದನಕರುಗಳು ಮುನ್ನಾ ಜಂಗಲುಗಳಲ್ಲಿ ಉಚಿತವಾಗಿ ಮೇಯಲುಬಿಡುವುದು ಅಗತ್ಯವಾಯಿತು. 1938-39ನೆಯ ಸಾಲುಮಾತ್ರ ಆದರ ಹಿಂದಿನ ಸಾಲಿನಲ್ಲಿದ್ದುದಕ್ಕಿಂತ ಹೆಚ್ಚು ಆನುಕೂಲವಾದ ಪರಿಸ್ಥಿತಿಯಲ್ಲಿ ತ್ಪಾರಂಭವಾಗಿವೆಯೆಂದು ತಿಳಿಸಲು ಪರ್ಸಿಸುವೆನು ಸ್ವಲ್ಪ ಹೆಚ್ಚುಕಡಮೆ ಸಂಸ್ಥಾನದ ಸಮಸ್ತ ಭಾಗಗಳಲ್ಲಿಯೂ ಸಮೃದ್ಧವಾಗಿ ಮಳೆಯಾಯಿತು. ಈಗ್ಗೆ ಹಲವು ವರ್ಷಗಳಿಂದಲೂ ತುಂಬಬೆ ಹೋಗಿದ್ದ ಕೆರೆಗಳೆಲ್ಲಿ ನೀರು ಬಂದು ಅವು ಭರ್ತಿಯಾಗಿವೆ.

ಜಮಿನು ಕಂದಾಯ.

ಹಿಂದಿನ ಬಾಕಿಗಳೂ ಸೇರಿ 1937-38ನೆಯ ಸಾಲಿನಲ್ಲಿ ವಸೂಲಾಗಬೇಕಾಗಿದ್ದ ಜಮಿನು ಕಂದಾಯದ ಸೊತ್ತು 1,44,46,.೫೨ ರೂಪಾಯಿಗಳು. 1936-37ನೆಯ ಸಾಲಿನಲ್ಲಿ ಅದೇ ಬಗೆಯ ಸೊತ್ತು 1,51,26,168 ರೂಪಾಯಿಗಳು. 1937-38ನೆಯ ಸಾಲಿನಲ್ಲಿ 2,31,059 ರೂಪಾಯಿಗಳ ಕಂದಾಯ ಮಾಫಿಗಳನ್ನು ಕೊಡಲಾಯಿತು. 1,25,04,848 ರೂಪಾಯಿಗಳು ವಸೂಲಾದವು. 1936-37ನೆಯ ಸಾಲಿನಲ್ಲಿ 1,35,61,431 ರೂಪಾಯಿಗಳು ವಸೂಲಾಗಿದ್ದುವು. ಒಟ್ಟು ವಸೂಲಾಗಬೇಕಾಗಿದ್ದ ಸೊಬಲಗಿನಲ್ಲಿ, ವಸೂಲಾದ ಮತ್ತು ಮಾಫಿ ಬಿಡಲ್ಪಟ್ಟ ಕಂದಾಯದ ಜೊಬಲಗಿನ ಶೇಕಡಾವಾರು, 1937-38 ನೆಯ ಸಾಲಿನಲ್ಲಿ 86-55 ಮತ್ತು 1936-37 ನೆಯ ಸಾಲಿನಲ್ಲಿ 89.65.

1937-38 ನೆಯ ಸಾಲಿನಲ್ಲಿ 23,263 ವರಬಾಸ್ತುಗಳು ಬಂದು, 18,163 ವರಬಾಸ್ತುಗಳು ಫೈಸಲಾದುವು. 1936-37 ನೆಯ ಸಾಲಿನಲ್ಲಿ 22,819 ವರಬಾಸ್ತುಗಳು ಬಂದು, 17,914 ವರಬಾಸ್ತುಗಳು ಫೈಸಲಾಗಿದ್ದುವು.

ಎಕ್ಸೈಜು ಇಲಾಖೆ.

1937-38ನೆಯ ಸಾಲಿನಲ್ಲಿ ಎಕ್ಸೈಜು ಹುಟ್ಟುವಳಿಯು 54,16,573 ರೂಪಾಯಿಗಳು. 1936-37ನೆಯ ಸಾಲಿನಲ್ಲಿ ಅದು 53,45,791 ರೂಪಾಯಿಗಳು. 1937-38ನೆಯ ಸಾಲಿನಲ್ಲಿ ಎಕ್ಸೈಜು ಹುಟ್ಟುವಳಿಯು ನೆಟ್ಟಿದುದರ ಜೊತೆಗೆ ಸಾರಾಯಿ ಕಳ್ಳಭಟ್ಟಿಯ ಆಪರಾಧದ ಮೊಕದ್ದಮೆಗಳ ಸಂಖ್ಯೆಯು 454 ರಿಂದ 724 ಕ್ಕೆ ನರಿತು. ಈ ಮೊಕದ್ದಮೆಗಳ ಸಂಖ್ಯೆಯು ಇಷ್ಟು ಹೆಚ್ಚಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಈಗ ಸುಂಕವು ಸಂದಾಯ ಸಾಗುವ ಸಾರಾಯಿ ಪರಿಮಾಣಕ್ಕಿಂತ ಹೆಚ್ಚಾಗಿ ಸಾರಾಯಿ ಸೇವನೆಯು ನಡೆಯುತ್ತಿರುವುದು ಅದರಿಂದ ವ್ಯಕ್ತವಾಗುತ್ತದೆ. ಏಕೆಂದರೆ ಸುಂಕವನ್ನು ಕೊಟ್ಟು ನ್ಯಾಯವಾಗಿ ಪಡೆದ ಸಾರಾಯಿ ಜೊತೆಗೆ, ಕಳ್ಳತನದಿಂದ ಭಟ್ಟಿ ಇಳಿಸಿದ ಸಾರಾಯಿ ಬಹಳವಾಗಿ ಉಪಯೋಗದಲ್ಲಿದ್ದಿದೆ ಅಂಕಿಯ ಇದರಿಂದ ಗೊತ್ತಾಗುತ್ತದೆ. ಗ್ರಾಮಾಭಿವೃದ್ಧಿ ಕಾರ್ಯಗಳನ್ನೂ ಗ್ರಾಮಾಭಿವೃದ್ಧಿ ರಕ್ಷಣೆಯ ಕಾರ್ಯಗಳನ್ನೂ ನಿರವೇರಿಸುವುದಕ್ಕಾಗಿ ಈಗ ಕೊಪ್ಪಲೆ ಪಟಿಯಲ್ಲಿ "ರೂರಲ್ ವೆಲ್‌ಫೇರ್ ಆಂಡ್ ಹೆಲ್ತ್ ಸೆಂಟರ್" ಸಂಸ್ಥೆಯು ಏರ್ಪಟ್ಟಿದೆಯಷ್ಟೆ. ಆದರ ಆಡಳಿತಕ್ಕೆ ಸೇರಿರುವ ಪ್ರದೇಶದಲ್ಲಿ ಪರೀಕ್ಷಾರ್ಥವಾಗಿ ಮದ್ಯಪಾನ ನಿರೋಧದ ವಿಚಾರಣೆಯು ಜಾರಿ ಆಗಿದೆ. ಆದರ ಪರಿಣಾಮವು ಹೇಗಾಗುವುದೆಂಬ ಅಂಕಿಯನ್ನು ಹಾಗೂಳತೆಯಿಂದ ಪರೀಕ್ಷಿಸಿ ನೋಡುತ್ತಿದ್ದೇನೆ.

ಚಿಂಕ ಕಡ್ಡಿಗಳ ಮೇಲೆ ನಸೂಲಾನ "ಎಕ್ಸೈಜು" ಸುಂಕದ ಹುಟ್ಟುವಳಿಯಲ್ಲಿ ಮೈಸೂರು ಸರ್ಕಾರಕ್ಕೆ ಸಲ್ಲಬೇಕಾದ ಭಾಗದ ಸೊತ್ತಾಗಿ 3,18,191 ರೂಪಾಯಿಗಳು ಇಂದಿನ ಸಂಖ್ಯೆರದಿಂದ ಬಂದುವು.

ಸ್ಟಾಂಪುಗಳ ಇಲಾಖೆ.

1937-38 ನೆಯ ಸಾಲಿನಲ್ಲಿ ಸ್ಟಾಂಪು ಇಲಾಖೆಯ ವರಮಾನವು 20,22,000 ರೂಪಾಯಿಗಳು. 1936-37 ನೆಯ ಸಾಲಿನಲ್ಲಿ ಸ್ಟಾಂಪು ಇಲಾಖೆಯ ವರಮಾನವು 21 ಲಕ್ಷ ರೂಪಾಯಿಗಳು. 1937-38 ನೆಯ ಸಾಲಿನಲ್ಲಿ ಹಿಂದಿಗೆ ವರಮಾನವು ಕಡಿಮೆಯಾಗುವುದಕ್ಕೆ ಸಿವಿಲ್ ಕೋರ್ಟುಗಳಲ್ಲಿ ದಾವಿಲಾದ ದಾವೆಗಳ ಸಂಖ್ಯೆಯು ಕಡಮೆ ಬಿದ್ದುದೂ ಮತ್ತು ನ್ಯಸಾಯಾಧಿಕರ ಸಹಾಯಾರ್ಥವಾದ ಆಕ್ಟ್‌ನು ಜಾರಿಗೆ ತಂದುದೂ ಕಾರಣ

ಸರ್ಕಾರದಿಂದ ಕೊಡತಕ್ಕ ಸಹಾಯನ್ಯೆನ್ಯಗಳ ("ಸ್ಪೈಸೆಡು" ಗಳ) ಸಂಬಂಧವಾಗಿ ನಡೆಯುವ ಒಪ್ಪಂದ ಕರಾರುಗಳ ಮೇಲಿನ ಸ್ಟಾಂಪುಶುಲ್ಕವನ್ನು ಮಾಫಿ ಬಿಡಲಾಯಿತು.

ಕೋರ್ಟು ಫೀ ಸ್ಟಾಂಪುಗಳನ್ನು ಕಡಮೆಯಾಗಿ ತೆಗೆಸುಕೊಳ್ಳುವ ಕಾರಣದಿಂದ ಹುಟ್ಟುವಳಿಯು ಕಡಮೆಯಾಗುವುದನ್ನು ತಪ್ಪಿಸುವ ಉದ್ದೇಶದಿಂದ ಎರವಿನೆಯ ದರೆಯಂ ನುಬ್ಬೀಕರಿಗೆ ಸಮಾನವಾದ ಸ್ಟಾನಗಾರವನ್ನು ಒಬ್ಬರು ಕೋರ್ಟು ಫೀ ಇನ್‌ಸ್ಪೆಕ್ಟ್ರ ರವರನ್ನು ನೇಮಕ ಮಾಡಲಾಯಿತು. ಹಾಗಾಯಿಯಾಗಿ ಮೂರು ತಿಂಗಳುಗಳ ಅವಧಿಗೆ ಅವರನ್ನು ನೇಮಕಮಾಡಲಾಗಿದ್ದು ತು ಆಮೇಲೆ ಅದನ್ನು ಒಂದು ವರ್ಷಕಾಲವಧಿಗೆ ಹೆಚ್ಚಿಸಲಾಯಿತು. ಹಾಗೆ ನೇಮಕವಾದ ಕೋರ್ಟು ಫೀ ಇನ್‌ಸ್ಪೆಕ್ಟರವರು ನಡೆಯಿಸಿದ ತಪಾಸಿಕೆಯಿಂದ, ತಕ್ಕಷ್ಟು ಕೋರ್ಟು ಫೀ ಸ್ಟಾಂಪು ಕೊಡದೆ ಕಡಮೆ ಯಾಗಿ ಕೊಟ್ಟಿದ್ದ ಹಲವು ಸಂದರ್ಭಗಳು ಹೊರಬಿದ್ದಿವೆ.

ವರಮಾನದ ತೆರಿಗೆ ಇಲಾಖೆ.

1937-38 ನೆಯ ಸಾಲಿನಲ್ಲಿ ವರಮಾನದ ತೆರಿಗೆಯ ಜಾಬಿನಲ್ಲಿ ಹಿಂದಿನ ಬಾಕಿಗಳೂ ಮತ್ತು ಹಣಪಾವತಿಕಾಲವೆಲ್ಲಿ ವರಮಾನದ ತೆರಿಗೆ ವಜಾ ಹಿಡಿದುಕೊಳ್ಳತಕ್ಕ ಸೊತ್ತಗಳೂ ಸೇರಿ ವಸೂಲಾಗ ಬೇಕಾಗಿದ್ದ ಒಟ್ಟು ಸೊತ್ತು 22,35,262 ರೂಪಾಯಿಗಳು ಮತ್ತು "ಸೂಪರ್‌ಟ್ಯಾಕ್ಸ್" ತೆರಿಗೆ ಸೊತ್ತಿನ 10,74,1೯೨ ರೂಪಾಯಿಗಳು. 1936-37 ನೆಯ ಸಾಲಿನಲ್ಲಿ ಹೀಗೆ ವಸೂಲು ಆಗಬೇಕಾಗಿದ್ದ ವರಮಾನದ ತೆರಿಗೆ ಸೊಬಲಗು 20,86,618 ರೂಪಾಯಿಗಳು ಮತ್ತು "ಸೂಪರ್‌ಟ್ಯಾಕ್ಸ್" ತೆರಿಗೆ ಸೊಬಲಗು 9,15,೫೦1 ರೂಪಾಯಿಗಳು. 1937-38 ನೆಯ ಸಾಲಿನಲ್ಲಿ 21,98,939 ರೂಪಾಯಿಗಳ ವರಮಾನದ ತೆರಿಗೆ ಸೊಬಲಗೂ, 10,23,886 ರೂಪಾಯಿಗಳ "ಸೂಪರ್‌ಟ್ಯಾಕ್ಸ್" ತೆರಿಗೆ ಸೊಬಲಗೂ ವಸೂಲಾದುವು.

ರೈಲ್ವೆ ಇಲಾಖೆ.

1938 ನೆಯ ಇಸವಿ ಜನವರಿ 1 ನೆಯ ತಾರೀಖಿನಿಂದ ಬೆಂಗಳೂರು-ಹರಿಹರ ರೈಲ್ವೇ ಲೈನಿನ ಮತ್ತು ಬೆಂಗಳೂರು-ಹಿಂದೂಪುರ ರೈಲ್ವೇ ಲೈನಿನ ಆಡಳಿತವನ್ನು ಮದರಾಸು ಮತ್ತು ಸದರ್ನ್ ಮರಾಟಾ ರೈಲ್ವೇ ಕಂಪನಿಯವರಿಂದ ಸರ್ಕಾರಿ ಆಜ್ಞೆತಕ್ಕೆ ವಹಿಸಿ ಕೊಂಡುದು, ಈ ಸಲ ರೈಲ್ವೇ ಆಡಳಿತದಲ್ಲಿ ನಡೆದ ಮುಖ್ಯವಾದ ಘಟನೆ. ಬೆಂಗಳೂರು ಸಿಟಿ ರೈಲ್ವೇ ಸ್ಟೇಷನ್ನಿನ ಆಡಳಿತವನ್ನು ಸಹ ಅದೇ ತಾರೀಖಿನಿಂದ ಸರ್ಕಾರಕ್ಕೆ ವಹಿಸಿಕೊಳ್ಳಲಾಯಿತು. ಕಂಪನಿಯಿಂದ ವಹಿಸಿಕೊಂಡ ರೈಲ್ವೇ ಗಾಡಿಗಳು ಮುಂತಾದುವು ಗಳಿಗಾಗಿ ಸುಮಾರು 12 ಲಕ್ಷ ರೂಪಾಯಿಗಳನ್ನು ಕೊಡಲಾಯಿತು.

ಈಗ ಸರ್ಕಾರಿ ಆಡಳಿತಕ್ಕೂ ಡಿಸ್ಟ್ರಿಕ್ಟು ಬೋರ್ಡುಗಳ ಆಡಳಿತಕ್ಕೂ ಸೇರಿ ಸಂಸ್ಥಾನದಲ್ಲಿರುವ ಒಟ್ಟು 748 19 ಮೈಲಿಗಳ ಹೊರತು ರೈಲ್ವೇ ಲೈನುಗಳಲ್ಲಿ ಪ್ರಯಾಣಿಕರ ಸಾಕರ್ಯಕ್ಕಾಗಿ ರೈಲುಗಳ ಸಂಚಾರವನ್ನು ನಡೆಯುತ್ತಿದೆ. ಇದರಲ್ಲಿ ಕೋಲಾರ ಗೋಲ್ಡ್ ಫೀಲ್ಡಿನ 9 88 ಮೈಲಿಗಳ ಹೊರತ "ಬ್ರಾಡ್‌ಗೇಜ್" ರೈಲ್ವೇ ಮಾರ್ಗವೂ ಸೇರಿದೆ; ಉಳಿದ ಆಡಳಿತವು ತಂಗಲೂ ಮದರಾಸು ಮತ್ತು ಸದರ್ನ್ ಮರಾಟಾ ರೈಲ್ವೇ ಕಂಪನಿಯವರಿಗೇ ಸೇರಿದೆ. ಆನಂದಪುರದಿಂದ ಸಾಗರವರೆಗಿನ "ವಿಂಟಾರ್‌ಗೇಜು" ರೈಲ್ವೇ ಮಾರ್ಗವಲ್ಲಿ 1938 ನೆಯ ಇಸವಿ ಮಾರ್ಚಿ 11 ನೆಯ ತಾರೀಖಿನಿಂದ ಪ್ರಯಾಣಿಕರ ಸಂಚಾರಕ್ಕಾಗಿ ರೈಲುಗಳನ್ನು ಬಿಡ ಲಾಗುತ್ತಿದೆ. ಸಾಗರದಿಂದ ಮುಂದಕ್ಕೆ ಒಂಬತ್ತು ಮೈಲಿಗಳ ದೂರವಿದ್ದರಿವ ತಾಳಗುಪ್ಪೆಯವರೆಗೂ ರೈಲ್ವೇ ಮಾರ್ಗವನ್ನೇ ರ್ಪಡಿಸುವುದನ್ನು ಸರ್ಕಾರವವರು ಮಂಜೂರು ಮಾಡಿದ್ದಾರೆ.

ರೈಲ್ವೇ ಇಲಾಖೆಯಲ್ಲಿ ಕೆಲಸ ನಡೆಯಿಸುವುದಕ್ಕಾಗಿ ಇಳಿವರಿ ಕಿಮ್ಮತ್ತು ಭರ್ತಿ ಖರ್ಚಿಗೆ (ಡಿಪ್ರಿಸಿಯೇಷನ್ ಫಂಡಿಗೆ) ಕೊಟ್ಟ ಹಣವೂ ಸೇರಿ ಒಟ್ಟು 53 11 ಲಕ್ಷ ರೂಪಾಯಿಗಳು 1937-38 ನೆಯ ಸಾಲಿನಲ್ಲಿ ಖರ್ಚಾಯಿತು. 1936-37 ನೆಯ ಸಾಲಿನಲ್ಲಿ ಈ ಖರ್ಚು 23.44 ಲಕ್ಷ ರೂಪಾಯಿಗಳು. 1937-38 ನೆಯ ಸಾಲಿನಲ್ಲಿ ನಿವ್ವಳ ಹುಟ್ಟುವಳಿಯು 18.86 ಲಕ್ಷ ರೂಪಾಯಿಗಳು. 1936-37 ನೆಯ ಸಾಲಿನಲ್ಲಿ ನಿವ್ವಳ ಹುಟ್ಟುವಳಿಯು 18.41 ಲಕ್ಷ ರೂಪಾಯಿಗಳು.

ರೈಲು ಚಾರ್ಜನ್ನು ತಗ್ಗಿಸಿದುದರಿಂದ, ಮೊದಲಿಗಿಂತ ಬಹಳ ಜನರು ರೈಲುಗಳಲ್ಲಿ ಪ್ರಯಾಣ ಮಾಡುವಂತಾಗಿ ಒಟ್ಟಿನಲ್ಲಿ ರೈಲ್ವೇ ಹುಟ್ಟುವಳಿಯು ಹೆಚ್ಚಿತು.

ಇದರಿಂದ ಬಳ್ಳಾರಿಗೆ ರೈಲ್ವೆ ಮಾರ್ಗವನ್ನೇರ್ಪಡಿಸಿದರೆ ಸಿವರೇ ಹೋಗುವುದು ಎಷ್ಟುಮಟ್ಟಿಗೆ ಸಹಿತೆಂಬ "ಟ್ರಾಫಿಕ್ ಸರ್ವೆ" ಯೂ, ಮತ್ತು ರೈಲ್ವೆಮಾರ್ಗವನ್ನು ಹೇಗೆ ಮತ್ತು ಯಾವ ಮಾರ್ಗವಾಗಿ ವಿಸ್ತರಿಸುವುದು ಉತ್ತಮವೆಂಬ "ಇಂಜಿನಿಯರಿಂಗ್ ಸರ್ವೆ" ಯೂ ಮತ್ತೆ ಹೊಸದಾಗಿ ನಡೆಯುತ್ತಿವೆ.

ವಿದ್ಯುಚ್ಛಕ್ತಿ ಇಲಾಖೆ.

1937-38 ನೆಯ ಸಾಲಿನಲ್ಲಿ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಇಸ್ತೂ ಲಾಗಬೇಕಾಗಿದ್ದ ಒಟ್ಟು ಸೊತ್ತು 67,29,459 ರೂಪಾಯಿಗಳು. 1936-37 ನೆಯ ಸಾಲಿನಲ್ಲಿ ವಸೂಲಾಗಬೇಕಾಗಿದ್ದ ಸೊತ್ತು 62, 93,279 ರೂಪಾಯಿಗಳು. 1937-38 ನೆಯ ಸಾಲಿನಲ್ಲಿ 65,53,535 ರೂಪಾಯಿಗಳು ವಸೂಲಾದುವು 1936-37 ನೆಯ ಸಾಲಿನಲ್ಲಿ 61, 59,620 ರೂಪಾಯಿಗಳು ವಸೂಲಾದುವು. 1937-38 ನೆಯ ಸಾಲಿನಲ್ಲಿ ಹೀಗೆ ಸೊಬಲಗು ಹೆಚ್ಚಾಗುವುದಕ್ಕೆ ಮುಖ್ಯ ಕಾರಣಗಳು ಇವು: ಮುಖ್ಯವಾಗಿ ಕೋಲಾರ ಚಿನ್ನದ ಗಣಿಗಳಿಂದಲೂ ಇತರ ಧಾರಿಣಿ ಕೈಗಾರಿಕೆ ಕಾರ್ಖಾನೆಗಳಿಂದಲೂ ಹೆಚ್ಚು ಹುಟ್ಟು ವಳಿಯು ಬಂದುದು. ಆಲ್ಲದೆ ಅಲ್ಪ ಸ್ವಲ್ಪ ವಿದ್ಯುಚ್ಛಕ್ತಿಯನ್ನು ಪ ಯೋಗಿಸಿಕೊಳ್ಳತಕ್ಕವರ ಸಂಖ್ಯೆಯು ಹೆಚ್ಚಿದುದು. ಇನೆರಡು ಕಾರಣಗಳಿಂದ ಹುಟ್ಟುವಳಿಯು ಹೆಚ್ಚಿತು.

ಈ ಇಲಾಖೆಯಲ್ಲಿ ಕೆಲಸ ನಡೆಯಿಸಿದ ವೆಚ್ಚವು 1937-38 ನೆಯ ಸಾಲಿನಲ್ಲಿ 13,89,543 ರೂಪಾಯಿಗಳು. ಈ ಸೊತ್ತಲ್ಲಿ ಇಳಿವರಿ ಕಿಮ್ಮತ್ತು ಭರ್ತಿ ನಿಧಿಗೆ (ಡಿಪ್ರಿಸಿಯೇಷನ್ ಫಂಡಿಗೆ) ಕೊಟ್ಟ 7,82,140 ರೂಪಾಯಿಗಳು ಸೇರಿಲ್ಲ. 1936-37 ನೆಯ ಸಾಲಿನಲ್ಲಿ ಕೆಲಸ ನಡೆಯಿಸಿದ ವೆಚ್ಚವು, 12,74,181 ರೂಪಾಯಿ ಗಳು. ಹೊಸದಾಗಿ ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸಿದ ಟವನು ಗಳಲ್ಲಿ ಯಂತ್ರಗಳನ್ನು ಸ್ಥಾಪಿಸಿ ಕೆಲಸ ನಡೆಯಿಸಬೇಕಾದುದಕ್ಕಾಗಿ ಹಣವು ವೆಚ್ಚವಾದುದೇ, ಹೀಗೆ ವೆಚ್ಚವು ಹೆಚ್ಚಿದುದಕ್ಕೆ ಕಾರಣ.

ವಿದ್ಯುಚ್ಛಕ್ತಿಯ ಇಲಾಖೆಯ ನಿವ್ವಳ ಹುಟ್ಟುವಳಿಯು, 1936-37 ನೆಯ ಸಾಲಿನಲ್ಲಿ 42,85,439 ರೂಪಾಯಿಗಳಾಗಿದ್ದು ದು 1937-38 ನೆಯ ಸಾಲಿನಲ್ಲಿ 44,81,852 ರೂಪಾಯಿಗಳಿಗೆ ಹೆಚ್ಚಿತು. ಎಂದರೆ, 1937-38 ನೆಯ ಸಾಲಿನಲ್ಲಿ 1,96,413 ರೂಪಾಯಿಗಳ ಹೆಚ್ಚು ಹುಟ್ಟುವಳಿಯು ಬಂದಹಾಗಾಯಿತು. ಈ ಇಲಾಖೆಯಲ್ಲಿ ನೊದಲಿನಿಂದಲೂ ವೆಚ್ಚವಾಗಿದ್ದ ಬಂಡವಾಳದ ಮೊತ್ತವು (1936-37 ನೆಯ ಸಾಲಿನ ಆಖೈರಿನ ವೇಳೆಗೆ ವೆಚ್ಚವಾಗಿದ್ದ 3,23,89,348 ರೂಪಾಯಿಗಳೂ ಮತ್ತು 1937-38 ನೆಯ ಸಾಲಿಗೆ ಮಂಜೂರಾಗಿದ್ದ ಒಂದಷ್ಟಾಳದ ವೆಚ್ಚವಾದ 20,77,649 ರೂಪಾಯಿಗಳಲ್ಲಿ ಅರ್ಧ ಭಾಗವೂ ಸೇರಿ) 1937-38 ನೆಯ ಸಾಲಿನಲ್ಲಿ 3,34,28,173 ರೂಪಾ ಯಿಗಳು. ಆವರೆ ಮೇಲೆ ಶೇಕಡ 13.40 ರಂತೆ 1937-38 ನೆಯ ಸಾಲಿನಲ್ಲಿ ನಿವ್ವಳ ಹುಟ್ಟುವಳಿಯು ಬಂದಿತು. 1936-37 ನೆಯ ಸಾಲಿನಲ್ಲಿ ಶೇಕಡ 13.46 ರಂತೆ ನಿವ್ವಳ ಹುಟ್ಟುವಳಿಯು ಬಂದಿದ್ದಿತು. 1937-38 ನೆಯ ಸಾಲಿನಲ್ಲಿ ವೆಚ್ಚವಾದ ಮೂಲಧನದಲ್ಲಿ ಸಿಂಹಾಪುರದ ಬಳಿಯ ವಿದ್ಯುಚ್ಛಕ್ತಿ ಉತ್ಪತ್ತಿಯ ಏರ್ಪಾಡಿ ಗಾಗಿಯೂ ಮತ್ತು ಗೇರುಸೊಪ್ಪೆಜಲಪಾತದ ಬಳಿಯ ವಿದ್ಯುಚ್ಛಕ್ತಿ ಉತ್ಪತ್ತಿಯ ಏರ್ಪಾಡಿಗಾಗಿಯೂ, ವೆಚ್ಚವಾದ 8,19,756 ರೂಪಾ ಯಿಗಳ ಬಾಬ್ತಿನಲ್ಲಿ ವೆಚ್ಚವೂ ಸೇರಿರುತ್ತದೆ. ಈ ಕಾಮಗಾರಿ ಗಳು ಪೂರ್ತಿಯಾಗುವವರೆಗೂ ಆವುಗಳಿಂದ ಹುಟ್ಟುವಳಿಯೇನೂ ಬರು ವುದಿಲ್ಲವಾದ್ದರಿಂದ, ಈ ಸೊತ್ತಿನಲ್ಲಿ 1937-38 ನೆಯ ಸಾಲಿ ನಲ್ಲಿ ಯಾವ ಪ್ರತಿಫಲವೂ ಬರುವಂತಿಲ್ಲ.

1937-38 ನೆಯ ಸಾಲಿನಲ್ಲಿ ಒಟ್ಟು 23,85,82,030 ಬಿ. ಓ. ಟಿ. ಯೂನಿಟ್ಟುಗಳ ವಿದ್ಯುಚ್ಛಕ್ತಿಯು ಉತ್ಪತ್ತಿಯಾ ಯಿತು. 1936-37 ನೆಯ ಸಾಲಿನಲ್ಲಿ ಒಟ್ಟು 22,51,80,730 ಬಿ ಓ. ಟಿ ಯೂನಿಟ್ಟುಗಳ ವಿದ್ಯುಚ್ಛಕ್ತಿಯು ಉತ್ಪತ್ತಿಯಾಗಿ ದ್ದಿತು. ಆದಕಾರಣ, 1937-38 ನೆಯ ಸಾಲಿನಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿಯು ಶೇಕಡ 5.95 ರಂತೆ ಹೆಚ್ಚಿದ ಹಾಗಾಯಿತು.

ಕೋಲಾರ ಚಿನ್ನ ಮಗನೆ ಕಂಪನಿಗಳನ್ನು ಬಿಟ್ಟು ಇತರ ಸ್ಥಳಗಳಿ ಲ್ಲಿರುವಂಥಾ ಸೇರಿ, ಯಂತ್ರ ಚಾಲನಕ್ಕಾಗಿ ಏರ್ಪಟ್ಟಿದ್ದ ವಿದ್ಯುಚ್ಛಕ್ತಿಯ ಯಂತ್ರಸ್ಥಾಪನೆಗಳ ಸಂಖ್ಯೆಯು 1936-37 ನೆಯ ಸಾಲಿನ ಕೊನೆಯಲ್ಲಿ 31,456 ಆಗಿದ್ದುದು 1937-38 ನೆಯ ಸಾಲಿನ ಕೊನೆಯಲ್ಲಿ 34,378 ಕ್ಕೆ ಏರಿತು. ಯಂತ್ರಚಾಲನಕ್ಕಾಗಿ ಏರ್ಪಟ್ಟಿದ್ದ ವಿದ್ಯುಚ್ಛಕ್ತಿ ಯಂತ್ರಸ್ಥಾಪನೆಗಳ ಸಂಖ್ಯೆಯು 243 ಹೆಚ್ಚಿತು. ದೀಪಗಳಿಗಾಗಿ ಏರ್ಪಟ್ಟಿದ್ದ ಯಂತ್ರಸ್ಥಾಪನೆಗಳ ಸಂ ಖ್ಯೆಯು 3,022 ಹೆಚ್ಚಿತು. ಎಂದರೆ, ಒಟ್ಟು ಶೇಕಡ 9.35 ರಂತೆ ಹೆಚ್ಚಿನಂತಾಯಿತು. ಬೀದಿಗಳ ದೀಪಗಳ ಸಂಖ್ಯೆಯು 14,775 ರಿಂದ 15,375 ಕ್ಕೆ ಹೆಚ್ಚಿತು. ಜಾನುವಾರು ಸಂಬಂಧದ ಬೆಳಕಿನ ಯಂತ್ರಸ್ಥಾಪನೆಗಳ ಒಟ್ಟು ಸಂಖ್ಯೆಯು 1936-37 ನೆಯ ಸಾಲಿನಲ್ಲಿ 251 ಇದ್ದುದು, 1937-38 ನೆಯ ಸಾಲಿನಲ್ಲಿ 297 ಕ್ಕೆ ಹೆಚ್ಚಿತು.

ಹೊಸದಾಗಿ ವಿಸ್ತರಿಸುವ "ಆಟೊಮ್ಯಾಟಿಕ್ ಟೆಲಿಫೋನ್" ಬಾಬಿನಿಂದ ಬಂದ ಹುಟ್ಟುವಳಿಯು 1936-37 ನೆಯ ಸಾಲಿನಲ್

ಹಾಲಿಗೆ ಸೇಕಡ 3.13 ರಂತೆಯೂ, 1937-38 ನೆಯ ಸಾಲಿಗೆ ಸೇಕಡ 5.86 ರಂತೆಯೂ ನಿವ್ವಳ ವರಮಾನವು ಬಂದ ಹಾಗಾಯಿತು.

ಬೆಂಗಳೂರಿನಲ್ಲಿ ಈ ಹೊಸ ಟೆಲಿಫೋನ್ ಏರ್ಪಾಡಿನಮೇಲೆಗೆ ಜನರಿಗೆ ಭಾಷಣ ಸಾಕಶ್ಯವನ್ನು 1937 ನೆಯ ಇಸವಿ ಸೆಪ್ಟೆಂಬರ್ ೧ನೆಯ ತಾರೀಖಿನಿಂದ ಒದಗಿಸಲಾಯಿತು. ಒಟ್ಟು 500 ಕಡೆಗಳಲ್ಲಿ ಟೆಲಿಫೋನ್ ಭಾಷಣಯಂತ್ರ ಸಾಧನಗಳನ್ನು ವರ್ಪಡಿಸಲು ಸಾಧ್ಯವಿದ್ದು, ಈಗ ಈ ಪರಮಾವಧಿ ಪ್ರಮಾಣದಲ್ಲಿ ಪೂರ್ತಿಯಾಗಿ ಜನರು ಈ ಸೌಕರ್ಯವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇನ್ನೂ ಹೆಚ್ಚು ಜನರು ಈ ಸೌಕರ್ಯವನ್ನು ಅಪೇಕ್ಷಿಸಿದಕಾರಣ, ಮತ್ತೆ 200 ಸ್ಥಳಗಳಲ್ಲಿ "ಟೆಲಿಫೋನ್" ಭಾಷಣ ಸಾಕಶ್ಯ ದೊರೆಯುವಂತೆ ಯಂತ್ರಸಾಧನಗಳನ್ನು ಏರ್ಪಡಿಸುವುದನ್ನು 1938 ನೆಯ ಇಸವಿ ಜೂನ್ ತಿಂಗಳಿನಲ್ಲಿ ಮಂಜೂರುಮಾಡಲಾಯಿತು. 1,500 'ಟೆಲಿಫೋನ್' ಯಂತ್ರಸಾಧನಗಳಿರುವ ಮಟ್ಟಿಗೆ ಈ ಏರ್ಪಾಡನ್ನು ಇನ್ನೂ ಬಡಾವಣೆಗೊಳಿಸುವ ವಿಚಾರವು ಈಗ ಪರ್ಯಾಲೋಚನೆಯಲ್ಲಿದೆ.

ಮೈಸೂರಿನಲ್ಲಿ ಇದೇ ಬಗೆಯ 'ಆಟೊಮ್ಯಾಟಿಕ್ ಟೆಲಿಫೋನ್' ಏರ್ಪಾಡನ್ನು 1937 ನೆಯ ಇಸವಿ ಡಿಸೆಂಬರ್ 1 ನೆಯ ತಾರೀಖಿನಿಂದ ಆಚರಣೆಗೆ ತರಲಾಯಿತು. ಅಲ್ಲಿ ಪರಮಾವಧಿ 300 ಯಂತ್ರಸಾಧನಗಳಿಲು ಅವಕಾಶವನ್ನು ಕಲ್ಪಿಸಲಾಗಿದೆ. 1937-38 ನೆಯ ಸಾಲಿನ ಕೊನೆಯಲ್ಲಿ ಅಲ್ಲಿ ಜನರು ಉಪಯೋಗಿಸುತ್ತಿದ್ದ 'ಟೆಲಿಫೋನ್' ಯಂತ್ರಸಾಧನಗಳ ಒಟ್ಟು ಸಂಖ್ಯೆಯು 221.

ಬೆಂಗಳೂರು-ಕೋಲಾರ ಗೋಲ್ಡ್ ಫೀಲ್ಡ್ "ಟ್ರಂಕ್ ಟೆಲಿಫೋನ್" ಏರ್ಪಾಡಿನ ಮೇರೆಗೆ ಇದೇ 1938 ನೆಯ ಇಸವಿ ಫೆಬ್ರವರಿ ತಿಂಗಳಿನಿಂದ ಜನರಿಗೆ 'ಟೆಲಿಫೋನ್' ಭಾಷಣ ಸಾಕಶ್ಯವು ದೊರೆಯುವಂತೆ ಮಾಡಲಾಗಿದೆ.

ತಿವನಸಮುದ್ರದಲ್ಲಿ ಪರಮಾವಧಿ ಎಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ ಸಾಗಿಸುವುದು, ಯಂತ್ರಗಳು ಅಪಾಯವಿಲ್ಲದೆ ಕೆಲಸಮಾಡುವ ಅವಕಾಶದಲ್ಲಿ ಸಾಧ್ಯವೋ ಆ ಪರಮಾವಧಿ ಪ್ರಮಾಣವೂ ಪೂರ್ತಿಯಾಯಿತು. ಆದಾಗ್ಯೂ, ಇನ್ನೂ ಹೆಚ್ಚು ವಿದ್ಯುಚ್ಛಕ್ತಿಗೆ ಗಿರಾಕಿ ಇರುವುದರಿಂದ ಸಿಂಹಾ ಪುದಲ್ಲಿ 23,000 ಅಶ್ವಶಕ್ತಿಗಳ ವಿದ್ಯುಚ್ಛಕ್ತಿಯ ಉತ್ಪತ್ತಿಗಾಗಿ ಏರ್ಪಾಡೊಂದು 56,10,000 ರೂಪಾಯಿಗಳ ವೆಚ್ಚದಲ್ಲಿ ಮಂಜೂರಾಗಿದೆ. 1937 ನೆಯ ಇಸವಿ ಆಗಸ್ಟ್ ತಿಂಗಳಿನಲ್ಲಿ ಅದು ಮಂಜೂರಾಯಿತು. 1937 ನೆಯ ಇಸವಿ ಡಿಸೆಂಬರ್ 20ನೆಯ ತಾರೀಖಿನ ದಿನ ಶ್ರೀಮಾನ್ ಮಹಾರಾಜನವರು ಆ ಸಂಬಂಧದಲ್ಲಿ ಶಿಲಾನ್ಯಾಸವನ್ನು ಅನುಗ್ರಹಿಸಿದರು. ವಿದ್ಯುಚ್ಛಕ್ತಿಯ ಉತ್ಪತ್ತಿಗೆ ಬೇಕಾದ ಯಂತ್ರಸಾಧನಗಳೇ ಮುಂತಾದವುಗಳನ್ನು ಬೇಗ ಕಳುಹಿಸಿಕೊಡಬೇಕೆಂದು ನಿವೇದಕಕ್ಕೆ ಬರೆಯಲಾಗಿದೆ. ಅಲ್ಲಿ ವಿದ್ಯುಚ್ಛಕ್ತಿ ಉತ್ಪತ್ತಿಗಾಗಿ ಅವಶ್ಯಕವಾದ ಹಂಗಾಮಿ ಕಟ್ಟಡಗಳನ್ನೂ ಶಾಯಂ ಕಟ್ಟಡಗಳನ್ನೂ ಕಟ್ಟಿಸುವ ಕೆಲಸವು ನಡೆಯುತ್ತಿದೆ. ಅಲ್ಲಿ ಸ್ಥಾಪಿತವಾಗುವ ಮೊಟ್ಟ ಮೊದಲನೆಯ ಮುಖ್ಯಯಂತ್ರದಿಂದ 1939 ನೆಯ ಇಸವಿ ಆಗಸ್ಟು ತಿಂಗಳಿನಲ್ಲಿಯೂ, ಎರಡನೆಯದರಿಂದ 1939 ನೆಯ ಇಸವಿ ನವೆಂಬರು ತಿಂಗಳಿನಲ್ಲಿಯೂ ವಿದ್ಯುಚ್ಛಕ್ತಿಯ ಉತ್ಪತ್ತಿಯು ಪ್ರಾರಂಭವಾಗುವ ನಿರೀಕ್ಷೆ ಇದೆ. ಇದೇ 1938 ನೆಯ ಇಸವಿ ಜೂನ್ ತಿಂಗಳು ಕೊನೆಯವರೆಗೆ ಈ ಸಂಬಂಧದ ಕಾಮಗಾರಿಗಳಿಗಾಗಿ ವೆಚ್ಚವಾಗಿರುವ ಮೊಬಲಗು 7,60,491 ರೂಪಾಯಿಗಳು.

ಅರಂಭದೆಸೆಯಲ್ಲಿ 24,000 ಅಶ್ವಶಕ್ತಿಗಳ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲು ಸಾಧ್ಯವಾಗುವಂತೆ 1 ಕೋಟಿ 50 ಲಕ್ಷ ರೂಗಳ ವೆಚ್ಚದಲ್ಲಿ ಗೇರುಸೊಪ್ಪೆ ಜಲಪಾತದ ಬಳಿಯಲ್ಲಿ ವಿದ್ಯುಚ್ಛಕ್ತಿ ಉತ್ಪತ್ತಿಯ ಏರ್ಪಾಡು 1937 ನೆಯ ಇಸವಿ ಆಗಸ್ಟ್ ತಿಂಗಳ್ನಲ್ಲಿ ಮುಂಜೂರುಮಾಡಿತು. ಆ ಸಂಬಂಧದ ತಪಸೀಲು "ಸರ್ವೆ" ಪರೀಕ್ಷೆಗಳಿಗೆ ಇದೇ 1938 ನೆಯ ಜನವರಿ ತಿಂಗಳಿನಲ್ಲಿ ನಡೆದವು. ತಪಸೀಲು ಅಂದಾಜುಗಳು ತಯಾರಾಗುತ್ತಿವೆ. ಯಂತ್ರ ಮುಂತಾಮವುಗಳನ್ನು ಸಾಗಿಸುವುದಕ್ಕೂ, ಜನಸಂಡಾರಕ್ಕೂ ಅವಶ್ಯವಾದ ರಸ್ತೆಗಳೂ ಕಾಲುವಾರಿಗಳೂ ಏರ್ಪಟ್ಟಿವೆ. ಭದ್ರಾವತಿಯಿಂದ ಬೋಗಿನ ಬಳಿಗೆ ಏರ್ಪಡಿಸಬೇಕಾದ ಟೆಲಿಫೋನ್ ಲೈನುಗಳಲ್ಲಿ ಒಂದುಭಾಗವು ಪೂರ್ತಿಸಿದೆ.

ಭದ್ರಾವತಿಯಲ್ಲಿರುವ ಮೈಸೂರು ಸಂಸ್ಥಾನದ ಕಾಗದದ ಕಾರ್ಖಾನೆ, ಮತ್ತು ಸಿಮೆಂಟು ಕಾರ್ಖಾನೆ; ಬೆಳಗೊಳದಲ್ಲಿ 'ಸೆಲ್ಯೂಲೊಸಿಕ್ ಆಸಿಡ್' ಎಂಬ ಗಂಧಳದ್ರವ್ಯದ ಮುಂತಾದವುಗಳ ತಯಾರಾಗಿ ಏರ್ಪಡತಕ್ಕ 'ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್' ಎಂಬ ಕಾರ್ಖಾನೆ; ಕೋಲಾರದ ಚಿನ್ನದಗಣಿ ಕಂಪನಿಗಳು; ದಾವಣಗೆರೆಯ ಹತ್ತಿ ಗಿರಣಿಯ ಕಾರ್ಖಾನೆಗಳು; ಇದಕ್ಕಾಗಿ ವಿದ್ಯುಚ್ಛಕ್ತಿಯನ್ನೊದಗಿಸಬೇಕಾಗುತ್ತದೆ. ಆಲ್ಲದೆ ಅಲ್ಪಸ್ವಲ್ಪ ವಿದ್ಯುಚ್ಛಕ್ತಿಯನ್ನು ಬಳಸುವವರ ಸಂಖ್ಯೆಯು ಯಥಾಶ್ರಮದಲ್ಲಿ ಹೆಚ್ಚುವುದರಿಂದ ಅವರಿಗೂ ಒಟ್ಟಿನಲ್ಲಿ ಅಧಿಕಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನೊದಗಿಸಬೇಕಾಗುತ್ತದೆ. ಆಗ್ಗೆ ತಿವನಸಮುದ್ರದಲ್ಲಿಯೂ ಸಿಂಹಾಪುರದಲ್ಲಿಯೂ ತಯಾರಾಗುವ ವಿದ್ಯುಚ್ಛಕ್ತಿಯು ಸುತರಾಂ ಸಾಕಾಗುವುದಿಲ್ಲ. ಅವೆರಡು ಸ್ಥಳಗಳಲ್ಲಿ ತಯಾರಾಗುವ ವಿದ್ಯುಚ್ಛಕ್ತಿಗಿಂತಲೂ ಬಹಳ ಹೆಚ್ಚಿನ ವಿದ್ಯುತ್ತು ಅವಶ್ಯಕವಾಗುತ್ತದೆ. ಆದಕಾರಣ, ಗೇರುಸೊಪ್ಪೆಯ ಬಳಿಯಲ್ಲಿ ವಿದ್ಯುತ್ತನ್ನು ಉತ್ಪತ್ತಿ ಮಾಡುವ ವಿಚಾರವು ಸಾಧ್ಯವಾದಷ್ಟು ಬೇಗ ನೆರವೇರಿಸುವುದಕ್ಕಾಗಿ ವಿದ್ಯುಚ್ಛಕ್ತಿ ಇಲಾಖೆಯವರು ಸರ್ವಪ್ರಯತ್ನಗಳನ್ನೂ ನೆರವೇರಿಸುತ್ತಿದ್ದಾರೆ.

ಸಾಮಾನವನುಗಳಿಗೂ ವಿದ್ಯುತ್ತನ್ನೊದಗಿಸುವುದಕ್ಕಾಗಿ 1937-38 ನೆಯ ಸಾಲಿನಲ್ಲಿ 6,೮೨,261 ರೂಪಾಯಿಗಳ ಬಂಡವಾಳದ ವೆಚ್ಚ ನಡೆಯಿತು. ಅದರಲ್ಲಿ ಹೆಚ್ಚು ಸಕಾಗದ ಮೊತ್ತವು ದಾವಣಗೆರೆ, ಹರಿಹರ, ಕೃಷ್ಣರಾಜಸಾಗರ, ಹುಣಸೂರು, ತಿರುಮಕೂಡಲು ನರಸೀಪುರ, ಮತ್ತು ಗರ್ಗೇಶ್ವರಿ—ಈ ಸ್ಥಳಗಳಿಗೆ ವಿದ್ಯುತ್ತನ್ನು ಒದಗಿಸುವ ಕಾಮಗಾರಿಗಳಿಗಾಗಿ ವೆಚ್ಚವಾಯಿತು. ಗೂಳೂರು, ಏಡಿಗೆ, ಬಿದರಹಳ್ಳಿ, ಬೋಗಾದಿ, ಲಕ್ಷ್ಮೀದೇವಿಪುರ, ಹಾಡೋನಹಳ್ಳಿ ಮತ್ತು ಹಿರೀಬಿದನೂರು—ಈ ಏಳುಗ್ರಾಮಗಳಿಗೂ 1937-38ನೆಯ ಸಾಲಿನಲ್ಲಿ ವಿದ್ಯುದ್ದೀಪಗಳನ್ನು ಹಾಕಿಸಲಾಯಿತು.

ಬೇಲೂರು, ಸಿದ್ಲಘಟ್ಟ, ತಿಪಟೂರು, ಮತ್ತು ಕುಣಿಗಲು—ಇವು ನಾಲ್ಕು ಊರುಗಳಿಗೂ ವಿದ್ಯುದ್ದೀಪಗಳನ್ನು ಹಾಕಿಸುವ ಕಾಮಗಾರಿಗಳಿಗೆ ಅಂದಾಜುಗಳು ಮುಂಜೂರಾಗಿವೆ. ಚಿತ್ರದುರ್ಗ ಚಾಮರಾಜನಗರ, ಸೂಲಬೆಲೆ, ಬೀರೂರು, ಕಡೂರು, ಅಜ್ಜಂಪುರ, ಆರಸೀಕೆರೆ, ಚನ್ನಗಿರಿ, ಹೊನ್ನಾಳಿ ಮತ್ತು ಇತರ ಕೆಲವು ಊರುಗಳಿಗೂ ಮತ್ತು ಗ್ರಾಮಗಳಿಗೂ ವಿದ್ಯುದ್ದೀಪಗಳನ್ನು ಹಾಕಿಸುವ ಕಾಮಗಾರಿಗಳ ಅಂದಾಜುಗಳು ಪರ್ಯಾಲೋಚನೆಯಲ್ಲಿವೆ. ಭದ್ರಾವತಿಯಿಂದ ಬೋಗಿಗೆ (ಗೇರುಸೊಪ್ಪೆ ಬಳಿಗೆ) ವಿದ್ಯುಚ್ಛಕ್ತಿಯನ್ನು ಸಾಗಿಸುವ ಮತ್ತು ಭದ್ರಾವತಿಯಿಂದ ದಾವಣಗೆರೆಗೆ ವಿದ್ಯುತ್ತನ್ನು ಸಾಗಿಸುವ ತಂತಿ 'ಲೈನು' ಗಳ ಸಮೀಪದಲ್ಲಿರುವ ಟವನುಗಳನ್ನೂ ಗ್ರಾಮಗಳನ್ನೂ ಸರ್ವೆ ಮಾಡಲಾಗುತ್ತಿದೆ. 1937-38 ನೆಯ ಸಾಲಿನ ಆಖೈರಿನ ವೇಳೆಗೆ ವಿದ್ಯುತ್ತನ್ನೊದಗಿಸಿದ್ದ ಟವನುಗಳ ಮತ್ತು ಗ್ರಾಮಗಳ ಒಟ್ಟು ಸಂಖ್ಯೆಯು 174. ಜಾಲ್ತಿ ಸಾಲಿನಲ್ಲಿ (ಎಂದರೆ 1938-39 ನೆಯ ಸಾಲಿನಲ್ಲಿ) ಮತ್ತೆ ಎಂಟು ಟವನುಗಳಿಗೆ ವಿದ್ಯುತ್ತನ್ನು ಒದಗಿಸಬೇಕೆಂಬ ಉದ್ದೇಶವಿದೆ.

ಷಿಂಷಾಪುರದ ಮತ್ತು ಗೇರುಸೊಪ್ಪೆಯ (ಜೋಗ) ವಿದ್ಯುತ್ಶಕ್ತಿಯ ಏರ್ಪಾಡಿನ ಸಂಬಂಧದಲ್ಲಿ ಅನೇಕ ಸಿವಿಲ್ ಇಂಜನಿಯರಿಂಗ್ ಕಾಮಗಾರಿಗಳೂ ನಡೆಯಬೇಕಾಗಿರುತ್ತವೆ. ಅವೆರಡು ಶಾಖೆಗಳೆಲ್ಲೊಂದರ ಸಂಬಂಧದ ಸಿವಿಲ್ ಇಂಜನಿಯರಿಂಗ್ ಕಾಮಗಾರಿಗಳನ್ನು ನೆರವೇರಿಸುವುದಕ್ಕಾಗಿ ಒಬ್ಬರು ಎಗ್ಸಿಕ್ಯುಟಿವ್ ಇಂಜನಿಯರನ್ನೂ, ಮತ್ತೊಂದರ ಸಂಬಂಧದ ಸಿವಿಲ್ ಇಂಜನಿಯರಿಂಗ್ ಕಾಮಗಾರಿಗಳನ್ನು ನೆರವೇರಿಸುವುದಕ್ಕಾಗಿ ಒಬ್ಬರು ಎಗ್ಸಿಕ್ಯುಟಿವ್ ಇಂಜನಿಯರನ್ನು ನೇಮಿಸಲಾಗಿದೆ. ಆ ಇಬ್ಬರೂ ಒಬ್ಬ ಸೂಪರಿಂಟೆಂಡಿಂಗ್ ಇಂಜನಿಯರ ಕೈಕೆಳಗೆ ಕೆಲಸ ಮಾಡಬೇಕೆಂದು ಗೊತ್ತುಮಾಡಲಾಗಿದೆ.

ಗಣಿಗಳ ಮತ್ತು ಸಿಡಿಮದ್ದುಗಳ ಇಲಾಖೆ

1936-37 ನೆಯ ಸಾಲಿನಲ್ಲಿ 47 ಗಣಿ ಪ್ರದೇಶಗಳಿದ್ದವು. 1937-38 ನೆಯ ಸಾಲಿನಲ್ಲಿ ಈ ಸಂಖ್ಯೆಯು 49 ಕ್ಕೆ ಹೆಚ್ಚಿತು. 1936-37 ನೆಯ ಸಾಲಿನಲ್ಲಿ ಒಟ್ಟು 3,32,889 ಟನ್ನುಗಳ ಆಕರಂಜಿಯೂ, 25,276 ಟನ್ನುಗಳ ಬೆಳ್ಳಿಯೂ ಗಣಿಗಳಿಂದ ತೆಗೆಯಲ್ಪಟ್ಟವು; 1937-38 ನೆಯ ಸಾಲಿನಲ್ಲಿ 3,22,934ಟನ್ನುಗಳ ಆಕರಂಜಿಯೂ ಮತ್ತು 22,311 ಟನ್ನುಗಳ ಬೆಳ್ಳಿಯೂ ಗಣಿಗಳಿಂದ ತೆಗೆಯಲ್ಪಟ್ಟವು. 1936-37 ನೆಯ ಸಾಲಿನಲ್ಲಿ ತೆಗೆದ ಚಿನ್ನ ಬೆಳ್ಳಿಗಳ ನಿವ್ವಳ ಬೆಲೆಯು ಸುಮಾರು 3,07,55,439 ರೂಪಾಯಿಗಳು. 1937-38 ನೆಯ ಸಾಲಿನಲ್ಲಿ ತೆಗೆದ ಚಿನ್ನ ಬೆಳ್ಳಿಗಳ ನಿವ್ವಳ ಬೆಲೆಯು 2,97,62,922 ರೂಪಾಯಿಗಳು. 1936-37ನೆಯ ಸಾಲಿನಲ್ಲಿ ಸರ್ಕಾರಕ್ಕೆ ಸಂದಾಯವಾಗಬೇಕಾಗಿದ್ದ ರಾಜಾದಾಯದ ಮೊತ್ತವು ಸುಮಾರು 29,52,369 ರೂಪಾಯಿಗಳು. 1937-38 ನೆಯ ಸಾಲಿನಲ್ಲಿ ಸರ್ಕಾರಕ್ಕೆ ಸಂದಾಯವಾಗಬೇಕಾಗಿದ್ದ ರಾಜಾದಾಯದ ಮೊತ್ತವು ಸುಮಾರು 35,40,613 ರೂಪಾಯಿಗಳು.

1936-37 ನೆಯ ಸಾಲಿನಲ್ಲಿ ಗಣಿಗಳ ಕೆಲಸದಲ್ಲಿ ನೇಮಕವಾಗಿದ್ದವರ ಸಂಖ್ಯೆಯು 24,581. 1937-38 ನೆಯ ಸಾಲಿನಲ್ಲಿ ಗಣಿಗಳ ಕೆಲಸದಲ್ಲಿ ನೇಮಕವಾಗಿದ್ದವರ ಸಂಖ್ಯೆಯು 26,666. ಗಣಿಗಳಲ್ಲಿ ನೆಡೆದ ಆಕಸ್ಮಿಕಗಳಲ್ಲಿ ಮರಣ ಸಂಭವಿಸಿನವುಗಳ ಮತ್ತು ಘಾಸಿ ಜಖಂ ಆದವುಗಳ ಸಂಖ್ಯೆಯು 1937-38 ನೆಯ ಸಾಲಿನಲ್ಲಿ 218. ಪರಿಹಾರಪ್ರವ್ಯಗಳಾಗಿ ಕೊಡಲ್ಪಟ್ಟ ಒಟ್ಟು ಮೊಬಲಗು 96,036 ರೂಪಾಯಿಗಳು. ಆಪಾಯಕ್ಕೆ ಗುರಿಯಾಗದಂತೆ ಕಾಪಾಡಿಕೊಳ್ಳಬೇಕಾದರೆ ಹೇಗೆ ವರ್ತಿಸಬೇಕೆಂಬ ವಿಚಾರದಲ್ಲಿ ಪ್ರೌಢರ ಕಾರ್ಯವನ್ನು ಮುಂದುವರಿಸಿ ಜನರಿಗೆ ತಿಳಿವಳಿಕೆ ಹೇಳಲಾಯಿತು. ಆಪಾಯ ಸಂಭವಿಸಿದವರ ವಿಚಾರದಲ್ಲಿ ಪ್ರಥಮಚಿಕಿತ್ಸೆ ಮಾಡುವುದನ್ನು ಘಾರತೀಯ ಕೆಲಸಗಾರರಲ್ಲಿ ಅನೇಕರಿಗೆ ಕಲಿಸಿಕೊಡಲಾಯಿತು.

ಕೈಗಾರಿಕೆಗಳ ಅಭಿವೃದ್ಧಿ.

ಹೊಸದಾಗಿ ನಿರ್ಪಟ್ಟ ಘಾರಿ ಘಾರಿ ಕೈಗಾರಿಕೆಗಳಲ್ಲಿ ಸಾಲ್ಮನ್ನು ತಿಳಿಸಬಯಸುತ್ತಾಗಿದೆ. ಅವುಗಳವೆಂದರೆ:—

(1) "ದಿ ಮೈಸೂರ್ ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್, ಲಿಮಿಟೆಡ್" ಎಂಬ "ಸಲ್ಫೂರಿಕ್ ಆಸಿಡ್" ದ್ರಾವಕ ಮುಂತಾದುವುಗಳ ಕಾರ್ಖಾನೆ ಕಂಪನಿ.

(2) "ದಿ ಮೈಸೂರ್ ಸಿಲ್ಕ್ ಫಿಲೇಚರ್ಸ್, ಲಿಮಿಟೆಡ್" ಎಂಬ ರೇಷ್ಮೆ ಫಿಲೇಚರ್ ನೂಲು ಕಾರ್ಖಾನೆ ಕಂಪನಿ.

(3) "ದಿ ಮೈಸೂರ್ ವೆಜಿಟಬಲ್ ಆಯಿಲ್ ಪ್ರಾಡಕ್ಟ್ಸ್, ಲಿಮಿಟೆಡ್" ಎಂಬ ಕೃಷಿ ತುಪ್ಪ ಮುಂತಾದುವುಗಳ ತಯಾರಿ ಕಾರ್ಖಾನೆ ಕಂಪನಿ.

(4) "ದಿ ಮೈಸೂರು ಸಾಫ್ ಕ್ಯೂರಿಂಗ್ ವರ್ಕ್ಸ್, ಲಿಮಿಟೆಡ್" ಎಂಬ ಸಾಫ್ ಬೀಜವನ್ನು ಹದಪಡಿಸುವ ಕಾರ್ಖಾನೆ ಕಂಪನಿ.

ರೈಲ್ವೇ ಇಲಾಖೆಗಾಗಿಯೂ, ಪಬ್ಲಿಕ್ ವರ್ಕ್ಸ್ ಇಲಾಖೆಗಾಗಿಯೂ ಮತ್ತು ಮಹಾಜನರಿಗೆ ಮಾರಾಟಮಾಡುವುದಕ್ಕಾಗಿಯೂ ಅವಶ್ಯವಾದ ಬಣ್ಣಗಳನ್ನು ತಯಾರಿಸುವುದಕ್ಕಾಗಿ ಸರ್ಕಾರದವರು ಮೈಸೂರಿನಲ್ಲಿ ಒಂದು ಕಾರ್ಖಾನೆಯನ್ನು ಏರ್ಪಡಿಸಬೇಕೆಂದಿದ್ದಾರೆ.

ಚರ್ಮವನ್ನು ಹದಮಾಡುವ ಕಾರ್ಖಾನೆಯ ಲಿಮಿಟೆಡ್ ಕಂಪನಿಯೂ ಮತ್ತು ಗಾಜನ್ನೂ ಮತ್ತು ಎನ್ಯಾಮೆಲ್ ವಸ್ತುಗಳನ್ನೂ ತಯಾರಿಸುವ ಲಿಮಿಟೆಡ್ ಕಂಪನಿಯೂ ಏರ್ಪಡುವುದರಲ್ಲಿವೆ.

ಹೊಸ ಕೈಗಾರಿಕೆಗಳನ್ನು ಏರ್ಪಡಿಸುವ ವಿಚಾರದಲ್ಲಿಯೂ, ಹೊಸ ಕೈಗಾರಿಕೆಗಳನ್ನು ಸಾರಂಭಿಸುವವರಿಗೆ ಸಹಾಯಮಾಡುವ ತಜ್ಞಾರದಲ್ಲಿಯೂ ನಾವು ಅನುಸರಿಸುತ್ತಿರುವ ಕಾರ್ಯ ನೀತಿಯನ್ನು ನಾನು ಅನೇಕಸಲ ವಿವರಿಸಿದ್ದೇವೆ. ಈ ಬಗೆಯ ಇಪ್ಪತ್ತುನಾಲ್ಕು ಹೊಸ ಕೈಗಾರಿಕೆ ಉದ್ಯಮಗಳು ಈಗ ಕೆಲಸಮಾಡುತ್ತಿವೆ. ಅವಕ್ಕಾಗಿ ಐದು ಕೋಟಿ ರೂಪಾಯಿಗಳ ಬಂಡಾಳವು ವಿನಿಯೋಗವಾಗಿದೆ. ಅವುಗಳಿಂದ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಒಟ್ಟು 20,000 ಮಂದಿಗಳಿಗೆ ಉದ್ಯೋಗಗಳು ದೊರೆತಿವೆ.

ಪಿಂಗಾಣಿ ಕಾರ್ಖಾನೆ

ಪಿಂಗಾಣಿ ಕಾರ್ಖಾನೆಯಲ್ಲಿ 74,989 ರೂಪಾಯಿಗಳು ಬೆಲೆ ಬಾಳುವ ವಸ್ತುಗಳು 1937-38ನೆಯ ಸಾಲಿನಲ್ಲಿ ತಯಾರಾಯಿತು ಮತ್ತು 1937-38ನೆಯ ಸಾಲಿನಲ್ಲಿ 97,022 ರೂಪಾಯಿಗಳು ಬೆಲೆ ಬಾಳುವ ವಸ್ತುಗಳು ಮಾರಾಟವಾದವು. ಈ ಕಾರ್ಖಾನೆಯಲ್ಲಿ 'ಎಲೆಕ್ಟ್ರಿಕ್ ಟಿನಲ್ ಕಿಲ್ನ್' ಕಟ್ಟಿಸುವುದಕ್ಕಾಗಿ 4 ಲಕ್ಷ ರೂಪಾಯಿಗಳ ಅಂದಾಜೊಂಮ ಮಂಜೂರಾಗಿದೆ.

ವಿದ್ಯುಚ್ಛಕ್ತಿ ಕಾರ್ಖಾನೆ.

ವಿದ್ಯುಚ್ಛಕ್ತಿ ಕಾರ್ಖಾನೆಯ ಕೆಲಸವು ಸರ್ವತೋಮುಖವಾಗಿ ಮುಂದುವರಿದಿದೆ. ಈಗ 1,000 ಮಂದಿ ಕೆಲಸಗಾರರು ಅವರಲ್ಲಿ ನೇಮಕವಾಗಿದ್ದಾರೆ. ಈ ಕಾರ್ಖಾನೆಯಲ್ಲಿ 1937-38ನೆಯ ಸಾಲಿನಲ್ಲಿ 9,212 ರೂಪಾಯಿಗಳ ಲಾಭ ಬಂದಿದೆ.

ಕೃಷ್ಣರಾಜೇಂದ್ರ ಮಿಲ್ಸ್ ನಿರಣಿ ಕಾರ್ಖಾನೆ.

1937ನೆಯ ಇಸವಿಯಲ್ಲಿ 'ಕೃಷ್ಣರಾಜೇಂದ್ರ ಮಿಲ್ಸ್' ನಿರಣಿ ಕಾರ್ಖಾನೆಯ ವಜಾಪಟ್ಟಿಯ ತತ್ತೆಯನ್ನು ನೋಡಿದರೆ 5,573 ರೂಪಾಯಿಗಳ ಲಾಭವು ಬಂದಿರುವ ಅಂಶವು ಗೊತ್ತಾಗುತ್ತದೆ. ಬಡ್ಡಿಗಳನ್ನಾಗಿ 1,48,492 ರೂಪಾಯಿಗಳನ್ನೂ, ಹಳೆಯ ಸವಕು ನಷ್ಟಗಳನ್ನು ಆಗ್ಗಪ ಬೆಲೆಗೆ ಮಾರಿರುವುದರಿಂದ ಉಂಟಾದ ನಷ್ಟಕ್ಕಾಗಿ ಧರ್ತನಮಾಡಿದ 32,014 ರೂಪಾಯಿಗಳನ್ನೂ ಒಟ್ಟಿಗಿಸಿದ ತರುವಾಯ ಅಷ್ಟು ಲಾಭವು ತೇಲಿದೆ. 1938ನೆಯ ಇಸವಿ ಜನವರಿ 1ನೆಯ ತಾರೀಖಿನಿಂದ ಜೂನ್ 30ನೆಯ ತಾರೀಖಿನ ವರೆಗಿನ ಆರು ತಿಂಗಳುಗಳ ಅವಧಿಗೆ, ಬಡ್ಡಿಗಳಿಗಾಗಿ 82,000 ರೂಪಾಯಿಗಳನ್ನು ಒದಗಿಸಿದ ಬಳಿಕ ಸುಮಾರು 65,000 ರೂಪಾಯಿಗಳ ನಿವ್ವಳ ಲಾಭವು ತೇಲಬಹುದೆಂಬ ನಿರೀಕ್ಷೆಯಿದೆ.

ಭದ್ರಾವತಿ ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ

1937-38ನೆಯ ಸಾಲಿನಲ್ಲೆಲ್ಲ ಪೂರ್ತಿಯಾಗಿ ಭದ್ರಾವತಿ ಕಾರ್ಖಾನೆಯ ಉಕ್ಕಿನ ತಯಾರಿ ಯಂತ್ರದಿಂದ ಕೆಲಸ ನಡೆಯಿತು.

ಉಕ್ಕಿನ ತಯಾರಿಯ ಯಂತ್ರದ 'ಓಪನ್ ಹಾರ್ತ್ ಫರ್ನೇಸ್' ಭಾಗಕ್ಕೆ ಮತ್ತೆ ರಸಾಯನ ನಸ್ತುಗಳ ಲೇಪನವನ್ನೊದಗಿಸಿ ಸಿದ್ಧ ಪಡಿಸುವುದಕ್ಕಾಗಿ 1938ನೇ ಇಸವಿ ಜೂನ್ 11ನೆಯ ತಾರೀಖಿನ ದಿನ ಕೆಲಸವನ್ನು ನಿಲ್ಲಿಸಲಾಯಿತು. ಆ ಕೆಲಸವನ್ನು ನೆರವೇರಿಸುವುದಕ್ಕೆ ಮುಂಚಿತವಾಗಿ 282 ಸಾರಿಯೂ, ಆದರಿಂದೀಚೆಗೆ 310 ಸಾರಿಯೂ ಉಕ್ಕಿನ ಎರಕದ ಸಂಬಂಧವಾಗಿ 'ಫೈರಿಂಗ್' ಕಾರ್ಯ ಕಲಾಪಗಳು ನಡೆದಿವೆ.

ಭದ್ರಾವತಿ ಕಾರ್ಖಾನೆಯ ಎಲ್ಲ ಶಾಖೆಗಳಲ್ಲಿಯೂ ನಾನಾ ವಸ್ತುಗಳ ತಯಾರಿ ಕೆಲಸಗಳೂ ಸಮರ್ಪಕವಾಗಿ ನಡೆದುವು. ವಸ್ತು ತಯಾರಿ ವೆಚ್ಚವು ಕಡಮೆಯಾಗುವಂತೆ ಮಾಡಲಾಯಿತು. 1937-38ನೇ ಸಾಲಿನ ಕಡೆಯ ಆರು ತಿಂಗಳ ಅವಧಿಯಲ್ಲಿ ಕ್ರಯವಸ್ತುವನ್ನು ತಗ್ಗಿಸಬೇಕಾಗಿ ಬಂದಕಾರಣ, ಮಾರಾಟದಿಂದ ಸರಿಯಾಗಿ ಲಾಭ ಬರಲು ಅವಕಾಶವಿರಲಿಲ್ಲ. ಅದಾಗ್ಯೂ 1937-38ನೇ ಸಾಲಿನಲ್ಲಿ ಸುಮಾರು 75,000 ರೂಪಾಯಿಗಳ ಲಾಭವು ತೇಲಬಹುದೆಂದು ನಿರೀಕ್ಷೆಯಿದೆ.

ಸಿಮೆಂಟನ್ನು ತಯಾರಿಸುವ ಯಂತ್ರದ ಜೋಡಣೆಯು ಪೂರ್ತಿಸಿ, ಕಳೆದ ಜುಲೈ ತಿಂಗಳಿನಿಂದ ಅವರ ಕೆಲಸವು ಪ್ರಾರಂ

ಪಂಚಾಚಾರ್ಯಪ್ರಭಾ.

೧೯೩೪ನೆಯ ಅಕ್ಟೋಬರ್ ತಾ|| ೧೦ನೇ ಸೋಮವಾರ

ರಾಜಧಾನಿಯಲ್ಲಿ
ನವರಾತ್ರಮಹೋತ್ಸವ.

ಭಾರತೀಯರಲ್ಲಿ ನೆಡೆಯುವ ಹಬ್ಬಗಳಲ್ಲೆಲ್ಲ ಈ ನವರಾತ್ರಮಹೋತ್ಸವವು ಬಹಳ ದೊಡ್ಡ ಹಬ್ಬವು ಈ ಹಬ್ಬವನ್ನು ಅನೇಕ ಕಡೆಗಳಲ್ಲಿ ನಾಡಹಬ್ಬವೆಂದು ಕರೆಯುವ ಸಂಪ್ರದಾಯವಿರುತ್ತದೆ. ಇದು ಅನಾದಿಕಾಲದಿಂದಲೂ ನಮ್ಮ ಭಾರತಪ್ರಖಂಡದ ಸಮಸ್ತ ಜನಗಳಿಂದ ಅನುಷ್ಠಿಸಲ್ಪಡತಕ್ಕ ಹಬ್ಬವಾಗಿದ್ದು, ಭಾರತೀಯ ಪುರಾಣೇತಿಹಾಸಾದಿಗಳಲ್ಲಿಯೂ ಹೇಳಲ್ಪಟ್ಟಿರುತ್ತದೆ ಎಲ್ಲಾ ಹಬ್ಬಗಳು ಒಂದೊಂದು ದಿವಸ ನಡೆದರೆ ಇದು ೯ ದಿವಸಗಳವರೆಗೆ ನಡೆಯುವುದು. ಈ ನಾಡಹಬ್ಬವು ಶಕ್ತಿಪ್ರಧಾನವಾದ ಹಬ್ಬವು. ಮಹಾಭಾರತದ ವಿರಾಟ ಪರ್ವದಲ್ಲಿ ಈ ನವರಾತ್ರಮಹೋತ್ಸವವು ವರ್ಣಿತವಾಗಿರುತ್ತದೆ. ಚಂದ್ರವಂಶೀಯರಾದ ಪಾಂಡವರು ವನವಾಸವನ್ನು ಪೂರೈಸಿ ಅಜ್ಞಾತವಾಸವನ್ನು ಮಾಡುವುದಕ್ಕಾಗಿ ವಿರಾಟನಗರವನ್ನು ಪ್ರವೇಶಿಸುವಾಗ್ಗೆ ತಮ್ಮ ಆಯುಧಗಳೆಲ್ಲವನ್ನೂ ನಗರದ ಹೊರಗೆ ಇರುವ ಒಂದು ಶಮಿ (ಬನ್ನಿ) ವೃಕ್ಷದಲ್ಲಿಟ್ಟು ವೇಷವನ್ನು ಬದಲಾಯಿಸಿ ವಿರಾಟನಗರದಲ್ಲಿ ವಾಸಮಾಡಿದರು ತಮ್ಮ ಇವಧಿಯು ಮುಗಿದ ಬಳಿಕ ಇದೇ ವಿಜಯದಶಮಿಯ ದಿವಸದೆ ಶಮಿಯನ್ನು ಪೂಜಿಸಿ ತಮ್ಮ ಆಯುಧಗಳನ್ನೆಲ್ಲಾ ತೆಗೆದುಕೊಂಡು ಯುದ್ಧವನ್ನು ಪ್ರಾರಂಭಿಸಲು ಸರ್ವತೋಮುಖವಾಗಿ ಜಯಲಕ್ಷ್ಮಿಯು ಇವರನ್ನು ಸೇರಿದಳು. ಇದರಂತೆ ಸೂರ್ಯಕುಲೋತ್ತಂಸನಾದ ರಘುವಂಶರಾಜನು ಇದೇ ದಿವಸವೇ ವಿಜಯಯಾತ್ರೆಯನ್ನು ಹೊರಟಿದ್ದರಿಂದ ದಶದಿಕ್ಪಾಲಕರೂ ಆತನ ಸ್ವಾಧೀನವಾದವು. ಶ್ರೀರಾಮನು ಸೀತಾಪಹಾರಿಯಾದ ರಾವಣನಮೇಲೆ ಇದೇ ದಿವಸವೇ ದಂಡೆತ್ತಿ ಹೋದುದರಿಂದ ಜಯಶೀಲನಾದನು. ಇದಲ್ಲದೆ ಅನೇಕ ದೊಡ್ಡದೊಡ್ಡ ಕಾರ್ಯಾಲಯಗಳ ಆರಂಭಮಾಡುವವರೂ ಮತ್ತು ನೇಮತಾನುಷ್ಠಾನತತ್ಪರರೂ ಈ ದಿವಸವನ್ನೇ ನಿರೀಕ್ಷಿಸಿಕೊಂಡಿದ್ದು ಕಾರ್ಯಾರಂಭಮಾಡುವ ಸಂಪ್ರದಾಯವನ್ನು ಇಟ್ಟುಕೊಂಡಿರುತ್ತಾರೆ. ಈ ದಿವಸ ಯಾವ ಕಾರ್ಯವನ್ನು ಆರಂಭಮಾಡಿದರೂ ಅದು ದಿಗ್ವಿಜಯವನ್ನು ಹೊಂದುವುದೆಂಬ ಜನರ ನಂಬಿಕೆಯು ನಮ್ಮ ವೇದನಿರ್ಣಯವಲಂಬಿಗಳಾದ ಭಾರತೀಯರ ಹೃದಯಕುಹರದಲ್ಲಿ ನೆಲೆಗೊಂಡಿರುವುದರಿಂದ "ಯಾದೃಶೀ ಭಾವನಾ ಯತ್ರ ಸಿದ್ಧಿರ್ಭವತಿ ತಾದೃಶೀ" ಎಂಬ ಆರ್ಷೋಕ್ತಿಯಂತೆ ಸರ್ವರೂ ಪ್ರಾರಬ್ಧಕಾರ್ಯಫಲವನ್ನು ನಿರ್ವಿಘ್ನವಾಗಿ ಹೊಂದುತ್ತಲೇ ಬಂದಿರುವರು. ಆದುದರಿಂದ ಇದಕ್ಕೆ ವಿಜಯದಶಮಿಯೆಂಬ ಅನ್ವರ್ಥನಾಮವು ಬಂದಿರುತ್ತದೆ ದೇವೀಮಾಹಾತ್ಮ್ಯದಲ್ಲಿ ಇದಕ್ಕೆ ಇನ್ನೊಂದು ಕಾರಣವು ಹೇಳಲ್ಪಟ್ಟಿರುತ್ತದೆ. ಮಹಿಷಾಸುರನೆಂಬ ರಾಕ್ಷಸನು ಬಹುಭುಗದಲ್ಲಿ ಲೋಕಕಂಟಕನಾಗಿದ್ದನು ದೇವತೆಗಳು ಇವನ ಆಟೋಪವನ್ನು ಸಹಿಸಲಾರದೆ ಸರಮೇಶ್ವರನ ಅರ್ಧಾಂಗಿನಿಯಾದ ಆದಿಶಕ್ತಿಯನ್ನು ಪ್ರಾರ್ಥಿಸಲಾಗಿ ಆ ದೇವಿಯು ಅಷ್ಟಭುಜಗಳನ್ನು ಧರಿಸಿ ಕರಾಳಾಕಾರದಿಂದ ಅವತರಿಸಿ ಇದೇ ಅಶ್ವಯುಜ ಶುದ್ಧ ಪ್ರತಿಪತ್ತಿನಿಂದ ಯುದ್ಧವನ್ನಾರಂಭಿಸಿ ವಿಜಯದಶಮಿಯ ದಿವಸ ಆ ರಾಕ್ಷಸನನ್ನು ಕೊಂದೆನ್ನುವುದರಿಂದ ಇದಕ್ಕೆ ವಿಜಯದಶಮಿಯೆಂಬ ಹೆಸರುಂಟಾಯಿತೆಂದು ಹೇಳಿದೆ. ಈ ಹಬ್ಬದ ಆಚರಣೆಯು ಬಹೋವಾ ಮುಂತಾದ ಅನೇಕ ಪ್ರಾಂತಗಳಲ್ಲಿ ವಿಶೇಷವಾಗಿದ್ದರೂ, ಮೈಸೂರು ರಾಜಧಾನಿಯಲ್ಲಿ ಮಾತ್ರ ಈ ನವರಾತ್ರಮಹೋತ್ಸವದ ವೈಭವವನ್ನು ವರ್ಣಿಸಲು ಯಾರಿಂದಲೂ ಶಕ್ಯವಿಲ್ಲ.

ಅಸ್ತಿಕತಿಖಾಮಣಿಗಳೂ ಯದುಕುಲಾಬ್ಧಿಸೋಮರೂ ಆಗಿರುವ ನಮ್ಮ ಮೈಸೂರು ಶ್ರೀಮನ್ಮಹಾರಾಜರವರ ಅರಮನೆಯಲ್ಲಿ ಈ ನಾಡಹಬ್ಬದ ಆಚರಣೆಯು ಪುರಾತನಕಾಲದಿಂದ ನಡೆದುಬಂದಿರುವದು. ಲೋಕಕಂಟಕನಾದ ಮಹಿಷಾಸುರನನ್ನು ಆದಿಶಕ್ತಿಯು ಸಂಹರಿಸಿದ ಸ್ಥಾನದೇ ಇದಾಗಿದೆ. ಇಂಥ ಕ್ರೂರಾತ್ಮನಾದ ಮಹಿಷಾಸುರನನ್ನು ಸಂಹರಿಸಿ ಲೋಕಕಲ್ಯಾಣವನ್ನುಂಟುಮಾಡಿದ ಆದಿಶಕ್ತಿಯೇ ಶ್ರೀಚಾಮುಂಡಾಂಬಾ ಎಂಬ ಅಭಿಧಾನದಿಂದ ರಾಜವಂಶಿತನದ ಕುಲದೇವತೆಯೆನಿಸಿ ರಾಜಧಾನಿಬಳಿ ರೋಭಿಸುವ ಪರ್ವತಾಗ್ರದಲ್ಲಿ ನೆಲಸಿ ಭಕ್ತೇಷ್ಟಪ್ರದ ಳೆನಿಸಿಕೊಂಡಿರುತ್ತಾಳೆ. ಸಾಕ್ಷಾದ್ವಿಷ್ಣುವೇ ಮಾನವಾವತಾರಿಗಳಾದ ನಮ್ಮನ್ನಾಳುವ ಪ್ರಭುವರ್ಯರು ಶುದ್ಧತಿಯಪ್ರಕಾರ ಆಶ್ವಯುಜ ಶುದ್ಧ ಪ್ರತಿಪದದಿಂದ ನವಮಿ ಸೋಮವಾರದ ವರೆಗೂ ರತ್ನಖಚಿತಸಿಂಹಾಸನವನ್ನು ಆರೋಹಣಮಾಡುತ್ತ ಸ್ರಜಿಗಳಿಗೆ ದರ್ಶನವನ್ನಿತ್ತು ನೇತ್ರಾನಂದವನ್ನುಂಟುಮಾಡಿದರು. ಈ ಸಾರೆ ನವರಾತ್ರಮಹೋತ್ಸವವನ್ನು ನೋಡುವುದಕ್ಕಾಗಿ ನೇಪವಿದೇಶಗಳಿಂದ ಲಕ್ಷಾವಧಿ ಪ್ರಜೆಗಳು ಬಂದಿದ್ದರು. ರಾಜಭಕ್ತಿಯಿಂದ ಬಂದ ಜನಗಳು ನಗರದ ಅಲಂಕಾರವನ್ನೂ, ವೈಭವವನ್ನೂ ನೋಡಿ ಆಶ್ಚರ್ಯಾನಂದಗಳಿಂದ ಕೂಡಿದ್ದರು. ಜಂಬೂ ಸವಾರಿಯು ವಿಜಯದಶಮಿ ಮಂಗಳವಾರ ಮಧ್ಯಾಹ್ನ ೪ ಘಂಟೆಗೆ ಅರಮನೆಯಿಂದ ಪಯಣಿಸಿರುವ ರೋಡ್, ಇರ್ವಿನ್ ರೋಡ್, ಸೊಪ್ಪಿನಪೇಟೆಗಳ ಮಾರ್ಗದಿಂದ ಹೊರಟಿತು ರತ್ನಖಚಿತ ಸುವರ್ಣಾಭರಣಗಳಿಂದ ಅಲಂಕೃತನಾದ ಭದ್ರಗಜದ ಮೇಲಿರುವ ನವರತ್ನಮಯವಾದ ಅಂಬಾರಿಯಲ್ಲಿ ಮಹಾಪ್ರಭುವರ್ಯರು, ಶ್ರೀಮದ್ಯುವರಾಜರವರು, ಮತ್ತು ಶ್ರೀ ಜಯಚಾಮರಾಜ ಒಡೆಯರವರೂ ನೂತನ ರತ್ನಾಭರಣಗಳಿಂದಲಂಕೃತರಾಗಿ ಮೂರ್ತಮಾಡಿದ್ದರು ಜಯಪ್ರಯಾಣಸೂಚಕವಾದ ೨೧ ತೋಪುಗಳು ಹಾರಿಸಲ್ಪಟ್ಟವು ಸಮುದ್ರವಂತೆ ಉಕ್ಕುತ್ತಿರುವ ಜನಸಂದಣಿಯು ರಾಜರ್ಷಿನಪರವಶವಾಗಿದ್ದಿತು ಪುರ ಪ್ರಮುಖರು ಎಲ್ಲೆಲ್ಲಿಗೆ ರಾಜಪ್ರತ್ಯೂತ್ಪೇತಕಗಳಾದ ಮುದ್ರೆಗಳಿಂದೊಡಗೂಡಿ ಪುಷ್ಪಹಾರಗಳನ್ನು ಕರ್ಪಿಸುತ್ತಲಿದ್ದರು

ಸಾಯಂಕಾಲ ೬ ಘಂಟೆಗೆ ಬನ್ನಿಮಂಟಪವನ್ನು ತಲುಪಿತು ವಿದ್ಯುಕ್ತವಾಗಿ ಶಮಿಪೂಜಾವಿಧಿಕಾರ್ಯಗಳು ಸಮಾಪ್ತಿಗೊಂಡವು ಪ್ರಭುಗಳು ಸ್ವಲ್ಪ ವಿಶ್ರಾಂತಿಯನ್ನು ಹೊಂದಿದ ಮೇಲೆ ಪುನಶ್ಚ ಅಂಬಾವಿಲಾಸಕ್ಕೆ ಬಂದರು. ಬನ್ನಿಪೂಜೆಯನ್ನು ತಲುಪುತ್ತಿದಾಗ ರಾತ್ರಿ ೧೧ ಘಂಟೆಗೆ ಆಲಯಪ್ರವೇಶವನ್ನು ತಲುಪುತ್ತಿದಾಗ್ಗೆ ಬನ್ನಿಪೂಜಾಸಮಾಪ್ತಿ ಸೂಚಕಗಳಾದ ತೋಪುಗಳು ಹಾರಿಸಲ್ಪಟ್ಟವು ಈ ರೀತಿಯಾದ ಅಪೂರ್ವವೈಭವದಿಂದ ಭಾರತೀಯಾತ್ಯಪ್ರಸಿದ್ಧವಾದ ಈ ನಾಡಹಬ್ಬವನ್ನು ಆಚರಿಸುತ್ತ ಪ್ರಜೆಗಳ ಮನಸ್ಸಿಗೆ ಸಂತೋಷವನ್ನುಂಟುಮಾಡುವದಲ್ಲಿ ನಮ್ಮ ವೈಸೂರು ರಾಜಮನೆತನವು ಅಗ್ರಸ್ಥಾನವನ್ನು ಪಡದಿದೆ ಅದರಲ್ಲಿ ಈಗಿನ ಧರ್ಮಪ್ರಭುಗಳವರು ಈ ನಾಡಹಬ್ಬವನ್ನು ಮತ್ತಿನ್ನು ಪ್ರಕಾಶಪಡಿಸಿದ್ದರಿಂದ ಇಂದ ಮಹೋತ್ಸವವು ಯಾವ ರಾಜ್ಯದಲ್ಲೂ ಯಾವ ದೇಶದಲ್ಲೂ ನಡೆಯುವುದಿಲ್ಲವೆಂದರೆ ಅತಿಶಯೋಕ್ತಿಯೆನಿಸದು ಪ್ರಜಾಸಂತೋಷವೇ ಸ್ವಸಂತೋಷವೆಂದು ಶ್ರೀಕಾಲದಲ್ಲಿಯೂ ಭಗವದಾರಾಧನತತ್ಪರರಾದ ಪರಮಾಸ್ತಿಕಚಕ್ರವರ್ತಿಗಳಾದ ನಮ್ಮ ಮಹಾಪ್ರಭುಗಳವರಿಗೆ ಶ್ರೀ ಚಾಮುಂಡಾಂಬಿಕೆಯು ದೀರ್ಘಾಯುರ್ಭಾಗ್ಯಪರಂಪರೆಯನ್ನಿತ್ತಿಯೆಂದು ಅನನ್ಯಭಕ್ತಿಯಿಂದ ಪ್ರಾರ್ಥಿಸುವೆವು

ಒಳದೇಶದ ವೃತ್ತಾಂತಗಳು.

ಪ್ರಜಾಪ್ರತಿನಿಧಿಸಭೆಯಿಂದ ಮಾ|| ಭೀಮಪ್ಪನಾಯಕರು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ಚುನಾಯಿತರಾದರು

ನಮ್ಮ ದಿವಾಣಾಜೇಬರು ಪ್ರಜಾಪ್ರತಿನಿಧಿಸಭೆಯ ತಮ್ಮ ಮುಕ್ತಾಯಭಾಷಣದಲ್ಲಿ ಬಾರತದ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ಮುಂದಿನ ಜನವರಿ ತಿಂಗಳಸ್ಸಲ್ಲಿ ಮೈಸೂರಿಗೆ ಆಗಮಿಸುವರೆಂದು ಸೂಚಿಸಿದರು.

ಕಚಕೊಳದ ಬಳಿ ಇರುವ ಸಿಂಧುಳ್ಳಿ ಕ್ರೋಸ್‌ಗಣಿಯಲ್ಲಿ ಕೆಲಸಮಾಡುವ ಸುಮಾರು 100 ಮಂದಿ ಮಾಸಿಳ್ಳಿಕೂಲಿಕಾರರು ತಮ್ಮ ಕೂಲಿದರವನ್ನು ಹೆಚ್ಚಿಸಬೇಕೆಂದೂ ರಜ ಮತ್ತು ಇತರ ಸೌಲಭ್ಯಗಳನ್ನೊದಗಿಸಿಕೊಡಬೇಕೆಂದೂ ಕಳೆದವಾರ ಮುಷ್ಕರ ಹೂಡಿದ್ದರೆಂದು ತಿಳಿದುಬಂದಿದೆ.

ಮೈಸೂರುಸಂಸ್ಥಾನದ ಸೈನ್ಯದ ಚೀಫ್ ಕಮಾಂಡೆಂಟ್ ಆಗಿರುವ ಲೆಫ್ಟಿನೆಂಟ್ ಕರ್ನಲ್ ಎಚ್. ಡಿ. ಎ ಲೂಕಾಸ್‌ರವರು ಮುಂದಿನ ನವೆಂಬರ್ ತಿಂಗಳನಲ್ಲಿ ಕೆಲಸದಿಂದ ನಿವೃತ್ತರಾದಮೇಲೆ ಅವರ ಸ್ಥಾನಕ್ಕೆ ಸಾಗೂರ್ ಈಕ್ವಿಟೇಸ್ ಸ್ಕೂಲಿನ ಚೀಫ್ ಇನ್‌ಸ್ಟ್ರಕ್ಟರಾಗಿರುವ ಕರ್ನಲ್ ಎಂ. ಡಿ. ವಿಗರ್ಸ್‌ರವರು ಬರುವರೆಂದು ತಿಳಿದು ಬರುತ್ತದೆ.

ಶಿವಮೊಗ್ಗಪ್ರಾಂತ್ಯದ ಹರಮಘಟ್ಟದ ಹತ್ತಿರ ಲಂಬಾಣಿ ಸ್ತ್ರೀಯೊಬ್ಬಳು ದನಗಳನ್ನು ಮೇಯಿಸಾಗಿ ಹೊಡೆ ಮಕೊಂಡು ಹೋಗುತ್ತಿರುವಾಗ ಪೊದೆಯೊಂದರಲ್ಲಿದ್ದ ಹುಲಿಯು ಅವಳ ಮೇಲೆ ಹಾರಿ ಕಚ್ಚಿ ಗಾಯಗೊಳಿಸಲು ಅವಳು ಗಟ್ಟಿಯಾಗಿ ಕೂಗಿಕೊಳ್ಳಲು ಹುಲಿಯು ಓಡಿ ಹೋಯಿತು. ಅವಳನ್ನು ಶಿವಮೊಗ್ಗೆ ಆಸ್ಪತ್ರೆಗೆ ಸಾಗಿಸಲಾಯಿತು. ಅವಳು ಈಗ ಗುಣಹೊಂದುತ್ತಿರುವಳು.

ಕಳೆದ ೨ನೆಯ ತಾರೀಖು ಬೆಳಿಗ್ಗೆ ೮ ಘಂಟೆಗೆ ಮೈಸೂರು ಸ್ಕೌಟ್ ಕೌನ್ಸಿಲ್ ಸಭೆಯು ಮಹಾರಾಜಾ ಕಾಲೇಜಿನಲ್ಲಿ ಸೇರಿತ್ತು. ಛತ್ತಾರಿ ನವಾಬರು ಅಧ್ಯಕ್ಷತೆ ವಹಿಸಿದ್ದರು. ದಿವಾ ಸರ್ ಮಿರ್ಜಾ ಇಸ್ಮಾಯಿಲ್, ಪ್ರಥಮ ಸಚಿವರು, ಶ್ರೀ ಕೆ. ವಿ. ಅನಂತರಾಮನ್, ನ್ಯಾಯಮೂರ್ತಿ ಶಂಕರನಾರಾಯಣರಾವ್, ಸರ್ ಥಾರಲ್ಸ್ ಟಾಡ್ ಹಂಟರ್—ಇವರೆ ಮುಂತಾದವರು ದಯಮಾಡಿಸಿದ್ದರು.

ರಾಜಧಾನಿಗೆ ದಸರಾ ಕಾಲದಲ್ಲಿ ಸೇಲಂ ಪ್ರಾಂತ್ಯದಿಂದ ಬರುವವರಿಗೆ ಸ್ಥಳವಸತಿಯನ್ನೇರ್ಪಡಿಸಲು ಸೇಲಂ ನಾರಾಯಣಪೆಟ್ಟೆಯರು 5000 ರೂಪಾಯಿಕೊಡಲೊಪ್ಪಿರುವದರಿಂದ ಶ್ರೀರಂಗವಿಲಾಸಧರ್ಮಶಾಲೆಯೆಂಬ ಹೆಸರಿನಿಂದ ಧರ್ಮಶಾಲೆಯೊಂದರ ನಿರ್ಮಾಣಕಾರ್ಯವಾರಂಭವಾಗಿದ ಈ ಕಟ್ಟಡಕ್ಕೆ ನಮ್ಮ ದಿವಾರವರಾದ ಸರ್ ಮಿರ್ಜಾ ಇಸ್ಮಾಯಿಲರು ಕಳೆದ ೭ನೇ ತಾರೀಖು ಅಸ್ತಿವಾರಶಿಲೆಯನ್ನು ಸ್ಥಾಪಿಸಿದರು. ದಸರಾಕಾಲದಲ್ಲಿ 10 ದಿವಸಗಳು ಪ್ರತಿದಿನ 500 ಜನಗಳಿಗೆ ಇಲ್ಲಿ ಅನ್ನದಾನಮಾಡುವ ವ್ಯವಸ್ಥೆಮಾಡಲಾಗುವದೆಂದು ತಿಳಿದು ಬರುತ್ತದೆ.

ಕ್ಯಾತನಹಳ್ಳಿ ಶ್ರೀಮಾನ್ ಸಾಹುಕಾರ್ ಸಿದ್ಧಲಿಂಗಯ್ಯನವರು ಮೈಸೂರು ರಾಜಧಾನಿಯ ವಾಣಿವಿಲಾಸರೋಡಿನಲ್ಲಿ ಒಂದು ಭವ್ಯವಾದ ಸಂಸ್ಕೃತಪಾಠಶಾಲೆಯನ್ನು ಕಟ್ಟಿಸಿ ಮೂವತ್ತು ನಾಲ್ವತ್ತು ವಿದ್ಯಾರ್ಥಿಗಳಿಗೆ ಪಾಠಪ್ರವಚನವನ್ನು ಹೇಳಿಸುತ್ತ ಸಕಲ ಸತ್ಕಾರ್ಯಗಳನ್ನೊದಗಿಸಿ ಕೊಟ್ಟಿದ್ದಕ್ಕಾಗಿ ಮಹಾಪ್ರಭುಗಳು ಇವರ ಧರ್ಮಸರಣಿಯನ್ನು ಪರಾಮರ್ಶಿಸಿ ನವರಾತ್ರಮಹೋತ್ಸವ ಸಮಯದಲ್ಲಿ ನವೀನಾಂಬರಗಳಿಂತೆ ಪಬ್ಲಿಕ್ ಸರ್ವಿಸ್ ಮೆಡಲನ್ನು ದಯಪಾಲಿಸಿದರೆಂದು ಕೇಳಿ ಸಂತೋಷಪಡುತ್ತೇವೆ. ಈ ವೃದ್ಧ ಆಸ್ತಿಕಮಹಾಶಯರು ಇಮವರೆಗೆ ಸಾರ್ವಜನಿಕ ಮತ್ತು ಮತಸೇವೆಗಾಗಿ ವಿಪುಲದ್ರವ್ಯವನ್ನು ವ್ಯಯಮಾಡಿ ಪ್ರಭುಗಳೊಲುಮೆಯನ್ನೂ ಈಶ್ವರನೊಲುಮೆಯನ್ನೂ ಪಡೆದು ಕೃತಕೃತ್ಯರಾದುದರಿಂದ ದೇವರು ಇವರಿಗೆ ಅತಿಶಯವಾದ ಆಯುರಾರೋಗ್ಯಭಾಗ್ಯವನ್ನಿತ್ತಿಯೆಂದು ಅವೇಕ್ಷಿಸುವೆವು.

ಮೈಸೂರು ಜನಜಾಗೃತಿಸಂಘದ ಅಧ್ಯಕ್ಷರಾದ ಮಾ|| ಟಿ. ಎಸ್. ಸುಬ್ಬಣ್ಣನವರೂ ಅದೇ ಸಂಘದ ಕಾರ್ಯದರ್ಶಿ ಮಾ|| ರಾಜಶೇಖರ್ ಎಂಬವರು 1917ನೇ ಇಸವಿ ಸೆಪ್ಟೆಂಬರ್ ತಾ|| 27 ರಲ್ಲಿ ಟ್ರಾಫಿಕ್ ಪೋಲೀಸ್ ಸಾರ್ಜೆಂಟ್ ತನ್ನ ಕರ್ತವ್ಯವನ್ನು ನೆಡೆಸದಂತೆ ಅಡ್ಡಿಪಡಿಸಿದ್ದರೆಂದು ಮೊಕದ್ದಮೆಯಾಗಿದ್ದಿತು. ಮೈಸೂರು ಸಿಟಿ ಮ್ಯಾಜಿಸ್ಟ್ರೇಟರು ಮೊದಲನೆಯ ಅಪರಾಧಿಗೆ 2 ತಿಂಗಳ ಮತ್ತು ಎರಡನೆಯ ಅಪರಾಧಿಗೆ ಒಂದು ತಿಂಗಳ ಕಠಿಣಸಜಾ ಶಿಕ್ಷೆ ವಿಧಿಸಿರುತ್ತಾರೆ. ಸೋಮಸುಂದರಶರ್ಮ ಮತ್ತು ಶ್ರೀನಾಥ್ ಎಂಬಿಬ್ಬರು ಕಾಲೇಜ್ ವಿದ್ಯಾರ್ಥಿಗಳೂ ಸಹ ಮೇಲ್ಕಂಡ ಅಪರಾಧಿಗಳ ಸಹಾಯಕರಾಗಿದ್ದರೆಂದು ಅವರಿಗೂ ಮ್ಯಾಜಿಸ್ಟ್ರೇಟರು ಶಿಕ್ಷೆನಿಧಿಸಿ ಅವರಿಬ್ಬರಿಗೂ ತಲಾ 100 ರೂ. ನ ನೇಕ್‌ಚಾಲ್ ಜಾಮೀನು ಪತ್ರ ಬರೆದುಕೊಟ್ಟು ಅವೇ ಮೊಬಲಗಿಗೆ ಇನ್ನಿಬ್ಬರ ಜಾಮೀನು ಕೊಡತಕ್ಕದ್ದೆಂದು ಹೇಳಿ ಅವರಿಬ್ಬರನ್ನು ಬಿಡುಗಡೆ ಮಾಡಿಸಿದರು.

ಶ್ರೀಮನ್ಮಹಾರಾಜರು ನವರಾತ್ರಿ ವಿಶೇಷ ದರ್ಬಾರ್ ನಡೆಸಿ, ಕೆಳಗೆ ಕಂಡ ಮಹನೀಯರಿಗೆ ಬಿರುದುಗಳನ್ನು ಪ್ರಯಪಾಲಿಸಿದರು—ರಾವ್ ಬಹದ್ದೂರ್ ಎಂ. ಸಿ. ರಂಗಯ್ಯಂಗಾರ್, ಶ್ರೀ ಎ. ವಿ. ರಾಮನಾಥ್ಯ ಮತ್ತು ಶ್ರೇಷ್ಯ ಕಾರ್ಯದರ್ಶಿಗಳಾದ ಶ್ರೀ ಬಿ. ಟಿ. ಕೇಶವಮೂರ್ತಿ ಗಾರ್ ಇವರುಗಳಿಗೆ "ರಾಜಸೇವಾಪ್ರಸಕ್ತ", ಶ್ರೀ ಬಿ. ಎಂ. ಶ್ರೀಕಂಠಯ್ಯನವರಿಗೆ "ರಾಜಸೇವಾಸಕ್ತ", ಬ್ರಃ ಶ್ರೀ॥ ಮಹಾಮಹೋಪಾಧ್ಯಾಯ ಸಿದ್ಧಾಂತ ಶಂಕರ ಶಾಸ್ತ್ರಿಗಳಿಗೆ "ವಿದ್ಯಾನಿಧಿ", ಬ್ರಃ॥ ಶ್ರೀ॥ ಮಹಾವಿದ್ವಾ ಕಾಶಿ ಸುಬ್ರಹ್ಮಣ್ಯಶಾಸ್ತ್ರಿಗಳಿಗೂ, ಮತ್ತು ಬ್ರಃ॥ ಶ್ರೀ॥ ಮಹಾವಿದ್ವಾ ಕಾನಕಾನಹಳ್ಳಿ ನಾರಾಯಣಶಾಸ್ತ್ರಿಗಳಿಗೂ "ಪಂಡಿತರತ್ನ", ಶ್ರೀ ಆರ್. ನಾರಾಯಣಭಾಗವತರಿಗೆ "ಸಂಗೀತರತ್ನ" ಎಂಬ ಬಿರುದುಗಳು ಕೊಡಲ್ಪಟ್ಟವು.

ವರ್ತಮಾನಸಂಗ್ರಹ.

ಯಹೂದ್ಯರಿಗೆ ಹೊಸವಸತಿ

ಇಟಲಿಯ ಸರ್ವಾಧಿಕಾರಿ ಸೀನರ್ ಮಸ್ಸೋಲಿನಿಯವರು ಯೂರೋಪಿನಿಂದ ಹೊರದೂಡಲ್ಪಡುವ ಯಹೂದ್ಯರಿಗೊಂದು ದಾರಿತೋರಲಿರುವರಂತೆ! ಅದೇನೆಂದರೆ ಇಟಲಿಯು ಹೊಸದಾಗಿ ಜಯಿಸಿದ ಅಬ್ಸೀನಿಯದಲ್ಲಿ ಅವರಿಗೆ ವಾಸಿಸಲು ಅವಕಾಶಕೊಡುವ ವಿಷಯವನ್ನು ಯೋಚಿಸುತ್ತಿರುವರು.

ಬಿರುಗಾಳಿ ಅನಾಹುತ

ಕಳೆದ ೬ ನೆಯ ತಾರೀಖು ರಾತ್ರೆ ಮುಂಬಯಿನಲ್ಲಿ ಬಿರುಗಾಳಿ ಬೀಸಿ ಭಾರಿಮಳೆ ಸುರಿಯಿತು. ಗಾಳಿಯಗೆಸೆಯಿಂದ ಮರಗಳು ತಲೆಕೆಳಕಾದವು, ಟ್ರಾಮುಗಳ ಮತ್ತು ವಿದ್ಯುಚ್ಛಕ್ತಿಯಿಂದ ಓಡುವ ರೈಲುಗಳ ಸಂಚಾರಕ್ಕೆ ಅಡಚಣೆಯುಂಟಾಯಿತು. ಟ್ರಿಲಿಗ್ರಾಫ್ ಮತ್ತು ಟೆಲಿಫೋನ್ ವ್ಯವಸ್ಥೆ ಹದಗೆಟ್ಟಿತು.

ಹೆಂಗಸರಿಗೂ ಸೈನ್ಯ ಶಿಕ್ಷಣ

ಚೀನಾ ದೇಶದ ಕಾಟೋ ಜಿಲ್ಲೆಯಲ್ಲಿ ಹೆಂಗಸರೂ ಸಹ ಎರಡು ತಿಂಗಳ ವರೆಗೆ ದಿನವೊಂದಕ್ಕೆ ಮೂರು ಘಂಟೆಗಳ ಸೈನ್ಯ ಶಿಕ್ಷಣವನ್ನು ಪಡೆಯತಕ್ಕದ್ದೆಂದು ವಿಧಾಯಕಮಾಡಿರುತ್ತಾರೆ. ಈ ಶಿಕ್ಷಣ ಸಮಯದಲ್ಲಿ ದೊಡ್ಡ ಬಂದೂಕುಗಳನ್ನೂ ಸಣ್ಣ ಕೈಪಿಸ್ತೂಲುಗಳನ್ನೂ ಹಾರಿಸುವುದನ್ನು ಕಲಿಸಿಕೊಡುತ್ತಾರೆ. ಮತ್ತು ಪ್ರಥಮ ಚಿಕಿತ್ಸೆಯ ಶರವೇತು ಕೊಡುತ್ತಿದ್ದಾರೆ.

ಬರ್ಮಾ ದೇಶಕ್ಕೆ ಇಂಡಿಯಾ ದೇಶದ ವಿಜಂಟರು

ಇಂಡಿಯಾ ಸರ್ಕಾರದವರು ಮಿ॥ ಸಿ. ವಿ. ಹೆಂಡರ್ಸನ್‌ರವರನ್ನು ಬರ್ಮಾ ದೇಶದಲ್ಲಿ ಇಂಡಿಯಾ ಸರ್ಕಾರದ ಏಜೆಂಟರನ್ನಾಗಿ ನೇಮಿಸಿರುತ್ತಾರೆ. ಇವರು ಕಳೆದ ಬುಧವಾರ ಅಲ್ಲಿನ ಗವರ್ನರರವರನ್ನೂ ಅಲ್ಲಿನ ಇತರ ಪ್ರಮುಖ ಭಾರತೀಯ ನಾಯಕರನ್ನೂ ಭೇಟಿಮಾಡಿದರು. ಆ ದೇಶದಲ್ಲಿ ಈಚೆಗೆ ನಡೆದ ದಂಗೆಕೃತ್ಯಗಳ ಸಂಬಂಧವಾಗಿ ತನಿಖೆ ನಡಿಸಿ ಸರ್ಕಾರದವರಿಗೆ ವರದಿಮಾಡಲು ಒಂದು ವಿಚಾರಣಾ ಸಮಿತಿಯು ಏರ್ಪಟ್ಟಿದೆ.

ನೈಯತ್ಯ ಆಫ್ರಿಕದ ಪ್ರಶ್ನೆ

ಮಹಾಯುದ್ಧದ ಪೂರ್ವದಲ್ಲಿ ಜರ್ಮನಿಗೆ ಸೇರಿದ್ದ ನೈಯತ್ಯ ಆಫ್ರಿಕವು ಯುದ್ಧಾನಂತರ ಮ್ಯಾಂಡೇಟರಿ ಪ್ರಭುತ್ವಕ್ಕೊಳಪಡಿಸಲ್ಪಟ್ಟು ಈಗ ದಕ್ಷಿಣ ಆಫ್ರಿಕವು ಅದರ ಆಡಳಿತವನ್ನು ನೋಡುತ್ತಿದೆ. ಇನ್ನುಮುಂದೆ ಅಲ್ಲಿನ ಜನರು ದಕ್ಷಿಣ ಆಫ್ರಿಕದೊಡನೆ ಸೇರಲಿಚ್ಛಿಸುವರೋ ಅಥವಾ ಜರ್ಮನಿಗೆ ಸೇರಬಯಸುವರೋ ಎಂಬುದಕ್ಕೆ ಓಟು ಪಡೆಯುವ ನಿರ್ಣಯವನ್ನು ಮಾಡಲು ಕಾಸನಸಭೆ ಸೇರಿಸಬೇಕೆಂದು ಆಡಳಿತ ಅಧಿಕಾರಿಗಳನ್ನು ಯುನೈಟೆಡ್ ನ್ಯಾಷನಲ್ ಸೌತ್‌ವೆಸ್ಟ್ ಆಫ್ರಿಕಪಾರ್ಟಿಯ ಕಡೆಯವರು ಕೇಳಬೇಕೆಂದು ಆದರ ಒಂದು ಪಾರ್ಟಿಯವರು ಪ್ರಾರ್ಥಿಸಿರುತ್ತಾರೆ.

ಭಿಕ್ಷೆಬೇಡಲು ಸರ್ಕಾರದ ಅಪ್ಪಣೆ ಪಡೆಯಬೇಕು!

ಬಂಗಾಳದ ಘೋರಕ್‌ಪುರದ ಜಿಲ್ಲೆಯಲ್ಲಿ ಭಿಕ್ಷುಕರ ಹಾವಳಿಯನ್ನು ತಪ್ಪಿಸಲು ಹಲವು ಶಾಸನಗಳನ್ನು ಆಜ್ಞರಣೆಗೆ ತಂದಿರುತ್ತಾರೆ. ಇದರಂತೆ ರಹದಾರಿಪಡೆಯದೆ ಭಿಕ್ಷಕ್ಕೆ ಬರಕೂಡದು. ರಹದಾರಿಗಳು, ಕುರುಡರು, ಹೆಳವರು, ಮೂಕರು ಮುಂತಾದ ಅಂಗವಿಕಲರಿಗೆ ಮಾತ್ರ ಕೊಡಲ್ಪಡುವುದು. ಜನಗಳು ಸೇರತಕ್ಕ ಸ್ಥಳಗಳಲ್ಲಿ ಸಾಂಕ್ರೋಗ ಮೊದಲಾದ ಸಾಂಕ್ರಾಮಿಕ ರೋಗಿಗಳಿಗೆ ಭಿಕ್ಷಬೇಡಲವಕಾಶವಿಲ್ಲ. ಇದಕ್ಕೆ ಮೀರಿನಡೆದರೆ 50 ರೂಗಳವರಿವಿಗೂ ದಂಡ ವಿಧಿಸಬಹುದೆಂದು ವಿಧಾಯಕಮಾಡಲ್ಪಟ್ಟಿದೆ. ಇದರಿಂದ ಭಿಕ್ಷಕರ ಹಾವಳಿ ಬಹಳ ಮಟ್ಟಿಗೆ ಕಡಮೆಯಾಗಿರುತ್ತದೆ.

ಚೀನಕ್ಕೆ ಹೋದ ಭಾರತದ ವೈದ್ಯಪಡೆ!

ಚೀನಾದೇಶಕ್ಕೆ ಸಹಾಯಾರ್ಥವಾಗಿ ಹೊರಟ ಭಾರತದ ವೈದ್ಯಪಡೆಯು ಅಲ್ಲಿಗೆ ತಲಪಿರುತ್ತದೆ. ಅದರ ನಾಯಕರಾದ ಡಾ॥ ಅತಲ್‌ರವರು ತಾವು ಭಾರತದಿಂದ ಹೊರಡುವ ಕಾಲದಲ್ಲಿ ಮಹಾತ್ಮಾ ಗಾಂಧಿಯವರನ್ನು ಸಂದರ್ಶಿಸಿ ಯುದ್ಧವು ಮುಗಿಯುವವರಿವಿಗೂ ತಾವು ಚೀನದಲ್ಲೆ ಇರುವದಾಗಿ ಹೇಳಿಬಂದಿರುವದಾಗಿಯೂ ಒಂದು ನೇಳೆ ಜಪಾನಿನವರಿಂದ ತಾವು ಹತರಾದರೆ ಬೇರೆಯವರು ಬಂದು ತಮ್ಮ ಕಾರ್ಯವನ್ನು ಮುಂದುವರಿಸುವರೆಂದೂ ಹೇಳಿಕೆಯೊಂದನ್ನು ಕೊಟ್ಟಿರು. ಈ ವೈದ್ಯಪಡೆಯಲ್ಲಿ 5 ಮಂದಿ ಡಾಕ್ಟರುಗಳಿದ್ದಾರೆ. ಇವರು ಚೀನಾ ರೆಡ್‌ಕ್ರಾಸ್ ಪಡೆಗೆ ದಾಖಲು ಮಾಡಲ್ಪಟ್ಟಿರು. ಇವರುಗಳ ಜೊತೆಗೆ ರೋಗಿಗಳಿಗೆ ಉಪಚಾರಮಾಡಲು 15 ಮಂದಿ ಚೀನಾ ನರ್ಸುಗಳು ಒದಗಿಸಲ್ಪಟ್ಟಿರುವರು. ಇವರೆಲ್ಲರೂ ಒಂದು ವಾರದಲ್ಲಿ ರಣರಂಗಕ್ಕೆ ಪ್ರಯಾಣ ಮಾಡಲಿರುವರು.

ಚೀನದ ವಿಚಿತ್ರವಿವಾಹಪದ್ಧತಿ

ಚೀನದ ಪೂರ್ವಾಚಾರದಲ್ಲಿ ಒಂದು ವಿಚಿತ್ರ ವಿವಾಹ ಪದ್ಧತಿಯಿದೆ. ಅದರಂತೆ ಒಂದುಬಾಣ ವಿವಾಹವು ನಿಶ್ಚಯಿಸಲ್ಪಟ್ಟತೆಂದರೆ ತೀರಿತು, ಆ ಕಾಲಕ್ಕೆ ಮೊದಲು ಒಂದುನೇಳೆ ವರನು ವೃತನಾದರೂ ಕೂಡ ನಿಶ್ಚಿತಕಾಲದಲ್ಲಿ ಆ ವಿವಾಹಶಾಸ್ತ್ರವನ್ನು ನಡೆಸಿಯೇ ಬಿಡುತ್ತಾರೆ. ಆ ಕಾಲಕ್ಕೆ ವಧುವಿಗೆ ನಂಟರಿಷ್ಟರು ಎಂದಿನಂತೆ ಬಹುಮಾನಗಳನ್ನು ಕಳುಹಿಸುತ್ತಾರೆ. ಲಗ್ನಕ್ಕೆಸರಿಯಾಗಿ ವರನ ಚಿತ್ರವನ್ನು ಪೀಠದಲ್ಲಿಟ್ಟು ಅವನ್ನೇ ಅವನ ಆತ್ಮಕ್ಕೆಂದು ಎಣಿಸಿ ಎಲ್ಲಕೆಲಸವನ್ನೂ ಸಾಂಗವಾಗಿನಡೆಸಿ ಅವನ ಆತ್ಮಕ್ಕೆ ಸುಖ ಶಾಂತಿಯನ್ನು ಬಯಸುತ್ತಾ ತಿಂದು ಕುಡಿದು ಸಂತೋಷ ಪಡುತ್ತಾರೆ. ಮತ್ತು ಇನ್ನೊಂದು ಸಂದರ್ಭದಲ್ಲಿ ವಿವಾಹ ನಿಶ್ಚಿತರಾಗಿದ್ದ ವಧೂವರರಿಬ್ಬರೂ ನಿಶ್ಚಿತಕಾಲಕ್ಕೆ ಮುಂಚೆ ವೃತರಾದರೂ, ಆ ವಧೂವರರ ಮನೆಯವರು ಮುಹೂರ್ತ ನಿಶ್ಚಯವಾಗಿದ್ದ ದಿವಸ ವಧೂವರರು ಬದುಕಿದ್ದರೆ ನಡೆಸುತ್ತಿದ್ದಂತೆಯೇ ಸಕಲೋತ್ಸವಗಳನ್ನೂ ನಡೆಸಿ ಆನಂದಿಸುವರು.

ಸಿಲಾಂಗಿನಲ್ಲಿ ಹೊಡೆದಾಟ!

ಆಸ್ಸಾಮ್ ಆಧಿಪತ್ಯದ ಮುಖ್ಯನಗರವಾದ ಸಿಲಾಂಗಿನಲ್ಲಿ ಕಳೆದ ಮಂಗಳವಾರ ಸಾಯಂಕಾಲ (ಸೆ. 27) ಮಹಾಜನರ ಸಭೆಯೊಂದು ನಡೆಯಿತು. ಆ ಸಭೆಯಲ್ಲಿ ಆ ಆಧಿಪತ್ಯದ ಹಿಂದಿನ ಮಂತ್ರಿಮಂಡಲಿಯಲ್ಲಿ ಪ್ರಧಾನ ಸಚಿವರಾಗಿದ್ದ ಸರ್ ಮಹಮದ್ ಸಾದುಲ್ಲಾರವರು ಆ ಆಧಿಪತ್ಯದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಭಾಷಣಮಾಡಿ ಕಾಂಗ್ರೆಸ್ ಮಿಶ್ರಣ ಮಂತ್ರಿ ಮಂಡಲಿಯ ರಚನೆ ಯಾವರೀತಿ ಆಯಿತೆಂಬುದನ್ನು ತಿಳಿಸಿದರು. ಆ ಸಭೆಯಲ್ಲಿದ್ದ ಕೆಲವರು ಕಾಂಗ್ರೆಸ್ ಮಿಶ್ರಣ ಮಂತ್ರಿಮಂಡಲದ ಪರವಾಗಿ ಮಾತನಾಡಲು ಅವಕಾಶ ಬೇಡಿದರು. ಆದರೆ ಅವರಿಗೆ ಅವಕಾಶ ದೊರೆಯದಿರಲು ಸಭೆಯಲ್ಲಿ ಅಶಾಂತತೆಗೂ ಗಲಭೆಗೂ ಆರಂಭವಾಯಿತು. ಪದಸ್ಥರುಗಳು ಬೆಂಚು, ಕುರ್ಚಿ, ಮೇಜುಗಳನ್ನೇ ಎತ್ತಿ ಹೊಡೆದಾಡಿದರು. ಸರ್ ಸಾದುಲ್ಲಾ ಮಂತ್ರಿಮಂಡಲದ ಪಕ್ಷ ಪಾತಿಗಳು ಉದ್ರೇಕಗೊಂಡು ರಸ್ತೆಗಳಲ್ಲಿ ನುಗ್ಗಿ ಪಾದಚಾರಿಗಳ ಮೇಲೆ ಬಿದ್ದು ಅತ್ಯಾಚಾರ ನಡಿಸಿ ಬಂಗಾಳಿಗಳ ಅಂಗಡಿಗಳಿಗೆ ನುಗ್ಗಿ ಲೂಟಮಾಡಿದರು. ಪೋಲೀಸಿನವರು ಬಹಳ ಶ್ರಮಪಟ್ಟು ಅವರ ಪಂಗೇ ಕೃತ್ಯಗಳನ್ನು ಹತೋಟಿಗೆ ತಂದರು. ಅನೇಕರಿಗೆ ಗಾಯಗಳಾಗಿವೆ. ಪೋಲೀಸಿನವರು ಅನೇಕರನ್ನು ದಸ್ತಗಿರಿಮಾಡಿಗಲಭೆಗೆ ಅವಕಾಶವಿಲ್ಲದಂತೆ ಕಾವಲು ಕಾಯುತ್ತಿರುವರೆಂದು ತಿಳಿದುಬಂದಿದೆ.

ದೇಶವಾಸ್ಪಲ್ಯ

ಚೀನಾ ದೇಶದ ಸೈನಿಕರು ಯುದ್ಧಭೂಮಿಯಲ್ಲಿ ಆಹಾರದ ಕೊರತೆಯಿಂದ ಯಾವ ಕಷ್ಟವನ್ನನುಭವಿಸುತ್ತಾರೋ ಅದರ ಕಿಂಚಿತ್ ಪರಿಶ್ರಮವನ್ನು ತಾವೂ ಪಡೆಯಬೇಕೆಂದು ಲಂಡ್ ಪಟ್ಟಣದಲ್ಲಿರುವ ಚೀನಾ ದೇಶದ ಜನರೆಲ್ಲರೂ ಕಳೆದ ವಾರದಲ್ಲಿ ಒಂದು ದಿನ ಉಪವಾಸ ಮಾಡಿದರು. ಆ ದಿನ ಉಳಿತಾಯವಾದ ದುಡ್ಡನ್ನೆಲ್ಲಾ ಸೇರಿಸಿ ಚೀನಾದೇಶಕ್ಕೆಕಳುಹಿಸಿಕೊಟ್ಟರು. ಲಂಡ್ ಪಟ್ಟಣದಲ್ಲಿರುವ ಚೀನಾ ಜನಾಂಗಕ್ಕೆ ಸೇರಿದವರೆಲ್ಲರೂ, ಹೋಟಲುಗಳಲ್ಲಿ ಲೋಟ ತಟ್ಟೆಗಳನ್ನು ತೊಳೆದುಕೊಂಡು ಜೀವಿಸುವ ಬಡವರೂ ಸಹ, ತಮ್ಮ ವರಮಾನದಲ್ಲಿ ಕಿಂಚಿತ್ತನ್ನು ಪ್ರತಿದಿನವೂ ತಮ್ಮ ದೇಶಸಹಾಯಕ್ಕಾಗಿ ಕೂಡಿಸಿಕೊಡುತ್ತಿದ್ದಾರೆ. ಈ ರೀತಿ ಸುಮಾರು 3,000 ಪೌಂಡುಗಳನ್ನು ಬೇಕಾಗಿಸಿ ಈಗಾಗಲೇ ಕಳುಹಿಸಿಕೊಟ್ಟಿರುತ್ತಾರೆಂದು ತಿಳಿಯುವುದು.

ಹಿಂದೂ-ಮುಸ್ಲಿಂ ಹೊಡೆದಾಟ

ಕಳೆದ 4 ನೆಯ ತಾರೀಖು ರಾತ್ರೆ ಸಿಲ್‌ಹಟ್‌ನಲ್ಲಿ ಹಿಂದೂ-ಮುಸಲ್ಮಾನರಿಗೆ ಹೊಡೆದಾಟಗಳಾಗಿ ಹಲವರಿಗೆ ಗಾಯಗಳಾದವು. ದಸರಾ ಉತ್ಸವದ ನಿಮಿತ್ತ ಹಿಂದುಗಳು ವಾದ್ಯಸಮೇತ ಬಂಡರ್ ಬಜಾರಿನ ಕಂಪ್ರಕ್ ಉಲ್ಲಾ ಮಸೀದಿಯ ಮುಂದೆ ಮೆರವಣಿಗೆ ಹೋಗುತ್ತಿದ್ದಾಗ ಮಸೀದಿ ಒಳಗಿನಿಂದ ಕಲ್ಲುಗಳೇ ಮುಂತಾದುವು ಎಸೆಯಲ್ಪಟ್ಟವಂತೆ. ಕೋಚಹೊತ್ತಿನಮೇಲೆ ಅನೇಕ ಮಂದಿ ಮುಸ್ಲಿಮರು "ಅಲ್ಲಾ-ಹಿ-ಅಕ್ಬರ್"; 'ಮುಸ್ಲಿಂ ಲೀಗ್ ಜಿಂದಾಬಾದ್'—ಎಂದು ಕೂಗುತ್ತಾ ಬೀದಿಯಲ್ಲಿ ಮೆರವಣಿಗೆ ಹೊರಟರು. ಹಿಂದುಗಳಿಗೂ ಮುಸ್ಲಿಮರಿಗೂ ಘರ್ಷಣವಾಯಿತು. ಪುಂಡರು ಹಲವು ವಾಸಗೃಹಗಳನ್ನು ಮುತ್ತಿ ಗಲಾಟೆಮಾಡಿದರು. ಎರಡು ಕೋಮಿನವರಲ್ಲೂ ಅನೇಕ ಮಂದಿ ಗಾಯಗೊಂಡರು. ಆ ಕ್ಷೇತ್ರದಲ್ಲಿದ್ದ ಹಿಂದೂ ಅಂಗಡಿಗಳೆಲ್ಲ ಮುಚ್ಚಲ್ಪಟ್ಟವು ಪೋಲೀಸರು ಕಾವಲಿದ್ದಾರೆ.

ಹೊಸಮಂತ್ರಿಮಂಡಲ ರಚನೆಯ ಕಾಲದಲ್ಲಿ ಜೆಕ್ ಸರ್ಕಾರದ ಮುಖ್ಯ ಮಂತ್ರಿಗಳ ಭಾಷಣ.

ಜಿಕೊಸ್ಲೊವೇಕಿಯದ ಮುಖ್ಯ ಮಂತ್ರಿಗಳಾದ ಜನರಲ್ ಸಿರೋವಿಯವರು ಆಕಾಶವಾಣಿಯಿಂದ ತಮ್ಮ ಪ್ರಜೆಗಳನ್ನು ಕುರಿತು ಇದು ಬಹು ವಿಷನುವಾದ ಸಮಯವು. ನನ್ನ ಜೀವಮಾನದಲ್ಲಿಯೇ ಇಂಥ ಪ್ರಸಕ್ತಿಯುಂಟಾಗಿರಲಿಲ್ಲ. ಸೈನ್ಯಸಂಪತ್ತಿನಿಂದೊಡಗೂಡಿದವರು ಪರಕ್ಕು ಗಳಿಗೆ ಒಪ್ಪುವಂತೆ ನಮ್ಮನ್ನು ಬಲಾತ್ಕರಿಸುತ್ತಾರೆ. ಪ್ರತಿಯೊಂದು ಅಂಶವನ್ನೂ ನಾನು ಪರಿಶೀಲಿಸುತ್ತ ಶಾಂತಿಸ್ಥಾಪನೆಯ ಮಾರ್ಗವನ್ನೇ ಹಿಡಿಯಬೇಕಾಗಿದೆ. ಇದರಿಂದ ನಮ್ಮ ಜನಾಂಗದ ಬಲವು ಹೆಚ್ಚಿ ಏಕ್ಯತೆಯೊದಗುತ್ತದೆ. ನಿರರ್ಥಕವಾಗಿ ಯುದ್ಧ ಅಥವಾ ತ್ಯಾಗ ಇವುಗಳಲ್ಲಿ ಯಾವುದಾದರೊಂದನ್ನು ಸ್ವೀಕರಿಸಬೇಕಾಗಿದೆ. ನಮ್ಮ ಮೇಲೆ ತೊರಿಸಿರುವ ಹಿಂದೆ ಯಾರೂ ಕಾಣದ ಕೇಳದ ತ್ಯಾಗಮಾರ್ಗವನ್ನು ಅನುಮೋದಿಸಿರುತ್ತೇವೆ. ನಮ್ಮ ಜನತೆಯನ್ನೇ ನಾಶಮಾಡಿಕೊಳ್ಳುವ ಅಥವಾ ಕೆಲವು ಪ್ರದೇಶದ ಸ್ವಾಮಿತ್ವವನ್ನು ಕಳೆದುಕೊಳ್ಳುವ ಕಾರ್ಯಗಳಲ್ಲಿ ಯಾವುದಾದರೊಂದನ್ನು ಮಾಡಬೇಕಾಗಿದೆ. ಇದರಲ್ಲಿ ಮುಖ್ಯವಾದ ಅಂಶವೇನೆಂದರೆ ಅನ್ಯರ ಸಂಬಂಧವಿಲ್ಲದೆ ನಾವೇ ಸ್ವತಂತ್ರವಾಗಿ ಉಳಿದಿರುತ್ತೇವೆ. ಜನರು ತಮ್ಮ ನಾಯಕರ ವಿಷಯದಲ್ಲಿ ಸಂಪೂರ್ಣವಾಗಿ ವಿಶ್ವಾಸವಿಟ್ಟುಕೊಂಡಿರಬೇಕೆಂದು ನನ್ನ ಪ್ರಾರ್ಥನೆಯು. ನಮ್ಮ ನೆರೆಯವರಲ್ಲಿ ಒಪ್ಪಂದಮಾಡಿಕೊಳ್ಳುವದು ಸುಲಭವಾಗುವದು. ನಮ್ಮ ದೇಶವನ್ನು ಪುನಃ ರಚಿಸುವುದೇ ನಮ್ಮ ಮುಖ್ಯಕರ್ತವ್ಯವಾಗಿದೆ. ಎಂದು ಭಾಷಣ ಮಾಡಿದರು.

[೪ ನೇ ಪುಟದಿಂದ ಮುಂದುವರೆದಿದೆ]

ರೇಷ್ಮೆ ವ್ಯವಸಾಯ.

ಇಷ್ಟಾನಿಂದಲೂ, ಚೀನಾದಿಂದಲೂ ಭರತಖಂಡಕ್ಕೆ ರೇಷ್ಮೆಯ ನೂಲೂ ರೇಷ್ಮೆಯ ಸರನುಗಳೂ ಬಂದು ಬೀಳುತ್ತಿದ್ದ ಕಾರಣ, 1937-38 ನೆಯ ಸಾಲಿನಲ್ಲಿ ಸಹ ರೇಷ್ಮೆ ಕೈಗಾರಿಕೆಗೆ ಹಿಂದಿನಂತೆಯೇ ಪ್ರತಿಕೂಲವೆಂಬಿಯಿತು.

ರೇಷ್ಮೆ ವ್ಯವಸಾಯವು ಯಾವ ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ಮಟ್ಟಿಗೆ ನಡೆಯುತ್ತಿದೆಯೆಂಬ ವಿಚಾರವಲ್ಲಿ ಒಮ್ಮೆ 'ಸರ್ವೇ' ಪರೀಕ್ಷಣ ನಡೆಯಿತು. ಆಲ್ಲದೆ, ಹಿಂದೆ ರೇಷ್ಮೆ ವ್ಯವಸಾಯವು ನಡೆಯುತ್ತಿದ್ದು ಈಚೆಗೆ ನಿಂತುಹೋಗಿರತಕ್ಕ ಗ್ರಾಮಗಳ 'ಸರ್ವೇ' ಪರೀಕ್ಷಣವನ್ನೂ ನಡೆಯಿಸಲಾಯಿತು.

ರೇಷ್ಮೆ ವ್ಯವಸಾಯಗಾರರಲ್ಲಿ ಹಲವು ಮಂದಿಗಳಿಗೆ ಉಪ್ಪಿನೇ ರೆಕೆಯ ಕಡ್ಡಿಗಳನ್ನೂ ಮತ್ತು ಸಸಿಗಳನ್ನೂ ಉಚಿತವಾಗಿ ಹಂಚಲಾಯಿತು; ಮತ್ತು ಅವರುಗಳು ತಮ್ಮ ಸ್ವಂತ ಜಮೀನುಗಳಲ್ಲಿ ಉಪ್ಪಿನೇರಳೆ ಮರಗಳನ್ನು ಬೆಳೆಯಿಸಲು ಸಾಕ್ಕಗಳನ್ನು ಒದಗಿಸಲಾಯಿತು. ಗ್ರಾಮ ಪಂಚಾಯತಿಗಳ ಸಹಕಾರದಿಂದ ಬೆಂಗಳೂರು ಕೋಲಾರ ರಸ್ತೆಯ ಉದ್ದಕ್ಕೂ ಅಲ್ಲಲ್ಲಿ ನಾನಾ ಗ್ರಾಮಗಳಲ್ಲಿಯೂ, ಮತ್ತು ಬಳಾಯದ ಇತರ ಕೆಲವು ಗ್ರಾಮಗಳಲ್ಲಿಯೂ, ಉಪ್ಪು ನೇರಳೆ ತೋಪುಗಳನ್ನು ಏರ್ಪಡಿಸಿ, ಉಪ್ಪುನೇರಳೆ ಸಾಗುವಳಿಯ ಉತ್ತಮ ವಿಧಾನವನ್ನು ಜನರಿಗೆ ಪ್ರತ್ಯಕ್ಷವಾಗಿ ಪ್ರದರ್ಶಿಸಿ ತೋರಿ ಸಲಾಯಿತು. ರೋಗರಹಿತವಾದ ರೇಷ್ಮೆ ಮೊಟ್ಟೆಗಳನ್ನು ಜನರಿಗೆ ಮತ್ತಷ್ಟು ಹೆಚ್ಚಾಗಿ ಒದಗಿಸುವ ಮತ್ತು ಇತರ ಮಾರ್ಗಗಳಲ್ಲಿ ರೇಷ್ಮೆ ವ್ಯವಸಾಯದ ಪ್ರಗೋಭವೃದ್ಧಿಗೆ ಸಾಧಕವಾಗುವಂತೆ ಕೆಲಸ ಮಾಡುವ ಏರ್ಪಾಡಿಗಾಗಿ 37,150 ರೂಪಾಯಿಗಳ ಹೆಚ್ಚಿಗೆ ಹೊತ್ತನ್ನು ಸರ್ಕಾರವವರು ಮಂಜೂರುಮಾಡಿದರು. ಸರ್ಕಾರಿ ಸಹಾಯದ್ರವ್ಯವು ದೊರೆಯತಕ್ಕ "ಸ್ಪೈಸೆಜು" ಕೋರಿಗಳಿಂದ ಜನರಿಗೆ ಒಪಗಿಸಲ್ಪಡತಕ್ಕ ರೋಗರಹಿತವಾದ ರೇಷ್ಮೆ ಮೊಟ್ಟೆಗಳ ಪರಿಮಾಣವನ್ನ ಹಿಂದಿದ್ದುದರ ಸುಮಾರು ಒಂಭೂವರೆಯಷ್ಟು ಹೆಚ್ಚಿತು. 1937-38 ನೆಯ ಸಾಲಿನಲ್ಲಿ ಒಂದು ಕೋಟಿ ರೇಷ್ಮೆ "ಪತ್ತನೆ" ಗಳನ್ನು ("ಲೇಯಿಂಗ್ಸ್") ಒಸರಿಗೆ ಒದಗಿಸಲಾಯಿತು. ಆ ಪೈಕಿ 70 ಲಕ್ಷ "ಪತ್ತನೆ"ಗಳು ಹೆಚ್ಚು ರೇಷ್ಮೆಯು ದೊರೆಯಲು ಸಾಧಕವಾದ ರೇಷ್ಮೆ ಹುಳುಗಳನ್ನು ಕೊಡಬಲ್ಲ ಮಿಶ್ರತಳಿಯ ರೇಷ್ಮೆ ಮೊಟ್ಟೆಗಳಾಗಿದ್ದುವು.

ಜ್ಯುಡಿಷಿಯಲ್ ಇಲಾಖೆ.

1937-38 ನೆಯ ಸಾಲಿನಲ್ಲಿ ದಾಖಲಾದ ವಾಸೆಗಳ ಸಂಖ್ಯೆಯು 1936-37 ನೆಯ ಸಾಲಿನಲ್ಲಿ ದಾಖಲಾಗಿದ್ದ ವಾಸೆಗಳ ಸಂಖ್ಯೆಗಿಂತಲೂ 1,497 ಕಡಮೆ; ಎಂದರೆ ಸೇಕಡ 4.3 ರಂತೆ ವಾಸೆಗಳ ಸಂಖ್ಯೆಯು ಕಡಮೆಯಾದಂತಾಯಿತು. ಆಲ್ಲದೆ ವಾಸೆಗಳು ಫೈಸಲಾಗದೆ ಬಾಕಿ ಉಳಿದುಕೊಂಡಿದ್ದುದೂ ಸಹ ಬಹಳ ಕಡಮೆಯಾಗಿ ರುವುದು ತೃಪ್ತಿಕರವಾಗಿದೆ. 1936-37 ನೆಯ ಸಾಲಿನ ಕೊನೆಯಲ್ಲಿ ತೀರ್ಮಾನವಾಗದೆ ಉಳಿದಿದ್ದ ವಾಸೆಗಳ ಸಂಖ್ಯೆಯು 11,428 ; ಮತ್ತು 1937-38 ನೆಯ ಸಾಲಿನ ಕೊನೆಯಲ್ಲಿ ತೀರ್ಮಾನವಾಗದೆ ಉಳಿದಿದ್ದ ವಾಸೆಗಳ ಸಂಖ್ಯೆಯು 10,852. ದಾಖಲಾದ ಒಂದು ವರ್ಷಕ್ಕಿಂತಲೂ ಹೆಚ್ಚಾಗಿದ್ದು ಇನ್ನೂ ತೀರ್ಮಾನವಾಗದೆ ಉಳಿದಿದ್ದ ದಾವೆಗಳ ಸಂಖ್ಯೆಯು 1936-37 ನೆಯ ಸಾಲಿನಲ್ಲಿ 622 ಆಗಿದ್ದುದು 1937-38ನೆಯ ಸಾಲಿನಲ್ಲಿ 378 ಕ್ಕೆ ತಗ್ಗಿತು.

1937-38 ನೆಯ ಸಾಲಿನಲ್ಲಿ ದಾಖಲಾದ ಕ್ರಿಮಿನಲ್ ಪೊಕದ ಮೊಗ ಸಂಖ್ಯೆಯು 375 ಕ್ಕೆ ತಗ್ಗಿತು; ಎಂದರೆ ಸೇಕಡ 1 3ರಂತೆ ಕಡಮೆಯಾದಂತಾಯಿತು. ಆಪರಾಧಿಗಳ ಸಂಖ್ಯೆಯು 99 ಕಡಮೆಯಾಯಿತು; ಎಂದರೆ ಸೇಕಡ 0.2 ರಂತೆ ಕಡಮೆಯಾಯಿತು; ಮತ್ತು ಅಪರಾಧಿಗಳಿಗೆ ಶಿಕ್ಷೆ ವಿಧಾಯಕವಾದ ಸಂದರ್ಭಗಳ ಸಂಖ್ಯೆಯು ಸೇಕಡ 1,2ರಂತೆ ಕಡಮೆಯಾಯಿತು. ಹೈಕೋರ್ಟಿನಲ್ಲಿ ತೀರ್ಮಾನವಾಗಲೆ ಉಳಿದಿದ್ದ ಕ್ರಿಮಿನಲ್ ಅಪೀಲುಗಳ ಸಂಖ್ಯೆಯು 1933-34ನೆಯ ಸಾಲಿನಲ್ಲಿ 49 ಇದ್ದುದು ಕಡಮೆಯಾಗುತ್ತ ಬಂದು 1937-38ನೆಯ ಸಾಲಿನಲ್ಲಿ ಒಂದೂ ಉಳಿದಿಲ್ಲದಂತೆ ಆಯಿತು. ಅಷ್ಟೇಅಲ್ಲ, ಸರಾಸರಿಯಾಗಿ ಒಂದು ಕ್ರಿಮಿನಲ್ ಅಪೀಲು ತೀರ್ಮಾನಕ್ಕೆ ಹಿಡಿಯುತ್ತಿದ್ದ ಅವಧಿಯು 192 ದಿನಗಳಿಂದ 29,51 ದಿನಗಳಿಗೆ ತಗ್ಗಿದೆ. ಹೀಗೆ ವಿಚಾರಣೆಯ ಅವಧಿಯು ಕಡಿಮೆಯಾಗುತ್ತಿರುವ ಸಂದರ್ಭವನ್ನು ಕುರಿತು, ಈಚಿನ ಒಂದು ವಿದರ್ಶನವನ್ನು ಇಲ್ಲಿ ಸೂಚಿಸಬಹುದಾಗಿದೆ. ಅಪರಾಧ ನಡೆದ ತಾರೀಖಿ ನಿಂದ ಪೋಲಿಸು ತಪಾಸಿ, ಮ್ಯಾಜಿಸ್ಟ್ರೇಟರಿಂದ ಪ್ರಾರಂಭದ ವಿಚಾರಣೆ, ಆನಂತರ ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆ, ಆನಂತರ ಹೈ ಕೋರ್ಟಿನಲ್ಲಿ ಅಪೀಲು ತೀರ್ಮಾನ-ಇವೆಲ್ಲ ಕ್ರಮಗಳೂ ಮೇ 23 ನೆಯ ತಾರೀಖಿನಿಂದ ಸೆಪ್ಟೆಂಬರು 2ನೆಯ ತಾರೀಖಿನ ವರೆಗಿನ ಮೂರು ತಿಂಗಳು ಮತ್ತು ಪತ್ತೇ ದಿನಗಳ ಅವಧಿಯಲ್ಲಿ ಪೂರೈಸಿ ರುವುದೇ ಆ ನಿದರ್ಶನ.

ಸೆಷನ್ಸ್ ಮೊಕದ್ದಮೆಗಳಲ್ಲಿ 'ಜ್ಯೂರಿ' ಪಂಚಾಯಿತರನ್ನಿಟ್ಟು ಕೊಂಡು ವಿಚಾರಣೆಮಾಡುವುದನ್ನು 1938ನೆಯ ಇಸವಿ ಫೆಬ್ರವರಿ 1ನೆಯ ತಾರೀಖಿನಿಂದ ಹಾಸನ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್‌ಗಳ ಅಲ್ಲಿಯೂ ಆಚರಣೆಗೆ ತರಲಾಯಿತು. ಈಗ ಈ ಕ್ರಮವು ಸಂಸ್ಥಾನದಲ್ಲೆಲ್ಲ ಆಚರಣೆಯಲ್ಲಿದೆ.

ಮೆಡಿಕಲ್ ಇಲಾಖೆ.

1937-38ನೆಯ ಸಾಲಿನ ಅವಧಿಯಲ್ಲಿ ಜನರಿಗೆ ಚಿಕಿತ್ಸೆ ನಡೆಯುತ್ತಿದ್ದ ವೈದ್ಯಸಂಸ್ಥೆಗಳ ಒಟ್ಟು ಸಂಖ್ಯೆಯು 294. ಎಂದರೆ, ಸಂಸ್ಥಾನದಲ್ಲಿ ಪ್ರತಿ 100,4 ಚದರಮೈಲಿಗಳಿಗೊಂದರಂತೆ ವೈದ್ಯ ಸಂಸ್ಥೆಯಿದ್ದಂತಾಯಿತು; ಮತ್ತು ಪ್ರತಿ 22,300 ಜನಗಳಿಗೊಂದರಂತೆ ವೈದ್ಯಸಂಸ್ಥೆ ಇದ್ದಂತಾಯಿತು. ಭರತಖಂಡದ ಇತರ ಯಾವ ಪ್ರದೇಶದೊಡನೆ ಹೋಲಿಸಿದರೂ ಈ ಸೇಕಡಾವರು ಹೆಚ್ಚಾಗಿಯೇ ಇದೆಯೆಂದು ಹೇಳಲಖಂಡಾಗಿದೆ.

ಕೋಲಾರದಲ್ಲಿ ಕಟ್ಟುರುವ ಶ್ರೀ ನವಿಹಂಪಡಾಜ ಆಸ್ಪತ್ರೆಯು, ಮಧ್ಯದಲ್ಲೊಂದು ಚಾಳವನ್ನು ಬಿಟ್ಟುಕೊಂಡು ಸುತ್ತಮುತ್ತಲೂ ಬಿಡಿಬಿಡಿಯಾಗಿ ಬೇರೆ ಬೇರೆ ಕಟ್ಟಡಗಳನ್ನು ಕಟ್ಟುರತಕ್ಕ ರೀತಿಯಲ್ಲಿ ವಿನ್ಯಾಸಗೊಳಿಸಲ್ಪಟ್ಟಿದೆ. ಆ ಆಸ್ಪತ್ರೆಯನ್ನು ಕಟ್ಟಲು 86,000 ರೂಪಾಯಿಗಳು ವೆಚ್ಚವಾಗಿವೆ. ಆದರ ಪ್ರವೇಶಮಹೋತ್ಸವವನ್ನು ಶ್ರೀಮನ್ಮಹಾರಾಜರವರು ಕಳೆದ ದಿಸಂಬರು ತಿಂಗಳಲ್ಲಿ ಶ್ರದ್ಧಾಪೂರ್ವಕವಾಗಿ ನೆರವೇರಿಸಿದರು. ಮೈಸೂರು ನಗರವಲ್ಲಿ ಕಟ್ಟುತ್ತಿರುವ ಟೆಲು ವಾರಾಣಾ ಹೆರಿಗೆ ಆಸ್ಪತ್ರೆಯ ಕಟ್ಟಡಕ್ಕಾಗಿ ಶ್ರೀಮನ್ಮಹಾರಾಜರವರು ಒಂದು ಲಕ್ಷ ರೂಪಾಯಿಗಳ ಉದಾರವಾದ ಸಹಾಯಪ್ರವೃತ್ತವನ್ನು ಅನುಗ್ರಹಿಸಿದರು. ಮೈಸೂರಿನಲ್ಲಿ ಕಟ್ಟುತ್ತಿರುವ ಆ ಆಸ್ಪತ್ರೆಯೂ, ಬೆಂಗಳೂರಿನಲ್ಲಿ ಕಟ್ಟುತ್ತಿರುವ ಲೇಡಿ ವಿಲ್ಲಿಂಗ್ಡನ್ ಕ್ಷಯರೋಗದ ಡಿಸ್ಪೆನ್ಸರಿಯೂ, ಮತ್ತು ದಾವಣಗೆರೆಯಲ್ಲಿ ಕಟ್ಟುತ್ತಿರುವ ಕ್ಷಯರೋಗದ ಡಿಸ್ಪೆನ್ಸರಿಯೂ ಪೂರ್ತಿಯಾಗುತ್ತ ಬಂದಿವೆ. ಇತರ ಅನೇಕ ವೈದ್ಯಸಂಸ್ಥೆಗಳಲ್ಲಿ ಗಣನೀಯವಾದ ಮೇಲ್ಕಾಟು ಗಳು ನಡೆದಿವೆ. ಮಂದಿಪತ್ರೆ ಬಹಳ ವೇಗ ವೇಳೆದು ಹೊಡ್ಡವಾಗು ತ್ತಿದೆ. ಅಲ್ಲಿ ಒಂದು ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ಒಂದು ಆಸ್ಪತ್ರೆಯನ್ನು ಕಟ್ಟಿಸಲು ಏರ್ಪಾಡು ಮಾಡಲಾಗಿದೆ. ಆ ಕಟ್ಟಡದ ವೆಚ್ಚಕ್ಕಾಗಿ ಉದಾರವಾಗಿ ನೊಬಲಗಡಣವನ್ನು ಕೊಟ್ಟು ಧರ್ಮಾರ್ಥವಾಗಿ ಸಹಾಯಮಾಡಲು ಮುಂದೆ ಬಂದು ಉಪಕಾರ ಮಾಡಿರುವ ಮಹಾಶಯರುಗಳೆಲ್ಲರಿಗೂ ನಾನು ಈ ಸಮಯದಲ್ಲಿ ಕಂದನೆಗಳನ್ನ ಸಿಸುತ್ತೆನೆ.

ವೈದ್ಯಪರೀಕ್ಷೆಯಲ್ಲಿ ತೇರ್ಗಡೆಹೊಂದಿರತಕ್ಕವರು ಗ್ರಾಮಾಂತರಗಳಲ್ಲಿ ನೆಲಸುವಂತೆ ಮಾಡುವುದಕ್ಕಾಗಿ ಕೆಲವು ಸಾಕ್ಕಗಳನ್ನು ಕಲ್ಪಿಸಿ ಒಂದು ಏರ್ಪಾಡನ್ನು ಮಾಡಲಾಗಿದೆಯಷ್ಟೆ. ಅದರಲ್ಲಿ ಜನರು ಅದರ ತೋರಿದ್ದಾರೆ. ಆರು ಮಂದಿ ವೈದ್ಯರುಗಳು (ಮೆಡಿಕಲ್ ಪ್ರಾಕ್ಟೀಷನರುಗಳು) ಆಗಲೇ ಆ ಸಾಕ್ಕಗಳನ್ನು ಪಯೋಗಿಸಿಕೊಂಡಿದ್ದಾರೆ. ಈ ಏರ್ಪಾಡನ್ನು ಇತರ ಸ್ಥಳಗಳಲ್ಲಿಯೂ ಆಚರಣೆಗೆ ತರುವ ಸಲುವಿಗೆ ಕರ್ತಾಲೋಚನೆಯಲ್ಲಿದೆ.

ಮೇಹಸಂಬಂಧವಾದ ರೋಗಗಳ ಪ್ರಾಬಲ್ಯವನ್ನಡಗಿಸಲು ಮತ್ತಷ್ಟು ಪ್ರಬಲವಾದ ಪ್ರಯತ್ನಗಳು ನಡೆಯುವಂತೆ ಏರ್ಪಡಿಸ ಲಾಯಿತು. ಎಲ್ಲ ಡಿಸ್ಟ್ರಿಕ್ಟು ಆಸ್ಪತ್ರೆಗಳಲ್ಲಿಯೂ ಮತ್ತು ಆರಿ ಸಿದ ಕೆಲವು ಡಿಸ್ಪೆನ್ಸರಿಗಳಲ್ಲಿಯೂ ಮೇಹರೋಗಿಗಳಿಗೆ ಉಚಿತ ವಾಗಿ ಚಿಕಿತ್ಸೆ ನಡೆಯುವಂತೆ ಸಾಕ್ಕವನ್ನು ಕಲ್ಪಿಸಲಾಗಿದೆ. ಅಲ್ಲದೆ, ಈ ರೋಗಗಳನ್ನು ಗೊತ್ತುಮಾಡುವ ರೋಗನಿದಾನ ದಲ್ಲಿಯೂ, ಚಿಕಿತ್ಸೆಯಲ್ಲಿಯೂ ಸರ್ಜನ್-ಆಸಿಸ್ಟೆಂಟ್ ಸರ್ಜನುಗಳೇ ಮುಂತಾದವರಿಗೆ ತಂದತಂದಾಗಿ ಶಿಕ್ಷಣ ಕೊಡಲಾಗುತ್ತಿದೆ.

ಗರ್ಭಿಣಿಯರ ಮತ್ತು ಶಿಶುಗಳ ಯೋಗಕ್ಷೇಮವಿಚಾರದ ಕಾರ್ಯಕಲಾಪಗಳನ್ನು ಶಿಸ್ತುಸಹಿತ ಏರ್ಪಡಿಸಿ ಅನ್ಯಗಳನ್ನು ನೋಡಿಕೊಳ್ಳುವುದಕ್ಕಾಗಿಯೇ ಪ್ರತ್ಯೇಕವಾಗಿ ಒಬ್ಬರು ಕಾರ್ಯ ನಿರ್ವಹಿಸುತ್ತ ಸ್ಥಳಾಪಕರನ್ನು ನೇಮಕಮಾಡಲಾಗಿದೆ. 1937-38ನೆಯ ಸಾಲಿನಲ್ಲಿ ಬಡಿಕ್ಕೆಪ್ಪ ಸೂತಿಕಾ ಶಾಲೆಗಳನ್ನು (ಎಂದರೆ 'ಮೆಟರ್ನಿಟಿ ಹೋಂ'ಗಳನ್ನು) ಏರ್ಪಡಿಸಲಾಯಿತು. ಅವುಗಳೂ ಸೇರಿ, ಸಂಸ್ಥಾನದಲ್ಲಿ ಆ ಸಂಸ್ಥೆಗಳ ಒಟ್ಟು ಸಂಖ್ಯೆಯು ಏಳ ತ್ತೊಂದಕ್ಕೆ ಸರಿಯಿತು.

ಸಾರ್ವಭೌಮರವರ ನಾಮಾಂಕಿತದಮೇಲೆ ಏರ್ಪಟ್ಟಿರುವ ಕ್ಷಯರೋಗನಿವಾರಣೆಯ ನಿಧಿಗೆ ಶ್ರೀಮನ್ಮಹಾರಾಜರವರ ಸರ್ಕಾರವವರು ಒಂದು ಲಕ್ಷ ರೂಪಾಯಿಗಳ ಕೊತ್ತವನ್ನು ಕೊಟ್ಟರು. ಬೆಂಗಳೂರಿನಲ್ಲಿ 'ಕ್ಯಾನ್ಸರ್' ವ್ರಣಗಳ ಮತ್ತು ಅವಕ್ಕೆ ಸಂಬಂಧಪಟ್ಟ ವ್ಯಾಧಿಗಳ ಚಿಕಿತ್ಸೆಗೆ ವೇಳಾದಾಪ್ಪು ಶಕ್ತಿಯುಳ್ಳ 'ಎಕ್ಸ್‌ರೇ' ಚಿಕಿತ್ಸಾಸಾಧನಗಳನ್ನು ಕೊಂಡು ತರಿಸಬಹುದೆಂದು ಮಂಜೂರುಮಾಡಲಾಗಿದೆ. ಮೈಸೂರು ನಗರದಲ್ಲಿರುವ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ 'ರೇಡಿಯಂ ಚಿಕಿತ್ಸೆಗಾಗಿ ಸಾಳಯರ್ಗಳನ್ನು ಸ್ಥಳ ಕಲ್ಪಿಸಲಾಗಿದೆ.

ವಿದ್ಯಾಭ್ಯಾಸದ ಇಲಾಖೆ

1937-38 ನೆಯ ಸಾಲಿನಲ್ಲಿ ವಿದ್ಯಾಭ್ಯಾಸಸಂಸ್ಥೆಗಳ ಒಟ್ಟು ಸಂಖ್ಯೆಯು (ಸಾರ್ವಜನಿಕ ಸಂಸ್ಥೆಗಳೂ, ಖಾಸಗಿ ಸಂಸ್ಥೆಗಳೂ ಸೇರಿ) 7,731 ರಿಂದ 7,941 ಕ್ಕೆ ಹೆಚ್ಚಿತು; ಅದರೆ ಅವುಗಳಲ್ಲಿ ವ್ಯಾಸಂಗ ಮಾಡುತ್ತಿದ್ದವರ ಸಂಖ್ಯೆಯು 3,39,696 ರಿಂದ 3,52,897 ಕ್ಕೆ ಹೆಚ್ಚಿತು. 1937-38 ನೆಯ ಸಾಲಿನಲ್ಲಿ ಎರಡು ಪ್ರೌಢಶಾಲೆಗಳು ಹೊಸದಾಗಿ ಏರ್ಪಟ್ಟವು. ಅವುಗಳಲ್ಲಿ ಒಂದು ನಂಜನಗೂಡಿನಲ್ಲಿ ಏರ್ಪಟ್ಟ ಮುನಿಸಿಪಲ್ ಪ್ರೌಢಶಾಲೆ; ಮತ್ತೊಂದು ಮೈಸೂರಿನಲ್ಲಿ ಏರ್ಪಟ್ಟ ಸರ್ಕಾರಿ ದ್ರವ್ಯಸಹಾಯವನ್ನು ಪಡೆಯುತ್ತಲಿರುವ (ಆಸ್-ವಿಡೆಡ್) ಪ್ರೌಢಶಾಲೆ.

ತಿದ್ದುಪಡಿಯಾದ ಎಸ್.ಎಸ್.ಎಲ್.ಸಿ. ವ್ಯಾಸಂಗ ಕ್ರಮವು 1937-38 ನೆಯ ಸಾಲಿನಲ್ಲಿ ಏರ್ಪಟ್ಟಿತು. ವಿದ್ಯಾಭ್ಯಾಸ ಮಾಡತಕ್ಕವರು ತಮ್ಮ ತಮ್ಮ ಆಭಿರುಚಿಯಿದ್ದಂತೆ ಬೇರೆಬೇರೆ ಐಚ್ಛಿಕ ವಿಷಯಗಳನ್ನು ಆರಿಸಿಕೊಳ್ಳಲುಕೂಲವುಂಟಾಗುವಂತೆ ಅದರ ಮೇಲೆ ಏರ್ಪಾಡಾಗಿದೆ. ಪೈಸ್ಕೂಲುಗಳಲ್ಲಿ, ಭಾಷೆಗಳನ್ನು ಬಿಟ್ಟು ಉಳಿದ ವಿಷಯಗಳನ್ನು ಕನ್ನಡದಲ್ಲಿ ಬೊಧಿಸುವ ಶಿಸ್ತನ್ನು, ವಿಜ್ಞಾನ ಬೋಧನೆಯ ವಿಚಾರವಾಗಿಯೂ ಅಜರಣೆಗೆ ತರುವುದರ ಮೂಲಕ ಸಮನ್ವಗೊಳಿಸಲಾಯಿತು. ಅದಕ್ಕಾಗಿ, ಭಾಷೆಗಳನ್ನು ಬಿಟ್ಟು ಉಳಿದ ಗಣಿತ, ಚರಿತ್ರೆ, ವಿಜ್ಞಾನ ಮುಂತಾದವುಗಳ ಬೋಧನೆಯು ಪೈಸ್ಕೂಲುಗಳಲ್ಲಿ ಈಗ ಕನ್ನಡದಲ್ಲಿ ನಡೆಯುತ್ತಿದೆ.

ಎಂಟು ಮಿಡ್ಲ್ ಸ್ಕೂಲುಗಳನ್ನು ಹೊಸದಾಗಿ ಏರ್ಪಡಿಸಲಾಯಿತು. ಆವೂ ಸೇರಿ ಹೊಡುಗರ ಮಿಡ್ಲ್ ಸ್ಕೂಲುಗಳ ಸಂಖ್ಯೆಯು (ಕನ್ನಡ ಮತ್ತು ಉರ್ದು ಸ್ಕೂಲುಗಳೂ ಸೇರಿ) 310ಕ್ಕೆ ಏರಿತು. ಮತ್ತು ಅವುಗಳಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆಯು 38,932 ರಿಂದ 41,474 ಕ್ಕೆ ಹೆಚ್ಚಿತು. ವೃತ್ತಿಶಿಕ್ಷಣ ಕೊಡುವ ಮಿಡ್ಲ್ ಸ್ಕೂಲುಗಳನ್ನು ಏರ್ಪಡಿಸುವ ಒಂದು ವ್ಯವ ಸ್ಥೆಯು ಮುಂಜಾರಾಗಿದೆ. ಆಂಗ್ಲ ಸ್ಕೂಲುಗಳನ್ನು ಚಾಲ್ತಿ ಸಾಲಿ ನಲ್ಲಿ ಎರಡು ಸ್ಥಳಗಳಲ್ಲಿ ಏರ್ಪಡಿಸಲು ಕ್ರಮ ಜರುಗಿಸಲಾಗಿದೆ.

ವಿದ್ಯಾಭ್ಯಾಸ ಮಾಡತಕ್ಕವರು ವೃಥಾಂಗರಾಗಿ ಸರಿಯಾದ ಸ್ಥಿತಿಯಲ್ಲಿರುವಂತೆ ಮಾಡುವ ಬಗೆ ಹೇಗೆಂಬ ವಿಚಾರವು ವಿದ್ಯಾಭ್ಯಾಸ ಇಲಾಖೆಯವರ ತೀವ್ರವಾದ ಪರ್ಯಾಲೋಚನೆಯಲ್ಲಿದೆ. ಅನೇಕ ಹೈಸ್ಕೂಲುಗಳಲ್ಲಿಯೂ, ಮಿಡ್ಲ್ ಸ್ಕೂಲುಗಳಲ್ಲಿಯೂ ಪಾಠದ ಮಧ್ಯಕಾಲದ ವಿರಾಮದ ಅವಧಿಯಲ್ಲಿ ಉಚಿತವಾಗಿ ಅಲ್ಪಾಹಾರವನ್ನು ಒದಗಿಸುವ ಏರ್ಪಾಡು ನಡೆದು ಅವರಿಗೆ ಅನು ಕೂಲವಾಗಿದೆ.

ಪ್ರೈಮರಿ ವಿದ್ಯಾಭ್ಯಾಸ ಸಮಿತಿಯ ತಾತ್ಕಾಲಿಕ ವರದಿ.

ಸಂಸ್ಥಾನದಲ್ಲಿ ಪ್ರೈಮರಿ ವಿದ್ಯಾಭ್ಯಾಸವನ್ನು ಪ್ರಚಾರಕ್ಕೆ ತರುವುದರ ಸಂಬಂಧವಾಗಿ ಒದಗಿದ್ದ ಕೆಲವು ವಿಚಾರಗಳನ್ನು ಪರೀಕ್ಷಿಸಿ ನೋಡಿ ವರದಿ ಮಾಡಲು, ನನ್ನ ಸಹೋದ್ಯೋಗಿಗಳಾದ ಕೌನ್ಸಿಲ್ಲಿನ ಹೊದಲನೆಯ ಮೆಂಬರವರೆ ಅಧ್ಯಕ್ಷತೆಯಲ್ಲಿ ಸರ್ಕಾರವವರು ಈಗ್ಗೆ ಒಂದು ವರ್ಷಕ್ಕಿಂತ ಸ್ವಲ್ಪ ಹಿಂದೆ ಒಂದು ಸಮಿತಿಯನ್ನು ನೇಮಕ ಮಾಡಿದರು. ಆ ಅಂಶವು ಸದಸ್ಯರಿಗೆ

ಮಲೆಜ್ವರಕ್ಕೆ ಮಲೇರಿಯಾನ

ಇದು ಮಲೆಜ್ವರ, ಚಳಿ ಜ್ವರ, ದಿನಬಿಟ್ಟು ಬರು ವಜ್ವರ, ೩ ದಿ ೪ ದಿವ ಸಕ್ಕೊಮ್ಮೆ ಬರುವಜ್ವರ, ಕ್ವಿನೀನ್‌ನಿಂದಲೂ ಇಂಜಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ಗೆದ್ದೆ ಸಮೇತ ಸಂಪೂರ್ಣ ಗುಣಪಡಿಸುತ್ತದೆ. 4 ಟೆನ್ಸ್ ಸೀಸೆಗೆ ಆಣೆ 0-14-0, 8 ಟೆನ್ಸ್ ಸೀಸೆಗೆ ರೂ. 1-8-0, ಡಜನಿಗೆ ರೂ. 9-12-0, ರೂ. 16-8-0.

ಕಂಪೌಂಡ್ ಸಿರಪ್ ಸಾಲಸಪನ್ನ—ಸ್ವಸ್ಥೇಂದ್ರಿಯ ಸ್ವಲನ, ಶೀಶ್ಲೈಸ್ಮಲನ, ಧಾತುಕಳಕೊಳ್ಳುವದು, ಮೂತ್ರದೊಡನೆ ನಷ್ಟವಾಗುವದು, ವೀರ್ಯಕ್ಷೀಣ, ತೆಳ್ಳಗಾದಧಾತು, ಇವೆಲ್ಲದ ಬಡವನ್ನು ಕಿತ್ತು ಬಿಸಾಡುವದಲ್ಲದೆ ಧಾತುಪುಷ್ಟಿ, ರಸಾಯನ ವಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0.

ಪ್ರಖ್ಯಾತಿಪಟ್ಟ, ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆ ಗೆಳು—ಸಳಆತರದ ಹೊಟ್ಟೆಹುಳುಗಳನ್ನು ಸಾಕಪಡಿಸಿ ಜಾಡಿ ಸುವದರಲ್ಲಿ ಮುಖ್ಯ ಔಷಧಿ. ಡಜನ್ನಿಗೆ ಆ. 0-5-0 ನೂರರ ಪಾಟ್ಲಿಗೆ ರೂ. 2-0-0.

ಕಂಪೌಂಡ್ ಸಿರಪ್ ಬ್ಲಾಟಿ—ಟೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇತಸ, ಹಾಕವನ್ನು ಪಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ 3-8-0, ರೂಪಾಯಿ 1-14-0.

ಬೇಬಿ ಟೋ—ಬಾಲ್ಯಾವಸ್ಥೆಯಲ್ಲಿ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ಹಾಮಿ ರೆಗ್ಗುಹಣಿ ರೋಗದಿಂದ ಮೂಸ ಜೋಲುಬಿದ್ದು, ಮೈ, ಕೈ, ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ—

ಸೀಸೆಗೆ ರೂಪಾಯಿ 1-4-0

ಕೆಂಪೌಂಡ್ ಸಿರಪ್ ವೆಸಿಳೊಜ—ಪ್ರಮೇಹ, ಮೂತ್ರ ಪ್ರಾರಂಭದ ದುರ್ಬಾಸನೆಯ ಕೀವು, ಮೂತ್ರಕೋಶ್ಯಾವಗ ತಡೆಯಲಾರದೆ ತೀಣ ಉರಿ, ಮೂತ್ರಕೃಚ್ಛ್ರ, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು. ಇವೇ ಮೊದಲಾದ ಪ್ರಮೇಹದ ಲಕ್ಷಣಗಳ ಬಾಧವನ್ನು ಕೆಲವು ತಾಸುಗಳಲ್ಲಿಯೇ ರಾಮಬಾಣದ

ನಸಿರಬಹುದು. ಸಮಿತಿಯವರು ಈಗ ತಾತ್ಕಾಲಿಕವಾಗಿ ಒಂದು ನರದಿಯನ್ನು ಒಪ್ಪಿಸಿದ್ದಾರೆ. ಆ ವರದಿಯಲ್ಲಿ ಅವರು ಸಲಹೆ ಮಾಡಿರುವ ಅಂಶಗಳೆಷ್ಟು—ಮುಂದಿನ ನಾಲ್ಕು ವರ್ಷಗಳ ಅವಧಿಯಲ್ಲಿ, ಸುಮಾರು ಒಂದು ಸಾವಿರ ಪ್ರೈಮರಿ ಸ್ಕೂಲುಗಳನ್ನು ಏರ್ಪಡಿಸಬೇಕು. ಎಂದರೆ, ಮೈದಾನ ಪ್ರದೇಶದಲ್ಲಾದರೆ ಜನಸಂಖ್ಯೆಯು 500 ಮತ್ತು ಅಷ್ಟಕ್ಕೆ ಮೇಲ್ಪಟ್ಟಿರುವ ಎಲ್ಲ ಗ್ರಾಮಗಳಲ್ಲಿಯೂ, ಮಲೆನಾಡು ಪ್ರದೇಶದಲ್ಲಾದರೆ ಜನಸಂಖ್ಯೆಯು 300 ಮತ್ತು ಅಷ್ಟಕ್ಕೆ ಮೇಲ್ಪಟ್ಟಿರುವ ಎಲ್ಲ ಗ್ರಾಮಗಳಲ್ಲಿಯೂ ಪ್ರೈಮರಿ ಸ್ಕೂಲುಗಳಿರುವಂತೆ ಮಾಡುವುದ ಕ್ಕಾಗಿ ಈ ರೀತಿ ಹೊಸ ಸ್ಕೂಲುಗಳನ್ನು ಏರ್ಪಡಿಸಬೇಕು. ದೊಡ್ಡ ಗ್ರಾಮದಲ್ಲಾದರೆ ಇಬ್ಬರು ಉಪಾಧ್ಯಾಯರುಗಳಿರುವ ಪ್ರೈಮರಿಸ್ಕೂಲನ್ನೂ, ಸಣ್ಣ ಗ್ರಾಮದಲ್ಲಾದರೆ ಒಬ್ಬರು ಉಪಾ ಧ್ಯಾಯರಿರುವ ಪ್ರೈಮರಿ ಸ್ಕೂಲನ್ನೂ ಏರ್ಪಡಿಸಬೇಕು. ಈ ಏರ್ಪಾಡಿನ ಮೇರೆಗೆ 3,35,000 ರೂಪಾಯಿಗಳ ನಾಷ್ಟಿಕವೆಚ್ಚವೂ ಮತ್ತು ಪ್ರಾರಂಭದ ನಾಲ್ಕು ವರ್ಷಗಳಿಗೆ 1,25,000 ರೂಪಾಯಿ ಗಳ ಒಟ್ಟು ಮೊತ್ತವೂ ವೆಚ್ಚವೂ ಬೇಕಾಗುತ್ತದೆ. ಈ ವೆಚ್ಚದಲ್ಲಿ ಅರ್ಧವನ್ನು ಸರ್ಕಾರದವರೂ ಅರ್ಧವನ್ನು ಸ್ಥಳೀಯ ಸಂಸ್ಥೆಗ ಳು ವಹಿಸಬೇಕೆಂದು ಸಲಹೆಯಾಗಿದೆ. ಈಗ ಲೈಲ್ಡ್ ಸೆಸ್ಸನ್ನು ವಸೂಲ್ಮಾಡುತ್ತಿರುವ ಡಿಸ್ಟ್ರಿಕ್ಟ್ ಬೋರ್ಡುಗಳವರು ಆ ಸೆಸ್ಸಿನ ಸ್ಥಳಕ್ಕೆ ರೂಪಾಯಿಗೆ ಮೂರುಕಾಸಿನಂತೆ ಒಂದು ಸೊತ್ತವನ್ನು ಈ ಏರ್ಪಾಡಿನ ವೆಚ್ಚಕ್ಕಾಗಿ ನಿಯೋಗಿಸಲು ಅವರಿಗೆ ಅನಕಾಶಕೊ ಡಬೇಕೆಂದೂ, ಇತರ ಡಿಸ್ಟ್ರಿಕ್ಟ್ ಬೋರ್ಡುಗಳು, ರೂಪಾಯಿಗೆ ಮೂರುಕಾಸಿನಂತೆ ವಿದ್ಯಾಭ್ಯಾಸದ ಸೆಸ್ಸನ್ನು ವಸೂಲ್ಮಾಡಿ ಅವ ರಿಂದ ಬರುವ ಹುಟ್ಟುವಳಿಯನ್ನು ಈ ವೆಚ್ಚಕ್ಕೆ ವಿನಿಯೋಗಿಸು ವಂತೆ ಕೇಳಬೇಕೆಂದೂ ಸಮಿತಿಯವರು ಸಲಹೆಮಾಡಿದ್ದಾರೆ. ಈ ಮೊದಲೇ ಪ್ರೈಮರಿ ವಿದ್ಯಾಭ್ಯಾಸದ ಆಡಳಿತವನ್ನು ವಹಿಸಿ ಕೊಂಡು ಆದಕ್ಕಾಗಿ ತಮ್ಮ ಬಜೆಟ್ಟುಗಳಲ್ಲಿ ಹಣವನ್ನು ಒದಗಿಸಿ ರುವ ಮುನಸಿಪಾಲಿಟಿಗಳು ಹೊರತು ಉಳಿದ ಮುನಸಿಪಾಲಿಟಿಗಳ ಲ್ಲೆಲ್ಲ ಇದೇ ರೀತಿ ರೂಪಾಯಿಗೆ ಮೂರು ಕಾಸಿನಂತೆ ಮುನಸಿ ಪಾಲ್ ವರಮಾನದಮೇಲೆ ವಿದ್ಯಾಭ್ಯಾಸದ ಸೆಸ್ಸು ವಸೂಲಾಗ ಬೇಕೆಂದು ಸಮಿತಿಯವರು ಸಲಹೆಮಾಡಿದ್ದಾರೆ.

ಚಿಕ್ಕ ಚಿಕ್ಕ ಮಕ್ಕಳಿಗಾಗಿ ವಿಹಾರದೊಡನೆ ವಿದ್ಯಾಭ್ಯಾಸವೂ ನಂದುವರಿಯುವ ಶಿಶುವಿಹಾರ ಶಿಕ್ಷಣಶಾಲೆಗಳ ಏರ್ಪಾಡೊ ನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಆ ರೀತಿಯ ಶಿಕ್ಷಣಶಾಲೆಗಳಲ್ಲಿ ಶಿಕ್ಷಣಕಾರ್ಯವನ್ನು ನಿರ್ವಹಿಸತಕ್ಕವರಿಗೆ ಶಿಕ್ಷಣ ಕೊಡುವುದಕ್ಕಾಗಿ ಮುಂಬೈ ಒಂದು ಮುಖ್ಯ ಸಂಸ್ಥೆಯನ್ನೇರ್ಪ ಡಿಸಲಾಗುವುದು. ಅಲ್ಲಿ ಕೆಲಸ ಮಾಡುವುದಕ್ಕಾಗಿ ದಕ್ಷತೆಯುಳ್ಳ ಉಪಾಧ್ಯಾಯರಿಗೆ ಮುದರಾಸಿನಲ್ಲಿ ಶಿಕ್ಷಣ ಕೊಡಿಸುವ ವ್ಯವಸ್ಥೆ ಯು ಆಗಲೇ ನಡೆದಿದೆ.

[ಸಚೇಸ]

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಸುಲಭ್ಯಕ್ಯವಲ್ಲಿ ದೊರೆಯುವವು.

ಔಷಧಿ ಹೆಸರು	ತೂಕ	ಮತ್ತು
ಸ್ವರ್ಣಮಕರಧ್ವಜ	೧	೫೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ತಿನೇ ನಂಬರ್	೧	೬—೦—೦
ರಸಸಿಂಧೂರ	೧	೨—೦—೦
ಸುಲ್ಫಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸರ್ವಾಂಗ	೧	೫—೦—೦
ಕಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ಸಂಗಬಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳಿಭಸ್ಮ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್, ಹಿಮಿತ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ಇವರ ತೋಟದಲ್ಲಿ 'ಮಹಾದೇವ' ಪೂರ್ತಿಯೊಂದುಂಟು, ಆ ಮೂರ್ತಿಯ ವರ್ಶನವನ್ನು ಪೆಸೆಯುಕೊಳ್ಳಲೆ ಇವರು ಆತ್ಮ ವಚೆ ಸ್ವೀಕರಿಸುವುದಿಲ್ಲ. ಈ ದೇವರಿಗೊಂದು ದೇವಾಲಯವನ್ನೂ ಕಟ್ಟಿಸುವ ಯತ್ನವೂ ಇವರಲ್ಲಿವೆ. ಒಮ್ಮೆ ಚಳಿಗಾಲದಲ್ಲಿ ಈ ಮಲ್ಲಿಕಾರ್ಜುನಪ್ಪನವರು, ತಮ್ಮ ರಾಜಾಟೀಟಿಯಿಂತಿಯವ ಸುನೆಯಲ್ಲಿ ಗಾದಿ ಇತ್ಯಾದಿಗಳನ್ನು ಹಾಸಿಕೊಂಡು ತಾವು, ರಗ್ಗು ಮುಂತಾದವುಗಳನ್ನು ಹೊಮ್ಮಿಕೊಂಡು ಮಲಗಿರಲು, ಇಲವಾನ ಮಸ್ತು ಇವರ ಸಮೀಪಸಾಕ್ಷಣ.ಸರಿಸಿ, ಚಳಿಯು ಇವರನ್ನು ಪೀಡಿಸಿತು. ಆಗ್ಗೆ ಈ ಸದ್ಭಕ್ತರು ಅಂಪುದೇನೆಂದರೆ—ನಾನು ಇಂತಹ ಬೆಚ್ಚಗೆ ಮನೆಯಲ್ಲಿ ಮಲಗಿದ್ದರೂ, ನನಗೆ ಚಳಿಯು ತ್ರಾಸಿಸುವದು. ಪರಂತು ನನ್ನ ತೋಟದ ಬೈಲಿನಲ್ಲಿಯೇ ಇರುವ ಮಹಾದೇವನಿಗೆಷ್ಟು ಚಳಿಯು ಕಷ್ಟುತ್ತಿರಬಹುದು. ಹೀಗೆನುತಿಮಿ ತತ್‌ಕ್ಷಣವೇ ಆ ದೇವರಿರುವ ತೋಟಕ್ಕೆ ಹೊರಟರು. ರಾತ್ರಿ ೨ ಘಂಟೆಯ ಸಮಯವಾದ್ದರಿಂದ ಆವರ ಮಕ್ಕಳು ಆವರ ಹಿಂದೆ ಆಳುಗಳನ್ನು ಕಳುಹಿಸಿದರು. ಆಗ ಮಾಲಕವ್ಯನವನು ಒಂದು ಹುಲ್ಲಿನ ಹೊರೆಯನ್ನು ವೇವರ ಸುತ್ತಲೂ ಹಾಕಿ ಕಡ್ಡಿ ಹಚ್ಚಿ ಬೆನ್ನಾಗಿ ಬೆಚ್ಚಗೆಮಾಡಿ ಮೇಲೆ ತಾವು ಹೊದ್ದುಕೊಂಡುಹೋದ ಶಾಲನ್ನು ದೇವರಿಗೆ ಹೊದಿಸಿ ಬಂದರು. ಕಾವು ಹೆಚ್ಚಾದುದರಿಂದ ಆ ಬಿಂಗವು ಉಬ್ಬಾಗವಾಯಿತು. ಆ ಬಿಂಗವು ಈಗಲೂ ಆವರ ತೋಟದಲ್ಲುಂಟು. ಆ ಮೊದಲ್ಗೊಂದು ಈಗಲೂ ಆ ದೇವರಿಗೆ ರಾತ್ರಿಯಲ್ಲಿ ಒಂದು ಕಬ್ಬಿಣದ ಕೆಮಜವನ್ನು ಹೊದಿಸಿ ಬರುತ್ತಿರುವರು. ಇಂತಹ ಸದ್ಭಕ್ತರಿವರು, ಇವರಿಗೆ ಬೇಡರ ಕಣ್ಣಪ್ಪನ ಸಾಮ್ಯವನ್ನು ಎಷ್ಟೋ ಜನರು ಕೊಡುತ್ತಿರುವರು. ಅದು ಯೋಗ್ಯವೆಂದೇ ಕಂಡುಬರುವುದು, ಅಸ್ತು.

ಈ ಸದ್ಭಕ್ತರು ಕೋಟಗೀ ಶ್ರೀಗಳಿಂದ 'ಶಿವದೀಕ್ಷೆ'ಯನ್ನು ಹೊಂದಿದಮೇಲಂತೂ ಇವರ ಭಕ್ತಿಯು ಧಾರಾಶ್ರವಾಹದಂತೆ ಪ್ರವಹಿಸುತ್ತಿತ್ತು. ಆ ಸಮಯದಲ್ಲಿ 'ವೀರಶೈವ ಧರ್ಮಪ್ರಸಾರಕ ಸಂಘ'ವೂ, ಆ ಸಂಘದವತಿಯಿಂದ 'ಶ್ರೀ ಮಲ್ಲಿಕಾರ್ಜುನ ನಾಟಕಾಲಯ'ವೂ ಸ್ಥಾಪಿಸಲ್ಪಟ್ಟವು.

ಈ ವರ್ಷ ರಾ॥ ಶ ೧೯೬೨ ಶ್ರೀ ಶರಣಬಸವೇಶ್ವರ, ಪ್ರಣವ ಅರಂಭಿಸಲ್ಪಟ್ಟಿತು. ಆ ಪುರಾಣಸಮಾಪ್ತಿಗೆ ಹೋಗೀ ಜೈನಪುರ, ಅಕ್ಕಲಕೋಟೆ, ಭೂಸನೂರ ಶ್ರೀಗಳನ್ನು - ವೀರ ಶೈವ ಸ್ತ್ರೀರತ್ನ" ಸೌ॥ ಭಾಗೀರಥೀಬಾಯಿ ಕಟಾಪ ಇವರನ್ನೂ ಕರೆಯಿಸಿದ್ದರು. ಕತೆಯ ೩ ದಿವಸಗಳಲ್ಲಿ ಸೌ॥ ಭಾಗೀರಥೀಬಾಯಿಯವರು ಪುರಾಣವ್ಯಹೇಳಲ್ಪಟ್ಟ ಸಮಯದಲ್ಲಿ ಶ್ರೋತೃವ್ಯಂದವು ನಿಶ್ಚಯವಾಗಿಯೂ ಚಿತ್ರದಬೊಂಬೆಯಂತಾಗಿತ್ತು. ಸಚ್ಚರಣನ ಪುರಾಣಸಮಾಪ್ತಿಯು, ಸಚ್ಚಿಲ, ಸದ್ಭಾಸ, ಸುವಿಚಾರಿ ಮೂತ್ರವಿನಿಂದಲೇ ಆಗಬೇಕೆಂಮ ಈ ಸದ್ಭಕ್ತನ ಸತ್ಸಂಕಲ್ಪವಿತ್ತು. ಆದ್ದರಿಂದ ಆ ಮಾತೃಶ್ರೀ ಸೌ॥ ಭಾಗೀರಥೀಬಾಯಿಯವರು ಆಗ ಮನಗೊಳಿಸಿದರಿಂದ ಈ ಸದ್ಭಕ್ತರಿಗಾದ ಆನಂದವನ್ನೇನು ಹೇಳಲಿ? ಇವೇ ಸಮಯಕ್ಕೆ ಈ ಗ್ರಾಮದಲ್ಲಿರುವ "ಶ್ರೀ ಮಲ್ಲಿಕಾರ್ಜುನ" ದೇವರಿಗೆ ಹಿತ್ತಾಳೆಯಿಂದ ತಯಾರಗೊಳಿಸಿದ ಮೂರ್ತಿಯ ಸ್ಥಾಪನವು ಹೋಗೀ ಶ್ರೀಗಳಿಂದ ಶಾಸ್ತ್ರೋಕ್ತವಾಗಿ ಮಾಡಲ್ಪಟ್ಟಿತು. ಆ ಸಮಯಕ್ಕೆ ಸದರೀ ಸದ್ಭಕ್ತರು ಸ್ವಯಿರ್ಜಿತಿಂದಲೇ ೪ ಸಾವಿರ ಜನಕ್ಕೆ ಸಂತೃಪ್ತಿಗೊಳಿಸಿದರು. ಶರಣನ ಪುರಾಣಸಮಾಪ್ತಿಯೂ, ಉಪಾಚಾರ್ಯಜಕಟಪ್ಪಯದಾಗಮನವೂ, ಮೂರ್ತಿಸ್ಥಾಪನವೂ ಈ ತ್ರಿವೇಣಿಸಂಗಮದಲ್ಲಿ ನಲಿದಾಡುವ ಸುಯೋಗವು ಇದೇ ಮೊದಲನೆಯದೆಂದರೂ ಅಡ್ಡಿಯಿಲ್ಲ. ಭಾಪ್ರಪದ ವದ್ಯ ೯ ಭಾನುವಾರ ಪ್ರಾತಃಕಾಲ ೧೧ ಘಂಟೆಗೆ ಸರಿಯಾಗಿ ಮೂರ್ತಿಸ್ಥಾಪನವಾಯಿತು. ಮಾರನೇದಿವಸ ಮಧ್ಯಾಹ್ನ ೨ ಘಂಟೆಗೆ ಪುರಾಣ, ಶ್ರೀ ಮೂರ್ತಿಗಳ ಪಲ್ಲಕ್ಕಿ ಉತ್ಸವವು ಒಳ್ಳೇ ವೈಭವದಿಂದ ಜರುಗಿಸಲ್ಪಟ್ಟಿತು. ವೈಸಾಖೂರ ಶ್ರೀಗಳ ವಿನೋದಾತ್ಮಕ ಭಾಷಣವು ಸರ್ವರನ್ನೂ ಗೆಯಗಿಸಿ ನಗಿಸಿತು. ಭೂಸನೂರ ಶ್ರೀಗಳ ಸಮಾಜದ ಕಳಕಳಿಯು ಸರ್ವರಲ್ಲಿ ಕಳಕಳಿಯನ್ನುಂಟುಮಾಡಿದೆ ಬಿಡಲಿಲ್ಲ ಸೌ॥ ಭಾಗೀರಥೀಬಾಯಿಯವರನ್ನು ಪ್ರತ್ಯಕ್ಷ ಹಾರ್ದ್ಯತೀವಿಯಂದೇ ಜನರು ನುಡಿಯ ಹತ್ತಿದರು. "ನಾಲಶಿವಯೋಗಿ" ಅಕ್ಕಲಕೋಟ ಶ್ರೀಗಳ ಪ್ಯಮು ಮಧುರ ಮಿತ ಭಾಷಣ ಭಾಸ್ಕರವು ಭಕ್ತರ ಹೃದಯಕಮಲವನ್ನು ಅರಳಿಸಿತು. ಈ ಸಮುಯಕ್ಕೆ ಮೋಸೆ "ಶ್ರೀ ಪಂ॥ ಕಾಶೀನಾಥವಾಜನಾಲಯ" ದವರ ಶ್ರೀ ಜಗದಾಚಾರ್ಯ ಭಜನವು ಜನರ ಆನಂದವನ್ನು ಇಮ್ಮಡಿಗೊಳಿಸಿತು. ಭಾ॥ ಬ॥ ೧೦ ರಾತ್ರಿಗೆ "ವೀರಶೈವ ಧರ್ಮಪ್ರಸಾರಕ ಸಂಘ" ದವರಿಂದ ಗಿರಿಜಾಕಲ್ಯಾಣ ಮತ್ತು ಪಾಂಡವ ಪಟ್ಟಾಭಿಷೇಕವೆಂಬ ರಡು ಪ್ರಯೋಗಗಳು ನಾಟಕರೂಪದಿಂದ ಅಭಿನಯಿಸಲ್ಪಟ್ಟವು. ಆಗ್ಗೆ ಸೌ॥ ಭಾಗೀರಥೀಬಾಯಿಯವರು, ಜಗದಾಚಾರ್ಯ ರೀಗೋ ದೈವರಿಷ ಆಶೀರ್ವದಿಸಿತ್ತು ಪುನರುತ್ಥಾನವನ್ನುಂಟುಮಾಡಿದರು. ಹಾಗೆಯೇ ಮತ್ತೆ ಕೆಲವರೂ ಭಕ್ತಿಪ್ರಸಂಗಗಳನ್ನಿತ್ತರು. ಆ ಸಮಯಕ್ಕೆ ಅಕಸ್ಮಾತ್ತಾಗಿ ಬಂದ "ಚಪ್ಪಳಗಾಂವ" "ವೀರಶೈವ ಸೇವಾಸಂಘ"ದ ಸೆಕ್ರೆಟರಿಗಳಾದ ಶ್ರೀಯುತ ಬಸಪ್ಪಣ್ಣ ಪ್ಪಾ ಪಾಟೀಲರು "ವೀರಶೈವಮತ" ಗ್ರಂಥವನ್ನು ಏರಿಸಿತಿಮ್ಮ ಆನಂದವನ್ನು ವ್ಯಕ್ತಗೊಳಿಸಿದರು. ಈ ಸಮಯದಲ್ಲಿ ಶ್ರೀ ಪಂಚಾಚಾರ್ಯ ಪ್ರಭೆಗೆ ೨ ರೂಪಾಯಿಗಳು ಆರ್ಪಿಸಲ್ಪಟ್ಟವು. ಕ॥ ಅನ್ನಪೂರ್ಣ ಬಾಯಿ ನಿಟ್ಟೂರೆ ಕೋಲಾಪುರ ಈ ಬಾಲಕೆಯ ಆಚಾರ್ಯಸ್ತುತಿಯೂ, ಭಾಷಣವೂ ಜನರನ್ನು ಬೆರಗುಗೊಳಿಸಿದವು.

ಪಂ॥ ಕಾಶೀನಾಥವಾಜನಾಲಯದ
ಸೆಕ್ರೆಟರಿ,
ರಾಮಚಂದ್ರ ಭೀಮರಾವ ಪಾಟೀಲ, ನೋಫೆ.

ಶಿವದೀಕ್ಷಾಸಮಾರಂಭ, ಬಳ್ಳಾರಿ.

ವೀರಶೈವಮತವನ್ನು ಸ್ಥಾಪಿಸಿದ ಭಗವತ್ಪಾದ ಜಗದ್ಗುರು ಪಂಚಾಚಾರ್ಯರಿಂದ ನಿರೂಪಿತವಾದ ಶಿವದೀಕ್ಷಾಕರ್ಮವು ಗುರುಗಳ ಆಜ್ಞಾನುರೂಪತೆಯಮೂಲಕವೋ ಆಥವಾ ಅಂತರ್ಬದ್ಧ ಗುರುಗಳ ಉಪದೇಶದಿಂದಲೋ ಮೂಲೆಗುಂಪಾಗಿರುವುದನ್ನು ತಿಳಿದು, ಸ್ವಾರ್ಥರಹಿತರೂ, ನೈರಾಗ್ಯಶೀಲರೂ, ತಪಸ್ವಿಗಳೂ ಆದ ಶ್ರೀ ಬಾಲತಪಸ್ವಿ ಚಿನ್ನವೀರಶಿವಾಚಾರ್ಯಸ್ವಾಮಿಗಳವರು ಹೋಟಗಿ ಬೃಹನ್ಮಠ ಇವರು, ಸುತಗಟ್ಟಿ ಶ್ರೀಗಳವರು, ಜೈನಾಪುರದ ಶ್ರೀಗಳವರು ಮತ್ತು ಗುರುಭಕ್ತಿ ಪರಾಯಣಿಯರೂ ಮತ್ತು ಬಳ್ಳಾರಿಯಲ್ಲಿ ನೆರವೇರಿದ ಸ್ಥಿರಚರಪಟ್ಟಾಧಿಕಾರಿಗಳ ಪ್ರಥಮಸಾರ್ವಿಕ ಸಮ್ಮೇಲನದಲ್ಲಿ ಉಚ್ಚರಿಯೋ ಜಗದ್ಗುರು ಮಹಾಸನ್ನಿಧಿಯಿಂದ "ಆಚಾರ್ಯತತ್ವವಿಶಾರದಾ"ಎಂಬ ಪ್ರಶಸ್ತಿಯನ್ನು ಪಡೆಡವರೂ, ಸೊಲಾಪುರ ನಿವಾಸಿಗಳೂ ಆದ ಸೌ॥ ಮಾತೃಶ್ರೀ ಭಾಗೀರಥೀ ಬಾಯಿ ಕಟಾಪ್ ಇವರ ಉಪದೇಶವನ್ನು ಕೇಳಿ ತಾ॥ 17.10.38 ನೇ ಸೋಮವಾರ ಪ್ರಾತಃಕಾಲ ಜಗದ್ಗುರು ಮಹಾಸನ್ನಿಧಿಯಲ್ಲಿ ಎಸಳೂರುಪೇಟೆ ಶ್ರೀ ನೀಲಕಂಠಶಿವಾಚಾರ್ಯರು, ಹಸುಗೋಡ ಶ್ರೀ ರುದ್ರಮುನಿಶಿವಾಚಾರ್ಯರು, ಗುರುಸ್ವಾಮಿ ಜ್ಯೋನಪುರದ ಚರಲಿಂಗ ಶಿವಾಚಾರ್ಯರು ಹೋಟಿಗಿ ಶ್ರೀ ಬಾಲತಪಸ್ವಿ ಚಿನ್ನವೀರಶಿವಾಚಾರ್ಯರು, ತೆಕ್ಕಲಕೋಟೆ ಶ್ರೀಗಳವರೇ ಮೊದಲಾದ ಉಪಾಚಾರ್ಯರ ಆಚಾರ್ಯತ್ವದಲ್ಲಿ ಶ್ರೀಮಂತ ವಿರೂಪಾಕ್ಷಪ್ಪನವರು ಜಾನೇಕುಂಟೆ ಮತ್ತು ಇವರ ಧರ್ಮಪತ್ನಿ ಮಲ್ಲಮ್ಮ, ಇಲಕಲ್ಲಗಿದಿಮಲ್ಲಪ್ಪನವರು ಮತ್ತು ಇವರ ಧರ್ಮಪತ್ನಿ ರುದ್ರಮ್ಮ ಮತ್ತು ಇವರ ಪುತ್ರಿ ಶಿವಗಂಗಮ್ಮ ಶ್ರೀಮತಿ ಮಾನಮ್ಮ, ಸೌ॥ ವೀರಮ್ಮ ಮತ್ತು ಬಳೆ ಬಸಮ್ಮ ಇವರೇ ಮೊದಲಾದ ಸದ್ಭಕ್ತರ ದೀಕ್ಷಾಕಾರ್ಯವು ನೆರವೇರಿತು. ಬಳಿಕ ನಿಯಂಕಾಲ ೬ ಘಂಟೆಗೆ ಇಲ್ಲಿಯ ಕಲ್ಲಿನುಡೆವಲ್ಲಿ ನವರಾ ಮಾತ್ರಾಧ್ಯಕ್ಷರಾದ ವೇ॥ ಗುರುಬಸವಯ್ಯನವರ ಧರ್ಮಪತ್ನಿ ಬಸಮ್ಮನವರು, ಮತ್ತು ಇವರ ಸಹೋದರಿ ಶ್ರೀಮತಿ ಸಂಗಮ್ಮನವರು, ಸೊಂಡೂರುಮಠದ ಬಸಪ್ಪಯ್ಯನವರ ಧರ್ಮಪತ್ನಿ ವೀರಮ್ಮನವರು, ಗುರುಭಕ್ತಿ ಪರಾಯಣಿಯರಾದ ಲಕ್ಷ್ಮೀಪುರದ ಜಪಗೀರರಾದ ಶ್ರೀಮಂತ ರಂಗನಗೌಡರ ಧರ್ಮಪತ್ನಿ ಸೌ॥ ಪಾರ್ವತಮ್ಮನವರು, ಆವರ ಪುತ್ರಿ ಎಂಟುವರ್ಷದ ಬಾಲಕಿಯಾದ ಲಕ್ಷ್ಮೀದೇವಿ ಮತ್ತು ಇವರ ಸಂಬಂಧಿಗಳಾದ ಸೌ॥ ಗಂಗಮ್ಮನವರು, ಶ್ರೀಮತಿ ಬಸಮ್ಮನವರೇ ಮೊದಲಾದವರಿಗೆ ಶ್ರೀ ಬಾಲತಪಸ್ವಿಗಳವರ ನೇತೃತ್ವದಲ್ಲಿಯೂ, ಜೈನಾಪುರ, ಸುತ್ತಗಟ್ಟಿ, ಸಿಗಳೂರು ಇವರೇ ಮೊದಲಾದ ಶ್ರೀಗಳವರ ಆಚಾರ್ಯತ್ವದಲ್ಲಿಯೂ ಬಾರ್ಸಿ, ಸತ್ತೀನೆರೆ, ರಾನಡುರ್ಗ ಹೊಡಿ, ಮುದೇನೂರು, ಕರಕುಂಟೆ, ಜಹಗೀರುಜೇನವಳ್ಳಿ, ಅಕ್ಕಲಕೋಟೆ, ಕುಡಿತಿನಿ, ಕನಕಗಿರಿ, ಹಿರಾಳು, ಜೋಳಗುಂದಿ, ಚೋರನೂರು, ಆದವಾನಿ ಮೊದಲಾದ ಗ್ರಾಮಗಳ ಪಟ್ಟಣಾಧಿಕಾರಿಗಳ ಸಸ್ಯಧಿಯಲ್ಲಿಯೂ ಈ ದೀಕ್ಷಾಸಮಾರಂಭವು ಅತ್ಯಂತ ವೈಭವದಿಂದ ನೆರವೇರಿತು. ಈ ಶುಭಸಮಯದಲ್ಲಿ ಶ್ರಭಾಪೋಷಣಕ್ಕೋಸ್ಕರ ವೇ॥ ಕಲ್ಲುಮಠದ ಗುರುಬಸಯ್ಯನವರು ೨ ರೂಗಳನ್ನು ಸಮರ್ಪಿಸಿದರು.

ಓರ್ವ ಮಹಾಭಿಮಾನಿ.

ಓಂ ನಮಃ ಪಂಡಜಗದ್ಗುರುಭ್ಯಃ

ಸೂಚನೆ.

ಕೈ|| ಶ್ರೀಮಜ್ಜಯನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಾಗಮನವು ಮಹಾರಾಷ್ಟ್ರ ದೇಶೋದ್ಧಾರಕ್ಕೋಸ್ಕರ ನೇಪಾಳಕ್ಕೆ ಸೊಲ್ಲಾಪುರ ಕೈ|| ರಾ|| ಬ|| ನಾರಪ ಮಲ್ಲಪ್ಪನವರು ಸ್ಥಾಪಿಸಿದ ಪಾಠಶಾಲೆಯ ಶಿಥಿಲಸ್ಥಿತಿಯನ್ನು ಶ್ರೀ ಮಹಾಸ್ವಾಧಿಯವರು ದಿವ್ಯಚಿತ್ತಕ್ಕೆತಂದು, ಶ್ರೀಯುತ ನಾಗಪ್ಪಸ್ವಾ ಅಮ್ಮುಲ ಪುರೋವರ ಪ್ರಾರ್ಥನೆಯಂತೆ ೫ ಸಾವಿರ ರೂಪಾಯಿಗಳನ್ನು ಅಭಿವರ್ಧನಿ ದ್ದಾರೆ. ಶ್ರೀ ಮಹಾಸ್ವಾಧಿಯವರ ಉದಾರತ್ವದಯೆಯ ಅಧಿಪ್ರಾಯವನ್ನು ತಿಳಿಯಬೇಕೆಂದು ಅಪೇಕ್ಷ ಜನರು ನನಗೆ ಪತ್ರರೂಪದಿಂದ ಕೇಳಿದ್ದಾರೆ. ಆ ವಿಷಯವನ್ನು ಈಗಿನ ಪಾಠಶಾಲೆಯ ಪ್ರೆಸಿಡೆಂಟರಾದ ಶ್ರೀಯುತ ಬಂಡಪ್ಪಸ್ವಾ ಮುಂಜೇ ವಕೀಲರಿಗೆ ತಿಳಿಸಲು, ಸದರೀ ವಕೀಲರುಸಾಹೇಬರು "ಅವಶ್ಯವಾಗಿ ಪ್ರಸಿದ್ಧಿಪಡಿಸಿ" ಎಂದು ಸವಧಿಪ್ರಾಯವನ್ನು ಕೊಟ್ಟರು. ಆದ್ದರಿಂದ ಶ್ರೀ ಮಹಾಸ್ವಾಧಿಯವರು 'ಶೀಘ್ರ' ಟುಕ್ಕನ್ನಲ್ಲಿ ಸ್ವಹಸ್ತಾಕ್ಷರಗಳಿಂದ ಅರೀ ರ್ವದಿಸಿದೆ ವಿಷಯವನ್ನೇ ಇದ್ದಿದ್ದಿದ್ದಂತೆ ಬರೆದು ಕ್ರಕಟಿಸಿದು ನೆನು. ಶ್ರೀ ಮಹಾಸ್ವಾಧಿಯವರು ತಮ್ಮ ಸದಯ ಪೈತಯವನ್ನು ಇನೆಲ್ಲಿ ಬಿಚ್ಚಿ ತೋರಿಸಿದ್ದಾರೆ. ಮತಪೀಯರು ಯಾವಾಗಲೂ ಮಹನೀಯರೇ,

ತಾ|| ೩-೧೦-೩೪. ಶ್ರೀ ಬೃಹನ್ಮಠಾಧ್ಯಕ್ಷ ಯೋಗಿ.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀಮದ್ವೇದವೇದಾಂತಸಿದ್ಧಾಂತಾಗಮಸುಪ್ರಸಿದ್ಧ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ವರ್ಯ ಶ್ರೀಮತ್ತ್ರಿಭುವನಗುರು ಶ್ರೀಮತ್ಪರಿವ ದಕ್ಷಿಣಾಲಪೆನೋದ್ಭವ ನೈಂಕ್ತಿಕಾಸನ ವರ್ಷಲಾಂಛನ ಪರಿತೋಭಿತ ಶ್ರೀಗುರು ಮರುಲಸಿದ್ಧಶಿವಾಚಾರ್ಯ ಮಹಾಸ್ವಾಮಿ ಕರಕಂಜಾತಸಂಜಾತ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಜಗದ್ಗುರು ಚರಪಟ್ಟಾಧ್ಯಕ್ಷ ಶ್ರೀಸಿದ್ಧಲಿಂಗರಾಜದೇಶಿಕೇಂದ್ರಶಿವಾಚಾರ್ಯ ಮಹಾಸ್ವಾಮಿನಾಂ ಜ್ಞಾನಗುರುಸ್ಥಲದಿಂದ

ಶ್ರೀಮದ್ವೃಗುರುಚರಣಾರವಿಂದ ಮಕರಂದ ಮಧುಕರಾಯ ಮಾನಾರಾದ ಬೊಂಬೈ ಇಲಾಖಾ ಸೊಲ್ಲಾಪುರ ಪಟ್ಟಣದಲ್ಲಿರುವ ಶ್ರೀಮದ್ವೀರಶೈವ ವಾರವ ಸಂಸ್ಕೃತ ಪಾಠಶಾಲೆಯ ಅಧ್ಯಕ್ಷರಿಗೂ, ಉಪಾಧ್ಯಕ್ಷರಿಗೂ, ಕೋಶಾಧ್ಯಕ್ಷರಿಗೂ, ಕಾರ್ಯಾಧ್ಯಕ್ಷರಿಗೂ, ಮಹಾಜನರಿಗೂ ಶ್ರೀಮದಭೈಶ್ವರ್ಯವಿದ್ಧಿರಸ್ತು, ಸಕಲಶಾಖಾ ಗ್ಯಮಸ್ತು, ಶ್ರೀಶಿವಭಕ್ತಿರಸ್ತು, ಇತ್ಯಾಶೀರ್ವಾದಪೂರ್ವಕಮಭಿವಾದಿಸಿ—

೧. ಶ್ರೀಮದ್ವೀರಶೈವ ಮಹಾಮತೋದ್ಧಾರಕರಾದ ರಾವ ಸಾಹೇಬ ಮಲ್ಲಪ್ಪಾ ಬಸಪ್ಪಾ ನಾರವ ಇವರು ಮತಗ್ರಂಥಗಳನ್ನು ಭಾಷಿಸಿ ಪ್ರಸಿದ್ಧಿಮಾಡಿ "ವೀರಶೈವಸಮಾಜಾಂತರ್ಗತ ಗುರುವರ್ಗಾ ತ, ಉಚ್ಚಪ್ರಕಾರಾಚ್ಯಾ, ಧಾರ್ಮಿಕಶಿಕ್ಷಣಾಚಾ ಪ್ರಸಾರಹೋ ಪ್ಪನ ಅಪಲ್ಯಾ ಗುರುಕವಾಸ್" ಯೋಗ್ಯಮ್ಹಣೆನ, ಯಾ ಉದಾ ತ್ತ ನೇತೃನೇ ಶ್ರೀಲಿಕ ಹೋಗೂನ" ಅಂದರೆ ವೀರಶೈವರುತು ಮಗದವರು ತಿನಶಾಸ್ತ್ರಜ್ಞರಾಗಿ ಈ ನಮ್ಮ ವೀರಶೈವಮತದ ಗ್ಲಾನಿಸ್ಥಿತಿಯು ದೂರವಾಗುವುದಿಲ್ಲೆಂದು, ತನ್ನ ಪವಿತ್ರ ಹೃದಯ ದಲ್ಲಿ ಚಿಂತಿಸಿ, ವೀರಶೈವಮತಗ್ರಂಥಗಳನ್ನು ಬಹು ಪ್ರಯಾಸ ದಿಂದ ವೇದಮೂರ್ತಿ ಮಣಾರು ಮಲ್ಲಿಕಾರ್ಜುನಶಾಸ್ತ್ರಿಗಳದ್ವಾರಾ ಪರಿಶೋಧಿಸಿ ಸ್ವತಃ ಖರ್ಚಿನಿಂದ ಉತ್ತಮೋತ್ತಮಗ್ರಂಥಗಳನ್ನು ಭಾಷಿಸಿ ಪ್ರಸಿದ್ಧಿಪಡಿಸಿದರು. ಶ್ರೀಮದ್ವೀರಶೈವ ವಾರವ ಪಾಠಶಾಲೆಯನ್ನು ಸ್ವತಃ ಖರ್ಚಿನಿಂದ ಸ್ಥಾಪಿಸಿ, ವೇದಮೂರ್ತಿ ನಾಲ್ವಾರ ಜಗದೀಶ ಶಾಸ್ತ್ರಿಗಳ ಅಧ್ಯಕ್ಷತ್ವದಾರಾ ವಿದ್ಯಾರ್ಥಿಗಳಿಗೆ ಸಂಸ್ಕೃತ ವಿದ್ಯಾ ಭ್ಯಾಸವನ್ನು ಮಾಡಿಸಿದರು. ಈ ದ್ವಿವಿಧದಾ ಕಾರ್ಯಗಳಲ್ಲಿ ಈ ನಾರದ ಸಂಸ್ಕೃತ ಪಾಠಶಾಲೆಯಿಂದ ಶ್ರೀ ಕಾಶೀಕ್ಷೇತ್ರಕ್ಕೆ ಹೋಗಿ ನಮ್ಮ ಮತದಲ್ಲಿ ಬಹುಜನರು ಪಂಡಿತರಾಗಿರುವರು. ಇವರ ಕೈಕ ಕೆಲವು ವಿದ್ವಾಂಸರು, ರಾವಸಾಹೇಬರು ಭಾಷಿಸಿದ ಮತಗ್ರಂಥಗಳನ್ನು ಅವಲೋಕಿಸಿ ಈ ವೀರಶೈವಮತಗ್ರಂಥಗಳನ್ನು ಬೋಧಿಸುತ್ತಿರುವರು. ನಾವಾದರೂ ಸದರಿ ರಾವಸಾಹೇಬರ ಗ್ರಂಥ ಗಳ ಅವಲೋಕನದಿಂದ ತಿಳಿದಾದ ವೀರಶೈವರಿಗೆ ಧರ್ಮಾಚಾರ ಗಳನ್ನು, ಜ್ಞಾನಾಜಾರಗಳನ್ನು, ಪ್ರತಿಪಾದಿಸುತ್ತಾ ಆ ಗ್ರಂಥಗಳನ್ನು ವಿಶ್ವದಲ್ಲಿ ಅವಲೋಕಿಸುತ್ತಾ, ಶ್ರೀಪರಶಿವಾನು ಗ್ರಹಕ್ಕೆ ಪಾತ್ರರಾಗಿರುವೆವು. ಇಂಥ ಮಹೋಪಕಾರವನ್ನು ಮಾ ಡಿರುವ ರಾವಸಾಹೇಬ ಮಲ್ಲಪ್ಪಾ ಬಸಪ್ಪಾ ನಾರವ ಇವರು ಶ್ರೀಮದ್ವೀರಶೈವ ಮಹೋದ್ಧಾರಕರೆಂತು ದೇೀವಿೀ ಭೂತಲದಲ್ಲಿ ಶಾಶ್ವತವಾಗಿ ಉತ್ತಮಪದವಿಯಲ್ಲಿ ಸ್ಥಿರವಾಗಿ ಸ್ಥಿರವಿ ಉಳ್ಳವರಾಗಿರುವರು.

೨. ಸದರಿ ರಾವಸಾಹೇಬರು ತಮ್ಮ ಜೀವಮಾನವವರಾಗೂ ಮತ್ತೊಬ್ಬರನ್ನು ಅನುಲಂಬಿಸದೆ, ಸದರ ವೀರಶೈವ ವಾರವೆ ಸಂಸ್ಕೃತ ಪಾಠಶಾಲೆಯನ್ನು, ಸ್ವತಃ ಖರ್ಚಿನಿಂದ ನಡೆಯಿಸುತ್ತಾ ಶಿಸ್ತೈಕ್ಯರಾಗಲು, ಶ್ರೀಮಠ ಖಂಡಿಪ್ಪಾ ಅಂಣಾಚಾಡಾದಿ ಸೊಲ್ಲಾ ಪುರ ಇವರು ೨೦ ವರ್ಷ ಪರ್ಯಂತ ನಿರಾಶ್ರಯರಾದ ಸದರಿ ನಾರವ ಸಂಸ್ಕೃತ ಪಾಠಶಾಲೆಯನ್ನು ಸ್ವತಃ ಖರ್ಚಿನಿಂದ ಸಂರಕ್ಷಿಸಿ ವೀರಶೈವಮಾನ್ಯರಾದರು.

೩. ಸದರಿ ರಾವಸಾಹೇಬರು ತಮ್ಮ ಜೀವಮಾನವವರಾಗೂ ಮತ್ತೊಬ್ಬರನ್ನು ಅನುಲಂಬಿಸದೆ, ಸದರ ವೀರಶೈವ ವಾರವೆ ಸಂಸ್ಕೃತ ಪಾಠಶಾಲೆಯನ್ನು, ಸ್ವತಃ ಖರ್ಚಿನಿಂದ ನಡೆಯಿಸುತ್ತಾ ಶಿಸ್ತೈಕ್ಯರಾಗಲು, ಶ್ರೀಮಠ ಖಂಡಿಪ್ಪಾ ಅಂಣಾಚಾಡಾದಿ ಸೊಲ್ಲಾ ಪುರ ಇವರು ೨೦ ವರ್ಷ ಪರ್ಯಂತ ನಿರಾಶ್ರಯರಾದ ಸದರಿ ನಾರವ ಸಂಸ್ಕೃತ ಪಾಠಶಾಲೆಯನ್ನು ಸ್ವತಃ ಖರ್ಚಿನಿಂದ ಸಂರಕ್ಷಿಸಿ ವೀರಶೈವಮಾನ್ಯರಾದರು.

೪. ಸದರಿ ಬಂಡೆಪ್ಪಾ ಅಂಣಾ ಇವರು ಶಿಸ್ತೈಕ್ಯರಾಗಲು ಈ ಸೊಲ್ಲಾಪುರದ ವೀರಶೈವ ಮಹಾಜನರು ಸದರಿ ವಾರವ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಅನ್ನೋದಕಗಳನ್ನು ಕೊಟ್ಟು ಮತ್ತು ಅನೇಕ ರೀತಿಗಳಿಂದ ಸಹಾಯನೀಡಲು ರಾವಸಾಹೇಬ ಮಲ್ಲಪ್ಪಾ ಬಸಪ್ಪಾ ವಾರವೆ ಇವರು ಸ್ಥಾಪಿಸಿದ ಸಾರಪಾಲೆಯು ಈ ಇವತ್ತಿಗೆದು ವರ್ಷಗಳ ಪರ್ಯಂತವಾಗಿ ನಿಶ್ಚಿಶ್ರಿಯಿಲ್ಲದೆ ನಡೆದುಕೊಳ್ಳುತ್ತಾ ಬಂದಿರುತ್ತದೆ.

೫. ವೀರಶೈವಮತಧರ್ಮಗಳನ್ನು ಕಿಂಚಿತ್ತೂ ವಿರುದ್ಧವಿಲ್ಲದಂತೆ ಈ ವೀರಶೈವರಿಂದ ನಡೆಯಿಸಿ, ಸದಯತ್ತಿಲಿರುವ ವೀರಶೈವ ಧರ್ಮಾನುಯಿಗಳಾದ ಶ್ರೀಮಂತ ನಾಗಪ್ಪಾ ಅಣ್ಣಾ ಅಮ್ಮುಲ ಪ್ರೊವರ ಇವರು ಶ್ರೀ ರೇಣಾಚಾರ್ಯೇಶ್ವರ ವೇಸಸ್ಥಾನದಲ್ಲಿ ಶ್ರೀ ಸಚ್ಚಿದಾ ಬ್ರಹ್ಮಿಗಳಾದ ಜೋಳಿಗೆ ಬೃಹನ್ಮಠಾಧಿಷ್ಠಿತರಾದ ಜಗದ್ವೀರೇಶ್ವಾ ದಿಗಳ —ನಮ್ಮ ಸಮಕ್ಷಮದಲ್ಲಿ ಸದರೀ ನಾರವ ಸಂಸ್ಕೃತ ಪಾಠ ಶಾಲೆಗೆ ಸಹಾಯನನ್ನು ಕೊಟ್ಟು ನ್ಯಧ್ರಿಕರಿಸುವುದರಿಂದ ವೀರ ಶೈವಧರ್ಮಪ್ರಚಾರವು ತೀವ್ರವಾಗಿ ಬರುಬುದೆಂಬಾ ಸೂಕ್ಷ್ಮವಾಗಿ ಸೂಚನೆಯೂ ಕೊಟ್ಟರು ಈ ಮಾತು ವಿಸ್ತರಿಂ ವಿನಸಾಗಿ ಪರೆಗೆ ನನ್ನ ಚಿತ್ತದಲ್ಲಿ ಜೀವಭಾವಿವಿಲ್ಲಿದ್ದು ಆ ಮಾತನ್ನೇ ನಿಜವಾ ಸಲು ಶ್ರೀ ನಾಗಪ್ಪಾ ಅಣ್ಣಾ ಇವರ ಮಾತನ ಯೋಗ್ಯತೆಯು ಮೂರಪರ್ಶಿಸ್ತವು ಸಸ ಸಮಗೆ ತಿಳಿಯಿಲು ಹ್ಯಾಗುವದೆ ಈ ಸೊಲ್ಲಾಪುರ ಪಟ್ಟಣವು ನಜಾಂ, ಸುದ್ರಾಸು, ಕೈನಾಮಿ, ಬೊಂಬೈ ಇಲಾಖೆಗಳಲ್ಲಿರುವ ವೀರಶೈವರಿಗೆ ಸುಪ್ರಕಾಸವಾಗಿದೆ ಮತ್ತು ಕರ್ನಾಟಿಕ ಮಹಾರಾಷ್ಟ್ರ ಆಂಧ್ರಭಾಗೆಗಳಿಗೆ ಅಸ್ಪಾತ ನಾಗಿದೆ. ಈ ಸೊಲ್ಲಾಪುರದಲ್ಲಿ ವೀರಶೈವರು ನಿರೀಸರಾಗಿರುವು. ಈ ವಾರವ ಸಂಸ್ಕೃತ ಪಾಠಶಾಲೆಯು ಸ್ವಾಪನಾದ ಆ ಗಾಮಿತಾ ನಿಲ್ಲಾ ಇಲಾಖೆಗಳಲ್ಲಿರುವ ವಿದ್ಯಾರ್ಥಿಗಳಿ. ಈ ಶಾಲೆಯಲ್ಲಿ ಅಭ್ಯಸಿಸಿ ಕಾಶಿಗೆ ಹೋಗಿ ಪಂಡಿತರಾಗಿರುವ ಸಂಗತಿಯು ಸರ್ವರಿಗೂ ಪ್ರತ್ಯಕ್ಷವಿಲ್ಲಿಯೇ ಇರುವದು ಶ್ರೀಕಾಶೀಕ್ಷೇತ್ರದ ವಿದ್ವ ದ್ಭಾಸಕ್ಕೆ ಸುಪಾತ್ರರವೆಂತಿನ ಈ ಸೊಲ್ಲಾಪುರ ವಾರವ ಸಂಸ್ಕೃತ ಪಾಠಶಾಲೆಗೆ ಈ ವೀರಶೈವ ಭಕ್ತಮಾಹೇಶ್ವರರು ಬೇರೊಂದನ್ನು ಅಪೇಕ್ಷಿಸದೆ ತಮ್ಮ ತಮ್ಮ ಶಕ್ತ್ಯನುಸಾರ ನಂಜಿನಿಯಲ್ಲಿದ್ದ ವಿದ್ಯಸಹಾಯ ಮಾಡಲು ಇಮೊಪಮಿಯಾದ ವಿದ್ಯಾರ್ಥಿಗಳ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಅನಾಯಾಸವಾಗಿ ಅನುಕೂಲ ವಾಗಲು ಯಾವ ಸಂದೇಹವಿರುವದಿಲ್ಲ.

೫. ಆದುದರಿಂದ ಶ್ರೀಮಹಾಸ್ವಾಧಿಯ ಚಿತ್ತದಲ್ಲಿ ಅತ್ಯಾನಂದ ವುಂಟಾಗಿ ಶ್ರೀಮದ್ವೀರಶೈವಮತೋದ್ಧಾರಕರಾದ ರಾವಸಾಹೇಬ ಮಲ್ಲಪ್ಪಾ ಬಸಪ್ಪಾ ನಾರವ ಇವರಿಂದ ಸತ್ಕರಂಕಲ್ಪದಿಂದ ಸ್ಥಾಪಿ ಸಲ್ಪಟ್ಟ ಈ ಸಂಸ್ಕೃತ ಪಾಠಶಾಲೆಯು ಆಚಂದ್ರಾರ್ಕವಾಗಿ, ಆಚ್ಚಂದ್ರತಾರಾಗಿ, ದೃಢವಾಗಿ, ಸ್ಥಿರವಾಗಿ, ಬಹುಭಾಕಿಯಿಂದ ನಡೆಯು ಲೆಂದು ಶ್ರೀ ಪರಮೇಶ್ವರನ ಸ್ಮರಣೆ ಇದೆ. ನಾಗಿಕೇಳಲಗಳಂತೆ ನಮನಾವಿರ ರೂಪಾಯಿಗಳನ್ನು ಸದರೀ ಶ್ರೀ.ವೀರಶೈವ ನಾರವ ಸಂಸ್ಕೃತಪಾಠಶಾಲೆಗೆ ಅರೀರ್ವದಿಸಿರುತ್ತೇವೆ. ಈ ಪಾಠಶಾಲಾ ಅಧ್ಯಕ್ಷಾದಿ ಮರ್ಯಾದೆಯರು ಶ್ರೀಗುರುವಿನಾಶೀರ್ವಾದವನ್ನು ಅಂಗೀಕರಿಸಿ ಸಂಭಾವಿಸಬೇಕೆಂದು. ಅಕ್ಷರೆ ಪೂರಿರುತ್ತದೆ.

೬. ಮತ್ತು ನಮ್ಮ ಸ್ಮುಧಿಯುಂಡ ಸದರೀ ಸಂಸ್ಕೃತ ಪಾಠ ಶಾಲೆಯ ಅಧಿವೃದ್ಧಿಗೆ ಅರೀರ್ವದಿಸಿದ ಈ ಐದು ಸಾವಿರ ರೂಪಾ ಯಿಗಳನ್ನು ಈ ನಾರದೆಯ ಫಿಡಿಗಾಗಿಟ್ಟು ಮೂಲಧನಕ್ಕೆ ಲೋಪವಿಲ್ಲದಂತೆ ಇಟ್ಟು, ಶ್ರತಿವರ್ಷದಲ್ಲಿ ಬರಿವ ಬಡ್ಡಿ ರೂಪಾ ಯಿಗಳನ್ನು ಸದರಿ ಸಂಸ್ಕೃತ ಪಾಠಶಾಲೆಯ ಅಧ್ಯಾಪಕರ ಅಧ್ಯಾ ತ್ಮಗಳ ಖರ್ಚುಗಳಲ್ಲಿ ಸಿಲ್ಕೊಳಿಸಬೇಕೆಂದು ನಿಯಮಪೂರ್ವಕ ವಾಗಿ ಈ ಶಾಲಾಧ್ಯಕ್ಷಾದಿ ಮರ್ಯಾದೆಯರಿಗೆ ಸೂಚಿಸುತ್ತೇವೆ.

೭. ಈ ವಾರವ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ|| ಪಂ|| ಜಗದೀಶಶಾಸ್ತ್ರೀ ನಾಲವಾರ, ಇವರು ೩೫ ವರುಷಗಳ ಅನಾಯಿತಾ ಬಹು ವಿದ್ವತ್ತದಿಂದ ವಿದ್ಯಾರ್ಥಿಗಳಿಗೆ ಸಂಸ್ಕೃತ ವಿದ್ಯೆಯನ್ನು ಸುಗಮವಾಗಿ ಸ್ಪಷ್ಟವಾಗಿ ಕೊಟ್ಟುದರಿಂದ ಅನೇಕ ವಿದ್ಯಾರ್ಥಿಗಳು ಈ ವಿತ್ತದಲ್ಲಿ ಪಂಡಿತರಾಗಿರುವರು. ಇವನ್ನು ನೋಡಿ ಸಂತೋಷಪಟ್ಟು ಸದರೀ ಪಂಡಿತರಿಗೆ ೫೭ ರೂಪಾಯಿಗಳನ್ನು ಸಂಭಾವನೆಯೆನ್ನಾಗಿ ಅರೀರ್ವದಿಸಿರುತ್ತೇವೆ. ಈ ಅರೀರ್ವಾದವನ್ನು ಸದರಿ ಶಾಸ್ತ್ರಿಗಳು ಅಂಗೀಕರಿಸಬೇಕೆಂದು ಅಪ್ಪಣೆ ಮಾಡಿದೆ

೮. ರಾವಸಾಹೇಬ ಮಲ್ಲಪ್ಪಾ ಬಸಪ್ಪಾ ನಾರವ, ಇವರ ಇಚ್ಛಾನುಸಾರ ವೀರಶೈವಮತಗ್ರಂಥಗಳನ್ನು ಮುದ್ರಿಸಿ ತಂದು ಬಹೂಪಯೋಗಿತೆಯಿಂದ ಭಾಷಿಸಿ ಪ್ರಸಿದ್ಧಿಗೊಳಿಸುವ ಕಾರ್ಯದಲ್ಲಿ ತತ್ಪರರಾಗಿ ನಡೆದುಕೊಂಡಿರುವ ವೇ|| ಪಂ|| ಮಣಾರು ಮಲ್ಲಿಕಾ ರ್ಜುನಶಾಸ್ತ್ರಿಗಳ ಧರ್ಮಬುದ್ಧಿಯನ್ನು ಚಿತ್ತದಲ್ಲಿ ಸ್ಮರಿಸಿ ಸಂತೋಷದಿಂದ ಸದರಿ ಶಾಸ್ತ್ರಿಗಳಿಗೆ ೫೭ ರೂಪಾಯಿಗಳನ್ನು ಅರೀರ್ವದಿಸಿರುತ್ತೇನೆ. ಸದರೀ ಶಾಸ್ತ್ರಿಗಳು ಅಂಗೀಕರಿಸಬೇಕೆಂದು ಅಪ್ಪಣೆ ಮಾಡಿರುತ್ತದೆ.

೯. ಶ್ರೀಮದ್ವೀರಶೈವ ವಾರವ ಸಂಸ್ಕೃತ ಪಾಠಶಾಲೆಯಲ್ಲಿ ರುವ ಶಾಸ್ತ್ರಾಧ್ಯಕ್ಷ-ಮಧ್ಯಮ-ಪ್ರಥಮ ಪರೀಕ್ಷೆಯಲ್ಲಿ ತೂರ್ತಿಯಾದ ವಿದ್ಯಾರ್ಥಿಗಳನ್ನು ತಾ|| ೩೧-೮-೧೯೩೪ ನೇ ಗುರುವಾರದ ದಿನ ದಲ್ಲಿ ನಮ್ಮ ಸಂಸ್ಥಾನಾವರಣದಲ್ಲಿ ಪಂಡಿತರಾದ ಉಮಾಮಹಿ ಶಂಕರ ಶಾಸ್ತ್ರಿಗಳಿಂದ ಪರೀಕ್ಷಿಸಿ ಅತಿಸಂತೋಷದಿಂದ ಅವ್ಯ ವಿದ್ಯಾರ್ಥಿಗಳಿಗೆ ಒಂದೊಕಾಲು ರೂಪಾಯಿಗಳನ್ನೂ, ಮಧ್ಯಮ ವಿದ್ಯಾರ್ಥಿಗಳಿಗೆ ಎರಡೊಕಾಲು ರೂಪಾಯಿಗಳನ್ನೂ, ತೀರ್ಥವಿದ್ಯಾರ್ಥಿಗಳಿಗೆ ಮೂ ರೊಕಾಲು ರೂಪಾಯಿಗಳನ್ನೂ ಮತ್ತು ಪ್ರವೇಶಪರೀಕ್ಷೆಯಲ್ಲಿ ರುವ ವಿದ್ಯಾರ್ಥಿಗಳಿಗೆ ಮುಕ್ಕಾಲು ರೂಪಾಯಿ ಗಳನ್ನು ಆರೀರ್ವದಿಸಿರುತ್ತೇವೆ. ಸರ್ವ ವಿದ್ಯಾರ್ಥಿಗಳೂ ಆಂಗೀ ಕರಿಸಬೇಕೆಂದು ಆಪ್ಪಣೆ ಮಾಡಿರುತ್ತದೆ.

೧೦. ಶ್ರೀಮದ್ವೀರನಾರವ ಸಂಸ್ಕೃತ ಪಾಠಶಾಲೆಯು ವಿಶೇ ಷಾಭಿವೃದ್ಧಿಗೆ ಬರುವುದಕ್ಕಾಗಿ ನಮ್ಮ ವೀರಶೈವ ಭಕ್ತ ಪೂಜೇಶ್ವ ರರು ಯಾವತ್ತರು ತಮ್ಮ ತಮ್ಮ ಜೀವಮಾನದೆ ಸೋಡಶಸುಸ್ಕಾರ ಗಳಲ್ಲಿ ತಮ್ಮ ತಮ್ಮ ಶಕ್ತ್ಯನುಸಾರ ಸದ್ಧರ್ಮದುದ್ಧಿಯಿಂದ ಸದ್ವ್ಯಯವನ್ನು ತೆಗೆದು, ತಪ್ಪದೆ ಕಳುಹಿಸಬೇಕೆಂದು, ವೀರಶೈವ ರಲ್ಲಿನಸ್ಥಸಂತತಿಯವರು ತಮ್ಮ ಸ್ವತ್ತುಗಳನ್ನು, ಜ್ಞಾನಸಂತತಿಯ ಅಭಿವೃದ್ಧಿಗೋಸುಗ ಬಹು ಸಂತೋಷದಿಂದ ಸರ್ವಾಸಕ್ತರ ರಾಗಬೇಕೆಂದೂ, ಹೀಗೆ ಸಮರ್ಪಿಸಿದವರು ಈ ವೀರಶೈವ ಮತದ ಶಿರಶ್ಚಾಸ್ತ್ರವಾನ ಫಲಕ್ಕೆ ಪಾತ್ರರಾಗಿ ಇಹಲೋಕ ಭೋಗವನ್ನು ಪರಲೋಕ ಮುಕ್ತಿಯನ್ನು ಪಡೆಯು ನಿಶ್ಚಸುಖಿಗಳಾಗಿ ಧನ್ಯರಾಗು ವಿರೆಂದು ಈ ವೀರಶೈವಭಕ್ತಮಾಹೇಶ್ವರರಿಗೆ ಸೂಚಿಸಿರುವ ಆಪ್ಪಣೆ ಯನ್ನು ಸುರೆಯವೆ ಅಂಗೀಕರಿಸಿ ವರ್ತಿಸುತ್ತಾರೆಂದು ಸಂಬಿಯ ತ್ತೇವೆ

೧೧. ಈ ವಾರವ ಸಂಸ್ಕೃತಪಾಠಶಾಲೆಗೆ ಅರೀರ್ವದಿಸಿದ ಐದುಸಾವಿರ ರೂಪಾಯಿಗಳ ಸ್ಥಿರ ಈಗ ಹನ್ನೆರಡುನೂರು ರೂಪಾ ಯಿಗಳನ್ನು ಜಮಾ ಮಾಡಿರುತ್ತೇವೆ. ಇನ್ನೂ ಮೂರುಸಾವಿರ ವೆಂಟುನೂರು ರೂಪಾಯಿಗಳನ್ನು ನಮ್ಮ ಗುರುಪಿಡ್ಡಿಜೆಯು ಜಮಾ ಆವಂತೆಲ್ಲಾ ಜಮಾ ಮಾಡುತ್ತೇನೆ. ಈ ಬಗ್ಗೆ ಶ್ರೀ ವೀರಶೈವ ಸುಶಾಭಿವೃದ್ಧಿ ಕಾಂಕ್ಷಿಗಳಾದ ತಮ್ಮಂಗಳಿಗೆ ಜಾಮುಲ್ಯವಾಗಿ ಆಪ್ಪಣೆ ಕೊಡಿಸುವದೇನದೆ.

ಇತ್ಯಾಶೀಃ.

ತಾ|| ೭೧—೮—೧೯೩೪ ಮುಕ್ಕಾಂ ಸೊಲ್ಲಾಪುರ

ಶ್ರೀಜಗದ್ಗುರು ಪಂಚಾಚಾರ್ಯ ನಾಮಾಂಕಿತ

ಪಂಚಮಂಟಪಪೂಜಾ

ಖಾನಾಪೂರ

ಸತಸಂಖಿಗ್ರಾಮಕ್ಕೆ ಆಗಮನಗೊಳಿಸಿದ ಚತುರುಪಾಚಾರ್ಯರಿಗೆ ಅತ್ಯಂತ ವಿನಯಭಕ್ತಿಯಿಂಡಾಮಂತ್ರಣವಿಷ್ಟು, ಖಾನಾಪುರ ಶ್ರೀಯುತ ಅಣ್ಣಾರಾವ ಪಾಟೀಲರು ತಮ್ಮ ಗ್ರಾಮಕ್ಕೆ ಶ್ರೀಗಳನ್ನು ಬರಮಾಡಿಕೊಂಡಂತೆ, "**ಮಹಿಳಾಮಂಚೆ**" ಸಾ|| ಭಾಗೀರಥೀ ಬಾಯಿ ಳಟಾಪ ಈ ಮಾತ್ಯವಿನನ್ನು ಬರಮಾಡಿಕೊಂಡರು. ಭಾದ್ರೆ ಪದ ಮನ್ಯೆ ೧೩ ಬುಧವಾರದಿವಸ ಸ್ವಾತಃಕಾಲ ೭ ಘಂಟೆಗೆ ಸರಿ ಯಾಗಿ ಪಂಚಾಚಾರ್ಯ ಪಂಡಿಗುಂಟಿಪಪೂಜೆಯು ಒಳ್ಳೇ ಮನೋ ಪರವಾಗಿ ನೆರವೇರಿಸಲ್ಪಟ್ಟಿತು.

ಮಂಟಪ ರಚನಾ

ಆರಂಭದಲ್ಲಿ ಶ್ರೀಜಗದ್ಗುರು ರೇಣಾಚಾರ್ಯಾರ ನಾಮಾಂಕಿತ ಮಂಟಪವು ಹೆಸರು ವಸ್ತುವಿಂದಲೂ, ಅವರ 'ನ' ಕಾರಾಕ್ಷರದಿಂ ದಲೂ, 'ಶ್ರೀಜಗದ್ಗುರು ರೇಣಾಚಾರ್ಯಾಯನಮಃ' ಎಂಬವ ನಮಸ್ಕಾರಾತಿಕಾಕ್ಕರದಿಂದಲೂ, ಲಿಂಗೋದ್ಭವ ಮೂರ್ತಿಯಿಂದಲೂ ರಚಿಸಲ್ಪಟ್ಟಿತ್ತು. ಈ ಮಂಟಪದಲ್ಲಿ ಶ್ರೀ ರೇಣುಕ ಪ್ರಾಣಿಯ ಉಪಾಚಾರ್ಯರಾದ ಭೂಸನೂರು ಬೃಹನ್ಮಠಾಧ್ಯಕ್ಷರಾದ ಪೂ|| ಬ್ರ|| ಶ್ರೀ ಗುರುಸಿದ್ಧಶಿವಾಚಾರ್ಯರವರು ಮೂರ್ತಿಮಾಡಿದ್ದರು. ಹೀಗೆ ಯೇ ಆಯಾ ಆಚಾರ್ಯ ಭಿಗವತ್ಪಾದರ ನಾನುಗಳಿಂದಲೂ, ನಮ್ಮ ಸ್ವೆಶಿವಾಕ್ಕಗಳಿಂದಲೂ, ಆಯಾ ಆಚಾರ್ಯರ ಪ್ರಣಾಮಾಕ್ಷರಗಳಿಂ ದಲೂ ಆಯಾ ಆಚಾರ್ಯರ ವರ್ಣನ ವಕ್ಕಗಳಿಂದಲೂ ಲಿಂಗೋದ್ಭವ ವ ಪ್ರತೋಟೋಗಳಿಂದಲೂ, ತೋರಣಗಳಿಂದಲೂ ಆತಿವ ಮನೋ ಹರವಾಗಿ ಪಂಚಮಂಟಪಗಳು ರಚಿಸಲ್ಪಟ್ಟಿದ್ದವು.

ಎರಡನೇಯ ಮಂಟಪದಲ್ಲಿ ಶ್ರೀಪಾರುಗಾಚಾರ್ಯಾಪೀಯ, ಶ್ರೀ ಕಾಂತವೀರಶರ್ವಾ ಖಾತಾಳ ಎಂಬುವ ಬ್ರಹ್ಮಚಾರಿಗಳ ಮೂರ್ತಿಮಾಡಿದ್ದರು.

ಮೂರನೇ

ತರಹದ ಅನುಕೂಲತೆಗಳನ್ನು ತಿಳಿಸಿಕೊಟ್ಟ ಸಾ॥ ಭಾಗೀರಥೀ ಬಾಯಿಯವರ ಗುರುಭಕ್ತಿನೈಷ್ಠೆ ಬಿದ್ದಿಯೂ ಬಹು ಆನಂದವನ್ನುಂಟುಮಾಡಿಸಿದವು.

ಎರಡು ದಿವಸಗಳಲ್ಲಿಯೂ ಜೈನಾಪುರ, ಭೂಸನೂರ, ಹೋಟಗಿ, ಅಕ್ಕಲಕೋಟ (ಚೇನರಗಿ) ಶ್ರೀಗಳವರ ಹಾಗೂ "ಶಾರದಾದೇವಿ" ಸಾ॥ ಭಾಗೀರಥೀಬಾಯಿ ಕರ್ಜಾಪ ಈ ಮೂತ್ಯವಿನ ಭಾಷಣಗಳು ಬಹು ಹೃದಯಂಗಮವಾಗಿ ಆದವು. ಅನ್ನಪೂರ್ಣಾ ನಿಟ್ಟೂರೆ ಈ ಬಾಲಿಕೆಯು ಜಗದಾಚಾರ್ಯರಸ್ತೋತ್ರವನ್ನು ಶ್ರೋತೃವ್ಯಂದವನ್ನು ಆನಂದಗೊಳಿಸಿತು. ಹಾಗೆಯೇ ಈ ಕುಮಾರಿಯು "ಏಕೇಶ್ವರೀಭಕ್ತಿ" ಯ ಭಾಷಣವೂ ಸರಿಸಾಮಗೊಳಿಸದೆ ಬಿಡಲಿಲ್ಲ. ಜೈನಾಪುರ ಶ್ರೀಗಳವರು ಸಭೆಯ ಕಾರ್ಯಕ್ರಮವನ್ನು ಬಹು ಚೆನ್ನಾಗಿ ನೆರವೇರಿಸುತ್ತಿದ್ದುದು ಜನರನ್ನು ಆಶ್ಚರ್ಯಗೊಳಿಸಿತು.

ಈ ಭಾಗದಲ್ಲಿ ಸುಪ್ರಸಿದ್ಧ ಪುರುಷರಾದ ಕಲ್ಯಾಣರಾವ ವೇಶಪಾಂಡೆ ಎಂಬುವವರು ಸದರಿ ಶ್ರೀಗಳ ದರ್ಶನಾರ್ಥಿಗಳಾಗಿ ಬಂದು ತಮ್ಮ ಸ್ವಭಾವಸಿದ್ಧ ಅನಿಂದರೂಪ ಆಸ್ತಿಕ್ಯವನ್ನು ಭಾಷಣ ದಿಂದ ಪ್ರಕಟಿಸಿದರು. ಜಿಪ್ಸಿ, ಜಿಲ್ಲಿ, ಗದ್ದಲೀಗಾಂವ ಗ್ರಾಮಗಳಿಗೆ ಇವರು ಜಹಗೀರದಾರರಿದ್ದಾರೆ. ಒಳ್ಳೇ ನಿದ್ಯಾವಂತರಿದ್ದಾರೆ ಆದರೂ ಇವರೆ ಆಸ್ತಿಕ್ಯ, ನಾಸ್ತಿಕರ ಮುಖಭಂಗಮಾಡದೆ ಬಿಡುವದಿಲ್ಲ. 'ಧರ್ಮ' ದ ಬಗ್ಗೆ ಅವ ಶ್ರೀಗಳ ಭಾಷಣವನ್ನು ಕೇಳಿ ಶ್ರೀಯುತ ಕಲ್ಯಾಣರಾಪರವರಿಗೆ ಅತೀವ ಆನಂದವು ಆಗದೇ ಉಳಿಯಲಿಲ್ಲ.

ಶ್ರೀಯುತ ಅಣ್ಣಾರಾವ ಪಾಟೀಲರ ಈ ಪ್ರಕಾರದ ಗುರು ಭಕ್ತಿಯು ಇದಕ್ಕೂ ಹೆಚ್ಚು ಬೆಳೆದು ಗುರುಕೃಪೆಗೆ ಪಾತ್ರರಾಗುವಂತೆ ಅತೀವದಿನಲೆಂದು ಪ್ರಾರ್ಥಿಸುವೆನು. ಈ ಸಮಯದಲ್ಲಿ ಪ್ರಭಾವೆನಿಗೆ ೧ ರೂಪಾಯಿ ಅರ್ಪಿಸಲ್ಪಟ್ಟಿತು.

ಶ್ರೀ ಬಸವಣ್ಣಾ ಪಾಟೀಲ,
ಸೆಕ್ರೆಟರಿ,
ವೀರಶೈವಧರ್ಮಪ್ರಸಾರಕಸಂಘ, ಸರಸಂ.

ಸೆರಸಂಬ

ಮೇಲುದಾಹರಿಸಿದ ಖಾನಾಪೂರದಲ್ಲಿಯ "ಶ್ರೀಜಗದ್ಗುರು ಪಂಚಾಚಾರ್ಯ ನಾಮಾಂಕಿತ" ಪಂಚಮಂಟಪ ಪೂಜೆಯನ್ನು ನೋಡಿ ಸರಸಂಬದ ಶ್ರೀಯುತ ಮಲ್ಲಿಕಾರ್ಜುನಪ್ಪಾ ಪಾಟೀಲರು ತಾವು ಮಂಟಪಪೂಜೆಯನ್ನು ಮಾಡುವುದಾಗಿ, ಸದರೀ ಪಂಚಾಚಾರ್ಯರಿಗೆ ಖಾನಾಪೂರದಲ್ಲಿಯೇ ಆಮಂತ್ರಣವನ್ನಿತ್ತು, ತಮ್ಮ ಗೃಹಕ್ಕೆ ಆಗಮನ ಮಾಡಿಸಿಕೊಂಡರು. ಅವೇದಿವಸ ಖಾನಾಪೂರ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಭೂಸನೂರ ಹೋಟಗೀ ಶ್ರೀಗಳ ಹಾಗೂ ಸಾ॥ ಭಾಗೀರಥೀಬಾಯಿ ಕರ್ಜಾಪ, ಕು॥ ಅನ್ನಪೂರ್ಣಾ, ಇವರ ಭಾಷಣಗಳಾದಮೇಲೆ, ಅಕ್ಕಲಕೋಟದ ಕುಂಬಾರಗೇರಿ ಹಿರೇಮಠಾಧ್ಯಕ್ಷರಾದ ಶ್ರೀ॥ ಪ॥ ಬ್ರ॥ ಸುರುಕಾಂತಶಿವಾಚಾರ್ಯರ ಭಾಷಣವೂ ಆಯಿತು. ಸಭೆಗೆ ಇಲ್ಲಿಯ ದೇಶಪಾಂಡೆ ಬಾಪುಸಾಹೇಬರೂ ಬಂದಿದ್ದು, ಸಾ॥ ಭಾಗೀರಥೀ ಬಾಯಿಯವರ ಉಪನ್ಯಾಸಕ್ಕಮವನ್ನರಿತು ಬೆರಗಾದರು.

ಮಾರನೇ ದಿವಸ (ಭಾದ್ರಪದ ಪಂಚಮೀ ಅಮಾವಾಸ್ಯೆ) ಪ್ರಾತಃಕಾಲ ಪಂಚಮಂಟಪ ಪೂಜೆಯು ಬಹು ನಿರ್ವಿಘ್ನತೆಯಿಂದ ಜರುಗಿತು.

ಪ್ರತ್ಯಕ್ಷದರ್ಶಿ.

ಮುಕ್ತಿಕಾ ಸಭೆ.

ಹಿಂದೆಕ್ಕೆಮ್ಮೆ ನೋಣಗಳೆಲ್ಲ ಒಟ್ಟುಗೂಡಿ ಸಭೆಯನ್ನೊಂದು ಏರ್ಪಡಿಸಿದವಂತೆ. ಆ ಸಭೆಗೆ ಏನೂ ಅರಿಯದೆ ಕುರುಡ ನೊಣನನ್ನು ಅಧ್ಯಕ್ಷನನ್ನಾಗಿ ನಿಯಮಿಸಿದವಂತೆ. ಜೇನುನೊಣವನ್ನು ಸಭೆಗೆ ಕರೆಯಿಸಿ ಆ ಸಭೆಯಲ್ಲಿ ಮಾತಾಡಲು ಅವಧಿಯನ್ನೆ ಕೊಡಲಿಲ್ಲವಂತೆ. ಆ ಸಭೆಯಲ್ಲಿ ನೋಣಗಳೆಲ್ಲವೂ ಸೇರಿ ಒಂದು ಠರಾವನ್ನು ಪಾಸುಮಾಡಿಕೊಂಡವಂತೆ. ಅದೇನೆಂದರೆ—

ಈಗಿನ ಕಾಲದಲ್ಲಿ ಎತ್ತನೋಡಿದತ್ತ "ಆರೋಗ್ಯ, ಆರೋಗ್ಯ" ನೆಂಬ ಜನರು ಬಡಬಡಿಸುತ್ತಿರುವರು. ಆದ್ದರಿಂದ ಇನ್ನು ನಮ್ಮನ್ನು ಯಾರೂ ಯಾವ ಖಾದ್ಯವಸ್ತುಗಳಮೇಲೆ ಕೂಡಲು ಆಸ್ಪದ ಕೊಡುವಂತೆ ಕಾಣುವುದಿಲ್ಲ. ಮತ್ತು ರೋಗಿಯಾದವರಿಗೆ ನಿರೋಗಿಯಾಗುವುದಕ್ಕೆ ಜೇನನ್ನು ಒಡಗಿಸಿಕೊಡುವ ಈ ಜೇನುನೊಣವು ನಮ್ಮ ಕಾರ್ಯಕ್ಕೆ ಬಹಳವಾಗಿ ವಿಘ್ನವನ್ನುಂಟುಮಾಡುತ್ತಿರುವುದು ಆದ್ದರಿಂದ ಈ ನಮ್ಮ ಮಹಾಸಭೆಯಲ್ಲಿ ಈ ಮಧುಕರಕ್ಕೆ ಮಾತಾಡಲವಧಿಯನ್ನೀಯಕೂಡದು. ಮತ್ತು ಮಧುಪ್ರಜೆ ನಮಗೆ ಬೇಕೇ ಅಗಿಲ್ಲ. ಆದ್ದರಿಂದ ಈ ಮಧುವನ್ನು ನಿಷೇಧಿಸುವುದು. ಈ ಪ್ರಕಾರ ನೋಣಗೆಲ್ಲ ಸೇರಿ ಠರಾಯಿಸಿಕೊಂಡಂತೆ ಮೊನ್ನೆ ನೈಜಾಂ ಪ್ರಾಂತದಲ್ಲಿ ಅತಿಭಾರಿಮಳೆಯಲ್ಲಿ ಒಂದು ಸಭೆ ಸೇರಿ, ವರ್ಷಾಕಾಲಮಗಳನ್ನು ತಿಳಿಸುವ ಮತ್ತು ಸರ್ವರೂ ಈ ಭಯಂಕರ ಗದಿಂದ ಪಾರಾಗುವುದಕ್ಕೆ ವೇದವೇ ಮೂಲವಾಗಿದೆ. ಅಂತಹ ವೇದಮಾತೃವನ್ನು ನಿಷೇಧಿಸಿದಂತೆ, ನೊಣಗಳು ಜೇನನ್ನು ನಿಷೇಧಿಸಿದರೂ, ಜೇನನ್ನು ಕಂಡಕ್ಷಣವೇ ಆ ಜೇನಿನಲ್ಲಿಯೇ ಹೊರಳಾಡುವಂತೆ, ಈಗಿನ ಈ ವಚನಭಕ್ತರು ವೇದವನ್ನು ಆಲ್ಲಗಳೆದರೂ, ಆ ವೇದವಾಕ್ಯದಿಂದಲೇ ಇವರ ಪಜನೆಗಳು ಹೊರಟಿರುವಮಂಬುವನ್ನು ಪೂರೈಸಿದರಿರಿ. ಆ ಜೇನನ್ನು ಸಂಪೂರ್ಣ ಬಲ್ಲ ಮಧುಕರಕ್ಕೆ ಮಾತಾಡಲು ಅವಧಿಯು ದೊರೆಯದಂತೆ ವೇದದ ಸಂಪೂರ್ಣರಹಸ್ಯವನ್ನರಿತ, ವೇ॥ ಪಂ॥ ಶ್ರೀ ವೀರಭದ್ರ ಶಾಸ್ತ್ರಿಗಳವರಿಗೂ ಈ ಖಾನಾಪುರಿನಲ್ಲಿ ಸುರುವಾದ ಸಮಯವು ದೊರೆಯಲಿಲ್ಲ. ಆದರೆ ಪುಢು ಮತ್ತು ಮಧುಕರ ಇವುಗಳ ಬೆಲೆಯು ಹೇಗೆ ಯಥಾಪತ್ತಾಗಿದೆಯೋ ಹೇಗೆ ಮತ್ತು ವೀರಭದ್ರ ಶಾಸ್ತ್ರಿಗಳ ಬೆಲೆಗೇನೂ ಕುಂದು ಬಾರದು. ನೋಣಗಳ ತಮ್ಮ ಸಭೆಗೆ ಕುರುಡನೊಣವನ್ನು ಅಧ್ಯಕ್ಷನನ್ನಾಗಿ ಮಾಡಿದಂತೆ, ಈ ಸಭೆಯನರು ಏನೂ ಜ್ಞಾನವಿಲ್ಲದವನನ್ನು ಶ್ರೀಮಂತನೆಂದರಿತು ಅಧ್ಯಕ್ಷನನ್ನಾಗಿ ಮಾಡಿದ್ದರು. ಈ ಮಕ್ಷಿಕಾಸಭೆಯ ರೀತಾಭ್ಯ ಎಷ್ಟು ಉಪಯೋಗವಾಗಿ ಜನರು ರೋಗಕ್ಕೊಳಗಾಗುವರೋ ಆಷ್ಟೇ ಈ ವೇದವಿರೋಧಿ ಸಭೆಯಿಂದಜಿ, ಉಪಯೋಗವಾಗಿ ಜನರು ಸಂಕರರೋಗಬರುವುದು. ಏನೂ ಅರ್ಥವಿಲ್ಲದ ಸಭೆಯವರು ತಮ್ಮ ಮನಸ್ಸಿಗೆ ಬಂದಂತೆ ರೂಢಿಸಿಕೊಂಡರೆ ಅದು ಮಾನ್ಯವಾದೀತೆ? ಮಾನ್ಯವಾದ ವಸ್ತುವಿನ ಬೆಲೆಯು ಕಡಿಮೆಯಾಗದೀತೆ? ಮಹಭಿಮಾನ ಪಾಶದಲ್ಲಿ ಬಿದ್ದು, ವೀರಶೈವರಿಗೆ ವೇದವು ಮಾನ್ಯವೇ ಅಲ್ಲವೆಂದುಕೊಡಲೇ ಇವರಾವ ಪುರುಷಾರ್ಥವನ್ನು ಸಾಧಿಸಿದಂತಾಯಿತು? ಓರ್ವ ವೇದವಿರೋಧಿಗಳನ್ನು ನೋಡಿದಿರುವ ನಾನಿಕನು ಆಕಸ್ಮಾತ್ತಾಗಿ ವೇದತೆಯೊಂದು ತನ್ನ ದೃಷ್ಟಿಗೆ ಬೀಳಲು, ಆ ವೇದತೆಯನ್ನೇಕೆ ನೋಡಿದಿ? ಎಂಬುವ ಕೋಶದಿಂದ ತನ್ನ ನೇತ್ರಗಳಿರದನ್ನೂ ಕಿತ್ತೊಗೆದನಂತೆ. ಹಾಗೆಯೇ ಈ ಲಾತೂರಿನ ಸಭೆಯವರ ಪರಿಸ್ಥಿತಿಯು. ವೇದದಲ್ಲಿ ಹಿಂಸೆ ಬೇಕಿದೆ ಎಂಬದೊಂದು ಕುಂಟ ನೆಪವನ್ನು ಮುಂದೆಮಾಡುವರು ಓಹೋ! ಅಹಿಂಸಾವಾದಿಗಳೇ! ವೇದಮಾತೃವನ್ನೇ ಹಿಂಸಿಸಲು ನಿದ್ದಾದ ನೀವೆಂತಹ ಅಹಿಂಸವಾದಿಗಳು? ವೇದ ವೆಂದರೆ ಜ್ಞಾನಸ್ರ್ರಾವಾನ್ಯವಾದುದು. ವೇದವು ಒಂದು ಸ್ಟೋರ್ ಇದ್ದಂತೆ ಇರುತ್ತದೆ. ಇದರಲ್ಲಿ ಆನೇಕಸ್ರಕಾರವ ವಸ್ತುಗಳಿವೆ ವೆದೊ ನಿಮಗೆ ಬೇಕಾದವುಗಳನ್ನು ನೀವು ತೆಗೆದುಕೊಂಡರಾಯಿತು? ನಿಮಗೆ ಬೇಡಾದ ವಸ್ತುಗಳು ಸ್ಟೋರಿನಲ್ಲಿದ್ದರೆ ಆ ಸ್ಟೋರನ್ನೇ ಬೇಡವೆನ್ನುವುದು ಎಷ್ಟು ಮೂರ್ಖತನವೋ ಆಷ್ಟೇ ಮೂರ್ಖತನವು ವೇದವನ್ನು ಬೇಡವೆನ್ನುವದರಲ್ಲಿದೆ.

ಓರ್ವ ಜಿಜ್ಞಾಸು.

ಶಿವಮೊಗ್ಗ ಶ್ರೀ ಮಹಾಲಿಂಗಪ್ಪನವರಿಗೆ ಸರ್ವಿಸ್ ಮೆಡಲ್.

ಶಿವಮೊಗ್ಗ ಟವರ್ನಾಸಿ ಶ್ರೀ॥ ಜಿ. ಸಿ ಮಹಾಲಿಂಗಪ್ಪನವರು ನೆಸರುವಾಸಿಯಾದ ಮತ್ತು ಗೌರವಯುತವಾದ ಮನೆತನಕ್ಕೆ ಸೇರಿದವರು. ಕಳೆದ ಸುಮಾರು ಇಪ್ಪತ್ತು ವರ್ಷಗಳಿಂದಲೂ ಈ ದಿಸ್ಟ್ರಿಕ್ಟಿನ ಸಾರ್ವಜನಿಕ ಕ್ಷೇತ್ರಗಳಲ್ಲಿ ಸ್ತುತ್ಯವಾದ ಸೇವೆಗಳನ್ನು ಸಲ್ಲಿಸಿ ದ್ದಿಸ್ಟ್ರಿಕ್ಟಾ ಮಳೆ ಸರ್ವಜನರ ಮನ್ನಣೆಗೆ ಪಾತ್ರರಾಗಿದ್ದಾರೆ.

ಒಂಭತ್ತು ವರ್ಷಗಳಕಾಲ ಪ್ರಜಾಪ್ರತಿನಿಧಿಸಭೆಯ ಮೆಂಬರಾಗಿಯೂ ಹನ್ನೆರಡು ವರ್ಷಗಳಕಾಲ ದಿಸ್ಟ್ರಿಕ್ಟು ಬೋರ್ಡು ಸದಸ್ಯರಾಗಿಯೂ, ಮೂರು ವರ್ಷಗಳಕಾಲ ಮುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿಯೂ, ಒಂಭತ್ತು ವರ್ಷಗಳಕಾಲ ಅನರರಿ ಬೆಂಚ್ ಮ್ಯಾಜಿಸ್ಟ್ರೇಟರಾಗಿಯೂ, ಮೂರು ವರ್ಷಗಳಕಾಲ ದಿಸ್ಟ್ರಿಕ್ಟ್ ಆಸ್ಪತ್ರೆಯ ವಿಜಿಟರಾಗಿಯೂ, ಮೂರು ವರ್ಷಗಳಕಾಲ ಇಂಟರ್‌ಮೀಡಿಯಟ್ ಕಾಲೇಜ್ ಎಕ್ಸಿಕ್ಯುಟಿವ್ ಕಮಿಟಿಯ ಮೆಂಬರಾಗಿಯೂ ಒಂಭತ್ತು ವರ್ಷಗಳ ಅವಧಿಯಲ್ಲಿ ದಿಸ್ಟ್ರಿಕ್ಟು ಬೋರ್ಡು ವೈಸ್ ಪ್ರೆಸಿಡೆಂಟರಾಗಿಯೂ ಅಲ್ಲದೆ ಸ್ಥಳೀಯ ಅನೇಕಾನೇಕ ಸಂಘ ಸಂಸ್ಥೆಗಳ ಪ್ರೆಸಿಡೆಂಟರು ಯೂ ಸದಸ್ಯರಾಗಿಯೂ, ಅಗ್ರಗಣ್ಯರೆನಿಸಿಕೊಂಡ ಪುರ ಪ್ರಮುಖರಲ್ಲೊಬ್ಬರಾಗಿಯೂ, ಅನೇಕಾನೇಕ ಸಾರ್ವಜನಿಕೋಪಯುಕ್ತವಾದ ಕಾರ್ಯಕಲಾಪಗಳನ್ನು ಮಾಡಿ ತಮ್ಮ ಅನೋಪಮವಾದ ಸೇವೆಯನ್ನು ಸಲ್ಲಿಸಿರುತ್ತಾರೆ.

ನಮ್ಮ ಶ್ರೀಮನ್ಮಹಾರಾಜರವರು ಇವರನ್ನು ಗೌರವಯುತವಾದ ಮಹಾನಿಯಮವೆಂದು ಗೆಜೆಸಿ, ಅನೇಕಾವರ್ತಿ ದರ್ಬಾರ ಮಹೋತ್ಸವಗಳಲ್ಲಿ ಅರಮನೆಗೆ ಆತಿಥಿಗಳನ್ನಾಗಿ ಆದರದಿಂದ ಕರೆಯಿಸಿಕೊಂಡಿರುತ್ತಾರೆ.

ಇಂದಿಯಾದೇಶದ ವೈಸ್‌ರಾಯರಾಗಿದ್ದ ಲಾರ್ಡ್ ಇರ್ವಿನ್ ಸಾಹೇಬರನರು, ಇವರು ಶಿವಮೊಗ್ಗ ಟವರ್ ವೈಸ್ ಪ್ರೆಸಿಡೆಂಟರಾಗಿದ್ದ ಅವಧಿಯಲ್ಲಿಯೇ ಜೋಗ್ ಜಲಪಾತನನ್ನು ಪರಾಂಬರಿಸಲು ದಯಮಾಡಿಸಿದ್ದರು. ಗೊತ್ತಾಗಿದ್ದ ಅನಿರೀಕ್ಷಿತವಾದ ಅವಧಿಯಲ್ಲಿಯೇ ನಿರೀಕ್ಷಿಸಲ್ಪಟ್ಟಿದ್ದ ಎಲ್ಲಾ ಬಡಾವಣೆಗಳನ್ನೂ ತುಂಬಾ ಮೆಹನತ್ತಿನಿಂದ ಮಾನ್ಯ, ಅತ್ಯಕಡೆ ಸರಕಾರದವರ ಇತ್ಯಕಡೆ ಸಾರ್ವಜನಿಕರ ಪ್ರೇಮಕ್ಕೆ ಪಾತ್ರರಾದರು. ಆ ಕಾಲದ ಪುರಾಲಂಕಾರಾದಿ ಅನೇಕಾನೇಕ ವೈಶಿಷ್ಟ್ಯಗಳ ಕೀರ್ತಿಯು ಶಿವಮೊಗ್ಗಾ ನಗರಕ್ಕೆ ಇವರಿಂದಲೇ ಸಲ್ಲಿರುವುದೆಂದರೆ ಅತಿಶಯೋಕ್ತಿಯಾಗಲಾರದು.

ಸಾರ್ವಜನಿಕ ಕ್ಷೇತ್ರಗಳಲ್ಲಿ ಒಂದು ಕಡೆ ಮಹಾಪ್ರಭುಗಳ ಇನ್ನೊಂದು ಕಡೆ ಮಹಾಪ್ರಜೆಗಳ ಅತುಲ ಗೌರವಾಭಿಮಾನಗಳಿಗೆ ಪಾತ್ರರಾಗಿರುವರಲ್ಲದೆ ಸಾಮಾಜಿಕ ಧಾರ್ಮಿಕ ಕಾರ್ಯರಂಗಗಳಲ್ಲಿಯೂ ಮೊದಲನೆ ಸ್ಥಾನವನ್ನು ಪಡೆದವರುಗಳಲ್ಲೊಬ್ಬರಾಗಿದ್ದಾರೆ.

ಶ್ರೀಮದ್ರಂಭಾಪುರೀ ಜಗದ್ಗುರುಗಳನ್ನು ಕಳೆದ ವರ್ಷ ಶಿವಮೊಗ್ಗಕ್ಕೆ ದಯಮಾಡಿಸಿಕೊಂಡು, ಶ್ರೀ ಮಹಾ ಸ್ವಾಮಿಯವರ ಸನ್ನುಖದಲ್ಲಿ ಶ್ರಾವಣಮಾಸದ ಮಹಾನುಷ್ಠಾನವ್ರತ, ಸಾರ್ವತ್ರರಕಿತವಾದ ತದಿಪ್ರಾಯ ಎರಡನೆಯದಾಗಿ ಜರುಗಿಪ ಶ್ರೀ ಜಗದ್ಗುರುಗಳ ಸಹಸ್ರ ಕಮಲಾರ್ಚನೆ, ದಸರಾ ಮಹೋತ್ಸವ ವಗೈರೆ ಮಹಾ ವೈಭವಯುಕ್ತವಾದ ಮಹೋತ್ಸವಗಳನ್ನು ಜರುಗಿಸಿರುವರಲ್ಲದೆ, ಅವೇ ಕಾಲದಲ್ಲಿ ಸೆಹರ್ಬಾರ್ ಬಿರ್ಸಾ ಬಹದ್ದೂರ್, ರಾಜಕಾರ್ಯ ಪ್ರಧುರೀಣ ರಿಟೈರ್ಡ್ ಚೀಫ್ ಜಸ್ಟಿಸ್ ಶ್ರೀ॥ ಸಿ. ಮಹದೇವಯ್ಯನವರ ಅಧ್ಯಕ್ಷತೆಯಲ್ಲಿ "ವೀರಶೈವ ಸಮಾಜೋನ್ನತಿಯ ಆಲೋಚನಾ ಮಹಾಸಭೆ"ಯನ್ನು ಸೇರಿಸಿ, ನೀರಶೈವರಿಗೂಕ್ಷರ ಪ್ರತ್ಯೇಕ ಒಂದು ಬ್ಯಾಂಕ್ ಸ್ಥಾಪನೆಮಾಡಲು ನಿರ್ಧರಿಸಿರುತ್ತಾರೆ. ಈ ಮಹಾಸಭೆಯ ವೀರಶೈವ ಪ್ರಪಂಚದಲ್ಲಿ ಒಂದು ಪ್ರಗತಿಗಾಮಿಯಾದ ನವಚೈತನ್ಯವನ್ನುಂಟುಮಾಡಿರುತ್ತಾರೆ.

ನಮ್ಮ ಮೈಸೂರು ಶ್ರೀಮನ್ಮಹಾರಾಜರು ಇವರ ಅಪಾರವಾದ ದೀರ್ಘಕಾಲದ ಈ ಅಮೋಘಸೇವೆಗಳಿಗೆ ಮೆಚ್ಚಿ ಈ ವರ್ಷದ ದಸರಾ ಅಧಿವೇಶನದಲ್ಲಿ, "ಸರ್ವಿಸ್" ಮೆಡಲನ್ನು ದಯಪಾಲಿಸಿರುತ್ತಾರೆ.

ಶ್ರೀ ಜಗದೀಶ್ವರನು ಈ ಮಹನೀಯರ ಕೀರ್ತಿಯು ಅಚಂದ್ರಾರ್ಕವಾಗಿ ಬೆಳೆದು, ಉತ್ತರೋತ್ತರ ಸರ್ವಮೈಭವಯುಕ್ತವಾದ ಆಯುರಾರೋಗ್ಯಾದಿ ಸಕಲ ಸಂಪತ್ತನ್ನಿತ್ತು ಸಲಹಲೆಂದು ಹಾರೈಸುತ್ತೇವೆ.

ಶಿವಮೊಗ್ಗಾ ಟವರ್ ನಿವಾಸಿಗಳು.

ಮಲೆಜ್ವರಕ್ಕೆ ಮಲೇರಿಯಾನ

ಇದು ಮಲೆಜ್ವರ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ೨ ನೆ ೩ ದಿವಸಕ್ಕೊಮ್ಮೆ ಬರುವಜ್ವರ, ಕ್ವಿನೀನ್‌ನಿಂದಲೂ ಇಂಜೆಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ಗೆಡ್ಡೆ ಸಮೇತ ಸಂಪೂರ್ಣ ಗುಣಪಡಿಸುತ್ತದೆ. 4 ಔನ್ಸ್ ಸೀಸೆಗೆ ಆಣೆ 0-14-0, 8 ಔನ್ಸ್ ಸೀಸೆಗೆ ರೂ. 1-8-0, ಡಜ್ಜನಿಗೆ ರೂ. 9-12-0, ರೂ. 16-8-0.

ಕಂಪೌಂಡ್ ಸಿರಪ್ ಸಾಲಸವನೆ—ಸ್ವಪ್ನೇಂದ್ರಿಯ ಸ್ವಲನ, ಶೀಘ್ರಸ್ವಲನ, ಧಾತುಕಳಕೊಳ್ಳುವದು, ಮೂತ್ರದೊವನೆ ನಿಷ್ಪವಾಗುವದು, ವಿರ್ಯಕ್ಷಯ, ತೆಳ್ಳಗಾವಧಾತು, ಇವೆಲ್ಲವದ ಬುಡವನ್ನು ಕಿತ್ತು ಬಿಸಾಡುವದೆಲ್ಲವೆ ಧಾತುಪುಷ್ಟಿ, ರಸಾಯನ ನಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0.

ಪ್ರಖ್ಯಾತಿಪಟ್ಟ ವರ್ಮ್ ಎಲ್ಲೆಲ್ಲರ ಬಿಲ್ಲೆಗಳು—ಸಕಲರೆತದ ಹೊಟ್ಟೆಹುಳುಗಳನ್ನು ಸಾಕಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ. ಡಜ್ಜನಿಗೆ ಆ. 0-5-0 ನೂರರ ಬಾಟ್ಲಿಗೆ ರೂ. 2-0-0.

ಕಂಪೌಂಡ್ ಸಿರಪ್ ಬ್ಲಾಟಿ—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇನಸು, ಖಾಸವನ್ನು ಖಾತ್ರಿಯಿಂದ ಗುಣಪಡಿಸುತ್ತವೆ. ಸೀಸೆಗೆ ರೂ. 3.8-0, ರೂಪಾಯಿ 1.14.0.

ಬೇಬಿ ಟೋನ್—ಬಾಲ್ಯಾವಸ್ಥೆಯಲ್ಲಿ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ತಾಮ ರಿಕ್ರೆಟ್ಸ್‌ಹಣೆ ರೋಗದಿಂದ ಮಾಂಸ ಜೋಲುಬಿದ್ದು, ಮೈ, ಕೈ, ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ—

ಸೀಸೆಗೆ ರೂಪಾಯಿ 1-4-0

ಕಂಪೌಂಡ್ ಸಿರಪ್ ವೆಸಿಳೋಜ—ಪ್ರಮೇಹ, ಮೂತ್ರ ಪ್ರಾರಂಭದ ಮರ್ಮಾಸನೆಯ ಕೀವು, ಮೂತ್ರಹೊಯ್ಯುವಾಗ ತರೆಯಲಾರದ ಕಠಿಣ ಉರಿ, ಮೂತ್ರಕೃಚ್ಛ್ರ, ಮೂತ್ರ ಅಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು. ಇವೇ ಮೊದಲಾದ ಪ್ರಮೇಹದ ಲಕ್ಷಣಗಳ ಬುಡವನ್ನು ಕೆಲವು ತಾಸುಗಳಲ್ಲಿಯೇ ರಾಮಬಾಣದಂತೆ ನಿಲ್ಲಿಸುವದು.

ಸೀಸೆಗೆ ರೂ. 3-8-0, ರೂ. 1-14-0

ಪುಡಿ ಬಿಟ್ಟು, ಜೊಯ್ಕೊಪಕಿ ವಿಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.

ಮಲೇರಿಯಾನ ಕಂಪೆನಿ, (21) ಮಂಗಳೂರು, ದ. ಕ.

ಪಂಚಾಚಾರ್ಯಪ್ರಭಾ.

೧೯೩೪ನೆಯ ಆಕ್ಟೋಬರ್ ತಾ|| ೨೪ನೇ ಸೋಮವಾರ

ಕರ್ಮಫಲ.

ಮನುಷ್ಯನು ದುಷ್ಕರ್ಮಾಚರಣೆಯಿಂದ ಬಂಧವನ್ನು ಪಡೆದು ನಾನಾವಿಧ ಕಷ್ಟಗಳನ್ನನುಭವಿಸುವನೆಂದೂ ಸುಕರ್ಮಾಚರಣೆಯಿಂದ ಉತ್ತಮವಾದ ಜನ್ಮಗಳನ್ನು ಪಡೆದು ನಾನಾವಿಧ ಸುಖಗಳನ್ನನುಭವಿಸಿ ನಿತ್ಯಸುಖಿಯಾಗುವನು. ನಾವು ಮಾಡುವ ಸುಕರ್ಮದುಷ್ಕರ್ಮಗಳು ಸ್ಪಷ್ಟಿಗಳಾಗಿರುತ್ತವೆ. ನಾವು ಎಂದು ಕರ್ಮಗಳನ್ನು ಮಾಡುತ್ತೇವೆಯೋ ಅಂದೇ ಆ ಕರ್ಮಗಳು ನಷ್ಟಗಳಾಗಿಹೋಗುತ್ತವೆ. ಈಗ ಒಂದು ಯಜ್ಞಕರ್ಮವನ್ನು ಪ್ರಾರಂಭಿಸಿದರೆ ಅದೇ ದಿವಸವೋ ಅಥವಾ ಕೆಲವು ದಿವಸಗಳ ಮೇಲೆಯೋ ಆ ಕರ್ಮವು ನಷ್ಟವಾಗಿಹೋಗುವುದು. ಒಂದು ಹಿಂಸಾದಿ ನೀಚಕರ್ಮವನ್ನು ಪ್ರಾರಂಭಿಸಿದರೆ ಅದು ಆ ಹಿಂಸೆಯಾಗಿನೊತನೆಯೇ ಸಮಾಪ್ತಿಯಾಗುತ್ತದೆ. ಈಗ ಒಂದು ಪುಣ್ಯಕರ್ಮವನ್ನು ಮಾಡಿದರೆ ಅದು ಮುಂದೆ ಎಷ್ಟೋ ದಿವಸಗಳ ಮೇಲೆ ತನ್ನ ಫಲವನ್ನು ಕೊಡುವುದು. ಒಂದು ಪಾಪಕರ್ಮವನ್ನು ಮಾಡಿದರೆ ಅದು ಮುಂದೆ ಎಷ್ಟೋ ದಿವಸಗಳ ನಂತರ ತನ್ನ ದುಷ್ಫಲವನ್ನು ಕೊಡುವದು. ಹೀಗಿರುವದರಿಂದ ಬಂಧಮೋಕ್ಷಗಳೆಂಬ ಫಲಗಳಿಗೆ ಆಯಾಯ ದುಷ್ಕರ್ಮ ಸುಕರ್ಮಗಳೇ ಕಾರಣಗಳೆಂದು ಹೇಳಲು ಪ್ರಪಂಚದಲ್ಲಿ ಸಾಮಾನ್ಯವಾಗಿ ವಿರೋಧವೇ ಕಂಡುಬರುತ್ತದೆ. ಏಕೆಂದರೆ ಕಾರಣನೆಂಬುವುದು ಕಾರ್ಯದ ಪೂರ್ವದಲ್ಲಿಯೇ ಇರಬೇಕೆಂಬ ನಿಯಮವಿರುತ್ತದೆ. ಕಾರಣವು ನಷ್ಟವಾದರೆ ಕಾರ್ಯವೂ ಸಹ ನಷ್ಟವಾಗಲೇ ಬೇಕು. ಜೊಗೆಯು ಎಲ್ಲಿರುವುದೋ ಅಲ್ಲಿ ಬೆಂಕಿಯು ಇದ್ದೇ ಇರುವಂತೆ, ದುಃಖರೂಪವಾದ ಬಂಧನವನ್ನಾಗಲಿ, ಸುಖರೂಪವಾದ ಮುಕ್ತಿಯನ್ನಾಗಲಿ ಪಡೆಯಬೇಕಾದರೆ ಇವಕ್ಕೆ ಕಾರಣಗಳಾದ ಪಾಪಪುಣ್ಯಕರ್ಮಗಳು ಅವುಗಳ ಹಿಂದೆಯೇ ಇರಬೇಕಾಗುವುದು. ಬೀಜವೇ ಇಲ್ಲದ ಮೇಲೆ ವೃಕ್ಷವು ಎಲ್ಲಿಂದ ಬರಬೇಕು? ಲೋಕದಲ್ಲಿ ಕರ್ಮಗಳನ್ನು ಮಾಡಿ ಅನೇಕ ವರ್ಷ ಪರ್ಯಂತ ಎಲ್ಲರಂತೆ ತಾನೂ ಇದ್ದು ಎಲ್ಲರಂತೆ ತಾನೂ ದೇಹತ್ಯಾಗವನ್ನು ಮಾಡುತ್ತಾನೆ. ತಾನು ಹಿಂದೆ ಹಿಂದೆ ಮಾಡಿದ ಹಿಂಸಾದಿ ದುಷ್ಕರ್ಮಗಳಾಗಲಿ, ಭಗವದ್ಭಜನಾದಿ ಸುಕರ್ಮಗಳಾಗಲಿ ಒಂದೂ ಇವನ ಸಂಗಡ ಇರುವುದಿಲ್ಲವು. ಆ ಕರ್ಮಗಳೆಲ್ಲವೂ ಆಗಾಗಲೇ ನಷ್ಟಗಳಾಗಿಯೇ ಹೋಗಿರುತ್ತವೆ. ಇಂಥ ನಷ್ಟಗಳಾಗಿ ಹೋಗುವ ಸುಕರ್ಮ ದುಷ್ಕರ್ಮಗಳು ಆತ್ಮನ ಬಂಧಮೋಕ್ಷಗಳಿಗೆ ಹೇಗೆ ಕಾರಣಗಳಾಗುವವು? ಎಂಬ ಆಕ್ಷೇಪವು ಅನೇಕರಲ್ಲಿ ಹುಟ್ಟುವುದು ಸ್ವಾಭಾವಿಕವೇ ಆಗಿದೆ. ಶಾಸ್ತ್ರಕಾರರು ಇಂಥ ಆಕ್ಷೇಪಗಳಿಗೆ ಅವಕಾಶವಿಲ್ಲವೆಂತೆ ನಾನಾವಿಧಗಳಾದ ಯುಕ್ತಿಪ್ರಮಾಣಗಳಿಂದ ಸಮರ್ಥನೆಯನ್ನು ಮಾಡಿರುತ್ತಾರೆ. "ತಯೋರ್ನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ" ಜೀವನು ಯಾವ ಪುಣ್ಯ ಪಾಪಕರ್ಮಗಳನ್ನಾಚರಿಸುವನೋ ಅಂಥ ಪುಣ್ಯಪಾಪ ಕರ್ಮಾನುಸಾರವಾದ ಹಿಂನೋತ್ತಮ ಫಲಗಳನ್ನು ಅನುಭವಿಸುತ್ತಾನೆಂದು ಶ್ರುತಿದೇವಿಯು ಕರ್ಮಾನುಗುಣವಾದ ಫಲವನ್ನು ಜೀವರಿಗೆ ವಿಧಿಸಿರುವುದರಿಂದ ಈ ಸ್ಥೂಲದೇಹಸಹಕೃತವಾದ ಜೀವಾತ್ಮರು ಮಾಡುವ ಸುಕರ್ಮ ದುಷ್ಕರ್ಮಗಳು ಆಗಲೇ ನಷ್ಟಗಳಾಗುತ್ತಿದ್ದರೂ ಆತ್ಮನಲ್ಲಿ ಆಯಾಯ ಕರ್ಮಗಳ ಸಂಸ್ಕಾರವೊಂದನ್ನು ಹುಟ್ಟಿಸಿ ತಾವು ನಷ್ಟವಾಗುತ್ತವೆ. ಆ ಕರ್ಮಗಳು ನಷ್ಟವಾದರೂ ಕರ್ಮನಾಶನೆಯ ಮಾತ್ರ ಆಯಾಯ ಆತ್ಮರಲ್ಲಿ ಸಂಬಂಧಿಸಿಯೇ ಇರುತ್ತದೆ. ಈ ವಾಸನೆಯನ್ನೇ ಶಾಸ್ತ್ರಕಾರರು ಅಪೂರ್ವ ಎಂದು ಕರೆಯುತ್ತಾರೆ. ~~ಲೋಕದಲ್ಲಿ ಹಿಂದು ಭರಣಿಯಲ್ಲಿ ತಪ್ಪುಗಳಿಯನ್ನಿಟ್ಟು ಆ ಮೇಲೆ ಆ ತಪ್ಪುಗಳಿಯನ್ನು ತೆಗೆದು ಹಾಕಿದರೂ ಸಹ ತಪ್ಪುಗಳಿಯ ವಾಸನೆಯು ಮಾತ್ರ ಆ ಭರಣಿಯಲ್ಲಿ ಬಹುಕಾಲದವರೆಗೆ ಇದ್ದೇ ಇರುತ್ತದೆ~~ ಎಂಬ ದೃಷ್ಟಾಂತವನ್ನು ನೀವು ನೋಡುತ್ತಲಿದ್ದೀರಿ. ಆಯಾಯ ಕರ್ಮಗಳೆಲ್ಲವೂ ನಷ್ಟವಾದರೂ ಆ ಕರ್ಮಗಳ ವಾಸನೆಯೂ ಮಾತ್ರ ಅಣುರೂಪವಾದ ಆತ್ಮನಲ್ಲಿ ಸೇರಿಕೊಂಡು ಅದು ಫಲ ಕೊಡುವವರೆಗೂ ನಷ್ಟವಾಗದೆ ಬಚ್ಚಿಗೆ ಹತ್ತಿನ ಗಂಧದಂತೆ ಬಹುಕಾಲವಿರುವುದು. ಎಂದು ಆತ್ಮನಿಗೂ ದೇಹಕ್ಕೂ ಏಯೋಗವಾಗುವುದೋ ಅಂದು ನೋಣನ ಉಂಡೆಯೊಳಗೆ ಅಡಗಿರುವ ಸುವರ್ಣ ರೇಣುಗಳಂತೆ ಆ ಆತ್ಮರಲ್ಲಿ ಅಡಗಿರುವ ಆಯಾಯ ಸುಕರ್ಮ ದುಷ್ಕರ್ಮ ವಾಸನೆಯೆಂಬ ಅಪೂರ್ವವು ಅಳಿಯುವಾಗಿರುವ ಆಯಾಯ ಆತ್ಮರನ್ನು ಪುನಶ್ಚ ದುಃಖಮೂಲಬಂಧನದಲ್ಲಾಗಲಿ ಪರಮಾತ್ಮೈಕ್ಯನೆಂಬ ಸುಖಾನುಭವದಲ್ಲಾಗಲಿ ನೇರಿಸುತ್ತವೆ. ಇನೆಂದ ಬಂಧಮೋಕ್ಷಗಳಿಗೆ ಆಯಾಯ ದುಷ್ಕರ್ಮ ಸುಕರ್ಮಗಳೇ ಕಾರಣನೆಂದು ಸಿದ್ಧವಾಗುತ್ತದೆ. ಆದರೆ ಆ ಕರ್ಮಗಳಿಗೂ ಬಂಧ ಮೋಕ್ಷಗಳೆಂಬ ಫಲಗಳಿಗೂ ಮಧ್ಯೆ ಅಪೂರ್ವವೆಂಬುವುದೊಂದು ಹುಟ್ಟುವುದೆಂದು ಆ ಅಪೂರ್ವವನ್ನಾಧಾರ ಕರ್ಮಗಳು ಕಾರಣಗಳಾಗುತ್ತವಲ್ಲದೆ ಸಾಕ್ಷಾತ್ತಾಗಿಯೇ ಕಾರಣಗಳಾಗುವುದಿಲ್ಲವು. ಜನ್ಮಾಂತರಗಳನ್ನೂ ದೇವರನ್ನೂ ಒಪ್ಪದಿದ್ದ ಪ್ರತ್ಯಕ್ಷವಾದಿಗಳಾದ ಚಾರ್ವಾಕಾದಿ ನಾಸ್ತಿಕಮತೀಯರು ಮಾತ್ರ ಭೂಗೆ ಯಾವ ಹಿಂಸೆಯಾದರೂ ಸರಿಯೇ ಸುಖವಾದರೂ ಸರಿಯೇ ತನ್ನ ದೇಹವಿರುವನರೆಗೆ ಸುಖವಾಗಿದ್ದರೆ ಇದನ್ನೇ ಸ್ವರ್ಗಸುಖವೆಂದೂ ಮಣಿಯಾಗಿದ್ದರೆ ಇದನ್ನೇ ನರಕವು ಇನೆಂದೂ ಭಾವಿಸುತ್ತಾರೆ. ಅಂಥವರಿಗೆ ಪುಣ್ಯಪಾಪಗಳೆಂಬ ವಿಧಾನವೇ ಇರುವುದಿಲ್ಲವು. ದೇವರುಂಟು, ಗುರುಗಳುಂಟು ಪರಲೋಕವುಂಟು ಬಂಧಮೋಕ್ಷಗಳುಂಟೆಂದು ಒಪ್ಪುವ ವೇದಮತಾವಲಂಬಿಗಳಾದವರು ಮಾತ್ರ "ದಸ್ಯೋಯಥಾ ಚರಣಾಃ ರಮಣೀಯಾಮಾ ಯೋನಿಮಾಪದ್ಯಂತೆ" ಇತ್ಯಾದಿ ಶ್ರುತಿವಾಕ್ಯಗಳಲ್ಲಿ ಹೇಳಿದ ಜನ್ಮಾಂತರಗಳನ್ನು ಒಪ್ಪಿಯೇ ಒಪ್ಪುವುದರಿಂದ ಬಂಧಮೋಕ್ಷಗಳಿಗೂ ಸುಕರ್ಮದುಷ್ಕರ್ಮಗಳಿಗೂ ಅಪೂರ್ವದ್ವಾರಾ ಕಾರ್ಯ ಕಾರಣಭಾವವನ್ನು ಅಂಗೀಕರಿಸಿಯೇ ತೀರಬೇಕು. ಮತ್ತು "ಅತ್ಯತ್ಕಟೈಃ ಪುಣ್ಯಪಾಪೈರಿಹೈವ ಫಲಮಶ್ನುತೆ" ಎಂಬ ವಾಕ್ಯಾನುಸಾರವಾಗಿ ಬಹಳ ಉತ್ಕಟವಾದ ಪುಣ್ಯಪಾಪಗಳನ್ನು ಮಾಡಿದರೆ ಅವುಗಳ ಫಲವನ್ನು ಈ ದೇಹವಿರುವಾಗಲೇ ಅನುಭವಿಸುವುದಲ್ಲದೆ ಮುಂದಣ ಜನ್ಮಗಳಲ್ಲಿಯೂ ಅನುಭವಿಸಬೇಕಾಗುವುದು. ಆದರೆ ಈ ಕ್ರಮವು ನಿಯತವಲ್ಲವು. ಆತ್ಯಸಹಕೃತವಾದ ಒಂದು ದೇಹವು ಹಳೆಬಟ್ಟೆಯು ಹರಿದುಹೋದ ಹಾಗೆಲ್ಲಾ ಮುಂದೆಮುಂದೆ ಹೊಸಬಟ್ಟೆಗಳನ್ನು ಧರಿಸುವಂತೆ ಒಬ್ಬ ಆತ್ಮನು ತಾನುಮಾಡಿದ ಸುಕೃತ ದುಷ್ಕೃತಗಳನುಸಾರವಾಗಿ ಮುಂದೆಮುಂದೆ ಅನೇಕ ಜನ್ಮಗಳನ್ನು ಧರಿಸುತ್ತ ಹೋಗುವನು. ಅಂತಹ ವಿಹಿಕಕ್ಷಲಾ ಪೇಕ್ಷೆಯಿಲ್ಲದೆ ಶಿವಪ್ರೀತಿಗಾಗಿ ಶಿವಯಜನ ವಿವಭಜನಾದಿ ಸುಕರ್ಮಗಳನ್ನಾಚರಿಸುತ್ತಲಿದ್ದರೆ ಅಂಥ ಕರ್ಮಾಚರಣೆಗಳಿಂದ ಆತ್ಮನು ಪುನರ್ಜ್ಞ ದೇಹಧಾರಣಮಾಡದೆ ದುಃಖಯು ಅವಿಚ್ಛಿನ್ನವಾದ ಭ್ರಮರಚಿಂತನದಿಂದ ತನ್ನ ಪೂರ್ವರೂಪವನ್ನು ತ್ಯಾಗಮಾಡಿ ಭ್ರಮರಾಕಾರವನ್ನು ಹೊಂದಿ ಭ್ರಮರನಿಷ್ಠ ಸೌಖ್ಯವನ್ನನುಭವಿಸುವಂತೆ ಜೀವರಲ್ಲಿದ್ದ ಅಲ್ಪಾಂಶಗುಣದ ಕಿಂಚಿಜ್ಞ ತ್ವಾದಿಗಳೆಲ್ಲವೂ ನಷ್ಟವಾಗಿ ಸರ್ವಜ್ಞತ್ವಾದಿ ಅನಂತಕಲ್ಯಾಣಗುಣನಿಧಿಸ್ವರೂಪನಾದ ಪರಮಾತ್ಮಸ್ವರೂಪನೇ ತಾನಾಗಿ ನಿತ್ಯಸುಖಿಯಾಗುವನು. ಆದ್ದರಿಂದ "ರಮಣೀಯಚರಣಾ ರಮಣೀಯಾಂ ಯೋನಿಮಾಪದ್ಯಂತೇ ಕಪೂಯಚರಣಾಃ ಕಪೂಯಾಂ ಯೋನಿಂ" ಇತ್ಯಾದ್ಯನಂತ ಶ್ರುತಿಗಳ ಪ್ರಮಾಣದಿಂದಲೂ, ಪ್ರತ್ಯಕ್ಷಾನುಭವಾದಿಗಳಿಂದಲೂ. ಬಂಧ ಮೋಕ್ಷಗಳಿಗೆ ಆಯಾಯ ಕರ್ಮಗಳೇ ಕಾರಣವು. ಈಶ್ವರನು ಕಾರಣನಲ್ಲವೆಂದು ತೀರ್ಮಾನ ಪ್ರತಿಯೊಬ್ಬ ಆಸ್ತಿಕವಿಧಾನಿಯಾಯಿಯೂ ಬಂಧ ಹೇತುವಾದ ಪಾಪಕರ್ಮಗಳಲ್ಲಿ ಮನಸ್ಸನ್ನಿಡದೆ ಮುಕ್ತಿ ಹೇತುವಾದ ದೈವಗುರಿಯಜನ ಭಜನಾದಿ ಸುಕರ್ಮಗಳನ್ನಾಚರಿಸಿ ಸಂಸಾರವೆಂಬ ಚಕ್ರವನ್ನು ತಪ್ಪಿಸಿಕೊಂಡು ದೇವರ ಅನುಗ್ರಹಕ್ಕೆ ಪಾತ್ರನಾಗಬೇಕು.

ಕಳೆದವಾರ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಮೈ|| ಡಿಪ್ಯುಟೆಕಮೀಷನರ್ ಸಾಹೇಬರೇ ಮೊದಲಾದವರೊಡನೆ ಸ್ಥಳದ ವಿದ್ಯಮಾನಗಳ ವಿಷಯದಲ್ಲಿ ಅನುಭವ ಪಡೆಯಲೋಸುಗ ಹಾಮರಾಜವೇಟೆ ತಾಲ್ಲೂಕಿನಲ್ಲಿ ಸಂಚಾರವನ್ನು ನಡೆಯಿಸಿ ವ್ಯವಸಾಯ ಆಡಳಿತ ವಿಷಯಗಳನ್ನು ಪರಾಮರ್ಶಿಸಿದರು.

ಒಳದೇಶದ ವೃತ್ತಾಂತಗಳು.

ಕಳೆದ 20ನೆಯ ತಾರೀಖಿನ ದಿವಸ ರಷ್ಯದ ರಾಜಕುಮಾರರಾದ ಡ್ಯೂಕ್‌ನೆಂಡರು ರಾಜಧಾನಿಗೆ ಆಗಮಿಸಿ ರಾಜಾತಿಥಿಗಳಾಗಿದ್ದಾರೆ. ಇವರ ಆಗಮನದ ಸಂತೋಷಾರ್ಥವಾಗಿ ಅರಮನೆಯನ್ನು ವಿದ್ಯುದೀಪನಾಲೆಗಳಿಂದ ಬೆಳಗಿಸಿದರು.

ಬರುವ ಜನವರಿ ತಿಂಗಳಲ್ಲಿ ಮೈಸರಾಯರಾದ ಲಾ|| ಲಿನ್‌ಲಿತ್‌ಗೌರವರು ಮೈಸೂರಿಗೆ ಬಂದಾಗ ಅವರಿಗೆ 'ಡಾಕ್ಟರ್ ಆಫ್ ಸೈನ್ಸ್" ಎಂಬ ಗೌರವ ಪ್ರಶಸ್ತಿಯನ್ನೊಪ್ಪಿಸಲು ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭವನ್ನೇರ್ಪಡಿಸಬೇಕೆಂದು ಶ್ರೀ ಜಿ. ಆರ್ ಜೋಸ್ಯರವರು ವಿಶ್ವವಿದ್ಯಾನಿಲಯಕ್ಕೆ ಸೂಚಿಸಿದ್ದಾರೆ.

ಕಳೆದ 17ನೆಯ ತಾರೀಖು ಗುಂಡ್ಲುಪೇಟೆಯ ಮಾರುತಿ ಸರ್ವಿಸ್ ಬಸ್ಸು ಗುಂಡ್ಲುಪೇಟೆಗೆ ಸುಮಾರು 4ಮೈಲಿ ದೂರದಲ್ಲಿ ಒಂದು ಮರಕ್ಕೆ ಡಿಕ್ಕಿ ಹೊಡೆದುದರಿಂದ ಅದರಲ್ಲಿ ಪ್ರಯಾಣ ಮಾಡುತ್ತಿದ್ದ ಗುಂಡ್ಲುಪೇಟೆಯ ಮಾ|| ಪಟ್ಟದಬಸಪ್ಪನವರ ಸಹೋದರರಾದ ಮಾ|| ನಂಜುಡಪ್ಪನವರಿಗೆ ವಿಶೇಷ ಏಟುಬಿದ್ದು ಅಲ್ಲಿಯೇ ಮೃತರಾದರೆಂದೂ ಇನ್ನೂ ಹತ್ತು ಹದಿಮೂರು ಜನಗಳಿಗೆ ಬಹಳ ಏಟು ಬಿದ್ದಿರುವುದೆಂದೂ ತಿಳಿದು ಬರುತ್ತದೆ.

ಚಾಮರಾಜನಗರದ ತಾಲೂಕು ಕೆಲ್ಯಂಬಳ್ಳಿಯಲ್ಲಿ ಪ್ಲೇಗಿನಿಂದಾ ಊರುಬಿಟ್ಟು ಹಾಕಿಕೊಂಡಿದ್ದ ಗುಡಿಸಲುಗಳಿಗೆ ಬೆಂಕಿ ಬಿದ್ದು 12 ಗುಡಿಸಲುಗಳು ಭಸ್ಮವಾದವು. ಈ ಅನಾಹುತದ ದೆಸೆಯಿಂದ ವಿಶೇಷ ದವಸಗಳು ವಸ್ತ್ರ ಸಾಯದ ಸಾಮಾನು ಸರ್ಕಾರಿ ಕಾಗದ ಪತ್ರಗಳು ಎಲ್ಲವೂ ಭಸ್ಮವಾದವು. ಪ್ರಾಣಾಪಾಯವೇನೂ ಆಗಿಲ್ಲ. ಇದರಿಂದ ಮುಖ್ಯವಾಗಿ ಕ್ರೈಸ್ತರೂ, ಆದಿಕರ್ನಾಟಕರೂ ತೊಂದರೆಗೆ ಸಿಕ್ಕಿರುತ್ತಾರೆ. ಸ್ಥಳದ ಶಾಸನುಭೋಗರೂ ಇತರ ಮುಖಂಡರೂ ನಷ್ಟಪಟ್ಟವರಿಗೆ ತಮ್ಮ ಕೈಲಾದ ಸಹಾಯ ಮಾಡುತ್ತಿದ್ದಾರೆ.

ದಕ್ಷಿಣಕಾಶಿ ಮತ್ತು ಗಜಾರಣ್ಯಕ್ಷೇತ್ರವೆಂದು ಪುರಾಣ ಪ್ರಸಿದ್ಧವಾದ, ರಾಜಧಾನಿಯಿಂದ ಸುಮಾರು 30 ಮೈಲಿ ದೂರದಲ್ಲಿ, ಕಾವೇರೀ ನದೀತೀರದಲ್ಲಿರುವ ತಲಕಾಡು ಪುಣ್ಯಕ್ಷೇತ್ರದಲ್ಲಿ, ಪಂಚಲಿಂಗದರ್ಶನವೆಂಬ ಮಹಾಜಾತ್ರೆಯು, ಬರುವ ನವೆಂಬರ್ 21 ನೆಯ ತಾರೀಖು ಸೋಮವಾರ ಅಮಾವಾಸ್ಯೆಯ ದಿವಸ ನಡೆಯುತ್ತದೆ. ಈ ಪುಣ್ಯದಿನವು ಅನೇಕ ವರ್ಷಗಳಿಗೊಮ್ಮೆ ವ್ಯಾಪ್ತವಾಗುತ್ತದೆ. ಕಳೆದಸಾರಿ 1925 ರಲ್ಲಿ ಬಂದಿತ್ತು. ಕಾರ್ತೀಕ ಮಾಸ, ವೃಶ್ಚಿಕಮಾಸ, ಅಮಾವಾಸ್ಯೆ, ಸೋಮವಾರ, ಕುಹುಯೋಗ ಇಂಥಿಷ್ಟು, ಯೋಗಗಳು ಒಟ್ಟಿಗೆ ಬರುವ ಮಹಾಪುಣ್ಯಕಾಲದಲ್ಲಿ ತಲಕಾಡು ಪುಣ್ಯಕ್ಷೇತ್ರವನ್ನು ಬಳಸಿಕೊಂಡು, ಉತ್ತರವಾಹಿನಿಯಾಗಿಯೂ, ಪೂರ್ವವಾಹಿನಿಯಾಗಿಯೂ, ದಕ್ಷಿಣವಾಹಿನಿಯಾಗಿಯೂ ಮತ್ತು ಪಶ್ಚಿಮವಾಹಿನಿಯಾಗಿಯೂ ಹರಿಯುವ ಶ್ರೀ ಕಾವೇರಿ ಪುಣ್ಯನದೀತೀರ್ಥದಲ್ಲಿ ನಿಂದು, ವೈದ್ಯೇಶ್ವರ, ಅರ್ಕೇಶ್ವರ, ಗುರುಲಿಸ್ಥೇಶ್ವರ, ಪಾತಾಳೇಶ್ವರ, ಮಲ್ಲಿಕಾರ್ಜುನೇಶ್ವರ ಎಂಬ ಪಂಚಮಹಾಲಿಂಗಗಳ ದರ್ಶನ ಮಾಡುವುದಕ್ಕೆ ಪಂಚಲಿಂಗದರ್ಶನವೆಂದು ಹೇಳಲ್ಪಡುತ್ತದೆ. ತಲಕಾಡಿನಲ್ಲಿ ಕಾವೇರೀನದಿಯು ನಾಲ್ಕು ದಿಕ್ಕುಗಳಲ್ಲಿ ಹರಿಯುತ್ತದೆ. ಭರತಖಂಡದಲ್ಲಿಯೇ ಇಂಥ ನದೀ ಸನ್ನಿವೇಶವಿಲ್ಲವೆಂದು ಹೇಳಲಾಗಿದೆ. ಲಕ್ಷಾಂತರ ಜನ ಭಕ್ತಾದಿಗಳು ಈ ಪುಣ್ಯಕಾಲದಲ್ಲಿ ಇಲ್ಲಿಗೆ ಬಂದು, ಸ್ನಾನಿ ದರ್ಶನವನ್ನು ಮಾಡಿ ಭವರೋಗಮುಕ್ತರಾಗುತ್ತಾರೆ.

ವರ್ತಮಾನಸಂಗ್ರಹ.

ಜಗತ್ತನ್ನು ನಿಪತ್ತಿನಿಂದುದ್ಧರಿಸಿದರು

ಲಂಡನ್ನಿನ ಕ್ಲಾರ್ಕ್ಟ್ ಎಂಬಲ್ಲಿ ಸರ್ ಸ್ಯಾಮ್ಯುಲ್ ಹೋರರು ಭಾಷಣ ಮಾಡುತ್ತ ಬ್ರಿಟನ್ನಿನ ಮಹಾಪ್ರಧಾನರಾದ ನವಿಲೆ ಛೇಂಬರ್ಲೈನರವರು ಶಾಂತಿಸ್ಥಾಪನೆಯ ಉದ್ದೇಶದಿಂದ ಮನಃಪೂರ್ವಕವಾಗಿ ಕೆಲಸ ಮಾಡದೆ ಹೋಗಿದ್ದರೆ, ಎಂಮೂ ಕಾಣದ ವಿಪತ್ತಿಗೆ ಜಗತ್ತು ಗುರಿಯಾಗುತ್ತಿದ್ದಿತೆಂದು ಹೇಳಿದರು.

ಆಸ್ಪತ್ರೆಗಾಗಿ 1,25000 ರೂ.ಗಳ ದಾನ

ದೆಹಲಿಯಲ್ಲಿ ನವೀನಸೌಕರ್ಯಗಳಿಂದ ಕೂಡಿದ ಒಂದು ಹೊಸ ಹೆರಿಗೆ ಆಸ್ಪತ್ರೆಯನ್ನು ಕಟ್ಟಲಿದ್ದಾರೆ. ಇದರ ವೆಚ್ಚಕ್ಕಾಗಿ 125000ಗಳನ್ನು ದೆಹಲಿಯ ಪ್ರಸಿದ್ಧ ಬಟ್ಟೆ ವ್ಯಾಪಾರಿಗಳಾದ ಶ್ರೀ ಲಾಲಾಶ್ರೀರಾಂರವರು ವಹಿಸಿಕೊಳ್ಳಲು ಒಪ್ಪಿರುತ್ತಾರೆಂದೂ ಲೇಡಿ ಲಿಂಲಿತ್‌ಗೌರವರು ಈ ಕಟ್ಟಡದ ಶಂಕುಸ್ಥಾಪನೆ ಮಾಡುವರೆಂದೂ ತಿಳಿದು ಬರುತ್ತದೆ.

ಜೆಕ್ ಅನಾಥರು

ಜರ್ಮನ್ನರ ಸೂಡೆಟ್ ಪ್ರಾಂತ್ಯದ ಆಕ್ರಮಣದಿಂದ ಅನ್ನವಸ್ತ್ರಗಳಿಗೆ ಮಾರ್ಗವಿಲ್ಲದಾದ ಜುಗೋಸ್ಲೇವೇಕಿಯದ ನಿರ್ಗತಿಕರು ದಿನಕ್ಕೆ 1500 ಮಂದಿಯಂತೆ ಪ್ರೇಗ್ ಪಟ್ಟಣಕ್ಕೆ ಆಶ್ರಯಕ್ಕಾಗಿ ಬಂದು ಸೇರುತ್ತಿರುವರಂತೆ! ಇಲ್ಲಿಯವರೆಗೂ ಹೀಗೆ ನಿರ್ಗತಿಕರಾದವರ ಸಂಖ್ಯೆಯು ಒಂದುಲಕ್ಷವೆಂದು ಗೊತ್ತಾಗಿದೆ.

ರಾಜರ ವಾನಪ್ರಸ್ಥಾಶ್ರಮ ಸ್ವೀಕಾರ

ಗ್ವಾಲಿಯರ್ ಸಂಸ್ಥಾನಕ್ಕೆ ಸೇರಿದ ಖಿನಿಯಾದಾನ ಎಂಬ ಆಶ್ರಿತ ಸಂಸ್ಥಾನದ ರಾಜಾ ಖಾಲಕ್ ಸಿಂಗ್‌ರಾವ್ ಎಂಬವರು ತಮ್ಮ ಉಳಿದ ಜೀವಿತಕಾಲವನ್ನು ಸನ್ಯಾಸಿಯಾಗಿ ಕಳೆಯಬೇಕೆಂಬ ಆಕಾಂಕ್ಷೆಯಿಂದ ತಮ್ಮ ಸೊರೆತನವನ್ನು ತ್ಯಜಿಸಲು ಆಸೇಕ್ಷೆಪಟ್ಟಿರುತ್ತಾರೆ. ಅವರು ತಮ್ಮ ಕುಮಾರರಾದ ದೇವೇಂದ್ರ ಪ್ರತಾಪಸಿಂಗರವರಿಗೆ ತಮ್ಮ ಅಧಿಕಾರವನ್ನು ವಹಿಸಿ ರಾಜ್ಯತ್ಯಾಗಮಾಡಬಹುದೆಂದು ಬ್ರಿಟಿಷ್ ಸರ್ಕಾರದವರು ಅನುಮತಿ ಕೊಟ್ಟಿರುತ್ತಾರೆ.

ಜಗತ್ತಿನ ಸ್ಥಿಂಧವ!

ಜಗತ್ತಿನಲ್ಲೆಲ್ಲಾ ಅತ್ಯಂತ ಎತ್ತರವಾದ ಮನುಷ್ಯನೆನಿಸಿದ ಅಲ್ಬನ್ನಿನ ರಾಬರ್ಟ್ ವ್ಯಾಡ್ಲೋ ಎಂಬ 20 ವರ್ಷದ ಯುವಕನು 8 ಅಡಿ, ೮॥ ಅಂಗುಲ ಎತ್ತರವಿದ್ದಾನೆ. ವೈದ್ಯರು ಈತನನ್ನು ಪರೀಕ್ಷಿಸಿ ಈತನು 23 ನೇ ವರ್ಷ ವಯಸ್ಸಿನವರೆಗೂ ಇನ್ನೂ ಬೆಳೆಯುವುದಾಗಿ ಅಭಿಪ್ರಾಯಪಟ್ಟಿದ್ದಾರೆ. ಈಗ ಈತನು 460 ಪೌಂಡುಗಳ ತೂಕವಿದ್ದಾನೆ. ಈತನ ಕಾಲಿನ ಅಳತೆ 36 ಅಂಗುಲ.

ಟೊಂಗನೀಕಿಕಾ೦ತ್ಯವು ಜರ್ಮನಿಗೆ ಸೇರಲಬೇಕ್ಷಿಸುವುದಿಲ್ಲ.

ಮಹಾಯುದ್ಧಕ್ಕೆ ಪೂರ್ವ ಜರ್ಮನಿಗೆ ಸೇರಿದ್ದು ಯುದ್ಧವು ಮುಗಿದಮೇಲೆ ಬ್ರಿಟಿಷರ ಆಡಳಿತಕ್ಕೆ ಒಪ್ಪಿಸಲ್ಪಟ್ಟ ಪೂರ್ವ ಆಫ್ರಿಕದಲ್ಲಿರುವ ಟೊಂಗನೀಕ ರಾಜ್ಯದ ಪೂರ್ವನಿವಾಸಿಗಳು ತನ್ಮನ್ನು ತಿರುಗಿ ಜರ್ಮನ್ ಆಡಳಿತಕ್ಕೆ ಒಳಪಡಿಸುವುದು ತಮಗಿಷ್ಟವಿಲ್ಲವೆಂಬುದನ್ನು ಅಧಿಕಾರಿಗಳಿಗೆ ತಿಳಿಯಪಡಿಸಿದರು. ಮತ್ತು ಬ್ರಿಟಿಷ್ ಸರ್ವಾಧಿಪತ್ಯ ಯೂನಿಯನ್ ಜಾಕ್ ಧ್ವಜವನ್ನೂ ಇತರ ರಾಜ್ಯಾಧಿಪತ್ಯ ಸೂಚಕಧ್ವಜಗಳನ್ನೂ ಹಿಡಿಯು ಬೀದಿಗಳಲ್ಲಿ ಮೆರವಣಿಗೆ ಮಾಡುವುದರ ಮೂಲಕ ಬ್ರಿಟಿಷ್ ಸರ್ಕಾರದಲ್ಲಿ ತಮಗಿರುವ ರಾಜಭಕ್ತಿಯನ್ನು ವ್ಯಕ್ತಪಡಿಸಿದರು.

ಇರುವೆಗಳಲ್ಲೂ ಸೇವಾವೃತ್ತಿ

ಆಸ್ಟ್ರೇಲಿಯಾದಲ್ಲಿರುವ ಒಂದುಜಾತಿಯ ಕಪ್ಪು ಇರುವೆಗಳು ಅನೇಕ ಜಾತಿಯ ಹೂಗಳಿಂದ ಮಧುವನ್ನು ಕುಡಿದು ಅದನ್ನು ಬಾಲದ ತುದಿಯಲ್ಲಿ ತುಂಬಿಕೊಳ್ಳುತ್ತವೆ. ಆದರೆ ಅದನ್ನು ಉಪಯೋಗಿಸಿಕೊಳ್ಳುವ ಸ್ವಾತಂತ್ರ್ಯವು ಇವುಗಳಿಗಿಲ್ಲ. ಇವುಗಳ ಯಜಮಾನರಾದ ಕೆಂಪಿರುವೆಗಳು ಇವುಗಳನ್ನು ಕಾವಲಿನಿಂದ ತಮ್ಮ ಗೂಡುಗಳಿಗೆ ಕರೆದುಕೊಂಡು ಹೋಗಿ ಅವುಗಳಿಂದ ತಮಗೆ ಬೇಕಾದ ಕೆಲಸಗಳನ್ನು ಮಾಡಿಸಿಕೊಳ್ಳುವವಲ್ಲದೆ, ತಮಗೆ ಬೇಕಾದಾಗ ಈ ಕಪ್ಪಿರುವೆಗಳನ್ನು ಹಾಲಾಗಿ ನಿಲ್ಲಿಸಿ ಬಾಯಿ ಬಿಡಿಸಿ ಅದರ ಬಾಲದಲ್ಲಿರುವ ಜೇನಿನ ಚೀಲವನ್ನು ಒತ್ತಿ ಬಾಯಿಯಿಂದ ಹೊರಗೆ ಬಂದ ಜೇನನ್ನು ಕುಡಿದು ಸುಖಪಡುವವು. ಇಂತಹ ಪ್ರಾಣಿಗಳಲ್ಲಿಯೂ ಈ ಸೇವ್ಯ ಸೇವಕವೃತ್ತಿ ಇರುವುದು ಆಶ್ಚರ್ಯವೇ ಸರಿ!

ಸ್ತ್ರೀ ವೇಷಧಾರಿಗಳಾದ ಧಣಾಯಿತರು!

ಇಂಗ್ಲಿಸ್ತುರದಿಂದ ಝಾಂಸಿಗೆ ವಿಚಿತ್ರವಾದ ವರ್ತಮಾನವೊಂದು ಬಂದಿದೆ. ಧಣಾಯತರು ಹೆಂಗಸರ ವೇಷಧಾರಿಗಳಾಗಿ ಇಬ್ಬರು ಗ್ರಾಮಸ್ಥರನ್ನು ಕೊಂದು ಬೇಕಾದ ಹಾಗೆ ಕೊಳ್ಳೆ ಹೊಡೆದರೆಂದು ಹೇಳಲಾಗಿದೆ. ಅರ್ಧ ರಾತ್ರಿಯಲ್ಲಿ ಇವರು ಗ್ರಾಮಕ್ಕೆ ನುಗ್ಗಿದರು. ಗ್ರಾಮಸ್ಥರು ಇವರನ್ನು ಲಾಠಿಗಳಿಂದ ಹೊಡೆದೋಡಿಸಲು ಪ್ರಯತ್ನಪಟ್ಟರು. ಇಬ್ಬರು ಗ್ರಾಮಸ್ಥರು ಹೊಡೆದಾಟದಲ್ಲಿ ಮಡಿದರೆಂದು ಹೇಳಲಾಗಿದೆ.

ಹೆಸರೂ ಸ್ವದೇಶಿಯಾಗಬೇಕು.

ಇಟಲಿಯಲ್ಲಿ ವಿನೋದಮಂದಿರಗಳಾಗಲಿ ಹೋಟಲಿಗಾಗಲಿ ಕೊನೆಗೆ ಹಾನಗೃಹಗಳಿಗಾಗಲಿ ಅನ್ಯದೇಶೀಯ ಹೆಸರುಗಳನ್ನಿಡಬಾರದೆಂದು ಸರ್ಕಾರದವರ ಕಟ್ಟಪ್ಪಣೆಯಾಗಿರುವುದಲ್ಲದೆ ಖುದ್ದು ಜನರು ಸಹ ತಮ್ಮ ವಿನೋದಗಳಿಗೆ ಪರದೇಶದ ಹೆಸರುಗಳನ್ನಿಡಕೂಡದೆಂದೂ, ಫಲಹಾರ ಮಂದಿರಗಳಲ್ಲಿ ಮಾಸಿಸುವ ಅನ್ಯದೇಶೀಯರನ್ನು ಅವರ ದೇಶಭಾಷೆಗಳಲ್ಲೇ ಮಾತನಾಡಿಸಿ ಆತಿಥ್ಯ ನಡೆಯಿಸುವಂತೆ ಸೇವಕರನ್ನು ನಿಯಮಿಸಿಕೊಂಡಿರಬೇಕೆಂದೂ ಅಪ್ಪಣೆಯಾಗಿದೆ.

ಹೊಸವಿಮಾನಗಳ ನಿರ್ಮಾಣ

"ಇಂಪೀರಿಯಲ್ ಏರ್‌ಸರ್ವಿಸ್" ವಿಮಾನ ಸಂಸ್ಥೆಯವರು ಹೊಸದಾಗಿ ೧೪ ವಿಮಾನಗಳನ್ನು ನಿರ್ಮಿಸಿದ್ದಾರೆ. ಇವುಗಳಲ್ಲಿ ೮ ವಿಮಾನಗಳನ್ನು ಲಂಡನ್ನಿನಿಂದ ಭರತಖಂಡಕ್ಕೆ ಬರುವ ಸರ್ವಿಸ್ಸಿಗೆ ಉಪಯೋಗಿಸಲಾಗುತ್ತದೆ. ಇವುಗಳಲ್ಲಿ ೨೭ ಜನರು ಕುಳಿತುಕೊಳ್ಳಬಹುದು. ಉಳಿದ ವಿಮಾನಗಳನ್ನು ಲಂಡನ್-ಪ್ಯಾರಿಸ್ಸುಗಳ ನಡುವೆ ಹಾರಿಸಲಾಗುವುದು. ಇವುಗಳಲ್ಲಿ ೪೦ ಮಂದಿ ಕುಳಿತುಕೊಳ್ಳಬಹುದು. ಬಸ್ ಮತ್ತು ರೈಲಿನಲ್ಲಿ ದೊರೆಯುವ ಅನುಕೂಲಗಳೆಲ್ಲವೂ ಈ ವಿಮಾನಗಳಲ್ಲಿ ದೊರೆಯುವವು.

ಸಹಗಮನವು ತಡೆಯಲ್ಪಟ್ಟಿತು

ಜಬ್ಬುಲ್ಪುರದ ಸಮೀಪದ ಗೌರೀಘಾಟ್ ಎಂಬಲ್ಲಿ 16 ವಯಸ್ಸಿನ ತರುಣಿಯೊರ್ವಳು ಮೃತನಾದ ತನ್ನ ಪತಿಯೊಡನೆ ಸಹಗಮನಮಾಡಲಿಚ್ಛಿಸಿದಳು. ಈ ವಿಷಯವನ್ನು ಕೇಳಿದ ಅನೇಕರು ಅವನ್ನು ನೋಡಲು ಗೌರೀಘಾಟಿನಲ್ಲಿ ಹೋಗಿ ನೆರೆದರು. ಸಹಗಮನಕ್ಕೆ ಪೂರ್ವಭಾವಿಯಾಗಿ ನಡೆಯಬೇಕಾದ ಎಲ್ಲಾ ಕರ್ಮಗಳೂ ಸಾಂಗವಾಗಿ ನಡೆದು ಸತಿಯು ಚಿತಾರೋಹಣಮಾಡುವ ಸಮಯಕ್ಕೆ ಸರಿಯಾಗಿ ಈ ನಿಷಯವನ್ನು ತಿಳಿದ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರು ಅನೇಕ ಪೋಲೀಸರೊಡನೆ ಸ್ಥಳಕ್ಕೆಹೋಗಿ ಆ ತರುಣಿಯನ್ನು ತಡೆದರು. ನೋಡಲು ಬಂದಿದ್ದವರಿಗೆಲ್ಲಾ ಇದರಿಂದ ಬಹಳ ಅಸಮಾಧಾನವಾಯಿತು. ಪೋಲೀಸರು ಆ ತರುಣಿಯನ್ನು ಅಲ್ಲಿಂದ ಕರೆದುಕೊಂಡು ಹೋಗಿ ಅವಳ ಸಂಬಂಧಿಕರ ವಶಕ್ಕೊಪ್ಪಿಸಿದರು.

ತಿರುವಾಂಕೂರು ನ್ಯಾಷನಲ್ ಬ್ಯಾಂಕಿನ ಡೈರೆಕ್ಟರುಗಳ ಬಂಧನ!

ತಿರುವಾಂಕೂರು ನ್ಯಾಷನಲ್ ಮತ್ತು ಕ್ವಿಲ್ಲ ಬ್ಯಾಂಕಿನ ಡೈರೆಕ್ಟರುಗಳಾದ ಶ್ರೀ ಮಾಮೆನ್ ಮಾಪಿಳ್ಳೆ, ಕೆ. ಎಂ. ಈಪ್ ಜಿ. ಪಿ. ಮ್ಯಾಥ್ಯೂ, ಮತ್ತು ಶ್ರೀ ಕೆ. ವಿ. ವರ್ಘೀಸ್ ಇವರುಗಳನ್ನು ೨೦ನೆಯ ತಾ॥ ಸಾಯಂಕಾಲ ಅವರ ಗೃಹಗಳಲ್ಲಿ ಬಂಧಿಸಲಾಯಿತು. ಮದರಾಸ್ ಸಂಸ್ಥಾನದ ಸೊಲಿಟೆಕಲ್ ಏಜೆಂಟರು ಇತ್ತ ಎಕ್ಸ್‌ಟ್ರಡಿಷನ್ ವಾರಂಟ್ ಪ್ರಕಾರ ಅವರುಗಳನ್ನು ಬಂಧಿಸಿ ಪೋಲೀಸ್ ಕಮೀಷನರಕಚೇರಿಗೆ ಕರೆದುಕೊಂಡು ಹೋಗಲಾಯಿತು. ೨೧ನೆಯ ತಾ॥ ದಿನ ಪ್ರಾತಃಕಾಲ ಚೀಫ್‌ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನ ಮುಂದೆ ಅವರುಗಳನ್ನು ನಿಲ್ಲಿಸಿ ಏಕ್ಸ್‌ಟ್ರಾಡಿಷನ್ ಕಾನೂನಿನಪ್ರಕಾರ ಅರ್ಜಿಯನ್ನು ಮ್ಯಾಜಿಸ್ಟ್ರೇಟರ ಮುಂದಿಡಲಾಯಿತು. ಅಷ್ಟು ಹೊತ್ತಿಗೆ ವಿಚಾರಣೆಯನ್ನು ನಿಲ್ಲಿಸಬೇಕೆಂದು ಹೈಕೋರ್ಟಿನಿಂದ ಆಜ್ಞೆಬಂದ ಪ್ರಯುಕ್ತ ಅರ್ಜಿಯ ವಿಚಾರಣೆಯನ್ನು ನಿಲ್ಲಿಸಿ ೪ ಮಂದಿಗಳನ್ನೂ ಜೈಲಿಗೆ ಕರೆದುಕೊಂಡುಹೋಗಲಾಯಿತು. ಹೈಕೋರ್ಟಿನ ಮುಂದಿರುವ ಅರ್ಜಿಯು ವಿಮರ್ಶೆಯಾಗುವವರೆಗೂ ಅಪರಾಧಿಗಳನ್ನು 'ರಿಮ್ಯಾಂಡ್' ನಲ್ಲಿಡಬೇಕೆಂದು ಮ್ಯಾಜಿಸ್ಟ್ರೇಟರು ಆಜ್ಞೆಮಾಡಿದರು.

ಲಂಚ ತೆಗೆದುಕೊಳ್ಳುವುದನ್ನು ತಪ್ಪಿಸುವ ಪ್ರಯತ್ನ.

ಅಧಿಕಾರಿಗಳಲ್ಲಿರುವ ಲಂಚತನವನ್ನು ತಪ್ಪಿಸಲು ಜೊಂಬಾಯಿ ಸರ್ಕಾರದವರು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಕೆಳಗಿನ ಅಧಿಕಾರಿಗಳಮೇಲೆ ಬರುವ ಲಂಚದ ದೂರುಗಳನ್ನು ಕೂಡಲೆ ವಿಚಾರಿಸಬೇಕೆಂದು ಎಲ್ಲ ಶಾಖೆಗಳ ಮುಖ್ಯಾಧಿಕಾರಿಗಳಿಗೂ ಸೂಚನೆ ಕೊಡಲಾಗಿತ್ತು. ಹೀಗೆ ಬಂದ ಆಪಾದನೆಗಳು ಸ್ಥಿರಪಟ್ಟ ಮತ್ತು ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳನ್ನು ಕುರಿತು ಬೇರೆ ಬೇರೆ ಶಾಖಾಧಿಕಾರಿಗಳು ಕಳುಹಿಸಿರುವ ವರದಿಗಳನ್ನು ಪ್ರಕಟಿಸಲಾಗಿದೆ. ಹೈಕೋರ್ಟಿನ ಕೋರ್ಟ್ ರಿಸೀವರ್ ಮತ್ತು ಲಿಕ್ವಿಡೇಟರ್ ಕಛೇರಿಯ ಚೀಫ್ ಸೂಪರಿಂಟೆಂಡೆಂಟರಮೇಲೆ ಲಂಚದ ಆಪಾದನೆ ಬಂದು ವಿಚಾರಣೆಯಲ್ಲಿ ನಿಜವೆಂದು ಸ್ಥಿರಪಟ್ಟ ಕಾರಣ ಅವರನ್ನು ಕೆಲಸದಿಂದ ವಜಾ ಮಾಡಲಾಯಿತು. ಸರಕಾರದ ವರದಿಯಲ್ಲಿ ಇಂತಹ ಹಲವು ಉದಾಹರಣೆಗಳನ್ನು ಕಾಣಬಹುದಾಗಿದೆ.

೨೦,೦೦೦ ಇಟಾಲಿಯನರ ಯಾತ್ರೆ!

ಅಕ್ಟೋಬರ್ ೨೮ ನೇ ತಾ॥ಗೆ ರೋಂ ಮುತ್ತಿಗೆ ನಡೆಮು ೧೭ ವರ್ಷಗಳು ತುಂಬುವುವು. ಅಂದು ಇಟಲಿಯಲ್ಲಿ ಮಹೋತ್ಸವ. ಈ ಸಂತೋಷ ಸಮಯದಲ್ಲಿ ೨೦,೦೦೦ ಇಟಾಲಿಯನರನ್ನು ಲಿಬ್ಯಾಕ್ಕೆ ಕರೆದೊಯ್ದು ಅವರು ಅಲ್ಲಿಯೇ ನೆಲಸುವಂತೆ ಏರ್ಪಾಟುಮಾಡಲಾಗಿದೆ. ಲಿಬ್ಯಾ ಗವರ್ನರರಾದ ಮಾರ್ಷಲ್ ಬಲ್ಬೋರವರು ಅಕ್ಟೋಬರ್ ೨೮ ನೇ ತಾ॥ ದಿನ ಜಿನೋವಾದಿಂದ ೨೦ ಹಡಗುಗಳೊಂದಿಗೆ ಲಿಬ್ಯಾಕ್ಕೆ ಪ್ರಯಾಣ ಮಾಡುವರು. ಈ ೨೦ ನೌಕೆಗಳಲ್ಲಿ ೨೦,೦೦೦ ಇಟಾಲಿಯರ್ ರೈತರನ್ನು ಕರೆದೊಯ್ಯಲಾಗುತ್ತದೆ. ಈ ೨೦,೦೦೦ ಮಂದಿಯಲ್ಲಿ ೧,೪೦೦ ಸಂಸಾರಗಳಿವೆ. ತಮ್ಮ ಮನೆಯಿಂದ, ಹೊಲಗದ್ದೆಗಳಿಂದ ಆಚೆ ಇರತಕ್ಕಂತಹ ಭೂಮಿಯನ್ನೇ ಕಾಣದ ಬಹು ಮಂದಿ ರೈತರು ಈಗ ಲಿಬ್ಯಾಯಾತ್ರೆ ಮಾಡಲಿದ್ದಾರೆ. ಲಿಬ್ಯಾದಲ್ಲಿರುವ ಅವರ ಹೊಸ ಗೃಹಗಳಲ್ಲಿ ಸಕಲ ಸೌಕರ್ಯಗಳನ್ನೂ ಏರ್ಪಡಿಸಲಾಗಿದೆ. ಪ್ರತಿ ಸಂಸಾರಕ್ಕೂ ಎಲ್ಲ ಸೌಕರ್ಯಗಳಿಂದ ಕೂಡಿದ ಗೃಹವೊಂದು ಸಿದ್ಧವಾಗಿದೆ. ಆಹಾರ ಸಾಮಗ್ರಿಗಳನ್ನೆಲ್ಲ ಸಿದ್ಧವಾಗಿಡಲಾಗಿದೆ. ೨೦,೦೦೦ ಮಂದಿ ಇಟಲಿ ಸೈನಿಕರು ಟ್ರಿಪೋಲಿಗೆ ಬಂದೊಡನೆಯೇ ಅಲ್ಲಿ ಸಿದ್ಧವಾಗಿರುವ ೧,೪೦೦ ಲಾರಿಗಳಲ್ಲಿ ಒಂದೊಂದು ಸಂಸಾರದವರನ್ನು ಕುಳ್ಳಿರಿಸಿ ಅವರನ್ನು ಹೊತನ ಗೃಹಗಳಿಗೆ ಕರೆದೊಯ್ಯಲಾಗುತ್ತದೆ.

ಸ್ವೀಕಾರ.

ನೈಜಾಂ ಸ್ಟೇಟ್ ಆಳಂದ ತಾಲೂಕು ಸರಸಂಬ ಗ್ರಾಮದಲ್ಲಿ ಧಾರ್ಮಿಕ ಸಭೆಯೂ ವಾಚನಾಲಯ ಸ್ಥಾಪನೆಯೂ ಆದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮತ್ತು ಖಾನಾಪುರ ಗ್ರಾಮದಲ್ಲಿ ಪಂಚಾಚಾರ್ಯರ ಹೆಸರಿನಿಂದ ನೆರವೇರಿದ ಪಂಚಮಂಟಪ ಪೂಜಾ ಸಮಯದಲ್ಲಿ ಸಮರ್ಪಿಸಿದ 1 ರೂ. ಒಟ್ಟು 3 ರೂಪಾಯಿಗಳು ಶ್ರೀ॥ ಷ॥ ಬ್ರ॥ ಹೋತಿಗಿ ಪಟ್ಟವಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಟವನ್ನಿನಲ್ಲಿರುವ ಕಲ್ಲುಮಠದಲ್ಲಿ ನೆರವೇರಿದ ಶಿವದೀಕ್ಷಾ ಸಮಯದಲ್ಲಿ ವೇ॥ ಕಲ್ಲುಮಠದ ಗುರುಬಸವಯ್ಯನವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಶ್ರೀ॥ ಷ॥ ಬ್ರ॥ ಹೈನಾಪುರ ಗುರುಸ್ವಾಮಿ ಹಿರೇಮಠದ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಮಹಾರಾಜ ಕುಂಭಸಿಂಗ್ ಮತ್ತು ಮಿರಾಬಾಯಿ.

ಲೇಖಕರು—ಕನ್ನಡಕಸಿ, ಆಸ್ಥಾನವಿದ್ವಾ ಆನಪಟ್ಟಣಾಮರಾಯರು.

ಭಗವಂತನು ನಮಗೆ ಅಮೋಘವಾದ ವಿಚಿತ್ರತರವಾದ ಶರೀರವನ್ನೂ ಅದಕ್ಕೆ ತಕ್ಕ ಬುದ್ಧಿಯನ್ನೂ ದಯಪಾಲಿಸಿರುವನು. ಈ ಶರೀರದ ಮಹಿಮೆಯು ಅತ್ಯಾಶ್ಚರ್ಯಕರವಾಗಿರುವುದು ಹೇಗೆಂದರೆ:—ಈ ಶರೀರವೆಂಬುದೇ ಒಂದು ರಥವು ಇದರಲ್ಲಿ ಜೀವಾತ್ಮನೇ ರಥಿಕನು. ಬುದ್ಧಿಯೇ ರಥವನ್ನು ನಡೆಯಿಸುವ ಸಾರಥಿ ಪಂಚೇಂದ್ರಿಯಗಳೇ ಈ ರಥಕ್ಕೆ ಕಟ್ಟಿರುವ ಕುದುರೆಗಳು. ಮನಸ್ಸೇ ಕುದುರೆಗೆ ಹಾಕಿರುವ ಕಡಿವಾಣವು ಸ್ಪರ್ಶೇಂದ್ರಿಯಗಳೇ ಈ ಕುದುರೆಗಳು ಸಂಚಾರಮಾಡುವ ದೇಶಗಳು. ಈ ಕುದುರೆಗಳನ್ನು ವಿವೇಕವೆಂಬ ಕಡಿವಾಣದಿಂದ ಬಂಧಿಸಿ, ಹತೋಟಿಯಲ್ಲಿಟ್ಟುಕೊಳ್ಳದೆ ನೋಡುವುದಾದರೆ ರಥದಲ್ಲಿ ಕುಳಿತಿರುವ ಜೀವಾತ್ಮನೆಂಬ ರಥಿಕನಿಗೆ ನಾನಾಕಷ್ಟಗಳು ಪ್ರಾಪ್ತವಾಗಿ ಕೊನೆಗೆ ಜೀವಿಸಿದೆಂಬ ರಥವು ಮುರಿದು ಬಿದ್ದುಹೋಗುವುದು. ಆನಂತರ ಜೀವಾತ್ಮನೆಂಬ ರಥಿಕನು ಶರೀರವೆನ್ನು ಬಿಟ್ಟುಹೋಗುವನು ಎಂದರೆ ಮಾನವನು ಮೃತಿಯೊಂದುವನೆಂದು ತಿಳಿಯಬೇಕು.

ಇಂತಹ ಇಂದ್ರಿಯಗಳ ಮಹಿಮೆಯನ್ನು ಯಾರಿಂದಲೂ ವರ್ಣಿಸಿ ಹೇಳಲು ಸಾಧ್ಯವಿಲ್ಲ ಇಹಲೋಕದ ಆಕರ್ಷಣೆಗಳನ್ನು ಬಯಸಿ, ಫಲಗಳನ್ನು ಪಡೆಯುವುದಕ್ಕೂ, ಪರಲೋಕವನ್ನು ಸೇರುವುದಕ್ಕೂ ಈ ಇಂದ್ರಿಯಗಳೇ ಮುಖ್ಯಕಾರಣಗಳಾಗಿಲ್ಲವೆ? ಅಲ್ಲದೆ ಈ ಶರೀರವೆಂಬ ಪಾತ್ರೆಯನ್ನು ತೊಳೆದು ಶುಚಿಮಾಡಿಕೊಳ್ಳಲು ಈ ಪಂಚೇಂದ್ರಿಯಗಳೇ ಸಾಧನಭೂತವಾಗಿರುವುದೆಂದು ಶಾಸ್ತ್ರಜ್ಞರು ಹೇಳುವರು ಎಲ್ಲಿಯವರೆಗೆ ಈ ಇಂದ್ರಿಯಗಳು ಪಟುತರವಾಗಿ ಸನ್ಮಾರ್ಗದಲ್ಲಿ ನಡೆಯುತ್ತಿರುವುವೋ, ಅಲ್ಲಿಯವರೆಗೆ ನಮ್ಮ ಆಶಾತತಿಗಳಿಗೆ ಸಾಧಕಗಳಾಗಿಯೂ, ಯಾವಾಗ ಅವು ಹೀನಮಾರ್ಗದಲ್ಲಿ ಸಂಚರಿಸಿ ಹೀನಸ್ಥಿತಿಗೆ ಬರುವುವೋ ಆಗ್ಗೆ ನಮ್ಮ ಆಲೆಯನ್ನು ಕೊನೆಗಾಣಿಸುವುದಕ್ಕಾಗಿಯೂ ಆಗುವುದೆಂದು ತಿಳಿಯಬೇಕು ಇಂತಹ ಉತ್ತಮ ಸ್ನೇಹಿತನನ್ನು ಹೊಂದಿರುವ ಎಲೈ ಮಾನವನೇ! ಮೊದಲೇ ಸ್ವಸ್ಥವಾದ ನಿನ್ನ ಶರೀರದ ಸೊಬಗನ್ನು ನೋಡಿಕೊಂಡು, ಅಹಂಕಾರಪರನಾತ್ತಾ ಅದರಲ್ಲಿ ನೆಲಸಿರುವ ವಿಚಿತ್ರತರವಾದ ಬುದ್ಧಿಗೆ ನೀನೇ ಸ್ತೋತ್ರ ಮಾಡಿಕೊಳ್ಳುತ್ತಾ ತಿರುವುದರಿಂದ ಏನುಪ್ರಯೋಜನ? ಇಂತಹ ಶರೀರವನ್ನು ನಿನಗೆ ದಯಪಾಲಿಸಿರುವುದಕ್ಕೆ ಭಗವಂತನೇ ಕಾರಣನೆಂತಲೂ, ಅವನು ಅದರಲ್ಲಿ ನೆಲಸಿರುವನೆಂತಲೂ ತಿಳಿದುಕೊಳ್ಳುವುದೇ ನಿನಗೆ ಯೋಗ್ಯವು. ಧಾನ್ಯವನ್ನು ಜೆನ್ನಾಗಿ ಬೆಳೆಯಿಸಾಗಿದ್ದರೆ ನೊದಲು ರೈತನು ಭೂಮಿಯನ್ನು ಹಸನುಮಾಡಿಕೊಳ್ಳುವಂತೆಯೂ. ಕುಂಬಾರನು ಮಡಕೆ-ಕುಡಿಕೆಗಳನ್ನು ಸಂಪಾದಿಸುವುದಕ್ಕೆ ಅವಿಗೆ ಸ್ಥಳವನ್ನು ಸಿದ್ಧ ಪಡಿಸಿಕೊಳ್ಳುವಂತೆಯೂ ಮಾನವನು ತಾನು ಮೊದಲು ಯಾವ ಫಲವನ್ನು ಪಡೆಯಬೇಕೆಂದಾತಿಶುವನೋ ಅದಕ್ಕೆ ತಕ್ಕಂತೆ ಕಾರ್ಯಗಳನ್ನು ಮೊದಲೇ ಮಾಡಿಕೊಳ್ಳಬೇಕು ಗಾಳಿಯು ಬೀಸುವ ವೇಗಕ್ಕನುಸಾರವಾಗಿ ಸಮುದ್ರದ ಅಲೆಗಳು ಮೇಲಕ್ಕೆ ಏಳುತ್ತಿರುವಂತೆಯೇ ಜೀವಾತ್ಮನ ಯೋಗ್ಯತೆಯಂತೆಯೇ ಮಾನವನು ಕಾರ್ಯಗಳನ್ನು ಮಾಡಿ, ಕಾರ್ಯಗಳಿಗೆ ಅನುಗುಣವಾದ ಫಲಗಳನ್ನು ಶರೀರವೆಂಬ ಯಂತ್ರದ ಸಹಾಯದಿಂದ ಹೊಂದುವನು. ನಶ್ವರವಾದ ಈ ಶರೀರಕ್ಕೆ ಜೀವಾತ್ಮನೇ ಆಧಾರನು ಪಂಚೇಂದ್ರಿಯಗಳನ್ನು ರೇಗಿಸಿ, ಒಂದು ಇಂದ್ರಿಯಗಳು ಮತ್ತೊಂದರ ಮೇಲೆ ಬೀಳುವಂತೆ ಮಾಡದೆ. ಎಲುಬುಗಳೇ ಆಧಾರವಾಗಿರುವ ಈ ಶರೀರವೆಂಬ ಮನೆಯನ್ನು ಕಾಪಾಡಿಕೊಳ್ಳಬೇಕು. ಸಮುದ್ರವೇ ಆಧಾರಭೂತವಾಗಿರುವ ಚಿಲುಮೆಯಿಂದ ಹೊರಟ ಜಲವು ನದಿಯರೂಪವಾಗಿ ಪರಿಣಮಿಸಿ, ಮುಂದಕ್ಕೆ ಹರಿದುಕೊಂಡುಹೋಗಿ, ಕೊನೆಗೆ ವಿಸ್ತಾರವಾದ, ಅಪಾರವಾದ ಸಮುದ್ರಕ್ಕೆ ಹೇಗೆ ಹೋಗಿ ಸೇರುತ್ತದೆಯೋ, ಹಾಗೆಯೇ ಮಾನವನು ಮಾಡುವ ಕರ್ಮಗಳೆಲ್ಲಾ ಅವನೆ ಹೃದಯದಿಂದ ಕಡೆಯಿಲ್ಲದೆ ಹೊರಟು, ಕೊನೆಗೆ ಪೂರ್ವಸ್ಥಳಕ್ಕೆ ಹೋಗಿ ಸೇರುವುವು

ಮೇಲೆ ಹೇಳಿದ ಹೊಳೆಗಳು ದಯಾಸಮುದ್ರನಾದ ಭಗವಂತನ ಆಜ್ಞೆಯಂತೆಯೇ ನಡೆಯುವುವು. ಇದರಂತೆಯೇ ಕಾಲಸಿಯಮವನ್ನೂ ಬಿಡದೆ ಸತ್ಕಾರ್ಯಗಳನ್ನು ಮಾಡಿ ಗುಣವಂತನಾಗಿ ಜೀವಿಸಿಕೊಂಡಿರುವುದೇ ಮಾನವನ ಜನ್ಮ ಸಾರ್ಥಕ್ಯವು. ಪಂಚೇಂದ್ರಿಯಂಗಳಲಿ ಒಂದಾದ ನಾಸಿಕವು ಸುವಾಸನೆಯನ್ನೂ, ನಾಲಗೆಯು ಪದ್ಯಗಳ ಗುಣಗಳನ್ನೂ ತಿಳಿದುಕೊಳ್ಳುವುವು. ಮಾನವನು ಇವುಗಳನ್ನು ಮಿತಿಮೀರಿ ನಡೆಸುವುದಾದರೆ ಅವುಗಳ ಪರಿಣಾಮವು ಕೇಡಿನ ಕ್ಷಿಯೇ ಕೊನೆಗಾಣುವುದು. ಇಂದ್ರಿಯಂಗಳು ಕೇಡಿಗಾಕರಮಾದವುಗಳೆಂದು ಅಶ್ಯಕ್ಕೆ ಬಿಡದೆ, ಕಿಡಕನ್ನುಂಟುಮಾಡಿಕೊಳ್ಳದೆ, ಉಪಯೋಗಕರವಾಗಿರುವಂತೆ ಅವುಗಳನ್ನು ವಿನಿಯೋಗಿಸಿಕೊಳ್ಳಬೇಕು ಒಂದೊಂದುವೇಳೆ ಅವೇ ನಮಗೆ ಸೌಖ್ಯದ ಭ್ರಾಂತಿಯನ್ನು ಹುಟ್ಟಿಸಿ, ನಮ್ಮ ನಾಶಕ್ಕೆ ಕಾರಣವಾಗುವುವು ಈ ಕಾರಣದ ದೆಸೆಯಿಂದ ನೀವು ಜೀವಾತ್ಮನನ್ನು ದುರಾಶೆಗೆ ಗುರಿಪಡಿಸದೆ, ಸನ್ಮಾರ್ಗವಲಂಬನೆಯಲ್ಲಿರುವಂತೆ ಮಾಡಿಕೊಳ್ಳುತ್ತಾ, ಸತ್ಯಮಾರ್ಗದಲ್ಲಿರಲು ದೃಢಚಿತ್ತನಾಗಿರುತ್ತಾ, ಗರ್ವವನ್ನು ದೂರಮಾಡುತ್ತಾ ಬಂದರೆ ಕೊನೆಗೆ ಶಾಂತಿಯನ್ನು ತಾಳಿ ನಾನಾವಿಧವಾದ ಸೌಖ್ಯಗಳಿಂದ ಕೂಡಿ ಜೀವಿಸುವೆ.

ಹಸ್ತಗಳಂದ ವಿರಚಿಸುವ ಕಾರ್ಯಗಳಾದರೋ ವಿಚಿತ್ರವಾಗಿವೆ. ವಿಚಿತ್ರ ಮಹಿಮೆಯಿಂದ ಕೂಡಿರುವ ಇಂದ್ರಿಯಗಳನ್ನು ನಿನಗೆ ಭಗವಂತನು ದಯಪಾಲಿಸಿರುವನೆಂದು ತಿಳಿದು ಕಷ್ಟಪಡುತ್ತಿರುವ ಜೀವಿಗಳನ್ನು ನೋಡಿಯೂ, ಅಲಕ್ಷ್ಯ ಮಾಡದೇ ಕಾಪಾಡುವುದು ಕಂಠಕ್ಕೆ ಭೂಷಣವೆಂದು ತಿಳಿಯಬೇಕು. ಎಲ್ಲಾ ಪ್ರಾಣಿಗಳಿಂತಲೂ ಮಾನವನಿಗೆ ಮಾತ್ರ ಜಾಜಿಕೆಯೆಂಬುವುದಿರುವುದು. ಮಾನವನೆ! ಅದು ನಿನ್ನಲ್ಲಿರುವುದೆಂದು ನಿಶ್ಚೆ ಮುಖವನ್ನು ನೋಡಿದ ಕಾತರಲೆ ತೋರಿಬರುವುದು. ಅದುದರಿಂದ ಯಾರಿಗೂ ನಾವು ಅವಮಾನವನ್ನುಂಟುಮಾಡಬಾರದು. ಮಾನವನಿಗೆ ಕೋಪವುಂಟಾದರೆ ಕಣ್ಣುಗಳು ಕೆಂಪೇರುವುವು. ಅದರಿಂದ ಅದ್ಭುತ ಪಾಪಕಾರ್ಯಗಳನ್ನು ನಡೆಸದಂತಿದ್ದರೆ ಲೋಕವು ನಿನ್ನನ್ನು ಹೊಗಳುವುದು. ಮಲಗಿ ನಿದ್ರೆ ಮಾಡುತ್ತಿರುವಾಗ್ಗೆ ಮಾನವನಿಗೆ ಮುಂದಕ್ಕೆ ಸ್ವಾಸ್ಥವಾಗುವ ಸುಖ ದುಃಖಗಳು ಮುಂಚಿತವಾಗಿ ಆತ್ಮನಿಗೆ ಸ್ವಪ್ನದಲ್ಲಿ ಸ್ಫುರಿಸುವುದುಂಟು. ಅಂತಹವುಗಳನ್ನು ಮಾನವನು ತನ್ನ ಜ್ಞಾನದಿಂದ ತಿಳಿದು ಶಾಂತಿಯನ್ನು ತಾಳಿ ನಡೆದರೆ ಮುಂದಕ್ಕೆ ದೈವೇಚ್ಛೆಯಂತೆಯೇ ನಡೆಯುವುದೆಂದು ತಿಳಿದುಕೊಂಡಿರಬೇಕು. ಅಲ್ಪ ಬುದ್ಧಿಯುಳ್ಳ ಮಾನವನು ಮುಂದಕ್ಕೆ ತನಗೇನಾಗುವುದೆಂಬುದನ್ನು ತಿಳಿಯಲಾರನು. ಹಿಂದಣ ಸತ್ಕಾರ್ಯಗಳಿಂದ ಈ ನರಜನ್ಮಕ್ಕೆ ಪ್ರಾಪ್ತನಾದೆ ನೀನು ಬಂದೆ ಎಂದು ತಿಳಿದುಕೊಂಡು, ಈ ಕಾಲದಲ್ಲಿ ಲೋಕಕ್ಕೆ ಹಿತೋಕ್ತಿಯನ್ನು ಬೋಧಿಸುತ್ತಾ, ಮಾನವನೆ! ಭಗವದ್ಭಕ್ತರನ್ನು ಸೇವಿಸಿ ಧನ್ಯನಾಗು ಹಾಗಿಲ್ಲದೆ ಇಂದ್ರಿಯಾಧೀನನಾಗಿ ಮಹಾಪತಿವ್ರತಾ ಶಿರೋಮಣಿಯಾದ ಮಿರಾಬಾಯಿಯನ್ನು ಕೆಣಕಿದುದರಿಂದ, ಅಕ್ಬರನು ತಾನೂ ಆಪಕೀರ್ತಿಯನ್ನು ತಂದುಕೊಂಡು, ಮಿರಾಬಾಯಿಗೂ ತುಂಬ ಕೆಡುಕನ್ನುಂಟು ಮಾಡಿದಂತೆ, ನೀನು ಕೆಡಬೇಡ ಇದಕ್ಕಾಗಿ ಮಿರಾಬಾಯಿಯ ಚರಿತ್ರೆಯನ್ನು ವಿವರಿಸುವೆನು

ಮಿರಾಬಾಯಿಯು ಪರಾಕ್ರಮಕ್ಕೆ ತವರೂರೆನಿಸಿದ ರಾಜಾಸ್ಥಾನದಲ್ಲಿ ಧರಣೀರಮಣೀಪಾಲನೈಕಶಕ್ತರನಾದ ಕುಂಭಸಿಂಗ್ ಮಹಾರಾಜನ ವೀರಪತ್ನಿಯು. ಈಕೆಯು ಸನ್ಯಾಸಾಶ್ರಮವನ್ನು ತಾಳಿ ಸರ್ವಸೌಖ್ಯಾಸ್ಪದನಾದ ಮನೋವಲ್ಲಭನ ಆಜ್ಞಾವಿಚಾರಕಳಾಗಿ ರಾಜಮಂದಿರವನ್ನು ತ್ಯಜಿಸಿ, ತನ್ನ ನೈಜಭಕ್ತಿಯಿಂದ ಪರಮಾತ್ಮನಾದ ಶ್ರೀಕೃಷ್ಣನನ್ನು ಕರ್ಣಾನಂದವಾಗುವಂತೆ ಅಮೋಘವಾದ ಸ್ವರಗಳಂದ ಸ್ತೋತ್ರಮಾಡುತ್ತಾ ಗೋಕುಲ ಬೃಂದಾವನವೆಂಬ ಪುಣ್ಯಸ್ಥಳಕ್ಕೆ ಹೊರಟುಹೋಗಿದ್ದಳು.

ಈ ಮಿರಾಬಾಯಿಯು ಗುಡ್ವಪ್ರಾಂತ್ಯವಾದ ರಾಜಪುತ್ರಸ್ಥಾನದಲ್ಲಿರುವ ನಿರತ ಎಂಬ ಹಳ್ಳಿಯಲ್ಲಿರುವ ಮಿಾವಾರುವಂಶದಲ್ಲಿ ಸಂಜನಿಸಿದವಳು ಈಕೆಯ ಮಾತಾಪಿತೃಗಳು ಸನ್ಮಾರ್ಗಪ್ರವರ್ತಕರೆನಿಸಿ, ದೇವತಾಭಕ್ತಿಯಲ್ಲಿ ಪರಿಪೂರ್ಣ ಹೃದಯರಾಗಿ ಸದ್ವರ್ತನದಲ್ಲಿಯೇ ಇದ್ದು ವಿಖ್ಯಾತಿಗೊಂಡಿದ್ದರು. ಇತಂತಹ ಸತ್ಪುರುಷರಲ್ಲಿ ಸಂಜನಿಸಿದ ಈ ಸತ್ಪಸಂದಳು, ಕ್ರಮೇಣ ಬಳೆದು ತಾರುಣ್ಯವತಿಯಾದಮೇಲೆ ಮಾತಾಪಿತೃಗಳು ತನ್ಮ ಕುಲ-ಶೀಲಕ್ಕನುರೂಪನಾದ ವರನಿಗೆ ಕೊಟ್ಟು ಪಾಣಿಗ್ರಹಣ ಬೆಳೆಸಬೇಕೆಂದು ಯೋಚಿಸಿ, ಕೊನೆಗೆ ರಾಜಪುತ್ರಸ್ಥಾನದಲ್ಲಿದ್ದ ಚಿತ್ತೂರು ರಾಜ್ಯಕ್ಕೆ ಬಾಧ್ಯನಾದ ಕುಂಭಸಿಂಗ್ ಮಹಾರಾಜನಿಗೆ ಮಿರಾಬಾಯಿಯನ್ನು ಕೊಟ್ಟು ವಿಧಿಪ್ರಕಾರ ವಿವಾಹವನ್ನು ಮಾಡಿದರು. ಈಕೆಯು ರೂಪದಲ್ಲಿ ಚಲುವೆ ವಿದ್ಯಾವಂತಳೆನಿಸಿ ಸ್ವಭಾವಜನ್ಯವಾದ ಕವಿತಾಶಕ್ತಿಯನ್ನು ಹೊಂದಿದ್ದಳು ಕಾಲಕ್ರಮದಲ್ಲಿ ಈಕೆಗೆ ಪಾರಮಾರ್ಥಿಕವಾಗಿ ಪರಮಾತ್ಮನಲ್ಲಿ ಜ್ಞಾನ, ಭಕ್ತಿ, ವೈರಾಗ್ಯಗಳುಂಟಾಗಿದ್ದುದರಿಂದ, ಗೋಕುಲಬೃಂದಾವನವೆಂಬ ಸ್ಥಳದಲ್ಲಿ ಮೆರೆಯುತ್ತಿದ್ದ ಶ್ರೀ ಕೃಷ್ಣಪರಮಾತ್ಮನನ್ನಾರಾಧಿಸುತ್ತಾ ಆಗಾಗ್ಗೆ ಸಜ್ಜನರೊಡನೆ ಅಲ್ಲಿಗೆ ಹೋಗಿ, ಪರಮಾತ್ಮನ ದರ್ಶನಾನಂದವನ್ನು ಪಡೆಯುತ್ತಾ ಮಿಕ್ಕಕಾಲವನ್ನು ಪತಿಸೇವಾವೃತ್ತಿಯಲ್ಲಿಯೂ ವಿನಿಯೋಗಿಸುತ್ತಿದ್ದಳು.

ಈ ಪ್ರಭಾವದಿಂದ ರಾರಾಜಿಸುತ್ತಿದ್ದ ಮಿರಾಬಾಯಿಯ ಮನೋವಲ್ಲಭನಾದ ಕುಂಭಸಿಂಗನು, ತನ್ನ ಪತ್ನಿಯಲ್ಲಿ ನಿರತಿಶಯವಾದ ಅನುರಾಗವಿಟ್ಟು, ಸಂಸಾರಸುಖವನ್ನನುಭವಿಸುತ್ತಾ ರಾಜ್ಯಪರಿಪಾಲನೈಕಚಿತ್ತದಿಂದ ಪ್ರಜಾನುರಾಗಕ್ಕೆ ಪಾತ್ರನೆನಿಸುತ್ತಾ, ಪ್ರಖ್ಯಾತಿಯನ್ನು ಪಡೆದಿದ್ದನು. ಈತನು ಕವಿತಾಂಗನೆಯನ್ನೂ ಕೈವಿಡಿದುದರಿಂದ ಈತನ ಕವನಗಳೆಲ್ಲಾ ಇಹಲೋಕ ಸಂಬಂಧವಾದುದಾಗಿಯೂ ಪತ್ನಿಯ ಕವನಗಳೆಲ್ಲಾ ಪರಮಾತ್ಮನ ಸಂಬಂಧವಾದುದಾಗಿಯೂ ಇದ್ದುವು! ಇಂತಹ ಅಮೂಲ್ಯವಾದ ಕವಿತಾಶಕ್ತಿಯು ದಂಪತಿಗಳಲ್ಲಿ ನೆಲಸಿರಲು, ಇವರ ಕವನಾಮೃತವನ್ನು ಪ್ರಜೆಗಳು ಪಾನಮಾಡಿ ಪರಮಾನಂದಭರಿತರಾಗಿ ಇವರ ಶ್ರೇಯೋಭಿವೃದ್ಧಿಯನ್ನೇ ಬಯಸುತ್ತಿದ್ದರು.

ಮಿರಾಬಾಯಿಯ ಖ್ಯಾತಿಯು ದಿಗ್ವಂತ ವಿಸ್ತ್ರಾಂತವಾಗಿರಲು ಮೊಗಲ್ ರಾಜರಲ್ಲಿ ಚಕ್ರಾಧಿಪತಿಯೆನಿಸಿ ದಿಳ್ಳಿ ರಾಜ್ಯಕ್ಕೆ ಅಧಿಪತಿಯಾಗಿದ್ದ ಅಕ್ಬರನು ತನ್ನ ಪ್ರೀತಿಪಿಂಬ ಬಲೆಗೆ ಆ ಕಾಲದ ಕ್ಷತ್ರಿಯರಾಜರೆಂಬ ಕೀರಗಳನ್ನು ಸಿಕ್ಕಿಸಿಕೊಂಡು, ಭೇತಿಎಂಬ ದಂಡದಿಂದ ಸನ್ಮಾರ್ಗದಲ್ಲಿರುವಂತೆ ಮಾಡಿಕೊಂಡು, ತನ್ನ ರಾಜ್ಯದ ವೈಭವಾತಿಶಯವನ್ನು ಪೆರ್ಚುಗೊಳಿಸಲು ವಿವಿಧ ಕಸಬುಗಳಲ್ಲಿಯೂ, ನ್ಯಾಯಶಾಸ್ತ್ರಗಳಲ್ಲಿಯೂ, ವಿದ್ಯೆಯಲ್ಲಿಯೂ ಅಸಮಾನರೆಂದೆನಿಸಿ ಯಶೋವಂತರಾದ ರಾಜಪುತ್ರಪ್ರಮುಖರನ್ನೆಲ್ಲಾ ಸೇರಿಸಿಕೊಂಡು ರಾಜ್ಯಾಭಿವೃದ್ಧಿಯ ಕಾರ್ಯಗಳಲ್ಲಿ ಮಗ್ನಮಾನಸನಾಗಿದ್ದನು.

ಮಿರಾಬಾಯಿಯ ಅಳಿಯಂಕವಾದ ಖ್ಯಾತಿಯು ಅಕ್ಬರನ ಕಿವಿಗೆ ಬೀಳಲು, ಇವನು ಸಂಗೀತಲೋಲನಾಗಿಯೂ ಇದ್ದುದರಿಂದ, ಆಕೆಯನ್ನು ನೋಡಿ ಆನಂದಪಡಬೇಕೆಂದಾಲೋಚಿಸಿ, ತನ್ನೊಡನೆ ಸಂಗೀತ ವಿಶಾರದನಾದ ಟಾರಿಸೂರ್ ಎಂಬಾತನನ್ನು ಕರೆದುಕೊಂಡು ಇಬ್ಬರೂ ಸಾಧುವೇಷಗಳನ್ನು ಧರಿಸಿಕೊಂಡು, ಮಿರಾಬಾಯಿಯು ಆಗಾಗೆ ಹೋಗುತ್ತಿದ್ದ ಗೋಕುಲ ಬೃಂದಾವನದಲ್ಲಿರುವ ಶ್ರೀಕೃಷ್ಣದೇವಾಲಯಕ್ಕೆ ಹೋಗುವುದೇ ನಿಶ್ಚಯವೆಂದು ತೀರ್ಮಾನಿಸಿಕೊಂಡನು. ಇತ್ತ ಮಿರಾಬಾಯಿಯು ತನ್ನ ನೈಜಭಕ್ತಿಯಿಂದ ಕೃಷ್ಣನನ್ನು ಕುರಿತು ಭಜನೆ ಮಾಡುತ್ತಾ, ಆತನಮೇಲೆ ಭಕ್ತಿರಸಭರಿತಪದ್ಯಗಳನ್ನು ಹಾಡುತ್ತಾ ಆನಂದ ತುಂದಿಲಹೃದಯಳಾಗಿರುವುದನ್ನು ನೋಡಿದ ಅಕ್ಬರನು, ತನ್ನ ಹೃದಯದಲ್ಲಿನ ಪೂರ್ವದ ಯೋಜನೆಗೆ ಮರುಳಹೊಂದಿ ತನ್ನ ದುರಾಶೆಗೆ ತುಂಬ ವ್ಯಸನಪಟ್ಟುಕೊಂಡನು. ಆನಂತರ ಅಕ್ಬರನು ತನ್ನ ಕೊರಳಲ್ಲಿದ್ದ ನವರತ್ನಹಾರವನ್ನು ಕೈಯಲ್ಲಿ ಹಿಡಿದುಕೊಂಡು, ಹತ್ತಿರದಲ್ಲಿಯೇ ನಿಂತು—ಎಲೌ ಮಾನಿನಿಯೆ! ನಿನ್ನ

ಭಕ್ತಿಭಾವಗಳಿಗೆ ನಾನು ಮೆಚ್ಚಿದೆ ನನ್ನ ಹೃದಯದಲ್ಲುತ್ಪನ್ನವಾದ ಭಕ್ತಿಯಿಂದ ಕೊಡುವ ಈ ನವರತ್ನಮಾಲಿಕೆಯನ್ನು ಸ್ವೀಕರಿಸಿ, ಈ ಕೃಷ್ಣವಿಗ್ರಹಕ್ಕೆ ಅಲಂಕರಿಸಿದರೆ ನಾನು ಧನ್ಯನಾಗುವೆನು, ಎಂದು ಬಹು ವಿನಯದಿಂದ ಪ್ರಾರ್ಥಿಸಿಕೊಂಡನು. ಮೀರಾಬಾಯಿಯು ಸಾಧುವು ಕೊಟ್ಟರುವದರಿಂದ ನಿಜವಾಗಿಯೂ ಭಕ್ತಿಪೂರ್ವಕವಾಗಿ ಕೊಟ್ಟನೆಂದು ಭಾವಿಸಿ, ಆ ಹಾರವನ್ನು ತೆಗೆದುಕೊಂಡು—ಎಲೈ ಸಾಧುವೆ! ಇಂತಹ ಹಾರವು ನಿನಗೆ ದೊರೆತ ಬಗೆ ಹೇಗೆ? ಎನಲು ಅಕ್ಬರನು—ಯಮುನಾನದಿಯಲ್ಲಿ ಸ್ನಾನಕ್ಕೆ ಹೋಗಿರಲು ಯಾರೋ ಅಲ್ಲಿ ಬಟ್ಟು ಹೋಗಿದ್ದುದರಿಂದ ಇದು ನನಗೇನು ಪ್ರಯೋಜನವೆಂದು ಭಾವಿಸಿ, ತೆಗೆದುಕೊಂಡು ಬಂದು ಕೊಟ್ಟರುವೆನು, ಎಂದು ಹೇಳಿದುದನ್ನು ನಂಬಿ ಮೀರಾಬಾಯಿಯು ಆ ಹಾರವನ್ನು ಕೃಷ್ಣನ ವಿಗ್ರಹಕ್ಕೆ ಹಾಕಿದಳು. ಇತ್ತ ಅಕ್ಬರನು ದೇವಾಲಯದಿಂದ ಹೊರಟು ದಾರಿಯಲ್ಲಿ ಬರುತ್ತಾ, ಮೀರಾಬಾಯಿಯ ಪ್ರಭಾವವನ್ನು ನೆನೆನೆನೆದು ಅತ್ಯಾಶ್ಚರ್ಯಪಡುತ್ತಾ, ತನ್ನ ಪೂರ್ವದ ಯೋಚನೆಗೆ ಪಶ್ಚಾತ್ತಾಪಪಡುತ್ತಾ ಅಗೋಚರನಾಗಿ ತನ್ನ ರಾಜಧಾನಿಯಿಂದ ದಿಲ್ಲಿರಾಜ್ಯಕ್ಕೆ ತೆರಳಿದನು

ಇತ್ತ ಅಕ್ಬರನು ವೇಷಧಾರಿಯಾಗಿ ಹೋಗಿ ಮೀರಾಬಾಯಿಯು ಕೈಗೆ ಅಮೂಲ್ಯವಾದ ರತ್ನಾಹಾರವನ್ನು ಬಹುಮಾನಪುರಸ್ಸರವಾಗಿ ಕೊಟ್ಟನೆಂಬ ವಾರ್ತೆಯು ಜನಜನಿತವಾಗಿ ಹೇಗೋ ಕೊನೆಗೆ ಉಂಭಸಿಂಗ್ ವ ಹಾರಾಜನ ಕಿವಿಗೂ ಬಿದ್ದಿತು ಈ ವಾರ್ತೆಯನ್ನು ಕೇಳಿದೊಡನೆಯೇ ಅಕ್ಬರನು ದುರ್ಜ್ವಲಿಸದಿಂದ ನಡಿಸಿದ ನೋಪಕೃತ್ಯಕ್ಕೂ, ತನ್ನ ಪ್ರಿಯಳು ಪರಮಪುರುಷನ ಪರಲೋಕನಾದಿಗಳಿಂದಾದ ಅಪಮಾನತಿಖಿದಂವಹ್ಯಮಾನಸನಾಗಿ ಇನ್ನು ಜೀವಿಯನ್ನು ತ್ಯಜಿಸುವುದೇ ಉತ್ತಮವೆಂದು ಭಾವಿಸಿ, ಈ ವಿಷಯವನ್ನು ಮನಸ್ಸಿನಲ್ಲಿ ಬಹು ಗೋಪ್ಯವಾಗಿಟ್ಟುಕೊಂಡಿದ್ದನು. ಕುಂಭಸಿಂಗನು ಶ್ರೀಕೃಷ್ಣನ ನಿಗದಿಮೇಲಿರುವ ಅನೋಘೆ ರತ್ನಹಾರವನ್ನು ಬಹು ಗೋಪ್ಯವಾಗಿ ಕರಿಸಿ, ಪರೀಕ್ಷಿಸಿ ನೋಡಿದುದರಲ್ಲಿ, ಆ ಹಾರವು ತನ್ನ ರಾಜ್ಯದಲ್ಲಿದ್ದ ಒಬ್ಬ ಕೋಟ್ಯಧಿಶ್ವರನಲ್ಲಿದ್ದುದನ್ನೂ, ಅತನೇ ಅಕ್ಬರನಿಗೆ ಮಾರಿದನೆಂಬ ವಿಷಯವನ್ನೂ ಒಬ್ಬ ವ್ಯಾಪಾರಿಯಿಂದ ತಿಳಿದುಕೊಂಡನು ಅನಂತರ ಕುಂಭಸಿಂಗನು ಮನಸ್ಸಿನಲ್ಲಿ ಅನ್ಯಾಯವಾಗಿ ಆಚಂದ್ರಾರ್ಕವಾದ ಅಪಯಶಸ್ಸನ್ನು ಪ್ರಿಯಪತ್ನಿಯು ಅನುಗೊಳಿಸಿಕೊಂಡು ಮ್ಲೇಚ್ಛನ ದರ್ಶನದಿಂದ ಅವಳು ತನ್ನ ಪ್ರೀತಿಗೆ ಬಾಹಿರಳಾಗಿ, ನಿಷ್ಕಳಂಕವಾದ ಮೀವಾರು ವಂಶವೆಂಬ ಲತೆಯನ್ನು ಮೋಸಕೃತ್ಯಕುಠಾರದಿಂದ ಕತ್ತರಿಸಿಬಿಟ್ಟನಲ್ಲ! ಇನ್ನು ಇವಳ ಸಂಪರ್ಕವು ತನಗೆ ಯೋಗ್ಯವಲ್ಲವೆಂತಲೂ ಪತ್ನಿಯು ತಾನೇ ಪ್ರಾಣತ್ಯಾಗ ಮಾಡಿಕೊಳ್ಳುವಂತೆ ಮುಂದಕ್ಕೆ ಏರ್ಪಡಿಸಬೇಕೆಂತಲೂ ನಿಶ್ಚಯಿಸಿಕೊಂಡನು

ಇತ್ತ ಮೀರಾಬಾಯಿಯು ಎಂದಿನಂತೆ ಒಂದು ದಿವಸ ಕೃಷ್ಣದೇವಾಲಯದಲ್ಲಿದ್ದು ದೇವಾರಾಧನೆಯನ್ನು ಮಾಡಿಕೊಂಡು ದೇವಾಲಯದ ಹೊರಭಾಗದಲ್ಲಿ ನಿಂತಿರುವಾಗ್ಗೆ, ಒಬ್ಬ ರಾಜಕಿಂಕರನು ತಂದಿದ್ದ ಪತ್ರವನ್ನು ಈ ವೀರರಮಣಿಯ ಕೋಮಲ ಕರಕ್ಕೆ ಅರ್ಪಿಸಿ, ಅಜಲಿಪತನಾಗಿ ನಿಂತನು. ಮೀರಾಬಾಯಿಯು ತನ್ನ ವಲ್ಲಭನ ಕಾಗದವನ್ನು ಓದಿಕೊಂಡಕೂಡ್ಲೆ ವಿಷಪ್ರಾಶನೆಮಾಡಿದಂತಾಗಿ, ಕಳೆಗುಂದಿ ವ್ಯಸನಪಟ್ಟುಕೊಂಡು, ತನ್ನ ಪ್ರಾಣತ್ಯಾಗಕ್ಕೆ ಲೇಶವೂ ಯೋಚಿಸದೆ ಪತಿಯಾಜ್ಞೆಯನ್ನು ನೆರವೇರಿಸಲೇಬೇಕೆಂದು ನಿರ್ಧರಿಸಿಕೊಂಡು ಚಾರನನ್ನು ನೋಡಿ—ಸೇವಕನೆ! ನನ್ನ ಪ್ರಾಣಪ್ರಿಯನ ಮುಖದರ್ಶನವು ಒಂದು ಬಾರಿಗಾದರೂ ಲಭಿಸೀತೆ! ಎಂದು ಆರ್ತಧ್ವನಿಯಿಂದ ಕೇಳಿಕೊಂಡಳು. ಚಾರ—ತಾಯಿ! ನಮ್ಮ ಪ್ರಭುಗಳು ತಮಗೆ ಪುನರಾವಲೋಕನಕ್ಕೆ ಸಮಯವು ಸಂಧಿಸಲಾರದೆಂದು ತಿಳಿಸಿದರು. ಇದನ್ನು ಕೇಳಿ ರಾಣಿಯು—ನಿನ್ನ ಪತ್ನಿಯು ಅತ್ಯಾದರದಿಂದ ರಾಜಾಜ್ಞೆಯನ್ನು ಶಿರಸಾವಹಿಸುವಳೆಂದು ಹೇಳು ಎಂಬದಾಗಿ ಹೇಳಿಕಳುಹಿಸಿದಳು

ಇತ್ತ ಮೀರಾಬಾಯಿಯು ಬಹು ವ್ಯಾಕುಲದಿಂದ ಆರಮನೆಗೆ ಬಂದು ವೈಯ್ಯಾಗ್ರಹದಲ್ಲಿದ್ದ ಪತಿಯ ಚಿತ್ರಭಾವದಿದಿಗೆ ನಿಂತು ಸ್ವಾಮಿಯೆ! ನಾನಂತು ನಿಸ್ಕಲ್ಮಷ ಹೃದಯಳು. ನಿನ್ನ ಮನೋಗತದಂತೆಯೇ ನಡೆವೆನು. ಇದೋ! ಈ ಆಭರಣಗಳನ್ನು ನಿನ್ನ ಪಾದಕೊಪ್ಪಿಸುವೆನು, ಎಂದು ಹೇಳುತ್ತಾ, ಮತ್ತೊಂದು ಜನ್ಮದಲ್ಲಾದರೂ ನಿನ್ನ ಸೇವೆಯನ್ನು ಪೂರ್ಣಮಾಡುವಂತೆ ಭಗವಂತನು ನನಗೆ ದಯಪಾಲಿಸಲೆಂದು ಕೇಳಿಕೊಂಡು, ಒಂದು ಪವಿತ್ರ ವಸ್ತ್ರದಿಂದ ದೇಹಾಚ್ಛಾದನೆ ಮಾಡಿಕೊಂಡು ಹೊರಗೆ ಕಗ್ಗತ್ತಲೆಯಾಗಿರುವಾಗ್ಗೆ ಯಾರಿಗೂ ತಿಳಿಸದೆ ಅರಮನೆಯನ್ನು ಬಿಟ್ಟು ಹೊರಟುಹೋದಳು.

ಸ್ವಲ್ಪ ಹೊತ್ತಾದ ಮೇಲೆ ಅಕೆಯು ಯಮುನಾನದಿಯಲ್ಲಿ ಬಿದ್ದು ಬಿಟ್ಟಳು. ದೇಹಾದ್ಯಂತವಾಗಿ ನೀರಿನಲ್ಲಿ ಮುಳುಗಿದಾಗ್ಗೂ, ಅಕೆಯ ತಲೆಯು ಮಾತ್ರ ನೀರಿನಮೇಲೆ ನಿಂತಿದ್ದಿತು! ಅಷ್ಟರಲ್ಲಿಯೇ ಒಂದು ತೇಜಸ್ಸು ಅಕೆಗೆ ಅಕಸ್ಮಾತ್ತಾಗಿ ಕಾಣಿಸಿಕೊಂಡು, "ಎಲೌ ಮೀರಾಬಾಯಿ. ನಿನ್ನ ಪತಿಯಾಜ್ಞೆಯಂತೆ ನೆರವೇರಿಸಿರುವೆ, ಸಾಕು, ಏಳು ಮನೆಗೆ ಹೋಗುವೆ" ಎಂದು ಹೇಳಿವಂತಾಯಿತು. ಈ ಸುಕುಮಾರಿಗೆ ಎಚ್ಚರವಾಗಲು, ತಾನೆಲ್ಲಿರುವೆ ಎಂಬುದು ವ್ಯಕ್ತವಾದನಂತರ, ಹತ್ತಿರದಲ್ಲಿಯೇ ಇದ್ದ ಕೃಷ್ಣದೇವಾಲಯಕ್ಕೆ ಹೋಗಿ ಕೃಷ್ಣನ ಸೇವೆಯಲ್ಲಿ ನಿರತಳಾಗಿದ್ದಳು. ಈಕೆಯ ಭಕ್ತಿಗೂ, ಹಾಡುವ ಗಾನಕ್ಕೂ ಸುತ್ತಲಿನ ಜನರು ಕೇಳಿ ಆಶ್ಚರ್ಯಪಡುತ್ತಾ ನೋಡಿಕೊಂಡುಹೋಗುತ್ತಿದ್ದರು ಜನರು ತಾವಾಗಿಯೇ, ಈಕೆಗೆ ತಂದುಕೊಡುತ್ತಿದ್ದ ಹಾಲು ಹಣ್ಣುಗಳನ್ನು ಕೃಷ್ಣನಿಗೆ ನಿವೇದನಮಾಡಿದ ನಂತರ ಪ್ರಾಣಸಂರಕ್ಷಣೆಗಾಗಿ ತೆಗೆದುಕೊಂಡು ಹೀಗೆ ಕೆಲವು ಕಾಲವು ಕಳೆದಳು.

ಇತ್ತ ರಾಜ್ಯದಲ್ಲಿ ಮಹಾರಾಣಿಯು ರಾಣಿವಾಸವನ್ನು ಬಿಟ್ಟು ಎಲ್ಲಿಯೋ ಹೋದಳೆಂಬ ವರ್ತಮಾನವು ಎಲ್ಲೆಲ್ಲಿಯೂ ಹರಡಿಕೊಂಡಿತು ಕ್ರಮೇಣ ಮೀರಾಬಾಯಿಗೆ ಪ್ರಾಪ್ತವಾದ ವಿಷಯವು ರಾಜ್ಯದಲ್ಲಿ ಹರಡಿ ಕೊನೆಗೆ ಮೀರಾಬಾಯಿಯೇ ಕೃಷ್ಣದೇವಾಲಯದಲ್ಲಿರುವಳೆಂಬ ವಿಷಯವು ಹೊರಬಿದ್ದಿತು. ರಾಜ್ಯದಲ್ಲಿ ರಾಜನನ್ನು ಎಲ್ಲರೂ ದೂಷಿಸುವಂತಾಯಿತು ರಾಜನು ತನಗುಂಟಾದ ಅಪಮಾನವನ್ನು ಸಹಿಸಲಸದಳವಾಯಿತು. ರಾಜನು ತನ್ನ ಹೆಂಡತಿಯು ಈಗ ಹೇಗಿರುವಳು, ಎಂಬುದನ್ನು ತಿಳಿಯಲು, ತಾನು ಒಬ್ಬ ಸನ್ಯಾಸಿಯ ವೇಷವನ್ನು ಹಾಕಿಕೊಂಡು ದೇವಾಲಯಕ್ಕೆ ಹೋಗಿ, ಅಕೆಯ ರೀತಿಯನ್ನೂ, ಕೃಷ್ಣಸೇವಾನಿರತಳಾಗಿರುವ ಕ್ರಮವನ್ನೂ ನೋಡಿ, ಎಲೌ ಮನಸಿತಳೆ! ಭಿಕ್ಷುಕನಿಗೆ ಭಿಕ್ಷೆಯನ್ನು ಹಾಕುವೆಯಾ? ಎಂದು ಪ್ರಶ್ನೆ ಮಾಡಿದನು ರಾಣಿ—ಸಾಧುವೆ! ನಾನು ಮಹಾದರಿದ್ರಳು. ಭಿಕ್ಷವನ್ನು ನೀಡುವ ಪುಣ್ಯವು ನನಗೆಲ್ಲಿರುವುದು? ಎನಲು ಸಾಧುವು—ಆತುರ ಬೇಡಿದುದನ್ನು ಕೊಡುವುದೇ ನಿನ್ನ ಧರ್ಮವು, ಎಂದು ಹೇಳಿ ಅಕೆಯ ಕೈಗಳನ್ನು ಹಿಡಿಮಕೊಂಡು, ತನ್ನ ನಿಜವೇಷವನ್ನು ತೋರಿಸಿ, ಪ್ರಿಯೆ! ನನ್ನ ಅಪರಾಧವನ್ನು ಕ್ಷಮಿಸು ಎನಲು, ಮೀರಾಬಾಯಿಯು ಈತನ ಆಕ್ಮಾತ್ಕಕ್ಕೆ ಹೆದರಿ, ಕತ್ತೆತ್ತಿ ನೋಡಲು ತನ್ನ ಪ್ರಾಣವಲ್ಲಭನು ಹತ್ತಿರದಲ್ಲಿಯೇ ನಿಂತಿರುವುದನ್ನು ನೋಡಿ, ಅಂಜಲಿಬದ್ಧಳಾಗಿ, ನಮಸ್ಕರಿಸಿ, ಪತಿಪಾದವನ್ನು ಸ್ಪರ್ಶಮಾಡಿ, ಪತಿಯೆ! ನಿನ್ನ ಪ್ರೀತಿಗೆ ಬಾಹಿರಳಾಗಿ, ಪಾಪಸ್ಪರ್ಶಗಿರುವೆನೆ. ಎಂದು ಕಣ್ಣಿಂದ ಧಾರಾಪೂರ್ವಕವಾಗಿ ಕಂಬನಿಗಳನ್ನು ಸುರಿಸುತ್ತಾ ನಿಂತಳು ರಾಜನು ತುಂಬ ಕನಿಕರಪಡುವ ಪಾತಾಗುಳನ್ನಾಡುತ್ತ, ಹೀಗೆ ನಡೆದ ವಿಷಯಗಳನ್ನು ಸಾಂಗವಾಗಿ ಮಾತನಾಡಿ ಕೊನೆಗೆ ರಾಣಿಯನ್ನು ಬಹು ಮರ್ಯಾದೆಯಿಂದ ತನ್ನ ಅರಮನೆಗೆ ಕರೆದುಕೊಂಡು ಹೋದನು ಈ ವಿಷಯಗಳು ರಾಜ್ಯದಲ್ಲಿರುವ ಜನರಿಗೆ ತಿಳಿದು, ಕೊನೆಗೆ ಬಹಳ ಸಂತೋಷಪಟ್ಟರು

ವಾಚಕ ಮಹಾಶಯರೆ! ಪತಿಯಾಜ್ಞೆಯನ್ನು ಮೀರದೆ ನಡೆದು ಪರಮಾತ್ಮನ ಭಕ್ತಿಯಿಂದ ಕಾಲ ಕಳೆಯತಕ್ಕ ಮಹಿಳೆಯರು ಒಂದಾನೊಂದುವೇಳೆ ಕಾರ್ಯ ಕಾರಣದಿಂದ ಅಪಪ್ರಾಪ್ತಿಗೆ ಗುರಿಯಾಗಿದ್ದರೆ ಅವರಿಗೆ ಸರ್ವಕಷ್ಟಗಳು ಒಂದೆರೂ ಅವು ಮಂಜಿನಂತೆ ಹಾರಿಹೋಗುವುದೆಂಬುದಕ್ಕನುಸಾರವಾಗಿ ತೋರುವ ಈ ಮಹಾತ್ಮಳಾದ ಮೀರಾಬಾಯಿಯ ಚರಿತ್ರೆಯನ್ನು ಮಾದ್ರಿಗಾಗಿ ಬರೆದಿರುವೆನು. ಈಕೆಯಂತೆ ಈಗಿನ ನಮ್ಮ ಮಹಿಳೆಯರು ಪತಿವ್ರತೆಯರಾಗಿದ್ದು ಪತಿಯಾಜ್ಞೆಯಂತೆ ವಿಚಿತ್ರ ವೇಷಗಳನ್ನು ಬಿಟ್ಟು ನಡೆದುದಾದರೆ ಅವರ ಖ್ಯಾತಿಯು ಆಚಂದ್ರಾರ್ಕವಾಗಿರುವುದರಲ್ಲಿ ಲೇಶಸಂಶಯವೂ ಇರುವುದಿಲ್ಲವೆಂದ. ತಿಳಿಸಲು ಈ ಕಥೆಯನ್ನು ಮಾದ್ರಿಗಾಗಿ ಬರೆದಿರುವೆನು.

ಶಿಷ್ಯರ ಮನೆಗಳ
ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಸುತುಸರ್ಗದ ಮಕ್ಕಳ ವಿವರವು ಶಿಷ್ಯರ ಮನೆಗಳಲ್ಲಿದ್ದು, ಆ ಮತಾಧಿಕಾರಿಗಳು ಪಮಪರ್ಷಕ್ಕೋ ಪತ್ತು ಪರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಬೇಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಹಿಷರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇವನ್ನು ದೂರವಾಡುವುದಕ್ಕೋಸ್ಕರ ಪೀಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿವೆ. ಅಮದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ಕರಿಸಿಕೊಂಡು ಆವರೆಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಒಂದು ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಶಾಯಿಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಧೃಢವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ತ್ರಿನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂದೂರ	೧	೪—೦—೦
ತಿಲತಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತೀವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦

ಔಷಧಿ ಹೆಸರು	ತೊಲಿ	ಮೂಲ್ಯ
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿಭಸ್ಮ	೧	೦—೮—೦
ಜಸ್ತುಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೫—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್, ಹಿಮಾಲಯ, ಜಿಲ್ಲಾ ಗಢವಾಲ್ ಯು. ಪಿ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಥತ್ತು ಅಮೃತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೬—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ಮೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಹವೇಶಿಸುವ ಫೋಟೋ ಸೈಜು ೧೦×೧೪ ಬೆಲೆ .... ೦—೧—೬

ಸದ್ಯೋ ಜೀತಾದೋತ್ತಮಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ .... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಘ್ನೇಶ್ವರನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮಮಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮಮ್ರೇಂಛಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯

ಶ್ರೀಮಮಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾವ್ಯಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .... ೦—೦—೯

ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ .... ೦—೦—೯

ಹಿಮಮತ್ವರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೯

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .... ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯವ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಲೆನೋವು, ತಲೆಯಲ್ಲಿಯ ಮೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇವನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಪೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೮ ಆಣೆ.

(Registered Trade Mark)

ಸಿನ್ಮು ಆಜ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[27] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೩ ಆಣೆ

ಗೋತ್ರಸೂತ್ರಸಟ (೫ನೆಯ ಆವೃತ್ತಿ) .... ೧ ಆಣೆ

ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ

ಸನ್ಯಾಸಾಶ್ರಮವಿವರ್ಮ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ

ಪಂಚವಿಂಶತಿ ಪ್ರಶ್ನಪ್ರಕಾರ (೩ನೆಯ ಆವೃತ್ತಿ) .... ೧ ಆಣೆ

ಶ್ರೀಶಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .... ೧ ಆಣೆ

ಬಸವಾದಿಸಿಜತತ್ತ್ವಾರ್ಪಣ (೪ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯಶತಕ(೨ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ .... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯರತಕ .... ೨ ಆಣೆ

ವೀರಶೈವಮನತಖಮಾಂಸಾ .... ೩ ಆಣೆ

ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ

ನಿಮಾಹವಿಧಿ (೩ನೆಯ ಆವೃತ್ತಿ) .... ೪ ಆಣೆ

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ

A brief life sketch of Pandit Sri Kashinatha Shastriji (*English*) 4 As.

ಸನ್ಯಾಸಾಶ್ರಮವಿಮರ್ಶತತ್ತ್ವಸ್ಫುಟೀಕರಣ (೩ನೆಯ ಆವೃತ್ತಿ) .... ೪ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಕ್ಕಸೈಜು) .... ೪ ಆಣೆ

ವೀರಶೈವಮಹಾತ್ಮರು .... ೪ ಆಣೆ

ಬಸವಧ್ವಾಂತದಿವಾಕರ (೩ನೆಯ ಆವೃತ್ತಿ) .... ೪ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಧಾಪಣಾಮು (ತೆಲುಗು) ೪ ಆಣೆ

Speeches by Pandit Shri Kashinatha Shastri (*English*) 12 As.

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) .... ೧೨ ಆಣೆ

ಶ್ರೀಕರಭಾಷ್ಯಂ (ಚತುಸ್ಸೂತ್ರೀ) .... ೧ ರೂ.

ಶಿವಾಪ್ಯೆತಮುಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) .... ೪ ರೂ

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ.

ವೀರಶೈವಸಿದ್ಧಾಂತಸುಧಾಕರ .... ೨ ರೂ

ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .... ೧ ರೂ.

ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ.

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೨ ಆಣೆ

ಶಿಖಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ

ವೀರಶೈವರತ್ನ (ಮರಾಠಿ) ... ... ೧ ರೂ.

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ.

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ... ೧ ರೂ.

ವೀರಶೈವೇಂದುಶೇಖರ (ಸಂಸ್ಕೃತ) ... ... ೧ ರೂ.

ನಂದಿಕೇಶ್ವರಕಾರಿಕಾ (ಸಂಸ್ಕೃತ) ... ... ೩ ಆಣೆ.

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ... ... ೩ ಆಣೆ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್; ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನ ವಿದ್ವಾಂಸರೂ ವೇದ ಶಿರಸಿ ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೋಪೋದ್ಧರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಸ್ಪುದೀಲೋಕಪಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾ ವೇ॥ ತರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೪½ ಪೈ. ಪರಸ್ಥಳದವರಿಗೆ ೨ ರೂ. ೪ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩೧ ನೇ ಅಕ್ಟೋಬರ್ ೧೯೩೮ [ಸಂಚಿಕೆ ೨೬

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ.

ಶ್ರೀಕರಭಾಷ್ಯವನ್ನು ರಚಿಸಿರುವ ಶ್ರೀಪತಿಪಂಡಿತಾರಾಧ್ಯರು ಕ್ರಿ. ಶ. ೧೧ ನೆಯ ಶತಮಾನದಲ್ಲಿದ್ದರೆಂಬ ವಿಷಯವು ಅನೇಕ ಪ್ರಾಚೀನಗ್ರಂಥಗಳಿಂದಲೂ, ಶಿಲಾಶಾಸನಾದಿಗಳಿಂದಲೂ ಸಿದ್ಧವಾದುದಾಗಿದೆ. ಹೀಗಿದ್ದರೂ ಬೆಂಗಳೂರು ನಗರನಿವಾಸಿಗಳಾದ ರಾವ್‌ಸಾಹೇಬ ಸಿ. ಹಯವದನರಾಯರೆಂಬವರು ಈ ಭಾಷ್ಯದ ಮೇಲೆ ಇಂಗ್ಲೀಷಿನಲ್ಲಿ ಬರೆದಿರುವ ಇಂಟ್ರಡಕ್ಷನ್ನಿನಲ್ಲಿ ಇವರು ೧೪ ನೆಯ ಶತಮಾನದಲ್ಲಿದ್ದರೆಂದು ಬರೆದು ಜಗತ್ತಿನ ಜನರಿಗೆಲ್ಲಾ ಮಹಾ ಭ್ರಮೆಯನ್ನುಂಟುಮಾಡಿದ್ದಾರೆ. ರಾಯರು ಬರೆದಿರುವ ಈ ವಿಷವಾದ ಅಯಥಾರ್ಥಾಭಿಪ್ರಾಯವನ್ನು ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಅನೇಕಾನೇಕಪ್ರಮಾಣಗಳಿಂದ ಅಮೂಲಾಗ್ರವಾಗಿ ಖಂಡಿಸಿ, ವೀರಶೈವಮತಕ್ಕೂ ಶ್ರೀಕರಭಾಷ್ಯಕ್ಕೂ ಅಸಾಧಾರಣವಾದ ಗೌರವವನ್ನುಂಟುಮಾಡಿದ ವಿಷಯವು ಈ ಪುಸ್ತಕದಲ್ಲಿ ಉಕ್ತವಾಗಿದೆ.

ಬೆಲೆ ೪ ಆಣೆ.

ಸದ್ಬೋಧರತ್ನಾವಳಿ.

ಈ ಗ್ರಂಥವನ್ನು ತಿಪಟೂರು ನಿವಾಸಿಗಳಾದ ವೇ॥ ಆರ್. ಎಂ. ಮಲ್ಲಿಕಾರ್ಜುನಾರಾಧ್ಯರು ಮುದೇನೂರು ಮಳೇಮಠ, ಇವರು ರಚಿಸಿರುವರು. ಇದರಲ್ಲಿ ಅನೇಕ ನೈತಿಕ-ಧಾರ್ಮಿಕ-ಪಾರಮಾರ್ಥಿಕ ವಿಷಯಗಳು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿರುವವು. ಗ್ರಂಥವು ಬಹಳ ಸರಳಭಾಷೆಯಲ್ಲಿ ಬರೆಯಲ್ಪಟ್ಟಿರುವುದರಿಂದ ಪ್ರತಿಯೊಬ್ಬರಿಂದಲೂ ಸಂಗ್ರಹಿಸಲು ಯೋಗ್ಯವಾಗಿದೆ. ಪುಟಗಳು 176. **ಬೆಲೆ ೩ ಆಣೆ ಮಾತ್ರ.**

A BRIEF LIFE-SKETCH OF PANDIT SRI KASHINATHA SHASTRIJI

This Book printed in English contains a brief life sketch of Pandit Sri Kashinatha Shastriji. It shows the very many good and memorable deeds done by Sastriji up till now. **Price per Copy 4 Annas.**

SHAKTI-VISHISTADVAITA
OR
THE PHILOSOPHICAL ASPECT OF VEERASAIVISM.

This book is the English translation of the lecture on Shakti-vishistadvaita Sidhanta delivered before the Philosophical Congress of 1935 at Mysore by Pandit Kashinatha Shastry.

The whole of Veerasaiva-philosophy is briefly explained in this book. No other book containing so much information about Veerasaiva philosophy had ever been published.

It is essential that every one who wants to know the secret of Veerasaiva philosophy must order for a copy of this valuable book. **Price 8 Annas.**

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸ್ವೀಕಾರ.

ಹಿರಿಯೂರು ತಾ॥ ಬರೇನಹಳ್ಳಿಯಲ್ಲಿರುವ ಹಾಲೇನ ಹಳ್ಳಿ ಉಜ್ಜನಿಮಠದ ವೇ॥ ಗುರುಸಿದ್ಧಾರಾಧ್ಯರ ಜ್ಯೇಷ್ಠ ಪುತ್ರ ಚಿ॥ ದೊಡ್ಡವೀರಾರಾಧ್ಯನಿಗೆ ಶಿರಾ ತಾ॥ ಕೊಟ್ಟ ಗ್ರಾಮದಲ್ಲಿರುವ ವೇ॥ ಮದಲೂರು ಉಡೇದಮಠದ ವೀರಾರಾಧ್ಯರ ಪುತ್ರಿ ಚಿ॥ ಸೌ॥ ಸಿದ್ಧಗಂಗಾಂಬಿಕೆಯನ್ನು ಕೊಟ್ಟು ಶ್ರಾವಣ ಬ॥ ೧೨ ಸೋಮವಾರ ವಿವಾಹಮಹೋತ್ಸವವು ಬರೇನಹಳ್ಳಿಯಲ್ಲಿ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ] ರೂ. ಯು ಬ್ರಹ್ಮಸಂದ್ರ ಪೇಟೇಮನೆ ಮದಲೂರು ಉಡೇದಮಠದ ವೇ॥ ದೇ॥ ಯಜಮಾನ್ ದೊಡ್ಡ ವೀರಾರಾಧ್ಯರದ್ವಾರಾ ತಲ್ಪಿರುತ್ತದೆ.

ಕೊಲ್ಲಾಪುರ ಇಲಾಖೆಗೆ ಶೀರಿಂದ ಶಿರೋಳಗ್ರಾಮದಲ್ಲಿರುವ ವೇ॥ ಲಕ್ಷ್ಮೀಶ್ವರ ಹಿರೇಮಠದ ಸೋಮಶೇಖರಯ್ಯನವರ ಧರ್ಮಪತ್ನಿಯವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ] ರೂ. ಯು ವೇ॥ ಅಪ್ಪಯ್ಯಸ್ವಾಮಿ ಹಿರೇಮಠ ಶಿರೋಳ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂ ಚಾ ಚಾ ರ್ಯ ರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಶಿವಲಿಂಗೇಶ್ವರ ಭಜನಾಸಂಘ, ಖತಗಾಂವ.

ಬಿದರೆ ಜಿ॥ ಉದಗೀರ ತಾ॥ ಖತಗಾಂವ ಗ್ರಾಮದ ಸರ್ವ ಭಕ್ತ ಮಾಹೇಶ್ವರರು ವೀರಶೈವರ ವಿಜಯತತ್ವಗಳನ್ನು ಶಾಸ್ತ್ರ ಸಮ್ಮತವಾಗಿ ತಿಳಿಯಬೇಕೆಂಬ ಉದ್ದೇಶದಿಂದ ಶ್ರೀ ಸ್ವ॥ ಲ್ರ॥ ಮಹಾಂತ ಶಿವಾಚಾರ್ಯ ಭೃಹನ್ಮಠ ಮುಧೋಳ ಸ್ವಾಮಿಗಳವರನ್ನು ಬರ ಮಾಡಿಕೊಂಡು ಇದೇ ಆಶ್ವಯುಜ ಶು॥ ೯ ರವಿವಾರ ದಿನದ ಭಜನಾಸಂಘವನ್ನು ಸ್ಥಾಪಿಸಿದರು. ಚರವರ್ಯರು ವರ್ಣಾಶ್ರಮ ಧರ್ಮ ವಿಷಯವಾಗಿ ಬೋಧಿಸಿದರು. ಅನಂತರ ಪಂಡಲಿ ವೇ॥ ವಿರೂಪಾಕ್ಷ ಶಾಸ್ತ್ರಿಗಳು ಪಂಚಾಚಾರ್ಯರ ಪೂರ್ವಾತನ ತತ್ವಗಳನ್ನು ಬೋಧಿಸಿದ್ದಲ್ಲದೆ ಸದ್ಭಃ ಆವಿರ್ಭವಿಸಿರುವ ನವಮಠ (ಹಂಪಬಂಡ) ಸಾಂಕರ್ಯವಾದಿಗಳ ತತ್ವಗಳನ್ನು ಶಾಸ್ತ್ರ ಸಮ್ಮತವಾಗಿ ಖಂಡಿಸಿ ಗುರುಭಜನೆಯಿಂದ ಆಗತಕ್ಕ ಪ್ರಯೋಜನವನ್ನು ಪ್ರತಿಪಾದಿಸಿದರು. ಬಳಿಕ ಆಚಾರ್ಯರ ಜಯಘೋಷದೊಡನೆ ಕಾರ್ಯಕ್ರಮವು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಇಂಗ್ಲೆಂಡಿನ ನೂತನ ಸಚಿವರು

ಬಕಿಂಗ್‌ಹ್ಯಾಂ ಅರಮನೆಯಲ್ಲಿ ಚಕ್ರವರ್ತಿಗಳು ಮಂತ್ರಿಮಂಡಲದ ಸಭೆ ಸೇರಿಸಿದ್ದರು. ಸಭೆಯಲ್ಲಿ ಹೊಸದಾಗಿ ನಿಯಮಿಸಲ್ಪಟ್ಟ ಸಚಿವರುಗಳು ಪ್ರಮಾಣ ವಚನವನ್ನು ಸ್ವೀಕರಿಸಿದರು. ಲಾರ್ಡ್ ಸ್ಯಾಂಕೀಹೋವ್‌ರವರು ನೌಕಾ ಸಚಿವರಾಗಿ ನಿಯಮಿಸಲ್ಪಟ್ಟಿದ್ದಾರೆ. ಆರ್ಲ್ ಡಿಲಾವಾರ್ ರವರು ಶಿಕ್ಷಣ ಶಾಖೆಯ ಸಚಿವರಾಗಿ ನಿಯಮಿಸಲ್ಪಟ್ಟಿದ್ದಾರೆ.

ಪತ್ರವ್ಯವಹಾರ.

ಚಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾ ಕರ್ತರು ಉತ್ತರವಿದಾಗಲಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಉಜ್ಜಯಿನೀ ಶ್ರೀಜಗದ್ಗುರು ಮಹಾಸನ್ನಿಧಿಯಲ್ಲಿ ನೆರವೇರಿದ ಬಳ್ಳಾರಿ ಜಿಲ್ಲಾ ೧೫ನೇ ಪಟ್ಟಚರಾಧಿಕಾರಿಗಳ ಸಮ್ಮೇಲನಸಮಾರಂಭ.

ಈ ಮೊದಲೇ ಪ್ರಸಿದ್ಧಪಡಿಸಿದಂತೆ ಬಳ್ಳಾರಿ ಜಿಲ್ಲಾ ಪಟ್ಟ ಚರಾಧಿಕಾರಿಗಳ ೧೫ನೆಯ ಸಮ್ಮೇಲನವು ಶ್ರೀಮಜ್ಜಯನೀ ಸದ್ಧರ್ಮಸಿಂಹಸಿಂಹಾಸನಾಧೀಶ ಶ್ರೀ ೧೦೮ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯಮಹಾಸ್ವಾಮಿಗಳವರ ದಿವ್ಯಸನ್ನಿಧಿಯಲ್ಲಿ ನೈಭವದಿಂದ ನೆರವೇರಿತು.

ಈ ಸಮ್ಮೇಲನಕ್ಕಾಗಿ ಬಯಲೂರಿನಿಂದ ಪಟ್ಟಚರಾಧಿಕಾರಿ ಸ್ವಾಮಿಗಳವರು ಆಗಮಿಸಿ ಕಾರ್ಯದರ್ಶಿ ಭಾಗ ವಹಿಸಿದ್ದರು. ತಾ॥ ೩೦-೨೪ ನೆಯ ಶನಿವಾರ "ಶೇಣಂಕರಿಜಯಭ್ರಂಗ" ಸಮಾಪ್ತಿ ಗಣಾರಾಧನೆ ಜರುಗಿತು. ಸಕಲ ಭಕ್ತಸಾಹೇಶ್ವರರೂ ತೃಪ್ತಿಹೊಂದಿ ಆನಂದಿಸಿದರು. ಭಾನುವಾರ ತಾ॥ ೯-೧೦-೩೮ ಉದಯ ೪॥ ಘಂಟೆಯಿಂದ ಸಮ್ಮೇಳನದ ಕಾರ್ಯಕ್ರಮವು ಆರಂಭವಾಯಿತು. ಪಂಡಿತರೂ, ಶ್ರೀ ಸ್ವಾಮಿಗಳವರೂ, ಸರ್ಕಾರೀ ಉದ್ಯೋಗಸ್ಥರೂ ಆಗಮಿಸಿ ಉಚಿತವಾದ ಸ್ಥಳದಲ್ಲಿ ಮಂಡಿಸಿದ್ದರು. ಆ ಸಮಯಕ್ಕೆ ಸರಿಯಾಗಿ ವೇದಘೋಷಪೂರ್ವಕ ಶ್ರೀ ಜಗದ್ಗುರು ಸನ್ನಿಧಿಯವರು ಆಗಮಿಸಿ ಸಿಂಹಾಸನದಲ್ಲಿ ಕುಂಡಿಸಿದರು. ಆ ಕ್ಷಣದೀ ಜಗದ್ಗುರುಗಳ ವಿಜಯಘೋಷಪೂರ್ವಕ ಸ್ತೋತ್ರವು ಮಾಡಲ್ಪಟ್ಟಿತು. ಸ್ವಾಗತಸಂಘಾಧ್ಯಕ್ಷರಾದ ಹಿರೇಹಾಳು ಮರುವ ಶ್ರೀ ವಿರೂಪಾಕ್ಷಸ್ವಾಮಿಗಳವರು ಸ್ವಾಗತಭರಿತಭಾಷಣವನ್ನು ಮಾಡಿ ಸಭಿಕರೆಲ್ಲರಿಗೂ ಆನಂದವನ್ನುಂಟುಮಾಡಿದರು. ಸಭಾ ಸಂಚಾಲಕರು ಆರಂಭವಲ್ಲಿ ಈ ಸಮ್ಮೇಲನಕ್ಕಾಗಿ ಬಂದ ಸಂದೇಶ ಗಳೆಲ್ಲವನ್ನೂ ಓದಿದರು. ಮೈಸೂರು ಪಂಚಾಚಾರ್ಯಪ್ರಭಾ ಆಫೀಸಿನ ಅಧ್ಯಕ್ಷರಾದ ವೇ॥ ಪಂಡಿತವರ್ಯ ಶ್ರೀಕಾಶೀನಾಥಶಾಸ್ತ್ರಿಗಳವರೂ, ಸಿಕಿಂದ್ರಾಬಾದು "ವೀರಶೈವ ಗುರುಕುಲಾಧ್ಯಕ್ಷ" ಪಂ॥ ಚಿ॥ ಮಾ॥ ವೇ॥ ವೀರಭದ್ರಶಾಸ್ತ್ರಿಗಳವರೂ, ಹೋಟಗಿ ಬೃಹನ್ಮತಾಧೀಶರಾದ ಬಾಲತಪಸ್ವಿ ಶ್ರೀ ಪಂ॥ ಬ್ರ॥ ಚನ್ನವೀರಶಿವಾಚಾರ್ಯ ಸ್ವಾಮಿಗಳವರೂ, ರಾಡಕುಂದಿ ಹಿರೇಮಠದ ಶ್ರೀ॥ ಪಂ॥ ಬ್ರ॥ ಶಿವಯೋಗಿಶಿವಾಚಾರ್ಯರೂ, ಶಿರೋಳ ಹಿರೇಮಠದ ವೇ॥ ಶ್ರೀ॥ ಪಂಚಾಕ್ಷರಶಾಸ್ತ್ರಿಗಳವರೂ, ಸೊಲ್ಲಾಪುರ ವಾರದ ಸಂಸ್ಕೃತಕಾಲಾ ಅಧ್ಯಾಪಕರಾದ ಪಂಡಿತರ ಶ್ರೀ॥ ವೇ॥ ನಾಲ್ವಾರ ಜಗದೀಶ್ವರ ಸ್ವಿಗಳವರೂ, ಉಜ್ಜಯಿನೀ ಆಸ್ಥಾನವಿದ್ವಾನ್ ಪಂ॥ ವೇ॥ ಗುರು ಸಿದ್ಧಶಾಸ್ತ್ರಿಗಳವರೂ, ಪಂಡಿತವರ್ಯ ಆಸ್ಥಾನವಿದ್ವಾನ್ ವೇ॥ ಶಂಕರಶಾಸ್ತ್ರಿಗಳವರೂ ಇವರೇ ಮೊದಲಾದವರು ಸಮ್ಮೇಳನದ ಪರ್ತಿಷ್ಠೆತೆಯನ್ನು ಕೋರಿ ಸಂದೇಶವನ್ನು ಕಳುಹಿಸಿದ್ದರು.

ಸಂದೇಶವಾಚನಾನಂತರ ಅನೇಕ ವಿದ್ವಾಂಸರು ಸಂದೇಶ ಗಳೊಡನೆ ಕಳುಹಿಂದ ಮಹತ್ವರಗಳಾದ ಲೇಖನಗಳನ್ನು ಓದುವು ದಾಯಿತು. ಅವುಗಳಲ್ಲಿ ಕೆಲವಿವು—'ಸಾಹಿತಿಕತಿಗಳ ಕರ್ತವ್ಯ' ಲೇ॥ ತಾದಕುಂದಿ ಶ್ರೀ ಶಿವಯೋಗಿಶಿವಾಚಾರ್ಯರು. 'ಪಟ್ಟಚರಾ ಧಿಕಾರಿಗಳು ಸ್ವಕರ್ತವ್ಯವಿದ್ಯಪ್ರಾದರೆ ವೀರಶೈವಮತೋನ್ನತಿಯಾ ಗುವುದು' ಲೇ॥ ಶಿರೋಳ ಹಿರೇಮಠದ ನೇ॥ ಪಂಚಾಕ್ಷರಶಾಸ್ತ್ರಿ ಗಳವರು, 'ಆಚಾರ್ಯರು ಸ್ವಕರ್ತವ್ಯವಿಕ್ಷರಾಗಬೇಕು' ಲೇ॥ ಹೋ ಟಗಿ ಬೃಹನ್ಮತಾಧೀಶ ಶ್ರೀ ಚನ್ನವೀರಶಿವಾಚಾರ್ಯಸ್ವಾಮಿಗಳವರು, 'ಪಟ್ಟಚರಾಧಿಕಾರಿಗಳ ಕರ್ತವ್ಯ' ಲೇ॥ ಹಯಗೋಡು ಬೃಹನ್ಮತಾಧೀಶರಾದ ಶ್ರೀ ಪಟ್ಟದ ಸ್ವಾಮಿಗಳವರು, 'ಪಟ್ಟಚರಾಧಿ ಕಾರಿಗಳು ಮಹಾಚಾರ್ಯರ ಕೈಯಲ್ಲಿರಬೇಕು' ಆದರೆ ಮ.ಹಾ ಚಾರ್ಯರು ವೀರಶೈವೋನ್ನತಿಯಲ್ಲಿ ಭಾಗವಹಿಸಬೇಕು' ಲೇ॥ ಪರಕಪಿ ಶ್ರೀ ವಾಗೀಶಶಿವಾಚಾರ್ಯರು, ಮುದೇನೂರು ಬೃಹನ್ಮರ, ಮಂತಾದವರು. ಲೇಖಾವಾಚನಕಾರ್ಯಗಳಾದ ಮೇಲೆ ಸಭಾ ಸಂಚಾಲಕತೆಯ ಸಭಿಕರೆಲ್ಲರ ಅಭಾರವನ್ನು ಮನ್ನಿಸಿದರು. ಸಾಯಂ ಕಾಲದ ಕಾರ್ಯಕ್ರಮಗಳನ್ನು ಸೂಚಿಸಿದರು. ಬಳಿಕ ಮಂಗಲವು ನಡೆದು ಸಭೆಯು ವಿಸರ್ಜಿತವಾಯಿತು.

ಅದೇ ದಿನ ೫ ಘಂಟೆಗೆ ಶ್ರೀಜಗದ್ಗುರುಗಳವರ ಸನ್ನಿಧಿ ಯಲ್ಲಿ ಸಭೆ ಸೇರಿತು. ನಗರದ ಸುಪ್ರಸಿದ್ಧ ಸ್ತ್ರೀಪುರುಷರೂ ಸರ್ಕಾರೀ ಉದ್ಯೋಗಸ್ಥರೂ ಪಂಡಿತರೂ ಮತಾಧಿಕಾರಿಗಳೂ ಯಜಮಾನರೇ ಮುಂತಾದವರು ತಂಡೋಪತಂಡವಾಗಿ ಆಗಮಿಸಿ ದ್ದರು. ಹೆಣ್ಣು ಮಕ್ಕಳಿಗೆ ಪ್ರತ್ಯೇಕಸ್ಥಲವನ್ನೇರ್ಪಡಿಸಿದ್ದರು. ಎಲ್ಲ ಪಟ್ಟಚರಾಧಿಕಾರಿಗಳೂ ಆಗಮಿಸಿದ್ದರು. ಸರ್ವರೂ ಯಥೋಚಿತ ಸ್ಥಳಗಳಲ್ಲಿ ಮಂಡಿಸಿ ಸಭೆಗೆ ಅಲಂಕಾರವನ್ನುಂಟುಮಾಡಿದರು. ವೇದಘೋಷಪೂರ್ವಕ ಆಚಾರ್ಯಸ್ತವನಾನಂತರ ಸಭಾಸಂಚಾಲಕರು ಸ್ವಾಗತಿಕ ಭಾಷಣವನ್ನು ಮಾಡಿದರು. ಕಾರ್ಯದರ್ಶಿಗಳ ಸೂಚ ನೆಯಂತೆ ಶ್ರೀ ಸತ್ಕಾಗೇರಿ ಪಟ್ಟಾಧ್ಯಕ್ಷರವರು "ಸಮ್ಮೇಲನದಿಂದಾ ಗುವ ಲಾಭ" ಎಂಬ ವಿಷಯದಮೇಲೆಯೂ, ರಾಮದುರ್ಗದ ಹಿರೇಮಠದ ಪಟ್ಟಾಧ್ಯಾಮಿಗಳವರು "ಗುರುವರ್ಗದ ಸುಧಾರಣೆ" ಎಂಬ ವಿಷಯದಮೇಲೆಯೂ, ಹುಬ್ಬಳ್ಳಿ ಹೈಕೋರ್ಟು ವಕೀಲರಾದ ವೇ॥ ಪಿ. ಆರ್ಯ ಹಿರೇಮಠದವರು "ವೀರಶೈವಮತಕ್ಕೆ ಬರುತ್ತಿರುವ ಮುರಹಪಾದ ಹಾಗೂ ಅದರ ಪರಾಹಾರ" ಎಂಬ ವಿಷಯದಮೇಲೆಯೂ, ಗುಳೇದ ಗವಿಮಠದ ಶ್ರೀ ಗಂಗಾಧರಸ್ವಾ ಮಿಗಳವರು "ಪ್ರಾಚೀನಲಿಂಗಿಧರ್ಮ" ಎಂಬ ವಿಷಯದ ಮೇಲೆಯೂ, ಸ್ವಾಗತ ಸಂಘಾಧ್ಯಕ್ಷರಾದ ಹಿರೇಹಾಳು ಬೃಹನ್ಮರದ ಶ್ರೀ ವಿರೂಪಾಕ್ಷಸ್ವಾಮಿಗಳವರು "ಗುರುವರ್ಗದ ಜನ್ಮತ" ಈ ವಿಷಯದಮೇಲೆಯೂ, ಹರಕುಣಿ ಬೃಹನ್ಮತಾಧೀಶರಾದ ಶ್ರೀ ಸಿದ್ಧ ಲಿಂಗಸ್ವಾಮಿಗಳವರು "ಧರ್ಮವು ಲೋಪವಾಗುವುದೋ? ನಮ್ಮ ಲೋಪವೋ" ಎಂಬ ವಿಷಯದಮೇಲೆಯೂ ಮಾತೃಶ್ರೀ ಭಾಗೀ ರಥೀಬಾಯಿಯವರು ಕಟಾಪ ಸೊಲ್ಲಾಪುರಇವರು 'ಗುರುಸ್ವರೂಪ' ಈ ವಿಷಯದಮೇಲೆಯೂ, ಬಾರ್ಸಿ "ವೀರಶೈವಗರ್ಜನಾ" ಸಂಪಾದಕರಾದ ಶ್ರೀ ಪರಾಂಡಕರ್ ಸ್ವಾಮಿಗಳವರು "ಗುರುವರ್ಗಾಂ ಚೀ ಸಂಘಟನಾ" ಎಂಬ ವಿಷಯದಮೇಲೆಯೂ ಕನ್ನಡ ಅನು ವಾದವನ್ನು ಶುತ್ತಕಟ್ಟಿ ಬೃಹನ್ಮರದ ಶ್ರೀ ಗುರುಮಲ್ಲಿಕಾರ್ಜುನಾಚಾರ್ಯ ರವರು ಅತ್ಯಂತ ಮನೋಹರವಾಗಿ ಭಾಷಣಮಾಡಿ ಸದ್ದ ಸಭೆಯಲ್ಲಿ ರಿಗೂ ಆತ್ಯಾನಂದವನ್ನುಂಟುಮಾಡಿದರು. ಬಳಿಕ ಸಭಾಸಂಚಾಲ ಕರ ಪ್ರಾರ್ಥನೆಯಂತೆ ಶ್ರೀ ಜಗದ್ಗುರು ಸನ್ನಿಧಿಯವರು ಮಹಾಪ್ರಸಾದ ಸದೃಪದೇಶವನ್ನಿತ್ತರು. ಸರ್ವಸಭಿಕರ ಆನಂದಕ್ಕೆ ಪಾರವೇ ಇರ ಲಿಲ್ಲ. ಆಮೇಲೆ ಕಾರ್ಯದರ್ಶಿಗಳು ಸರ್ವರ ಅಭಾರವನ್ನು ಸೂಸಿ ಸಮಾರೋಪಕಾರ್ಯಪ್ರಾರಂಭಿಸಿದರು. ಜಗದ್ವಾಚಾರ್ಯ ಜಯಘೋಷ ಮೊಡನೆ ಸಭೆಯು ಸಮಾಪ್ತವಾಯಿತು ಮುಂದಿನ ದಿನದ ಕಾರ್ಯಗ ಳನ್ನು ಆಗಲೇ ಕಾರ್ಯದರ್ಶಿಗಳು ಸೂಚಿಸಿದರು.

ಮರುದಿನ ಸೋಮವಾರ ತಾ॥ ೧೦-೧೦-೩೮ರ ಸುಧ್ಯಾನ್ನ ೩ ಘಂಟೆ ಸಮಯದಲ್ಲಿ ಸಭೆಯು ಮತ್ತೆ ಪ್ರಾರಂಭವಾಯಿತು. ಆದಂ ಭತಕಾರ್ಯಗಳು ಹಿಂದಿನ ದಿನದಂತೆಯೇ ಸಾಗಿದವು. ಆನಂತರ ಭೋಜನ ಕೆಗೆಯಿಸಿವ್ವಾಯಿತು. ಮಾತೃಶ್ರೀ ಭಾಗೀರಥೀಬಾಯಿ ಯವರು ಕಟಾಪ ಸೊಲ್ಲಾಪುರ ಇವರು ಸ್ವತ. ರಚಿಸಿಕಾದ "ಜಗದ್ವಾಚ್ಯಾರ್ಯಸ್ತುತಿ" ಯನ್ನು ಸನ್ನಿಧಿಯಲ್ಲಿ ಪರಿಸಿ ಸಾದಗಳ ಲ್ಲೆಸಿಸಿದರು. ಬಳಿಕ ಪಂಡಿತರ ಹಾಗೂ ಸ್ವಾಮಿಗಳ ವ್ಯಾಖ್ಯಾನ ಗಳು ಆರಂಭಿತವಾದವು ಕಾವ್ಯತೀರ್ಥ-ವ್ಯಾಕರಣಶಿರೋಮಣಿ-ವೇದಾಂ ತಾಚಾರ್ಯ ಸ್ವರ್ಣಪದಕಪ್ರಾಪ್ತ ಎಳಲೂರುವೀಟೆ ಬೃಹನ್ಮತಾಧೀಶ ರಾದ ಶ್ರೀ ನೀಲಕಂಠಶಿವಾಚಾರ್ಯಸ್ವಾಮಿಗಳವರು "ನಮ್ಮ ಹಿಗ್ಗಿ ಟ್ಟು" ಎಂಬ ವಿಷಯದಮೇಲೆಯೂ, ಪಂ॥ ವೈ. ನಾಗೇಶಶಾಸ್ತ್ರಿ ಗಳವರು 'ಗುರುಕರ್ತವ್ಯ' ಎಂಬ ವಿಷಯದನೇಲೆಯೂ, ಸುತ್ತ ಗಟ್ಟಿ ಬೃಹನ್ಮತಾಧೀಶರಾದ ಶ್ರೀ ಗುರುಮರ್ಯಾ ಶಿವಾಚಾರ್ಯಸ್ವಾಮಿ "ಗುರುವರ್ಗದ ಬಕ್ಕ" ಎಂಬ ವಿಷಯದಮೇಲೆಯೂ, ಹರ ಕುಣಿ ಬೃಹನ್ಮರದ ಶ್ರೀ ಸಿದ್ಧಲಿಂಗಸ್ವಾಮಿಗಳವರು "ಧರ್ಮ ಪ್ರಚಾರಕ್ಕೆ ಏನು ಬೇಕು?" ಎಂಬ ವಿಷಯದಮೇಲೆಯೂ, ಹೋಟಗಿ ಬೃಹನ್ಮರಾಧೀಶರಾದ ಬಾಲತಪಸ್ವಿ ಶ್ರೀ ಚೆನ್ನವೀರ ಶಿವಾಚಾರ್ಯಸ್ವಾಮಿಗಳವರು. 'ಆಚಾರ್ಯರೂ ಶಿವಭಿಕ್ಷೆಯೂ' ಎಂಬ ವಿಷಯದಮೇಲೆಯೂ ಆಕಿ ಮುತ್ತರಗಳಾದ ವ್ಯಾಖ್ಯಾನಗಳನ್ನಿತ್ತರು. ಸಭಿಕರು ಆನೋಭವಾದ ಇವರ ವ್ಯಾಖ್ಯಾನಗಳನ್ನು ಕೇಳಿ ಪದೇ ಪದೇ ಆನಂದಮಿಡನೆ ಕರತಾಡನಗಳನ್ನು ಮಾಡುತ್ತಲಿದ್ದರು.

ಬಳಿಕ ಕಾರ್ಯದರ್ಶಿಗಳೂ ಸಭಾಸಂಚಾಲಕರೂ ಆದ ಪರಕಪಿ ಶ್ರೀ ವಾಗೀಶಶಿವಾಚಾರ್ಯರು ಮಹಾಸ್ವಾಮಿಯ ಅಪ್ಪಣೆಯನ್ನೇರಿಗೆ ಕೆಲವು ರಣವುಗಳನ್ನು ಸಭೆಯಲ್ಲಿತ್ತರು. ಅವುಗಳಲ್ಲಿ ಸರ್ವಾನು ಮತಿಯಿಂದ ಪಾಸಾದವುಗಳವು:—೧ ಗತಿಸಿದ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಶಿವಯೋಗಿವೀರೇಶ್ವರಸಿಧನಸ ಕಲು ಪಾಗಿಯೂ ಪಾರಿಸಲು ಸಂಸ್ಮರಿಸಿ ಮುಂದಾಳುಗಳು ಆಸ್ಥಾ ನಾಪೇಕ್ಷ ಕದಲೆ ಇವರ ಸಧನದಸಲುಪಾಗಿಯೂ, ಬೆಂಗಳೂರಿನ ಸರ್ಾ. ಕೆ. ಸಿ ಪ್ರಭುಲಿಂಗಪ್ಪರ ಸಿವನದಸಲುಪಾಗಿಯೂ ಪಾರ್ಥಿಕ ಅನುತಾಪಸೂಚಕಸಮಾವೇಶಗಳಾಗುವುದು. (ಈ ರಣವನ್ನು ಮಂಡಿ ಸುವಾಗ ಸ್ವೀಕರಿಸಿದ ವಿಷಯಕ್ಕೆ ಸಭಿಕರೆಲ್ಲರೂ ಎದ್ದುನಿಂತು ತಮ್ಮ ಅನುತಾಪವನ್ನು ವ್ಯಕ್ತಪಡಿಸಿದರು.) ರಣವ್ಯ (೨)— ಸಂಸ್ಕೃತ ಸ್ಕೂಲಶಿಕ್ಷಕಇಪತ್ತಿ (ಬಾಪುವಾಡದಿಂದ ಯಿಸಿನ ಸಿಟಿಯ, ಒಂದು ಪ್ರಸ್ತಾವ ಕುತ್ತನುರಣಗಿಯಿಂದ) ಉತ್ತೀರ್ಣ ರಾಗಿ ಪಟ್ಟಚರಾಧಿಕಾರವನ್ನು ಸ್ವೀಕರಿಸುವ ಪಟ್ಟಗಳಿಗೆ ಮುಖಾಚಾ ರ್ಯರು ತಮ್ಮ ತಮ್ಮ ಗುರುಕುಲಗಳಲ್ಲಿ ಸ್ವಧರ್ಮಶಿಕ್ಷಣವನ್ನು ಕೊಡಿಸಬೇಕು. (ಕರ್ನಾಸುಮತಿಯಿಂದ ಪಾಸಾಯಿತು.) ರಣವ್ಯ ೩. (ಅ) ಪಟ್ಟಚರಾಧಿಕಾರಿಗಳು ತಮ್ಮ ಸ್ಥಾನಂತ ಸುತಾಧಿಕಾರಿ ಪಟ್ಟುಗಳಿಗೂ, ಮತ್ತು ಪ.ತಾಧಿಪತಿಗಳು ತಮ್ಮ ಗ್ರಾಮದ ಭಕ್ತ ಮಾಹೇಶ್ವರರ ಸಮುದಾಯಕ್ಕೂ ಧಾರ್ಮಿಕಶಿಕ್ಷಣವನ್ನು ಕೊಡಿಸ ಕ್ಕದ್ದು (ಸರ್ವಾನುಮತಿಯಿಂದ ಪಾಸಾಯಿತು.) ರಣವ್ಯ (೩) ಬಳ್ಳಾರಿಜಿಲ್ಲೆಯ ಪಟ್ಟಾಧಿಕಾರಿಗಳು ತಮ್ಮ ಜಿಲ್ಲೆಯ ಸಕಲ ವೀರಶೈವರ ಜಾನೇಸುಮಾರಿಯನ್ನು ತಯಾರುಮಾಡಿ ಸಂಸ್ಕಾರವ ವರು ನಿರ್ಣಯಿಸಿದ ಗುರುಕಾಣಿಕೆಯನ್ನು ಪ್ರತಿತರ್ಷನ್ನೂ ವಸೂ ಲುಮಾಡಿ ಸಂಸ್ಕಾರದವರ ಅಭಿಲಿಗೆ ಕಳುಹಿಸಿ ರಸೀದಿಪಡೆಯ ಬೇಕು. (ಸರ್ವಾನುಮತಿಯಿಂದ ಪಾಸಾಯಿತು.) ರಣವ್ಯ (೪)-ಪ್ರತಿವರ್ಷವೂ ಬಳ್ಳಾರಿಜಿಲ್ಲೆಯ ೯ ತಾಲೂಕುಗಳಲ್ಲಿ ವಿಠ್ಠಿಯಾ ವರೂ ಪ್ರಯಾಣವ ಸಾಕರ್ಕ್ಕವ್ಯ ಗ್ರಾಮವನ್ನು ನೋಡಿ ಅಲ್ಲಿ ಪಟ್ಟಚರಾಧಿಕಾರಿಸನ್ನೇಲವನ್ನು ನಡೆಸುಬೇಕು. (ಸರ್ವಾನು ಮತಿಯಿಂದ ಪಾಸಾಯಿತು.) ರಣವ್ಯ (೫)—ಬಳ್ಳಾರಿಜಿಲ್ಲೆಯ ಪ್ರತಿಗ್ರಾಮದ ಪಟ್ಟಚರಾಧಿಕಾರಿಗಳು ಸಂಸ್ಕಾರದವರು ಗೊತ್ತು ಮಾಡಿಕೊಟ್ಟ ತಮ್ಮ ಪ್ರಾಂತದ ಸರಹದ್ದು ಗಳಲ್ಲಿ ಸಿಂಹಾಸನದವರ ಆಜ್ಞೆಯಪ್ರಕಾರವಾಗಿ ಸಕಲವಿಧವರ್ದ್ಧಿಯೂ ವೀರಶೈವ ಧರ್ಮ ಸುಧಾರಣೆಯು ಕಾರ್ಯವನ್ನು ಮಾಡಬೇಕು. (ಸರ್ವಾನುಮತಿಯಿಂದ ಪಾಸಾಯಿತು.) ಕರಾವು (೬)—ಉಜ್ಜಯಿನೀ ಸಂಸ್ಥಾನದವ ತಿಯಿಂದ ೩ ತಿಂಗಳಗೊಮ್ಮೆ ವೀರಶೈವರ ಸಮಸ್ತ ಧರ್ಮರಾಜ್ಯಾಂಗ ವಿಚಾರಗಳನ್ನು ಕುರಿತು ಒಂದು ಗೆಜೆಟ್ಟನ್ನು ಹೊರಡಿಸಬೇಕು. ಇದರಲ್ಲಿ ಕೇವಲ ವೀರಶೈವರ ದಂಡಮಿಂಡನೆ ಮೊದಲಾದ ಧರ್ಮ ವಿಚಾರಗಳೇ ಇರಬೇಕು. ಇದಕ್ಕೆ "ಉಜ್ಜಯಿನೀ ಸದ್ಧರ್ಮಸಂ ಸ್ಥಾನ ಗೆಜೆಟ್" ಎಂದು ಹೆಸರಿರಬೇಕು. (ಸರ್ವಾನುಮತಿಯಿಂದ ಪಾಸಾಯಿತು.)

ಆಮೇಲೆ ಹುಬ್ಬಳ್ಳಿ ಹೈಕೋರ್ಟು ವಕೀಲರಾದ ಪಿ. ಆರ್ಯ. ಹಿರೇಮಠ ರವರು ಈ ರಣವನ್ನು ಸಭೆಯಲ್ಲಿಟ್ಟರು. ಮತ್ತು ಈ ವಿಚಾರವಾಗಿ ಬಹಳ ಕಳಕಳಿಯಿಂದ ವ್ಯಾಖ್ಯಾನವನ್ನು ಮಾಡಿದರು. ರಣವ್ಯ (೧)—ಸ್ವರ್ಗವಾಸಿ ಮೆ॥ ಸರ್ ಡಿ. ಎಫ್. ಮುಲ್ಲಾ, ಇವರು 'ಹಿಂದೂ ಲಾ ಲೇಟೆಸ್ಟ್ ಎಡಿಷನ್' ಎಂಬ ಕಾಯ್ದೆ ಗ್ರಂಥದಲ್ಲಿ ವೀರಶೈವಂಗಿಲ್ಲಾಗೂ ಸಾಲ್ವನೆಯ ವರ್ಣದ ಆದೇಶ ವನ್ನು ಹೊರಿಸಿ ಈ ಮತವನ್ನು ಹ್ಹಾಪಿಸಿದವನು ಬಸವನೆಂದು ಬರೆದಿರುವುದು ತೀವ್ರ ಖಂಡನೀಯಮೆತಲೂ, ನಮ್ಮ ವೀರಶೈವ ಸಿದ್ಧಾಂತನಿರ್ಣಯದಂತೆ ತಿದ್ದುಪಡಿ ಮಾಡಿಕೊಳ್ಳಬೇಕೆಂತಲೂ, ಈಗಿನ ಆ ಗ್ರಂಥಾಧಿಕಾರಿಗಳಿಗೆ ತಿಳುಹಿಸಿ ಆ ಬಗ್ಗೆ ಸರಿಯಾದ ವ್ಯವಸ್ಥೆಯಾಗುವಂತೆ ಯತ್ನಿಸುವುದು. (ಸರ್ವಾನುಮತಿಯಿಂದ ಪಾಸಾಯಿತು).

ಆ ಮೇಲೆ ಹೋಟಗಿ ಬೃಹನ್ಮತಾಧೀಶರಾದ ಬಾಲತಪಸ್ವಿ ಚನ್ನವೀರಶಿವಾಚಾರ್ಯಸ್ವಾಮಿಗಳವರು ಈ ರಣವನ್ನು ಸಭೆಯಲ್ಲಿ ಟ್ಟರು. ಕರಾವು (೧)—ಮೋಕ್ಷಕ್ಕೆ ಮೂಲಧಾತುವಾದ ದೀಕ್ಷಾ ಸಂಸ್ಕಾರವನ್ನು ಆವಶ್ಯಕ ವತ್ತಾಯದಿಂದ ಕೃತಿಯಲ್ಲಿ ತರಬೇಕು. ೮ ವರ್ಷದಿಂದ ೧೬ ವರ್ಷಗಳೊಳಗಾಗಿ ಪ್ರತಿಯೊಬ್ಬ ವೀರಶೈವ ಸ್ತ್ರೀ-ಪುರುಷರಿಗೆ ಧರ್ಮಪತಿಂಪರಾಗತ ಕುಲಗುರುಗಳಿಂದ ಶಿವದೀಕ್ಷೆ ಆಗಿಯೇ ತೀರಬೇಕು. (ಸರ್ವಾನುಮತಿಯಿಂದ ಪಾಸಾಯಿತು).

ಆ ಮೇಲೆ ನಿಷಯನಿಯಾಮಕ ಕಮಿಟಿಯವರ ವತಿಯಿಂದ ಸೊಲ್ಲಾಪುರದ ಪಂ॥ ವೇ॥ ಜಗದೀಶಶಾಸ್ತ್ರಿಗಳ ರಣವು ಎರಡನ್ನು ವರಕವಿ ಶ್ರೀ ವಾಗೀಶಶಿವಾಚಾರ್ಯರು ಸಭೆಯಲ್ಲಿಟ್ಟರು. ರಣವ್ಯ (೧)—ಪಟ್ಟಚರಾಧಿಕಾರಿಗಳಾಗಿ ಆರಿಸಲ್ಪಡುವ ವಟುವು ಆಯಾ ಮರವ ಗೋತ್ರ ಸೂತ್ರವನ್ನಿದ್ದು ಕುಲ ಶೀಲಸಂಪನ್ನನಾಗಿರಬೇಕು. (ಸರ್ವಾನುಮತಿಯಿಂದ ಪಾಸಾಯಿತು). ರಣವ್ಯ (೨)—ಪ್ರತ್ಯೇಕ ಪಟ್ಟಚರಾಧಿಕಾರಿಗಳು ತಮ್ಮ ಸಂಚಾರದಲ್ಲಿ ಜುಂಟಾಗಿ ರುವ ಧರ್ಮಜಾಗೃತಿ ಕಾರ್ಯಗಳ ರಿಪೋರ್ಟನ್ನು ತಮ್ಮ ವೀಕ ದವರ ಸನ್ನಿಧಿಗೆ ಕಳುಹಿಸುವುದು. (ಸರ್ವಾನುಮತಿಂದಿಂದ ಪಾಸಾಯಿತು).

ಆಮೇಲೆ ನಿಷಯನಿಯಾಮಕ ಕಮಿಟಿಯವರ ವತಿಯಿಂದ ವೇ॥ ಪಂ॥ ಚಿ॥ ಮಾ॥ ವೀರಭದ್ರಶಾಸ್ತ್ರಿಗಳ ರಣವು ಒಂದನ್ನು ಶ್ರೀ ವಾಗೀಶಶಿವಾಚಾರ್ಯರು ಸಭೆಯಲ್ಲಿಟ್ಟರು. ಕರಾವು (೧)— ಮದ್ರಾಸು ಪ್ರಾಂತದಲ್ಲಿ ಪ್ರಚಾರಕ್ಕೆ ಬಂದ 'ಎಂಡೋಮೆಂಟ್ ಬೋರ್ಡಿನ' ಕಾರ್ಯಗಳು ನಮ್ಮ ವೀರಶೈವರ ಮಂತೀಯ ಹಕ್ಕುಳ ಮರಗಳಿಗೆ ತುಂಬಾ ಹಾನಿಯನ್ನುಂಟುಮಾಡತಕ್ಕವಾಗಿ ರುವುದರಿಂದ ಅವುಗಳನ್ನು ನಮ್ಮ ವೀರಶೈವರ ಮಂತೀಯ ಮತ ಗಳಿಗೆ ಅನ್ವಯಿಸದಂತೆ ಮಾಡಬೇಕೆಂದು ಮದ್ರಾಸ್ ಗೌರ್ನರಿಗೆ ತಿಳುಹಿಸಿ ಪ್ರತಿಬಂಧಿಸಲು ಪ್ರಯತ್ನಿಸಬೇಕು. (ಸರ್ವಾನುಮತಿ ಯಿಂದ ಪಾಸಾಯಿತು).

ಆಮೇಲೆ ನಿಷಯನಿಯಾಮಕ ಕಮಿಟಿಯವರ ವತಿಯಿಂದ ಶಿರೋಳ ಹಿರೇಮಠದ ವೇ॥ ಪಂಚಾಕ್ಷರಶಾಸ್ತ್ರಿಗಳ ರಣವು ಒಂದನ್ನು ವಾಗೀಶಶಿವಾಚಾರ್ಯರು ಸಭೆಯಲ್ಲಿಟ್ಟರು. ರಣವ್ಯ (೧)—ಪುತಬೋಧಕಾರ್ಯವು ಸರ್ವತ್ರ ವಿಕರೊಸಣಾಗಿ ಸಾಗ ಬೇಕು. (ಸರ್ವಾನುಮತಿಯಿಂದ ಪಾಸಾಯಿತು).

ಇದೇಮೇಲೆಗೆ ನಿಷಯನಿಯಾಮಕಕಮಿಟಿಯವರ ವತಿಯಿಂದ ರಾಡಕುಂದಿ ಹಿರೇಮಠದ ಶ್ರೀ ಶಿವಯೋಗಿಶಿವಾಚಾರ್ಯರ ರಣ ವೊಂದನ್ನು ಕಾರ್ಯದರ್ಶಿಗಳಾದ ಶ್ರೀ ವಾಗೀಶಶಿವಾಚಾರ್ಯರು ಸಭೆಯ.ಲ್ಲಿರಿಸಿದರು ರಣವ್ಯ (೧)—ನಿಮ್ಮವಂತರನ್ನೇ ಆಧಿಕಾರಿ ಗಳನ್ನಾಗಿ ಮಾಡಬೇಕು. (ಸರ್ವಾನುಮತಿಯಿಂದ ಪಾಸಾಯಿತು)

ಬಳಿಕ ಮಾತೃಶ್ರೀ ಭಾಗೀರಥೀಬಾಯಿಯವರು ಕಟಾಪ ಸೊ ಲ್ಲಾಪುರ ಇವರು ಒಂದು ರಣವನ್ನು ತಂದರು. ಕರಾವು (೧)— ವೀರಶೈವಮತಾಶ್ರಿತರಾದ ಶ್ರೀಜಗದ್ಗುರುಪಂಚಾಚಾರ್ಯರಜಯಂ ತಿಗಳನ್ನು ಸಕಲ ವೀರಶೈವರೂ

ಮುಂದಿಟ್ಟರು. ತೀರಾವು (೧)—ಬಳ್ಳಾರಿ ಜಿಲ್ಲಾ ಪಟ್ಟಣಚರಾಧಿಕಾರಿ ಹಾರಿ ಸಮ್ಮೇಲವ ಕಾರ್ಯಗಳನ್ನು ಆಯಿನಿಲ್ಲ ತರುವುದಕ್ಕಾಗಿ ಕಾರ್ಯನಿರ್ವಾಹಕ ಕಮಿಟಿಯೊಂದನ್ನು ಸ್ಥಾಪಿಸಿಕೊಳ್ಳಬೇಕು. ಇವಕ್ಕೆ 'ಬಳ್ಳಾರಿ ಜಿಲ್ಲಾ ಪಟ್ಟಣಚರಾಧಿಕಾರಿ ಸಮ್ಮೇಲನ ಕಾರ್ಯ ನಿರ್ವಾಹಕ ಕಮಿಟಿ' ಎಂದು ಹೆಸರಿರಬೇಕು. (ಸರ್ವಾನುಮತ ಯಿಂದ ಪಾಸಾಯಿತು).

ಈ ಕಮಿಟಿಯ ಅನಪೃಕತೆ ಹೆಚ್ಚಾಗಿರುವುದರಿಂದ ಈಗಲೇ ಇದನ್ನು ಸ್ಥಾಪಿಸಬೇಕೆಂತಲೂ ಬಳ್ಳಾರಿಜಿಲ್ಲೆಯ ಪಟ್ಟಣಚರಾಧಿಕಾರಿ ಗಳೆಲ್ಲರೂ ಇದಕ್ಕೆ ಸದಸ್ಯರಾಗಿರತಕ್ಕದ್ದೆಂದೂ ಆನೇಕ ಸಭ್ಯರು ಸೂಚನೆಯನ್ನು ತಂದಮೇಲೆ ಪು॥ ನೈ. ನಾಗೇಶಶಾಸ್ತ್ರಿಗಳವರು ಸಮರ್ಥಿಸಿದರು. ಆಗಲೇ ಕಮಿಟಿ ಸ್ಥಾಪನೆಯಾಯಿತು. ಸದಸ್ಯರ ನಾಮಾವಳಿ ಮುಂತಾದ ವಿಸ್ತಾರವಿಷಯಗಳು ರಿಪೋರ್ಟಿನಲ್ಲಿ ಅಚ್ಚಾಗುವುವು.

ಈ ಸಮ್ಮೇಲನದಲ್ಲಿ ಶ್ರೀ ಜಗದ್ಗುರು ಮಹಾಸನ್ನಿಧಿಯಲ್ಲಿ "ಗುರುಸ್ತೋತ್ರ" ಎಂಬ ವಾಖ್ಯಾನವನ್ನು ಮಾಡಿ ತಮ್ಮ ನಿಜವಾದ ಗುರುಭಕ್ತಿ, ವಿದ್ವತ್ತು, ಸಮಾಜಸುಧಾರಣಾಕಳಕಳಿ ಇವುಗಳನ್ನು ಪ್ರಕಟಿಸಿದ್ದಕ್ಕಾಗಿ ಸೊಲ್ಲಾಪುರ ನಿವಾಸಿಗಳಾದ ಮಾತೃಶ್ರೀ ಭಾಗೀರಥೀಬಾಯಿಯವರು ಕಳಿಪಿ ಇವರಿಗೆ ಶ್ರೀಜಗದ್ಗುರುಗಳವರು ಸ್ವರ್ಣಪದಕಸಹಿತವಾಗಿ "ಆಚಾರ್ಯತತ್ವವಿಶಾರದೆ" ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು.

ಆಮೇಲೆ ಶ್ರೀ ಮಹಾಸನ್ನಿಧಿಯವರು ಸರ್ವರಿಗೂ ಬೋಧವಾ ಗುವಂತೆ ಧರ್ಮೋಪದೇಶವನ್ನೆ ಸಗಿದರು. ಸಮುದ್ರದಂತೆ ಇರುವ ಜನಸಂಪನ್ನಿಯು ಕೊನೆಯವರೆಗೂ ಬಹು ಶಾಂತವಾಗಿ ಸನ್ನಿಧಿಯ ಉಪದೇಶಾಮೃತವನ್ನು ಆಲಿಸಿತು. ಬಳಿಕ ಸ್ವಾಗತ ಸಂಘಾಧ್ಯಕ್ಷ ರಾದ ಶ್ರೀ ವಿರೂಪಾಕ್ಷಸ್ವಾಮಿಗಳವರು ಸರ್ವರ ಆಭಾರವನ್ನು ಮನ್ನಿಸಿದರು. ಕೊನೆಗೆ ಆಚಾರ್ಯರ ಮಂಗಳದೊಡನೆ ವಿಜಯಘೋಷ ಪೂರ್ವಕವಾಗಿ ಸಮ್ಮೇಲನ ಸಮಾರಂಭವು ಕೊನೆಗಂಡಿತು. ಸಮಾರಂಭದಲ್ಲಿ ನೆರೆದ ಜನಸ್ತೋಮಕ್ಕೆಲ್ಲಾ ಮಹಾಪ್ರಸ್ಕ ವನ್ನೆಸಗಿದ ಲಕ್ಷ್ಮೀಪುರದ ಜಹಗೀರದಾರ್ ಮಃ॥ ರಾ॥ ರಂಗನಗೌಡರಿಗೂ, ಯೊಸಳೇಟಿ ವೀರಮ್ಮನವರಿಗೂ, ಕಂತೆ ವೀರಯ್ಯನವರಿಗೂ, ಪೀಗರಗಡ್ಡಿ ಚಿಕ್ಕನೆಗಾಡರಿಗೂ ಈ ಸಮ್ಮೇಲನದಲ್ಲಿ ಭಾಗವಹಿಸಿ ಅತ್ಯಂತ ಶ್ರಮವಹಿಸಿ ಕೊನೆವರೆಗೂ ಸೇವೆಮಾಡಿದ ಸಕಲ ಸದ್ಭಕ್ತ ಮಾಹೇಶ್ವರರಿಗೂ ಜಗದಾಚಾರ್ಯರು ನಿತ್ಯಮಂಗಲವನ್ನಿತ್ತು ಸಲಸಲೆಂದು ಕೋರುವೆವು.

ಸ್ವಾಗತ ಸಂಘಾಧ್ಯಕ್ಷ, ವಿರೂಪಾಕ್ಷಸ್ವಾಮಿಗಳು.

ಶ್ರೀ ಶಿವಪುರಾಣಪ್ರವಚನ ಸಮಾಪ್ತಿಸಮಾರಂಭ,

ಹಾಗೂ ಬಳ್ಳಾರಿಯ ಸಂಕ್ಷೇಪ ಸಮಾಚಾರ.

ಪ್ರತಿಪರ್ವ ಪದ್ಧತಿಯಂತೆ ಇಲ್ಲಿಯ ಸುಪ್ರಸಿದ್ಧ ತಪಸ್ವಿಗಳಾದ ಮರಿಸ್ವಾಮಿಗಳವರ ಸುರದಲ್ಲಿ ಆ ಮರದ ಅಧ್ಯಕ್ಷರಾದ ವೇ॥ ಶ್ರೀ॥ ಮಲಿಬಸವಾರಾಧ್ಯರವರು ತಮ್ಮ ಸದ್ಭಕ್ತರ ಸಹಾಯ ವಿಶೇ ಷದಿಂದ ಅಕ್ಷಯಯುಜ ಶು॥ ೧ ರಿಂದ ವಿಜಯದಶಮಿ ಶುಭಮು ಹೂರ್ತ ಪರ್ಯಂತ ಶಿವಪುರಾಣ ಪ್ರವಚನವನ್ನು ನಡೆಯಿಸಿದರು.

ಮೊದಲೆ ಪ್ರಸಿದ್ಧ ಪಡಿಸಿದಂತೆ ಈ ೧೦ ದಿನಗಳವರೆಗೂ ಅತ್ಯಂತ ಅಮೋಘವಿಷಯಗಳಿಂದಿಗೆ ಶಿವಪುರಾಣಪ್ರತಿಪಾದನೆಯಾಯಿತು. ಈ ಪ್ರವಚನಕ್ಕೆ ಸಕಲಮತದ ಪ್ರಮುಖ ಮಹಾಶಯರೂ ಯಾವ ವಿಧವಾದ ಭೇದಭಾವನೆಯಿಲ್ಲದೆ ಆಗಮಿಸುತ್ತಿದ್ದರು. ಈ ಮಧ್ಯ ದಲ್ಲಿ ಪುರವೆ ಸದ್ಭಕ್ತರು ಗರ್ಜಾರಭನೆಯಿಂದ ಸಕಲ ಸದ್ಭಕ್ತ-ಮಾಹೇ ಶ್ವರನ್ನೂ ಇತರ ಮತೀಯರನ್ನೂ ತೃಪ್ತಿಗೊಳಿಸುತ್ತಲೇ ಇದ್ದರು.

ಈ ಶಿವಪುರಾಣವನ್ನು ಪ್ರತಿಪಾದಿಸುತ್ತಿಲಿದ್ದ ಮುದೇನೂರು ಬೃಹನ್ಮಠದ ಶ್ರೀ ನಾಗಿತಶಿವಾಚಾರ್ಯರು ಪ್ರವಚನ ಪ್ರಸಂಗ ದಲ್ಲಿಯೇ ಆನಂತ ವಿಷಯಗಳನ್ನು ತಿಳಿಯಪಡಿಸಿ ಭಕ್ತರ ಸಂದೇ ಹಗಳನ್ನು ದೂರಮಾಡುತ್ತಲಿದ್ದರು. ಪಟ್ಟಣದ ಆನೇಕ ವಿದ್ವಾಂ ಸರೂ ವಕೀಲರುಗಳೂ ಆನುಭವಿಗಳೂ ಇವರ ಪಾಂಡಿತ್ಯವನ್ನು ಕೊಂಡಾಡಿದರು.

ವಿಜಯದಶಮಿಯ ಶುಭಮುಹೂರ್ತದಲ್ಲಿ ಶ್ರೀ ಮಹಾಪೋ ಸಿಧಿ ಮರಿಸ್ವಾಮಿಗಳವರ ಪಲ್ಲಕ್ಕಿಯುತ್ಸವವು ಬಹು ವೈಭವದಿಂದ ಜರುಗಿತು. ಜನಗಳು ತಂಡೋಪತಂಡವಾಗಿ ಆಗಮಿಸುತ್ತಿದ್ದರು. ಮುಸಲ್ಮಾನರೂ ಸಹ ಈ ಸ್ವಾಮಿಪೀಠದ ವಿಷಯದಲ್ಲಿ ಸದ್ಭಕ್ತಿ ಯಿಂದ ನಡೆದುಕೊಳ್ಳುವುದನ್ನು ನೋಡಿದರೆ ಶ್ರೀ ಮರಿಸ್ವಾಮಿಗ ಳವರ ತಪೋಮಹಿಮೆಯು ಎಷ್ಟು ಅಗಾಧವಾಗಿರಬಹುದೆಂಬುದು ಪ್ರತ್ಯಕ್ಷವಾಗುವುದು.

ಈ ವರ್ಷ ಇಡೀ ಬಳ್ಳಾರಿಗೇನೇ ಒಂದು ವಿಧವಾದ ಕಳೆಯಿಂ ಟಿಗಿದೆ ಎಂದು ಹೇಳಬೇಕಾಗಿದೆ. ಒಂದುಕಡೆ ಪ್ರವಚನ, ಒಂದುಕಡೆ ಶ್ರೀ ಪಟ್ಟಣಚರಾಧಿಕಾರಿ ಮಹಾಸ್ವಾಮಿಗಳ ಸಮ್ಮೇಲನ, ಹೀಗಾಗಿ ನಗರಕ್ಕೇನೇ ಅಭೂತಪೂರ್ವ ಕೋಳಿಯುಂಟಾಗಿದೆ.

ಬಳ್ಳಾರಿ ಭಕ್ತರ ಸುದೈವವಶಾತ್ ಪಟ್ಟಣಚಾಧಿಕಾರಿ ಸಮ್ಮೇಲ ನಕ್ಕಿಂಯು ಬಹು ದೂರದಿಂದ ಮಹಾಮಹಾ ವಿದ್ವಾಂಸರೂ ಸ್ವಾಮಿ ಗಳೂ ಆಗಮಿಸಿದುವರು. ಸಮ್ಮೇಲನಕಾರ್ಯವು ಸಮಾಪ್ತಿಯಾ ದನೂ ಪಟ್ಟಣಪಲ್ಲಿ ತಡೆಯಿಲ್ಲದೆ ಸಮುಪದೇಶಗಳು ನಡೆಯುತ್ತಲಿವೆ. ತಾ॥ ೧೧-೧೦-೩೮ ನೇಯ ಮಂಗಳವಾರ ಶ್ರೀ ಮರಿಸ್ವಾಮಿಗಳವರ ಮಠದಲ್ಲಿ ಶ್ರೀ॥ ಷ॥ ಬ್ರ॥ ವಿದ್ವದ್ವರ, ಹಸುಗೋಡು ಪಟ್ಟದ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಧಾರ್ಮಿಕಸಭೆ ನಡೆಯಿತು. ಶ್ರೀ ನಾಗೇಶಶಿವಾಚಾರ್ಯರೂ, ಶ್ರೀ॥ ಷ॥ ಬ್ರ॥ ಬಾಲತಪಸ್ವಿ, ಹೋಟಿಗಿ ಚೆನ್ನವೀರಶಿವಾಚಾರ್ಯಸ್ವಾಮಿಗಳವರು "ಧಾರ್ಮಿಕಜೀವಿ" ಎಂಬ ವಿಷಯದಮೇಲೆಯೂ "ಆಚಾರ್ಯತತ್ತ್ವ ವಿಶಾರದೆ" ಯೆರಾದ ಮಾತೃಶ್ರೀ ಭಾಗೀರಥೀಬಾಯಿಯವರು ಕಳಿಪಿ ಸೊಲ್ಲಾಪುರ ಇವರು "ಸ್ತ್ರೀನೀತಿ" ಎಂಬ ವಿಷಯದ ಮೇಲೆಯೂ ವ್ಯಾಖ್ಯಾನಗಳನ್ನಿತ್ತರು. ಬುಧವಾರ ತಾ॥ ೧೨-೧೦-೩೮ ರಲ್ಲಿ ಮಃ॥ ರಾ॥ ಕುಪ್ಪಗಲ್ಲು ಅಯ್ಯಪ್ಪನವರ ಛತ್ರದಲ್ಲಿ ವರ ಕವಿ ಶ್ರೀ ನಾಗೇಶಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಬಾಲತಪಸ್ವಿ ಹೋಟಿಗಿ ಸ್ವಾಮಿಗಳವರು "ಮಾನಸಜನ್ಮದ ಸಾಫಲ್ಯ" ಈ ವಿಷಯದ ಮೇಲೆಯೂ, ಮಾತೃಶ್ರೀ ಭಾಗೀರಥೀಬಾಯಿಯವರು "ಪಾರಮಾರ್ಥವಲ್ಲಿ ಸ್ತ್ರೀಯರ ಆಧಿಕಾರ" ಎಂಬ ವಿಷಯದಮೇಲೆಯೂ ವ್ಯಾಖ್ಯಾನಗಳನ್ನಿತ್ತರು. ಅಧ್ಯಕ್ಷರು "ಸರ್ವಂ ಶಿವಮಯಂ ಜಗತ್" ಎಂಬ ವಿಷಯವಾಗಿ ಉಪನ್ಯಾಸವನ್ನಿತ್ತರು. ತಾ॥ ೧೩-೧೦-೩೮ ಗುರುವಾರ ಶ್ರೀ ಮರಿಸ್ವಾಮಿಗಳವರ ಮಠದಲ್ಲಿ ವಿದ್ವದ್ವರ ಶ್ರೀ॥ ಷ॥ ಬ್ರ॥ ನೀಲಕಂಠಶಿವಾಚಾರ್ಯರು ಎಸಳೂರು ಪೇಟೆ ಇವರ ಅಧ್ಯಕ್ಷತೆಯಲ್ಲಿ ಬಾಲತಪಸ್ವಿ ಹೋಟಿಗಿ ಶ್ರೀ ಸ್ವಾಮಿಗಳವರು "ಸತ್‌ಸಹವಾಸ" ಎಂಬ ವಿಚಾರವಾಗಿಯೂ, ಮಾತೃಶ್ರೀ ಭಾಗೀರಥೀಬಾಯಿಯವರು "ಸತ್ಸಂಗ" ಎಂಬ ವಿಷಯವಾ ಗಿಯೂ, ಶ್ರೀ॥ ಷ॥ ಬ್ರ॥ ಜೈನಾಪುರ ಸ್ವಾಮಿಗಳವರು 'ಧರ್ಮ' ವಿಷಯವಾಗಿಯೂ ವ್ಯಾಖ್ಯಾನಗಳನ್ನಿತ್ತರು. ಜನಗಳು ತಂಡೋಪತಂಡವಾಗಿ ಆಗಮಿಸಿದ್ದರು. ಅಧ್ಯಕ್ಷ ಸ್ವಾಮಿಗ ಳವರು "ವೀರಶೈವರ ಸೂತಕಶುದ್ಧಾರ" ಎಂಬ ವಿಷಯದಲ್ಲಿ ಆಮೋಘವಾದ ವ್ಯಾಖ್ಯಾನವನ್ನಿತ್ತರು. ಜನಗಳ ಆನಂದಕ್ಕೆ ಪಾರವೇ ಇಲ್ಲದಾಗಿದೆ. ಸ್ತ್ರೀಪುರುಷರು ತಂಡೋಪತಂಡವಾಗಿ ಉಪದೇಶಕ್ಕೆ ಬರುತ್ತಿರುವರು. ಮಹಾಜನಗಳ ಆಗ್ರಹದಮೇರೆಗೆ ತಾ॥ ೧೪-೧೦-೩೮ ರಲ್ಲಿಯೂ ಶ್ರೀ ನಾಗೇಶಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಮರಿಸ್ವಾಮಿಗಳವರ ಮಠದಲ್ಲಿ "ಶಿವದೀಕ್ಷಾ ಸಂಸ್ಕಾರ" ವಿಷಯವಾಗಿ ಶ್ರೀ ಬಾಲತಪಸ್ವಿ ಸ್ವಾಮಿಗಳವರ ಮತ್ತು ಪೂ॥ ನೀಲಕಂಠಶಿವಾಚಾರ್ಯರ ಹಾಗೂ ಮಾತೃಶ್ರೀ ಸ್ಕಾ॥ ಭಾಗೀರಥೀಬಾಯಿಯವರ ಇನ್ನೂ ಅನೇಕಮಂದಿ ವಿದ್ವಾಂಸರ ಹಾಗೂ ಮಹಾಸ್ವಾಮಿಗಳವರ ವ್ಯಾಖ್ಯಾನಗಳು ಜರುಗಿದವು. ಇಂದಿಗೆ ಬಳ್ಳಾರಿ ನಗರವಾಸಿಗಳೇ ಧನ್ಯರೆಂದು ಹೇಳಬೇಕಾಗಿದೆ. ಈ ಧರ್ಮಪ್ರಚಾರಕ್ಕೆಲ್ಲಾ ಶ್ರೀ ಮಹಾತಪೋನಿಧಿ ಮರಿಸ್ವಾಮಿಗ ಳವರ ಕೃಪೆಯೂ ಸದ್ಭಕ್ತ ಇದೇ ನಗರವಲ್ಲಿಯೇ ವಾಸಿಸುವ ಶ್ರೀ ಉಜ್ಜಯಿನೀ ಜಗದ್ಗುರು ಮಹಾಸನ್ನಿಧಿಯವರ ಆಶೀರ್ವಾದವೂ ಸದ್ಭಕ್ತರ ಉದಾರಾಂತಃಕರಣವೂ ಕಾರಣವಾಗಿರುವೆವೆಂದು ಬರೆ ಯಲು ಬಹು ಸಂತೋಷವೆನಿಸುವುದು.

ಓರ್ವ ಪ್ರತ್ಯಕ್ಷದರ್ಶಿ.

॥ ಜಯತು ಜಗದ್ಗುರು ಪಂಚಕಂ ॥

ದುರ್ದೈವೀಜಂಗವು.

ನಾನೋರ್ವ ಜಂಗಮ; ಕ್ರಮವಾಗಿ ವಿದ್ಯಾಭ್ಯಾಸ ಮಾಡಿ, ಪಂಡಿತನಾಗಿದ್ದೇನೆ. ನಾನು ವೇದಾಗಮೋಪನಿಷತ್ಪುರಾಣೇತಿಹಾ ಸಾದಿ ಸಕಲಶಾಸ್ತ್ರಗಳನ್ನೂ ಪರಿಶೀಲಿಸಿ, ಪಂಚಾಚಾರ್ಯರೇ ವೀರ ಶೈವಮತಸ್ಥಾಪನಾಚಾರ್ಯರೆಂದೂ, ಜಗದ್ಗುರುಗಳೆಂದೂ ಇರುವು ದೆನ್ನು ಒಪ್ಪಿದ್ದು, ಅಯಸ ಪೀಠಾಧಿಪತಿಗಳ ಮಹೋತ್ಸವವು ಜರುಗಿದ ಬೆಂಗಳೂರು, ಮೈಸೂರು, ಸೊಲ್ಲಾಪುರ, ಬಳ್ಳಾರಿ, ದಾವಣಗೆರೆ ಮೊದಲಾದ ಪಟ್ಟಣಗಳಲ್ಲಿ ಪ್ರವಚನವನ್ನು ಮಾಡಿ ಅದ್ವಿತೀಯನೆನಿಸಿಕೊಂಡಿದ್ದೆನು. ನನ್ನ ಪ್ರವಚನ ಶೈಲಿಯನ್ನೂ, ಮೃದು ಮಧುರವಾದ ಅರ್ಥಗಾಂಭೀರ್ಯವನ್ನೂ, ರಸಕೋಳಿ ಯನ್ನೂ ಕೇಳಿ ಸ್ವಮತ ಪರಮತೀಯರೂ ತಲೆದೂಗಿ ನನಗೆ ಅನೇಕ ಪ್ರಶಸ್ತಿಗಳನ್ನು ಕೊಟ್ಟಿರುತ್ತಾರೆ. ನಾನು ಪ್ರವ ಚನಗಳಲ್ಲಿ ಪಂಚಾಚಾರ್ಯರ ವಿಷಯವನ್ನೆತ್ತಿಕೊಂಡು, ಇವರೇ ಜಗದ್ಗುರುಗಳೆಂಬ ಬಗ್ಗೆ ಅನೇಕ ಉದಾಹರಣೆಗಳನ್ನು ಕೊಟ್ಟು ಸ್ಥಿರಪಡಿಸುತ್ತಿದ್ದೆನು. ನಾನು ಸದಾ ಪಂಚಾಚಾರ್ಯರ ಧ್ಯಾನದಲ್ಲಿಯೇ ಮೈಗ್ಗನಾಗಿದ್ದು, ಪಂಚಾಚಾರ್ಯರ ಪರಿಮ ಸೇನಕನಾಗಿದ್ದೆನು.

ಆದರೇನುಮಾಡುವುದು? ನನ್ನ ದುರದೃಷ್ಟದಿಂದ "ವಿನಾಶ ಕಾಲೇ ವಿಪರೀತಬುದ್ಧಿಃ" ಎಂಬಂತೆ ಮರ್ವಿಕರ್ತರ ಧನಪಿಶಾಚಿಯು ಪಾಶಕ್ಕೊಳಗಾಗಿ, ಯಾವ ಪಂಚಾಚಾರ್ಯರು ನನ್ನ ಹೃತ್ಕಮಲ ದಲ್ಲಿ ಸ್ಥಿರವಾಗಿ ನೆಲೆಸಿದ್ದರೋ ಅಂಥ ಮಹಾಮಹಿಮರನ್ನು ನಿಂ ದಿಸುತ್ತ ಈಗ ಬಸವಪಂಥಿಯನಾಗಿದ್ದೇನೆ. ಈ ನನ್ನ ಧೂರ್ತತನಕ್ಕೆ ನಾನು ಎಷ್ಟು ಹಳಿದರೂ ತೀರದಾಗಿದೆ. ನಾನೆಷ್ಟು ವಿದ್ವಾಂಸರಿದೆ ನಾದರೇನು? ಪ್ರವಚನಚತುರನಾದರೇನು? ಪಂಡಿತಕುಲತಿಲಕನಾ ದರೇನು? ಎಲ್ಲವೂ ಈ ನನ್ನ ಅವಿವೇಕತನದಿಂದ ವ್ಯರ್ಥವೇ ಸರಿ! ಈಗ ನನ್ನನ್ನು ಯಾರೂ ಮಾತನಾಡಿಸುವವರಿಲ್ಲ. ಪ್ರವಚನಗಳಿಗೆ ಯಾರೂ ಕರೆಯಿಸುವವರಿಲ್ಲ. ಯಾರುತಾನೇ ಕರೆಯಿಸಬೇಕು? ಇತ್ತ ಪಂಚಾಚಾರ್ಯಪಕ್ಷದವರಂತೂ ನಾನು ಬಸವಪಂಥಿಯೆಂದು ಮುಂದಿದ್ದರೊ ಮಾತನಾಡಿಸುವುದಿಲ್ಲ. ಇನ್ನು ವಿರಕ್ತ, ಬಸವ ಪಂಥಿಗಳಾದರೊ, ನಾನು ಮೊದಲು ಪಂಚಾಚಾರ್ಯರ ಪಕ್ಷವಿದ್ದಾಗ್ಗೆ ಪಂಚಾಚಾರ್ಯರೇ ಮತಸ್ಥಾಪಕರೆಂದು ಅನೇಕ ಆಧಾರಗಳಿಂದ ಸ್ಥಿರ ಪಡಿಸಿ, ಇವರನ್ನು ಮುಖಭಂಗಿತರನ್ನಾಗಿ ಮಾಡಿದ್ದೆನು. ಈಗ ಬಸವಪಂಥಿಯಾನಪೇರೆನು? ನನ್ನ ಈ ಅಸ್ಥಿರವಾದ ಮನಸ್ಥಾಂಜ ಲ್ಯಕ್ಕೆ ನಂಬದೆ ಇಂದು ಬಸವಪಂಥಿಯಾದರೂ ನಾಳೆ ಪಂಚಾ ಚಾರ್ಯ ಪಕ್ಷವನ್ನು ಪಹುಮನೆಂಬನುಮಾನದಿಂದ ನನ್ನನ್ನು ಮುಖ ವೆತ್ತಿ ಕೂಡಾ ನೋಡುವುದಿಲ್ಲ. ಹೀಗೆ ಇವರೂ ಕರಿಸುವುದಿಲ್ಲ. ಅವರೂ ಕರಿಸುವುದಿಲ್ಲ. ನನ್ನ ಪಾಂಡಿತ್ಯವೆಲ್ಲವೂ ನನ್ನ ಮನೆ ಯಬ್ಬಿಯೇ ಉಳಿದುಬಿಟ್ಟಿದೆ.

ಹಾಯ್ ದುರ್ದೈವೀ ಆಕಾಧನಪಿಶಾಚಿಯೇ! ನಿನ್ನ ಮಹಿಮೆ ಯನ್ನೆಷ್ಟು ವರ್ಣಿಸಿದರೂ ತೀರವಾಗಿದೆ. ನಿನ್ನ ಬಲಿಗೆ ಸಿಕ್ಕಿ ನಾನೂ ಸದ್ಯ ದುರ್ದೈವೀ ಜಂಗಮನಾದೆನೇ? ನಿನ್ನ ಪಾಂಡಿತ್ಯ ನನ್ನ ಪಲೋಕಿಸಿ ತಲೆಮಾಗುತ್ತಿದ್ದ ಮಹಾಜನರು, ನಿನ್ನ ಮಹಿ ಮೆಯಿಂದ ನನ್ನ ಮುಖಾನಲೋಕನವನ್ನೂ ಸಹ ಮಾಡದಾದರೇ? ಧನ್ಯ! ಧನ್ಯ!! ಆಕಾಧನಪಿಶಾಚಿಯೇ, ನೀನೇ ದಿಕ್ಕೆ! ಉಳ್ವಾಮ ಪಂಡಿತನೆಂದೆಸಿಕೊಂಡು, ಏಕನಿಷ್ಠೆಯಲ್ಲಿದ್ದ ನನ್ನನ್ನೂ ಕೂಡ ಇಷ್ಟು ಸುಲಭವಾಗಿಯೇ ನಿನ್ನ ಬಲಿಗೆ ಶಿಲ್ಕಿಸಿಕೊಂಡೆಯಾ! ಶಿವ ಶಿವಾ! ಏನು ಮಾಡಲಿ. ವೀರಶೈವ ಜಂಗಮಶ್ರೇಷ್ಠರೇ! ಇತ್ತ ನೋಡಿರಿ. ನನ್ನ ದೆರ್ದೆಯನ್ನು ಸ್ವಲ್ಪ ವಿಚಾರಿಸಿ. ಇದಕ್ಕೆಲ್ಲಾ ನನ್ನ ಅವಿವೇಕವೇ ಮುಖ್ಯ ಕಾರಣವಲ್ಲವೇ? ಆದಕಾರಣ ಯಾರೇ ಆಗಲಿ ಧರ್ಮಶಾಸ್ತ್ರಪದ್ಧತಿಯಂತೆಯೇ ಸುಮಾರ್ಗವ ಲಂಬಿಗಳಾಗಿರಬೇಕು. ಆದರಿಂದ ಎಷ್ಟು ಕಷ್ಟ ನಿಷ್ಠುರಗಳು ಬಾದರೂ ಹಿಂಜರಿಯಬಾರದು. ಹಾಗೆ ಹಿಂಜರಿದು ಈಮಾರ್ಗಿ ಗಳಾದರೆ, ನನ್ನ ಗತಿಯೇ ಆಗುವದೆಂಬಂಶವನ್ನು ಮಾತ್ರ ಮರೆ ಯಬೇಡಿರಿ. ಆದಷ್ಟು ಆಗಿಯೇ ಹೋಯಿತು. ಮುಂಚಿತೋದ ಕಾರ್ಯಕ್ಕೆ ಮಿಡಿಕಿದರೇನು ಪ್ರಯೋಜನ? ಮುಂದೆ ಮಾಡುವು ದೇನು? ಏನೂ ಇಲ್ಲ. ಛೇ! ಛೇ!! ಸಕಲಶಾಸ್ತ್ರ ಪಾರಂಗತ ನಾದ ನಾನು ಮೂಢರಂತೆ ಹೀಗೆ ಅಲೋಚನಾಶಕ್ತರನ್ನಾಗುವೆಮ ವಿಹಿತವಲ್ಲ. ನಾನು ಯಾವಾಗ ಜಗದ್ಗುರು ಪಂಚಾಚಾರ್ಯರ ಧರ್ಮಶಾಸ್ತ್ರಗಳಲ್ಲಿ ಏಕನಿಷ್ಠೆಯನ್ನಿಟ್ಟು ಸದಾ ಧ್ಯಾನಶಕ್ತರನಾಗಿ ದ್ದೆನೋ ಆವರನ್ನೇ ಶರಣುಹೋಗಿ ಸದಾ ಭಜಿಸುವೆನು. ಅಮೇ ಲಿನ ಮಾನಾಪಮಾನವು ಅವರೆದೇ ಹೊರತು ನನ್ನದೇನೂ ಇರು ವುದಿಲ್ಲ.

ಇತಿ ನಿರ್ಭಾಗ್ಯ ಜಂಗಮ.

॥ ನಮಃ ಪಂಚಜನಗ್ರುರುಭ್ಯಃ ॥

ಶ್ರೀಮದ್ವೀರಶೈವ ವಾಚನಾಲಯಸ್ಥಾಪನೆ

ಸಮಾರಂಭ, ಕನಕಗಿರಿ

ಕನಕಗಿರಿಯು ಪುರಾತನಸ್ಥಾನವು. ಇಲ್ಲಿ ವೀರಶೈವ ಜನ ಸಂಖ್ಯೆಯು ವಿಶೇಷವಾಗಿದ್ದರೂ ಇವರ ಅಜಾಗರೂಕತೆಯಿಂದ ವೀರಶೈವಧರ್ಮವು ಅತ್ಯಂತ ಕ್ಷೀಣಾವಸ್ಥೆಯನ್ನು ಹೊಂದಿರುವುದು ವೆಂದು ಬರೆಯಲು ವಿಶೇಷನೀಯವಾದ ಸಂಗತಿಯೇ ಸರಿ. ಇಲ್ಲಿ ಆಜ್ಞಾನಾವಸ್ಥೆ ಯಲ್ಲಿರುವ ವೀರಶೈವರ ಸುಧಾರಣೆಗಾಗಿ ಕೆಲ ಉತ್ಸಾಹಿ ಕಯಬಮಂಡಲಿಯವರು ಇವೇ ಆಶ್ವಯುಜ ಶು॥ ೧೦ ಶುಭದಿನದಲ್ಲಿ ಬಿಲ್ಲಂಕೊಂಡಿ ಮೂರದಲ್ಲಿ "ಶ್ರೀ ವೀರಶೈವ ವಾಚ ನಾಲಯ" ವೆಂಬ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ತಿಳಿಸಲು ಅತ್ಯಂತ ಸಂತೋಷವಾಗುತ್ತಿದೆ. ಪು॥ ೧೦ ಮಂಗಳವಾರ ಶುಭ ಸಮಯ ಸಾಯಂಕಾಲ ೩ ಘಂಟೆಗೆ ಸರಿಯೇ ಮಠದಲ್ಲಿ ಸರ್ವ ವೀರಶೈವರು ನೆರೆದಿದ್ದರು. ಈಶ್ವರಾರ್ಚನೆ ನಡೆದ ಬಳಿಕ ಸಭೆಯು ಪ್ರಾರಂಭಿಸಲ್ಪಟ್ಟಿತು. ಆದಿಯಲ್ಲಿ ನೇ॥ ಪಂಚಯ್ಯ ವೀರಭದ್ರಪ್ಪ ನವರು ಇಂದಾವರೆ ಗಾಯಿನದಿಂದ ಈಕಶ್ತವ ನಡೆದಮೇಲೆ ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ॥ ಷ॥ ಬ್ರ॥ ಪಂಚಾಕ್ಷರಶಿವಾಚಾರ್ಯರು ಬೃಹನ್ಮಠರವರು ವಹಿಸಿದರು. ಅನಂತರ, ಎಂ. ಎಸ್., ಹಿರೇಮಠ ರವರು 'ವಾಚನಾಲಯದ ಆವಶ್ಯಕತೆ' ಎಂಬ ಬಗ್ಗೆ ಸ್ಫೂರ್ತಿ. ದಾಯಕವಾದ ಭಾಷಣಮಾಡಿದರು. ತರುವಾಯ, ಎಂ.ಬಿ. ಶಾಟೀ ಲರು 'ಇಕಸಾಕ್ಕ' ದ ವಿಷಯವಾಗಿಯೂ ಮ॥ ರಾ॥ ಸಂಗಪ್ಪ ನವರು 'ವೃತ್ತಪತ್ರಿಕೆಗಳು' ಎಂಬ ವಿಷಯವಾಗಿಯೂ, ಜನ ಪರಿಣಾಮಕಾಗುವಂತೆ ಭಾಷಣಮಾಡಿದರು. ನಂತರ ಶ್ರೀ ಅಧ್ಯಕ್ಷ ರವರು ಸರ್ವ ವಿಷಯವನ್ನು ಪುಷ್ಟೀಕರಿಸಿ ಹೇಳಿದರು. ಆಮೇಲೆ ಸರ್ವಾನುಮತದಿಂದ ವಾಚನಾಲಯದ ಕಾರ್ಯಕಾರಿ ಮಂಡಳಿಯು ಈ ಕೆಳಗಿನಂತೆ ಆರಿಸಲ್ಪಟ್ಟಿತು. ಅನಂತರ ಈಕಸ್ತವನಪೂರ್ವಕ ಸಭೆಯು ವಿಸರ್ಜಿಸಲ್ಪಟ್ಟಿತು.

ಶ್ರೀಮದ್ವೀರಶೈವವಾಚನಾಲಯದ ಕಾರ್ಯಕಾರಿ ಮಂಡಳಿ.

ಅಧ್ಯಕ್ಷರು—ಶ್ರೀ॥ ಷ॥ ಬ್ರ॥ ಪಂಚಾಕ್ಷರಶಿವಾಚಾರ್ಯ, ಹಿರೇಮಠ.

ಉಪಾಧ್ಯಕ್ಷರು—ಮಃ॥ ದೊಡ್ಡ ಬಸಪ್ಪ ಛತ್ತದ.

ಕಕ್ತರಿ—ರಾಮೋಟಪ್ಪ ಬಿಲ್ಲಂ, ಕೊಂಡಿಮಠ.

ಉಪಕಕ್ತರಿ—ಮಡಿವಾಳಪ್ಪ, ಕೆಟ್ಟಿ.

ಕೋಶಾಧ್ಯಕ್ಷ—ಮರಿಬಸಪ್ಪ ಛತ್ತದ.

ಮೆಂಬರು—೧. ಎಂ. ಎಸ್. ಹಿರೇಮಠ, ೨. ಎಂ. ಬಿ. ಶಾಟೀಲ, ೩. ಹಿರಾಳಪ್ಪ ಗುಗ್ಗಳಕಟ್ಟಿ, ೪. ಸಮಗಂಡಿ ವೀರ ಭದ್ರಪ್ಪ, ೫. ಪ

ಪಂಚಾಚಾರ್ಯಪ್ರಭಾ.

೧೯೩೮ನೆಯ ಅಕ್ಟೋಬರ್ ತಾ|| ೩೧ನೇ ಸೋಮವಾರ

ಭಕ್ತಸ್ಥಲದ ಮಹತ್ತ್ವ.

ವೀರಶೈವಮತವೆಂಬ ಮಹಾಧ್ವಜವು ಭಕ್ತಿಸ್ಥಲವೆಂಬ ಭೂಮಿಯ ಆಧಾರದಲ್ಲಿ ನಿಂತಿರುತ್ತದೆ. ಭಕ್ತಿಯು ಎಂದು ಶಿಥಿಲವಾಗುವುದೋ ಅಂದೇ ವೀರಶೈವಸಿದ್ಧಾಂತ ಧ್ವಜವು ಮುರಿದುಬೀಳುವುದು. ಭಕ್ತಿಯಿಂದಲೆ ಸಾಮಾನ್ಯವಾಗಿ ಈಶ್ವರನಲ್ಲಿಟ್ಟಿರುವ ಪ್ರೇಮವೆಂದು ಅರ್ಥವಾದರೂ ವೀರಶೈವಮತದಲ್ಲಿ ಇದಕ್ಕೊಂದು ವೈಶಿಷ್ಟ್ಯವು ಕೊಡಲ್ಪಟ್ಟಿರುತ್ತದೆ. ಶಕ್ತಿಯೆಂಬುದೊಂದು ಸದರ್ಥವು ಸಮವಾಯಸಂಬಂಧದಿಂದ ಪರಶಿವನಲ್ಲಿ ಸ್ಥಿರವಾಗಿರುವೆ ದೆಂದು ಪ್ರತಿಪಾದಿಸುವುದರಿಂದ ಶಿವನಲ್ಲಿರುವ ಜಗಜ್ಜನನಿಯಾದ ಆ ಶಕ್ತಿಯೇ ಶಿವನ ಅಂಶಭೂತವಾದ ಲಿಂಗ (ಜೀವ) ಸ್ಥಲವನ್ನಾಶ್ರಯಿಸಿ ಭಕ್ತಿಯೆಂಬ ವರ್ತನ ಸಂಸಾರಸಮುದ್ರದಲ್ಲಿ ಮುಳುಗುತ್ತಿರುವ ಜೀವರನ್ನು ಪಾರು ಮಾಡಲು ಹಡಗದಂತೆ ಸಹಾಯಕವಾಗಿರುವಳು. ಪರಮೇಶ್ವರನು ಶಕ್ತಿವಿಶಿಷ್ಟನಾಗದಿದ್ದಲ್ಲಿ ಜಗತ್ತಿನ ಸೃಷ್ಟಿಸ್ಥಿತ್ಯಾದಿ ಕಾರ್ಯಗಳು ಹೇಗೆ ನಡೆಯಲಾರವೋ ಹಾಗೆಯೇ ಶಕ್ತಿಯು ಭಕ್ತಿರೂಪದಿಂದ ಪರಿಣಾಮವನ್ನು ಹೊಂದಿ ಅಂಗ (ಜೀವ) ಸ್ಥಲವನ್ನಾಶ್ರಯಿಸದಿದ್ದಲ್ಲಿ ಪರಾಮಾಸಂಬಂಧದಿಂದ ಜೀವರಿಗುಂಟಾದ ಪಾಶವೀಯ ಬಂಧವು ತೊಲಗಿ ಶಿವನಲ್ಲಿ ಸಾಮರಸ್ಯವುಂಟಾಗಲಾರದು. "ಮಲಾವೃತ ಸ್ಯಂಸಾರೀ" ಎಂಬ ಶಿವಸೂತ್ರದಂತೆ ಆತ್ಮನನ್ನು ಆಣವಾದಿ ಮಲಗಳು ಎಂದೂ ಆವರಿಸುವವೋ ಅಂದೇ ಸಂಸಾರಿಯೆನಿಸುವನು. ಸರ್ವವು ಪರಿಯಂತ ಬಿಡುಗಡೆ ಹೊಂದುವವರೆಗೆ ಪಾಂಡ್ಯವು ಇದ್ದೇ ಇರುವಂತೆ ಈ ಮಲಗಳ ಆವರಣವು ನಾಶವಾಗುವವರೆಗೆ ಕಿಂಚಿಜ್ಞತ್ವಾದಿಗಳು ನಷ್ಟವಾಗುವುದಿಲ್ಲ. ಎಂದಿನಿಂದ ಭಕ್ತಿಯು ಉದಿಸುವುದೋ ಅಂದಿನಿಂದ ಈ ಮಲಾವರಣಗಳು ನಾಶಹೊಂದುತ್ತ ಬರುತ್ತವೆ. ಭಕ್ತಿಯುದಿಸಿದ ನೇಲೆ ಕರ್ಮಕ್ಷಯವಾಗುವದು. ಕರ್ಮಕ್ಷಯವಾದ ಮೇಲೆ ಬುದ್ಧಿಯು ದರ್ಶನದಂತೆ ನಿರ್ಮಲವಾಗುವದು. ನಿರ್ಮಲಬುದ್ಧಿಯಿಂದ ವಿಚಾರಶಕ್ತಿಯೂ, ವಿಚಾರದಿಂದ ದರ್ಶಕ್ಷಯವೂ, ದರ್ಶಕ್ಷಯದಿಂದ ಜ್ಞಾನೋದಯವೂ ಉಂಟಾಗುವವು. ಪ್ರಥಮಸೋಪಾನವೆನಿಸಿದ ಭಕ್ತಿಸ್ಥಲವನ್ನಾಶ್ರಯಿಸದಿದ್ದವನಿಗೆ ಮುಂದಿನ ಯಾವ ಸ್ಥಲವೂ ಸಿದ್ಧಿಸುವುದಿಲ್ಲ. ಸರ್ವಾಧಾರವಾದ ಇಂತಹ ಭಕ್ತಿಸ್ಥಲದಲ್ಲಿ ವೀರಶೈವಕ್ರಿಯಾಚಾರಜ್ಞಾನಾಚಾರಗಳು ಅಡಕವಾಗಿವೆ. ವೀರಶೈವಸಿದ್ಧಾಂತವನ್ನ ಪಲಂಬಿಸಿದವನಿಗೆ ನಾತ್ರ ಈ ಭಕ್ತಸ್ಥಲವು ಸಿದ್ಧಿಸುವುದಲ್ಲದೆ ಇತರರಿಗೆ ಸಿದ್ಧಿಸುವುದಿಲ್ಲ. ಭಕ್ತಸ್ಥಲವು ಸಿಂಹಸ್ಥಲಾದಿ ಪಂಚದಶವಿಧರೂಪವಾಗಿ ವಿಭಾಗವನ್ನು ಹೊಂದಿಬರುತ್ತದೆ.

ಬಸುಜನ್ಮಶತೈಃ ಪುಣ್ಯೈಃ ಪ್ರಕ್ಷೀಣೇ ಪಾಪಪಂಜರೇ ।
ಬುದ್ಧ್ಯಂತಕರಣೋಃ ದೇಹೇ ಪಿಂಡಕಜ್ಞೇನ ಗೀಯತೇ ॥

ಅನೇಕಜನ್ಮಗಳಲ್ಲಿ ಯಜ್ಞಾಯಾಗಾದಿ ಪುಣ್ಯಕರ್ಮಗಳಿಂದ ವಿಪುವು ಕ್ಷೀಣವಾಗಿ ಆತ್ಮನಲ್ಲಿ ಶಿವಭಕ್ತಿಯು ತಲೆದೋರುವುದೇ ಪಿಂಡಸ್ಥಲನೆನಿಸುವದು.

ಶರೀರಾತ್ಮವಿಶೇಷೇಣ ಪಿಂಡಜ್ಞಾನೇ ಶ ಕಥ್ಯತೆ ॥

ದೇಹವು ನಿತ್ಯವಾದುದಲ್ಲ. ಆತ್ಮನೋರ್ವನೇ ನಿತ್ಯನು. ಆತ್ಮನು ದೇಹಕ್ಕಿಂತಲೂ ಭಿನ್ನನು ಆತ್ಮನಿಗಿಂತಲೂ ಶಿವನು ಭಿನ್ನನು. ಶಿವನು ಎಲ್ಲ ಆತ್ಮರುಗಳಿಗೂ ವೈರಕನಾಗಿರುವನೆಂದು ತಿಳಿಯುವುದೇ ಪಿಂಡಜ್ಞಾನಸ್ಥಲವು.

ಸಂಸಾರಯೇಯ-ತಾಬುದ್ಧಿರ್ಜಾಯತೇ ಪಾಸಪಾಬಲಾತ್ ॥

ಜನನಮರಣರೂಪಸಂಸಾರಚಕ್ರದಲ್ಲಿ ಸುತ್ತುತ್ತ ತಾಪತ್ರಯ ಪಂಚಕ್ಲೇಶ ಮೊದಲಾದ ಅಲೆಗಳ ಹೊಡೆತದಿಂದ ದುಃಖಿಯಾಗಿ ವೈರಾಗ್ಯಹುಟ್ಟಿ ಸಂಸಾರಬಲ್ಲಿ ಜುಗುಪ್ಸೆ ಪಡೆಯುವುದೇ ಸಂಸಾರಹೇಯಸ್ಥಲವು.

ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಂ ॥

ಶಿವಪೂಜಾಧಿಕಾರಕ್ಕೂ ವೇದಾಧ್ಯಯನಾಧಿಕಾರಕ್ಕೂ ಸಾಧನವಾದ ಸಂಸ್ಕಾರವೇ ದೀಕ್ಷೆಯೆನಿಸುವದು. ಗುರುವು ಶಿಷ್ಯನ ಶಕ್ತಿಪಾತವನ್ನು ಪರಿಶೀಲಿಸಿ ಅವಶ್ಯನುಗುಣವಾದ ದೀಕ್ಷೆಯನ್ನು ಮಾಡುವನು. ಇದೇ ಗುರುಕಾರುಣ್ಯ ಸ್ಥಲವು.

ಸ್ಥಾವಕಂ ಶೈಲಜಂ ಪಾಸಿ ಚೋತ್ಯಕಾಂತಮುಖಾ ತು ವಾ ।
ಪಾಣಾ ವಾ ಸೂರ್ಯಕಾಂತಾ ವಾ ಲಿಂಗಮೇಕಂ ಸಮೂಪತೇತ್ ॥

ಶಿವದೀಕ್ಷೆಯಿಂದ ದೇಹವು ಪ್ರಾಣವು ಮನಸ್ಸು ಪರಿಶುದ್ಧಿ ಹೊಂದಿದ ಬಳಿಕ ಆಚಾರ್ಯನು ಪಡಲ್ಪನೋಧನೆಯಿಂದ ಸಂಸ್ಕರಿಸಲ್ಪಟ್ಟ ಪಂಚಸೂತ್ರಘಟಿತ ಶಿವಲಿಂಗವನ್ನು ಶಿಷ್ಯನು ಶರೀರದಲ್ಲಿ ಧರಿಸುವುದೇ ಲಿಂಗಧಾರಣ ಸ್ಥಲವು.

ಭಕ್ಷ್ಮಧಾರಣಸಂಯುಕ್ತಃ ಪವಿತ್ರೋ ನಿಯತಾಶಯಃ ॥

ತಾಸ್ರೋಕ್ತವಾಗಿ ಸಿದ್ಧಮಾಡಿದ ಭಸ್ಮವನ್ನು ಉತ್ತಮಾಂಗಾದಿ ದ್ವಾತ್ರಿಂಶತ್ಸ್ಥಾನಗಳಲ್ಲಿ ಜಲನಿಶ್ರವಾಗಿ ಮಂತ್ರಪೂರ್ವಕ ಧರಿಸುವುದೇ ಭಸ್ಮಧಾರಣಸ್ಥಲವು.

ಶಿವಯೋಗೀಶ್ವರೋಕ್ತಸ್ಯ ರುದ್ರಾಕ್ಷಸ್ಯ ಧಾರಯೇದ್ಬುಧಃ ॥

ರುದ್ರಾಕ್ಷಗಳನ್ನು ಪೂಜಿಸಿ ನಿತ್ಯಕ್ರತ್ವಾಗಿ ಶಿಖಾದಿಸ್ಥಾನಗಳಲ್ಲಿ ಮಂತ್ರಪುರಸ್ಸರವಾಗಿ ಧರಿಸುವುದೇ ರುದ್ರಾಕ್ಷಧಾರಣಸ್ಥಲವು.

ಸರ್ವಕೋಟಿಷು ಮಂತ್ರೇಷು ಮಂತ್ರಃ ಪಂಚಾಕ್ಷರೋ ಮಹಾನ್ ॥

ದೀಕ್ಷಾಕಾಲದಲ್ಲಿ ಗುರುವಿನಿಂದುಪದೇಶಿಸಲ್ಪಟ್ಟ ಪಂಚಾಕ್ಷರೀಮಂತ್ರವನ್ನು ಅಂಗನ್ಯಾಸ ದೇಹನ್ಯಾಸಾದಿ ಪೂರ್ವಕವಾಗಿ ಜಪಿಸುವುದೇ ಪಂಚಾಕ್ಷರಜಪಸ್ಥಲವು.

ಯದ್ಯತ್ಕೇಶ್ವರದೇಸ್ಯೇಷ್ಟ ತದ್ಗೃಹಾಣ ಪರಿತ್ಯಜೇತ್ ।
ನಾನ್ಯದೀಯಾರ್ಚಕಾತ್ಕಾರ್ಯಾನ್ ಪೂಜಾಕಾಲೇ ನಿರೀಕ್ಷಯೇತ್ ॥

ಯಾವಾಗ ಗುರುಮುಖದಿಂದ ಲಿಂಗಧಾರಣಪೂರ್ವಕವಾದ ಶಿವದೀಕ್ಷೆಯನ್ನು ಹೊಂದುವನೋ ಆದಿನಿಂದ ತನ್ನ ಮತಾಚಾರಗಳನ್ನು ಅನುಸರಿಸಿ ವರ ನೆಲೆಯಲ್ಲಿ ವಾಸಮಾಡಬೇಕು. ಅಂದಿನಿಂದ ತನ್ನೆಯಲ್ಲಿಯೇ ಭೋಜನಮಾಡಬೇಕು. ಯಾರ ಮನೆಗಳಲ್ಲಿ ಶಿವೇತರ ದೇವತೆಗಳಿರುವನೋ ಅಂಥವರ ಮನೆಗಳಲ್ಲಿ ವಾಸಮಾತ್ರಕೂಡದು. ಸ್ಥಾವರಲಿಂಗಗಳಿಗಾಗಲಿ ಭಸ್ಮರುದ್ರಾಕ್ಷಧಾರಕರಾದ ಶಿವಭಕ್ತರಿಗಾಗಲಿ ಅಪಾಯವು ಸಂಭವಿಸುವ ಹಾಗಿದ್ದರೆ ಪರಿಹಾರವನ್ನಾಡಬೇಕು. ಜನನಸೂತಕ ಪ್ರೇತ ಸೂತಕಾದಿಗಳಲ್ಲಿ ಶಿವಲಿಂಗಪೂಜೆಯನ್ನು ಬಿಡಕೂಡದು. ವೀರಶೈವಸ್ತ್ರೀಯಳು ರಜಸ್ವಲೆಯಾದರೆ ಲಿಂಗವು ಅಶುಚಿಯಾಗುವದೆಂದು ತಲೆದು ಲಿಂಗವನ್ನು ತೆಗೆದಿಡದೆ ಲಿಂಗ ಪೂಜೆಯನ್ನು ಮಾಡಿ ಲಿಂಗಪ್ರಸಾದವನ್ನು ಸ್ವೀಕರಿಸಬೇಕು. ಸಾಲ್ಕನೆಯ ದಿವಸ ಸ್ನಾನಮಾಡಿದ ನೇಲೆ ಪಾಕಾದಿಕಾರ್ಯಗಳನ್ನು ಮಾಡಲು ಯೋಗ್ಯಳಾಗುವಳು. ವೀರಶೈವನು ತಾಚಾರಗಳನ್ನು ಅನುಸರಿಸಿರುವ ತಮ್ಮ ತಮ್ಮ ಜಾತಿಯನರಲ್ಲಿ ಪಾತ್ರ ವಿವಾಹಸಂಬಂಧವನ್ನು ಮಾಡಬೇಕು. ಇದೇ ಬತ್ತಪಾರ್ಗತ್ರೈಯಾಸ್ಥಲವು.

ಏವಮಾಚಾರಸಂಯುಕ್ತೋ ವೀರಶೈವೋ ಮಹಾವ್ರತೀ ।
ಪೂಜಯೇತ್ಸರಯಾ ಭಕ್ತ್ಯಾ ಗುರುಂ ಲಿಂಗಂ ಚ ಸರ್ವದಾ ॥

ಶಿವಲಿಂಗವನ್ನು ಸ್ಥಾಪಿಸಬೇಕು. ಶಿವನು ಕಣ್ಣಿಗೆ ಕಾಣದಿರುವುದರಿಂದ ಗುರುರೂಪದಿಂದ ಪ್ರತ್ಯಕ್ಷನಾಗಿರುತ್ತಾನೆ. ಸಂಸಾರಸಮುದ್ರವನ್ನು ದಾಟಿಸುವ ಶಿವಜ್ಞಾನವನ್ನು ಕೊಡುವ ಗುರುವನ್ನು ಶಿವಸಂಜ್ಞೆ ಕಾಣಬೇಕು. ಗುರುವಿನ ಆಜ್ಞೆಯನ್ನು ಅತಿಕ್ರಮಿಸದೆ ನಡೆಯುವುದೇ ಉಭಯಸ್ಥಲವು.

ಯಥಾ ಗುರೌ ಯಥಾ ಲಿಂಗೇ ಭಕ್ತಿರ್ಮಾನಾ ಪರಿಕರ್ಪತೇ ।
ಜಂಗಮೇ ಚ ತಥಾ ಭಕ್ತಿಂ ಭಕ್ತಿಂ ಕುರ್ಯಾದ್ವಿಚಕ್ಷಣಃ ॥

ಗುರುಸನ್ನಿಧ್ಯಿಯೂ ಶಿವನಲ್ಲಿಯೂ ಭಕ್ತಿಯನ್ನಿಟ್ಟಿರುವ ಹಾಗೆ ಜಂಗಮಸನ್ನಿಧ್ಯಿಯೂ ಭಕ್ತಿಯನ್ನಿಟ್ಟಿರಬೇಕು. ಇದೇ ತ್ರಿವಿಧಸಂಪತ್ತಿಸ್ಥಲವು.

ಪಾದೋದಕಂ ಯಥಾ ಭಕ್ತ್ಯಾ ಸ್ವೀಕರೋತಿ ಮಹೇಶಿತಃ ।
ತಥಾ ನಿತ್ಯಾತ್ಮನೋನಿತ್ಯಂ ಗುರುಜಂಗಮಯೋರಪಿ ॥

ಶಿವಲಿಂಗಪ್ರಸಾದ ಪಾದೋದಕಗಳನ್ನು ಸ್ವೀಕರಿಸಿನಂತೆ ಗುರುಜಂಗಮರ ಪಾದೋದಕಪ್ರಸಾದಗಳನ್ನು ಸ್ವೀಕರಿಸುವುದೇ ಪ್ರಸಾದಸ್ವೀಕಾರಸ್ಥಲವು.

ದಾನಂ ಕುರ್ಯಾದ್ಯಥಾಶಕ್ತಿ ತತ್ಪ್ರಸಾದಯತಸ್ಯವಾ ॥

ಶಿವನಿಗೂ ಗುರುವಿಗೂ ಜಂಗಮನಿಗೂ ಯಥಾಶಕ್ತಿ ದಾನಮಾಡುವುದೇ ಸೋಪಾಧಿದಾನಸ್ಥಲವು.

ಫಲಾಭಿಸಂಧಿನಿರ್ಮುಕ್ತನಿಶ್ಚಿತಾರ್ಪಿತಕಾಂಕ್ಷಿತಂ ।
ಯಾವ ಫಲಾಪೇಕ್ಷೆಯಿಲ್ಲದೆ ಶಿವಾರ್ಪಿತವಾಗಿ ಮಾಡುವ ದಾನವೇ ನಿರುಪಾಧಿದಾನಸ್ಥಲವು.

ಆದಾತೃದಾತೃದೇಯಾನಾಂ ಶಿವಭಾವಂ ವಿಚಿಂತ್ಯಹಿ ॥

ಕೊಡತಕ್ಕವನೂ ತೆಗೆದುಕೊಳ್ಳತಕ್ಕವನೂ ಕೊಡಲ್ಪಡುವ ಪದಾರ್ಥವೂ ಈ ಮೂರೂ ಶಿವಸ್ವರೂಪವೆಂದು ತಿಳಿದು ದಾನಮಾಡುವ ದಾನವೇ ಸಹಜದಾನಸ್ಥಲವು.

ಹೀಗೆ ಹದಿನೈದು ಸ್ಥಲಗಳ ಆಚರಣೆಯುಳ್ಳವನು ಭಕ್ತನೆನಿಸುವನು. ಈ ಭಕ್ತಿಸ್ಥಲವು ಸಿದ್ಧಿಯಾದ ಹೊರತು ಮುಂದಿನ ಸ್ಥಲಗಳು ಸಿದ್ಧಿಸಲಾರವು.

ಹೀಗೆ ವೀರಶೈವಸಿದ್ಧಾಂತದಲ್ಲಿ ಪಿಂಡಾದಿ ಜ್ಞಾನ ಶೂನ್ಯಾಂತವಾದ ೧೦೧ ಸ್ಥಲಗಳು ಮುಮುಕ್ಷುವುರುಷನಿಗೆ ವಿಹಿತಗಳಾಗಿರುತ್ತವೆ. ಆದುದರಿಂದ ಪ್ರತಿಯೊಬ್ಬನೂ ವಿವೇಕಪೂರ್ವಕವಾಗಿ ಗುರುಗಳಲ್ಲಿ ದೀಕ್ಷಾಪೂರ್ವಕ ಲಿಂಗಧಾರಣಾದಿಗಳನ್ನು ಪಡೆದು ಭಕ್ತಿಸ್ಥಲವನ್ನಾಶ್ರಯಿಸಿ ವೀರಶೈವ ಎಂಬ ನಾಮವನ್ನು ಅನ್ವರ್ಥಕವಪಡಿಸಿಕೊಳ್ಳುವುದೇ ಪ್ರತಿಯೊಬ್ಬ ವೀರಶೈವನ ಪ್ರಥಮ ಕರ್ತವ್ಯವಾಗಿದೆ.

ಒಳದೇಶದ ವೃತ್ತಾಂತಗಳು.

ರಾಜಕುಮಾರ ಶ್ರೀ ಜಯಚಾಮರಾಜ ಒಡೆಯರವರು ಕಳೆದ 26 ನೆಯ ತಾರೀಖಿನ ಮಧ್ಯಾಹ್ನ ಶ್ರೀ|| ಡಿ. ಎಚ್. ಎಲ್ವಿಸ್ ಮತ್ತು ಶ್ರೀ ಮೇಕ್ರಿ ಸಾಹೇಬರೂ ಡನೆ ಸೆಷನ್ಸ್ ನ್ಯಾಯಾಸ್ಥಾನಕ್ಕೆ ದಯಮಾಡಿಸಿ ಖೂನಿ ಮೊಕದ್ದಮೆಯನ್ನು ಪರಿಶೀಲಿಸಿದರು.

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು "ಶ್ರೀ ಕಾಶೀನಾಥಗ್ರಂಥಮಾಲೆ" ಯಲ್ಲಿ ಪ್ರಕಟವಾಗಿದಿನ ಎಲ್ಲ ಗ್ರಂಥಗಳನ್ನೂ ರಾಜಧಾನಿಯಲ್ಲಿರುವ ಪಬ್ಲಿಕ್ ಲೈಬ್ರರಿಗೂ, ರಾಮಕೃಷ್ಣಾಶ್ರಮದ ಲೈಬ್ರರಿಗೂ ಮತ್ತು ಮದ್ರಾಸ್ ನಗರದಲ್ಲಿರುವ ಇಂಡಿಯಾ ಶಿಲಾಶಾಸನ ಇಲಾಖೆಯ ಲೈಬ್ರರಿಗೂ ಉಚಿತವಾಗಿ ಕಳುಹಿಸಿದ್ದರಿಂದ, ಆಯಾ ಲೈಬ್ರರಿಯ ಮುಖ್ಯಾಧಿಕಾರಿಗಳೆಲ್ಲರೂ ಪಂಡಿತರಿಗೆ ವಂದನ ಸಮರ್ಪಣಪೂರ್ವಕವಾಗಿ ಸಂತೋಷಪತ್ರದರ್ಶಕ ಪತ್ರಗಳನ್ನು ಬರೆದುಕೊಂಡಿರುವರು.

ಲಂಡನ್ನಿನಲ್ಲಿರುವ ಮೈಸೂರು ಟ್ರೇಡ್ ಕಮಿಷನರ್ ರವರು ಮೈಸೂರು ಸಂಸ್ಥಾನದ ಮುಖ್ಯವಾದ ವಿಚಾರಗಳನ್ನು ಹೆತ್ತಪುಸ್ತಕವಾಗಿ ರಚಿಸಿ ಬ್ರಿಟಿಷ್ ವಿದ್ಯಾಶಾಲೆ, ಪಾಠಶಾಲೆಗಳ ಬಾಲಕ ಬಾಲಿಕೆಯರಿಗೆ ಮೈಸೂರಿನ ವಿಚಾರಗಳನ್ನು ತಿಳಿಯಪಡಿಸಲು ಏರ್ಪಾಡುಮಾಡಿರುತ್ತಾರೆ. ಮುಂದೆ ಜನವರಿ ತಾ|| ೨೧ರಲ್ಲಿ ಆ ಕಥಾವೃತ್ತಾಂತವನ್ನು ಮಿಸೆಸ್ ಜೆ. ಬಿ. ಹೋಮ್ ಎಂಬವರು ಆಕಾಶವಾಣಿಯ ಮೂಲಕ ಬ್ರಿಟಿಷ್ ಸೀಮೆಯವರಿಗೆಲ್ಲಾ ಭಾಷಣಮಾಡಿ ತಿಳುಹಿಸುವವರಾಗಿದ್ದಾರೆ.

ರಾಜಧಾನಿಯಲ್ಲಿರುವ ಶ್ರೀಕಾರದಾಸೈಕಲ್ ಸ್ಟೋರ್ಸಿನ ಮಾಲೀಕರಾದ ಶ್ರೀ ಹೆಚ್. ಎಲ್. ಲಿಂಗಪ್ಪಶೆಟ್ಟರು ಕಳೆದ ತಿಳಿನೆಯ ತಾರೀಖಿನ ಮಧ್ಯಾಹ್ನ ೧೨ ಘಂಟೆಗೆ ಹೊಳೇಅಗ್ರಹಾರದಲ್ಲಿರುವ ತಮ್ಮ ಮನೆಗೆ ಬೀಗಹಾಕಿಕೊಂಡು ಸಂಸಾರಸಹಿತ ನೆಂಟರಮನೆಗೆ ಊಟಕ್ಕೆ ಹೋಗಿದ್ದು ರಾತ್ರಿ ೯ಘಂಟೆಗೆ ಮನೆಗೆ ಬರುವಷ್ಟರಲ್ಲಿ ಮನೆಗೆ ಕಳ್ಳರು ನಗ್ಗಿ ಬಟ್ಟೆಬರೆ ನಗನಾಣ್ಯಗಳು ಎಲ್ಲವನ್ನೂ ಮೋಚಿಕೊಂಡು ಹೋಗಿದ್ದರು. ಈ ಹಗಲು ಕಳ್ಳತನದ ಸುದ್ದಿ ಪೋಲೀಸರಿಗೆಹೋಗಿ ಅವರು ಮಹಜರು ಕ್ರಮ ನಡೆಯಿಸಿದರು. ಸುಮಾರು ೧೫೦೦ ರೂಗಳ ಬೆಲೆಬಾಳುವ ವಸ್ತುಗಳು ಕಳುವಾಗಿರುವುದಾಗಿ ತಿಳಿದುಬರುತ್ತದೆ.

ನಮ್ಮ ದಿವಾನ್ ಸರ್ ಮಿರ್ಜಾ ಎಂ. ಇಸ್ಮಾಯಿಲ್ ರವರು ತಮ್ಮ ರಕ್ತಸಂಬಂಧಿಯಾದ ಶ್ರೀಮತಿ ಮಲಿಕ್ ತಾಜ್ ಬೇಗಂರವರನ್ನು ಮುರ್ಷದಾಬಾದಿನಲ್ಲಿರುವ ಮಿಃ ಎ. ಹಿಲಾಲಿ ಐ. ಸಿ. ಎಸ್. ರವರಿಗೆ ಕೊಟ್ಟು ಬೆಂಗಳೂರಿನಲ್ಲಿ ಕಳೆದ ಶುಕ್ರವಾರ ವಿವಾಹೋತ್ಸವವನ್ನು ಬೆಳಸಿ ಅನೇಕ ಅಧಿಕಾರಿಗಳನ್ನೂ ಖಾಸಗಿ ದೊಡ್ಡಮನುಷ್ಯರನ್ನೂ ಸತ್ಕರಿಸಿದರು. ಸೂತನ ದಂಪತಿಗಳಿಗೆ ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ಉಡುಗೆರೆಗಳನ್ನೂ ಆಭರಣಗಳನ್ನೂ ಕಳುಹಿಸಿದ್ದರೆಂದು ತಿಳಿಯುತ್ತದೆ.

ಬರುವ ಜನವರಿ ತಿಂಗಳು ಮೈಸರಾಯರು ಮೈಸೂರಿಗೆ ಆಗಮಿಸುವ ಸಂದರ್ಭದಲ್ಲಿ ಅವರ ಸಂತೋಷಾರ್ಥವಾಗಿ ಕಾಕನಕೋಟೆ ಕಾಡಿನಲ್ಲಿ ಆನೆಗಳನ್ನು ಹಿಡಿಯುವ ಕೆಲಸಗಳು ನಡೆಯುತ್ತವೆ. ಈ ಕೆಡ್ಡಾ ವಿಧಾನವನ್ನು ನೋಡಲು ಬಿಕಾನೀರ್ ಸಂಸ್ಥಾನದ ಮಹಾರಾಜರು ತಮ್ಮ ಪರಿವಾರ ಸಮೇತ ಜನವರಿ ತಿಂಗಳು ಎರಡನೆ ವಾರದಲ್ಲಿ ಮೈಸೂರಿಗೆ ಆಗಮಿಸುವರೆಂದು ತಿಳಿದುಬರುತ್ತದೆ.

ಶ್ರೀಮನ್ಮಹಾರಾಜರವರು ಸದ್ಯಃ ವಿಶ್ರಾಂತಿಗಾಗಿ ನೀಲಗಿರಿಗೆ ಚಿತ್ತೈಸಿ ಕೆಲವು ದಿನಗಳಿಂದ ಆಲ್ಲಿಯೇ ವಾಸಿಸುತ್ತಿರುವರು. ಆದ್ದರಿಂದ ಅರಮನೆಯಲ್ಲಿ ದೀಪಾವಳಿಯ ದಿವಸ ನಡೆಯಬೇಕಾಗಿದ್ದ ದರ್ಬಾರನ್ನು ಮಹಾ ಪ್ರಭುಗಳವರ ಆಜ್ಞಾನುಸಾರ ರಾಜಕುಮಾರ ಶ್ರೀ ಜಯಚಾಮರಾಜೇಂದ್ರ ಒಡೆಯರವರು ದರ್ಬಾರು ನಡೆಯಿಸಿದರು. ಈ ದರ್ಬಾರು ಅರಮನೆ ಕಲ್ಯಾಣ ಮಂಟಪದಲ್ಲಿ ಜರುಗಿತು. ಮಂಟಪದ ಮೇಲ್ಚಾಗದಲ್ಲಿ ಬಲಿಚಕ್ರವರ್ತಿಯ ಪ್ರತಿಮೆಯನ್ನು ಪಚ್ಚಯ್ಯೆಡೂರ್ಯಾದಿ ಆಭರಣಪದಕ ಕಂಠೀಸರಗಳಿಂದಲೂ ಕಿರೀಟ ಶಿರಪೇಚುಗಳಿಂದಲೂ ಅಲಂಕರಿಸಿ ಶ್ವೇತಚ್ಛತ್ರಸಹಿತವಾದ ಸಿಂಹಾಸನದಲ್ಲಿ ನ್ಯಾಸಮಾಡಿದ್ದರು. ಸಿಂಹಾಸನದ ಎಡಪಾರ್ಶ್ವದಲ್ಲಿ ವೈದಿಕಮಂಡಲಿಯವರೂ ಬಲಪಾರ್ಶ್ವದಲ್ಲಿ ಆರಸುಗಳೂ ಪ್ರಭೃತಿಯ ದೊಡ್ಡ ಮನುಷ್ಯರೂ ಅರಮನೆ ಅಧಿಕಾರಿವರ್ಗದವರೂ ಸಾಲುಕಟ್ಟಿ ನಿಂತಿರುವಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಅಂತಃಪುರದಿಂದ ಮಡಿಯಲ್ಲಿ ಚಿತ್ತೈಸಿ ರಾಜಪುರೋಹಿತರ ಮೂಲಕ ಬಲಿಚಕ್ರವರ್ತಿಯ ಪೂಜೆ ಮಂಗಳಾರತಿಗಳನ್ನು ನೆರವೇರಿಸಿಕೊಳ್ಳುತ್ತಿತುಕೊಂಡರು ದೀವಟಿಗೆ ಸಲಾಮು ಆದ ಬಳಿಕ ಈವರು ಓಲೇಕಾರರು ಶ್ರೀಯಃಪ್ರಾರ್ಥನಾ ಪದ್ಯಗಳನ್ನು ಪಠನಮಾಡಿದರು. ಆ॥ ಸೆಕ್ರೆಟರಿ ಮ॥ ಎಂ ರಾಮರಾಯರು ಅವರೀರ್ವರಿಗೂ ಪದ್ಧತಿಯಂತೆ ಬಿಲ್ಲು ಕತ್ತಿಗಳನ್ನು ರಾಜಕುಮಾರರ ಕೈಮುಟ್ಟಿಸಿಕೊಟ್ಟರು. ಸಂಗೀತವಾಗುತ್ತಿರುವಲ್ಲಿ ಅರಮನೆ ಇಲಾಖೆಯವರು ದರ್ಬಾರಿಗಳಿಗೆಲ್ಲಾ ಪುಷ್ಪಹಾರಗಳನ್ನು ಹಾಕಿದರು. ಶ್ರೀ ಜಯಚಾಮರಾಜೇಂದ್ರ ಒಡೆಯರವರು ದರ್ಬಾರನ್ನು ಮುಗಿಸಿ ಅಂತಃಪುರಕ್ಕೆ ಚಿತ್ತೈಸಿದರು. ಈ ಉತ್ಸವದ ನಿಮಿತ್ತ ಅರಮನೆಯಲ್ಲಿ ವಿದ್ಯುದ್ದೀಪೋತ್ಸವವು ನೆರವೇರಿತು.

ವರ್ತಮಾನಸಂಗ್ರಹ.

ಪ್ರಪಂಚದಲ್ಲಿ ಆನೆಯ ಧಾರಿ ವಜ್ರ!

ಬ್ರೆಜಿಲ್ ಪ್ರಜಾಪ್ರಭುತ್ವಕ್ಕೆ ಸೇರಿದ ಮೈನಾಸ್ ಎಂಬಲ್ಲಿ ಪ್ರಪಂಚದ ಭಾರಿ ವಜ್ರಗಳಲ್ಲಿ ಆನೆಯದೆನಿಸುವ ವಜ್ರವು ಸಿಕ್ಕಿದೆ. ಇದನ್ನು ಒಂದು ಡಚ್ ಕಂಪನಿಯು ೭೦ ಸಾವಿರ ಪೌಂಡುಗಳಿಗೆ ಕೊಂಡುಕೊಂಡಿದೆ

ದೇವಸ್ಥಾನಪ್ರವೇಶ ಬಿಲ್ಲನ್ನು ತಡೆಯುವ ಪ್ರಯತ್ನ

ಮಲಬಾರಿನ ದೊಡ್ಡ ಜಮೀನ್ದಾರರೂ ದೇವಸ್ಥಾನದ ಮಾಲೀಕರೂ ಸಭೆಸೇರಿ ಸದ್ಯದಲ್ಲೇ ಅಲ್ಲಿ ಜಾರಿಗೆ ಬರಲಿರುವ ದೇವಸ್ಥಾನಪ್ರವೇಶ ಸಂಬಂಧದ ಬಿಲ್ಲನ್ನು ನಿರ್ನಾಮಗೊಳಿಸುವ ಒಂದು ಮೆನೋರಿಯಲ್ಲನ್ನು ಸಿದ್ಧಪಡಿಸಿ ಬಿಲ್ಲಿನಿಂದ ಆಗುವ ಅನರ್ಥಗಳನ್ನು ಸೂಚಿಸಿ ಕಲ್ಲಿಯ ಸರಕಾರಕ್ಕೆ ಒಪ್ಪಿಸಿರುವರು

ಹಾವನ್ನು ಕಡಿದುಕೊಂದ ಮಗು!

ಅಮೆರಿಕಾದೇಶದ ಬೆಟ್ಟಿ ಪ್ರಾಂತ್ಯದ ಒಂದು ಹಳ್ಳಿಯಲ್ಲಿ ಮನೆಯ ಅಂಗಳದಲ್ಲಿ ಆಟುತ್ತ ಕುಳಿತಿದ್ದ ೧೭ ತಿಂಗಳ ಮಗುವಿನಬಳಿಗೆ ಒಂದು ಹಾವು ಹರಿದುಬರುವುದನ್ನು ಕಂಡು ಭೀತರಾದ ತಂದೆತಾಯಿಗಳು ಸಹಾಯಕ್ಕೆ ಓಡಿಬಂದರು. ಆದರೆ ಅಷ್ಟರಲ್ಲಿ ಹಾವು ಮಗುವನ್ನು ಕಡಿಯುವ ಬದಲು ಮಗುನೇ ಹಾವನ್ನು ಕಡಿಯಬಿಟ್ಟಿದ್ದಿತು. ತಂದೆತಾಯಿಗಳು ಮಗುವನ್ನು ಆಸ್ಪತ್ರೆಗೆ ಕರೆದುಕೊಂಡುಹೋಗಿ ಚಿಕಿತ್ಸೆನೀಡಿಸಲು ತೋರಿಸಿದರು. ಮಗುವಿಗೆ ಚಿಕಿತ್ಸೆಯು ಆವಶ್ಯಕತೆಯಿರಲಿಲ್ಲ. ಹಾವು ಮಾತ್ರ ಸತ್ತುಹೋಯಿತು.

ಚಕ್ರವರ್ತಿ ಸಹೋದರರಿಗೆ ಗೌರ್ನರ್ ಜನರಲ್ ಪದವಿ!

ನಮ್ಮ ಚಕ್ರವರ್ತಿಗಳ ಸಹೋದರರಾದ ಡ್ಯೂಕ್ ಆಫ್ ಕೆಂಟ್‌ರವರು ಆಸ್ಟ್ರೇಲಿಯದ ಗೌರ್ನರರಾಗಿ ನೇಮಕಮಾಡಲ್ಪಟ್ಟಿರುವರೆಂದು ತಿಳಿದುಬರುತ್ತದೆ. ಈ ಅಧಿಕಾರವನ್ನು ವಹಿಸಿಕೊಳ್ಳಲು ಡ್ಯೂಕರು 1939 ನೇ ಇಸವಿ ನವಂಬರ್ ತಿಂಗಳಿನಲ್ಲಿ ಆಸ್ಟ್ರೇಲಿಯಕ್ಕೆ ಹೊರಡುವರಂತೆ! ರಾಜಮನೆತನದವರು ಹೀಗೆ ಕಾಲೋನಿಗಳ ಗೌರ್ನರರಾಗಿ ಹೋಗುವುದು ಇದೇ ಮೊದಲು!

ಇಟಲಿ ಇಂಗ್ಲೆಂಡ್ ಒಪ್ಪಂದ

ಸ್ಪೇನಿನ ವಿಚಾರವಾಗಿ ಸರಿಯಾದ ತೀರ್ಮಾನವಾಗುವವರೆಗೂ ಒಪ್ಪಂದವನ್ನು ಆಚರಣೆಗೆ ತರಕೂಡದೆಂದು ಬ್ರಿಟಿಷ್ ಸರಕಾರವು ಆಲೋಚನೆ ಮಾಡಿತ್ತು. ಇತ್ತೀಚೆಗೆ ಇಟಲಿ ಸರಕಾರದವರು ಸ್ಪೇನಿನಿಂದ ೧೦,೦೦೦ ನಂದಿ ಸ್ವಯಂಸೇವಕರನ್ನು ಹಿಂದಕ್ಕೆ ಕರೆಯಿಸಿಕೊಂಡಿರುವುದರಿಂದ ಸ್ಪೇನಿನ ವಿಷಯದಲ್ಲಿ ತಕ್ಕ ತೀರ್ಮಾನವನ್ನು ಮಾಡಿದಂತಾಗಿದೆಯೆಂದು ಬ್ರಿಟಿಷ್ ಸರಕಾರದವರು ಭಾವಿಸಿದ್ದಾರೆ. ಆದುದರಿಂದ ಒಪ್ಪಂದವನ್ನು ನವಂಬರ್ ೧೫ ನೇ ತಾರೀಖಿನಿಂದ ಆಚರಣೆಗೆ ತರಲಾಗುವುದೆಂದು ತಿಳಿದುಬರುತ್ತದೆ.

ಅಮೇರಿಕೆಯಲ್ಲಿ ಜರ್ಮನ್ ಗೂಢಚಾರರು.

ಅಮೆರಿಕೆಯವರು ವಿಮಾನ ಸೈನ್ಯಕ್ಕಾಗಿ ಕಟ್ಟಿಸುತ್ತಿರುವ ವಿಮಾನಗಳ ರಚನಾಕ್ರಮವನ್ನೂ, ಅವುಗಳು ಅಂತರಿಕ್ಷದಲ್ಲಿ ಹಾರುತ್ತಿರುವಾಗ ಅವುಗಳನ್ನು ನಡೆಯಿಸುವ ನಪು ಭೂಮಿಯಮೇಲಿರುವವರಿಗೆ ತಮ್ಮ ಅಭಿಪ್ರಾಯವನ್ನು ತಿಳುಹಿಸಲು ಮಾಡಿಕೊಂಡಿರುವ ಗುಪ್ತ ಸಂಜ್ಞೆಗಳನ್ನೂ, ವಿಮಾನ ಸೈನ್ಯದ ಇತರ ಒಳಗುಟ್ಟುಗಳನ್ನೂ ಗುಪ್ತವಾಗಿ ಜರ್ಮನಿ ದೇಶಕ್ಕೆ ತಿಳಿಸುತ್ತಿವ್ವರೆಂದು, ಅಮೆರಿಕೆಯ ಪೋಲೀಸರು, 4 ಜನ ಜರ್ಮನರನ್ನು ಗಸ್ತುಗಿರಿ ಮಾಡಿ ಮೊಕದ್ದಮೆ ಹೂಡಿರುತ್ತಾರೆ. ಇವರಲ್ಲಿ ಒಬ್ಬಳು ಹೆಂಗಸು, ಉಳಿದವರು ಗಂಡಸರು. ನಿಜಾಂಶ ಮುಂದುವರಿಯುತ್ತಿದೆ.

ಜರ್ಮನ್ ಸೈನಿಕರು ಹಾಂಕ್ಕೊನಗರವನ್ನು ವಶಪಡಿಸಿಕೊಂಡರು

ಕಳೆದವಾರ ಜರ್ಮನ್ ಸೈನಿಕರು ವಿಮಾನದಾಳಿಯಿಂದ ೧೦ ಲಕ್ಷ ಜನ ಚೀನಾ ಸೈನಿಕರಿಂದ ಆವರಿಸಲ್ಪಟ್ಟಿದ್ದ ಹಾಂಕೋ ನಗರವನ್ನು ಆಕ್ರಮಿಸಿದರು. ಚೀನಾ ಸೈನಿಕರುಮೇಲೆ ವಿಷವಾಯುವನ್ನು ಪ್ರಯೋಗಿಸಿದ್ದರಿಂದ ೮೦೦೦ ಸೈನಿಕರು ಮಡಿದರೆಂದು ತಿಳಿದುಬರುತ್ತದೆ. ಇವಲ್ಲದೆ ಚೀನರ ೩ ಹಡಗುಗಳೂ ಅನೇಕ ವಿಮಾನಗಳೂ ನಾಶಮಾಡಲ್ಪಟ್ಟವು. ಆದರೂ ಚೀನಾ ಸೈನಿಕರು ಧೈರ್ಯಗುಂದದೆ ಜರ್ಮನರೊಡನೆ ಹೋರಾಡುತ್ತಿದ್ದಾರೆ. ಜಪಾನರ ಈ ವಿಧವಾದ ರಾಕ್ಷಸೀಕೃತಿಯನ್ನು ಜಗತ್ತಿನ ಜನರಲ್ಲರೂ ಖಂಡಿಸುತ್ತಿರುವರು.

ಪ್ರೀತಿಯ ಕತ್ತಿ!

ಹಂಗೇರಿಯಲ್ಲಿರುವ ಒಂದು ಸಂಸಾರದಲ್ಲಿ ಸತಿಪತಿಯರು ಪರಸ್ಪರ ಪ್ರೇಮಯುಕ್ತರಾಗಿ 48 ವರುಷ ಸಂಸಾರ ಮಾಡಿದರು. ಇವರು ಪ್ರತಿದಿನ ಪ್ರಾರ್ಥನೆಮಾಡುವಾಗ ಮರಣದಲ್ಲೂ ಕೂಡ ತಾವು ಅಗಲಕೂಡದೆಂದು ಪ್ರಾರ್ಥಿಸುತ್ತಿದ್ದರು ಆದರಂತೆಯೇ ಗಂಡನಾದ ಜಿಯೋನ್ ಖಾಸ್ಸನು ಆಸ್ಪತ್ರೆಯಲ್ಲಿ ಸತ್ತನೆಂಬ ಸಮಾಚಾರವನ್ನು ತಿಳುಹಿಸಲು ಮನೆಗೆ ಬಂದ ನೆಂಟರು ಹೆಂಡತಿಯಾದ ವೇರಿಯಳ ಶವವನ್ನು ಕಂಡರು ಗಂಡಹೆಂಡರ ಆತ್ಮಗಳೆರಡೂ ಏಕಕಾಲದಲ್ಲಿ ಇಹಲೋಕವನ್ನು ಬಿಟ್ಟಿದ್ದವು. ಆವರಂತೆಯೇ ಲೂದಿಯಾನೆವಲ್ಲಿ ಒಬ್ಬನು ತನ್ನ ಪ್ರೇಮಪತ್ನಿಯ ಅಂತಿಮ ಸಂಸ್ಕಾರವನ್ನು ಮಾಡಿ ತಾನೂ ಆಕೆಯನ್ನು ಹಿಂಬಾಲಿಸುವುದಾಗಿ ಎಲ್ಲರೊಡನೆಯೂ ತಿಳಿಸಿ ಪ್ರಜ್ಞಾಹೀನನಾದವನು ನುರುದಿನ ತನ್ನ ಪತ್ನಿಯು ಮೃತಳಾದ ವೇಳೆಗೆ ಸರಿಯಾಗಿ ತಾನೂ ಇಹಲೋಕವನ್ನು ತ್ಯಜಿಸಿದನಂತೆ! ಇದೇ ನಿಜವಾದ ಪ್ರೀತಿಯ ಕುರುಹು.

ಸೂರ್ಯಸಂತೆ ಪ್ರಜ್ವಲಿಸುವ ಹೊಗೆ!

ಅಮೆರಿಕೆಯ ಇಂಜನಿಯರುಗಳು ಸೂರ್ಯಪ್ರಕಾಶಕ್ಕೆ ಸಮವಾದ ಉಷ್ಣತೆ ಮತ್ತು ಬೆಳಕನ್ನು ಕೊಡಬಲ್ಲ ಚಿಕ್ಕ ಯಂತ್ರವನ್ನು ಕಂಡುಹಿಡಿದಿರುತ್ತಾರೆ. ಇದು ಬೆಣಚು ಕಲ್ಲಿನಿಂದ ಮಾಡಲ್ಪಟ್ಟ ಒಂದು ಕೊಳವೆಯಲ್ಲಿ ಅರ್ಧಚಂದ್ರಾಕಾರವಾಗಿ ನಿಲ್ಲಿಸಲ್ಪಟ್ಟ ಪಾದರಸದ ಮೂಲಕ ನುಸುಳಿಬರುವ ಕಿರಣಗಳನ್ನು ಕೇಂದ್ರೀಕರಿಸಿ ಪ್ರಕಾಶವನ್ನುಂಟುಮಾಡುವ ದೀಪವಾಗಿದೆ. ಇದರ ಉಪಯೋಗದಿಂದ ಸೂರ್ಯಪ್ರಕಾಶದ ಆವಶ್ಯಕತೆಯೇ ಬಹಳ ಮಟ್ಟಿಗೆ ಕಡಿಮೆಯಾಗಿದೆ. ಇದರಲ್ಲಿ ಉಪಯೋಗಿಸಿರುವ ಬೆಣಚಕಲ್ಲಿನ ಕೊಳವೆಯು ಆತಿಯಾಗಿ ಕಾದುಹೋಗುವ ದಾದರೂ ಅದರ ಸುತ್ತಲೂ ತಣ್ಣಗಿರುವ ವಸ್ತುವನ್ನು ಇರಿಸುವುದರಿಂದ ಇದರಿಂದುಂಟಾಗುವ ತೊಂದರೆಯು ನಿವಾರಿಸಲ್ಪಡುವುದು. ಈ ದೀಪಕ್ಕೆ ೩ ನಿಮಿಷಗಳಿಗೊಂದಾವರ್ತಿ ನೀರಿನ ತಂಪನ್ನು ಕೊಡಬೇಕಾಗುತ್ತದೆ. ಇದರಿಂದ ಹೊರಡುವ ಪ್ರಕಾಶವು 1200 ಕ್ಯಾಂಡಲ್ ಪವರಿನಷ್ಟು ಇರುವುದು. ಇದರ ಆಕಾರವು ಮನುಷ್ಯನ ಕೈ ಬೆರಳನಷ್ಟಿರುವುದಂತೆ!

ಮೋಟಾರಿನಲ್ಲಿದ್ದ ಹೆಂಡತಿಯನ್ನು ಮರೆತನು.

ಅಮೆರಿಕಾ ದೇಶದ ಇಂಡಿಯಾನ ಪ್ರಾಂತದ ಹ್ಯಾಮಂಡ್ ಎಂಬವನೊಬ್ಬನು ಮೋಟಾರು ಕಾರಿನಲ್ಲಿ ತನ್ನ ಪತ್ನಿಯನ್ನು ಕುಳ್ಳಿರಿಸಿಕೊಂಡು ಬಂದು ಒಂದು ಹೋಟಲಿನ ಮುಂಭಾಗದಲ್ಲಿ ಮೋಟಾರನ್ನು ನಿಲ್ಲಿಸಿ ತಾನು ಹೋಟಲಿನಿಂದ ಏನೋ ತೆಗೆದುಕೊಂಡು ಬರುವುದಾಗಿ ಒಳಕ್ಕೆ ಹೋದವನು ಅಲ್ಲಿ ಯಾರೋ ಜೊತೆಗಾರರು ಸಿಕ್ಕಿದುದರಿಂದ ಅವರ ಜೊತೆಯಲ್ಲಿ ಮಾತನಾಡುತ್ತ ಬೇರೆ ದಾರಿಯಿಂದ ಹೊರಗೆ ಹೊರಟು ಹೋದವನು ಎಷ್ಟೋ ಹೊತ್ತಾದಮೇಲೆ ತನ್ನ ಕಾರನ್ನೂ ಅದರಲ್ಲಿ ಕುಳಿತಿದ್ದ ತನ್ನ ಪತ್ನಿಯನ್ನೂ ಜ್ಞಾಪಿಸಿಕೊಂಡನು. ಕಾರನ್ನು ಎಲ್ಲಿ ಬಿಟ್ಟು ಬಂದೆನೆಂಬುದು ಮರೆತುಹೋದುದರಿಂದ ಪೋಲೀಸರಿಗೆ ಮೊರುಕೊಟ್ಟು ಕಾರಿನ ಗುರುತಿಗೆ ತನ್ನ ಪತ್ನಿಯನ್ನು ಅದರಲ್ಲಿಯೇ ಕುಳ್ಳಿರಿಸಿರುವುದಾಗಿ ತಿಳುಹಿಸಿದನು.. ಪೋಲೀಸರು ಕಾರನ್ನು ಹುಡುಕಿ ಪತ್ತೆ ಹಚ್ಚಿದಾಗ ಅವನ ಪತ್ನಿಯು ಗಂಡನಿಗಾಗಿ ಕಾಯುತ್ತ ಕಾರಿನಲ್ಲಿಯೇ ಮಲಗಿದ್ದಳಂತೆ!

ನೀರಿನಮೇಲೆ ನಡೆವ ಸಾಧು!

ತಂಜಾವೂರಿನ ಬಳಿ ತಿರುಕಟ್ಟುಪಲ್ಲಿ ಎಂಬಲ್ಲಿ ಕೊಲೆರೂ ಎಂಬ ನದಿಯು ಪೂರ್ಣಪ್ರವಾಹದಿಂದ ಹರಿಯುತ್ತಿದ್ದುದ್ದರಿಂದ ಜನಗಳು ಅದನ್ನು ದೋಣಿಯಲ್ಲಿ ದಾಟಬೇಕಾಗಿತ್ತು. ಅಲ್ಲಿಗೆ ಬಂದ ಒಬ್ಬ ಸುಮಾರು ೩೦ ವರ್ಷ ವಯಸ್ಸಿನ ಸಾಧುವಿನ ಬಳಿ ಹಣವಿರಲಿಲ್ಲವಾಗಿ ದೋಣಿಯವರು ಆವನನ್ನು ದೋಣಿಯಲ್ಲಿ ಕುಳ್ಳಿರಿಸಲು ಅವಕಾಶಕೊಡಲಿಲ್ಲ. ಸಾಧುವಾದರೂ ಇದರಿಂದ ಅಸಮಾಧಾನಹೊಂದದೆ ಸಾಮಾನ್ಯವಾಗಿ ಭೂಮಿಯ ಮೇಲೆ ನಡೆವಂತೆ ಆ ನದಿಯ ನೀರಿನಮೇಲೆ ನಡೆಯು ೩ ನಿಮಿಷಗಳೊಳಗಾಗಿ ದಡವನ್ನು ತಲಪಿ ಅಲ್ಲಿದ್ದ ದೇವಸ್ಥಾನ ವೊಂದರಲ್ಲಿ ಧ್ಯಾನಾಸಕ್ತನಾಗಿ ಕುಳಿತುಬಿಟ್ಟನು. ಈತನ ಅಕ್ಷರ್ಯಕರವಾದ ಈ ಕೃತ್ಯವನ್ನು ನೋಡಿ ಜನರು ಈತನ ದರ್ಶನವನ್ನು ಮಾಡಲು ತಂಡೋಪತಂಡವಾಗಿ ಬಂದು ಹಾಲು, ಮೊಸರು, ಜೇನು ಮೊದಲಾದವುಗಳಿಂದ ಆವನನ್ನು ಆರಾಧಿಸಿದರೂ ಆತನಿಗೆ ಎಚ್ಚರನೇ ಆಗಲಿಲ್ಲವಂತೆ! ಈ ಸಾಧುವನ್ನು ಹಿಂದೆ ನೋಡಿದ್ದವ್ವೆ ಕೆಲವರು ಈತನು ಮಾತನಾಡುವದಿಲ್ಲವೆಂದೂ, ಮರಗಳಮೇಲೆ ಮಲಗುವನೆಂದೂ ಹೇಳುತ್ತಾರೆ ಯೋಗಮಹಿಮೆಯು ಅಸಾಧ್ಯವಾದುದು.

ನೆಲ್ಲಾಳಸಂಸ್ಥಾನದ ಶ್ರೀ॥ ಬಿ. ಮುರುಘೇಂದ್ರರಾಜರವರ ಧರ್ಮಪತ್ನಿಯೂ ಮತ್ತು ಶ್ರೀ ರಾಣಿ ಬೌರಮ್ಮಣ್ಣಿಯವರ ಸೊಸೆಯೂ ಆದ ಶ್ರೀ ರಾಣಿ ಪುಟ್ಟವೀರಮ್ಮಣ್ಣಿಯವರು ಕೆಲವು ದಿವಸ ಅಸ್ವಸ್ಥತೆಯಲ್ಲಿದ್ದು ಇದೇ ಮಾಹೆ ೨೫ ನೆಯ ತಾರೀಕು ಮಂಗಳವಾರ ಸಾಯಂಕಾಲ ಮೈಸೂರಲ್ಲಿರುವ ಆವರ ಬಂಗಲೆಯಲ್ಲಿ ಶಿವಸಾಯುಜ್ಯವನ್ನು ಹೊಂದಿದರೆಂಬ ಸಮಾಚಾರವನ್ನು ತಿಳಿಸಲು ವಿಷಾದಿಸುತ್ತೇನೆ.

ಸೊಲ್ಲಾಪುರ ಶರಣಮ್ಮನ ಸನ್ಯಾಸಾಚಾರ!

ಸೊಲ್ಲಾಪುರದಲ್ಲಿ ಸನ್ಯಾಸಿಪಕ್ಷದಲ್ಲಿ ಕೆಲ ಆಜ್ಞಾನಿಗಳುಂಟು. ಇವರಲ್ಲಿ ನಾಲಕವಾದವರ ಶರಣರ ಮಗಳಾದ ರುದ್ರಮ್ಮನೆಂಬಳೆಯು ಅಗ್ರಗಣ್ಯಳಾಗಿದ್ದಾಳೆ. ಓ ಸನ್ಯಾಸಿಪಕ್ಷದ ಶರಣಮ್ಮಾ! ನಿನ್ನ ತಂದೆಯ ವರ್ತನೆಯೆತ್ತ? ನಿನ್ನ ಈ ಆಮಂಗಲ ಪಕ್ಷಸಾಧನೆಯೆತ್ತ? ಅವರ ನಿಷ್ಠತೆಯೆತ್ತ? ನಿನ್ನ ಧನಸಂಚಯ ರೂಪ ಆಶೆಯೆತ್ತ? ಅವರ ಶಿವಪೂಜೆ ನಿನ್ನೆಯೆತ್ತ? ನಿನ್ನ ಪರಧನದೆಯ ಸಾಹಸ ವೆತ್ತ? ಅವರ ತಾತ್ಪರ್ಯೋಕ್ತ ಉಪದೇಶವೆತ್ತ? ನಿನ್ನ ಕುಯುಕ್ತಿಯ ಕಾರಸ್ಥಾನವೆತ್ತ? ನಿನ್ನ ತಂದೆಯವರು ಮುಯಳಮನೆಯ ಲ್ಲಿಯೇ ಇದ್ದರು. ಅದರೂ ಅದು ಕೈಲಾಸದಂತೆಪ್ಪುತ್ತಿತ್ತು. ನೀನು ೨-೩ ಮನೆಮಾಡಿಕೊಂಡು, ಮಹಡಿ ಮುಂಇದವುಗಳನ್ನು ಚೆನ್ನಾಗಿ ಕಟ್ಟಿಸಿರುವೆ. ಆ ನಿನ್ನ ಮನೆಯು ಇಂದ್ರನ ಅರಮನೆಯಂತಿರುವದು. ನಿನ್ನ ತಂದೆಯ ಹರಳು ಅಂಗಿಯೇ ಜನರ ಆಚ್ಛಾದವನ್ನು ವೃದ್ಧಿಗೊಳಿಸುತ್ತಿತ್ತು. ಆದರೆ ನಿನ್ನ ಅನಂತ ತರತರದ ಬಣ್ಣದ ಶೀರೆಗಳು ಜನರನ್ನು ನಾಚಿಸುತ್ತಿರುವುವು ಶರಣೆಯಾದ ನಿನಗೆ ಎಲೆಕ್ಟ್ರಿಕ್ ಟೀಪನೆಲೆ? ಎಲೆಕ್ಟ್ರಿಕ್ ವೃಜನನೆಲೆ? ಬಂಗಾರದ ವಿದ್ಯಾನಲೆಗೆ? ಬಂಗಾರದ ಕಡಗಿಯೆಲೆ? ಎಂತಹ ದೊಡ್ಡ ಶ್ರೀಮಂತ ಸ್ತ್ರೀಯರಿಗೂ ಸಹ ಸಿಗದಿರುವ ವಸ್ತ್ರಾಭರಣಗಳೇತ? ನಿನ್ನ ತಂದೆಯು ಆಪೇಕ್ಷಿಸಿದ್ದರೆ ರತ್ನಖಚಿತ ಸುವರ್ಣಗೃಹವನ್ನೇ ಸೊಲ್ಲಾಪುರ ವೀರಶೈವರು ತಯಾರಿಸುತ್ತಿದ್ದರು. ಅವರೆ ಆ ಮಹಾಪಾಪವು ನಿಷಿಕ್ತ ಭೋಗಾಪೇಕ್ಷೆಯಲ್ಲ. ಈಗ ನಿನಗೆ ದೊರೆಯುವ ಧನ ಧಾನ್ಯಾದಿಗಳೆಲ್ಲಿ ನಿನ್ನ ತಂದೆಯ ತಪಸ್ಸಿನ ಫಲವೇ ಹೊರತು ನಿನ್ನದೇನೂ ಇಲ್ಲ. ಪಾಪ! ನಿನಗೆ ಆ ಹೆಂಗಸರು ಹಾಗಿದ್ದಾರೆ, ಈ ಹೆಂಗಸರು ಹೀಗಿದ್ದಾರೆ ಇತ್ಯಾದ್ಯನೇಕ ವಿಷಯ ವಿವೇಚನೆಯಲ್ಲಿ ಶಿವಪೂಜಾದಿ ಸತ್ಕರ್ಮಗಳಿಗೆ ವೇಳೆಯಾದರೂ ದೊರೆಯಬೇಕಲ್ಲವೇ? ನಿಜ' ಆಕ್ಷರಶಃ ನಿಜ! ನಿನಗೆ ಯಾರೂ ತಿರುಗಿ ಉತ್ತರವನ್ನು ಕೊಡುವದಿಲ್ಲವೆಂದು ಉಬ್ಬಬೇಡ ನಿನ್ನೆಮರಿಗೆ ಸುಮ್ಮನಿರುವದು ಸನಾತನ್ಯಿಷ್ಟ, ನಿನ್ನ ತಂದೆಯ ತಪಸ್ಸಿಗಾಗಿ. ನಿನ್ನೆಮರಿಗೆ ಮರ್ಯಾದೆಯನ್ನು ಕಾಣಿಸುವರು ನಿನ್ನ ಹಿಂದೆ ಏನೆಂದು ಮಾತಾಡುವೆಂಬುದನ್ನು ನೀನು. ಬಲ್ಲೆಯಾ? ಶರಣಮ್ಮಾ! ಯಾವ ನಿನ್ನ ತಂದೆಯ ಕನ್ನ ದೇಹಾಂತ್ಯಪರೆಗೂ ತನ್ನ ಗುರುವಿನ ಹೊರತು ಇತರರ ತಿರ್ಥಪ್ರಸಾದವನ್ನು ಸ್ವೀಕರಿಸಲಿಲ್ಲವೋ ಆ ಗುರುವು ಅನುಗ್ರಹಿಸಿದ ಭಸ್ಮವನ್ನೇ ಕಡಿಮೆಯಾದರೂ ಬೆಳೆಯಿಸುತ್ತ ಹೋದನೋ ಅಂತಹ ಪವಿತ್ರಸ್ಥಲದಲ್ಲಿ ಈ ದಿನ ಈ ಸೋಸಿಸ ಸನ್ಯಾಸಿಗಳ ಪಾಪಕೆಯೂ ಬೆಳೆಯಬೇಕೆಂದರೆ ಇದೆಂತಹ ಅನ್ಯಾಯ! ನಿನ್ನಲ್ಲಿ ತಪ್ಪಿಲ್ಲ, ಅಭಿಮಾನವೂ ಇರುವದು ಯೋಗ್ಯವಲ್ಲ "ಹೂವನ್ನಾಸೆ ಸ್ವರ್ಗದಲ್ಲಿ ಹೆಣ್ಣು ಮಾತಿತ್ತು' ಎಂಬಂತೆ ನಿನ್ನ ಸ್ಥಿತಿಯಾಗಿದೆ.

ಶರಣಮ್ಮಾ' ನಿನಗೇಕೆ ಸನ್ಯಾಸಿಕ್ಕಾಚಾರವು' ಎಂದು ಯಾರಾದರೂ ಕೇಳಿದರೆ-ನಿನಗೆ ಗುರುನಿಶ್ಚಿತ್ತರಾರೂ ಬೇಕು. ನಾನು ಈವರ್ತಿಯಂತೆ ಪೂಜ್ಯಬುದ್ಧಿಯಿಂದ ಸಲೆಯುನೆಸು ಎಂಬ ಯುಕ್ತಿಯ ಸೆಟ್ಟಿತನಾತಿಂದ ಜನರನ್ನು ಮರುಳುಗೊಳಿಸುವೆ. ಹಾಗಿದ್ದರೆ ಶರಣಮ್ಮಾ! ನಿನ್ನ ಪಟೆಯಲ್ಲಿ ಸನ್ಯಾಸಿಗಳ ಪುರಾಣಗಳೇ ಯಾಕೆ ರಚಿಸಿಯಿತ್ತಿರುವನ್ನ? ಮತ್ತು ಜೇಲಿಂದಮೇಲೆ ಸವಾ ಸಿಗಳೇ ನಿನ್ನ ಮನೆಗೆ ಇಕೆ ಬರುವರು? ನೀನು 'ಬಸವ ಜಯಂತಿ' ಯನ್ನಷ್ಟೇ ಏಕೆಮಾಡುವೆ? ಶ್ರೀ ಜಗದ್ಗುರು ಜಯಂತಿಗಳನ್ನೇಕೆ ಮಾಡಿಸುವದಿಲ್ಲ? ಬಸವ ಸ್ತೋತ್ರಗಳಿಗಿಸ್ಟೇ ನಿನ್ನ ಮನೆಯಲ್ಲಿ ಅನ್ನದನೇಕೆ? ಆಚಾರ್ಯಸ್ತೋತ್ರಗಳಿಗೇಕೆ ಅನ್ನದವಿಲ್ಲ? ಇತ್ಯಾದಿಕಾರಣಗಳಿಂದ ನಿನ್ನ ಸನ್ಯಾಸಿಪಕ್ಷವು ಒಡೆದು ಕಾಣುವದು.

ಹೊನ್ನೆ ತಾ॥ ೧೫-೧೦-೩೮ಕ್ಕೆ ನಿನ್ನ ಮನೆಯಲ್ಲಿ "ಪೋದಕ ಮಂಟಪಪೂಜೆ" ಯನ್ನು ಮಾಡಿಸಿದೆ. ಆಗ್ಗೆ ವಿಶೇಷವಾಗಿ ಸನ್ಯಾಸಿಗಳೇ ಏಕೆ ನೆರೆದಿದ್ದರು? ಕೆಲವು ಪಟ್ಟಾಧಿಕಾರಿಗಳೂ ಇದ್ದರಲ್ಲಾ-ಅಂದರೆ ಅವು ಹೊಟ್ಟೆಕೂಳಿಗಾಗಿ ಸನ್ಯಾಸಿಗಳ ಬೆನ್ನು ಹಿಂದೆ ತಿರುಗುವವುಗಳನ್ನೇ ಏಕೆ ತರಿಸಿದ್ದೆ? ಅಲ್ಲಿ ನಮೀಪದಲ್ಲಿ ಯೋಗ್ಯ ಪಟ್ಟಾಧಿಕಾರಿಗಳು, ಮೊರೆಯುತ್ತಿರಲಿಲ್ಲವೇ? ಸಮೀಪ ದಲ್ಲಿ ಪಟ್ಟಾಧಿಕಾರಿಗಳು ಚಳವಳಿಯಮಧ್ಯದಿಂದ ಕರೆಯಿಸಲಿಲ್ಲ ವೆಂದರೆ-ಕೆಲಬುರ್ಗಿ ಸನ್ಯಾಸಿಯು ಸಾಮಾನ್ಯಕಾರಸ್ಥಾನಿಯೇ! ಪಾಠಶಾಲಾ ವಿದ್ಯಾರ್ಥಿಗಳು ಬರುವದಿಲ್ಲ ಅವರನ್ನು ಕರಸ ಬಾರದೆಂಬ ಹಟವು ನಿನಗೇಕೆ? ಕರಿಸಿದಮೇಲೂ ವಿದ್ಯಾರ್ಥಿಗಳು ಆಚಾರ್ಯಸ್ತುತಿಯನ್ನು ಮಾಡಹತ್ತಲು, ಅವನ್ನು ಬಿಡಿಸಿ ಬಸವಸ್ತುತಿಯನ್ನೇಕೆ ಮಾಡಿಸಿದೆ? ಇದೆಲ್ಲವೂ ನಿನಗೆ ಯೋಗ್ಯವೆ ನಿಸುವದೇ? ನಿನ್ನ ತಂದೆಯನ್ನಾದರೂ ಸ್ಮರಿಸು. ಅತಿಥಿಗೆ ನಿನ್ನ ಈ ವರ್ತನೆವು ಗೊತ್ತಾದ್ದರಿಂದಲೇ ಮೌನಮುದ್ರೆಯನ್ನು ತಾಳಿದ್ದಾನೆ. "ಸ್ತ್ರೀಬುದ್ಧಿಃ ಪ್ರಳಯಂತಿಕಾ" ಎಂಬ ಮಾತ್ಯವು ನಿನಗೂ ಸಲ್ಲುವದೇ? ಶರಣಮ್ಮಾ! ಸಾಕು ಸಾಕು. ನಿನ್ನಯ ಪಕ್ಷಸಾಧನವು. ಶರಣತ್ವದ ಲಕ್ಷಣವು ನಿನ್ನಲ್ಲಿ ಸ್ವಲ್ಪವೂ ಇಲ್ಲ. "ಕನ್ಯಾಸಿತ್ವತ್ವಂ ಖಲು ನಾಮ ಕಷ್ಟಂ" ಎಂಬುವಂತೆ ನಿನ್ನ ತಂದೆಗೆ ದುಃಖಕೊಡಬೇಡ.

ಮಂಟಪದ ದಿವಸ ಸಾಯಂಕಾಲ ಶರಣಮ್ಮನು ಹೊಸದಾಗಿ ತೆಗೆಸುಕೊಂಡ ಗೃಹದಲ್ಲಿ ಸಭೆ ಸೇರಿತು. ಪಾಠಶಾಲೆಯ ವಿದ್ಯಾರ್ಥಿಯಾದ ವೇ॥ ತ್ರ್ಯಂಬಕಶರ್ಮ ಇವಳಗೇರಿ, ಎಂಬವರು ಆಗ್ಗುರುತ್ವವು ಶ್ರೀ ಪಂಚಾಚಾರ್ಯರಿಗೇ ಸಲ್ಲತಕ್ಕುದೇ ಹೊರತು ಇತರರಿಗೆ ಸಾಧ್ಯವಿಲ್ಲ. ಹೀಗೆ ಆಗಮಾದಿಗಳಲ್ಲಿ ಪ್ರಮಾಣಗಳುಂ ಟೆಂದು ಹೇಳುವದೊಂದೇ ತಡ; ನನ್ಯಾಸಿಪಕ್ಷದ ಶರಣಮ್ಮನು ಭಾಷಣವನ್ನು ಬಿಲ್ಲಿಸಿದಳು. ಕೆಲವರು ಸ್ಪಾಪ್ ಸ್ಪಾಪ್ ಎಂದು ಕೂಗಾಡಿದರು. ಬಳಿಕ 'ಶಾನು ಯಾರು? ನನ್ನ ಕರ್ತವ್ಯವೇನು?' ಮುಂತಾದ್ದನ್ನರಿಯದ, ಹೊಟ್ಟೆಗಾಗಿ ಸನ್ಯಾಸಿಗಳ ಲಂಗೋಟಿ ಯನ್ನು ತೊಳೆಯುತ್ತ ಬೆನ್ನು ಹತ್ತಿದ ಒಬ್ಬ ಪಡದೆಪ್ಪನು ಭಾಷಣ ಮಾಡುವಾಗ್ಗೆ ಜಗದ್ಗುರುಗಳನ್ನು ನಿಂದಿಸಿದನು. ಇದನ್ನು ಕೇಳುತ್ತ ಶರಣಮ್ಮನು ಸುಮ್ಮನೆ ಕುಳಿತಿದ್ದಳು. ವಿದ್ಯಾರ್ಥಿಗಳು 'ಶೇಮ್, ಶೇಮ್' ಎಂದು ನುಡಿದರು. ಆದಕ್ಕೆ ಶರಣಮ್ಮ ವಿದ್ಯಾರ್ಥಿ ಗಳನ್ನು ಹೊರಗೆ ಹಾಕಿದಳು. ನೋಡಿದಿರಾ! ಈಕೆಯ ಸಕ್ಷಾಂಧ ತೆಯನ್ನು?

ಎಲೋ! ಹುಚ್ಚುನಾಯಿ ಪಡದೆಪ್ಪಾ! ಜಗದಾಚಾರ್ಯರೆನ್ನು ನಿಂದಿಸಲಿಕ್ಕೆ ನಿನಗೆ ಸ್ವಲ್ಪವಾದರೂ ನಾಚಿಕೆ ಬರಲಿಲ್ಲನೇ? ಎಲೈ ಮೂರ್ಖಶಿರಾಮಣಿಯೇ! ಸನ್ಯಾಸಿಗಳ ಎಂಜಲನ್ನವನ್ನು ತಿಂದು ಕೋಣನಂತೆ ಉಬ್ಬಿ ನಿಜಗುರುವಿನನ್ನು ಆಲ್ಲಗಳೆಯುವ ಮಹಾಧನಿ ಎಷ್ಟ ರಿಕೆಯಿಂದ ಜೊಗಳು. ಬೋಳಶಂಭಿಗಳ ಸಹವಾಸದಲ್ಲಿದ್ದು ಬೋಳಾಗ ಎಂಜಲನ್ನವನ್ನುಂಡು, ಅವರಂತೆ ಬೊಗಳುವವರು ದೋಳೀಮೊಕ್ಕಳಾಗುವರೇ ಹೊರತು ಇತರರಾಗರು.

ಎಲೋ ನಾಯಿಯಂತಿರುವ ಪಡದೆಪ್ಪನೇ? 'ನನಗೆ ವರ್ತನ ಗಳಿವೆ, ನಾನು ಪಡದೆಪ್ಪನಿದ್ದೇನೆ' ಎಂದು ಬೊಗಳಲಿಕ್ಕೆ ನಿನಗೆ ನಾಚಿಕೆ ಬರಲಿಲ್ಲವೆ? ನಿನಗೆ ಈ ವರ್ತನಗಳನ್ನು ಯಾರು ಕೊಟ್ಟರು? ಪಡದೆಪ್ಪಗಳು ಯಾರ ಅಜ್ಞೆಯಲ್ಲಿರತಕ್ಕವ್ವು. ಇಷ್ಟು ತಿಳಿಯ ಲಾರದೆ, ನಿನ್ನ ಭಾಷಣವನ್ನು ಕೇಳಿ, ಸನ್ಯಾಸಿಗಳೂ, ಸನ್ಯಾಸಿ ಪಕ್ಷವನೂ ನಿನ್ನನ್ನು ಮೇಲಕ್ಕೆಣಿಸಿದರೆ ನಿನಗೆಬರುವ ಫಲವೇನು? ಮಹಾ ದುರ್ಗತಿಯಲ್ಲವೇ? ಗುರುದ್ರೋಹಿಯೇ' ನಿನಗೆ ಲಿಂಗನನ್ನಾ ರಿತ್ತರು? ದೀಕ್ಷೆಯನ್ನು ಮಾಡಿ ಮಹಾಮಂತ್ರೋ ಪದೇಶವನ್ನಾರು ಮಾಡಿದರು? ಇದನ್ನೆಲ್ಲಾ ವಿಚಾರಿಸದೆ ಧಡುಂ ಎಂದು ಸೆಳವಿನ ಹಳ್ಳದಲ್ಲಿ ಧುಮಕುವರೇ? ಹೋಳೀಹುಣ್ಣಿಮೆಯ ಕಾಲದಲ್ಲಿ ಚಂದ್ರನನ್ನು ಕಂಡು ಅಜ್ಞಾನಿಹುದುಗರು ಕೈಗಿತ್ತಿ-ಬಾಯಿ ಗೂ ಯುದ್ಧನನ್ನಾ ರಂಭಿಸದೂರ ಹೇಗೆ ಚಂದ್ರನಿಗಾವಕುಂದಿಕವೂ ಬಾರದೋ ಹಾಗೆಯೇ ನಿನ್ನಂತಹ ಅಜ್ಞಾನಿಗಳಿಕ್ಕು ಜೋರಾಗಿ ಫಾಲ್ಗುನಮಾಸವನ್ನಾರಂಭಿಸಿದರೂ ಆ ಪೂರ್ಣಶಾಪರಿಗಾವ ಬಾಧೆಯೂ ಬಾರದು. ಆಗಲಿ, ನಿನ್ನದೇ ಕೈ,ನಿನ್ನದೇ ಬಾಯಿ! ನಿನ್ನ ಬಾಯಿಗೆ ತಕ್ಕಂತೆ ಯಮರಾಜನು ಸ್ವತಂತ್ರವಾದುದೊಂದು ಕುಂಡ ವನ್ನೇ ರಚಿಸಿದ್ದಾನೆ. ಆ ಕುಂಡವು ನಿನ್ನನ್ನು ಎದುರುನೋಡುತ್ತಿರು ವುದು.

ಓರ್ವ ಗುರುಭಕ್ತ.

ನಿಧನ

ಕೊಲ್ಲಾಪುರ ಸ್ವೀಟ್ಸ್ ಶಿರೋಳ ಮೊಕ್ಕಾಮಿನಲ್ಲಿ ಲಕ್ಷ್ಮೀಶ್ವರ ಹೀರೇಮಠದ ಸೋಮಶೇಖರಯ್ಯನವರ ಧರ್ಮಪತ್ನಿಯವರೂ, ಮೈಸಾಳ ಹಿರೇಮಠದ ಶ್ರೀ॥ ಪ॥ ಬ್ರ॥ ಪಟ್ಟಾಧ್ಯಕ್ಷ ಇವರ ಭಗಿನಿಯರೂ ಆದ 'ಪಾರ್ವತೀದೇವಿಯೆಂಬ' ಗುರುಭಕ್ತರು, ಕೆಲವು ದಿವಸ ಅಸ್ವಸ್ಥರಾಗಿದ್ದು ತಾ॥ ೨೨-೧೦-೩ ಆನೇ ಗುರುವಾರ ದಿವಸ ಶಿವಸಾಯುಜ್ಯವನ್ನು ಹೊಂದಿದರು. ಸವರಿಯವರ ಸಮಾ ಧಿಕ್ರಿಯೆಯಲ್ಲಿ ಸಾವಿರಾರು ಜನರು ನೆರೆದಿದ್ದರು. ಆ ಸಮುಯವಲ್ಲಿ ಪ್ರಭಾಪೋಷಣೆಗಾಗಿ ೧ ರೂ. ಯನ್ನು ಸಮರ್ಪಿಸಿದರು ಪರಮೇ ಶ್ವರನು ಇವರ ನಿಯೋಗದಿಂದ ಬಂಧುಜನಗಳಿಗುಂಟಾದ ದುಃಖ ವನ್ನು ಕಾಂತಿಗೊಳಿಸಿ ಮೃತರ ಆತ್ಮಕ್ಕೆ ಶಾಂತಿಯನ್ನಿಯಬೇಮೆಂದು ಅಪೇಕ್ಷಿಸುತ್ತೇವೆ.

ಓರ್ವಗುರುಭಕ್ತ, ಶಿರೋಳ.

ಶ್ರೀ ಧನಲಕ್ಷ್ಮೀಪೂಜಾಮಹೋತ್ಸವ.

ಶಿವಮೊಗ್ಗಾ ದಿ॥ ಹಾರನಹಳ್ಳಿಯಲ್ಲಿರುವ ಗಾಜನೂರು ಶಾ॥ ತಿರುಳಪ್ಪನವರು ತಮ್ಮ ಗೃಹದಲ್ಲಿ ಪದ್ಧತಿಪ್ರಕಾರ ತಾ॥ 22-10-38 ನೇ ಶನಿವಾರ ಸಾಯಂಕಾಲ ಧನಲಕ್ಷ್ಮೀಪೂಜೆಯನ್ನು ಬಹು ವೈಭವದಿಂದ ನೆರವೇರಿಸಿದರು. ಪ್ರಥಮತಃ ಕೇರ್ತನೆಕಾರರು ಕವಿಭೂಷಣೇತ್ಯಾದಿ ಬಿರುದಾಂಕಿತರಾದ ವೇ॥ ಗುಬ್ಬೀ ಶಿವರುದ್ರಶಾಸ್ತ್ರಿಗಳವರು ಮಹಾಗುರು ಪಂಚಾಚಾರ್ಯರ ಮಂಗಲಪದ್ಯಗಳನ್ನೂ ಹಾಗೂ ಮಹಾಲಕ್ಷ್ಮಿಯ ಸಂಬಂಧವಾದ ಕೇರ್ತನೆಗಳನ್ನೂ ತಮ್ಮ ಮಂಜುಳಸ್ವರದಿಂದ ಗಾನರೂಪವಾಗಿ ಪಾಡಿ ಸಭಳರನ್ನು ಆನಂದ ಸೊಳಿಸಿದನಂತರ ಶ್ರೀ ಲಕ್ಷ್ಮೀಪೂಜೆಯು ವಿಧ್ಯುಕ್ತವಾಗಿ ನಡೆದು, ವೇ॥ ಶಾಸ್ತ್ರಿಗಳವರಿಗೆ ಧನರೂಪವಾಗಿ ಸಂಭಾವನೆಯನ್ನಿತ್ತು ಗಾರ ವಿಸಿ ಮಾಪೇಶ್ವರರನ್ನು ದಕ್ಷಿಣಾದಿಗಳಿಂದ ಸತ್ಕರಿಸಿ ಪ್ರಸಾದವನ ಯೋಗವಾಗಿ ತಣಿವಿರುವವರೆಲ್ಲರೂ ಗುಣವಂತರಾಗಿರುವುದಿಲ್ಲ, ಒಂದುಪಕ್ಷ ಹಣಗುಣಗಳೆರಡೂ ಒಂದೆಡೆಯಲ್ಲಿ ಸೇರಿದ್ದರೂ ಸ್ವಧರ್ಮದ ತಿರುಳನ್ನು ತಿಳಿದು ಕೃತಿಯಿಂದ ತೋರಿಸುವ ಶ್ರೀಮಂತ ಧಾರ್ಮಿಕ ಗುಣಸಂಪನ್ನರು ದೊರಳುವದು ಅತಿ ದುರ್ಲಭ. ಸಾ॥ ತಿರುಳಪ್ಪನವರೂ ಇವರ ಸಹೋದರರೂ ಸಹ ಗುರುಪದ ಭಕ್ತ ತತ್ವರರೂ, ಗರ್ವರಹಿತರೂ, ಸದ್ಗುಣಭರಿತರೂ, ಮತಧರ್ಮದ ನಿಜತತ್ವವನ್ನರಿತವರೂ, ಗುಣ ಅಧಿಕಾರಯೋಗ್ಯತೆಗಳನ್ನು ನೋಡಿ ಭಾವಿಸಿ ಗೌರವಿಸುವ ವಿಶಕ್ಷಣಮತಿಯುತರೂ ಆಗಿರುವರು. ಇವರ ಸ್ವಧರ್ಮ ಗುರುಭೃವಸಿಸ್ಥೆಯೂ, ಐಶ್ವರ್ಯವೂ ವರ್ಧಿಸಲು ಕ್ಷಪೆಯನ್ನೀಯಲೆಂದು ಶ್ರೀಜಗದ್ಗುರು ಪಂಚಾಚಾರ್ಯರನ್ನು ಅತಿ ಕಳಧಭಕ್ತಿಯಿಂದ ಪ್ರಾರ್ಥಿಸುವ,

ಓರ್ವ ಧರ್ಮಾಧಿಮಾನಿ.

॥ ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು ॥

ಗಾಯನ ಕೋಕಿಲ.

ರಾಣೆಬೆನ್ನೂರುತಾಲೂಕು ಹನುಮಪುಣಗ್ರಾಮದ ಬಸವಾರ್ಯ ರೆಂಬ ಗಾವಾಯಿಗಳು ನವರಾತ್ರಿಹಬ್ಬದಲ್ಲಿ ಕೊಟ್ಟೂರುಪಟ್ಟಣದಲ್ಲಿ ತಮ್ಮ ಗಾಯನದ ಕಚೇರಿಗಳನ್ನು ಅನೇಕಳಕಡೆಗಳಲ್ಲಿ ಜರಿಗಿಸದರು. ಪ್ರತಿಯೊಂದು ಕಚೇರಿಗೆ ವಿಶೇಷ ಜನಸಮೂಹವು ಸೇರಿ ಇವರ ಗಾಯನದಿಂದ ಆನಂದಹೊಂದಿ ತಮ್ಮಗಳ ಸಂತೋಷವನ್ನು ಸೂಚಿಸುವದಕ್ಕಾಗಿ ಕೊಟ್ಟೂರು ಪಂಚಾಯತಿ ಬೋರ್ಡಿನ ಅಧ್ಯಕ್ಷರು ಸವರಿ ಪಂಚಾಯತಿಯ ವೈಸ್‌ಪ್ರಸಿಡೆಂಟರೂ ಮೊಲಾರುಗಳೂ ಪುರಪ್ರಮುಖರೂ ಶೀರಿ ಸವರಿ ಗವಾಯಿಗಳನ್ನು ಗಾರವಿಸಬೇಕೆಂದು ಆಲೋಚಿಸಿ ೪-೧೦-೩೮ ನೆಯ ಮಂಗಳವಾರ ಪ್ರಾತಃಕಾಲ ೧೦ ಘಂಟೆಗೆ ಸವರಿ ಪಂಚಾಯತಿ ಬೋರ್ಡು ಆಫೀಸಿನ್ನು ತೆಳರು ತೋರಣಗಳಿಂದ ಆಲಂಕಾರಮಾಡಿ ಪ್ರಚಂಡ ಸಭೆಯನ್ನು ತೇರಿಸಿ ಸವರಿಯವರಿಗೆ ಗಾಯನಕೋಕಿಲ ಎಂಬ ಬಿರುದಿನೊಡನೆ ಸುವರ್ಣಪದಕವು ಕೊಟ್ಟೂರು ಮಿದಾಳಘಟ್ಟವಮಠದ ಜಾಗಟಿಗೇರಿ ಜನ್ನಬಸವಯ್ಯನವರ ಹಸ್ತದಿಂದ ಕೊಡಿಸಲ್ಪಟ್ಟಿತು. ಹಾಗು ಬಸವಾರ್ಯರು ಚಿಕ್ಕವಯಸ್ಸಿನಲ್ಲಿ ಪಾಂಡಿತ್ಯವನ್ನು ಪಡೆದು ಸಭೆಗ ಳಲ್ಲಿ ರಂಜನೆಮಾಡತಕ್ಕ ಕೌಶಲ್ಯವನ್ನು ಪಡೆದುವಕ್ಕಾಗಿ ಸಭೆಯರು ಅವರನ್ನು ವಿಶೇಷವಾಗಿ ಶ್ಲಾಘಿಸಿದರು.

ಪ್ರತ್ಯಕ್ಷದರ್ಶಿ.

ಮಲೆಜ್ವರಕ್ಕೆ ಮಲೇರಿಯಾನ ಇದು ಮಲೆಜ್ವರ, ಚಳಿ ಜ್ವರ, ದಿನಬಿಟ್ಟು ಬರು ವಜ್ವರ, ೨ ವ ೩ ದಿವಸಕ್ಕೊಮ್ಮೆ ಬರುವಜ್ವರ, ಕ್ವಿನೀನ್‌ನಿಂದಲೂ ಇಂಜೆಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ನೆಡ್ಡೆ ಸಮೇತ ಸಂಪೂರ್ಣ ಗುಣಪಡಿಸುತ್ತದೆ. ೪ ಡ್ರಾಸ್ ಸೀಸೆಗೆ ಆಣೆ 0-14-0, 8 ಡ್ರಾಸ್ ಸೀಸೆಗೆ ರೂ. 1-8-0, ಡಜ್ಜನಿಗೆ ರೂ. 9-12-0, ರೂ. 16-8-0.

ಕಂಪೌಂಡ್ ಸಿರಪ್ ಸಾಲಸಪರೆಲ್ಲ—ಸ್ವಪ್ನೇಂದ್ರಿಯ ಸ್ಖಲನ, ಶೀಘ್ರಸ್ಖಲನ, ಧಾತುಕಳಕೊಳ್ಳುವದು, ಮೂತ್ರದೊಡನೆ ನಪ್ಪವಾಗುವದು, ವೀರ್ಯಕ್ಷಯ, ತೆಳ್ಳಗಾದಧಾತು, ಇವೆಲ್ಲದರ ಬಿಪತ್ತನ್ನು ಕಿತ್ತು ಬಿಸಾಡುವದಲ್ಲದೆ ಧಾತುಪುಷ್ಟಿ ರಸಾಯನ ವಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0.

ಪ್ರಖ್ಯಾತಿಪಟ್ಟ ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು—ಸಕಲತರದ ಹೊಟ್ಟೆಹುಳುಗಳನ್ನು ನಾತಕಡಿಸಿ ಜಾಡಿ ಸುವದರಲ್ಲಿ ಮುಖ್ಯ ಔಷಧಿ. ಡಜನ್ನಿಗೆ ಅ. 0-5-0 ನೂರರ ಬಾಟ್ಲಿಗೆ ರೂ. 2-0-0.

ಕಂಪೌಂಡ್ ಸಿರಪ್ ಬ್ಲಾಟಿ—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇವಸ, ಜಾವನ್ನು ಖಾತ್ರಿಯಿಂದ ಗುಣ ಪಡಿಸುತ್ತದೆ. ಸೀಸೆಗೆ ರೂ. 3-8-0, ರೂಪಾಯಿ 1-14-0.

ಬೇಬಿ ಫೋರ್—ಬಾಲ್ಯಾವಸ್ಥೆಯಲ್ಲಿ ಎಲುಬುಗಳಲ್ಲಿ ನುಸ್ಸುದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ತಾಮ ರೆಗ್ರಹಣಿ ರೋಗದಿಂದ ಮಾಂಸ ಜೋಲುಬಿದ್ದು, ಮೈ, ಕೈ, ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ.

ಸೀಸೆಗೆ ರೂಪಾಯಿ 1-4-0

ಕಂಪೌಂಡ್ ಸಿರಪ್ ವೆಸಿಕೋಜ—ಪ್ರಮೇಹ, ಮೂತ್ರ ದ್ವಾರದಿಂದ ದುರ್ವಾಸನೆಯ ಕೀವು, ಮೂತ್ರಹೊಯ್ಯುವಾಗ ತಡೆಯಲಾರದ ಕಠಿಣ ಉರಿ, ಮೂತ್ರಕೃಚ್ಛ್ರ, ಮೂತ್ರ ಆಗಾಗ್ಗೆ ಬಂದು ನಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು. ಇವೇ ಮೊದಲಾದ ಪ್ರಮೇಹದ ಲಕ್ಷಣಗಳು ಬಿದಪನ್ನು ಕೆಲವು ತಾಸುಗಳಲ್ಲಿಯೇ ರಾಮಬಾಣದಂತೆ ನಿಲ್ಲಿಸುವದು.

ಸೀಸೆಗೆ ರೂ. 3-8-0, ರೂ. 1-14-0

ಶುದ್ಧ ಟಿಕ್ಕು, ಹೊಮ್ಮೊಪಥಿ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) .... ೧೩ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೩ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೩ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ .... ೧೩ ಆಣೆ
ಶ್ರೀಕರಭಾಷ್ಯಂ (ಚತುಷ್ಪಾತ್ರೀ) .... ೧ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) .... ೧ ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ.
ವೀರಶೈವಸಿದ್ಧಾಂತಸುಧಾಕರ .... ೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) .... ೮ ರೂ.
A brief life-sketch of Pandit Sri Kashinatha Shastriji (*English*) 4 As.
Shakti-Vishistadvaita *or* **The Philosophical Aspect of Virasaivism** (*English*) .... 8 As.
Speeches by Pandit Shri Kashinatha Shastri (*English*) 12 As.
ವೀರಶೈವಾಚಾರ (ಮರಾಠಿ) ... ... ೧ ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ) ... ೧ ರೂ.
ವೀರಶೈವೇಂದ್ರಶೇಖರ (ಸಂಸ್ಕೃತ) ... ... ೧ ರೂ.
ನಂದಿಕೇಶ್ವರಕಾರಿಕಾ (ಸಂಸ್ಕೃತ) ... ... ೨ ಆಣೆ.
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ... ... ೨ ಆಣೆ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಪಂಚಾಚಾರ್ಯ ವೇದ ಶಿವಶ್ರೀ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಥಾನ ಮಹಾವಿದ್ವಾ ವೇ॥ ತರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪಂಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೮ ನೇ ನವಂಬರ್ ೧೯೩೮ [ಸಂಚಿಕೆ ೩೦

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ.

ಶ್ರೀಕರಭಾಷ್ಯವನ್ನು ರಚಿಸಿರುವ ಶ್ರೀಪತಿಪಂಡಿತಾರಾಧ್ಯರು ಕ್ರಿ. ಶ. ೧೧ನೆಯ ಶತಮಾನದಲ್ಲಿದ್ದರೆಂಬ ವಿಷಯವು ಅನೇಕ ಪ್ರಾಚೀನಗ್ರಂಥಗಳಿಂದಲೂ, ಶಿಲಾಶಾಸನಾದಿಗಳಿಂದಲೂ ಸಿದ್ಧವಾದುದಾಗಿದೆ. ಹೀಗಿದ್ದರೂ ಬೆಂಗಳೂರು ನಗರನಿವಾಸಿಗಳಾದ ರಾವ್‌ಸಾಹೇಬ ಸಿ. ಹಯವದನರಾಯರೆಂಬವರು ಈ ಭಾಷ್ಯದ ಮೇಲೆ ಇಂಗ್ಲೀಷಿನಲ್ಲಿ ಬರೆದಿರುವ ಇಂಟ್ರಡಕ್ಷನ್ನಿನಲ್ಲಿ ಇವರು ೧೪ ನೆಯ ಶತಮಾನದಲ್ಲಿದ್ದರೆಂದು ಬರೆದು ಜಗತ್ತಿನ ಜನರಿಗೆಲ್ಲಾ ಮಹಾ ಭ್ರಮೆಯನ್ನುಂಟುಮಾಡಿದ್ದಾರೆ. ರಾಯರು ಬರೆದಿರುವ ಈ ವಿಧವಾದ ಅಯಥಾರ್ಥಾಭಿಪ್ರಾಯವನ್ನು ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಅನೇಕಾನೇಕಪ್ರಮಾಣಗಳಿಂದ ಆಮೂಲಾಗ್ರವಾಗಿ ಖಂಡಿಸಿ, ವೀರಶೈವಮತಕ್ಕೂ ಶ್ರೀಕರಭಾಷ್ಯಕ್ಕೂ ಅಸಾಧಾರಣವಾದ ಗೌರವವನ್ನುಂಟುಮಾಡಿದ ವಿಷಯವು ಈ ಪುಸ್ತಕದಲ್ಲಿ ಉಕ್ತವಾಗಿದೆ.

ಬೆಲೆ ೪ ಆಣೆ

ಸದ್ಬೋಧರತ್ನಾವಳಿ.

ಈ ಗ್ರಂಥವನ್ನು ತಿಪಟೂರು ನಿವಾಸಿಗಳಾದ ವೇ॥ ಆರ್. ಎಂ. ಮಲ್ಲಿಕಾರ್ಜುನಾರಾಧ್ಯರು ಮುದೇನೂರು ಮಳೇಮಠ, ಇವರು ರಚಿಸಿರುವರು. ಇದರಲ್ಲಿ ಅನೇಕ ನೈತಿಕ-ಧಾರ್ಮಿಕ-ಪಾರಮಾರ್ಥಿಕ ವಿಷಯಗಳು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿರುವವು. ಗ್ರಂಥವು ಬಹಳ ಸರಳಭಾಷೆಯಲ್ಲಿ ಬರೆಯಲ್ಪಟ್ಟಿರುವುದರಿಂದ ಪ್ರತಿಯೊಬ್ಬರಿಂದಲೂ ಸಂಗ್ರಹಿಸಲು ಯೋಗ್ಯವಾಗಿದೆ. ಪುಟಗಳು 176. **ಬೆಲೆ ೩ ಆಣೆ ಮಾತ್ರ.**

A BRIEF LIFE-SKETCH OF PANDIT SRI KASHINATHA SHASTRIJI

This Book printed in English contains a brief life sketch of Pandit Sri Kashinatha Shastriji. It shows the very many good and memorable deeds done by Sastriji up till now. **Price per Copy 4 Annas.**

SHAKTI-VISHISTADVAITA
OR
THE PHILOSOPHICAL ASPECT OF VEERASAIVISM.

This book is the English translation of the lecture on Shakti-vishistadvaita Sidhanta delivered before the Philosophical Congress of 1935 at Mysore by Pandit Kashinatha Shastry.

The whole of Veerasaiva-philosophy is briefly explained in this book No other book containing so much information about Veerasaiva philosophy had ever been published.

It is essential that every one who wants to know the secret of Veerasaiva philosophy must order for a copy of this valuable book. **Price 8 Annas.**

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶ್ರೀಮಜ್ಜಗದ್ಗುರು ಪಂಚಾಚಾರ್ಯ ಭಜನಾ ಸಂಘದ ಮಹೋತ್ಸವ, ಮೈಂದರ್ಗಿ.

ಪ್ರತಿವರ್ಷ ಪದ್ಧತಿಯಂತೆ ಶ್ರೀ॥ ಸಿ॥ ಬ್ರ॥ ವೀರಸಂಗದೇವರು ಹಿರೇಮಠ, ಇವರು ತಮ್ಮ ಮಠದಲ್ಲಿ ಸಕಲ ಸದ್ಭಕ್ತರ ಸಹಾಯದಿಂದ ಭಾದ್ರಪದ ಶು॥ ೮ ರಿಂದ ದೀಪಾವಳಿ ಪರ್ಯಂತ ಅಷ್ಟಾವರಣಸಂಬಂಧವಾಗಿ ಪ್ರವಚನವನ್ನು ನಡೆಯಿಸಿದರು. ಪ್ರವಚನಕ್ಕೆ ಸಕಲಮತದ ಪ್ರಮುಖಿನ-ಹಾಶಯರು ಯಾವ ಭೇಧಭಾವವಿಲ್ಲದೆ ಬರುತ್ತಿದ್ದರಲ್ಲದೆ ಮಹಮದೀಯರು ಸಹ ಅತ್ಯಂತ ಭಕ್ತಿಯಿಂದ ಬಂದು ಕೇಳುತ್ತಿದ್ದರು. ಪ್ರವಚನ ಸಮಾಪ್ತಿಗಾಗಿ ೪ ॥ ೨೦-೧೦-೩೪ ಸೋಮವಾರ ಉದಯಕ್ಕೆ ಬೃಹನ್ಮರದಿಂದ ಜಗದಾಚಾರ್ಯರ ಫೋಟೋದೊಂದಿಗೆ ಶ್ರೀಮಜ್ಜಗದ್ಗುರು ಪಂಚಾಚಾರ್ಯಭಜನಾಸಂಘದ ಪ್ರಭಾತಭೇರಿಯ ಉತ್ಸವವು ಹೊರಟಿತು. ಉತ್ಸವದಲ್ಲಿ ೩-೪ ಸಾವಿರ ಜನರು ಭಾಗಿಗಳಾಗಿದ್ದರು. ಈ ಉತ್ಸವವು ದೇವೇಂದ್ರನ ಉತ್ಸವಕ್ಕೆ ಸನಾನನವಾಗಿ ವೈಭವದಿಂದ ನೆರವೇರಿತು. ಜಗದಾಚಾರ್ಯರ ಜಯಘೋಷವು ನಾಲ್ಕಾರು ಕರ್ಣಕುಹರಗಳಲ್ಲಿ ಪ್ರವೇಶಿಸಿ ಆಸ್ತಿಕ್ಯವನ್ನು ಹುಟ್ಟಿಸುತ್ತಿತ್ತಲ್ಲದೆ ಬಹುಪಂಥಿಗಳ ವಕ್ರಮಾರ್ಗವನ್ನು ಹೊಡೆದೋಡಿಸಿ ಆಚರಿಗೆ ಸರಳಭಾವವನ್ನು ಹುಟ್ಟಿಸುತ್ತಲಿತ್ತು. ಅಲ್ಲಲ್ಲಿ ಸದ್ಭಕ್ತರು ಪುಷ್ಪ ಹಾರಗಳನ್ನು ಅರ್ಪಿಸುತ್ತಿದ್ದರು. ಈ ರೀತಿಯಾಗಿ ಉತ್ಸವವು ವಿಶೇಷ ವೈಭವದಿಂದ ಜರುಗುತ್ತ ಮಲ್ಲಿಕಾರ್ಜುನದೇವಾಲಯಕ್ಕೆ ಬಂದು ತಲಿತು. ಅಲ್ಲಿ ಶ್ರೀ ಪಟ್ಟಾಧ್ಯಕ್ಷರು ಪಂಚಾಚಾರ್ಯರಿಗೆ ಒಳ್ಳೆ ಪರಿಣಾಮಕರವಾಗಿ ಭಾಷಣ ಮಾಡಿದರು. ಅನಂತರ ವೇ॥ ಬಸವಣ್ಣಯ್ಯನವರು ಸಾಲಿಮಠ ಇವರು ಇದೇ ವಿಷಯದ ಮೇಲೆ ಭಾಷಣಮಾಡಿದರು. ಅನಂತರ ಸಿದ್ಧರಾಮಪ್ಪ ಮಾ॥ ಸಾ॥ ಇವರ ಪುತ್ರರಾದ ದತ್ತಾತ್ರೆಯ ಇವರ ಹಸ್ತದಿಂದ ವಿಧಿಯು ನೆರವೇರಿ ಜಗದಾಚಾರ್ಯರ ಭಾವಚಿತ್ರಕ್ಕೆ ಧ್ವಜವಂದನೆಯು ಮಾಡಲ್ಪಟ್ಟಿತು. ಅಮೇಲೆ ರಾ॥ ರಾ॥ ವೀರಭದ್ರಪ್ಪ ಉಗಾಣಪುರೆ ಇವರು ಈ ಸಂಘಕ್ಕೆ ೧೦೧ ರೂ. ಬಹುಮಾನವನ್ನರ್ಪಿಸಿದರು. ಬಳಿಕ ಉತ್ಸವವು ಮಠಕ್ಕೆ ಬಂದು ತಲ್ಪಿತು ಆಮೇಲೆ ಸಕಲ ಜನರಿಗು ಗಣಾರಾಧನೆಯಿಂದ ತೃಪ್ತಿಹೊಂದಿದರು. ಅದೇದಿವಸ ಸಾಯಂಕಾಲ ೬॥ ಘಂಟೆಗೆ ರಾ॥ ರಾ॥ ನಾಗಪ್ಪ ಬೊಮ್ಮಿ, ಲಿಂಗಪ್ಪ ಬೋರಾಮನೆ, ಇವರ ಅಧ್ಯಕ್ಷತೆಯಲ್ಲಿ ಪ್ರಚಂಡಸಭೆಯು ನೆರವೇರಿತು. ಮುಖ್ಯ ವಕ್ತೃಗಳಾದ ಸಾಲಿಮಠದ ಬಸವಣ್ಣಪ್ಪಯ್ಯನವರು 'ಸಂಚಾಚಾರ್ಯರಿಂದ ಆಗತಕ್ಕ ಲಾಭ' ಎಂಬ ವಿಷಯದಮೇಲೆ ೧॥ ಘಂಟೆಯವರೆಗೆ ಭಾಷಣ ಮಾಡಿದರು. ಅಮೇಲೆ ಶ್ರೀಗಳವರು 'ವೀರಶೈವಮತಶಾಸ್ತ್ರಪಕರು ಪಂಚಾಚಾರ್ಯರು' ಎಂಬ ವಿಷಯದಮೇಲೆ ೨ ಘಂಟೆವರೆಗೆ ಭಾಷಣಮಾಡಿದರು. ಅನಂತರ ಮಿ॥ ಗುರುನಾಥರಾಜ ವಕೀಲರು ನೆವ್ಲು ಮಾಡಿದ ಉಪ್ಪಿತಾಯ ಬಗ್ಗೆ ಮನೋಜ್ಞರಾಗಿ ಭಾಷಣಮಾಡಿದರು. ಬಳಿಕ 'ಜೋಳದ ಶ್ರೀಜಗದ್ಗುರು ಪಂಚಾಚಾರ್ಯಮಹಾರಾಜಕಿ ಜಯ' ಎಂಬ ಜಯ ನಿನಾದದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಪ್ರತ್ಯಕ್ಷವರ್ದಿ.

ಶೋಚನೀಯ ನಿಧನ

ಹರಪನಹಳ್ಳಿ ನಿವಾಸಿಗಳಾದ ಧರ್ಮಜ್ಞೋತಿ ಹಾವೇರಿ ನಿವಾಸ್ಯ ನವರು ಕಣ್ಣರೆಯಾದರು. ಇವರು ತಮ್ಮ ದೇಹದಂಡನೆಯಿಂದ ಸುಮಾರು 40000 ರೂಪಾಯಿಗಳನ್ನು ಸಂಪಾದಿಸಿದರು. ಇವರಿಗೆ ವಯಸ್ಸು ಸುಮಾರು 50 ವರ್ಷ ಆಗಿತ್ತು. ಇವರು ತಮ್ಮ ಅಣ್ಣ, ಮಕ್ಕಳು, ಮೊಮ್ಮಕ್ಕಳು, ಹೆಂಡತಿ ಮೊದಲಾದವರಿಗೆ ಸರಿಯಾದ ವ್ಯವಸ್ಥೆಯನ್ನು ಮಾಡಿದ್ದಲ್ಲದೆ ಸುಮಾರು 6000 ರೂಪಾಯಿಗಳನ್ನು ದಾನಮಾಡಿದ್ದಾರೆ. ಇವರ ಸ್ಮೃಲಕೀರವು ಕಣ್ಮರೆಯಾದರೂ ಇವರ ಕೀರ್ತಿಶರೀರವು ಸದಾ ವಿರಾಜಿಸುತ್ತಿರುವುದು. ಇವರ ಆತ್ಮಕ್ಕೆ ಶ್ರೀ ಪರಮಾತ್ಮನು ಶಾಂತಿಸುಸ್ಥೈರ್ಯವಿಲಿ.

ತೆಗ್ಗಿನಮಠದ ಜಜ್ಜ ವೀರಯ್ಯ.

ಧಾರ್ಮಿಕ ಸಾಮಾಜಿಕ ಟಿಪ್ಪಣಿಗಳು

(ಟಿಪ್ಪಣಿಕಾರ—ವೈವಜ್ಞ ವಿನೋದ)

(೧) ರಾಜಕೀಯ ಶಾಯಿದೆ (ಶಾಸನ) ಗಳಲ್ಲಿ ವೀರಶೈವಮತವು ಹೇಗಿರುವುದು?

ರಾಜಕೀಯ ಶಾಸನಗಳಲ್ಲಿ ವೀರಶೈವಮತದ ಸ್ಥಾನ ವೆಲ್ಲಿರುವುದನ್ನು ಪ್ರಾಜ್ಞರು ಪರಾಮರ್ಶಿಸಿರುವರೇ? ಮುಂಬೈ-ಮದ್ರಾಸ್-ಕಲ್ಕತ್ತಾ ಇಲಾಖೆಗಳ ಹಾಯ್ ಕೋರ್ಟ್‌ನವರು ಈ ವಿಷಯದ ನ್ಯಾಯವಿಮರ್ಶೆಗಳಲ್ಲಿ ನಾನಾಬಗೆಯಿಂದ ಶರಾವು ಬರೆದಿರುತ್ತಾರೆ. ಕೆಲವು ಶರಾವುಗಳಲ್ಲಿ "ಹಿಂದೂಲಾ" ಪ್ರಕಾರ ಬ್ರಾಹ್ಮಣ ವರ್ಣದ ಪ್ರಕಾರವಾಗಿಯೂ, ಕೆಲವನ್ನು ವೈಶ್ಯಪ್ರಕಾರವಾಗಿಯೂ, ಕೆಲವನ್ನು ಶೂದ್ರಪ್ರಕಾರವಾಗಿಯೂ ಬರೆದಿರುತ್ತಾರೆ ನ್ಯಾಯಮೂರ್ತಿಗಳಿಗೆ ಉಭಯಪಕ್ಷಕಾರರ ವಕೀಲರ ಅಭಿಪ್ರಾಯಗಳ ಬಲಾಬಲಗಳೂ-ಶಾಸ್ತ್ರಿಪಂಡಿತರು ಹೇಳಿಕೆಗಳೂ ಬಹುವಶವಾಗಿ ಸಾಗಿದ ಕೆ ತಮ್ಮ ನಿರ್ಣಯಗಳನ್ನು ಬರೆದಿರುತ್ತಾರೆ "ಹಿಂದೂಲಾ" ಎಂಬ ಶಾಸನವು ಚತುರ್ವರ್ಣಾತ್ಮಕವಾಗಿ ನೇರವಾಗಮ-ಉಕ್ತ ನಿಷ್ಠತ್ವ ಸ್ವತ್ವಾದಿಗಳ ಆಧಾರದಿಂದ ಸೂತ್ರಿಕ್ಷಿತೆ ವೀರಶೈವರಿಂದು ಪ್ರಸಿದ್ಧರಾಗಿದ್ದ ಈ ವರ್ತಮಾನ ಹಿಂದೂಲಾದ ಪ್ರಕಾರ ಯಾವವರ್ಣದೊಂದು ವರ್ಣಾವೈಶಿಷ್ಟ್ಯವುಳ್ಳ ಕಾನೂನಿಗೆ ಸೇರಬೇಕಾಗುತ್ತದೆ? ವೀರಶೈವರು "ಹಿಂದೂಲಾ" ವನ್ನು ಮಾನ್ಯಮಾಡಿದೆ ತಮ್ಮ ಮತಕ್ಕೊಂದು ಸ್ವತಂತ್ರವಾದ "ಶಾಸನ" ವನ್ನು ಸಿದ್ಧಪಡಿಸಲು ಸಮರ್ಥರಾಗಿರುವರೇ? ಇಮ್ಮಾನ್ಯವಾಗದಿದ್ದರೆ ಅವರು ವೀರಶೈವ ಮತವನ್ನು ಯಾವ ವರ್ಣದ ಕಾನೂನಿಗೆ ಸೇರಿಸಿಕೊಳ್ಳುವರು? ಬ್ರಾಹ್ಮಣವರ್ಗಕ್ಕೆ ಸೇರಿಸಬೇಕೆಂದರೆ ವೀರಶೈವ ಜನಾಂಗವು ಬ್ರಾಹ್ಮಣ ವರ್ಣಾಶ್ರಮ, ವರ್ಣಾಚಾರದಂತೆ ನಡೆಯುತ್ತಿರುವವಿಲ್ಲ ಅನೇಕರು ಬ್ರಾಹ್ಮಣವರ್ಗದವರೂ, ಕೆಲವರು ಕ್ಷತ್ರಿಯರಂತೆಯೂ, ಕೆಲವರು ವೈಶ್ಯರಂತೆಯೂ, ಕೆಲವರು ಶೂದ್ರರಂತೆಯೂ, ಲೌಕಿಕವ್ಯವಹಾರವನ್ನು ನಡೆಸುತ್ತಿರುವರು. ಈ ವೈಚಾರಿಣಿಗಳು ಬೋಳಿಸಿದ್ದವಾಗುತ್ತದೆ ವೀರಶೈವ ಧರ್ಮ ಶಾಸ್ತ್ರದಲ್ಲಿ ಈ ಮತವು ಆಚಾರ್ಯಕ ವರ್ಣಾಶ್ರಮ ಬದ್ಧವಾಗಿರುವದರಿಂದ ಅದಾವ ವರ್ಣೋಚಿತ ಜಾತಿ ವಿಭಾಗಗಳಿಗೂ ಸೇರುತ್ತಾಗುತ್ತದೆ

ಹೀಗೂ ವರ್ಣಾಶ್ರಮಕ್ಕೆ ಸಂಬಂಧವಿಲ್ಲದ ಈ ಮತವನ್ನು "ಹಿಂದೂಲಾ" ಶಾಸನದ ವ್ಯಾಪ್ತಿಯಲ್ಲಿ ಸೇರಿಸಲಾಗಿರುವದು ಲೌಕಿಕ ವಿಷಯದ ಸುಪ್ರಾಮಿಲಾಪಕ್ಕೆ ಯಾವ ಸಮಸ್ಯೆಯನ್ನು ಪ್ರತಿಕೂಲವಾಗಿ ಉತ್ಪತ್ತಿಯಾಗಿ ಪೆಯಿಂದಾಗಲಿ ಈ ಮತಕ್ಕೂ ನ್ಯಾಯಕೋರ್ಟ್‌ಗಳಲ್ಲಿ ಮಸ್ಸಿಸ್ಸಿಗೆ ಬಂದಂತೆ ಮತದ ಸ್ವರೂಪವನ್ನು ದಿಗ್ದರ್ಶನಗೊಳಿಸಿದ್ದಾರೆ. ಬ್ರಾಹ್ಮಣ್ಯಕ್ಕಾಗಿ ಹೊಡೆದಾಡಿ ಅದರಂತೆ ತರಾವು ಬರೆಸಿಕೊಂಡವರಿದ್ದಂತೆ ಮತಾಭಿಮಾನವಿಲ್ಲದ ಮಹಾಶಯರು ಶೂದ್ರರೆಂದು ಸಾಧಿಸಿ ಜಡ್ಡಾಮೆಂಟ್ ಬರಿಸಿಕೊಂಡ ಪ್ರಜ್ಞತೆಗಳೂ ಬೊರೆಯುತ್ತಾರೆ ದತ್ತಕವಿಧಾನದಾಯವಿವಾಗದಾಸೀಪುತ್ರ, ಮಿಶ್ರವಿವಾಹ ಮೊದಲಾದ ವಿಷಯಗಳಲ್ಲಿ ಈ ಮೇಲಿ ಯರು ಯದ್ವಾತದ್ವಾ ಪ್ರಕಾರಣಗಳನ್ನು ಬೆಳಸಿ ಮತಕ್ಕೊಂದು ವೈಪರೀತ್ಯವನ್ನುಂಟುಮಾಡಿರುವರೆಂದು ಹೇಳಲು ಅತ್ಯಂತ ವಿಷಾದವಾಗುತ್ತದೆ. ಸೊಮ್ಮಕ್ಕೆಸ್ಸನ್ನು ಕಂಡ ಅಜ್ಜನು ತನ್ನ ಹೆಂಡತಿಯ ಅರ್ಧವ ಸೊಲೆಗೆ ಮಗನಾಗವನು! ಈ ದತ್ತಕವಿಧಾನವು ಯಾವ ಕಾನೂನಿಗೆ ಸೇರಬಹುದು? ಧರ್ಮಶಾಸ್ತ್ರದ ಪ್ರಕಾರ ದತ್ತವಿಧಾನವು ಯಾವ ಪ್ರಕಾರ ಬೋಧಿಸಿರುವದು? ಇತ್ತೀಗೆ ಇಲ್ಲ, ವೀರಶೈವರಲ್ಲಿ ಯಾವ ಜಾತಿಯವನೆನ್ನಾದರೂ ದತ್ತಕವಾಡಿಕೊಳ್ಳಲು ಈ ಮತ ಧರ್ಮಶಾಸ್ತ್ರಗಳು ಸಮ್ಮತಿಸುವವೇ? ಇದರಂತೆ ದಾಯವಿಭಾಗ-ದಾಸೀಪುತ್ರನ ಹಕ್ಕು-ಮಿಶ್ರವಿವಾಹ ಮೊದಲಾದವುಗಳ ಧರ್ಮಶಾಸನಗಳನ್ನು ಲಕ್ಷಿಸದೆ ಎತ್ತಿದೇಕತ್ವ "ಹಿಂದೂಲಾ" ದ ಪ್ರಕಾರ ಶಾಸನಗಳನ್ನು ಅಂಗೀಕರಿಸಿದ್ದಾರೆ ಇದು ವರ್ಣಸಂಕರರಿಗೆ ಉಚಿತವಾಗಿದ್ದರೂ ವರ್ಣಾಶ್ರಮವಾದಿಗಳಿಗೆ ಅತ್ಯಂತ ವಿರೋಧವಾಗಿರುವದು. ವೀರಶೈವರು ಅಪ್ರಾಕೃತಮತೀಯರಿದ್ದು ಇವಕ್ಕೆ ಯೋಗ್ಯವಾದ ಚತುರ್ವರ್ಣಾಶ್ರಮಗಳೂ ಜಾಗ್ರತವಾದ ಆಚರಣೆಯಲ್ಲಿರುತ್ತವೆ ದ್ವಿಜಸಂಸ್ಕಾರಯುಕ್ತರಾದ ವರ್ಣಾಶ್ರಮಬದ್ಧರಾದ ಪರಿಶುದ್ಧ ಜಾತಿನಿಷ್ಠರು ಈ ಮತದಲ್ಲಿ ವಿರಾಜಿಸುತ್ತಾರೆ. ದ್ವಿಜತ್ವಹೀನವಾದ ಜಾತಿಗಳಲ್ಲದ ಮಾತ್ರದಿಂದ ಈ ಅಖಿಲ ಮತವೂ ಶೂದ್ರ ಕೋಟಿಯಲ್ಲಿ ಸೇರಬಾರದು ಈ ಮತವು ವಿಶೇಷ ವ್ಯಾಕರತ್ವಳ್ಳಾದ್ದರಿಂದ ಸಕಲವರ್ಣದವರೂ, ಈ ಮತಾನುಯಾಯಿಗಳಾಗಿದ್ದಾರೆ. ಮತದ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಮೇರೆಯರಲ್ಲಿ ವಿರಾಜಿಸುವ ಸಕಲ ವರ್ಣೀಯರಿಗೆ ಧರ್ಮಿಕ ದೃಷ್ಟಿಯಿಂದ ಬಾಧೆ ಬರದಂತೆ ರಾಜಕೀಯ ಶಾಸನಗಳು ನಿರ್ಮಿತವಾಗಿದ್ದರೆ ನವ್ಯ ಮತಕ್ಕೆ ಮಹೋಪಕಾರವಾಗುವದು.

ಈಗ ನಮ್ಮ ಸಮಾಜದಲ್ಲಿ ಬ್ರಾಹ್ಮಣರಿಗಾಗಿ ಹೇಳಿದ್ದ (ಹಿಂದೂಲಾ) ವನ್ನು ಸಾಧಿಸಿ ತಮ್ಮ ಪಕ್ಷಕ್ಕೆ ಜಯವನ್ನುಂಟುಮಾಡಬೇಕಾದರೆ ಎದುರುಪಕ್ಷದವರು ಶೂದ್ರಕಾನೂನನ್ನು ಎತ್ತಿ ಹಿಡಿದು ಹೋರಾಡುವರು ಹೀಗಾಗಿ ನಮ್ಮ ಸಮಾಜದವರು ಮತಧರ್ಮಶಾಸ್ತ್ರ ಸ್ವರೂಪವನ್ನು ಕಣ್ಮರೆದು ನೋಡದೆ ಸ್ವಾರ್ಥಾಕಾಂಕ್ಷೆಯಿಂದ ಧರ್ಮಕ್ಕೆ ಕುಂದುಂಟಾದರೂ ಲೆಕ್ಕಿಸದೆ ಕೂದ್ರ ಅಸಂಬದ್ಧ ತರಂಗಿತ ಶಾಸನಗಳನ್ನು ಅನುಸರಿಸಿದ ರಂಪಾಟಗಳನ್ನು ನ್ಯಾಯಾಸ್ಥಾನದಿಂದ ಹೊಂದುತ್ತಿರುವದು ಈ ದುಃಸ್ಥಿತಿಯನ್ನು ದೂರವಾಹುವ ಸುದಿನ ಗಳೇನು ಬರುವವೋ ಅಂದೇ ವೀರಶೈವಮತದ ಭಾಗ್ಯೋದಯವೆಂದು ಹೇಳಬೇಕಾಗಿದೆ.

(೨) ಶಿಖಾನಿಚ್ಛೇದವು ಶಾಸ್ತ್ರೀಯ ಮಾರ್ಗವಲ್ಲ

ಶಿಖಾಧಾರಣವು ವೀರಶೈವರಿಗೆ ಆವಶ್ಯಕವಾಗಿರುವದು ಸ್ತ್ರೀಯರಿಗೂ ಜಟಾಧಾರಿಗಳಾದ ಪುರುಷರಿಗೂ ಶಿವೆಗಳೆಲ್ಲರಿರುವಂತೆ ಕೆಲವರಿಗೆ ಛಿದ್ರವೆಯುಂಟಾಗಿರುವದು. ಸ್ತ್ರೀಯರು ಜನ್ಮಾರಭ್ಯ ಸಂಪೂರ್ಣ ಕೇಶಧಾರಿಗಳಾಗಿರುವದರಿಂದಲೂ ಪಟ್ಟಚೂಡಾಧಿಕಾರಿಗಳೂ ನಿರಾಭಾರಿಗಳಾದ ವಿರಕ್ತ ವರ್ಗದವರೂ ಜಟಾ-ಮಕುಟ ಮಂಡಿತರಾಗಿರುವದರಿಂದಲೂ ಇವರಿಗೆ ಪ್ರತ್ಯೇಕ ಶಿಖಾಧಾರಣವು ಅನವಶ್ಯಕವಾಗಿದೆ ಶಿಖೆಯು ರುದ್ರಾಕ್ಷಧಾರಣೆಗೂ, ನ್ಯಾಸಾದಿಗಳ ಆಚರಣೆಗೂ ಅನುಕೂಲವಾಗಿರುತ್ತದೆ. ಶಿಖೆಯನ್ನು ವಿರೋಧಿಸಿದರೆ ಶಿಖೆಯಲ್ಲಿ ಒಂದು ರುದ್ರಾಕ್ಷಿಯನ್ನು ಧರಿಸಬೇಕೆಂಬ ವಿಧಿಗೂ-ಶಿವಾರ್ಚನಾದಿಗಳಲ್ಲಿ ನ್ಯಾಸಗಳನ್ನು ಅನುಷ್ಠಿಸುವಾಗ "ಶಿಖಾಯೈವಷಟ್" ಎಂಬ ನಿಯಮಕ್ಕೂ ತಿಲಾಂಜಲಿ ಯನ್ನು ಕೊಡಬೇಕಾಗುತ್ತದೆ ಶಾಸ್ತ್ರೀಯ ವಿಧಿಗಳನ್ನು ವಿಸರುವದು ಆಸ್ತಿಕರ ಲಕ್ಷಣವಲ್ಲ. ವೀರಶೈವರಿಗೆ ಶಿಖಾ ಧಾರಣ ವಿಷಯವು ವಾವಗ್ರಸ್ಥವಾಗಿಲ್ಲ. ವೀರಶೈವ ಧರ್ಮ ಶಾಸ್ತ್ರಗಳು ಇಂದಿನವರಿಂದ ಪ್ರಾದುರ್ಭವಿಸಿಲ್ಲ ವೀರ ಶೈವ ಸಿದ್ಧಾಂತವನ್ನೂ ಆಚರಣೆಗಳನ್ನೂ ಸ್ಥಾಪಿಸಿದ ಭಗವತ್ಪಾದರವರು ನಿರ್ವಾದವಾಗಿ ರಚಿಸಿದ್ದಾರೆ.

ವೀರಶೈವಮತದ ದುರ್ಭಾಗ್ಯದಿಂದ ಬೋಳಪಂಥ ವೊಂದು ಪ್ರಾದುರ್ಭವಿಸಹತ್ತಿದೆ. ವೀರಶೈವ ಮುಂಡನ ವಾದಿಗಳು ವೀರಶೈವಾಚರಣೆಗಳನ್ನು ಹೇಗೆ ಪಾಲಿಸು ವರು? "ಶಿಖಾಯೈವಷಟ್" ಎಂಬ ನ್ಯಾಸಾಚರಣೆಯ ಸಮಯದಲ್ಲಿ ಬೋಳದಲೆಯನ್ನು ಮುಟ್ಟಿಕೊಳ್ಳುವರೇ? 'ಶಿಖಾಯಾಮೇಶಮೇಣಾಕ್ಷ್ಯಂ' ಎಂಬ ಪ್ರಮಾಣದಂತೆ ಶಿಖೆಗೊಂದುಮುಖದ ರುದ್ರಾಕ್ಷಿಯನ್ನು ಧರಿಸುವ ಪ್ರಸಂಗದಲ್ಲಿ ಏನು ಮಾಡುವರು? ಮಸ್ತಕದ ಮಧ್ಯದಲ್ಲಿ ಆಬ್ಬಿಣದ ಮೊಳೆಯನ್ನು ಹೊಡೆದುಕೊಳ್ಳುವರೇ? ಹೀಗೆ ಮುಂಡಿಗಳು ಶಿಖಾಸಂಬಂಧಾಚರಣೆಯನ್ನು ವಿರೂಪ ಮಾಡಿದಂತೆ ಲಿಂಗಸಂಬಂಧವನ್ನು ವಿರೂಪಮಾಡಲು ಹಿಂಜರಿಯರು. ಬಾಹ್ಯಲಿಂಗಧಾರಣೆಯನ್ನು ವಿರೋಧಿಸಲು ಹಂಡಬಂಡವಿಚಿನಗಳೂ ಇವರಿಗೆ ಅನುಕೂಲವಾಗಿರುತ್ತವೆ. 'ತೊರೆಯೆ ಲಿಂಗ ಮೆತಕಯ್ಯ' 'ಲಿಂಗವನ್ನು ಎಡೆಯಮೇಲೆ ಕಟ್ಟದರೇನಯ್ಯ' ಇವೇ ಮೊದಲಾದ ವಚನಗಳನ್ನು ಹಾಡಿ ಇಷ್ಟ ಲಿಂಗವನ್ನು ತೊರೆದು ಲಿಂಗಭ್ರಷ್ಟರಾಗುವ ಪ್ರಸಂಗವು ಈ ವಚನವಾಕ್ಯಾನುಸಾರಿಗಳ ಪಾಲಿಗೆ ಬರದಿರುವದೇ? ಬಾಹ್ಯಲಿಂಗಧಾರಣವನ್ನು ಖಂಡಿಸಿ ನುಡಿದಂತೆ ಶಿಖಾ ಧಾರಣವನ್ನು ಈ ಅಮಂಗಲವಚನಗಳು ನುಡಿಯುತ್ತವೆ. ವೀರಶೈವ ಧರ್ಮಶಾಸ್ತ್ರಗಳ ಶಕ್ತಿಯ ತಿರುಳನ್ನೆ ರಿಯದೆ ಕೆಲಜನರು ರಚಿಸಿದ ಇಂಥ ವಚನಗಳು ನಿಜವಾದ ವೀರಶೈವ ಧರ್ಮಾಚರಣೆಗೆ ಅಂಟುಕಾಯ್ಯವಾಗಿವೆ. ಇತ್ತೀಚೆಗೆ ವಿಚಾರಕ್ಕಾಂತಿಪುರುಷರ ಉದಯದಿಂದ ನಿಜಾಚರಣೆಗಳು ಪ್ರಜ್ವಾವಾಗಿರುತ್ತವೆ. ವೀರಶೈವ ಧರ್ಮಶಾಸ್ತ್ರಗ್ರಂಥಗಳೂ, ತಮಗುಂಟಾದ ಗ್ರಹಣದ ದುರ್ದೆಸೆಯಿಂದ ಮುಖ್ಯವಾಗಿ ಪರಿಶುದ್ಧ ತೇ ಜಸ್ಸಿನಿಂದ ಪ್ರಕಾಶಿಸತೊಡಗಿರುತ್ತವೆ. ಶಿಖಾಧಾರಣ ಸಿದ್ಧಾಂತದ ಪ್ರತ್ಯೇಕವಾದ ಗ್ರಂಥರತ್ನವೇ ಪ್ರಾಮು ಖ್ಯವಿಷಯ ಪ್ರಸಿದ್ಧವಾಗಿರುವದು. ಸಂತರ್ಯಗ್ರಹರು ಆ ಗ್ರಂಥವನ್ನು ಶರಸಿಕೊಂಡು ನಿರ್ಮಲಮತಸ್ಥಿನಿಂದ ಓದಿ ನಿಶ್ಚಯಜ್ಞಾನವನ್ನು ಪಡೆಯಬೇಕಲ್ಲವೇ?

(೩) ಕುದ್ಧಿಸಂಕುಚನೆಯೋ ಜಾತಿಸಾಂಕರ್ಯವೋ?

ಪರಮ ಪವಿತ್ರವಾದ ವೀರಶೈವ ಮಹಾಮತದಲ್ಲಿ ಕೆಲದಿನದಿಂದ ಸಂಕರಜಾಮಳ ಪಿಶಾಚಿಯು ಲೇಖನ ಪ್ರಪಂಚದೊಳಗೆ ಮಾತ್ರ ಕರಿದಾಡುತ್ತಿರುವದಷ್ಟೇ! ಬಾಯಿ ಬಡಾಯಿಗೆ ತಿಳ್ಳು ಲೇವಲ ಬರಹದಲ್ಲಿ ಮಂಡಿತ ಖಂಡನಕ್ಕೆ ಗುರಿಯಾದ ಈ ಸಾಂಕರ್ಯಪಿಶಾಚಿಯಿಂದ ವೀರಶೈವ ಸಮಾಜಾಂತರ್ಗತವಾದ ಯಾವ ಪರಿಶುದ್ಧ ಜಾತಿಗಳಿಗೂ ಬಾಧಕವಾಗಿದ್ದಿಲ್ಲ; ಆದರೆ ಇತ್ತೀಚೆಗೆ "ಕುದ್ಧಿಕರಣ" ವೆಂಬ ನೂತನ ಪಿಶಾಚಿಯು ಮುಖ ವೆತ್ತಿದೆ ಈ ಕುದ್ಧೀಕರಣದ ಜಳವಳಿಯು ವೀರಶೈವ ಮತದ ಪವಿತ್ರಕೀರ್ತಿಗೆ ಕಲಂಕವ್ಯಾಯವಾಗಿದೆ ಇದು ಹೀಗೆಯೇ ಬೆಳೆದು ಪರಿಪುಷ್ಟವಾದರೆ ಸಂಕರಪಿಶಾಚಿಗೆ ಸಹಾಯವಾಗಿ ಸಾಂಕರ್ಯದೂಡವಾದ ನವೀನ ಜಾತಿ ಯೊಂದನ್ನು ಈ ಮತದಲ್ಲಿ ಸೃಷ್ಟಿಸಿಬಹುದೆಂದು ತೋರುತ್ತದೆ. ವೀರಶೈವಮತದಲ್ಲಿ ವಿರಾಜಿಸುವ ಅನೇಕ ಶುದ್ಧ ಸಂಪ್ರದಾಯದ ಜಾತಿಗಳ ಕಟ್ಟನ್ನು ಕಡಿಲು ಮೂಡುವ ಸಾಮರ್ಥ್ಯವು ಯಾವ ಕಾಲದಲ್ಲಿಯೂ ಪ್ರಾಪ್ತ ವಾಗಲಾರದು. ಸಂಕರಜಳವಳಿ (ಜಾತಿಭೇದನಿವಾರಣೆ) ಯಾಗಲಿ, ಶುದ್ಧೀಕರಣಜಳವಳಿಯಾಗಲಿ ನಾಯಿಕೊಡೆ ಅಣಬೆಗಳಂತೆ ಕ್ಷಣಮಾತ್ರವಿದ್ದು ನಾಶವಾಗುತ್ತವೆ. ಜಾತಿಭೇದವನ್ನೇ ನಿರ್ಮೂಲಗೊಳಿಸಬೇಕೆಂದು ೧೨ ನೇ ಶತಮಾನದಲ್ಲಿ ಬಿಜ್ಜಳಭೂಪಾಲನ ಸೌಕರನಾದ ಬಸ ವನಿಂದ ಪ್ರಾರಂಭಿಸಿದ ಜಳವಳಿಯು ಹರಳಯ್ಯ-ಮಧು ವಯ್ಯಗಳ ಶರೀರ ಸಂಬಂಧ ಕಾರ್ಯದಲ್ಲಿಯೇ ಕೈಲಾಸವಾಸಿಯಾಯಿತಷ್ಟೇ! ಅಂತೂ ಜಾತಿ ಸಂಕರವಾಗುವ ಬದಲು ಜಾತಿಭೇದವು ವಜ್ರಲೇಪದಂತೆ ವೀರಶೈವ ಪ್ರಪಂಚದಲ್ಲಿ ನಿರ್ಮಲವಾದ ಕೀರ್ತಿಯನ್ನು ಪ್ರಕಾಶಗೊಳಿಸಿತು.

ಧಾರ್ಮಿಕ ಶಿಕ್ಷಣದ ಅಭಾವದಿಂದ ಅರ್ಧಮರ್ಧ ಪಂಡಿತರು ಲಿಂಗಧರಿಸಿದವರೆಲ್ಲರೂ ಸಮಾನರೆಂದು ಭಾವಿಸಿ ಶುದ್ಧೀಕರಣದ ಜಳವಳಿಯನ್ನು ಹೂಡಿದ್ದಾರೆ. ವೀರಶೈವೇತರರನ್ನು ವೀರಶೈವ ಮತದಲ್ಲಿ ತೆಗೆದುಕೊಳ್ಳುವದಿದ್ದರೆ ವೀರಶೈವಮತ ಸ್ವೀಕಾರ ವಿಧಿಯಂತೆ ತೆಗೆದುಕೊಳ್ಳಬಹುದು ಮತಾಂತರಹೊಂದಿ ಬಂದವರನ್ನು ಶತಪೂರ್ವಗತ ವೀರಶೈವ ಯಾವ ಜಾತಿಯವರು ತಮ್ಮೊಳಗೆ ಕೂಡಿಸಿಕೊಳ್ಳಲು ಸಿದ್ಧರಿರುವರು? ಇದಕ್ಕೆ ಧರ್ಮಶಾಸ್ತ್ರಗಳ ಸಮ್ಮತಿಯೂ ಇರುವದಿಲ್ಲ. ಅಗಸ-ಹಡಪದ-ನೀಲಗಾರ ಮೊದಲಾದ ಜಾತಿಯವರನ್ನು ದೀಕ್ಷಾಮಾಡಿ ಸಂಕರ ಜಾತಿಯವರು ಸಹ ಪಂಕ್ತಿ ಭೋಜನವಾಡುವದರಿಂದ ನೂತನ ದೀಕ್ಷೆಹೊಂದಿ ಅಗಸ ಹಡಪದವರ ಜಾತಿಗಳೇನಾದರೂ ನಾಶವಾದವೇ? ಅಥವಾ ಜವದೊಡನೆ ಕೂಡಿ ಉಂಡವರ ಜಾತಿಗಳೇನಾದರೂ ಲೋಪವಾದವೇ? ಯಾವದೂ ಇಲ್ಲ ವೀರಶೈವರಲ್ಲಿ ಶ್ರುತಿ ಜಾತಿಯವರಿಗೆ ಲಿಂಗಧಾರಣವಿರುವಂತೆ ದೀಕ್ಷಾವಿಸರ್ಜಾರಗಳೂ ಇರುತ್ತವೆ. ದೀಕ್ಷಾಸಂಸ್ಕಾರವೆಂಬ ವಿಧಿಯು ಜಾತಿ ಕುಲ ನಾಶಕ್ಕಾಗಿರುವದಿಲ್ಲ "ಕುದ್ಧೀಕರಣ" ವೆಂಬ ನವೀನ ಭೂತವು ಕುಲವೆಂತರನ್ನೆಲ್ಲ ಕುಲಗೇಡಿಗಳನ್ನಾಗಿ ಮಾಡತೊಡಗಿದ್ದು ಪ್ರಮ ವಿಷಾದಕರಗತಿಯಾಗಿದೆ. ಕುಲಭ್ರಷ್ಟರಾಗಿ ಮತಾಂತರ (ವೀರಶೈವ ಮತವನ್ನು ಬಿಟ್ಟು) ಹೊಂದಿದವರನ್ನು ಪುನಃ ಶಾಸ್ತ್ರೀಯ ಸಂಸ್ಕಾರದಾಡಿ ವೀರಶೈವಮತದಲ್ಲಿ ಸೇರಿಸಿಕೊಳ್ಳಬಹುದು. ಶಾಸ್ತ್ರವಿರೋಧವಾದ ರೀತಿಗೆ ಜಾತಿಕುಂಠರರೂಪವಾದ ಕುದ್ಧೀಕರಣವು ಶಕ್ತ ಮಾರ್ಗವನ್ನು ಬಿಟ್ಟು ಸರಳಮಾರ್ಗಕ್ಕೆ ಬರುವದು ವಿಹಿತವಲ್ಲವೇ?

ಅರಮನೆ ಮಠಾಮತ್ತು ಕಛೇರಿ ಮೇಸ್ತ್ರಿ ಮ॥ ರಾ॥ ಶಿವಯ್ಯಾಚಾರ್ರವರ ನಿಧನ.

ಈ ಮಹಾತ್ಮರು ರಾಜಧಾನಿಯಾದ ಮೈಸೂರಿನಲ್ಲಿ ಬಹಳ ಧರ್ಮಿಷ್ಠರೆಂದು ಖ್ಯಾತಿ ಪಡೆದಿದ್ದರು ಇವರು ಇದೇ ತಿಂಗಳು 11 ನೇ ತಾರೀಖಿನ ಪ್ರಾತಃಕಾಲ 5 ಘಂಟೆಯಲ್ಲಿ ದಿವಂಗತರಾದರೆಂಬ ವಿಷಯವನ್ನು ಕೇಳಿ ಸಕಲರೂ ಬಹಳವಾಗಿ ವಿಷಾದಿಸುತ್ತಿರುವರು. ಇವರಂತಹ ಕರುಣಾಶಾಲಿಗಳೂ ಸತ್ಯಚರಿತರೂ ಆದ ಮಹಾನುಭಾವರುಗಳು ನಮ್ಮ ನಾಡಿಗೇ ಭೂಷಣವೆಂದು ಹೇಳುವಲ್ಲಿ ಕಿಂಚಿತ್ತೂ ಉತ್ಪ್ರೇಕ್ಷೆಯಾಗಲಾರದೆಂದು ಧೈರ್ಯವಾಗಿ ಹೇಳಬಹುದು ಇವರಿಗೆ ಅಂತ್ಯಕಾಲದಲ್ಲಿ ಸುಮಾರು 86 ವರ್ಷಗಳಿಂತಲೂ ಹೆಚ್ಚಾಗಿತ್ತೆಂಬುದಾಗಿ ತಿಳಿಯಬರುತ್ತದೆ. ಇಷ್ಟು ವಯಸ್ಸಾಗಿದ್ದರೂ ಕೊನೆಯವರೆಗೂ ಧೃಢಕಾಯರಾಗಿಯೂ, ಸೂಕ್ಷ್ಮಬುದ್ಧಿಯುಳ್ಳವರಾಗಿಯೂ, ಇದ್ದರು. ಪ್ರಾರಂಭದಲ್ಲಿ ಅಷ್ಟು ಅನುಕೂಲಸ್ಥಿತಿಯಲ್ಲಿರಲಿಲ್ಲವಾದರೂ ಸ್ವಪ್ರಾಮರ್ಥ್ಯದಿಂದಲೂ ದೈವಾನುಗ್ರಹದಿಂದಲೂ ಶೀಘ್ರದಲ್ಲಿಯೇ ಪೂರ್ಣಾನುಕೂಲವನ್ನು ಹೊಂದಿ ಅನೇಕ ಬಡಬಗ್ಗರುಗಳಿಗೆ ಆಧಾರವಿಗಳಾಗಿದ್ದರೆಂಬ ವಿಷಯವು ಎಲ್ಲರಿಗೂ ತಿಳಿದ ಅಂಶವಾಗಿರುತ್ತದೆ ನಮ್ಮ ಪ್ರಭುಗಳಾದ ಶ್ರೀಮನ್ಮಹಾರಾಜರವರ ಕೃಪಾಕಟಾಕ್ಷವು ಇವರಮೇಲೆ ಸಂಪೂರ್ಣವಾಗಿತ್ತು. ಸಾಧಾರಣವಾಗಿ ಮನುಷ್ಯನಿಗೆ ಐಶ್ವರ್ಯವು ಹೆಚ್ಚುತ್ತ ಬಂದಹಾಗೆಲ್ಲ ಧರ್ಮಬುದ್ಧಿಯು ಸಂಪೂರ್ಣವಾಗಿ ಅಳಿಸಿ ಹೋಗುವುದು ಸ್ವಭಾವ. ಆದರೆ ಈ ಪುಣ್ಯಚರಿತರಲ್ಲಿ ವೈರಾಗ್ಯವೂ, ಗುರುದೈವಗಳಲ್ಲಿ ಅನನ್ಯ ಭಕ್ತಿಯೂ ಒಂದುಮಿತ ವೆಗ್ಗಳಲ್ಲಿ ಅಂತಃಕರಣಪೂರ್ವಕವಾದ ವಿಶ್ವಾಸವೂ ತುಂಬಿತುಳುಕುತ್ತಿತ್ತು

ಇವರು ರಾಜಧಾನಿಯ ಇರ್ವಿನ್ ರೋಡಿನಲ್ಲಿ 40,000 ಸಹಸ್ರ ರೂಪಾಯಿಗಳಿಗಿಂತ ಹೆಚ್ಚಿಗೆ ವೆಚ್ಚ ಮಾಡಿ ಕಟ್ಟಿಸಿರುವ ಸಕಲಸೌಕರ್ಯಗಳಿಂದ ಕೂಡಿರುವ ಅತಿ ಸುಂದರವಾದ ಧರ್ಮಛತ್ರವು ಚಿರಸ್ಮರಣೀಯವಾಗಿ ವಿರಾಜಿಸುತ್ತಿರುವುದು. ಇದೂ ಅಲ್ಲದೆ ನಾಣೇವಿಲಾಸ ರೋಡಿನಲ್ಲಿರುವ "ಶ್ರೀ ವಾಣೀವಿಲಾಸ್ ಮೆಟರ್ನಿಟಿ ಮತ್ತು ಚೈಲ್ಡ್ ವೆಲ್‌ಫೇರ್ ಸೆಂಟರ್" ಎಂಬ ಕಟ್ಟಡದ ಮೇಲಂತಸ್ತನ್ನು ಮುಫತ್ತಾಗಿ ಕಟ್ಟಿಸಿಕೊಟ್ಟರುವರು ಹಿಂದಿನ ವೈಸ್ರಾಯ್ ಲಾರ್ಡ್ ವೆಲ್ಲಿಂಗ್ಡರ್ ವರು ಮೈಸೂರಿಗೆ ದಯಮಾಡಿಸಿದ್ದ ಕಾಲದಲ್ಲಿ ಇವರ ಉದಾರತ್ವಕ್ಕೆ ಮೆಚ್ಚಿ ಚಿನ್ನದ ಮೆಡಲನ್ನು ದಯಪಾಲಿಸಿರುವರೆಂದು ತಿಳಿದುಬರುತ್ತದೆ ನಮ್ಮ ಮಹಾರಾಜರೂ ಕೂಡ 1937 ಇಸವಿ ದಸರಾ ಕಾಲದಲ್ಲಿ ಪಬ್ಲಿಕ್ ಸರ್ವಿಸ್ಸು ಮೆಡಲನ್ನು ಅನುಗ್ರಹಿಸಿದರು. ಸಾಧಾರಣವಾಗಿ ಅಬಾಲವೃದ್ಧರು ಮೊದಲ್ಗೊಂಡು ಈ ಪುಣ್ಯಾತ್ಮರನ್ನು ಅರಿಯದವರೇ ಇಲ್ಲ ಅಗಿಂದಾಗ್ಗೆ ತಮ್ಮ ಭಕ್ತಪದ್ಧತಿ ಪುರಾಣ ಪುಣ್ಯಕಥೆ ಮುಂತಾದ ಸತ್ಕಥಾಲಾಪಗಳನ್ನು ಮಾಡಿಸುತ್ತಾ ತಮ್ಮಂತೆಯೇ ಇತರರಿಗೂ ಸಂಪೂರ್ಣವಾಗಿ ದೇವರಲ್ಲಿ ಭಕ್ತಿವಿಶ್ವಾಸ ಉಂಟಾಗುವಹಾಗೆ ಮಾಡುತ್ತಿದ್ದರು. ಇಂಥ ಮಹನೀಯರಿಗೆ ಪರಮಾತ್ಮನು ಸಾಯುಜ್ಯಪದವಿಯನ್ನು ಇತ್ತು ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುವ,

ಪಬ್ಲಿಕ್ ಸಿಂಪತೈಸರ್ಸ್

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಧಾರ್ಮಿಕಸಭೆ, ದರ್ಗನಹಳ್ಳಿ.

ನತೇನ ವೃದ್ಧೋ ಭವತಿ ಯೇನಾಸ್ಯ ಫಲಿತಂ ಶಿರಃ ।
ಯೋವೈ ಯುವಾಪ್ಯಧೀಯಾನಸ್ತಂದೇವಾಃ ಸ್ಥವಿರಂವಿದುಃ ॥

ಎಂಬಂತೆ ಜ್ಞಾನವೃದ್ಧರೂ, ಮತ್ತು ವಯೋವೃದ್ಧರೂ ಆದ ಸೋಲಾಪುರ ವಾರದ ಸಂಸ್ಕೃತ ಪಾಠಶಾಲಾಧ್ಯಾಪಕರಾದ ಪಂ॥ ಶ್ರೀ ಜಗದೀಶಶಾಸ್ತ್ರಿಗಳವರು, ಶ್ರೀ॥ ಷ॥ ಬ್ರ॥ ಬಾಲಕಪಸ್ವಿ ಚನ್ನವೀರಶಿವಾಚಾರ್ಯರು ಬೃಹಸ್ಪತಿ ಹೋಗಿ, ಇವರ ಮುಖ್ಯಾಂ ದರ್ಗನಹಳ್ಳಿಯಲ್ಲಿ ಇದ್ದುದರಿಂದ, ಪಂಡಿತರು ಕಾರಣಾಂತರದಿಂದ ಅಲ್ಲಿಗೆ ದಯಮಾಡಿಸಿದ್ದರು. ಪಂಡಿತರ ಆಗಮನಪ್ರೀತ್ಯರ್ಥವಾಗಿ ದರ್ಗನಹಳ್ಳಿಯ ಸದ್ಭಕ್ತರು ತಾ॥ 9-11-36 ದಿವಸ ಸಾಯಂಕಾಲ ಒಂಬತ್ತುಘಂಟೆಗೆ ಶ್ರೀ ಪಂಡಿತರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕೂಡಿಸಿದರು. ಪ್ರಥಮ ಶ್ರೀ॥ ಷ॥ ಬ್ರ॥ ಗುರುವರ್ಯ ಶಿವಾಚಾರ್ಯರು ಸುತ್ತಗಟ್ಟಿ ಇವರು,

ವಿಹಾಯ ಕಾನನ್ಯಃ ಸರ್ವಾ ಪುಮಾಂಶ್ಚರತಿ ಸ್ತ್ರಿಯಂ ।
ಸರ್ಪೋ ನ ನಿರಮಂಕಾರಃ ಸಶಾಂತಿಮಧಿಗಚ್ಛತಿ ॥

ಎಂಬ ಗೀತೋಕ್ತಿಯಂತೆ ಶಾಂತಿಯನ್ನೊಳಗೊಂಡವರೂ, ಸದ್ಭಾವಮಂಡಿತರೂ, ಗುರುವರ್ಗಾಭಿಮಾನಿಗಳೂ ಆದ ಪಂಡಿತರು ಈ ಹೊತ್ತಿನದಿವಸ ನಮಗೆ ಸದುಪದೇಶಮಾಡಲು ದೊರಕಿರುವರು ಎಂದು ಪಂಡಿತರ ಗುಣಪ್ರಶಂಸೆಯನ್ನು ಮಾಡಿ ಗುರುಮಹತ್ವ ವಿಷಯವಾಗಿ ತಮ್ಮ ಪ್ರಸಾದವಾಣಿಯಿಂದ ಉಪದೇಶಿಸಿ ಸಭಿಕರನ್ನು ಆನಂದಗೊಳಿಸಿದರು ಆಮೇಲೆ ಪಂಡಿತರು, ದೀಕ್ಷಾ ಮತ್ತು ಲಿಂಗನಿಷ್ಠೆ ಈ ವಿಷಯವಾಗಿ ಸಂಭಾಷಿಸಿದರು ಅಲ್ಲಿ ಶ್ರೀ ಬಾಲಕಪಸ್ವಿಗಳು ಒಂದೆರಡುಸಾರೆ ಶಿವಲಿಂಗಾನುಷ್ಠಾನವಾದಿದ "ಪಂಡಿತಾಶ್ರಮ" ದ ಶಾಂತತೆಯನ್ನು ನೋಡಿದ ಆನಂದಕ್ಕಾಗಿ ಅದರ ಪವಿತ್ರತೆಯನ್ನು ಶ್ರೀಗಳವರು ನಮ್ಮಗಳ ಸಲುವಾಗಿ ಇಷ್ಟು ಕಷ್ಟಪಡುತ್ತಿರುವದು ಏಕೆಂದರೆ!

ತಸ್ಯಂತೇ ಲೋಕತಾಪೇನ ಸಾಧವಃ ಪ್ರಾಯಶೋ ಜನಾಃ ।
ಪರಮಾನಂಧಸಂ ತದ್ಧಿ ಪುರುಷಸ್ಯಾಖಿಲಾತ್ಮನಃ ॥

ಎಂಬಂತೆ ತಮ್ಮ ದೇಹವನ್ನು ಬಳಲಿಸಿ ನಮಗೆ ಸುಖವನ್ನು ಕೊರುತ್ತಿರುವರು ಎಂದು ಒಳ್ಳೇ ತಮ್ಮ ಸ್ವಭಾವಸಿದ್ಧ ಶಾಂತರೀತಿಯಿಂದ ಉಪದೇಶಮಾಡಿ ಅಬಾಲವೃದ್ಧರೂ ಆನಂದಸಾಗರದಲ್ಲಿ ತೇಲಾಡುವಂತೆ ಉಪನ್ಯಾಸಮಾಡಿದರು ತರುವಾರ ಸೌ॥ ಭಾಗೀರಥಿಬಾಯಿಯವರು ಲಿಂಗನಿಷ್ಠೆ ಗುರುವಾಕ್ಯದಲ್ಲಿ ಶ್ರದ್ಧೆ ಈ ವಿಷಯವಾಗಿ ಎಲ್ಲರಿಗೂ ತಿಳಿಯುವಂತೆ ಪ್ರತಿಪಾದನೆ ಮಾಡಿದರು. ಆಮೇಲೆ ಶ್ರೀ ಬಾಲಕಪಸ್ವಿಗಳು, ಮಾನವನ ಸುಖಾಪೇಕ್ಷೆ ಈ ವಿಷಯವಾಗಿ ತಮ್ಮ ಅಮೃತಮಯ ಪ್ರಸಾದವಾಣಿಯಿಂದ, ಕುಭಾಶೀರ್ವಾದಸ್ತುತ್ತಿ ಪಂಡಿತರ ಆಭಾರವನ್ನಿತ್ತಿದಮೇಲೆ ಸಭಾಚಾರ್ಯರ ಜಯಘೋಷದೊಂದಿಗೆ ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷಪರ್ಶಿ

ಸದಾಚಾರಿಗಳು ಯಾವಾಗಲೂ ಸದಾಚಾರಿಗಳೇ!

ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ ।
ಸದಾಚಾರಂ ವಿನಾ ತಸ್ಯ ಪ್ರಸಾದೋ ನೈವ ಜಾಯತೇ ॥

ಎಂಬು ಶ್ರೀ ರೇಣುಕ ಭಗವತ್ಪಾದರ ಉಕ್ತಿಯಂತೆ ಸದಾಚಾರವಿಲ್ಲದೆ ಪರಶಿವನ ಕೃಪೆಯಾಗದು. ಈ ತತ್ವವನ್ನು ಸಂಪೂರ್ಣ ಒಳ್ಳೆ ವಿವೇಕಿಗಳನೇಕರು ಈಗಲೂ ಇದ್ದಲೋಕಕ್ಕೆ ಸನ್ಮಾರ್ಗದರ್ಶಕರಾಗಿದ್ದಾರೆ, ಸದಾಚಾರಿಗಳಾಗದಿದ್ದರೆ ಈ ಜಗತ್ತಿನ ಕ್ರಿಯೆಯೇ ನಡೆಯದು. ಇದನ್ನರಿಯದೆ ಕೆಲ ಸೋಗಿನ ಸುಧಾರಕರು, ತನಗೆ ಅಲಭ್ಯವಾದ ದ್ರಾಕ್ಷೆಯನ್ನು ಹುಳಿಯೆಂದು ಹೇಳಿದ ನರಿಯನ್ನು ಹೋಲುತ್ತಿರುವರು. ಮತ್ತು ಸದಾಚಾರಿಗಳಿಗೆ ಅನಂತ ವಿಘ್ನವನ್ನುಂಟುಮಾಡುತ್ತಿರುವರು.

ಇಂತಹ ಸದಾಚಾರಿಗಳಲ್ಲಿ ಒಬ್ಬರಾದ ರಾ॥ ರಾ॥ ಗುರುಲಿಂಗಪ್ಪಾ ಮಹಾಂತ ಎಂಬವರು ಸೊಲ್ಲಾಪುರ ಜಿಲ್ಲೆಯಲ್ಲಿರುವ ಅಕ್ಕಲಕೋಟೆ ಸಂಸ್ಥಾನದಲ್ಲಿ ವಿರಾಜಿಸುತ್ತಿರುವರು. ಇವರ ಮನೆತನದವರು ಪರಂಪರೆಯಿಂದಲೂ ಒಳ್ಳೇ ಸದಾಚಾರನಿಷ್ಠರಿದ್ದಾರೆ ಇವರ ಸದಾಚಾರದಿಂದ ಇವರಿಗೆ 'ಮಹಾಂತ' ಎಂಬ ಉಪನಾಮವು ಪ್ರಾಪ್ತಿಯಾಗಿದೆ. ಭಕ್ತಿಯು ನಿಸ್ಸೀಮವಾಗಿದೆ ಅಕ್ಕಲ ಸಂಸ್ಥಾನದ ಹಿರೇಮಠ (ಕುಂಭಾರಗೇರಿ ಮಠಾಧ್ಯಕ್ಷರಾದ) ಬಾಲಶಿವಯೋಗಿ ಶ್ರೀ॥ ಷ॥ ಬ್ರ॥ ಗುರು ಶಾಂತ ಶಿವಾಚಾರ್ಯರೆಂಬ ತಪಸ್ವಿಗಳು ಗುರುತ್ವಾಧಿಕಾರವನ್ನು ಹೊಂದಿದಮೇಲೆ ಈ ಸದ್ಭಕ್ತರ ಅನೇಂದಕ್ಕೆ ಪಾರವೇ ಇಲ್ಲದಾಹಾಗಿದೆ.

ಸಿಂಹದ ಗರ್ಭದಲ್ಲಿ ಸಿಂಹವೇ ಹುಟ್ಟುವಂತೆ ರಾ॥ ಗುರುಲಿಂಗಪ್ಪಾ ಮಹಾಂತ ಇವರ ಉದರದಲ್ಲಿ ರಾ॥ ರಾ॥ ಶ್ರೀ॥ ಚನ್ನಬಸಪ್ಪನೆಂಬ ಸತ್ಪುತ್ರರು ಜನಿಸಿದ್ದಾರೆ ಶ್ರೀ ಚನ್ನಬಸಪ್ಪನವರು ಬಾಲ್ಯದಿಂದಲೂ ಪರಮಾಸ್ತಿಕರೂ, ಪೂತಾಪಿತೃಭಕ್ತಿಪರಾಯಣರೂ ಆಗಿದ್ದಾರೆ. ತಂದೆಯವರ ಆಜ್ಞಾನುಸಾರ ಅಂಗ್ಲ ವಿದ್ಯಾವ್ಯಾಸಂಗವನ್ನು ಮಾಡಿದವರಾಗಿದ್ದಾರೆ. ಮೊನ್ನೆ ತಾನೇ ಇವರು ಮುಂಬಯಿ ಪಟ್ಟಣದಲ್ಲಿ ಬಿ.ಎ, ಎಲ್ ಎಲ್.ಬಿ, ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಇಂತಹ ಶ್ರೀಸ್ಥಶಂಗತಿಯಲ್ಲಿ ಜನ್ಮವನ್ನು ಮಾಡಿದರೂ ಸದರಿ ಚನ್ನಬಸಪ್ಪನವರು ನವೀನಸಂಧಾರಕರಂತೆ ತಲೆಯಲ್ಲಿ ಕ್ರಾಪನ್ನು ಬಿಡಿಸಲಿಲ್ಲ ಭಸ್ಮವನ್ನು ಬಿಟ್ಟು ಪೌಡರನ್ನು ಒಡೆದ ಕೊಳಲಿಲ್ಲ ಇಷ್ಟಲಿಂಗವನ್ನು ತ್ಯಜಿಸಿ ಚರ್ಮದ ವಸ್ತ್ರಗಳನ್ನು ಕಂಠ ಮುಂತಾದ ಸ್ಥಳಗಳಲ್ಲಿ ಬಿಗಿಯಲಿಲ್ಲ ನಿಶ್ಚಿದಲ್ಲಿಯೂ ಎರಡೂ ಹೊತ್ತು ತಪ್ಪದೆ ಶಿವ-ಜ್ಞಾನೆಯನ್ನು ಮಾಡುತ್ತಿರುವರು ಹಣೆಯಲ್ಲಿ ಯಾವಾಗಲೂ ತ್ರಿಪುಂಡ್ರ ಭಸ್ಮವು ಹೊಳೆಯುತ್ತಿರುವುದು ರುದ್ರಾಕ್ಷಿಯು ಕಂಠದಲ್ಲಿ ಶೋಭಿಸುತ್ತಿರುವುದು ಇವರು ಒಂದು ದಿವಸವಾದರೂ ಹೋಟಲುಗಳಲ್ಲಿ ಕಣ್ಣಿನಿಂದ ನೋಡಲಿಲ್ಲ ಬೀಡಿ ಸಿಗರೆಟ್ಟುಗಳೇನಿದರೆ ತಲೆಬೇನೆ ಇತ್ಯಾದಿ ಸದ್ಗುಣ ಮಂಡಿತರಾದ ಸದಾಚಾರಿಗಳಂದಲೇ ನಮ್ಮ ಸನಾತನ ವೀರಶೈವರ ಧರ್ಮವು ವೃದ್ಧಿಯಾಗಬೇಕಾಗಿದೆ. ಎ-ಬಿ-ಸಿ-ಡಿ ನಾಲ್ಕು ಅಕ್ಷರಗಳನ್ನು ಕಲಿತಮಾತ್ರಕ್ಕೇ ಧರ್ಮಕ್ಕೂ ಧರ್ಮಾಚಾರ್ಯರಿಗೂ ತಿಲಾಂಜಲಿಯನ್ನಿತ್ತು ಮನಬಂದಂತೆ ಬಡಬಡಿಸುವ ಬಾಯಿಬಡಕ ಬಹದ್ದೂರರೇ? ನಮ್ಮ ಶ್ರೀಯುತ ಚನ್ನಬಸಪ್ಪನವರನ್ನು ನೋಡಿ ಬುದ್ಧಿಗಲಿಯಬಾರದೆ? ಇರಲಿ

ಪರೀಕ್ಷಕರು ವಕೀಲಿಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದರೆಂಬ ಆನಂದವರ್ತಮಾನು ತಾ॥ ೧೦-೧೧-೩೬ ಲಕ್ಕೆ ತಿಳಿದಾಕ್ಷಣವೆ ಪಿತೃಗಳಿಗೆ ಅತ್ಯಾನಂದವುಂಟಾಗಿ ಊರಲ್ಲೆಲ್ಲಾ ಫೋಡಿ, ಬಪಿಯನ್ನು ಹಂಚುವುದಲ್ಲದೆ ಅನ್ನದಾನಜನರಿಗೆ ಭಕ್ಷ್ಯಭೋಜ್ಯಾದಿಗಳಿಂದ ತೃಪ್ತಿಪಡಿಸಿದರು ಶ್ರೀ॥ ಷ॥ ಬ್ರ॥ ಗುರುಶಾಂತಶಿವಾಚಾರ್ಯರ ಸನ್ನಿಧಿಯಲ್ಲಿ ಪಂಚಾಚಾರ್ಯಪ್ರಭೆಗೋಸ್ಕರ ಫಲ ತಾಂಬೂಲದೊಂದಿಗೆ ೧೧ ರೂಪಾಯಿಯನ್ನು ಅರ್ಪಿಸಿದರು ಇಂತಹ ಸತ್ಪುತ್ರರನೇಕರಾಗಿ ನಮ್ಮ ಸನಾತನವಾದ ಸದ್ಧರ್ಮವನ್ನು ರಕ್ಷಿಸುವ ಸದ್ಬುದ್ಧಿಯನ್ನು ಶ್ರೀ ಜಗದಾಚಾರ್ಯರು ಅನುಗ್ರಹಿಸಲೆಂದು ಪ್ರಾರ್ಥಿಸುವ,

ಪ್ರತ್ಯಕ್ಷದರ್ಶಿ.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಗ್ರಂಥಪರಿಚಯ

ತಿಪಟೂರು ನಿವಾಸಿಗಳಾದ ವೇ॥ ಆರ್. ಎಂ. ಮಲ್ಲಿಕಾರ್ಜುನಾರಾಧ್ಯರು ಮುದೇನೂರು ಮಳೇಮಠ ಇವರು ಸರ್ವರಿಗೂ ತಿಳಿಯುವಂತೆ ಸರಳಭಾಷೆಯಲ್ಲಿ ರಚಿಸಿರುವ ಸದ್ಬೋಧರತ್ನಾವಳಿ ಎಂಬ ಗ್ರಂಥವನ್ನು ಓದಿ ಆನಂದಪಟ್ಟೆನು ಈ ಗ್ರಂಥವು ಇಹಪರಸಾಧನಕ್ಕೆ ಆತ್ಯವಶ್ಯಕಗಳಾದ ಮಹತ್ವವಿಷಯಗಳಿಂದೊಡಗೂಡಿರುವುದರಿಂದ ಸನಾತನ ಧರ್ಮಾವಲಂಬಿಯಾದ ಪ್ರತಿಯೊಬ್ಬ ಮಾನವನ ಕೈಗನ್ನಡಿಯಾಗಿರಲು ಯೋಗ್ಯವಾಗಿರುವುದು ಉಪದೇಶವಚನಗಳನ್ನು ವಿವರಿಸುವಾಗ ಒಂದಕ್ಕೊಂದು ಪೋಲಿಕೆಯಾಗಿರುವ ಗಾಂಭೀರ್ಯ ಶ್ಲೋಕಾರ್ಥಗಳಿಂದಲೂ, ರಸಭರಿತ ನೀತಿವಾಕ್ಯಗಳಿಂದಲೂ, ಮನೋಹರ ಕಥೆಗಳಿಂದಲೂ ಕೂಡಿ ಓದುಗರನ್ನು ತೃಪ್ತಿಗೊಳಿಸುವ ಆನಂದಾಮೃತ ಭೋಜನಶಾಲೆಯಾಗಿರುವುದು ನಶ್ವರವಾದೀ ಜಗತ್ತನ್ನೇ ನಂಬಿ ಶಾಶ್ವತ ಸುಖದ ಸ್ವರೂಪವನ್ನರಿಯದೆ ಧರ್ಮಬಾಹಿರರಾಗಿ ನಡೆಯುತ್ತಿರುವ ದುರಭಿಮಾನಿಗಳನ್ನೆಚ್ಚರಿಗೊಳಿಸುವದಕ್ಕೂ, ದುಃಖಜೀವಿಗಳಿಗೆ ಎಂತಹ ಸಂಶಯಗಳದ್ದರೂ ನಿವೃತ್ತಿಗೊಳಿಸಿ ನವಚೇತನವನ್ನುಂಟುಮಾಡುವುದಕ್ಕೂ ಸಮರ್ಥವಾದ ಜ್ಞಾನಭಂಡಾರವಾಗಿರುವುದು. ಗ್ರಂಥಕರ್ತೃ ಪಕ್ವಪಾತಿಗಳಾದ ಸುಜನರು ಮೇಲೆ ಕಂಡ ಗ್ರಂಥಾನುಭವವನ್ನು ಪಡೆದುದೇ ಆದರೆ ಸತ್ಯಾಂಶವು ತಿಳಿದು ಬಂದು ಲೇಖಕರ ಶ್ರಮವು ಸಾರ್ಥಕವಾಗಿ ಧಾರ್ಮಿಕಾಭಿವೃದ್ಧಿಗೂ ಪ್ರೋತ್ಸಾಹಕರವಾಗಿದೆಂತಾಗುವುದು.

ಶೇಷನಕೆರೆ ಶಿವಭೂಷಣ,
ಗುಬ್ಬಿ ಶಿವಪ್ರಕಾಶ್ಯ.

ಪಂಚಾಚಾರ್ಯಪ್ರಭಾ.

೧೯೩೩ನೆಯ ನವೆಂಬರ್ ತಾ॥ ೨೪ ನೇ ಸೋಮವಾರ

ವೀರಶೈವಮತವು ಪರಮ ದುರ್ಲಭವು.

ವೀರಶೈವಮತವು ಬಹು ಸುಗಮವಾದುದೆಂದು ಬಹು ಜನಗಳ ಅಭಿಪ್ರಾಯವಾಗಿದೆ. ವಿಚಾರದೃಷ್ಟಿಯಿಂದಲೂ ಶಾಸ್ತ್ರದೃಷ್ಟಿಯಿಂದಲೂ ನೋಡಿದರೆ ಬಹು ದುರ್ಗಮವೆಂದು ಹೇಳಬಹುದು. ಮುಖ್ಯವಾಗಿ ಶಿವಭಕ್ತಿಯೆಂಬ ಭೂಮಿಯಮೇಲೆ ಈ ವೀರಶೈವವೆಂಬ ಮುಕ್ತಿಮಂದಿರವನ್ನು ಶ್ರೀ ರೇಣುಕಾದ್ಯಾಚಾರ್ಯರು ರಚಿಸಿರುವರು. ಭೂಮ್ಯಾಧಾರವಿಲ್ಲದೆ ಮನೆಕಟ್ಟುವದು ಅಸಂಭವನೀಯವಾಗುವಂತೆ ಶಿವಭಕ್ತಿಯಿಲ್ಲದವನು ಈ ವೀರಶೈವ ಮತವನ್ನು ಕಣ್ಣಿನಿಂದ ನೋಡಲೂ ಅಧಿಕಾರವಿಲ್ಲ. ಸಾಮಾನ್ಯನಾಗಿ,

ಕೋಟಿಜನ್ಮಾರ್ಜಿತೈಃ ಪುಣ್ಯೈಃ ಶಿವೇ ಭಕ್ತಿಃ ಪ್ರಜಾಯತೇ

ಅನೇಕಾನೇಕ ಜನ್ಮಗಳಲ್ಲಿ ಆರ್ಜಿಸಿದ ಪುಣ್ಯವಿಶೇಷದಿಂದ ಶಿವನಲ್ಲಿ ಭಕ್ತಿಯು ಹುಟ್ಟುವುದೆಂದು ಶಿವಗೀತೆಯಲ್ಲಿ ಹೇಳಿರುವಂತೆ, ಶಿವಭಕ್ತಿಯು ಹುಟ್ಟುವುದೇ ಅಸಾಧ್ಯವಾಗಿರುವಾಗ ಅದರ ಮುಂದೆ ವೀರಶೈವಮತನನ್ನು ಪ್ರವೇಶಿಸುವನು ಎಷ್ಟು ದುರ್ಗಮನೆಂಬುದನ್ನು ವಾಚಕರೇ ಊಹಿಸಬಹುದು. ಏಕೆಂದರೆ—

ಶೈವಂ ವೈಷ್ಣವಮಜ್ಜೈವ ಪಾಶುಪತಂ ಸೌರಂ ವಿನಾಯಕಂ ।
ಕಾಪಾಲಿಕಂ ತಿ ನಿರ್ದ್ವೈತಂ ದರ್ಶನಾನಿ ಷಡೇವ ಹಿ ।

ಎಂದು ಸಾರಮೇಶ್ವರಾಗಮದಲ್ಲಿ ಹೇಳಿರುವಂತೆ ವೀರಶೈವ-ವೈಷ್ಣವ-ಶಾಕ್ತ-ಪೌರ-ಗಾಣಪತ್ಯ-ಕಾಪಾಲಿಕ ಎಂದು ಆರು ದರ್ಶನ (ಶಾಖ್ರ)ಗಳು ಮುಕ್ತಿ ಸಾಧನಗಳಾಗಿರುತ್ತವೆ. ಈ ದರ್ಶನಗಳಲ್ಲಿ ಮೊದಲನೆಯದಾದ ಶೈವ ದರ್ಶನದಲ್ಲಿ ಅನಾದಿಶೈವ, ಆದಿಶೈವ, ಅನುಶೈವ, ಮಹಾಶೈವ, ಯೋಗಶೈವ, ಜ್ಞಾನಶೈವ, ವೀರಶೈವ ಎಂದು ಏಳು ಮುಕ್ತಿಸೋಪಾನಗಳುಂಟು.

ತೇಷ್ವಾದ್ಯದರ್ಶನವಿದಂ ಕಲು ವೀರಶೈವಂ ತತ್ಪ್ರಕೃತ್ಯಾ ಭವತಿ ತತ್ಪ್ರಮುಖೋ ಮದಾಮಿ । ಯದ್ವಾ ಸತಃ ಪಶುಜನೋಽ ಭವೇದ್ವಿಮುಕ್ತಿ ಪಾಶಾನ್ಮಹೇಶಪದಪಂಕಜ ಭಕ್ತಿಲಾಭಾತ್ ॥

ಎಂದು ಸಾರಮೇಶ್ವರಾಗಮದ ಮೇಲೆ ಹುಟ್ಟಿರುವ ವೀರಶೈವಧರ್ಮವಿಶೇಷವಾದುದರಿಂದ ಈ ಅರ್ಧವನ್ನು ಸ್ಪಷ್ಟವಾಗಿ ಪ್ರತಿಪಾದಿಸಿರುವದು. ಶಿವಭಕ್ತಿಯೆಂಬ ಭೂಮ್ಯಾಧಾರದಿಂದ ಕಟ್ಟಲ್ಪಟ್ಟಿರುವ ಈ ಮುಕ್ತಿಸೋಪಾನಗಳನ್ನು ಕ್ರಮದಿಂದೇರಿ ಏಳನೆಯದಾದ ವೀರಶೈವಸೋಪಾನದ ಮೇಲೆ ಯಾರು ಕಾಲಿಡುವರೋ ಅವರು ಮಲಮಾಯಾದಿಪಾಶದಿಂದ ಬಹುಗಡಿಹೊಂದಿ ಅಖಂಡಬ್ರಹ್ಮಾನಂದಾಮೃತವಂ ಪೀರುವರು. ಈ ಸೋಪಾನಗಳು ಒಂದಕ್ಕೊಂದು ಉತ್ತುಂಗ ಸೋಪಾನಗಳಾಗಿರುವುದರಿಂದ ಪ್ರತಿಯೊಬ್ಬನೂ ಈ ಸೋಪಾನಗಳನ್ನು ಭುಪಾಸಿಸುತ್ತ ಬಂದಹಾಗೆಲ್ಲಾ ಅವನ ಚಿತ್ತವು ಪರಿಪಕ್ವಾವಸ್ಥೆಯನ್ನು ಪಡೆಯುತ್ತ ಬರುವದು. ಒಬ್ಬ ವಿದ್ಯಾರ್ಥಿಯು ಕೆಳಗಿನ ಕ್ಲಾಸಿನಿಂದ ಮೇಲಿನ ಕ್ಲಾಸಿಗೆ ಹೋದಹಾಗೆಲ್ಲ ವಿಶೇಷಾಕಾರವಾದ ಜ್ಞಾನವನ್ನು ಪಡೆಯುತ್ತಾನಷ್ಟೆ! ವೀರಶೈವದರ್ಶನದಲ್ಲಿ ಹೇಳಿದ ಇವುಗಳಲ್ಲಿ ಅನಾದಿಶೈವಧರ್ಮಗಳನ್ನು ಅನುಷ್ಠಿಸುವವನಿಗೆ ಅನಾದಿಶೈವನೆಂತಲೂ ಆದಿಶೈವಧರ್ಮಗಳನ್ನು ಅನುಷ್ಠಿಸುವವನಿಗೆ ಆದಿಶೈವನೆಂತಲೂ ಅನುಶೈವಧರ್ಮಗಳನ್ನು ಅನುಷ್ಠಿಸುವನವನಿಗೆ ಅನುಶೈವನೆಂತಲೂ ಯೋಗಶೈವ ಧರ್ಮವನ್ನು ಅನುಷ್ಠಿಸುವವನಿಗೆ ಯೋಗಶೈವನೆಂತಲೂ ಜ್ಞಾನಶೈವ ಧರ್ಮವನ್ನು ಅನುಷ್ಠಿಸುವವನಿಗೆ ಜ್ಞಾನಶೈವನೆಂತಲೂ ಯೋಗಜ್ಞಾನಗಳೆರಡರ ಸಮಾನೇಶದಿಂದ ವೀರಶೈವನೆಂತಲೂ ಆಯಾಯ ಹೆಸರುಗಳು ಬಂದಿರುತ್ತವೆ. ಇಲ್ಲಿ ಸಾಮಾನ್ಯವಾಗಿ ಶೈವ (ಶಿವೇಕಾಶಕ) ಎಂಬ ವಿಶೇಷ್ಯ ಪದವು ಒಂದೇ ಆದರೂ ಆಯಾಯ ನ್ಯೂನಾತಿರೇಕ ಧರ್ಮಗಳ ಅನುಷ್ಠಾನದಿಂದ ಅನಾದಿ, ಆದಿ, ಅನು, ಮಹಾ, ಯೋಗ, ಜ್ಞಾನ, ವೀರ ಎಂಬ ವಿಶೇಷಣಗಳು ಶೇರಿ ಅನ್ವರ್ಥಕಗಳಾದ ನಾಮಗಳು ಸಿದ್ಧಾಂತದಲ್ಲಿ ಹೇಳಲ್ಪಟ್ಟಿವೆ. ಈ ವಿಧಾಗಗಳ ಸ್ಪಷ್ಟೀಕರಣವನ್ನು ಪಾರಮೇಶ್ವರಾಗಮದಲ್ಲಿ ಜಿಜ್ಞಾಸುಗಳು ನೋಡಬಹುದು. ಈ ಏಳು ಮುಕ್ತಿ ಸೋಪಾನಗಳಿಗೂ ಭಕ್ತಿಯೇ ಬೀಜವಾಗಿರುವದು.

ಶಿವೇ ಭಕ್ತಿಸ್ಸಮುತ್ಪನ್ನಾ ಯಸ್ಯಾಸಾ ಭಕ್ತ ಉಚ್ಯತೇ ।
ತಸ್ಮಾನುಷ್ಠೇಯಧರ್ಮಾಣಾಮುಕ್ತಿ ರ್ಭಕ್ತಸ್ಥಲಂ ಮತಂ ॥

ಯಾವನಿಗೆ ಸಹಜವಾದ ಶಿವಭಕ್ತಿಯು ಅಂಕುರಿಸುವುದೋ ಅವನೇ ಶಿವಭಕ್ತನೆಂದು ಶ್ರೀ ರೇಣುಕಭಗವತ್ಪಾದರು ಪ್ರಥಮತಃ ಭಕ್ತನ ಲಕ್ಷಣವನ್ನು ಹೇಳಿ ಮುಂದೆ ಆ ಭಕ್ತನು,

ದೀಕ್ಷಾಲಿಂಗಧೃತ್ಕೈವ ವಿಭೂತೀತರಿ ಧಾರಣಂ ।
ರುದ್ರಾಕ್ಷಧಾರಣಂ ಚೈವ ಪಂಚಾಕ್ಷರಜಪಸ್ತಥಾ ॥
ಭಕ್ತಮಾರ್ಗಕ್ರಿಯಾ ಚೈವ ಗುರೋರಿಂಗಸ್ಯ ಚಾರ್ಚನಂ ।
ಜಂಗಮಸ್ಯ ತಥಾ ಜ್ಞೇಷಾಂ ಪ್ರಸಾದಸ್ವೀಕೃತಿಸ್ತಥಾ ॥
ಅತ್ರ ವಾನತ್ರಯಂ ಪ್ರೋಕ್ತಂ ಸೋಪಾನಾನುಪಾಧಿಕಂ ।
ಸಕಲಂ ಚೇತಿನಿರ್ಮಷ್ಟಂ ಸಮಸ್ತಾಗಮಸಾರಗೈಃ ॥
ಏತಾನಿ ಶಿವಭಕ್ತಸ್ಯ ಕರ್ತವ್ಯಾನಿ ಪ್ರಯತ್ನತಃ ॥

ಶಿವದೀಕ್ಷೆ, ಶಿವಲಿಂಗಧಾರಣ, ವಿಭೂತಿಧಾರಣ, ರುದ್ರಾಕ್ಷಧಾರಣ, ಪಂಚಾಕ್ಷರಿಜಪ, ಭಕ್ತಮಾರ್ಗಕ್ರಿಯಾಚಾರ ಗುರುಲಿಂಗಜಂಗಮರ ಪೂಜಾತೀರ್ಥಪ್ರಸಾದಸೇವನೆ, ಸೋಪಾಧಿ ನಿರುಪಾಧಿ ಸಹಜಗಳೆಂಬ ದಾನತ್ರಯ ಇವುಗಳ ಅನುಷ್ಠಾನವನ್ನು ಮಾಡಬೇಕೆಂದು ಅಪ್ಪಣ್ಣೆಯಿತ್ತಿರುವರು. ಹೀಗೆ ಗುರುವಿನಿಂದ ಶಿವದೀಕ್ಷಾಸಂಸ್ಕಾರ ಪಡೆದು ಅಧಿಕಾರಿಪುರುಷನೆನಿಸಿ ಭಕ್ತಸ್ಥಲವಂ ಪೂರೈಸುವುದರೊಳಗಾಗಿ ಅನಾದಿಶೈವ-ಆದಿಶೈವ-ಅನುಶೈವ-ಮಹಾಶೈವದರ್ಜಗಳಲ್ಲಿ ಉತ್ತೀರ್ಣನಾಗುತ್ತ ಬರುವನು. ಅಲ್ಲಿಂದ ಬಾಹ್ಯಕ್ರಿಯೆಗಳು ಕಡಿಮೆಯಾಗುತ್ತ ಮಾನಸಿಕಕ್ರಿಯೆಗಳಲ್ಲಿ ಪ್ರವೃತ್ತಿ ಹುಟ್ಟುವದು. ಅಲ್ಲಿಂದ ಬಹು ತರವಾಗಿ ಯೋಗಮಾರ್ಗವನ್ನನುಸರಿಸಬೇಕು. ಯೋಗವೆಂದರೆ "ಯೋಗಶ್ಚಿತ್ತವೃತ್ತಿನಿರೋಧಃ" ಮನಸ್ಸನ್ನು ವಿಷಯಗಳಿಗೆರಗದಂತೆ ನಿರೋಧಿಸುವುದೇ ಯೋಗವೆಂದು ಪತಂಜಲಿ ಋಷಿಗಳು ಅಭಿಪ್ರಾಯಪಟ್ಟಿದ್ದರೂ

ಯುಜಧಾತೋಸ್ಸಮಾಧೌ ತು ಕ್ಷೇತ್ರಜ್ಞ ಪರಮಾತ್ಮನೋಃ ।
ಮನೋ ಹಿ ಸರ್ವಭೂತಾನಾಂ ಕಾರಣಂ ಬಂಧಮೋಕ್ಷಯೋಃ ॥
ವೃತ್ತಿಹೀನಂ ಮನಃ ಕೃತ್ವಾ ಸ್ವಾತ್ಮಾನಂ ಪರಮಾತ್ಮನಿ ।
ಸಮ್ಯಕ್ ಶಿವಗತಂ ಚಿತ್ತಂ ಯದಾಭವತಿ ನಿಶ್ಚಿರಂ ॥
ಶಿವತ್ವಮೃತ್ಯ ಭಾವಸ್ಯ ಕೈವಲ್ಯಂ ಯೋಗ ಉಚ್ಯತೆ ॥

ಯುಜಧಾತುವಿನ ಮೇಲೆ ಹುಟ್ಟಿದ ಈ ಯೋಗ ಶಬ್ದವು ಜೀವಾತ್ಮ ಪರಮಾತ್ಮರ ಏಕೀಕರಣವಾಗಿ ಅಂತಃಕರಣವನ್ನು ಯಾವುದೊಂದು ವೃತ್ತಿಯಿಲ್ಲದಂತೆ ಮಾಡಿ, ಶಿವನಲ್ಲಿ ಅಪ್ರಯತ್ನವಾಗಿ ಮನಸ್ಸು ಲೀನಗೊಂಡು ಎಲ್ಲೆಲ್ಲೂ ಶಿವತ್ವಭಾವವುಂಟಾಗುವುದೇ ಯೋಗವೆನಿಸುವದೆಂದು ಶಿವಾಗಮಗಳು ಯೋಗಶಬ್ದಾರ್ಥವನ್ನು ಹೇಳಿರುವುವು. ಇಂಥ ಯೋಗವನ್ನು ಸಾಧಿಸುವುದಕ್ಕೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂದು ಎಂಟು ಅಂಗಗಳು ಹೇಳಲ್ಪಟ್ಟಿವೆ. ಈ ಎಂಟು ಅಂಗಗಳಲ್ಲಿ ಮಾನವನ ಸದಾಚಾರಗಳೆಲ್ಲ ಅಡಕಗಳಾಗಿವೆ. ಮೊದಲನೆಯದು ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಎಂದು ಐದು ಪ್ರಕಾರವು. ಇವುಗಳಲ್ಲಿ,

ಮನೋವಾಕ್ಕರ್ಮಭಿರ್ಹಿಂಸಾತ್ರಿವಿಧಾ ಪ್ರಾಣಿಹಾಮಿಹ ।
ತಾಸ್ಯೇ ನಿವೃತ್ತಿಂ ಸರ್ವತ್ರ ಅಹಿಂಸಾಂ ಪರಿಚಕ್ಷತೇ ॥

ಎಂದು ಶಿವಾಗಮದಲ್ಲಿ ಹೇಳಿರುವಂತೆ ಮಾನಸಿಕ ವಾಚಿಕ ಕಾರ್ಮಿಕ ಎಂದು ಮೂರು ವಿಧ ಹಿಂಸೆಗಳಲ್ಲಿ ಯಾವುದೊಂದೂ ಹಿಂಸೆಯನ್ನು ಕೊಡದಿರುವದೇ ಅಹಿಂಸೆಯೆನಿಸಿಕೊಳ್ಳುವದು. ಕ್ರಮವಾಗಿ ಇವುಗಳನ್ನು ಪರಿಪಾಲಿಸುತ್ತ

ರಾಗಾದಿದೋಷರಹಿತಂ ಹೇಯೋಪಾದೇಯನಿಸ್ಪೃಹಂ ।
ಆಹಿಂಸಂ ಸ್ಯಾಚ್ಚಿವೇ ಶಕ್ತ್ಯಾ ಸಮಾಧಿಃ ಪರಮಃ ಸ್ಮೃತಃ ॥

ಎಂಬ ಪ್ರಮಾಣಾನುಸಾರವಾಗಿ ಸಕಲೇಂದ್ರಿಯಗಳ ಉಸರವುದಿಂದ ಚಿತ್ತದಲ್ಲಿ ರಾಗದ್ವೇಷಾದಿಗಳೆಲ್ಲದೆ ಹೇಯೋಪಾದೇಯಗಳೆಲ್ಲದೆ ಶಿವನಲ್ಲಿ ಯಾವಾಗಲೂ ಚಿತ್ತವನ್ನಿಟ್ಟಿರುವನನೇ ಯೋಗೀಂದ್ರನೆನಿಸುವನು.

ಜ್ಞಾನೇನ ಹೀನಮಖಿಲಂ ಶು ಕರ್ಮ ।
ಜ್ಞಾನಂ ಚ ತೇನ ಹಿ ವಿನಾ ಸ ಕರ್ಮಬಂಧೇಃ ॥
ತಸ್ಮಾದಜಸ್ರಮುಭಯಂ ಪರಿಪಾಲನೀಯಂ ।
ತ್ಯಾಗಃ ಫಲಸ್ಯ ವಿಹಿತಃ ಖಲು ಸರ್ವಸ್ಯ ॥

ಎಂಬ ಪ್ರಮಾಣದಂತೆ ಈ ಯೋಗಿಯೇ ಪರಮಾತ್ಮ ಜ್ಞಾನಸಿದ್ಧಿಯನ್ನು ಪಡೆಯವದರಿಂದ ವೀರಶೈವನೆನಿಸುವನು. ಈ ವೀರಶೈವ ಶಬ್ದವು ಪುರುಷನು ಪಡೆಯಬೇಕಾದ ಉತ್ತಮ ಫಲವನ್ನು ಹೊಂದಿದ ಜೀವನ್ಮುಕ್ತನೆಂದು ಅರ್ಥಕೊಡುತ್ತದೆ. ಈ ರೀತಿ ಪರಮ ದುರ್ಲಭವಾದ ಸ್ಥಿತಿಯನ್ನು ಪ್ರತಿಯೊಬ್ಬನೂ ಪಡೆಯಬೇಕೆಂಬುವುದೇ ಈ ಮತದ ಧ್ಯೇಯವಾಗಿದೆ. ಇಂತಹ ಪವಿತ್ರ ಧ್ಯೇಯವನ್ನು ವೀರಶೈವ ದ್ವಿಜರು ಮನಸ್ಸಿನಲ್ಲಿ ತಂದುಕೊಂಡು ಆದರಂತೆ ಆಚರಿಸಿ, ತಾವು ಹೇಳಿಕೊಳ್ಳುವ ವೀರಶೈವವೆಂಬ ಪವಿತ್ರ ಶಬ್ದಕ್ಕೆ ಗೌರವವನ್ನು ತರಬೇಕೆಂದಾತಿ ಸುತ್ತೇವೆ.

ಒಳದೇಶದ ವೃತ್ತಾಂತಗಳು.

ಪ್ರಥಮ ಸಚಿವರಾದ ರಾಜಮಂತ್ರಪ್ರವೀಣ ಶ್ರೀ. ಎಸ್. ಪಿ. ರಾಜಗೋಪಾಲಾಚಾರ್ಯರವರು ಬೊಂಬಾಯಿಗೆ ಹೋಗಿ ಅಲ್ಲಿ ನಡೆಯುವ ನರೇಂದ್ರರ ಸಮ್ಮೇಳನದಲ್ಲಿ ವೈಸೂರಿನ ಪ್ರಾತಿನಿಧ್ಯ ವಹಿಸುವರೆಂದು ತಿಳಿದು ಬರುತ್ತದೆ.

ರಾಜಕೀಯ ಸುಧಾರಣಾ ಸಮಿತಿಯ ಸದಸ್ಯರಾದ ಶ್ರೀ ಕೆ. ವಿ. ಅನಂತರಾಮ್‌ರವರು ದ್ವಿತೀಯ ಸಚಿವರಾದ ಪ್ರಯುಕ್ತ ರಾಜಧರ್ಮಪ್ರವೀಣ ದಿವಾಬಹದ್ದೂರ್ ಪಿ ಮಹದೇವಯ್ಯನವರನ್ನು ರಾಜಕೀಯ ಸುಧಾರಣಾ ಸಮಿತಿಯ ಸದಸ್ಯರನ್ನಾಗಿ ಸರ್ಕಾರದವರು ನಿಯಮಿಸಿರುತ್ತಾರೆ.

ರಾಜಕುಮಾರರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ತಾ॥ 17 ನೇ ಗುರುವಾರ ಬೆಳಗ್ಗೆ ಸಹಚರಿಗಳಾದ ಮಿ॥ ಎಲ್ಲಿರವರೊಡನೆಯೂ ಪೌರಸಭೆಯ ಅಧ್ಯಕ್ಷರಾದ ಮಿ॥ ಎಂ. ಎ. ಶ್ರೀನಿವಾಸರವರೊಡನೆಯೂ ರಾಜಧಾನಿಯಲ್ಲಿರುವ ಬಡಬಗ್ಗರ ಆನಾರೋಗ್ಯಕರವಾದ ಕೊಳಕುಮನೆಗಳಲ್ಲಿರುವ ಬೆಸ್ತರ ಕೇರಿಯನ್ನೂ ಇತರ ವಾಸಸ್ಥಳಗಳನ್ನೂ ಪರಾಮರ್ಶಿಸಿ ಅನಂತರ ಕರುಪೆಟ್ಟ ಬೀದಿಯಲ್ಲಿ ವೈದ್ಯಪ್ರಕಾಶ ಮಿ॥ ವಿ. ಡಿ. ರಾಜಾರಾಮುಮೊದಲಿಯಾರ್ರವರ ಆಗ್ರಹಾರದ ದಕ್ಷಿಣಕ್ಕೆ ಪೌರಸಭೆಯವರು ಕಟ್ಟಿಸಿರುವ ಅಂದವಾದ ಮಾದರಿ ಮನೆಗಳಿಗೆ ಭೇಟಿಕೊಟ್ಟರು. ಗಾಳಿ ಬೆಳಕುಗಳ ಸಂಚಾರಕ್ಕೆ ಅವಕಾಶವಿಲ್ಲದೆ ಕೇವಲ ಒಂದು ಸಣ್ಣ ಕೊಠಡಿಯೊಳಗೇ ಸಮಸ್ತ ಗೃಹಕಾರ್ಯಗಳನ್ನೂ ನಡೆಸುತ್ತಿರುವ ಬಡಬಗ್ಗರುಗಳಿಗೆ ಇಂಥ ಮನೆಗಳನ್ನು ಪೌರಸಭೆಯವರು ಕಟ್ಟಿಸಿಕೊಟ್ಟಿರುವದಕ್ಕಾಗಿ ರಾಜಕುಮಾರರು ಸಂತೋಷಪಟ್ಟು ಬಡವರಿಗೆ ಈ ಮನೆಗಳು ಸ್ವರ್ಗಸಮಾನವಾಗಿವೆಯೆಂದು ಅಭಿಪ್ರಾಯಪಟ್ಟರು.

ವರ್ತಮಾನಸಂಗ್ರಹ.

ಮಾಜಿ ಚಕ್ರವರ್ತಿಗಳು

ಮಾಜಿ ಚಕ್ರವರ್ತಿಗಳಾದ ಡ್ಯೂಕ್ ಆಫ್ ವಿಂಡ್ಸರ್‌ರವರೂ ಅವರ ಪತ್ನಿಯವರೂ ಇಸ್ಪರಲ್ಲೇ ಲಂಡನ್ನಿಗೆ ಆಗಮಿಸುವರೆಂಬ ಸುದ್ದಿ ಹರಡಿದೆ.

ಜರ್ಮನಿಯಲ್ಲಿ ಮರಣದಂಡನೆ!

ಸರಕಾರಕ್ಕೆ ದ್ರೋಹಮಾಡುವ ರೀತಿಯಲ್ಲಿ ವರ್ತಿಸಿದರೆಂಬ ಅಪಾದನೆಗಾಗಿ ಬರ್ಲಿನ್‌ನಗರದಲ್ಲಿ ಇಬ್ಬರನ್ನು ಶಿರಚ್ಛೇದ ಮಾಡಿದರು.

ಹುಬ್ಬಳ್ಳಿಯ ಮುನಿಸಿಪಾಲಿಟಿಯು ರದ್ದಾಯಿತು

ಹುಬ್ಬಳ್ಳಿಯ ಮುನಿಸಿಪಾಲಿಟಿಯು ಡಿಸೆಂಬರ್ ತಿಂಗಳಿನಿಂದ ರದ್ದುಮಾಡಲ್ಪಡಬೇಕೆಂದು ಸರಕಾರವು ನಿರ್ಣಯಿಸಿರುತ್ತದೆ. ಅದರ ಆಡಳಿತೆಯನ್ನು ಮಿ॥ ವೆಂಕಟಪತಿ ಐ. ಸಿ. ಎಸ್. ಇವರು ನೋಡುವರೆಂದು ತಿಳಿದುಬರುತ್ತದೆ.

ಕುರಪಟ್ಟಿಯೂ ಮನುಷ್ಯನಿಗೆ ಆಹಾರವಾಯಿತು

ಕೆಲವು ವಿಜ್ಞಾನಿಗಳ ಸಹಾಯದಿಂದ ಜರ್ಮನಿಯಲ್ಲಿ ನರಗಸದ ಪುಡಿಯನ್ನು ಗೋಧಿಹಿಟ್ಟಿನೊಡನೆ ಬೆರಸಿ ರೊಟ್ಟಿಯನ್ನು ತಯಾರಿಸಿ ಜನರು ತಿಂದು ಜೀವಿಸುತ್ತಿ ದ್ದಾರೆ. ಜರ್ಮನ್ ವಿಜ್ಞಾನಿಗಳು ಯಾವುದನ್ನು ತಾನೇ ಆಹಾರಯೋಗ್ಯವೆಂದು ಬಿಡುವರೋ ತಿಳಿಯದಾಗಿದೆ.

ಮರಣದಲ್ಲಿ ಪತಿಯನ್ನನುಸರಿಸಿದ ಪತ್ನಿ !

ಹೊಸಪೇಟೆಯಲ್ಲಿ ಪ್ರಸಿದ್ಧ ಆಬಕಾರಿ ಕಂಟ್ರಾಕ್ಟ ರರೂ ಧರ್ಮಿಷ್ಠರೂ ಆಗಿದ್ದ ಶ್ರೀ ಮೂಲಾ ವೆಂಕಟಸ್ವಾ ಮಿಯವರು ಮರಣಶಯ್ಯೆಯಲ್ಲಿರುವಾಗ ಅವರ ಪತ್ನಿಯ ವರು ಪತಿವಿಯೋಗವನ್ನು ಸಹಿಸಿಕೊಂಡು ಜೀವಿಸಿರಲು ಷ್ಟವಿಲ್ಲದೆ ವಿಷಪಾನ ಮಾಡಿ ಪತಿಯ ಸಂಗಡವೇ ಇಹಲೋಕವನ್ನು ಬಿಟ್ಟರು.

ಮೈ॥ ನಾರಾಯಣರಾವ ಲೋಕೂರವರು ಬೊಂಬಾಯಿ ಹೈ ಕೋರ್ಟಿಗೆ ಜಜ್ಜರಾದರು

ಮೈ॥ ಲೋಕೂರವರು ಹೈಕೋರ್ಟ ಜಜ್ಜರಾಗಿ ನೇಮಿ ಸಲ್ಪಟ್ಟು ೨೧ ನೇ ತಾರೀಖಿಗೆ ತಮ್ಮ ಕೆಲಸವನ್ನು ಕೈ ಗೊಂಡರು. ಸರ್ ಚಿಂದಾವರಕರರು ಕರ್ನಾಟಕದ ೧ ನೇ ನ್ಯಾಯಾಧೀಶರು. ಅವರ ತರುವಾಯ ಶ್ರೀ ಲೋಕೂರವರೇ ದ್ವಿತೀಯ ನ್ಯಾಯಾಧೀಶರು. ಇವರಿಗೆ ಪ್ರೌಢಶಾಲೆಯ ಸ್ಥಾನವು ದೊರಕಿದ್ದಕ್ಕೆ ಕ್ಯೋಸ್ಥರ ಕರ್ನಾಟಕ ಪ್ರಜೆಗೆ ಅತ್ಯಂತ ಸಂತೋಷವುಂಟಾಗಿದೆ.

ತುಂಗಭದ್ರಾ ಕಾಲುವೆ.

ತುಂಗಭದ್ರಾ ಕಾಲುವೆಯ ವಿಚಾರಕ್ಕಾಗಿ ನಿಜಾಮ ರಾಷ್ಟ್ರ ಮದ್ರಾಸ ಸರಕಾರಗಳ ಪ್ರತಿನಿಧಿಗಳು ಮದ್ರಾಸ ನಲ್ಲಿ ಹೋದವಾರ ಕೂಡಿದ್ದು ಆವರ ಸಂಧಾನಗಳು ಉ ಭಯ ಪಕ್ಷಗಳಿಗೂ ಸಮ್ಮತವಾಗಿವೆಂದು ತಿಳಿಯುತ್ತಿದೆ. ಇನ್ನು ೧೫ ದಿವಸಗಳಲ್ಲಿ ಕರಾರುಗಳು ಹೊರಪಡುತ್ತವೆ. ಆದ್ದ ಮೈಸೂರು ಸರಕಾರದ ಹಕ್ಕು ಬಾಧ್ಯತೆಗೆ ವಿರೋ ಧವಾಗಿಲ್ಲ. ಈ ಕಾಲುವೆಯಿಂದ ಬಳ್ಳಾರಿ, ಅನಂತಪುರ ಜಿಲ್ಲೆಗಳಲ್ಲಿ ವ್ಯವಸಾಯಕ್ಕೆ ಬಹಳ ಹಿತವಾಗುವುದು.

ಯಂತ್ರಯುಗ

ಇಲ್ಲಿಯ ವರೆಗೂ ಕಬ್ಬನ್ನು ಕಡಿದು ಸರಿಪಡಿಸಿ ಗಾ ಣಕ್ಕೆ ಕೊಡುವವರೆಗೆ ಎಲ್ಲ ಕೆಲಸಗಳೂ ಆಳುಗಳಿಂದ ಮಾಡಲ್ಪಡುತ್ತಿತ್ತು. ಈಗ ಅಮೆರಿಕೆಯ ಹೋಫಕರು ಈ ಕಬ್ಬು ಕಡಿವ ಕೆಲಸಕ್ಕೂ ಯಂತ್ರವೊಂದನ್ನು ತಯಾ ರಿಸಿದ್ದಾರೆ. ಇದನ್ನು ಕಬ್ಬಿನ ಗದ್ದೆಯಲ್ಲಿ ನಡೆಸಿದರೆ ಕಬ್ಬನ್ನು ಕಡಿದು ಸರಿಪಡಿಸಿ ಒಟ್ಟಿಗೆ ಜೋಡಿಸಿ ಬಿಡುವದಂತೆ ! ಸುಮಾರು 60 ಜನರು ಮಾಡುವ ಕೆಲಸ ವನ್ನು ಇದೊಂದೇ ಮಾಡಿಬಿಡುವದಂತೆ ! ನಿರುದ್ಯೋಗ ರಾಕ್ಷಸನಿಗೆ ಇದು ಸಹಕಾರಿಯಲ್ಲವೇ ?

ಹಿಮಪಾತದಿಂದ ಅನಾಹುತ

ಅಮೇರಿಕದ ಸೆಂಟ್‌ಲೂಸಿಯ ಎಂಬ ಪ್ರದೇಶದ ರ್ವತದ ಮೇಲಿದ್ದ ಮಂಜಿನಗಡ್ಡೆಯು ಎರಡು ಹಳ್ಳ ಗಳ ಮೇಲೆ ಕುಸಿದು ಬಿದ್ದು ಹಳ್ಳಿಗಳ ಸುತ್ತ 8 ಮೈಲು ಪ್ರದೇಶವೂ ಮಂಜಿನಲ್ಲಿ ಹೂತುಹೋಯಿತು. ಸುಮಾ ರು 150 ಮಂದಿ ಮೃತರಾದರೆಂದು ತಿಳಿದು ಬಂದಿದೆ. ಮಂಜಿನಲ್ಲಿ ಹೂತುಹೋದವರನ್ನು ರಕ್ಷಿಸಲು ಹೋದ ವರು 45 ಮೃತಶರೀರಗಳನ್ನೂ 60 ಮಂದಿ ಗಾಯಗೊಂಡ ವರನ್ನೂ ಹೊರಗೆಳೆಯುವ ವೇಳೆಗೆ ತಿರುಗಿ ಮೇಲಿನಿಂದ ಹಿಮವು ಜರಿದು ಎಲ್ಲರನ್ನು ಹೂತು ಬಿಟ್ಟಿತು. ಸಹಾ ಯಕ್ಕೆ ಹೋದವರೂ ಪ್ರಾಣ ಕಳೆದುಕೊಂಡರು.

ಜರ್ಮನಿಯಲ್ಲಿ ಅಧಿಕಾರಿಗಳ ರಾಜೀನಾಮೆ

ಜರ್ಮನಿಯ ಸೈನ್ಯಕಾಖೆಯ ಪ್ರಮುಖ ಅಧಿಕಾರಿ ಗಳು ಈಚೆಗೆ ತಮ್ಮ ಅಧಿಕಾರಗಳಿಗೆ ರಾಜೀನಾಮೆ ಗಳನ್ನು ಕೊಟ್ಟಿರುವುದು ಪ್ರತಿಯೊಬ್ಬರಿಗೂ ವಿಸ್ಮಯ ವನ್ನುಂಟುಮಾಡಿದೆ. ಜರ್ಮನ್ ಜನರಲ್ ಸ್ಟಾಫ್ ಎಂಬ ಸೈನ್ಯಸಂಸ್ಥೆಯ ಮುಖ್ಯಾಧಿಕಾರಿಗಳಾದ ಜನರಲ್ ಬೆಕ್‌ರವರೂ ಪ್ರಥಮ ಸೈನ್ಯದಳದ ಸೇನಾನಾಯಕರೊ ಬ್ಬರೂ ತಮಗೆ ವಿಶ್ರಾಂತಿ ಕೊಡಬೇಕೆಂದು ಅಪೇಕ್ಷಿಸಿ ದರು ಅದರಂತೆಯೇ ಅವರುಗಳನ್ನು ಕೆಲಸದಿಂದ ತೆಗೆ ದುಬಿಟ್ಟಿರುತ್ತಾರೆ. ಇನ್ನೂ ಒಬ್ಬಬ್ಬರು ಅಧಿಕಾರಿಗಳು ತಾವಾಗಿಯೇ ಕೆಲಸಗಳಿಗೆ ರಾಜೀನಾಮೆಗಳನ್ನು ಕೊಟ್ಟು ರುತ್ತಾರೆ.

ಅಡಿಸ್ ಅಬಾಬ-ಜಿ ಜೋಕಿ ಬೂರೆ ರೈಲ್ ಮಾರ್ಗದ ಯಜಮಾನ್ಯಕ್ಕೆ !

ಜಿಬೋಕಿ ಬಂದರಿನಿಂದ ಅಡಿಸ್ ಅಬಾಬಕ್ಕೆ ಹೋ ಗುವ ರೈಲ್ವೆಮಾರ್ಗದ ಮೇಲ್ವಿಚಾರಣೆಯನ್ನು ತಮಗೆ ಒಪ್ಪಿಸಿಕೊಡಬೇಕೆಂದು ಇಟಲಿ ಸರ್ಕಾರದವರು ಫ್ರೆಂಚ್ ಸರ್ಕಾರಕ್ಕೆ ಸೂಚನೆ ಕೊಟ್ಟಿರುತ್ತಾರೆ. ಈ ಸೂಚನೆ ಯನ್ನು ಕುರಿತು ಫ್ರೆಂಚ್ ಸರ್ಕಾರದವರು ಬ್ರಿಟಿಷ್ ಮಂತ್ರಿಗಳೊಂದಿಗೆ ಚರ್ಚಿಸಲಿರುವರು ಅಡಿಸ್ ಅಬಾಬ ದಿಂದ ಅಬ್ಬೇನಿಯದ ಪಶ್ಚಿಮ ಗಡಿಗೆ ರೈಲುಮಾರ್ಗ ವನ್ನು ಮುಂದುವರಿಸುವದಿಲ್ಲವೆಂದು ಇಟಲಿಯು ಭರವಸೆ ಕೊಟ್ಟರೆ ಸ್ವಾಧೀನ ಅದಕ್ಕೆ ಒಪ್ಪುವಂತೆ ಕಾಣುತ್ತದೆ. ಅಂತೂ ಮಿಟ್ಸೋಲಿನಿಗಳ ಇಷ್ಟವನ್ನು ವಿರೋ ಧಿಸಲು ಯೂರೋಪಿನಲ್ಲಿ ಯಾರಿಗೂ ಧೈರ್ಯವಿಲ್ಲದಾ ಗಿದೆ.

ಲಂಡನ್ನಿಗೆ ರೂಮೇನಿಯಾ ದೇಶದ ಧೊರೆಗಳ ಆಗಮನ

ರೊಮೇನಿಯಾ ದೇಶದ ಧೊರೆಗಳಾದ ಕಾರೊಲ್ ರವರು ತಮ್ಮ ಜ್ಯೇಷ್ಠಕುಮಾರರಾದ ಪ್ರಿನ್ಸ್ ವೈಕೆಲ್ ರವರೊಡನೆ ತಾ. 15 ನೇ ಮಂಗಳವಾರ ಲಂಡ್ ಪಟ್ಟಣ ವನ್ನು ತಲಪಿದರು. ಚಕ್ರವರ್ತಿ ಜಾರ್ಜ್ ಪ್ರಭುಗಳವರು ಅವರನ್ನು ರೈಲ್ವೆ ನಿಲ್ದಾಣದಲ್ಲಿ ಸ್ವಾಗತಿಸಿ ಲಂಡನ್ನಿನ ರಾಜಮಾರ್ಗಗಳಲ್ಲಿ ಮೆರವಣಿಗೆ ಮಾಡಿಕೊಂಡು ಬಕಿಂ ಗ್‌ಹ್ಯಾಮ್ ಅರಮನೆಗೆ ಕರೆದುಕೊಂಡು ಹೋದರು. ಅರಮನೆಯಲ್ಲಿ ನಡೆದ ಔತಣಸಮಾರಂಭದಲ್ಲಿ ಇತರ ರಾಜ್ಯಗಳ ರಾಯಭಾರಿಗಳೂ ಬ್ರಿಟನ್ನಿನ ಪ್ರಧಾನಸಚಿ ವರೂ ಸೇರಿದ್ದರು. ಬ್ರಿಟಿಷ್ ಚಕ್ರವರ್ತಿಯವರು ಮಾಡಿದ ಪ್ರೇಮಪೂರ್ವಕವಾದ ಭಾಷಣಕ್ಕೆ ಕಾರೊಲ್ ಧೊರೆಗಳು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಕ್ವಾಮನಿವಾರಣ ಕಾರ್ಯಗಳಿಗಾಗಿ ಖರ್ಚು

ಮದರಾಸ್ ಆಧಿಪತ್ಯಕ್ಕೆ ಸೇರಿದ ಬಳ್ಳಾರಿ ಅನಂತ ಪುರ ಮತ್ತು ಕರ್ನೂಲು ಜಿಲ್ಲೆಗಳಲ್ಲಿ ಕಳೆದ 1937 ನೇ ಇಸವಿ ನವೆಂಬರ್ ತಿಂಗಳಿನಿಂದ ಕ್ವಾಮನಿವಾರಣಕಾರ್ಯ ಗಳನ್ನು ನಡೆಸುತ್ತಾಬಂದು ಈಚೆಗೆ ಮುಗಿಗೊಳಿದ್ದರಿಂದ ಜನರು ತಮ್ಮ ಗ್ರಾಮಭೂಮಿಗಳಿಗೆ ಹಿಂತಿರುಗುವುದ ರಿಂದ ಸರ್ಕಾರದವರು ಕಳೆದ ಅಕ್ಟೋಬರ್ ತಿಂಗಳು 15 ತಾರೀಖಿಗೆ ತಮ್ಮ ಕಾರ್ಯಕ್ರಮಗಳನ್ನು ಮುಕ್ತಾಯ ಗೊಳಿಸಿ ಖರ್ಚಿನ ವರದಿಯನ್ನು ಪ್ರಕಟಿಸಿದ್ದಾರೆ. ಆದ ರಂತೆ ಕ್ವಾಮಕಾಲಕ್ಕಾಗಿ ಆ ಜಿಲ್ಲೆಗಳಲ್ಲಿ ಮಾಫಿ ಮಾಡಿದ ಕಂದಾಯ 15,35,000 ರೂ. ಪ್ರಜೆಗಳಿಗೆ ಅನ್ನ ಬಟ್ಟೆ ಗಳನ್ನು ಒದಗಿಸಿದ್ದಕ್ಕೆ ಖರ್ಚು 24 ಲಕ್ಷ ರೂ. ಗಳು. ಬರೀ ಬಟ್ಟೆಗಳನ್ನು ಒದಗಿಸಿದ್ದಕ್ಕಾಗಿಯೇ 30000 ರೂ. ಗಳು. ವಿನಿಯೋಗಿಸಲ್ಪಟ್ಟವೆಂದು ಪ್ರಕಟಿಸಿದ್ದಾರೆ.

ಹೊಸ ತರಹದ ರೇಲ್ವೆ !

ವಿಜಾಪುರ ಡಿ॥ ಅಲಮಟ್ಟಿಯಿಂದ ತಾಳಕೋಟೆಯ ವರೆಗೆ ಒಂದು ಹಳೆಯ ಉಗಿಬಂಡಿಯನ್ನು ಉಪಯೋ ಗಿಸುವದಕ್ಕಾಗಿ ಬೊಂಬಾಯಿ ಸರಕಾರದವರು ಸಹಾಯ ಮಾಡಲು ಮುಂದೆ ಬಂದಿದ್ದಾರೆ. ನಾ. ನೂರಿಯವರ ಸಮಕ್ಷಮ ಈ ಹೊಸ ರೇಲ್ವೆಯ ವಿಧಾನವು 18 ನೆಯ ತಾರೀಖಿನ ದಿವಸ ತೋರಿಸಲ್ಪಟ್ಟಿತು. ದಾಪೋಲಿಯ ವರ್ಕಷಾಪಿನಲ್ಲಿ ಇದರ ಹೊಸತರಹ ಇಂಜನ್ನು ಸ್ಟೈಲ್ಯನ್ ಸಾಹೇಬರಿಂದ ತಯಾರಿಸಲ್ಪಟ್ಟಿದೆ. ಇದನ್ನು ಕ್ರೂಡ್ ಆಯಿಲ್ಲಿನಿಂದ ನಡೆಯಿಸಬಹುದು. ಕಾರ್ಖಾನೆಯಲ್ಲಿ 2 ಫರ್ಲಾಂಗ ಹಳಿಯನ್ನು ಹಾಕಿದ್ದರು. ಎಂಜಿನ್ನಿನಲ್ಲಿ ಬಿಡ್ಡೋಗಿಕ ಪಾತೆಯ ಮಂತ್ರಿಗಳು ಕುಳಿತು ಹೋಗಿಬಂ ದರು. ಈ ರೇಲ್ವೆ ಸಲುವಾಗಿ 3 ಮೈಲು ಅಗಲ ಪಕ್ಕಾ ರಸ್ತೆ ಯನ್ನು ಹಾಕಬೇಕಾಗುವದು. ಅದರ ನಡುವೆ ಒಂದು ಹಳಿ ಹಾಕಿದರೆ ಅದರ ಸಹಾಯದಿಂದ ಗಾಡಿಯು ನಡೆಯುವದು. 150 ಜನರು ಈ ಗಾಡಿಯಲ್ಲಿ ಕುಳಿತು ಕೊಳ್ಳಬಹುದಾಗಿದೆ.

ಬಡೋದಾದಲ್ಲಿರುವ ಅಲೆಂಬಿಕ್ ಕೆಮಿಕಲ್ ವರ್ಕ್ಸ್‌ನಲ್ಲಿ ಡಾ॥ ಜೋಫ್ರೆ ಇವಾನ್ಸ್‌ರವರ ಭೇಟಿ.

ಬಡೋದಾ ಮಹಾರಾಜರು ರೋಗಪೀಡಿತರಾಗಿ ದ್ದಾಗ ಅವರ ಚಿಕಿತ್ಸೆಗಾಗಿ ಲಂಡ್ ನಗರದಿಂದ ಕರೆಸ ಲ್ಪಟ್ಟಿದ್ದ ಡಾ॥ ಜೋಫ್ರೆ ಇವಾನ್ಸ್‌ರವರು ಬಡೋದಾ ನಗರಕ್ಕೆ ಬಂದಿದ್ದರು. ಬಡೋದಾಮಹಾರಾಜರು ಗುಣ ಮುಖರಾಗುತ್ತಿರುವಾಗ ಆ ನಗರದ ಹವೆಯು ಅವರಿಗೆ ಸರಿಹೋಗುವುದೋ ಎಂಬ ವಿಷಯವನ್ನು ಪರಿಶೀಲಿಸು ವುದಕ್ಕಾಗಿ ಬಂದಿದ್ದರು. ಡಾ॥ ಇವಾನ್ಸ್‌ರವರು ಬಡೋ ದಾಕ್ಕೆ ಬಂದು ನೋಡಬೇಕಾದ ಪ್ರೇಕ್ಷಣೀಯ ಸ್ಥಾನ ಗಳನ್ನೆಲ್ಲ ನೋಡಿ ಆನಂದಪಟ್ಟರು. ಹಾಗೆಯೇ ಅವರು ಅಲ್ಲಿರುವ ಅಲೆಂಬಿಕ್ ಕೆಮಿಕಲ್‌ವರ್ಕ್ಸ್ ಕಾರ್ಖಾನೆಗೆ ಭೇಟಿ ಇತ್ತರು. ಕಂಪೆನಿಯ ಡೈರೆಕ್ಟರರು ಇವರನ್ನು ಆದರದಿಂದ ಬರಮಾಡಿಕೊಂಡು ಕಾರ್ಖಾನೆಯಲ್ಲಿ ತೋ ರಿಸಬೇಕಾದುದನ್ನೆಲ್ಲ ತೋರಿಸಿದರು. ಔಷಧಿಗಳನ್ನು ಅಧುನಿಕ ವೈಜ್ಞಾನಿಕ ರೀತಿಯಲ್ಲಿ ತಯಾರಿಸುತ್ತಿರುವುದ ಕ್ಕಾಗಿ ಡಾ॥ ಇವಾನ್ಸ್‌ರವರು ಕಾರ್ಖಾನೆಯ ಡೈರೆಕ್ಟ ರಾದ ಶ್ರೀ ಅಮಿನ್‌ರವರನ್ನು ಶ್ಲಾಘಿಸಿದರು.

ಉನ್ಮತ್ತ ಸಿಪಾಯಿಯ ಕೃತ್ಯ ! ೬ ನುಂಡಿಯ ಕೊಲೆ !

ಸೆಹಾನರಕ್ಕೆ 30 ಮೈಲಿ ದೂರದಲ್ಲಿರುವ ನೌಶೇರಾ ಎಂಬಲ್ಲಿ 2 ನೇ ಪಂಜಾಬು ರೆಜಿಮೆಂಟಿನಲ್ಲಿ 4 ನೇ ವಿಭಾ ಗವು ನೊಕ್ಕಾಂ ಮಾಡಿತ್ತು. 23 ನೇ ತಾರೀಖಿನ ದಿವಸ ಅರ್ಧ ರಾತ್ರಿಯಲ್ಲಿ ಅಧಿಕಾರಿಗಳ ಡೇರೆಗಳನ್ನು ಕಾಯು ತ್ತಿದ್ದ ಕಾವಲುಗಾರನೊಬ್ಬನು ಉನ್ಮತ್ತನಾಗಿ ಸೈನ್ಯ ವಿಭಾಗದ ದಂಡನಾಯಕರಾದ ಲೆ॥ ಕ॥ ಇ. ಜಿ. ಗ್ರೇ ಯ ೨ರನ್ನು ಕೊಂದುಹಾಕಿದನು. ಆವರು ಡೇರೆಯಲ್ಲಿ ಮಲಗಿದ್ದಾಗ ಈ ಕೃತ್ಯ ನಡೆಯಿತು. ಇದನ್ನು ತಿಳಿದು ಇತರ ಅಧಿಕಾರಿಗಳು ತಮ್ಮ ತಮ್ಮ ಡೇರೆಗಳಿಂದ ಹೊರ ಡಲಾರಂಭಿಸಿದರು. ಆಗ್ಗೆ ಆ ಉನ್ಮತ್ತ ಕಾವಲುಗಾರನು ಅವರ ಮೇಲೂ ಗುಂಡಿನಮಳೆಗರೆದನು. ಲೆ॥ ಕ॥ ಇ. ಜಿ. ಗ್ರೇ, ಕ್ಯಾ॥ ಆರ್. ಟಂಡಲ್, ಲೆ॥ ಸಿ. ಡಬ್ಲ್ಯೂ. ರಾಡೆರಿಕ್, ಸುಬೇದಾರ್ ಸುಲ್ತಾನ್‌ಖಾ, ಜಮೇದಾರ್ ಷೇರ್‌ಖಾ ಮತ್ತು ಒಬ್ಬ ಮಹಮ್ಮದೀಯ ಸಿಪಾಯಿ ಇವರೆಲ್ಲ ಗುಂಡಿನಿಂದ ಸತ್ತರು. ಮೇಜರ್ ಇ. ಕರ್‌ನೌ ಮೇಜರ್ ಎ. ಎಫ್. ರೀ, ಎರಡನೇ ಲೆ॥ ಎ. ಎಸ್. ಕೆ. ಸ್ಟೋರಿ ಮತ್ತು ಜಮೇದಾರ್ ಘಾತೇಖಾ ಇವರಿಗೆಲ್ಲಾ ಗಾಯಗಳಾದವು. ಈ ಮಧ್ಯೆ ಪರಾಣರು ಬಿಡಾರವನ್ನು ಮುತ್ತಿದ್ದಾರೆಂದು ಸೈನಿಕರು ತಿಳಿಸಿದರು. ಒಬ್ಬನು ಓಡು ತ್ತಿದ್ದುದನ್ನು ಕಂಡು, ಅವನಮೇಲೆ ಗುಂಡು ಹಾರಿಸಿ ಕೊಂದರು. ಅವನು ಸೈನ್ಯವಿಭಾಗಕ್ಕೆ ಸೇರಿದ ಕಾವಲು ಗಾರನೆಂಬುದು ಅನಂತರ ಗೊತ್ತಾಯಿತು.

ಸ್ವೀಕಾರ.

ಅಕ್ಕಲಕೋಟೆ ಸಂಸ್ಥಾನದಲ್ಲಿರುವ ಮೈ॥ ರಾ॥ ಗುರು ಲಿಂಗಪ್ಪ ಮಹಾಂತ ಇವರ ಪುತ್ರರಾದ ಮೈ॥ ರಾ॥ ಚನ್ನ ಬಸಪ್ಪನವರು ಈವರ್ಷ ಬಿ.ಎ. ಎಲ್‌ಎಲ್. ಬಿ. ಪರೀಕ್ಷೆ ಯಲ್ಲಿ ಉತ್ತೀರ್ಣರಾದ ಸಂತೋಷಕ್ಕಾಗಿ ಪ್ರಭಾಪೋಷಣ ಕ್ಕಾಗಿ ಸಮರ್ಪಿಸಿದ ೧೦ ರೂ. ಯು ಅಕ್ಕಲಕೋಟೆ ಹಿರೇ ಮಠದ ಶ್ರೀ ಮೈ॥ ಬ್ರ॥ ಗುರುಕಾಂತಶಿವಾಚಾರ್ಯರ ದ್ವಾರಾ ತಲ್ಪಿದುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂ॥ ಚಾ॥ ಸಂ॥ ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಪಂಚಲಿಂಗದರ್ಶನ

ತಲಕಾಡಿನಲ್ಲಿ ಅದ್ಭುತ ಜಾತ್ರೆ!

ಬೆಲಕವಾಡಿ ಬೆಟ್ಟಕ್ಕೂ ಮುಡುಕುತೊರೆ ಬೆಟ್ಟಕ್ಕೂ ನಡುವೆ ಕಾವೇರಿಯು ನಾಲ್ಕು ದಿಕ್ಕುಗಳಲ್ಲಿಯೂ ಪ್ರವಹಿಸುವ ಅತ್ಯದ್ಭುತವಾದ ನದೀ ಸನ್ನಿವೇಶವುಳ್ಳ ದಕ್ಷಿಣ ಕಾಶಿ ಗಜಾರಣ್ಯಕ್ಷೇತ್ರವೆಂದು ಪುರಾಣಸಿದ್ಧವಾದ ತಲಕಾಡಿನಲ್ಲಿ ೨೧ನೆಯ ತಾರೀಖು ದಿವಸ ಅದ್ಭುತ ಜಾತ್ರೆಯಾಯಿತು. ಭಾರತದ ನಾನಾಮೂಲೆಗಳಿಂದ ಲಕ್ಷಾಂತರ ಭಕ್ತಾದಿಗಳು ಕೂಡಿದ್ದರು. ಕಾವೇರಿಯು ಪುಣ್ಯೋದಕದಲ್ಲಿ ಸ್ನಾನಮಾಡಿ ಪಂಚಲಿಂಗಗಳ ದರ್ಶನವನ್ನು ಪಡೆದರು.

ಕಾರ್ತಿಕಮಾಸ, ಅಮಾವಾಸ್ಯೆ, ಸೋಮವಾರ, ವೃಶ್ಚಿಕಮಾಸ, ಕುತಪಯೋಗ—ಪಂಚಲಿಂಗದರ್ಶನಕ್ಕೆ ಯೋಗ್ಯವಾದ ಈ ಪುಣ್ಯಕಾಲವೈಸೋಮವಾರ ಬ್ರಾಹ್ಮ ಮುಹೂರ್ತದಲ್ಲಿ ಉದಯವಾಯಿತು. ಯಾತ್ರಾರ್ಥಿಗಳು ಬ್ರಾಹ್ಮ ಮುಹೂರ್ತದಲ್ಲಿ ಎದ್ದು ಶೌಚಸ್ನಾನ ನಿತ್ಯಕರ್ಮಗಳನ್ನು ಮುಗಿಸಿಕೊಂಡು ತಲಕಾಡಿನ ಪಡುಲಲ್ಲಿರುವ ಗೋಕರ್ಣಕಟ್ಟೆಗೆ ಹೊರಟರು. ಅಲ್ಲಿ ಸ್ನಾನ ಮಾಡಿ, ಆ ಕಟ್ಟೆಯ ಅಧಿಷ್ಠಾನದೇವತೆಯಾದ ಶ್ರೀ ಗೋಕರ್ಣೇಶ್ವರಸ್ವಾಮಿಯ ದರ್ಶನವನ್ನು ಪಡೆದರು. ತರುವಾಯ ಗೋಕರ್ಣದ ದಕ್ಷಿಣಕ್ಕೆ ಇರುವ ಶ್ರೀ ವೈದ್ಯನಾಥೇಶ್ವರಸ್ವಾಮಿಯ ದರ್ಶನಮಾಡಿದರು.

ಶ್ರೀವೈದ್ಯನಾಥೇಶ್ವರಸ್ವಾಮಿಯೇ ಪಂಚಲಿಂಗಗಳಲ್ಲಿ ಪ್ರಥಮಲಿಂಗ. ಸ್ಕಂದಪುರಾಣದಲ್ಲಿ ಶ್ರೀವೈದ್ಯನಾಥೇಶ್ವರಸ್ವಾಮಿಯ ಮಾಹಾತ್ಮ್ಯವು ಉದ್ಭವಾಗಿದೆ. ಶಿಷ್ಯವತ್ಸಲ ಸರ್ವಾಂತರ್ಯಾಮಿಯಾದ ಸೋಮದತ್ತನೆಂಬ ಬ್ರಾಹ್ಮಣನು ತಪಸ್ಸುಮಾಡಲು ಗಜಾರಣ್ಯಕ್ಷೇತ್ರಕ್ಕೆ ಬರುತ್ತಾನೆ. ಮುಂತಾದವುಗಳು ಅನೇಕ ಪೌರಾಣಿಕ ಕಥೆಗಳಿವೆ. ಪುರಾತನಕಾಲದಲ್ಲಿ ಅನೇಕ ಪ್ರಾಣಿಯೇ ಇದ್ದಾದರಿಂದ ಮುಂದಿನ ಜನ್ಮದಲ್ಲಿ ಅನೆಯಾಗಿ ಗಜಾರಣ್ಯಕ್ಕೆ ಬಂದು ಒಂಟಿಗಾಲಿನ ಮೇಲೆ ಬಹುದಿನ ತಪಸ್ಸುಮಾಡಿದ್ದನೆಂದೂ ಈ ಚರಿತ್ರೆಯನ್ನು ಅರಿತು ಕಾಶಿಯಿಂದ ಸ್ಫಟಿಕಲಿಂಗವನ್ನು ತಂದು ಪೂಜಿಸಿದ್ದರಿಂದ ತಲ. ಕಾಡಿಗೆ ಮಲ್ಲಿಕಾರ್ಜುನೇಶ್ವರನೆಂದೂ ಹೆಸರು. ಮರವನ್ನು ಕಡಿದುಹಾಕಿದ್ದಾಗ ಕೊಡಲಿಯು ಬೆಟ್ಟಿ ಲಿಂಗಕ್ಕೆ ತಗಲಿ ರಕ್ತವು ಸುರಿದುದಕ್ಕೆ ಮಾ. ಅನಂತರ ಶಿಷ್ಯರನ್ನು ಪ್ರತ್ಯಕ್ಷನಾಗಿ ತಲ. ಕಾಡಿಗೆ ಪ್ರಮಿದ್ಧಗಣಗಳ ಸ್ಥಾನವನ್ನೂ ಅನೆಗೆ ಆಶ್ರಯವನ್ನೂ ಕೊಟ್ಟುದಲ್ಲದೆ ತನಗಾದ ಗಾಯವನ್ನು ತಾನೇ ಗುಣಪಡಿಸಿಕೊಂಡ.ದರಿಂದ ಶ್ರೀ ವೈದ್ಯನಾಥೇಶ್ವರನೆಂಬ ನಾಮವನ್ನು ಪಡೆದನೆಂದೂ ತಲ. ಕಾಡಿನ ಪ್ರಾಶಸ್ತ್ಯಾರ್ಥವಾಗಿ ಆ ಕ್ಷೇತ್ರವು "ತಲಕಾಡು" ಎಂದು ಕರೆಯಲ್ಪಟ್ಟಿತೆಂದೂ ಚರಿತ್ರೆವಿದೆ. ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ತಲ. ಕಾಡಿನ ವಿಗ್ರಹಗಳನ್ನು ನಂದಿಗೂ ಪೂಜಿಸುತ್ತಿದ್ದಾರೆ.

ಶ್ರೀ ವೈದ್ಯೇಶ್ವರಸ್ವಾಮಿಯು ಪ್ರಥಮಲಿಂಗವಲ್ಲದೆ ಪ್ರಧಾನ ಲಿಂಗ. ಮಿಕ್ಕ ಲಿಂಗಗಳ ದರ್ಶನ ಮಾಡಿದಂತೆಲ್ಲ ಯಾತ್ರಾರ್ಥಿಗಳು ಬಂದು ತಾವು ಮಾಡಿದ ಇತರ ಲಿಂಗಗಳ ದರ್ಶನದ ವಂದಿಯನ್ನು ಶ್ರೀ ವೈದ್ಯೇಶ್ವರನಿಗೆ ಅರಿಸಿ, ಉಳಿದ ಲಿಂಗಗಳ ದರ್ಶನಕ್ಕೆ ತೆರಳುತ್ತಿದ್ದರು ಆದೇ ಕಲ್ಪೋಕ್ತ ಪಾಚಲಿಂಗದರ್ಶನ ಕ್ರಮ.

ದ್ವಿತೀಯ ಜಂಗಮೆ ಅರ್ಕೇಶ್ವರ ಇದು ತಲ ಕಾಡಿಗೆ ಪೂರ್ವದಲ್ಲಿ ಏದು ವೈಲಿಗಳ ದೂರದಲ್ಲಿದೆ ಇದು ಸೂರ್ಯನಿಂದ ಅರ್ಚಿಸಲ್ಪಟ್ಟ ಲಿಂಗ ಯಾತ್ರಾರ್ಥಿಗಳು ಶ್ರೀ ವೈದ್ಯೇಶ್ವರ ದರ್ಶನವನ್ನು ಪಡೆದು ಪಡುಪುರಕ್ಕೆ ಬಂದು ಅಲ್ಲಿ ಉತ್ತರವಾಹಿನಿಯಾಗಿ ಹರಿಯುವ ಕಾವೇರಿಯಲ್ಲಿ ಸ್ನಾನ ಮಾಡಿದರು ಶ.ಚಿ ಭೂತರಾಗಿ ಶ್ರೀ ಅರ್ಕೇಶ್ವರದರ್ಶನವನ್ನು ಮಾಡಿದರು ಶ್ರೀ ವೈದ್ಯೇಶ್ವರನಿಗೆ ವಂದಿಯನ್ನೊಪ್ಪಿಸಿ, ತಲಕಾಡಿನ ದಕ್ಷಿಣ ಪಾರ್ಶ್ವದಲ್ಲಿ ಪೂರ್ವವಾಹಿನಿಯಾಗಿ ಪ್ರವಹಿಸುವ ಕಾವೇರಿಯಲ್ಲಿ ಸ್ನಾನಮಾಡಿ, ಶ್ರೀಪಾತಾಳೇಶ್ವರ ದರ್ಶನ ಮಾಡಿದರು. ಶ್ರೀ ವೈದ್ಯೇಶ್ವರನಿಗೆ ವಂದಿ ಅರ್ಪಿಸಿದ ತರುವಾಯ, ಪಶ್ಚಿಮವಾಹಿನಿಯಲ್ಲಿ ದಕ್ಷಿಣವಾಹಿನಿ ಕಾವೇರಿ ಸ್ನಾನಮಾಡಿ ಶ್ರೀಮಲ್ಲಿಕಾರ್ಜುನೇಶ್ವರನ ದರ್ಶನವನ್ನು ಮಾಡಿದರು. ಯಥಾಪ್ರಕಾರ ವರದಿಯೊಪ್ಪಿಸಿ, ಉತ್ತರವಾಹಿನಿಯಾಗಿರುವ ಪಶ್ಚಿಮವಾಹಿನೀ ಕಾವೇರಿಯಲ್ಲಿ ಸ್ನಾನಮಾಡಿ ಮುಡುಕುತೊರೆಬೆಟ್ಟದ ಮಸ್ತಕದಲ್ಲಿರುವ ಶ್ರೀ ಮಲ್ಲಿಕಾರ್ಜುನೇಶ್ವರನ ದರ್ಶನವನ್ನು ಮಾಡಿದರು.

ಈ ಪಂಚಪ್ರಧಾನಲಿಂಗಗಳಲ್ಲದೆ, ಯಾತ್ರಾರ್ಥಿಗಳು ಇನ್ನೂ ಹಲವು ದೇವಸ್ಥಾನಗಳನ್ನು ತಮ್ಮ ಯಾತ್ರೆಯ ಕಾಲದಲ್ಲಿ ಕಂಡು ದೇವರ ದರ್ಶನ ಪಡೆದರು. ಅವುಗಳಲ್ಲಿ ಶ್ರೀ ವೀರಭದ್ರೇಶ್ವರ, ಶ್ರೀ ಗಣೇಶ್ವರ ಇವುಗಳು ಮುಖ್ಯವಾದುವು.

ರಾಜವಂಶದವರ ಆಗಮನ

ರಾಜವಂಶದವರ ಆಗಮನವು ಈ ಯಾತ್ರಾಮಹೋತ್ಸವಕ್ಕೆ ಭೂಷಣಪ್ರಾಯವಾಗಿತ್ತು. ಶ್ರೀಮದ್ಯುವರಾಜಕುಮಾರ ಶ್ರೀ ಜಯಚಾಮರಾಜ ಒಡೆಯರ್‌ರವರೂ, ಶ್ರೀಮನ್ಮಹಾರಾಣಿಯವರೂ, ಶ್ರೀಮದ್ಯುವರಾಣಿಯವರೂ, ರಾಜಕುಮಾರಿಯರುಗಳೇ ಮುಂತಾದ ರಾಜವಂಶದವರು, ಅಂದು ಪ್ರಾತಃಕಾಲ ೬॥ ಗಂಟೆಗೆ ರಾಜಧಾನಿಯನ್ನು ಬಿಟ್ಟು ೮ ಗಂಟೆಗೆ ತಲಕಾಡನ್ನು ಸೇರಿದರು. ಮುಡುಕುತೊರೆಗೆ ಬರುತ್ತಲೇ, ಬೆಟ್ಟಕ್ಕೆ ಹೋಗುವ ರಸ್ತೆಯ ಬಾಕದಲ್ಲಿ "ರೆವೆನ್ಯೂ" ಚಿಪ್ಪರ ಹಾಕಿತ್ತು. ಅಲ್ಲಿಗೆ ರಾಜವರ್ಗದವರು ಬರುತ್ತಲೇ ಪೋಲೀಸಿನವರು "ಗಾರ್ಡ್ ಆಫ್ ಆನರ್" ಮಂಡ್ಯಪೆ ಮಾಡಿದರು ಜಿಲ್ಲಾಧಿಕಾರಿಗಳಾದ ಶ್ರೀ ಎಂ ಜಿ ಮೇಕ್ರಯವರು ರಾಜಕುಮಾರರಿಗೆ ಹಾರ ತುರಾಯಿಗಳನ್ನು ಅರ್ಪಿಸಿ ಸ್ವಾಗತ ಬಯಸಿದರು. ರಾಜಮನೆತನದವರು ೬ ಬಿ. ಯಲ್ಲಿ ಬಿಡಾರಮಾಡಿದ್ದರು

ಸ್ವಲ್ಪಕಾಲ ವಿಶ್ರಾಂತಿ ಪಡೆದು, ರಾಜವರ್ಗದವರು ಪಂಚಲಿಂಗದರ್ಶನಕ್ಕೆ ತೆರಳಿದರು ಜಿಲ್ಲಾಧಿಕಾರಿಗಳೂ ಜಿಲ್ಲಾ ಪೋಲೀಸ್ ಅಧಿಕಾರಿಗಳೂ ಅಸಿಸ್ಟೆಂಟ್ ಸೂಪರಿಂಟೆಂಡೆಂಟರೂ ರಾಜವರ್ಗದ ಸೌಕರ್ಯಾರ್ಥವಾಗಿ ಅವರನ್ನು ಹಿಂಬಾಲಿಸಿದರು. ರಸ್ತೆಗಳಲ್ಲಿ ಪೋಲೀಸರು ಕಾವಲಿದ್ದು ಸಂಚಾರ ಸೌಕರ್ಯವನ್ನು ಕಲ್ಪಿಸಿದರು. ಎಲ್ಲ ದೇವಸ್ಥಾನಗಳಲ್ಲೂ ಪ್ರಾತಃಕಾಲ ೮ ರಿಂದ ೧೦ ಗಂಟೆಯವರೆಗೆ ಸಾರ್ವಜನಿಕರಿಗೆ ಪ್ರವೇಶಾವಕಾಶವಿಲ್ಲದೆ ಇಟ್ಟಿದ್ದು ರಾಜವರ್ಗದವರ ದೇವತಾರ್ಚನೆ, ದೇವತಾದರ್ಶನಗಳಿಗೆ ಸೌಕರ್ಯ ಕಲ್ಪಿಸಿತ್ತು. ಸಾಧ್ಯವಾದ ಕಡೆಗಳಲ್ಲೆಲ್ಲ ರಾಜವರ್ಗದವರು ಮೋಟಾರು ಕಾರುಗಳಲ್ಲಿ ಸಂಚರಿಸಿದರು ಮರಳು ದಿಬ್ಬಗಳಲ್ಲಿಯೂ, ಮುಡುಕುತೊರೆ ಬೆಟ್ಟದ ಮೇಲಕ್ಕೂ ವ್ಯಾನಾಗಳನ್ನು ಏರ್ಪಡಿಸಿತ್ತು.

ಮಧ್ಯಾಹ್ನಾಂತರ ರಾಜವಂಶದವರಿಗೆ ವಿಶ್ರಾಂತಿ ವಿಹಾರ್ಥವಾಗಿ ಟಿ. ಬಿ. ಯ ಸಮೀಪಲ್ಲಿ ನದೀ ದಡದಲ್ಲಿರುವ ಮರಗಳ ನೆರಳಿನಲ್ಲಿ ಸ್ಥಳವನ್ನು ಪರಿಷ್ಕಾರಮಾಡಿತ್ತು. ತಡಿಕೆಗಳ ಮೆರೆಯನ್ನು ಏರ್ಪಾಟುಮಾಡಿತ್ತು.

ಜನರಿಗೆ ಸೌಕರ್ಯಗಳು

ಈ ಅದ್ಭುತ ಜಾತ್ರೆಯಲ್ಲಿ ಜನ ಸೌಕರ್ಯಕ್ಕಾಗಿ ಹಲವು ಸರಕಾರಿ ಸಾರ್ವಜನಿಕ ವಿಶ್ರಾಂತಿಗಳಾಗಿದ್ದವು. ಬಹುಮಂದಿ ಪುಣ್ಯಾತ್ಮರು ಅರವಟ್ಟಿಗೆಗಳನ್ನು ಇಟ್ಟಿದ್ದರು, ಕೊಮಟಿಯವರು ಸಮಾರಾಧನೆಗಳು ನಡೆದವು.

ಆರೋಗ್ಯಶಾಖೆಯವರು ರೋಗನಿರೋಧಕ್ಕಾಗಿ ಬಲವಾದ ವಿಶ್ರಾಂತಿಮಾಡಿದ್ದರು. ಇತ್ತು ಜನರು ನದೀ ನೀರನ್ನು ಬಳಸುವದರಿಂದ, ಶುಚ್ಛವಾದ ನೀರನ್ನು ಕುಡಿಯುವಂತೆ ಕಟ್ಟುಮಾಡಿದ್ದರು. ನದೀ ದಡಗುಂಡಿಕ್ಕೂ, ಬೋರ್ಡುಗಳನ್ನು ಹಾಕಿದ್ದಲ್ಲದೆ, ಪೋಲೀಸರನ್ನು ಕಾವಲು ಹಾಕಿದ್ದರು ಶುದ್ಧವಾದ ನೀರು ಸರಪರಾಜಿಗಾಗಿ ತಲಕಾಡಿನಲ್ಲಿ ಮೂವತ್ತು, ಮುಡುಕುತೊರೆಯಲ್ಲಿ ಮೂವತ್ತರಂತೆ ನಲ್ಲಿಗಳನ್ನು ಇಟ್ಟಿದ್ದರು

ಜೊಳೆಯ ದಡದಲ್ಲಿ ಜನರು ಶುಚ್ಛಲಮಾಡದಿರುವಂತೆ ನೋಡಿಕೊಳ್ಳಲು ತಕ್ಕ ವಿಶ್ರಾಟಾಗಿತ್ತು. ಗೋಕರ್ಣದ ಕೊಳದಲ್ಲಿ ನೀರು ಹಳಸುಗಟ್ಟಿಹೋಗಿತ್ತು. ಪಾಚಿಯು ನೀರಿನ ಮೇಲ್ಬಾಗವನ್ನೆಲ್ಲವನ್ನೂ, ಮೆಟ್ಟಿಲುಗಳನ್ನೂ, ಆವರಿಸಿತ್ತು ಅದಕ್ಕೆ ಮೈಲುತುತ್ತ ಹಾಕಿ ಪಾಚಿಯನ್ನೆಲ್ಲ ತೆಗೆದುಹಾಕಿದ್ದರು ಸುಣ್ಣ ಹಾಕಿ ನೀರನ್ನು ಶುದ್ಧಿಗೊಳಿಸಿದ್ದರು. ಸ್ನಾನಮಾಡುವವರು ಜಾರಿ ನೀರಿಗೆ ಬೀಳದಂತೆ, ಸ್ನಾನಮಾಡುವಾಗ ಹಿಡಿದುಕೊಳ್ಳಲು ಕಟ್ಟೆಟ್ಟಿಗೆಗಳನ್ನು ಕಟ್ಟಿದ್ದರು.

ತಲಕಾಡಿನಲ್ಲಿ ಮರಳಿನ ಹಾವಳಿಯೇ ಹಾವಳಿ! ಎಲ್ಲವನ್ನೂ ಅದು ನುಂಗಿಕೊಳ್ಳುತ್ತಿದೆ. ಎರಡು ಮೂರು ದೇವಸ್ಥಾನಗಳ ಹೊರತು ಮಿಕ್ಕೆಲ್ಲವನ್ನೂ ಮರಳುಮುಚ್ಚಿಕೊಂಡುಬಿಟ್ಟಿತ್ತು. ಕಳೆದ ಮೂರು ತಿಂಗಳಿಂದ ಸುಮಾರು ೧೦,೦೦೦ ಕೂಲಿಗಳು ಕೆಲಸಮಾಡಿ ಮರಳನ್ನು ಎತ್ತಿಹಾಕಿ ದೇವಸ್ಥಾನಗಳನ್ನು ಬಿಡಿಸಿದ್ದರು.

ಸ್ಥಳವಂದಿಗರಾದ ಶ್ರೀಮತಿ ರಾಜಮ್ಮ, ಶ್ರೀ ಸುಬ್ಬಣ್ಣ ಎಂಬ ಪುಣ್ಯಾತ್ಮರು ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಬಹಳ ಶ್ರಮವಹಿಸಿ ದ್ರವ್ಯಸಹಾಯವನ್ನು ಮಾಡಿದರು. ಜನಜಾತ್ರೆಯ ನಿರ್ವಹಣಾರ್ಥವಾಗಿ ಸುಮಾರು ೪೦೦ ಜನ ಪೋಲೀಸರೂ ೭೧ ಮಂದಿ ರಿಸರ್ವ್ ಪೋಲೀಸರೂ ಹೋಗಿದ್ದರು.

ಮಲೆಜ್ವರಕ್ಕೆ ಮಲೇರಿಯಾನ ಇದು ಮಲೆಜ್ವರ, ಚಳಿಜ್ವರ, ದಿನಬಿಟ್ಟು ಬರುವಜ್ವರ, ೨ ವ ೩ ದಿವಸಕ್ಕೊಮ್ಮೆ ಬರುವಜ್ವರ, ಕ್ವಿನೀನ್‌ನಿಂದಲೂ ಇಂಜಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ನಿಶ್ಚೆ ಸಮೇತ ಸಂಪೂರ್ಣ ಗುಣಪಡಿಸುತ್ತದೆ. ೪ ಡೋಸ್ಗೆ ಸೀಸೆಗೆ ಆಣೆ 0-4-0, 8 ಡೋಸ್ಗೆ ಸೀಸೆಗೆ ರೂ. 1-8-0, ಡಜನಿಗೆ ರೂ. 9-12-0, ರೂ 16 8-0.

ಕಂಪೌಂಡ್ ಸಿರಪ್ ಸಾಲಸೆವನೆ— ಸ್ವಚ್ಛೇಂದ್ರಿಯ ಸ್ವಲನ, ಶೀಘ್ರಸ್ಖಲನ, ಧಾತುಕಳಕಳೊಳ್ಳವಾದು, ಮೂತ್ರದೊಡನೆ ನಸ್ಯವಾಗುವದು, ನಿರ್ಬಲತ್ವ, ತೆಳ್ಳಗಾದಧಾತು, ಇವೆಲ್ಲವ ಬಾಧವನ್ನು ಕಿತ್ತು ಬಿಸಾಡುವದಲ್ಲದೆ ಧಾತುವೃದ್ಧಿಕರವಾಗಿ ಸಾನಿಧ್ಯತ್ವವೆ ಸೀಸೆಗೆ ರೂ. 3 8-0 ನುತ್ತು 1-14-0

ಪ್ರಬ್ಬಾತಿಸಟ್ಟು ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು—ಸಕಲತರದ ಹೊಟ್ಟೆಸುಳುಗಳನ್ನು ನಾಶಪಡಿಸಿ ಜಾಡಿಸುವ ದರಸ್ಲಿ ಮುಖ್ಯ ಔಷಧಿ. ಡಜನ್ ಆ. 0-5-0 100ಕ್ಕೆ ರೂ. 2-0-0.

ರಿಂಗ್ ವರ್ಮ್ ಚಾಮು—ಹುಳ ಮೇಯುವುದಕ್ಕೆ ಆಣೆ 0-5-0.

ಕುಷ್ಠ ಬಿಟ್ಟು, ಜೊನ್ನೊಪಡಿ ವಿಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.—ಧರ್ಮಾರ್ಥ.

ಕಂಪೌಂಡ್ ಸಿರಪ್ ಬ್ಲಾಟಿ—ಬರೀ 3 ತಿಂಗಳ ಸೇವನೆಯಿಂದ ಉಬ್ಬಸ, ನೇವಸ, ಪಾಸವನ್ನು ಖಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ. 3.8-0, ಸಣ್ಣದು ರೂ. 1.14.0.

ಬೇಬಿ ಟೋನ್—ದಾಲ್ಚಾಕ್ಕಾಯಲ್ಲಿ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ತಾಯಿ ರೆಗ್ರಿಹಣಿ ರೋಗದಿಂದ ಮಾಂಸ ಜೋಲುಬಿದ್ದು, ಮೈ, ಕೈ, ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ 1.4 0

ಟೈಯರ್ ಒಯಿಲ್—ಕಪಿ ಸೋರುವದು, ವ ನೋವು ಕಪ್ಪಡಿಸು ಇವುಗಳ ಮೇಲೆ ಉತ್ತಮ. ಸೀಸೆಗೆ ಆಣೆ 0-8-0.

ಡಿಸೆಂಟರಿ ಕ್ಯೂರ್—ಉಷ್ಣ ಮೊರಕತೆಗೆ ಸಿದ್ಧಾಷಧ ರೂಪಾಯಿ 1-0 0.

ಡಯೆರಿಯಾ ಕ್ಯೂರ್ –ಅಜೀರ್ಣದ ಹೊರತಾಗಿ ರೂಪಾಯಿ 1-0-0.

ಕಂಪೌಂಡ್ ಸಿರಪ್ ವೆಸಿಕೂಜ—ಪ್ರಮೇಹ, ಮೂತ್ರ ದ್ವಾರದಿಂದ ಕೀವು, ಮೂತ್ರಹೊಯ್ಯುವಾಗ ತರೆಯಂತಾರಪ ತಡಿಣ ಉರಿ, ಮೂತ್ರವೈಫಲ್ಯ, ಮೂತ್ರ ಆಗಾಗ್ಗೆ ಬಮು ತರೆಯಿಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ಇವೇ ಮೊದಲಾದ ಪ್ರಮೇಹದ ಲಕ್ಷಣಗಳು ಬುದವನ್ನು ಕೆಲವು ದಾಸುಗಳಲ್ಲಿಯೇ ರಾಮಬಾಣದಂತೆ ನಿಲ್ಲುತ್ತದೆ. ಸೀಸೆಗೆ ರೂ. 3-8-0, ರೂ. 1-14-0.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಶಕ್ತಿಯೊಂದು ಗುರುವರ್ಗದ ಮತಕ್ಕೆ ಸಾವಿರಾರು ಶಿಷ್ಯರ ಮನೆಗಳಿವೆಯಷ್ಟಲ್ಲ, ಆ ಮಹಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳಬೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅನ್ಯವಸ್ಥೆಯಿಂದ ಅನೇಕ ಮತವರಿಗೆ ತನ್ನ ಶಿಷ್ಯರ ಮನೆಗೇ ಗೊತ್ತಿಲ್ಲದೆ ಹೋಗಿದೆ. ಇವನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಅದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಶ್ರುತಿಯೊಪ್ಪಿದ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರಗಳನ್ನೆಲ್ಲಾ ಬರೆದು ಪಂಚಾಚಾರ್ಯಪ್ರಭಾ ಮುಂದೆ ತಮ್ಮ ಶಿಷ್ಯರನ್ನು ಕಾಣಿಸಿಕೊಳ್ಳಬೇಕು. ಇದಕ್ಕಾಗಿ ಯಾರೂ ಕೆಲವಂಥ ಕಾಗದಗಳನ್ನು ಪಲ್ಟೋಗಿಸಿರುವಷ್ಟಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭವ್ಯಯದಲ್ಲಿ ದೊರೆಯುವುವು.

ಔಷಧಿ ಹೆಸರು	ಕೋಲ	ಮೂಲ್ಯ
ಸ್ವರ್ಣಸುಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ಶಿ ನೇ ನಂಬರ್	೧	೪—೦—೦
ರಸಸಿಂಧೂರ	೧	೨—೦—೦
ಸುಲ್ಫಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿವಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ನಾಗವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಅಭ್ರಕಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ವಿಕ್ರಾಂತಭಸ್ಮ	೧	೦—೮—೦
ಕಾಚಿನಭಸ್ಮ	೧	೦—೮—೦
ಮಿಶ್ರಭಸ್ಮ	೧	೦—೮—೦
ವಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಭಸ್ಮ	೧	೦—೧೫—೦
ಅಭ್ರಕಭಸ್ಮ	೧	೩—೦—೦
ವಜ್ರಭಸ್ಮ	೧	೪೦—೦—೦
ಪವಾಲಭಸ್ಮ	೧	೦—೮—೦
ಸುವರ್ಣಯುಕ್ತ ಭಸ್ಮ	೧	೦—೮—೦
ಸಾಲಂಗದ ತೋಡಿನ ಭಸ್ಮ	೧	೦—೮—೦
ಗಂಧದಂತಿಹರಿತಾಲಭಸ್ಮ	೧	೦—೮—೦
ಕಸ್ತೂರಿ (ಗಿನೇ ನಂಬರ್)	೧	೫೦—೦—೦
ಶಿತಾಜೀತ ಸೂರ್ಯಪುಟಿ	೧	೧—೦—೦
ಶಿತಾಜೀತ ಅಗ್ನಿ ಪುಟ	೧	೦—೮—೦

ಸೂಚನೆ—ಈ ಔಷಧಾಲಯದಲ್ಲಿ ಸರ್ವಪ್ರಕಾರವಾದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳ ಮತ್ತು ಔಷಧಿಗಳು ಸರ್ವದೋಗುಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು.

ಆಯುರ್ವೇದರಸಾಯನಶಾಲಾ,

ಪೋಸ್ಟ್, ಒಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಸಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮೆಂತ್ರಗಳು ಅಕಾರಾದ್ಯಕ್ಷರವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳೆರಡನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಸಂಪ್ರದಾಯಕ್ಕೆ ಸಮಂಜಸವಾದ ಸಂಸ್ಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ನೋಲೆ ಈ ಗ್ರಂಥದ ಮಹತ್ವವು ತಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇವರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೫ ಆಣೆ.** ವಿ. ಪಿ. ಚಾರ್ಜ್ ಪ್ರತ್ಯೇಕ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾವನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರನೂಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನನ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಚಾವಡಿಚಿತ್ರವನ್ನು ಸಹ ದಯಮಾಡಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಸವಿಕ್ತವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ

ಮ್ಯಾನೇಜರ್,—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಚಾರ್ಯರೆ ಒಂಭತ್ತು ಅಮೃತಲಿಂಗೆಗಳಂದ ಕೂಡಿರ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೪—೦

ಶ್ರೀ ರೇಣುಆದಿ ಪಂಚಾಚಾರ್ಯರು ಲೋಕವಿಖ್ಯಾತವಾದ ಅಗಸ್ತ್ಯ, ವಸಿಷ್ಠ, ವ್ಯಾಸ, ಜಾನಂಯ, ನೂರಾರ ಋಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ .... ೦—೧—೬

ಪಡ್ಯಃ ಪೀಠಾರೋಹಣಮಾಡಿದತಕ್ಷ ಏಸರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ .... ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ .... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಪರ್ಮುಪೀಠದ ಫೋಟೋ .... ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನುಭವಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುರ್ತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮುಕ್ತಾನ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ .... ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .... ೦—೦—೯

ಮಿಮವತ್ಪರ್ವತದ ಮಧ್ಯದಲ್ಲಿ ಕೊಳಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೯

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .... ೦—೦—೯

ಬೆಂಗಳೂರು ಕಂಟೋನ್ಮೆಂಟನ್ನಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅದ್ದಪಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಷೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪಠಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾಗುವುದು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೪ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[32] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ

ಸತ್ಯಾಸಾತ್ರಮನಿರ್ಣಯ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ

ಪಂಚವಿಂಶತಿ ಪ್ರಶ್ನಪ್ರಕಾರ (೩ನೆಯ ಆವೃತ್ತಿ) .... ೧ ಆಣೆ

ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .... ೧ ಆಣೆ

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೨ ಆಣೆ

ಬಸವಾದಿನಿಜಶತ್ರ್ವಪರ್ಣ (೪ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ .... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯಶತಕ ... . ೨ ಆಣೆ

ವೀರಶೈವಮತಮಾನಾಂಸಾ .... ೩ ಆಣೆ

ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ

ಸನ್ಯಾಸಾಶ್ರಮನಿರ್ಮತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) .... ೬ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಪಾಠ, ಚಿಕ್ಕಕ್ಷರ) ... ೬ ಆಣೆ

ವೀರಶೈವಮಹಾತ್ಮರು .... ೮ ಆಣೆ

ಬಸವಧ್ವಾಂತದಿವಾಕರ (೩ನೆಯ ಆವೃತ್ತಿ) .... .. ೮ ಆಣೆ

ಸದ್ಯೋಧರತ್ನಾವಳಿ .... ೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲನಾರಿ ಭಾಸಜಾಮು (ತೆಲುಗು) ೧ ಆಣೆ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) .... ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೨ ಆಣೆ

ಶಿವಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ

ಶ್ರೀಕರಭಾಷ್ಯಂ (ಪಂಚಸೂತ್ರೀ) .... ೧ ರೂ.

ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) .... ೧ ರೂ.

ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ.

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ.

ವೀರಶೈವಸಿದ್ಧಾಂತಸುಧಾಕರ .... ೨ ರೂ.

ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) .... ೮ ರೂ.

A brief life-sketch of Pandit Sri Kashinatha Shastriji (*English*) 4 As.

Shakti-Vishistadvaita *or* The Philosophical Aspect of Virasaivism (*English*) .... 8 As.

Speeches by Pandit Shri Kashinatha Shastri (*English*) 12 As.

ವೀರಶೈವಧರ್ಮ (ಮರಾಠೀ) ... ... ೧ ರೂ.

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ) ... ೧ ರೂ.

ವೀರಶೈವೈಕ್ಯಕೌಮುದೀ (ಸಂಸ್ಕೃತ) ... ... ೧ ರೂ.

ನಕ್ಷತ್ರಿಕಾಭಾಸ್ಕರಕಾರಿಕಾ (ಸಂಸ್ಕೃತ) ... ... ೨ ಆಣೆ

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ) ... ... ೨ ಆಣೆ

ನಿರ್ಣಯಚಂದ್ರಿಕಾ (ಸಂಸ್ಕೃತ) ... ... ೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಷ್ಟಾವಧಾನ ಮಹಾವಿದ್ವಾನ್ ವೇದ ಶಿರೋ ಗುರುತಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಥಾನ ಮಹಾವಿದ್ವಾ ವೇ॥ ತರಸಿ ಗುರುತಾಂತಕಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೫ ಸೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೫ ನೇ ಡಿಸೆಂಬರ್ ೧೯೩೮ [ಸಂಚಿಕೆ ೩೧

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ.

ಶ್ರೀಕರಭಾಷ್ಯವನ್ನು ರಚಿಸಿರುವ ಶ್ರೀಪತಿಪಂಡಿತಾರಾಧ್ಯರು ಕ್ರಿ. ಶ. ೧೧ ನೆಯ ಶತಮಾನದಲ್ಲಿದ್ದರೆಂಬ ವಿಷಯವು ಅನೇಕ ಪ್ರಾಚೀನಗ್ರಂಥಗಳಿಂದಲೂ, ಶಿಲಾಶಾಸನಾದಿಗಳಿಂದಲೂ ಸಿದ್ಧವಾಗುವುದಾಗಿದೆ. ಹೀಗಿದ್ದರೂ ಬೆಂಗಳೂರು ನಗರನಿವಾಸಿಗಳಾದ ರಾವ್ ಸಾಹೇಬ ಸಿ. ಹಯವದನರಾಯರೆಂಬವರು ಈ ಭಾಷ್ಯದ ಮೇಲೆ ಇಂಗ್ಲೀಷಿನಲ್ಲಿ ಬರೆದಿರುವ ಇಂಟ್ರಡಕ್ಷನ್ನಿನಲ್ಲಿ ಇವರು ೧೪ ನೆಯ ಶತಮಾನದಲ್ಲಿದ್ದರೆಂದು ಬರೆದು ಜಗತ್ತಿನ ಜನರಿಗೆಲ್ಲಾ ಮಹಾ ಭ್ರಮೆಯನ್ನುಂಟುಮಾಡಿದ್ದಾರೆ. ರಾಯರು ಬರೆದಿರುವ ಈ ವಿಧನಾದ ಅಯಥಾರ್ಥಾಭಿಪ್ರಾಯವನ್ನು ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಅನೇಕಾನೇಕಪ್ರಮಾಣಗಳಿಂದ ಆಮೂಲಾಗ್ರವಾಗಿ ಖಂಡಿಸಿ, ವೀರಶೈವಮತಕ್ಕೂ ಶ್ರೀಕರಭಾಷ್ಯಕ್ಕೂ ಅಸಾಧಾರಣವಾದ ಗೌರವವನ್ನುಂಟುಮಾಡಿದ ವಿಷಯವು ಈ ಪುಸ್ತಕದಲ್ಲಿ ಉಕ್ತವಾಗಿದೆ.

ಬೆಲೆ ೪ ಆಣೆ

ಸದ್ಬೋಧರತ್ನಾವಳಿ.

ಈ ಗ್ರಂಥವನ್ನು ತಿಪಟೂರು ನಿವಾಸಿಗಳಾದ ವೇ॥ ಆರ್. ಎಂ. ಮಲ್ಲಿಕಾರ್ಜುನಾರಾಧ್ಯರು ಪುದೇನೂರು ಮಳೇಮಠ, ಇವರು ರಚಿಸಿರುವರು. ಇದರಲ್ಲಿ ಅನೇಕ ನೈತಿಕ-ಧಾರ್ಮಿಕ-ಪಾರಮಾರ್ಥಿಕ ವಿಷಯಗಳು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿರುವುವು. ಗ್ರಂಥವು ಬಹಳ ಸರಳಭಾಷೆಯಲ್ಲಿ ಬರೆಯಲ್ಪಟ್ಟಿರುವುದರಿಂದ ಪ್ರತಿಯೊಬ್ಬರಿಂದಲೂ ಸಂಗ್ರಹಿಸಲು ಯೋಗ್ಯವಾಗಿದೆ. ಪುಟಗಳು 176. **ಬೆಲೆ 8 ಆಣೆ ಮಾತ್ರ.**

A BRIEF LIFE-SKETCH OF PANDIT SRI KASHINATHA SHASTRIJI

This Book printed in English contains a brief life sketch of Pandit Sri Kashinatha Shastriji. It shows the very many good and memorable deeds done by Sastriji up till now. **Price per Copy 4 Annas.**

SHAKTI-VISHISTADVAITA
OR
THE PHILOSOPHICAL ASPECT OF VEERASAIVISM.

This book is the English translation of the lecture on Shakti-vishistadvaita Sidhanta delivered before the Philosophical Congress of 1935 at Mysore by Pandit Kashinatha Shastry.

The whole of Veerasaiva-philosophy is briefly explained in this book. No other book containing so much information about Veerasaiva philosophy had ever been published.

It is essential that every one who wants to know the secret of Veerasaiva philosophy must order for a copy of this valuable book. **Price 8 Annas.**

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸ್ವೀಕಾರ.

ಚಿಕ್ಕಬಳ್ಳಾಪುರ ಟವನ್ ನಿವಾಸಿಗಳಾದ ಮಹಾಂತಿನ ಮಠದ ವೇ॥ ಕರಿಬಸವಾರಾಧ್ಯರ ಮಕ್ಕಳು ನಾಗಭೂಷಣಾರಾಧ್ಯರ ಧರ್ಮಪತ್ನಿಗೆ ನಡೆಯಿಸಿದ ಗರ್ಭಾಷ್ಟಮ ಲಿಂಗಧಾರಣಸಮಯದಲ್ಲಿ ಸಮರ್ಪಿಸಿದ] ರೂ. ಯು ಬೆಂಗಳೂರು ನಿವಾಸಿಗಳಾದ ಬಿ. ಎಸ್. ಮರುಳಸಿದ್ಧಯ್ಯನವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಡಿ॥ ಹುಲ್ಲಿನಹಡಗಲಿ ಟೌನ್ ನಿವಾಸಿಗಳಾದ ಗುರುಸೇವಾಕಿಂಕರ ಶ್ರೀಯುತ ಸೊಪ್ಪಿನ ಗುರು ಲಿಂಗಪ್ಪನವರು ತನ್ನ ಮನಃಸಂಕಲ್ಪವು ಶ್ರೀ ಜಗದಾಚಾರ್ಯರ ಕೃಪೆಯಿಂದ ನೆರವೇರಿದ ಸಂತೋಷಕ್ಕೋಸ್ಕರ ಪ್ರಭಾಪೋಷಣಕ್ಕಾಗಿ] ರೂ. ಯನ್ನು ಸಮರ್ಪಿಸಿಕಳುಹಿಸಿರುತ್ತಾರೆ.

ಹುಬ್ಬಳ್ಳಿ ಟವನ್ ನಿವಾಸಿಗಳಾದ ಮಿ॥ ರಾ॥ ಸಿಂದಗಿ ನಿರಂಜನಪ್ಪನವರು ಶಿವಾಧೀನರಾದ ಸನುಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ] ರೂ. ಯು ವೇ॥ ಹಿರೇಮಠದ ಸೋಮನಾಥಯ್ಯನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಚಹಾ (ಟೀ) ದೇವಿಯ ಚಲ್ಲಾಟ.

ಮೇಲ್ಕಂಡ ಹೆಸರಿನ ಚಿಕ್ಕ ಪುಸ್ತಕವು ನನ್ನ ಕಡೆಗೆ ಬಂದಿದೆ. ಇದನ್ನು ಚಿಕ್ಕಮಣ್ಣೂರು ಹಿರೇಮಠದ ಶ್ರೀ॥ ಷ॥ ಬ್ರ॥ ಗುರುದೇವಶಿವಾಚಾರ್ಯಸ್ವಾಮಿಗಳವರು ರಚಿಸಿ ದ್ದಾರೆ. ಇದರಲ್ಲಿ ಚಹಾ (ಟೀ) ದಿಂದ ಉಂಟಾಗತಕ್ಕ ದುಷ್ಪರಿಣಾಮವು ವರ್ಣಿತವಾಗಿದೆ. ಲೇಖನವು ಅತ್ಯುತ್ತಮವಾಗಿದೆ. ಶ್ರೀ ಸ್ವಾಮಿಗಳವರು ಈ ಪುಸ್ತಕವನ್ನು ಧರ್ಮಾರ್ಥವಾಗಿ ಕಳುಹಿಸುತ್ತಾರೆ. ಪೋಸ್ಟ್ ಖರ್ಚಿಗಾಗಿ ೯ ಸೈ. ಸ್ಟ್ಯಾಂಪ್ (ಟಿಕೇಟ್) ಕಳುಹಿಸಬೇಕಾಗುವದು.

ವಿಳಾಸ—
ಶ್ರೀ ಗುರುದೇವಶಿವಾಚಾರ್ಯಸ್ವಾಮಿಗಳು,
ಶ್ರೀವಿಶ್ವಾರಾಧ್ಯಾಶ್ರಮ,
ಪೋ॥ ಬೆಳವಡಿ, ಡಿ॥ ಧಾರವಾಡ.

ಮೌಲಾನಾ ಶೌಕತ್ ಅಲಿಯವರು ಮೃತರಾದರು.

ಭಾರತದ ಸುಪ್ರಸಿದ್ಧ ಮುಸ್ಲಿಂ ಮುಖಂಡರೂ ಖಿಲಾಫತ್ ಚಳವಳಿಯ ಕಾಲದಲ್ಲಿ ಬಹು ಮುಖ್ಯಪಾತ್ರವನ್ನು ವಹಿಸಿದವರೂ, ಸ್ವಾತಂತ್ರ್ಯಕ್ಕಪ್ರೇಮೋತ್ಸಾಹವುಳ್ಳವರೂ ಆಗಿದ್ದ ಮೌಲಾನಾ ಶೌಕತ್ತಾಲಿಯವರು ಕಳೆದ 27 ನೆಯ ನವೆಂಬರ್ ತಿಂಗಳಲ್ಲಿ ಹೃದಯದೌರ್ಬಲ್ಯದಿಂದ ವಿಧಿವಶರಾದರು.

॥ ಶ್ರೀಜಗದ್ಗುರು ಪಂಚಾಚಾರ್ಯೋ ವಿಜಯತೇ ॥

ಪಂಚಾಚಾರ್ಯಪ್ರಭೆಯ ಪ್ರಭಾವವು.

ಲೇ—ಶ್ರೀಗುರುವೇದವಿದ್ಯಾವಾಚಸ್ಪತ್ಯಾಸ್ವಾಮಿಗಳು ಚಿಕ್ಕಮಗ್ಗಳೂರು, ಹಿರೇಮಠ.

(ಶ್ರೀ ವಿಶ್ವಾರಾಧ್ಯ ಆಶ್ರಮ ಬೀಜಾಡಿ)

ಸೂರ್ಯಪ್ರಭೆಯು ಇಲ್ಲವಿದ್ದರೆ ಜಗತ್ತು ಅಂಧಕಾರಮಯವಾಗಿ ಮಾನವನನ್ನು ವಸ್ತುವಿನ ನೈಜರೂಪವನ್ನು ತಿಳಿಯಲಾರದು ಕಣ್ಣುಗಳಿದ್ದರೂ ಕುರುಡನಂತೆ ಕತ್ತಲೆಯಲ್ಲಿ ಕೈಯಾಡಿಸಬೇಕಾಗುವುದು. ಅದರಂತೆಯೇ ನಮ್ಮ ವಿಶಾಲವಾದ ನಿಂರಶ್ಮೆಯಮಹರ್ಷಿಯಲ್ಲಿ ಪಂಚಾಚಾರ್ಯಪ್ರಭೆಯು ಇಲ್ಲದಿದ್ದರೆ ಮೋಕ್ಷಸಾಧಕವಾದ ದಿವ್ಯಧರ್ಮದ ಪರಿಜ್ಞಾನವಾಗುತ್ತಿರಲಿಲ್ಲ ಈ ವಿಂಶತ್ಯೆವತ್ಸರವು ಇದುವರೆಗೂ ಕುಂಠಿತವಾಗದೆ ನಡೆಯಬೇಕಾದರೆ ಪಂಚಾಚಾರ್ಯರ ಪ್ರಭೆಯು ಅನಾದಿಕಾಲದಿಂದಲೂ ಇವ್ಯಾಹತವಾಗಿ ಬೆಳಗುತ್ತಿರುವುದು ಪೂರ್ವದಲ್ಲಿ ಅನೇಕ ಋಷಿಪುಂಗವರೂ, ರಾಜರ್ಷಿಗಳೂ, ಅಭಿಜಾರ್ಯರೂ, ಈ ಪಂಚಾಚಾರ್ಯರ ಪ್ರಭಾವದಿಂದ ಕೈವಲ್ಯಪದವಿಯನ್ನು ಹೊಂದಿದ ವಿಷಯವನ್ನು ಧರ್ಮಗ್ರಂಥಗಳು ಮುಕ್ತಕಂಠದಿಂದ ಸಾರುತ್ತಿರುವವು ಈ ಜಗತ್ತಾದ ಆಚಾರ್ಯರ ಛಾಯೆಯು ಇಲ್ಲದ ಸ್ಥಾನವೇ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು ಇದರ ಪ್ರಭಾವವನ್ನು ತಿಳಿಯದೆ ಇದ್ದ ಮಾನವರೇ ಇಲ್ಲ ಕಲಿಕಾಲವೈಚಿತ್ರ್ಯದಿಂದ ಕೆಲವುಕಾಲದ ಹಿಂದೆ ಈ ಪಂಚಾಚಾರ್ಯಪ್ರಭೆಯು ಬೂದಿಮುಚ್ಚಿದ ಕೆಂಡದಂತೆ ತೇಜೋವಿಹೀನವಾಗಿದ್ದಾಗ ' ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥' ಎಂಬ ನ್ಯಾಯದಂತೆ ಆಚಾರ್ಯಭಗವತ್ಪಾದ ಶ್ರೀಮದ್ಭೀಮಾಚಾರ್ಯರು ಶ್ರೀಕಾಶೀನಾಥ ಮೂರ್ತಿಯ ಉಪಯುಕ್ತಾಯರು. ಮಳೆಯಿಲ್ಲದೆ ಸಸಿಗಳು ಒಣಗುತ್ತಿ ಒಕ್ಕಲಿಗರು ಎದೆಯೊಡೆದು ದಾಯಿಬಿಡುತ್ತಿರುವಾಗ ಉತ್ತುಂಜಿಕ್ಕಿನ ಗಾಳಿ (ಹರಿದ್ವರ್ಣದ ಗಾಳಿ) ಯು ಬೀಸಿತೆ-ದರೆ ನಿಶ್ಚಯವಾಗಿ ಮಳೆಯು ಬಂದು ಜಗತ್ತನ್ನೇ ಸಮೃದ್ಧಿಸಾಗರದಲ್ಲಿ ಮುಳುಗಿಸುವಂತೆ ದೃಷ್ಟಿ ಅಧಾರಂತರದಲ್ಲಿ ಧರ್ಮಪ್ರಭೋಧಾನೃತಶಕ್ತ್ಯಾವಿಲ್ಲದೆ ದಿಗ್ಭ್ರಾಂಜನರು ದುಃಖದಿಂದ ಬೆ ಸೈರಿಕ್ಕದಿಕ್ಕಿನ ಗಾಳಿ (ಶಾಂಬವರಗಾಳಿ) ಯು ಧರದಾದ ಬೀಸುತ್ತಾ ಧರ್ಮದ ಬೆಳೆಯು ಬಾಡುತ್ತಿರಲು ಕೆಲ ಧರ್ಮಾಭಿಮಾನಿಗಳು ಬಾಯಿಬಿಡಹತ್ತಿದ್ದರು ಆಗ ಕಾಶೀಕ್ಷೇತ್ರದಲ್ಲಿ ಪ್ರಪ್ರಕಾಶಿಸುವ ಜ್ಞಾನಸೂರ್ಯಾದಿತ್ಯನು ಕಾಶೀನಾಥಮೂರ್ತಿಯಂಬ ಹರಿಶ್ಚಂದ್ರವಾಯುದೇವನನ್ನು ಪ್ರೇರಿಸಿದನು. ಉತ್ತರದಿಕ್ಕಿನಿಂದ ಬಯಸಿದಂತೆ ಕಾಶೀನಾಥಮೂರ್ತಿಯು ಸದ್ಭಿಂಧವೆಂಬ ಅವ್ಯಯವನ್ನು ಹುರಿಸಲಾಗಿ, ದುರಾತ್ಮಗಳ ದುರುಪದೇಶವೆಂಬ ಗಾಳಿಯಿಂದ ಒಣಗುತ್ತಿರುವ ಧರ್ಮಗ್ರಂಥಗಳೆಂಬ ವನಸ್ಪತಿಗಳು ಚಿಗುರಿ ಅನೇಕ ಶಾಖೆಗಳನ್ನು ಹೊಂದಿ ಹೂ ಕಾಯಿಗಳಿಂದ ಕಂಗೊಳಿಸಹತ್ತಿದವು. ಕಾಶೀನಾಥಮೂರ್ತಿಯು ಸದ್ಭಿಂಧವೆಂಬ ವಾಯುವು ಬೀಸಲಾಗಿ ಪಂಚಾಚಾರ್ಯಪ್ರಭೆಗೆ ಮುತ್ತಿದ ನಾಸ್ತಿಕರ ಕಪಟವೆಂಬ ಬೂದಿಯು ಎಲ್ಲಿಯೋ ಹಾರಿಯೋಯಿತು ಆ ಮೇಲೆ ಪಂಚಾಚಾರ್ಯಪ್ರಭೆಯು ವೈಸೂರಿನಲ್ಲಿ ವಿಶೇಷವಾಗಿ ಪ್ರಕಾಶಿಸತೊಡಗಿತು. ಪ್ರಜ್ವಲಿಸುತ್ತಿರುವ ಪ್ರಭೆಯನ್ನು ಕೆಲ ಕುಹಕಜನರು ಪ್ರತಿಬಂಧಿಸಲು ಹೋಗಿ ಪತಂಗಗಳಂತೆ ಸೆಟ್ಟುಕೊಂಡು ನಾಮಕ್ಕೆ ಕಲಂಕವನ್ನು ಹಚ್ಚಿಕೊಂಡರು ಸೂರ್ಯನ ಪ್ರಕಾಶವನ್ನು ಕಂಡ ಗೂಗೆಯು ಗುಹೆಯನ್ನು ಸೇರಿ ಸೂರ್ಯನನ್ನು ನಿಂದಿಸುವಂತೆ ಕೆಲವರು ಪಂಚಾಚಾರ್ಯಪ್ರಭೆಯು ಪ್ರಕಾಶವನ್ನು ಸಹಿಸದೆ ಅಜ್ಞಾನವೆಂಬ ಗುಹೆಯನ್ನು ಸೇರಿ ಅಲ್ಲಿಯೇ ಕುಳಿತು ಬೊಗಳಹತ್ತಿದರು ಸೂರ್ಯನು ಉದಯನಾದ ನಂತರ ನಕ್ಷತ್ರಗಳು ತಾವಾಗಿಯೇ ಅದೃಶ್ಯವಾಗುವಂತೆ ಪಂಚಾಚಾರ್ಯಪ್ರಭೆಯ ಪ್ರಕಾಶದೊಳಗೆ ಒಂದು ಜೀವೈಯು ವಿಕ್ಯವನ್ನು ಹೊಂದಿತು. ಮಧ್ಯದಲ್ಲಿ ಕಣ್ಣುಗಳನ್ನು ಕಳೆದುಕೊಂಡು ದುಃಖಿಯಾದ ಮಾನವನಿಗೆ ಚತುರನಾದ ವೈದ್ಯನು ಯೋಗ್ಯವಾದ ಚಿಕಿತ್ಸೆಯಿಂದ ಕಣ್ಣುಗಳನ್ನು ತರುವಂತೆ ಮಧ್ಯದಲ್ಲಿ ಅಂಥ ಅವಸ್ಥೆಯನ್ನು ಹೊಂದಿದ ವೀರಶೈವಮತಕ್ಕೆ ಕಣ್ಣನ್ನು ತಂದಿರುವ ಪಂಚಾಚಾರ್ಯಪ್ರಭೆಯನ್ನು ತಂದು ತೋರಿಸಿದ ಕಾಶೀನಾಥಮೂರ್ತಿಯೆಂಬ ಚತುರ ವೈದ್ಯರಾಜನಿಗೆ ಅನೇಕ ಧನ್ಯವಾದಗಳು! ಈ ಮಂಗಲಮೂರ್ತಿಗೆ ಪರಮಾತ್ಮನು ಶತಾಯುಷ್ಯವನ್ನು ದಯಪಾಲಿಸಲಿ ಮತ್ತು ಪಂಚಾಚಾರ್ಯಪ್ರಭೆಯು ಅಜರಾಮರವಾಗಿ ಅವ್ಯಾಹತವಾಗಿ ಬೆಳಗಲಿ! ಪ್ರಭಾದೇವಿಯೆ! ನಿನ್ನನ್ನು ಎಷ್ಟು ವರ್ಣಿಸಿದರೂ ಅಲ್ಪವೇ ಸರಿ!

ಚತುರ ಜೀವ ಪ್ರಭಾದೇವಿ ಧರ್ಮವಿಷ್ಕಾಪ್ರಯೋಧಿನಿ ।
ತವನಾಗಸ್ತ್ಯಾಯತೇ ನಾಮ ಹರಸಾಗರಶೋಷಣೆ ॥

ಪೂರ್ವದಲ್ಲಿ ತಪೋನಿಧಿಯಾದ ಅಗಸ್ತ್ಯಮಹರ್ಷಿಯು ಸಮುದ್ರವನ್ನು ಶೋಷಣಮಾಡಿದಂತೆ ನಮ್ಮಿಂ ಪಂಚಾಚಾರ್ಯಪ್ರಭೆಯಲ್ಲಿಯಾದರೂ ಪಾಠಶಾಗರವನ್ನು ಶೋಷಣಮಾಡುವ ಧೀ ಸಾಮರ್ಥ್ಯವಿರುವಮ ಪ್ರಭೆಯೇ! ನಿನ್ನ ಇವ ಧರ್ಮವು ಅನ್ಯರಿಗೆ ಬರಾರಿಗೂ ಬಾರದು ಕಾಶೀನಾಥಮೂರ್ತಿಯೇ ನಿನ್ನ ಜನಕನು, ಸದ್ವಿದ್ಯೆಯೇ ನಿನ್ನ ತಾಯಿಯು, ಸದ್ಬೋಧವೇ ನಿನ್ನ ಮಗನು, ಭಕ್ತಿಯೇ ನಿನ್ನ ಮಗಳು, ಶಮದಮಾದಿ ಪದ್ಮಗಣಗಳೇ ನಿನ್ನ ನೊಮ್ಮೊಕ್ಕಳು, ಗುರುಕರಕಮಲವೇ ನಿನ್ನ ವಾಸಸ್ಥಾನವು ಇಂಥ ಅಪರಿಮಿತ ಬಳಗದಿಂದೊಡಗೂಡಿದ ಪ್ರಭಾದೇವಿಯೇ! ನಿನ್ನನ್ನು ಜಯಿಸುವವರಾರು? ಶುಂಭ ನಿಶುಂಭರಂಥ ಒಬ್ಬಿಬ್ಬರು ರಾಕ್ಷಸರುಮಾತ್ರ ನಿನ್ನೊಡನೆ ಕಾದಲು ಪ್ರಯತ್ನಿಸಿ ಕಡೆಗೆ ಧರ್ಮವಾದನೆಂಬ ರಣರಂಗದಲ್ಲಿ ಸೋತು ನೆಲಕ್ಕೆ ಬಿದ್ದು ಬಿಕ್ಕುತ್ತಿರುವರು ನಿನ್ನ ಉಗ್ರವಾದ ಪ್ರತಾಪಾಗ್ನಿಯು ನಾಸ್ತಿಕರ ಗರ್ವವೆಂಬ ಗಹನವಾದ ಕಾನನವನ್ನು ನಾಶಗೊಳಿಸಿತು. ಮತ್ತೊಂದುಡೆಯಲ್ಲಿ ಅದೇ ನಿನ್ನ ಪ್ರಕಾಶವು ಭಾರತ ಕುನ್ನೆಮೆಯ ಬೆಳದಿಂಗಳಂತೆ ಮನಾನಂದವನ್ನುಂಟುಮಾಡಿತು ಚಂದ್ರನ ಉದಯದಿಂದ ಗಿಡಬಳ್ಳಿಗಳು ಪುಲ್ಲವಿಸುವಂತೆ ಪ್ರಭೆಯ ಉದಯದಿಂದ, ಮಹಧರ್ಮಗಳೆಂಬ ಗಿಡಗಳು ಚಿಗಿತು ಫಲಿಸಹತ್ತಿದವು. ಮಾರ್ತಾಯಾಸದಿಂದ ಬಳಲಿದ ಮಾನವನು ಗಿಡದ ಅಡಿಯಲ್ಲಿ ಕುಳಿತು ಸುಗಂಧವನ್ನು ಬೀರುವ ಕುಸುಮಗಳನ್ನು ಆಘ್ರಾಣಿಸಿ ವಿಶ್ರಾಂತಿಯನ್ನು ಪಡೆಯುವಂತೆ ಧರ್ಮಮಾರ್ಗಾವಲಂಬಿಸಿದ ಅನೇಕಮಾನವರು ಪಂಚಾಚಾರ್ಯಪ್ರಭೆಯಿಂದ ಉದ್ಭವಿಸಿದ ಸಲ್ಲಕ್ಷಣಗಳೆಂಬ ಕುಸುಮಗಳನ್ನು ಆಘ್ರಾಣಿಸಿ ನಿತ್ರಾನಂದವನ್ನು ಪಡೆಯುತ್ತಿರುವರು ಮೊದಲು ಎಷ್ಟೋಜನ ಗುರುವರ್ಗದವರು ಅಜ್ಞಾನವೆಂಬ ಅಂಧಕಾರದಲ್ಲಿ ಬಿದ್ದು ತಮ್ಮ ಮೂಲ ಗುರುಗಳಾರೆಂಬುದನ್ನೂ, ತಮ್ಮ ಗೋತ್ರಸೂತ್ರಗಳು ಯಾವುಯಾವು ಎಂಬುದನ್ನೂ ಕಳೆದುಕೊಂಡಿದ್ದರು. ಪ್ರಭೆಯೇ! ನಿನ್ನ ಪ್ರಕಾಶದಿಂದ ಈಗ ಸರ್ವರೂ ಕಳೆದುಕೊಂಡಂಥ ತಮ್ಮತನ್ನು ಸಮಸ್ತ ವಸ್ತುಗಳನ್ನು ಹುಡುಕಿಕೊಂಡರು. ಪ್ರಭೆಯೇ! ನಿನ್ನ ಉಪಕಾರವು ಚಿರಸ್ಮರಣೀಯವಾಗಿದೆ.

ನರೇಂದ್ರಮಂಡಲದ ಕಾರ್ಯದರ್ಶಿಗಳ ಪ್ರಕಟಣೆ

ನರೇಂದ್ರ ಮತ್ತು ಸಚಿವರ ಸ್ಥಾಯಿ ಸಮಿತಿಯಲ್ಲಿ ಸ್ಥಾನಗಳನ್ನು ಹಂಚುವ ವಿಚಾರ ಕುರಿತು ವಿಶೇಷ ಉಸಸಮಿತಿಯು ಮಾಡಿದ ಶಿಫಾರಸುಗಳನ್ನು ಸಮ್ಮೇಳನವು ಅಂಗೀಕರಿಸಿತು. ಕಟ್ಟಕಡೆಯದಾಗಿ ಅಂಗೀಕೃತವಾದ ವ್ಯವಸ್ಥೆಯು ಈ ಪ್ರಕಾರವಿದೆ: ನರೇಂದ್ರಮಂಡಲದಲ್ಲಿ ಈಗಿರುವ ಸಮಾನವಾದ ಓಟಿನ ಶಕ್ತಿ ಇನ್ನು ಮುಂದೆಯೂ ಇರತಕ್ಕದ್ದು. ನರೇಂದ್ರರ ಸ್ಥಾಯಿ ಸಮಿತಿಯನ್ನು ಪುನರ್ವ್ಯವಸ್ಥೆಗೊಳಿಸಲಿಕ್ಕಾಗಿಯೂ ಮತ್ತು ಸಚಿವರ ಸ್ಥಾಯಿ ಸಮಿತಿಯನ್ನು ಸ್ಥಾಪಿಸುವುದಕ್ಕೂ ಮತ್ತು ಇವೆರಡು ಸಂಸ್ಥೆಗಳಲ್ಲೂ ಎಲ್ಲ ಸಂಸ್ಥಾನಗಳಿಗೂ ಸರಿಯಾದ ಪ್ರಾತಿನಿಧ್ಯ ದೊರಕುವಂತೆ ಮಾಡುವುದಕ್ಕೂ ಒಂದು ಶ್ರಯವನ್ನು ಸೂಚಿಸಲಾಗಿದೆ ಇದರ ಪ್ರಕಾರ ಬರೋಡಾ, ಗ್ವಾಲಿಯರ್, ಹೈದರಾಬಾದು, ಕಾಶ್ಮೀರ ಮತ್ತು ವೈಸೂರು—ಇವು ಒಂದೊಂದೊ ಒಬ್ಬೊಬ್ಬ ಸ್ಥಾನಿಧಿಯನ್ನು ಕಳುಹಿಸಬಹುದು.

ಭಾವಲ್‌ಪುರ್, ಧೂಪಾಲ್, ಬಿಕಾನೀರ್, ಕೊರ್ಚ್, ಜೋಧ್‌ಪುರ, ಕೊಲ್ಲಾಪುರ, ಪಾಟಿಯಾಲಾ, ರೀವಾ, ತಿರುವಾಂಕೂರು ಉದಯಪುರ—ಈ ಸಂಸ್ಥಾನಗಳು ಒಟ್ಟಿಗೆ ೧೦ ಮಂದಿ ಪ್ರತಿನಿಧಿಗಳನ್ನು ಕಳುಹಿಸಲು ಹಿರಿಯ ರಾಜಪುಟಾಣಾ ಸಂಸ್ಥಾನಗಳು, ಮಧ್ಯಭಾರತದ ಸಂಸ್ಥಾನಗಳು, ಪಂಜಾಬು ಸಂಸ್ಥಾನಗಳು, ದಕ್ಷಿಣಭಾರತದ ಸಂಸ್ಥಾನಗಳು ಮತ್ತು ದಖ್ಖನ್ ಸಂಸ್ಥಾನಗಳು-ಇವುಗಳೆಲ್ಲದರ ಪ್ರಾತಿನಿಧ್ಯವನ್ನೂ ಮೇಲೆ ತಿಳಿಸಿದ ಹತ್ತು ಮಂದಿಯೇ ವಹಿಸಕಕ್ಕದ್ದು.

ಭಾವನಗರ್, ಕಚ್, ಜೂನಾಗಢ, ನವಾನಗರ, ಕ್ಯಾಂಬೆ, ಜಂಜೀರಾ, ಮೋರ್ವೆ, ಮತ್ತ ಪೋರ್ ಬಂದರ್—ತವುಗಳು ಒಬ್ಬರು ಪ್ರತಿನಿಧಿಗಳನ್ನು ಕಳುಹಿಸಬಹುದು

ಅಳ್ವಾರ್, ಭರತಪುರ, ಬಾಡಿ, ಕೂಚ್‌ಬಿಹಾರ್, ಮರೌಲಿ, ಕೋಟಾ, ರಂಮಪುರ, ಮತ್ತು ಟೋಂಕ್—ತವುಗಳು ಇಬ್ಬರು ಸದಸ್ಯರನ್ನು ಕಳುಹಿಸಬಹುದು.

ಉಳಿದ ದಕ್ಷಿಣಭಾರತ ಸಂಸ್ಥಾನಗಳಿಗೂ ಮತ್ತು ದಖ್ಖನ್ ಸಂಸ್ಥಾನಗಳಿಗೂ ೧ ಸ್ಥಾನ. ಉಳಿದ ೨೮ ಪುಟ್ಟಾಣ ಸಂಸ್ಥಾನಗಳಿಗೆ ೨ ಸ್ಥಾನಗಳು, ಉಳಿದ ಮಧ್ಯಭಾರತ ಸಂಸ್ಥಾನಗಳಿಗೆ (ಕಾತಿಯಾ ಸೇರಿ) ೪ ಸ್ಥಾನಗಳು, ಉಳಿದ ಪಂಜಾಬು ಸಂಸ್ಥಾನಗಳಿಗೆ (ಟಿಹ್ರಿಯಾ ಸೇರಿ) ೨ ಸ್ಥಾನಗಳು, ಉಳಿದ ಪಶ್ಚಿಮ ಭಾರತ ಗುಜರಾತು ಸಂಸ್ಥಾನಗಳಿಗೆ ೨ ಸ್ಥಾನಗಳು, ಉಳಿದ ಪೂರ್ವಸಂಸ್ಥಾನಗಳಿಗೆ (ಸಿಕ್ಕಿಂ ಸಂಸ್ಥಾನವೂ ಸೇರಿ) ೨ಸ್ಥಾನಗಳು—ಈ ರೀತಿ ಸ್ಥಾನಗಳನ್ನು ಕೊಡಲಾಗಿದೆ ಸ್ಥಾನಗಳನ್ನು ಹಂಚಲೊಸುಗ ಸಂಸ್ಥಾನಗಳನ್ನು ಈ ರೀತಿ ಗುಂಪುಗಳಾಗಿ ವಿಂಗಡಿಸುವುದರಲ್ಲಿ ಅವುಗಳ ವೈಯುಕ್ತಿಕ ಸ್ಥಾನಮಾನಗಳಿಗಾಗಲಿ, ಗೌರವಕ್ಕಾಗಲಿ, ಕುಂಚವೂ ಊನ ಬರುವುದಿಲ್ಲ.

ಕನಕಗಿರಿ ಶ್ರೀಗಳವರ ತಪೋನುಷ್ಠಾನ

ಕಾರ್ತಿಕ ಬಹುಳ ತಿ ಗುರುವಾರದಿಂದ ನಮ್ಮ ಗ್ರಾಮದ ಹಿರೇಮಠದ ಶ್ರೀ ಪಟ್ಟ ಬ್ರ॥ ಪಂಚಾಕ್ಷರ ಶಿವಾಚಾರ್ಯರು ಇಲ್ಲಿಗೆ ೨ ಮೈಲು ದೂರದಲ್ಲಿ ಅರಣ್ಯದಲ್ಲಿರುವ ಶ್ರೀ ಹಿರಿಯ ಬಸವೇಶ್ವರ ದೇವಾಲಯದೆ ಹತ್ತಿರ ಪರ್ಣಕುಟೀರದಲ್ಲಿ ಉಗ್ರವಾದ ತಪವನ್ನಾಚರಿಸಲು ಪ್ರಾರಂಭಿಸಿದ್ದಾರೆ. ಅನುಷ್ಠಾನವು ಆಗ ದಿನಕಗಳವರೆಗೆ ಆಚರಿಸಲ್ಪಡತಕ್ಕದ್ದಾಗಿದೆ ಶ್ರೀಗಳವರು ಚಿಕ್ಕವಯಸ್ಸಿನವರಿವಾಗಲೇ ಇವರಲ್ಲಿ ದೃಢವಾದ ವೈರಾಗ್ಯಭಾವವುದುಸಿದುದು ಸಂತೋಷದಾಯಕವಾಗಿದೆ. ಅನ್ನ ಆಹಾರಾದಿಗಳನ್ನು ತ್ಯಜಿಸಿ ಕೇವಲ ಕ್ಷೀರಾಹಾರಿಗಳಾಗಿದ್ದರೆ, ಕ್ಷೀರವನ್ನು ಅತಿಮಿತವಾಗಿ ತೆಗೆದುಕೊಳ್ಳುವದರಿಂದ ಶ್ರೀಗಳವರ ಶರೀರವು ಕೃಶವಾಗುತ್ತ ನಡೆದಿದೆ. ಶರೀರವು ಕೃಶವಾಗಿದ್ದರೂ ಬ್ರಹ್ಮತೇಜಸ್ಸಿದ ವರ್ಚಸ್ಸು ಮುಖದಲ್ಲಿ ಪ್ರಕಾಶಿಸುತ್ತಿರುವದು. ಶ್ರೀಗಳ ದರ್ಶನಾಶೀರ್ವಾದಕ್ಕಾಗಿ ಪ್ರತಿದಿನವೆ ಭಕ್ತ ಸಮುದಾಯವು ಕಂಡೋಪಕಂಡವಾಗಿ ಬರುತ್ತಿರುವದು. ಅತ್ಯಲ್ಪಕಾಲದಲ್ಲಿಯೇ ಅನುಷ್ಠಾನದ ವಾರ್ತೆಯು ಎಲ್ಲ ಕಡೆಗೂ ಹಬ್ಬಿರುವದು ತಾ॥ ೧೭-೧೧-೩೮ರಲೇ ಗುರುವಾರ ಬೂದಗುಂಪಿ ತಾಲ್ಲೂಕಾಣ್ಣಿಮಠದ ಶ್ರೀ॥ ಪಟ್ಟ ಬ್ರ॥ ರುದ್ರಮುನಿಶಿವಾಚಾರ್ಯರು ದಯಮಾಡಿಸಿ ತಪೋಮೂರ್ತಿಗಳನ್ನು ನೋಡಿ ಇವರ ಪವಿತ್ರ ಧ್ಯೇಯಕ್ಕೆ ನೆಚ್ಚಿ ಈ ಮಹಾನುಭಾವರಲ್ಲಿ ವೈರಾಗ್ಯವು ನೆಲಸಿದ್ದು ನಮ್ಮೆಲ್ಲರ ಸುದೈವವೆಂದು ಬಹು ವಿಧವಾಗಿ ಕೊಂಡಾಡಿ ಸಂತೋಷಪಟ್ಟು ದಯಮಾಡಿಸಿದರು ಶ್ರೀಗಳವರು ಚಿಕ್ಕವಯಸ್ಸಿನಲ್ಲಿಯೇ ಇಂಥ ವೈರಾಗ್ಯದ ಮಹೋನ್ನತ ಪದವಿಗೇರಿ ಭಕ್ತೋದ್ಧಾರಾರ್ಥವಾಗಿ ಪ್ರಯತ್ನಿಸುತ್ತಿರುವದು ನಿಜಾಂ ವೀರಶೈವರ ಸುದೈವವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸಂಕಲ್ಪಿಸಿದಂತೆ ಶ್ರೀಗಳವರ ಅನುಷ್ಠಾನವು ಶ್ರೀ ಜಗದ್ಗುರುಪಾರ್ಯರ ಕೃಪೆಯಿಂದ ನಿರ್ವಿಘ್ನವಾಗಿ ಪೂರ್ಣವಿಸಿ ಇನ್ನು ಮುಂದೆಯೂ ಇವರ ತಪೋನುಷ್ಠಾನವು ಬೆಳೆದು ಮಹಿಮಾತಿಶಯಗಳಾಗಿ ಭಕ್ತೋದ್ಧಾರಕರಾಗಿ ಕನಕಗಿರಿಯಲ್ಲಿ ಜಗದ್ಗುರುಪಾರ್ಯರ ಜಯಧ್ವಜವು ಮೆರೆಯಲೆಂದು ಶ್ರೀಜಗದ್ಗುರು ರೇಣುಕಾಚಾರ್ಯರನ್ನು ತ್ರಿಕಾಲಗಳಲ್ಲಿ ಅನನ್ಯಭಕ್ತಿಯಿಂದ ಪ್ರಾರ್ಥಿಸುವೆ.

ದೊಡ್ಡಬಸಪ್ಪ-ಭಕ್ತಪ ಕನಕಗಿರಿ.

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಹಿಂದಿಗಿ ನಿರಂಜನಪ್ಪನವರ ನಿಧನ.

ಹುಬ್ಬಳ್ಳಿ ನಿವಾಸಿಗಳಾದ ನಿರಂಜನಪ್ಪ ಸಿಂದಗಿ ಇವರು ತಾ॥ ೨೨-೧೧-೧೯೩೮ ನೇ ಇಪ್ಪತ್ತೆಯ ದಿವಸ ತಮ್ಮ ಗೃಹದಲ್ಲಿ ಹಿಮ್ಮಿದೊಮ್ಮೆ ಅರ್ಧಾಂಗವಾಯುವಿನಿಂದ ತೀವ್ರಾನಂತರದಲ್ಲಿ ಇವರ ಮಶವಾಗಲಿ, ಭೂಮಿಯಾಗಲಿ ಇರುವದಿಲ್ಲ ಆ ಗ್ರಾಮದ ದೈವದವರು ಇವನನ್ನು ತೆಗೆದುಹಾಕಿದ್ದಾರೆ ಅಧಿಕಾರವನ್ನು ಸ್ಥಿರಪಡಿಸಿಕೊಳ್ಳುವ ಪ್ರಯತ್ನದಲ್ಲಿರುವದಾಗಿ ಇಪ್ಪತ್ತು ವರುಷಗಳಿಂದಲೂ ಹೇಳುತ್ತ ಶಿಷ್ಯ ವಿತ್ತಾಪಹಾರಕನಾಗಿ ಸಂಚರಿಸುತ್ತಾನೆ. ಈತನ ವಂಶವು ಗುರುವಂಶವಲ್ಲ ಆದ್ದರಿಂದ ಇವನು ಗುರುವರ್ಗಾಭಿಮಾನಿಯಾಗುವದೆಂತು? ಬೀಜದಂತೆ ಅಂಕುರವಲ್ಲವೇ? ಪಟಗೇಷಧಾರಿಯಾದ ಈತನು ಯಾವಾಗಲೂ ಗುರುವರ್ಗದ ನಿಂದೆಯನ್ನು ಮಾಡುತ್ತಲಿರುವನು.

ಶ್ರೀಜಗದ್ಗುರು ಪಂಚಪೀಠಾಧಿಕಾರಿಗಳ ಮಹೋತ್ಸವವು ಈ ಕಪಟಪಿಠೋಮಣಿಯಾದ ಪಷದಪ್ಪನಿಗೆ ಸಹನವಾಗುವದಿಲ್ಲವಂತೆ! ಶಿಷ್ಯೋದ್ಧಾರಕಶಕ್ತಿಯು ಪಂಚಸಿಂಹಾಸನದವರಲ್ಲಿಲ್ಲವಂತೆ! ಕಾಂಗ್ರೆಸ್ಸಿಗೆ ಸೇರಿದವರೇ ಶಿಷ್ಯರನ್ನು ಉದ್ಧರಿಸಲು ಸಮರ್ಥರೆಂದು ಈ ವೇಷಧಾರಿಯು ತನ್ನ ಬೆನ್ನೆನ್ನು ತಾನೇ ಚಪ್ಪರಿಸಿಕೊಳ್ಳುತ್ತ ಹಳ್ಳಿ-ಪಳ್ಳಿಗಳಲ್ಲಿ ಸಭೆಮಾಡಿ ಹೇಳುತ್ತಲಿರುವನು ಅಧಿಕಾರವಿಲ್ಲದ, ಆಚಾರ್ಯೋಪದೇಶವಿಲ್ಲದ, ವೇಷಧರಿಸಿದ ಪಷದಪ್ಪನು ಈಗ ಒಂದುವರುಷದಿಂದ ಕಾಂಗ್ರೆಸ್ ಭಕ್ತರ ಸೋಗನ್ನು ಹಾಕಿಕೊಂಡಿರುವನು ಈ ಸೋಗು ಶಾಸನಭಂಗದ ಕಳೆದ ಸತ್ಯಾಗ್ರಹ ಸಮರದಲ್ಲಿ ಹೊರಬಿದ್ದಿದ್ದರೆ ಪಷದಪ್ಪನ ಬಣ್ಣವು ಹೊರಬೀಳುತ್ತಿತ್ತು. ಆಗ ಕಾಂಗ್ರೆಸ್ಸನ್ನು ಹಿಯಾಳಿಸುತ್ತಿದ್ದವನು ಈಗ ಪುರಸ್ಕರಿಸಿ ಸನಾತನಧರ್ಮವನ್ನು ಮೂಸಿಸುತ್ತಿರುವನು. "ಯೇನ ಕೇನ ಪ್ರಕಾರೇಣ ಪ್ರಸಿದ್ಧ ಪುರುಷೋಭವೇತ್" ಎಂಬ ವಾಕ್ಯವನ್ನು ಇವನು ಅನುಸರಿಸಿದ್ದಾನೆ.

ಗುರುಸಾರ್ವಭೌಮರಾದ ಶ್ರೀಜಗದ್ಗುರು ಪಂಚಪೀಠಾಧಿಕಾರಿಗಳಿಗೆ ಆನೆ-ಕುದುರೆ-ಒಂಟೆ-ರಥ-ಪಲ್ಲಕ್ಕಿಗಳು ಯೋಗ್ಯವಲ್ಲವಂತೆ! ಇವರು ಲಂಡಪಂಡಿಯನ್ನುಟ್ಟು ವಿಕಾಂಗಿಗಳಾಗಿ ಧ್ಯಾಪ್ತಚಾರಮಾಡಬೇಕಂತೆ! ಛಲೇ ಪಡದಪ್ಪಾ! ಜಗದಾಚಾರ್ಯರಿಗೆ ಬೋಧಿಸುವ ನೀನು ನಿನ್ನ ಕಡೆಗೆ ಹೊರಳನೋಡಿಕೊಂಡಿರುವೆಯಾ! ಗುರು ಧರ್ಮವಿರೋಧಿಯಾಗಿ ವೇಶವೇಷ ವೇಷವನ್ನು ಕಟ್ಟಿಕೊಂಡ ನಿನಗೆ ಕುದುರೆ ಏಕೆ? ಎತ್ತೇಕೆ? ಬಳಗವೇಕೆ? ಅಳೆಕೆ? ಮೂರ್ಖಶಿರೋಮಣಿಯೇ! ನಿನ್ನ ವಿಚಿತ್ರ ಬೋಧೆಯ ಕಪಟತಂತ್ರವನ್ನು ಸಾಕುಮಾಡು ಯಾವ ಪೂಜ್ಯ ಪಟ್ಟದ ಸ್ವಾಮಿಗಳ ಹೆಸರನ್ನು ಹೇಳುವ ಶಿಷ್ಯರ ಮನೆಗಳಿಗೆ ನೀನು ಆವೇ ಊರವನೆಂದು ಹೇಳ ತಪ್ಪದೆ ವರುಷಕ್ಕೊಮ್ಮೆ ಬಂದು ದುಡ್ಡನ್ನು ಸೆಳೆಯುವದು ಪಾಪವಲ್ಲವೇ? ನಿಜಸ್ಥಿತಿಯನ್ನು ಹೇಳಿದರೆ ನಿನಗೆ ಯಾರೂ ಏಮಸ್ಕರಿಸಲಿಕ್ಕಿಲ್ಲವೆಂದು ಹೀಗೆ ಸೋಗನ್ನು ಹಾಕಿರುವೆಯಲ್ಲವೇ? ಇನ್ನುಮೇಲೆ ನಿನ್ನ ಸೋಗನ್ನು ಬಿಟ್ಟರೆ ಒಳಿತು; ಇಲ್ಲವಾದರೆ ಈ ಗುರುಭಕ್ತನು ನಿನ್ನ ಕಪಟವಿಕಾರಸ್ವಾಗತಗಳೆಲ್ಲವನ್ನೂ ಬಯಲಿಗೆ ಹಾಕುತ್ತಾನೆಂಬುವದನ್ನು ಮರೆಯಬೇಡ.

ಓರ್ವಗುರುಭಕ್ತ.

ಗರ್ಭಾಷ್ಟಮ ಲಿಂಗಧಾರಣ ಸಂಸ್ಕಾರ

ತಾ॥ ೨೧-೧೦-೩೮ನೆಯ ಬುಧವಾರ ಚಿಕ್ಕಬಳ್ಳಾಪುರದ ಮಹಾಂತಿನಮಠದ ವೇ॥ ಕರಬಸವಾರಾಧ್ಯರವರು ಚಿಕ್ಕಬಳ್ಳಾಪುರಕ್ಕೆ ಶೀಂಘ್ರ ಕಂದವರದಲ್ಲಿರುವ ತಮ್ಮ ಮಠದಲ್ಲಿ ತಮ್ಮ ಜ್ಯೇಷ್ಠ ಕುಮಾರ ಚಿ॥ ನಾಗಭೂಷಣಾರಾಧ್ಯನ ಧರ್ಮಪತ್ನಿ ಸೌ॥ ಲಲಿತಾಂಬೆಯವರ ಎಂಟನೇ ತಿಂಗಳ ಗರ್ಭಕ್ಕೆ ಶಾಸ್ತ್ರಾನುಸಾರವಾಗಿ ಬೆಂಗಳೂರು ದಂಡು ಹಲಸೂರುಮಠದ ವೇ॥ ವೀರಭದ್ರಶಾಸ್ತ್ರಿಗಳವರಿಂದ ಲಿಂಗಧಾರಣ ಸಂಸ್ಕಾರವನ್ನು ನೆರವೇರಿಸಿದರು. ಈ ಶುಭಮುಹೂರ್ತದಲ್ಲಿ ಪ್ರಭಾಪೋಷಣಕ್ಕಾಗಿ ಒಂದು ರೂಪಾಯಿ ಸಮರ್ಪಿಸಲ್ಪಟ್ಟಿತು.

ಹಿಂದೀ ಪರೀಕ್ಷೆ.

ತಾ॥ ೧೧-೯-೧೯೩೮ರಲ್ಲಿ ಶ್ರೀ ದಕ್ಷಿಣಭಾರತ ಹಿಂದೀಪ್ರಚಾರಸಭಾ ಮದ್ರಾಸ್ ಪರೀಕ್ಷೆಯಲ್ಲಿ ಈ ಕೆಳಗೆ ಕಾಣಿಸಿದ ಶ್ರೀಮದ್ವೀರಶೈವ ವಾರದ ಸಂಸ್ಕೃತ ಪಾಠಶಾಲಾ ಸೊಲ್ಲಾಪುರ ವಿದ್ಯಾರ್ಥಿಗಳು ಪಾಸಾಗಿರುತ್ತಾರೆ.

ಪ್ರಥಮ ಪರೀಕ್ಷೆ.

೧ನೇ ವರ್ಗದಲ್ಲಿ

ಶ್ರೀ॥ ಷ॥ ಬ್ರ॥ ರೇಣುಕಶಿವಾಚಾರ್ಯರು ಬೃಹನ್ಮಠ.

೨ನೇ ವರ್ಗದಲ್ಲಿ

ಶ್ರೀ॥ ಷ॥ ಬ್ರ॥ ಹುಣಸಿಕಟ್ಟೆ ಗುರುಪಾದಶಿವಾಚಾರ್ಯರು ಬೃಹನ್ಮಠ, ಮುಳ್ಳೂರು.

ಶ್ರೀ ಎಸ್. ಸಿದ್ಧರಾಮಶರ್ಮಾ ಮರ್ಚೇಡ.

ಪ್ರಶ್ನೋತ್ತರರತ್ನಮಾಲಿಕಾ

ಲೇಖಕರು:—ಮಲ್ಲಿಕಾರ್ಜುನಾರಾಧ್ಯ ರಾಚೆನಹಳ್ಳಿ
ಮಳಿಮಠ ಮುದೇನೂರು.

ಪ್ರ—ದೃಶ್ಯಕ್ಷಯವಾಗಿ ಪರಮಪದಪ್ರಾಪ್ತವಾಗುವ ವರೆಗೇನು ಮಾಡಬೇಕು?

ಉ—ಶಾಸ್ತ್ರಾರ್ಥಗಳಲ್ಲಿಯೂ, ಗುರುಸನ್ನಿಧಿಯಲ್ಲಿಯೂ, ತನ್ನ ಮನದಲ್ಲಿಯೂ ವಿಚಾರವಂ ಮಾಡುತ್ತಿರಬೇಕು.

ಪ್ರ—ಅಂತ್ಯವಿಲ್ಲದ ವ್ಯಾಧಿಯಾವದು?

ಉ—ಪರರ ದ್ರವ್ಯ-ರೂಪ-ಶೌರ್ಯ-ಸುಖ-ಸೌಭಾಗ್ಯ ಹೆಚ್ಚಳ ಸತ್ಕಾರ ಇತ್ಯಾದಿಗಳನ್ನು ನೋಡಿ ಸಹಿಸಿಕೊಳ್ಳಲಾರದಂತಹ ಹೊಟ್ಟೆಕಿಚ್ಚು.

ಪ್ರ—ಅತಿತೀಕ್ಷ್ಣಕರವೂ, ಅಸಹ್ಯವೂ, ಕ್ರೂರವೂ, ನಿಂದಾಕರವೂ ಆದದ್ದಾವುದು?

ಉ—ಜಿಹ್ವೆಯು ಇದಕ್ಕಿಂತಲೂ ಶಬ್ದವೂ ಹೇಯವೂ ಆದ ವಸ್ತುವೇ ಇಲ್ಲವು

ಪ್ರ—ಹೇಗೆ ಧನವಂತನಾಗಬೇಕು?

ಉ—ಧನಕಾಕ್ಷಯಂ ಬಿಟ್ಟು

ಪ್ರ—ಸಹಜಾನಂದಪ್ರಭೂರನಾದ ಪರಮಾತ್ಮನ ಸಾಕ್ಷಾತ್ಕಾರವು ಯಾರಿಗೆ ಆಗುವದು?

ಉ—ವಿಷಯಾಭಿಲಾಷೆಯಿಲ್ಲದೆ ಪೂರ್ವೋಕ್ತವಾದ ಸಪ್ತಾಂಗದಲ್ಲಿ ಪ್ರವರ್ತಿಸುವವನಿಗೆ ಈ ರೀತಿಯಿಂದ ದೃಢವಾಗಿ ಭಾವಿಸುವವನಿಗೆ ಭಾವಿಸಲ್ಪಡುವ ವಸ್ತುವೇ ತಾಮಿಗೆ ತಾಮಿನಿಯಂತೆ ಎಲ್ಲೆಲ್ಲೂ ಕಾಣುತ್ತಿರುವದು. ಮುಕ್ತವಲ್ಲದೆ ಭಾವಾಭಾವ ವಿವೇಕದಲ್ಲಿ ಕರ್ತೃಜ್ಞಾನಿ ನಿತ್ಯಾನಂದವಾದ ಮನವುಳ್ಳವನೂ ಆದ ಇತಕ ಮಹಾತ್ಮನ ಶರೀರವು ಸಹ ರಾಗಲೋಭ ಗುಣಗಳಲ್ಲಿದ್ದ ರಿಂದ ವಿಷಾನಂದಂತೆ ಅಮೋಹಜಾವರೋಹಣ ವರ್ಜಕವಾಗಿರುವದು.

ಪ್ರ—ಮೃತ್ಯುವನ್ನು ಜಯಿಸಿದವರಾರು?

ಉ—ಯಾರ ಹೃದಯಾಕಾಶದಲ್ಲಿ ಜಗತ್ಸಂಬಂಧವಾದ ವಾಸನಾತಂತುಗಳಲ್ಲಿ ಸೇರಿಸಲ್ಪಟ್ಟ ದೋಷ ಮುಕ್ತಾಫಲಗಳ ಹಾರವಿರುವದಿಲ್ಲವೋ = ವು. ಪ್ರಾಣ ವೃತ್ತಿಕ್ಕೆ ಕಾರಣವಾಗಿ ದೇಹಲತೆಗೆ ಗೆದ್ದಲುಹುಳಾಗಳಾದ ಕ್ಲೇಶಗಳು ಯಾರ ಮನವನ್ನು ಆಸ್ಪಮಿಸುವದಿಲ್ಲವೋ ಯಾರ ಮನಸ್ಸೆಂಬ ಗುಹೆಯಲ್ಲಿ ಅಹಂಕಾರ-ಮಮಕಾರ-ರಾಗ-ದ್ವೇಷಗಳೆಂಬ ವಿಷದಂತಗಳಿಂದ ಕೂಡಿದ ಲೋಭಸರ್ಪವಿರುವದಿಲ್ಲವೋ ಯಾರ ಮನಸ್ಸು ಅತಿ ಚಂಚಲವಾದ ಕಪಿಯಂತೆ ಹಾರಾಡದೆ ಪರಮಪಾವನವಾದ ಪರಮಪದದಲ್ಲಿ ವಿಶ್ರಾಂತಿಯನ್ನು ಹೊಂದಿರುವದೋ ಯಾರ ಹೃದಯ-ವು ತಿಲಕವೃಷಭವನ್ನು ಗುಣದಂತೆ ಕಾವ-ನಿಂದ ಬಾಧಿಸಲ್ಪಡ-ವುದಿಲ್ಲವೋ ಇವರೇ ಮೃತ್ಯುವನ್ನು ಜಯಿಸಿದವರು.

ಪ್ರ—ದುರ್ಮರಣವು ಯಾರಿಗೆ ಪ್ರಾಪ್ತವಾಗುವದು?

ಉ—ದುರುದ್ದೇಶ- ದುರಾಹೆ- ದುರಾಂಭ- ದುರಕಂಕಾರ- ದುರಭಿಮಾನ- ದುರಾಶೆ- ದುರಾಚಾರ- ದುರ್ಭಾಷೆ- ದುರ್ಲೋಚನೆ- ದುರಾಹಾರ- ದುರಪೇಕ್ಷೆ- ದುರ್ನೀತಿ- ದುರ್ಜೋಳಿ, ದುರ್ಲಕ್ಷ್ಯ, ದುರ್ದರ್ಶನ, ದುರ್ಮಾರ್ಗ ಇತ್ಯಾದಿ ದುರ್ಗುಣಗಳುಳ್ಳವರು ಆದರೆ ಸಾತ್ವಿಕರಿಗೆ ಈ ದುರಕ್ಷರಗಳಿಂದ ಕೂಡಿದ ದುರ್ವರ್ತನಗಳು ಮನದಂತೆ ಅತಿನಿಸಿದ್ದಗಳಾಗಿರುವವು.

ಪ್ರ—ಪರಲೋಕದ ವೈದ್ಯರಾರು?

ಉ—ಜ್ಞಾನಿಯು ಈತನ ಔಷಧಕ್ಕೆ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳನ್ನು ನಿಗ್ರಹಿಸುವುದೇ ಪಥ್ಯವಾಗಿರುವುದು. ಈತನಿಗೆ ಹಣ ಮುಂತಾದುದನ್ನೇನೂ ಕೊಡಬೇಕಾಗಿಲ್ಲವು ಶುದ್ಧವಾದ ಭಕ್ತಿಯನ್ನು ಒಪ್ಪಿಸಿದರೆ ಸಾಕು.

ಪ್ರ—ಪರಮಾತ್ಮನಿಗೆ ಚಿರಮೂರ್ತಿಗಳಾರು?

ಉ—ಅಖಂಡಜ್ಞಾನಿಗಳು. ಇವರು ಕನ್ನಡಿಯಂತೆ ಸರ್ವರಿಗೂ ಪ್ರಿಯರಾಗಿರುವರು. ಇಂತಹ ಮಹಾತ್ಮರ ವಚನಗಳನ್ನು ಲಕ್ಷಿಸಿದವರು ದೀಪವನ್ನು ಧಿಕ್ಕರಿಸಿ ಅಂಧಕಾರದಲ್ಲಿ ಹೊಂಟವನಂತೆ ನರಕಕೂಪದಲ್ಲಿ ಬೀಳುವರು.

ಪ್ರ—ದಂಭ ದರ್ಪವೆಂದರೇನು?

ಉ—ಜನರು ತನ್ನನ್ನು ಮಹಾಧರ್ಮಿಷ್ಠನೆನ್ನಾಗಿಯೂ, ಬಹುದೊಡ್ಡವನೆನ್ನಾಗಿಯೂ ತಿಳಿಯಲೆಂದು ಬಹಿರಂಗವಾಗಿ ಕಂಡಕಂಡವರಿಗೊಸ್ಕರವಾಗಿಮಾಡುವ ಬೂಟಾಟಿಕೆಯೇ ದಂಭವೆನಿಸುವುದು. ಮತ್ತು ಇದು ಉತ್ತಮ ಇದು ಕನಿಷ್ಠವೆಂದು ವಿಚಾರಿಸದೆ ತನ್ನ ಹಟವನ್ನೇ ಸಾಧಿಸುವ ಸ್ವಭಾವಕ್ಕೆ ದರ್ಪವೆಂದು ಹೆಸರು. ಪ್ರಿಯವಾಚಕರೇ! ಈ ದಂಭ ದರ್ಪಕ್ಕೊಳಗಾದವರು ಸಾಧು ಅಸಾಧು, ಗ್ರಾಹ್ಯಾಗ್ರಾಹ್ಯ, ಯೋಗ್ಯಾಯೋಗ್ಯ, ಕಾರ್ಯಾಕಾರ್ಯ, ಇತ್ಯಾದಿ ದ್ವಂದಗಳ ದುಃಖವಿಲ್ಲದೆ ಅಖಂಡಾನಂದ ಸ್ವರೂಪವನ್ನು ಎಂದಿಗೆ ಹೊಂದುವರೋ ಪರಶಿವನೊಬ್ಬನೇ ಬಲ್ಲನಲ್ಲವೇ!

ಪ್ರ—ಕರ್ಮಹೀನರಾರು?

ಉ—ಜ್ಞಾನಿಗಳು. ಇವರಿಗೆ ಸಂಸಾರವಿಷಕ್ಷಯ ದ್ವೈಧ ಮೋಕ್ಷವೆಂಬುತ್ತಗಳು ಹುಡುಗಾಟದ ಮಾತು

[೬ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೩೮ ನೆಯ ಡಿಸೆಂಬರ್ ತಾ॥ ೫ ನೇ ಸೋಮವಾರ

ಶೈವಭೇದನಿರೂಪಣ.

ಷಡ್ಪರ್ಕನಗಳಲ್ಲಿ ಮೊದಲನೆಯದಾದ ಶೈವವರ್ಕನವು, ಅನಾದಿಶೈವ-ಆದಿಶೈವ-ಅನುಶೈವ-ಮಹಾಶೈವ-ಯೋಗಶೈವ-ಜ್ಞಾನಶೈವ ವೀರಶೈವ ಎಂಬುದಾಗಿ ವಿಶು ಭೇದಗಳುಂಟೆಂದು ಹಿಂದಿನವಾರದಲ್ಲಿ ಸೂಚಿಸಿನ್ನೆನಷ್ಟೆ! ಈಗ ಅವುಗಳ ಲಕ್ಷಣವನ್ನು ಸಂಕ್ಷೇಪವಾಗಿ ತೋರಿಸುವದಾಗುವದು. ಪಾರಮೇಶ್ವರಾಗಮದಲ್ಲಿ,

ತ್ರಿಕಾಲಮರ್ಚಯೇನ್ನಿತ್ಯಂ ಮಮ ಲಿಂಗಮನುತ್ತಮಂ। ಜಗನ್ಮಾತರ್ಚಯೇತ್ಪಶ್ಚಾತ್ತ್ವಸ್ಥಿಕ್ತ್ವಾ ಸ್ವೇದಕಾಮಿಮಂ। ಸ್ವಸ್ಥೇ ಭವತಿ ಸಂತುಷ್ಟೋ ನಷ್ಟೇ ಶೋಚತಿ ಲೋಕವತ್ । ಇ ಬಂಧ ವೇತ್ತಿ ನೋ ಮೋಕ್ಷಂ ಸೋಽನಾದಿಮತಮಾಶ್ರಯೇತ । ಶ್ರವಣಾ ಹಾತ್ಮರುಚೇ ಶ್ರದ್ಧಯಚ್ಛಿತ್ತಂ ಸಾಕಲ್ಯಸಿದ್ಧಿಜೇ ಬಿಧಿಂ ಚರೇ ಜ್ಞಭಕ್ತಾಶ್ಚಾವರುಚೇ ಬುಜನೋಽಚರೇತ

ಗುರುಗಳ ಆಜ್ಞಾನುಸಾರವಾಗಿ ಶಿವಲಿಂಗನನ್ನು ಪ್ರಾತಃ ಮಧ್ಯಾಹ್ನ ಸಾಯಂಕಾಲಗಳಲ್ಲಿ ಬಿಡದೆ ಪೂಜಿಸುತ್ತ ಜಂಗಮಾರ್ಚನದಲ್ಲಿ ದಕ್ಷನಾಗಿದ್ದು ಉಪಲಿಕರ್ಮಗಳನ್ನನುಷ್ಠಿಸುತ್ತ ಆ ಕರ್ಮಗಳಿಗನುಕೂಲವಾದ ಫಲವುಂಟಾದರೆ ಸಂತೋಷಪಡದಿತ್ತಲೂ ಆಗದಿದ್ದರೆ ವ್ಯಸನಪಡುತ್ತಲೂ ಯಾವಾಗಲೂ ಕರ್ನಾಟಕೆಮೋಂದರಲ್ಲಿ ಯೇ ಯಾವನು ನಿರತನಾಗಿರುತ್ತಾನೆಯೋ, ಜನನಮರಣ ರೂಪವಾದ ಸಂಸಾರರೂಪಬಂಧವನ್ನಾಗಲಿ ಇದರ ಬಿಡು ಗಡೆಯೆಂಬ ಮೋಕ್ಷವನ್ನಾಗಲಿ ಯಾವನು ತಿಳಿದಿರುವುದಿ ಲ್ಲವೋ, ಗುರೂಪದೇಶದಿಂದ ಬಂದ ಕರ್ಮನಿಮಾರ್ಗಗಳಿಗೆ ಲೋಪವುಂಟಾಗುವಾಗ ಆ ಕರ್ಮಪ್ರಾಪ್ತಿಗಾಗಿ ಯಾವನು ಅವಶ್ಯವಿನಗುಣವಾದ ಪ್ರಾಯಶ್ಚಿತ್ತವನ್ನು ಪಡೆಯುತ್ತಾನೆಯೋ, ಶುಭವುಂಟಾದ ಕಾಲದಲ್ಲಿಯೂ ಕಷ್ಟವುಂಟಾದ ಕಾಲದಲ್ಲಿಯೂ ಬಿಡಿಕರ್ಮಗಳನ್ನೇ ಯಾವನು ಅನುಷ್ಠಿಸುವನೋ ಅವನು ಅನಾದಿಶೈವನೆಸಿಸಿಕೊಳ್ಳುವನು

ಕರ್ಮಾಣಂ ಗೃತಂ ಸಿದ್ಧಿಂ ಪ್ರಕೃತ್ಯಾ ಯಾಫಲಾನಯೋಜೇತ್ । ಶ್ರವಾಪಾಕೋವಿಪಸಂ ಬಂಧಾತ್ ಪ್ರಕೃತಿಪಲಿಧಿನಾವಾತ್ । ಪ್ರಕೃತ್ಯ ಸ್ಯಾಗತಂ ಬಾಧಾತ್ ಪಾಪಶ್ರಕ್ಷ್ಯಾಗಸಂ ಚರೇತ್ । ಸ್ವಪಮಂ ಪೂಜಯೇನ್ನಿಂಥಪಸ್ಪೈಸ್ಯಾಕ್ಯಾಯೇತ್ತತಃ । ಆಗಾಮ್ಯಶೇ ಫಾನಮೇದ್ಯಾತ್ರಾ ತರ್ಜನ್ಯಾಂ ಕರಕಂ ಸ್ಪರೇತ್ । ಮಧ್ಯಮಾಯಾಂ ಮಹಾದೇವಪಮಾಸಾಮಿಕ್ಯಾಂ ತ್ರಿಯಂಬಕಂ ॥ ಕನಿಷ್ಠಿಕಾನಾಮಿಕಾಯಾಂ ದಾದೋಸಾದಿಕರದಿನಂ । ಪಾದಯೋಃ ಪೂಜಪದಂ । ಸುಲ್ಪಯೋಃಪೃಷ್ಠಭಗಕಾ ॥ ಸರ್ವಲಿಂಗ ಮಯಂ ಧ್ಯಾತ್ವಾ । ಪಾದಂ ಜಂಗಮಲಿಂಗಿನಃ । ಪಿಬೇತ್ಪಾದೋದ್ಭವಾ ಳಿತಂ ತೋಯಂ ಶಿಕ್ಷಾ ಶಿರಸಿ ಧಾರಯೇತ್ ॥

ಅನಾದಿಶೈವನೇ ಎಂದಿನಂತೆ ತ್ರಿಕಾಲದಲ್ಲಿ ಶಿವಲಿಂಗ ಪೂಜೆಯನ್ನು ಪೂರೈಸುತ್ತ ಗುರುಜಂಗಮರು ಮನೆಗೆ ಬರಲಾಗಿ ಸಾಕ್ಷಾತ್ ಈಶ್ವರನೇ ಬಂದನೆಂಬ ಭಕ್ತಿಯಿಂದ ಕೂಡಿದವನಾಗಿ ಮೇಲಕ್ಕೆದ್ದು ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಗುರುಜಂಗಮರ ಶ್ರಮಪರಿಹಾರಕ್ಕಾಗಿ ವ್ಯಜನಾದ್ಯುಪಚಾರಗಳನ್ನೆಸಗುತ್ತ ಸುಖಾಗಮನ ಪ್ರಶ್ನೆಯನ್ನು ಮಾಡಬೇಕು. ಬಳಿಕ ಆ ಗುರುಜಂಗಮರ ಪಾದಗಳನ್ನೂ ತೊಳೆದು ಗಂಧಪುಷ್ಪಾದ್ಯುಪಚಾರಗಳನ್ನೆಸಗುತ್ತ ಆ ಗುರುವಿನ ಅಂಗುಷ್ಠಾಂಗುಲಿಯಲ್ಲಿ ರುದ್ರನನ್ನೂ, ತರ್ಜನಿಯಲ್ಲಿ ಶಂಕರನನ್ನೂ, ಮಧ್ಯಾನಾಂಗುಲಿಯಲ್ಲಿ ಮಹಾದೇವನನ್ನೂ, ಅನಾಮಿಕೆಯಲ್ಲಿ ತ್ರಿಯಂಬಕನನ್ನೂ, ಕನಿಷ್ಠಿಕೆಯಲ್ಲಿ ಈಶಾನನನ್ನೂ, ಸಾದಗಳ ಮೇಲೆ ಕಪರ್ದಿಯನ್ನೂ, ಕೆಳಗೆ ಪಂಚಿವದನನನ್ನೂ, ಗುಲ್ಫಗಳಲ್ಲಿ ರುದ್ರಭಗರನ್ನ ಧ್ಯಾನಿಸಿ, ಎಲ್ಲವೂ ಶಿವಲಿಂಗಮಯವೆಂದು ಭಾವಿಸುತ್ತ ಪಾದತೀರ್ಥವನ್ನು ಶಿರಸ್ಸಿನಲ್ಲಿ ಪ್ರೋಕ್ಷಿಸಿ ಸ್ವೀಕಾರಮಾಡುವನನಾವನೋ ಅವನೇ ಆದಿಶೈವನೆನಿಸುವನು.

ಆರ್ಚಯೇದೀಶಕಾಲಾ ವಾ ಲಿಂಗಂ ವಾ ಜಂಗಮಮಾನಪಿ । ಸುಸು ಧ್ಯಾನಪತೋ ಸಿತ್ಯಮನುಶೈವಮಪೋ ಭವೇತ್ । ಜ್ಞಾನೇ ನಾಧಿಕತಾ ಯಸ್ಯ ಶಾಂಭವ್ಯಾದಿಪಾತಕಾಃ ॥ ನ ತಸ್ಯ ಕರ್ಮ ಪಾಮುಷ್ಮಂ ಜ್ಞಾನಮೇವಾಧಿಕಂ ಪರಂ ॥

ಗುರುಲಿಂಗಜಂಗಮರನ್ನು ಮೂರುಕಾಲಗಳಲ್ಲಿಯೂ ಬಿಡದೆ ಪೂಜಿಸುವೆನೆಂಬ ದೃಢಸಂಕಲ್ಪವುಳ್ಳವನಾಗಿರುವೆ ಒಂದುಕಾಲನಲ್ಲಿಯಾದರೂ ಅರ್ಚಿಸುತ್ತ ಕಾಮ್ಯಕರ್ಮಗಳನ್ನೂ, ನೈಮಿತ್ತಿಕಕರ್ಮಗಳನ್ನೂ ಅನುಷ್ಠಿಸದವನಾಗಿ ಶಿವಜೀವೈಕ್ಯಾನುಸಂಧಾನಸಿದ್ಧಿಯನ್ನು ಪಡೆಯುವುದರಲ್ಲಿ ಸಾಧಕತಾನ ಶ್ರವಣಮನನಾದಿಗಳಲ್ಲಿ ನಿರತನಾಗಿರುವನೇ ಅನುಶೈವನೆನಿಸುವನು.

ಅಥ ವಕ್ಷ್ಯೇ ಮಹಾಶೈವಂ ಸ ವಿನಾ ಜಂಗಮಾರ್ಚನಂ । ತತ್ಪ್ರಸಾದೇ ನಿಷಾತ್ಮಾತಿ ಮುಕ್ತಾಶೈವಮತೇ ಸ್ಥಿತಃ ॥ ಇ ಸ್ವವೇಣ್ಣಮುಸಾಮಿನಿ ಭೋಜಾನಿಂಗಂ ಕರೇಣ್ಡಾರ್ಯೇತ್ । ಸರ್ವಂತ್ರಿಯುನ್ಯಕ್ತಾಶ್ಚಿತನುಶೈವಾಚಾರ್ಯಮೇಚ್ಛಿನೇ ॥ ಜಪಾನಾದಾತ್ಮಕಂ ಸರ್ವಂ ಜಗದೇತಚ್ಚಿವಾತ್ಮಕಂ । ಭಾವಯನ್ನಾತ್ಮತಾತ್ಮಾನಂ ಯೋಗಶೈವಮತೇ ವಸೇತ್ ॥

ಗುರುಲಿಂಗಜಂಗಮಾರ್ಚನೆಮಾಡುವನೆಯೂ ಆ ಗುರು ಜಂಗಮರ ಪ್ರಸಾದವನ್ನು ಸ್ವೀಕರಿಸದೆಯೂ ಭೋಜನವನ್ನು ಮಾಡಲಾಗದೆಂಬ ದೃಢಸಂಕಲ್ಪವುಳ್ಳವನಾಗಿ ಕಾಣುತ್ತಿರುವ ಚರಾಚರರೂಪಪ್ರಪಂಚವೆಲ್ಲ ಶಿವಸ್ವರೂಪವೆಂದು ಕಾಣುತ್ತ, ಪಂಚಶುದ್ಧಹೃದಯವುಳ್ಳವನಾಗಿ ಪೃದಯಕಮಲದಲ್ಲಿ ಶಿವಲಿಂಗವನ್ನು ಧ್ಯಾನಿಸುತ್ತ ಹಸ್ತ ಕಮಲದಲ್ಲಿ ಇಷ್ಟಲಿಂಗವನ್ನರ್ಚಿಸುತ್ತ ಶಿವಲಿಂಗವೇ ನಾನು, ನಾನೇ ಶಿವಲಿಂಗವೆಂಬ ಅವಿಚ್ಛಿನ್ನಸ್ಮೃತಿ ಸಂತಾನವನ್ನು ಹೊಂದಿರುವನಾವನೋ ಅವನೇ ಮಹಾ ಶೈವನೆನಿಸುವನು ಇಲ್ಲಿ ಕರಶೀರರ್ಚನವು ವಿಶೇಷಧರ್ಮವಾಗಿರುತ್ತದೆ. ಹಿಂದಿನ ಶೈವಗಳಲ್ಲಿ ಕರಶೀರಾರ್ಚನವು ನಿಯಮಿತವಲ್ಲ.

ದಾನಮೀಶಂ ವಿದ್ಯಾಯ ಶೈಲಂ ಪುತ್ರಧನಾರ್ಥಿನೇ । ಲಾಭಂ ಸರ್ವಾರ್ಥಸಂಸಿದ್ಧೈ ಮೂರ್ತಿತಂ ಜ್ಞಾನಶಾಸನಂ । ಅಜಿನಂ ವ್ಯಾಧಿನೀತಾಯ್ಯೆ ಕಂಬಳಂ ದುಃಖನಿವೃತ್ತಯೇ । ವಾಸನ್ಸರ್ವಫಲ ಪ್ರಾಪ್ತೈ ಪರ್ಣಸ್ವರ್ಣಫಲಾಪ್ತಯೇ । ಭೂಮಿಸ್ಸರ್ವಾರ್ಥ ಸಾಜಾಯ ತೃಣಂ ವಿಶ್ವಪಕಾರಣಾ । ತತ್ರ ಸರ್ವೋತ್ತಮಂ ದೇಯಾ ಪೀಠಾರ್ಚೇ ಕರಪುಂಕಜಂ । ಅನಾತಗುಣತಂ ಪಾಣಿಪಂಕಜೇ ನಮ ಪೂಜನಂ ॥

ಶಿವಲಿಂಗವನ್ನು ದಾರುಪೀಠದಲ್ಲಿಟ್ಟು ಪೂಜಿಸುವದರಿಂದ ದಾರಿದ್ರ್ಯವೂ, ಶೈಲಪೀಠದಲ್ಲಿ ಪೂಜಿಸುವುದರಿಂದ ಪುತ್ರ ಐಶ್ವರ್ಯಪ್ರಾಪ್ತಿಯೂ, ಲೋಹಪೀಠದಲ್ಲಿ ಪೂಜಿಸುವುದರಿಂದ ಇಷ್ಟಾರ್ಥಸಿದ್ಧಿಯೂ, ಅಜಿನದಮೇಲೆ ಪೂಜಿಸುವುದರಿಂದ ಪೀಡೆಯೂ, ಕಂಬಳದಲ್ಲಿ ಪೂಜಿಸುವುದರಿಂದ ದುಃಖನಿವೃತ್ತಿಯೂ, ವಸ್ತ್ರದಲ್ಲಿ ಪೂಜಿಸುವುದರಿಂದ ಸರ್ವಾರ್ಥಸಿದ್ಧಿಯೂ, ಎಲೆಯಲ್ಲಿ ಪೂಜಿಸುವದರಿಂದ ಸುವರ್ಣಲಾಭವೂ, ಭೂಮಿಯಮೇಲೆ ಪೂಜಿಸುವುದರಿಂದ ಸರ್ವಾನರ್ಥವೂ, ಹುಲ್ಲಿನಮೇಲೆ ಪೂಜಿಸುವದರಿಂದ ವಿಶ್ವವಸ್ಯಾಪ್ತಿಯೂ ಉಂಟಾಗುವದು. ಇನ್ನೆಲ್ಲಕ್ಕಿಂತಲೂ ಹಸ್ತಪೀಠದಲ್ಲಿಟ್ಟು ಪೂಜಿಸುವುದು ಸರ್ವೋತ್ತಮವೆಂದು ಪಾರಮೇಶ್ವರಾಗಮದಲ್ಲಿ ಈಶ್ವರನು ಪಾರ್ವತಿಗೆ ಬೋಧಿಸಿರುತ್ತಾನೆ. ಆದುದರಿಂದ ಅನಾದಿಶೈವ, ಆದಿಶೈವ, ಅನುಶೈವ ಸೋಪಾನಗಳಲ್ಲಿ ಹೇಳಿದ ನಿಯಮಗಳಿಗಿಂತಲೂ ನಾಲ್ಕನೆಯದಾದ ಮಹಾಶೈವಸೋಪಾನದಲ್ಲಿ ಗುರುಗಳಿಂದ ಅನುಗ್ರಹಿಸಲ್ಪಟ್ಟ ಲಿಂಗವನ್ನು ಹಸ್ತವೆಂಬ ಮಹಾಪೀಠದಲ್ಲಿರಿಸಿ ಆರ್ಚಿಸುತ್ತಿರುವುದೊಂದು ವಿಶೇಷ ನಿಯಮವಾಗಿರುತ್ತದೆ. ಇನ್ನು ಯೋಗಶೈವ-ಜ್ಞಾನಶೈವ-ವೀರಶೈವಸೋಪಾನಗಳ ಕ್ರಮವನ್ನು ಮುಂದೆ ಪ್ರತಿಪಾದಿಸುವದಾಗುತ್ತದೆ. ಹೀಗೆ ಶೈವದರ್ಶನದಲ್ಲಿ ಕೀರಿದ ಸಪ್ತಸೋಪಾನಗಳ ಆಚರಣೆಯನ್ನು ಮಾಡುತ್ತ ನಿತ್ಯಸುಖವನ್ನು ಪಡೆಯುವನೆಂದು ಶಿವಾಗಮಗಳು ವೀರಶೈವಧರ್ಮವನ್ನು ಸ್ಪಷ್ಟಪಡಿಸುವದರಿಂದ ವೀರಶೈವನುತವು ಸುಗಮವಾದುದೆಂದು ಹೇಳುವುದಕ್ಕೆ ಬದಲು ದುರ್ಗಮವಾದುದೆಂದು ಸಿದ್ಧವಾಗುವದು. ವೀರಶೈವಸ್ಥಾನವನ್ನು ಪಡೆದವನು

ಏಳೇನ ಜನ್ಮನಾ ಮುಕ್ತಿಸ್ತೀರಾಣಾಂ ತು ಮಹೇಶ್ವರಿ ।

ಎಂಬಂತೆ ಒಂದೇ ಜನ್ಮದಲ್ಲಿ ಮುಕ್ತಿಪಡೆವನೆಂಬುದರಲ್ಲಿ ಸಂಶಯವಿಲ್ಲ.

ಬೆಂಗಳೂರಲ್ಲಿ ನೆರವೇರಿದ ಮೈಸೂರು ಬ್ಯಾಂಕಿನ ರಜತಮಹೋತ್ಸವಸಮಯದಲ್ಲಿ ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಒಪ್ಪಿಸಿದ ವಿನ್ನಪತ್ರಕ್ಕೆ.

ಈ ತಿಂಗಳು 2 ನೆಯ ತಾರೀಖಿನ ದಿವಸ ಶ್ರೀಮನ್ಮಹಾರಾಜರವರಿಗೆ ಮೈಸೂರು ಬ್ಯಾಂಕಿನ ಅಧ್ಯಕ್ಷರು ಬ್ಯಾಂಕಿನ ಪರವಾಗಿ ಈ ಕೆಳಗೆ ಕಂಡಂತೆ ವಿನ್ನವತ್ರಕೆಯನ್ನು ಅರ್ಪಿಸಿದರು—

ಮಹಾಸ್ವಾಮಿ,

ಈ ಬೆಂಗಳೂರು ನಗರದಲ್ಲಿರುವ ಮೈಸೂರು ಬ್ಯಾಂಕಿನ ರಜತೋತ್ಸವದ ಚಿರಸ್ಮರಣೀಯವಾದ ಈ ಶುಭ ಸಮಯದಲ್ಲಿ, ಬ್ಯಾಂಕಿನ ಅಧ್ಯಕ್ಷರೂ ಡೈರೆಕ್ಟರುಗಳೂ ಆದ ನಾವುಗಳು, ಬ್ಯಾಂಕಿನ ಪೇರುದಾರುಗಳಪರವಾಗಿ, ಅತ್ಯಂತ ರಾಜಭಕ್ತಿಯಿಂದಲೂ, ಆದರದಿಂದಲೂ ಸ್ವಾಗತವನ್ನು ಬಯಸಲು ಅತ್ಯಂತ ಗೌರವಪುರಸ್ಸರವಾಗಿ ಅಪ್ಪಣೆ ಬೇಡುತ್ತೇವೆ. ಇಂದಿನ ಈ ಮಹೋತ್ಸವಕ್ಕೆ ಚಿತ್ತೈಸಿ, ಮಹಾಸ್ವಾಮಿಯವರ ಸನ್ನಿಧಾನಪ್ರಭಾವದಿಂದ ಅವಕ್ಕೆ ನುತ್ತಮ್ಯ ಮಹತ್ವರವಾದ ಘನತೆಯುಂಟಾಗುವಂತೆ ಕರುಣೆಸಬೇಕೆಂಬ ವಿನಯಪೂರ್ವಕವಾದ ನಮ್ಮ ಪ್ರಾರ್ಥನೆಯನ್ನು ಲಾಲಿಸಿ ಕೃಪೆ ತೋರಿಸುವುದಕ್ಕಾಗಿ ನಾವುಗಳು ವಿಶೇಷ ಕೃತಜ್ಞರಾಗಿದ್ದೇವೆ.

ಮಹಾಸ್ವಾಮಿಯವರಿಂದಲೂ ಮತ್ತು ಮಹಾಸ್ವಾಮಿಯವರ ಸರ್ಕಾರದವರಿಂದಲೂ ಈ ಸಂಸ್ಥೆಗೆ ವಿಶೇಷವಾಗಿ ಸಹಾಯವಾಗಿದೆ. ಅದರ ಸ್ಥಾಪನೆಯು ಅಗತ್ಯವೆಂಬ ಸ್ಫೂರ್ತಿಯು ಲಭಿಸಿದುದೇ ಮಹಾಸ್ವಾಮಿಯವರ ಸನ್ನಿಧಿಯಿಂದ. ಈ ಸಂಸ್ಥೆಯು ಸ್ಥಾಪಿತವಾಗಲು ಅವಶ್ಯಕವಾದ ಸಹಾಯ, ಸಹಾನುಭೂತಿಗಳೆಲ್ಲ ಮಹಾಸ್ವಾಮಿಯವರ ಸರ್ಕಾರದಿಂದ ಲಭಿಸಿದುವು. ಆಗ್ಗೆ ಮಹಾಸ್ವಾಮಿಯವರ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಆ ಸಂಬಂಧದಲ್ಲಿ ಮಾಡಿದ್ದ ಅಮೂಲ್ಯ ಸಹಾಯಗಳನ್ನೂ, ಈ ಸಂಸ್ಥೆಯು ವಿಪರೀತವಂತೆ ಮಾಡಲು ಅವರು ತೋರಿಸಿದ ತೀವ್ರಾಸಕ್ತಿಯನ್ನೂ ಇಂದಿನ ಶುಭ ಸಮಯದಲ್ಲಿ ನಾವುಗಳು ಹರ್ಷದಿಂದ ಸ್ಮರಿಸುತ್ತೇವೆ. ಈ ಸಂಸ್ಥೆಯು ವಿಪರೀತವಾಗಲು ಅವರು ಅನನ್ಯ ಸಾಧಾರಣವಾದ ರೀತಿಯಲ್ಲಿ ಸಹಾಯ ಮಾಡಿದುದು ಮಾತ್ರವೇ ಅಲ್ಲದೆ ಆರಂಭವಿಕೆಯಲ್ಲಿ ಅದನ್ನು ಅಭಿವೃದ್ಧಿಸ್ಥಿತಿಗೆ ತರುವುದಕ್ಕೂ ಸಹಾಯಮಾಡಿದರು. ಅಲ್ಲದೆ ಆಗಿನಿಂದಲೂ ಈ ಸಂಸ್ಥೆಯ ಪುರೋಭಿವೃದ್ಧಿಯಲ್ಲಿ ಅತ್ಯಂತ ಆಸಕ್ತಿಯನ್ನು ವಹಿಸುತ್ತ ಬಂದಿದ್ದಾರೆ.

ಬ್ಯಾಂಕಿನ ಪುರೋಭಿವೃದ್ಧಿ ವಿಚಾರ

ಈ ಸಂಸ್ಥೆಯು 1913 ನೆಯ ಇಸವಿ ಮೇ 19 ನೆಯ ತಾರೀಖಿನ ದಿವಸ ರಿಜಿಸ್ಟರಾಯಿತು. 1913ನೆಯ ಇಸವಿ ಅಕ್ಟೋಬರು 2ನೆಯ ತಾರೀಖಿನ ಶುಭದಿವಸ ಅದರ ಲೇವಾದೇವಿ ಕಾರ್ಯಕಲಾಪಗಳು ಪ್ರಾರಂಭವಾದವು. ಕಳೆದ 25 ವರ್ಷಗಳ ಅವಧಿಯಲ್ಲಿ ಈ ಸಂಸ್ಥೆಯು ಮಹಾಸ್ವಾಮಿಯವರ ಸರ್ಕಾರದ ಕೃಪಾಶ್ರಯದಲ್ಲಿ ಅಭಿವೃದ್ಧಿಯಾಗಿ, ಸಂಸ್ಥಾನದ ಅತ್ಯಂತ ದೊಡ್ಡ ಬ್ಯಾಂಕಾಗಿ ಪರಿಣಮಿಸಿದೆ. ಈ ಬಗೆಯ ಸಂಸ್ಥೆಗಳ ಸಂಬಂಧದಲ್ಲಿ ಅಂಗೀಕೃತವಾಗಿರುವ ಅತ್ಯಂತ ಶ್ರೇಷ್ಠವಾದ ಕಾರ್ಯ ನಿಯಮಗಳ ಸಂಪ್ರದಾಯಗಳಿಗನುಸಾರವಾಗಿ ನಡೆಯುತ್ತ ಬಂದಿರುವ ಕಾರಣ, ಈ ಬ್ಯಾಂಕು ಸ್ಥಾಪಿತವಾದಾಗಿನಿಂದಲೂ ಗಣನೀಯವಾಗಿ ಅಭಿವೃದ್ಧಿಹೊಂದಿದೆ. ಆದರಲ್ಲಿ ಶೇಷಣಿಯಾಗಿದ್ದ ಠೇಣಗಳ ನೊತ್ತವು ನಾಲ್ಕುವರೆ ಲಕ್ಷ ರೂಪಾಯಿಗಳಿಗಿಂತ ಕಡಿಮೆಯಾಗಿದ್ದ ನೊಬಲಗಿನಿಂದ 2 ಕೋಟಿ 50 ಲಕ್ಷರೂಪಾಯಿಗಳ ನೊಬಲಗಿಗೆ ಏರಿದೆ. ಆದರ ನೆಗದು ಮೊತ್ತವೂ ಮತ್ತು ಲಾಭದಾಯಕವಾಗಿ ವಿನಿಯೋಗವಾಗಿರುವ ಮೊತ್ತಗಳೂ 50 ಲಕ್ಷ ರೂಪಾಯಿಗಳಿಂದ 1 ಕೋಟಿ 8 ಲಕ್ಷ ರೂಪಾಯಿಗಳಿಗೆ ಹೆಚ್ಚಿವೆ. ಆದರೆ ಲಾಭದ ನೊಬಲಗುಗಳ 3,000 ರೂ. ಗಳಿಗಿಂತಲೂ ಕಡಿಮೆಯಾಗಿದ್ದ ಪ್ರಮಾಣದಿಂದ ಸುಮಾರು 5 ಲಕ್ಷ ರೂಪಾಯಿಗಳಿಗೆ ಹೆಚ್ಚಿವೆ. ಅಪವ್ಯನವಂತೂ, ಅದಿಯಲ್ಲಿ ವಿನೂ ಇಲ್ಲದೆ ಹೋಗಿದ್ದುದು ಇಪ್ಪತ್ತೈದೂ ಮುಕ್ಕಾಲು ಲಕ್ಷ ರೂಪಾಯಿಗಳಿಗೆ ಬಂದಿದೆ. ಎಂದರೆ,

ಅಧಿಕೃತವಾದ ಮತ್ತು ಸಂದಾಯಕವಾಗಿರುವ ಒಟ್ಟು ಬಂಡವಾಳದ ಮೊತ್ತಕ್ಕಿಂದ ವಿವೂಮುಕ್ಕಾಲು ಲಕ್ಷ ರೂಪಾಯಿಗಳಷ್ಟು ಅಧಿಕವಾಗಿದೆ. ಈ ಸಂಸ್ಥೆಯಿಂದ ಕೊಟ್ಟಿರುವ ಸಾಲಗಳ ಮತ್ತು ಮುಂಗಡಗಳ ಒಟ್ಟು ಮೊಬಲಗು ೬ ಲಕ್ಷ ರೂಪಾಯಿಗಳಿಂದ 1 ಕೋಟಿ 91 ಲಕ್ಷ ರೂಪಾಯಿಗಳಿಗೆ ಏರಿದೆ. ಅಭೂತಪೂರ್ವವಾದ ಪ್ರಮಾಣದಲ್ಲಿ, ಈ ಬ್ಯಾಂಕಿನಿಂದ ವ್ಯವಸಾಯಗಾರರಿಗೂ ವರ್ತಕರಿಗೂ ಮತ್ತು ಕೈಗಾರಿಕೆ ಕಾರ್ಖಾನೆಗಳವರಿಗೂ ಸಹಿ, ಪ್ರತ್ಯಕ್ಷವಾದ ಮತ್ತು ಪರೋಕ್ಷವಾದ ಸಹಾಯ ಗಳು ಲಭಿಸಿವೆ. ಬ್ಯಾಂಕಿನಿಂದ ದೊರೆತಿರುವ ಧನಸಹಾ ಯದ ಪ್ರಮಾಣವೆಷ್ಟೆಂಬುದು, ಅದರ ವಹಿವಾಟು ವ್ಯವ ಹರಣೆ ಮೊಬಲಗುಗಳ ವಾರ್ಷಿಕ ಮೊತ್ತಗಳ ಅಧಿಕ್ಯ ನಿಂದಲೇ ವ್ಯಕ್ತವಾಗುತ್ತದೆ. ಈ ಮೊತ್ತವು 1913ನೆಯ ಇಸವಿಯಲ್ಲಿ 6 ಲಕ್ಷ ರೂಪಾಯಿಗಳಾಗಿದ್ದುದು, 1937 ನೆಯ ಇಸವಿ ಡಿಸೆಂಬರು 31ನೆಯ ತಾರೀಖಿನ ವೇಳೆಗೆ 1 ಕೋಟಿ 9 ಲಕ್ಷ ರೂಪಾಯಿಗಳಿಗೆ ಏರಿತು. 1938 ನೆಯ ಇಸವಿ ಕೊನೆಯವೇಳೆಗೆ ಅದು 4 ಕೋಟಿ 80 ಲಕ್ಷ ರೂಪಾಯಿಗಳನರೆಗೂ ಹೆಚ್ಚಬಹುದೆಂದು ನಿರೀಕ್ಷೆ ಯಿದೆ.

ಕಳೆದ 25 ವರ್ಷಗಳ ಅವಧಿಯಲ್ಲಿ ಈ ಬ್ಯಾಂಕಿನ ಕಾರ್ಯಕಲಾಪಗಳು ಎಚ್ಚರಿಕೆಯಿಂದಲೂ ಮುಂಜಾಗರೂ ಕತೆಯಿಂದಲೂ ನಡೆದು, ಮೈಸೂರು ಸಂಸ್ಥಾನದ ಪ್ರಜೆ ಗಳ ಸಂಪದಭಿವೃದ್ಧಿಗೆ ಬಹಳ ಸಹಾಯವಾಗಿದೆಯೆಂದು ಸಾಬಿತಿಸಿದರೆ, ಅದೇನೂ ಈ ಬ್ಯಾಂಕಿನ ವಿಚಾರಕ್ಕೆ ಸಲ್ಲದ ಅತಿಶಯೋಕ್ತಿಯಾಗಲಾರದು. ಅದಕ್ಕೂ ಮೊದ ಲಾಗಿ ಜನರಲ್ಲಿ ಬ್ಯಾಂಕು ವ್ಯವಹಾರಣೆಯ ಆಭ್ಯಾಸವು ಬೇಕೆಂ ಬರುವಂತೆ ಮಾಡಲು ಈ ಸಂಸ್ಥೆಯಿಂದ ಸಹಾ ಮವಾಗಿದೆ. ಈ ಸಂಸ್ಥೆಯ ಶಾಖೆಗಳು ಸಂಸ್ಥಾನದ ದೊಡ್ಡದೊಡ್ಡ ವ್ಯಾಪಾರಸ್ಥಳಗಳಾದ 19 ಪಟ್ಟಣಗಳಲ್ಲಿ ನೆಲಸಿ ಕೆಲಸಮಾಡುತ್ತಿರುವಕಾರಣ, ಇವರ ಕಾರ್ಯಕಲಾ ಪಗಳು ಒಟ್ಟು ಸಂಸ್ಥಾನಾದಾಳಿ ನಡೆಯುತ್ತಿವೆ. ಅಲ್ಲಿಯ ಜನರಿಗೆ ಅವರ ಪ್ರತ್ಯಹದ ಕಾರ್ಯಗಳಲ್ಲಿ ಸಹಾಯವಾಗು ತ್ತಿವೆ. ಬ್ಯಾಂಕಿನಲ್ಲಿ ಲೆಕ್ಕವನ್ನಿಟ್ಟು ಕೆಲಸ ನಡೆಸುವುದೇ ಒಂದು ಹೆಮ್ಮೆಯೆಂಬ ಅಭಿಮಾನವು ಇಂದು ಸಂಸ್ಥಾ ನದ ಪ್ರಜೆಗಳ ಮನಸ್ಸಿನಲ್ಲಿ ಹೆಚ್ಚುಹೆಚ್ಚಾಗಿ ನೆಲಸಿ ಅವರ ಮೆಚ್ಚಿಕೆಗೆ ಪಾತ್ರವಾಗಿ, ಕೂಡಲೆ ವೆಚ್ಚಕ್ಕೆ ಆಗ ದಿಲ್ಲದ ಹಣವನ್ನು ತಮ್ಮೊಡನೆಯೇ ಕೂಡಿಟ್ಟುಕೊಂ ಡಿರುವುದು ಕ್ರಮಕ್ರಮವಾಗಿ ಜನರಲ್ಲಿ ಕಡಿಮೆಯಾಗುತ್ತ ಬಂದು ಠೇವಣಿಗಳು ಹೆಚ್ಚುತ್ತಿರುವ ಇಂದಿನ ಪರಿಸ್ಥಿತಿಗೆ ಈ ಬ್ಯಾಂಕಿನ ಕಾರ್ಯಕಲಾಪಗಳೇ ಹೆಚ್ಚಿನ ಕಾರಣ ವೆಂದು ಗೌರವದಿಂದ ಅರಿಕೆ ಮಾಡುತ್ತೇನೆ.

ಸೇವೆ ಸಲ್ಲಿಸಿದವರ ಸ್ಮರಣೆ

ಈ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಅನೇಕ ವೆಂದಿ ಡೈರೆಕ್ಟರುಗಳೂ, ಆಫೀಸರುಗಳೂ, ಮ್ಯಾನೇಜ ರ್‌ಗಳೂ ಈ ಸಂಸ್ಥೆಗೆ ಶ್ಲಾಘ್ಯವಾದ ಸೇವೆಯನ್ನು ಸಮ ರ್ಪಿಸಿದ್ದಾರೆ. ಅವರುಗಳು ಪ್ರೇಷ್ಠ ರೀತಿಯಲ್ಲಿ ಕೆಲಸಮಾ ಡಿರುವುದರಿಂದಲೇ ಈ ಬ್ಯಾಂಕಿನ ಅಭಿವೃದ್ಧಿಗೆ ಮುಖ್ಯ ಸಹಾಯವಾಗಿರುತ್ತದೆ. ಇಂದಿನಂಥ ಉತ್ಸವ ಸಮಯ ದಲ್ಲಿ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿಯವರ ಉಪಕಾರ ಸ್ಮರಣೆ ಮಾಡದಿರುವದು ಸಾಧ್ಯವಿಲ್ಲ. ಅವರು, ಈ ಬ್ಯಾಂಕು ರಿಜಿಸ್ಟರಾಗುವುದಕ್ಕೆ ಮುಂಚಿನಿಂದಲೂ ಕೂಡ ಇವರ ಸೇವೆಗೆ ಪ್ರಾರಂಭಮಾಡಿ, ತಮ್ಮ ಜೀವಿತಕಾಲದ ಕೊನೆಯ ವಿನವರೆಗೂ ಸೇವೆಯನ್ನು ವಲ್ಲಿಸಿದರು. ಅವರು ಶಾಂತಚಿತ್ತದಿಂದ ಸಾವಧಾನನಾಗಿ ಪರ್ಯಾಲೋ ಚಿಸಿದ ವಿವೇಕಮಯವಾದ ಅಮೋಘ ಸಲಹೆಗಳಿಂ ದ ಈ ಸಂಸ್ಥೆಗೆ ಸಹಾಯಮಾಡಿದರು. ಅಲ್ಲದೆ, ಮಹಾಸ್ವಾಮಿಯವರ ಸರ್ಕಾರದವರಿಗೂ ಮತ್ತು ಪ್ರಜಾ ಮಾನ್ಯರಿಗೂ ಆಪ್ತರಾಗಿ ಅವರು ಗಳಿಸಿದ್ದ ಪ್ರಭಾವ ದಿಂದಲೂ ಈ ಸಂಸ್ಥೆಗೆ ಮತ್ತಷ್ಟು ಅಧಿಕತರವಾದ ಸಹಾಯವಾಯಿತು. ಮಹಾಸ್ವಾಮಿಯವರ ಸರ್ಕಾರದ ಪರಿಂದ-ಇದರಲ್ಲಿಯೂ ಮುಖ್ಯವಾಗಿ, ಮಹಾಸ್ವಾಮಿಯ ವರ ಈಗಿನ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾ ಯಿಲ್ ಅವರಿಂದ ನಮಗೆ ಅಮೂಲ್ಯ ಸಹಾಯವಾಗಿದೆ ಯೆಂಬ ಅಂಶವನ್ನು ಈ ಶುಭಸಮಯದಲ್ಲಿ ಬಹಿರಂಗವಾಗಿ ಸೂಚಿಸಿ, ಕೃತಜ್ಞತೆಯನ್ನೊಪ್ಪಿಸುತ್ತೇನೆ. ಸರ್ ಮಿರ್ಜಾ ಎಂ. ಇಸ್ಮಾಯಿಲ್ ಅವರು ಸಮರ್ಪಕವಾದ ರೀತಿಯಲ್ಲಿ ಈ ಬ್ಯಾಂಕು ಅಭಿವೃದ್ಧಿಹೊಂದುವಂತೆ ತೀವ್ರಾಸಕ್ತಿ ಯನ್ನು ವಹಿಸಿ ಕೆಲಸಮಾಡಿ ಸಹಾಯಮಾಡುತ್ತಿದ್ದಾರೆ. ಮಹಾಸ್ವಾಮಿಯವರ ಸರ್ಕಾರದವರ ಸೌಹಾರ್ದದ ನಿವ ರ್ಶನಗಳಾಗಿ ಮುಖ್ಯವಾಗಿ ಕಳೆದ ಹತ್ತು ವರ್ಷಗಳ ಅವ ಧಿಯಲ್ಲಿ ಅನೇಕ ಸಹಾಯಗಳು ಆಗಿದ್ದಾಗ್ಗೆ ನಮಗೆ ಲಭಿಸಿವೆ; ಅವರ ಪರವಾಗಿ ಖಜಾನೆಯ ಕಾರ್ಯಕಲಾ ಪಗಳು ಬ್ಯಾಂಕಿನಲ್ಲಿ ನಡೆಯುವ ವ್ಯವಹ್ಕೆಯೂ ಅವುಗಳ ಲ್ಲೊಂದಾಗಿದೆ. ಸಂಸ್ಥಾನದ ಪ್ರಜೆಗಳ ಹೆಚ್ಚಿನ ಹಿತಸಾ ಧನೆಗೆ ಸಹಾಯಕವಾಗಿರುವಂತೆ ಈ ಬ್ಯಾಂಕಿಗೂ ನುಹಾ ಸ್ವಾಮಿಯವರ ಸರ್ಕಾರಕ್ಕೂ ಇನ್ನೂ ಹೆಚ್ಚಿನ ಸಹಕಾರ ವು ಏರ್ಪಡುವಂತೆ ಸೂಡಲು ಈಗ ಸಕಾಲವೆಂದು ಈ ಸಮಯದಲ್ಲಿ ವಿನಯಪೂರ್ವಕವಾಗಿ ಅರಿಕೆಮಾಡಲಿಚ್ಛೆ ಸುವೆವು. ಆ ರೀತಿ ಸಹಕಾರಕ್ಕೆ ಅಂಗೀಕೃತವಾದ ಕಾರ್ಯ ನಿಯಮಗಳಿಗನುಸಾರವಾಗಿ ಏರ್ಪಟ್ಟಲ್ಲಿ, ಸಂಸ್ಥಾನದ ವ್ಯಾಪಾರ ವಾಣಿಜ್ಯ ಮುಂತಾದುವುಗಳ ಸಂಬಂಧದಲ್ಲಿ ದ್ರವ್ಯಾನುಕೂಲತೆಯ ಸನ್ನಿವೇಶವು ಇನ್ನೂ ಉತ್ತಮ ಗೊಂಡು, ಈ ಸಂಸ್ಥೆಯೂ ಸರ್ಕಾರದ ಸಹಾಯದಿಂದ ಪೂರ್ಣಾಭಿವೃದ್ಧಿಯನ್ನು ಪಡೆದು ಒಟ್ಟು ಸಂಸ್ಥಾನದಲ್ಲೇ ಪ್ರಧಾನವಾದ ಬ್ಯಾಂಕಾಗಿ ಪರಿಣಾಮಗೊಳ್ಳುವ ಸುಯೋ ಗವು ತೀಘ್ರದಲ್ಲಿಯೇ ಲಭಿಸುವುದೆಂದು ನಮಗೆ ತೋರು ತ್ತಿದೆ.

ಇಂದಿನ ಉತ್ಸವದ ಸಂತೋಷ ಸಮಯದಲ್ಲಿ ಇಲ್ಲಿಗೆ ಚಿತ್ತೈಸಿ ಅನುಗ್ರಹಿಸಬೇಕೆಂಬ ನಮ್ಮ ಪ್ರಾರ್ಥನೆಯನ್ನು ಲಾಲಿಸಿ ಕೃಪೆಮಾಡಿದುದಕ್ಕಾಗಿ ಗಾಢವಾದ ನಮ್ಮ ಕೃತ ಜ್ಞತೆಯನ್ನು ನುತ್ತೊನ್ಮೈ ಶ್ರುತಪಡಿಸಲು ಅಪ್ಪಣೆಬೇಡು ತ್ತೇನೆ, ಮಹಾಸ್ವಾಮಿ.

ರಜತೋತ್ಸವದ ಸವಿನೆನಪಿಗಾಗಿ ವಿಶೇಷವಾಗಿ ಬೇಕಾಗಿರುವ "ಷೀಲ್ಡು" ಗಳನ್ನು ಮಹಾಸ್ವಾಮಿಯವರ ಅಮೃತ ಹಸ್ತದಿಂದ ದಯಪಾಲಿಸುವ ಕೃಪೆಯಾಗಬೇ ಕೆಂದು ಪ್ರಾರ್ಥಿಸುವೆವು. ಆಲ್ಲವೆ, ಹಿಂದೆ ನಮ್ಮ ಅಭ್ಯ ರ್ಥಿಗಳಾಗಿದ್ದು, ನಾವುಗಳು ಮಾತುಗಳಿಂದ ಪೂರ್ತಿಯಾಗಿ ವರ್ಣಿಸುವುದು ಸಾಧ್ಯವೇ ಇಲ್ಲದಷ್ಟು ಉಪಕಾರಮಾಡಿ ಈಚೆಗೆ ದಿವಂಗತರಾದ ಸರ್.ಕೆ.ಪಿ. ಪುಟ್ಟಣ್ಣಶೆಟ್ಟಿಯ ವರ ಧಾವಚಿತ್ರವನ್ನು ಆನಾವರಣಗೊಳಿಸಿ ಅನುಗ್ರಹಿಸ ಬೇಕೆಂದು ಬೇಡುವೆವು.

ಶ್ರೀಮನ್ಮಹಾರಾಜರವರ ಭಾಷಣ.

ಮೈಸೂರು ಬ್ಯಾಂಕು ಹುಟ್ಟಿ ಇಲ್ಲಿಗೆ ಕಾಲುಶತಮಾನ ವಾಯಿತು. ಅಂದಿನಿಂದ ಅದು ಯಶಸ್ವಿಯಾಗಿ ಕೆಲಸ ಮಾಡುತ್ತ ಬರುತ್ತಿದೆ. ಇದಕ್ಕಾಗಿ ಆ ಬ್ಯಾಂಕಿನ ಷೇರು ದಾರರನ್ನೂ, ಡೈರೆಕ್ಟರುಗಳನ್ನೂ ಮತ್ತು ಅಧಿಕಾರಿಗಳ ನ್ನೂ ಅಭಿನಂದಿಸಲು ನಾವಿಂದು ಇಲ್ಲಿ ಹಾಜರಿರಲು ಹರ್ಷಿಸುತ್ತೇನೆ.

ಬದಲಾವಣೆಗಾಗಿ ಬದಲಾವಣೆಯಾಗಬೇಕೆಂಬ ಈ ಕಾಲದಲ್ಲಿ ಬ್ಯಾಂಕಿಂಗ್ ಕಲೆಯು ಬಹಳ ತೊಡಕಿನ ಸ್ಥಿತಿಯನ್ನು ನುಟ್ಟಿದೆ. ಪರಿಸ್ಥಿತಿ ಹೀಗಿರುವಲ್ಲಿ ಬ್ಯಾಂ ಕಿಂಗ್ ಕಲೆಯಲ್ಲಿ ಆಗುತ್ತಿರುವ ಬದಲಾವಣೆಯ ಅಂಶ ಗಳನ್ನು ಕುರಿತು ಆ ಕಲೆಯನ್ನರಿಯದಂತಹ ನಮ್ಮಿಂದ ನೀವು ಯಾವ ವಿಮರ್ಶೆಯನ್ನೂ ನಿರೀಕ್ಷಿಸಲಾರಿರಿ. ಆದ್ದ ರಿಂದ ಬದಲಾವಣೆಯಾಗದೆ ಏಕಪ್ರಕಾರವಾಗಿರುವ ಅಂಶ ಗಳನ್ನು ಕುರಿತು ಮಾತ್ರ ನಾವು ವಿವೇಚಿಸುವ ಪ್ರಯತ್ನ ಮಾಡುತ್ತೇನೆ.

ಯಾವುದೇ ಉದ್ಯಮದ ಆರಂಭವು ಹಣಕಾಸಿನ ನೇಲೆ ನಿಂತಿರೆಯೆಂಬುದು ಅರ್ಥಶಾಸ್ತ್ರಕಾಲದಿಂದ ಬಂ ದಿರುವ ಅಂಶವಾಗಿದೆ. ಬ್ಯಾಂಕಿಂಗ್ ವ್ಯವಹಾರವು ಹಣ ಕಾಸಿನ ಹೃದಯದಂತಿವೆ. ಬ್ಯಾಂಕಿಂಗ್ ಎಂಬ ಈ ಹೃದಯವು ವ್ಯಾಪಾರ ವಾಣಿಜ್ಯದ ರಕ್ತನಾಳಗಳಿಗೆ ರಕ್ತ ವನ್ನು ಕಳುಹಿಸುತ್ತದೆ. ಹೃದಯವು ನಿಧಾನವಾಗಿ, ಬಡಿ ಯುತ್ತಿರುವವರೆಗೆ ಶರೀರವು ಸರಿಯಾದ ಸ್ಥಿತಿಯಲ್ಲಿರು ತ್ತದೆ. ನಾಡಿಯು ಕೆಲವುವೇಳೆ ವೇಗವಾಗಿಯೂ, ಕೆಲವು ವೇಳೆ ನಿಧಾನವಾಗಿಯೂ ಬಡಿದರೆ, ಬ್ಯಾಂಕು ಷೇರು ಬೆಲೆಗಳಲ್ಲಿ ಇದ್ದಕ್ಕಿದ್ದ್ಹಾಗೆಯೇ ವಿಂಶಿತಗಳು ಕಾಣಬಂ ದರೆ ಆಗ ವೈದ್ಯರನ್ನು ಬರಮಾಡಬೇಕಾಗುತ್ತದೆ.

ಇನ್ನೊಂದು ದೃಷ್ಟಿಯಲ್ಲಿ ಬ್ಯಾಂಕುಗಳು ಸಾರ್ವಜ ನಿಕ ಜೀವನದ ಅತ್ಯವಶ್ಯಕವಾಗಿವೆ. ಬ್ಯಾಂಕರುಗಳಿಗೆ ಅನೇಕ ದೊಡ್ಡ ದೊಡ್ಡ ಪದವಿಗಳ ಜೊತೆಗೆ ಮನಶ್ಶಾಸ್ತ್ರದ ಅರಿ ವೂ ಬಹಳವಷ್ಟಿರಬೇಕಾಗಿದೆ. ಅಭಿವೃದ್ಧಿವಾದ ಉದ್ಯಮ ದಿಂದ ಭದ್ರವಾದ ಉದ್ಯಮವನ್ನವರು ತಿಳಿಯಬೇಕು. ಯಾರನ್ನು ನಂಬಬಹುದು, ಯಾರನ್ನು ನಂಬಬಾರದು ಎಂಬುದನ್ನು ಗ್ರಹಿಸುವ ಶಕ್ತಿಯಿರಬೇಕು. ಸಾಲಕೊಡು ವುದನ್ನು ಮಿತಿಯೊಳಗಿರಿಸುವುದರ ಮೂಲಕ ಎಚ್ಚರಿಕೆ ಕೊಡುವುದು ಅತನಿಗೆ ಅವಶ್ಯಕತೆಯೆಂದು ಕಂಡುಬಂದಾಗ ಸಾಲವನ್ನು ನಂಬಿ ಕೆಲಸ ಮಾಡುತ್ತಿದ್ದವರೆಲ್ಲ ತಮ್ಮ ಹೃದಯಗಳನ್ನು ಕೋಧಿಸಲು ತೊಡಗಬೇಕು.

ಈ ಎರಡು ವ್ಯಾಪಾರಗಳನ್ನು ಅರಿತಿದ್ದಾದರೆ. ನಮ್ಮ ಬ್ಯಾಂಕರುಗಳಲ್ಲಿರಬೇಕಾದ ದೊಡ್ಡ ಯೋಗ್ಯತೆಗಳೇನೆಂ ಬುದು ಸಹ ವೇದ್ಯವಾಗುತ್ತದೆ. ವ್ಯಾಪಾರ ವಾಣಿಜ್ಯ ಗಳ ಅರಿವು ಹೆಚ್ಚಾಗಿರುವುದು ಮಾತ್ರವಲ್ಲದೆ, ಸ್ಥಳೀಯ ರಾಜಕೀಯ ವಿಚಾರಗಳ ಮತ್ತು ವಿಶ್ವದ ರಾಜಕೀಯ ವಿಚಾರಗಳ ಮತ್ತು ವಿಶಾಲ ಮಾನವ ಲೋಕದ ಅರಿವು ಬಹಳ ಮಟ್ಟಿಗೆ ಇರಬೇಕು.

ಈ ಅಂಶಗಳಲ್ಲಿ ಎಷ್ಟು ಚೆನ್ನಾಗಿ ಸಂಸ್ಥಾನಕ್ಕೆ ಸೇವೆ ಸಂದಿದೆಯೆಂಬುದು ವೈಸೂರು ಬ್ಯಾಂಕಿನ ಜೀವನದಿಂದ ವ್ಯಕ್ತವಾಗುತ್ತದೆ. ಅದರ ಸ್ಥಾಪನೆಗೆ ಕಾರಣರಾದವರೂ ಮತ್ತು ಅದನ್ನು ನಡೆಸಿಕೊಂಡು ಬರುತ್ತಿರುವವರೂ ಆಪಾರಸೇವೆ ಸಲ್ಲಿಸಿದ್ದಾರೆ. ಸರ್ ಎಂ. ವಿಶ್ವೇಶ್ವರಯ್ಯ ನವರ ಸೃಷ್ಟಿಕರ್ತೃಯ ಫಲವಾಗಿ ೧೯೧೧ರಲ್ಲಿ ಜನ್ಮತಾಳಿ ಮಾಡಿದ ವೈಸೂರು ಆರ್ಥಿಕ ಸಮ್ಮೇಳನವು, ಸಂಸ್ಥಾ ನದ ವಾಣಿಜ್ಯವು ಮತ್ತು ಕೈಗಾರಿಕೆಯು ಆರೋಗ್ಯಯು ತವಾಗಿ ಅಭಿವೃದ್ಧಿಹೊಂದಲು ಸರಕಾರದ ಸಹಾಯ ಪಡೆದ ಬ್ಯಾಂಕ್ ಒಂದು ಅಗತ್ಯವೆಂಬುದನ್ನು ಮನಗಂ ಡಿತು. ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟ ವಿಶೇಷ ಸಮಿತಿಯೊಂದು ಮುಂದಿನ ವರ್ಷ ಒಂದು 'ನೋಟ್' ಸಿದ್ಧಮಾಡಿತು. ಅಂತಹ ಬ್ಯಾಂಕು ಹೆಚ್ಚು ಲಾಭವನ್ನು ಸಂಪಾದಿಸುವುದೆಂದೂ, ಬಹು ಯಶಸ್ವಿಯಾಗುವುದೆಂದೂ ಬಹಳ ನಂಬಿಕೆಯಿಂದ ಆದರಲ್ಲಿ ಭವಿಷ್ಯ ನುಡಿಯಲಾಗಿತ್ತು. ಡೈರೆಕ್ಟರುಗಳ ಬೋರ್ಡಿನ ಪ್ರಥಮ ಅಧ್ಯಕ್ಷರು ಠೇಟಿ ಶೇಟಿ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು. ಅವರು ಸಾಯುವವರೆಗೆ ಆ ಗೌರವ ಸ್ಥಾನವನ್ನಲಂಕರಿಸಿದ್ದರು. ಬ್ಯಾಂಕಿನ ಸ್ಥಾಪ ನೆಗೆ ಕಾರಣರಾದಂತಹ ಮತ್ತು ಕಳೆದ ೨೫ ವರ್ಷಗ ಳಿಂದ ಅವರ ಅಭಿವೃದ್ಧಿಗೆ ಕಾರಣರಾದಂತಹ ನಿಜವಾದ ಸಾರ್ವಜನಿಕ ಸೇವಕರು ಏಕಪ್ರಕಾರವಾಗಿ ಬ್ಯಾಂಕಿಗೆ ಲಭಿಸುತ್ತ ಹೋಗಬೇಕೆಂಬುದಕ್ಕೆಂತ ಹೆಚ್ಚಿನದನ್ನು ನಾವು ಬಯಸಲು ಸಾಧ್ಯವಿಲ್ಲ.

ಬ್ಯಾಂಕುಗಳನ್ನು ರಾಷ್ಟ್ರದ ಸ್ವತ್ತನ್ನಾಗಿ ಮಾಡ ಬೇಕೇ ಅಥವಾ ಕೂಡದೇ ಎಂಬ ಪ್ರಶ್ನೆಯು ಇತ್ತೀಚೆಗೆ ಬಹಳ ಚರ್ಚೆಗೆ ಎಡೆಗೊಟ್ಟಿದೆ. ಜಿವನ್ನು ಕುರಿತು ನಾವಿಲ್ಲಿ ವಿಮರ್ಶೆಮಾಡುವುದಿಲ್ಲ. ಇಲ್ಲಿ ನಾವು ಸಂತೋ ಷಪ್ರದವಾದ ಒಂದು ಮಧ್ಯವರ್ತಿ ಸ್ಥಿತಿಗೆ ಬಂದಿದ್ದೇವೆ. ಬ್ಯಾಂಕಿಗೂ ಮತ್ತು ಸಂಸ್ಥಾನಕ್ಕೂ ಲಾಭವನ್ನುಂಟು ಮಾಡುತ್ತ ಇದೇ ಪರಿಸ್ಥಿತಿ ಇನ್ನೂ ಬಹುಕಾಲ ಇರ ಲೆಂದು ನಾವು ಹಾರೈಸುವೆವು."

ಸೂಚನೆ.

ಶ್ರೀಮಪ್ರಂಭಾಪುರೀ ಜಗದ್ಗುರು ಪೀಠದ ಜೀರ್ಣೋ ದ್ಧಾರಕ್ಕಾಗಿ ಹಣವನ್ನು ಕೂಡಿಸಿ ಕಳುಹಿಸುವ ಗುರು ಭಕ್ತರು, ಭಕ್ತಮಾಹೇಶ್ವರರಿಂದ ಹಣವನ್ನು ವಸೂಲು ಮಾಡಿ ಒಟ್ಟು ಹಣವನ್ನು ಇನ್ನುಮುಂದೆ ಶ್ರೀಜಗದ್ಗುರು ಗಳವರ ಹೆಸರಿಗೆ ಮನಿಯಾರ್ಡರ್ ಮಾಡಿಸಬೇಕು. ಬೇರೆಯವರ ಸ್ವಾಧೀನಕ್ಕೆ ಕೊಡಬಾರದೆಂದು ಈ ಮೂಲಕ ಸೂಚಿಸಿದೆ.

ಏಜಂಟ್
ಶ್ರೀಜಗದ್ಗುರುಮಹಾಸಂಸ್ಥಾನ,
ಪೋಲಿ ಬಾಕೆಜೊಪ್ಪುರು ಪೋ| ಕೆಸೂರು

[೩ನೆಯ ಪುಟದಿಂದ ಮುಂದುವರಿದುದು]

ಗಳಿಸುವವು. ಮತ್ತು ಸಜ್ಜನಿಯು ಮಲೆದಂತಿರುವ ಈ ಜಗತ್ಸಂಬಂಧವಾದ ಹೊನ್ನುಹೆಣ್ಣುಗಳು ತಾತ್ಕಾಲಿಕೋಪಯೋಗಕ್ಕೆ ತಕ್ಕುದಾಗಿರುವವು ಇವರು ಸರ್ವವನ್ನು ಮಾಡುತ್ತಿದ್ದಾಗ್ಯೂ ಸಂಕಲ್ಪಾಭಿಮಾನವಿಲ್ಲದ್ದರಿಂದ ಬೀಜವಂಚಿತವಾದ ಪೈರಿನಂತೆ ಅವರಿಗೆ ಕರ್ತೃತ್ವವೂ ಭೋಕ್ತೃತ್ವವೂ (ಪುನರ್ಜನ್ಮ) ಇಲ್ಲ ಹೀಗೆ ಇವೆರಡೂ ಇಲ್ಲದ್ದರಿಂದ ಅಖಂಡವಾದ ಶಾಂತಿಯೊಂದೇ ಅವರಲ್ಲಿ ನಿಲ್ಲುವುದು ಆಗ ಜಲಧಾರೆಗಳಂ ಕಾಂಬಳಾಯಿ ಬುರುಡೆಯಂತೆ ಶುಷ್ಕದುಃಖಗಳು ದಶದಿಕ್ಕುಗಳಂದಲೂ ವ್ಯಾಪಿಸಿದರೂ ಬಾಧಕವಾಗುವದಿಲ್ಲವೆ

ಪ್ರ–ಮುಕ್ತಿಯು ಎಷ್ಟು ವಿಧವಾಗಿರ್ಪುದು ?

ಉ–ವಿದೇಹಮುಕ್ತಿಯೆಂತಲೂ ಸದೇಹಮುಕ್ತಿಯೆಂತಲೂ ಎರಡುವಿಧವಾಗಿರ್ಪುದು. ಇವುಗಳಲ್ಲಿ ಸತ್ಯಶೇಷವಿಲ್ಲದ ನಿರ್ಗಣಸ್ಥಿತಿಯೇ ವಿದೇಹಮುಕ್ತಿಯೆಂತಲೂ, ಸತ್ಯಾವಶೇಷವಾದ ಸ್ಥಿತಿಯೇ (ತ್ಯಾಗಸ್ವಹಣವ್ಯಾವಾಗಳಲ್ಲಿ ನಿರಪೇಕ್ಷೆ) ಸದೇಹಮುಕ್ತಿಯೆಂತಲೂ ತಿಳಿಯಬೇಕು

ಪ್ರ–ಬುದ್ಧಿವಂತ ಮತ್ತು ಮೂರ್ಖ ಇವರು ಹೇಗೆ ಕಾಲವನ್ನು ಕಳೆಯುವರು ?

ಉ–ಬುದ್ಧಿವಂತನು ಲೋಕವ್ಯವಹಾರವನ್ನು ನಡೆಯಿಸುತ್ತಾ ವೇದಶಾಸ್ತ್ರ ಮೊದಲಾದ ವಿದ್ಯೆಯಗಳಲ್ಲಿ ಕಾಲವನ್ನು ಕಳೆಯುವನು. ಮೂರ್ಖನು ಪಶುತುಲ್ಯವಾದ ಆಹಾರ, ನಿದ್ರೆ ವೈಭೋಗ ಕಾರ್ಯಗಳಲ್ಲಿಯೂ, ಧನಸಂಗ್ರಹ ಚಿಂತನೆಯಲ್ಲಿಯೂ, ಕಲಿಕಾವಲ್ಲಿಯೂ, ಮತ್ತು ಕಂಡವರ ಗುಣದೋಷಗಳನ್ನೆತ್ತಿ ಆತ್ಮನ ಕಾತುರಪಡಿಯಲ್ಲಿಯೂ ಕಾಲವನ್ನು ಕಳೆಯುವನು ನಾಚಿಕೆಲೇ! ಕಪ್ಪು, ಸುರಿ, ಪುಣ್ಣು ನೀರುಗಳೇ ಮುಪ್ಪಿನಾಗರವಿರುವ ಈ ಜಗತ್ಪಿಶಾಚಿಯಲ್ಲಿ ಹುಲ್ಲಿನಂತೆ ಕುರಿದಾದ ವಿನಾಶಾತ್ಮಜ್ಞಾನಿಯಾದ ಮಾನವನು ಜೀವಿಸುವ ವ್ಯರ್ಥವು ಮತ್ತು ಯಾವನು ಬಾಹ್ಯ ವಿಷಯವೆನ್ನುವದನ್ನು ಕುರಿಗ್ರಹಿಸದಿರುವನೋ ಅವನಿಂದ ಜ್ಞಾನವಾತ್ಮವೀದ ಪರಮಾತ್ಮಶಬ್ದವು ಕಯೆಯಲ್ಪಡುವದು ಆದರೆ, ಅವಿದ್ಯಾತ್ಮಕವಾದ ದೃಶ್ಯಗಳಿಂದ ಜಜ್ಞಾನವಾದ ಪರಿಣಾಮವನ್ನೆ ಉತ್ಪತ್ತಿಯಿಂದ ಪ್ರೌಢಿಮವನ್ನು ಸಾಮಾನ್ಯವಾದವನೆ ಸಿದ್ಧವಾಗಿರುವ ಕಾರಣದಿಂದ ಈ ಅಂಶವನ್ನಾಶ್ರಯಿಸಿ ಪದವಿಯನ್ನು ವಿಚಾರವಾದ ಸಂಸಾರವನ್ನು ಹೊಂದುವನು.

ಪ್ರ–ಪಾರಮಾರ್ಥಿಕರಿಗೂ ವ್ಯವಹಾರಿಕರಿಗೂ ತಾರತಮ್ಯವೇನು ?

ಉ–ಪಾರಮಾರ್ಥಿಕರಿಗೆ ಇಷ್ಟವಾದದ್ದು ವ್ಯವಹಾರಿಕರಿಗೆ ಅನಿಷ್ಟವಾಗಿಯೂ, ವ್ಯವಹಾರಿಕರಿಗಿಷ್ಟವಾದದ್ದು ಪಾರಮಾರ್ಥಿಕರಿಗನಿಷ್ಟವಾಗಿಯೂ ಇರುವದು.

ಪ್ರ–ಸಂಸಾರಸಮುದ್ರವನ್ನು ದಾಟಲಿಚ್ಛಿಸುಳ್ಳವನಿಗೆ ಆಧಾರವಾವುದು ?

ಉ–ಸ್ವಸ್ವರೂಪಜ್ಞಾನಸಾಧ್ಯವಾದ ವಿಚಾರವೇ ಆಧಾರವಲ್ಲದೆ ಮತ್ತೊಂದಿಲ್ಲವು ಆದರೆ, ಅದೃಷ್ಟವಾಗಲೀ ಧನವಾಗಲಿ, ಕರ್ಮವಾಗಲಿ, ಬಂಧುಬಳಗವಾಗಲಿ ಯಾವುದೂ ಗತಿಯಾಗಲಾರದು. ಆದ್ದರಿಂದ ಅಜ್ಞಾನಸಿದ್ಧವಾದ ಜಡಾತ್ಮಭಾವವನ್ನು ಬಿಟ್ಟು ವಿಚಾರ ಬಲದಿಂದ ಪೂರ್ಣಭಾವವನ್ನು ಹೊಂದಿ ಸಮಭಾವದಿಂದ ಹೇಯೋಪಾಧೇಯ ಭಾವನೆಯಿಲ್ಲದೆ ಕನ್ನಡಿಯಂತೆ ಬಂದದ್ದೆಲ್ಲವನ್ನು ಗ್ರಹಿಸುತ್ತ ಅವರ ಆಹಾರಾಲಂಭಗಳಲ್ಲಿ ಹರ್ಷಾವರ್ಷಗಳಿಗೊಳಗಾಗದೆ ಇಷ್ಟಾರ್ಥವನ್ನು ಸಾಧಿಸುವದೇ ಧೀರುಷನ ಕರ್ತವ್ಯವು.

ಪ್ರ–ಚಿಂತಾಮಣಿ ಯಾವದು ?

ಉ–ಪ್ರಜ್ಞೆಯು ಭೋಗಭಾಗ್ಯಾರ್ಥದಂತೆ ಇದು ಬೆಳೆಯುಸಲ್ಪಟ್ಟಿರಲಿ, ಸರ್ವದುಃಖಗಳಿಗೆ ಮುಕ್ತಿಯಾಗಿಯೂ, ಆಪತ್ತುಗಳಿಗೆ ಬೊಕ್ಕಸವಾಗಿಯೂ, ಸಂಸಾರವೃಕ್ಷಕ್ಕೆ ಮೂಲವಾಗಿಯೂ ಇರುವ ಅಜ್ಞಾನವನ್ನು ಹೋಗಲಾಡಿಸುವದು ವಜ್ರಕವಚಧಾರಿಯಂ ಬಾಣಗಳಂತೆ ಪ್ರಜ್ಞಾಶಾಲಿಯನ್ನು ಆಶಾಪಿಶಾಚಿಗಳು ಭೇದಿಸಲಾರವು. ಮೋಹನಿಗೆ ಆಪತ್ತುಗಳಂತೆ ಜ್ಞಾನಿಗೆ ಸಂಪತ್ತೇ ಇರುವದು ಅಲ್ಲದೆ ಪ್ರಜ್ಞೆಯಿದ್ದವನು ಭೂಮಿಯಲ್ಲಿದ್ದವನಂತೆ ಸಮಸ್ತಫಲವನ್ನು ಪಡೆಯುವನು. ಆದರೆ, ಅಖಂಡಜ್ಞಾನಿಗೆ ಅಹಂಕಾರಾವರಣವಿಲ್ಲದ್ದರಿಂದ ಸಂಪದ್ವಿಪತ್ತುಗಳೆರಡೂ ಬರಲಾರವು.

ಪ್ರ–ಶಾಸ್ತ್ರವು ಏಕೆ ಹುಟ್ಟಿರುವದು ?

ಉ–ಅಗ್ನಿಮಾಂದ್ಯದಿಂ ರೋಗವುಂಟಾಗಿರುವಲ್ಲಿ ಪಥ್ಯಾಮಯಂತೆ ಜ್ಞಾನೋದಯಕ್ಕಾಗಿ ಹುಟ್ಟಿರುವದು ಆದರೆ ಜಠರಾಗ್ನಿಯ ಮಾಂದ್ಯವು ನೀಗಿ ರೋಗನಿವಾರಣೆಯಾದಮೇಲೆ ಏನುತಿಂದರೂ ಬಾಧೇವಾಗದಿರುವಂತೆ ಅಶಾಸ್ತ್ರಾಚಾರತ್ಯಾಮದಿಂದ ಮತಿಗೆ ನೋಹತಪ್ತಿ ಅಖಂಡಭಾವದಿಂ ಇದು ಗ್ರಾಹ್ಯ, ಇದು ತ್ಯಾಜ್ಯವೆಂಬ ಲೋಕಾಭಿಮಾನವು ಅಳಿಯಲು ಯಾವುದನ್ನು ಹೇಗೆ ಮಾಡಿದರೂ ಬಾಧಕವಿರುವದಿಲ್ಲ

ಪ್ರ–ವಿಶ್ವಾತೀತವಾದ ಪರಬ್ರಹ್ಮನಲ್ಲಿ ವಿಶ್ವವು ಹೇಗೆ ಇರುವದು ?

ಉ–ವಾಯುಸಂಚಾರವಿಲ್ಲದ ಕಾಲದಲ್ಲಿ ನಿಶ್ಚಲವಾದ ಸಮುದ್ರದಲ್ಲಿ ಭವಿಷ್ಯತ್ತರಂಗಗಳಂತೆಯೂ, ಬೀಜದಲ್ಲಿ ವೃಕ್ಷದಂತೆಯೂ, ಕಟ್ಟಿಗೆಯಲ್ಲಿ ಬೆಂಕಿಯಂತೆಯೂ. ದೀಪದಲ್ಲಿ ಬೆಳಕಿನಂತೆಯೂ, ಮಣ್ಣಿನಲ್ಲಿ ಗಡಿಗೆಗಳಂತೆಯೂ, ಚಿನ್ನದಲ್ಲಿ ಒಡವೆಗಳಂತೆಯೂ ಪರಮಾತ್ಮನಲ್ಲಿ ಜಗವಿರ್ಪುದು.

ಪ್ರ–ಜ್ಞಾನಿಗಳ (ಮಹಾತ್ಮರ) ನಡೆನುಡಿಗಳಲ್ಲಿ ಗ್ರಾಹ್ಯ ಮತ್ತು ತ್ಯಾಜ್ಯಗಳಾವುವು ?

ಉ–ತೆಂಗಿನಮರವು ಉತ್ತಮವಾಗಿದ್ದರೂ ಅದರ ಫಲವು ಮಾತ್ರ ಗ್ರಾಹ್ಯವಾಗಿ ಆ ವೃಕ್ಷದ ನೀರು ತ್ಯಾಜ್ಯವಾಗುವಂತೆ, ಮಹಾತ್ಮರ ವಚನವೇ ಗ್ರಾಹ್ಯವಾಗಿಯೂ, ಅಚರಣೆಯು ತ್ಯಾಜ್ಯವಾಗಿಯೂ ಇರುವದು. ವಿಕೇದರೆ–ಜ್ಞಾನಿಯ ಮನಕ್ಕೆ ಬ್ರಹ್ಮಾವಲಂಬನದಿಂದ ಸಂಕಲ್ಪಾತ್ಮಕಸ್ವರೂಪವು ನಾಶವಾಗಿರುವುದರಿಂದ ಅವನ ಮನವು ಅಧಿನವಾಗಿರ್ಪುದು. ಪ್ರಾಯಶಃ ಅದು ಕಲ್ಪನೆಯಂ ಮಾಡಿದಾಗ್ಯೂ ಜ್ಞಾನಿಯು ಆ ಕಲ್ಪಿತ ವಸ್ತುಗಳಲ್ಲಿ ಬಾಲನಂತೆ ಅಭಿಮಾನಪಡಲಾರನು ಆದರೆ, ಹೇಯೋಪಾಧೇಯಜ್ಞಾನವಿಲ್ಲದ್ದರಿಂದ ಕೆಸರಿನಲ್ಲಿ ಆಗುವ ಬಾಲನಂತೆ ಜ್ಞಾನಿಯು ನೀಚಕಾರ್ಯಗಳನ್ನು ಮಾಡುತ್ತಿದ್ದರೂ ಸಂತುಷ್ಟನಾಗಿಯೇ ಇರುವನು ಅವನ ವ್ಯವಹಾರದಲ್ಲಿ ನೀಚೋತ್ತಮಭಾವಗಳು ಪರದೃಷ್ಟಿಯಿಂದ ಸಿದ್ಧವಾಗುವದಲ್ಲದೆ ಆ ಮಹಾತ್ಮನ ದೃಷ್ಟಿಯಿಂದ ಸಿದ್ಧವಾಗುವುದಿಲ್ಲ ಆದ ಕ್ರಯುಕ್ತ ಸಾಧಕನು ಶಾಸ್ತ್ರೀಯವಾದ ಆಚಾರದಲ್ಲೇ ಅವರ ನಡತೆಯಂ ಪರಿಗ್ರಹಿಸಬೇಕು

ಓ ಪರಾಶರಋಷೀ! ಮಹಾತ್ಮರಿಗೆ ದೇಹ-ದೇಹಿ ಭಾವವೇ ಇರುವುದಿಲ್ಲ. ಅವರು ಎಷ್ಟೇದಿವಸ ನಿರಾಹಾರಿಗಳಾಗಿ, ವಾಯು, ಜಲ, ಎಲೆಗಳ ಸೇವನೆಯಿಂದ ಇರಬಲ್ಲರು. ಎಷ್ಟೋದಿವಸ ಏಕಾಕಾತದಲ್ಲಿ ಮೌನದಿಂದ ಇರಬಲ್ಲರು. ಗುಂಡಿನಿಂದ ಹೊಡೆಯಲಿಕ್ಕೆ ಬಂದರೂ ಸ್ವಲ್ಪವೂ ಚಿಂತಿಸದೆ ಧೈರ್ಯದಿಂದ ಎದುರಿಸಬಲ್ಲರು. ಶತ್ರುಮಾರ್ಗದಲ್ಲಿ ಸುಂದಿಟ್ಟು ಕೆಜ್ಜೆಯನ್ನು ಹಿಂತೆಗೆಯಲಾರರು. ಮತ್ತು ತಮ್ಮ ಆತ್ಮಶಕ್ತಿಯ ತೇಜಸ್ಸಿನ ಒಲದಿಂದ ಎಂತಹ ಮಹತ್ಕಾರ್ಯವನ್ನಾದರೂ ಲೀಲಾಜಾಲವಾಗಿ ಸಾಧಿಸುವರು. ಆದರೆ ಹೊಟ್ಟೆಬಾಕರೂ, ಚಂಚಲಚಿತ್ತರೂ, ಅಂಜುಬುರುಕರೂ, ಜೀವಗಳೃರೂ ಆದ ನಾವುಗಳು ಅವರ ಅಚಂನೆಯನ್ನು ಅನುಸರಿಸಲಾದೀತೆ! ಆದ್ದರಿಂದ ಆ ಜ್ಞಾನಿಗಳ ವಾಕ್ಯವೇ ನಮಗೆ ಶಿರಸಾ ಮಾನ್ಯವಾಗಿರುವದು ಆದರೆ ಪ್ರಪಂಚದಲ್ಲಿ ಬಾಲಬಾಲಿಕೆಯರು, ಸಹೋದರಿಗಳ ಪ್ರೇಮವನ್ನರಿಯದಂತೆ, ಜ್ಞಾನವಹೀನರು ಮಹಾಪುರುಷರ ಅದ್ಭುತ ಶಕ್ತಿಸಾಮರ್ಥ್ಯವನ್ನರಿಯರು

ಪ್ರ–ಅವಿದ್ಯೆಯಂ ಭೇದಿಸುವುದಾವುದು ?

ಉ–ಶಸ್ತ್ರದಿಂ ಶಸ್ತ್ರವು, ವಜ್ರದಿಂ ವಜ್ರವು, ವಿಷದಿಂ ವಿಷವು, ಕಳ್ಳನಿಂ ಕಳ್ಳನು, ತುಂಟನಿಂ ತುಂಟನು, ಕುಟಿಲನಿಂ ಕುಟಿಲನು, ಕಾಮಿಯಿಂ ಕಾಮಿನಿಯು ಭೇದಿಸಲ್ಪಡುವಂತೆ ಅವಿದ್ಯೆಯು ಅವಿದ್ಯೆಯಿಂದಲೇ ಭೇದಿಸಲ್ಪಡುವದು. ಅಂದರೆ, ಅವಿದ್ಯೆಯ ಸ್ವರೂಪವನ್ನು ವಿಮರ್ಶಿಸಬೇಕು. ಈ ಸಾಧನೆಯಿಂದ ನಿರ್ವಿಕಲ್ಪ ಚಿದಾನಂದಸ್ವರೂಪನೂ, ವಾಙ್ಮನಸ್ಸುಗಳಿಗೆ ಗೋಚರನೂ ಅತೀಂದ್ರಿಯನೂ ಆದ ಪರತಿವನು ಪ್ರಾಪ್ತವಾಗುವನು.

ಪ್ರ–ತತ್ವಸಾರವು ಯಾವಾಗ ತಿಳಿಯುವದು ?

ಉ–ಜ್ಞಾನದೃಷ್ಟಿಯುದಯಿಸಿ ತತ್ಪಾರ್ಥವು ಅನುಭವಕ್ಕೆ ಬಂದಾಗ.

ಪ್ರ–ಉಪದೇಶವೇದಕೆನು ?

ಉ–ತಿಳಿಯದುದಂ ತಿಳಿಸುವದು, ಅಂದರೆ ತಾನಾರು ಎಂಬುದನ್ನು ಮನನಮಾಡಿಕೊಡುವದು.

ಪ್ರ–ಆತಿಮಾಧನಿಗೂ ಜೀವನ್ಮುಕ್ತನಿಗೂ ಭೇದವೇನು ?

ಉ–ಅಜ್ಞಾನ ಪರಮಾರ್ಥಜ್ಞಾನಗಳಿಂದ ಸುಖದುಃಖಗಳಂ ನಿರಂತರವಾಗಿ ಅನುಭವಿಸುವದೇ ಭೇದವಲ್ಲದೆ ಮತ್ತೊಂದಿಲ್ಲ. ಆದರೆ ರಜ್ಜುಸರ್ಪನ್ಯಾಯದಿಂದ ಅನಿತ್ಯವಾದುದನ್ನು "ತಾನು ತನ್ನದೆಂದು" ಅಭಿಮಾನವಂ ಹಿಡಿಯುವದು ಮನುಷ್ಯರಿಗೆ ಅತಿಮೌಢ್ಯವೆನಿಸುವದು.

ಮಲೆಜ್ವರಕ್ಕೆ ಮಲೇರಿಯಾನ

ಇದು ಮಲೆಜ್ವರ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ೩ ನೆ ದಿವಸಕ್ಕೊಮ್ಮೆ ಬರುವಜ್ವರ, ಕ್ವೀನೀನ್‌ನಿಂದಲೂ ಇಂಜಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ಗೆದ್ದೆ ಸಮೇತ ಸಂಪೂರ್ಣ ಗುಣಪಡಿಸುತ್ತದೆ. 4 ಔನ್ಸ್ ಸೀಸೆಗೆ ಆಣೆ 0-14-0, 8 ಔನ್ಸ್ ಸೀಸೆಗೆ ರೂ. 1-8-0, ಡಜನಿಗೆ ರೂ 9-12-0, ರೂ 16 8-0.

ಕಂಪೌಂಡ್ ಸಿರಪ್ ಸಾಲಸವನ—ಸ್ವಸ್ಥೇಂದ್ರಿಯ ಸ್ವಲನ, ಶೀಘ್ರಸ್ಖಲನ, ಧಾತುಕಳಕೊಳ್ಳುವದು, ಮೂತ್ರದೋಷ ನಪ್ಪವಾಗುವದು, ವೀರ್ಯಕ್ಷಯ, ತೆಳ್ಳಗಾವಧಾತು, ಇನ್ನಿಲ್ಲದ ಬಾಧೆಯನ್ನು ತೆತ್ತು ಬಿಸಾಡುತಿದ್ದಲ್ಲವೆ ಧಾತುಪುಷ್ಟಿಕ ರಸಾಯನವಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0.

ಪ್ರಖ್ಯಾತಿಪಟ್ಟ ನರ್ವ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು—ಸಲಬತರದ ಹೊಟ್ಟೆಹುಳುಗಳನ್ನು ನಾಶಪಡಿಸಿ ಜಾಡಿಸುವ ದರಲ್ಲಿ ಪುಟ್ಟಿ ಪಿಪಧಿ. ಡಜನ್ ಆ. 0-5 0 100 ಕ್ಕೆ ರೂ. 2-0-0.

ರಿಂಗ್ ವರ್ಮ್ ಬಾಮು—ಕರಿಣಕರವಾದ ಹುಳ ಪೇಯುವುದು, ಗಜಕರ್ಣ, ಹುಳಕಡ್ಡಿಗೂ ಉತ್ತಮ. ಆಣೆ 5.

ಕುದ್ಮ ಟಿಕ್ಕು, ಹೊಮ್ಮೊಪಡಿ ಪಿಪಧಿಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.—ಧರ್ಮಾರ್ಥ.

ಕಂಪೌಂಡ್ ಸಿರಪ್ ಬ್ಲಾಟಿ—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇವಸ, ಖಾಸವನ್ನು ಪಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ. 3.8-0, ಸಣ್ಣದು ರೂ. 1-14-0.

ಬೇದಿ ಟೋರ್—ಜಾಲ್ಯಾಯದಲ್ಲಿ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ತಾಮರಿಗ್ರಹಣ ರೋಗದಿಂದ ಮಾಂಸ ಹೋಲುದಿದ್ದು, ಮೈ, ಕೈ, ಕಾಲು ಹೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧೆಅಮೃತ 1-4-0

ಆಯರ್ ಒಯಿಲ್—ತಿವಿ ಸೋರುವದು, ವ ನೋವು ತಿಪ್ಪುದು ಇವುಗಳ ಮೇಲೆ ಉತ್ತಮ. ಸೀಸೆಗೆ ಆಣೆ 0-8-0.

ಡಿಸೆಂಟರಿ ಕ್ಯೂರ್—ಉಸ್ಣ ಹೊರಕಡೆಗೆ ಸಿಪ್ಪಾಷಧಿ ಸೀಸೆಗೆ ರೂ. 1-0 0.

ಮಲೇರಿಯಾ ಕ್ಯೂರ್—ಅಜೀರ್ಣದ ಹೊರಕಡೆಗೆ ಸೀಸೆಗೆ ರೂ. 1-0-0

ಕಂಪೌಂಡ್ ಸಿರಪ್ ನೆಪಿಫೂಜ—ಪ್ರಮೇಹ ಮೂತ್ರ ದ್ವಾರದಿಂದ ಕೀವು, ಮೂತ್ರಹೊಯ್ಯುವಾಗ ತರೆಯಲಾರದೆ, ಕರಿದು ಉರಿ, ಮೂತ್ರವೃಚ್ಛ್ರ, ಮೂತ್ರ ಆನಾಗ್ಗೆ ಬಂದು ತರೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ಇನೇ ಮೊದಲಾದ ಪ್ರಮೇಹದ ಲಕ್ಷಣಗಳು ಬಾಧವನ್ನು ಕೆಲವು ತಾಸುಗಳಲ್ಲಿಯೇ ರಾಮಬಾಣದಂತೆ ನಿಲ್ಲಿಸುವನು. ಸೀಸೆಗೆ ರೂ. 3-8-0. ರೂ. 1-14 0.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುಪರಂಪರೆಯ ಮತಸ್ಥ ಸಾಧಾರಣ ಶಿಷ್ಯರ ಮನೆಗಳಿರುತ್ತಿದ್ದು, ಆ ಮತಾಧಿಕಾರಿಗಳು ಪ್ರತಿವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳುವ ಕಾಣಿಕೆಮನ್ನು ಮಾತ್ರ ತೆಗೆದುಕೊಂಡು ಬೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮತದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಪರಿಹಾರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ರೀತಿಯಾಗಿ ಮುದ್ರಿಸಿಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಹೀಗಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುಪರಂಪರದವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ಮತಸಾರಾಂಶವಾಗಿ ತಮ್ಮ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಯಾವ ಕೆಡೆಯೂ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗಿರುವ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧ ಹೆಸರು	ಪೋಟ	ಮತ್ತು
ಸರ್ವಜ್ವರಕಾಲಧ್ವಜ	೧	೩೦—೦—೦
ಸರ್ವಜ್ವರಾಂಬೋದಯ	೧	೧೦—೦—೦
,, ತಿನೇ ಸಂಬರ್	೧	೬—೦—೦
ರಸಸಿಂಧೂರ	೧	೩—೦—೦
ಸರ್ವಜ್ವರಸಿಂಧೂರ	೧	೪—೦—೦
ಶ್ವಾಸಸಿಂಧೂರ	೧	೪—೦—೦
ಕಾಸಸಿಂಧೂರ	೧	೪—೦—೦
ಸರ್ವಾಂಗ	೧	೩—೦—೦
ತಿವಂಗ	೧	೧—೦—೦
ಭಸ್ಮಗಳು.		
ಸರ್ವಭಸ್ಮ	೧	೪೦—೦—೦
ರುದ್ರಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೩—೦
ನಾಗಭಸ್ಮ	೧	೦—೮—೦
ಸಂಗಭಸ್ಮ	೧	೦—೮—೦
ಮಿಶ್ರಾಳಿಭಸ್ಮ	೧	೦—೮—೦
ಕಚಿನಭಸ್ಮ	೧	೦—೮—೦
ಮಸ್ತಭಸ್ಮ	೧	೦—೮—೦
ಪಂಡೂರಭಸ್ಮ	೧	೦—೮—೦
ಸರ್ವಾಮಪ್ಲೀಹಭಸ್ಮ	೧	೦—೧೩—೦
ಅಮೃತಭಸ್ಮ	೧	೩—೦—೦
ಸಂಶಾಮ್ರಭಸ್ಮ	೧	೪೦—೦—೦
ಪವಾಲಭಸ್ಮ	೧	೦—೮—೦
ಕಪಚಿಪ್ಪಿನ ಬಸ್ಮ	೧	೦—೮—೦
ಸಂಖದ ಕೋಡಿನ ಬಸ್ಮ	೧	೦—೮—೦
ಗಗನದಂತಿಹರಿತಾಲಭಸ್ಮ	೧	೦—೮—೦
ಕಪ್ಪೂರಿ (ಗಿನೇ ಸಂಬರ್)	೧	೫೦—೦—೦
ತಿಕಾಚಿತ ಸೂರ್ಯವುಟಿ	೧	೧—೦—೦
ತಿಕಾಚಿತ ಅಗ್ನಿವುಟಿ	೧	೦—೮—೦

ಸೂಚ—ಈ ಔಷಧಾಲಯದಲ್ಲಿ ಸರ್ವಪ್ರಕಾರವಾದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲೆ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ತೀರ್ಥಾತೀರ್ಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸದೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಲ್ಲೆ ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಿಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯನಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೫ ಆಣೆ.** ವಿ. ಪಿ. ಚಾರ್ಜ್ ಪ್ರತ್ಯೇಕ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೆ ಪ್ರಕಾಶಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಶಕ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಲ್ಲಿ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೫೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡಿತಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಧವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇವರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧೫ ೦—೪—೦

ಶ್ರೀ ರೇಣುಕಾದಿ ಪಂಚಾಚಾರ್ಯರು ರೋಗನಿವಾರಕರಾದ ಅಗಸ್ತ್ಯ, ಧನ್ವಂತರಿ, ಸ್ಕಾಂದ, ಹನುಮಂತ, ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ .... ೦—೧—೬

ಸಪ್ತ ಪೀಠಾರೋಹಣಮಾಡಿರುವ ಐದು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೫ .... ೦—೦—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧೫ .... ೦—೦—೪

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೪

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೪

ಶ್ರೀ ರೇಣುಕಾಚಾರ್ಯರು ವಿಧ್ಯುಕ್ತವಾಗಿ ಸಾರ್ವಭೌಮರಾಗಿ ವಿಳಕಾಲವಲ್ಲಿಯೇ ಮೂರುಳೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೫ .... ೦—೦—೪

ಶ್ರೀ ರೇಣುಕಾಚಾರ್ಯರು ಶ್ರೀ ಕಂಚಿವಾಚಾರ್ಯರಿಗೆ ಚಿಂತ್ಯಮಣಿಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೪

ಶ್ರೀಮಜ್ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ .... ೦—೦—೪

ಶ್ರೀ ಶಾಂತ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ .... ೦—೦—೪

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೦—೪

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೦—೪

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೮—೪

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೫ .... ೦—೦—೪

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾವೈಭವದ ಅತ್ಯಂತ ಸುಂದರವಾದ ಫೋಟೋ ೧೫ .... ೦—೦—೪

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೫ .... ೦—೦—೪

ಶ್ರೀ ಜಗದ್ಗುರು ಕೇದಾರಪೀಠಾಸೀನರಾದ ಅತ್ಯಂತ ಸುಂದರವಾದ ನೋಟದ ಫೋಟೋ .... ೦—೦—೪

ಸಮಸ್ತ ವರ್ಣದ ಮಧ್ಯದಲ್ಲಿ ಕೋಟಿಸೂರ್ಯ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .... ೦—೦—೪

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮದ್ವೀರಾಗಾರಾಧನೆಯರು ವಿರಾಜಿಸುತ್ತಿರುವ ಫೋಟೋ .... ೦—೦—೪

ಬೆಂಗಳೂರು ಕಂಟೋನ್ಮೆಂಟ್‌ನಲ್ಲಿರುವ ಸೇವಕರಾದ ರಂಭಾಪುರೀ ಜಗದ್ಗುರುಗಳ ಅದ್ಧೂರಿಯ ಪಟ್ಟಾಭಿಷೇಕ ಮಹೋತ್ಸವದ ಫೋಟೋ ೦—೦—೪

ಸೂಚನೆ—ಮೂರು ಫೋಟೋಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ರೋಗಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಪುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯ ಭಾರಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಪಥವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ಲ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[33] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಹ ಇನೆಯ ಆವೃತ್ತಿ)	....	....	೧ ಆಣೆ
ಸನ್ಯಾಸಾಶ್ರಮವಿಮರ್ಶನೆಯ ಆವೃತ್ತಿ ಸಂಸ್ಕೃತ)	....	....	೧ ಆಣೆ
ಪಂಚವಿಂಶತಿ ಪ್ರಶ್ನವ್ಯಾಕರಣ (೩ನೆಯ ಆವೃತ್ತಿ)	....	....	೧ ಆಣೆ
ಶ್ರೀಪಂಚಾಚಾರ್ಯ ಗುರುಲಿಂಗಸ್ತೋತ್ರಾವಲಿ (೮ನೆಯ ಆವೃತ್ತಿ)	....	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	....	....	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	....	....	೨ ಆಣೆ
ಬಸವಾದಿಶಿವಶರಣರ ವಚನಗಳು (೮ನೆಯ ಆವೃತ್ತಿ)	....	....	೨ ಆಣೆ
ಶ್ರೀರೇಣುಕಾಚಾರ್ಯರಚಿತಕ್ಷ (೩ನೆಯ ಆವೃತ್ತಿ)	....	....	೨ ಆಣೆ
ಪಂಚಾಚಾರ್ಯಪ್ರಭಾಕರ	....	....	೨ ಆಣೆ
ಶ್ರೀಗುರುತತ್ತ್ವಪದಗಳು	....	....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯರಚಿತಕ	....	....	೨ ಆಣೆ
ವೀರಶೈವಮತಪುರಾತನಾಮಾವಳಿ	....	....	೩ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	....	....	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	..	....	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	....	೪ ಆಣೆ
ಸನ್ಯಾಸಾಶ್ರಮಸಮರ್ಥನತತ್ತ್ವನಿರೀಕರಣ (೩ನೆಯ ಆವೃತ್ತಿ)	..	....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	.	....	೬ ಆಣೆ
ವೀರಶೈವಮಹಾತ್ಮರು	....	....	೮ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	..	....	೮ ಆಣೆ
ಸದ್ಯೋಧರತ್ನಾವಳಿ	....	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)			೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರೂಪಸಂಸ್ಕೃತವಾದ ಅತ್ಯಂತ ಸುಂದರಮುದ್ರಣ)			೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....	....	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	....	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	....	....	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	....	....	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	....	....	೧ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	...	....	೧ ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)		....	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	....	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)		....	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	....	೨ ರೂ.
ವೀರಶೈವಸಿದ್ಧಾಂತಸುಧಾಕರ	..	....	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)		....	೪ ರೂ.
A brief life sketch of Pandit Sri Kashinatha Shastriji (*English*)			4 As.
Shakti-Vishistadvaita *or* **The Philosophical Aspect of Virasaivism** (*English*)		....	8 As.
Speeches by Pandit Shri Kashinatha Shastri (*English*)			12 As.
ವೀರಶೈವರತ್ನ (ಮರಾಠಿ)	...	...	೧ ರೂ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)			೧ ರೂ.
ವೀರಶೈವೇಷ್ಟಲೇಶ್ವರ (ಸಂಸ್ಕೃತ)	...	...	೧ ರೂ.
ಸಂವಿಧೇಶ್ವರಕಾರಿಕಾ (ಸಂಸ್ಕೃತ)	...	...	೨ ಆಣೆ.
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದಿ)	...	...	೨ ಆಣೆ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	...	...	೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನ ಮಹಾವಿದ್ವಾನ್ ನೇ ಶಿವಸಿ ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕನುಂ ॥

ಸಂಪಾದಕರು—ಆಸ್ಥಾನ ಮಹಾವಿದ್ವಾನ್ ವೇ॥ ತರಸಿ ಗುರುತಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೨ನೇ ಡಿಸೆಂಬರ್ ೧೯೩೬ ; ಸಂಚಿಕೆ ೩೨

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ.

ಶ್ರೀಕರಭಾಷ್ಯವನ್ನು ರಚಿಸಿರುವ ಶ್ರೀಪತಿಪಂಡಿತಾರಾಧ್ಯರು ಕ್ರಿ. ಶ. ೧೧ನೆಯ ಶತಮಾನದಲ್ಲಿದ್ದರೆಂಬ ವಿಷಯವು ಅನೇಕ ಪ್ರಾಚೀನಗ್ರಂಥಗಳಿಂದಲೂ, ಶಿಲಾಶಾಸನಾದಿಗಳಿಂದಲೂ ಸಿದ್ಧವಾದುದಾಗಿದೆ. ಹೀಗಿದ್ದರೂ ಬೆಂಗಳೂರು ನಗರನಿವಾಸಿಗಳಾದ ರಾವ್‌ಸಾಹೇಬ ಸಿ. ಹಯವದನರಾಯರೆಂಬವರು ಈ ಭಾಷ್ಯದ ಮೇಲೆ ಇಂಗ್ಲೀಷಿನಲ್ಲಿ ಬರೆದಿರುವ ಇಂಟ್ರೊಡಕ್ಷನ್ನಿನಲ್ಲಿ ಇವರು ೧೪ನೆಯ ಶತಮಾನದಲ್ಲಿದ್ದರೆಂದು ಬರೆದು ಜಗತ್ತಿನ ಜನರಿಗೆಲ್ಲಾ ಮಹಾ ಭ್ರಮೆಯನ್ನುಂಟುಮಾಡಿದ್ದಾರೆ. ರಾಯರು ಬರೆದಿರುವ ಈ ವಿಧವಾದ ಅಯಥಾರ್ಥಾಭಿಪ್ರಾಯವನ್ನು ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಅನೇಕಾನೇಕಪ್ರಮಾಣಗಳಿಂದ ಆನೂಲಾಗ್ರವಾಗಿ ಖಂಡಿಸಿ, ವೀರಶೈವಮತಕ್ಕೂ ಶ್ರೀಕರಭಾಷ್ಯಕ್ಕೂ ಅಸಾಧಾರಣವಾದ ಗೌರವವನ್ನುಂಟುಮಾಡಿದ ವಿಷಯವು ಈ ಪುಸ್ತಕದಲ್ಲಿ ಉಕ್ತವಾಗಿದೆ.

ಬೆಲೆ ೪ ಆಣೆ

ಸದ್ಬೋಧರತ್ನಾವಳಿ.

ಈ ಗ್ರಂಥವನ್ನು ತಿಪಟೂರು ನಿವಾಸಿಗಳಾದ ವೇ॥ ಆರ್. ಎಂ. ಮಲ್ಲಿಕಾರ್ಜುನಾರಾಧ್ಯರು ಮುದೇನೂರು ಮಠೇಮಠ, ಇವರು ರಚಿಸಿರುವರು. ಇದರಲ್ಲಿ ಅನೇಕ ನೈತಿಕ-ಧಾರ್ಮಿಕ-ಪಾರಮಾರ್ಥಿಕ ವಿಷಯಗಳು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿರುವವು ಗ್ರಂಥವು ಬಹಳ ಸರಳಭಾಷೆಯಲ್ಲಿ ಬರೆಯಲ್ಪಟ್ಟಿರುವುದರಿಂದ ಪ್ರತಿಯೊಬ್ಬರಿಂದಲೂ ಸಂಗ್ರಹಿಸಲು ಯೋಗ್ಯವಾಗಿದೆ. ಪುಟಗಳು 176. **ಬೆಲೆ 8 ಆಣೆ ಮಾತ್ರ.**

A BRIEF LIFE-SKETCH OF PANDIT SRI KASHINATHA SHASTRIJI

This Book printed in English contains a brief life sketch of Pandit Sri Kashinatha Shastriji. It shows the very many good and memorable deeds done by Sastriji up till now. **Price per Copy 4 Annas.**

SHAKTI-VISHISTADVAITA
OR
THE PHILOSOPHICAL ASPECT OF VEERASAIVISM.

This book is the English translation of the lecture on Shakti-vishistadvaita Sidhanta delivered before the Philosophical Congress of 1935 at Mysore by Pandit Kashinatha Shastry.

The whole of Veerasaiva-philosophy is briefly explained in this book. No other book containing so much information about Veerasaiva philosophy had ever been published.

It is essential that every one who wants to know the secret of Veerasaiva philosophy must order for a copy of this valuable book. **Price 8 Annas.**

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸ್ವೀಕಾರ

ಧಾರವಾಡ ಡಿ॥ ಗದಗ ಬೆಟಗೇರಿ ನಿವಾಸಿಗಳಾದ ಮಃ॥ ರಾ॥ ಬೀಳೇರಿ ದೊಡ್ಡನಾಗಪ್ಪನವರ ಪುತ್ರ ಚಿ॥ ಮಲ್ಲಪ್ಪನಿಗೆ ಮಃ॥ ರಾ॥ ನಾಗಲಾಪುರದ ಕರೆಗೌಡರ ಕಟ್ಟಿ ಬಸವನಗೌಡರ ಪುತ್ರಿ ಚಿ॥ಸೌ॥ ಹಾಲಕುಲಿ ಶೋ॥ ನಾಗವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಥಾಪೋಷಣಕ್ಕೋಸ್ಕರ ವರನ ಕಡೆಯಿಂದ ತೆಗೆಯಿಸಿದ 2 ರೂ. ಗಳು, ವಧುವಿನಕಡೆಯಿಂದ ತೆಗೆಯಿಸಿದ 1 ರೂ. ಒಟ್ಟು 3 ರೂ. ಗಳು ಮಃ॥ ರಾ॥ ಬೀಳೇರಿ ಸಂಗನಬಸವಪ್ಪನವರ ದ್ವಾರಾ ತಲ್ಪರುತ್ತವೆ.

ಈ ಮೇಲ್ಕಂಡ ಮಹಾರಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ತಿರುವಾಂಕೂರು ಕ್ರಿಮಿನಲ್ ಲಾ ಅಮೆಂಡ್‌ಮೆಂಟ್

ತಿರುವಾಂಕೂರಿನಲ್ಲಿ ನಡೆಯುತ್ತಿರುವ ಜಳವಳಯನ್ನೆ ದುರಿಸಲು ಕೆಲವು ಹೊಸ ಶಾಸನಗಳನ್ನು ಆಚರಣೆಗೆ ತರ ಲಾಗಿದೆ. ಅದರಂತೆ ತಿರುವಾಂಕೂರು ಪ್ರಜೆಗಳು ತಿರು ವಾಂಕೂರಿನಿಂದ ಹೊರಗೆ ಮಾಡಬಹುದಾದ ಅಪರಾಧ ಕೃತ್ಯಗಳಿಗೆ ಶಿಕ್ಷೆ ವಿಧಿಸಲು ಅವಕಾಶಕೊಡುತ್ತದೆ. ಪುಸ್ತ ಕಗಳು ಮುಂತಾದ ಸಾಹಿತ್ಯಗಳನ್ನು ಮುಟ್ಟುಗೋಲು ಹಾಕಿಕೊಂಡು ಅವುಗಳ ಪ್ರೋಧನೆಯ ಬಗ್ಗೆ ವಾರೆಂಟು ಗಳನ್ನು ಹೊರಡಿಸುವ ಅಧಿಕಾರವನ್ನು ಸರ್ಕಾರಕ್ಕೆ ಕೊಡುತ್ತದೆ. ದಂಡವನ್ನು ಕೊಡಲೊಪ್ಪದೆ ಅದಕ್ಕೆ ಪ್ರತಿಯಾಗಿ ಸರೆಮನೆ ಶಿಕ್ಷೆಯನ್ನು ಅನುಭವಿಸಿದರೂ ಕೂಡ ಅಂಥವನ ಚರಆಸ್ತಿಗಳನ್ನು ಮಾರಿ ದಂಡದ ಹಣವನ್ನು ಪಡೆಯಲು ಸರ್ಕಾರಕ್ಕೆ ಹೊಸ ಶಾಸನದ ಪ್ರಕಾರ ಅಧಿಕಾರವಿರುತ್ತದೆ.

ಜರ್ಮನಿ-ಫ್ರಾನ್ಸುಗಳು ಯುದ್ಧಮಾಡುವುದಿಲ್ಲ

ಜರ್ಮನಿಯ ಪ್ರತಿನಿಧಿಯಾದ ಹರ್ ವಾನ್ ರಿಬ್ಬ್ ಟ್ರಾಪ್‌ರವರು ಪ್ಯಾರಿಸ್ಸಿಗೆ ಹೋಗಿ ಎಂ. ಬಾರ್ನೆ-ರವರೊಡನೆ ಮಾತುಕತೆನಡೆಸಿದ್ದಲ್ಲದೆ ಇಬ್ಬರೂ ಒಂದು ಪ್ರಕಟನಪತ್ರಕ್ಕೆ ಸಹಿಮಾಡಿದರು. ಆದರಲ್ಲಿ ಉದ್ಘೋಷಿಸಿರುವ ಅಂಶಗಳಾವುವೆಂದರೆ, (1) ಎರಡು ದೇಶಗಳೂ ಪರಸ್ಪರ ಮೈತ್ರಿ ಮತ್ತು ಬಾಂಧವ್ಯವು ಹೆಚ್ಚುವಂತೆ ದುಡಿಯಲು ಒಪ್ಪುತ್ತವೆ. (2) ಫ್ರಾನ್ಸ್‌ಗೂ ಮತ್ತು ಜರ್ಮನಿಗೂ ಯಾವ ಭೂಮಿಯ ಸಂಬಂಧವಾಗಿಯೂ ಜಗಳವಿಲ್ಲ. (3) ಅಂತರರಾಷ್ಟ್ರೀಯ ಕಿತ್ತಾಟಕ್ಕೆ ಕಾರಣ ವಾಗಬಹುದಾದಂತಹ ಪ್ರಶ್ನೆಯು ಬಂದಿಗ ಎರಡು ದೇಶಗಳೂ ಪರಸ್ಪರ ಸಲಹೆ ಪಡೆಯಬೇಕು. ಅಂತೂ ಫ್ರಾನ್ಸು-ಜರ್ಮನಿಯೂ ಪರಸ್ಪರ ಯುದ್ಧ ಮಾಡುವ ದಿಲ್ಲವೆಂದು ಆ ಪ್ರಕಟನೆಯು ತಿಳುಹಿಸುತ್ತದೆ.

ವೀರಶೈವ ವರ್ಣಾಶ್ರಮವೂ ಸುಜ್ಞರಲ್ಲಿ ವಿಜ್ಞಾಪನೆಯೂ.

ಲೇ—ಪಂ॥ ಗೌರೀನಾಥಶಾಸ್ತ್ರಿ, ಕಾಮುಪುರ ಹೀರೇಮಠ.

ನಮ್ಮಿ ಭರತಖಂಡದಲ್ಲಿ ಅತ್ಯಂತಪ್ರಸಿದ್ಧಿಹೊಂದಿದ ಆಸ್ತಿಕಮತಗಳಲ್ಲಿ ವೀರಶೈವಮತವೂ ಒಂದಾಗಿದೆ ಸಾಮಾನ್ಯವಾಗಿ ಹಿಂದೂಧರ್ಮದಲ್ಲಿ ವರ್ಣಾಶ್ರಮ ಧರ್ಮವೇ ಆದರ ವೈಶಿಷ್ಟ್ಯಮೆಂದು ಕಂಡುಬರುತ್ತಿದೆ ವರ್ಣಾಶ್ರಮವಿಲ್ಲದ ಮತವು ಅವ್ಯವಸ್ಥಿತಮತವೆನಿಸು ವದರಲ್ಲಿ ಸಂಶಯವಿಲ್ಲ

ಸಾಮಾಜಿಕ, ನೈತಿಕಾದಿ ದೃಷ್ಟಿಯಿಂದಲೂ ವರ್ಣಾಶ್ರಮಪದ್ಧತಿಯು ಮೇಲ್ಮೆಯನ್ನು ತಳೆದುದು ತಪ್ಪಲ್ಲ ವರ್ಣಾಶ್ರಮಧರ್ಮಕ್ಕೇನೇ ನೀರೆರೆದುಬಿಟ್ಟ ಬೌದ್ಧಾದಿಮತಗಳೂ ಕೂಡ ಕಡೆಗೆ ಅದನ್ನ ಅನುಸರಿಸದೆ ಬಿಡಲಿಲ್ಲ ಬೌದ್ಧಮತದಲ್ಲಿ ಬೌದ್ಧಭಿಕ್ಷು, ಬೌದ್ಧಯತಿ ಇಂತೆಂಬ ಅಶ್ರಮ ಪದ್ಧತಿಯು ತಲೆದೋರಿದುದೇ ಮುಖ್ಯ ಕುರುಹಾಗಿದೆ ಜೈನಮತಿಯರಂತು ಜೈನಬ್ರಾಹ್ಮಣ-ಜೈನಕ್ಷತ್ರಿಯ-ಜೈನವೈಶ್ಯ ಇತ್ಯಾದಿ ನಾಮಗಳಿಂದ ಪ್ರಸಿದ್ಧರಿರುತ್ತಿರೆ ಪ್ರೊಟೆಸ್ಟರವರಲ್ಲಿ ಪ್ರಸಿದ್ಧನಾದ "ಪ್ಲೆಟೋ" ಎಂಬ ವೈಜ್ಞಾನಿಕನೂ ಕೂಡ ಸಮಾಜಘಟನೆಗೆ ವರ್ಣಾಶ್ರಮದ ತತ್ವವನ್ನೆರಿತು ಒಂದು ತೆರನಾದ ವ್ಯವಸ್ಥೆಯನ್ನುಂಟುಮಾಡಿಕೊಂಡದ್ದು "ಸಮಾಜವಿಜ್ಞಾನ" ಮುಂತಾದ ಗ್ರಂಥಗಳಿಂದ ಕಂಡುಬರುತ್ತದೆ

ಆದ್ದರಿಂದ ಸಾಮಾಜಿಕಾದಿಗಳಲ್ಲಿ ದೃಷ್ಟಿಯಿಂದಲೂ ವಿಚಾರಿಸಿ ವೇದವಾತೆಯು ವೈದಿಕರಿಗೆ ಧರ್ಮದೃಷ್ಟಿಯಿಂದಲೇ ವರ್ಣಾಶ್ರಮಗಳನ್ನ ವ್ಯವಸ್ಥೆಗೊಳಿಸಿದುದು ಎಷ್ಟು ಮಹತ್ವದ್ದೆಂಬುದನ್ನ ಬೇರೆ ಹೇಳಬೇಕಾಗಿಲ್ಲ.

ಅದುಕಾರಣನೇ ವೈದಿಕೋತ್ತಮವಾದ ವೀರಶೈವ ಮತದಲ್ಲಿ ವರ್ಣಾಶ್ರಮವ್ಯವಸ್ಥೆಯು ಪರಶಿವನಿಂದಪ ದೇಶಿಸಲ್ಪಟ್ಟು, ತದ್ದಾರಾ ಶ್ರೀಗುರುಸಾರ್ವಭೌಮರಿಂದ ಪ್ರಸ್ಥಾಪಿತವಾದುದು ಹೊಸ ಮಾತಲ್ಲ

ಆದರೆ ದುರಾಚಾರಿಗಳಿಗೆ ಇದರಲ್ಲಿ ಪ್ರವೃತ್ತಿಯುಂ ಟಾಗುವುದಿಲ್ಲ, ಕಾರಣವೆಂದರೆ ಮುಖ್ಯವಾಗಿ ಅವರ ಮನವು ಪರಮಾರ್ಥದತ್ತ ಹೊರಳದೆ ಯಾವಾಗಲೂ ಭೌತಿಕಜ್ಞಾನದತ್ತ ಹೊರಳುತ್ತ. ಸಮಾಜಘಟನೆಗೆ ಉದಾತ್ತತತ್ವದಿಂದ ಸಲ್ಲುವ ವರ್ಣಾಶ್ರಮಧರ್ಮವನ್ನು ಕಿತ್ತೆಸೆಯುವ ಕಡುಗಲಿಗಳಾಗಿಹುರ್ದಲ್ಲೆ? ಪಾಪ! ಇಂತಹ ಜಾಡಿನಿಂದ ಬರಬರುತ್ತ ಲಿಂಗಧಾರಣ ಲಿಂಗ ಪೂಜಾದಿಗಳೂ ಕೂಡ ಕ್ರಮದಿಂದ ಕಳಚಿಕವಿಳ್ದಡ ಬಹುದಲ್ಲವೇ? ಅದುಕಾರಣನೇ ಶ್ರೀವ್ಯಾಸಮುನಿವರ್ಯರು—

ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್ ।
ಆರಾಧ್ಯತೇ ಹಿಮಾಹೇಶೋ ನಾನ್ಯತ್ತೋಷಕಾರಣಂ ॥೫॥
ಅ. ಲಳ)

ಎಂದು ಸ್ಕಂದಪುರಾಣದಲ್ಲಿ ಶಂಕರಸಹಿತೆಯಲ್ಲಿ ದಾ ಹರಿಸಿದ್ದುದು ಮೇಲ್ಕಂಡ ಅಭಿಪ್ರಾಯವನ್ನು ವ್ಯಕ್ತ ಗೊಳಿಸುವದಿಲ್ಲವೋ? ಆದಕಾರಣ ವೀರಶೈವದೀಕ್ಷಿತರು ಚತುರ್ವರ್ಣ, ಚತುರಾಶ್ರಮ, ಅಷ್ಟಾದಶ ಉಪ ವರ್ಣ, ಗಿರಿಗ ಕುಲಗಳನ್ನು ಅಲ್ಲಗಳೆಯಲಿಕ್ಕೆ ಎದಿಗೂ ಸಮರ್ಥರಾಗಲಾರರು

ಆದರೆ 'ತನು-ತ್ರಯಗತಾನಾದಿಮಲತ್ರಯಮಪಾ ಗುರುಃ । ದೀಕ್ಷಾತ್ರಯೇಣ ನಿರ್ದಗ್ಧಾ ಲಿಂಗತ್ರಯ ಮುಪಾದಿಶತ್ ॥ ಎಂಬಿವೇ ಮುಂತಾದ ಹಲವು ವಚನಗಳಿಂದ ದೀಕ್ಷಾಕಾಲದಲ್ಲಿಯೇ ಗುರುವರ್ಯನು ಮಲತ್ರಯವನ್ನು ದೀಕ್ಷಾತ್ರಯದಿಂದ ನಾಶಗೊಳಿಸಿ ಲಿಂಗ ತ್ರಯವನ್ನು ಸಂಬಂಧಿಸಿದ್ದಾನೆ ಅಂದಬಳಿಕ ದೀಕ್ಷಾ ಕಾಲದಲ್ಲಿಯೇ ಜಾತ್ಯಾಯುರ್ಭೋಗಪ್ರದವಾದ ಕರ್ಮ ಮಲವು ನಾಶವಾಗಿಲು ತದ್ಭಿನ್ನರೂಪವಾಗಿ ಜಾತಿ ತಾರತಮ್ಯ (ವರ್ಣಾಶ್ರಮ) ವು ಹೇಗೆತಾನೇ ಸುಳಿಪೆ ಸುವದು? ಎಂಬ ಆಕ್ಷೇಪಕ್ಕೆ ಉತ್ತರವಿದೆ

ಅದೇನೆಂದರೆ 'ತಸ್ಯ ತಾವದೇವ ಚಿರಂ' 'ಯಾವದ್ಜೀವಮಿಯಂ ದೀಕ್ಷಾ ಪಶುಪಾಶವಿನಾಶಿನೀ' ಅದೇ ಹಾಂತಮಿಯಂ' ಇತ್ಯಾದಿ ನಿಗಮವಾಗಮವಚನಗಳು ಜೀವಭಾವ ನಾಶವಾಗುವವರೆಗೆ ದೀಕ್ಷೆಯೆಂದು ಬೋಧಿಸುತ್ತವೆ ದೀಕ್ಷೆಯು ಕಡೆಯಾನಿರ್ವಾಣವೆಂತಲೂ ಚಿರನಿರ್ವಾಣವೆಂತಲೂ ಎರಡುತೆರನಾಗಿದ್ದು, ಕಡೆಯ ನಿರ್ವಾಣದೀಕ್ಷೆಯಿಂದ ಶಕ್ತಾಲದಲ್ಲಿಯೇ ಮಲವಿಶುದ್ಧಿ ಯಾದಕೂಡಲೇ ದೇಹಪಂಜರವು ಪತಿತವಾಗಿ, ವಿದೇಹಕೈವಲ್ಯವು ಪ್ರಾಪ್ತವಾಗುವುದು. ಆದರೆ ಚಿರನಿ ರ್ವಾಣದೀಕ್ಷೆಯಿಂದ ಪ್ರಾರಬ್ಧಪ್ರತಿಭಾಸನಾಶಪರ್ಯಂ ತವೂ ದೀಕ್ಷೆಯಿರುವುದು, ಶಾಸ್ತ್ರಾನುಭವಮಿದ್ದವಾಗಿಡೆ ಗುರುವು ದೀಕ್ಷಾಸಮಯದಲ್ಲಿ ಸಾಧನಾವಸ್ಥಾಸಹಿತ ಲಿಂಗಾಂಗಸಾಮರಸ್ಯವನ್ನು ದಯಪಾಲಿಸಿರುವುದರಿಂದ ಗುರುವಾಕ್ಯದಂತೆ ವರ್ಣಾಶ್ರಮಬದ್ಧನಾಗಿ ಪ್ರಾರಬ್ಧ ನಾಶಪರ್ಯಂತರ ಸಾಧ್ಯರೂಪವಾದ ಲಿಂಗಾಂಗಸಾಮ ರಸ್ಯವನ್ನು ಹೊಂದಬೇಕಾಗುತ್ತದೆ ಈ ವಿಷಯದಲ್ಲಿ—

ಪ್ರಥಮಂ ಸಾಧನಾವಸ್ಥಾಸಹಿತಂ ಗುರುಣಾ ಕೃತಂ ॥
ದ್ವಿತೀಯಮುಪ ಶಿಕ್ಷಸ್ತು ಗುರುವಾಕ್ಯಸ್ಯ ಕಾಲನಾತ್ ॥
....ಪ್ರಾರಬ್ಧ ಪರಿಪಾಕತಃ ॥

ಇತ್ಯಾದಿ ಕ್ರಿಯಾಸಾರಂವಚನಗಳು ಪ್ರಮಾಣವಾ ಗಿವೆ. ಶ್ರೀಕರಭಾಷ್ಯದಲ್ಲಿಯೂ—"ನನು ಲಿಂಗಧಾರಣ ಮಾತ್ರೇಣ ಮುಕ್ತೇಸಂಭವೇ ಕಿಮೌಪನಿಷಜ್ಞಾಸ್ತ್ರ ಪರಿಯಾಸೇನೇತಿ ವಾಚ್ಯಂ । "ಅತ್ಯಾಸನೇರೇ ದ್ಯಪ್ರವೃತ್ತೇ ಶ್ರೋತವ್ಯ" "ನೇದಾಂತಶ್ರವಣಂ ಕುರ್ಯಾತ್" ಯೋಗು ಸಮಾಧೇತ್ । ಇತ್ಯಾದಿನಾ ಮಾಯಾ ವಾಸನಿಮುಕ್ತಾನಾಮಪಿ ಪ್ರಾರಬ್ಧಪ್ರತಿಭಾಪರ್ಯಂತಂ ಪರಮೇಶ್ವರಾಜ್ಞಾಪಾಲನಸ್ಯ ಕರ್ತವ್ಯತ್ವಶ್ರವಣಾತ್ । ತದುಪಾಸೇ ಲಿಂಗಾಂಗಜ್ಞಾನದೃಢಪ್ರತ್ಯಯಾಸಂಭವಾತ್ ಪುನಃ ಕಾಮುಕ್ರೋಧಾದಿನಾಮುತ್ಪತ್ತಿಕಾರಣ ದ್ವೈಶಾನವಕಾಶಯೇತಿತಾತ್ಪರ್ಯಚ್ಚ" । ಇತ್ಯಾದಿ ವಚ ನಗಳಿಂದಲೂ ವರ್ಣಾಶ್ರಮ ಧರ್ಮದ ಆಚರಣವು ಹೇಳಲ್ಪಟ್ಟಿದೆ ಆದ್ದರಿಂದ ಮೇಲ್ಕಂಡ ಅಕ್ಷೇಪಕ್ಕೆ ಅವಕಾಶವಿಲ್ಲವಷ್ಟೆ! ಆದ್ದರಿಂದಲೆ—

ಕುಲಜಾತ್ಯಾದಯೋ ಭಾವಾ ಧರ್ಮೋ ದೇಹಸ್ಯ ನಾತ್ಮನಃ ।
ಪ್ರತ್ಯಕ್ಷಾದ್ಯೈಃ ಧರಪತ್ತಾತ್ಪರ್ವಾತ್ಪಾತ್ಪಚ್ಚವರೂಪತಃ ॥
ತಪಸಿ ಸ್ವಕುಲಾಚಾರಂ ಲೌಕಿಕಂ ವೈದಿಕಂ ತು ವಾ ।
ಗಾಪಯೇನ ಕುರ್ವಾಣಃ ಶಿವಾರ್ಚನಸಧಿಯೇ ನರಃ ॥
ಯಾವತ್ ಪ್ರಾರಬ್ಧಕರ್ಮೋತ್ಥಸಂಸಾರಪ್ರತಿಭಾಸಕೆ ।
ತಾವತ್ ಕುರ್ವೀತ ಕರ್ಮಾಣಿ ವೇದಶಾಸ್ತ್ರೋದಿತಾನಿ ಚ ॥
ಯಸ್ಯಾ ವೃತ್ತಫಲಃ ಸ್ವಾತ್ಮತನಂ ಲಭತೇ ಸ್ವತಃ ।
ತಸ್ಯಾ ಸರ್ವಾಣಿ ಕರ್ಮಾಣಿ ಪರಿಪಾಕಂ ಶಿವಯೋಗಿನಃ ॥

ಕುಲಜಾತ್ಯಾದಿಗಳು ದೇಹಕ್ಕಲ್ಲದೆ ಆತ್ಮನಿಗಿಲ್ಲ ಪ್ರತ್ಯ ಗಾತ್ಮನೂ ಜೋದರೂಪನೂ ಪರಿಪೂರ್ಣಾತಿವರೂಪನೂ ಆದವನಿಗೆ ಕುಲಜಾತ್ಯಾದಿಕ ಖಂಡಿತ ರೂಪವೆಲ್ಲಿ? ಸಿದ್ಧಾಂತವೆ ಪಾಗಿದ್ದರೂ ಪ್ರಾರಬ್ಧಪ್ರತಿಭಾಸದ ನಾಶ ಪರ್ಯಂತರವೂ ವೈದಿಕ ಲೌಕಿಕರೂಪ ಸ್ವಕುಲಾಚಾರ ವನ್ನು ಸಾವಧಾನವಾಗಿ ಆಚರಿಸಶಕ್ಕದ್ದು ಹೇಗೆ ಅಶಕ್ತದಶೆಯಲ್ಲಿ ಗಿಡದಲ್ಲಿದ್ದ ಫಲವು ಗಿಡದ ಅಶ್ರಯ ವನ್ನೆ ಹೊಂದಬೇಕಾಗುವದೋ ಹಾಗೆ ವೀರಶೈವರಿಗೆ ವೇದಾಗಮೋಕ್ತ ವರ್ಣಾಶ್ರಮಧರ್ಮಗಳು ಪ್ರಾರಬ್ಧ ಪ್ರತಿಭಾಪರ್ಯಂತವಿದ್ದು ಪರಿಪಕ್ವದಶೆಯಲ್ಲಿ ಗಿಡ ದಿಂದ ಹಣ್ಣು ತಾನೆ ಉದುರಿದಂತೆ ಅವನ ಎಲ್ಲ ಕರ್ಮಗಳೂ ತಾವೆ ಬಿದ್ದುಹೋಗುತ್ತವೆ ಇಂತೆಂಬ ಹಲವು ವಚನಗಳು ಪ್ರಮಾಣವಾಗಿವೆ

ಆದ್ದರಿಂದ ಶಿವದೀಕ್ಷಿತನಾದ ವೀರಶೈವನಾಧಾನು ಸಾಧ್ಯರೂಪಲಿಂಗಾಂಗಸಾಮರಸ್ಯವನ್ನು ಹೊಂದುವುದ ಕ್ಕಾಗಿ ವರ್ಣಾಶ್ರಮಬದ್ಧನಾಗಿಯೇ ಇರಬೇಕೆಂಬುದು ದಾದ್ಧಾಂತವು ಆದರಿಂದಲೇ ಭಗವತ್ಪಾದ ರೇಣು ಕರು—

ವರ್ಣಾಶ್ರಮಾದಿಧರ್ಮಾಣಾಂ ವ್ಯವಸ್ಥಾ ಹಿ ದ್ವಿಧಾ ಮತಾ ।
ವಿಧಾ ಶಿವೇನ ನಿರ್ದಿಷ್ಟಾ ಪ್ರಮ್ಯಾ ಕಥಿತಾ ಪರಾ ॥

ವರ್ಣಾಶ್ರಮಾದಿ ಧರ್ಮಗಳ ವ್ಯವಸ್ಥೆಯು ಎರಡು ಪ್ರಕಾರವಾಗಿದ್ದು ಒಂದು ಶಿವನಿಂದ ತೋರಿಸಲ್ಪಟ್ಟಿದ್ದು ಮತ್ತೊಂದು ಬ್ರಹ್ಮನಿರ್ದಿಷ್ಟವಾದುದು ಶಿವನಿರ್ದಿಷ್ಟ ವಾದ ವರ್ಣಾಶ್ರಮಾಚಾರಗಳನ್ನು ವೀರಶೈವರು ತಪ್ಪದೆ ಆಚರಿಸಬೇಕೆಂದು ಆಜ್ಞೆಕೊಡಿಸಿರುವರು. ಅದು ಕಾರಣ ವರ್ಣಜಾತಿ ಕುಲಾಚಾರಗಳನ್ನು ಯಾರೂ ಅಲ್ಲಗಳೆಯಲಿಕ್ಕೆ ಬರುವುದಿಲ್ಲ, ಸಿದ್ಧಾಂತವು ಹೀಗಿ ದ್ದರೂ ಅದಕ್ಕುಲ್ಲಂಘಿಸುವದು ಎಷ್ಟು ಕಷ್ಟಾಗುವುದೆಂ ಬುದನ್ನು ಎಲ್ಲರೂ ವಿಚಾರಿಸಶಕ್ಕದ್ದು.

ಒಮ್ಮೆ "ವೀರಶೈವ ಕುಟುಂಬಗಣ" ವೆಂಬ ಲೇಖ ದಲ್ಲಿ ನಾನು ಜಾತಿವಾದವನ್ನು ನಿರಾಕರಿಸುವ ವಿಷಯಕ್ಕಾದ ಕೆಲ ವಚನಗಳನ್ನು ಸಾಧಕರಿಗೆ ಸಂ ಬಂಧಿಸಿ ಬರೆದದ್ದು, ಜೀವಭಾವ ವಿಶಿಷ್ಟನಾದ ನನ್ನ ಪ್ರಮಾದವಶದಿಂದಲೇ ಎಂಬುದನ್ನು ಹೇಳುತ್ತಾಗಿ ಒಪ್ಪಿದ್ದೇನೆ ಕಡೋಪಕಪ್ರಮತಾರ್ಥವಾಗಿಯೇ "ವೀರಶೈವವರ್ಣಾಶ್ರಮವಿವೇಕ" ವೆಂಬ ಚಿಕ್ಕ ನಿಬಂಧವನ್ನು ಬರೆದು ಪ್ರಕಾಶಗೊಳಿಸಲು ಸಂಕಲ್ಪಿಸಿ ದ್ದೇನೆ. ಅದುಕಾರಣ ಸರ್ವರೂ ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಶ್ರೀಜಗದ್ಗುರು ರಂಭಾಪುರೀಪೀಠಾಸ್ಥಾನಿಗಳವರ ಆಗಮನ.

ಚನ್ನಗಿರಿ ತಾಲ್ಲೂಕು ಬಸವಾಪಟ್ಟಣದ ವೀರ ಶೈವ ಮಂಡಳಿಯವರ ಕೋರಿಕೆಯಮೇರೆಗೆ ಮಹಾ ಸಮಾರಿಯು ಸಕಲ ಬಿರುದಾವಳಿಗಳೊಡನೆ ತಾ॥ ೬-೧೧-೩೮ನೆಯ ದಿನ ಪ್ರಾತಃಕಾಲ ೧೦ ಗಂಟೆಗೆ ಸರಿ ಯಾಗಿ ವಿಜಯಂಗೈಸಿತು. ಮುಂಚಿತವಾಗಿಯೇ ಪುರ ಪ್ರಮುಖರಾದ ಪಟೇಲ್ ಹಾಲಪ್ಪಗೌಡ್ರು, ಅವರ ಮಕ್ಕಳು ಜೆ ಚೆನ್ನಪ್ಪನವರು, ಸಾಹುಕಾರ್ ಸಿದ್ದಪ್ಪನವರು, ಬುದ್ಧಿವಂತ ಮಹದೇವಪ್ಪನವರು ಮೊದಲಾದವರು ಮುಂದಿಳ್ದುಕೊಂಡು ಸಾರಿಯನ್ನು ಸ್ವಾಗತಿಸಿದರು. ಸವಾರಿಯು ದಯಮಾಡಿಸಿದೊಡನೆ ಶ್ರೀಜಗದ್ಗುರುಪಂಚಾಚಾರ್ಯ ಮಹಾರಾಜ್ ಕಿ ಜೈ ಯೆಂಬ ಜಯಘೋಷದೊಡನೆ ಮಹಾಸನ್ನಿಧಿಗೆ ಫಲಪುಷ್ಪಗಳನ್ನು ಸಮರ್ಪಿಸಿದರು. ಜಗದ್ಗುರುಗಳ ಪಲ್ಲಕ್ಕಿ ಉತ್ಸವವು ೫-೬ ಸಾವಿರ ಜನ ಸಮೂಹದೊಡನೆ ಅಭೂತಪೂರ್ವವಾಗಿ ನಡೆಯಿತು. ಉತ್ಸವಕ್ಕಾಗಿ ಗ್ರಾಮದವರು ರಚಿಸಿದ ಚಪ್ಪರ, ಸಾಹು ಕಾರ್ ಸಿದ್ದಪ್ಪನವರು, ಬುಡನ್ ಸಾಹೇಬರು, ಹಸನ್ ಸಾಹೇಬರು ಇವರ ಚಪ್ಪರ. ಪೋಲೀಸು ಸ್ಟೇಷನ್ನ ಮುಂದಿನ ಚಪ್ಪರ, ಮಜಂತಿಮಠದವರ ಚಪ್ಪರ, ಬುದ್ಧಿವಂತರ ಚಪ್ಪರ, ಪಾಸಾಮಪಿಹಿತ್ತಿರ ಪಟೇಲ್ ರವರ ಚಪ್ಪರ, ಬ್ರಾಹ್ಮಣಮಂಡಳಿಯವರ ಚಪ್ಪರ, ಸಾಹುಕಾರ್ ಸತ್ಕಾರಸಾಹೇಬರವರ ಚಪ್ಪರ, ಹಾಲು ಮತದವರ ಚಪ್ಪರ ಮೊದಲಾದ ಮಂಟಪಗಳು ರಚಿಸ ಲ್ಪಟ್ಟಿದ್ದವು ಮಹೋತ್ಸವವು ಎಲ್ಲ ಮಂಟಪಗಳಲ್ಲೂ ಹಾಯ್ದು ಕಡಸ್ಥಿಗಳಾದ ಶ್ರೀ ಹಾಲಸ್ವಾಮಿಗಳವರ ಮಠದ ವೈದಾನದಲ್ಲಿ ರಚಿಸಿದ ಭವ್ಯವಾದ ಸಭಾಂಗಣ ಮೆಂಟಪಕ್ಕೆ ಆಗಮಿಸಿತು. ಬಳಿಕ ಜಗದ್ಗುರುಗಳು ಪಲ್ಲಕ್ಕಿಯಿಂದಿಳಿದು ಸಿಂಹಾಸನವನ್ನು ಅರೋಹಣ ಮಾಡಿದೊಡನೆಯೇ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷವು ನಭೋಮಂಡಲವನ್ನು ವ್ಯಾಪಿಸಿತು. ಪರಗನಹಳ್ಳಿ, ಚನ್ನಾಪುರ, ಗಂಟಾಪುರ ಮೊದಲಾದ ಗ್ರಾಮಗಳಿಂದ ಶ್ರೀಜಗದ್ಗುರು ಪಂಚಾಚಾರ್ಯ ಭಜನಾ ಸಂಘದವರು ಆಗಮಿಸಿ ಜಗದಾಚಾರ್ಯರ ಸ್ತುತಿಗಳನ್ನು ಪಾಡಿದರು ಧನ್ಯವಾದ ಸಭಾಮಂಟಪದಲ್ಲಿ ಜನರು ಕಿಕ್ಕಿರಿದಿದ್ದರು. ಉತ್ಸವದ ವ್ಯವಸ್ಥೆಗೋಸ್ಕರ ಒಂದ ಪೋಲೀಸು ಸಬ್ ಇನ್ಸ್ಪೆಕ್ಟರ್ ಪಹೆದಾರ್ ಮೊದಲಾದ ಪೋಲೀಸ್ ಸಿಬ್ಬಂದಿಯ ಸುವ್ಯವಸ್ಥೆಯಿಂದ ಉತ್ಸ ವ್ಯಾ ಸಭೆಗೂ ಶೋಭೆಯಾಗಿತ್ತು ಏತಾವಧಿವಾನಿ ಗ್ರಂದ ಶ್ರೀಮಾ ಪಟೇಲ್ ಹಾಲಪ್ಪಗೌಡರಿ ಮಕ್ಕಳಾದ ಶ್ರೀಮಾ ಜೆ. ಚೆನ್ನಪ್ಪನವರು ಭಾವಗರ್ಭಿತ ವಿಜ್ಞಾಪನಾ ಪತ್ರಿಕೆಯನ್ನ ಗಂಭೀರವಾಗಿ ಓದಿ ಮಹಾಸನ್ನಿಧಿಗೆ ಹಾಗ, ತುರಾಯಿಗಳೊಡನೆ ಒಪ್ಪಿ ಸಿದರು ಇವರು ಚಿಕ್ಕವಯಸ್ಸಿನವರಾದರೂ ಇವರ ಗುರುಭಕ್ತಿಯೂ, ಓರಾಭಿಮಾನವೂ, ವರ್ಣಾ ತೀತವಾದುದು ಅನಂತರ ವೇ॥ ರೇವಯ್ಯನವರು ಸ್ವಾರಸ್ಯವಾದ ಭಾಷಣವನ್ನು ಮಾಡಿದರು ಅನಂತರ ಶ್ರೀಜಗದ್ಗುರು ಮಹಾಸನ್ನಿಧಿಯವರು ಸಮಯೋಚಿತ ವಾದ ಭಾಷಣದಮೂಲಕ ಧರ್ಮೋಪದೇಶವನ್ನು ಮಾ ಡಿದರು.

ಜಗದ್ಗುರುಗಳವರ ವರ್ಧಂತಿಯು ತಾ॥ ೨೨-೧೧-೩೮ ನೇ ದಿನ ನೆರವೇರಿತು. ಆ ದಿವಸ ಭಕ್ತಮಾಹೇಶ್ವರರ ಸಂತರ್ಪಣೆಯು ೩ ಸಾವಿರದವರೆಗೂ ನಡೆಯಿತು. ಆ

ಖರ್ಚ್ನೆಲ್ಲಾ ಸಾಹುಕಾರ್ ಸಿದ್ದಪ್ಪನವರು ವಹಿಸಿದ್ದರು. ಮೊದಲಿಗಿಂತಲೂ ಈ ಉತ್ಸವವು ಬಹು ವೈಭವದಿಂದ ನಡೆಯಿತು. ೩ ಗಂಟೆಗೆ ಉತ್ಸವವು ಪ್ರಾರಂಭವಾಗಿ ೬ ಗಂಟೆಗೆ ಶಭಾಂಗಣಕ್ಕೆ ತಲ್ಪಿತು. ಅನೇಕ ಗ್ರಾಮಗಳಿಂದ ೩-೪ ಸಾವಿರ ಜನರು ಸೇರಿದ್ದರು. ಮಹಾಸನ್ನಿಧಿಯು ಸಿಂಹಾಸನಾರೋಹಣಮಾಡಿದೊಡನೆಯೇ ಶೀಜಗದ್ಗುರು ಅಭಿನವರೇಣುಕ ಮಹಾರಾಜ್ ಕಿ ಜೈ ಯೆಂಬ ಜಯಘೋಷವು ದಶದಿಕ್ಕುಗಳಿಗೂ ಹಬ್ಬಿ, ಪ್ರತಿಧ್ವನಿಗೈಯಿತ್ತು. ಪಟೇಲ್‌ರವರಾದ ಶಿ॥ ಮಾಜಿ ಚೆನ್ನಪ್ಪನವರು ವರ್ಧಂತೀ ವಿಷಯದಮೇಲೆಯೂ ಸನ್ನಿಧಿಯವರು ಸಿಂಹಾರೋಹಣಮಾಡಿದ್ದರಿಂದ ಈ ೧೫ ವರ್ಷಗಳ ಕಾರ್ಯಗಳಮೇಲೆಯೂ ಬಹು ಪ್ರಾರಸ್ಯವಾಗಿ ಸರ್ವಜನರ ಮನಸ್ಸಿಗಾಕರ್ಷಿಸುವಂತೆ ಭಾಷಣವನ್ನು ಮಾಡಿದರು. ಜಗದ್ಗುರುಗಳವರು ೧॥ ಗಂಟೆಯವರೆಗೆ ಪ್ರಸಾದವಾಣಿಯಿಂದ ಅಪ್ಪಣೆ ದಯಪಾಲಿಸಿದರು. ರಾಜರ್ಷಿಗಳಾದ ಶ್ರೀವರ್ಮಾ ಮಹಾಪ್ರಭುಗಳು ಪೀಠದ ಜೀರ್ಣೋದ್ಧಾರಮಾಡಿದ ವಿಷಯಗಳನ್ನು ಜನರು ಕೇಳಿ ಆತ್ಯಾನಂದಪಟ್ಟು ಮಹಾಸನ್ನಿಧಿಯ ಅಪ್ಪಣೆಯಮೇರೆಗೆ ಶ್ರೀಕೃಷ್ಣರಾಜಮಹಾರಾಜಕಿಜೈ ಎಂಬ ಜಯಘೋಷವನ್ನೆಮ್ಮಾಡಿದರು. ಈ ದಿವಸದ ಸನ್ನಿಧಿಯ ಉಪದೇಶದ ಭಾಷಣದಿಂದ ಗುರುಭಕ್ತಿ, ದೇವಭಕ್ತಿ, ರಾಜಭಕ್ತಿ ಜನರಲ್ಲಿ ನೆಲೆಗೊಂಡಿತು. ಇಂಥ ಉಪದೇಶವನ್ನು ಸಾವೆಂದೂ ಕೇಳಿಲ್ಲವೆಂದು ಸಭೆಯು ಸಂತೋಷಪಡುತ್ತಿತ್ತು. ಈ ದಿವಸದ ಉತ್ಸವವೂ ಸಭೆಯೂ, ಸಬ್ ಇನ್ಸ್‌ಪೆಕ್ಟರ್, ದಫೇದಾರ್ ಮೊದಲಾದ ಸಿಬ್ಬಂದಿಯಿಂದ ಶಾಂತವಾಗಿ ನಡೆಯಿತು. ಅನಂತರ ಮಹಾಸನ್ನಿಧಿಗೆ ಕಪ್ಪಕಾಣಿಕೆಗಳು ಸರ್ವಮತದವರಿಂದಲೂ ಒಪ್ಪಿಸಲ್ಪಟ್ಟವು ಬಳಿಕ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ

ಸೌರ-ಚಾಂದ್ರಮಾನ ಅಂದರೆ ಏನು?

ನಾಲ್ಕುವಿಧವಾದ ಮಾನಗಳಲ್ಲಿ ಮುಖ್ಯವಾಗಿ ಎಣಿಸಲ್ಪಟ್ಟ ಸೌರ-ಚಾಂದ್ರಮಾನಗಳೆಂದು ಎರಡು ವಿಧವಾದ ಜ್ಯೋತಿಷ ಗಣಿತಾಧಾರಪಂಕ್ತಿಗಳು ಇವೆ. ಇದರಲ್ಲಿ ಸೌರಮಾನವೇ ಶ್ರೇಷ್ಠವೆಂದೂ, ಚಾಂದ್ರಮಾನವು ತಪ್ಪುಬರುವದೆಂದೂ ಕೆಲವು ಪಂಗಡದ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಈ ಪಂಡಿತರುಗಳು ಭೂಷೂಕ್ಷದಲ್ಲಿ ಕಂಡ ಭೂಮಾನವೆಂದು ಹೇಳುವ ಗಣಿತವನ್ನು ಸೌರಮಾನವೆಂದು ಕರೆಯುತ್ತಾರೆ. ಅದು ನಿಜವಾಗಿಯೂ ಸೌರಮಾನವಲ್ಲ.

ವೇದಗಳಲ್ಲಿ ಹೇಳಿರುವಂತೆ ಸೌರಮಾನದ ಗಣಿತ ಶಾಸ್ತ್ರವು ಈ ಕಾಲದಲ್ಲಿ ಪ್ರಚಾರದಲ್ಲಿ ಇಲ್ಲವೆಂದು ತಿಳಿಯಬೇಕು. ನಿಜವಾಗಿಯೂ ಸೌರಮಾನವೆಂಬುದು ಒಂದು ಬೇರೆ ಇದೆ. ಅದು ಯಾವುದೆಂದರೆ—ಈ ಸೂರ್ಯನು ಇದಕ್ಕೆ ಶೇರಿದ ಎಂಟು ವಸುಗಳು, ಎಂಟು ದಿಕ್ಪಾಲಕರು ಮತ್ತು ಅನೇಕ ಉಪಗ್ರಹಗಳು, ಇವರೊಡನೆ ಅತ್ಯಂತ ಸೂಕ್ಷ್ಮಗತಿಯಿಂದ ಹಿರಣ್ಯಗರ್ಭ ಎಂಬುವ ಭಗಣಚಕ್ರದಲ್ಲಿ ಸುತ್ತುತ್ತಿರುವನು, ಹಾಗೆ ಸುತ್ತುವುದರಲ್ಲಿ ಈ ಕಲಿಯುಗಾರಂಭ ಕೃಷ್ಣ ಜನನ ಸಮಯಕ್ಕೆ ಈ ಪರಿವಾರದಿಂದ ಕೂಡಿರುವ ಸೂರ್ಯನು ವಿಶಾಖಾತಾರೆಗೆ ಅತ್ಯಂತ ಸಮೀಪವಾಗಿಯೂ, ಕೃತ್ತಿಕಕ್ಕೆ ಅತ್ಯಂತ ದೂರವಾಗಿಯೂ, ಅನ್ಯ ನಕ್ಷತ್ರಗಳಿಗೆ ವಿಶಾಖ-ಕೃತ್ತಿಕ ಈ ಎರಡು ನಕ್ಷತ್ರಗಳ ಅನುಪಾತದಿಂದ ಬರುವ ದೂರಪ್ರಮಾಣದಲ್ಲಿರುವದಾಗಿ ಭಾಗವತಾದಿ ಪುರಾಣಗಳಿಂದ ಸಿದ್ಧವಾಗುತ್ತದೆ. ಮೇಲೆ ಹೇಳಿದ ಅಷ್ಟವಸು-ಅಷ್ಟದಿಕ್ಪಾಲಕರು ಮತ್ತು ಅನೇಕ ಉಪಗ್ರಹಗಳು ಇವರುಗಳೊಡನೆ ಭಗಣಚಕ್ರದಲ್ಲಿ ಸಂಚರಿಸುವ ಸೂರ್ಯನು ಒಂದು ಕಾಲದಲ್ಲಿ ದಕ್ಷಿಣಧ್ರುವತಾರೆಗೆ ಸಮೀಪವಾಗಿಯೂ, ಒಂದು ಕಾಲದಲ್ಲಿ ಉತ್ತರ ಧ್ರುವತಾರೆಗೆ ಸಮೀಪವಾಗಿಯೂ ಇರುವನು. ಆದ್ದರಿಂದಲೇ ಈ ನಕ್ಷತ್ರಗಳು ಕೆಲವು ವಿಷುವಿಗೆ ಉತ್ತರವಾಗಿಯೂ, ಕೆಲವು ದಕ್ಷಿಣವಾಗಿಯೂ, ಇನ್ನೂ ಕೆಲವು ವಿಷುವಿನಲ್ಲಿಯೂ ಕಾಣುತ್ತವೆ.

ವರ್ತಮಾನಕಾಲದಲ್ಲಿ ಉತ್ತರಾಭಿಮುಖವಾಗಿ ಕಾಣತಕ್ಕ ತಾರೆಗಳೇ ಅಗಲಿ, ವಿಷುವಿಗೆ ದಕ್ಷಿಣದಲ್ಲಿ ಕಾಣತಕ್ಕ ತಾರೆಗಳೇ ಅಗಲಿ, ಕಾಲಾಂತರದಲ್ಲಿ ಉತ್ತರದಲ್ಲಿ ಕಾಣತಕ್ಕ ನಕ್ಷತ್ರವು ದಕ್ಷಿಣದಲ್ಲೂ, ದಕ್ಷಿಣದಲ್ಲಿ ಕಾಣತಕ್ಕ ನಕ್ಷತ್ರವು ಉತ್ತರದಲ್ಲೂ ಪರಿವರ್ತನವಾಗುವದನ್ನು ಕ್ರಮೇಣ ನೋಡಬಹುದು. ಈ ವಿಷಯಗಳೆಲ್ಲವನ್ನೂ ಆರ್ಷಾಕ್ ಕೃತ್ತಿಕನಕ್ಷತ್ರದ ಅತ್ಯಂತ ದೂರದಲ್ಲಿರುವ ಸ್ಥಿತಿಯನ್ನೂ ಮತ್ತು ವಿಶಾಖೆಯ ಅತ್ಯಂತ ಸಮೀಪದಲ್ಲಿರುವ ಸ್ಥಿತಿಯನ್ನೂ ಕೂಡ ಇನ್ನು ಕೆಲವು ಕಾಲಾನಂತರ ದುರ್ಬೀನಿ ದೃಶ್ಯಕರು ಸಹ ಒಪ್ಪಿಕೊಳ್ಳುವರು.

ಆದರೆ ದುರ್ಬೀನಿ ದೃಶ್ಯಕರು ಸೂರ್ಯನ ಚಲನವನ್ನು ಒಪ್ಪಿಕೊಂಡಿರುತ್ತಾರೆ. ಇದುವರೆಗೂ ತಮ್ಮ ದುರ್ಬೀನುಗಳ ದ್ವಾರಾ ಕಂಡುಹಿಡಿದ ಮೂರು ನಕ್ಷತ್ರಗಳು ಅತ್ಯಂತ ಸಮೀಪವಾಗಿ ಕಾಣುತ್ತವೆ ಎಂದು ಹೇಳಿರುವರು. ಮೊದಲು ಕಂಡುಹಿಡಿದ ಆಲ್ಫಾಸೆಂಟೂರಿ ಎಂಬ ನಕ್ಷತ್ರವೇ ಸಮೀಪವೆಂದು ಹೇಳಿದರು. ಅನಂತರ ಎರಡನೆ ನಕ್ಷತ್ರವನ್ನು ಕಂಡುಹಿಡಿದಮೇಲೆ ಇದನ್ನೇ ಸಮೀಪವೆಂದು ಹೇಳುವರು. ಇದಾದಮೇಲೆ ಇನ್ನೊಂದು ನಕ್ಷತ್ರವನ್ನು ಕಂಡುಹಿಡಿದು ಇದೇ ಹತ್ತರವೆಂದು ಹೇಳುವರು. ಆದರೆ ಇವರ ದುರ್ಬೀನಿಗಳು ಉನ್ನತಶಕ್ತಿಯನ್ನು ಹೊಂದುವವರೆಗೆ ಒಂದನ್ನು ಬಿಟ್ಟು ಒಂದನ್ನು ಸಮೀಪವಾಗಿ ಕಾಣುವರು. ಎಲ್ಲಿಯ ಪರಿಯಂತ ವಿಶಾಖ ತಾರಾಮಂಡಲವೇ ಅತ್ಯಂತ ಸಮೀಪವೆಂದು ದುರ್ಬೀನ್ದೃಶ್ಯಕರುಗಳ ದುರ್ಬೀನುಗಳಲ್ಲಿ ದೃಶ್ಯವಾಗುವುದಿಲ್ಲವೋ ಅಲ್ಲಿಯವರಿಗೂ ಇವರ ದುರ್ಬೀನ್ಗಳು ಉತ್ತಮ ಸಂಸ್ತ್ರಿಗೆ ಶೇರಿದುವೆಂದು ಹೇಳುವದಕ್ಕಾಗುವುದಿಲ್ಲ.

ಹಿಂಎನಕಾಲದ ಸಿದ್ಧಾಂತಗಳಲ್ಲಿ ಕೆಲವರು ವಿಷುಚಲನೆಯು ಮೇಷರಾಶಿಯಿಂದ ಇಪ್ಪತ್ತೇಳು ಭಾಗಗಳು ಹಿಂದೆ ಮುಂದೆ ಹೋಗುತ್ತಿರುವದಾಗಿ ಹೇಳಿರುವದರಿಂದ ಆ ಶಾಸ್ತ್ರಜ್ಞರೂ ಕೂಡ ಈ ಕೃತ್ತಿಕ ನಕ್ಷತ್ರ ಸ್ಥಾನವನ್ನು ವಿಷುವಿನ ಸಂಹದ್ದಿಗಾದರೂ ಒಪ್ಪಿಕೊಂಡು ಎಣಿಸಿರುವದಾಗಿ ಕಾಣುತ್ತೆ. ಆದ್ದರಿಂದ ಕೃತ್ತಿಕ ನಕ್ಷತ್ರವು ಈ ಜ್ಯೋತಿಶಾಸ್ತ್ರದ ಗಣಿತ ಮತ್ತು ದಶಾಫಲಗಳಿಗಾಗಿ ಅತ್ಯಂತ ಮುಖ್ಯವಾದುದೆಂದು ಅವ್ಯಕ್ತವಾಗಿ ಹೇಳಿರುವದನ್ನು ಮರೆಯಬಾರದು.

ಈ ತಿಥಿಮಾನದ ಅಧಾರದಮೇಲೆ ರವಿಚಂದ್ರ ಮತ್ತು ಎಲ್ಲಾ ಗ್ರಹಗಳ ಸ್ಪಷ್ಟವಾಗುವದರಿಂದ ಚಂದ್ರನು ಭೂಮಿಗೆ ದೂರ ಹೋಗುತ್ತಿದ್ದರೂ, ಅಥವಾ ದೂರಗತನಾದ ಚಂದ್ರನು ಭೂಮಿಗೆ ಸಮೀಪವಾಗುತ್ತಿದ್ದರೂ, ಈ ಚಂದ್ರನನ್ನು ಸಹಕರಿಸಿರುವ ಭೂಮಿಯು ಸೂರ್ಯನಿಗೆ ಸಮೀಪವಾಗುತ್ತಿದ್ದರೂ. ಅಥವಾ ಸಮೀಪಬಂದಿರುವ ಭೂಮಿಯು ಸೂರ್ಯನಿಗೆ ದೂರ ಹೋಗುತ್ತಿದ್ದರೂ, ಒಂದು ಕಲ್ಪದಲ್ಲಿ ಇಷ್ಟೇ ತಿಥಿಗಳಾಗಬೇಕೆಂದು ನಿರ್ಧರಿಸಿರುವದರಿಂದಲೂ, ಭೂಮಾನದಿಂದ ಉತ್ಪನ್ನವಾಗುವ ಸಾವನದಿನಗಳು ಹೆಚ್ಚು ಕಡಮೆಯಾಗಬಹುದೇ ಹೊರತು, ತಿಥಿಮಾನದಲ್ಲಿ ಅಲ್ಪಾಂಶವೂ ಹೆಚ್ಚು ಕಡಮೆ ಬರುವದಿಲ್ಲ.

ಆದರೆ ಅಂತರಿಕ್ಷದ ತಿಥಿಗಳ ದ್ವಾರಾ ಮಧ್ಯಮಗ್ರಹ ಸ್ಪುಟಗಳು ಮಾಡಿಕ್ಕೊಂಡು ತತ್ಕಾಲದೃಶ್ಯಕ್ಕಾಗಿ ಮಾಡುವ ದೃಕ್ಕರ್ಮ ಸಾವನದಿನಗಳಿಂದ ತಿಥಿಗಳ ಕಾಲ ಪ್ರಮಾಣವು ಹೆಚ್ಚು ಕಡಮೆಯು ಬರುವುದು. ತಿಥಿ ಎಂಬ ಪ್ರಮಾಣಕ್ಕೆ ರವಿಯಿಂದ ಚಂದ್ರನು ಹನ್ನೆರಡು ಭಾಗಗಳ ದೂರದಲ್ಲಿರಬೇಕು. ಆ ದೂರವು ವ್ಯತ್ಯಾಸ ಹೊಂದುವುದಕ್ಕವಕಾಶವಿಲ್ಲವೆಂದು ನಾವು ಕೊಡುವ ಗಣಿತದಿಂದ ತಿಳಿಯಬಹುದು. ಈ ತಿಥಿ ಪ್ರಮಾಣದಿಂದ ಪ್ರಾಪ್ತವಾಗಿರುವ ಚಂದ್ರನ ದೈನಿಕ ಮಧ್ಯಮ ಗತಿಯು 790-34-53-9-31 ಕಲಾದಿ.

ನಾವು ವಾಸಮಾಡುವ ಈ ಭೂಮಿಯು ಉತ್ತರ ಧ್ರುವದಿಂದ ವಿಷುಸ್ಥಾನದವರೆವಿಗೆ ಇರುವ ಆಕಾರಕ್ಕಿಂತಲೂ, ವಿಷುಸ್ಥಾನದಿಂದ ದಕ್ಷಿಣಧ್ರುವಸ್ಥಾನವು ಸ್ವಲ್ಪ ವಕ್ರವಾಗಿಯೂ ಚಪ್ಪಟೆಯಾಗಿಯೂ ಇರುವದರಿಂದ ಅಯನಾಂಶದ್ವಾರಾ ಪಶ್ಚಿಮಕ್ಕೆ ಬಾಗಿರುವ ಉತ್ತರ ಧ್ರುವದಂತೆ ದಕ್ಷಿಣಧ್ರುವ ಕೂಡುವದಿಲ್ಲ. ಆದ್ದರಿಂದ ಈ ಭೂಮಿಯು ಸೂರ್ಯನ ವಲಪ ಬರುವದರಲ್ಲಿ ದಕ್ಷಿಣ ಧ್ರುವತಾರೆಯು ಒಂದೇ ಸ್ಥಾನದಲ್ಲೇ ಕಾಣದೆ ಚಲನವಾಗುವಂತೆ ಕಾಣುವದು. (ಸಶೇಷ)

ವೆಳ್ಳಾವಿ ರುದ್ರಮತೀಯ ಮಲ್ಲಿಕಾರ್ಜುನಶಾಸ್ತ್ರಿ.

ಪಂಚಾಚಾರ್ಯಪ್ರಭಾ

೧೯೩೮ ನೆಯ ಡಿಸೆಂಬರ್ ತಾ॥ ೧೨ ನೇ ಸೋಮವಾರ.

ಸಪ್ತವಿಧ ಶೈವಸ್ವರೂಪ.

ಆನಾದಿಶೈವದಿಂದ ಆದಿಶೈವವನ್ನೂ, ಆದಿಶೈವದಿಂದ ಅನುಶೈವವನ್ನೂ, ಅನುಶೈವದಿಂದ ಮಹಾಶೈವವನ್ನೂ ಪ್ರವೇಶಿಸಿ " ಪ್ರಾಣೇಮಂತ್ರಂ ಪವಿತ್ರಂ " ಎಂಬ ಮಂತ್ರದಲ್ಲಿ ಹೇಳಿರುವಂತೆ ಮಂತ್ರಶಬ್ದವಾಚ್ಯವಾದ ಶಿವಲಿಂಗವನ್ನು ಪಾಣಿರೂಪಮಹಾಪೀಠದಲ್ಲಿ ಅರ್ಚಿಸುತ್ತ ಕ್ರಮ ಕ್ರಮವಾಗಿ ಚಿತ್ತ ಪಾರಿಪಾಕವನ್ನು ಪಡೆದು ಭಕ್ತ್ಯುನ್ಮೇಷದಿಂದ ಯೋಗಶೈವವನ್ನು ಪ್ರವೇಶಿಸುವನು. ಇಲ್ಲಿ ಯೋಗವೇ ಪ್ರಧಾನವಾಗಿ ವರ್ತಿಸುವದು. ಯೋಗವೆಂದರೆ ಜೀವಾತ್ಮನನ್ನು ಪರಮಾತ್ಮನಲ್ಲಿ ಲೀನಗೊಳಿಸಿ ಆನಂದ ಪಡುವ ಸಾಧನವಿಶೇಷವೆಂದರ್ಥವು. ಈ ಯೋಗವು—

ಯಮಾಶ್ಚ ನಿಯಮಾಸ್ತ್ವತ್ಯಾಸನ ಪ್ರಾಣಸಂಯಮಾಃ ।
ಪ್ರತ್ಯಾಹಾರ ಧಾರಣಾಶ್ಚ ಧ್ಯಾನಾ ಜಿ ಸಮಾಧಯಃ ।

ಎಂಬ ಶಿವಾಗಮಪ್ರಕಾರವಾಗಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂದು ಎಂಟು ಅಂಗಗಳಿಂದ ಕೂಡಿರುವದು.

ಯಮಾ ಪಂಚ ಪ್ರಕಾರಾಸ್ತ್ವಹಿಂಸಾದ್ಯಾ ಪಂಚಧಾ ಮತಾಃ ।
ಆಸನಾನಿ ಚ ಪಂಚ ಸ್ಯುಃ ಸ್ವಾಸ್ತಿಕಾದೀನ್ಯಸ್ತ್ರ ಕೇಚಿದಾ ।
ಪ್ರತ್ಯಾಹಾರಾ ನವವಿಧಾ ಮಾತಾ ಇಂದ್ರಿಯವಸ್ತ್ರತಃ ।
ಧ್ಯಾನಾನಿ ನೈಕಧಾಪ್ಯೇವಂ ಸಮಾಧಿರಪಿ ತ್ರಿಧಾ ।

ಎಂಬ ಶಿವಾಗಮವ್ಯಾಖ್ಯಾನಾನುಸಾರವಾಗಿ ಯಮವು ಏಳು ವಿಧವಾಗಿಯೂ ಸ್ವಾಸ್ಥಾಸನವು ಅನೇಕವಿಧವಾಗಿಯೂ ಪ್ರತ್ಯಾಹಾರವು ಒಂಬತ್ತು ವಿಧವಾಗಿಯೂ ಧಾರಣವು ಅನೇಕ ಪ್ರಕಾರವಾಗಿಯೂ ಧ್ಯಾನವು ಅನೇಕ ಪ್ರಕಾರವಾಗಿಯೂ ಸಮಾಧಿಯು ಮೂರು ಪ್ರಕಾರವಾಗಿಯೂ ವಿಭಾಗವನ್ನು ಹೊಂದಿರುವವು. ಇವುಗಳಲ್ಲಿ—

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಾಪರಿಗ್ರಹೌ ।
ಯಮಾಃ. ಸತ್ಯಂ ತಪಸ್ತ್ಯಾಗಃ ಶೌಚಮೀಶ್ವರಪೂಜನಂ ಆಪರಿಗ್ರಹ ಎಂಬ ಏಳು ಯಮಾಚಾರಗಳಲ್ಲಿ—

ಮನೋವಾಕ್ಕರ್ಮಭಿರ್ಹಿಂಸಾತ್ಯಜನಾ ಪ್ರಾಣಿಪೀಡನೇ ।
ತಾಮೇಃ ಸರ್ವತ್ರ ಸರ್ವತ್ರ ಅಹಿಂಸಾ ಪರಿಚಕ್ಷತೇ ॥

ಯಾವ ಪ್ರಾಣಿಗೂ ಮನಸ್ಸು-ವಾಕ್ಕು-ಕಾಯಗಳಲ್ಲಿಯೂ ಪೀಡನವನ್ನುಂಟುಮಾಡದಿರುವದೇ ಅಹಿಂಸೆಯೆನಿಸುವದು

ಸತ್ಯಂ ಯಥಾರ್ಥವಚನಂ ಸರ್ವಭೂತಹಿತಂ ಚ ಯತ್ ।
ಪರೋಪಕಾರಕಂ ಸತ್ಯಮೇವಂ ಸತ್ಯಂ ದಶಾರ್ಣವಾಃ ॥ ಅಸತ್ಯಮು ಭೂತಾನಾಂ ಹಿತಾ ಚೇತ್ಸತ್ಯಮೇವ ತತ್ ॥

ಎಂದು ಶಿವಾಗಮದಲ್ಲಿ ಹೇಳಿದಂತೆ ಇದ್ದುದನ್ನು ಇದ್ದುದರ ಹಾಗೆ ಹೇಳುವುದೇ ಸತ್ಯವಲ್ಲದೆ ಅರ್ಥವೆಂದೂ ಸರ್ವಪ್ರಾಣಿಗಳಿಗೆ ಯಾವದು ಹಿತಕರವಾಗುವುದೋ ಅದೇ ಸತ್ಯವೆನೂ ಪರರಿಗೆ ತೊಂದರೆಯುನ್ನು ಮಾಡದಿರುವುದೇ ಸತ್ಯವೆಂದೂ ಪರರಿಗೆ ಹಿತವನ್ನು ಮಾಡುವುದಾದರೆ ಅಸತ್ಯವು ಸಹ ಸತ್ಯವೆಂದೂ ಸತ್ಯ ಶಬ್ದದ ಅಭಿಪ್ರಾಯವಾಗಿದೆ.

ಪರಧಾರ್ಜನಾನುಪಾದಾನಮಸ್ತೇಯಂ ಪರಮಾ ಸ್ಮೃತಂ ।
ಬ್ರಹ್ಮಚರ್ಯಂ ಸಿ ಸ್ತಾಪೆರಿಂದ್ರಿಯಾಣಾಂ ತು ಸಂಯಮಃ ।
ತತ್ರಾಪ್ಯುಪಸ್ಥವಿಷಯಸಂಯಮಸ್ತ್ವತಿದುಷ್ಕರಃ ॥

ಪರರ ಪದಾರ್ಥಗಳನ್ನು ಅಪಹರಿಸದಿರುವುದೇ ಅಸ್ತೇಯವೆನಿಸುವದು. ಚಕ್ಷುರಾದೀಂದ್ರಿಯಗಳನ್ನು ವಿಷಯಗಳಿಗೆರಗದ ಹಾಗೆ ತನ್ನ ವಶದಲ್ಲಿಟ್ಟುಕೊಂಡಿರುವುದಕ್ಕೆ ಬ್ರಹ್ಮಚರ್ಯವೆಂದು ಹೆಸರು. ಅವೆಲ್ಲಾ ಇತ್ಯಾದಿ ನಿರ್ಲಿಪ್ತನಾಗಿದ್ದು ಚಕ್ಷುರಾದಿಜ್ಞಾನೇಂದ್ರಿಯಗಳು ರೂಪಾದಿ ವಿಷಯಗಳ ಮೇಲೆ ಎರಗಿದರೂ ಅವು ಆತ್ಮನನ್ನು ಹೀನ ಸ್ಥಿತಿಗೆ ತರಲಾರವು ನಿರ್ಲಿಪ್ತನಾಗಿಯಾದರೂ ಲಿಪ್ತನಾಗಿಯಾದರೂ ಉಪಸ್ಥೇಂದ್ರಿಯವನ್ನು ನಿಗ್ರಹಮಾಡದವನು ಮಾತ್ರ, ತನ್ನ ಪೃಥಪ್ರಜ್ಞೆಯನ್ನು ಕಳೆದುಕೊಂಡು ಮೂರವಸ್ಥೆಗೊಳಗಾಗುವನು. ಆದುದರಿಂದ ಉಪಸ್ಥೇಂದ್ರಿಯನಿಗ್ರಹವು ವಿಶೇಷಬ್ರಹ್ಮಚರ್ಯವೆನಿಸುವದು. ಸ್ಪರ್ಶನ, ಸ್ಪರ್ಶನ, ಅಪೇಕ್ಷೆ, ಸಂಕಲ್ಪ, ಭಾಷಣ ಮುಂತಾದ ವುಗಳಲ್ಲಿ ಏನುಖನಾಗಿಲ್ಲದಿದ್ದರೆ ಅಂಥ ಬ್ರಹ್ಮಚರ್ಯವು ಬಹುಕಾಲ ನಿಲ್ಲಲಾರದು. ಮತ್ತೊಬ್ಬರಿಂದ ಯಾವುದನ್ನೂ ಪರಿಗ್ರಹಿಸದಿರುವುದೇ ಅಪರಿಗ್ರಹವೆನಿಸುವುದು.

ನಿಯಮಾಶ್ಚ ದಶಾಂಭೋಜಾ ಸ್ವಾಧ್ಯಾಯಸ್ತ್ವಪ ಏವ ನಾ ।
ತತ್ವದೀಶ್ವರಪೂಜೇಚ ಪಂಚ ಭಸ್ಮಾಸ್ತು ತೇ ಶುಚಃ ॥

ಶೌಚ, ಸಂತೋಷ, ಸ್ವಾಧ್ಯಾಯ, ತಪಸ್ಸು ಈಶ್ವರ ಪೂಜೆ ಎಂದು ನಿಯಮವು ಏಮು ಪ್ರಕಾರವಾಗಿದೆ.

ಶೌಚಂ ತು ಶುದ್ಧಿರ್ದ್ವಿಷ್ಟೇಯೂ ನಮೋವಾಕ್ಯಾಯಕರ್ಮಣಾಂ ।
ಅಚಿಂತನಮಕೃತ್ಯಾನಾಂ ಯತ್ತುಚ್ಯಾಚಿಂ ತು ಮಾನಸಂ ॥

ಎಂದು ಶಿವಾಗಮದಲ್ಲಿ ಹೇಳಿರುವಂತೆ ಶೌಚವೆಂದರೆ ಶುದ್ಧಿಯೆಂದರ್ಥ. ಇದು ಮನಶ್ಶುದ್ಧಿ ವಾಕ್‌ಶುದ್ಧಿ ಶರೀರಶುದ್ಧಿ ಎಂದು ಮೂರು ಪ್ರಕಾರವು. ಸ್ಫುರಿಸಬಾರದ ದುಷ್ಕೃತಿಯನ್ನು ಮನಸ್ಸಿನಲ್ಲಿ ಸ್ಫುರಿಸದಿರುವುದೇ ಮಾನಸಶೌಚವು. ಆಡಬಾರದುದನ್ನು ಆಡದಿರುವುದೇ ವಾಕ್ ಶೌಚವು. ಆಯಾಯ ಕಾಲಗಳಲ್ಲಿ ಸಂಭವಿಸುವ ಅಶುಚಿತ್ವವನ್ನು ಸ್ನಾನಾದಿಗಳಿಂದ ಪರಿಹರಿಸಿಕೊಳ್ಳುವುದೇ ಕಾಯಶೌಚವು.

ಆಸನಾನ್ಯಸ ಜೋಕ್ತಾನಿ ಬಯಥಾ ಪೂರ್ವಪಶ್ಚಿಲೌ ।
ತೇಷಾಂ ಪಂಚ್ಯೆವ ಶಸ್ತಾನಿ ಯೋಗಸಿದ್ಧಿಕರಾಣಿ ಸ್ಮೈ ॥

ಸ್ವಸ್ತಿಕಂ ಪದ್ಮಸಂಜ್ಞಂ ಚ ಭದ್ರಂ ಯೋಗಾಸನಂ ತಥಾ ।
ಗೋಮುಖಂ ಚೇತಿ ತೇಷಾಂ ತು ಲಕ್ಷಣಾಂ ಪೃಥಗುಚ್ಯತೆ ॥

ಆಸನಗಳು ಅನಂತವಿಧವಾಗಿದ್ದರೂ ಸ್ವಸ್ತಿಕಾಸನ, ಪದ್ಮಾಸನ, ಭದ್ರಾಸನ, ಯೋಗಾಸನ, ಗೋಮುಖಾಸನ ಎಂಬ ಐದು ಆಸನಗಳೇ ಪ್ರಧಾನವಾಗಿರುತ್ತವೆ.

ಪ್ರಾಣಸ್ಯ ಧಾರಣೇನೈವ ಪ್ರಾಣಾಯಾಮಾ ಇತೀರಿತಃ ।
ಪೂರಕಃ ಕುಂಭಕಶ್ಚೈವ ರೇಚಕಶ್ಚೇತಿ ತೇ ತ್ರಿಧಾ ॥

ಪ್ರಾಣವಾಯುವನ್ನು ತಡೆಯುವುದರಿಂದ ಪ್ರಾಣಾಯಾಮವೆಂದು ಹೆಸರು. ಅದು ಪೂರಕ, ಕುಂಭಕ, ರೇಚಕ ನೆಂದು ಮೂರು ವಿಧ.

ಇಂದ್ರಿಯಾಣಾಂ ಯಥಾ ಸ್ವಂ ಸ್ವಂ ವಿಷಯಂ ಪರಿಧಾವತಾಂ ।
ಬಲಾದಾಹರಣಂ ತೇಷಾಂ ಪ್ರತ್ಯಾಹಾರಃ ಪ್ರಚಕ್ಷತೇ ॥

ತಮ್ಮ ತಮ್ಮ ವಿಷಯಗಳನ್ನು ಕುರಿತು ಬಹಿರ್ಮುಖವಾಗಿ ಪರಿಧಾವಿಸುತ್ತಿರುವ ಚಕ್ಷುರಾದಿ ಜ್ಞಾನೇಂದ್ರಿಯಗಳನ್ನು ಬಲಾತ್ಕಾರವಾಗಿ ಹಿಂತಿರುಗಿಸುವುದೇ ಪ್ರತ್ಯಾಹಾರವೆನಿಸುವದು.

ಯಮಾಭ್ಯೇಃ ಪಂಚಭಿಸ್ತ್ವೆಸ್ತೈರ್ನಿಯಮಶುದ್ಧಸ್ಯ ತು ಯೋಗಿನಃ ।
ಆತ್ಮನ್ಯವಸ್ಥಿತಿಂ ಬುದ್ಧೇರ್ಧಾರಣಾಂ ಸಂಪ್ರಚಕ್ಷತೇ ॥

ಯಮನಿಯಮ ಆಸನಪ್ರಾಣಾಯಾಮ ಪ್ರತ್ಯಾಹಾರಗಳಿಂದ ಪರಿಶುದ್ಧನಾದ ಯೋಗಿಯು ಬುದ್ಧಿಯನ್ನು ಆತ್ಮನಲ್ಲಿ ಸ್ಥಿರಗೊಳಿಸುವುದೇ ಧಾರಣವೆನಿಸುವದು.

ಮಿಮಿತ್ತಿಕೋಣಾರಸಕೋಣಯುಶಾಕ್ಷಪಶ್ಚಿಶ್ರೀಕೋಡಕಾರ ಬಲಯತ್ರಯಯಭೂಯಾಶ್ಚೇ ॥ ಜಕ್ರೇಸ್ವ ಕೀಯಹೃದಿ ಭಾವನಯಾ ಪ್ರಕೃಷ್ಟೇ ಧ್ಯಾಯೇಚ್ಚಿವಂ ನಿರಿಜಯಾ ಸಹ ಯೋಗಶೈವಃ ॥

ಆಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞೇಯ, ಸಹಸ್ರಾರವೆಂದು ಶರೀರದಲ್ಲಿ ಏಳು ಸ್ಥಾನಗಳುಂಟು. ಇವುಗಳಿಗೆ ಚಕ್ರವೆಂದು ಸಂಜ್ಞೆ. ಒಂದೊಂದು ಚಕ್ರವು ಪ್ರಣವಮಾದಿ ಆಯಾಯ ಅಕ್ಷರಗಳೆಂಬ ನಾಲ್ಕು ಆರು ಎಂಟು ಹನ್ನೆರಡು ಹದಿನಾರು ದಳಗಳಿಂದ ಕೂಡಿರುವದು. ಈ ಸ್ಥಾನಗಳಲ್ಲೆಲ್ಲಾ ಕುಕ್ಷ್ಯುರಸ್ಸುಗಳ ಮಧ್ಯದಲ್ಲಿರುವ ಹೃದಯಸ್ಥಾನವೇ ಪರಮಾತ್ಮಧ್ಯಾನಕ್ಕೆ ಸುಖತರಸ್ಥಾನವಾದುದರಿಂದ ಅಂಥ ಹೃದಯಸ್ಥಾನದಲ್ಲಿ ಗಿರಿಜೆಯಿಂದೊಡಗೂಡಿದ ಲಿಂಗಮೂರ್ತಿಯನ್ನು ಜಿನಿ ಚೈನ್ಯವಾಗಿ ಸ್ಫುರಿಸುತ್ತಿರುವುದೇ ಧ್ಯಾನವೆನಿಸುವದು.

ಸಮಾಧಿಸ್ತ್ವಖಾವಸ್ಥಾತ್ರಿ ಜೀವಾತ್ಮಪರಮಾತ್ಮನೋ ।
ತತ್ವಚಿಪಾಹ್ಯಯಂ ಬ್ರಹ್ಮ ಪರಂಜ್ಯೋತಿಸ್ವನಿರ್ಮಲಂ ॥

ಸರ್ವೇಂದ್ರಿಯಗಳ ಉಪರಮದಿಂದ ಜೀವಾತ್ಮ ಪರಮಾತ್ಮರ ಸಮಭಾವವುಳ್ಳವನಾಗಿ ಶಿವಸ್ವರೂಪನೂ, ಪರಂಜ್ಯೋತಿಸ್ವರೂಪನೂ, ಸುನಿರ್ಮಲನೂ ಆದ ಪರಶಿವತಾದಾತ್ಮ್ಯವೇ ಸಮಾಧಿಯು. ಹೀಗೆ ಅಷ್ಟಾಂಗಗಳಿಂದ ಕೂಡಿದುದೇ ಯೋಗವು. ಈ ಯೋಗವು ಸಾಕಾರವೆಂತಲೂ ನಿರಾಕಾರವೆಂತಲೂ ಎರಡು ಪ್ರಕಾರವು. ಭಕ್ತಿ-ಜ್ಞಾನ-ವೈರಾಗ್ಯ-ಧ್ಯಾನ-ಏಕಾಂತಸಾಧನ-ಭಿಕ್ಷಾಟನ-ಲಿಂಗಪೂಜೆ-ಸಂತತಸ್ಮರಣ-ಎಂಬ ಎಂಟು. ಅನಯವಗಳಿಂದಕೂಡಿ ನಿರ್ಜನಸ್ಥಲದಲ್ಲಿ ಕಂಬಳಾದ್ಯಾಸನದಲ್ಲಿ ಸಮಕಾಯಶಿರೋಗ್ರೀವವುಳ್ಳವನಾಗಿ ಕುಳಿತು ಸ್ವಹೃದಯವೆಂಬ ಸಿಂಹಾಸನದಲ್ಲಿ ಶೋಭಿಸುತ್ತಿರುವ ಸೂರ್ಯಕೋಟಿಸಮಪ್ರಭನೂ ಸರ್ವದೇವಮಯನೂ ಸರ್ವಶಕ್ತಿಮಯನೂ ಸರ್ವಮಂತ್ರಮಯನೂ ಉಮಾಸಹಿತನೂ ಆದ ಲಿಂಗಮೂರ್ತಿಯನ್ನು ಧ್ಯಾನಿಸುವವನೇ ಯೋಗಶೈವನೆನಿಸುವನು. ತಿರೋಹಾಸಕ್ತನಾದ ಶೈವನು ಯಮಭಿಯಮಾದ್ಯಷ್ಟಾಂಗಗಳಿಂದೊಡಗೂಡಿ ಯೋಗಾಭ್ಯಾಸದಲ್ಲಿ ನಿರತನಾಗಿರುವುದರಿಂದ ಯೋಗಶೈವ ಎಂಬ ಅಭಿಧಾನವನ್ನು ಪಡೆಯುವನು.

ಒಳದೇಶದ ವೃತ್ತಾಂತಗಳು.

ಮೈಸೂರು ನಗರವಲ್ಲಿ ' ಲ್ಯಾಕ್ ಅಂಡ್ ಪೆಯಿಂಟ್ ' ಕಾರ್ಖಾನೆಯನ್ನು ಸ್ಥಾಪಿಸಲು ಸರ್ಕಾರದವರು ಅನುಮತಿ ಕೊಟ್ಟಿದ್ದಾರೆ.

ಶ್ರೀಮನ್ಮಹಾರಾಜರವರು ಪರಿವಾರಸಮೇತ ಮೊಂಬಾಯಿಗೆ ದಯಮಾಡಿಸಿರುತ್ತಾರೆ. ಅಲ್ಲಿ 2-3 ವಾರಗಳವರೆಗೆ ವಿಶ್ರಾಂತಿಯನ್ನು ಹೊಂದಿ ರಾಜಧಾನಿಗೆ ಹಿಂತಿರುಗುವರೆಂದು ತಿಳಿದುಬರುತ್ತದೆ.

ರಾಜಧಾನಿಯ ನಜರಬಾದ್ ಚಾವುಂಡೇಶ್ವರೀ ದೇವಸ್ಥಾನದಲ್ಲಿರುವ ಒಂದು ಬೇವಿನಮರದಿಂದ ಎಳೆನೀರಿನಂತೆ ಮಧುರವಾದ ರಸವು ಉಕ್ಕಿಹರಿಯುತ್ತಿದೆ. ಈ ವೈಚಿತ್ರ್ಯವನ್ನು ಕಂಡು ಪ್ರತಿನಿತ್ಯವೂ ನೂರಾರು ಜನರು ಆ ಬೇವಿನಮರವನ್ನು ಪೂಜಿಸಿ ಬರುತ್ತಿದ್ದಾರೆ.

ಸರ್ಕಾರದವರು ಚಿತ್ರದುರ್ಗಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಲು 3,11,000 ರೂ. ಗಳನ್ನು ಮಂಜೂರು ಮಾಡಿರುತ್ತಾರೆ. ತಿಪ್ಟೂರು, ಕುಣಿಗಲು ಮತ್ತು ಬೇಲೂರುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಮಂಜೂರಾಗಿದೆ. ದಾವಣಗೆರೆಗೆ ಈ ತಿಂಗಳಲ್ಲಿ ವಿದ್ಯುಚ್ಛಕ್ತಿಯನ್ನೊದಗಿಸಲು ಸಿದ್ಧತೆಗಳು ನಡೆಯುತ್ತಿವೆ.

ನಮ್ಮ ಸರ್ಕಾರದವರು ಸ್ತ್ರೀಯರಿಗೆ ಮಿಡಲ್ ಸ್ಕೂಲ್ (ಲೋವರ್ ಸೆಕೆಂಡರಿ) ಪರೀಕ್ಷೆಯನ್ನು ಏಚ್ಛಿಕವಾಗಿ ಮಾಡಿರುತ್ತಾರೆ. ವಿದ್ಯಾರ್ಥಿನಿಯರು ಸಾಧಾರಣ ಕ್ಲಾಸು ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿ ಹೈಸ್ಕೂಲಿನ ವ್ಯಾಸಂಗವನ್ನು ಮುಂದುವರಿಸಲು ಸರ್ಕಾರದವರು ಗೊತ್ತು ಮಾಡಿರುವ ಮಾದರಿಯಲ್ಲಿ ಮಾಧ್ಯಮಿಕಶಾಲಾ ಮುಖ್ಯೋಪಾಧ್ಯಾಯರು ಸರ್ಟಿಫಿಕೇಟನ್ನು ಕೊಡುವಂತೆ ಏರ್ಪಾಡುಮಾಡಿರುತ್ತಾರೆಂದು ಪ್ರಕಟವಾಗಿದೆ.

ಭದ್ರಾವತಿ ಹೋಟಲು ಮಾಲೀಕನಾದ ನಾರಾಯಣ ಭಟ್ಟನನ್ನು ಕೊಂದುಹಾಕಿದನೆಂಬ ಆಪಾದನೆಯ ಮೇಲೆ 20 ವರುಷ ವಯಸ್ಸಿನ ಶಾಂತರಾಜಯ್ಯ ನೆಂಬವನಿಗೆ ಶಿವಮೊಗ್ಗಾ ಸೆಷನ್ ಜಡ್ಜರು ಮರಣದಂಡನೆಯನ್ನು ವಿಧಿಸಿದ್ದರು. ಅಪರಾಧಿಯು ಹೈ ಕೋರ್ಟಿಗೆ ಅಪೀಲು ಮಾಡಿಕೊಂಡಿದ್ದರಮೇಲೆ ಈರ್ವರು ಜಡ್ಜರು ವಿಚಾರಣೆ ನಡೆಸಿ ಅಪರಾಧಿಯ ಸಣ್ಣವಯಸ್ಸನ್ನು ಗಮನಕ್ಕೆ ತಂದು ಮರಣ ದಂಡನೆಯನ್ನು ತಪ್ಪಿಸಿ ಆಮರಣಾಂತ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಹಿಮಾಲಯದ ಜ್ಯೋತಿರ್ಮಠದ ಶ್ರೀಸ್ವಾಮಿ ನಿತ್ಯಾನಂದಜಿಯವರು ಹಿಮಾಲಯಪ್ರಾಂತಕ್ಕೆ ಬರುವ ಯಾತ್ರಿಕರಿಗೆ ಅನೇಕ ಸೌಕರ್ಯಗಳನ್ನೊದಗಿಸಲು ಆಶ್ರಮಗಳು, ಧರ್ಮಶಾಲೆಗಳು, ಗೋಶಾಲೆಗಳೇ ಮೊದಲಾದುವನ್ನು ಕಲ್ಪಿಸಲೋಸುಗ ಕೈಲಾಸಮಾನಸಸರೋವರಕುಂಭ ಯಾತ್ರಾಸಮಿತಿಯ ಪ್ರಧಾನ ಶಾಲಾಕಶ್ವವನ್ನು ಪಡೆದು ಆ ವಿಷಯವಾಗಿ ನಮ್ಮ ಶ್ರೀಮನ್ಮಹಾರಾಜರವರಲ್ಲಿ ಆಲೋಚನೆ ನಡೆಸಲೋಸುಗ ರಾಜಧಾನಿಗೆ ಆಗಮಿಸಿ ರಾಜಾತಿಥಿಗಳಾಗಿದ್ದರು. ಬರುವ 1939ನೇ ಮೇ ತಿಂಗಳಲ್ಲಿ " ಕೈಲಾಸ-ಮಾನಸಸರೋವರಕುಂಭ " ಎಂಬ ಪ್ರಸಿದ್ಧ ಜಾತ್ರೆಯೊದಗುತ್ತದೆ. ಆಗ ಯಾತ್ರಿಕರಿಗೆ ವಿಶೇಷ ಸೌಕರ್ಯಗಳನ್ನೊದಗಿಸಲು ಈ ಸ್ವಾಮಿಗಳು ಕೈಗೊಂಡಿರುತ್ತಾರೆ. ಮಾಲ್ಪ, ಹಾಂಕಾಂಗ್ ಪಾತಾಳ ಭುವನೇಶ್ವರ ಮುಂತಾದ ಸ್ಥಳಗಳಲ್ಲಿ ಧರ್ಮಶಾಲೆಗಳನ್ನು ಕಟ್ಟಿಸುವ ಅವಶ್ಯಕತೆಯನ್ನು ಶ್ರೀಸ್ವಾಮಿಗಳು ತಿಳುಹಿಸಿದರೆಂದು ತೋರುತ್ತದೆ. ರಾಜಧಾನಿಯಲ್ಲಿರುವ " ಏ ಮಾದರ್ ಫಾರ್ಪಸಿ " ಮಾಲಕರಾವ ಡಾಕ್ಟರ್ ಎಂ. ಅಣ್ಣಾಜಿಪಪ್ಪನವರು ಆ ಕ್ಷೇತ್ರಗಳಲ್ಲಿ ಧರ್ಮಶಾಲೆಗಳನ್ನು ಕಟ್ಟಿಸುವುದಕ್ಕಾಗಿ 2000 ರೂ. ಗಳನ್ನು ಶ್ರೀ ಸ್ವಾಮಿಗಳಿಗೆ ದಾನಮಾಡಿದ್ದಾರೆ. 1939 ನೆಯ ಮೇ ತಿಂಗಳಲ್ಲಿ ಧರ್ಮಶಾಲಾಕಟ್ಟಡವು ಪೂರೈಸುವುದೆಂತೆ!

ರಾಜಧಾನಿಯಲ್ಲಿರುವ ಮರಿಮಲ್ಲಪ್ಪನವರ ಹೈಸ್ಕೂಲ್ ಸ್ಥಾಪನದಿನೋತ್ಸವವನ್ನು ಈ ತಿಂಗಳು 21 ನೆಯ ತಾರೀಖು ಬುಧವಾರದಿವಸ ನಡೆಸಬೇಕೆಂದು ಗೊತ್ತುಮಾಡಲ್ಪಟ್ಟಿದೆ. ವಿದ್ಯಾಪ್ರಚಾರವು ಹೆಚ್ಚಾಗಿಲ್ಲದ ಆ ಕಾಲದಲ್ಲಿ ವೀರಶೈವಮತೀಯರಾದ ಶ್ರೀ ಗುರಿಕಾರ ಮರಿಮಲ್ಲಪ್ಪನವರು ಅದಕ್ಕಾಗಿ ಒಂದು ಲಕ್ಷರೂಪಾಯಿಗಳನ್ನು ದಾನಮಾಡಿ 1871 ರಲ್ಲಿ ಶಿವಾಧೀನರಾದರು. ಅವರ ಆಶಯವನ್ನು ನೆರವೇರಿಸಲು 1876 ರಲ್ಲಿ ಇಂಗ್ಲೀಷ್ ಮತ್ತು ದೇಶಭಾಷಾಪಾಠಶಾಲೆಯು ಪ್ರಾರಂಭವಾಯಿತು. 1905 ರಿಂದ ಹೈಸ್ಕೂಲ್ ತರಗತಿಗಳು ಏರ್ಪಟ್ಟು ವಿದ್ಯಾಪ್ರಚಾರವು ನಡೆಯುತ್ತ ಬಂದಿದೆ. ಈ ಪಾಠಶಾಲೆಯಲ್ಲಿ ಶಿಕ್ಷಣಹೊಂದಿದ ಅನೇಕರು ಸರಕಾರಿ ಉದ್ಯೋಗಗಳಲ್ಲಿದ್ದು ಯಶಸ್ಸು ಪಡೆದಿರುತ್ತಾರೆ. ಮೈಸೂರಿನ ವೃದ್ಧ ತಾಮಹೆರೆಂದು ಪ್ರಸಿದ್ಧಿಪಡೆದ ಎಂ. ವೆಂಕಟಕೃಷ್ಣಯ್ಯನವರು ಈ ಶಾಲೆಯ ಮುಖ್ಯೋಪಾಧ್ಯಾಯರಾಗಿ 30 ವರ್ಷವಿದ್ದು ಕೀರ್ತಿಶೇಷರಾದರು. ಇಂತಹ ಸುಪ್ರಸಿದ್ಧ ಪಾಠಶಾಲೆಯ ವಾರ್ಷಿಕೋತ್ಸವದಲ್ಲಿ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ಅಧ್ಯಕ್ಷತೆವಹಿಸಿ ಮಾ|| ಎಂ. ವೆಂಕಟಕೃಷ್ಣಯ್ಯನವರ ಮತ್ತು ಗುರಿಕಾರ್ ಮರಿಮಲ್ಲಪ್ಪನವರ ಭಾವಚಿತ್ರಗಳನ್ನು ಅನಾವರಣಮಾಡುವರೆಂದು ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

1600 ಚೀನಾ ಸೈನಿಕರು ಮಡಿದರು

ಕ್ಯಾಂಟೊನಗರದ ದಕ್ಷಿಣ ಪ್ರದೇಶದಲ್ಲಿ ನಡೆದ ಜಪಾನೀ ಸೈನಿಕರ ಕಾರ್ಯ ಕ್ರಮದ ಪರಿಣಾಮವಾಗಿ 1600 ಮಂದಿ ಚೀನಾ ಸೈನಿಕರು ಮರಣ ಹೊಂದಿದರೆಂದೂ ಚೀನಾ ಸೈನಿಕರನ್ನು ಸಾಗಿಸಲು ಇಟ್ಟಿದ್ದ 6 ಹಡಗುಗಳನ್ನು ಮುಳುಗಿಸಲಾಯಿತೆಂದೂ, ಒಂದು ಸ್ಟೀಮರನ್ನು ವಶಪಡಿಸಿಕೊಳ್ಳಲಾಯಿತೆಂದೂ ತಿಳಿಯುತ್ತದೆ.

ಜೋಂಬಾಯಿಯಲ್ಲಿ ನರೇಂದ್ರಮಂಡಲದ ಸಭೆ

ಜೋಂಬಾಯಿಯಲ್ಲಿ ನಡೆದ ನರೇಂದ್ರಮಂಡಲದ ಸಭೆಯಲ್ಲಿ ಮಂಡಲದ ಛಾನ್ಸೆಲರ್‌ರವರು ಭಾಷಣ ಮಾಡುತ್ತ ರಾಜರಲ್ಲಿ ಭಕ್ತಿಯುಳ್ಳ ಪ್ರಜೆಗಳ ನಿಜವಾದ ಕುಂದು ಕೊರತೆಗಳು ಪರಿಹರಿಸಲ್ಪಡಬೇಕು; ಆದರೆ ಸಂಸ್ಥಾನದ ಸ್ಥಿರಗತಿಗೆ ಆತಂಕವನ್ನುಂಟು ಮಾಡುವ ತುಂಟ ಚಳುವಳಿಯನ್ನು ನಿರ್ನಾಮ ಮಾಡಬೇಕು" ಎಂದು ಹೇಳಿದರು.

ಸ್ಪೇ ಅನಾಥರಿಗೆ ರಷ್ಯದ ಸಹಾಯ

ಸ್ಪೇ ದೇಶದ ಅಂತರ್ಯುದ್ಧದ ದೆಸೆಯಿಂದ ಅನಾಥರಾಗಿರುವ ಮಕ್ಕಳು ಮರಿಗಳ ಸಹಾಯಾರ್ಥವಾಗಿ ಸ್ವದೇಶದ ಧರ್ಮಾತ್ಮರು ಹಣವನ್ನು ಕೂಡಿಸಿ ಅದರ 4820 ಟನ್ ಗೋಧಿಯನ್ನೂ ಹಾಲು ಮತ್ತು ಪಾಸ್ಚುರಸ್ತುಗಳ 1ಲಕ್ಷ ಡಬ್ಬಗಳನ್ನೂ 30 ಟನ್ ಸಕ್ಕರೆ 16 ಟನ್ ಜೆಲ್ಲಿಯನ್ನೂ ಕಳುಹಿಸಿ ಕೊಡುವ ವಿಚಾರಮಾಡುತ್ತಿದೆ.

ಸೇನಾಪತಿ ಬಾಪಟ್‌ರವರಿಗೆ ಶಿಕ್ಷೆ

ಗುಲ್ಬರ್ಗಾವಲ್ಲಿ ಬಂಧಿಸಲ್ಪಟ್ಟ ಕಾಂಗ್ರೆಸ್ ನುಡಾಗಲಾದ ಸೇನಾಪತಿ ಬಾಪಟ್ ಮತ್ತು ಇತರ 19 ಮಂದಿಗಳನ್ನು ಅಲ್ಲಿಯ ಸಿಟಿ ಮ್ಯಾಜಸ್ಟ್ರೇಟರು 7 ನೆಯ ದೀಪಾವಳಿದಿನ ಶಿಕ್ಷೆಗೆ ಗುರಿಪಡಿಸಿದರು. ಬಾಪಟ್‌ರವರಿಗೆ ಸರ್ವ ಕಠಿನಶಿಕ್ಷೆ ಮತ್ತು 700 ರೂಪಾಯಿಗಳ ದಂಡ, ದಂಡಕೊಡಲು ತಪ್ಪಿದರೆ, ಮತ್ತೆ 3 ತಿಂಗಳ ಕಠಿನಶಿಕ್ಷೆಯನ್ನು ವಿಧಿಸಿದರು.

ತಿರುವಾಂಕೂರಿನಲ್ಲಿ ಸ್ತ್ರೀ ಪೋಲೀಸರು!

ತಿರುವಾಂಕೂರಿನಲ್ಲಿ 12 ಮಂದಿ ಸ್ತ್ರೀಯರನ್ನು ಪೋಲೀಸ್‌ಶಾಖೆಗೆ ಪದ್ಯದಲ್ಲೇ ಸೇರಿಸಿಕೊಳ್ಳಲಾಗುವುದು. ಇವರುಗಳು ತಿರುವಾಂಕೂರು ಪೋಲೀಸುಶಾಖೆಯ ಮುಖ್ಯ ಕಚೇರಿಯಲ್ಲಿ ಕೆಲಸಮಾಡುವರು. ಈ ಪ್ರಯತ್ನವು ಸಮರ್ಪಕವಾದಲ್ಲಿ ಇತರ ಜಿಲ್ಲೆಗಳಲ್ಲೂ ಹೆಂಗಸರನ್ನು ಪೋಲೀಸ್‌ಕಾಖೆಗೆ ನಿಯುಮಿಸಿಕೊಳ್ಳಲಾಗುವುದೆಂದು ತಿಳಿದುಬಂದಿದೆ.

ರೇಲ್ವೆ ಸ್ಟೇಷನ್ನಿನ ಮೇಲೆ ಧಕಾಯಿತರ ಧಾಳಿ!

ಕಳೆದ 27 ನೆಯ ತಾರೀಖಿನ ದಿವಸ ಬಿ. ಬಿ. ಸಿ. ಐ ರೈಲ್ವೆಯ ಹಲೂಡಾ ಸ್ಟೇಷನ್ನಿನ ಮೇಲೆ ಸಶಸ್ತ್ರರಾದ 25 ಮಂದಿ ಧಕಾಯಿತರು ಧಾಳಿನಡೆಸಿದರು. ಪ್ಯಾಸೆಂಜರು ಟ್ರೈನು ಬಂದು ನಿಂತಿರುವಾಗ್ಗೆ ಕೈಲಿ ಬಂದೂಕಗಳನ್ನು ಹಿಡಿದು ಧಕಾಯಿತರು ಸ್ಟೇಷನ್ನಿನಮೇಲೆ ಮುಗ್ಗಿದರು ಆದನ್ನು ಕಂಡ ಡ್ರೈವರು ರೈಲನ್ನು ಓಡಿಸಿಕೊಂಡು ಹೋದನು. ಪ್ರಯತ್ನವು ನಿಷ್ಫಲವಾದ್ದರಿಂದ ಕೋಪಗೊಂಡ ಧಕಾಯಿತರು ಬಂದೂಕದಿಂದ ಸಿಕ್ಕಿದಂತೆ ಹೊಡೆಯಹತ್ತಿದರು. ಒಬ್ಬ ಪೋರ್ಟರನಿಗೆ ಗಾಯಗಳಾಗಿವೆ.

ತಿರುವಾಂಕೂರು ಮತ್ತು ಕೈಲಾ ಬ್ಯಾಂಕ್

ತಿರುವಾಂಕೂರು ನ್ಯಾಷನಲ್ ಮತ್ತು ಕ್ವೈಲಾ ಬ್ಯಾಂಕಿನಲ್ಲಿ ನೌಕರರು ಕೊಟ್ಟಿರುವ ಸಕ್ಯುರಿಟಿ ಹಣವನ್ನೂ ಪ್ರಾವಿಡೆಂಟ್ ಫಂಡಿಗಾಗಿ ಅವರುಗಳು ಕೊಟ್ಟಿರುವ ಹಣವನ್ನೂ ಅವರುಗಳಿಗೆ ಹಿಂದಕ್ಕೆ ಕೊಟ್ಟುಬಿಡಬೇಕೆಂದೂ ಪ್ರಾವಿಡೆಂಟ್ ಫಂಡ್ ಲೆಕ್ಕವಲ್ಲಿ ಅವರವರ ಹೆಸರಿನಲ್ಲಿ ಎಷ್ಟು ಹಣವಿದೆಯೋ ಅದನ್ನು ಸಂಪೂರ್ಣವಾಗಿ ಸಡೆಯಲು ಅವರು ಹೆಕ್ಕ ಪಡೆದಿರುತ್ತಾರೆಂದೂ ಮದರಾಸಿನ ಹೈಕೋರ್ಟಿನ ನ್ಯಾಯಾಧೀಶರು ಆರ್ಡರು ಮಾಡಿರುತ್ತಾರೆ.

ತಲೆಯಿಲ್ಲದ ತರುಣಿಯ ಶವ

ಡೆಹರಾಡೂನಿನ ಪೋಲೀಸರು ಒಂದು ಸಣ್ಣ ಟ್ರಂಕಿನಲ್ಲಿ ಆಡಗಿಸಲ್ಪಟ್ಟಿದ್ದ ಯುವತಿಯ ಮೃತದೇಹವನ್ನು ಕಳೆದ 6 ನೆಯ ತಾರೀಖಿನ ರಾತ್ರಿ ಪತ್ತೆ ಮಾಡಿದರು. ಇಬ್ಬರು ಶವವಿದ್ದ ಪೆಟ್ಟಿಗೆಯನ್ನಿಟ್ಟುಕೊಂಡು ಕುಳಿತಿದ್ದರು. ಏನೋ ಸಂದೇಹ ಬಂದು ಪೋಲೀಸರು ಅವರನ್ನು ಪ್ರಶ್ನೆಮಾಡಲುಪಕ್ರಮಿಸಲು ಅವರಲ್ಲೊಬ್ಬನು ಓಡಿಹೋದನು. ಇನ್ನೊಬ್ಬನನ್ನು ಪೋಲೀಸರು ಹಿಡಿದು ಪೆಟ್ಟಿಗೆಯನ್ನು ತೆಗೆದುನೋಡಲು ಒಳಗೆ ಶಿರವಿಲ್ಲದ ತರುಣಿಯ ಮೃತದೇಹವಿರುವದು ಕಂಡುಬಂದಿತು. ಈ ಕೊಲೆ ಪಾತಕಿಗಳ ಮನೆಗಳನ್ನು ಶೋಧಿಸಲು ರಕ್ತಮಯವಾದ ವಸ್ತ್ರಗಳು ಪತ್ತೆಯಾದವು.

ಗಾಂಧಿಯವರ ಲೇಖನದ ಖಂಡನೆ

ಜರ್ಮನಿ ಸರ್ಕಾರವು ಯಹೂದ್ಯರ ವಿಷಯದಲ್ಲಿ ನಡೆಸುತ್ತಿರುವ ಕ್ರೂರ ವರ್ತನೆಯನ್ನು ಖಂಡಿಸಿ ಬರೆದಿರುವ ಗಾಂಧಿಯವರ ಲೇಖನವನ್ನು ಪ್ರತಿಭಟಿಸಿ ಬರ್ಲಿನ್ ನಗರದ 'ನಾಚಸ್‌ಗೆಬ್' ಎಂಬ ಪತ್ರಿಕೆಯು ಗಾಂಧಿಯವರನ್ನೂ ಭಾರತೀಯರನ್ನೂ ಉಗ್ರವಾಗಿ ಖಂಡಿಸಿದೆ. "ತಮಗೆ ತಿಳಿಯದ ವಿಷಯವಾಗಿ ಗಾಂಧಿಯವರು ಲೇಖನವನ್ನು ಬರೆದು ತಮಗೂ ತಮ್ಮ ಚಳವಳಿಗೂ ಜರ್ಮನಿ ಭಾರತದ ಭಾಂದವ್ಯಕ್ಕೂ ಯಾವ ಸೇವೆಯನ್ನೂ ಸಲ್ಲಿಸಿದಂತಾಗಿಲ್ಲ" ಎಂದು ಟೀಕಿಸಿದೆ. ಅಲ್ಲದೆ "ಭಾರತಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ತಾವು ಭಾಗವಹಿಸಿದರೆ ಬ್ರಿಟಿಷರ ವಿಚಾರವಾಗಿ ಮಾತ್ರವಲ್ಲದೆ ಭಾರತೀಯರ ವಿಷಯವಾಗಿಯೂ ಅನೇಕ ನ್ಯೂನತೆಗಳನ್ನು ಬಯಲಿಗೆ ಹಾಕಬಹುದು" ಎಂದು ಟೀಕಿಸಿದೆ.

ತಲೆಗಂದಾಯ

ಇಂಡಿಯದಲ್ಲಿ ಫ್ರೆಂಚ್ ಆಳ್ವಿಕೆಗೆ ಸೇರಿರುವ ಪ್ರದೇಶಗಳಲ್ಲಿ ವಾಸಮಾಡುತ್ತಿರುವ ಪ್ರತಿ ಬ್ರಿಟಿಷ್ ಇಂಡಿಯಾದ ಪ್ರಜೆಯೂ 1939ನೇ ಇಸವಿ ಜನವರಿ 1ನೆಯ ತಾರೀಖಿನಿಂದ ವರ್ಷವೊಂದಕ್ಕೆ 20 ರೂಪಾಯಿಗಳ ತಲೆಗಂದಾಯ ಕೊಡಬೇಕೆಂದು ಅಲ್ಲಿಯ ಸರ್ಕಾರದವರು ಒಂದು ಹೊಸ ಆರ್ಡರನ್ನು ಜಾರಿ ಮಾಡಿರುತ್ತಾರೆ. ಫ್ರೆಂಚ್ ಇಂಡಿಯಾಪ್ರದೇಶಕ್ಕೆ ಹೋಗಿ ವಾಸಮಾಡುತ್ತಿರುವವರೆಲ್ಲರೂ ಬ್ರಿಟಿಷ್ ಇಂಡಿಯಾದಿಂದ ಬಂದ ಬಡಜನರೇಂದು ಅವರು ಅನೇಕಕಲೆಗಳಿಂದ ಅಲ್ಲಿಯೇ ಹೋಗಿ ನೆಲಸಿರುವರೆಂದೂ ಇಂಥವರಮೇಲೆ ಈ ತಲೆಗಂದಾಯದ ಹೊರೆ ಹೊರಿಸುವುದು ನ್ಯಾಯವಲ್ಲವೆಂದೂ ಕಾಲೈಕಲ್ಲಿನ ಪ್ರಜೆಗಳು ಫ್ರೆಂಚ್ ಗೌರ್ನರಿಗೆ ವಿಜ್ಞಾಪಿಸಿಕೊಂಡಿರುತ್ತಾರೆ. ಮದರಾಸಿನ ಪ್ರಧಾನ ಸಚಿವರಾದ ಮಾ|| ಸಿ. ರಾಜಗೋಪಾಲಾಚಾರ್ಯರೂ ಸಹ ಈ ಹೊಸ ತೆರಿಗೆ ವಿಚಾರದಲ್ಲಿ ತಮ್ಮ ಅಸಮಾಧಾನವನ್ನು ಫ್ರೆಂಚ್ ಇಂಡಿಯಾ ಸರ್ಕಾರದವರಿಗೆ ತಿಳಿಸಿರುತ್ತಾರೆಂದೂ, ಅದನ್ನು ವಜಾಮಾಡಿಸಲು ತಮ್ಮ ಕೈಲಾದ ಪ್ರಯತ್ನಗಳೆಲ್ಲವನ್ನು ಮಾಡುವುದಾಗಿ ಭರವಸೆ ಇತ್ತಿರುವರೆಂದೂ ತಿಳಿದುಬರುತ್ತದೆ.

ಪ್ರಸಿದ್ಧ ಧಕಾಯಿತನ ಕೊಲೆ

ಗಡಿನಾಡಿನ ಲಾರಿಮಾರ್‌ವತ್ ಎಂಬಲ್ಲಿ ಪ್ರಸಿದ್ಧ ಧಕಾಯಿತನಾದ ಲೀಲಾಷೀಕ್ ಎಂಬವನನ್ನು ಗುಂಡಿನಿಂದ ಹೊಡೆದು ಕೊಂದರು. ಇವನಂತೆಯೇ ಪ್ರಸಿದ್ಧನಾದ ಸಾದಾಖಾನ್ ಎಂಬ ಪುಂಡನು ಆ ಹಳ್ಳಿಯ ಮನೆಯಲ್ಲಿ ಅಡಗಿರುವನೆಂಬ ಸುದ್ದಿ ಪೋಲೀಸರಿಗೆ ತಿಳಿದು ಆ ಮನೆಯನ್ನು ಸುತ್ತುವರಿದು ಸಾದಾಖಾನನನ್ನು ಬಂಧಿಸಿ ಕೈಕೋಳವನ್ನು ಹಾಕುತ್ತಿದ್ದಾಗ ಯಾರೋ ಪೋಲೀಸ್ ಕಾನ್ಸ್ಟೇಬಲನನ್ನು ಗುಂಡಿನಿಂದ ಹೊಡೆದು ಕೊಂದರು. ಸಾದಾಖಾನನು ಕೋಳಗಳ ಸಮೇತ ಪರಾರಿಯಾದನು. ಆದರೆ ಪೋಲೀಸರು ಅವನ ಜೊತೆ ಗಾರನನ್ನು ಗುಂಡಿಟ್ಟು ಕೊಂದರು. ಹೀಗೆ ವ್ಯಸನಾದವನು ಪ್ರಸಿದ್ಧನಾದ ಲೀಲಾಷೀಕ್ ಎಂಬ ಧಕಾಯಿತನೆಂದು ಗೊತ್ತಾಯಿತು.

ಹ್ಯಾಲಸ್ಟೈನ್ ಗುಪ್ತ ನ್ಯಾಯಾಸ್ಥಾನದ ಮುಕ್ತಿಗೆ

ಆಟ್ಟೆಲ್ ಎಂಬ ಹಳ್ಳಿಯೊಂದರಲ್ಲಿ ದಂಗೆಕೋರರ ಅರಬರು ನಡೆಸುತ್ತಿದ್ದ ಗುಪ್ತ ನ್ಯಾಯಾಸ್ಥಾನವೊಂದಕ್ಕೆ ಬ್ರಿಟಿಷ್ ಸೈನಿಕರು ಮುತ್ತಿಗೆಹಾಕಿ ಇಬ್ಬರು ನ್ಯಾಯಾಧೀಶರನ್ನೂ ಇಬ್ಬರು ವಾರ್ತಾವಾಹಕರನ್ನೂ ಮತ್ತು ಸುತ್ತಲಿನ ಹಳ್ಳಿಗಳಿಂದ ಬಂದಿದ್ದ ಅನೇಕ ಕಕ್ಷಿದಾರರನ್ನೂ ದಸ್ತಗಿರಿಮಾಡಿದರು. ಮತ್ತು ಅಲ್ಲಿದ್ದ ಬಂದೂಕುಗಳು, ಮದ್ದು ಗುಂಡುಗಳು ಟೈಪ್‌ರೈಟರ್‌ಗಳು, ಟೆಲಿಫೋನುಗಳು ಮತ್ತು ಕಳವುಮಾಡಲ್ಪಟ್ಟಿದ್ದ ಪೋಲೀಸ್ ಕಾಗದ ಪತ್ರಗಳು ಎಲ್ಲವನ್ನೂ ವಶಪಡಿಸಿಕೊಂಡರು. ಅದೇ ಸೈನ್ಯಪಡೆಯು ಪಕ್ಕದ ಹಳ್ಳಿಯೊಂದರಲ್ಲಿ 35 ಮಂದಿ ಅರಬ್ಬಿಯವರನ್ನು ದಸ್ತಗಿರಿಮಾಡಿತು. ಅವರೆಲ್ಲರೂ ದುಷ್ಕರ್ಮಗಳಲ್ಲಿ ತೊಡಗಿರುವ ಸಶಸ್ತ್ರಪಡೆಗಳಿಗೆ ಸೇರಿದವರೆಂದು ತಿಳಿಯಲಾಗಿದೆ.

ರಾಜಕೋಟೆಯಲ್ಲಿ ಸುಧಾರಣೆಗಳು.

ರಾಜಕೋಟೆಯ ರಾಕೂರರು ಪ್ರಜೆಗಳಿಗೆ ಕೊಡಲಿರುವ ಸುಧಾರಣೆಗಳನ್ನು ಸೂಚಿಸಿ ಒಂದು ಪ್ರಕಟಣೆಯನ್ನು ಹೊರಡಿಸಿರುವರು. ಅದರಲ್ಲಿ ರೈತರ ಕಂದಾಯವನ್ನು ಇಳಿಸಿದರೂ ಮತ್ತು ಹಲವು ರಿಯಾಯಿತಿಗಳನ್ನು ತೋರಿಸಿದರೂ ಪ್ರಜೆಗಳು ಇನ್ನೂ ಚಳವಳಿ ನಡೆಸುತ್ತಿರುವುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಪ್ರಜೆಗಳಿಗೆ ಆಡಳಿತದಲ್ಲಿ ಹೆಚ್ಚು ಅವಕಾಶವನ್ನು ಕಲ್ಪಿಸಿಕೊಡುವುದಕ್ಕೆ ಸೂಚಿಸಿದ್ದಾರೆ. ರಾಷ್ಟ್ರನಿರ್ಮಾಣಶಾಖೆಯನ್ನು ಪ್ರಜಾಪ್ರತಿನಿಧಿಸಭೆಯಿಂದ ಚುನಾಯಿಸಲ್ಪಡುವ ಸಚಿವರಿಗೆ ಒಪ್ಪಿಸಲಾಗುವದೆಂದೂ, ಆ ಸಚಿವರು ಶಾಸನಸಭೆಗೆ ನೇರವಾಗಿ ಜವಾಬ್ದಾರರಾಗಿರುವರೆಂದೂ, ಪ್ರಜಾಪ್ರತಿನಿಧಿಸಭೆಯು ಈಗಿರುವ ಹಾಗೆ ಪೂರ್ಣವಾಗಿ ಚುನಾಯಿತ ಸದಸ್ಯರಿಂದ ಕೂಡಿ ಸಂಪೂರ್ಣ ಪ್ರಾತಿನಿಧ್ಯ ವಹಿಸಿರುವದೆಂದೂ ಭರವಸೆ ಇತ್ತಿದ್ದಾರೆ. ಸಂಸ್ಥಾನದ ಭೂ ಗಂದಾಯ ಮತ್ತು ಇತರ ವಿಚಾರಗಳನ್ನು ಪರೀಕ್ಷಿಸಲು ಪಾಸಗೀ ಸದಸ್ಯರ ಮತ್ತು ಅಧಿಕಾರವರ್ಗದ ಸಮಿತಿಯನ್ನು ನಿಯಮಿಸಲಾಗುವುದು. ಸಂಸ್ಥಾನದ ವೆಚ್ಚಕ್ಕೆ ಎಷ್ಟು ಬೋಕೋ ಅಷ್ಟು ಹಣವನ್ನು ಮಾತ್ರ ವಸೂಲ್ಮಾಡಲಾಗುವದೆಂದೂ ಬ್ರಿಟಿಷ್ ಭಾರತದಲ್ಲಿರುವ ಕಂದಾಯಕ್ಕಿಂತಲೂ ರಾಜಕೋಟೆಯಲ್ಲಿ ಹೆಚ್ಚಾಗಿರದಂತೆ ಮಾಡುವದಾಗಿಯೂ ಭರವಸೆ ಇತ್ತಿದ್ದಾರೆ. ರಾಜಕೋಟೆ ದಿವಾನರಾದ ಸರ್ ಕ್ಯಾಡೆಲ್ ರವರು ಈಗ ಆಚರಣೆಯಲ್ಲಿರುವ 144 ನೇ ವಿಧಿಯನ್ನು ಮತ್ತೆ ಎರಡು ತಿಂಗಳುಕಾಲ ಆಚರಣೆಯಲ್ಲಿಡಲಾಗುವದೆಂದು ಒಂದು ಪ್ರಕಟಣೆಯಲ್ಲಿ ಸೂಚಿಸಿದ್ದಾರೆ.

ಪ್ರಶ್ನೋತ್ತರರತ್ನಮಾಲಿಕಾ

ಲೇಖಕರು:—ಸುಬ್ಬರಾಯಾಸಾಧ್ಯ ರಾಜೆಪ್ಪೊಮ್ಮು
ಮಳೆಮಠ ಮುದೇನೂರು.

ಪ್ರ—ಅಹಂಕಾರ ಮಮಕಾರಗಳೆಂಬ ಪಿಶಾಚಿಗಳ ಆವಿರ್ಭಾವಕ್ಕಾಗಲು ಕಾರಣವೇನು?

ಉ—ಶ್ರೀಪ್ರರೂಪಾಜ್ಞಾನವೇ ಕಾರಣವು. ಈ ಪಿಶಾಚಿಗಳಿಂದ ಗ್ರಸ್ತನಾದವನು ರಾಹುಗ್ರಸ್ತ ಚಂದ್ರನಂತೆ ಅಪ್ರಕಾಶಕನಾಗುವನಲ್ಲದೆ ಬಲೆಗೆ ಬಿದ್ದ ಪಕ್ಷಿಗಳಂತೆ ದುಃಖಕ್ಕೀಡಾಗುವನು.

ಪ್ರ—ಅಣುರೇಣುತೃಣಕಾಷ್ಠಪಾಷಾಣಗಳಲ್ಲಿ ನೆಲೆಯಾಗಿರುವ ಪರಮಾತ್ಮನು ಅದೇಕೆ ಮರೆಯಾಗಿರುವನು?

ಉ—ದುಷ್ಪುತ್ರನಿಂ ತಲೆತಗ್ಗಿಸಿದ ಸಾಧುವಿನಂತೆ, ಮಣಿಗಳಿಗೆ ಸಮುದ್ರದಂತೆ ಸಕಲ ಅಧಿನ್ಯಾಧಿಗಳಿಗೆ ಕಾರಣನಾದ ಮನಸ್ಸಿನ ದುರ್ವೃತ್ತಿಯಿಂದ ಮರೆಯಾಗಿರುವನು ಇಚ್ಛಾಶ್ಯಕವಾದ ಈ ಮನಸ್ಸು ವಿಷಯಗಳಗೆರಗದಂತೆ ಹಿಂತಿರುಗಿಸುವುದೇ ಮನೋನಿಗ್ರಹವೆನಿಸುವದು ಮತ್ತು ವಿಚಾರದಿಂ ನಿತ್ಯಾನಿತ್ಯ ವಿವೇಕವುಂಟಾಗಲು ಬಿದಿರಿನಲ್ಲಿ ಮುತ್ತಿನಂತೆ ಮನದಲ್ಲಿ ಶ್ರೇಷ್ಠತ್ವವುಂಟಾಗುವದು ಆಗ ವಸಂತದಲ್ಲಿ ಚೇತ ಬಿಂಬದಂತೆ ಶ್ರೇಷ್ಠತ್ವವು ಪ್ರಕಾಶಿಸುವದು ತದನಂತರ ಸ್ವಾನುಭವಗಳೆಂಬ ಹೂವುಕ್ಷಗಳು ಶೋಭಿಸಿ ಆನಂದವೆಂಬ ಸುವಾಸನೆಯು ಎಲ್ಲೆಡೆಯಲ್ಲಿ ಪಸರಿಸುವದು ಆಗ ಮನಕ್ಕೆ ಬ್ರಹ್ಮಜ್ಞಾನವೆಂಬ ಸುವಾಸನೆಯು ಪಸರಿಸಿದಾಗಲು ಜಗವೆಲ್ಲವೂ ಬ್ರಹ್ಮವಾಗಿ ತೋರುವದು

ಪ್ರ—ದೇಹವೆಂಬ ವೃಕ್ಷದೊಳ್ ಹೃದಯವೆಂಬ ಗೂಡಿನಲ್ಲಿರುವ ಚೈತನ್ಯವೆಂಬ ಪಕ್ಷಿಗೆ ಬಲೆಯಾವುದು?

ಉ—ಆಕೆಯು ಯಾವನು ಈ ಆತ್ಮಾವಾಸವಿಂದಲೂ, ಮಾನವಾತೀತಾಂಗಗಳಿಂದಲೂ ಬಿತುಗಡೆಯಿನ್ನು ಹೊಂದಿವನೋ ಅವನು ಸೂರ್ಯೋದಯದಿಂ ರಾತ್ರಿಯಂತೆ ಮಾಯೆಯನ್ನಳಿಸಿ ಪರಿಕರಿಂದ ಜಾವಿನಂತೆ ಶುದ್ಧನಾಗುವನಲ್ಲದೆ ಅಜಿಂದಜ್ಞಿನವು ಹೊಂದುವನು

ಪ್ರ—ಮಹಿನ ಶನಸ್ಸಪೇಕ್ಷಿಸಕ್ತನನೇನುಮಾಡಬೇಕು?

ಉ—ಅತ್ಯಜ್ಞಾನವನ್ನ ನಾಶಿಸಬೇಕು

ಪ್ರ—ಪ್ರತಿನಿಸಿದೇಕ ಯಾವಿಗೆ ಮೋಹಕರವಾಗುವವ್ಯ?

ಉ—ಕಾಮಮಾಪಿಪ್ಪನಿಗೆ ಸೂಳೆಯಂತೆ ಅಹಂಕಾರ ಮಮಕಾರವಿಶಿಷ್ಟನಿಗೆ ಆದರೆ ಅನಹಂಕಾರಿಯಲ್ಲಿ ಹಷ್ಟಾಮರ್ಮಗಳನ್ನು ಟ್ಟಮಾಡಲಾರದ ಈ ಸ್ತುತಿನಿಂದೆಗಳು ದರಿದ್ರನ ಮನೋರಥದಂತೆ ಫಲಿಸಲಾರವು. ಅಂದರೆ ಅಂತಹ ವಿವೇಕಿಗು ಸ್ತುತಿನಿಂದೆಗಳಿಗೆ ಹಿಗ್ಗುವದೂ ಇಲ್ಲ ತಗ್ಗುವದೂ ಇಲ್ಲ

ಪ್ರ—ಸ್ತುತಿನಿಂದೆಗಳಂ ನಿತಕ್ಕಾಗಿ ಮಾಡುವರು?

ಉ—ಸ್ವರೂಪವಿಚಾರವಿಲ್ಲದೆ ದೇಹವೇ ತಾನೆಂದಭಿಮಾನಿಸುವ ಅಜ್ಞಾನಿಯು ತನ್ನ ಇಷ್ಟಾರ್ಥಲಾಭಕ್ಕಾಗಿ ಮಾಡುವನು ಇದರ ರಹಸ್ಯವು ತಿಳಿದವರು ಮಧ್ಯೆ ಘಟವನ್ನು ತ್ಯಜಿಸುವ ಸಾಧುವಿನಂತೆ ಪರಿಗ್ರಹಿಸರು.

ಪ್ರ—ವಿಗಲಿತವಾದ ಮೌತು ಯಾವದು?

ಉ—ರಾಗ-ಭೋ-ಗ-ರೋಗ ರಹಿತನೂ, ಮುನಿಹೃದಯಾಬ್ಜಿಸೋಮನೂ, ಆಗಮವೇದ್ಯವಿರಾಜ ಸದ್ಗುಣಸ್ತೋಮನೂ, ಪ್ರಣವಪರಾತ್ಪರನೂ, ಅನಘನೂ, ಅನುಭವನೂ, ಅದ್ವಯನೂ, ವನಜಭವಾಚ್ಯುತರುದ್ರ ವಂದಿತನೂ, ವನಜಭವಾಂಡ ಪಿಂಡಾಂಡ ಮಂಡಿತನೂ, ವಿಶ್ವಾ ಮಾಯಾರಹಿತನೂ, ನಿರ್ಮಲನೂ, ಸತ್ಯಜ್ಞಾನ ಧರಿತನೂ, ಸಚ್ಚಿದಾನಂದ ನಿತ್ಯ ಪರಿಪೂರ್ಣನೂ, ನಿಜ ಭಕ್ತರ ಭಾಗ್ಯನಿಧಿಯೂ, ವರಗುಣಗಂಭೀರನೂ, ಯೋಗ ಯೋಗಾನಂದ ಪೂರ್ಣಸಾಗರನೂ, ನೆರೆಭಕ್ತರ ಬಂಧುವೂ, ವರಮುಕ್ತಿಯನಿನೆನೂ, ನರಹಸ್ಯ ಮಸ್ತ ಕದಿಂ ಸದ್ಭಕ್ತರ ಭವತಾಪವಂಹರಿಸಿ ನಿತ್ಯಾನಂದಪದವಿಯನಿನೆನೂ, ಧರೆಯೊಳ್ ವಾಚಾಮಗೋಚರನೆನಿಸುವ ಪರತತ್ವ ಶ್ರುತಿಯನುಭವದಿ ಗೋಚರಗೈಯುವವನೂ, ಮನುಜರೂಪಿನ ಭರ್ಗನೂ, ಬ್ರಹ್ಮಾತ್ಮೈಕ್ಯವೇ ಅನಸನಯದಿಂ ಬೋಧಿಪನೂ, ಅನವರತಾಮೃತಾಂಗಣಾಮಣಿ ಪ್ರಿಯನೂ ನಿತ್ಯನೂ ಆದ ಶ್ರೀಗುರುವಿನ ಮಾತು. ಆದುದರಿಂದಲೇ "ಶ್ರೀಗುರುವಿನ ವಚನದಿಂ ದಧಿಕಸುಧೆಯುಂಟೆ" ಎಂದು ಜ್ಞಾನಿಗಳು ಸಾರಿರುವರು.

ಹೇ, ರಸಿಕವಾಚಕ ಶಿಖಾಮಣಿಗಳೇ! ಸದ್ಗುರುವಿನ ಕರುಣಾ ವಚನಾಮೃತವರ್ಷವೆಂಬುದು ಬಹುಕಾಲದಿಂದಲೂ ಮುಂದೆ ಬಹುಕಾಲದವರೆಗೂ ಸತತ ಸುರಿಯುತ್ತಲೇ ಇರುವದು. ಯಾವಯಾವ ಪಾತ್ರೆಗಳ ಮುಚ್ಚಳಗಳು ತೆರೆದು ಸಿದ್ಧವಾಗಿರುವವೋ ಅವುಗಳು ಕ್ಷಣಮಾತ್ರದಲ್ಲಿ ತುಂಬಿಕೊಳ್ಳುವವು ಒಂದನೆಯದಾಗಿ ನಮ್ಮನಮ್ಮ ಹೃದಯಪಾತ್ರೆಗಳನ್ನು ಸರ್ವವಿಧದಿಂದಲೂ ತೊಳೆದು ಶುದ್ಧಿಗೊಳಿಸಕ್ಕದ್ದು ಮಾತ್ರ ನಮ್ಮ ಕರ್ತವ್ಯ! ಇದೊಂದು ಪೂರ್ವಸಿದ್ಧವಾಯಿತೆಂಜೊಡನೆಯೇ, ಪರಮಾತ್ಮನು ಒಳಗೇ ಇರುವನು; ಒಡನೆಯೇ ಪ್ರಕಟವಾಗುವನು! ಇದರಲ್ಲಿ ಸಂಶಯವಿಲ್ಲವು

ವೀರಶೈವಮತದ ಮಹತ್ವ.

(ಲೇಖಕ: ಪಟ್ಟದಸ್ವಾಮಿ ಹಿರೇಮಠ ವಕೀಲ, ಹುಬ್ಬಳ್ಳಿ)

ವೀರಶೈವಮತವು ಉಳಿದ ವೈದಿಕಮತಗಳಂತೆ ಸನಾತನವಾಗಿದ್ದು ವೇದಾಗಮ ಪ್ರತಿಪಾದಿತವಾಗಿದೆ. ವೀರಶೈವೋಪನಿಷತ್, ಸಿದ್ಧಾಂತಶಿಖಾಮೋಪನಿಷತ್, ಸದಾನಂದೋಪನಿಷತ್ತು ಮುಂತಾದ ಉಪನಿಷತ್ತುಗಳೂ, ಸಕಲಶಿವಾಗಮಗಳೂ, ಮಹಾಭಾರತವು ವೀರಶೈವಮತದ ತತ್ವಗಳ ಬಗ್ಗೆ ವಿಶದವಾಗಿ ವರ್ಣಿಸುತ್ತವೆ. ವೀರಶೈವ ಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾದಿಕಂಚಾರ್ಯರು ಆಗಸ್ತ್ಯ ಮುಂತಾದ ಮಹರ್ಷಿಗಳಿಗೆ ಶಿವಸಿದ್ಧಾಂತ ವನ್ನು ಪದೇಪದೇ ಮಾಡಿದ್ದು ಶಾಸ್ತ್ರಪ್ರಸಿದ್ಧವಿದೆಯಷ್ಟೆ ವೀರಶೈವ ಮತವೆ ತತ್ತಾದಿಯಾದ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವು ಅನುಪಮಸಿದ್ಧಾಂತವೆಂದು ಪ್ರಶಸ್ತಿಯನ್ನು ಹೊಂದಿದೆ. ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಮಾಡಿದ ಭಗವದ್ಗೀತೆಯಲ್ಲಿ ದೋಷಿಸದ ಕ್ರಿಯಾಜ್ಞಾನಗಳ ಸಮುಚ್ಚಯ ತತ್ವವನ್ನು ಕಾರ್ಯರಂಗಕ್ಕೆ ತಂದು ಮಾನವಜನ್ಮದ ರಹಸ್ಯವನ್ನು ಕಂಡುಹಿಡಿದು ಶಿವಜೀವರ ಸಾಮರಸ್ಯವನ್ನು ಬೋಧಿಸಿ ನಿತ್ಯಮುಕ್ತರನ್ನಾಗಿ ಮಾಡುವದೇ ವೀರಶೈವಸಿದ್ಧಾಂತದ ಗುರಿಯಾಗಿದೆ.

ಮಾನವನ ಮಾಂಸ ಪಿಂಡವನ್ನು ಮಂತ್ರಸಿಂಡವನ್ನಾಗಿ ಮಾಡಿ ಇಡೀ ಜೀವಿತವನ್ನೇ ಶಿವಮಯವಾಗಿ ಮಾಡುವ ವಿಲಕ್ಷಣಶಕ್ತಿಯಿಂದ ಕೂಡಿದ ಶಕ್ತಿವಿಶಿಷ್ಟಾದ್ವೈತತತ್ವಗಳನ್ನು ಜಗದಾದಿಯಲ್ಲಿ ರೇಣುಕಾದಿಪಂಚಾಗಸ್ಥಾಪಿತರು ಸ್ಥಾಪಿಸಿದರೆಂದು ಶಾಸ್ತ್ರಾಧಾರವಿದೆ. ಯಾವ ಮತದಲ್ಲಿಯೂ ಇಲ್ಲದ ಅಷ್ಟಾವರಣ, ಪಂಚಾಚಾರ ಪಟ್ಟಸ್ಥಲ ಮುಂತಾದ ಸುಗಮಸಿದ್ಧಾಂತವು ಒಳ್ಳೆಸ್ವರೂಪ್ಯವಾಗಿ ಈ ಮತದಲ್ಲಿ ಅವಿರ್ಭವಿಸಿದೆ. ಮಾನವನನ್ನು ಐಹಿಕ ಸುಖಭೋಗಗಳಿಂದ ಕ್ರಮೇಣ ಬಿಡಿಸಿ ಶಿವಸಾನ್ನಿಧ್ಯದ ಕಡೆಗೆ ಹೆಜ್ಜೆ ಹೆಜ್ಜೆ ಎಳೆಯುವ ಸೂತ್ರಸೂಕ್ತಿಗಳು ಈ ಮತದಲ್ಲಿ ತುಂಬಾ ಆಡಕವಾಗಿವೆ.

ಲೋಕಸ್ರಷ್ಟಿದಾದ ಮರ್ವಾಸ, ವ್ಯಾಸ, ಕಶ್ಯಪ, ಅಗಸ್ತ್ಯ ಮೊದಲಾದ ಮಹರ್ಷಿಗಳು ಪಂಚಜಗದ್ಗುರುಗಳಿಂದ ಶಿವಲಿಂಗ ಧಾರಣ ಮಹಿಮೆಯನ್ನು ತಿಳಿದು ಶೈವಾಚಾರ್ಯರಾದ ಶ್ರೀಪರ್ವತ ಮುಸ್ಥಾಪಕಾಚಾರ್ಯರಾದ ಶ್ರೀಪಂಡಿತಾರಾಧ್ಯರು ಶ್ರೀಜಗದ್ಗುರು ರೇಣುಕಾಚಾರ್ಯರಿಂದ ಮಂದ್ರಮಾಹೇಶ್ವರಲಿಂಗವನ್ನು ಪಡೆದರೆಂದೂ ಪಾತುಪತತಂತ್ರ, ಕಾಶೀಖಂಡ, ಗುರುಪಂಚಕಾದಿ ಮುಂತಾದ ಗ್ರಂಥಗಳಿಂದ ತಿಳಿಯುತ್ತದೆ.

ಇಷ್ಟಲ್ಲದೆ ಪೂರ್ವಕಾಲದಲ್ಲಿ ವೀರಶೈವ ಮತದ ಪಂಚಪೀಠಗಳಿಗನುಗುಣವಾಗಿ ಅನೇಕ ವೀರಶೈವ ಮತ್ತು ಪರವೀರಶೈವ ರಾಜರು ಭೂದಾನಮಾಡಿ ಮತತತ್ವಗಳನ್ನು ಪ್ರಕಟಗೊಳಿಸಲಿಕ್ಕೆ ಸಹಾಯಮಾಡಿದ ಆಧಾರಗಳೆಷ್ಟೋ ಆವೆ.

ಇಂಥ ಮಹತ್ತರವಾದ ವೀರಶೈವಮತವು ಧರ್ಮಶಾಸ್ತ್ರಾಗಮರದ ಶಿಖರದ ಮೇಲಿದ್ದರೂ ವೀರಶೈವರ ದುರದೃಷ್ಟವಿಂದಲೋ ಅಥವಾ ದೌರ್ಬಲ್ಯದಿಂದಲೋ ನ್ಯಾಯಸ್ಥಾನದಲ್ಲಿ ಚತುರ್ಥವರ್ಣಕ್ಕೆ ಕೇರಿಯಿಂದು ಗಣಿಸಲ್ಪಟ್ಟಿದೆ. ಹೀಗಾಗಲಿಕ್ಕೆ ನಮ್ಮ ವೀರಶೈವರಲ್ಲಿಯೆ ಕೆಲವು ಅಜ್ಞಾನಿ ಸ್ವಾರ್ಥಿಗಳೂ ಮತ್ತು ಅಸೂಯಾಪರರಾದ ಪರಮತೀಯ ಪಂಡಿತರೂ ಮತ್ತು ವೀರಶೈವ ಧರ್ಮಶಾಸ್ತ್ರದ ಸ್ವಾದವನ್ನೇ ಅರಿಯದ ಕೆಲವು ಪರದೇಶದ ವಿಜ್ಞಾನಿಗಳೂ ಬಹುಮಟ್ಟಿಗೆ ಕಾರಣರಾಗಿದ್ದಾರೆ.

ನೇದೋಪನಿಷದ್ಕಾಗಮಗಳಲ್ಲಿ ಉಪದೇಶಿಸಿದಂತೆ ವೀರಶೈವರು ತಮ್ಮ ಅಪ್ರಾಕೃತದ್ರಾಹ್ಮಣಧರ್ಮದ ಕಟ್ಟುಗಳನ್ನೂ ವೈದಿಕ ಏಕಯಜ್ಞಾಚಾರಗಳಿಗನ್ನೂ ಇಟ್ಟುಕೊಳ್ಳುತ್ತ ಬಂದಾಗ್ಯೂ ಕ್ರಿಸ್ತ ಶತಮಾನದ ಆರಂಭದಿಂದ ಇತ್ತೀಚೆಗೆ ಈ ಧರ್ಮದ ಮೇಲೆ ಪರಧರ್ಮದವರ ಅಸೂಯಾಬುದ್ಧಿಯು ಹೆಚ್ಚಾಯಿತು. ಪರಮತಿಯರು ಈ ಪ್ರಾಚಸ್ತ್ಯವನ್ನು ಬಗ್ಗುಬಡಿಯಬೇಕೆಂದು ತಮ್ಮ ಗ್ರಂಥಗಳಲ್ಲಿ ಯದ್ವಾತದ್ವಾ ಬರೆದುಬಿಟ್ಟರು. ಪರಮತೀಯ ಪ್ರಭುತ್ವವು ಹೆಚ್ಚಾದ ಕಾಲಕ್ಕೆ ವೀರಶೈವರು ಅವರ ಅಧೀನರಾಗಿ ಉಳಿಯಬೇಕಾಯಿತು. ವೀರಶೈವರಿಗೆ ವೈದಿಕವಿದ್ಯೆಯ ವ್ಯಾಸಂಗವನ್ನು ಕಡಿಮೆಮಾಡುತ್ತ ಬೇಸಾಯ ಮತ್ತು ವ್ಯಾಪಾರದಲ್ಲಿ ನಿಷೇಪಾಹ ತೊಡಗುವಂತೆ ಮಾಡಿ ಬ್ರಾಹ್ಮಣರಿಸಿಸಿಕೊಳ್ಳುವವರೆಗೆ ವೇದಾಧ್ಯಯನಕ್ಕೆ ಅವಕಾಶವಿಲ್ಲದಂತೆ ಮಾಡಿಬಿಟ್ಟರು. ಹೀಗಾದ್ದರಿಂದ ವೀರಶೈವರು ವೇದಾಧ್ಯಯನ ಮಾಡಲಿಕ್ಕೆ ತುಂಬಾ ತೊಂದರೆ ಇತ್ತೆಂದೂ ತಮ್ಮ ಧರ್ಮವನ್ನು ಕಾಯ್ದುಕೊಳ್ಳುವದಕ್ಕಾಗಿ ಮಧ್ಯರಾತ್ರಿಯಲ್ಲಿ ಉಪನಯನ ದೀಕ್ಷಾಕಾರ್ಯಾದಿಗಳನ್ನು ಪೆರೆವೇರಿಸುತ್ತಿದ್ದರೆಂದೂ ಕರ್ನಾಟಕವರ್ಣನಾವಾಗಿ ಬಂದ ತೇಲಿಕೆಯೆಡೆ. ಈ ರೀತಿಯಾಗಿ ವೀರಶೈವರನ್ನು ಚತುರ್ಥವರ್ಣದಲ್ಲಿ ಹೇಗಾದರೂ ಮಾಡಿ ಎಳೆದು ತಮ್ಮ ಧರ್ಮವನ್ನು ಹೆಚ್ಚಳಮಾಡಬೇಕೆಂಬ ಈರುತುಬುದ್ಧಿಯು ಹಿಂದಿನಕಾಲದ ಪರಧರ್ಮದವರಲ್ಲಿತ್ತೆಂದು ಸ್ಪಷ್ಟವಾಗುತ್ತದೆ.

ವೀರಶೈವರು ವಿಶೇಷವಾಗಿ ಬೇಸಾಯ ವ್ಯಾಪಾರದಲ್ಲಿ ತೊಡಗಿದ್ದಾಗ್ಗೆ ಧರ್ಮಗ್ರಂಥಗಳ ಜವಾಬ್ದಾರಿಯು ಹಿಂದಿನಕಾಲದ ಬ್ರಾಹ್ಮಣವರ್ಗದವರ ಮೇಲೆ ಬಿದ್ದಿತ್ತು. ಅಗ್ಗೆ ಅವರು ತಮ್ಮ ಉಪಜೀವನವಾಗುವ ಉಪನಿಷತ್ತುಗಳನ್ನು ಮತ್ತು ಆಗಮ ಪುರಾಣಾಗಳನ್ನು ಪ್ರಕಟಗೊಳಿಸಿದರು.

ದಾ॥ ವಿನಿಜೆಯಂಟರವರು ಮದ್ರಾಸದಲ್ಲಿ ಸ್ಥಾಪಿಸಿದ ಅಡಯಾರ್ ಲಾಯಬ್ರರಿಯಲ್ಲಿ ಥಿಯಸಾಫಿಕಲ್ ಸೊಸಾಯಿಟಿ ನವರಿಂದ "ಪ್ರಕಟವಾದ ಉಪನಿಷತ್ತುಗಳು" ಎಂಬ ಪುಸ್ತಕದಲ್ಲಿ ವೀರಶೈವರಿಗೆ ಸಂಬಂಧಪಟ್ಟ ಮತ್ತು ವೀರಶೈವ ಧರ್ಮದ ಅಧಿಕೃತವನ್ನು ತೋರಿಸುವ ಲೈಂಗ್ಯೋಪನಿಷತ್, ಸಿದ್ಧಾಂತ ಶಿಖಾಮೋಪನಿಷತ್, ಸಿದ್ಧಾಂತ ಸಾರೋಪನಿಷತ್, ತಿಪ್ಪೋಪನಿಷತ್, ರುದ್ರೋಪನಿಷತ್, ಸದಾನಂದೋಪನಿಷತ್ ಮುಂತಾದ ಮಹತ್ವದ ಉಪನಿಷತ್ತುಗಳು ಆವೆ.

ಮಲೆಜ್ವರಕ್ಕೆ ಮಲೇರಿಯಾನ ಇದು ಮಲೆಜ್ವರ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ೩ ವಾ ೩ ದಿವಸಕ್ಕೊಮ್ಮೆ ಬರುವಜ್ವರ, ಕ್ವಿನೀನ್‌ನಿಂದಲೂ ಇಂಜಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ಗೆದ್ದಿ ಸಮೇತ ಸಂಪೂರ್ಣ ಗುಣಪಡಿಸುತ್ತದೆ. 4 ಔನ್ಸ್ ಸೀಸೆಗೆ ಆಣೆ 0-14-0, 8 ಔನ್ಸ್ ಸೀಸೆಗೆ ರೂ. 1-8-0, ಡಜನ್‌ಗೆ ರೂ. 9-12-0, ರೂ. 16-8-0.

ಕಂಪೌಂಡ್ ಸಿರಪ್ ಸಾಲಸವನೆ—ಸ್ವಸ್ಥೇಂದ್ರಿಯ ಸ್ವಲನ, ಶೀಘ್ರಸ್ವಲನ, ಧಾತುಕಳಕಳಿಕ್ಕುವುದು, ಮೂತ್ರದೊಡನೆ ನಪ್ಪವಾಗುವದು, ವೀರ್ಯಕ್ಷಯ, ತೆಳ್ಳಗಾದಧಾತು, ಇವೆಲ್ಲದ ಬುಡವನ್ನು ಕಿತ್ತು ಬಿಸಾಡುವದಲ್ಲದೆ ಧಾತುಪೌಷ್ಟಿಕ ರಸಾಯನವಾಗಿರುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0.

ಪ್ರಖ್ಯಾತಿಪಟ್ಟ ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು—ಸಕಲತರದ ಹೊಟ್ಟೆಯಲುಗಳನ್ನು ನಾಶಪಡಿಸಿ ಜಾಡಿಸುವ ವರಲ್ಲಿ ಮುಖ್ಯ ಡಿಷಫಿ. ಡಜನ್ ಅ. 0-5-0 100ಕ್ಕೆ ರೂ. 2-0-0.

ರಿಂಗ್ ವರ್ಮ್ ಬಾಗುಬು—ಕಡಿಜಂತರವಾದ ಹುಳ ಮೇಯುವುದು, ಗಜಕರ್ಣ, ಹುಳಕಜ್ಜಿಗೂ ಉತ್ತಮ. ಆಣೆ 5.

ಕಂಪೌಂಡ್ ಸಿರಪ್ ಬ್ಲಾಟ್—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇವಸ, ಖಾಸವನ್ನು ಪ್ರಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ. 3-8-0, ಸಣ್ಣದು ರೂ. 1-14-0.

ಬೇಬಿ ಟೋ—ಬಾಲ್ಯಾವಸ್ಥೆಯಲ್ಲಿ ಎಲುಬುಗಳಸ್ಥಿಸುಣ್ಣದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ಕಾಲು ರೆಗ್ಗುಹಣಿ ರೋಗದಿಂದ ಮಾನವ ಜೋಲುಬಿದ್ದು, ಮೈ, ಕೈ, ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ 1-14

ಈಯರ್ ಒಯಿಲ್—ಕಿವಿ ನೋವುವದು, ಕಿವಿ ನೊರೆ ಕಿಪ್ಪುದು ಇವುಗಳ ಮೇಲೆ ಉತ್ತಮ. ಸೀಸೆಗೆ ಆಣೆ 0-8-0.

ಡಿಸೆಂಟರಿ ಕ್ಯೂರ್—ಉಷ್ಣ ಹೊರಕಡೆಗೆ ಸಿದ್ಧಾಷಧಿ ಸೀಸೆಗೆ ರೂ. 1-0

ಡಯೆರಿಯಾ ಕ್ಯೂರ್—ಅಜೀರ್ಣದ ಹೊರಕಡೆಗೆ ಸೀಸೆಗೆ ರೂ. 1-0

ಕೆಂಪೌಂಡ್ ಸಿರಪ್ ವೆಸಿಫೂಜ—ಪ್ರಮೇಹ ಮೂತ್ರದ್ವಾರದಿಂದ ಕೀವು, ಮೂತ್ರಹೊಯ್ಯುವಾಗ ತರೆಯಲಾರದೆ ಕಣಿ ಉರಿ, ಮೂತ್ರಕೃಚ್ಛ್ರ, ಮೂತ್ರ ಅಗ್ಗಾಗ್ಗೆ ಬಂದು ಹೋಗಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ಇನೇ ಮೊದಲಾದ ಪ್ರಮೇಹ ಲಕ್ಷಣಗಳಲ್ಲಿ ಬವನ್ನು ಕೆಲವು ತಾಸುಗಳಲ್ಲಿಯೇ ರಾಮಬಾಣವಾಗಿ ನಿಲ್ಲಿಸುವದು. ಸೀಸೆಗೆ ರೂ. 3-8-0, ರೂ. 1-14

ಕುದ್ಧ ಟಿಕ್ಕು, ಹೊಮ್ಮೊಪಥಿ ಔಷಧಿಗಳು ನನ್ನಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.—ಧರ್ಮಾಧ್ಯ

[15] ಮಲೇರಿಯಾನ ಕಂಪೆನಿ, (21) ಹಂಪನಕಟ್ಟೆ, ಮಂಗಳೂರು, ದ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುವರ್ಗದ ಮತ್ತೆ ಸವಿಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಹಾದಿಕಾರಿಗಳು ಪುಷ್ಯಮಾಸ್ಯೊ ಹತ್ತು ಸರ್ಷಕ್ಕೋ ಒಮ್ಮಾಪೆ ಹೋಗಿ ಶಿಷ್ಯ ಾಜ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಸಾಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠವನವರಿಗೆ ಸ್ವ ಶಿಷ್ಯರ ಮನೆಗೇ ಗೊತ್ತಿಲ್ಲದೆ ಹೋಗಿದೆ. ಇದನ್ನು ಪರಿಹಾರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ರೀತಿಯಾಗಿ ಮುದ್ರಣಗೊಳಿಸಿದ್ದೇವೆ. ಇವರಲ್ಲಿ ಬರೆಯುವ ವಿಷಯಗಳ ವರವು ಚನ್ನಾಗಿ ತೋರಿಸಲ್ಪಟ್ಟಿದೆ. ಅಮದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ನ ತಮ್ಮ ಶಿಷ್ಯರನ್ನು ಕಾಣಾಪಿಕ್ಕೊಳ್ಳಬೇಕು. ಇಪಕ್ಕಾಗಿ ಮೂ ಕೆಡವಂಥ ಕಾಗದಗಳನ್ನು ಪರೋಗಿಸುವುದಲ್ಲದೆ ಸುಂದ ಾದ ಮತ್ತು ಭವ್ಯವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಪಂಡಿತಾಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗಿರತಕ್ಕ ರಸಾಯನ ಔಷಧಿಗಳು ತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೂಕ	ಮೂಲ್ಯ
ರ್ಣಮಕರಧ್ವಜ	೧	೩೦—೦—೦
ರ್ಣಚಂದ್ರೋದಯ	೧	೧೦—೦—೦
.. ತಿ ನೇ ನಂಬರ್	೧	೮—೦—೦
ಸಿಂಧೂರ	೧	೩—೦—೦
ಬ್ರಸಿಂಧೂರ	೧	೪—೦—೦
ಾಲಸಿಂಧೂರ	೧	೪—೦—೦
ಾಸಿಂಧೂರ	೧	೪—೦—೦
ರ್ಣವಂಗ	೧	೩—೦—೦
ಂಗ	೧	೧—೦—೦
ಧಸ್ಮಗಳು.		
ರ್ಣಭಸ್ಮ	೧	೪೦—೦—೦
ತಭಸ್ಮ	೧	೪—೦—೦
ಾಸ್ಯಭಸ್ಮ	೧	೦—೮—೦
ಪ್ರವಾಳಭಸ್ಮ	೧	೦-೧೫—೦
ಮಂಗಭಸ್ಮ	೧	೦—೮—೦
ಾಗಭಸ್ಮ	೧	೦—೮—೦
ತ್ಯಾಳಿಭಸ್ಮ	೧	೦—೮—೦
ಾಚಿನಭಸ್ಮ	೧	೦—೮—೦
ನ್ನಭಸ್ಮ	೧	೦—೮—೦
ಂಡೂರಭಸ್ಮ	೧	೦—೮—೦
ಾಮಕ್ಷೀಕಾಭಸ್ಮ	೧	೦-೧೫—೦
ಪ್ಪರಭಸ್ಮ	೧	೩—೦—೦
ಾಕರ್ತ್ರಭಸ್ಮ	೧	೪೦—೦—೦
ಮಾಲಭಸ್ಮ	೧	೦—೮—೦
ಕ್ಷಚಿನ್ನಭಸ್ಮ	೧	೦—೮—೦
ಸಿಂಗಂಗದ ಕೋಡಿನ ಭಸ್ಮ	೧	೦—೮—೦
ಸ್ಥೀದಂತಹರಿತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ತಿವಾಚಿತ ಸೂರ್ಯಪುಟ	೧	೧—೦—೦
ತಿವಾಚಿತ ಅಗ್ನಿಪುಟ	೧	೦—೮—೦

ಸೂಚನೆ— ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ಕ್ಷೀರ ಘೃತ, ಗುಗ್ಗುಳ ಾದ ಔಷಧಿಗಳು ಸರ್ವರೋಗಗಳಿಗೆ ದೊರೆಯುತ್ತವೆ.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲೆ,

ಪೋಸ್ಟ್, ಒಬಿಮಿಠ, ಚಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ; ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಪ್ಪೆ ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವಿಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೫ ಆಣೆ.** ವಿ. ಪಿ. ಚಾರ್ಜ್ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಸಮ್ಮನ್ನಿಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್** ಮಹಾಪ್ರಭುಗಳವರು ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿರೂಪಿಸುವುದಕ್ಕೋಸ್ಕರ ತಮ್ಮ ಧನ್ಯವಾದ ಭಾವಚಿತ್ರವನ್ನು ಶತದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆರೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ನಜಾ ತೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅಮೃತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೨ × ೧೪ ಬೆಲೆ ೧೯ ... ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಘೀಶ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ ... ೦—೧—೬
ಷಣ್ಮಹಿ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೯ .. ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೪ ಬೆಲೆ ೧೯ . ೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೦—೯
ಶ್ರೀ ರೇಣುಕಾಚಾರ್ಯರು ಮರ್ರುಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೦—೯
ಶ್ರೀ ರೇಣುಕಾಚಾರ್ಯರು ವಿಧೀಷಣನ ಪ್ರಾರ್ಥನಾನುಸಾರವಾಗಿ ವಿಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೯ .. ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦ ೦ ೯
ಶ್ರೀಕಾಶೀಕ್ಷೇತ್ರನಿವಾಸಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ ... ೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಿ ಶಿವಾಚಾರ್ಯರ ಫೋಟೋ ... ೦—೦ ೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ... ೦—೦ ೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೯ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೯ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ತಟ್ಟುವದ ಸುಂದರ ಫೋಟೋ ೧೯ ೦—೦—೯
ಶ್ರೀ ಜಗದ್ಗುರು ಕೇದಾರಪಂಡಿತಾಸನದ ಅತ್ಯಂತ ಸುಂದರವಾದ ಸೋಪಾನದ ಫೋಟೋ ೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಕೋಡಿಮಠದ ಶ್ರೀ ಕೇದಾರಾವಾಸ್ಥಾನಿಯ ಮಂದಿರದ ಸುಂದರ ಫೋಟೋ . ೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ೦—೦—೯
ಬೆಂಗಳೂರು ಕಂಟೋನ್ಮೆಂಟನಲ್ಲಿ ನೆಲೆಸಿರುವ ಧಾರವಾಡ ಜಿಲ್ಲೆಯವರ ಆಡುಪಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

ಸೂಚನೆ—ಐದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ನ್ಯಾಗೆಟಿವ್‌ಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟೆ ತಲೆನೋವು, ತಲೆಯ ಲ್ಲಿಯ ರೋಗಗಳು, ಕಣ್ಣಾಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುದಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂಬತ್ತು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೆ ೫ ಸೀಸೆ ಪುಗಸಟ್ಟೆ ಕಳುಹಿಸಲಾಗುವುದು. ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವಿ. ಪಿ. ೦-೪-೦. ಡಜನ್ ಒಂದಕ್ಕೆ ಕ್ರಯ ರೂ ೩-೮-೦ ವಿ. ಪಿ ೪ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[34] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ) ... ೧ ಆಣೆ
ಸನ್ಯಾಸಾಶ್ರಮನಿರ್ಣಯ (೩ನೆಯ ಆವೃತ್ತಿ ಸಂಸ್ಕೃತ) .. ೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) ೧ ಆಣೆ
ಶ್ರೀಪಂಚಾಚಾರ್ಯ ಸ್ತೋತ್ರಾವಳಿ (೬ನೆಯ ಆವೃತ್ತಿ) .... ೧ ಆಣೆ
ಸಂಕ್ಷಿಪ್ತ ಶಿವಪೂಜಾ ವಿಧಿ (೩ನೆಯ ಆವೃತ್ತಿ) . ೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ . .... ೨ ಆಣೆ
ಬಸವಾದಿಶಿವಶತಕ ತ್ಪರ್ಯಣ (೬ನೆಯ ಆವೃತ್ತಿ) .. ೨ ಆಣೆ
ಶ್ರೀರೇಣುಕಾಚಾರ್ಯ ಶತಕ (೩ನೆಯ ಆವೃತ್ತಿ) .... ೨ ಆಣೆ
ಷಂಚಾಚಾರ್ಯಪ್ರಭಾಕರ .. ೨ ಆಣೆ
ಶ್ರೀಗುರುತತ್ತ್ವಪದಗಳು ... . ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ .... ೨ ಆಣೆ
ವೀರಶೈವಮತವಿಮರ್ಶಾ .... ೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) ... ೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) .. .... ೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ. . ೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) .... ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) .... ೬ ಆಣೆ
ವೀರಶೈವಮಹಾತ್ಮರು ... . ೪ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ) .... ೪ ಆಣೆ
ಸದ್ಗೋಧರತ್ನಾವಳಿ .... ೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಧಾಪಣಮು (ತೆಲುಗು) ೪ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) .... ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .... ೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೨ ಆಣೆ
ಶಿಖಾಸೂತ್ರಸಿದ್ಧಾಂತವರ್ಪಣ .. .... ೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ) ... ೧ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) ೧ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ) .. ... ೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ... . ೨ ರೂ
ವೀರಶೈವಸಿದ್ಧಾಂತಸುಧಾಕರ .... ೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೫ ಪುಟ) .... ೮ ರೂ
A brief life-sketch of Pandit Sri Kashinatha Shastriji (*English*) 4 As.
Shakti-Vishistadvaita *or* **The Philosophical Aspect of Virasaivism** (*English*) ... 8 As
Speeches by Pandit Shri Kashinatha Shastri (*English*) 12 As.
ವೀರಶೈವಧರ್ಮ (ಮರಾಠೀ) ... ... ೧ ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ) .. ೧ ರೂ.
ವೀರಶೈವೇತಿಹಾಸ (ಸಂಸ್ಕೃತ) ... ... ೧ ರೂ.
ನಂದಿಕೇಶ್ವರಕಾರಿಕಾ (ಸಂಸ್ಕೃತ) .. . ೨ ಆಣೆ.
ಶಕ್ತಿವಿಶಿಷ್ಟಾದ್ವೈತಸಿದ್ಧಾಂತ (ಹಿಂದೀ) . ... ೨ ಆಣೆ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಂಸ್ಥಾನದವರೂ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಷ್ಟಾದಶ ಮಹಾವಿದ್ವಾಂಸರೆನಿಸ

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗನ್ಮಯೂತ್ತಮಗುರವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಅಸ್ಥಾನ ಮಹಾವಿದ್ವಾ ವೇ॥ ಕಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೪ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೨.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೯ನೇ ಡಿಸೆಂಬರ್ ೧೯೩೮ [ಸಂಚಿಕೆ ೩೩

ಇದು ಅಖಿಲ ವೀರಶೈವಮಹಾಸಭೆಯೋ?

ಅಥವಾ

ವಿಶಿಷ್ಟಪ್ರಾಂತದ ಸಭೆಯೋ?

(ವೀರಶೈವಗರ್ಜನೆಯ ಭಾಷಾಂತರ)

ಈ ವರೆಗೆ ವೀರಶೈವಮಹಾಸಭೆಯ ೧೩ ಸಭೆಗಳಾದವು ಆದರೆ ಇವುಗಳಿಂದ ಸಮಾಜದ ಹಿಂದುಳಿತ ಸ್ಥಿತಿಯ ಹೊರತು ಯಾವ ಪ್ರಯೋಜನವೂ ಆಗಲಿಲ್ಲ ಒಂದೆರಡು ಸಭೆಗಳನ್ನು ಬಿಟ್ಟು ಉಳಿದವುಗಳು ಬಯಸುತರವಾಗಿ ಕರ್ನಾಟಕದಲ್ಲಿಯೇ ಆಗಿರುವ ವೆಂದು ಹೇಳಲು ಅಡ್ಡಿಯಿಲ್ಲ. ಇದುವರೆಗೂ ಮಹಾಸಭೆಯು ಅಧ್ಯಕ್ಷ ನ ಸ್ಟ್ಯಾಂಡಿಂಗ್ ಕಮಿಟಿಗಳಿಂದ ಯಾವ ಕೆಲಸಗಳೂ ಆಗಿಲ್ಲವೆಂದು ಅತಿ ದುಃಖದಿಂದ ಹೇಳಬೇಕಾಗಿದೆ. ಕರ್ನಾಟಕ ಆಥವಾ ಮಹಾರಾಷ್ಟ್ರ ಎಂಬ ಭೇದವು ಕರ್ನಾಟಕದೊಳಗಿನ ಜನ ರೊಳಗೆ ಪ್ರಚಲಿತವಾಗಿರುವುದರಿಂದ ಮಹಾರಾಷ್ಟ್ರದೊಳಗೆ ಮಹಾಸಭೆಯ ಅಧಿವೇಶನವನ್ನು ಕೂಡಿಸುವದರಕಡೆಗಾಗಲಿ ಆಥವಾ ಮಹಾರಾಷ್ಟ್ರದೇಶದೊಳಗಿನ ಯೋಗ್ಯಜನರನ್ನು ಅಧ್ಯಕ್ಷರನ್ನಾಗಿ ನಿಯಮಿಸುವ ಕಡೆಗಾಗಲಿ ಕರ್ನಾಟಕದ ಪ್ರವೃತ್ತಿಯೇ ಆಗುವು ದಿಲ್ಲವೆಂಬ ಮಾತು ಬಹು ದುಃಖಕರವಾದದ್ದು ದೆ. ಮಹಾರಾಷ್ಟ್ರ ದೊಳಗೆ ಮಹಾಸಭೆಯನ್ನು ಕೂಡಿಸುವದರ ಸಲುವಾಗಿ ಮುಂಬ ಯಿ ಸೋಲಾಪುರಜಿಲ್ಲೆಗಳೊಳಗಿನ ಕುರ್ದವಾಡಿ ಇತ್ಯಾದಿ ಸ್ಥಳದ ಜನರು ಬೇಡಿಕೊಂಡರೂ ಅವರ ಬೇಡಿಕೆಗೆ ದುರ್ಲಕ್ಷಿಸಿ ಮಹಾ ರಾಷ್ಟ್ರದಕಡೆಗೆ ಮಹಾಸಭೆಯು ಈಗ ಮೂವತ್ತು ಮೂವ ತ್ತೈದು ವರ್ಷಗಳವರೆಗೂ ಬಂದಿರುವದೇ ಇಲ್ಲ. ಆಸ್ತು !

ಮಹಾಸಭೆಯು ಹಿಂದೂಸ್ಥಾನದೊಳಗಿನ ಅಖಿಲ ವೀರಶೈವ ಸಭೆಯಿರುವದು. ಆದರೆ ಕರ್ನಾಟಕ ಮಹಾರಾಷ್ಟ್ರ ಎಂಬ ಭೇದವಂತೂ ಉಪಯೋಗದ್ದಲ್ಲ. ಒಂದು ಪಕ್ಷದ ಕೈಯಲ್ಲಿ ಮಹಾಸಭೆಯ ಸೂತ್ರಗಳು ಇದ್ದುದರಿಂದ ಮಹಾ ಸಭೆಯ ಅಧ್ಯಕ್ಷ, ಸ್ಟ್ಯಾಂಡಿಂಗಕಮಿಟಿ ಮೆಂಬರ ಮೊದಲಾದವರು ಆದೇ ಪಕ್ಷದೊಳಗೆ ನಿಯಮಿಸಲ್ಪಡುತ್ತಾರೆ. ಇವರ ಸಲು ವಾಗಿ ಮಹಾರಾಷ್ಟ್ರದೊಳಗಿನ ವೀರಶೈವ ಜನತೆಯು ಯಾವ ರೀತಿ ಯಿಂದ ಆದರೊಳಗೆ ಭಾಗವನ್ನು ತೆಗೆದುಕೊಳ್ಳಬೇಕೋ ಆ ರೀತಿ ಯಿಂದ ಆದು ಭಾಗವನ್ನು ತೆಗೆದುಕೊಳ್ಳುವದಿಲ್ಲ. ಕರ್ನಾಟಕದೊ ಳಗೆ ಪಂಡಿತ ವೀರಭದ್ರಶಾಸ್ತ್ರಿಗಳು ಮತ್ತು ಮಹಾರಾಷ್ಟ್ರದೊ ಳಗೆ ಸೋಲಾಪುರದೊಳಗಿನ ಶ್ರೀಮಂತ ಅಪ್ಪುಲ್‌ಪುರಿಕರ ಶ್ರೀಮಂತ ಝುಂಜೆ ಧುಮ್ಮಾ ವಕೀಲರೂ ಡಾ॥ ದೇಶಮು ಖರಾವ್ ಮತ್ತು ಸಾಂಗಲಿ ಶ್ರೀ ಹಿರೇಮಠ ವಕೀಲರಂತಹ ಸಮ ರ್ಥರು ಅಧ್ಯಕ್ಷಪದವಿಗೆ ಯೋಗ್ಯ ಕಂಡಾಗ್ಯೂ ಅತ್ತಕಡೆಗೆ ಸಮಾ ಜದ ಲಕ್ಷ್ಯವು ಹೋಗುವದಿಲ್ಲವೆಂದಮೇಲೆ ಇದು ದುರ್ದೈವವೆಂದೇ ಹೇಳಬೇಕಾಗಿದೆ ಯಾಕೆಂದರೆ ಇಲ್ಲಿಯವರೆಗೂ ಈ ಸರ್ವದ ಮಹಾಸಭೆಯ ಅಧ್ಯಕ್ಷಪದಕ್ಕಾಗಿ ಯಾವ ಯಾವ ಇಷ್ಟತ್ತು ಇಷ್ಟತ್ತೈದು ಹೆಸರುಗಳು ಸೂಚಿಸಲ್ಪಟ್ಟಿನೆಯೋ ಅವುಗಳೊಳಗೆ ಬಹುತೇಕವಾಗಿ ಕರ್ನಾಟಕದೊಳಗಿನ ವ್ಯಕ್ತಿಗಳೇ ಇರುತ್ತವೆ. ಭಕ್ತ ಮಹಾರಾಷ್ಟ್ರದೊಳಗೆ ಸೋಲಾಪುರದ ಶ್ರೀಮಂತ ಕಾಡಾದಿ ಬ್ಯಾ॥ ಸನದಾರ್ (ಈ ಬಾರಿಸ್ಪರೆಂಸ ಕರ್ನಾಟಕದವರೇ ಇರುವದು) ಮಾತ್ರ ದೇ. ಭ. ಬಾಮಣಗಾವಕರ್ ಆಮರಾವತೀ ಈ ಮಹಾ ವ್ಯಕ್ತಿಗಳ ಹೆಸರುಗಳು ಉಲ್ಲೇಖ ಉಂಟು. ಪರಂತು ಮಹಾರಾ ಷ್ಟ್ರದೊಳಗಿನ ಜನರಿಗೆ ಕರ್ನಾಟಕದಿಂದ ಈ ಹೊತ್ತಿನವರೆಗೂ ಭೇದಬುದ್ಧಿಯಿಂದ ನಡೆದುದ್ದರ ಪರಿಣಾಮವಾಗಿ ಮಹಾರಾಷ್ಟ್ರದೊಳಗಿನ ಜನರು ಯಾವೀಪ್ರ ಮಹಾಸಭೆಯ ಕಡೆಗೆ ಲಕ್ಷಕೊಡುವುದಕ್ಕೆ ಬೇಕಾಗಿತ್ತೋ ಆ ಪ್ರಕಾರವಾಗಿ ಕೊಟ್ಟಿಲ್ಲವೆಂದು ದುಃಖದಿಂದ ಹೇಳಬೇಕಾಗುತ್ತದೆ.

ಮಹಾರಾಷ್ಟ್ರದೊಳಗಿನ ವೀರಶೈವ ಸಮಾಜವು ಶಿಕ್ಷಣದಲ್ಲಿ ಈಗಲೂ ಬಹು ಹಿಂದೆ ಬುಳಿದಿರುವದೆಂದು ಹೇಳಬೇಕಾಗಿದೆ. ಆವಾಗ್ಗೆ ಅಂಥ ಸ್ಥಳವಲ್ಲಿ ಮಹಾಸಭೆಯ ಅಧಿವೇಶನವನ್ನು ಸೆಡ ಮಹಾರಾಷ್ಟ್ರದೊಳಗಿನ ವೀರಶೈವರಲ್ಲಿ ಜಾಗೃತಿ ಉತ್ಪನ್ನ ಮಾಡುವ ಕಾರ್ಯವು ಮಹಾಸಭೆಯಿಂದ ಆಗತಕ್ಕದ್ದಿರುವದು. ಪರಂತು ಆತ್ತಕಡೆಗೆ ಮೆಲಕ್ಷವಾಗಲಿಕ್ಕೆ ಹತ್ತಿದೆ. ಆದರ ಸಲು ವಾಗಿ ಮಹಾರಾಷ್ಟ್ರದೊಳಗಿನ ವೀರಶೈವಜನತೆಯು ಜಡತ್ವವು ಹೋಗಿ ಆಲ್ಲಿ ಚೈತನ್ಯವು ಉದ್ಭವಿಸಿ ಅದು ಉನ್ನತಿಯ ಮಾರ್ಗ ವನ್ನು ಸಮಿಸಲೆಂದು ಆತ್ತಕಡೆಗೆ ಮಹಾಸಭೆಯು ಲಕ್ಷ ಕೊಡು ವದು ಅತ್ಯವಶ್ಯವಾಗಿರುವದು

ನಿರಕ್ಷ ಪಂಚಾಚಾರ್ಯರ ವಾದವನ್ನು ತೀರ್ಮಾನಿಸುವುದ ಕ್ಕಾಗಿ ಮಾನರು ಆಥವಾ ಇವರು ನ್ಯಾಯಾಧೀಶರನ್ನು ವೀರಶೈ ವೇತರರಲ್ಲಿ ನೇಮಿಸಬೇಕು. ಮತ್ತು ಆ ಕಾರ್ಯವು ಸಲುವಾಗಿ ಇಸ್ಪತ್ತು ಇಸ್ಪತ್ತೈದು ಸಾವಿರ ರೂಪಾಯಿಗಳ ಮರ್ಜಿ ಬರು ವದು. ಇವನ್ನು ಗುರುವಿರಕ್ತರ ಪಕ್ಷದವರು ಕೊಡಬೇಕೆಂಬ ಸೂಚ ನೆಯು ವರ್ತಮಾನಪತ್ರಗಳೊಳಗೆ ಪ್ರಸಿದ್ಧವಾಗಿರುತ್ತದೆ. ಪರಂತು ವಾಸ್ತವಿಕವಾಗಿ ಗುರುವಿರಕ್ತರ ನಾಡವ್ವ ಬೇನಿನಲ್ಲಿಯೇ ನಿಜವಾ ಗಿರುವದಿಲ್ಲ. ಗುರುವಿರಕ್ತರಾರು? ಗುರುವಿರಕ್ತರ ಕರ್ತವ್ಯ ಮತ್ತು ಅವರ ಲಕ್ಷಣವೇನು? ಇವುಗಳೆಲ್ಲವನ್ನು ವೀರಶೈವಧರ್ಮಶಾಸ್ತ್ರಗಳಲ್ಲಿ ಉಲ್ಲೇಖಿಸಲ್ಪಟ್ಟಿರುತ್ತವೆ ಪಂಚಾಚಾರ್ಯ ಗುರುವರ್ಗವು ಅಖಿಲ ವೀರಶೈವಸಮಾಜಕ್ಕೆ ಗುರುವಾಗಿರುತ್ತದೆ ವೀರಶೈವಸಮಾಜದ ಸಕಲ ವರ್ಣದವರಿಗೂ ಪಂಚಾಚಾರ್ಯ ಗುರುವರ್ಗವೇ ಗುರುವಾಗಿರು ತ್ತದೆಯೆಂದು ಧರ್ಮಶಾಸ್ತ್ರವು ಸಿಂಹನಾದದಿಂದ ಸಾರುತ್ತದೆ. ಸರ್ವ ಸಂಗಪರಿತ್ಯಾಗವನ್ನು ಮಾಡಿ ಆತ್ಮಸ್ವರೂಪವನ್ನು ತಿಳಿದು ಶಿವ ಜೀನೈಕ್ಯಜ್ಞಾನವನ್ನು ಮಾಡಿಕೊಂಡವನೇ ವಿರಕ್ತನು. ಈ ಶಿವ ಜೀನೈಕ್ಯಜ್ಞಾನವನ್ನು ಕೊಡುವುದರಲ್ಲಿ ಪಂಚಾಚಾರ್ಯ ಗುರು ವರ್ಗವೇ ಅಧಿಕಾರಿಯೆಂದಿರುತ್ತದೆ ವೀರಶೈವರಿಗೆ ಜನ್ಮದಿಂದ ಲಿಂಗ ಧಾರಣ, ದೀಕ್ಷಾ, ವಿವಾಹ, ಮೊದಲಾದ ಸಕಲ ಕಾರ್ಯಗಳನ್ನೂ ಮಾಡಿ ಆಷ್ಟಾವರಣ ಪಟ್ಟಸ್ಥಲಧಾರಣ ಮೋಕ್ಷಜ್ಞಾನವನ್ನು ಕೊಡುವ ಅಧಿಕಾರಿಗಳೆಂದರೆ ಪಂಚಾಚಾರ್ಯ ಗುರುವರ್ಗವೇ ಹೊರತು ಉಳಿದವರಲ್ಲ. ಅಂತೇ ಸರ್ವ ವೀರಶೈವರು ಅವರ ಶಿಷ್ಯರಾಗಿರುವರು. ಈ ಸಂಪ್ರದಾಯವು ಧರ್ಮಶಾಸ್ತ್ರದಂತೆ ಅನಾದಿಕಾಲದಿಂದಲೂ ನಡೆಯುಬಂದಿದೆ ಗುರುವರ್ಗದವರ ಹಕ್ಕಿ ಗೂ ಅವರ ಅಧಿಕಾರಕ್ಕೂ ಬಾಧೆಯನ್ನು ತರುವ ಹೇತು ವಿನಿಂದ ಇತ್ತೀಚಿನ ಹಲಕೆಲವು ಆಧುನಿಕ ಬಸವಕಾಲೀನ ವಿರ ಕ್ತರೂ ಮತ್ತು ನವಮತವಾದಿ ಜನರೂ ಕೂಡಿ ವೀರಶೈವಮತ ದೊಳಗಿರುವ ವರ್ಣಾಶ್ರಮಗಳನ್ನು ದೂರೀಕರಿಸಿ, ವೀರಶೈವ ಧರ್ಮದೊಳಗೆ ವರ್ಣಾಶ್ರಮಧರ್ಮವಿಲ್ಲ. ಮತ್ತು ಯಾವ ವೇದ ಗಳು ವರ್ಣಾಶ್ರಮಧರ್ಮಗಳನ್ನು ಹೇಳಿರುವುದೋ ಆ ವೇದಗಳೇ ವೀರಶೈವರಿಗೆ ಮಾನ್ಯವಲ್ಲವೆಂದು ವೀರಶೈವಧರ್ಮಪ್ರತಿಕೂಲವಾದ ತತ್ವಗಳನ್ನು ಪ್ರತಿಪಾದನೆಮಾಡಿ ಗುರುವರ್ಗದಮೇಲೆ ದುಸ್ಸ ಹೇತುವಿನಿಂದ ಆಕ್ಷೇಪಿಸಲು ಹತ್ತಿರುವರು. ಒಬ್ಬರ ಮನೆಯೊಳಗೆ ಅನ್ಯಾಯದಿಂದ ಒಳಸೇರಲು ಪ್ರಯತ್ನಮಾಡು ವಾಗ ಮನೆಯ ಯಜಮಾನನು ಅವರಿಗೆ ವಿರೋಧವನ್ನು ಮಾಡಿ ದ್ದಾದರೆ ಈವರ ಜಗಳವಿದೆಯೆಂದು ತಿಳಿದು ಪಂಚರನ್ನು ನಿಯಮಿಸಿ ಪಂಚರ ವತಿಯಿಂದ ಅವನ ಮನೆಯನ್ನು ಒತ್ತಾಯ ದಿಂದ ಕಸಕೊಳ್ಳುವುವ್ಯಾಗಲಿಅಥವಾ ಅರ್ಧ ನಿನಗೆ, ಅರ್ಧನನಗೆ ಎಂದು ಒತ್ತಾಯದಿಂದ ಹೇಳಿ ಪಂಚರು ಉಭಯಪಕ್ಷಕ್ಕೆ ಸಮಾನ ವಾಗುವಂತೆ ನಿಸಾದರೂ ಮಾಡಿ ಕಲಹವನ್ನು ದೂರಮಾಡ ಬೇಕೆಂದು ತೋರುತ್ತದೆ. ತುದ್ದ ತಪ್ಪು. ಯಾಕೆಂದರೆ ಈ ಮೇರೆಗೆ ಅವಲಂಬನವನ್ನು ಮಾಡಿದ್ದಾದರೆ ಊರಿಯುವ ಬೆಂಕಿಯು ಶಾಂತ ವಾಗದೆ ಮತ್ತಷ್ಟು ಪ್ರಜ್ವಲವಾಗಿ ವೀರಶೈವ ಮತವನ್ನು ಉತ್ತ ರೋತ್ತರವಾಗಿ ರಾಹಾಳಕ್ಕೆ ಒಯ್ಯುವೆ ಬಡಿಯಾರವು.

ಈ ಗುರುವಿರಕ್ತರ ಕಲಹವು ಧಾರ್ಮಿಕ ಆಜ್ಞಾನದಿಂದಲೇ ಉದ್ಭ ವಿಸಿರುವದು. ಆದಕ್ಕೆ ಧಾರ್ಮಿಕ ಜ್ಞಾನದಿಂದಲೇ ಮಾತ್ರವೇ ಉಪಾಯ ರುತ್ತದೆ. ಅಂದರೆ ಈ ಕಲಹಾಗ್ನಿಯು ಜ್ಞಾನದಿಂದ ತಣ್ಣಿಂದ ತಾನೇ ಶಾಂತವಾದೀತು. ಅದು ಇತರ ಯಾವ ಉಪಾಯದಿಂ ದಲೂ ಶಾಂತವಾಗಲಾರದು. ಸತ್ಯ ಸತ್ಯವೆಂಬ ಆಜ್ಞಾನ ವೆಂಬ ಆವರಣವು ಬಿದ್ದಿದ್ದರೂ ಅದು ಧರ್ಮಶಾಸ್ತ್ರದ ಜ್ಞಾನದಿಂದ ತಣ್ಣಿಂದಾನೇ ನಷ್ಟವಾದೀತು ಸೃಷ್ಟಿಯೊಳಗೆ ಈ ತತ್ವಜ್ಞಾನವು ತ್ರಿಕಾಲಬಾಧಿತವಾಗಿರುವದು. ಅದು ಯಾವಸಮಯದಲ್ಲಿಯೂ ನಾಶವಾಗಲಾರದು. ಅಜ್ಞಾನಾವರಣದಿಂದ ಆರಭೆಗೆಯ ತರೆಗೆ ಮುಚ್ಚಲ್ಪಟ್ಟೀತು. ಪರಂತು ನೋಡಿರಿಂದಿನ ಹೇಗೆ ಸೂರ್ಯನು ಇಲ್ಲವಂತೆ ಅಗಲಾರನೋ ಅದರಿಂದೆಯೇ ಈ ಸತ್ಯತತ್ವವೆ ಅಜ್ಞಾ ನಾವರಣದಿಂದ ಇಲ್ಲವಂತೆ ಆಗಲಾರದು. ಆದಕ್ಕೆ ನ್ಯಾಯಾಧೀಶರನ್ನು ನಿಯಮಿಸಿದ ವರ್ಧಾದ ಶ್ರೀನನ್ನು ಏತಕ್ಕೆ? ಸೂರ್ಯನನ್ನು ನೋಡಲೇಕ್ಕೆಯಿಲ್ಲ ಕುರುಡನು ಎರಡನೆಯ ವನ ಕೈಯಲ್ಲಿ ದೀಪವನ್ನು ಕೊಟ್ಟು, ನನಗೆ ಸೂರ್ಯನನ್ನು ತೋ ರಿಸ ಎಂಬಂತೆ, ಇವರ ಸಾಹಸವಾಗಿರುವದು. ಆದರೆ ಸ್ವಂತವಾಗಿ ಕಣ್ಣುಗಳನ್ನು ಪಡೆದುಕೊಳ್ಳದೆ ಇದ್ದ ಕುರುಡನಿಗೆ ಎರಡನೆಯವನ ಸಹಾಯದಿಂದ ಸೂರ್ಯನು ಕಾಣಬಲುವನೇನೋ? ಅದರಂತೆ ನ್ಯಾಯಾಧೀಶರನ್ನು ನಿಯಮಿಸಿದರೆ ಈ ವಾದವು ನಾಶವಾಗಬ ಲ್ಲುದೆ? ವೀರಶೈವ ಮನೆಯಂಗಳದೇ! ವೀರಶೈವ ಧರ್ಮಶಾಸ್ತ್ರ ಗಳನ್ನು ನೋಡಿ; ವಿಶ್ವತತ್ವಸೃಷ್ಟಿಯನ್ನು ದೂರಮಾಡಿ ಸತ್ಯತನ್ನು ಶೋಧಿಸಿರಿ. ಅಂದರೆ ಸರ್ವವೂ ತನ್ನಂತಾನೇ ಕಂಡುಬರುವದು. ವೀರಶೈವಧರ್ಮಾಭಿಮಾನಿಗಳು ಸ್ವಪ್ನವಾಗಿ ದೈಗ್ಲೋಚರಗಳಾಗಿದ್ದರೂ, ವೀರಶೈವರಿಗೆ ಅವು ಇಲ್ಲವೆಂದೂ ವೇದಗಳು ಮಾನ್ಯವಲ್ಲವೆಂದೂ ನುಡಿಯುತ್ತಿರುವ ಮತ್ತು ಗುರು ಜಂಗಮರಿಗೆ ತಿರಸ್ಕಾರವನ್ನು ಮಾಡಿ ವೀರಶೈವಧರ್ಮತತ್ವಕ್ಕೆ ತಿಲಾಂಜಲಿಯನ್ನು ಕೊಡುವ ಈ ಸಭೆಯು ನಿಜವಾದ ವೀರಶೈವ ಸಭೆಯೋ? ಆಲ್ಲ! ಯಾವ ಮಹಾಸಭೆಯಿಂದ ಅಖಿಲ ವೀರ ಶೈವಸಮಾಜದ ಮತ್ತು ವೀರಶೈವಧರ್ಮತತ್ವದ ಉನ್ನತಿ ಮತದ ಜಾಗೃತಿಯಾಗುವುದಿಲ್ಲವೋ, ಅಂಥ ಮಹಾಸಭೆಯು ಕೂಡಿದರೂ ಆಷ್ಟೇ! ಕೂಡದಿದ್ದರೂ ಆಷ್ಟೇ! ಇದನ್ನೆಲ್ಲಾ ವಿಚಾರಮಾಡಿ ಅಖಿಲ ವೀರಶೈವಸಮಾಜದ ಉನ್ನತಿಯ ಪ್ರಯತ್ನವಾಗುವಂತೆ ಮಾಡಿದ್ದಾದರೆ, ಅದರ ಹೆಸರಿಗೆ ಸಾರ್ಥಕತೆಯುಂಟಾಗುವುದು.

ಓರ್ವ ಗುರುಭಕ್ತ, ಸೊಲ್ಲಾಪುರ.

ಲಿಂಗಧಾರಣ ವಿಧಿ.

ಬಹುಜನರ ಪ್ರಾರ್ಥನೆಯಮೇರೆಗೆ ಲಿಂಗಧಾರಣ ವಿಧಿಯು ಹೊಸದಾಗಿ ಮುದ್ರಿಸಲ್ಪಟ್ಟಿದೆ. ಗುರುವರ್ಗದ ವರಿಗೆ ಈ ವಿಧಿಯು ಮುಖ್ಯವಾಗಿರುವದು. ಈ ವಿಧಿಯಲ್ಲಿ ಉಕ್ತವಾಗಿರುವ ಸಮಸ್ತ ವೇದಮಂತ್ರಗಳಿಗೆ ವೈದಿಕ ಸ್ವರಗಳು ಹಾಕಲ್ಪಟ್ಟಿರುತ್ತವೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಟೀಕೆಯು ಬರೆಯಲ್ಪಟ್ಟಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಗುರುವರ್ಗದ ಮತಾಧಿಕಾರಿಗಳು ಈ ಗ್ರಂಥವನ್ನು ತರಿಸಿಕೊಂಡು, ಇದರಲ್ಲಿ, ಹೇಳಿದಂತೆ ಲಿಂಗಧಾರಣವನ್ನು ಮಾಡಿ ಪರಮಾತ್ಮಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ.

ಬೆಲೆ ೪ ಆಣೆ.

ಮ್ಯಾನೇಜರ್
ಪಿ.೦ ಪಂಚಾಚಾರ್ಯ ಸಿಲೆಕ್ಟಿಳ್ ಪ್ರೆಸ್, ಮೈಸೂರು

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ನೂಲ್ಪಿಯಲ್ಲಿ ಧರ್ಮದ ಸುಗ್ಗಿ

ಕಬನೂರು ಮುಖ್ಯಾಮಿನಲ್ಲಿ ಪ್ರಾರ್ಥಿಸಿಕೊಂಡ ಪ್ರಕಾರ ಬೆಂಗಳೂರುಮಿಟ ಮಹಂತಿನ ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯಸ್ವಾಮಿಗಳವರು ಸುಣಕಲ್ಲಬಿದರಿ ಆರಾಧ್ಯಮಠದ ವೀ|| ವೌರಾಣಿಕರತ್ನ ವೃಷಭಲಿಂಗಶಾಸ್ತ್ರಿಗಳೊಡನೆ ತಾ|| ೨೮-೧೧-೧೯೩೮ ಸೋಮವಾರ ನೂಲ್ಪಿಗೆ ದಯಮಾಡಿಸಿದರು ಮೊದಲೇ ಪ್ರಸಿದ್ಧವಾದ ಕೃಷಿಕೆಯಿಂದ ಪ್ರಕಟಪಡಿಸಿದನೇರಿಗೆ ಸರ್ವ ಸಲಕರಣೆಗಳ ಸಮ್ಮೇಲನದಲ್ಲಿ ಶ್ರೀ|| ಸ್ವಾಮಿಗಳವರಿಂದ ಅನುಷ್ಠಾನೋಪನ್ಯಾಸಗಳೂ ಪದರಿ ಶಾಸ್ತ್ರಿಗಳವರಿಂದ ಶಿವಮಹಾಪುರಾಣ ಪ್ರವಚನವೂ ಹಿರಿಯನುರದಲ್ಲಿ ಪ್ರಾರಂಭಿಸಲ್ಪಟ್ಟವು ಪ್ರತಿದಿವಸ ಪ್ರಾತಃಕಾಲದಲ್ಲಿ ಪೂಜೆಗೂ ಸಾಯಂಕಾಲದಲ್ಲಿ ಪ್ರವಚನೋಪನ್ಯಾಸ ಶ್ರವಣಕ್ಕೂ ಹಳಬುಪ್ಪುವಾಣಿಗಳಾಗಿ ಒಟ್ಟಿದ್ದ ಕಲಪರಸ್ಥಲದ ಸ್ತ್ರೀಪುರುಷವರ್ಗದ ಸಂಖ್ಯವೃದ್ಧಿ ವರ್ಣನಾತೀತವಾಗಿದ್ದಿತು ಸರ್ವಮತೀಯರೂ ಇವರಲ್ಲಿ ಭಾಗವಹಿಸಿ ಅನಂದಪಟ್ಟ ಸಂಗತಿಯನ್ನು ತಿಳಿಸಲು ಆನಂದವು ಉಕ್ಕೇರುತ್ತಿರುವುದು ಈ ಉಪಾವಸರದಲ್ಲಿ ನೂಲ್ಪಿಯಲ್ಲಿ ಅನವಕಾಶದಿಂದ ಹಿಂದೆ ದೀಕ್ಷೆಯಾಗದೆ ಉಳಿದ ಸ್ತ್ರೀಪುರುಷರೊಡನೆ ಕಡಪಟ್ಟೆ. ಇದಾಗಿಂಚಿ. ಶರೀವಾಡ ಮೊದಲಾದ ಗ್ರಾಮಾಂತರ ಸ್ತ್ರೀಪುರುಷರ ನೇಕರ ದೀಕ್ಷಾಕಾರ್ಯವು ವಿಧಿವತ್ತಾಗಿ ಜರಗಿತು. ಪೂಜಾನುಷ್ಠಾನಸಪ್ತಪ್ರವಚನೋಪನ್ಯಾಸಕಾರ್ಯಗಳು ಮುತ್ತು ಮುತ್ತಣ ಬಹುಭಾಗದ ಗ್ರಾಮಗಳ ಸಂಸಾರಿ ಮತ್ತು ಶಯರನ್ನು ಪವಿತ್ರಹೃದಯರನ್ನಾಗಿ ಮಾಡಿತ್ತು ಪ್ರಚಲಿತವಾಗಿ ಈ ಮಾರ್ಗಶಿಷ್ಟ ಶುದ್ಧ ೧೫ ಸೋಮವಾರ ಮಹಾಗಣಾರಾಧನೆಯೊಡನೆ ಸಮಾಪ್ತಿಯಾಗಲು ನಿರ್ಧರಿಸಲ್ಪಟ್ಟಿತ್ತು. ನೂಲ್ಪಿಯ ಭಕ್ತಮಂಡಲಿಯ ಪ್ರಾರ್ಥನೆಯನ್ನನುಸರಿಸಿ ಹುಬ್ಬಳ್ಳಿ ಶ್ರೀ|| ಷ|| ಬ್ರ|| ಹನ್ನೆರಡಮಠದ ಶ್ರೀಗಳವರು, ಮಾಲಗಾಂವ, ಮಾದಾಪುರ, ಶ್ರೀಗಳವರು ಪರಿವಾರದೊಡನೆ ದಯಮಾಡಿಸಿದ್ದರು. ಬಂಕಾಪುರ ಕಬನೂರು ಮುಂತಾದ ಗ್ರಾಮಗಳಿಂದ ಶ್ರೀಜಗದ್ಗುರು ಪಂಚಾಚಾರ್ಯ ಭಜನಸಂಘದವರು ಆಗಮಿಸಿದ್ದರು ವೈಕ್ಷವರ್ಗವು ನಾಲ್ಕುಸಾವಿರದ ವರೆಗಿತ್ತು ಕಾರ್ಯಕ್ರಮದಂತೆ ಸೋಮವಾರ ಪ್ರಾತಃಕಾಲದಲ್ಲಿ ಕುಂಚ ಆಚಾರ್ಯರ ವಿಧ್ಯುಕ್ತಪೂಜೆಯೂ ತದುತ್ತರಕ್ಷಣದಲ್ಲಿ ಮಹಾಗಣತ್ಕಾಸ್ತ್ರಿಯೂ ಜರಗಿ ಸಾಯಂಕಾಲ ನಾಲ್ಕುಘಂಟೆಸಮಯಕ್ಕೆ ಅಂದೋಲಿಕೆಗಳಲ್ಲಿ ಆಚಾರ್ಯರ ಮತ್ತು ಮಹಾಪುರಾಣದ ಮಹೋತ್ಸವವು ಅನೇಕವಾದ್ಯವೈಭವದಿಂದಲೂ ಭಜಕರ ಸುಶ್ರಾವ್ಯ ಸಂಗೀತ ಘೋಷದಿಂದಲೂ ಪ್ರಾರಂಭವಾಯಿತು ಶಿವಲಿಂಗ ಚಿಹ್ನಾಂಕಿತ ಗೃಹಗಳಲ್ಲಿ ಪುರವು ಜಲಸೇಚನೆಯಿಂದಲೂ ತಳಿರು ತೋರಣಗಳಿಂದಲೂ ಬಾದಿಗಳ ಇಕ್ಕೆಲದಲ್ಲಿಯೂ ಕಂಗೊಳಿಸುತ್ತಿದ್ದ ಕೃತ್ರಿವ ಗಿಡಬಳ್ಳಿಗಳ ಸಮುದಾಯದಿಂದ ಶೋಭಿತವಾಗಿ ಶ್ರೀಜಗದ್ಗುರು ಮಹಾಚಾರ್ಯರ ಅನುಗ್ರಹದ ಪ್ರಭಾವವನ್ನು ಬೀರುತ್ತಿತ್ತು ಪ್ರತಿಗೃಹದ ಮುಂಭಾಗದಲ್ಲಿ ಆರತಿಯನ್ನೆತ್ತಿ ಫಲಾಶೀರ್ವಾದವನ್ನು ಪಡೆಯ ತ್ತಿದ್ದ ಸುಮಂಗಲೆಯರು ಶೋಭಿಸುತ್ತಿದ್ದರು. ನಾನಾವಿಧ ವಾದ್ಯ ನೈಪುಣಿಯೂ ಭಜನಪ ಸೊಂಪೂ ಆನಂದಕರ ವಾಗಿದ್ದಿತು ಹೀಗೆ ವೈಭವದಿಂದ ಉತ್ಸವವು ಜರುತ್ತಿರಲ್ಲಾ ಪಾಟೀಲ್ ಸಿದ್ದನಗೌಡರ ಪಸಂದ ಪಿ ವಿರಚಿಸಿದ್ದ ಮಂಟಪಕ್ಕೆ ಬಂದೊಡನೆ ಶ್ರೀಮನ್ಮಹಗಳವರು ಅಂದೋಲಿಕೆಯಿಂದಿಳಿದು ಪಾಲ್ಗೊತ್ತಾಸವನ್ನಲಂಕರಿಸಿದರು ಕರ್ನಲ್ಶ್ರೀತ್ಯವೃಂದದ ಪ್ರಧಾನೆಗಳು ಹುಬ್ಬಳ್ಳಿ ಸ್ಕೂಲ್ ಹೆಡ್‌ಮಾಸ್ಟರ್ ಪ್ರಕೃತ್ಯನವರು ಸಭಿಕರಿಗೆ ಎಲ್ಲ ಸ್ವಾಮಿಗಳವರ ಪರಿಚಯವನ್ನು ಮಾಡಿಕೊಟ್ಟ ಈವರೆಗೂ ಧರ್ಮಶ್ರವಣದಿಂದ ತನ್ನಿಮ್ಮನಕೃತಾರ್ಥರಾದುದನ್ನು ವಣಿಸಿದರು ಅನಂತರ ಶ್ರೀಮಾನ್ ಹುಬ್ಬಳ್ಳಿ ಸ್ಕೂಲ್ ಮಾಸ್ಟರ್ ಮಹದೇವಪ್ಪನವರು ವೀರಶೈವಮತದ ಪ್ರಾಚೀನತ್ವವನ್ನೂ ಇಂತಹ ಧರ್ಮೋಪದೇಶದಿಂದಾಗುವ ಲಾಭವನ್ನೂ ವರ್ಣಿಸಿದರು ಬಳಿಕ ನೂಲ್ಪಿ ಹೆಡ್ಮಾಸ್ಟರ್ ನೇ|| ರಾಚಪ್ಪಯ್ಯನವರು ಧರ್ಮವು ಭವರೋಗಿಗಳಿಗೆ ಸಂಜೀವನೌಷಧವಾಗಿದ್ದು ಉಭಯಲೋಕದ ಸುಖಕ್ಕೆ ಕಾರಣವಾಗಿದೆಯೆಂದೂ ಶ್ರೀಮಾನ್ ಕಬನೂರು ಪಾಟೀಲ ಮುನಿಗೌಡರು ಧರ್ಮಾನ ಅವಶ್ಯಕತೆಯನ್ನು ಪ್ರತಿಪಾದನೆ ಮಾಡಿ ಕೆಲವು ಆಕ್ಷೇಪಾರಿ ನವೀನ ವಿಚಾರಿಗಳ ಸ್ವಾಭಿಪ್ರಾಯಕಲ್ಪಿತ ದುರ್ವಿಚಾರದಲ್ಲಿ ಮತಸ್ಥಾಪನಾಚಾರ್ಯರಿಂದ ಜಗದ್ಗುರು ಪಂಚಾಚಾರ್ಯರ ಪ್ರಭಾವವನ್ನು ಮೆರೆಮಾಡಬೇಕೆಂದು ಹುಟ್ಟು ವಿಚಾರವು ಜಗತ್ಕರ್ತೃವಾದ ಶಿವನ ಕುತ್ತಿಗೆಯನ್ನು ಹಿಚುಕಿ ಸಾಯುಗೊಳಿಸಿದರೆ ಮಾತ್ರ ತಲೆಯತ್ತಬಹುದೆಂದು ಆವೇಶದಿಂದ ಭಾಷಣಮಾಡಿದರು ಆಮೇಲೆ ಶ್ರೀಗಂಗಾಧರ ಶಿವಾಚಾರ್ಯಸ್ವಾಮಿಗಳವರು ಎಲ್ಲರ ಅಭಿಪ್ರಾಯವನ್ನು ತಿಗೆ ಮಳೊಂಡು ಪ್ರಮಾಣವುರಸ್ಸರವಾಗಿ ಧರ್ಮಶಿಕ್ಷಣೆಯಲ್ಲಿ ಮುಂದುವರಿದು ಆತ್ಮೋದ್ಧಾರದಿಂದ ಕೃತಾರ್ಥರಾಗಬೇಕೆಂದು ಪ್ರತಿಪಾದಿಸಿ ನವೀನವಿಕಲ್ಪವಿಚಾರಿಗಳ ಆಸಾಧುತ್ವಾನ ಪದರಿ ಶಾಸ್ತ್ರಿಗಳವರಿಂದ ಸಹಜ ಮಾರ್ಗವನ್ನು ಕೈಕೊಳ್ಳುವಂತೆ ಅವರಿಂದ ದೊರೆಯುವ ಲಾಭವನ್ನು ಉದಾಹರಿಸಿ ಸಭೆಯನ್ನು ಆನಂದಗೊಳಿಸಿದರು ಅಲ್ಲಿನ ಉತ್ಸವವು ಹೊರಟು ಹಿರಿಯುಮಠಕ್ಕೆ ಬಂದಿತು. ಅಲ್ಲಿ ನೇ|| ವೃಷಭಲಿಂಗಶಾಸ್ತ್ರಿಗಳವರಿಂದ ಪುರಾಣದ ಶೇಷಪ್ರವಚನಕಾರ್ಯವು ಸಮಾಪ್ತಿಗೊಂಡು ಮಹಾಮಂಗಲಾರತಿಯಾಗಿ ಪ್ರಸಾದವು ಹಾರತುರಾಯಿಗಳೂ ಹಂಜಲ್ವಟ್ಟು ಮಹಾಚಾರ್ಯಜಯಘೋಷದೊಡನೆ ಸಭೆಯು ವಿಸರ್ಜಿತವಾಯಿತು. ಮಹಾಚಾರ್ಯರಿಗವ ತ್ತಾದರ ಅನುಗ್ರಹಬಲದಿಂದ ನೂಲ್ಪಿಯ ಭಕ್ತಮಂಡಲಿಯವರು ಕೈಕೊಂಡಿದ್ದ ಈ ಮಂಗಲ ಮಹಾಕಾರ್ಯವು ನಿಸ್ವಾರ್ಥೋತ್ಸಾಹದಿಂದ ಪರಿಸಮಾಪ್ತಿಗೊಂಡಿತು ಇಲ್ಲಿಯ ಕಾರ್ಯವು ಸಮಾಪ್ತಿಯಾದಕೂಡಲೆ ಕಡಪಟ್ಟೆ ಗ್ರಾಮದ ಶೀಮರ್ಾ ಕಮತಗಿ ಶಿವನಪ್ಪನವರು ಶೀ ಸ್ವಾಮಿಗಳವರಿಗೆ ಬಿನ್ನಹವನ್ನುವಾಡಿ ನೇ|| ಪದರಿ ಶಾಸ್ತ್ರಿಗಳವರೊಡನೆ ಆಗಮಿಸುವ ದಿವಸಕ್ಕೆ ಸರಿಯಾಗಿ ತಮ್ಮ ಗ್ರಾಮವನ್ನು ತಳಿರ ತೋರಣಗಳಿಂದಲಂಕರಿಸಿ ಪ್ರವಚನ ಮಂಟಪವನ್ನೂ ರಚಿಸಿ ಸಕಲವಾದ್ಯೋಪಕರಣಗಳೊಡನೆ ವಾದ್ಯವೈಭವದಿಂದ ದಯಮಾಡಿಸಿಕೊಂಡು ಹೋಗಿ ಧರ್ಮೋಪದೇಶದಿಂದ ಕೃಸ್ತರಾಗಿ ತಮ್ಮ ನೂತನಗೃಹದಲ್ಲಿ ಮಹಾರುದ್ರಾಭಿಷೇಕಪುಜೆಯನ್ನು ನಾಡಿಸಿ ಮಹಾಗಣಾರಾಧನೆಯನ್ನು ಮಾಡಿ ಆಶೀರ್ವಾದವನ್ನು ಹೊಂದಿದರು. ಅನೇಕ ಗ್ರಾಮಗಳಲ್ಲಿಯೂ ಈ ಧರ್ಮದಿಗ್ವಿಜಯದ ಪಥೆಯು ಹೆಚ್ಚು ಜನರು ಸಾಫಲ್ಯದ ಸವಿಯವನ್ನು ನಿರ್ಧರಿಸುವುದರಲ್ಲಿದ್ದಾರೆ. ಧರ್ಮೋದ್ಧಾರಕ ಗುರುವರ್ಗವು ಸ್ವಶಕ್ತವ್ಯವನ್ನು ಮುಂದುವರಿಸಿದರೆ ಶ್ರೀಜಗದ್ಗುರು ಪಂಚಾಚಾರ್ಯರ ನಾಮ್ರಾಜ್ಯದ ಸೊಬಗನ್ನು ವರ್ಣಿಸುವವರಾರು? ಅಂತಹ ಸುಸಮಯವನ್ನು ಜಗದಾಚಾರ್ಯರು ಕರುಣಿಸಲೆಂದು ಬೇಡುತ್ತೇನೆ

ಓರ್ವ ಗುರುಭಕ್ತಕಿಂಕರ

ಕರಡಿಪ್ಪನ ಚೌಕಿ, ಶ್ರೀಗುರುನಿವಾಸ ಸಂಸ್ಕೃತ ಹೈಸ್ಕೂಲು, ಬಳ್ಳಾರಿ.

ಈ ಶಾಲೆಯು ೧೯೩೭ ನೆಯ ಸಂವತ್ಸರದಲ್ಲಿ ಹಸುರೋಡ್ಡ ಪಟ್ಟಬ್ರಹ್ಮಶ್ರೀ ರುದ್ರಮುನಿಶಿವಾಚಾರ್ಯರ ಆಧ್ವರ್ಯತೆಯಲ್ಲಿ ಸ್ವಾರಂಭವಾಗಿ ಕೆಲವು ಕಾಲದವರೆಗೂ ಪ್ರಾಥಮಿಕಶಾಲೆಯಾಗಿದ್ದು ಅನಂತರ ೧೯೩೮ ರಲ್ಲಿ ನವೆಸಂಬರ್ ವಿದ್ಯಾಶಾಖೆಯವರಿಂದ ಹೈಸ್ಕೂಲಾಗಿ ಮಂಜೂರುಮಾಡಲ್ಪಟ್ಟಿದೆ

ಉಪಾಧ್ಯಾಯರು.

೧ ವೇ|| ಶ್ರೀ ರುದ್ರಮುನಿಶಿವಾಚಾರ್ಯರು, ಮುಖ್ಯೋಪಾಧ್ಯಾಯರು 'ಪ್ರಾಚೀನಪಂಡಿತರು'

೨ ಶಿರೋಮಣಿ ಆರ್ ನಾರಾಯಣಶರ್ಮಾ, [ವ್ಯಾಕರಣ ಶಿರೋಮಣಿ]

೩ ,, ಕೆ ಪಡಕ್ಷರದೇವಶಾಸ್ತ್ರಿ, ಸಾಹಿತ್ಯತಿರೋಮಣಿ

೪ ,, ಬಿ ಶಿತಿಕಂಠಶಾಸ್ತ್ರಿ, [ಬಿ ವಿದ್ವಾನ್, ಮಧ್ಯ ವ್ಯಾಕರಣ ಪರೀಕ್ಷೆಯು]

೫ ,, ಕೆ ಎಂ ಗುರುನಾಥಶಾಸ್ತ್ರಿ, ಬಿ ವಿದ್ವಾನ್.

೬ ,, ವೈ ಸುಬ್ಬಣ್ಣಯಪ್ಪ, [ಸೆಕೆಂಡ್ ಗ್ರೇಡ್ ಟ್ರೈನಿಂಗ್]

೭ ,, ಕೆ. ಎಂ ನಾಗಭೂಷಣಶರ್ಮಾ [ಸಾಹಿತ್ಯ ಎಂಟ್ರನ್ಸ್.]

೮ ,, ಎಸ್. ಆರ್. ಸೋಮಶೇಖರ ಶರ್ಮಾ, [ಸಾಹಿತ್ಯ ಎಂಟ್ರನ್ಸ್.]

ಪಾಠಕ್ರಮ.

ಉದಯ:—7 ರಿಂದ 10 ಘಂಟೆಯವರೆಗೆ

ಮಧ್ಯಾಹ್ನ:—2 ರಿಂದ 4|| ಘಂಟೆಪರ್ಯಂತರೆಗೆ.

ಈ ಶಾಲೆಯಲ್ಲಿ 8 ತರಗತಿಗಳಿದ್ದು ಕೆಳಗಿನ 4 ತರಗತಿಗಳಲ್ಲಿ ಪ್ರಾಥಮಿಕ ಶಿಕ್ಷಣವು ಕೊಡಲ್ಪಡುತ್ತದೆ ಮೊದಲಿನ 4 ತರಗತಿಗಳಲ್ಲಿ ಮಾಧ್ಯಮಿಕ ಶಿಕ್ಷಣ ಕೊಡಲ್ಪಡುತ್ತಿದ್ದು ಕಡೆಯ ತರಗತಿಯಲ್ಲಿ [ಗವರ್ನಮೆಂಟ್ ಸಂಸ್ಕೃತ ಎಂಟ್ರನ್ಸಿನಲ್ಲಿ] ಇರತಕ್ಕ 'ಎ' ಸಬ್ಜೆಕ್ಟಗಳಲ್ಲಿ ಸಾಹಿತ್ಯ, ವ್ಯಾಕರಣ, ನ್ಯಾಯ, ಮಿಮಾಂಸಾ, ವೇದಾಂತ, ಇಂಗ್ಲೀಷ್ ಇವುಗಳ ವಿಶೇಷಶಿಕ್ಷಣ ಕೊಡಲ್ಪಡುವದು ಪ್ರಾಥಮಿಕ ತರಗತಿಗಳಲ್ಲಿ 35, ಮಾಧ್ಯಮಿಕ ತರಗತಿಗಳಲ್ಲಿ 27 ವಿದ್ಯಾರ್ಥಿಗಳು ಇರುವರು. ಈ 62 ಜನ ವಿದ್ಯಾರ್ಥಿಗಳಲ್ಲಿ 42 ಜನರು ಪುದರ ಸದ್ಗೃಹಸ್ಥರ ಮನೆಗಳಲ್ಲಿ ಭೋಜನಮಾಡುತ್ತಿರುವರು. ಹಾಗೂ 16 ಜನರು ವಿದ್ಯಾಲಯದ ಭೋಜನಶಾಲೆಯಲ್ಲಿ ಮತ್ತು 5 ಜನರು ಧರ್ಮವೀರ ಕುಪ್ಪಣ್ಣಲ್ಲು ಅಯ್ಯಪ್ಪನವರ ಹಾಸ್ಟಲಿನಲ್ಲಿ ಭೋಜನಮಾಡುತ್ತಾರೆ. ಈ ಎಲ್ಲಾ ವಿದ್ಯಾರ್ಥಿಗಳಿಗೆ ವಸತಿ ಮತ್ತು ದಿಸದ ವ್ಯವಸ್ಥೆಯು ವಿದ್ಯಾಲಯದವತಿಯಿಂದಲೆ ನಡಿಸಲ್ಪಡುತ್ತದೆ ಹೊಸ ವಿದ್ಯಾರ್ಥಿಗಳನ್ನು ಜೂ 1ನೆ ತಾರೀಖಿನಿಂದ ಈ ತಿಂಗಳ ಕೊನೆಯವರೆಗೂ ಸೇರಿಸಿಕೊಳ್ಳಲಾಗುತ್ತದೆ.

ಪೈಸಿಡೆಂಟರು, ಸ್ಕೂಲ್ ಮ್ಯಾನೇಜರ್,
ಗಾಳಿ ಕರಿಬಸಪ್ಪನವರು. ಶಿವಾಚನ್ನಬಸಪ್ಪನವರು.

ಹಾಸ್ಟಲ್ ಮ್ಯಾನೇಜರ್, ಸಹಾಯಕರು,
ಕೊಂಡಕುಂದಿಭೋಗಪ್ಪನವರು ಕಂಠವೀರಯ್ಯನವರು

ಸೆಕ್ರೆಟರಿ,
ಬಳಿಮೆರೆಪ್ಪ.

ಶ್ರೀಜಗದ್ಗುರು ಪಂಚಾಚಾರ್ಯ ವಾಚನಾಲಯ ಮತ್ತು ಶ್ರೀಮಲ್ಲಿಕಾರ್ಜುನಸ್ವಾಮಿಪುಸ್ತಕಾಲಯ ಸ್ಥಾಪನೆ

ಸೊರಬ ತಾಲೂಕು ಜಡಗೂರು ಗ್ರಾಮದಲ್ಲಿ ಆಶ್ವಯುಜ ಶು|| ವಿಜಯದಶಮಿ ಸೋಮವಾರ ಕೆ ಪಿ ರುದ್ರಗೌಡರು ಶ್ರೀಮಲ್ಲಿಕಾರ್ಜುನಸ್ವಾಮಿ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿಸಿ ತಮ್ಮ ಮಾತೃಶ್ರೀಯವರಾದ ಲಿಂಗಾಂಬಿಯವರ ಜ್ಞಾಪಕಾರ್ಥವಾಗಿ ಮೇಲ್ಮಂಡ ಹೆಸರಿನ ವಾಚನಾಲಯವನ್ನೂ ಮತ್ತು ಪುಸ್ತಕಾಲಯವನ್ನೂ ತಮ್ಮ ಗೃಹದಲ್ಲಿ ಸ್ಥಾಪಿಸಿರುವರು ಇದರಲ್ಲಿ ಮತಗ್ರಂಥಗಳೂ, ಕಥೆಗಳೂ, ಪುರಾಣಗಳೂ, ಸಂಗ್ರಹವಾಗಿರುತ್ತವೆ. ಜಗದಾಚಾರ್ಯರ ಆಶೀರ್ವಾದಬಲದಿಂದ ಎರಡು ಸಂಸ್ಥೆಗಳೂ ಅಭಿವೃದ್ಧಿಯನ್ನು ಹೊಂದಲೆಂದು ಪ್ರಾರ್ಥಿಸುವ.

ಓರ್ವ ಗುರುಭಕ್ತ

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ

ವೀರಶೈವ ಗುರುವರ್ಗದ ವಟುಗಳಿಗೆ ಸೂಚನೆ.

ಧಾರವಾಡ ಡಿ|| ರೋಣ ತಾ|| ಸೂಡಿಗ್ರಾಮದ ಜುಗತಿ ಹಿರೇಮಠದಲ್ಲಿ ಧರ್ಮಾರ್ಥ ವೈದಿಕ ಜ್ಯೋತಿಷ ಪಾಠಶಾಲೆಯು ಇದೇ ಕಾರ್ತಿಕ ಶು|| ೫ ಮಿತಿಯಲ್ಲಿ ಸ್ಥಾಪಿತವಾಗಿರುವದು. ಈ ವರ್ಷಾರಂಭ ಜನ ವಿದ್ಯಾರ್ಥಿಗಳಿಗೆ ಪ್ರವೇಶವಿರುವದು ಬರತಕ್ಕ ವಿದ್ಯಾರ್ಥಿಗಳು ಕನ್ನಡ ಇಂಗ್ಲೀಷ ಶಾಲೆಯಲ್ಲಿ ಉತ್ತೀರ್ಣರಾಗಿರಬೇಕು ಸಡಕೆಯ ಬಗ್ಗೆ ಯೋಗ್ಯಜನರ ಪ್ರಶಂಸಾಪತ್ರಿಕೆಯೊಂದಿಗೆ ಡಿಸಂಬರಿ ಅಂತ್ಯದೊಳಗಾಗಿ ಬಂದು ಹಾಜರಾಗತಕ್ಕದ್ದು.

ಸೆಕ್ರೆಟರಿ,
ತಾ|| 12-12-1938 ಗುಂಡಯ್ಯ ವಸ್ತ್ರದ

॥ ಶ್ರೀಜಗದ್ಗುರು ವಿಶ್ವಾರಾಧ್ಯೋ ವಿಜಯತೇ ॥

ವೀರಶೈವರತ್ನವೊಂದು ಮಾಯವಾಯಿತು

ವೀರಶೈವಮತಕ್ಕೆ ಅಲಂಕಾರಪ್ರಾಯವಾಗಿದ್ದ ತಿರೋಳ ಹಿರೇಮಠ ಶ್ರೀ ಪಂಚಾಕ್ಷರಶಾಸ್ತ್ರಿಗಳವರು ಜ್ಯೋತಿಷ ವಿದ್ವಾ ಂ ಪಂಡಿತರು ಶಿವಾಧೀನರಾದ ರೆಂಬ ವಿಷಯವನ್ನು ತಿಳುಹಿಸಲು ವ್ಯಸನವನಿಸುತ್ತಿದೆ ಈ ಮಹಾಶಯರು ೩೪ ವರುಷ ವಯಸ್ಸಿನವರಿದ್ದು ಜ್ಯೋತಿಶ್ಶಾಸ್ತ್ರ ಕೋವಿದರೂ ಧರ್ಮಗ್ರಂಥಗಳಲ್ಲಿ ನಿಪುಣರೂ ಆಗಿದ್ದರು. ಈ ಮಹಾವ್ಯಕ್ತಿಯಲ್ಲಿ ಸನಾತನ ಧರ್ಮಾಭಿಮಾನವು ತುಂಬಿ ತುಳುಕುತ್ತಿತ್ತು. ಇವರ ಲೇಖನಪದ್ಧತಿಯು ವರ್ಣನಾತೀತವಾಗಿದ್ದಿತು ಇವರ ಉಪನ್ಯಾಸವನ್ನು ಕೇಳಿದವರು ಎಂಥ ನಾಸ್ತಿಕನಿದ್ದರೂ ಈಶ್ವರಭಕ್ತನಾಗಬೇಕು. ಗೊಡಚಿಯಲ್ಲಿ ಗುರುಕುಲಸ್ಥಾಪನೆಗೆ ಇವರೇ ಮೂಲಸ್ತಂಭದಂತಿದ್ದರು. ಈ ಮಹಾಶಯರು ೧೮ ದಿವಸಗಳಿಂದ ವಿಷಮಜ್ವರಪೀಡಿತರಾಗಿ ತಾ॥ ೧೧-೧೨-೧೯೩೬ ನೇ ರವಿವಾರ ರಾತ್ರಿ ೮ ಘಂಟೆಗೆ ಶಿವಸಾಯುಜ್ಯವನ್ನು ಹೊಂದಿದರು ಇವರು ಶಿವಾಧೀನರಾಗುವದಕ್ಕಿಂತಲೂ ಮೊದಲು ಅಂದರೆ ರವಿವಾರ ಉದಯ ೯ ಘಂಟೆಗೆ ತಮ್ಮ ಸೋದರಮಾವಂದಿರಾದ ಶ್ರೀಯುತ ಷಡಕ್ಷರಯ್ಯನವರನ್ನು ತಮ್ಮ ಸಮೀಪಕ್ಕೆ ಕರೆದು ಅವರಿಗೆ ನಮಸ್ಕರಿಸಿ ಇನ್ನು ಮೇಲೆ ನಾನು ಪರಲೋಕಕ್ಕೆ ಪ್ರಯಾಣಮಾಡುತ್ತೇನೆ. ಯಾವತ್ತೂ ವ್ಯಾಪಂಚಿಕ ಧಾರವನ್ನು ತಮಗೆ ಒಪ್ಪಿಸಿದ್ದೇನೆ ಅದನ್ನು ಚೆನ್ನಾಗಿ ರಕ್ಷಿಸಬೇಕೆಂದು ಹೇಳಿದರು ಆಗ ಸರ್ವರೂ ದುಃಖಾಕ್ರಾಂತರಾಗಿ ಕಣ್ಣೀರುಗಳನ್ನು ಸುರಿಸಲಾರಂಭಿಸಿದರು ಆಗ ಈ ಪಂಡಿತಮಹಾಶಯರು ಅಂತ್ಯಸಮಯದಲ್ಲಿಯೂ ಸಹ ಅವರೆಲ್ಲರಿಗೂ ಗುರುಮಹಿಮೆಯನ್ನು ಬೋಧ ಮಾಡಿ "ಶ್ರೀಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ" ಎಂದು ಜಯಘೋಷಮಾಡುತ್ತಾ ಪ್ರಾಣವನ್ನು ಬಿಟ್ಟರು ಇವರಲ್ಲಿದ್ದ ಗುರುಭಕ್ತಿಯು ಸರ್ವರಿಂದಲೂ ಗ್ರಹಿಸಲ್ಪಡುವದಾಗಿತ್ತು. ಜಗದ್ಗುರು ಪಂಚಪೀಠಾಧಿಪತಿಗಳ ಕೃಪೆಯು ಇವರಮೇಲೆ ಪರಿಪೂರ್ಣವಾಗಿದ್ದಿತು ಅದ್ದರಿಂದಲೇ ಇವರ ಅಂತಿಮಸಮಯದಲ್ಲಿ ಶ್ರೀ॥ ಸತ್ತೇಗೇರಿ ಪಟ್ಟದಸ್ವಾಮಿಗಳವರು ಶ್ರೀ ಗುರು ದೇವಶಿವಾಚಾರ್ಯಸ್ವಾಮಿಗಳವರು ಚಿಕ್ಕಮಣ್ಣೂರು ಶ್ರೀ॥ ಬಾಲಲೀಲಾ ಚೆರಮೂರ್ತಿಸ್ವಾಮಿಗಳವರು ಹೊಲಿ ಶ್ರೀ॥ ಪಟ್ಟದಸ್ವಾಮಿಗಳವರು ಕಡಕೋಳ ಶ್ರೀ॥ ಪಟ್ಟದ ಸ್ವಾಮಿಗಳವರು ಕೊಣ್ಣೂರು ಈ ಪಂಚಳುಪಾಚಾರ್ಯರು ಆಗಮಿಸಿದ್ದರು. ಸೋಮವಾರ ಸಾಯಂಕಾಲ ೫॥ ಘಂಟೆಗೆ ಸ್ವಶಾನದೂತ್ರಾಮಹೋತ್ಸವವು ಪ್ರಾರಂಭವಾಗಿ ರಾತ್ರಿ ೮॥ಘಂಟೆಗೆ ಸ್ವಶಾನಕ್ಕೆ ತಲ್ಪಿತು. ಒಂದು ಕಡೆಗೆ ಕಹಳೆಗಳ ಶಬ್ದವು ಭೋರ್ಗರೆಯುತ್ತಿತ್ತು., ಮತ್ತೊಂದುಕಡೆಗೆ ಪಂಚಾಚಾರ್ಯರ ಭಜನಾಸಂಘದವರು ಇಂಪಾಗಿ ಭಜಿಸುತ್ತಿದ್ದರು. ಬೇರೊಂದು ಕಡೆಗೆ ಅನೇಕ ವಾದ್ಯಗಳ ಶಬ್ದವು ನಭೋಮಂಡಲದಲ್ಲಿ ಪ್ರತಿಧ್ವನಿಯನ್ನುಂಟುಮಾಡುತ್ತಿತ್ತು. ಆದರೂ ಪಂಡಿತರ ಅಪಮೃತ್ಯುವೆಂಬ ರಾಹುವು ಸರ್ವರ ಮುಖವೆಂಬ ಚಂದ್ರನನ್ನು ಮಲಿನವನ್ನಾಗಿ ಮಾಡಿದ್ದನು. ಸುತ್ತುಮುತ್ತಿನ ಗ್ರಾಮಗಳಿಂದಲೂ ದೂರದೂರ ಸ್ಥಲಗಳಿಂದಲೂ ೩ ಸಾವಿರ ಜನರು ಪಂಡಿತರ ಅಂತಿಮ ದರ್ಶನಾಪೇಕ್ಷಿಗಳಾಗಿ ಬಂದಿದ್ದರು. ಸರ್ವರ ನಾಲಿಗೆಯಲ್ಲಿಯೂ ಪಂಡಿತರ ಗುಣಗಾನವು ನರ್ತನಮಾಡುತ್ತಿತ್ತು. ಇವರ ಗುಣವರ್ಣನೆಯನ್ನು ಕೇಳಿದವರೆಲ್ಲರಿಗೂ ಕಣ್ಣೀರು ಧಾರಾವೃಷ್ಟಿಯಾಗಿ ಸುರಿಯುತ್ತಲಿದ್ದವು ವೀರಶೈವ ಸಮಾಜದಲ್ಲಿ ಈ ಮಹಾಶಯರ ಹೆಸರನ್ನು ಕೇಳದೇ ಇದ್ದ ವ್ಯಕ್ತಿಯೇ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಕರ್ಪೂರವು ಕರಗಿ ಹೋದರೂ ತಾನಿದ್ದ ಸ್ಥಲದಲ್ಲಿ ಸುಗಂಧವನ್ನಿಟ್ಟುಹೋಗುವಂತೆ ಈ ಮಹಾಶಯರು ಭೌತಿಕ ಶರೀರದಿಂದ ಮುಕ್ತರಾದರೂ ಇವರ ಘನತರವಾದ ಕೀರ್ತಿಯು ಜಗತ್ತಿನಲ್ಲಿ ಸ್ಥಿರವಾಗಿ ಉಳಿದಿರುವದು. ಮೃತರ ಆತ್ಮಕ್ಕೂ ಇನ್ನುಳಿದ ಬಂಧುಗಳಿಗೂ ಪರಮಾತ್ಮನು ಶಾಂತಿಯನ್ನು ದಯಪಾಲಿಸಲಿ

ದುಃಖಭಾಗಿಯಾದ ವಿದ್ಯಾರ್ಥಿಮಂಡಲಿ.
ಶ್ರೀ ವಿಶ್ವಾರಾಧ್ಯಾಶ್ರಮ, ಬೆಳವಣಿಕಿ.

ಶೋಕವಾರ್ತೆ

ಸೊರಬ ತಾಲೂಕು ಜಡೆಹೊಂಬಳ ಅರೆತೆಲಗಡ್ಡಿ ಗ್ರಾಮದಲ್ಲಿ ವೀರಶೈವಮತದ ಮಲ್ಲರಾಜವಂಶಿಕರಾದ ಸಣ್ಣಗೌಡ್ರ ಮಲ್ಲಪ್ಪಗೌಡ್ರು ಚಿನ್ನಮಾಜಿಯವರ ಉದರದಲ್ಲಿ ಜನಿಸಿದ್ದ ಶ್ರೀಮತಿ ಲಿಂಗಮ್ಮಾಜಿಯವರು ಶಿವೈಕ್ಯರಾದರೆಂದು ತಿಳಿಸಲು ವಿಷಾದವನಿಸುತ್ತದೆ. ಇವರು ಪಡೆದಿರುವ ಪರಿಕರ ನಿರತರಾಗಿ ತಮ್ಮ ಜೀವಮಾನದಲ್ಲಿ ಅನೇಕ ಧರ್ಮಕಾರ್ಯಗಳನ್ನು ಮಾಡಿರುತ್ತಾರೆ. ಇವರು ಕಟ್ಟಿಸಿರುವ ಶೀದುವ ಭಾವಿ, ನೀರುತುಂಬುವ ಹೊಂಡ ವೈಷ್ಣೇಶ್ವರ ದೇವಸ್ಥಾನಗಳು ಕಂಗೊಳಿಸುತ್ತಲಿವೆ. ಇವರ ಜನಕರ ಗೃಹದಲ್ಲಿ ಪ್ರತಿವರ್ಷವೂ ಪುರಾಣಶ್ರವಣ ಗಣಪತಿ ಆರಾಧನೆ ನಡೆಯುತ್ತಿದ್ದಿತಲ್ಲದೆ ಪ್ರತಿದಿನ ಬಂದ ಅತಿಥಿಗಳಿಗೆ ಅನ್ನದಾನವೂ ನಡೆಯುತ್ತಿದ್ದಿತು. ಲಿಂಗಮ್ಮಾಜಿಯವರ ಸಹೋದರಿಯವರಾದ ಹೊಳೆಯಮ್ಮಾಜಿಯನ್ನು ವತನದಾರು, ಕೋಡಿಕೊಪ್ಪದ ಗಿಂಡಿ ಈಶ್ವರಪ್ಪಗೌಡರಿಗೆ ಕೊಟ್ಟು ವಿವಾಹ ಮಾಡಿದ್ದರು. ಇವರ ಉದರದಲ್ಲಿ ಜನಿಸಿಗುವವರು ಶ್ರೀ ರೇಣುಕಪೀಠಕ್ಕೆ ಭೂದಾನಮಾಡಿ ಸುವರ್ಣ ರಜತ ಖುರ್ಚಿಯನ್ನು ಅರ್ಪಿಸಿ ಆಶೀರ್ವಾದವನ್ನು ಪಡೆದಿರುವ ಶ್ರೀಮಾನ್ ಗಿಂಡಿ ವೀರಪ್ಪಗೌಡರು.

ಲಿಂಗಮ್ಮಾಜಿಯವರು ಪತಿಯೊಂದಿಗೆ ಸಂಸಾರವನ್ನು ಸಾಗಿಸಿಕೊಂಡು ಪತಿವ್ರತಾಶಿರೋಮಣಿಗಳೆನಿಸಿ ಮನೆತನದ ಗೌರವಕ್ಕೆ ಶಕ್ಯಂತೆ ವರ್ತಿಸುತ್ತಿದ್ದರು ಇವರಿಗೆ ಇಬ್ಬರು ಹೆಣ್ಣುಮಕ್ಕಳೂ, ಕೆಪಿ. ರುದ್ರರಾಜ ಗೌಡ ಎಂಬ ಗಂಡುಮಗನೂ ಜನಿಸಿದರು. ಇವರ ಪತಿಯು 1911 ರಲ್ಲಿ ಕೈಲಾಸವಾಸಿಗಳಾದರು.

ಇವರು ೬೪ ವರ್ಷ ಮುಪ್ಪಿನವರಾದಾಗ್ಯೂ ಎಲ್ಲ ಕಾರ್ಯಗಳನ್ನೂ ನೆರವೇರಿಸುತ್ತಿದ್ದರು. ಪ್ರತಿಯೊಬ್ಬ ವ್ಯಕ್ತಿಯ ಬಾಯಲ್ಲೂ ಲಿಂಗಮ್ಮಾಜಿಯವರ ಗುಣಪಕ್ಷವನ್ನೇ ಕೇಳಬರುತ್ತಲಿದೆ ಇಂಥ ಪುಣ್ಯಶರೀರಗಳ ವಿಯೋಗವು ಅತ್ಯಂತ ವಿಷಾದಜನಕವಾಗಿದೆ ಇವರ ಉತ್ತರಕ್ರಿಯೆಗಳೆಲ್ಲವೂ ಸಾಂಗವಾಗಿ ನಡೆಸಲ್ಪಟ್ಟವು. ಭಗವತ್ಪಾದರಾದ ಶ್ರೀಪಂಚಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ. ಓರ್ವ ಗ್ರಾಮವಿವಾಸಿ

ದುಃಖವಾರ್ತೆ

ಚಿಕ್ಕಮಗಳೂರು ತಾ॥ ಅಲದೂರು ಕಾಫಿಪ್ಲಾಂಟರ್ ಮ॥ ರಾ॥ ಶ್ರೀ॥ ಬಿ. ಪುಟ್ಟಣ್ಣಶೆಟ್ಟರು ಕೆಲವು ದಿವಸಗಳು ಅಸ್ವಸ್ಥರಾಗಿದ್ದು ತಾ॥ ೨-೧೨-೩೬ಲವೆಯ ರಾತ್ರಿ ಎಪ್ಪತ್ತೈನಾಲ್ಕನೆಯ ವಯಸ್ಸಿನಲ್ಲಿ ಶಿವಸಾಯುಜ್ಯವನ್ನು ಹೊಂದಿದರು. ಇವರು ಬಾಲ್ಯದಿಂದ ಗುರುಲಿಂಗ ಜಂಗಮ ಪ್ರೇಮಿಗಳಾಗಿಯೂ, ಸದಾಚಾರಶೀಲರಾಗಿಯೂ ಇದ್ದುದರ ಫಲವಾಗಿ ಶ್ರೀಜಗದ್ಗುರು ರಂಭಾಪುರೀಶ್ರೀ ಸನ್ನಿಧಿಯವರ ಶೋಧಾನುಗ್ರಹಕ್ಕೆ ಪಾತ್ರರಾಗಿ ಗುರೂಪದಿಷ್ಟವಾದ ನಿಯಮಗಳನ್ನು ಬಿಡದೆ ಪಾಲಿಸುತ್ತಿದ್ದರು

ಇವರು ಸ್ವಸಾಮರ್ಥ್ಯದಿಂದ ನಿತ್ಯಕರ್ಮಗಳನ್ನು ನಡೆಯಿಸಲು ೩-೪ ದಿವಸಗಳವರೆಗೆ ಅಶಕ್ತರಾದಕಾರಣ ಶ್ರೀ ಮಾಡಿಗೆರೆ ಚರಮೂರ್ತಿಗಳವರು ಮತ್ತು ಶ್ರೀ ಅಮರು ಚರಮೂರ್ತಿಗಳವರು ಈ ಉಭಯರ ಮೂಲಕ ನಿತ್ಯಕರ್ಮಾನುಷ್ಠಾನಗಳು ನಡೆಯಿಸಲ್ಪಡುತ್ತಿದ್ದವು ಕೊನೆದಿವಸ ಆಚಾರ್ಯ ಭಗವತ್ಪಾದರ ಭಜನೆಯನ್ನು ಮಾಡಿ ಸಮಾಪ್ತಿಸೂಚಕವಾದ ಮಹಾಮಂಗಳಾರತಿಯು ನಡೆಯುತ್ತಿರುವ ವೇಳೆಗೆ ಸರಿಯಾಗಿ ಮರಣ ಚಿಹ್ನೆಗಳು ತೋರಿದವು. ಇವರ ಜ್ಯೇಷ್ಠಪುತ್ರರಾದ ಮ॥ ರಾ॥ ಶ್ರೀ॥ ಮಲ್ಲಪ್ಪಶೆಟ್ಟರವರಿಂದ ಒಂದು ಅರ್ಘ್ಯದಷ್ಟು ಕ್ಷೀರವು ಮೃತರ ಆತ್ಮಕ್ಕೆ ಸೇರಿದೊಡನೆಯೇ ಬಹು ಶಾಂತಿಯಿಂದ ಪ್ರಾಣವಾಯುವು ಈ ಜಡದೇಹವನ್ನಗಲಿತು.

ಮರುದಿವಸ ನೀಲಿ ಹೇಳಿದ ಉಭಯ ಶ್ರೀಗಳವರ ಕರ್ತೃತ್ವದಿಂದ ಸಮಾಧಿಕ್ರಿಯೆಗಳೆಲ್ಲವೂ ಸಾಂಗೋಪಾಂಗವಾಗಿ ನಡೆದುವಲ್ಲದೆ ನೆರೆದಿದ್ದ ಜಂಗಮರಿಗೂ ಬಡಬಗ್ಗರಿಗೂ ಯಥಾವತ್ತಾಗಿ ದಾನಧರ್ಮಗಳು ನಡೆಸಲ್ಪಟ್ಟುವು. ಮೃತರ ಆತ್ಮಕ್ಕೆ ಶ್ರೀ ಜಗದಾಚಾರ್ಯರು ಶಾಂತಿಯನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುವ,

ಎಚ್. ಜಡೆಮಾದಪ್ಪ, ಸ್ಕೂಲ್‌ಮಾಸ್ಟರ್.

ಪ್ರಶ್ನೋತ್ತರರತ್ನಮಾಲಿಕಾ

ಲೇಖಕರು:—ಮಲ್ಲಿಕಾರ್ಜುನಾರಾಧ್ಯ ರಾಜೆದನ್ನೂರು
ಮಳೆಮಠ ಮುದೇನೂರು.

ಪ್ರ—ಮನಸ್ಸು ಅಂದರೇನು? ಅದರ ಕರ್ತೃತ್ವ ಶಕ್ತಿ ಯೆಂಥದು?

ಉ — ಮಹಾಪ್ರಳಯಕಾಲದೊಳ್ ನಾಮರೂಪ ರಹಿತವಾಗಿ ನಿಂತಿದ್ದ ಸರ್ವಶಕ್ತನಾದ ಪರಮಾತ್ಮನ ಸಂಕಲ್ಪಶಕ್ತಿಯಿಂದುಂಟಾದ ಸ್ವರೂಪವಿಶೇಷವೇ ಮನವೆನಿಸಿಕೊಳ್ಳುವದು. ಇದಕ್ಕೆ ಕುಸುಮಕ್ಕೆ ಪರಿಮಳದಂತೆ ಅಭಿನ್ನವಾಗಿ ಕಲ್ಪನಾಶಕ್ತಿಯಿರುವದು ಸೃಷ್ಟ್ಯದಾರ್ಥಗಳಲ್ಲಿ ಮನಸ್ಸೆಂಬ ತತ್ವವು ಅತಿಮಹತ್ತರವಾದ ದ್ದಾಗಿರುವದು "ಮನ್-(ಅವಬೋಧನೇ)" ಎಂಬ ಧಾತುವಿನಿಂದ ಸಿದ್ಧವಾದ "ಮನಸ್ಸೆಂಬ" ಶಬ್ದವು, ತಿಳಿದುಕೊಳ್ಳುವ ಶಕ್ತಿಯುಳ್ಳದ್ದೆಂದು ವಸ್ತುವೆಂಬ ಅರ್ಥವನ್ನು ಬೋಧಿಸುವದು ಆದರೆ ಈ ಮನಸ್ಸೆಂಬ ವಸ್ತುವಿನ ರೂಪವನ್ನು ಮಾತ್ರ ವರ್ಣಿಸುವದು ಶಕ್ಯವಿಲ್ಲ, ಏಕೆಂದರೆ ಅದಕ್ಕೆ ಸ್ವತಂತ್ರ ಆಕಾರವೇ ಇಲ್ಲವು. ಶಬ್ದವು ನೋಡಿದರೆ ಕ್ರೋಧವೂ, ಮಿತ್ರನು ನೋಡಿದರೆ ಪ್ರಶಂಸವೂ, ಮಧುರಪದಾರ್ಥಗಳಲ್ಲಭಿಲಾಷೆಯೂ, ಕಹಿಪದಾರ್ಥಗಳಲ್ಲಿ ಜುಗುಪ್ಸೆಯೂ ಉಂಟಾಗುವುದರಿಂದ ಇದರ ಆಕಾರವು ನೇತ್ರಾದಿ ಜ್ಞಾನೇಂದ್ರಿಯಗಳ ಮೂಲಕ ಹೊರಹೊರಟು ಗ್ರಾಹ್ಯಪದಾರ್ಥಗಳಿಗೆ ಸಂಬಂಧಿಸಿ ತದಾಕಾರವನ್ನೇ ಹೊಂದುವದು ಹೀಗೆ ಇದು ಎಳೆಬಿರಿನಂತೆ ಮಣಿಸಿದತ್ತಮಣಿಯುವ ಸ್ವಭಾವವು ಕೃದ್ಧಾಗಿರುವುದರಿಂದಲೇ ಅದು ದುಸ್ಸಂಗದಿಂ ಜೀವನ ಬಂಧನಕ್ಕೂ, ಸತ್ಸಂಗದಿಂ ಜೀವಾತ್ಮನ ಮೋಕ್ಷಕ್ಕೂ ಕಾರಣವಾಗಿರುವದು. ಇದು ಒಂದು ಕ್ಷಣವಾದರೂ ಸುಮ್ಮನಿರದೆ ಬಾಲ ಕುಟ್ಟಿ ಜಿಕ್ಕಿನಂತೆ ಶಾಂತಿಯಿಲ್ಲದೆ ಅತ್ತಿತ್ತ ತಿರುಗಾಡುತ್ತಲೇ ಇರುವದು ಇದಕ್ಕೆ ತೃಪ್ತಿಯಂತೂ ಇಲ್ಲವೇ ಇಲ್ಲ

ಇದಕ್ಕೆ ಹೊಸಹೊಸವಸ್ತುಗಳಮೇಲೆ ಪ್ರೀತಿಬಹಳ ಇದಕ್ಕೆ ಪದಾರ್ಥಗಳ ಜ್ಞಾನವು ಇಂದ್ರಿಯಗಳಮೂಲಕ ದಿಂದಲೂ, ಅಭಿರುಚಿಯ ಜ್ಞಾನವು ದೇಹಾಭಿಮಾನಿಯಾದ ಜೀವಾತ್ಮನಮೂಲಕದಿಂದಲೂ ಆಗುವದಲ್ಲದೆ ಸ್ವತಂತ್ರವಾಗಿ ಪದಾರ್ಥಗಳ ಜ್ಞಾನವು ಅಥವಾ ಅಭಿರುಚಿಯ ಜ್ಞಾನವು ಆಗುವದಿಲ್ಲವು. ಆದರೂ ಈ ಮನವು ಸ್ವತಃ ತನಗೆ ಭೋಗಜ್ಞಾನಗಳಲ್ಲದಿದ್ದರೂ ಇಚ್ಛಾಮಾತ್ರದಿಂ ಸೇರಿದಿರುವುದೂ ಸೇರಿಸುತ್ತಲೂ ಸೇರಿರುವುದಂ ಅದರಿಸುತ್ತಲೂ ಆತ್ಮನಿಗೋಸ್ಕರವಾಗಿ ಸರ್ವಕಾರ್ಯಗಳನ್ನು ಮಾಡುತ್ತಿರುವದು. ಮತ್ತು ಇದು ಫೋಟೋಗ್ರಾಫರನಂತೆ ನೇತ್ರಾದಿ ಪಂಚಜ್ಞಾನೇಂದ್ರಿಯಗಳೆಂಬ ಕನ್ನಡಿಗಳಿಂದ ಶಬ್ದಾದಿ ಪಂಚವಿಷಯಗಳ ಫೋಟೋಗಳನ್ನು ತಗೆದುಕೊಂಡು ತನ್ನ ಮೆದುಳೆಂಬ ಪೆಟ್ಟಿಗೆಯಲ್ಲಿಟ್ಟಿದ್ದು ತನಗೆ, ಅಂದರೆ ದೇಹಾಭಿಮಾನಿಯಾದ ಜೀವಾತ್ಮನಿಗೆ ಬೇಕಾದ ಸಂಗತಿಯನ್ನು ದೇಹ ವಿರುವ ಪರಿಯಂತರ ನೆನಪಿನಲ್ಲಿಟ್ಟಿದ್ದು ಬೇಕಾದಾಗ ಅದನ್ನು ಒದಗಿಸಿಕೊಡುವದು. "ಮನೋಹಿ ಜನ್ಮಾಂತರಸಂಗತಿಜ್ಞಂ" ಎಂಬಂತೆ ಇದು ಜನ್ಮಾಂತರ ಸಂಗತಿಗಳನ್ನು ತಿಳಿಯುವಂಥದೂ ಆಗಿರುವದು. ಇದು ಅತ್ಯಂತ ವೇಗಶಾಲಿಯಾಗಿಯೂ ಸೂರ್ಯನ ಪ್ರಕಾಶಕ್ಕೆ ಮಿಗಿಲಾದದ್ದಾಗಿಯೂ ಇರುವದು. ಬೇಕಾದರೆ ಒಂದು ನಿಮಿಷದಲ್ಲಿ ಪ್ರಪಂಚವನ್ನೇ ಸುತ್ತಿಕೊಂಡು ಬರುವದು. ಮತ್ತು ಇದು "ನಹಿಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯ ಕರ್ಮಕೃತ್" ಎಂಬ ಗೀತೋಕ್ತಿಯಂತೆ ಒಂದು ಕ್ಷಣವಾದರೂ ಸುಮ್ಮನಿರದೆ ಸದಾ ಉದ್ಯೋಗತತ್ಪರವಾಗಿರುವದು. ಕೆಲಸಮಾಡುವ ವಿಷಯದಲ್ಲಿ ಬೇಸರವೇ ಇಲ್ಲ; ಇಪ್ಪತ್ತುನಾಲ್ಕು ತಾಸುಗಳಲ್ಲಿ ಒಂದು ತಾಸು ಸುಮ್ಮನಿಯಾದರೆ ಹೆಚ್ಚು. ಒಂದೊಂದು ದಿವಸ ಸುಮ್ಮನಿಯೇ ಬರುವದಿಲ್ಲ. ಕೇವಲ ಸ್ವಪ್ನ ಇಲ್ಲವೆ ಜಾಗ್ರದವಸ್ಥೆಯಲ್ಲಿಯೇ ಕಾಲವು ಗತಿಸಿಹೋಗುವದು. ಸುಷುಪ್ತಿ ಅವಸ್ಥೆಯ ಹೊರತು ಮಿಕ್ಕೆರಡವಸ್ಥೆಗಳಲ್ಲಿ ಯಾವುದಾದೊಂದು ಕಾರ್ಯವನ್ನು ಮಾಡುತ್ತಲೇ ಇರುವದು. ಜಾಗ್ರದವಸ್ಥೆಯಲ್ಲಿ ಮುಖ್ಯವಾಗಿ ಇಂದ್ರಿಯಗಳನ್ನು ಕಟ್ಟಿಕೊಂಡು ಕಾರ್ಯಮಾಡುವದು. ಸ್ವಪ್ನಾವಸ್ಥೆಯಲ್ಲಿ ಮುಖ್ಯವಾಗಿ ತಾನೊಂದೇ ಮಾಡುವದು. ಅಂದಬಳಿಕ

[೭ನೆಯ ಪುಟವನ್ನು ನೋಡಿ.]

ಪಂಚಾಚಾರ್ಯಪ್ರಭಾ.

೧೯೩೭ನೆಯ ಡಿಸೆಂಬರ್ ತಾ|| ೧೯ನೇ ಸೋಮವಾರ.

ಶೈವ-ವೀರಶೈವಸ್ವರೂಪ.

ಇಂದ್ರಿಯಾಣಾಂ ತು ಸರ್ವೇಷಾಂ ಯನ್ಮೋಕ್ಷಂ ಕ್ಷರತೀಂದ್ರಿಯಂ।
ತೇನಾಸ್ಯ ಕ್ಷರತಿ ಪ್ರಜ್ಞಾ ಧೃತೇಃ ಪಾದಾದಿವೋದಕಂ ॥

ಇಂದ್ರಿಯಗಳನ್ನು ಜಯಿಸಿದ ಹೊರತು ಆತ್ಮವು ಸ್ವಸ್ಥತೆಯನ್ನು ಹೊಂದುವುದಿಲ್ಲ ಚಕ್ಷುರಾದಿ ಇಂದ್ರಿಯಗಳು ಎಷ್ಟರಮಟ್ಟಿಗೆ ಸಂಕೋಚಭಾವವನ್ನು ಹೊಂದುತ್ತ ಬರುವುದೋ ಅಷ್ಟರಮಟ್ಟಿಗೆ ಆತ್ಮನು ಚಾಂಚಲ್ಯದಿಂದ ಬಿಡುಗಡೆಹೊಂದಿ ದೇವದೆಲ್ಲಿ ಸ್ಥಿರತೆಯನ್ನಿಡುತ್ತ ಬರುವನು. ಇಂದ್ರಿಯಗಳ ನಿಗ್ರಹದಿಂದಲೇ ಆತ್ಮರಕ್ಷೆಯು ಬೆಳೆಯುವದು. ಯಾವನು ಇಂದ್ರಿಯಗಳನ್ನು ಸ್ವೇಚ್ಛೆಯಾಗಿ ಬಿಡುವುದರಿಂದ ಅಂದು ನೋಡಬಾರದ ಮೆಷ್ಟು ದೃಶ್ಯಗಳನ್ನು ನೋಡುವನೂ ಕೇಳಬಾರದ ಮೆಷ್ಟು ಶಬ್ದಗಳನ್ನು ಕೇಳುವದೂ ಸಹಿಸದವ್ಯ ದೀರ್ಘೋಷ್ಣ ವಾಯುವನ್ನು ಸ್ಪರ್ಶಿಸುವದೂ ದುರ್ಗಂಧವನ್ನು ಆಘ್ರಾಣಿಸುವದೂ ಅಭಕ್ಷ್ಯಪದಾರ್ಥಗಳನ್ನು ಭಕ್ಷಿಸುವದೂ ಅವಾಚ್ಯಶಬ್ದಗಳನ್ನು ನುಡಿಯುವದೂ ಮುಂತಾವುಗಳಿಂದ ಆತ್ಮನ ಶಕ್ತಿಯೂ ಕ್ರಮಕ್ರಮವಾಗಿ ಕ್ಷೀಣಗ್ರಸ್ತ ನಾದವನಂತೆ ಸದಾ ನೆರೆಬೇಕಾಗುತ್ತದೆ. ಚಪಲರಿಂದ್ರಿಯಗಳನ್ನು ಅಂತರಿಂದ್ರಿಯವನ್ನು ನಿಗ್ರಹಮಾಡಿದವನಿಗೆ ಮೋಕ್ಷನೆಂಬ ಮಹಾಸುಖವು ಒಕ್ಕಲಾಗಿ ಬೆರೆಯುತ್ತದೆ. ಎಲ್ಲ ಇಂದ್ರಿಯಗಳು ಪರಿಪಾಕವಾಗಿ ಒಂದು ಇಂದ್ರಿಯವು ಭಿನ್ನಪಾದರೂ ಆ ಭಿನ್ನಮಾರ್ಗ ಆತ್ಮನ ಪ್ರಜ್ಞಾಶಕ್ತಿಯೆಲ್ಲವೂ ಕ್ರಮಕ್ರಮವಾಗಿ ನಶಿಸುತ್ತ ಆತ್ಮನು ಸತ್ವಹೀನ್ಯನಾಗುವನು. ನೀರಾತಂಬಿದ ಚರ್ಮದ ತಿತ್ತಿಗೆ ಯಾವುದಾದರೂ ಒಂದು ಕಡೆಗೆ ಸೂಜಿಯ ಮೊನೆಯಷ್ಟು ತೂತುಬಿದ್ದರೂ ಆ ತೂತಿನಿಂದ ನೀರೆಲ್ಲವೂ ಸುರಿದುಹೋಗುವುದೆಂಬುದನ್ನು ಎಲ್ಲರೂ ಬಲ್ಲರು. ಸಾರಥಿಯು ರಥಕ್ಕೆ ಕಟ್ಟಿದ ಮದಿಸಿದ ಕುದುರೆಗಳನ್ನು ಚೆನ್ನಾಗಿ ಶಿಕ್ಷಿಸಿ ಸರಿಯಾದ ಮಾರ್ಗದಲ್ಲಿ ನಡೆಯಿಸಿದ್ದರೆ ತನ್ನ ಕರ್ತವ್ಯಕ್ಕೆ ಲೋಪವನ್ನು ತಂದುಕೊಂಡಂತಾಗುವದಲ್ಲದೆ ರಥವು ಹೆಳ್ಳಕೊಳ್ಳಕ್ಕೆ ಬಿದ್ದು ನುಚ್ಚುನೂರಾಗುವದು. ರಥದಲ್ಲಿ ಕುಳಿತ ಯಜಮಾನನು ಸಹ ದುರವಸ್ಥೆಗೀಡಾಗಬೇಕಾಗುವದು. ಕುದುರೆಗಳನ್ನು ಸರಿಯಾಗಿ ನಡೆಸುವುದರಿಂದ ರಥವು ಭದ್ರವಾಗಿರುವುದು. ಯಜಮಾನನೂ ಸಹ ಉದ್ದಿಷ್ಟಸ್ಥಾನವನ್ನು ತೇರುವನು. ಆದರಂತೆ ಪುಣ್ಯವೆಂಬ ಮಹಾಬಿಲಿಯಿಂದ ಕೊಂಡ. ತಂದ ಈ ದೇಹವೆಂಬ ದಿವ್ಯರಥದಲ್ಲಿ ಆತ್ಮನೆಂಬ ಮಹಾರಾಜನು ಕುಳಿತುಕೊಂಡು ನಿಜಸ್ಥಾನವನ್ನು ತೇರಲು ಪ್ರಯಾಣಮಾಡಿರುವನು. ಚಕ್ಷುರಾದಿ ಇಂದ್ರಿಯಗಳೇ ಮದಿಸಿದ ಕುದುರೆಗಳಾಗಿರುತ್ತವೆ. ಮನಸ್ಸೇ ಆ ಕುದುರೆಗಳನ್ನು ಹತ್ತೋಟಿಗೆ ತರುವ ಕಡಿವಾಣವಾಗಿದೆ. ಬುದ್ಧಿಯೇ ಸಡಿಸಿತಕ್ಕ ಸಾರಥಿಯಾಗಿರುತ್ತಾನೆ. ಈ ಇಂದ್ರಿಯಗಳು ಯಾವಾಗಲೂ ಪರಮಾತ್ಮಾಕಡೆಗೆ ಕಣ್ಣೆತ್ತಿ ಸಹ ನೋಡದೆ ವಿಷಯಗಳ ಅಭಿಮುಖವಾಗಿಯೇ ಓಡುವ ಸ್ವಭಾವವುಳ್ಳವುಗಳಾಗಿವೆ. ಯಾವನು ಇಂಥ ಇಂದ್ರಿಯಗಳನ್ನು ಸ್ವೇಚ್ಛೆಯಾಗಿ ಬಿಡದೆ ಪರಮಾತ್ಮನ ಕಡೆಗೆ ತಿರುಗಿಸುವುನೋ ಅವನೇ ಧೀರನು. ಮುಕ್ತಿಯೆಂಬ ಅಮೃತಫಲವು ಅತನ ಹಸ್ತಗತವೇ ಆಗುವುದು. ಆತ್ಮನು ಯದ್ಯಪಿ ಪರಮಾತ್ಮನ ಅಂಶನಾಗಿದ್ದರೂ ಅವನ್ನು ತಾನು ಮರೆತು ಅವಿದ್ಯೆಯೆಂಬ ಮೆಷ್ಟು ಸ್ತ್ರೀಲೋಲನಾಗಿ ತನ್ನ ಸರ್ವಜ್ಞತ್ವಾದಿ ಅನಾಧಾರಣಧರ್ಮಗಳನ್ನೆಲ್ಲಾ ಕಳೆದುಕೊಂಡು ಕಿಂಚಿಜ್ಞನೆನಿಸಿ ಭವಾರಣ್ಯದಲ್ಲಿ ಅಲ್ಪಸಂತೆ ಸುತ್ತಬೇಕಾಗಿದೆ. ಅದ್ದರಿಂದ ಮೊದಲು ಆತ್ಮನು ತನ್ನನ್ನೇ ಹೀನಸ್ಥಿತಿಗೆ ಗುರಿಮಾಡಿದ ಇಂದ್ರಿಯಗಳನ್ನು ಜಯಿಸುವ ಉಪಾಯವನ್ನು ಆಲೋಚಿಸಬೇಕು. ಇವಕ್ಕಾಗಿಯೇ ಮಹರ್ಷಿಗಳು ಯೋಗವೆಂಬ ಶಾಸ್ತ್ರವನ್ನು ಬರೆಯಬೇಕಾಯಿತು. ಯೋಗವನ್ನು ಅಭ್ಯಾಸಮಾಡಿದ ಹೊರತು ಇಂದ್ರಿಯಗಳು ಹಿಂಜರಿಯುವುದಿಲ್ಲ. ಇವುಗಳು ಹಿಂಜರಿಯದ ಹೊರತು ಆತ್ಮನು ಮುಂದರಿಯುವುದಿಲ್ಲ. ಕುಂಠಿತವಾಗಿ ಹೋದ ಆತ್ಮಶಕ್ತಿಯನ್ನು ವಿಕಸನಗೊಳಿಸುವುದಕ್ಕಾಗಿ ಸಪ್ತಸೋಪಾನಗಳಲ್ಲಿ ಯೋಗಶೈವವೆಂಬ ಒಂದು ಸೋಪಾನವು ಶೈವದರ್ಶನದಲ್ಲಿ ಹೇಳಬೇಕಾಯಿತು. ಈ ಯೋಗಶೈವದಲ್ಲಿ ಶೌಚ, ಆಚಮನ, ಪ್ರಾಣಾಯಾಮ, ಈಶ್ವರಧ್ಯಾನಾದಿ ಸಕಲ ಬಾಹ್ಯಕರ್ಮಗಳೂ ಅಂತರ್ಭೂತಗಳಾಗಿವೆ. ಯಾವನು ಯೋಗಮಾರ್ಗದಲ್ಲಿ ಪ್ರವೇಶಿಸಿ ಅಭ್ಯಾಸಮಾಡುತ್ತ ಬರುವನೋ ಅವನ ಆತ್ಮವು ಕ್ರಮದಿಂದ ಪುಟಕ್ಕೆ ಹಾಕಿದ ಬಂಗಾರದಂತೆ ನಿರ್ಮಲವಾಗಿರುವುದು. ಅವಿದ್ಯೆಯೆಂಬ ಪಿಶಾಚಿಯು ಹೇಳ ಹೆಸರಿಲ್ಲದಂತಾಗುವನು. ಆಗ ತಾನಾಗಿಯೇ ಜ್ಞಾನವು ಉದಯಿಸುವುದರಿಂದ ಜ್ಞಾನಶೈವವನ್ನಿಸಿಸುವನು.

ಶ್ರೀಜ್ಞಾನಶೈವಮಖಗಸ್ಥಿತ ಏವ ಸಾಕ್ಷಾತ್ಸ್ವಾಚ್ಛೈವೇನ ಕವಿತಾನ್ಯಲಭಾಸ್ತ ದಮಾ। ತಾಕಾರಯೋಗಶಿವಜಂಗಮ ಪೂಜನಾದಿಕರ್ಮಾಣಿ ಕಸ್ಯ ನ ಭವೇಯುರಖಂಡಿತತ್ವಾತ್ ॥
ಶೈವಾತ್ರ ಭಾತಿ ತವಶೋ ನ ನಿಭಾತಿ ಜಂಘೋ ಸಾಕ್ಷಾತ್ಕ್ರಿಯಾತರಣ ಗರ್ಣಾ ಅಸಿ ತತ್ರ ಭಾಂತಿ। ಅಂತರ್ಬಹಿಶ್ಚಿತಯಾ ಸ್ವಯಮೇವ ಪೂರ್ಣಾತ್ಮಿಜ್ಞಾನಶೈವಮಿಥಾಟ್ ಬುಧಾ ಸಾರ್ವಭೌಮಃ ॥

ಯೋಗಶೈವಸೋಪಾನದಲ್ಲಿ ಕರ್ಮಗಳು ಪರಿಪಾಕವನ್ನು ಹೊಂದಿದಂತೆಲ್ಲ ಜ್ಞಾನೋದಯಕ್ಕವಕಾಶವಾಗುವದು. ಈ ಜ್ಞಾನವು ನಿಸ್ಪೃಹತವಾದ ಹಾಗೆಲ್ಲ ಮಣ್ಣಿನಿಂದುಂಟಾದ ಮಡಿಕೆಯು ವೃಣ್ಣಿಯವಾಗಿರುವಂತೆ ಪರಮಾತ್ಮನಿಂದುಂಟಾದ ಜಗತ್ತು ಪರಮಾತ್ಮಾಕಾರವಾಗಿಯೇ ತೋರುತ್ತದೆ ಬ್ರಹ್ಮಜ್ಞಾನಿಂತಲೂ ಬೇರೆಯಾದ ಚಂದ್ರನಾಗಲಿ, ಸೂರ್ಯನಿಗಾಗಲಿ, ನಕ್ಷತ್ರಗಳಾಗಲಿ, ವಿಕ್ಷುಗಳಾಗಲಿ, ಬೆಟ್ಟಗಳಾಗಲಿ, ಮಿಂಚುಗಳಾಗಲಿ, ಗಾಳಿಯಾಗಲಿ, ಮೇಘಗಳಾಗಲಿ, ಒಂದುತೋರುವುದಿಲ್ಲ. ಎಲ್ಲದರಲ್ಲಿಯೂ ಅಖಂಡಬ್ರಹ್ಮಾಕಾರವೇ ತೋರುತ್ತ ಬಾಹ್ಯಕರ್ಮಕಲಾಪಗಳಲ್ಲಿ ಸಂಕೋಚಬುದ್ಧಿಯುತ್ಪನ್ನವಾಗುವದು.

ವೃಷ್ಟಿಂ ಶ್ರುತಾ ಜಸ್ರಸ್ಪೃಂ ಚ ಇಷ್ಟಾಪ್ತಾಸ್ವಾದಿತಂ ಕೃತಂ।
ಸರ್ವಂ ಶಿವಾತ್ಮಕಂ ಧ್ಯಾಯೇತ್ ಜ್ಞಾನಶೈವಸ್ಯ ಲಿಚ್ಯತೆ ॥

ನೋಡುವುದು, ಕೇಳುವುದು, ಮುಟ್ಟುವದು, ಆಘ್ರಾಣಿಸುವದು, ಆಸ್ವಾದಿಸುವುದು ಎಲ್ಲ ಶಿವಾತ್ಮಕವೇ ಎಂದು ಧ್ಯಾನಿಸುತ್ತಿರುವವನೇ ಜ್ಞಾನಶೈವನೆಂದು ಪಾರಮೇಶ್ವರಾಗಮವು ಸ್ಪಷ್ಟಪಡಿಸಿರುತ್ತದೆ.

ಯೋಗಜ್ಞಾನವೃತೇಯೇ ಭಕ್ತ್ಯಾ ಯೋತೀತಸ್ಸರ್ವನಿಸ್ಪೃಹಃ।
ಶಿವೋಹಂಭಾವನಾದೀಕ್ಷೋ ವೀರಶೈವ ಉದಾಹೃತಃ ॥

ಇಂಥ ಯೋಗಜ್ಞಾನಗಳೆರಡನ್ನೂ ಭಕ್ತ್ಯುದ್ರೇಕದಿಂದ ಅತಿಕ್ರಮಿಸಿ ಎಲ್ಲದರಲ್ಲಿಯೂ ನಿಸ್ಪೃಹತೆಯಿಂದ ಧಾರಾವಾಹಿಯಾದ ಶಿವೋಹಂಭಾವನೆಯುಳ್ಳ ಧೀರನೇ ವೀರಶೈವನೆನಿಸುವನು. ಯೋಗಪ್ರಧಾನನಾದ ಶಿವೋಪಾಸಕನು ಯೋಗಶೈವನೆಂತಲೂ ಜ್ಞಾನಪ್ರಧಾನನಾದ ಶಿವೋಪಾಸಕನು ಜ್ಞಾನಶೈವನೆಂತಲೂ ಯೋಗಜ್ಞಾನೋಭಯಪ್ರಧಾನನಾದ ಶಿವೋಪಾಸಕನು ವೀರಶೈವನೆಂತಲೂ ಹೇಳಿಸಿಕೊಳ್ಳಲ್ಪಡುತ್ತಾನೆ. ಸಾಮಾನ್ಯವಾಗಿ ಲಿಂಗಧಾರಿಗಳು ಶೈವಮತೀಯರಾಗಿದ್ದರೂ ಉತ್ಕೃಷ್ಟವಾದ ಶಿವೋಪಾಸನೆಯಂ ಪೂಡುವವರಲ್ಲಿಯೂ ಇಂದ್ರಿಯ ಜಯಹೇತುವಾದ ಯೋಗವನ್ನು ಮಾಡುವುವರಲ್ಲಿಯೂ ಶಾಂತಿಹೇತುವಾದ ಜ್ಞಾನವನ್ನಾರ್ಜಿಸುವುವರಲ್ಲಿಯೂ ಬಲ್ಲಿದರಾಗಬೇಕಾಗಿರುವುದರಿಂದ ವೀರ ಎಂಬ ವಿಶೇಷಣವನ್ನು ಶೈವಪದವಲ್ಲಿ ನಿಯೋಜಿಸಬೇಕಾಯಿತು. ಇನರಿಗೆ ಮುಖ್ಯೋಪಾಸ್ಯನಾದ ಶಿವನು ಕೇವಲ ಯೋಗ (ಕರ್ಮ) ದಿಂದ ಪ್ರತ್ಯಕ್ಷನಾಗುವುದಿಲ್ಲ. ಕೇವಲ ಜ್ಞಾನದಿಂದಲೂ ಪ್ರತ್ಯಕ್ಷನಾಗುವುದಿಲ್ಲ. ಇವೆರಡೂ ಏಕಕಾಲದಲ್ಲಿ ಸಮ್ಮಿಳಿತವಾದರೆ ಪ್ರತ್ಯಕ್ಷನಾಗುವನು. ಲೋಕದಲ್ಲಿ ಇಂದ್ರಿಯಗಳನ್ನು ಯೋಗಬಲದಿಂದ ಜಯಿಸುವವರುಂಟು. ಇವರೆಲ್ಲರೂ ಜ್ಞಾನಿಗಳೆಂದು ಹೇಳಲಿಕ್ಕಾಗುವುದಿಲ್ಲ. ಜ್ಞಾನಿಗಳಾಗಿರುವುದುಂಟು. ಇನರೂ ಇಂದ್ರಿಯ ಜಯವನ್ನು ಸಡೆಯದೆ ಹೋದರೆ ಇವರ ಜ್ಞಾನವು ಫಲಕಾರಿಯಾಗುವುದಿಲ್ಲವು. ಆದುದರಿಂದ ಮೊದಲು ಯಮನಿಯಮಾದ್ಯಷ್ಟಾಂಗಯೋಗಗಳನ್ನು ಅನುಷ್ಠಿಸಿ ಸಕಲೇಂದ್ರಿಯಗಳನ್ನು ಸ್ವಸ್ವವಿಷಯಗಳಿಂದ ಹಿಂದಿರುಗಿಸಿ ಪರಮಾತ್ಮನನ್ನು ನೆನಿಸುವಂತೆ ಮಾಡಿಕೊಂಡು ಪರಮಾತ್ಮನ ಸ್ವರೂಪಜ್ಞಾನವನ್ನು ಪಡೆದರೆ ಆಗ್ಗೆಗೆ ಯೋಗಜ್ಞಾನ ಇವೆರಡರ ಸಮಸಮುಚ್ಚಯದಿಂದ ವೀರಶೈವನೆಂಬ ನಾಮವು ಅನ್ವರ್ಥಕವಾಗುತ್ತದೆ. ಯೋಗಸಿದ್ಧಿಯೂ ಜ್ಞಾನಸಿದ್ಧಿಯೂ ಇಲ್ಲದೆ ವೀರಶೈವತ್ವವು ಸಿದ್ಧಿಸುವುದಿಲ್ಲ. ಜ್ಞಾನಪೂರ್ವಕವಾಗಿ ಇಂದ್ರಿಯಜಯವೇ ವೀರಶೈವಮತದ ಸಾಧನವಾಗಿದೆ. ಇಂದ್ರಿಯದಜಯದ ಮೂಲಕ ಜ್ಞಾನಸಿದ್ಧಿಯನ್ನು ಪಡೆದು ಪರಮಾತ್ಮನ ಬಳಿಗೆ ಹೊರಟಿರುವ ಜೀವಾತ್ಮನೆಂಬ ಪಕ್ಷಿಗೆ ಯೋಗಜ್ಞಾನಗಳು ಎರಡು ರೆಕ್ಕೆಗಳಂತೆ ದೇಹಪಾತದವರೆಗೂ ಒಕ್ಕಪಕ್ಕಗಳಲ್ಲಿ ಇವ್ವಕೊಂಡು ನಿರ್ವಿಘ್ನವಾಗಿ ಪರಮಾತ್ಮಸ್ಥಾನವನ್ನು ಹೊಂದಿಸುವವು. ಆದುದರಿಂದ ಯೋಗಜ್ಞಾನಗಳೆರಡೂ ಯಾವ ಶೈವನಲ್ಲಿ ಅನವರತ ನರ್ತಿಸುವುವೋ ಅವನೇ ವೀರಶೈವನೆಂದು ಹೇಳಿಸಿಕೊಳ್ಳುವನು.

ವೇ|| ಶಿರೋಳ ಪಂಚಾಕ್ಷರಶಾಸ್ತ್ರಿಗಳು ಶಿವಾಧೀನರಾದರು.

ಧಾರವಾಡ ಡಿ|| ಶಿರೋಳ ಹಿರೇಮಠದ ವೇ|| ಪಂಚಾಕ್ಷರಶಾಸ್ತ್ರಿಗಳು ಇನೇತಿಂಗಳು 11ನೆಯ ತಾ|| ದಿವಸ ವಿಷಮಶೀತಜ್ವರದಿಂದ ತಮ್ಮ ಗ್ರಾಮದಲ್ಲಿ ಶಿವಾಧೀನರಾದರೆಂಬ ವಿಷಯವನ್ನು ಬರೆಯಲು ಅತ್ಯಂತ ವಿಷಾದವೆನಿಸುತ್ತದೆ. ಇವರು ಸುಪ್ರಸಿದ್ಧವಾದ ಗುರುಮನೆತನದಲ್ಲಿ ಜನ್ಮವೆತ್ತಿ ಸದಾ ಶಿಷ್ಯೋದ್ಧಾರಕಾರ್ಯದಲ್ಲಿ ನಿರತರಾಗಿದ್ದರು. ಇವರಿಗೆ ಶಿಷ್ಯಸಂಪ್ರದಾಯವು ವಿಶೇಷವಾಗಿತ್ತು. ಇವರು ಅತ್ಯುತ್ತಮಲೇಖಕರಾಗಿದ್ದರು. ಪಂಚಾಚಾರ್ಯಪ್ರಭಾ ಪತ್ರಿಕೆಯು ಪ್ರಾರಂಭವಾದಂದಿನಿಂದ ಇವರು ಈ ಪತ್ರಿಕೆಯಲ್ಲಿ ಮಹತ್ವದ ಲೇಖನಗಳನ್ನು ಪ್ರಕಟಿಸುತ್ತಿದ್ದರು. ಇವರ ಲೇಖನಗಳು "ದೈವಜ್ಞವಿನೋದ" ಎಂಬ ಹೆಸರಿನಿಂದ ಪ್ರಕಟವಾಗುತ್ತಿದ್ದವು. ಇವರ ಲೇಖನಗಳು ಗುರುಭಕ್ತರನ್ನು ಸಂತೋಷಸಾಗರದಲ್ಲಿ ಲೋಲಾಡಿಸುತ್ತಿದ್ದವು. ಇವರು ಉತ್ತಮ ಲೇಖಕರಾಗಿದ್ದಂತೆ ಅತ್ಯುತ್ತಮ ಭಾಷಣಕಾರರೂ ಆಗಿದ್ದರು. ಈ ವಿಧವಾದ ಲೇಖನ ಮತ್ತು ಭಾಷಣಶೈಲಿಯು ಇವರಿಗೆ ಅಕಸ್ಮಾತ್ ಪ್ರಾಪ್ತವಾಯಿತು. ಇದು ಪಂಚಾಚಾರ್ಯರ ಕೃಪೆಯೆಂದೇ ಹೇಳಬೇಕಾಗಿದೆ. ಇವರು ಶ್ರೀ ಜಗದ್ಗಾಚಾರ್ಯರ ವಿಷಯದಲ್ಲಿಯೂ ಗುರುವರ್ಗದ ವಿಷಯದಲ್ಲಿಯೂ ಸದಾ ಶರೀರವನ್ನು ಸವಿಸುತ್ತಿದ್ದರು. ಅವಸಾನಸಮಯದಲ್ಲಿ "ಶ್ರೀ ಜಗದ್ಗುರುಪಂಚಾಚಾರ್ಯಮಹಾರಾಜಕಿ ಜೈ" ಎಂದು ಜಯಘೋಷನವನ್ನು ಮಾಡಿ ಪ್ರಾಣವನ್ನು ನೀಗಿದರು. ಇಂತಹ ಗುರುಭಕ್ತಿಧುರೀಣರು ಈ ಪ್ರಪಂಚದಲ್ಲಿ ದೊರೆಯುವುದೇ ದುರ್ಲಭವೆಂದು ಬರೆದರೆ ಅತಿಶಯೋಕ್ತಿಯೆನಿಸದು. ಇವರಲ್ಲಿ ಸನಾತನ ವೈದಿಕ ಧರ್ಮಾಭಿಮಾನವು ತುಂಬಿ ತುಳುಕುತ್ತಿತ್ತು. ಇವರ ವಿಯೋಗದಿಂದ ಗುರುವರ್ಗಕ್ಕೆ ಒಂದು ದೊಡ್ಡ ಕೊರತೆಯೆಂದೇ ಹೇಳಬೇಕಾಗಿದೆ. ಇವರಿಗೆ ಅವಸಾನಕಾಲದಲ್ಲಿ 34 ವರ್ಷಗಳಾಗಿದ್ದವು. ಇಂತಹ ಚಿಕ್ಕ ವಯಸ್ಸಿನಲ್ಲಿಯೇ ಇಹಲೋಕವನ್ನು ಬಿಟ್ಟು ತೆರಳಿದುದು ಸಮಾಜದ ದುರ್ದೈವವೆಂದು ಹೇಳಬೇಕಾಗಿದೆ. ಶ್ರೀ ಜಗದ್ಗುರು ಪಂಚಾಚಾರ್ಯರು ಈ ವೀರ ಗುರುವಂತೀಯರ ಆತ್ಮಕ್ಕೆ ಶಾಂತಿಯನ್ನಿತ್ತು, ಅನುಗ್ರಹಿಸಲೆಂದು ಆ ಪೂಜ್ಯವಾವರನ್ನು ವ್ಯಾರ್ಥಿಸುತ್ತೇವೆ.

ಬೆಂಗಳೂರು ದಂಡಿಸ ವಜಾರ.

ಬ್ರಿಟಿಷ್ ಪ್ರಜಾಪ್ರತಿನಿಧಿಸಭೆಯಲ್ಲಿ ಬೆಂಗಳೂರು ದಂಡನ್ನು ವೈಸೂರು ಸಂಸ್ಥಾನಕ್ಕೆ ಬಿಟ್ಟು ಕೊಡುವ ವಿಷಯವಾಗಿ ಒಬ್ಬ ಸದಸ್ಯರೊಬ್ಬರು ಕೇಳಿದ ಪ್ರಶ್ನೆಗೆ ಸರ್ಕಾರದ ಪ್ರತಿನಿಧಿಗಳು ಸರ್ಕಾರದವರು ರಿಸಿಡೆಂಟರ ಸಲಹೆಗಳನ್ನು ನೀತೀಕ್ಷಿಸಿಕೊಂಡಿರುತ್ತಾರೆಂದೂ ಈ ಸಲಹೆಗಳನ್ನು ಪರಿತೀಲಿಸುವ ಸಮಯದಲ್ಲಿ ದಂಡಿನ ಪ್ರಜೆಗಳ ಅಭಿಪ್ರಾಯವನ್ನೆನೆಂಬುದನ್ನು ಸಹ ಪರಿತೀಲಿಸಲಾಗುತ್ತದೆಂದೂ ಉತ್ತರ ಕೊಟ್ಟರು.

ವರ್ತಮಾನಸಂಗ್ರಹ.

ಇಂಗ್ಲೆಂಡ್ ಇಟಲಿ ಸಖ್ಯ

ಬ್ರಿಟಿಷ್ ಮಹಾಪ್ರಧಾನರಾದ ನವಿಲೆಡೆಂಬರ್ಲೇನರೂ ಮತ್ತು ಹಾಲಿಫಾಕ್ಸರೂ ಜನವರಿ ತಿಂಗಳನಲ್ಲಿ ರೋಂ ನಗರಕ್ಕೆ ಹೋಗಿ, ಮಸ್ಸೋಲಿನಿಯವರನ್ನು ಭೇಟಿಮಾಡುವ ಸಂಭವವಿದೆಯೆಂದು ತಿಳಿಯುತ್ತದೆ.

ರಾಜಕೋಟೆಯಲ್ಲಿ ರೈತರಿಗೆ ಕಂದಾಯದ ರಿಯಾಯಿತಿ

ರಾಜಕೋಟೆಯ ರೈತರು ಕೊಡುತ್ತಿರುವ ಕಂದಾಯದಲ್ಲಿ ಶೇಕಡ 15ರಷ್ಟು ಕಂದಾಯವನ್ನು ಕಡಿಮೆಮಾಡಲಾಗಿದೆಯೆಂದು ರಾಜಕೋಟೆಯ ರಾಜರು ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ.

ಕೊಲ್ಲಾಪುರ ಸ್ಟೇಟ್ ಕಾಂಗ್ರೆಸ್

ಕೊಲ್ಲಾಪುರದಲ್ಲಿ ಸ್ಟೇಟ್ ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಲು 4 ಜನ ಸ್ವಯಂಸೇವಕರು ಕಳೆದ 14 ನೆಯ ತಾರೀಖಿನ ದಿವಸ ಸಾಂಗ್ಲಿಯಿಂದ ಕೊಲ್ಲಾಪುರಕ್ಕೆ ಪ್ರಯಾಣ ಮಾಡಿದರು. ಸತ್ಯಾಗ್ರಹ ನಡೆಯಿಸಕೂಡದೆಂದು ಕೊಲ್ಲಾಪುರದ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

150ನರುಷ ವಯಸ್ಸಿನ ವೃದ್ಧ!

ಮುಕ್ತಿ ಮಾರ್ಗವನ್ನು ಹುಡುಕಲು ಜಗತ್ಪ್ರಪಂಚವನ್ನು ತ್ಯಜಿಸಿದ ಈಜಿಪ್ತಿನ ರಾಜಮನೆತನಕ್ಕೆ ಸೇರಿದ 150ವರುಷ ವಯಸ್ಸಿನ ಸನ್ಯಾಸಿಯೊಬ್ಬನು ಹಿಮಾಚಲದ ಗುಪ್ತ ಪ್ರದೇಶವೊಂದರಲ್ಲಿ ವಾಸವಾಗಿದ್ದಾನೆ. ಈತನು ಕ್ರಿಶ್ಚಿಯ್ ಪಾದ್ರಿಯಂತೆ ಕೆಲಸಮಾಡುತ್ತಿದ್ದಾನೆಂದು ತಿಳಿದು ಬರುತ್ತದೆ.

ಏಳು ತಿಂಗಳಿಂದಲೂ ನಿದ್ರಿಸುತ್ತಿರುವ ಮಗು!

ಚಿಕಾಗೋದೇಶದಲ್ಲಿ ಒಂದು ಮಗುವು 7ತಿಂಗಳಿಂದ ಒಂದೇ ಸಮವಾಗಿ ನಿದ್ರೆಮಾಡುತ್ತಿದೆ. ಆದರ ವಯಸ್ಸು 4ವರ್ಷ. ಇದೇ ವಿಧವಾದ ನಿದ್ರಾರೋಗದಿಂದ ಈಚೆಗೆ ಗುಣಹೊಂದಿದ ಜೋಸೆಫ್ ಎಂಬ ಮೂರು ವರುಷದ ಬಾಲಕನು ತನ್ನ ರಕ್ತವನ್ನು ಆ ಮಗುವಿಗೆ ಕೊಟ್ಟರೆ ಅದು ಗುಣಹೊಂದಬಹುದೆಂದು ತಂದೆತಾಯಿಗಳ ಅನುಮತಿ ಬೇಡುತ್ತಿರುವನಂತೆ!

ಜರ್ಮನಿ-ಜೆಕೋಸ್ಲೋವೇಕಿಯಾ ಮಿತ್ರತ್ವ!

ಕಳೆದ 13 ನೆಯ ತಾರೀಖಿನ ದಿನ ನಡೆದ ಜೆಕೊಸ್ಲೋವೇಕಿಯ ದೇಶದ ಪಾರ್ಲಿಮೆಂಟ್ ಸಭೆಯ ಆರಂಭೋತ್ಸವವನ್ನು ನಡೆಸುತ್ತ ಮಹಾಪ್ರಧಾನ ಶ್ರೀ ಬೀರಾರವರು ಜರ್ಮನಿಯೊಡನೆ ಸ್ನೇಹಭಾವದಿಂದ ವರ್ತಿಸುವದಾಗಿಯೂ ಇತರ ದೇಶಗಳೊಡನೆ ಸ್ನೇಹ ಬಾಂಧವ್ಯವನ್ನು ಇಟ್ಟುಕೊಳ್ಳುವುದಾಗಿಯೂ ಹೇಳಿದರು.

ಯುದ್ಧಸಾನುಗ್ರಿಗಳಿಗೆ ಇಟಲಿಯ ವಿಶ್ವ!

ಇಟಲಿಯ ಮಂತ್ರಿಮಂಡಲವು ಮಸ್ಸೋಲಿನಿಯವರ ಅಧ್ಯಕ್ಷತೆಯಲ್ಲಿ ರೋಂನಗರದಲ್ಲಿ ಸಭೆಸೇರಿತ್ತು. 1939-40 ನೇ ವರ್ಷದ ಆಯವ್ಯಯಕ್ಕೆ ಒಪ್ಪಿಗೆ ಕೊಡಿಯಿತು. ಆ ವರ್ಷದಲ್ಲಿ ಶಸ್ತ್ರಸಂಗ್ರಹ ಕಾರ್ಯವನ್ನು ಬಲಪಡಿಸಲು 10,000 ಮಿಲಿಯ್ ನೂರ್ಕುಗಳನ್ನು ತೆಗೆದಿಡಲಾಗಿದೆಯೆಂದೂ, ಪ್ರಪಂಚದ ಈಗಿನ ಪರಿಸ್ಥಿತಿಯಲ್ಲಿ ಹೀಗೆ ಮಾಡುವದು ಆವಶ್ಯಕವೆಂದೂ ಒಂದು ಪ್ರಕಟನೆಯು ಹೊರಡಿಸಲ್ಪಟ್ಟಿದೆ

ಸ್ಪೇನಿನಲ್ಲಿ ಮರಣದಂಡನೆ ಮತ್ತು ಕಠಿನ ಶಿಕ್ಷೆ!

ಕ್ಯಾಟಲೋನಿಯ ಪ್ರಾಂತ್ಯದ ಸರ್ಕಾರದ ಸೈನ್ಯ ಮತ್ತು ರಾಜಕೀಯ ಕಾಖೆಗಳ ಮುಖ್ಯಮುಖ್ಯ ಸ್ಥಾನಗಳಲ್ಲಿ ಸೇರಿಕೊಂಡು ಗುಪ್ತವಾಗಿ ಸ್ಪೇ ದಂಗೆಯೋರರ ಕಡೆಗೆ ಏಕೂರಿ ನಡೆಸುತ್ತಿದ್ದರೆಂಬ ಅಪಾದನೆಯಮೇಲೆ ಸ್ಪೇ ಸರ್ಕಾರದವರು ಅನೇಕರನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸಿದರು. ಅವರಲ್ಲಿ ಅನೇಕರಿಗೆ ಮರಣದಂಡನೆಯನ್ನು ವಿಧಿಸಿದರು. ಸುಮಾರು 200 ಜನರಿಗೆ 20 ವರುಷಗಳ ಕಠಿನ ಶಿಕ್ಷೆಯು ವಿಧಿಸಲ್ಪಟ್ಟಿತು.

ಬಳ್ಳಾರಿ ಪೌರಸಭಾಧ್ಯಕ್ಷರ ಚುನಾವಣೆ.

ಮದರಾಸ್ ಅಸೆಂಬ್ಲಿಯ ಸದಸ್ಯರಾದ ಶ್ರೀ ಡಿ. ಅಬ್ದುಲ್‌ರಾವೂಫ್‌ರವರು ಬಳ್ಳಾರಿ ಪೌರಸಭಾಧ್ಯಕ್ಷರಾಗಿದ್ದರು. ಅವರ ಚುನಾವಣೆಯು ಕ್ರಮವಾಗಿಲ್ಲವೆಂದು ಕೋರ್ಟಿನವರು ತೀರ್ಮಾನಿಸಿದ್ದರಿಂದ ಪುನಃ ಚುನಾವಣೆಯು ನಡೆಯಬೇಕಾಯಿತು. ಕಳೆದ 14 ನೆಯ ತಾರೀಖಿನ ದಿವಸ ಈ ಚುನಾವಣೆಗಾಗಿ ವಿಶೇಷ ಸಭೆಯು ಸೇರಿತ್ತು. ಪುನಃ ಶ್ರೀ ಅಬ್ದುಲ್ ರಾವೂಫರವರೇ ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಚುನಾವಣೆಗೆ ಕತ್ತೆಯ ಹೆಸರು!

ಚುನಾವಣೆ ನಡೆಯುವ ಪ್ರಸಂಗದಲ್ಲಿ ಅವರವರ ಮಾತುಕೇಳಿಯೊಗಲಿ, ಮತಾಭಿಮಾನದಿಂದಾಗಲಿ, ಹಣದಾಸೆಯಿಂದಾಗಲಿ ಅಥವಾ ಯಾವುದೋ ಸ್ವಾರ್ಥಪರತೆಯಿಂದಾಗಲಿ ಉಮೇದುವಾರರ ಪರಿಚಯವಿಲ್ಲದಿದ್ದರೂ ಕಣ್ಣುಮುಚ್ಚಿಕೊಂಡು, ಓಟುದಾರರು ಓಟುಗಳನ್ನು ಕೊಡುವರೆಂಬ ವಿಷಯವನ್ನು ಅಮೇರಿಕದಲ್ಲಿ ಪ್ರತ್ಯಕ್ಷ ನಿದರ್ಶನದಿಂದ ತೋರಿಸಿದ್ದಾರೆ. ಅಮೇರಿಕದ ವಾಷಿಂಗ್ಟನ್ ನಗರದ ಚುನಾವಣೆಗೆ ಉಮೇದುವಾರರ ಸಟ್ಟಿಯಲ್ಲಿ ಒಂದು ಕತ್ತೆಯ ಹೆಸರನ್ನು ಸೇರಿಸಿದರು. ಎಲ್ಲರಂತೆ ಈ ಹೆಸರಿನ ವಿಷಯದಲ್ಲೂ ತಕ್ಕ ಪ್ರಚಾರಕಾರ್ಯವು ನಡೆಯಿತು. ಮೇಲೆ ಓಟನಿಂದ ಗದ್ದಲಭರಿತರು ಚುನಾಯಿತರಾದರು. ಅನಂತರ ಅವರ ಭಾವಚಿತ್ರವು ಪತ್ರಿಕೆಗಳಲ್ಲಿ ಪ್ರಕಟವಾಲು ಓಟುದಾರರೆಲ್ಲರೂ ಬೆವ್ವಾದರಂತೆ!

ಫ್ರಾನ್ಸಿನ ಆಡಳಿತಕ್ಕೆ ಸೇರಿರುವ ಯಾವ ಭಾಗವನ್ನೂ ಬಿಟ್ಟುಕೊಡುವುದಿಲ್ಲ

ಕಳೆದ 14ನೆಯ ತಾರೀಖಿನ ದಿವಸ ಪ್ಯಾರಿಸ್‌ನಗರದಲ್ಲಿ ಸೇರಿದ್ದ ವಿದೇಶಾಂಗ ವ್ಯವಹಾರ ಸಮಿತಿಯಲ್ಲಿ ವಿದೇಶಾಂಗ ಸಚಿವರಾದ ಶ್ರೀ ಜಾನೆಟ್‌ರವರು ಭಾಷಣಮಾಡುತ್ತಾ "ಟಲಿಯು ತನ್ನ ವಸಕ್ಕೆ ಬಿಟ್ಟುಕೊಡಬೇಕೆಂದು ಕೇಳುತ್ತಿರುವ (ಟ್ಯೂನಿಸ್) ಪ್ರದೇಶಗಳ ವಿಚಾರದಲ್ಲಿ "ಇಟಲಿಯ ಬೇಡಿಕೆಗಳೇನೆಂಬುದು ನಮಗೆ ತಿಳಿಯದು. ಇಟಲಿಯು ಯಾವ ಬೇಡಿಕೆಗಳನ್ನೂ ಫ್ರಾನ್ಸ್ ಸರಕಾರಕ್ಕೆ ಕಳಿಸಿಲ್ಲ ಒಂದು ವೇಳೆ ಪ್ರದೇಶಗಳನ್ನು ಬಿಟ್ಟುಕೊಡಬೇಕೆಂದು ಕೇಳಿದರೂ ಫ್ರಾನ್ಸ್ ಒಂದು ಅಂಗುಲ ಭೂಮಿಯನ್ನೂ ಬಿಟ್ಟುಕೊಡುವುದಿಲ್ಲ" ಎಂದು ಹೇಳಿದರು.

ತಿರುವಾಂಕೂರಿನಲ್ಲಿ 21 ಜನರಮೇಲೆ ರಾಜದ್ರೋಹದ ಆಪಾದನೆ!

ತಿರುವಾಂಕೂರು "ಸ್ಟೇಟ್ ಕಾಂಗ್ರೆಸ್" ಪರವಾಗಿ ಮಹಾರಾಜರಿಗೆ ಒಪ್ಪಿಸಲ್ಪಟ್ಟ ವಿಜ್ಞಾಪನಾ ಪತ್ರಕ್ಕೆ ಸಹಿ ಹಾಕಿರುವವರೆನೇಲೆ ಹೊರಿಸಲ್ಪಟ್ಟಿರುವ ರಾಜದ್ರೋಹದ ಆಪಾದನೆಯ ವಿಚಾರಣೆ ನಡೆಸಲು ವಿಶೇಷ ನ್ಯಾಯಾಧೀಶರೊಬ್ಬರನ್ನು ನೇಮಕಮಾಡಲಾಗುವುದೆಂದು ಅಲ್ಲಿಯ ಸರ್ಕಾರದವರು ಪ್ರಕಟಿಸಿದ್ದಾರೆ. ಈ ಹೊಸ ವ್ಯವಸ್ಥೆಯ ವಿಚಾರಣಾಧಿಕಾರವು ಪ್ರೇಷ್ಯ ನ್ಯಾಯಾಸ್ಥಾನಕ್ಕೆ ಒಪ್ಪಿಸಲ್ಪಟ್ಟು ಅವರ ತೀರ್ಪೇ ಕಟ್ಟಕಡೆಯದು. ಇದರ ಮೇಲೆ ಅಪೀಲಿಗಾಗಲಿ, ಪುನರ್ವಿಮರ್ಶೆಗಾಗಲಿ ಅವಕಾಶವಿಲ್ಲ. ಅವರು ವಿಧಿಸಬಹುದಾದ ಶಿಕ್ಷೆಯನ್ನು ರದ್ದುಗೋಳಿಸಲು ಅಥವಾ ಕಡಿಮೆಮಾಡಲು ಮಹಾರಾಜರಿಗಲ್ಲದೆ ಬೇರೆಯವರಿಗೆ ಅಧಿಕಾರವಿಲ್ಲ.

ವೈಪಾಯಗಾರರಿಗೆ ಜರ್ಮನ್ ವ್ಯವಹಾಯ ಮಂತ್ರಿಗಳ ಬುದ್ಧಿವಾದ

ಜರ್ಮನಿಯ ವ್ಯವಸಾಯದ ಇಲಾಖಾ ಮಂತ್ರಿಗಳು ಅಲ್ಲಿಯ ರೈತರ ವಾರ್ಷಿಕಸಭೆಯೊಂದರಲ್ಲಿ ಭಾಷಣ ಮಾಡಿದರು. ಅದರಲ್ಲಿ ಅವರು ಹೇಳಿದವಿಷಯವು ಮುಖ್ಯವಾಗಿದೆ. ವ್ಯವಸಾಯಗಾರರು ವ್ಯವಸಾಯ ವೃತ್ತಿಯನ್ನು ಬಿಟ್ಟು ಪಟ್ಟಣಗಳಲ್ಲಿ ವಾಸಮಾಡಲು ಹೋಗುತ್ತಿದ್ದಾರೆ. ಇದನ್ನು ತಪ್ಪಿಸಲು ಏನಾದರೂ ಉಪಾಯ ಮಾಡಬೇಕು. ಜರ್ಮನಿಯಲ್ಲಿ ಈಗ 1933ರಲ್ಲಿ ಇದ್ದ್ದದ ಕ್ಕಿಂತಲೂ 4ಲಕ್ಷ ರೈತರ ಸಂಖ್ಯೆಯು ಕಡಿಮೆಯಾಗಿದೆ. ಆದುದರಿಂದ ಹೆಣ್ಣು ಮಕ್ಕಳಿರಾ! ನಿಮ್ಮ ವಂಶಪಾರಂಪರ್ಯವಾಗಿ ಬಂದ ಬೇಸಾಯದ ಕಸುಬನ್ನು ಬಿಟ್ಟುಹೋಗಬೇಡಿರಿ. ರೈತವರ್ಗಕ್ಕೆ ಸೇರಿದ ಹೆಣ್ಣು ಮಕ್ಕಳು ಸುಖಾಪೇಕ್ಷೆಗಳಾಗಿ ಪಟ್ಟಣಗಳಿಗೆ ವಾಸಮಾಡಲು ಹೋದಲ್ಲಿ, ಸೈನಿಕರು ಸೈನ್ಯದ ಪ್ರಥಮ ಪಂಕ್ತಿಯಲ್ಲಿ ಹೋರಾಡಲು ಹೆದರಿ ಹಿಂದಕ್ಕೆ ಓಡಿದಂತಾಗುವುದೆಂದು ಹೇಳಿದರು. ಇದು ನಮ್ಮ ಈಗಿನ ಭಾರತಕ್ಕೂ ಅನ್ವಯಿಸುವ ಮಾತಾಗಿದೆ

150 ವಯಸ್ಸಿಗೆ ಮೇಲ್ಪಟ್ಟ ನಯಸ್ಸಿನವರು

ಈಚಿನ ಜನಗಣತಿಯಂತೆ ತುರ್ಕಿದೇಶದಲ್ಲಿ 150 ವಯಸ್ಸಿಗೆ ಮೇಲ್ಪಟ್ಟ ದೀರ್ಘಾಯುಗಳು 40 ಜನರಿರುನರು ಇನರುಗಳೆಲ್ಲರೂ, ಪೂರ್ವದೇಶದ ಪ್ರಾಂತ್ಯಗಳಲ್ಲೇ ವಾಸಿಸುತ್ತಿರುವರು ಇವರುಗಳ ಮುಖ್ಯಾಹಾರ ಹುಳಿ ಮಜ್ಜಿಗೆ ಅವರುಗಳಲ್ಲಿ ಅತಿವೃದ್ಧನಾದವನು ಕಾರ್ಪೋರಾಲ್ ಆಲಿ ಎಂಬಾತನು ಈತನು ಅಜರ್ ಎಂಬ ಊರಿನಲ್ಲಿರುವನು ಈತನೇ ಪ್ರಪಂಚದಲ್ಲೆಲ್ಲಾ ಅತಿವೃದ್ಧನೆಂದು ಯೋಚಿಸಲಾಗಿದೆ ಪರ್ಷಿಯ ಅತಿವೃದ್ಧಳು ಈ ಆಲಿಯ ಸಹೋದರಿ ಅವಳಿಗೆ 137 ವರ್ಷ ವಯಸ್ಸು. ಆಲಿಯು ಹೆಚ್ಚು ನೂತನನಾಡಲಾರನು. ಅತನ ಶ್ರವಣಶಕ್ತಿಯು ಕುಗ್ಗಿದರೂ ಆರೋಗ್ಯವು ಚೆನ್ನಾಗಿದೆ. ರಾತ್ರಿ ನಾಲ್ಕುಗಂಟೆಗಳಕಾಲ ಮಾತ್ರ ನಿದ್ರಿಸಿ ಉಳಿದ ಕಾಲವನ್ನು ಧೂಮಪಾನದಲ್ಲಿ ಕಳೆಯುವನು. ಈಚೆಗೆ ಅವನಿಗೆ ಹೊಸ ಹಲ್ಲುಗಳು ಹುಟ್ಟಿವೆಯಂತೆ! ತುರ್ಕಿದೇಶದಲ್ಲಿ, 6241 ಜನರಿಗು ನೂರುವಯಸ್ಸಿನವರಿರುವರು. ಅವರಲ್ಲಿ 3985 ಜನ ಸ್ತ್ರೀಯರು 1256 ಮಂದಿ ಪುರುಷರು.

ಪುರುಷರ ದ್ವೀಪ

ಸ್ಪೇನಿಗೆ ಸೇರಿದ ಮೌಂಟ್ ಎಥಾಸ್ ಎಂಬ ಒಂದು ದ್ವೀಪವಿದೆ. ಅಲ್ಲಿಯ ವೈಚಿತ್ರ್ಯವೆಂದರೆ, ಅಲ್ಲಿ ಪುರುಷನೆಲ್ಲದ ಒಂದು ಪ್ರಾಣಿಯೂ ಇಲ್ಲ. ಅಲ್ಲಿಯ ಸರ್ಕಾರವು ನಿರಾಂತಕವಾಗಿ ರಾಜ್ಯಭಾರ ಮಾಡುತ್ತಿರುವಷ್ಟುಕಾಲ ಬೇರೆ ಯಾವರಾಜ್ಯವೂ ಉಳಿದಿಲ್ಲ. ಅಲ್ಲಿಯ ಆಡಳಿತವು 10 ನೆಯ ಶತಮಾನದಲ್ಲಿ ಪ್ರಾರಂಭವಾಯಿತು. ಜನ ಸಂಖ್ಯೆ 7000 ಮಾತ್ರ. ಇವರಲ್ಲಿ 3000 ಜನರು ಸನ್ಯಾಸಿಗಳು ಉಳಿದ 4000 ಸನ್ಯಾಸಿಗಳಲ್ಲದವರು. ಅಂತೂ ಎಲ್ಲರೂ ಪುರುಷರೇ! ಆ ರಾಷ್ಟ್ರ ನಿರ್ಮಾಣಕಾಲವಲ್ಲಿ ಕಟ್ಟಲ್ಪಟ್ಟ ಗೃಹಗಳಲ್ಲೇ ಇನ್ನೂ ವಾಸಿಸುತ್ತಿದ್ದಾರೆ. ಆ ಕಾಲದ ಓಲೆಗರಿ ಪುಸ್ತಕಗಳೇ ಇನ್ನೂ ಉಪಯೋಗಿಸಲ್ಪಡುತ್ತಿವೆ. ಅದೇ 10 ನೇ ಶತಮಾನದ ಜೀವನವೂ ಉಡಿಗೆಯೂ ಇಂದಿಗೂ ಆಚರಣೆಯಲ್ಲಿರುವುದು ಆ ದ್ವೀಪಕ್ಕೆ ಕಾಲಿಟ್ಟ ಪ್ರಥಮ ಸ್ತ್ರೀ ಸೈಬೀರಿಯದ ರಾಣಿ 1345 ರಲ್ಲಿ ಅಲ್ಲಿಗೆ ಹೋಗಿದ್ದ ಎರಡನೆಯವಳು ರುಮೇನಿಯದ ರಾಣಿ ಎಲಿಜಬತ್ ಎಂಬಾಕೆ ಆಕೆ ಅಲ್ಲಿದ್ದುದು 15 ನಿಮಿಷ ಮಾತ್ರ. ಸ್ತ್ರೀಯರಾಗಲಿ ಪುಷ್ಟ ಮೃಗಗಳಾಗಲಿ ಅತಿಕ್ರಮಪ್ರವೇಶ ಮಾಡಿಯಾವೆಂದು ಗಡಿಪ್ರದೇಶಗಳಲ್ಲಿ ವಿಶೇಷ ಕಾವಲಿಡಲಾಗಿದೆ.

ಸ್ವೀಕಾರ.

ಸೊರಬ ತಾ॥ ಜಾಗಟೂರು ಗ್ರಾಮದ ಶ್ರೀಮತಿ ಲಿಂಗಮ್ಮಾಜಿಯವರು ಶಿವಾಧೀನರಾದ ಸಮಯದಲ್ಲಿ ಅವರ ಪುತ್ರರಾದ ಮು॥ ರಾ॥ ಕ.ಪಿ. ರುದ್ರರಾಜಗೌಡರು ಪ್ರಭಾವೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾರಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸುಂದರ ಮೈಸೂರಿನ ಪ್ರತಿಬಿಂಬ

ಬೃಂದಾವನದ ಸೊಬಗು

(ಮೈಸೂರು ಸರಕಾರದ ಪ್ರಕಟನ ಶಾಖೆಯಿಂದ)

———

ಮೈಸೂರು ಬೃಂದಾವನ!

ಪ್ರತಿಯೊಬ್ಬ ಪ್ರವಾಸಿಗೆ ಭಾರತದಲ್ಲಿ ತಾಜಮಹಲೆಂದರೆ ಎಷ್ಟು ಪರಿಚಯವಿದೆಯೋ ಮೈಸೂರು ಬೃಂದಾವನವೆಂದರೆ ಅಷ್ಟೇ ಪರಿಚಯವಿದೆ. ಹೊರಗಿನವರು ಆ ಬೃಂದಾವನದ ಸೊಬಗನ್ನು ವರ್ಣಿಸಲು ಸಾಹಿತ್ಯದ ಎಲ್ಲ ವರ್ಣನಪದಗಳನ್ನೂ ಉಪಯೋಗಿಸಿ ತಮ್ಮ ಆನಂದವನ್ನು ವ್ಯಕ್ತಪಡಿಸಿರುವರು. ಮೈಸೂರಿನವರಿಗೆ ಅದು ಒಂದು ಪುಣ್ಯಕ್ಷೇತ್ರವಾಗಿದೆ.

ಬೃಂದಾವನವು ಕಾವೇರಿಯ ಎಡದಂಡೆಯ ಜನ್ಮಸ್ಥಳ ಶ್ರೀ ವಸಿಷ್ಠಮಹರ್ಷಿಯ ಪ್ರತಿಮೆಯು ಅಲ್ಲಿದೆ. ವಿದ್ಯುದ್ದೀಪದಿಂದ ಅಲಂಕೃತವಾದ ಗಂಡಭೇರುಂಡವು ರಾಜಭಕ್ತಿಯುತರಾದ ಪ್ರಜೆಗಳೆಲ್ಲರನ್ನೂ ಚಕಿತರನ್ನಾಗಿ ಮಾಡುವುದು ಬೃಂದಾವನದ ಸೌಂದರ್ಯವು ಪ್ರತಿಯೊಬ್ಬ ಪ್ರವಾಸಿಯ ಮನಸ್ಸನ್ನೂ ಆಕರ್ಷಿಸಿ ಆನಂದ ಪಡಿಸುವುದು. ಆ ಪುಣ್ಯಕ್ಷೇತ್ರದ ಮಹಿಮೆಯು, ಮೈಸೂರಿನವರಿಗೆ ಮತ್ತಷ್ಟು ಹೆಮ್ಮೆಯನ್ನುಂಟುಮಾಡುವುದಾಗಿದೆ.

ಮೈಸೂರು ಬೃಂದಾವನವು ಸೌಂದರ್ಯಕ್ಷೇತ್ರವಾಗಿಯೂ ಮತ್ತು ಕಾಲಕಳೆಯುವ ಕ್ಷೇತ್ರವಾಗಿಯೂ ಪರಿಣಮಿಸಿದೆ. ಕಳೆದ ವರ್ಷ ೧,೪೨,೬೬೧ ಜನರು ನಡೆದುಕೊಂಡುಬಂದು ಬೃಂದಾವನದ ಸೊಬಗನ್ನು ನೋಡಿ ಆನಂದಪಟ್ಟರು. ಇದರ ಜತೆಗೆ ವಾಹನಗಳಲ್ಲಿ ೫೦,೦೦೦ ಕ್ಕೆ ಮೇಲೆ ಜನರು ಬಂದು ಬೃಂದಾವನದ ಸೌಂದರ್ಯವನ್ನು ನೋಡಿ ಸಂತೋಷಪಟ್ಟರು. ಕೃಷ್ಣರಾಜಸಾಗರದ ಕಟ್ಟೆಯಲ್ಲಿ ೧೬,೩೧೪ ರೂ. ಗಳು ವಸೂಲಾದವು.

ಬೃಂದಾವನದ ಸೊಬಗು

ಕಳೆದವರ್ಷ ಬೃಂದಾವನದ ತೋಟವನ್ನು ಮತ್ತೆ ಅಭಿವೃದ್ಧಿ ಪಡಿಸಲಾಯಿತು. ಮತ್ತು ಆ ಕ್ಷೇತ್ರವೆಲ್ಲ ಬಹು ಆಕರ್ಷಣೀಯವಾಗಿರುವಂತೆ ಮಾಡಲಾಯಿತು "ಪೈ ಪ್ರೆಷರ್ ಫೌಂಟೇ" ೧೫೦ ಅಡಿ ಎತ್ತರಕ್ಕೆ ನೀರನ್ನು ಎರಚುವುದು. ಆ ಫೌಂಟೆನ್ನಿಗೆ ಫ್ಲಡ್‌ಲೈಟುಗಳನ್ನು ಹಾಕಲಾಯಿತು. ರಾತ್ರಿಯ ಕಾಲದಲ್ಲಿ ಈರೀತಿಯಾಗಿ ದೀಪ ಹಚ್ಚುವುದರಿಂದ ಬೃಂದಾವನದ ಸೊಬಗನ್ನು ಮತ್ತಷ್ಟು ಹೆಚ್ಚಿಸಿದಂತಾಗಿದೆ. ಒಂದೇ ವಿಧವಾದ ಎತ್ತರದಲ್ಲಿರಬೇಕೆಂಬ ಉದ್ದೇಶದಿಂದ ದಕ್ಷಿಣ ಪಡದಲ್ಲಿರುವ ಎರಡನೆಯ 'ಟೆರೇಸಿನ' ನ ಫೌಂಟೆಗಳನ್ನು ಪಂಪಿಂಗ್ ಸೆಟ್ಟುಗಳ ಮೂಲಕ ಎತ್ತರಿಸಲಾಯಿತು. ಕಟ್ಟೆಯ ಹಿಂದೆ ಕಟ್ಟಲಾಗಿರುವ ಹೊಸದಾದ ಹೊಳದಲ್ಲಿ ದೋಣಿಯ ವಿಹಾರವನ್ನು ಮಾಡಲಾಯಿತು. ಈ ದೋಣಿಯು ಅನೇಕ ಪ್ರೇಕ್ಷಕರನ್ನು ಆಕರ್ಷಿಸಿತು. ಒಂದು ದಡದಿಂದ ಮತ್ತೊಂದು ದಡಕ್ಕೆ ಹೋಗಲು ಪ್ರತಿಯೊಬ್ಬರಿಗೂ ೬ ಕಾಸು ಶುಲ್ಕವು ವಿಧಿಸಲಾಯಿತು. ದೋಣಿಯ ಓಡಾಟದ ಕಾರ್ಯಕ್ರಮವನ್ನು ಏಪ್ರಿಲ್ ತಿಂಗಳಿನಲ್ಲಿ ಕೈಗೊಂಡರೂ ಕೇವಲ ೩ ತಿಂಗಳ ಒಳಗಾಗಿ ೧೧೮೮ ರೂ—ಗಳ ಆದಾಯ ಬಂದಿರುವುದೇ ಅದರ ಆಕರ್ಷಣ ಶಕ್ತಿಯನ್ನು ವ್ಯಕ್ತಪಡಿಸುವುದು. ಅಂದರೆ ಹೊಳದ ದೋಣಿಯ ಓಡಾಟದ ಆನಂದವನ್ನು ಸುಮಾರು ೪೦೦೦ ಜನರು ಅನುಭವಿಸಿದಂತಾಯಿತು!

ನಿವಾಸಕ್ಷೇತ್ರನಿರ್ಮಾಣ

ಪ್ರೇಕ್ಷಕರ ಅನುಕೂಲಕ್ಕಾಗಿ ಕೃಷ್ಣರಾಜಸಾಗರದಲ್ಲಿ ಒಂದು ನಿವಾಸಕ್ಷೇತ್ರವನ್ನು ಏರ್ಪಡಿಸುವ ಕಾರ್ಯಕ್ರಮವು ನಡೆಯುತ್ತಿದೆ ಭವನವು ಪೂರ್ಣವಾದ ಅನಂತರ ಸಾರ್ವಜನಿಕವಾಗಿ ತಕ್ಕ ಸೌಕರ್ಯಗಳನ್ನು ಕಲ್ಪಿಸಿ ಕೊಡಲಾಗುವುದು. ಬೃಂದಾವನಕ್ಕೆ ಬರುವ ಪ್ರೇಕ್ಷಕರ ಸಂಖ್ಯೆಯು ಬಹು ಅಧಿಕವಾಗುತ್ತಿರುವುದರಿಂದ ಜನರ ಸೌಕರ್ಯಕ್ಕಾಗಿ ಆತ್ಯಾಧುನಿಕ ರೀತಿಯಲ್ಲಿ ಫಲಹಾರಮಂದಿರವನ್ನು ೬೫೧೦೦ ರೂಗಳ ವೆಚ್ಚದಲ್ಲಿ ಕೃಷ್ಣರಾಜ ಸಾಗರದಲ್ಲಿ ಕಟ್ಟಬೇಕೆಂದು ತೀರ್ಮಾನಿಸಲಾಗಿದೆ. ಈ ಹೊಸಭವನದಲ್ಲಿ ೧೧ 'ಸೂಟ್' ಕೊಠಡಿಗಳು ಇರುವುವು. ಅವುಗಳಿಗೆ ಅತ್ಯಾಧುನಿಕ ಆರೋಗ್ಯರೀತಿಯ ಸಾಮಗ್ರಿ ಸೌಕರ್ಯಗಳನ್ನು ಒದಗಿಸಲಾಗುವುದು. ಆ ಭವನವು ಬೃಂದಾವನ ತೋಟದ ಉತ್ತಮ ಸ್ಥಾನದಲ್ಲಿರುವುದು.

ಇರ್ವಿನ್ ನಾಲೆಯ ಉಪಯೋಗ

ಆದರೆ ಬೃಂದಾವನವು ಆಶ್ಚರ್ಯಪ್ರದವಾದ ಸೌಂದರ್ಯದ ನೆಲವೀಡಾಗಿದ್ದು ಜನರಿಗೆ ಅಮಿತಾನಂದವನ್ನುಂಟುಮಾಡುವ ಕ್ಷೇತ್ರವಾಗಿದ್ದರೂ ಜನರಿಗೆ ಬೇರೆ ವಿಧದಲ್ಲಿ ಉಂಟಾಗುತ್ತಿರುವ ಸುಖ ಸಂತೋಷಗಳನ್ನು ಗಮನಿಸಿದರೆ ಇದು ಕೇವಲ ಛಾಯೆಮಾತ್ರವೆನಿಸುವುದು. ಈ ಅಪ್ರತಿಲೋಕದಿಂದ ಮುಂದುವರಿಯುವ ಇರ್ವಿನ್ ನಾಲೆಯು ಮೈಸೂರು ವ್ಯವಸಾಯಗಾರರಿಗೆ ಕಾಯಕಲ್ಪವಾಗಿದೆ ಆ ನಾಲೆಯು ೨೯ ಮೈಲಿಗಳ ದೂರ ಹರಿಯುವುದು ಆ ನಾಲೆಯಿಂದ ಮೂರು ಕಾಪೆಗಳು ಹೊರಡುವುವು. ಅವು ಒಟ್ಟು ೬೫ ಮೈಲಿಗಳದೂರ ಪ್ರವಹಿಸುವುವು. ಅವುಗಳಿಂದ ಸಣ್ಣಪುಟ್ಟ ೧೫೫ ನಾಲೆಗಳು ಕವಲೊಡೆದು ೩೫೩ ಮೈಲಿಗಳ ದೂರ ಹೋಗಿ ವ್ಯವಸಾಯಕ್ಕೆ ಅನುಕೂಲಮಾಡಿಕೊಟ್ಟಿವೆ ವಿಶ್ವದ ಅತ್ಯುತ್ತಮ ನೀರಾವರಿ ಕೆಲಸಕಾರ್ಯಗಳಲ್ಲಿ ಈ ವ್ಯವಸ್ಥೆಯು ಒಂದು ಉಚ್ಚಸ್ಥಾನವನ್ನು ಗಳಿಸಿದೆ. ೩೦-೬-೧೯೩೮ ನೇ ಅಂತ್ಯದವರೆಗೆ ಇರ್ವಿನ್ ನಾಲೆಯಿಂದ ೫೬,೫೧೮ ಎಕರೆ ಜಮೀನುಗಳಿಗೆ ನೀರು ಸರಬರಾಯಾಗಿದೆ. ಇದರಲ್ಲಿ ಸರಕಾರದ ೬,೮೭೦ ಎಕರೆ ಬಂಜರು ಜಮೀನು ಸಹ ಸೇರಿದೆ ೩೦-೬-೩೮ ರಲ್ಲಿ ೪೮,೦೫೫ ಎಕರೆಗಳ ಜಮೀನು ವ್ಯವಸಾಯವಾಯಿತು ಕಳೆದ ವರ್ಷ ೪೬, ೯೦೯ ಎಕರೆಗಳ ವ್ಯವಸಾಯವಾಯಿತು. ಈ ಒಂದು ಪ್ರತ್ಯೇಕ ವ್ಯವಸ್ಥೆಗಾಗಿ ಸರಕಾರದವರು ೩೦-೬-೩೮ ರವರೆಗೆ ೧,೬೮,೦೦,೦೦೦ ರೂ ಗಳನ್ನು ವೆಚ್ಚ ಮಾಡಿರುವರು. ಇರ್ವಿನ್ ನಾಲೆಯ ಸಹಾಯದಿಂದ ಅನೇಕ ಎಕರೆಗಳ ಬಂಜರು ಜಮೀನುಗಳನ್ನು ಉತ್ತಮವಾದ ಕ್ಷೇತ್ರವನ್ನಾಗಿ ಮಾರ್ಪಡಿಸಿ ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಅನುಕೂಲವಾಯಿತು. ಇರ್ವಿನ್ ನಾಲೆಯಿಂದ ಸಂಸ್ಥಾನಕ್ಕೆ ಅನೇಕ ರೀತಿಯಿಂದ ಸಹಾಯವಾಗಿದೆ. ಸಂಸ್ಥಾನದ ಸಂಪದ ಭಿವೃದ್ಧಿ, ಕ್ಷಾಮ ಮತ್ತು ಅದರಿಂದುಂಟಾಗುವ ದುಷ್ಪರಿಣಾಮಗಳ ರಕ್ಷಣೆ, ರೈತರ ಆರ್ಥಿಕ ಸ್ಥಿತಿಯ ಅಭಿವೃದ್ಧಿ, ಸಕ್ಕರೆ, ಸೋಪು, ಸಿಮೆಂಟು, ಸ್ಪಾಂಪು, ಆದಾಯತೆರಿಗೆ ಇತ್ಯಾದಿಗಳಿಂದ ಹೆಚ್ಚುತ್ತಿರುವ ಆದಾಯ, ರೈಲ್ವೆ ಆದಾಯ ಇವುಗಳೇ ಸಂಸ್ಥಾನದ ಅಭಿವೃದ್ಧಿಗೆ ಹಲವು ಕಾರಣಗಳು. ವ್ಯವಸಾಯಕ್ಕೊಳಪಟ್ಟ ೪೮,೦೫೫ ಎಕರೆಗಳಿಗೆ ಎಕರೆಯೊಂದಕ್ಕೆ ೧೧ ರೂ ನಂತೆ ನೀರಿನ ತೆರಿಗೆ ಹಾಕಿದ ಪರಿಣಾಮವಾಗಿ ವರ್ಷವೊಂದಕ್ಕೆ ೪,೮೦,೩೫೧ ರೂ. ಗಳಾದವು. ಈ ಪ್ರಯತ್ನಕ್ಕೆ ಕೈಹಾಕಿ ಕೇವಲ ೬ ವರ್ಷಗಳ ಕಾಲ ಮಾತ್ರವಾಯಿತು.

ಆರೋಗ್ಯ ವಿಚಾರಕ್ಕೆ ಗಮನ

ಇರ್ವಿನ್‌ನಾಲೆಯ ಕ್ಷೇತ್ರದಲ್ಲಿ ನೀರು ನಿಂತು ಜೌಗಾಗದಂತೆ ಮಾಡಲು, ಮಲೇರಿಯಾ ಹರಡದಂತೆ ಮಾಡಲು ಆರೋಗ್ಯ ಕೆಡದಂತೆ ಇತರ ಕಾರ್ಯಕ್ರಮ ಕೈಗೊಳ್ಳಲು ತಕ್ಕ ಪರೀಕ್ಷಣೆಗಳಾಗುತ್ತಿವೆ. ಕೆಲವು ಕಡೆ ಅನಾರೋಗ್ಯವಿರುವುದರಿಂದ ಇರ್ವಿನ್ ನಾಲೆಯ ಒಂದನೆ ಶಾಲೆಯ ಗ್ರಾಮಗಳನ್ನು ಬೇರೊಂದು ಎತ್ತರವಾದ ಕಡೆಗೆ ವರ್ಗಾಯಿಸಬೇಕೆಂದು ನಿರ್ಧರಿಸಲಾಗಿದೆ. ಹಲವು ಕಡೆಗೆ ನೀರು ನಿಂತ ಪರಿಣಾಮವಾಗಿ ಅವುಗಳು ಹೊರಗೆ ಹೋಗುವಂತೆ ಮಾಡಿ ಆ ಹಳ್ಳಿಗಳನ್ನು ಮುಚ್ಚಲಾಯಿತು. ಇರ್ವಿನ್ ನಾಲೆಯ ಎರಡು ದಡಗಳಲ್ಲಿಯೂ ನೀರಿನ ಜೌಗು ಹರಡದಂತೆ ಮಾಡಲು ಹಲವು ಕಡೆಗಳಲ್ಲಿ ಹೊಸಪ್ರಯೋಗ ನಡೆಸಲಾಯಿತು. ಅದರಿಂದ ಪ್ರಯೋಜನವು ಕಂಡುಬಂದಿತು. ಮತ್ತು ಅದು ಯಶಸ್ವಿಯಾಗಿಯೂ ಆಯಿತು. ಸೊಳ್ಳೆಗಳನ್ನು ಪೂರ್ಣವಾಗಿ ನಾಶಪಡಿಸದಿದ್ದರೂ ಅನೋಫಿರ್ಲಿ ಸೊಳ್ಳೆಗಳ ಸಂಖ್ಯೆಯನ್ನು ಬಹುಮಟ್ಟಿಗೆ ಕಡಿಮೆಮಾಡಲಾಯಿತು.

ಸರಕಾರದ ಸಹಾಯ

ನೀರಿನ ತೆರಿಗೆಯಿಂದ ಈ ವರ್ಷದಲ್ಲಿ ಸರಕಾರಕ್ಕೆ ೨೬,೫೦,೦೦೦ ರೂಗಳಿಗೆ ಮೇಲೆ ಆದಾಯ ಬರೆಯಿತು. ಇರ್ವಿನ್ ನಾಲಾಕ್ಷೇತ್ರದಲ್ಲಿ ಸಂಚಾರ ಮಾರ್ಗವನ್ನು ಸುಲಭಪಡಿಸುವುದಕ್ಕಾಗಿ ಸರಕಾರದವರು ನಾಲಾಕ್ಷೇತ್ರದಲ್ಲಿ ಗ್ರಾಮಾಂತರ ರಸ್ತೆಗಳ ನಿರ್ಮಾಣಕ್ಕಾಗಿ ೧೯೩೬ ನೇ ಮೇ ತಿಂಗಳಲ್ಲಿ ಒಂದು ವ್ಯವಸ್ಥೆಯನ್ನು ಕಲ್ಪಿಸಿದರು. ಆ ರೀತಿ ಮಾಡಲು ೩೬ ರಸ್ತೆಗಳನ್ನು ಮಂಜೂರಿಸಲಾಯಿತು. ಅದಕ್ಕಾಗಿ ೫೦,೦೦೦ ರೂಗಳ ವೆಚ್ಚವಾಯಿತು. ಅದನ್ನು ಸರಕಾರದವರು ವಹಿಸಿಕೊಂಡರು.

ವ್ಯವಸಾಯಕ್ರಮವು ಇರ್ವಿನ್ ನಾಲಾಕ್ಷೇತ್ರದಲ್ಲಿ ಹೆಚ್ಚಿದಂತೆಲ್ಲ ಅದರೊಡನೆ ಸಂಚಾರ ಕಾರ್ಯಕ್ರಮವೂ ಹೆಚ್ಚಬೇಕೆಂದು ಸರಕಾರದವರು ಹೊಸರಸ್ತೆಗಳ ನಿರ್ಮಾಣಕ್ಕೂ ಮತ್ತು ಇರುವ ರಸ್ತೆಗಳನ್ನು ಉತ್ತಮಪಡಿಸುವುದಕ್ಕೂ ೨,೦೦,೦೦೦ ರೂ ಗಳನ್ನು ದಯಪಾಲಿಸಿರುವರು.

ಮಲೆಜ್ವರಕ್ಕೆ ಮಲೇರಿಯಾನ ಇದು ಮಲೆಜ್ವರ, ಚಳಿಜ್ವರ, ದಿನಬಿಟ್ಟು ಬರುವಜ್ವರ, ೩ ನೆ ೪ ದಿನ ಸಕ್ಕೊಮ್ಮೆ ಬರುವಜ್ವರ, ಕ್ವಿನೈನ್‌ನಿಂದಲೂ ಇಂಜಕ್ಷನ್‌ನಿಂದಲೂ ಬಿಡದಿರುವ ಜ್ವರವನ್ನು ಗೆಡ್ಡೆ ಸಮೇತ ಸಂಪೂರ್ಣ ಗುಣಪಡಿಸುತ್ತದೆ. 4 ಔನ್ಸ್ ಸೀಸೆ ಆಣೆ 0-14-0, 8 ಔನ್ಸ್ ಸೀಸೆಗೆ ರೂ. 1-8-0, ಡಜ್ಜನ್‌ಗೆ ರೂ. 9-12-0, ರೂ. 16-8-0.

ಕಂಪೌಂಡ್ ಸಿರಪ್ ಸಾಲಸಪನ—ಸ್ವಸ್ಥೇಂದ್ರಿಯ ಸ್ವಲನ, ಶೀಘ್ರಸ್ಖಲನ, ಧಾತುಕಳಕೊಳ್ಳುವದು, ಮೂತ್ರದೊಡನೆ ನಸ್ಯವಾಗುವದು, ವೀರ್ಯಸ್ಥಂಭನ, ತೆಳ್ಳಗಾದಧಾತು, ಇನ್ನಿಲ್ಲದ ಬುದವನ್ನು ಕೆತ್ತು ಬಸಾರುವವಲ್ಲುವೆ ಧಾತುಪೌಷ್ಟಿಕ ರಸಾಯನವಾಗಿಯುತ್ತದೆ. ಸೀಸೆಗೆ ರೂ. 3-8-0 ಮತ್ತು 1-14-0.

ಪ್ರಬ್ಯಾತಿಪಟ್ಟಿ ನರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು—ಸಕಲತರದ ಹೊಟ್ಟೆ ಹುಳುಗಳನ್ನು ನಾಶಪಡಿಸಿ ಜಾದಿಸುವ ಪರಲ್ಲಿ ಮುಖ್ಯ ಔಷಧಿ. ಡಜನ್ ಆ. 0-5-0 100ಕ್ಕೆ ರೂ. 2-0-0.

ರಿಂಗ್ ವರ್ಮ್ ಬಾಮು—ಕಠಿಣತರವಾದ ಹುಳ ಮೇಯುವುದು, ಗಜಕರ್ಣ, ಯಳಕಡ್ಡಿಗೂ ಉತ್ತಮ. ಆಣೆ 5.

ಕಂಪೌಂಡ್ ಸಿರಪ್ ಬ್ಲಾಟ್ಟಿ—ಬರೇ 3 ತಿಂಗಳ ಸೇವನೆಯಿಂದ ಉಬ್ಬಸ, ನೇವಸ, ಪಾಸವನ್ನು ಖಾತ್ರಿಯಿಂದ ಗುಣಪಡಿಸುತ್ತದೆ. ಸೀಸೆಗೆ ರೂ. 3-8-0, ಸಣ್ಣದು ರೂ. 1-14-0.

ಬೇಬಿ ಟೋನ್—ದಾಲ್ಚಿನ್ನಿಯವರ್ಗದ ಎಲುಬುಗಳಲ್ಲಿ ಸುಣ್ಣದ ಧಾತುವು ಕಡಿಮೆಯಾಗಿ, ಎಲುಬುಗಳು ಮೆತ್ತಗಾಗಿ ತಾಮರೆಗ್ರಹಣಿ ರೋಗದಿಂದ ಮಾಂಸ ಜೋಲುಬಿದ್ದು, ಮೈ, ಕೈ, ಕಾಲು ಸೊರಗಿ ಕ್ಷೀಣವಾಗಿ ಬರುವ ಮಕ್ಕಳಿಗೆ ಪ್ರಸಿದ್ಧ ಅಮೃತ 1-4-0

ಈಯರ್ ಒಯಿಲ್—ಕಿವಿ ಸೋರುವದು, ಪ ನೋವು ಕೆಪ್ಪು ಇವುಗಳ ಮೇಲೆ ಉತ್ತಮ. ಸೀಸೆಗೆ ಆಣೆ 0-8-0.

ಡಿಸೆಂಟರಿ ಕ್ಯೂರ್—ಉಷ್ಣ ಹೊರಕಡೆಗೆ ನಿದ್ಯಾಷಧಿ ಸೀಸೆಗೆ ರೂ. 1-0-0.

ಡಯೆರಿಯಾ ಕ್ಯೂರ್—ಅಜೀರ್ಣದ ಹೊರಕಡೆಗೆ ಸೀಸೆಗೆ ರೂ. 1-0-0.

ಕಂಪೌಂಡ್ ಸಿರಪ್ ವೆಸಿಫೂಜ—ಪ್ರಮೇಹ ಮೂತ್ರ ದ್ವಾರದಿಂದ ಕೀವು, ಮೂತ್ರಯೊಯ್ಯುವಾಗ ತಡೆಯಲಾರದೆ ಕಠಿಣ ಉರಿ, ಮೂತ್ರಕೃಚ್ಛ್ರ, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ಇನೇ ಮೊದಲಾದ ಪ್ರಮೇಹದ ಲಕ್ಷಣಗಳಬುದನ್ನು ಕೆಲವು ತಾಸುಗಳಲ್ಲಿಯೇ ರಾಮಬಾಣದಂತೆ ನಿಲ್ಲಿಸುವದು. ಸೀಸೆಗೆ ರೂ. 3-8-0, ರೂ. 1-14-0.

ಕುದ್ಧ ಟಿಕ್ಕು, ಹೊನ್ಮೊಹಥಿ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆಯಿರಿ.—ಧರ್ಮಾರ್ಥ.

[೩ನೇಯ ಪುಟದಿಂದ ಮುಂದುವರಿದುದು.]

ಇದರ ಉದ್ಯೋಗತತ್ಪರತೆಯು ಎಷ್ಟಿರುವದೆಂಬುದನ್ನು ವಾಚಕರೇ ತರ್ಕಿಸಬೇಕು ಇದು ಮಾಡದಿರುವುದೂ ಪಡೆಯದಿರುವದೂ ಯಾವದೂ ಇಲ್ಲವು ಇದರ ಅಸೆ ಗಂತೂ ಕೊನೆಮೊದಲಿಲ್ಲ!

ಆದರೆ ಪ್ರಿಯವಾಚಕರೇ! ಕೆಟ್ಟಮಾರ್ಗದಲ್ಲಿ ಬೀಳುವ ಈ ಮನವು ಮೊದಲು ಮೋಹವಸ್ಮುಂಟುಮಾಡಿ ಬಳಿಕ ಅನರ್ಥಪರಂಪರೆಯೆಂಬ ಅಪತ್ಕೂಪಗಳನ್ನುಂಟುಮಾಡಿ ತನ್ಮೂಲತ ಅಧೋಗತಿಗಿಳಿಯುವಂತೆ ಮಾಡುವ ಇದನ್ನು ಎಷ್ಟು ವಿಧವಾಗಿ ವರ್ಣಿಸಿದರೂ ಅಲ್ಪವೇ ಎನಿಸುವುದು. ಒಂದು ದೋಷಯಂತ್ರವಲ್ಲಿ ಪ್ರಧಾನಚಕ್ರವು ತಿರುಗಲಿಕ್ಕೆ ಹತ್ತಿದೊಡನೆಯೇ ಸಣ್ಣ ಚಕ್ರಗಳು ತಿರುಗಹತ್ತಿ ಅದು ನಿಂತೊಡನೆ ತಾವೂ ನಿಲ್ಲುವಂತೆ ಈ ದೇಹವೆಂಬ ಯಂತ್ರದಲ್ಲಿ ಮನಸ್ಸು ಪ್ರಧಾನಚಕ್ರವಾಗಿಯೂ ಇಂದ್ರಿಯಗಳು ಸಣ್ಣ ಚಕ್ರಗಳಾಗಿಯೂ ತಿರುವುವು ಭವಕ್ಕೆ ಬೀಜಸ್ವರೂಪವಾಗಿರುವ ಈ ಮನಸ್ಸನ್ನು ನಿಲ್ಲಿಸಿದರೆ ಉಪಾಂಗಗಳಾದ ಇಂದ್ರಿಯವೃತ್ತಿಗಳೂ ತಾವಟಸ್ಥವನ್ನು ಹೊಂದಿ ಪುನರ್ಜನ್ಮಕ್ಕೆ ಅವಕಾಶವಿಲ್ಲದಂತಾಗುವುದು ಇದಕ್ಕೇ ಮೋಕ್ಷವೆನ್ನುವದು ಮುಖ್ಯವಾಗಿ ಈ ಮನಸ್ಸು ಸಂತುಷ್ಟವಿದ್ದ ಬಳಿಕ ಬಡವನೂ ಅಷ್ಟೆ! ಸಂತುಷ್ಟನೂ ಅಷ್ಟೇ! ಸಾರಾಸಾರವಿಚಾರಶೀಲರು ಇಂತಹ ಮನಸ್ಸನ್ನು ಯಾವ ರೀತಿ ಉಪಯೋಗಿಸಿಕೊಳ್ಳಬೇಕೆಂಬುದನ್ನು ಅವರೇ ನಿರ್ಧರಿಸಿಕೊಳ್ಳಬೇಕು

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಪೀಠಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ಶೀಷೆ	ಮಜಲ್ಲು
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ತ್ರಿ ನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ಬಾಲಸಿಂಧೂರ	೧	೪—೦—೦
,ಗಸಿಂಧೂರ	೧	೪—೦—೦
ಕ್ಷಿ ರ್ಣವಂಗ	೧	೩—೦—೦
ಸಿ ಂಗ	೧	೧—೦—೦
ಧಸ್ಮಗಳು.		
ಸೂ. ಸ್ಮ	೧	೪೦—೦—೦
ಸ್ತೂ. ಸ್ಮ	೧	೪—೦—೦
ದಿ ರೂ.	೧	೦—೮—೦
ಪ್ರ ಸ್ಮ	೧	೦—೧೩—೦
ಜ	೧	೦—೮—೦
ರಾ ತ್ರ	೧	೦—೮—೦
ಯ	೧	೦—೮—೦
ನಂ 12 ಸ್ಮ	೧	೦—೮—೦
ಗಮ	೧	೦—೮—೦
ಸಂಕ ಸ್ಮ	೧	೦—೮—೦
ಸ್ಮ ಕಾಷ್ಠಸ್ಮ	೧	೦—೧೩—೦
ಸ್ಮ ದ	೧	೩—೦—೦
ಸ್ಮ ಕಾಂ	೧	೪೦—೦—೦
ಮುಕ್ತಾಸ್ಮ	೧	೦—೮—೦
ವಾಲಸ್ಮ	೧	೦—೮—೦
ಪ್ರವಿಷ್ಟಿಸ್ಮ ಪಸ್ಮ	೧	೦—೮—೦
ಕಾರಂಗವ ಕೋಡಿಸಿ ಪಸ್ಮ	೧	೦—೮—೦
ೋದರಿಕ ಪಂಚತಾಲಪಸ್ಮ	೧	೦—೮—೦

ಸೋಲಾ ಔಷಧಾಲಯದಲ್ಲಿ ಸರ್ವಪ್ರಕಾರ ದೆಂಪ, ಜೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲು ಮತ್ತು ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರು.

ಆಯುರ್ವೇದ ರಸಾಯನಶಾಲಾ, ಪೋಸ್ಟ್, ಒವಿಮಠ. ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ[illegible]ನಲ್ಲಿ ಅಡಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಪ್ರಕಾಶಕ್ಕೆ ವಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಪಡುವುದಿಲ್ಲ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರವಿಕೃತಿಯಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ [illegible]ಾಗದೆ ಈ ಉಚ್ಚರಿಸದಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ಸ್ವಲ್ಪ ಕೆಲಪ [illegible]ಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಸಿ ವೈಸರಾ ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದರಲ್ಲಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗ ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ [illegible]ದಲ್ಲಿ ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವ [illegible]ನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯ [illegible]ಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗ [illegible]ಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ [illegible]ಾಗಿರುವಂತೆ ಅದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲಿ [illegible]ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂಬ ಕೋರಿಕೆ ಬೆಲೆ ೧೨ ಆಣೆ. ವಿ ಪಿ ಚಾರ್ಜ [illegible]

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, [illegible]

ಶಿವಾದ್ವೈತಮಂಜರಿ.

